# ಡಾ. ಎಂ. ಎಂ. ಕಲಬುರ್ಗಿ
# ಸಮಗ್ರ ಸಾಹಿತ್ಯ

ಸಂಪುಟ
೨೯

## ಜೀವನ ಚರಿತ್ರೆ ಸಾಹಿತ್ಯ : ಭಾಗ-೧




ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ - ೫೮೬೧೦೩

20985 [illegible]

# ಡಾ. ಎಂ.ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ

## ಸಂಪುಟ-೨೯ : ಜೀವನ ಚರಿತ್ರೆ ಸಾಹಿತ್ಯ : ಭಾಗ-೧

❖

- ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ
- ಡಾ. ಫ.ಗು.ಹಳಕಟ್ಟಿಯವರ ಆತ್ಮಚರಿತ್ರೆ
- ಮಡಿವಾಳಪ್ಪ ಸಾಸನೂರ ಬರೆಹ-ಬದುಕು

❖

ಪ್ರಧಾನ ಸಂಪಾದಕರು

**ಡಾ. ವೀರಣ್ಣ ರಾಜೂರ**

ಧಾರವಾಡ

ಸಂಪಾದಕರು

**ಡಾ. ಎಂ. ಎಸ್. ಮದಭಾವಿ**

ವಿಜಯಪುರ

**ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ**

ಬಿ. ಎಲ್. ಡಿ. ಇ. ಸಂಸ್ಥೆ

ವಿಜಯಪುರ

೨೦೧೯

**COMPLETE WORK OF DR. M.M.KALBURGI**
**VOLUME - 29** : JEEVANA CHARITARE SAHITY : BHAGA-1
Edited by : Dr. M.S. Madabhavi, Vijayapur

Published by : Dr. P.G. Halakatti Research Centre
B.L.D.E. Association, Vijayapur, Karnatak

©

First Edition : 2019
Pages : xl + 458=498

Copies: 1000
Price Rs: 240/-

❖❖

Cover page design : K.K. Makali, Hampi.
Type set : Dr. Hanumanth Melinamani, Dr. Sarsawatidevi Bhagawati, Dharwad.
Printer : The PrintPoint, No. 9/8 6th Cross, 4th Main, Rajajinagar, Industrial Town,
Bangalore-560044. Ph. 97390 67359

**ಆರ್ಥಿಕ ನೆರವು : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ**

**ಡಾ.ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ, ಸಂಪುಟ : ೨೯–ಜೀವನ ಚರಿತ್ರೆ ಸಾಹಿತ್ಯ : ಭಾಗ–೧**

ಸಂಪಾದಕರು : ಡಾ. ಎಂ.ಎಸ್. ಮದಭಾವಿ, ವಿಜಯಪುರ

ಪ್ರಕಾಶಕರು : ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ. ಎಲ್. ಡಿ. ಇ. ಸಂಸ್ಥೆ, ವಿಜಯಪುರ
ಪ್ರಥಮ ಮುದ್ರಣ: ೨೦೧೯
ಪುಟಗಳು: xl + ೪೫೮=೪೯೮

ಪ್ರತಿಗಳು: ೧೦೦೦
ಬೆಲೆ ರೂ: ೨೪೦/–

❖❖

ಮುಖಪುಟ ವಿನ್ಯಾಸ: ಕೆ. ಕೆ. ಮಕಾಳಿ, ಹಂಪಿ
ಅಕ್ಷರ ಸಂಯೋಜನೆ: ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ, ಧಾರವಾಡ
ಮುದ್ರಣ: **ಪ್ರಿಂಟ್ ಪಾಯಿಂಟ್**, ನಂ. ೯/೮ ೬ನೆಯ ಕ್ರಾಸ್, ೪ನೆಯ ಮುಖ್ಯರಸ್ತೆ, ರಾಜಾಜಿನಗರ,
ಇಂಡಸ್ಟ್ರಿಯಲ್ ಟೌನ್, ಬೆಂಗಳೂರು–೫೬೦೦೪೪. ಫೋನ್ : ೯೭೩೯೦ ೬೭೩೫೯

# ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ

## ಸಲಹಾ ಸಮಿತಿ

❖

ಗೌರವಾಧ್ಯಕ್ಷರು

**ಡಾ. ಎಂ. ಬಿ. ಪಾಟೀಲ,** ವಿಜಯಪುರ

ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ ಮತ್ತು ಗೃಹ ಸಚಿವರು, ಕರ್ನಾಟಕ ಸರ್ಕಾರ

ಅಧ್ಯಕ್ಷರು

**ಶ್ರೀ ಜಿ. ಕೆ. ಪಾಟೀಲ,** ವಿಜಯಪುರ

ಕಾರ್ಯದರ್ಶಿಗಳು

**ಡಾ. ಎಂ. ಎಸ್. ಮದಭಾವಿ,** ವಿಜಯಪುರ

ಪ್ರಧಾನ ಸಂಪಾದಕರು

**ಡಾ. ವೀರಣ್ಣ ರಾಜೂರ,** ಧಾರವಾಡ

ಯೋಜನಾ ಸಂಯೋಜಕರು

**ಡಾ. ಕೃಷ್ಣ ಕೊಲ್ಹಾರಕುಲಕರ್ಣಿ,** ವಿಜಯಪುರ

❖

ಸಲಹಾ ಸದಸ್ಯರು

**ಡಾ. ಗುರುಲಿಂಗ ಕಾಪಸೆ,** ಧಾರವಾಡ

**ಶ್ರೀ ಶ್ರೀವಿಜಯ ಕಲಬುರ್ಗಿ,** ಧಾರವಾಡ

**ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರತಿನಿಧಿಗಳು**

❖❖

# ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ

## ಸಂಪಾದಕ ಸದಸ್ಯರು

ಡಾ. ಗುರುಲಿಂಗ ಕಾಪಸೆ, ಧಾರವಾಡ
ಡಾ. ವೀರಣ್ಣ ರಾಜೂರ, ಧಾರವಾಡ
ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ವಿಜಯಪುರ
ಡಾ. ಬಿ.ವ್ಹಿ. ಶಿರೂರ, ಹುಬ್ಬಳ್ಳಿ
ಡಾ. ಎಂ.ಎಸ್. ಮದಭಾವಿ, ವಿಜಯಪುರ
ಡಾ. ಎಸ್.ಕೆ. ಕೊಪ್ಪಾ, ಇಂಡಿ
ಡಾ. ಗುರುಪಾದ ಮರಿಗುದ್ದಿ, ಸಂಕೇಶ್ವರ
ಡಾ. ಕೆ. ರವೀಂದ್ರನಾಥ, ಹಂಪಿ
ಡಾ. ಎಫ್. ಟಿ. ಹಳ್ಳಿಕೇರಿ, ಹಂಪಿ
ಡಾ. ವಿ. ಎಸ್. ಮಾಳಿ, ಹಾರೂಗೇರಿ
ಡಾ. ಪಿ. ಕೆ. ರಾಠೋಡ, ಧಾರವಾಡ
ಡಾ. ಮಲ್ಲಿಕಾರ್ಜುನ ಮೇತ್ರಿ, ವಿಜಯಪುರ
ಶ್ರೀ ಶಶಿಧರ ತೋಡ್ಕರ, ಧಾರವಾಡ
ಡಾ. ವಿ. ಡಿ. ಐಹೊಳ್ಳಿ, ವಿಜಯಪುರ
ಡಾ. ಸರಸ್ವತಿದೇವಿ ಭಗವತಿ, ಧಾರವಾಡ
ಡಾ. ಹನುಮಂತ ಮೇಲಿನಮನಿ, ಧಾರವಾಡ

*

# ಪ್ರಧಾನ ಸಂಪಾದಕರ ಮಾತು

ಡಾ. ವೀರಣ್ಣ ರಾಜೂರ

## ಮಾರ್ಗಕ್ಕೆ ಕೊನೆಯಿಲ್ಲ.....

ಡಾ. ಎಂ. ಎಂ. ಕಲಬುರ್ಗಿ ಅವರು ಕನ್ನಡ ಸಂಶೋಧನ ಮಹಾಮಾರ್ಗದ ಮಹಾಶಿಲ್ಪಿ; ಕನ್ನಡ ವಿದ್ವತ್ ಪರಂಪರೆಯ ಪ್ರಥಮ ಶ್ರೇಣಿಯ ಗಟ್ಟಿ ವಿದ್ವಾಂಸರು; ಕನ್ನಡ ಭಾಷೆ-ಸಾಹಿತ್ಯ-ಸಂಸ್ಕೃತಿಗಳ ಬಹುಶಿಸ್ತೀಯ ಅಧ್ಯಯನದ ಸವ್ಯಸಾಚಿ ಸತ್ಯಶೋಧಕರು. ಅವರ ಘನವ್ಯಕ್ತಿತ್ವ, ಕರ್ತೃತ್ವಶಕ್ತಿ, ಕಾರ್ಯಕ್ಷಮತೆ, ನಾಡು-ನುಡಿ-ಸಂಸ್ಕೃತಿ ಪ್ರೀತಿ, ಸಾಮಾಜಿಕ ಕಳಕಳಿ, ಶೈಕ್ಷಣಿಕ ಶಿಸ್ತು, ಸಾಹಿತ್ಯಿಕ-ಸಾಧನೆ, ಸಂಶೋಧನ ಸಿದ್ಧಿ, ಆಡಳಿತ ದಕ್ಷತೆ ಹಾಗೂ ಮಾನವೀಯ ಮೌಲ್ಯಗಳ ಅನುಷ್ಠಾನ ಅಪೂರ್ವ-ಅದ್ವಿತೀಯ-ಅನುಕರಣೀಯ.

ಡಾ. ಎಂ. ಎಂ. ಕಲಬುರ್ಗಿ ಅವರದು ಬಹುಮುಖ ವ್ಯಕ್ತಿತ್ವ; ಬಹುಮುಖ ಪ್ರತಿಭೆ-ಪಾಂಡಿತ್ಯ-ಪ್ರಭುತ್ವ; ಬಹುಮುಖ ಕಾರ್ಯ ಯೋಜನೆ, ಕಾರ್ಯಸಾಧನೆ, ಕಾರ್ಯಸಿದ್ಧಿ. ಕನ್ನಡದ ಶ್ರೇಷ್ಠ ಪ್ರಾಧ್ಯಾಪಕರಾಗಿ, ಪ್ರಥಮ ಶ್ರೇಣಿಯ ಸಂಶೋಧಕರಾಗಿ, ಸಮರ್ಥ ಸಂಶೋಧನ ಮಾರ್ಗದರ್ಶಕರಾಗಿ, ವಿಭಾಗದ ದಕ್ಷ ಅಧ್ಯಕ್ಷರಾಗಿ, ವಿಶ್ವವಿದ್ಯಾಲಯದ ಮಾದರಿಯ ಕುಲಪತಿಗಳಾಗಿ, ಉನ್ನತ ಶಿಕ್ಷಣ ತಜ್ಞರಾಗಿ, ಅನೇಕ ವಿನೂತನ ಯೋಜನೆಗಳ ಯೋಜಕರಾಗಿ, ಹಲವಾರು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಸಂಘಸಂಸ್ಥೆಗಳ ನಿರ್ದೇಶಕರಾಗಿ ಅವರು ಮಾಡಿದ ಕಾರ್ಯ, ಕೊಟ್ಟ ಕೊಡುಗೆ ಅಚ್ಚರಿ ಮೂಡಿಸುವಂತಹವು; ಅಭಿಮಾನ ಉಕ್ಕಿಸುವಂತಹವು.

**ಜೀವನ-ಸಾಧನೆ :**

ಡಾ. ಎಂ. ಎಂ. ಕಲಬುರ್ಗಿ (ಮಲ್ಲೇಶಪ್ಪ ಮಡಿವಾಳಪ್ಪ ಕಲಬುರ್ಗಿ) ಅವರು ೧೯೩೮ ನವ್ಹಂಬರ್ ೨೮ ರಂದು ತಾಯಿಯ ತವರೂರು ಗುಬ್ಬೇವಾಡ(ತಾ. ಸಿಂದಗಿ, ಜಿ: ವಿಜಯಪುರ)ದಲ್ಲಿ ಜನಿಸಿದರು. ತಂದೆ ಮಡಿವಾಳಪ್ಪ; ತಾಯಿ ಗುರಮ್ಮ. ಶ್ರಮಸಂಸ್ಕೃತಿಯ ಒಕ್ಕಲುತನ ಮನೆತನ. ಮಧ್ಯಮವರ್ಗದ ಸುಸಂಸ್ಕೃತ-ಅವಿಭಕ್ತ ಕುಟುಂಬ. ಇಂಥ ಪರಿಸರದಲ್ಲಿ ಬೆಳೆದ ಕಲಬುರ್ಗಿ ಅವರಿಗೆ ಶ್ರಮಗೌರವ ಹಾಗೂ ಸಹಬಾಳ್ವೆಯ ಪಾಠ ಬಾಲ್ಯದಿಂದಲೇ ಬಳುವಳಿಯಾಗಿ ದೊರೆಯಿತು.

ಕಲಬುರ್ಗಿ ಅವರ ಪ್ರಾಥಮಿಕ ಶಿಕ್ಷಣ (ಮುಲ್ಕೀ ಪರೀಕ್ಷೆಯವರೆಗೆ) ತಂದೆಯವರ ಊರಾದ ಯರಗಲ್ಲ (ತಾ. ಸಿಂದಗಿ, ಜಿ. ವಿಜಯಪುರ)ದಲ್ಲಿ ನಡೆಯಿತು. ಮಾಧ್ಯಮಿಕ ವ್ಯಾಸಂಗವನ್ನು ಸಿಂದಗಿಯ ಎಚ್.ಜಿ. ಬಾಡ ಹೈಸ್ಕೂಲಿನಲ್ಲಿ ಪೂರೈಸಿದರು. ೧೯೫೬ ರಲ್ಲಿ ಮ್ಯಾಟ್ರಿಕ್ ಪರೀಕ್ಷೆಗೆ ಕುಳಿತು ಉಚ್ಚಶ್ರೇಣಿಯಲ್ಲಿ ತೇರ್ಗಡೆ ಹೊಂದಿದರು.

ಕಲಬುರ್ಗಿ ಅವರ ಉನ್ನತವ್ಯಾಸಂಗ ವಿಜಯಪುರ ಮತ್ತು ಧಾರವಾಡದಲ್ಲಿ ನೆರವೇರಿತು. ವಿಜಯಪುರದ ಬಿಎಲ್‌ಡಿಇ ಸಂಸ್ಥೆಯ ವಿಜಯ ಕಾಲೇಜಿನಿಂದ ಬಿ.ಎ. ಪದವಿಯನ್ನು (೧೯೬೦) ಪ್ರಥಮಶ್ರೇಣಿಯಲ್ಲಿ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದಿಂದ ಎಂ.ಎ. ಪದವಿಯನ್ನು (೧೯೬೨) ಪ್ರಶಸ್ತಿ ಸಹಿತ ಪ್ರಥಮ ಶ್ರೇಣಿಯಲ್ಲಿ ಗಳಿಸಿಕೊಂಡರು. ಮೊದಲಿನಿಂದಲೂ ಪ್ರತಿಭೆ–ಪರಿಶ್ರಮಗಳ ಸಂಗಮವೆನಿಸಿದ್ದ ಕಲಬುರ್ಗಿ ಅವರಿಗೆ ಕಾಲೇಜಿನಲ್ಲಿ ಪ್ರೊ. ಬಿ.ಟಿ. ಸಾಸನೂರ ಅವರು, ವಿಶ್ವವಿದ್ಯಾಲಯದಲ್ಲಿ ಡಾ. ಆರ್.ಸಿ. ಹಿರೇಮಠ ಅವರು ಪ್ರೀತಿಯ ಗುರುಗಳಾಗಿ ದೊರೆತು ತಮ್ಮ ವಿದ್ವತ್ತಿನ ಜ್ಞಾನಾಮೃತವನ್ನು ನೆಚ್ಚಿನ ವಿದ್ಯಾರ್ಥಿಗೆ ಧಾರಾಳವಾಗಿ ಧಾರೆಯೆರೆದರು. ಗುರುಗಳ ಸಮರ್ಥ ಮಾರ್ಗದರ್ಶನ, ಕಲಬುರ್ಗಿ ಅವರ ಪ್ರತಿಭೆ–ಪರಿಶ್ರಮ–ಪ್ರಯತ್ನಗಳಿಂದ ಮುಪ್ಪುರಿಗೊಂಡ ಸ್ವಸಾಮರ್ಥ್ಯದ ಬಲದಿಂದ ಅವರೊಬ್ಬ ಸಶಕ್ತ–ಮಾದರಿಯ–ಆದರ್ಶ ವಿದ್ಯಾರ್ಥಿಯಾಗಿ ರೂಪುಗೊಂಡರು.

ಎಂ. ಎ. ಅಧ್ಯಯನ ಮುಗಿಯುತ್ತಲೆ ಕಲಬುರ್ಗಿ ಅವರಿಗೆ ಕಲಿತ ವಿಶ್ವವಿದ್ಯಾಲಯದಲ್ಲಿಯೇ ಕೆಲಸ ದೊರೆಯಿತು. ಕನ್ನಡ ವಿಭಾಗದಲ್ಲಿ ಆಗ ತಾನೆ ಆರಂಭವಾಗಿದ್ದ 'ಸಮಗ್ರ ವಚನ ವಾಙ್ಮಯ ಸಂಶೋಧನ ಸಂಸ್ಕರಣ ಪ್ರಕಟಣ ಯೋಜನೆ'ಯಲ್ಲಿ ಸಹಾಯಕ ಸಂಶೋಧಕರಾಗಿ ವೃತ್ತಿಜೀವನ(೧೯೬೨) ಆರಂಭಿಸಿದರು. ಕೆಲವೇ ದಿವಸಗಳಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರತಿಷ್ಠಿತ ಕಾಲೇಜು ಎನಿಸಿದ ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ಕನ್ನಡ ಅಧ್ಯಾಪಕರಾಗಿ ಸ್ಥಾನ ಪಡೆದರು. ತಮ್ಮ ಸತತಾಭ್ಯಾಸ ಪ್ರವೃತ್ತಿ, ವ್ಯವಸ್ಥಿತ ಅಚ್ಚುಕಟ್ಟಾದ ಪ್ರಭಾವಶಾಲಿ ಪಾಠಬೋಧನೆ, ಶಿಸ್ತಿನ ನಡೆ–ನುಡಿಗಳಿಂದ ವಿದ್ಯಾರ್ಥಿಗಳ–ಸಹೋದ್ಯೋಗಿಗಳ ವಿಶೇಷ ಪ್ರೀತಿ–ವಿಶ್ವಾಸ–ಗೌರವಗಳಿಗೆ ಪಾತ್ರರಾದರು.

ಪಾಠಬೋಧನೆಯ ಜೊತೆಗೆ ಕಲಬುರ್ಗಿ ಅವರು ತಮ್ಮ ನೆಚ್ಚಿನ ಗುರುಗಳಾಗಿದ್ದ ಡಾ. ಆರ್.ಸಿ. ಹಿರೇಮಠ ಅವರ ಮಾರ್ಗದರ್ಶನದಲ್ಲಿ 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ' ಎಂಬ ವಿಷಯದ ಮೇಲೆ ಪಿಎಚ್.ಡಿ. ಸಂಶೋಧನೆಯನ್ನೂ ಕೈಕೊಂಡರು. ಆ ಸಮಯದಲ್ಲಿ ಕರ್ನಾಟಕ ಕಾಲೇಜಿನ ಗ್ರಂಥಾಲಯವನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಂಡು ತಮ್ಮ ವಿಭಿನ್ನ ಆಸಕ್ತಿಯ ಜ್ಞಾನ ಕ್ಷೇತ್ರಗಳನ್ನು ಫಲಭರಿತಗೊಳಿಸಿಕೊಂಡರು. ೧೯೬೮ ರಲ್ಲಿ ಡಾಕ್ಟರೇಟ್ ಪದವಿ ಪಡೆದರು.

ನಾಲ್ಕು ವರ್ಷ (೧೯೬೨–೬೬) ಕರ್ನಾಟಕ ಕಾಲೇಜಿನಲ್ಲಿ ಯಶಸ್ವಿಯಾಗಿ ಸೇವೆ ಪೂರೈಸಿದ ನಂತರ ಕಲಬುರ್ಗಿ ಅವರನ್ನು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠ ತನ್ನತ್ತ ಕರೆದುಕೊಂಡಿತು. ಅಲ್ಲಿ ಅವರು ಅಧ್ಯಾಪಕರಾಗಿ, ಪ್ರವಾಚಕರಾಗಿ, ಪ್ರಾಧ್ಯಾಪಕರಾಗಿ, ವಿಭಾಗದ ಅಧ್ಯಕ್ಷರಾಗಿ, ಬಸವಪೀಠದ ಪ್ರಾಧ್ಯಾಪಕರಾಗಿ ಅಖಂಡ ೩೨ ವರ್ಷ (೧೯೬೬–೯೮) ಅದ್ವಿತೀಯವಾದ

ಶೈಕ್ಷಣಿಕ ಸೇವೆ ಸಲ್ಲಿಸಿದರು. 'ಕನ್ನಡ ವಿಭಾಗ' ಅನೇಕ ಅಧ್ಯಯನ ಶಾಖೆಗಳನ್ನು ಹೊಂದಿ, 'ಕನ್ನಡ ಅಧ್ಯಯನಪೀಠ'ವೆಂಬ ಮಹಾವೃಕ್ಷವಾಗಿ ಬೆಳೆದು ನಿಲ್ಲುವಲ್ಲಿ ಕಲಬುರ್ಗಿ ಅವರು ಪಟ್ಟ ಶ್ರಮದ ಪಾಲು ಅತ್ಯಧಿಕವಾಗಿದೆ. ಬಸವೇಶ್ವರಪೀಠವನ್ನು ಕಟ್ಟಿ ಬೆಳೆಸುವಲ್ಲಿ ಅವರು ತೋರಿದ ನಿಷ್ಠೆ ನಿಬ್ಬೆರಗು ಹುಟ್ಟಿಸುವಂತಿದೆ.

ವಿಶ್ವವಿದ್ಯಾಲಯದ ಸೇವೆಯಲ್ಲಿದ್ದಾಗ ಕಲಬುರ್ಗಿ ಅವರು ನಿರ್ವಹಿಸಿದ ಹುದ್ದೆಗಳು ಹಲವಾರು. ಕಲಾನಿಕಾಯದ ಡೀನರಾಗಿ, ವಿದ್ಯಾವಿಷಯಕ ಮಂಡಳಿ, ಪರೀಕ್ಷಾ ಮಂಡಳಿ, ಅಭ್ಯಾಸ ಮಂಡಳಿಗಳ ಅಧ್ಯಕ್ಷರಾಗಿ, ಸಿಂಡಿಕೇಟ್ ಸದಸ್ಯರಾಗಿ, ಕನ್ನಡ ಸಂಶೋಧನ ಸಂಸ್ಥೆಯ ಪ್ರಭಾರ ನಿರ್ದೇಶಕರಾಗಿ, ಸ್ನಾತಕೋತ್ತರ ವಿದ್ಯಾರ್ಥಿ ಕೂಟದ ಅಧ್ಯಕ್ಷರಾಗಿ, ಅನೇಕ ಶೈಕ್ಷಣಿಕ ಸಲಹಾ ಮಂಡಳಿಗಳ ಸದಸ್ಯರಾಗಿ ಅವರು ಮಾಡಿದ ಕಾರ್ಯ, ನೀಡಿದ ಮಾರ್ಗದರ್ಶನ, ಕಾರ್ಯರೂಪಕ್ಕೆ ತಂದ ನೀತಿ-ನಿಯಮಾವಳಿಗಳು ಮೌಲಿಕವಾಗಿದ್ದು, ವಿಶ್ವವಿದ್ಯಾಲಯದ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ವಿಶೇಷ ನೆರವು ನೀಡಿವೆ.

ಡಾ. ಎಂ. ಎಂ. ಕಲಬುರ್ಗಿ ಅವರು ೧೯೯೮ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಸೇವೆಯಿಂದ ನಿವೃತ್ತಿ ಹೊಂದಿದರು. ಅಷ್ಟರಲ್ಲಿ ಅವರಿಗೆ ಮತ್ತೊಂದು ಉನ್ನತ ಅವಕಾಶದ ಬಾಗಿಲು ತೆರೆದುಕೊಂಡಿತ್ತು. ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿ ನೇಮಕಗೊಂಡರು. ಅದು ಅವರ ಅನೇಕ ನೂತನ ಯೋಜನೆಗಳಿಗೆ ಕಾರ್ಯರಂಗವೆನಿಸಿತು. ತಾವು ಕಂಡ ಕನಸುಗಳನ್ನೆಲ್ಲ ಅಲ್ಲಿ ನನಸುಗೊಳಿಸಲು ತಕ್ಷಣದಲ್ಲಿಯೇ ಕಾರ್ಯ ಪ್ರವೃತ್ತರಾದರು. ಹಿಂದೆ ಇದ್ದ ಕೆಲವು ಶಾಖೆಗಳ ಜೊತೆಗೆ ಮತ್ತೆ ಹಲವು ನೂತನ ಶಾಖೆಗಳನ್ನು ಆರಂಭಿಸಿ, ಎಲ್ಲ ಶಾಖೆಗಳಿಗೂ ಸಮಾನಸ್ಥಾನ-ಮಾನ, ಆರ್ಥಿಕ ಸಹಾಯ, ಮಾನವ ಸಂಪನ್ಮೂಲಗಳನ್ನು ಒದಗಿಸಿ, ಎಲ್ಲರೂ ಶಿಸ್ತುಬದ್ಧವಾಗಿ, ಸಮಯ ನಿಷ್ಠವಾಗಿ ಕೆಲಸ ಮಾಡಲು ತೊಡಗುವಂತೆ ಮಾಡಿದರು. ಅದರಿಂದಾಗಿ ಎಲ್ಲರಲ್ಲಿ ನವಚೈತನ್ಯ ತುಂಬಿಕೊಂಡಿತು. ಸಾಂಘಿಕ, ವೈಯಕ್ತಿಕ ಸಂಶೋಧನ ಯೋಜನೆಗಳಿಂದಾಗಿ ಅನೇಕ ಹೊಸ ಕ್ಷೇತ್ರಗಳಿಗೆ ಸಂಬಂಧಿಸಿದ ಅಪೂರ್ವ ಗ್ರಂಥಗಳು ಪ್ರಕಟವಾದವು. ಅದರಿಂದಾಗಿ ಕನ್ನಡ ವಿಶ್ವವಿದ್ಯಾಲಯದ ಕೀರ್ತಿ ಇಮ್ಮಡಿಗೊಂಡಿತು. ಹಗಲಿರುಳೆನ್ನದೆ ತಾವೂ ದುಡಿದು, ಇತರೆಲ್ಲರನ್ನೂ ದುಡಿಸಿ-ಶ್ರಮಸಂಸ್ಕೃತಿಯನ್ನು ಅಲ್ಲಿ ಗಟ್ಟಿಗೊಳಿಸಿ ಮೂರು ವರ್ಷಗಳಲ್ಲಿ ಅದನ್ನೊಂದು ಮಾದರಿಯ ವಿಶ್ವವಿದ್ಯಾಲಯವನ್ನಾಗಿಸಿ-೨೦೦೧ ರಲ್ಲಿ ನಿವೃತ್ತಿ ಹೊಂದಿದರು. ಹಿಂದಿನವರಂತೆ ಕಲಬುರ್ಗಿಯವರ ಸೇವೆಯನ್ನೂ ಇನ್ನೂ ಮೂರು ವರ್ಷ ವಿಸ್ತರಿಸಿದ್ದರೆ, ಕನ್ನಡ ವಿಶ್ವವಿದ್ಯಾಲಯವನ್ನು ಜಾಗತಿಕ ಮಟ್ಟದಲ್ಲಿ ಗಮನ ಸೆಳೆಯುವ ಒಂದು ಮಹಾಸಂಸ್ಥೆಯನ್ನಾಗಿ ಬೆಳೆಸಿ ನಿಲ್ಲಿಸುತ್ತಿದ್ದರು.

ನಿವೃತ್ತಿಯ ನಂತರ ಡಾ. ಕಲಬುರ್ಗಿ ಅವರ ಕಾರ್ಯಕ್ಷೇತ್ರ ಇನ್ನೂ ವಿಸ್ತಾರಗೊಂಡಿತು. ಮುಕ್ತವಾಗಿ ಅವರು ಸಾಹಿತ್ಯ-ಸಂಶೋಧನೆ-ಸಮಾಜಸೇವೆ-ಸಾಂಸ್ಕೃತಿಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಅನೇಕ ಸಂಘ-ಸಂಸ್ಥೆಗಳಿಗೆ ಸಾಹಿತ್ಯಿಕವಾಗಿ, ಸಾಮಾಜಿಕವಾಗಿ ಮಾರ್ಗದರ್ಶನ ನೀಡುತ್ತ, ಭಾಷಣ-ಬರಹಗಳ ಮೂಲಕ ಅಸತ್ಯ, ಅನ್ಯಾಯ, ಮೂಢಾಚಾರಗಳನ್ನು ಖಂಡಿಸುತ್ತ, ಶರಣರು ಕಂಡ ಸಮಾನತೆಯ-ಸದಾಚಾರದ-ಸ್ವಸ್ಥ ಸಮಾಜ ನಿರ್ಮಾಣವಾಗಬೇಕೆಂದು ಸಾಮಾಜಿಕರಲ್ಲಿ ಜಾಗೃತಿಯನ್ನು ಮೂಡಿಸುವ ಕಾರ್ಯದಲ್ಲಿ ತೊಡಗಿದರು. ಸ್ಥಾವರಗೊಂಡ ವ್ಯವಸ್ಥೆಯನ್ನು

ಚಲನಶೀಲಗೊಳಿಸಬೇಕು, ಜಂಗಮಗೊಳಿಸಬೇಕು ಎಂದು ನಿರಂತರ ಸಮಾಜ ಶುದ್ಧಿಯ ಕಾರ್ಯದಲ್ಲಿ ನಿರತರಾಗಿದ್ದರು. ಅವರ ಪ್ರಖರ ವಿಚಾರಗಳು, ವೈಚಾರಿಕ ನಿಲವುಗಳು, ನಿಷ್ಠುರ ಸತ್ಯಗಳು ಪಟ್ಟ ಭದ್ರ ಹಿತಾಸಕ್ತಿಗಳಿಗೆ, ಸಂಕುಚಿತ ಭಾವದ ಸನಾತನಿಗಳಿಗೆ ರುಚಿಸಲಿಲ್ಲ; ಅಪಥ್ಯವೆನಿಸಿದವು. ಹೀಗಾಗಿ ಸತ್ಯ ಶೋಧಕರಾದ ಡಾ. ಎಂ. ಎಂ. ಕಲಬುರ್ಗಿ ಅವರು ದುಷ್ಟಶಕ್ತಿಗಳ ಗುಂಡೇಟಿಗೆ ಬಲಿಯಾಗಬೇಕಾಯಿತು. ೩೦-೦೮-೨೦೧೫ ಕರ್ನಾಟಕದ ಇತಿಹಾಸದಲ್ಲಿ ಒಂದು ಕರಾಳದಿನ. ಸಾಂಸ್ಕೃತಿಕ ಶ್ರೀಮಂತ ನಗರವೆನಿಸಿದ ಧಾರವಾಡದಲ್ಲಿ ಹಾಡುಹಗಲೇ ವಿದ್ಯಾರ್ಥಿ ವೇಷದಲ್ಲಿ ಮನೆಯೊಳಗೆ ನುಗ್ಗಿ ಸಾತ್ವಿಕ ಶರಣ, ಸ್ವತಂತ್ರ ವಿಚಾರವಾದಿ, ನ್ಯಾಯ ನಿಷ್ಠುರಿಯ ಅಮಾನುಷ ಹತ್ಯೆ ಮಾಡಲಾಯಿತು. ಇದು ಸತ್ಯದ ಕೊಲೆ; ಅಭಿವ್ಯಕ್ತಿ ಸ್ವಾತಂತ್ರ್ಯದ ಕಗ್ಗೊಲೆ. ಇದರಿಂದ ನಾಡು ಒಬ್ಬ ಅಪ್ರತಿಮ ವಿಚಾರವಾದಿಯನ್ನು ಕಳೆದುಕೊಂಡು ಬಡವಾಯಿತು. ಲಿಂಗಾಯತ ಸಮಾಜ ಒಬ್ಬ ತತ್ವನಿಷ್ಠ ಚಿಂತಕನ ಅಗಲಿಕೆಯಿಂದ ಅನಾಥವಾಯಿತು. ವಿದ್ವತ್‌ಲೋಕ ಒಬ್ಬ ಸತ್ಯನಿಷ್ಠ ಸಂಶೋಧಕನನ್ನು ಕಳೆದುಕೊಂಡು ಭರಿಸಲಾರದ ಹಾನಿಗೊಳಗಾಯಿತು.

* * * *

ಡಾ. ಎಂ. ಎಂ. ಕಲಬುರ್ಗಿ ಅವರ ಬೋಧಕೇತರ ಸಾಹಿತ್ಯಿಕ-ಸಾಂಸ್ಕೃತಿಕ ಕ್ಷೇತ್ರಗಳ ಕಾರ್ಯವ್ಯಾಪ್ತಿ ಬಹು ದೊಡ್ಡದು. ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ, ಅಖಿಲ ಕರ್ನಾಟಕ ಕೇಂದ್ರ ಕ್ರಿಯಾ ಸಮಿತಿಯ ಕಾರ್ಯದರ್ಶಿಯಾಗಿ; ಯುಜಿಸಿ ಭಾರತೀಯ ಭಾಷೆಗಳ ಸಲಹಾ ಸಮಿತಿ, ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ರಚನಾ ಸಮಿತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯರಾಗಿ; ದ.ರಾ.ಬೇಂದ್ರೆ ಟ್ರಸ್ಟ್, ಬಸವರಾಜ ಕಟ್ಟಿಮನಿ ಪ್ರತಿಷ್ಠಾನ, ಆದಿಲ್‌ಶಾಹಿ ಸಾಹಿತ್ಯ ಅನುವಾದ ಯೋಜನೆಯ ಅಧ್ಯಕ್ಷರಾಗಿ; ಗದಗ ಲಿಂಗಾಯತ ಅಧ್ಯಯನ ಸಂಸ್ಥೆ, ಬೆಳಗಾವಿ ಲಿಂಗಾಯತ ಅಧ್ಯಯನ ಅಕಾಡೆಮಿ, ನಿಡಸೋಸಿ ಶರಣ ಸಂಸ್ಕೃತಿ ಅಕಾಡೆಮಿ, ಕೊಡೆಕಲ್ಲ ಬಸವೇಶ್ವರ ಅಧ್ಯಯನ ಸಂಸ್ಥೆ, ಮೈಸೂರು ಸಮಗ್ರ ಸ್ವರವಚನ ಸಾಹಿತ್ಯ ಪ್ರಕಟಣ ಮಾಲೆ, ಶಿವಮೊಗ್ಗ ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆಗಳ ನಿರ್ದೇಶಕರಾಗಿ; ಸಮಗ್ರ ವಚನ ಸಾಹಿತ್ಯ ಪ್ರಕಟಣ ಯೋಜನೆ, ಪ್ರಾಚೀನ ಅಪ್ರಕಟಿತ ಕನ್ನಡ ಸಾಹಿತ್ಯ ಪ್ರಕಟಣ ಯೋಜನೆ, ಪ್ರಾಚೀನ ಗದ್ಯ ಸಾಹಿತ್ಯ ಪ್ರಕಟಣ ಯೋಜನೆ, ವಚನ ಬಹುಭಾಷಾ ಭಾಷಾಂತರ ಯೋಜನೆ, ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ, ಬಸವರಾಜ ಕಟ್ಟಿಮನಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ, ಗಳಗನಾಥ ಸಮಗ್ರ ಕಾದಂಬರಿ ಪ್ರಕಟಣ ಯೋಜನೆ, ಕೆರೂರ ವಾಸುದೇವಾಚಾರ್ಯ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆಗಳ ಪ್ರಧಾನ ಸಂಪಾದಕರಾಗಿ ಅವರು ಮಾಡಿದ ಕಾರ್ಯಗಳು ಚಿರಸ್ಮರಣೀಯವೆನಿಸಿವೆ.

ಡಾ. ಕಲಬುರ್ಗಿ ಅವರ ಈ ಬಹುಮುಖ-ಮೌಲಿಕ ಸಾಹಿತ್ಯ-ಸಂಶೋಧನ ಕಾರ್ಯ ಸಾಧನೆಗಾಗಿ ಸಾಹಿತ್ಯ ಅಕಾಡೆಮಿ, ಸರ್ಕಾರ ಹಾಗೂ ಅನೇಕ ಸಂಘ ಸಂಸ್ಥೆಗಳು ಉನ್ನತ-ಪ್ರತಿಷ್ಠಿತ ಪ್ರಶಸ್ತಿ-ಪುರಸ್ಕಾರಗಳನ್ನು ನೀಡಿ ಗೌರವಿಸಿವೆ. ಅವರಿಗೆ ದೊರೆತ ೨೫ ಕ್ಕೂ ಹೆಚ್ಚು ಪ್ರಶಸ್ತಿಗಳಲ್ಲಿ ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ, ಪಂಪ ಪ್ರಶಸ್ತಿ, ರಾಷ್ಟ್ರೀಯ ಬಸವ ಪುರಸ್ಕಾರ, ಕನ್ನಡ ಸಾಹಿತ್ಯ ಪರಿಷತ್ತಿನ ನೃಪತುಂಗ ಪ್ರಶಸ್ತಿ, ರಾಜ್ಯ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿಗಳ ಗ್ರಂಥ ಪುರಸ್ಕಾರ, ಹಂಪಿ ಕನ್ನಡ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ ಪ್ರಮುಖವಾದವು.

**ಸಾಹಿತ್ಯ ರಾಶಿ :**

ಡಾ. ಎಂ. ಎಂ. ಕಲಬುರ್ಗಿ ಅವರ ಆಸಕ್ತಿ ಕ್ಷೇತ್ರಗಳ ಹರಹು ಬಲು ದೊಡ್ಡದು; ಬರವಣಿಗೆಯ ವ್ಯಾಪ್ತಿ ಬಹು ವಿಸ್ತಾರ. ಸೃಜನ–ಸೃಜನೇತರ ಉಭಯ ಕ್ಷೇತ್ರಗಳಲ್ಲಿ ಸಮರ್ಥ ಕೃಷಿ. ಅದರಲ್ಲಿಯೇ ಸಂಶೋಧನ ಕ್ಷೇತ್ರದ ಬೆಳೆ ತುಂಬ ಹುಲುಸು; ಫಲಭರಿತ. ಅದಕ್ಕೆ ಗರಿಷ್ಠ ಬೆಲೆ–ಬೇಡಿಕೆ.

ಕನ್ನಡ ಸಂಶೋಧನ ಕ್ಷೇತ್ರವನ್ನು ಸಂಪದ್ಭರಿತಗೊಳಿಸಿ, ಅದಕ್ಕೊಂದು ನೂತನ ಆಯಾಮ ಆವಿಷ್ಕಾರವನ್ನು ನೀಡಿದ ಕಲಬುರ್ಗಿ ಅವರು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ವಿಷಯಗಳ ವೈವಿಧ್ಯತೆ ಬೆರಗುಗೊಳಿಸುತ್ತದೆ: ಶಾಸನ, ಹಳಗನ್ನಡ–ನಡುಗನ್ನಡ–ಹೊಸಗನ್ನಡ ಸಾಹಿತ್ಯ, ಚರಿತ್ರೆ, ಜಾನಪದ, ಹಸ್ತಪ್ರತಿಶಾಸ್ತ್ರ, ಗ್ರಂಥಸಂಪಾದನೆ, ನಾಮವಿಜ್ಞಾನ, ಛಂದಸ್ಸು, ವ್ಯಾಕರಣ, ಪ್ರಾಚ್ಯವಸ್ತುಶಾಸ್ತ್ರ, ಸಂಶೋಧನೆ, ವಿಮರ್ಶೆ, ನಾಡು–ನುಡಿ–ಸಂಸ್ಕೃತಿ–ಹೀಗೆ ಅದು ಅನಂತಮುಖಿಯಾಗಿದೆ.

ಡಾ. ಕಲಬುರ್ಗಿ ಅವರು ತಮ್ಮ ಆಸಕ್ತಿಯ ಕ್ಷೇತ್ರಗಳು, ಅಧ್ಯಯನದ ಸ್ವರೂಪ–ವ್ಯಾಪ್ತಿ ಮತ್ತು ವಿಧಾನ ಕುರಿತು ಬೇರೆ ಬೇರೆ ಕೃತಿಗಳ ಅರಿಕೆ, ಲೇಖಕರ ನುಡಿ, ಮಾರ್ಗಕ್ಕೆ ಮೊದಲು ಇತ್ಯಾದಿ ಬರಹಗಳಲ್ಲಿ ಹೀಗೆ ಹೇಳಿಕೊಂಡಿದ್ದಾರೆ:

"ನನ್ನದು ಬಹುಮುಖಿ ಅಧ್ಯಯನ. ಪ್ರಾಚೀನ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಮೈ–ಮನಸ್ಸುಗಳನ್ನು ಅಭ್ಯಸಿಸುತ್ತಲೇ ವ್ಯಾಕರಣ, ಅಲಂಕಾರ, ಛಂದಸ್ಸು ಇತ್ಯಾದಿ ಶಾಸ್ತ್ರಗಳನ್ನು ತೆಕ್ಕೆಗೆ ಅಳವಡಿಸಿಕೊಂಡ ಬಳಿಕ, ನಾನು ಪ್ರವೇಶಿಸಿದ ಹೊಸ ಕ್ಷೇತ್ರ ಶಾಸನ. ಆಮೇಲೆ ಆಧುನಿಕ ಶೈಕ್ಷಣಿಕ ಶಿಸ್ತುಗಳೆನಿಸಿದ ಜಾನಪದ, ನಾಮವಿಜ್ಞಾನ, ಗ್ರಂಥಸಂಪಾದನೆ ಇತ್ಯಾದಿಗಳತ್ತ ನನ್ನ ಒಲವು ಬೆಳೆಯಿತು. ಹೀಗಾಗಿ ಈ ಎಲ್ಲ ಕ್ಷೇತ್ರಗಳಿಗೆ ಸಂಬಂಧಿಸಿದ ಪುಸ್ತಕ, ಲೇಖನ ಬರವಣಿಗೆ ನನ್ನಿಂದ ಸಾಧ್ಯವಾಯಿತು. ಈ ಎಲ್ಲ ಬರವಣಿಗೆಯ ಹಿಂದೆ ಸಂಶೋಧನೆಯ ಸಶಬ್ದ ಶ್ರುತಿ, ಕೆಲವೊಮ್ಮೆ ನಿಃಶಬ್ದ ಶ್ರುತಿ ಕೆಲಸಮಾಡಿದೆ."

"ಸಾಹಿತ್ಯವನ್ನು ಘಟಿತವಸ್ತು (Fact) ಕೇಂದ್ರಿತ ಮತ್ತು ಕಲ್ಪಿತವಸ್ತು (Fiction) ಕೇಂದ್ರಿತವೆಂದು ವರ್ಗೀಕರಿಸಬಹುದಾಗಿದೆ. ಇವುಗಳಲ್ಲಿ ಸಂಭವಿಸಿದ ಜೀವನವನ್ನು, ಜೀವನ ಮೌಲ್ಯಗಳನ್ನು ನಮ್ಮ ಮುಂದೆ ಕಲಾತ್ಮಕವಾಗಿ ಸ್ಥಾಪಿಸುವ ಘಟಿತವಸ್ತು ಸಾಹಿತ್ಯವೇ ಸಮಾಜಕ್ಕೆ ಹೆಚ್ಚು ಮಾರ್ಗದರ್ಶಕ, ಹೆಚ್ಚು ಪ್ರಯೋಜಕವೆಂದು ನನ್ನ ಭಾವನೆ. ಹೀಗಾಗಿ ನನಗೆ ಸಂಭವನೀಯ ವಸ್ತುವನ್ನೊಳಗೊಂಡ ಕಥೆ, ಕಾದಂಬರಿ ಸಾಹಿತ್ಯಕ್ಕಿಂತ, ಸಂಭವಿಸಿದ ವಸ್ತುವನ್ನೊಳಗೊಂಡ ಆತ್ಮಚರಿತ್ರೆ, ಜೀವನ ಚರಿತ್ರೆ, ಸಾಹಿತ್ಯ ಹೆಚ್ಚು ಪ್ರಿಯವಾದುದು. ಈ ಕಾರಣದಿಂದಾಗಿ ನಾನು ಕಲ್ಪಿತ ಸಾಹಿತ್ಯದ ಜೊತೆಗೆ ಘಟಿತ ಸಾಹಿತ್ಯದತ್ತ ವಿಶೇಷ ಒಲವು ಬೆಳೆಸಿಕೊಂಡಿದ್ದೇನೆ"(ಕನ್ನಡ ಶಾಸನ ಸಾಹಿತ್ಯ–ಲೇಖಕರ ಮಾತು).

"ಕನ್ನಡ ಸೃಜನ ಸಾಹಿತ್ಯ ನವೋದಯ, ನವ್ಯ, ನವ್ಯೋತ್ತರವೆಂಬ ಘಟ್ಟಗಳನ್ನು ರೂಪಿಸಿಕೊಳ್ಳುತ್ತ ಬಂದ ಹಾಗೆ, ಕನ್ನಡ ಸಂಶೋಧನ ಸಾಹಿತ್ಯವೂ ರೂಪಿಸಿಕೊಳ್ಳುತ್ತ ಬಂದ ಸಾಮಗ್ರಿ ಶೋಧನಿಷ್ಠ, ಸಾಮಗ್ರಿ ವಿಶ್ಲೇಷಣನಿಷ್ಠ, ಸಾಮಗ್ರಿವ್ಯಾಖ್ಯಾನ ನಿಷ್ಠ ಘಟ್ಟಗಳಲ್ಲಿ ನಾನು ದುಡಿಯುತ್ತ ಬಂದಿದ್ದೇನೆ. ಇದೇ ರೀತಿ ಕನ್ನಡ ಸಂಶೋಧನೆ ಆಗಾಗ ಅಳವಡಿಸಿಕೊಳ್ಳುತ್ತ ಬಂದ ಸಂಸ್ಕೃತಿ, ಶಾಸನ, ಜಾನಪದ, ನಾಮವಿಜ್ಞಾನ ಇತ್ಯಾದಿ ಹೊಸ ಹೊಸ ಕ್ಷೇತ್ರಗಳಲ್ಲಿಯೂ ನಾನು ಬಿಚ್ಚಿಕೊಂಡಿದ್ದೇನೆ. ಹೀಗೆ ಈ

ಮೂರು ಆಯಾಮಗಳನ್ನೊಳಗೊಂಡ ಕನ್ನಡ ಸಂಶೋಧನ 'ಮಹಾಮಾರ್ಗ'ದಲ್ಲಿ ನಡೆದು ಬಂದವನಾದುದರಿಂದ ನನ್ನ (ಸಂಪ್ರಬಂಧಗಳ ಸಂಕಲನ) ಕೃತಿಗಳಿಗೆ 'ಮಾರ್ಗ' ಎಂದು ಹೆಸರಿಟ್ಟಿದ್ದೇನೆ. ಕನ್ನಡ ಸಂಶೋಧನೆಯ ಎಲ್ಲ ಮಾದರಿಗಳನ್ನು ಈ ಪ್ರಬಂಧಗಳು ಪ್ರತಿನಿಧಿಸುತ್ತವೆ ಎಂದು ಸೂಚಿಸಬಯಸುತ್ತೇನೆ."

"ಸಂಶೋಧನೆ ಎನ್ನುವುದು ಅಲ್ಪ ವಿರಾಮ, ಅರ್ಧವಿರಾಮಗಳ ಮೂಲಕ ಪೂರ್ಣವಿರಾಮಕ್ಕೆ ಸಾಗುವ ಕ್ರಿಯೆಯಾಗಿದೆ. ಹೀಗಾಗಿ ಹೊಸ ಹೊಸ ಆಕರಗಳು ಲಭ್ಯವಾದಂತೆ ಸಂಶೋಧಕ ತನ್ನ ಅಭಿಪ್ರಾಯಗಳನ್ನು ತಿದ್ದಿಕೊಳ್ಳಬೇಕಾಗುತ್ತದೆ.'ಸಂಶೋಧಕ ತಪ್ಪು ಹೇಳಿರಬಹುದು, ಸುಳ್ಳು ಹೇಳಿರಲಾರ' ಎನ್ನುವುದು ಈ ಅರ್ಥದಲ್ಲಿ. ಸಂಶೋಧನ ಪ್ರಬಂಧಗಳನ್ನು ಬರೆಯುವಾಗ ಈ ಎಲ್ಲ ಆದರ್ಶಗಳು ನನ್ನ ಮನಸ್ಸಿನಲ್ಲಿರುತ್ತವೆ. 'ಜನಮೆಚ್ಚೆ ನಡಕೊಂಡರೇನುಂಟು ಲೋಕದಿ ಮನಮೆಚ್ಚೆ ನಡಕೊಂಬುದೇ ಚೆಂದವು' ಎಂಬುದಂತೂ ನನ್ನನ್ನು ಸದಾ ಎಚ್ಚರಿಸುತ್ತಲಿರುತ್ತದೆ"(ಮಾರ್ಗ-೧, ೨ ಅರಿಕೆ).

"೨೦ನೆಯ ಶತಮಾನದ ಉತ್ತರಾರ್ಧದಲ್ಲಿ 'ಚಾರಿತ್ರಿಕ ಶೋಧ'ದೊಂದಿಗೆ 'ಸಾಂಸ್ಕೃತಿಕ ಶೋಧ' ಹೆಸರಿನ ಹೊಸಬಗೆಯ 'ಸಾಮಾಜಿಕ ಪ್ರಕ್ರಿಯಾ ಶೋಧ' ಕರ್ನಾಟಕದ ತುಂಬ ಕಣ್ಣು ತೆರೆಯಿತು. ಕಾಲಗತಿಸಿದಂತೆ ಇದರ ಹಿಂದಿರುವ 'ಸಾಮಾಜಿಕ ಕಾರಣ ಶೋಧ'ದ ಮೇಲೆ ಹೆಚ್ಚು ಒತ್ತು ಬಿದ್ದಿತು. ಹೀಗಾಗಿ ಇಂದು ಕರ್ನಾಟಕದಲ್ಲಿ ಆಕರಶೋಧ, ಚಾರಿತ್ರಿಕ ಶೋಧ, ಸಾಮಾಜಿಕ ಶೋಧ, ಸಾಮಾಜಿಕ ಪ್ರಕ್ರಿಯಾ ಶೋಧ ಮತ್ತು ಸಾಮಾಜಿಕ ಕಾರಣಶೋಧಗಳೆಂಬ ಐದು ಆಯಾಮಗಳು ನಮ್ಮ ಸಂಶೋಧನೆಯಲ್ಲಿ ಕಾಣಿಸಿಕೊಂಡಿವೆ. ನಾನು ಈ ಐದೂ ಆಯಾಮಗಳಲ್ಲಿ ಬಿಚ್ಚಿಕೊಂಡುದರ ಫಲಿತಗಳನ್ನು 'ಮಾರ್ಗ' ಹೆಸರಿನ ನನ್ನ ಮೂರು ಸಂಪುಟಗಳಲ್ಲಿ, ಅದೇ ರೀತಿ ಈ ನಾಲ್ಕನೆಯ ಸಂಪುಟದಲ್ಲಿ ಕಾಣಬಹುದು".

"ಇತ್ತೀಚೆ ಸಮಾಜದಲ್ಲಿ ಸಹಜ ಬದಲಾವಣೆಯ ಜೊತೆಗೆ, ರಾಜಕೀಯ-ಧಾರ್ಮಿಕ-ಧುರೀಣರಿಂದಾಗಿ ಕೃತಕ ಬದಲಾವಣೆಗಳು ಸಂಭವಿಸುತ್ತಲಿವೆ. ಇವರು ಸುಳ್ಳು ಇತಿಹಾಸದ ಮೂಲಕ ವರ್ತಮಾನದಲ್ಲಿ ಹುಟ್ಟುಹಾಕುತ್ತಲಿರುವ ಶೋಷಣೆಯನ್ನು ಹತ್ತಿಕ್ಕಲು ನಿಜ ಇತಿಹಾಸವನ್ನು ಶೋಧಿಸಿಕೊಡುವುದು ಸಂಶೋಧಕನ ಕರ್ತವ್ಯವಾಗಿದೆ. ಅಂದರೆ ಸಂಶೋಧನೆ ಎನ್ನುವುದು ಕೇವಲ ಇತಿಹಾಸದ ಶೋಧವಲ್ಲ, ಸುಳ್ಳು ಇತಿಹಾಸವನ್ನು ಮುಂದುಮಾಡಿಕೊಂಡು ವರ್ತಮಾನವನ್ನು ದುರುಪಯೋಗ ಮಾಡಿಕೊಳ್ಳುವವರೊಂದಿಗೆ ನಡೆಸುವ ಹೋರಾಟವಾಗಿದೆ. ಸತ್ಯವೆಂಬ ಭೂತಕಾಲದ ಬಲದಿಂದ ಅಸತ್ಯವೆಂಬ ವರ್ತಮಾನಕಾಲವನ್ನು ಸರಿಪಡಿಸುವುದಾಗಿದೆ. ಹೀಗಾಗಿ ನನ್ನ ಸುತ್ತಲಿನ ವರ್ತಮಾನದ ಅಸತ್ಯಗಳು ಭೂತದ ಸತ್ಯವನ್ನು ಹುಡುಕಲು ನನ್ನನ್ನು ಒತ್ತಾಯಿಸಿದ ಫಲವಾಗಿ, ಇಲ್ಲಿಯ ಬಹಳಷ್ಟು ಲೇಖನಗಳು ಹುಟ್ಟಿಕೊಂಡಿವೆ. ಸಮಾಜದ ಪ್ರಚಲಿತ ಸಮಸ್ಯೆಗಳನ್ನು ಎತ್ತಿಕೊಂಡುದಲ್ಲದೆ, ಶಿಷ್ಟ ಆಕರಗಳೊಂದಿಗೆ ಪರಿಶಿಷ್ಟ ಆಕರಗಳನ್ನೂ ಬಳಸಿಕೊಂಡ ಕಾರಣ, ಇವು ಒಂದಿಷ್ಟು ಸಾಮಾಜಿಕ ಹೊಳಪನ್ನು ಒಳಗೊಂಡಿವೆ"(ಮಾರ್ಗ-೪, ಅರಿಕೆ).

ಈ ಮೇಲಿನ ಉದ್ಧರಣೆಗಳು ಡಾ. ಎಂ. ಎಂ. ಕಲಬುರ್ಗಿ ಅವರ ಒಟ್ಟು ಸಂಶೋಧನೆಯ ಸ್ವರೂಪ-ವ್ಯಾಪ್ತಿ-ವಿಧಾನ-ದೃಷ್ಟಿ ಧೋರಣೆಗಳನ್ನು ಸ್ಪಷ್ಟಪಡಿಸುತ್ತವೆ. ಅಂದರೆ ಅವರು ಆಕರಮುಖಿ

ಶೋಧದ ಮೂಲಕ ಹೊರಟು, ವಿಶ್ಲೇಷಣಮುಖಿ ಶೋಧದಲ್ಲಿ ಮುಂದುವರೆದು, ವ್ಯಾಖ್ಯಾನಮುಖಿ ಶೋಧವನ್ನು ತಲುಪಿದ ರೀತಿಯನ್ನು; ವಸ್ತುನಿಷ್ಠ ಸಂಶೋಧನೆಯಿಂದ ತೊಡಗಿ, ಸಂಸ್ಕೃತಿನಿಷ್ಠ ಸಂಶೋಧನೆಯಲ್ಲಿ ಸಾಗಿ, ಕೊನೆಗೆ ಸಮಾಜನಿಷ್ಠ ಸಂಶೋಧನೆಯಲ್ಲಿ ನೆಲೆನಿಂತ ನಿಲವನ್ನು ನಿಚ್ಚಳವಾಗಿ ನಿರ್ವಚಿಸುತ್ತವೆ.

* * * *

ಡಾ. ಕಲಬುರ್ಗಿ ಅವರ ಸಾಹಿತ್ಯ ಸೃಷ್ಟಿ ಎರಡು ಬಗೆಯಾಗಿ ನಡೆದಿದೆ. ಒಂದು ಇಡಿಯಾದ ಗ್ರಂಥ ರೂಪದಲ್ಲಿ; ಮತ್ತೊಂದು–ಬಿಡಿಯಾದ ಸಂಪ್ರಬಂಧ ಸ್ವರೂಪದಲ್ಲಿ. ಅವರು ತಮ್ಮ ಎಪ್ಪತ್ತೇಳು ವರ್ಷದ ಜೀವಿತಾವಧಿಯಲ್ಲಿ–ಸು. ೫೦ ವರ್ಷ ಸಾಹಿತ್ಯ ಕೃಷಿಯಲ್ಲಿ ತೊಡಗಿದ್ದಾರೆ. ೧೯೬೭ ರಲ್ಲಿ ಪ್ರಕಟವಾದ 'ಬಸವಣ್ಣನವರ ಜೀವನ ಚರಿತ್ರೆ' ಅವರ ಮೊದಲ ಲೇಖನವೆನಿಸಿದರೆ, ೧೯೬೮ ರಲ್ಲಿ ಹೊರ ಬಂದ 'ಬಸವಣ್ಣನವರನ್ನು ಕುರಿತ ಶಾಸನಗಳು' ಎಂಬುದು ಮೊದಲ ಕೃತಿಯಾಗಿದೆ. ಹಾಗೆಯೇ 'ನಾಲ್ಕು ಜಾತಿವಿಡಿದು ಬಂದ ಜಂಗಮವೆ ಶ್ರೇಷ್ಠ?' ಎಂಬುದು ಅವರ ಕೊನೆಯ ಲೇಖನ; 'ವಚನ ವರ್ಷ' ಎಂಬುದು ಕೊನೆಯ ಕೃತಿ. ಈ ಮಧ್ಯದ ಅವಧಿಯಲ್ಲಿ ಅವರು ಒಟ್ಟು ೧೧೬ ಕೃತಿಗಳನ್ನು ಮತ್ತು ೮೯೩ ಲೇಖನಗಳನ್ನು ಪ್ರಕಟಿಸಿದ್ದಾರೆ.

ಡಾ. ಕಲಬುರ್ಗಿ ಅವರ ಒಟ್ಟು ಕೃತಿಗಳನ್ನು ಸೃಜನ ಮತ್ತು ಸೃಜನೇತರ ಎಂದು ಎರಡು ಭಾಗಗಳಲ್ಲಿ ವಿಂಗಡಿಸಬಹುದು. ಸೃಜನ ಸಾಹಿತ್ಯದಲ್ಲಿ ಅವರ ಕಾವ್ಯ ಮತ್ತು ನಾಟಕ ಕೃತಿಗಳು ಸೇರುತ್ತವೆ. ಸೃಜನೇತರದಲ್ಲಿ ಸ್ವತಂತ್ರ ಕೃತಿಗಳು, ಸಂಪಾದಿತ ಕೃತಿಗಳು ಎಂದು; ಸಂಪಾದಿತ ಕೃತಿಗಳಲ್ಲಿ ಪ್ರಾಚೀನ–ಆಧುನಿಕ ಎಂದು ಮತ್ತೆ ಎರಡೆರಡು ವಿಭಾಗಗಳನ್ನು ಮಾಡಬಹುದು. ಸ್ವತಂತ್ರ ಕೃತಿಗಳಲ್ಲಿ ಶಾಸನ, ಶಾಸ್ತ್ರ, ಸಂಶೋಧನೆ ಮತ್ತು ಜಾನಪದಕ್ಕೆ ಸಂಬಂಧಿಸಿದ ಕೃತಿಗಳು ಸೇರಿದರೆ, ಪ್ರಾಚೀನ ಸಂಪಾದಿತ ಕೃತಿಗಳಲ್ಲಿ ಶಾಸನ, ಕಾವ್ಯ, ವಚನ, ದಾಖಲು ಸಾಹಿತ್ಯ ಕೃತಿಗಳು ಮತ್ತು ಆಧುನಿಕ ಸಂಪಾದಿತ ಕೃತಿಗಳಲ್ಲಿ ಲೇಖನ ಸಂಗ್ರಹ, ಜೀವನ ಚರಿತ್ರೆ ಮತ್ತು ಅಭಿನಂದನ ಗ್ರಂಥಗಳು ಸೇರುತ್ತವೆ. ಅವುಗಳ ವಿವರ ಹೀಗಿದೆ :

**ಸೃಜನ ಸಾಹಿತ್ಯ**

೧. ನೀರು ನೀರಡಿಸಿತ್ತು (ಕವನ), ೨. ನೀರಾಗ ನಿಂತೀನಿ ನೀರಡಿಸಿ (ಕವನ), ೩. ಕೆಟ್ಟಿತ್ತು ಕಲ್ಯಾಣ (ನಾಟಕ), ೪. ಖರೇ ಖರೇ ಸಂಗ್ಯಾ ಬಾಳ್ಯಾ (ನಾಟಕ), ೫. ಖರೇ ಖರೇ ಕಿತ್ತೂರ ಬಂಡಾಯ(ನಾಟಕ).

**ಸೃಜನೇತರ ಸಾಹಿತ್ಯ (ಸ್ವತಂತ್ರ ಕೃತಿಗಳು) :**

**ಶಾಸನ ಸಾಹಿತ್ಯ**

೬. ಬಸವಣ್ಣನವರನ್ನು ಕುರಿತ ಶಾಸನಗಳು, ೭. ಶಾಸನಗಳಲ್ಲಿ ಶಿವಶರಣರು, ೮. ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು, ೯. ಮಹಾರಾಷ್ಟ್ರದ ಕನ್ನಡ ಶಾಸನಗಳು.

**ಶಾಸ್ತ್ರ ಸಾಹಿತ್ಯ**

೧೦. ಕನ್ನಡ ಗ್ರಂಥಸಂಪಾದನಶಾಸ್ತ್ರ, ೧೧. ಪ್ರತಿಬಿಂಬ, ೧೨. ಸಾಹಿತ್ಯ ಸಂಪಾದನೆ,

೧೩. ಕನ್ನಡ ನಾಮವಿಜ್ಞಾನ, ೧೪. ಕನ್ನಡ ಸಂಶೋಧನಶಾಸ್ತ್ರ, ೧೫. ಕನ್ನಡ ಹಸ್ತಪ್ರತಿಶಾಸ್ತ್ರ.

**ಸಂಶೋಧನ ಸಾಹಿತ್ಯ**

೧೬. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ, ೧೭. ಶಾಸನ ವ್ಯಾಸಂಗ-೧, ೧೮. ಶಾಸನ ವ್ಯಾಸಂಗ-೨, ೧೯. ಕನ್ನಡ ಶಾಸನ ಸಾಹಿತ್ಯ, ೨೦. ಐತಿಹಾಸಿಕ, ೨೧. ವೀರಶೈವ : ಇತಿಹಾಸ ಭೂಗೋಳ, ೨೨. ಶುದ್ಧಶೈವ ಮತ್ತು ಗೋಳಕಿಮಠ ಸಂಪ್ರದಾಯ, ೨೩. ಪರಿಕಲ್ಪನೆ, ೨೪. ಪಂಚಾಚಾರ್ಯರ ನಿಜಸ್ವರೂಪ, ೨೫. ಸಂಸ್ಕೃತಿ-ವಿಕೃತಿ, ೨೬. ಕನ್ನಡ ಅರಸರ ಅಕನ್ನಡ ಪ್ರಜ್ಞೆ, ೨೭. ನಿರ್ವಚನ.

**ಜಾನಪದ ಸಾಹಿತ್ಯ**

೨೮. ಉತ್ತರಕರ್ನಾಟಕದ ಜನಪದ ಪದ್ಯ ಸಾಹಿತ್ಯ, ೨೯. ಜನಪದ ಮಾರ್ಗ.

**ಲೇಖನ ಸಂಪುಟ**

೩೦. ಮಾರ್ಗ-೧, ೩೧. ಮಾರ್ಗ-೨, ೩೨. ಮಾರ್ಗ-೩, ೩೩. ಮಾರ್ಗ-೪, ೩೪. ಮಾರ್ಗ-೫, ೩೫. ಮಾರ್ಗ-೬, ೩೬. ಮಾರ್ಗ-೭, ೩೭. ಮಾರ್ಗ-೮.

**ಸೃಜನೇತರ ಸಾಹಿತ್ಯ (ಪ್ರಾಚೀನ ಸಂಪಾದಿತ ಕೃತಿಗಳು):**

**ಶಾಸನ ಸಾಹಿತ್ಯ**

೩೮. ಶಾಸನ ಸಂಪದ, ೩೯. ಧಾರವಾಡ ಜಿಲ್ಲೆಯ ಶಾಸನ ಸೂಚಿ, ೪೦. ವಿಜಾಪುರ ಜಿಲ್ಲೆಯ ಶಾಸನ ಸೂಚಿ, ೪೧. ಧಾರವಾಡ ತಾಲೂಕಿನ ಶಾಸನಗಳು, ೪೨. ಶಾಸನ ಸೂಕ್ತಿಸುಧಾರ್ಣವ.

**ದಾಖಲು ಸಾಹಿತ್ಯ**

೪೩. ಕರ್ನಾಟಕದ ಕೈಫಿಯತ್ತುಗಳು, ೪೪. ಕೊಲ್ಹಾಪೂರ ಲಕ್ಷ್ಮೀಸೇನ ಭಟ್ಟಾರಕ ಜೈನ ಬಸದಿ ಹಸ್ತಪ್ರತಿಸೂಚಿ, ೪೫. ವಚನ ಸಾಹಿತ್ಯ ಆಕರ ಕೋಶ, ೪೬. ತೋಂಟದಾರ್ಯ ಮಠದ ದಾಖಲು ಸಾಹಿತ್ಯ-೧.

**ವಚನ ಸಾಹಿತ್ಯ**

೪೭. ಬಸವಸ್ತೋತ್ರದ ವಚನಗಳು, ೪೮. ಬಸವಣ್ಣನವರ ಟೀಕಿನ ವಚನಗಳು ಭಾಗ-೧, ೪೯. ಬಸವಣ್ಣನವರ ಟೀಕಿನ ವಚನಗಳು ಭಾಗ-೨, ೫೦. ವಚನ ಸಂಕಲನ ಸಂಪುಟ-೪, ೫೧. ವಚನ ಸಂಕಲನ ಸಂಪುಟ-೬, ೫೨. ಬಸವಣ್ಣನವರ ವಚನ ಸಂಪುಟ, ೫೩. ಸಂಕೀರ್ಣ ವಚನ ಸಂಪುಟ, ೫೪. ಚೆನ್ನಬಸವಣ್ಣನವರ ವಚನ ಮಹಾಸಂಪುಟ, ೫೫. ಸಿದ್ಧರಾಮಯ್ಯದೇವರ ವಚನಗಳು, ೫೬. ಪರಮಾನಂದ ಸುಧೆ, ೫೭. ವಚನ, ೫೮. ಏಕೋತ್ತರಶತಸ್ಥಲ,

೫೯. ಶೂನ್ಯಸಂಪಾದನೆ, ೬೦. ವಚನ ವರ್ಷ, ೬೧. ವಚನಶಾಸ್ತ್ರಸಾರ(ಸಂಪುಟ-೧), ೬೨ ಡಾ. ಫ. ಗು. ಹಳಕಟ್ಟಿ ಸಮಗ್ರ ಸಾಹಿತ್ಯ ಸಂ.೫.

**ಕಾವ್ಯ ಸಾಹಿತ್ಯ**

೬೩. ಮಲ್ಲಿನಾಥ ಪುರಾಣ ಸಂಗ್ರಹ, ೬೪. ಶಬ್ದಮಣಿದರ್ಪಣ ಸಂಗ್ರಹ, ೬೫. ಶಿವಯೋಗ ಪ್ರದೀಪಿಕಾ, ೬೬. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ೬೭. ಕೊಂಡಗುಳಿ ಕೇಶಿರಾಜನ ಕೃತಿಗಳು, ೬೮. ತೋಂಟದ ಸಿದ್ಧಲಿಂಗೇಶ್ವರ ಭಾವರತ್ನಾಭರಣ ಸ್ತೋತ್ರ, ೬೯. ಆದಯ್ಯನ ಲಘುಕೃತಿಗಳು, ೭೦. ನಿಂಬಸಾಮಂತ ಚರಿತೆ, ೭೧. ಸಿರುಮಣ ನಾಯಕನ ಸಾಂಗತ್ಯ, ೭೨. ಸಿರುಮನ ಚರಿತೆ, ೭೩. ಗೊಲ್ಲ ಸಿರುಮನ ಚರಿತೆ, ೭೪. ಷಟ್‌ಸ್ಥಲ ಶಿವಾಯಣ, ೭೫. ಹರಿಹರನ ರಗಳೆಗಳು, ೭೬. ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು, ೭೭. ಹೊಸಕುಮಾರರಾಮನ ಸಾಂಗತ್ಯ, ೭೮. ಕೊಮಾರ ರಾಮಯ್ಯನ ಚರಿತ್ರೆ, ೭೯. ಬಾಲರಾಮಯ್ಯನ ಸಾಂಗತ್ಯ, ೮೦. ಹಳೆಯಕುಮಾರ ರಾಮನ ಸಾಂಗತ್ಯ, ೮೧. ಸಿದ್ಧಮಂಕ ಚರಿತೆ, ೮೨. ತಗರ ಪವಾಡ, ೮೩. ಗುಂಡಬಸವೇಶ್ವರ ಪುರಾಣ, ೮೪. ಕೊಡೆಕಲ್ಲ ವಚನ ವಾಕ್ಯ, ೮೫. ಕಿತ್ತೂರ ಸಂಸ್ಥಾನ ಸಾಹಿತ್ಯ-೧, ೮೬. ಕಿತ್ತೂರ ಸಂಸ್ಥಾನ ಸಾಹಿತ್ಯ-೨, ೮೭. ಕಿತ್ತೂರ ಸಂಸ್ಥಾನ ಸಾಹಿತ್ಯ-೩.

**ಸೃಜನೇತರ ಸಾಹಿತ್ಯ (ಆಧುನಿಕ ಸಂಪಾದಿತ ಕೃತಿಗಳು):**

**ಲೇಖನ ಸಂಗ್ರಹಗಳು :**

೮೮. ದಿಗಂಬರ(ಕವನ ಸಂಗ್ರಹ), ೮೯. ಬಸವ ಮಾರ್ಗ-೧(ಲೇಖನ ಸಂಗ್ರಹ), ೯೦. ಬಸವ ಮಾರ್ಗ-೨, ೯೧. ಬಸವ ಮಾರ್ಗ-೩, ೯೨. ವಚನಸಾಹಿತ್ಯದ ಪ್ರಕಟಣೆಯ ಇತಿಹಾಸ, ೯೩. ಕರ್ನಾಟಕ ಗಾಂಧಿ ಹರ್ಡೇಕರ ಮಂಜಪ್ಪ, ೯೪. ಕೆಳದಿ ಸಂಸ್ಥಾನ : ಸಮಗ್ರ ಅಧ್ಯಯನ, ೯೫. ಮಾನಸೋಲ್ಲಾಸ ಪರಿಚಯ, ೯೬. ಮಾನಸೋಲ್ಲಾಸ ಸಂಪುಟ ೧-೨, ೯೭. ಸ್ವಾದಿ ಅರಸು ಮನೆತನ, ೯೮. ಬೀಳಗಿ ಅರಸು ಮನೆತನ, ೯೯. ಸ್ವರವಚನ ವಿಚಾರ ಸಂಕಿರಣ ಸಂಪುಟ, ೧೦೦. ಭಾರತಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣ : ಲಿಂಗಾಯತರ ಪಾತ್ರ, ೧೦೧. ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು.

**ಜೀವನ ಚರಿತ್ರೆಗಳು**

೧೦೨. ಅರಟಾಳ ರುದ್ರಗೌಡರ ಚರಿತ್ರೆ, ೧೦೩. ರಾಷ್ಟ್ರಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪ ಸಂಪುಟ-೨, ೧೦೪. ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ, ೧೦೫. ಡಾ. ಫ.ಗು. ಹಳಕಟ್ಟಿ ಆತ್ಮಚರಿತ್ರೆ, ೧೦೬. ಮಡಿವಾಳಪ್ಪ ಸಾಸನೂರ ಬದುಕು-ಬರೆಹ, ೧೦೭. ಶಿವಾನುಭವ ಪತ್ರಿಕೆ.

**ಅಭಿನಂದನ ಗ್ರಂಥಗಳು**

೧೦೮. ಬೆಳ್ವೊಲ, ೧೦೯. ಸಾರಂಗಶ್ರೀ, ೧೧೦. ವಜ್ರಕುಸುಮ, ೧೧೧. ಲಿಂಗಾಯತ, ೧೧೨. ಕಲ್ಯಾಣದೀಪ್ತಿ, ೧೧೩. ಶರಣಶ್ರೀ.

**ಇತರೆ**

೧೧೪. ನನ್ನ ಜೀವನ ಚರಿತ್ರೆ(ಷಣ್ಮುಖಪ್ಪ ಅಂಗಡಿಯವರ ಆತ್ಮಚರಿತ್ರೆ), 115. My Autobiography, 116. Heaven of Equality.

ಇವುಗಳಲ್ಲಿ ಸಂಶೋಧನ ಸಾಹಿತ್ಯ ವಿಭಾಗಕ್ಕೆ ಸೇರಿರುವ ಶಾಸನ ವ್ಯಾಸಂಗ ೧,೨, ಕನ್ನಡ ಶಾಸನ ಸಾಹಿತ್ಯ, ಐತಿಹಾಸಿಕ, ವೀರಶೈವದ ಇತಿಹಾಸ ಭೂಗೋಳ, ಶುದ್ಧಶೈವ ಮತ್ತು ಗೊಳಕಿಮಠ ಸಂಪ್ರದಾಯ, ಪರಿಕಲ್ಪನೆ, ಪಂಚಾಚಾರ್ಯರ ನಿಜಸ್ವರೂಪ, ಸಂಸ್ಕೃತಿ--ವಿಕೃತಿ, ಕನ್ನಡ ಅರಸರ ಅಕನ್ನಡ ಪ್ರಜ್ಞೆ, ನಿರ್ವಚನ ಎಂಬ ೧೧ ಕೃತಿಗಳು ಮಾರ್ಗ ಸಂಪುಟಗಳಲ್ಲಿನ ಲೇಖನಗಳನ್ನು ಆಯ್ದು ಸಂಗ್ರಹಿಸಿದ ಸಂಕಲನಗಳಾಗಿರುವುದರಿಂದ ಅವು ಸ್ವತಂತ್ರ ಕೃತಿಗಳಲ್ಲ; ಹಾಗೆಯೇ ವಚನ ಸಾಹಿತ್ಯ ಸಂಪಾದನೆಗಳಲ್ಲಿ ಸೇರಿದ ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಸಂ.೫ ಅದೇ ಭಾಗಕ್ಕೆ ಸೇರಿದ ವಚನಶಾಸ್ತ್ರಸಾರದ ಪುನರ್ ಮುದ್ರಣವಾಗಿದೆ. ಕಾವ್ಯ ಸಂಪಾದನೆಗಳಲ್ಲಿ ಸೇರಿದ 'ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು' ಹರಿಹರನ ರಗಳೆಗಳು ಗ್ರಂಥದಿಂದ ಆಯ್ದು ಸಂಗ್ರಹರೂಪದ ಕೃತಿಯಾಗಿದೆ. ಜೀವನ ಚರಿತ್ರೆ ಭಾಗದಲ್ಲಿ ಸೇರಿದ 'ಶಿವಾನುಭವ ಪತ್ರಿಕೆ' ಎಂಬುದನ್ನು 'ಡಾ. ಫ.ಗು. ಹಳಕಟ್ಟಿ ಆತ್ಮಚರಿತ್ರೆ'ಯಲ್ಲಿ ಅಳವಡಿಸಲಾಗಿದೆ. ಹೀಗಾಗಿ ಈ ೧೪ ಕೃತಿಗಳನ್ನು ಕೈಬಿಟ್ಟರೆ ಕಲಬುರ್ಗಿ ಅವರ ಒಟ್ಟು ಕೃತಿಗಳ ಸಂಖ್ಯೆ ೧೦೨ ಆಗುತ್ತದೆ.

ಡಾ. ಎಂ. ಎಂ. ಕಲಬುರ್ಗಿ ಅವರು ತಮ್ಮ ಬಿಡಿ ಬರಹ (ಸಂಪ್ರಬಂಧ–ಲೇಖನ)ಗಳನ್ನು 'ಮಾರ್ಗ' ಹೆಸರಿನ ೮ ಸಂಪುಟಗಳಲ್ಲಿ (ಇವುಗಳಲ್ಲಿ ೭ ಮತ್ತು ೮ ಎರಡು ಸಂಪುಟಗಳು ಮರಣೋತ್ತರ ಪ್ರಕಟಿಸಿದವು) ಪ್ರಕಟಿಸಿದ್ದಾರೆ. ಅವುಗಳಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದ ಸಂಪ್ರಬಂಧಗಳು, ಸಂಪಾದಿತ ಕೃತಿಗಳಿಗೆ ಬರೆದ ಪ್ರಸ್ತಾವನೆ, ಅರಿಕೆ, ಇತರರ ಕೃತಿಗಳಿಗೆ ಬರೆದ ಮುನ್ನುಡಿ, ಬೆನ್ನುಡಿ, ವ್ಯಕ್ತಿಚಿತ್ರ, ಭಾಷಣ, ಸಂದರ್ಶನ, ಸಂಪಾದಕೀಯ, ಕೃತಿ ವಿಮರ್ಶೆ, ಇತ್ಯಾದಿ ಸಮಾವೇಶಗೊಂಡಿವೆ. ಇವುಗಳನ್ನು ಆಧರಿಸಿ ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದ ಲೇಖನಗಳನ್ನು ಆಯ್ಕೆ ಮಾಡಿ ಕೆಲವು ಪ್ರತ್ಯೇಕ ಕೃತಿಗಳನ್ನು ಸಿದ್ಧಪಡಿಸಿ ಪ್ರಕಟಿಸುವ ಕಾರ್ಯವನ್ನು ಸ್ವತಃ ಕಲಬುರ್ಗಿಯವರೇ ಮಾಡುತ್ತ ಬಂದಿದ್ದಾರೆ. ಮೇಲೆ ಹೆಸರಿಸಿದ ೧೧ ಕೃತಿಗಳು ಆ ಮಾದರಿಯವು. ಅಲ್ಲದೆ ಇತರರಿಗೂ ಅಂಥ ಆಯ್ದ ಲೇಖನಗಳ ಸಂಗ್ರಹಗಳನ್ನು ಸಿದ್ಧಪಡಿಸಲು ಅವರು ಪ್ರೇರಣೆ ನೀಡಿದ್ದಾರೆ. ಹಾಗೆ ರೂಪಿತವಾದ ೧೬ ಕೃತಿಗಳು ಈ ಕೆಳಗಿನಂತಿವೆ :

ಜಂಗಮದಿಂದ ಸ್ಥಾವರಕ್ಕೆ (ಡಾ. ಮೃತ್ಯುಂಜಯ ರುಮಾಲೆ), ಹಾಲುಮತ ಅಧ್ಯಯನಗಳು (ಡಾ. ಎಫ್.ಟಿ. ಹಳ್ಳಿಕೇರಿ), ನಾಟಕದ ನೆಲೆಗಳು (ಡಾ. ರಾಮಕೃಷ್ಣ ಮರಾಠೆ), ಪಂಪನ ಅಧ್ಯಯನಗಳು (ಡಾ. ಎನ್. ಎಸ್. ತಾರಾನಾಥ), ಕನ್ನಡ ಭಾಷಾವಲೋಕನ (ಡಾ. ಎಸ್. ಎಸ್. ಅಂಗಡಿ), ಛಂದಸ್ಸಿನ ಅಧ್ಯಯನದ ನೆಲೆಗಳು (ಡಾ. ಎಸ್. ಎಸ್. ಅಂಗಡಿ), ಬಸವಣ್ಣ ಮತ್ತು... (ಡಾ. ನಂದೀಶ ಹಂಚೆ), ಸಿದ್ಧರಾಮ ಮತ್ತು...(ಡಾ. ಎಸ್.ಕೆ. ಕೊಪ್ಪ), ರೇವಣಸಿದ್ಧ ಮತ್ತು... (ಡಾ. ಕೆ. ರವೀಂದ್ರನಾಥ), ಶರಣರು ಮತ್ತು...(ಡಾ. ವಿ.ಎಸ್. ಮಾಳಿ), ಗ್ರಂಥಸಂಪಾದನ ವ್ಯಾಸಂಗ (ಡಾ. ವಾಯ್.ಸಿ. ಭಾನುಮತಿ), ಜೈನ ಅಧ್ಯಯನಗಳು (ಡಾ. ಶಾಂತಿನಾಥ ದಿಬ್ಬದ), ನಾಮವ್ಯಾಸಂಗ

(ಡಾ. ಎಚ್. ಶಶಿಕಲಾ), ಮಹಾಮರಣ(ಡಾ. ಜೆ. ಎಂ. ನಾಗಯ್ಯ), ಇತಿಹಾಸ ಮತ್ತು... (ಡಾ. ಎನ್.ಎಸ್. ಮಹಾಂತೇಶ), ಸಂಘರ್ಷದ ನೆಲೆಗಳು (ಡಾ. ಪಿ.ಕೆ. ರಾಠೋಡ).

ಇವುಗಳನ್ನು ಗಮನಿಸಿದರೆ ಡಾ. ಕಲಬುರ್ಗಿ ಅವರ ಅಧ್ಯಯನದ ವ್ಯಾಪ್ತಿ, ಬರವಣಿಗೆಯ ಹರಹು, ಅದಕ್ಕಾಗಿ ಅವರು ತೋರಿದ ನಿಷ್ಠೆ, ಪಟ್ಟ ಪರಿಶ್ರಮ, ವಹಿಸಿದ ತಾಳ್ಮೆ, ತನ್ಮೂಲಕ ಈ ಕ್ಷೇತ್ರದಲ್ಲಿ ಅವರು ಏರಿದ ಎತ್ತರ, ಪಡೆದ ಪ್ರಸಿದ್ಧಿ, ನೀಡಿದ ಕೊಡುಗೆ ಎಲ್ಲವೂ ಏಕಕಾಲಕ್ಕೆ ಕಣ್ಣ ಮುಂದೆ ಬಂದು ನಿಲ್ಲುತ್ತವೆ.

**ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ :**

ಡಾ. ಎಂ. ಎಂ. ಕಲಬುರ್ಗಿ ಅವರ ಈ ಸಮೃದ್ಧ ಸಾಹಿತ್ಯವನ್ನು ಸಮಗ್ರ ಸಂಪುಟಗಳಲ್ಲಿ ಪ್ರಕಟಿಸುವ ಯೋಜನೆಯೊಂದನ್ನು ವಿಜಯಪುರದ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ–ಕರ್ನಾಟಕ ಸರ್ಕಾರದ ಧನ ಸಹಾಯದಿಂದ–ಕೈಗೆತ್ತಿಕೊಂಡಿತು. ಯೋಜನೆಯ ವ್ಯವಸ್ಥಿತ ಪೂರೈಕೆಗಾಗಿ ಎಂಟು ಜನರ ಒಂದು ಸಲಹಾ ಸಮಿತಿಯನ್ನು ರಚಿಸಲಾಯಿತು. ಅದರಲ್ಲಿ ಶ್ರೀ ಎಂ.ಬಿ. ಪಾಟೀಲ ಅವರನ್ನು ಗೌರವಾಧ್ಯಕ್ಷರೆಂದು, ಶ್ರೀ ಜಿ.ಕೆ.ಪಾಟೀಲ ಅವರನ್ನು ಅಧ್ಯಕ್ಷರೆಂದು, ಡಾ. ಎಂ.ಎಸ್. ಮದಭಾವಿ ಅವರನ್ನು ಕಾರ್ಯದರ್ಶಿಯೆಂದು, ಡಾ. ವೀರಣ್ಣ ರಾಜೂರ ಅವರನ್ನು ಪ್ರಧಾನ ಸಂಪಾದಕರೆಂದು, ಡಾ. ಕೃಷ್ಣಕೊಲ್ಹಾರ ಕುಲಕರ್ಣಿ ಅವರನ್ನು ಯೋಜನಾ ಸಂಯೋಜಕರೆಂದು, ಡಾ. ಗುರುಲಿಂಗ ಕಾಪಸೆ, ಶ್ರೀ ವಿಜಯ ಕಲಬುರ್ಗಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರನ್ನು ಸದಸ್ಯರೆಂದು ಗುರುತಿಸಲಾಯಿತು.

ಸಲಹಾ ಸಮಿತಿ ೧೪–೭–೨೦೧೭ ರಂದು ತನ್ನ ಮೊದಲ ಸಭೆ ಕರೆಯಿತು. ಅದರಲ್ಲಿ ಭಾಗವಹಿಸಲು ನಾಡಿನ ಹಲವು ವಿದ್ವಾಂಸರನ್ನು ಆಹ್ವಾನಿಸಿತು. ಅವರೆಲ್ಲರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಕಲಬುರ್ಗಿಯವರ ಸಮಗ್ರ ಸಾಹಿತ್ಯ ಪ್ರಕಟಣೆಯ ರೂಪ–ರೇಷೆ, ಸಂಪುಟಗಳ ಸ್ವರೂಪ, ಸಂಪಾದಕರ ಆಯ್ಕೆ ಕುರಿತು ಒಂದು ನೀಲನಕ್ಷೆಯನ್ನು ಸಿದ್ಧಪಡಿಸಿತು. ಅದನ್ನು ಪ್ರಧಾನ ಸಂಪಾದಕರಿಗೆ ಒಪ್ಪಿಸಿ, ಅಂತಿಮ ಸ್ವರೂಪ ಕೊಡಲು ತಿಳಿಸಿತು.

೨೩–೯–೨೦೧೭ ರಂದು ಪ್ರಧಾನ ಸಂಪಾದಕರು ಎರಡನೆಯ ಸಭೆ ಕರೆದರು, ಯೋಜನೆಯ ಒಟ್ಟು ಸ್ವರೂಪವನ್ನು ೫ ಅಂಶಗಳಲ್ಲಿ ಅಳವಡಿಸಿ ಕೆಳಗಿನಂತೆ ನಿರೂಪಿಸಿದರು.

೧. ಡಾ. ಕಲಬುರ್ಗಿ ಅವರ ಒಟ್ಟು ಸಾಹಿತ್ಯವನ್ನು (ಪ್ರಕಟಿತ–ಅಪ್ರಕಟಿತ)೪೦ ಸಂಪುಟಗಳಲ್ಲಿ ಪ್ರಕಟಿಸುವುದು. ಅವುಗಳ ಸಂಪಾದನ ಕಾರ್ಯವನ್ನು ಒಟ್ಟು ೧೬ ಜನ ವಿದ್ವಾಂಸರಿಗೆ ವಹಿಸುವುದು.

೨. ಒಟ್ಟು ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸುವುದು.

೩. ಸ್ವತಂತ್ರ ಮತ್ತು ಪ್ರಾಚೀನ ಗ್ರಂಥ ಸಂಪಾದನ ಕೃತಿಗಳನ್ನು ಮಾತ್ರ ಪ್ರಕಟಣೆಗೆ ಆಯ್ದುಕೊಳ್ಳುವುದು. ಆಧುನಿಕ ಸಂಪಾದಿತ ಕೃತಿಗಳನ್ನು (ವಿಚಾರ ಸಂಕಿರಣಗಳಲ್ಲಿ ವಿವಿಧ ವಿದ್ವಾಂಸರು ಮಂಡಿಸಿದ ಪ್ರಬಂಧಗಳ ಸಂಗ್ರಹ), ಅಭಿನಂದನ ಗ್ರಂಥಗಳನ್ನು ಕೈಬಿಡುವುದು.

೪. ಒಂದೊಂದು ಸಂಪುಟದ ವ್ಯಾಪ್ತಿಯನ್ನು ೫೦೦ ಪುಟಗಳಿಗೆ ಮಿತಿಗೊಳಿಸುವುದು.

೫. ಎರಡು ವರ್ಷಗಳ ಕಾಲಾವಧಿಯಲ್ಲಿ ಯೋಜನೆಯನ್ನು ಪೂರ್ಣಗೊಳಿಸಿ, ೨೦೧೯ ನವ್ವೆಂಬರ್ ೨೮ ರಂದು ಎಲ್ಲ ಸಂಪುಟಗಳನ್ನು ಏಕಕಾಲಕ್ಕೆ ಬಿಡುಗಡೆಗೊಳಿಸುವುದು.

ಒಟ್ಟು ಸಂಪುಟಗಳ ವಿಸ್ತೃತ ಸ್ವರೂಪ ಹೀಗಿದೆ :

ನಾಲ್ವತ್ತು ಸಂಪುಟಗಳನ್ನು ವ್ಯಾಪಕವಾದ ಹಿನ್ನೆಲೆಯಲ್ಲಿ ಸ್ವತಂತ್ರ ಕೃತಿ ಸಂಪುಟಗಳು, ಸಂಪಾದಿತ ಕೃತಿ ಸಂಪುಟಗಳು, ಲೇಖನ ಸಾಹಿತ್ಯ ಸಂಪುಟಗಳು ಮತ್ತು ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳು ಎಂದು ನಾಲ್ಕು ಭಾಗಗಳಲ್ಲಿ ವಿಂಗಡಿಸಲಾಗಿದೆ. ಮೊದಲ ಭಾಗದಲ್ಲಿ ಮತ್ತೆ ಶಾಸನ ಸಾಹಿತ್ಯ, ಶಾಸ್ತ್ರ ಸಾಹಿತ್ಯ, ಸಂಶೋಧನ ಸಾಹಿತ್ಯ, ಜನಪದ ಸಾಹಿತ್ಯ ಮತ್ತು ಸೃಜನ ಸಾಹಿತ್ಯ ಎಂದು ನಾಲ್ಕು ವಿಭಾಗಗಳನ್ನು ಕಲ್ಪಿಸಲಾಗಿದೆ. ಎರಡನೆಯ ಭಾಗದಲ್ಲಿ ಸಂಪಾದಿತ ಕೃತಿಗಳನ್ನು ಶಾಸನ ಸಾಹಿತ್ಯ, ದಾಖಲು ಸಾಹಿತ್ಯ, ವಚನ ಸಾಹಿತ್ಯ, ಕಾವ್ಯ ಸಾಹಿತ್ಯ ಮತ್ತು ಜೀವನ ಚರಿತ್ರ ಸಾಹಿತ್ಯ ಎಂದು ವಿಭಜಿಸಲಾಗಿದೆ. ಮೂರನೆಯದಾದ ಲೇಖನ ಸಂಪುಟಗಳಲ್ಲಿ ಶಾಸನ ಸಾಹಿತ್ಯ, ಶಾಸ್ತ್ರ ಸಾಹಿತ್ಯ, ವಚನಸಾಹಿತ್ಯ, ಕಾವ್ಯಸಾಹಿತ್ಯ ಮತ್ತು ವ್ಯಕ್ತಿಚಿತ್ರಣ, ಮುನ್ನುಡಿ, ಬೆನ್ನುಡಿ, ಅರಿಕೆ, ಭಾಷಣ, ಸಂದರ್ಶನ ಎಂದು ಐದು ಭಾಗಗಳನ್ನು ಮಾಡಲಾಗಿದೆ. ಕೊನೆಯದಾದ ಪ್ರಾತ್ಯಕ್ಷಿಕೆ ಸಂಪುಟಗಳಲ್ಲಿ ಚಿತ್ರ, ಪತ್ರ–ವರದಿಗಳು, ಆಡಿಯೋ–ವಿಡಿಯೋ ಎಂದು ಮೂರು ಭಾಗಗಳನ್ನು ಯೋಜಿಸಲಾಗಿದೆ.

ಸಂಪುಟಗಳು, ಅದರಲ್ಲಿ ಅಳವಟ್ಟ ಕೃತಿಗಳು ಮತ್ತು ಸಂಪಾಕರ ವಿವರ ಕೆಳಗಿನಂತಿದೆ:

## I. ಸ್ವತಂತ್ರ ಕೃತಿ ಸಂಪುಟಗಳು

**ಸಂಪುಟ ೧ : ಶಾಸನ ಸಾಹಿತ್ಯ** **–ಸಂ. ಡಾ. ಎಸ್.ಕೆ. ಕೊಪ್ಪಾ**

೧. ಬಸವಣ್ಣನವರನ್ನು ಕುರಿತ ಶಾಸನಗಳು
೨. ಶಾಸನಗಳಲ್ಲಿ ಶಿವಶರಣರು
೩. ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು
೪. ಮಹಾರಾಷ್ಟ್ರದ ಕನ್ನಡ ಶಾಸನಗಳು

**ಸಂಪುಟ ೨ : ಶಾಸ್ತ್ರ ಸಾಹಿತ್ಯ** **–ಸಂ. ಡಾ. ಬಿ.ವ್ಹಿ. ಶಿರೂರ**

೧. ಕನ್ನಡ ಗ್ರಂಥಸಂಪಾದನಶಾಸ್ತ್ರ
೨. ಪ್ರತಿಬಿಂಬ
೩. ಸಾಹಿತ್ಯ ಸಂಪಾದನೆ
೪. ಕನ್ನಡ ನಾಮವಿಜ್ಞಾನ

೫. ಕನ್ನಡ ಸಂಶೋಧನಶಾಸ್ತ್ರ
೬. ಕನ್ನಡ ಹಸ್ತಪ್ರತಿಶಾಸ್ತ್ರ

**ಸಂಪುಟ ೩ : ಸಂಶೋಧನ ಸಾಹಿತ್ಯ** **–ಸಂ. ಶಶಿಧರ ತೋಡ್ಕರ**
೧. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ

**ಸಂಪುಟ : ೪ :ಜನಪದ ಸಾಹಿತ್ಯ** **–ಸಂ. ಶಶಿಧರ ತೋಡ್ಕರ**
೧. ಉತ್ತರಕರ್ನಾಟಕದ ಜನಪದ ಪದ್ಯ ಸಾಹಿತ್ಯ
೨. ಜನಪದ ಮಾರ್ಗ

**ಸಂಪುಟ : ೫ ಸೃಜನ ಸಾಹಿತ್ಯ** **–ಸಂ. ಡಾ. ಗುರುಪಾದ ಮರಿಗುದ್ದಿ**
೧. ನೀರು ನೀರಡಿಸಿತ್ತು (ಕವನ ಸಂಕಲನ)
೨. ನೀರಾಗ ನಿಂತೀನಿ ನೀರಡಿಸಿ (ಕವನ ಸಂಕಲನ)
೩. ಕೆಟ್ಟಿತ್ತು ಕಲ್ಯಾಣ (ನಾಟಕ)
೪. ಖರೇ ಖರೇ ಸಂಗ್ಯಾಬಾಳ್ಯಾ (ನಾಟಕ)
೫. ಖರೇ ಖರೇ ಕಿತ್ತೂರ ಬಂಡಾಯ(ನಾಟಕ)

## II. ಸಂಪಾದಿತ ಕೃತಿ ಸಂಪುಟಗಳು

**ಸಂಪುಟ ೬ : ಶಾಸನ ಸಾಹಿತ್ಯ** **–ಸಂ. ಡಾ. ಎಸ್. ಕೆ. ಕೊಪ್ಪಾ**
೧. ಶಾಸನ ಸಂಪದ
೨. ಧಾರವಾಡ ಜಿಲ್ಲೆಯ ಶಾಸನ ಸೂಚಿ
೩. ವಿಜಾಪುರ ಜಿಲ್ಲೆಯ ಶಾಸನ ಸೂಚಿ
೪. ಧಾರವಾಡ ತಾಲೂಕಿನ ಶಾಸನಗಳು
೫. ಶಾಸನ ಸೂಕ್ತಿಸುಧಾರ್ಣವ

**ಸಂಪುಟ : ೭ ದಾಖಲು ಸಾಹಿತ್ಯ : ಭಾಗ–೧** **–ಸಂ. ಡಾ. ಪಂಡಿತ ರಾಠೋಡ**
೧. ಕರ್ನಾಟಕದ ಕೈಫಿಯತ್ತುಗಳು

**ಸಂಪುಟ : ೮ ದಾಖಲು ಸಾಹಿತ್ಯ : ಭಾಗ– ೨** **–ಸಂ. ಡಾ. ಪಂಡಿತ ರಾಠೋಡ**
೧. ಕೊಲ್ಹಾಪೂರ ಲಕ್ಷ್ಮೀಸೇನ ಭಟ್ಟಾರಕ
ಜೈನ ಬಸದಿ ಹಸ್ತಪ್ರತಿಸೂಚಿ
೨. ವಚನ ಸಾಹಿತ್ಯ ಆಕರ ಕೋಶ

೩. ತೋಂಟದಾರ್ಯ ಮಠದ ದಾಖಲು ಸಾಹಿತ್ಯ–೧

**ಸಂಪುಟ : ೯ ವಚನ ಸಾಹಿತ್ಯ : ಭಾಗ–೧** **–ಸಂ. ಡಾ. ವೀರಣ್ಣ ರಾಜೂರ**

೧. ಬಸವಸ್ತೋತ್ರದ ವಚನಗಳು

೨. ಬಸವಣ್ಣನವರ ವಚನ ಸಂಪುಟ

**ಸಂಪುಟ : ೧೦ ವಚನ ಸಾಹಿತ್ಯ : ಭಾಗ–೨** **–ಸಂ. ಡಾ. ಗುರುಲಿಂಗ ಕಾಪಸೆ**

೧. ಚೆನ್ನಬಸವಣ್ಣನವರ ವಚನ ಮಹಾಸಂಪುಟ

೨. ಸಿದ್ಧರಾಮಯ್ಯದೇವರ ವಚನಗಳು

**ಸಂಪುಟ : ೧೧ ವಚನ ಸಾಹಿತ್ಯ : ಭಾಗ–೩** **–ಸಂ. ಡಾ. ವೀರಣ್ಣ ರಾಜೂರ**

೧. ಸಂಕೀರ್ಣ ವಚನ ಸಂಪುಟ

**ಸಂಪುಟ : ೧೨ ವಚನ ಸಾಹಿತ್ಯ : ಭಾಗ–೪** **–ಸಂ. ಡಾ. ವೀರಣ್ಣ ರಾಜೂರ**

೧. ವಚನ

**ಸಂಪುಟ : ೧೩ ವಚನ ಸಾಹಿತ್ಯ : ಭಾಗ–೫** **–ಸಂ. ಡಾ. ವೀರಣ್ಣ ರಾಜೂರ**

೧. ಶೂನ್ಯಸಂಪಾದನೆ

**ಸಂಪುಟ : ೧೪ ವಚನ ಸಾಹಿತ್ಯ : ಭಾಗ–೬** **–ಸಂ. ಡಾ. ವೀರಣ್ಣ ರಾಜೂರ**

೧. ಪರಮಾನಂದ ಸುಧೆ

೨. ಏಕೋತ್ತರಶತಸ್ಥಲ

**ಸಂಪುಟ : ೧೫ ವಚನ ಸಾಹಿತ್ಯ : ಭಾಗ–೭** **–ಸಂ. ಡಾ. ಪಂಡಿತ ರಾಠೋಡ**

೧. ಬಸವಣ್ಣನವರ ಟೀಕಿನ ವಚನಗಳು, ಭಾಗ–೧

**ಸಂಪುಟ : ೧೬ ವಚನ ಸಾಹಿತ್ಯ : ಭಾಗ–೮** **–ಸಂ. ಡಾ. ಪಂಡಿತ ರಾಠೋಡ**

೧. ಬಸವಣ್ಣನವರ ಟೀಕಿನ ವಚನಗಳು, ಭಾಗ–೨

**ಸಂಪುಟ : ೧೭ ವಚನ ಸಾಹಿತ್ಯ : ಭಾಗ–೯** **–ಸಂ. ಶಶಿಧರ ತೋಡ್ಕರ**

೧. ವಚನ ಸಂಕಲನ–೪

೨. ವಚನ ಸಂಕಲನ–೬

೩. ವಚನ ವರ್ಷ

**ಸಂಪುಟ : ೧೮ ವಚನ ಸಾಹಿತ್ಯ : ಭಾಗ–೧೦** **–ಸಂ. ಡಾ. ವೀರಣ್ಣ ರಾಜೂರ**

೧. ವಚನಶಾಸ್ತ್ರಸಾರ(ಸಂಪುಟ–೧)

**ಸಂಪುಟ : ೧೯ ಕಾವ್ಯ ಸಾಹಿತ್ಯ : ಭಾಗ–೧** **–ಸಂ. ಡಾ. ಗುರುಪಾದ ಮರಿಗುದ್ದಿ**

೧. ಹರಿಹರನ ರಗಳೆಗಳು, ಭಾಗ–೧

**ಸಂಪುಟ : ೨೦ ಕಾವ್ಯ ಸಾಹಿತ್ಯ : ಭಾಗ–೨** **–ಸಂ. ಡಾ. ಗುರುಪಾದ ಮರಿಗುದ್ದಿ**

೧. ಹರಿಹರನ ರಗಳೆಗಳು, ಭಾಗ–೨

**ಸಂಪುಟ: ೨೧ ಕಾವ್ಯ ಸಾಹಿತ್ಯ : ಭಾಗ–೩** **–ಸಂ. ಡಾ. ಬಿ.ವ್ಹಿ. ಶಿರೂರ**

೧. ಮಲ್ಲಿನಾಥ ಪುರಾಣ ಸಂಗ್ರಹ

೨. ಶಬ್ದಮಣಿದರ್ಪಣ ಸಂಗ್ರಹ

೩. ತೋಂಟದ ಸಿದ್ಧಲಿಂಗೇಶ್ವರ ಭಾವರತ್ನಾಭರಣ ಸ್ತೋತ್ರ

೪. ಆದಯ್ಯನ ಲಘುಕೃತಿಗಳು

೫. ಕೊಂಡಗುಳಿ ಕೇಶಿರಾಜನ ಕೃತಿಗಳು

**ಸಂಪುಟ: ೨೨ ಕಾವ್ಯ ಸಾಹಿತ್ಯ : ಭಾಗ–೪** **–ಸಂ. ಡಾ. ಎಫ್. ಟಿ. ಹಳ್ಳಿಕೇರಿ**

೧. ಷಟ್‌ಸ್ಥಲ ಶಿವಾಯಣ

೨. ಶಿವಯೋಗ ಪ್ರದೀಪಿಕಾ

**ಸಂಪುಟ: ೨೩ ಕಾವ್ಯ ಸಾಹಿತ್ಯ : ಭಾಗ–೫** **–ಸಂ. ಡಾ. ಎಫ್. ಟಿ. ಹಳ್ಳಿಕೇರಿ**

೧. ತಗರ ಪವಾಡ

೨. ಸಿದ್ಧಮಂಕ ಚರಿತೆ

೩. ಗುಂಡಬಸವೇಶ್ವರ ಪುರಾಣ

೪. ಕೊಡೆಕಲ್ಲ ವಚನ ವಾಕ್ಯ

**ಸಂಪುಟ: ೨೪ ಕಾವ್ಯ ಸಾಹಿತ್ಯ : ಭಾಗ–೬** **–ಸಂ. ಡಾ. ಹನುಮಂತ ಮೇಲಿಸಮನಿ**

೧. ಹೊಸಕುಮಾರರಾಮನ ಸಾಂಗತ್ಯ

೨. ಹಳೆಯಕುಮಾರ ರಾಮನ ಸಾಂಗತ್ಯ

ಸಂಪುಟ: ೨೫ ಕಾವ್ಯ ಸಾಹಿತ್ಯ : ಭಾಗ–೭ –ಸಂ. ಡಾ. ಹನುಮಂತ ಮೇಲಿನಮನಿ

೧. ಕೊಮಾರ ರಾಮಯ್ಯನ ಚರಿತ್ರೆ

೨. ಬಾಲರಾಮಯ್ಯನ ಸಾಂಗತ್ಯ

ಸಂಪುಟ: ೨೬ ಕಾವ್ಯ ಸಾಹಿತ್ಯ : ಭಾಗ–೮ –ಸಂ. ಡಾ. ಸರಸ್ವತಿದೇವಿ ಭಗವತಿ

೧. ಸಿರುಮಣ ನಾಯಕನ ಸಾಂಗತ್ಯ

೨. ಸಿರುಮನ ಚರಿತೆ

೩. ಗೊಲ್ಲ ಸಿರುಮನ ಚರಿತೆ

ಸಂಪುಟ: ೨೭ ಕಾವ್ಯ ಸಾಹಿತ್ಯ : ಭಾಗ–೯ –ಸಂ. ಡಾ. ಸರಸ್ವತಿದೇವಿ ಭಗವತಿ

೧. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ

೨. ನಿಂಬಸಾಮಂತ ಚರಿತೆ

ಸಂಪುಟ: ೨೮ ಕಾವ್ಯ ಸಾಹಿತ್ಯ : ಭಾಗ–೧೦ –ಸಂ. ಡಾ. ಎಂ ಎಸ್. ಮದಭಾವಿ

೧. ಕಿತ್ತೂರ ಸಂಸ್ಥಾನ ಸಾಹಿತ್ಯ–೧

೨. ಕಿತ್ತೂರ ಸಂಸ್ಥಾನ ಸಾಹಿತ್ಯ–೨

೩. ಕಿತ್ತೂರ ಸಂಸ್ಥಾನ ಸಾಹಿತ್ಯ–೩

ಸಂಪುಟ: ೨೯ ಜೀವನ ಚರಿತ್ರೆ ಸಾಹಿತ್ಯ : ಭಾಗ–೧ –ಸಂ. ಡಾ. ಎಂ ಎಸ್. ಮದಭಾವಿ

೧. ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ

೨. ಫ.ಗು.ಹಳಕಟ್ಟಿಯವರ ಆತ್ಮಚರಿತ್ರೆ

೩. ಮಡಿವಾಳಪ್ಪ ಸಾಸನೂರ ಬರೆಹ–ಬದುಕು

ಸಂಪುಟ: ೩೦ ಜೀವನ ಚರಿತ್ರೆ ಸಾಹಿತ್ಯ : ಭಾಗ–೨ –ಸಂ. ಡಾ. ಮಲ್ಲಿಕಾರ್ಜುನ ಮೇತ್ರಿ

೧. ಧರ್ಮ ದ್ರಷ್ಟಾರ ಹರ್ಡೇಕರ
ಮಂಜಪ್ಪನವರು, ಭಾಗ : ೧

ಸಂಪುಟ: ೩೧ ಜೀವನ ಚರಿತ್ರೆ ಸಾಹಿತ್ಯ : ಭಾಗ–೩ –ಸಂ. ಡಾ. ಮಲ್ಲಿಕಾರ್ಜುನ ಮೇತ್ರಿ

೧. ಧರ್ಮ ದ್ರಷ್ಟಾರ ಹರ್ಡೇಕರ
ಮಂಜಪ್ಪನವರು, ಭಾಗ : ೨

ಸಂಪುಟ: ೩೨ ಜೀವನ ಚರಿತ್ರೆ ಸಾಹಿತ್ಯ : ಭಾಗ-೪ –ಸಂ. ಡಾ. ವಿ.ಎಸ್. ಮಾಳಿ
೧. ಅರಟಾಳ ರುದ್ರಗೌಡರ ಚರಿತ್ರೆ

## III. ಲೇಖನ ಸಾಹಿತ್ಯ ಸಂಪುಟಗಳು(ಮಾರ್ಗ ಸಂಪುಟಗಳು)

ಸಂಪುಟ: ೩೩: ಲೇಖನ ಸಾಹಿತ್ಯ : ಭಾಗ-೧ –ಸಂ. ಡಾ. ಕೆ. ರವೀಂದ್ರನಾಥ
ಶಾಸನ ಸಾಹಿತ್ಯ

ಸಂಪುಟ: ೩೪. ಲೇಖನ ಸಾಹಿತ್ಯ : ಭಾಗ-೨ –ಸಂ. ಡಾ. ಕೆ. ರವೀಂದ್ರನಾಥ
ಶಾಸ್ತ್ರ ಸಾಹಿತ್ಯ

ಸಂಪುಟ: ೩೫. ಲೇಖನ ಸಾಹಿತ್ಯ : ಭಾಗ-೩ –ಸಂ. ಡಾ. ಕೆ. ರವೀಂದ್ರನಾಥ
ವಚನ ಸಾಹಿತ್ಯ

ಸಂಪುಟ: ೩೬. ಲೇಖನ ಸಾಹಿತ್ಯ : ಭಾಗ-೪ –ಸಂ. ಡಾ. ಕೆ. ರವೀಂದ್ರನಾಥ
ಕಾವ್ಯ ಸಾಹಿತ್ಯ

ಸಂಪುಟ: ೩೭. ಲೇಖನ ಸಾಹಿತ್ಯ : ಭಾಗ-೫ –ಸಂ. ಡಾ. ಕೆ. ರವೀಂದ್ರನಾಥ
ವ್ಯಕ್ತಿಚಿತ್ರಣ-ಮುನ್ನುಡಿ-ಬೆನ್ನುಡಿ
ಅರಿಕೆ-ಭಾಷಣ-ಸಂದರ್ಶನ

## IV. ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳು

ಸಂಪುಟ : ೩೮-ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ-೧ –ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ
ಚಿತ್ರ –ಡಾ. ವಿ.ಡಿ. ಐಹೊಳ್ಳಿ

ಸಂಪುಟ : ೩೯-ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ-೨ –ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ
ಪತ್ರ-ವರದಿಗಳು –ಡಾ. ವಿ.ಡಿ. ಐಹೊಳ್ಳಿ

ಸಂಪುಟ : ೪೦-ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ-೩ –ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ
ಆಡಿಯೋ-ವಿಡಿಯೋ –ಡಾ. ವಿ.ಡಿ. ಐಹೊಳ್ಳಿ

ಹೀಗೆ ೪೦ ಸಂಪುಟಗಳಲ್ಲಿ ೭೯ ಕೃತಿಗಳನ್ನು ಅಳವಡಿಸಲಾಗಿದೆ. ಮಾರ್ಗ ಸಂಪುಟದಿಂದಾಯ್ದು ಡಾ. ಕಲಬುರ್ಗಿಯವರೇ ಸಿದ್ಧಪಡಿಸಿದ ೧೧ ಸಂಕಲನ ಕೃತಿಗಳನ್ನು, ಪರಿಹರನ ರಗಳೆ ಸಂಪುಟದಿಂದಾಯ್ದು ಸಿದ್ಧಪಡಿಸಿದ 'ಕನ್ನಡ ಶರಣರ ಕಥೆಗಳು' ಎಂಬ ಕೃತಿಯನ್ನು, ವಚನ ಶಾಸ್ತ್ರಸಾರದ ಪುನರ್ ಮುದ್ರಣವಾದ 'ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಸಂಪುಟ-೫'ನ್ನು; 'ಶಿವಾನುಭವ ಪತ್ರಿಕೆ'ಯನ್ನು, ವಿಚಾರ ಸಂಕಿರಣಗಳಲ್ಲಿ ಮಂಡಿಸಿದ ವಿವಿಧ ವಿದ್ವಾಂಸರ ಪ್ರಬಂಧಗಳ ಸಂಕಲನಗಳೆನಿಸಿದ ಆಧುನಿಕ ಸಂಪಾದಿತ ೧೪ ಕೃತಿಗಳನ್ನು ಮತ್ತು ೬ ಅಭಿನಂದನಗ್ರಂಥ, ಎರಡು ಇಂಗ್ಲಿಷ್‌ಗ್ರಂಥ ಹೀಗೆ ಒಟ್ಟು ೩೫ ಗ್ರಂಥಗಳನ್ನು-ಪುನರುಕ್ತಿಕಾರಣವಾಗಿ- ಈ ಸಂಪುಟಗಳಲ್ಲಿ ಸೇರಿಸದೆ ಕೈಬಿಡಲಾಗಿದೆ.

ಸಂಪುಟಗಳ ಸಂಯೋಜನೆಯಲ್ಲಿ ಈ ಕೆಳಗಿನ ಕ್ರಮವನ್ನು ಅನುಸರಿಸಲಾಗಿದೆ:

ಒಂದು ಕೃತಿ ೫೦೦ ಪುಟ ವ್ಯಾಪ್ತಿಯನ್ನು ಹೊಂದಿದ್ದರೆ ಅದನ್ನು ಒಂದು ಸ್ವತಂತ್ರ ಸಂಪುಟವೆಂದು ಪರಿಗಣಿಸಲಾಗಿದೆ(ಉದಾ: ಶೂನ್ಯಸಂಪಾದನೆ, ವಚನ). ಪುಟ ಸಂಖ್ಯೆ ಕಡಿಮೆ ಇದ್ದಲ್ಲಿ ಒಂದಕ್ಕಿಂತ ಹೆಚ್ಚು ಕೃತಿಗಳನ್ನು ಸೇರಿಸಿ ೫೦೦ ಪುಟಕ್ಕೆ ಹೊಂದುವಂತೆ ಜೋಡಿಸಲಾಗಿದೆ(ಉದಾ: ಹೊಸ ಕುಮಾರರಾಮನ ಸಾಂಗತ್ಯ, ಹಳೆಯ ಕುಮಾರರಾಮನ ಸಾಂಗತ್ಯ). ಹಾಗೆ ಜೋಡಿಸುವಲ್ಲಿ ವಿಷಯದ ಏಕತೆಯನ್ನು ದೃಷ್ಟಿಯಲ್ಲಿಟ್ಟುಕೊಳ್ಳಲಾಗಿದೆ. ಒಂದು ಕೃತಿ ಸಾವಿರ ಅಥವಾ ಅದಕ್ಕಿಂತ ಹೆಚ್ಚು ಪುಟ ವ್ಯಾಪ್ತಿಯನ್ನು ಪಡೆದಿದ್ದರೆ, ಅದನ್ನು ಎರಡು ಭಾಗಗಳಾಗಿ ವಿಭಜಿಸಿ ಪ್ರತ್ಯೇಕ ಸಂಪುಟವೆಂದು ಗಣಿಸಲಾಗಿದೆ(ಉದಾ: ಬಸವಣ್ಣನವರ ಟೀಕಿನ ವಚನಗಳು, ಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪನವರು).

ಡಾ. ಕಲಬುರ್ಗಿ ಅವರ ಬಿಡಿ ಲೇಖನಗಳು (ಸಂಪ್ರಬಂಧಗಳು) ಮೂಲದಲ್ಲಿ 'ಮಾರ್ಗ' ಹೆಸರಿನ ೮ ಸಂಪುಟಗಳಲ್ಲಿ ಪ್ರಕಟವಾಗಿವೆ. ಕಾಲಕಾಲಕ್ಕೆ ಪ್ರಕಟವಾದ ಅವುಗಳಲ್ಲಿ ಒಂದೇ ವಿಷಯ ಕ್ಷೇತ್ರಕ್ಕೆ ಸಂಬಂಧಿಸಿದ ಲೇಖನಗಳು ಬೇರೆಬೇರೆ ಸಂಪುಟಗಳಲ್ಲಿ ಹಂಚಿ ಹೋಗಿವೆ. ಅವುಗಳನ್ನು ಒಂದೆಡೆ ತರುವ ಉದ್ದೇಶದಿಂದ ಎಲ್ಲ ಲೇಖನಗಳನ್ನು ವಿಷಯಾನುಗುಣವಾಗಿ ಮರುವರ್ಗೀಕರಣ ಮಾಡಿ ೫ ಸಂಪುಟಗಳಲ್ಲಿ ಅಳವಡಿಸಲಾಗಿದೆ. ಹಾಗೆ ಮಾಡುವಲ್ಲಿ ಮೂಲ ಮಾರ್ಗ ಸಂಪುಟ ೫ ರಲ್ಲಿ ಅಳವಡಿಸಿದ್ದ ಪ್ರಾಚೀನ ಸಂಪಾದಿತ ಕೃತಿಗಳ ಪ್ರಸ್ತಾವನೆಗಳನ್ನು-ಅವು ಆಯಾ ಕೃತಿಗಳಲ್ಲಿ ಅಲ್ಲಲ್ಲಿಯೇ ಪ್ರಕಟವಾಗುವುದರಿಂದ-ಕೈಬಿಡಲಾಗಿದೆ. ಆಧುನಿಕ ಸಂಪಾದಿತ ಕೃತಿಗಳು ಈ ಯೋಜನೆಯಿಂದ ಹೊರಗುಳಿದಿರುವುದರಿಂದ ಅವುಗಳ ಅರಿಕೆ, ಸಂಪಾದಕರ ಮಾತು, ಪ್ರಧಾನ ಸಂಪಾದಕರ ಮಾತು-ಇವುಗಳನ್ನು ಮಾತ್ರ ಹಾಗೇ ಉಳಿಸಿಕೊಳ್ಳಲಾಗಿದೆ. ಮರು ಹೊಂದಾಣಿಕೆ ಮಾಡಿದ ಲೇಖನಗಳ ಮೂಲ ಆಕರಗಳನ್ನು ಆಯಾ ಲೇಖನದ ಕೆಳಗೆ ನಮೂದಿಸಲಾಗಿದೆ.

ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳಲ್ಲಿ ಒಂದು-ಡಾ. ಕಲಬುರ್ಗಿಯವರಿಗೆ ಸಂಬಂಧಿಸಿದ ಚಿತ್ರ ಸಂಪುಟವಾಗಿದೆ. ಇದರಲ್ಲಿ ಅವರ ವೈಯಕ್ತಿಕ ಬದುಕು ಮತ್ತು ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದುಕಿಗೆ ಸಂಬಂಧಿಸಿದ ಆಯ್ದ ಭಾವ ಚಿತ್ರಗಳನ್ನು ಅಳವಡಿಸಲಾಗಿದೆ. ಎರಡನೆಯದಾದ ಪತ್ರ-ವರದಿ ಸಂಪುಟದಲ್ಲಿ ಕಲಬುರ್ಗಿ ಅವರು ಇತರರಿಗೆ ಬರೆದ, ಇತರರು ಕಲಬುರ್ಗಿಯವರಿಗೆ

ಬರೆದ ಮಹತ್ವದ ಪತ್ರಗಳನ್ನು ಮತ್ತು ಕಲಬುರ್ಗಿಯವರು ಭಾಗವಹಿಸಿದ ಕಾರ್ಯಕ್ರಮಗಳ ಪತ್ರಿಕಾ ವರದಿಗಳನ್ನು ಸಂಗ್ರಹಿಸಲಾಗಿದೆ. ಮೂರನೆಯ ಸಂಪುಟದಲ್ಲಿ ಕಲಬುರ್ಗಿ ಅವರನ್ನು ಕುರಿತ ಸಾಕ್ಷ್ಯಚಿತ್ರ, ದೂರದರ್ಶನ ಸಂದರ್ಶನ ಮತ್ತು ಭಾಷಣಗಳು; ಅವರ ನಾಟಕಗಳ ಪ್ರದರ್ಶನದ ಚಿತ್ರೀಕರಣ ಮಾಡಿದ ಆಡಿಯೋ-ವಿಡಿಯೋಗಳನ್ನು ಒಂದುಗೂಡಿಸಲಾಗಿದೆ.

ಡಾ. ಕಲಬುರ್ಗಿ ಅವರ ಕೃತಿಗಳಲ್ಲಿ ಕೆಲವು ಒಂದೇ ಮುದ್ರಣ ಕಂಡಿದ್ದರೆ, ಮತ್ತೆ ಕೆಲವು ಒಂದಕ್ಕಿಂತ ಹೆಚ್ಚು ಮುದ್ರಣ ಹೊಂದಿವೆ. ಹೀಗಾಗಿ ಈ ಸಂಪುಟಗಳನ್ನು ಸಿದ್ಧಪಡಿಸುವಲ್ಲಿ ಎಲ್ಲ ಆವೃತ್ತಿಗಳನ್ನೂ ಅವಲೋಕಿಸಿ, ಕೊನೆಯ ಆವೃತ್ತಿಯನ್ನು ಆಧಾರವಾಗಿಟ್ಟುಕೊಳ್ಳಲಾಗಿದೆ.

ಒಂದು ಕೃತಿಯಲ್ಲಿ ಒಪ್ಪೋಲೆ ಇದ್ದರೆ ಮೊದಲು ಅದನ್ನು ಸರಿಪಡಿಸಿಕೊಳ್ಳುವುದು. ಕೃತಿಯ ಅಥವಾ ಲೇಖನದ ಒಳಗೆ ಕೆಲವು ಭಾಗ ಅಥವಾ ಪುಟ ಅಥವಾ ಪದ-ವಾಕ್ಯ ಬಿಟ್ಟುಹೋಗಿದ್ದರೆ ಮೂಲ ಆವೃತ್ತಿಯನ್ನು ನೋಡಿ ಸೇರಿಸಿಕೊಳ್ಳುವುದು. ಅಕ್ಷರ ದೋಷಗಳನ್ನು ತಿದ್ದುಪಡಿಮಾಡುವುದು. ಅಡಿಟಿಪ್ಪಣಿ, ಅನುಬಂಧಗಳಲ್ಲಿ ವ್ಯತ್ಯಾಸಗಳಾಗಿದ್ದರೆ ಹೊಂದಾಣಿಕೆ ಮಾಡುವುದು. ಆಕರಗಳು ಬಿಟ್ಟು ಹೋಗಿದ್ದರೆ ಬೇರೆ ಮೂಲಗಳಿಂದ ಹುಡುಕಿ ಅಳವಡಿಸಿಕೊಳ್ಳುವುದು. ಈ ಹಿನ್ನೆಲೆಯಲ್ಲಿ ಆಯಾ ಸಂಪುಟಗಳ ಸಂಪಾದಕರು ತಮ್ಮ ತಮ್ಮ ಸಂಪುಟಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿ, ಶುದ್ಧರೂಪದಲ್ಲಿ ಸಿದ್ಧಪಡಿಸುವುದು. ಅನಂತರ ಆ ಸಂಪುಟದ ಸ್ವರೂಪ-ವಿಶೇಷತೆ ಕುರಿತು ನಾಲ್ಕಾರು ಪುಟದ ಸಂಪಾದಕರ ಮಾತು ಬರೆದು ಜೋಡಿಸುವುದು-ಇದು ಈ ಸಂಪುಟಗಳನ್ನು ರೂಪಿಸುವಲ್ಲಿ ಅನುಸರಿಸಿದ ವಿಧಾನ.

ಗ್ರಂಥ ವಿನ್ಯಾಸ ಕುರಿತಂತೆ-ಕೃತಿಯ ಆರಂಭದ ಪುಟಗಳು (ಪ್ರಿಲಿಮ್ಸ್) ಮುಗಿದು ಮೂಲ ಗ್ರಂಥ ಆರಂಭವಾಗುವಲ್ಲಿ ಮೊದಲ ಆವೃತ್ತಿಯ ಮೊದಲ ಪುಟವನ್ನು (ಕೃತಿಯ ಹೆಸರು, ಲೇಖಕರು/ಸಂಪಾದಕರು, ಪ್ರಕಾಶಕರು, ಪ್ರಕಟಣ ವರ್ಷಗಳನ್ನೊಳಗೊಂಡಂತೆ) ಹಾಗೆಯೇ ಇಟ್ಟುಕೊಳ್ಳಲಾಗಿದೆ. ಮೂಲದಲ್ಲಿನ ಪ್ರಕಾಶಕರ ಮಾತು, ಮುನ್ನುಡಿಗಳನ್ನು ತೆಗೆದುಹಾಕಿ ಲೇಖಕರ ಮಾತು, ಪ್ರಸ್ತಾವನೆಗಳನ್ನು ಮಾತ್ರ ಉಳಿಸಿಕೊಳ್ಳಲಾಗಿದೆ. ಒಂದು ಸಂಪುಟದಲ್ಲಿ ಒಂದಕ್ಕಿಂತ ಹೆಚ್ಚು ಕೃತಿಗಳಿದ್ದರೆ ಒಂದೊಂದು ಕೃತಿಯ ಮೂಲ ಸ್ವರೂಪವನ್ನು ಹಾಗೆಯೇ ಉಳಿಸಿಕೊಂಡು ಪುಟ ಸಂಖ್ಯೆಯನ್ನು ಮಾತ್ರ ಮೊದಲಿನಿಂದ ಕೊನೆಯವರೆಗೆ ಬೆಳೆಸಲಾಗಿದೆ. ಪರಿವಿಡಿಯಲ್ಲಿ ಎಲ್ಲ ಕೃತಿಗಳ ವಿವರವನ್ನು ಕೊಡಲಾಗಿದೆ.

ಒಟ್ಟಿನಲ್ಲಿ ಅಚ್ಚುಕಟ್ಟಾದ ವಿನ್ಯಾಸ, ಅರ್ಥಪೂರ್ಣ-ಆಕರ್ಷಕ ಮುಖಪುಟ, ದೋಷರಹಿತ ಸುಂದರ ಮುದ್ರಣ, ಭಾರವೆನಿಸದ ಗಾತ್ರ ಮತ್ತು ಸುಲಭವಾದ ಬೆಲೆಯಲ್ಲಿ ಡಾ. ಕಲಬುರ್ಗಿ ಅವರ ಅಮೂಲ್ಯವಾದ ಸಮಗ್ರ ಸಾಹಿತ್ಯ ಒಂದೆಡೆ ಎಲ್ಲರಿಗೂ ದೊರಕುವಂತೆ ಮಾಡುವುದು ಈ ಯೋಜನೆಯ ಉದ್ದೇಶವಾಗಿದೆ. ಅದನ್ನು ಬಹುಮಟ್ಟಿಗೆ ಈಡೇರಿಸಿದ್ದೇವೆ ಎಂಬ ತೃಪ್ತಿ ನಮ್ಮದಾಗಿದೆ.

**ಕೃತಜ್ಞತೆಗಳು :**

'ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ' ಕನ್ನಡದ ಒಂದು ಮಹತ್ವಾಕಾಂಕ್ಷೆಯ ಪ್ರತಿಷ್ಠಿತ ಗ್ರಂಥಪ್ರಕಟಣ ಯೋಜನೆ. ಇದನ್ನು ಯಶಸ್ವಿಯಾಗಿ ಪೂರೈಸುವಲ್ಲಿ

ಹಲವಾರು ವ್ಯಕ್ತಿಗಳು ನೆರವಾಗಿದ್ದಾರೆ. ಅವರನ್ನು ಈ ಸಂದರ್ಭದಲ್ಲಿ ಗೌರವಪೂರ್ವಕವಾಗಿ ನೆನೆಯುವುದು ನನ್ನ ಪರಮ ಕರ್ತವ್ಯವೆಂದು ಭಾವಿಸಿದ್ದೇನೆ.

ಈ ಯೋಜನೆಗೆ ಅನುಮೋದನೆ ನೀಡಿ, ಧನ ಸಹಾಯ ಮಾಡಿದವರು ಕರ್ನಾಟಕ ಸರ್ಕಾರದ ಅಂದಿನ ಮುಖ್ಯ ಮಂತ್ರಿಗಳಾಗಿದ್ದ ಮಾನ್ಯ ಶ್ರೀ ಸಿದ್ಧರಾಮಯ್ಯನವರು. ಅದಕ್ಕೆ ಪೂರ್ವಭಾವಿಯಾಗಿ ಸಹಾಯ ಮಾಡಿದವರು ಕನ್ನಡ ಮತ್ತು ಸಂಸ್ಕೃತಿ ಖಾತೆಯ ಸಚಿವರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು. ಅವರಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಈ ಮಹತ್ವದ ಯೋಜನೆ ಕಾರ್ಯರೂಪಕ್ಕೆ ಬರಲು ಮುಖ್ಯಮಂತ್ರಿಗಳ ಮನ ಒಲಿಸಿ ಹಣ ಬಿಡುಗಡೆ ಮಾಡಿಸುವುದರ ಜೊತೆಗೆ ತಮ್ಮ ಬಿಎಲ್‌ಡಿಇ ಸಂಸ್ಥೆಯ ಅಡಿಯಲ್ಲಿರುವ 'ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ'ದ ಮೂಲಕ ಇದು ಸಾಕಾರಗೊಳ್ಳಲು ಕಾರಣರಾದವರು ಕರ್ನಾಟಕ ಸರ್ಕಾರದ ಪ್ರಭಾವೀ ಗೃಹಸಚಿವರೂ, ಉತ್ಕಟ ಬಸವತತ್ವಾಭಿಮಾನಿಗಳೂ ಲಿಂಗಾಯತ ಸ್ವತಂತ್ರ ಧರ್ಮ ಮಾನ್ಯತೆಯ ಹೋರಾಟದ ಮುಂಚೂಣಿ ನಾಯಕರೂ ಆದ ಮಾನ್ಯ ಶ್ರೀ ಎಂ.ಬಿ. ಪಾಟೀಲ ಅವರು. ಡಾ. ಎಂ. ಎಂ. ಕಲಬುರ್ಗಿ ಅವರ ಬಗೆಗೆ ಪಾಟೀಲರಿಗೆ ಅನನ್ಯವಾದ ಪ್ರೀತಿ–ವಿಶ್ವಾಸ–ಗೌರವ. ಅವರ ಮಾರ್ಗದರ್ಶನದಲ್ಲಿ ತಮ್ಮ ಬಿ.ಎಲ್.ಡಿ.ಇ. ಸಂಸ್ಥೆಯಿಂದ 'ಡಾ. ಫ.ಗು. ಹಳಕಟ್ಟಿ ಸಮಗ್ರ ಸಾಹಿತ್ಯ', 'ಆದಿಲ್‌ಶಾಹಿ ಸಮಗ್ರ ಸಾಹಿತ್ಯ' ಪ್ರಕಟಿಸಿದ ಕೀರ್ತಿ ಅವರದು. ಈಗ ಕಲಬುರ್ಗಿ ಅವರ ಸಮಗ್ರ ಸಾಹಿತ್ಯ ಪ್ರಕಟಿಸುವ ಮೂಲಕ ಅವರಿಗೆ ತಮ್ಮ ಕೃತಜ್ಞತಾಪೂರ್ವಕ ಗೌರವ ಸಲ್ಲಿಸುತ್ತಿರುವುದು ಅಪೇಕ್ಷಣೀಯ ಉಪಕ್ರಮವೆನಿಸಿದೆ. ಶ್ರೀ ಎಂ.ಬಿ. ಪಾಟೀಲ ಅವರ ಈ ಕಾರ್ಯಕ್ಷಮತೆಗೆ ಅನಂತ ಶರಣಾರ್ಥಿಗಳನ್ನು ಸಲ್ಲಿಸುತ್ತೇನೆ.

ಈ ಯೋಜನೆ ನಿಗದಿತ ವೇಳೆಯಲ್ಲಿ ಸಮಯಬದ್ಧವಾಗಿ ಮತ್ತು ವ್ಯವಸ್ಥಿತವಾಗಿ ಪೂರ್ಣಗೊಳ್ಳಲು ಅರ್ಪಣಾಭಾವದಿಂದ ನಿರಂತರ ಶ್ರಮಿಸಿದವರು ಹಳಕಟ್ಟಿ ಸಂಶೋಧನ ಕೇಂದ್ರದ ಹಾಗೂ ಈ ಯೋಜನೆಯ ಕಾರ್ಯದರ್ಶಿಗಳಾದ ಡಾ. ಎಂ. ಎಸ್. ಮದಭಾವಿ ಮತ್ತು ಯೋಜನಾ ಸಂಯೋಜಕರಾದ ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ಹಾಗೂ ಸಂಶೋಧನ ಕೇಂದ್ರದ ಎಲ್ಲ ಸಿಬ್ಬಂದಿ ವರ್ಗ. ಅವರ ಅವಿರತ ಪರಿಶ್ರಮಕ್ಕೆ ಅನಂತ ವಂದನೆಗಳು.

ಈ ಯೋಜನೆಗೆ ಬೇಕಾದ ಆಕರ ಸಾಮಗ್ರಿಯನ್ನು, ಅಂದರೆ ಗ್ರಂಥಗಳನ್ನು ಒದಗಿಸಿದವರು ಡಾ. ಎಂ. ಎಂ. ಕಲಬುರ್ಗಿ ಅವರ ಕುಟುಂಬವರ್ಗದವರು. ಈ ಸಂದರ್ಭದಲ್ಲಿ ಶ್ರೀಮತಿ ಉಮಾದೇವಿ ಕಲಬುರ್ಗಿ, ಶ್ರೀ ವಿಜಯ ಕಲಬುರ್ಗಿ ಮತ್ತು ರೂಪಾ ಕಲಬುರ್ಗಿ ಅವರು ಅನೇಕ ವಿಧದಲ್ಲಿ ಸಹಾಯ–ಸಹಕಾರ ಮತ್ತು ಮಾರ್ಗದರ್ಶನ ನೀಡಿದ್ದಾರೆ. ಅವರಿಗೆ ನಾವು ಚಿರಋಣಿಯಾಗಿದ್ದೇವೆ.

ಒಂದು ಯೋಜನೆ ನಿರೀಕ್ಷಿತ ಮಟ್ಟದಲ್ಲಿ ತೃಪ್ತಿಕರವಾಗಿ ಕೈಗೂಡಬೇಕಾದರೆ ಬದ್ಧತೆಯುಳ್ಳ ವಿದ್ವಾಂಸರ ನಿಶ್ಚಿತ ನೆರವು ಮತ್ತು ಪ್ರಾಮಾಣಿಕ ಪ್ರಯತ್ನ ಅಗತ್ಯ. ಅಂಥ ೧೬ ಜನ ವಿದ್ವಾಂಸರು ನಮಗೆ ಸಂಪಾದಕರಾಗಿ ದೊರೆತುದು ಈ ಯೋಜನೆ ಸುಗಮವಾಗಿ ಪೂರ್ಣಗೊಳ್ಳಲು

ಸಹಕಾರಿಯಾಗಿದೆ. ಅವರೆಲ್ಲರ ವಿದ್ವತ್ ಪ್ರೀತಿಗೆ, ಕಲಬುರ್ಗಿ ಸರ್ ಮೇಲಿನ ಅಭಿಮಾನಕ್ಕೆ ತುಂಬು ಹೃದಯದ ಅಭಿನಂದನೆಗಳು.

ಸಂಪುಟಗಳು ಸುಂದರವಾಗಿ–ಬಂಧುರವಾಗಿ ಹೊರಬರಲು ಕಾರಣರಾದವರು ಛಾಯಾಕ್ಷರ ಜೋಡಿಸಿ, ಗ್ರಂಥವಿನ್ಯಾಸಗೊಳಿಸಿದ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ, ಮುಖಪುಟ ರೂಪಿಸಿದ ಕೆ.ಕೆ. ಮಕಾಳಿ ಮತ್ತು ಮುದ್ರಣಗೊಳಿಸಿದ ಪ್ರಿಂಟ್‌ಪಾಯಿಂಟ್ ಮಾಲಿಕರಾದ ಬಸವರಾಜ ಪಾಟೀಲ(ಹೆಬ್ಬಾಳ) ಅವರು. ಇವರೆಲ್ಲರಿಗೆ ಅನಂತ ಕೃತಜ್ಞತೆಗಳು.

ಡಾ. ಕಲಬರ್ಗಿ ಅವರು ಅನೇಕ ಯೋಜನೆಗಳ ಮಹಾಯೋಜಕರು. ಅವರು ನೆರವೇರಿಸಿದ ಹಲವಾರು ಯೋಜನೆಗಳಲ್ಲಿ ಜೊತೆಗೂಡಿ ಕೆಲಸ ಮಾಡುವ ಅವಕಾಶ ದೊರಕಿಸಿಕೊಂಡ ನನಗೆ ಈಗ ಅವರ ಸಮಗ್ರಸಾಹಿತ್ಯ ಪ್ರಕಟಣ ಯೋಜನೆಯ ಪ್ರಧಾನ ಸಂಪಾದಕನಾಗಿ ಕಾರ್ಯ ಮಾಡುವ ಯೋಗ ಒದಗಿ ಬಂದುದು ನನ್ನ ಬದುಕಿನ ಮಹಾಭಾಗ್ಯವೆಂದು ಭಾವಿಸಿದ್ದೇನೆ. ಈ ಕಾರ್ಯಗೌರವವನ್ನು ಆ ಗುರುವಿನ ದಿವ್ಯಚೇತನಕ್ಕೆ ವಿನಮ್ರವಾಗಿ ಅರ್ಪಿಸುತ್ತೇನೆ.

❖❖

*

# ಸಂಯೋಜಕರ ನುಡಿ

**ಡಾ. ಕೃಷ್ಣ ಕೊಲ್ಹಾರಕುಲಕರ್ಣಿ**

ಡಾ. ಎಂ.ಎಂ. ಕಲಬುರ್ಗಿಯವರು ತಮ್ಮ ಅಮೂಲ್ಯ ಸಾಹಿತ್ಯದ ಮೂಲಕ ನಾಡು, ನುಡಿ ಸೇವೆಗೈದು ದೇಶ–ವಿದೇಶದಲ್ಲಿ ದಟ್ಟವಾದ ಪ್ರಭಾವವನ್ನು ಬೀರಿದ ವ್ಯಕ್ತಿ. ೨೦ನೆಯ ಶತಮಾನದ ಉತ್ತರಾರ್ಧ ಹಾಗೂ ೨೧ನೆಯ ಶತಮಾನದ ಪೂರ್ವಾರ್ಧದ ಹೊಸ್ತಿಲಲ್ಲಿ ನಿಂತು ಸಾಹಿತ್ಯ ವಾರಸುದಾರರಿಗೆ ಮಾರ್ಗ ತೋರಿದ ಮಹಾನ್ ವಿದ್ವಾಂಸ, ಸಂಶೋಧಕ, ವಿಮರ್ಶಕ, ಚಿಂತಕ ಹಾಗೂ ಸಾಹಿತ್ಯದ ಆರಾಧಕರವರು.

ಇಂಥ ಅಪರೂಪದ ವ್ಯಕ್ತಿಯ ವ್ಯಕ್ತಿತ್ವದ ಬಹುಮುಖಗಳನ್ನು ಒಂದೆಡೆ ಸೇರಿಸಿ ಅಕ್ಷರ, ದೃಶ್ಯ, ಧ್ವನಿ, ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು, ಅಕ್ಷರ ಮಾಧ್ಯಮದಲ್ಲಿ ಬಂದ ಅವರ ಸಮಗ್ರ ಸಾಹಿತ್ಯವನ್ನು ವಿಷಯವಾರು ವಿಂಗಡಿಸಿ ೪೦ ಸಂಪುಟಗಳಲ್ಲಿ ಪ್ರಕಟಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

- ❖ ಅವರು ನುಡಿದ ಮಾತುಗಳು(ದೃಶ್ಯ ಮತ್ತು ಧ್ವನಿ) ರೇಡಿಯೊ, ದೂರದರ್ಶನದಲ್ಲಿ ಅಲ್ಲದೆ ಹಲವಾರು ಮಹತ್ವದ ಕಾರ್ಯಕ್ರಮಗಳಲ್ಲೂ ದಾಖಲಾಗಿವೆ. ಅವುಗಳನ್ನು ಇದ್ದ ರೀತಿಯಲ್ಲೆ ಸಂಗ್ರಹಿಸುವುದರ ಜೊತೆಗೆ, ಅವುಗಳನ್ನು ಅಕ್ಷರ ಮಾಧ್ಯಮಕ್ಕೆ ತಂದು ಸಂಪುಟ ರೂಪದಲ್ಲಿ ಪ್ರಕಟಿಸುವುದು.
- ❖ ಡಾ. ಕಲಬುರ್ಗಿಯವರ ವಿಪುಲವಾದ ಅಪ್ರಕಟಿತ ಸಾಹಿತ್ಯವು ಆತ್ಮಚರಿತ್ರೆಯ ರೂಪದ ದಿನಚರಿಯ ಪುಟಗಳಲ್ಲಿ ಲಭ್ಯವಿವೆ ಎಂದು ಬಲ್ಲ ಮೂಲಗಳಿಂದ ತಿಳಿದುಬಂದಿದೆ. ಅದನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿ ಪ್ರಕಟಿಸುವುದು.
- ❖ ಐದು ದಶಕಗಳ ಕಾಲದಿಂದಲೂ ದಿನಪತ್ರಿಕೆಯಲ್ಲಿ, ನಿಯತಕಾಲಿಕೆಗಳಲ್ಲಿ ಪ್ರಕಟವಾದ ಅವರ ಲೇಖನಗಳನ್ನು ಮತ್ತು ಸಭೆ, ಸಮಾರಂಭಗಳಲ್ಲಿ ನೀಡಿರುವ ವಿದ್ವತ್ಪೂರ್ಣವಾದ ಮಾತುಗಳನ್ನು ಪತ್ರಿಕೆಯವರು ಪ್ರಕಟಿಸಿರುವುದುಂಟು. ಇವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.

- ❖ ಸಾವಿರಾರು ವಿದ್ಯಾರ್ಥಿಗಳಿಗೆ, ಸಹೋದ್ಯೋಗಿ ಬಂಧುಗಳಿಗೆ, ವಿದ್ವಾಂಸರುಗಳಿಗೆ, ಗುರುಗಳಿಗೆ, ಮಠಮಾನ್ಯಗಳಿಗೆ ಅವರು ಹಲವಾರು ಪತ್ರಗಳನ್ನು ಬರೆದವರಾಗಿದ್ದಾರೆ. ಅವುಗಳೆಲ್ಲವನ್ನು ಒಂದೆಡೆ ಸೇರಿಸಿ ಪತ್ರ ಸಂಪುಟಗಳನ್ನು ಪ್ರಕಟಿಸುವುದು.
- ❖ ಸರಕಾರ ಮತ್ತು ಸರಕಾರೇತರ ಪ್ರತಿಷ್ಠಾನಗಳು, ಸಂಘ-ಸಂಸ್ಥೆಗಳು, ವಿಶ್ವವಿದ್ಯಾಲಯ ಇವುಗಳಲ್ಲಿ ಹಲವಾರು ಸಾಹಿತ್ಯಿಕ ಕೃತಿಗಳನ್ನು ಪ್ರಕಟಿಸಿದ್ದಾರೆ. ಅವುಗಳು ಕನ್ನಡ ನಾಡು ಮತ್ತು ಹೊರನಾಡುಗಳಲ್ಲಿ ಚದುರಿವೆ. ಅವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ❖ ಡಾ. ಕಲಬುರ್ಗಿಯವರ ಹಲವಾರು ಶೈಕ್ಷಣಿಕ, ಸಾಹಿತ್ಯಿಕ, ಸಾಮಾಜಿಕ ಮತ್ತು ಸಂಶೋಧನಾತ್ಮಕ ಲೇಖನಗಳು ನಿಯತಕಾಲಿಕೆಗಳಲ್ಲಿ ಪ್ರಕಟಗೊಂಡಿವೆ. ಅವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ❖ ಭಾಷಣಗಳು, ಉಪನ್ಯಾಸಗಳು, ಹಲವಾರು ವಿಚಾರಸಂಕಿರಣದಲ್ಲಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ವೇದಿಕೆಗಳಲ್ಲಿ ಮಂಡಿಸಿದ ಪ್ರಬಂಧಗಳನ್ನು ಒಂದೆಡೆ ಸಂಗ್ರಹಿಸುವುದಲ್ಲದೆ, ರಾಷ್ಟ್ರೀಯ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ವರದಿಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ❖ ಅವರ ಸಾವಿರಾರು ಶಿಷ್ಯವರ್ಗದ ಗ್ರಂಥಗಳಿಗೆ ಬರೆದ ಮುನ್ನುಡಿ, ಹಿನ್ನುಡಿ, ಮಾರ್ಗದರ್ಶಕ ಟಿಪ್ಪಣಿಗಳು, ಪ್ರಸ್ತಾವನೆಗಳು ಮತ್ತು ಸಂಪಾದಕ ನುಡಿಗಳು ಇವುಗಳೆಲ್ಲವನ್ನು ಸಂಗ್ರಹಿಸಿ ಪ್ರಕಟಿಸುವುದು.
- ❖ ಡಾ. ಕಲಬುರ್ಗಿಯವರು ಜಾನಪದ ಸಾಹಿತ್ಯದಲ್ಲೂ ಅಪರೂಪದ ಕೆಲಸ ಮಾಡಿದ್ದಾರೆ. ಹಲವಾರು ಹಾಡುಗಳನ್ನು ಸಂಗ್ರಹಿಸಿದ್ದಾರೆ. ಅವುಗಳನ್ನು ಸಂಗ್ರಹಿಸಿ, ಪ್ರಕಟಿಸುವುದು.
- ❖ ಐದು ದಶಕಗಳ ಅವರ ನಿರಂತರ ಕಾರ್ಯಚಟುವಟಿಕೆಗಳ ಭಾವಚಿತ್ರಗಳನ್ನು ಸಂಗ್ರಹಿಸಿ ಚಿತ್ರ ಸಂಪುಟಗಳನ್ನು ಪ್ರಕಟಿಸುವುದು.
- ❖ ಅವರು ಬರೆದ, ರಂಗಪ್ರದರ್ಶನ ಕಂಡ ನಾಟಕಗಳನ್ನು ಪುನರ್ ಪ್ರದರ್ಶಿಸಿ ದೃಶ್ಯಮಾಧ್ಯಮದಲ್ಲಿ ಸೆರೆಹಿಡಿದು ಪ್ರಕಟಿಸುವುದು.
- ❖ ಮುಂದುವರೆದ ಈ ತಾಂತ್ರಿಕ ಯುಗದಲ್ಲಿ ಅವರ ಸಮಗ್ರ ಸಾಹಿತ್ಯವನ್ನು ಅಂತರ್ಜಾಲಕ್ಕೆ ರವಾನಿಸುವುದು.

ಹಳಕಟ್ಟಿ ಸಂಶೋಧನ ಕೇಂದ್ರವು ಕಳೆದ ಸುಮಾರು ೨ ದಶಕಗಳ ಸಂಶೋಧನ ಕ್ಷೇತ್ರದಲ್ಲಿ ಅಪರೂಪದ ಕೆಲಸವನ್ನು ಮಾಡುತ್ತಿದೆ. ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯವನ್ನು ೧೫ ಸಂಪುಟಗಳಲ್ಲಿ ಆದಿಲಶಾಹಿ ಕಾಲದ ಸಾಹಿತ್ಯವನ್ನು ೧೮ ಸಂಪುಟಗಳಲ್ಲಿ ಅನುವಾದಿಸಿ ಪ್ರಕಟಿಸಿದೆ. ೯ ವಿದ್ಯಾರ್ಥಿಗಳು ವಿವಿಧ ವಿಷಯದಲ್ಲಿ ಪಿಎಚ್.ಡಿ.ಪದವಿಯನ್ನು ಪಡೆದಿದ್ದಾರೆ. ಇನ್ನು ಕೆಲವರು ಪದವಿಯನ್ನು ಪಡೆಯುವ ದಾರಿಯಲ್ಲಿ ಇದ್ದಾರೆ. ಇದಕ್ಕೆಲ್ಲ ಬಿ.ಎಲ್.ಡಿ.ಇ.ಸಂಸ್ಥೆಯ ಅಧ್ಯಕ್ಷರಾದ ಡಾ. ಎಂ.ಬಿ.ಪಾಟೀಲ ಅವರ ನಿರಂತರ ಬೆಂಬಲವೇ ಕಾರಣವಾಗಿದೆ. ಈ ಯೋಜನೆಯ ಕರಡು ಪ್ರತಿಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕಳುಹಿಸಿತು. ಈ ಯೋಜನೆಗೆ ಅನುದಾನ

ನೀಡುವಲ್ಲಿ ತೀವ್ರ ಆಸಕ್ತಿ ವಹಿಸಿದವರು ಈ ಹಿಂದೆ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಸನ್ಮಾನ್ಯ ಶ್ರೀ ಸಿದ್ಧರಾಮಯ್ಯನವರು ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು ಮತ್ತು ಅಧಿಕಾರಿಗಳು. ಇವರಿಗೆಲ್ಲ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಯೋಜನೆಯಲ್ಲಿ ಬಿ.ಎಲ್.ಡಿ.ಇ. ಸಂಸ್ಥೆಯ ಅಧ್ಯಕ್ಷರು, ನಾಡಿನ ಹಿರಿಯ ರಾಜಕಾರಣಿಗಳು ಆದ ಡಾ. ಎಂ.ಬಿ.ಪಾಟೀಲ ಗೌರವ ಅಧ್ಯಕ್ಷರಾಗಿ, ಶ್ರೀ ಜಿ.ಕೆ.ಪಾಟೀಲರು ಅಧ್ಯಕ್ಷರಾಗಿ, ಡಾ. ಎಂ.ಎಸ್. ಮದಭಾವಿ ಕಾರ್ಯದರ್ಶಿಗಳಾಗಿ, ಡಾ. ವೀರಣ್ಣ ರಾಜೂರ ಪ್ರಧಾನ ಸಂಪಾದಕರಾಗಿ, ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಸಂಯೋಜಕರಾಗಿ ಹಾಗೂ ಡಾ. ಗುರುಲಿಂಗ ಕಾಪಸೆ, ಶ್ರೀವಿಜಯ ಕಲಬುರ್ಗಿ, ಡಾ. ವಿ.ಡಿ.ಐಹೊಳ್ಳಿ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರು, ಸಲಹಾ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಇವರೆಲ್ಲರನ್ನು ಪ್ರೀತಿಯಿಂದ ನೆನೆಯುತ್ತೇವೆ.

ಪ್ರಸ್ತುತ ಸಂಪುಟದ ಸಂಪಾದಕರಾದ ಡಾ. ವೀರಣ್ಣ ರಾಜೂರ, ಮುಖಪುಟ ವಿನ್ಯಾಸಗೊಳಿಸಿದ ಶ್ರೀ ಕೆ.ಕೆ.ಮಕಾಳಿ ಹಾಗೂ ಸುಂದರವಾಗಿ ಅಕ್ಷರ ಸಂಯೋಜನೆ ಮಾಡಿದ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ ಮತ್ತು ಅಂದವಾಗಿ ಮುದ್ರಿಸಿದ ಬೆಂಗಳೂರಿನ ಪ್ರಿಂಟ್ ಪಾಯಿಂಟಿನ ಶ್ರೀ ಬಿ.ಸಿ.ಪಾಟೀಲ(ಹೆಬ್ಬಾಳ) ಹಾಗೂ ಅವರ ಸಿಬ್ಬಂದಿಗೆ ಕೃತಜ್ಞತೆಗಳು.

❖❖

*

# ಸಂಪಾದಕರ ನುಡಿ

## ಡಾ. ಎಂ. ಎಸ್. ಮದಭಾವಿ

೧

ಡಾ. ಎಂ.ಎಂ.ಕಲಬುರ್ಗಿಯವರ ಕಾರ್ಯಕ್ಷೇತ್ರದ ಹರಹು ದೊಡ್ಡದು. ಸಾಹಿತ್ಯ, ಶಿಕ್ಷಣ, ಸಂಶೋಧನೆ, ಪ್ರಕಟನೆ–ಹೀಗೇ ಹೇಳುತ್ತ ಹೋದಂತೆ ಮುಗಿಯದ ಪಯಣವಾಗಿದೆ. ಭಾಷೆ, ಸಾಹಿತ್ಯ, ಚರಿತ್ರೆಗಳೊಂದಿಗೆ ಐತಿಹಾಸಿಕ ಸಾಧನೆ ಮಾಡಿದ ವ್ಯಕ್ತಿಗಳ ಚರಿತ್ರೆಯನ್ನು ಕಟ್ಟಿಕೊಟ್ಟ ಮಹಾನುಭಾವರು ಅವರು. ಈ ದಿಶೆಯಲ್ಲಿ ಎಷ್ಟೇ ಕಷ್ಟನಷ್ಟಗಳು ಬಂದರೂ ಆ ಕುರಿತು ಸಂಶೋಧನೆ ನಡೆಯಿಸಿ ಅವರ ಚರಿತ್ರೆಯನ್ನು ನಾಡಿಗೆ ಉಳಿಸಿಕೊಟ್ಟವರು. ಅಷ್ಟೇ ಅಲ್ಲ, ಅಂಥ ಕೆಲಸವನ್ನು ತಮ್ಮ ಶಿಷ್ಯರಿಂದ, ಮಠಾಧಿಪತಿಗಳಿಂದ ಮಾಡಿಸಿ ತೃಪ್ತಿಪಟ್ಟವರು. ಇತಿಹಾಸ ರಚಿಸುವ ಅವರ ಈ ಕೆಲಸ ಇತಿಹಾಸ ಸೃಷ್ಟಿಸುವಂತಹದು.

ಡಾ. ಎಂ.ಎಂ.ಕಲಬುರ್ಗಿಯವರ ವಿಸ್ತೃತವಾದ ಸಾಹಿತ್ಯಕ ಬರಹಗಳಲ್ಲಿ ಅವರು ರಾಜಮನೆತನಗಳ ಚರಿತ್ರೆ, ಪ್ರಾಚೀನ ಮಹಾಪುರುಷರ ಚರಿತ್ರೆ, ಆಧುನಿಕ ಗಣ್ಯ ವ್ಯಕ್ತಿಗಳ ಚರಿತ್ರೆಯನ್ನು ಕಟ್ಟಿಕೊಟ್ಟದ್ದು ಉಲ್ಲೇಖಾರ್ಹ ಸಂಗತಿ. ಪ್ರಸ್ತುತ ಸಂಪುಟದಲ್ಲಿ ಮೂರುಜನ ಆಧುನಿಕ ವ್ಯಕ್ತಿಗಳ ಚರಿತ್ರೆಗಳನ್ನು ಅಳವಡಿಸಲಾಗಿದೆ. ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ (ಲೇ–ಹಾಲಭಾವಿ ವೀರಭದ್ರಪ್ಪ; ಸಂ. ಎಂ.ಎಂ.ಕಲಬುರ್ಗಿ), ೨. ಡಾ. ಫ.ಗು.ಹಳಕಟ್ಟಿ ಆತ್ಮಚರಿತ್ರೆ(ಲೇ–ಫ.ಗು.ಹಳಕಟ್ಟಿ, ಎಂ.ಎಂ.ಕಲಬುರ್ಗಿ; ಸಂ. ಎಸ್.ಆರ್.ಗುಂಜಾಳ) ಮಡಿವಾಳಪ್ಪ ಸಾಸನೂರ ಬರೆಹ–ಬದುಕು (ಸಂ.ಎಂ.ಎಂ.ಕಲಬುರ್ಗಿ, ರವೀಂದ್ರನಾಥ ಸಾಸನೂರ). ಅವರ ಸಾರ್ಥಕ ಬದುಕು ಮತ್ತು ಸಾಹಿತ್ಯಕ, ಸಾಮಾಜಿಕ ಸಾಧನೆಗಳ ಸಮಗ್ರ ಪರಿಚಯ ಇವುಗಳಲ್ಲಿದೆ.

ಡಾ. ಎಂ.ಎಂ.ಕಲಬುರ್ಗಿಯವರು 'ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ'ಯ ಹಸ್ತಪ್ರತಿಯನ್ನು ವೀರಭದ್ರಪ್ಪನವರ ಮೊಮ್ಮಗ ಶ್ರೀ ಸುರೇಶ ಹಾಲಭಾವಿ ಅವರಿಂದ ಪಡೆದುಕೊಂಡು, ಶ್ರೀ ಜಗದ್ಗುರು ಎಡೆಯೂರು ತೋಂಟದಾರ್ಯಮಠದ 'ಲಿಂಗಾಯತ ಅಧ್ಯಯನ ಸಂಸ್ಥೆ'ಯ ಮುಖಾಂತರ ಪುಣ್ಯಪುರುಷರ ಚರಿತ್ರೆ ಮಾಲಿಕೆಯ ಅಡಿಯಲ್ಲಿ ಪ್ರಕಟಿಸಿದ್ದಾರೆ.

ಲಿಂಗಾಯತ ಸಮಾಜಕ್ಕೆ ಅಭಿವೃದ್ಧಿ ದಾರಿ ಹಾಕಿಕೊಟ್ಟ ಪುಣ್ಯಪುರುಷರ ಸಾಲಿನಲ್ಲಿ ನಿಲ್ಲಬಹುದಾದ ವ್ಯಕ್ತಿ ಶ್ರೀ ವೀರಭದ್ರಪ್ಪ ಹಾಲಭಾವಿಯವರು. ನಾಡಿನ ಜನಪರ ಕಾಳಜಿಯುಳ್ಳ, ಸಾಂಸ್ಕೃತಿಕವಾಗಿ ಅಭಿವೃದ್ಧಿಯನ್ನು ಸಾಧಿಸಿದ, ನಾಡು-ನುಡಿಗಾಗಿ ತಮ್ಮನ್ನು ತಾವು ಅರ್ಪಿಸಿಕೊಂಡ ಇಂಥ ಮಹಾನ್ ವ್ಯಕ್ತಿಯನ್ನು ಗುರುತಿಸಿ ಪರಿಚಯಿಸಿದ ಡಾ.ಎಂ.ಎಂ.ಕಲಬುರ್ಗಿಯವರ ಕಾರ್ಯ ಸ್ಮರಣೀಯವಾದುದು.

ಹಾಲಭಾವಿಯವರು ತಮ್ಮ ಆತ್ಮಚರಿತ್ರೆಯಲ್ಲಿ ಅವರು ಬಾಲ್ಯದಿಂದ ಹಿಡಿದು ಅಂತ್ಯದವರೆಗೆ ಬದುಕಿನುದ್ದಕ್ಕೂ ಅನುಭವಿಸಿದ ಕಷ್ಟ-ಸುಖ, ಸಿಹಿ-ಕಹಿ, ಮೇಲು-ಕೀಳು, ವಾದ-ವಿವಾದ, ಧರ್ಮ-ಅಧರ್ಮ ಮುಂತಾದ ಅಂಶಗಳು ಚಿತ್ರಿತವಾಗಿವೆ. ಸಹಜವಾಗಿ ಪ್ರಕೃತಿಯ ತಳಹದಿಯ ಮೇಲೆ ಪ್ರವೃತ್ತಿಯ ಭಾವನೆಗಳು ಬಿಚ್ಚುತ್ತಾ ಹೋಗುವುದರಿಂದ ಅವು ಜ್ಞಾನ-ಭಾವ-ಕ್ರಿಯಾಶೀಲತೆ ಸಂಲಗ್ನಗೊಂಡು ಗಟ್ಟಿಗೊಳ್ಳುತ್ತಾ ಹೋಗುತ್ತವೆ. ಇದರಿಂದ ಆತ್ಮಚರಿತ್ರೆಯು ಜೀವನ ಚರಿತ್ರೆಗಿಂತ ಹೆಚ್ಚು ಪರಿಣಾಮಕಾರಿಯಾಗುತ್ತದೆ. ಹೀಗಾಗಿ ಶ್ರೀ ವೀರಭದ್ರಪ್ಪ ಹಾಲಭಾವಿಯವರ ಆತ್ಮಚರಿತ್ರೆ ಹೆಚ್ಚು ಪ್ರಸ್ತುತವೆನಿಸುತ್ತದೆ.

ವೀರಭದ್ರಪ್ಪ ಬಸಪ್ಪ ಹಾಲಭಾವಿ ಇವರಿಗೆ ಚನ್ನಬಸವ್ವ ಎರಡನೇ ಪತ್ನಿ, ಇವರ ಉದರದಿಂದ ಸಿದ್ದಪ್ಪ, ದಾನಪ್ಪ, ಗಂಗಾಧರ, ಸೋಮಶೇಖರ, ಶಿವಗಂಗಮ್ಮ, ಶಾರದಮ್ಮ ಹೀಗೆ ೬ ಜನ ಮಕ್ಕಳು. ಹಾಲಭಾವಿ ಅವರು ತಮ್ಮ ವಿದ್ಯಾಭ್ಯಾಸವನ್ನು ಗೋಕಾವಿ, ಬೆಳಗಾವಿ, ಪುಣೆ, ಮುಂಬೈಗಳಲ್ಲಿ ಮುಗಿಸಿ ವಕೀಲಿ ವೃತ್ತಿಯನ್ನು ಆರಂಭಿಸಿದವರು. ಸರಕಾರಿ ವಕೀಲರಾಗಿ, ನ್ಯಾಯಾಧೀಶರಾಗಿ ಕೆಲಸ ಮಾಡಿದ ಇವರು ಮನೆಗೆದ್ದು ಮಾರು ಗೆದ್ದವರು. ನಿವೃತ್ತಿಯ ನಂತರದಲ್ಲಿ ಸಮಾಜದ ಒಂದು ಭಾಗವಾಗಿ ದುಡಿದವರು. ಹಲವಾರು ಕೆಲಸಗಳ ಮಧ್ಯದಲ್ಲಿ, ಕುಟುಂಬದ ನಿರಂತರ ಕಷ್ಟಗಳಲ್ಲಿ ನೊಂದವರು ಮತ್ತು ಬೆಂದವರು. ಅವೆಲ್ಲವುಗಳನ್ನು ಎದುರಿಸಿ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡಿದ್ದರ ಪರಿಣಾಮವಾಗಿಯೇ ಅವರ ಆತ್ಮಚರಿತ್ರೆ ಗಟ್ಟಿಗೊಂಡಿತು. ಅವರೇ ಒಂದು ಕಡೆ "ಎಂಥ ದರ್ಜೆಯ ಮನುಷ್ಯನಲ್ಲಿಯೂ ಅವರ ಸ್ಥಿತಿಗತಿಗನುಸರಿಸಿ ಕೆಲವು ಮಹತ್ವದ ಸಂಗತಿಗಳು ಉಂಟಾಗಿರುವವು. ದೊಡ್ಡ ಮನುಷ್ಯನ ಕಾರ್ಯಕೇತ್ರವು ದೊಡ್ಡದಿದ್ದರೆ ಸಣ್ಣವನ ಕಾರ್ಯಕ್ಷೇತ್ರವು ಸಣ್ಣದಿರುವುದು. ಒಬ್ಬ ರಾಜನ ಕಾರ್ಯಕ್ಷೇತ್ರವು ಅವನ ಇಡೀ ದೇಶವಿದ್ದರೆ, ಒಬ್ಬ ಸಾಮಾನ್ಯ ಮನುಷ್ಯನ ಕಾರ್ಯಕ್ಷೇತ್ರವು ಅವನ ಇಡೀ ಕುಟುಂಬವಿರುವುದು. ರಾಜನ ಹಿತಾಸಕ್ತಿ ಸುತ್ತಲಿರುವ ದೇಶಗಳಿಗೆ ಸಂಬಂಧಿಸಿವುಗಳಿಗೆ, ಸಾಮಾನ್ಯ ಮನುಷ್ಯನ ಯೋಗಕ್ಷೇಮಗಳು ಅವನ ಗ್ರಾಮ, ಅವನ ಸಮಾಜ, ಅವನ ಪ್ರೀತಿ ಮುಂತಾದವು ಅವಲಂಬಿಸಿರುವವು" ಎಂದು ಹೇಳಿದ್ದಾರೆ. ಇದು ಅವರ ಅನುಭವದ ಮಾತಾಗಿದೆ.

ಹಾಲಭಾವಿಯವರು ನಮ್ಮ ಮುಂದೆ ಇರದಿದ್ದರೂ ಅವರ ಆತ್ಮಚರಿತ್ರೆಯ ಮೂಲಕ ಒಬ್ಬ ಪ್ರಾಮಾಣಿಕ, ವೈಚಾರಿಕ ನಿಲುವುಗಳುಳ್ಳ, ಸಾಮಾಜಿಕ ಕಳಕಳಿಯುಳ್ಳ, ಹೇಳಿದ್ದನ್ನು ಮಾಡಿ ತೋರಿಸಿದ ಧೀಮಂತ ವ್ಯಕ್ತಿಯ ದರ್ಶನವಾಗುತ್ತದೆ. ಸಂಘ ಸಂಸ್ಥೆಗಳ ಅಭಿವೃದ್ಧಿಗಾಗಿ ಕಳಕಳಿಯಿಂದ ಶ್ರಮವಹಿಸಿದ ಅವರ ಚರಿತ್ರೆ ಮುಂದಿನ ಜನಾಂಗಕ್ಕೆ ಬೆಳಕನ್ನು ನೀಡುವಂತಹದು.

ಕುಟುಂಬದಲ್ಲಿ ಹಲವಾರು ತೊಂದರೆಗಳ ಮಧ್ಯದಲ್ಲಿ ಬಸವಳಿದ ಇವರು ಧೈರ್ಯದಿಂದ ತಮ್ಮ ಕುಟುಂಬದವರ ಮತ್ತು ಮಕ್ಕಳ ಆರೋಗ್ಯದ ಕಡೆಗೆ ಹೆಚ್ಚು ಗಮನ ಹರಿಸಿ, ನ್ಯಾಯಾಧೀಶರಾದ

ಇವರು ಬೇರೆ ಬೇರೆ ಕಡೆ ವರ್ಗಾವಣೆಗೊಂಡು ನ್ಯಾಯನಿರ್ಣಯವನ್ನು ಮಾಡಿ ಹೌದು ಎನಿಸಿಕೊಂಡವರು. ದೇವರ ಮೇಲೆ ನಂಬಿಕೆ ಇಟ್ಟವರು. ಅಂತೆಯೇ ಅವರು ಗುಡ್ಡಾಪುರ, ಉಳವಿ, ರೇಗಾವಿ, ಆಳಂದಿ, ಸ್ವಾದಿ, ಕಲ್ಯಾಣ, ಹಂಪಿ, ಜೇಜೋರಿ, ಶ್ರೀಶೈಲ, ತೇರದಾಳ, ಕಂಚಿ, ತುಳಜಾಪುರ–ಇವುಗಳ ಕುರಿತು ಅಲ್ಲಿಯ ಐತಿಹಾಸಿಕ ಮತ್ತು ಚಾರಿತ್ರಿಕ ಹಿನ್ನೆಲೆಯನ್ನು ವಿವರವಾಗಿ ನೀಡಿದ್ದಾರೆ. ಉಳಿದವರಿಗೂ ಮಾರ್ಗದರ್ಶಕರಾಗಿ ನಿಂತಿದ್ದಾರೆ.

ಸಾರ್ವಜನಿಕ ಸಂಸ್ಥೆಗಳಲ್ಲಿ ಭಾಗಿಯಾಗುತ್ತ–ಲಿಂಗಾಯತ ಅಭಿವೃದ್ಧಿ ಸಂಸ್ಥೆ ಧಾರವಾಡ, ಕರ್ನಾಟಕ ವಿದ್ಯಾವರ್ಧಕ ಸಂಘ ಧಾರವಾಡ, ಕರ್ನಾಟಕ ಇತಿಹಾಸ ಸಂಶೋಧನ ಸಂಸ್ಥೆ ಧಾರವಾಡ, ಕರ್ನಾಟಕ ಲಿಂಗಾಯತ ವಿದ್ಯಾ ಸಂಸ್ಥೆ ಬೆಳಗಾವಿ, ಲಿಂಗಾಯತ ಕಾನೂನ ಮಂಡಳಿ, ಕಿತ್ತೂರ ರಾಣಿ ಚೆನ್ನಮ್ಮ ಇತಿಹಾಸ ಮಂಡಳಿ ಬೈಲಹೊಂಗಲ, ಸ್ವರಾಜ್ಯ ಜೀವವಿಮಾ ಕಂಪನಿ ಧಾರವಾಡ ಈ ಸಂಘ ಸಂಸ್ಥೆಗಳಿಗೆ ಕಾರ್ಯಾಧ್ಯಕ್ಷ, ಸ್ವಾಗತಾಧ್ಯಕ್ಷರಾಗಿದ್ದರಲ್ಲದೆ ಸಭಾಸದಸ್ಯರಾಗಿ ಗಣನೀಯ ಸೇವೆಯನ್ನು ಸಲ್ಲಿಸಿದ್ದಾರೆ. ಸಂಸ್ಥೆಗಳ ಸರ್ವತೋಮುಖ ಅಭಿವೃದ್ಧಿಗಾಗಿ ತಾವಿರುವವರೆಗೂ ಅಹರ್ನಿಶಿ ದುಡಿದಿದ್ದಾರೆ.

ಲಿಂಗಾಯತ ಸಮಾಜಕ್ಕೆ ಅಮೋಘ ಕಾಣಿಕೆಯನ್ನು ನೀಡಿದ ಶ್ರೀ ವೀರಭದ್ರಪ್ಪನವರು ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯಿಂದ ಶಿಷ್ಯವೇತನ ಪಡೆದು, ಉನ್ನತ ವ್ಯಾಸಂಗ ಮಾಡಿದವರು. ಲಿಂಗಾಯತ ಸಮಾಜದ ಎರಡನೇ ಎಲ್‌ಎಲ್.ಬಿ. ಪದವೀಧರ ವೀರಭದ್ರಪ್ಪ ಹಾಲಭಾವಿ ಎಂಬುದು ಗೊತ್ತಾಗುತ್ತದೆ. ಅಥಣಿಯ "ವಿಕ್ಟೋರಿಯಾ ಜುಬಲಿ ಇನಾಮ್ ಫಂಡ"ದ ಪಾರಿತೋಷಕವನ್ನು ವೀರಭದ್ರಪ್ಪನವರು ಪಡೆದಿದ್ದರು. ಲಿಂಗಾಯತರಿಗೆ ಅನ್ಯಾಯವಾಗುವುದನ್ನು ತಪ್ಪಿಸಲು ಒಂದು ತಜ್ಞರ ಮಂಡಳಿ ರಚಿಸಿ ಇದಕ್ಕೆ ವೀರಭದ್ರಪ್ಪನವರನ್ನು ಅಧ್ಯಕ್ಷರೆಂದು ನೇಮಿಸಲಾಯಿತು. ಇವರು ಲಿಂಗಾಯತ ಕಾಯಿದೆ ಮಂಡಲ ವತಿಯಿಂದ ವರದಿಯನ್ನು ಸಿದ್ಧಪಡಿಸಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದು ಮಹತ್ವದ ಕಾರ್ಯವಾಗಿದೆ.

ವೀರಭದ್ರಪ್ಪನವರು ಪುಸ್ತಕಗಳ ಪ್ರಕಟನೆ ಮಾಡುವುದರ ಮೂಲಕ ಸಾಹಿತ್ಯಾಸಕ್ತಿ ಬೆಳೆಸಿಕೊಂಡವರು. ಶಂಕರ ದಾಸಿಮಯ್ಯನ ಪುರಾಣ, ಮೋಳಿಗೆಯ ಮಾರಯ್ಯ ಮತ್ತು ರಾಣಿ ಮಹಾದೇವಿಯವರ ವಚನಗಳು, ಮೋಳಿಗೆಯ್ಯನ ಪುರಾಣ, ಅನುಭವ ಮಂಟಪದ ಐತಿಹಾಸಿಕತೆ ಹೀಗೆ ಹಲವಾರು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಡಾ.ಫ.ಗು.ಹಳಕಟ್ಟಿಯವರ ಸಂಪಾದಕತ್ವದಲ್ಲಿ ಪ್ರಸಾರವಾಗುತ್ತಿದ್ದ ಶಿವಾನುಭವ ಪತ್ರಿಕೆಯಲ್ಲಿ ಇವರ ಹಲವಾರು ಲೇಖನಗಳು ಪ್ರಕಟವಾಗಿವೆ.

ಬೆಳಗಾವಿಯ ಕೆ.ಎಲ್.ಇ. ಸೊಸಾಯಿಟಿಯ ಘರ್ಷಣೆ ನಿವಾರಿಸುವಲ್ಲಿ ರಚಿಸಿದ ಸಮಿತಿಯಲ್ಲಿ ಸದಸ್ಯರಾಗಿ, ಅದನ್ನು ಪರಿಹರಿಸಿದ್ದು, ಚಿತ್ರದುರ್ಗಮಠದ ಪೀಠದ ಸ್ಪರ್ಧೆ, ಶಿವಯೋಗ ಮಂದಿರದ ವ್ಯಾಜ್ಯ, ಸಿದ್ಧಾರೂಢ ಸ್ವಾಮಿಗಳ ವಿಷಯದಲ್ಲಿ ನೀಡಿದ ತೀರ್ಪು, ಎಂಥೊವನ್ ಅವರಿಗೆ ನೀಡಲಾದ ವಿವರವನ್ನಾಧರಿಸಿ ಚಿಕ್ಕೋಡಿ ನ್ಯಾಯಾಲಯದಲ್ಲಿ ಇವರು ನೀಡಿದ ತೀರ್ಪಿನ ಪುಸ್ತಕ, ಜಗದ್ಗುರು ಅಡ್ಡಪಲ್ಲಕ್ಕಿ ಕೋರ್ಟವ್ಯಾಜ್ಯ, ಲಿಂಗಾಯತರು ಶೂದ್ರರೆಂದು ತೀರ್ಪು ನೀಡಿದ್ದು–ಇವೆಲ್ಲ ದಾಖಲಾಗಿ ಉಳಿದಿವೆ. ಗಿಲಗಂಚಿ ಗುರುಸಿದ್ಧಪ್ಪ, ಅರಟಾಳ ರುದ್ರಗೌಡ, ಟೆಂಗಿನಕಾಯಿ ಚನ್ನಮಲ್ಲಪ್ಪ, ಕಿತ್ತೂರ

ರೇವಣಸಿದ್ದಪ್ಪ, ಹಳಕಟ್ಟಿ ಗುರುಬಸಪ್ಪ ಮತ್ತು ಹಳಕಟ್ಟಿ ಫಕೀರಪ್ಪನವರು ಹಾಗೂ ಸಿರಸಂಗಿ ಲಿಂಗರಾಜರು ಹೀಗೆ ಹಲವಾರು ನಾಯಕರುಗಳು ಮಾಡಿದ ಕಾರ್ಯಗಳನ್ನು ಸಂದರ್ಭಾನುಸಾರ ವಿವರವಾಗಿ ತಿಳಿಸಿದ್ದು ಎದ್ದು ಕಾಣುತ್ತದೆ. ಇದರಿಂದ ಅವರಲ್ಲಿ ಸಮಾಜ ಕುರಿತಾಗಿ ಇದ್ದ ಉತ್ಕಟ ಕಾಳಜಿ ಪ್ರಕಾಶಿಸುತ್ತದೆ. ಈ ಕೃತಿಯಲ್ಲಿ ಕೌಟುಂಬಿಕ ಮತ್ತು ಸಾಮಾಜಿಕ ಸಂಗತಿಗಳು ಬಹಳಷ್ಟು ಅಡಕಗೊಂಡಿವೆ.

೨

ಈ ಸಂಪುಟದಲ್ಲಿ ಅಳವಡಿಸಿದ ಮತ್ತೊಂದು ಕೃತಿ ಡಾ. ಫ.ಗು.ಹಳಕಟ್ಟಿಯವರ ಆತ್ಮಚರಿತ್ರೆ. ಈ ಕೃತಿಯಲ್ಲಿ ಫ.ಗು.ಹಳಕಟ್ಟಿಯವರಿಗೆ ೭೫ ವರ್ಷ ತುಂಬಿದಾಗ ರೇಡಿಯೊ ಮುಖಾಂತರ ಅವರು ಹೇಳಿರುವ ಮಾತುಗಳು ಗಮನಾರ್ಹವಾದುವು. "ಜೀವನ ನಿರಂತರ ಅಖಂಡವಾದುದು. ಅದು ಬಾಲ್ಯದಿಂದ ಪ್ರಾರಂಭವಾಗಿ ಸಾವಿನೊಂದಿಗೆ ಕೊನೆಗೊಳ್ಳುತ್ತದೆ. ಒಬ್ಬ ಮನುಷ್ಯನ ಚಟುವಟಿಕೆಗಳು ಯೋಗ್ಯ ನಿರ್ದೇಶನವಿದ್ದರೆ ಜೀವನವನ್ನು ಹಿಗ್ಗಿಸುತ್ತವೆ. ಅವು ಅವನು ಎಷ್ಟೇ ತೊಂದರೆ ಎದುರಿಸಬೇಕಾಗಿ ಬಂದರೂ ಜೀವನವನ್ನು ಆನಂದಮಯವಾಗಿಸುತ್ತವೆ. ನನ್ನ ಜೀವನದುದ್ದಕ್ಕೂ ಇದು ನನ್ನ ಅನುಭವಕ್ಕೆ ಬಂದಿದೆ."

ಇದರಲ್ಲಿ ಪೂರ್ವಾರ್ಧ ಮತ್ತು ಉತ್ತರಾರ್ಧ ಎಂದು ಎರಡು ಭಾಗಗಳಿವೆ. ಮೊದಲಭಾಗ ಹಳಕಟ್ಟಿಯವರು ಬರೆದುದು. ಎರಡನೆಯ ಭಾಗ ಎಂ.ಎಂ. ಕಲಬುರ್ಗಿಯವರು ಬರೆದು ಜೋಡಿಸಿದ್ದು.

ಶಿವಾನುಭವ ಪತ್ರಿಕೆಯ ಮೂಲಕ ಡಾ.ಫ.ಗು.ಹಳಕಟ್ಟಿಯವರು ಗುರು-ಲಿಂಗ-ಜಂಗಮ ಸೇವೆ ಮಾಡಿದವರು. ಶಿವಾನುಭವ ಪತ್ರಿಕೆಗೆ ೨೫ ವರ್ಷ ತುಂಬಿದ ಸಂದರ್ಭದಲ್ಲಿ ಅದರ ಆಗು-ಹೋಗುಗಳನ್ನು, ಎಡರು-ತೊಡರುಗಳನ್ನು, ಕಷ್ಟ-ನಷ್ಟಗಳನ್ನು, ಒಳ-ಹೊರಗನ್ನು, ವರದಿ ರೂಪದಲ್ಲಿ ಸುದೀರ್ಘ ಲೇಖನವಾಗಿ ಪ್ರಕಟಿಸಿದ್ದಾರೆ. ಅದು ಆತ್ಮಚರಿತ್ರೆಯ ಸ್ವರೂಪವನ್ನು ಪಡೆದಿದೆ. ಮುಂದಿನ ೧೦ ವರ್ಷದ ಚರಿತ್ರೆಯನ್ನು ಡಾ.ಎಂ.ಎಂ.ಕಲಬುರ್ಗಿಯವರು ಹೊಸದಾಗಿ ಬರೆದು ಇದಕ್ಕೆ ಸೇರಿಸಿದ್ದಾರೆ.

ಪೂರ್ವಾರ್ಧದಲ್ಲಿ-ಶಿವಾನುಭವ ಪತ್ರಿಕೆ(೧೯೨೬-೧೯೫೦)ಯ ಮೂಲಕ ಡಾ.ಫ.ಗು. ಹಳಕಟ್ಟಿಯವರು ಪ್ರಕಟಿಸಿದ ಪ್ರಕಟನೆ, ವಚನ ಗ್ರಂಥಗಳು, ಕೃಷಿಜ್ಞಾನ ಪ್ರದೀಪಿಕೆ, ಐತಿಹಾಸಿಕ ಗ್ರಂಥಗಳು, ಶಿವಾನುಭವದ ಸ್ವತಂತ್ರ ಕೃತಿಗಳು, ಶಿವಾನುಭವ ಶಬ್ದಕೋಶ, ಶಿವಾನುಭವದ ಕಾವ್ಯ ಗ್ರಂಥಗಳು, ರಗಳೆಗಳು, ಪತ್ರಿಕೆಯ ವಿಷಯ ವೈವಿಧ್ಯ, ರಾಜಮನೆತನಗಳು, ಮಠಗಳು, ಶರಣರ ಚರಿತ್ರೆಗಳು, ಪುಣ್ಯಕ್ಷೇತ್ರಗಳ ಚರಿತ್ರೆ, ಹೊರನಾಡ ವೀರಶೈವ ವೃತ್ತಾಂತ, ಶೈವಧರ್ಮಗಳ ಪರಿಚಯ, ಶೂನ್ಯ ಸಂಪಾದನೆ, ಸಮಾಜ ಸುಧಾರಣೆಯ ಲೇಖನಗಳು ಮುಂತಾದವುಗಳ ಪರಿಚಯವಿದೆ. ಉತ್ತರಾರ್ಧದಲ್ಲಿ- ಪ್ರಾಚೀನ ಗ್ರಂಥಗಳು, ಸ್ವತಂತ್ರ ಗ್ರಂಥಗಳು, ನನ್ನ ಲೇಖನಗಳು, ವಿದ್ವಾಂಸರ ಲೇಖನಗಳು, ಮಹತ್ವದ ಸುದ್ದಿಗಳು, ಸಂಪಾದಕೀಯಗಳು ಜೊತೆಗೆ ಅಖಂಡ ಕರ್ನಾಟಕವನ್ನು ಮಾಡುವ ಉದ್ದೇಶದಿಂದ ಜನರಲ್ಲಿ ಜಾಗೃತಿ ಮೂಡಿಸಲು, ಸತ್ಯದ ಆಕರಗಳನ್ನು ಸಂಶೋಧಿಸಿ ನವಕರ್ನಾಟಕ ಪತ್ರಿಕೆಯ ಮೂಲಕ ಪ್ರಕಟಿಸಿದ ವಿವರವಿದೆ.

ಆತ್ಮಚರಿತ್ರೆಯಲ್ಲಿ ಅಳವಟ್ಟ-ಧರೆಗಿಳಿದ ಶರಣ, ಶಿಕ್ಷಣ, ವಚನಪಿತಾಮಹ, ಕಾಯಕ ಜೀವಿ, ಮುತ್ತಿಗಿಂತ ಹೊತ್ತು ಉತ್ತಮ, ಶಿಕ್ಷಣ ತಜ್ಞ, ಬರಗಾಲ ನಿವಾರಣೆ, ಕೃಷಿ ಹಾಗೂ ಸಹಕಾರ ಕ್ಷೇತ್ರಗಳ ಸೇವೆ, ಡಾ. ಹಳಕಟ್ಟಿಯವರು ಮತ್ತು ಶ್ರೀ ಶಿವಕುಮಾರ ಶಿವಯೋಗಿಗಳು, ಸ್ಥಿತಪ್ರಜ್ಞ ಉನ್ನತ ಚರಿತರು, ಮುಂತಾದ ಲೇಖನಗಳು ಹಳಕಟ್ಟಿಯವರ ಇನ್ನೊಂದು ಮುಖವನ್ನು ಎತ್ತಿ ತೋರಿಸುತ್ತವೆ.

ಹಳಕಟ್ಟಿಯವರು ವಿಜಯಪುರ ಮುನ್ಸಿಪಾಲಿಟಿ ಚೇರಮನ್ ಮತ್ತು ವಾಯಿಸ್ ಪ್ರೆಸಿಡೆಂಟ ಆಗಿದ್ದು. ಬಿ.ಎಲ್.ಡಿ.ಇ. ಸಂಸ್ಥೆಯನ್ನು ಸ್ಥಾಪಿಸಿದ್ದು, ಶ್ರೀ ಸಿದ್ಧೇಶ್ವರ ಬ್ಯಾಂಕ್ ಸಂಸ್ಥಾಪಕ ಅಧ್ಯಕ್ಷರಾಗಿದ್ದು, ಜಿಲ್ಲಾ ಗ್ರಾಮೀಣ ಅಭಿವೃದ್ಧಿ ಮಂಡಳದ ಕಾರ್ಯದರ್ಶಿಯಾಗಿ, ಕೃಷಿ ಮತ್ತು ಸಹಕಾರ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತ ಅವುಗಳಿಗೆ ಮಾರ್ಗದರ್ಶಕರಾಗಿ ಅನುಪಮವಾದ ಸೇವೆಯನ್ನು ತಮ್ಮ ಉಸಿರು ಇರುವವರೆಗೆ ಹಗಲಿರುಳು ದುಡಿದ ಕಾಯಕ ಜೀವಿಗಳು.

ಇವರ ವ್ಯಕ್ತಿತ್ವವು ಪುಟಕ್ಕಿಟ್ಟ ಚಿನ್ನದಂತೆ ಎಂದೆಂದಿಗೂ ಹೊಳೆಯುವಂತಹದು. ಪ್ಲೇಗದಿಂದ ತಡವರಿಸಿದ ಪ್ರಸಂಗ, ಮೇಲಿಂದ ಮೇಲೆ ಜ್ವರದಿಂದ ಬಳಲಿದ್ದು, ಮುಂಬಯಿ ಹಾಸ್ಪಿಟಲ್(ಕೆ.ಇ.ಎಂ)ದಲ್ಲಿ ಆಪರೇಶನ್, ರೇಲ್ವೆ ಪ್ರವಾಸ ಮಾಡುವಾಗ ಹಿಮ್ಮಡದ ಎಲುಬು ಮುರಿದಿದ್ದು, ಕೊನೆಗೆ ಹೊಟ್ಟೆ ನೋವಿನಿಂದ ಬಳಲಿದ್ದು, ಅದರ ಶಸ್ತ್ರ ಚಿಕಿತ್ಸೆ ಮಾಡಿಸಿದ್ದು, ಅವರ ಮಗ ಆಕಸ್ಮಿಕವಾಗಿ ಇಹಲೋಕ ತ್ಯಜಿಸಿದ್ದು ..... ಹೀಗೆ ಒಂದಿಲ್ಲಾ ಒಂದು ಕಹಿ ಘಟನೆಗಳನ್ನು ಅನುಭವಿಸಿದವರು. ಇಂಥ ಸಂಕಷ್ಟಗಳನ್ನು ಬೆನ್ನಿಗಿಟ್ಟುಕೊಂಡು ವಚನ ಸಾಹಿತ್ಯದ ಪುನರುಜ್ಜೀವನದ ಕಾರ್ಯ ಅವರು ಮಾಡಿರದಿದ್ದರೆ ಕನ್ನಡ ಸಾಹಿತ್ಯ ಕ್ಷೇತ್ರ ಬಡವಾಗುತಿತ್ತು. ಅವರ ಚಿಂತನೆ, ವಿಮರ್ಶೆ, ಸಂಶೋಧನೆ ಮತ್ತು ಅವಲೋಕನ, ಚಿಕಿತ್ಸಕ ಮನೋಭಾವ ಇವು ಅವರನ್ನು ಎತ್ತರದ ವ್ಯಕ್ತಿಯನ್ನಾಗಿ ಮಾಡಲು ಸಾಧ್ಯವಾಯಿತು. ಇವರು ನಡೆದಂತೆ ನುಡಿದವರು. ಕಾಯಕದಲ್ಲಿಯೇ ಕೈಲಾಸ ಕಂಡವರು. ಅವರನ್ನು ಅವರ ಮನೆತನವನ್ನು, ವೃತ್ತಿಯನ್ನು, ಪ್ರಕಟನಾ ಕಾರ್ಯವನ್ನು ತಿಳಿದ ಎಂಥವನೂ ತಲೆಬಾಗಲೇಬೇಕು. 'ಎನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ' ಎನ್ನುವ ಶರಣರ ಸೂಳ್ನುಡಿಯನ್ನು ಅನುಷ್ಠಾನದಲ್ಲಿ ತಂದು, ಮುಂದಿನ ಜನಾಂಗಕ್ಕೆ ಎಡೆಮಾಡಿಸಿ ಉಣಿಸಿದ ಮಹಾಂತನನ್ನು ಎಷ್ಟು ವರ್ಣಿಸಿದರೂ ಶಬ್ದಗಳು ಸೋತು ಹೋಗುತ್ತವೆ.

ಡಾ.ಫ.ಗು.ಹಳಕಟ್ಟಿಯವರದು ಎತ್ತರದ ನಿಲುವು, ತೆಳುವಾದ ದೇಹ, ನಿಧಾನವಾದ ನಡಿಗೆ, ಆಕರ್ಷಿಸುವ ಮಂದಸ್ಮಿತ ನಗು, ಮೃದುವಾದ ಮಾತು, ಹಿತವಾದ ನಮ್ರತೆ, ನೊಸಲಿಗೆ ವಿಭೂತಿಯನ್ನಿಟ್ಟು, ತಲೆಮೇಲೆ ಶುಭ್ರವಾದ ರುಮಾಲು, ಸ್ವಚ್ಛ ಮಾಡಿದ ಬಿಳಿ ದೋತರ, ಮೈಗೆ ಮಡಿಮಾಡಿದ ಹಳೆಯ ಕೋಟು, ಎಂಥವರು ನೋಡಿದರೂ ಹೃದಯ ಮಂದಿರದಲ್ಲಿ ಭಕ್ತಿಭಾವ ಉಕ್ಕುತಿತ್ತು. ಕರಗಳು ತನ್ನಿಂದ ತಾನೆ ಎತ್ತಿ ಶರಣು ಶರಣಾರ್ಥಿ ಎನ್ನುತ್ತಿದ್ದವು.

ಶ್ರೀ ಹಾನಗಲ್ ಕುಮಾರಸ್ವಾಮಿಗಳನ್ನು, ಬಬಲೇಶ್ವರದ ಶ್ರೀ ಶಾಂತವೀರ ಸ್ವಾಮಿಗಳನ್ನು, ರುದ್ರಾಕ್ಷಿಮಠದ ಡಾ. ಶಿವಬಸವ ಸ್ವಾಮಿಗಳನ್ನು, ಸಹಾಯ ಸಹಕಾರ ನೀಡಿದ ನಾಡಿನ ಗಣ್ಯವ್ಯಕ್ತಿಗಳನ್ನು ನೆನೆಸಿ ವಂದನೆಗೈದಿರುವರು. ಶಿವಾನುಭವ ಪತ್ರಿಕೆ ಮತ್ತು ನವಕರ್ನಾಟಕ ಪತ್ರಿಕೆ ಸಕಾಲಕ್ಕೆ ಹೊರಬರಲು ಕಾರಣರಾದವರನ್ನು ನೆನೆದು ಹೃದಯವಂತಿಕೆ ಹೆಚ್ಚಿಸಿಕೊಂಡಿದ್ದಾರೆ.

ಈ ಸಂಪುಟದಲ್ಲಿ ಇನ್ನೊಂದು ಕೃತಿ ಮಡಿವಾಳಪ್ಪ ಸಾಸನೂರ ಬರೆಹ–ಬದುಕು, ಕುರಿತು ಇದೆ. ಇವರದು ಬಸವನ ಬಾಗೇವಾಡಿ ತಾಲೂಕಿನ ಚಿಕ್ಕಹಳ್ಳಿ ಸಾಸನೂರ. ಶ್ರೀ ಎಂ.ಟಿ.ಸಾಸನೂರ ಅವರು ಅಲ್ಲಿ ಮಡಿವಾಳಪ್ಪ ಮಾಸ್ತರ ಎಂದೇ ಖ್ಯಾತನಾಮರಾಗಿದ್ದರು. ಕುಟುಂಬದ ಎಲ್ಲ ಸದಸ್ಯರನ್ನು, ಸಮಾಜವನ್ನು ತಮ್ಮ ಬದುಕಿನ ಕಷ್ಟದಲ್ಲಿಯೂ ಎತ್ತಿ ಹಿಡಿದು ಬದುಕಿಗೆ ಅರ್ಥಕೊಟ್ಟ ಅಪರೂಪದ ವ್ಯಕ್ತಿಗಳು. ಇವರ ಸಹೋದರರಾದ ಎ.ಟಿ., ಎಚ್.ಟಿ ಮತ್ತು ಬಿ.ಟಿ. ಶ್ರೀ ಸಿದ್ಧೇಶ್ವರ ಪ್ರೌಢಶಾಲೆಯಲ್ಲಿ ಕಲಿಯುವಾಗ ಮೂವರು ಆಯಾ ವರ್ಷ ಶಾಲೆಗೆ ಪ್ರಥಮ ರ್ಯಾಂಕ ಪಡೆದಿದ್ದರು. ರ್ಯಾಂಕ್ ಫಲಕದ ಮೇಲೆ ಈಗಲೂ ಅವರ ಹೆಸರನ್ನು ಕಾಣಬಹುದು. ಇದೊಂದು ಆ ಮನೆತನದ ವಿದ್ಯಾ ಸಿರಿವಂತಿಕೆಯ ಸಿರಿಪತಾಕೆ.

ಮಡಿವಾಳಪ್ಪ ಮಾಸ್ತರರು ಆ ಮೂವರು ಸಹೋದರರಿಗೆ ಶಾಲಾ–ಕಾಲೇಜುಗಳಲ್ಲಿ ಅಧ್ಯಯನ ಮಾಡುವ ಅಕಾಶ ಕಲ್ಪಿಸಿ ಉನ್ನತ ಸ್ಥಾನದಲ್ಲಿ ಅವರನ್ನು ಇರಿಸುವಂತೆ ಮಾಡಿದವರು. ಎ.ಟಿ.ಸಾಸನೂರ ಅವರನ್ನು ಕರ್ನಾಟಕ ಕಾಲೇಜಿನ ಅಧ್ಯಾಪಕರನ್ನಾಗಿ, ಎಚ್.ಟಿ.ಸಾಸನೂರ ಅವರನ್ನು ಪ್ರಾಚಾರ್ಯರನ್ನಾಗಿ, ಬಿ.ಟಿ.ಸಾಸನೂರ ಅವರನ್ನು ಪ್ರಾಚಾರ್ಯರನ್ನಾಗಿ ಮತ್ತು ಕೆ.ಪಿ.ಎಸ್.ಸಿ. ಸದಸ್ಯರನ್ನಾಗಿ ಮಾಡಿದ್ದು, ಅವರು ಕಷ್ಟಪಟ್ಟು ದುಡಿದ ಮತ್ತು ಜನೋಪಕಾರಿ ಕೆಲಸ ಮಾಡಿದುದರ ಪ್ರತಿಫಲವೆನ್ನಬಹುದು. ಅವರು ಕುಟುಂಬ ವತ್ಸಲರಾಗಿದ್ದರಲ್ಲದೆ ವಸುದೈವ ಕುಟುಂಬರೂ ಆಗಿದ್ದರು.

ಇವರು ಕಲಿತದ್ದು ೭ನೆಯ ವರ್ಗದ ವರೆಗೆ. ವೃತ್ತಿಯೊಂದಿಗೆ ಟ್ರೇನಿಂಗ್ ಕಾಲೇಜದಲ್ಲಿ ಶಿಕ್ಷಣ. ಬಾಗೇವಾಡಿ, ಸಿಂದಗಿ, ತಾಲೂಕುಗಳಲ್ಲಿಯ ಊರುಗಳಲ್ಲಿ ಮಾಸ್ತರರಾಗಿ, ಹೆಡ್‌ಮಾಸ್ತರರಾಗಿ ಸೇವೆ ಸಲ್ಲಿಸಿದವರು. ಬಡವ–ಬಲ್ಲಿದ, ಮೇಲು-ಕೀಳು, ಸ್ಪೃಶ್ಯ–ಅಸ್ಪೃಶ್ಯ ಎನ್ನದೆ, ಎಲ್ಲರನ್ನೂ ಸಮಾನ ರೀತಿಯಿಂದ ನೋಡುವ ಸ್ವಭಾವದವರಾಗಿದ್ದರು.

ಬಸವನ ಬಾಗೇವಾಡಿಯಲ್ಲಿ ಹಮ್ಮಿಕೊಂಡಿದ್ದ ತಾಲೂಕ ಶಿಕ್ಷಣ ಸಮ್ಮೇಳಕ್ಕೆ ಅಂದಿನ ಮುಂಬೈ ರಾಜ್ಯದ ಮುಖ್ಯ ಮಂತ್ರಿಯಾದ ಶ್ರೀ ಬಿ.ಜಿ.ಖೇರ್ ಆಗಮಿಸಿದ್ದರು. ತಾಳಿಕೋಟೆಗೆ ಪ್ರಯಾಣಿಸುತ್ತಿದ್ದ ಡಾ. ರಾಜೇಂದ್ರ ಪ್ರಸಾದ ಅವರಿಗೆ ಸಾಸನೂರ ಗ್ರಾಮದ ನಾಗರಿಕರೊಂದಿಗೆ ಹೋಗಿ ಮಾರ್ಗ ಮಧ್ಯದಲ್ಲಿ ಅವರಿಗೆ ಹೂವಿನ ಮಾಲೆಯಿಂದ ಸ್ವಾಗತಿಸಿದರು. ವಿಜಯಪುರಕ್ಕೆ ಬಂದು ಗಾಂಧೀಜಿಯವರನ್ನು ಕಂಡರು. ಬಹು ಭಾಷಾಗ್ರಂಥ ಬೆಳೆಸಿದ್ದು, ಅವರ ಸಾಧನೆಯಾಗಿದೆ. ಅವರು ಬಡವರಿಗೆ ಊರುಗೋಲಾದರು. ಶ್ರೀಮಂತರಿಗೆ ದಿಕ್ಸೂಚಿಯಾದರು. ಅವರ ಮಗ ರವೀಂದ್ರನಾಥ ಹೇಳುವ ಹಾಗೇ–ಸುತ್ತಲಿನ ಗ್ರಾಮದ ಜನ, ಪ್ರಮುಖರು, ಗೌಡರು, ದೇಸಾಯಿಯವರು ಬಂದು ಸಮಸ್ಯೆಗಳನ್ನು ಕೇಳಿ ಪರಿಹಾರವನ್ನು ಪಡೆಯುತ್ತಿದ್ದರು. ಜನತೆ ಅವರಲ್ಲಿ ಭಕ್ತಿ ವಿಶ್ವಾಸಗಳನ್ನಿಟ್ಟಿದ್ದರು.

ಮಡಿವಾಳಪ್ಪನವರು ಆಧ್ಯಾತ್ಮಿಕತೆಯನ್ನು ಅಳವಡಿಸಿಕೊಂಡವರು ಹಾಗೂ ಹುಬ್ಬಳ್ಳಿಯ ಸಿದ್ಧಾರೂಢರ ಗುರೂಪದೇಶ ಪಡೆದವರು. ಸನ್ಯಾಸಿ ಆಗಬೇಕೆಂದಿದ್ದ ಇವರು ಗುರುಗಳ ಆದೇಶಕ್ಕೆ ಮಣಿದು ಸಂಸಾರಿಯಾದರು. ಮಧುರಚೆನ್ನ ಮತ್ತು ಇನ್ನುಳಿದ ಸಾಹಿತ್ಯ ಬಳಗದಲ್ಲಿ ಮಿಂದವರು. ರಾಮಕೃಷ್ಣ ಪರಮಹಂಸ, ಅರವಿಂದಘೋಷ ಮುಂತಾದ ಮಹಾತ್ಮರ ಪ್ರಭಾವಕ್ಕೊಳಗಾದವರು.

ಕನ್ನಡ ಮರಾಠಿ, ಬೆಂಗಾಲಿ ಸಂಸ್ಕೃತ ಭಾಷೆಗಳ ಸಾಹಿತ್ಯ ಸಂಸ್ಕಾರವು ಅವರನ್ನು ಸುಸಂಸ್ಕೃತರನ್ನಾಗಿ ಮಾಡಿದೆ.

ಮಡಿವಾಳಪ್ಪನವರು ಸಾಹಿತ್ಯ ಕ್ಷೇತ್ರದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಆಧ್ಯಾತ್ಮಿಕ ನೆಲೆಗಳ ಬಹುಮುಖಿ ಅಧ್ಯಯನ ಮಾಡಿ ಅಂದಿನ ಪತ್ರಿಕೆಗಳಲ್ಲಿ ಲೇಖನ ಪ್ರಕಟಿಸುತ್ತಿದ್ದರು. ಹೀಗಿದ್ದರೂ ಕೆಲವು ಭಾಗ ಅಪ್ರಕಟಿತ ಸ್ಥಿತಿಯಲ್ಲಿ ಉಳಿದಿದ್ದಿತು. ಕೆಲವು ಭಾಗ ಕಳೆದುಹೋಯಿತು. ಇದನ್ನು ಅರಿತ ಡಾ.ಎಂ.ಎಂ.ಕಲಬುರ್ಗಿಯವರು ಅವರ ಸಾಹಿತ್ಯ ಕೃಷಿ ಕಣ್ಮರೆಯಾಗಬಾರದೆಂಬ ಉದ್ದೇಶದಿಂದ ಮಡಿವಾಳಪ್ಪನವರ ಚಿರಂಜೀವಿಯಾದ ರವೀಂದ್ರನಾಥರ ಸಹಕಾರದಿಂದ ಈ ಗ್ರಂಥವನ್ನು ಪ್ರಕಟಿಸುವ ಮೂಲಕ ದಾಖಲೆಯಾಗಿ ಉಳಿಸಿದ್ದಾರೆ. ಅವರ – ೧೦ ಮಹತ್ವಪೂರ್ಣ ಲೇಖನಗಳು ಶಿವಾನುಭವ ಪತ್ರಿಕೆಯಲ್ಲಿ ೫ ಲೇಖನಗಳು ಜಯಕರ್ನಾಟಕ ಪತ್ರಿಕೆಯಲ್ಲಿ, ಪ್ರಕಟಗೊಂಡಿದ್ದವು. ಇನ್ನು ಒಂಬತ್ತು ಲೇಖನಗಳು ಅಪ್ರಕಟಿತವಾಗಿದ್ದವು. ಶಿವೋಪಾಸನೆಯ ಪ್ರಾಚೀನತೆ, ಶರಣರ ಸಂದೇಶ ಈ ಲೇಖನಗಳು ಲಭ್ಯವಾಗಲಿಲ್ಲ. ಅದರಂತೆ ೧೬ ಅಪೂರ್ಣ ಲೇಖನಗಳು ದೊರೆತವು. ಅಲಭ್ಯ ಮತ್ತು ಅಪೂರ್ಣ ಲೇಖನಗಳನ್ನು ಹೊರತುಪಡಿಸಿ ಲಭ್ಯ ಪ್ರಕಟಿತ ಮತ್ತು ಅಪ್ರಕಟಿತ ಲೇಖನಗಳನ್ನು ಈ ಕೃತಿಯಲ್ಲಿ ಅಳವಡಿದ್ದಾರೆ.

ಮಡಿವಾಳಪ್ಪನವರು ಗ್ರಾಮೀಣ ಪ್ರದೇಶದಿಂದ ಬಂದವರಾಗಿದ್ದರಿಂದ ಜನರ ನಾಡಿಯ ಮಿಡಿತ ತಿಳಿದವರು. ಗಾಂಧಿ ಯುಗದ ವ್ಯಕ್ತಿಗಳಾಗಿ ಬದುಕಿದವರು. ಖಾದಿ ಬಟ್ಟೆಯನ್ನು ತಮ್ಮ ಬದುಕಿನುದ್ದಕ್ಕೂ ತೊಟ್ಟವರು. ಅದರಿಂದ ಅವರು ದೇಶಪ್ರೇಮ ಮತ್ತು ಕಾಯಕವೇ ಕೈಲಾಸ ತತ್ವವನ್ನು ಅನ್ವಯಿಸಿಕೊಂಡವರು. ತರುಣರಿಗೆ ರಾಷ್ಟ್ರ ಪ್ರೇಮದ ಬಗ್ಗೆ ಮತ್ತು ಸಾಮಾಜಿಕ ಕಳಕಳಿಯ ಬಗ್ಗೆ ಅರಿವು ಮೂಡಿಸಿ ಸ್ವಾತಂತ್ರ್ಯ ಚಳುವಳಿಯ ತಿಳಿವಳಿಕೆ ಮೂಡಿಸಿದವರು. ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ ಯಾವುದೇ ಕಾರ್ಯಕ್ರಮಗಳಿದ್ದರೂ ಅವುಗಳ ಮುಂಚೂಣಿಯಲ್ಲಿದ್ದು ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸುವ ಸಂಘಟನಾಶಕ್ತಿ ಅವರದು.

ಮಾನವನ ಶ್ರೇಯೋಭಿವೃದ್ಧಿಗೆ ಶಿಕ್ಷಣವೇ ತಾರಕಮಂತ್ರ ಎಂದು ನಂಬಿದ್ದ ಅವರು ಕುಟುಂಬದವರನ್ನು ತಮ್ಮ ಸುತ್ತಮುತ್ತಲಿನ ಜನರನ್ನು ಜಾಗ್ರತಗೊಳಿಸಿದರು. ಶಿಕ್ಷಣದ ಮಹತ್ವ ಕುರಿತು ಅರಿವು ಮೂಡಿಸಿದರು. ಅದರ ಜೊತೆಗೆ ಸಾಹಿತ್ಯದ ಬಗ್ಗೆ ಹಳ್ಳಿಯ ಜನರಲ್ಲಿ ಅಭಿರುಚಿ ಮೂಡಿಸಿದರು. ಸಾಹಿತ್ಯದ ಮೂಲಕ ಗುರುತಿಸಿಕೊಂಡು ಆಧ್ಯಾತ್ಮದತ್ತ ಸಾಗಿ, ಆರೂಢ ತತ್ವಜ್ಞಾನವನ್ನು ಅಳವಡಿಸಿ, ಶ್ರೀ ಅರವಿಂದ ಮಾತೆಯವರ ತತ್ವಜ್ಞಾನದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡವರು.

ನಾಥ ಸಂಪ್ರದಾಯ, ವೈದಿಕ ಪರಂಪರೆ, ಬೌದ್ಧ ಮತ್ತು ಶೈವ ಧರ್ಮ ಮೊದಲಾದ ಸಿದ್ಧಾಂತಗಳನ್ನು ರಕ್ತಗತವಾಗಿ ಬೆಳೆಸಿಕೊಂಡವರು. ದೇಶ ವಿದೇಶಗಳ ತತ್ವಜ್ಞಾನಿಗಳ ಚರಿತ್ರೆ ಮತ್ತು ಬರೆಹ ಕುರಿತು ತಲಸ್ಪರ್ಶಿಯಾಗಿ ಅಭ್ಯಸಿಸಿದವರು. ಇದರಿಂದ ಅವರ ವ್ಯಾಸಂಗದ ವಿಸ್ತಾರತೆಯನ್ನು ಗಮನಿಸಬಹುದು.

ಪ್ರಾಥಮಿಕ ಶಾಲಾ ಶಿಕ್ಷಕರಾದ ಇವರಿಗೆ ಪ್ರತಿಭೆ ಹುಟ್ಟಿನಿಂದಲೇ ಬಂದುದಾದರೂ ನಿರಂತರ ಓದಿನ ಮೂಲಕ ಪಾಂಡಿತ್ಯವನ್ನು ಬೆಳೆಸಿಕೊಂಡವರು ಮತ್ತು ಶ್ರೇಷ್ಠ ವಿದ್ವಾಂಸರಾಗಿ ಬೆಳೆದವರು. ತನ್ಮೂಲಕ ಸಮಾಜದ ಎಲ್ಲ ವರ್ಗದವರಿಗೆ ಕಣ್ಮಣಿಯಾಗಿ ಬಾಳಿದವರು. ಇಂಥ ಅಪರೂಪದ


ವ್ಯಕ್ತಿಯ ಬದುಕು ಬರಹಗಳನ್ನು ಕುರಿತು ಈ ಗ್ರಂಥವನ್ನು ವ್ಯವಸ್ಥಿತವಾಗಿ ಸಂಪಾದಿಸುವ ಮೂಲಕ ಡಾ. ಎಂ.ಎಂ. ಕಲಬುರ್ಗಿ ಅವರು ಸ್ಮರಣೀಯ ಕಾರ್ಯಮಾಡಿದ್ದಾರೆ.

'ಡಾ.ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ'ಯ ಅಡಿಯಲ್ಲಿ ಈ ಮೇಲ್ಕಾಣಿಸಿದ ಮೂರು ಜನ ಪುಣ್ಯ ಪುರುಷರ ಬದುಕು-ಬರೆಹಗಳನ್ನು ಕುರಿತ ಕೃತಿಗಳನ್ನು ಒಳಗೊಂಡ ಈ ಸಂಪುಟವನ್ನು ಸಿದ್ಧಪಡಿಸುವ ಅವಕಾಶ ನನಗೆ ದೊರೆತುದಕ್ಕೆ ಸಂತೋಷವೆನಿಸುತ್ತದೆ. ಇಂತಹ ಹೊಣೆಯನ್ನು ಹೊರಿಸಿದ ಈ ಯೋಜನೆಯ ಗೌರವಾಧ್ಯಕ್ಷರು ಮತ್ತು ಬಿ.ಎಲ್.ಡಿ.ಇ.ಸಂಸ್ಥೆಯ ಅಧ್ಯಕ್ಷರಾದ ಡಾ. ಎಂ.ಬಿ.ಪಾಟೀಲ ಅವರಿಗೆ, ಈ ಯೋಜನೆಯ ಅಧ್ಯಕ್ಷರು ಮತ್ತು ಸಂಸ್ಥೆಯ ಪ್ರಧಾನಕಾರ್ಯದರ್ಶಿಗಳಾದ ಸನ್ಮಾನ್ಯ ಶ್ರೀ ಜಿ.ಕೆ.ಪಾಟೀಲ ಅವರಿಗೆ, ಪ್ರಧಾನ ಸಂಪಾದಕರಾದ ಡಾ. ವೀರಣ್ಣ ರಾಜೂರ ಹಾಗೂ ಸಮಿತಿಯ ಎಲ್ಲ ಸದಸ್ಯರಿಗೆ, ಸಂಯೋಜಕರಾದ ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ಸಹಕರಿಸಿದ ಡಾ. ವಿ.ಡಿ.ಐಹೊಳ್ಳಿ, ಡಾ. ಹನುಮಂತ ಮೇಲಿನಮನಿ ಅವರಿಗೆ ಗೌರವಪೂರ್ವಕ ವಂದನೆಗಳು.

❖❖

*

## ಪರಿವಿಡಿ



ಶ್ರೀ ಹಾಲಭಾವಿ ವೀರಭದ್ರಪ್ಪನವರು



ಎಲ್.ಎಲ್.ಬಿ. ಪರೀಕ್ಷೆಯಲ್ಲಿ ಉತ್ತೀರ್ಣರಾದ ಪ್ರಯುಕ್ತ
ಶ್ರೀ ವೀರಭದ್ರಪ್ಪನವರು ಹಾಲಭಾವಿ ಅವರಿಗೆ ನೀಡಲಾದ
೧೦ ತೊಲಿ ತೂಕದ ಬಂಗಾರ ಪದಕ



ತಾಯಿ ಶ್ರೀಮತಿ ಸಾಯಿಬವ್ವ


# ಸಾಸನೂರ ಸಹೋದರರು




ಶ್ರೀ ಎಂ.ಟಿ. ಸಾಸನೂರ



ಪ್ರೊ. ಐ. ಟಿ. ಸಾಸನೂರ



ಡಾ. ಎಚ್. ಟಿ. ಸಾಸನೂರ



ಪ್ರೊ. ಬಿ. ಟಿ. ಸಾಸನೂರ

ಲಿಂಗಾಯತ ಆಧುನಿಕ ಸಾಹಿತ್ಯ ರತ್ನಮಾಲೆ : ೩೧

# ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ

ಲೇಖಕರು

ಹಾಲಭಾವಿ ವೀರಭದ್ರಪ್ಪ

ಸಂಪಾದಕರು

ಎಂ.ಎಂ.ಕಲಬುರ್ಗಿ



೨೦೦೭

ಲಿಂಗಾಯತ ಅಧ್ಯಯನ ಸಂಸ್ಥೆ

ಶ್ರೀ ಜಗದ್ಗುರು ಎಡೆಯೂರು ತೋಂಟದಾರ್ಯ ಸಂಸ್ಥಾನಮಠ,

ಗದಗ

*

# ಸಂಪಾದಕರ ಮಾತು

ಎಂ.ಎಂ.ಕಲಬುರ್ಗಿ

"ಲಿಂಗಾಯತ ಸಂಸ್ಕೃತಿ"ಗೆ ಸಂಬಂಧಪಟ್ಟಂತೆ ನಾನು ಮಾಡಿದ, ಮಾಡಿಸಿದ ಕೆಲಸಗಳಲ್ಲಿ ಚರಿತ್ರೆಯ ಶೋಧ-ಪ್ರಕಟನೆ ಮುಖ್ಯವೆನಿಸಿವೆ. ಇದು ರಾಜಮನೆತನಗಳ ಚರಿತ್ರೆ, ಪ್ರಾಚೀನ ಮಹಾಪುರುಷರ ಚರಿತ್ರೆ, ಆಧುನಿಕ ಗಣ್ಯವ್ಯಕ್ತಿಗಳ ಚರಿತ್ರೆ ಮೊದಲಾದ ಕವಲುಗಳಲ್ಲಿ ಪ್ರವಹಿಸಿದೆ.

ಗದುಗಿನ ಶ್ರೀ ಜಗದ್ಗುರು ಎಡೆಯೂರು ತೋಂಟದಾರ್ಯಮಠದ "ಲಿಂಗಾಯತ ಪುಣ್ಯಪುರುಷ ಮಾಲೆ" ನನ್ನ ಜೀವನದ ಒಂದು ಮಹತ್ವದ ಕೆಲಸ. ಇದಕ್ಕೆ ಪೂರಕವಾಗಿ ಡೆಪ್ಯುಟಿ ಚನ್ನಬಸಪ್ಪ, ಹರ್ಡೇಕರ ಮಂಜಪ್ಪ, ಸಿರಸಂಗಿ ಲಿಂಗರಾಜರು, ಶಿ.ಶಿ.ಬಸವನಾಳ, ಫ.ಗು.ಹಳಕಟ್ಟಿ ಮೊದಲಾದವರನ್ನು ಕುರಿತ ಪಿಎಚ್.ಡಿ. ಅಧ್ಯಯನಗಳಲ್ಲಿ ನನ್ನ ಪ್ರೇರಣೆಯಿದೆ, ಪ್ರಯತ್ನವಿದೆ. ಇತ್ತೀಚೆ "ಅರಟಾಳ ರುದ್ರಗೌಡರ ಚರಿತ್ರೆ"ಯೆಂಬ ಅದ್ಭುತ ಜೀವನ ಚರಿತ್ರೆಯನ್ನು ಸಂಪಾದಿಸಿದ ನಾನು, ಈಗ ಶ್ರೀ ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆಯನ್ನು ಸಂಪಾದಿಸುತ್ತಿರುವದು, ನನ್ನ ಜೀವಮಾನದ ಸಾರ್ಥಕ ಪ್ರಸಂಗವೆಂದು ಭಾವಿಸುತ್ತೇನೆ.

ಕರ್ನಾಟಕದ ರಾಜಕೀಯ ಪ್ರಭುತ್ವ ಪೇಶ್ವೆಯವರಿಂದ ಇಂಗ್ಲಿಷ್‌ರಿಗೆ ವರ್ಗಾವಣೆಗೊಂಡುದು (೧೮೧೮) ಬ್ರಾಹ್ಮಣೇತರ ಸಮಾಜಗಳಿಗೆ, ಅದರಲ್ಲಿಯೂ ಮಧ್ಯಮವರ್ಗದ ಲಿಂಗಾಯತ ಸಮಾಜಕ್ಕೆ ಅಭಿವೃದ್ಧಿಯ ಅವಕಾಶ ತೆರೆದು ಕೊಟ್ಟಿತೆಂದೇ ಹೇಳಬೇಕು. ಇದರಿಂದಾಗಿ "ಹಳೆಯ ನೆನಪು-ಹೊಸ ಕನಸು"ಗಳಿಂದ ವಿಜೃಂಭಿಸತೊಡಗಿದ ಈ ಸಮಾಜದಲ್ಲಿ ಡೆಪ್ಯುಟಿ ಚನ್ನಬಸಪ್ಪಯುಗ, ಅರಟಾಳ ರುದ್ರಗೌಡಯುಗ, ಕೆ.ಎಲ್.ಇ. ಸಪ್ತರ್ಷಿಯುಗ ಮುಖ್ಯವಾದುವು. ಇವುಗಳಲ್ಲಿ ಅರಟಾಳ ರುದ್ರಗೌಡಯುಗದ ಪ್ರಮುಖರೆನಿಸಿದ್ದಾರೆ, ಶ್ರೀ ವೀರಭದ್ರಪ್ಪ ಹಾಲಭಾವಿ (ಜನನ ೧೮೭೮).

ಶ್ರೀ ವೀರಭದ್ರಪ್ಪನವರ ಮೂಲ ಊರು ಜಮಖಂಡಿ ತಾಲೂಕಿನ ಗೋಠೆ. ಅಡ್ಡಹೆಸರು ಹೇರಲಗಿ, ತಂದೆ ನಿಜಗುಣೆಪ್ಪ, ತಾಯಿ ಶಿವಗಂಗವ್ವ. ವಿಧವೆ ಶಿವಗಂಗವ್ವನನ್ನು ಮಕ್ಕಳಿಲ್ಲದ ಅಕ್ಕನ ಗಂಡ ಬಸಪ್ಪ ಹಾಲಭಾವಿ ಉಡಕಿಲಗ್ನವಾದನು. ಈ ಮನೆಯಲ್ಲಿ ಬಾಲಕ ವೀರಭದ್ರಪ್ಪನನ್ನು ಬಸಪ್ಪ ತನ್ನ ಖಾಸಾ ಮಗನಂತೆ ಪ್ರೀತಿಯಿಂದ ಬೆಳೆಸಿದ. ಶಾಲೆಯಲ್ಲಿಯೂ ವೀರಭದ್ರಪ್ಪ ಬಸಪ್ಪ ಹಾಲಭಾವಿಯೆಂದೇ ಹೆಸರು ಹಚ್ಚಿಸಿದ. ಇದರಿಂದಾಗಿ ವೀರಭದ್ರಪ್ಪ ನಿಜಗುಣೆಪ್ಪ ಹೇರಲಗಿಗೆ ಬದಲು ವೀರಭದ್ರಪ್ಪ ಬಸಪ್ಪ ಹಾಲಭಾವಿಯೆಂಬ ಹೆಸರು ಪ್ರಚಾರಕ್ಕೆ ಬಂದಿತು.

ವೀರಭದ್ರಪ್ಪನವರ ಹೆಂಡತಿ ಗಂಗಮ್ಮ ಲಗ್ನವಾದ ಹೊಸದರಲ್ಲಿ ತೀರಿಕೊಳ್ಳಲು ಚನ್ನಬಸವ್ವ ಎರಡನೆಯ ಪತ್ನಿಯಾಗಿ ಬಂದಳು. ಈ ದಂಪತಿಗಳಿಗೆ ಮದುವೆಯ ಮೊದಲೇ ತೀರಿಕೊಂಡವರನ್ನು ಬಿಟ್ಟರೆ,

ಸಿದ್ಧಪ್ಪ, ದಾನಪ್ಪ, ಗಂಗಾಧರ, ಸೋಮಶೇಖರ, ಶಿವಗಂಗಮ್ಮ, ಶಾರದಮ್ಮ-ಹೀಗೆ ೬ ಜನ ಮಕ್ಕಳು. ಗೋಕಾವಿ, ಬೆಳಗಾವಿ, ಪುಣೆ, ಮುಂಬೈಗಳಲ್ಲಿ ವಿದ್ಯಾಭ್ಯಾಸ ಪೂರೈಸಿದ ವೀರಭದ್ರಪ್ಪನವರು ಎಲ್.ಎಲ್.ಬಿ. ಪದವೀಧರರು. ಧಾರವಾಡದಲ್ಲಿ ವಕೀಲಿವೃತ್ತಿ ಆರಂಭಿಸಿ, ಬಳಿಕ ನ್ಯಾಯಾಧೀಶರಾಗಿ, ಕರ್ನಾಟಕ, ಮಹಾರಾಷ್ಟ್ರಗಳಲ್ಲಿ ಕೆಲಸ ನಿರ್ವಹಿಸಿದರು. ಕೇವಲ ಸರಕಾರಿ ಅಧಿಕಾರಿಗಳಾಗಿ ಉಳಿಯದೆ, ಸಮಾಜದ ಭಾಗವಾಗಿ ಬೆಳೆದುದು ಇವರ ವೈಶಿಷ್ಟ್ಯ. ಈ ಕಾರಣದಿಂದಾಗಿ ಇವರ ಆತ್ಮಚರಿತ್ರೆ ಒಬ್ಬ ವ್ಯಕ್ತಿಯ, ಒಂದು ಕುಟುಂಬದ ಭಾಗವಾಗುತ್ತಲೇ ಲಿಂಗಾಯತ ಸಮಾಜದ, ಉತ್ತರ ಕರ್ನಾಟಕ ಪರಿಸರದ ಭಾಗವಾಗಿಯೂ ವಿಸ್ತರಿಸಿಕೊಂಡಿದೆ. ಹೀಗೆ ವ್ಯಷ್ಟಿ-ಸಮಷ್ಟಿಗಳ ದಾಖಲೆಯಾಗಿರುವುದರಿಂದ, ಈ ಬರವಣಿಗೆಯು ಸಂಪಾದಿಸುವ-ಪ್ರಕಟಿಸುವ ಮಹತ್ವ ಪಡೆದುಕೊಂಡಿದೆ.

ಉತ್ತರ ಕರ್ನಾಟಕ್ಕೆ ಸಂಬಂಧಪಟ್ಟಂತೆ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ, ಕರ್ನಾಟಕ ಇತಿಹಾಸ ಸಂಶೋಧನ ಮಂಡಳಿ, ದಿ. ಸ್ವರಾಜ್ಯ ಇನ್‌ಸೂರನ್ಸ ಕಂಪನಿ ಲಿಮಿಟೆಡ್ ಎಂಬ ಸಾರ್ವಜನಿಕ ಸಂಸ್ಥೆಗಳಿಗೆ, ಕಾರ್ಯಾಧ್ಯಕ್ಷ-ಸ್ವಾಗತಾಧ್ಯಕ್ಷರಾಗುವ ಮೂಲಕ ವಿಜಯನಗರದ ೬ನೆಯ ಶತಮಾನೋತ್ಸವಕ್ಕೆ, 'ಫಾರ್‌ಗಾಟನ್ ಎಂಪಾಯರ್' ಕೃತಿ ಭಾಷಾಂತರದ ಮೂಲಕ ಅನುವಾದ ಸಾಹಿತ್ಯಕ್ಕೆ ಇವರಿಂದ ಕಾಣಿಕೆ ಸಂದಿದೆ.

ಇದಕ್ಕಿಂತ ಲಿಂಗಾಯತ ಸಮಾಜಕ್ಕೆ ಇವರಿಂದ ಸಂದ ಕಾಣಿಕೆ ಮಹತ್ವದ್ದಾಗಿದೆ. ವಿದ್ಯಾರ್ಥಿದೆಸೆಯಲ್ಲಿ ಧಾರವಾಡದ 'ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ'ಯಿಂದ ಇವರು ಶಿಷ್ಯವೇತನ ಪಡೆದುದು, ಲಿಂಗಾಯತ ಸಮಾಜದ ಮೊದಲ ಎಲ್.ಎಲ್.ಬಿ. ಪದವೀಧರ ಸಿದ್ಧರಾಮಪ್ಪ ಪಾವಟೆ (೧೮೯೮), ಎರಡನೆಯ ಪದವೀಧರರು ವೀರಭದ್ರಪ್ಪ ಹಾಲಭಾವಿ ಮತ್ತು ವೀರಪ್ಪ ಬಿಳೆಅಂಗಡಿ (೧೯೦೧)ಯೆಂಬುದು ಈ ಕೃತಿಯಿಂದ ತಿಳಿದುಬರುತ್ತದೆ. ಅಥಣಿ ನಾಗರಿಕರು ಸ್ಥಾಪಿಸಿದ "ವಿಕ್ಟೋರಿಯಾ ಜುಬಿಲಿ ಇನಾಮ್ ಫಂಡ್"ದ ಇತಿಹಾಸ, ಈ ಫಂಡ್‌ನ ಪಾರಿತೋಷಕವನ್ನು ಸಿದ್ಧರಾಮಪ್ಪ ಪಾವಟೆ, ಹಾಲಭಾವಿ, ಬಸವನಾಳ, ಸಾಖರೆ ಅವರಿಗೆ ಲಭಿಸಿದ ಮಾಹಿತಿ ಇಲ್ಲಿದೆ. "ಹಿಂದುಸ್ಥಾನ ಧರ್ಮಕೋಶ" ಸಿದ್ಧ ಪಡಿಸುತ್ತಲಿದ್ದ ಎಂಥೋವನ್ ಅವರಿಗೆ ಮಹಾರಾಷ್ಟ್ರ, ಮೈಸೂರು ಭಾಗದವರು ತಾವು ವೀರಶೈವರೆಂದು ತಿಳಿಸಿದರೆ, ಧಾರವಾಡ ಭಾಗದವರು ಲಿಂಗಾಯತರೆಂದು ತಿಳಿಸಿದುದು, ಆ ಕಾರಣಕ್ಕಾಗಿ ಎಂಥೋವನ್ ತಮ್ಮ ಕೋಶದಲ್ಲಿ ಈ ಸಮಾಜವನ್ನು 'ಲಿಂಗಾಯತ' ದೃಷ್ಟಿಕೋನದಿಂದಲೇ ಪ್ರತಿಪಾದನೆ ಮಾಡಿದುದು, ಮಹತ್ವದ ವಿಷಯವಾಗಿದೆ. ಕುಂಭಕೋಣಮ್‌ದಲ್ಲಿ ಜರುಗಿದ ವೀರಶೈವ ಮಹಾಸಭೆಯು, ಹಿಂದೂಕಾಯಿದೆಯನ್ನು ಅನ್ವಯಿಸುವುದರಿಂದ ಲಿಂಗಾಯತರಿಗೆ ಅನ್ಯಾಯವಾಗುವುದೆಂದೂ, ಇದನ್ನು ತಪ್ಪಿಸಲು ಲಿಂಗಾಯತ ಕಾನೂನು ರಚಿಸುವ ಉದ್ದೇಶದಿಂದ ಒಂದು ತಜ್ಞರ ಮಂಡಳಿ ರಚಿಸಬೇಕೆಂದೂ ನಿರ್ಣಯ ಸ್ವೀಕರಿಸಿತು. ಈ ಮಂಡಳಿಗೆ ವೀರಭದ್ರಪ್ಪನವರನ್ನು ಅಧ್ಯಕ್ಷರೆಂದು ನೇಮಿಸಲಾಯಿತು. ಇವರು ಈ "ಲಿಂಗಾಯತ ಕಾಯದೆ ಮಂಡಲ"ವತಿಯಿಂದ ವರದಿಯನ್ನು ಸಿದ್ಧಪಡಿಸಿ, ಕೇಂದ್ರ ಸರಕಾರಕ್ಕೆ ಸಲ್ಲಿಸಿ, ಸಿದ್ಧಪಡಿಸಿದ ಹಕ್ಕು ಸಾಧಿಸಲು ಮಾಡಿದ ಪ್ರಯತ್ನ ಮನನೀಯವೆಂದೇ ಹೇಳಬೇಕು. ಈ ವರದಿಯ ಭಾಗವಾದ ಲಿಂಗಾಯತಮತಗಳ ಕಾಯದೆ ಮಸೂದೆಯು ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ ಪತ್ರಿಕೆಯಲ್ಲಿ(ಇಂಗ್ಲಿಷ್ ೪-೨, ೩ ಕನ್ನಡ ೫-೧)ಪ್ರಕಟವಾಗಿದೆ. ಇದಲ್ಲದೆ ಧಾರವಾಡದ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ ಸಾಹಿತ್ಯ ಸಮಿತಿಯ ಅಧ್ಯಕ್ಷರಾಗಿ ಚೆನ್ನಬಸವಪುರಾಣ, ಪ್ರಭುಲಿಂಗಲೀಲೆಗಳಂಥ ಮಹತ್ವದ ಕೃತಿಗಳು ಪ್ರಕಟವಾಗುವಂತೆ ನೋಡಿಕೊಂಡುದು ಸಣ್ಣ ಸಾಧನೆಯೇನಲ್ಲ. ಇದರ ಜೊತೆಗೆ ಮೋಳಿಗೆ ಮಾರಯ್ಯ ಮತ್ತು ರಾಣಿ ಮಹಾದೇವಿಯರ ವಚನಗಳು, ಮೋಳಿಗಯ್ಯನ ಪುರಾಣ, ಅನುಭವ ಮಂಟಪದ ಐತಿಹಾಸಿಕತೆ (ಉತ್ತಂಗಿ ಚೆನ್ನಪ್ಪ) ಮೊದಲಾದ ಕೃತಿಪ್ರಕಟನೆ, ಇವರ ಪ್ರಯತ್ನದ ಫಲವೆನಿಸಿದೆ. ಶಂಕರದಾಸಿಮಯ್ಯ ಪುರಾಣವನ್ನು ಇವರೇ ಸಂಪಾದಿಸಿ ಪ್ರಕಟಿಸಿದ್ದಾರೆ.

ಬೈಲಹೊಂಗಲದ "ಕಿತ್ತೂರ ಚೆನ್ನಮ್ಮರಾಣಿ ಇತಿಹಾಸ ಮಂಡಲದ" ಅಧ್ಯಕ್ಷರಾಗಿ ಶ್ರೀ ತಲ್ಲೂರ ರಾಯನಗೌಡ ಮೊದಲಾದವರಿಗೆ ನೀಡಿದ ನೈತಿಕ ಬೆಂಬಲ ಸ್ಮರಣೀಯವಾದುದು. ಬೆಳಗಾವಿಯ ಕೆ.ಎಲ್.ಇ.ಸೊಸೈಟಿಯಲ್ಲಿ ಉದ್ಭವಿಸಿದ ಘರ್ಷಣೆ ನಿವಾರಿಸಲು ರಚಿಸಿದ್ದ "ಸಮಿತಿ"ಯಲ್ಲಿ ಸದಸ್ಯರಾಗಿ, ಸೂಕ್ತ ಪರಿಹಾರಮಾರ್ಗ ಸೂಚಿಸಿದುದು ಚರಿತ್ರಾರ್ಹ ಘಟನೆಯೆನಿಸಿದೆ. ವೀರಶೈವ ಮಹಾಸಭೆಯ ಸ್ಥಾಪನೆ, ಚಿತ್ರದುರ್ಗ ಜಗದ್ಗುರು ಪೀಠಕ್ಕೆ ಜಯದೇವಸ್ವಾಮಿ - ಕುಮಾರಸ್ವಾಮಿಗಳಲ್ಲಿ ನಡೆದ ಸ್ಪರ್ಧೆ, ವಾರದ ಮಲ್ಲಪ್ಪನವರ ಲೋಕೋಪಕಾರಿ ಕೆಲಸ, ಶಿವಯೋಗ ಮಂದಿರದ ವ್ಯಾಜ್ಯ, ಸಿದ್ಧಾರೂಢಸ್ವಾಮಿಗಳ ವಿಷಯದಲ್ಲಿ ನೀಡಿದ ತೀರ್ಪು, ಎಂಥೋವನ್ ಅವರಿಗೆ ನೀಡಲಾದ ವಿವರವನ್ನಾಧರಿಸಿ ಚಿಕ್ಕೋಡಿ ನ್ಯಾಯಾಲಯದಲ್ಲಿ ಇವರು ನೀಡಿದ ತೀರ್ಪನ್ನೊಳಗೊಂಡ "A Rational of Linagayatism" ಹೆಸರಿನ ಕೃತಿ ಪ್ರಕಟನೆ (ವಿಜಾಪುರದ ವಿರಕ್ತಪ್ಪ ಮುಧೋಳಕರ ಅವರಿಂದ), ಇದರ ಕನ್ನಡಾನುವಾದ ಪ್ರಕಟನೆ (ಗಂಗಾಧರಪ್ಪ ಸಾಬೋಜಿ ಅವರಿಂದ), ಜಗದ್ಗುರುಗಳ ಅಡಪಲ್ಲಕ್ಕಿ ಉತ್ಸವದ ಕೋರ್ಟವ್ಯಾಜ್ಯ, ಗೋಪಾಳ ವಿರುದ್ಧ ಹಣಮಂತ ವ್ಯಾಜ್ಯದಲ್ಲಿ ಲಿಂಗಾಯತರು ಶೂದ್ರರೆಂದು ತೀರ್ಪು ನೀಡಿದುದು ಇಲ್ಲಿ ದಾಖಲಾಗಿವೆ. ಧಾರವಾಡದ ಗಿಲಗಂಚಿ ಗುರುಸಿದ್ಧಪ್ಪ, ಅರಟಾಳ ರುದ್ರಗೌಡ, ಟೆಂಗಿನಕಾಯಿ ಚನ್ನಮಲ್ಲಪ್ಪ, ಕಿತ್ತೂರ ರೇವಣಸಿದ್ಧಪ್ಪ, ಸವದತ್ತಿ ಮೂಗಪ್ಪ, ರಪಾಟಿ ಚೆನ್ನಮಲ್ಲಯ್ಯ, ಅಳಗವಾಡಿ ರಾಯಪ್ಪ, ಮೈಸೂರ ಸ್ಟಾರ್ ಪತ್ರಿಕೆಯ ಸಂಪಾದಕ ಯಜಮಾನ್ ವೀರಸಂಗಪ್ಪ, ಪಿ.ಮಹಾದೇವಯ್ಯ, ಜಿ.ಶಾಂತವೀರಪ್ಪ, ಸಿರಸಂಗಿ ಲಿಂಗರಾಜ, ಹಳಕಟ್ಟಿ ಗುರುಬಸಪ್ಪ, ಹಳಕಟ್ಟಿ ಫಕೀರಪ್ಪ, ಬುದ್ಧಯ್ಯ ಪುರಾಣಿಕ ಅವರ ಪ್ರಸ್ತಾಪ ಅಲ್ಲಲ್ಲಿ ಬಂದಿದೆ. ಹೀಗೆ ಈ ಪುಟ್ಟ ಕೃತಿಯಲ್ಲಿ ಕೌಟುಂಬಿಕ ಮತ್ತು ಸಾಮಾಜಿಕ ಸಂಗತಿಗಳು ನನಗರ್ಧ-ನಿನಗರ್ಧವೆಂಬಂತೆ ಸಮಪ್ರಮಾಣದಲ್ಲಿ ಅಡಕಗೊಂಡಿವೆ. ಒಟ್ಟಾರೆ ಆಧುನಿಕ ಲಿಂಗಾಯತ ಸಮಾಜದ ಪುನರುಜ್ಜೀವನ ಘಟ್ಟದ ಚರಿತ್ರೆಗೆ ಈ ಕೃತಿ ಮಹತ್ವದ ಆಕರವೆನಿಸಿದೆ.

ಇದು, ಇಂಗ್ಲಿಷ್ ಡೈರಿ (ಕ್ರೌನ್ ಸೈಜ್)ಯಲ್ಲಿ ಬರೆದ ಕೃತಿ. ೩೦೪ ಪುಟಗಳು. ಆರಂಭದ ಪುಟಗಳಲ್ಲಿ ೨೪ ಸಾಲು, ಮುಂದಿನ ಪುಟಗಳಲ್ಲಿ ೧೨ ಸಾಲುಗಳಂತೆ ಬರವಣಿಗೆ ಇದೆ. ಶ್ರೀ ವೀರಭದ್ರಪ್ಪನವರು ಹೇಳುತ್ತ ಹೋದಂತೆ ಬೇರೆಯವರು ಬರೆದುಕೊಂಡ ಪಠ್ಯವಿದು. ಎರಡು ತರಹದ ಅಕ್ಷರವಿರುವುದರಿಂದ ಇಬ್ಬರು ಲಿಪಿಕರಣ ಕೆಲಸ ಪೂರೈಸಿದ್ದಾರೆ. ಅಕ್ಷರದ ಅಂದ ಸಾಧಾರಣ, ಲಿಪಿಕಾರರ ಭಾಷಾಜ್ಞಾನ ಸಾಧಾರಣ. ಹೀಗಾಗಿ ಅಲ್ಲಲ್ಲಿ ತಲೆದೋರಿದ್ದ ಭಾಷಾದೋಷಗಳನ್ನು ಪರಿಷ್ಕರಣಪ್ರಸಂಗದಲ್ಲಿ ಪರಿಹರಿಸಲಾಗಿದೆ. ಇಡೀ ಬರವಣಿಗೆಯನ್ನು ಶ್ರೀ ವೀರಭದ್ರಪ್ಪನವರು ಓದಿ, ಅಲ್ಲಲ್ಲಿ ಲೋಪ, ಆಗಮ, ಆದೇಶರೂಪದ ತಿದ್ದುಪಡಿ ಮಾಡಿದ್ದಾರೆ. ಪರಿಷ್ಕರಣ ಪ್ರಸಂಗದಲ್ಲಿ ಇದನ್ನು ಪರಿಗಣಿಸಲಾಗಿದೆ. ಆರಂಭದಲ್ಲಿಯ ೧-೨-೧೯೪೪, ಅಂತ್ಯದಲ್ಲಿಯ ೧೭-೭-೧೯೪೫ ಎಂಬ ತೇದಿ ಈ ಕೃತಿರಚನೆಯ ಕಾಲವ್ಯಾಪ್ತಿಯನ್ನು ಸೂಚಿಸುತ್ತದೆ. ಬಳಿಕ ಬರೆದ ಸಣ್ಣ ಅನುಬಂಧಗಳ ಕೊನೆಗೆ ೬-೨-೧೯೫೭ ಎಂಬ ತೇದಿಯಿದೆ.

ಈ ಹಸ್ತಪ್ರತಿ ವೀರಭದ್ರಪ್ಪನವರ ಮೊಮ್ಮಗ ಶ್ರೀ ಸುರೇಶ ಹಾಲಭಾವಿ ಅವರ ಬಳಿಯಲ್ಲಿರುವುದು ತಿಳಿಯುತ್ತಲೇ, ಅವರನ್ನು ಸಂಪರ್ಕಿಸಿದೆ. ಆತ್ಮೀಯರೇ ಆಗಿರುವ ಶ್ರೀ ಸುರೇಶ, ಅವರ ಧರ್ಮಪತ್ನಿ ಶ್ರೀಮತಿ ಪಾರ್ವತಿ ಪ್ರೀತಿಯಿಂದ ಅದನ್ನು ಒದಗಿಸಿ, ಸಂಪಾದಿಸಲು-ಪ್ರಕಟಿಸಲು ಒಪ್ಪಿಗೆ ನೀಡಿದರು. ಈ ದಂಪತಿಗಳಿಗೆ ಕೃತಜ್ಞ. ಲಿಂಗಾಯತ ಸಮಾಜದ ಗಣ್ಯವ್ಯಕ್ತಿಗಳ ಚರಿತ್ರೆಯನ್ನು "ಪುಣ್ಯಪುರುಷ ರತ್ನಮಾಲೆ"ಯಲ್ಲಿ ಪ್ರಕಟಿಸುತ್ತಲಿರುವ ಶ್ರೀ ಜಗದ್ಗುರು ಎಡೆಯೂರು ತೋಂಟದಾರ್ಯಮಠದ "ಲಿಂಗಾಯತ ಅಧ್ಯಯನ ಸಂಸ್ಥೆ"ಈ ಕೃತಿಯನ್ನು ಪ್ರಕಟಿಸುತ್ತಿದೆ. ಈ ಸಂಸ್ಥೆಯ ಅಧ್ಯಕ್ಷರಾದ ಪೂಜ್ಯ ಶ್ರೀ ಜಗದ್ಗುರು ಸಿದ್ಧಲಿಂಗ ಮಹಾಸ್ವಾಮಿಗಳವರ ಪುಸ್ತಕ ಪ್ರೀತಿಗೆ ಭಕ್ತಿಯ ನಮನಗಳು.

ಅಚ್ಚಿನ ಕಾರ್ಯದಲ್ಲಿ ನೆರವಾದ ಶ್ರೀ ಬಸವರಾಜ ಹೂಗಾರ, ಶ್ರೀಸಿದ್ಧಲಿಂಗ ದೇಸಾಯಿ, ಎಚ್.ಎಸ್.ಮೇಲಿನಮನಿ, ಹಸ್ತಪ್ರತಿ ಶೋಧದಲ್ಲಿ ನೆರವಾದ ಪ್ರೊ. ಶ್ರೀ ಎಸ್.ಪಿ.ಹೆಗಡ್ಯಾಳ, ಶ್ರೀ ಶಿವಶರಣ ಕಲಬಶೆಟ್ಟರ ಅವರಿಗೆ ವಂದನೆಗಳು. ಬೆರಳಚ್ಚು ಕಾರ್ಯ ಪೂರೈಸಿದ ಧಾರವಾಡದ ವಚನ ಗ್ರಾಫಿಕ್ಸ್‌ದ ಶ್ರೀ ದೇವರಾಜ ನಾಡಿಗ ಅವರಿಗೆ, ಅಂದಾಗಿ ಮುದ್ರಿಸಿದ ಗದಗಿನ ತ್ವರಿತ ಮುದ್ರಣಾಲಯದ ಶ್ರೀ ಕೆ. ಅಶೋಕ ಅವರಿಗೆ ಕೃತಜ್ಞ.

❖❖

# ವೀರಭದ್ರಪ್ಪ ಬಸಪ್ಪ ಹಾಲಭಾವಿ

ಈತನ

**ಆತ್ಮಚರಿತ್ರೆ**

ಶ್ರೀಗುರು ಬಸವಲಿಂಗಾಯ ನಮಃ

೧-೨-೧೯೫೪

*

## ಮುನ್ನುಡಿ

ನನ್ನ ಕೆಲವು ಮಿತ್ರರು ನಿಮ್ಮ ಜೀವನ ಚರಿತ್ರೆಯನ್ನು ಬರೆಯಬೇಕೆಂದು ಆಗಾಗ್ಗೆ ಸೂಚಿಸುತ್ತಿದ್ದರು. ಅದರಂತೆ ಚಿ. ಗಂಗಾಧರನೂ ಆಗ್ರಹ ಮಾಡುತ್ತಿದ್ದನು. ಈ ವಿಷಯವಾಗಿ ಮೊದಲು ಶಂಕೆಯು ಹುಟ್ಟುವುದೇನೆಂದರೆ, ನನ್ನ ಜೀವನದಲ್ಲಿ ಅಂಥ ಮಹತ್ವದ ಸಂಗತಿಗಳು ಯಾವವು ಇರುವವು? ಈ ಶಂಕೆಯು ಸರಿಯಾದದ್ದೆಂದು ತೋರುವುದಿಲ್ಲ. ಯಾಕೆಂದರೆ ಎಂಥ ದರ್ಜೆಯ ಮನುಷ್ಯನಲ್ಲಿಯೂ ಅವನ ಸ್ಥಿತಿಗತಿಗನುಸರಿಸಿ ಕೆಲವು ಮಹತ್ವದ ಸಂಗತಿಗಳು ಉಂಟಾಗಿರುವುವು. ದೊಡ್ಡ ಮನುಷ್ಯನ ಕಾರ್ಯಕ್ಷೇತ್ರವು ದೊಡ್ಡದಿದ್ದರೆ ಸಣ್ಣವನ ಕಾರ್ಯಕ್ಷೇತ್ರವು ಸಣ್ಣದಿರುವುದು. ಒಬ್ಬ ರಾಜನ ಕಾರ್ಯಕ್ಷೇತ್ರವು ಅವನ ಇಡೀ ದೇಶವಿದ್ದರೆ, ಒಬ್ಬ ಸಾಮಾನ್ಯ ಮನುಷ್ಯನ ಕಾರ್ಯಕ್ಷೇತ್ರವು ಅವನ ಇಡೀ ಕುಟುಂಬವಿರುವುದು. ರಾಜನ ಹಿತಾಹಿತಗಳು ಸುತ್ತಲಿರುವ ದೇಶಗಳಿಗೂ ಸಂಬಧಿಸಿರುವುವು. ಅದರಂತೆ ಸಾಮಾನ್ಯ ಮನುಷ್ಯನ ಯೋಗಕ್ಷೇಮಗಳು ಅವನ ಗ್ರಾಮ, ಅವನ ಸಮಾಜ, ಅವನ ಪ್ರಾಂತ ಮುಂತಾದವುಗಳನ್ನು ಅವಲಂಬಿಸಿರುವವು. ಹೀಗಿದ್ದ ಮೇಲೆ ನನ್ನ ಆಯುಷ್ಯ ಕ್ರಮದಲ್ಲಿಯೂ ಕೆಲವು ಮಹತ್ವದ ಸಂಗತಿಗಳು ಜರುಗಿದವು. ಅವುಗಳನ್ನು ವಿವರಿಸಲಿಕ್ಕೆ ಶಕ್ಯವಿದ್ದ ಪ್ರಯತ್ನ ಮಾಡುವೆನು.

❖❖

# ಪ್ರಸ್ತಾವನೆ

ಇದರಲ್ಲಿ ನನ್ನ ಆಯುಷ್ಯದಲ್ಲಿಯ ಒಂದೆರಡು ಸಂಗತಿಗಳನ್ನು ಮಾತ್ರ ಹೇಳುವೆನು. ಸನ್ ೧೮೯೬ರ ವರೆಗೆ ಅಂದರೆ ನಾನು ೨೦ ವರ್ಷ ವಯಸ್ಸಿನವನಾಗುವ ವರೆಗೆ ನನಗೆ ಹೇಳತಕ್ಕ ಯಾವ ಬೇನೆಯೂ ಬಂದಿರಲಿಲ್ಲ. ಆಗಾಗ್ಗೆ ಕಣ್ಣುಬೇನೆಯು ಮಾತ್ರ ಬರುತ್ತಿತ್ತು. ಆಗ್ಗೆ ಮನೆಯವರು ಒಬ್ಬ ಮುದುಕಿಯನ್ನು ಕರೆಯಿಸಿ ಕಣ್ಣೊಳಗಿನ ಉಸುಕಿನಂಥ ಸಣ್ಣ ಹರಳುಗಳನ್ನು ತೆಗೆಯಿಸುತ್ತಿದ್ದರು. ಆಕೆ ತನ್ನ ಬಾಯಿಯನ್ನು ಚೆನ್ನಾಗಿ ತೊಳೆದುಕೊಂಡು ಕಣ್ಣೊಳಗೆ ನಾಲಗೆಯನ್ನು ಹಾಕಿ ಹರಳುಗಳನ್ನು ತೆಗೆಯುತ್ತಿದ್ದಳು. ಆ ಮೇಲೆ ಕಣ್ಣಬೀಜಗಳನ್ನು ಸಣ್ಣಗಾಗಿ ಪುಡಿಮಾಡಿ ಮಲಗುವಾಗ ಕಣ್ಣೊಳಗೆ ಹಾಕುತ್ತಿದ್ದರು. ಹೀಗೆ ೩-೪ ದಿವಸ ಹಾಕಿದರೆ ಕಣ್ಣು ಬೇನೆಯು ಹೋಗುತ್ತಿತ್ತು.

೧೮೯೬ನೇ ಇಸ್ವಿಯಲ್ಲಿ ನಾನು ಪುಣೆಯ ಡೆಕ್ಕನ್ ಕಾಲೇಜದಲ್ಲಿ ಇಂಟರ್ ಕ್ಲಾಸಿನಲ್ಲಿದ್ದೆನು. ಆಗ ತೀಕ್ಷ್ಣವಾದ ಹೊಟ್ಟೆನೋವು ಮೇಲಿಂದ ಮೇಲೆ ಬರಲಿಕ್ಕೆ ಆರಂಭವಾಯಿತು. ಊಟ ಮಾಡಿದ ಪದಾರ್ಥವು ಜೀರ್ಣವಾಗದೆ ಹೊಟ್ಟೆಯಲ್ಲಿ ಉಳಿದಿದ್ದು, ಯಾವುದಾದರೂ ಉಪಾಯದಿಂದ ಅದು ವಾಂತಿಯಾಗಿ ಹೊರಗೆ ಹೋದ ಮೇಲೆ ಆರಾಮವೆನಿಸುತ್ತಿತ್ತು. ಮುಂದೆ ಅಲ್ಲಿಯೇ ನನಗೆ ಒಮ್ಮೆ ಬಹಳ ಜ್ವರ ಬಂದವು. ಅದು ಎಂಥ ಜ್ವರವೆಂದು ನನಗೆ ಹೇಳಲಿಕ್ಕೆ ಬರುವಂತಿಲ್ಲ. ನನ್ನ ತಂದೆಯು ತನ್ನ ಊರಾದ ಗೋಕಾವಿಯನ್ನು ಬಿಟ್ಟು ಬೆಳಗಾವಿಯ ಹೊರತಾಗಿ ಎರಡನೇ ದೊಡ್ಡ ಪಟ್ಟಣವನ್ನೇ ನೋಡಿದ್ದಿಲ್ಲ. ನನಗೆ ಜ್ವರಬಂದ ಸುದ್ದಿಯು ತಿಳಿದ ಕೂಡಲೇ ಅವನು ನನ್ನನ್ನು ನೋಡಲಿಕ್ಕೆ ಪುಣೆಗೆ ಬಂದುಹೋದನು. ಬೇಸಿಗೆಯ ಸೂಟಿಯಲ್ಲಿ ನಾನು ಗೋಕಾವಿಗೆ ಬಂದಾಗ, ಅಲ್ಲಿಯ ಮುನಸೀಪಾಲಿಟಿಯ ದವಾಖಾನೆಯ ಡಾಕ್ಟರ ಕಡೆಯಿಂದ ಔಷಧ ತೆಗೆದುಕೊಂಡು ನೆಟ್ಟಗಾದೆನು. ಮುಂದೆ ನನ್ನ ಬಿ.ಎ. ಪರೀಕ್ಷೆಯು ಮುಗಿಯುವ ವರೆಗೆ ಹೆಚ್ಚಿಗೇನೂ ತ್ರಾಸಾಗಲಿಲ್ಲ. ಆಮೇಲೆ ಎಲ್ ಎಲ್.ಬಿ ಪರೀಕ್ಷೆಯ ಅಭ್ಯಾಸಕ್ಕಾಗಿ ನಾನು ಮುಂಬಯಿಗೆ ಹೋಗಬೇಕಾಯಿತು. ಆಗ ಅಜೀರ್ಣ ವಿಕಾರವು ನನ್ನಲ್ಲಿ ಮನೆಮಾಡಿಕೊಂಡಿದ್ದದ್ದು ಗೊತ್ತಾಯಿತು. ಒಂದೇ ಸವನೇ ಡಾಕ್ಟರರ ಉಪಚಾರವು ನಡೆಯಬೇಕಾಯಿತು. ಹಾಗೂ ಹೀಗೂ ನನ್ನ ಅಭ್ಯಾಸಕ್ರಮವು ಮುಗಿದು ಆಮೇಲೆ ನನ್ನ ವಕೀಲಿ ಉದ್ಯೋಗಕ್ಕಾಗಿ ಧಾರವಾಡದಲ್ಲಿ ಉಳಿದೆನು. ಅಲ್ಲಿ ಸಹ ನನ್ನ ಅಜೀರ್ಣ ವಿಕಾರವು ಕಡಿಮೆಯಾಗಲಿಲ್ಲ. ಅದರ ಪರಿಣಾಮವಾಗಿ ತಲೆಯ ಜಡತೆ ಮತ್ತು ಹೆಗಲು-ಕೈಗಳಲ್ಲಿ ನರಗಳ ನೋವು ಕಾಣಿಸಿಕೊಂಡಿತು.

೧೯೦೭ ನೇ ಇಸ್ವಿಯ ಜುಲೈ ತಿಂಗಳಿನಲ್ಲಿ ನಾನು ಸರಕಾರೀ ನೌಕರಿಯಲ್ಲಿ ಸೇರಿದೆನು. ಮೊದಲು ಕಾರಕೂನನಂತೆ ಕೆಲಸ ಮಾಡಹತ್ತಿ, ಮುಂದೆ ೧೯೧೦ನೇ ಇಸ್ವಿಯ ಜೂನದಲ್ಲಿ ನನಗೆ ನ್ಯಾಯಾಧೀಶನ ಕೆಲಸವು ದೊರೆಯಿತು. ಆಗ ನನಗೆ ಮೇಲೆ ಹೇಳಿದ ಎರಡೂ ವಿಕಾರಗಳು ಇದ್ದೇ ಇದ್ದವು. ಅವುಗಳಿಗಾಗಿ ಬೇರೆ ಬೇರೆ ಎಣ್ಣೆಗಳನ್ನು ಹಚ್ಚಿ ತಿಕ್ಕಿಸುವದೂ ಡಾಕ್ಟರರ ಉಪಚಾರವೂ ನಡೆದೇ ಇದ್ದವು. ನ್ಯಾಯಾಧೀಶನ ಕೆಲಸಕ್ಕೆ

ಮೇಂದುವು ಮತ್ತು ಬಲಗೈಯು ಚೆನ್ನಾಗಿ ಆರೋಗ್ಯದ ಸ್ಥಿತಿಯಲ್ಲಿ ಇರಬೇಕಾಗುತ್ತದೆಂಬುದನ್ನು ಹೇಳುವುದು ಅವಶ್ಯವಿಲ್ಲ. ಕೈಕೆಲಸವನ್ನು ಕಡಿಮೆ ಮಾಡುವ ಸಲುವಾಗಿ ಟಾಯಿಪ್‌ರಾಯಿಟರ್ ಉಪಯೋಗಿಸಹತ್ತಿದೆನು. ಅದಕ್ಕಾದರೂ ಬೆರಳುಗಳ ಮೇಲೆ ಶ್ರಮ ಬೀಳುತ್ತದೆ. ಕೋರ್ಟಿನಲ್ಲಿ ನಡೆಯುವ ಸಾಕ್ಷಿದಾರರ ಹೇಳಿಕೆಯ ಸಾರಾಂಶವನ್ನು ನ್ಯಾಯಾಧೀಶನು ಸ್ವತಃ ಇಂಗ್ಲೀಷದಲ್ಲಿ ಬರಕೊಳ್ಳಬೇಕಾಗುತ್ತದೆ. ಅವನು ಹೇಳಿದಂತೆ ಒಬ್ಬ ಕಾರಕೂನನು ಅವನಾಡುವ ಭಾಷೆಯಲ್ಲಿ ಬರಕೊಳ್ಳುವುದನ್ನು ಎಷ್ಟೋ ಸಾರಿ ನಿಲ್ಲಿಸುತ್ತಿದ್ದೆನು. ಆಮೇಲೆ ಕಾರಕೂನನು ಬರೆದುಕೊಂಡಿದ್ದರ ಆಧಾರದ ಮೇಲಿಂದ ಅದನ್ನು ಇಂಗ್ಲೀಷದಲ್ಲಿ ಬರೆಯಿಸುತ್ತಿದ್ದೆನು. ಠರಾವುಗಳನ್ನಂತೂ ನಾನು ಸ್ವತ: ನನ್ನ ಕೈಯಿಂದ ಬರಕೊಂಡೇ ಇಲ್ಲ. ನನ್ನ ಸ್ಥಿತಿಯು ಹೀಗಿದ್ದರೂ ನನ್ನ ನೌಕರಿಯ ಇಡೀ ಅವಧಿಯಲ್ಲಿ ಬರೇ ೧ ವರ್ಷ ೪ ೧/೨ ತಿಂಗಳ ರಜೆಯ ಮೇಲೆ ಹೋಗಿರುತ್ತೇನೆ. ಇದರಿಂದ ನನ್ನಷ್ಟಕ್ಕೆ ನನಗೇ ಆಶ್ಚರ್ಯವೆನಿಸುತ್ತದೆ.

ಜ್ಯೋತಿಷ್ಯದ ಮೇಲೆ ನನ್ನ ಸಂಪೂರ್ಣ ವಿಶ್ವಾಸವು ಇಲ್ಲದಿದ್ದರೂ ಅದನ್ನು ಹೇಳುವವರಿಂದ ಕೇಳುವ ಚಟವು ತುಸುಮಟ್ಟಿಗೆ ಇತ್ತು. ಧಾರವಾಡ ಕೋರ್ಟಿನಲ್ಲಿ ಒಬ್ಬ ಸಾರಸ್ವತ ಕಾರಕೂನನು ಇದನ್ನು ಹೇಳುತ್ತಿದ್ದನು. ಸ್ವಾಭಾವಿಕವಾಗಿ ಅವನು ನನ್ನ ಜಾತಕವನ್ನು ಬರೆದನು. ನಾನು ಸೇವಾನಿವೃತ್ತಿಯಾಗುವ ಕಾಲಕ್ಕೆ ನನ್ನ ದೇಹಸ್ಥಿತಿಯು ಬಹಳ ಕೆಟ್ಟಿತ್ತು. ಆ ಕಾರಕೂನನು ನನ್ನ ಮುಂದಿನ ೫ ವರ್ಷಗಳ ಜಾತಕವನ್ನು ಬರೆದು, ಅಷ್ಟಕ್ಕೆ ನನ್ನ ಆಯುಷ್ಯದ ಸಮಾಪ್ತಿಯೆಂದು ಸೂಚಿಸಿದನು. ನನಗಿಂತ ಶರೀರದಲ್ಲಿ ಹೆಚ್ಚು ಸ್ಥಿತಿಯಲ್ಲಿರುವ ಅಧಿಕಾರಿಗಳು ಸಹ ತಾವು ಮುಂದೆ ಜೀವಿಸುವ ಕಾಲವು ಅನಿಶ್ಚಿತವೆಂದು, ತಮ್ಮ ನಿವೃತ್ತ ವೇತನ (Pension)ವನ್ನು Commute ಮಾಡಿಸಿಕೊಳ್ಳುತ್ತಿದ್ದರು. ಅಂದರೆ ಅದರ ಕೆಲವು ಭಾಗದ ಒಟ್ಟು ಹಣವನ್ನು ಏಕ ಕಾಲಕ್ಕೆ ಪಡೆಯುತ್ತಿದ್ದರು. ನಾನಾದರೂ ಅದರಂತೆ ನನ್ನ ಪೆನ್‌ಶೆನ್‌ದ ಕೆಲವು ಭಾಗವನ್ನು Commute ಮಾಡಿಸಿಕೊಂಡೆನು. ನಿವೃತ್ತರಾದ ಮೇಲೆ ಸುಮಾರು ೧೦ ವರ್ಷ ಉಳಿದರೆ ಹೀಗೆ ಮಾಡುವುದರಿಂದ ಏನೂ ಹಾನಿಯಾಗುವುದಿಲ್ಲ. ಹೆಚ್ಚು ಕಾಲ ಬದುಕಿದರೆ ನಿಶ್ಚಯವಾಗಿ ಹಾನಿಯಾಗುತ್ತದೆ. ನಾನು ನಿವೃತ್ತನಾಗಿ ಈಗ ೨೧ ವರ್ಷಗಳಾದವು ಮತ್ತು ನಾನು ನಿವೃತ್ತನಾದಾಗ ಇದ್ದ ಶರೀರ ಸ್ಥಿತಿಗಿಂತ ಈಗ ಅದು ಚೆನ್ನಾಗಿದೆ. ಅಂದರೆ ನನ್ನಲ್ಲಿ ಶಕ್ತಿಯಿದೆಯೆಂಬ ಅರ್ಥವಲ್ಲ. ಮಳೆಗಾಲ ಮತ್ತು ಚಳಿಗಾಲದಲ್ಲಿ ನಾನು ಚಳಿಯ ಸಲುವಾಗಿ ನನ್ನ ಕೋಣೆಯನ್ನು ಬಿಟ್ಟು ಹೊರಗೆ ಹೋಗುವ ಹಾಗೆಯೇ ಇಲ್ಲ. ಹವೆಯು ಉಷ್ಣವಿದ್ದಾಗ ಸಹ ಸಮನಾದ ದಾರಿಯ ಮೇಲೆ ಸಾವಕಾಶವಾಗಿ ಒಂದು ಮೈಲು ಸಹ ಅಡ್ಡಾಡಿ ಬರಬೇಕಾದರೆ ಕಷ್ಟವಾಗುತ್ತಿತ್ತು. ಜೀವ ಬೇಸರವಾಗಿದೆಯೆಂದು ಹೇಳುವ ಪ್ರಸಂಗ ಬಂದಿದೆ. ಆದರೆ ಇನ್ನೂ ಎಷ್ಟು ದಿವಸ ಉಳಿಯುತ್ತೇನೆಂಬುದು, ಹುಟ್ಟಿಸಿದವನಿಗೇ ಗೊತ್ತು. ನನ್ನ ಇಡೀ ಆಯುಷ್ಯದ ಬಹಳ ಭಾಗವು ಕಷ್ಟದಲ್ಲಿಯೇ ಹೋಗಿದ್ದರೂ ಅಂಥ ಕಷ್ಟವನ್ನು ದಾಟುವುದೇ ಸುಖವೆಂದು ತಿಳಿದವರಿಗೆ, ಆ ಕಷ್ಟದ ನೋವು ಎನಿಸುವುದಿಲ್ಲ. ಇದಕ್ಕೆ ದೇವರ ದಯೆಯೇ ಮೂಲ ಕಾರಣ. ಅದು ನನ್ನ ಮೇಲೆ ಸಂಪೂರ್ಣವಿದೆಯೆಂದು ನನ್ನ ದೃಢವಾದ ನಂಬಿಕೆ. ಆ ನಂಬಿಕೆಯಿಂದಲೇ ನನ್ನ ಮುಂದಿನ ಕಾಲವು ಸರಿಯಾಗಿ ಹೋಗಲೆಂದು ಅವನನ್ನು ಪ್ರಾರ್ಥಿಸಿ, ಈ ಪ್ರಸ್ತಾವನೆಯನ್ನು ಮುಗಿಸುತ್ತೇನೆ.

❖❖

## ನನ್ನ ಕುಟುಂಬದ ಸಂಗತಿಗಳು ಮತ್ತು ವಂಶಾವಳಿಗಳು

ನನ್ನ ಮೂಲ ಊರು ಜಂಬುಕಂಡಿ ತಾಲೂಕಿನ ಗೋಟೆ ಎಂಬ ಗ್ರಾಮವು. ನಾನು ಅಲ್ಲಿ ಹುಟ್ಟಿದೆನೋ ಅಥವಾ ನನ್ನ ತಾಯಿ ಶಿವಗಂಗವ್ವನ ತವರೂರಾದ ರಬಕವಿಯಲ್ಲಿ ಹುಟ್ಟಿದೆನೋ ನನಗೆ ಗೊತ್ತಿಲ್ಲ. ನನ್ನ ತಂದೆಯ ಹೆಸರು ನಿಜಗುಣಪ್ಪ. ಅವನಿಗೆ ಕರಿಬಸಪ್ಪನೆಂಬ ಒಬ್ಬ ಅಣ್ಣನಿದ್ದನು. ಇವನ ಹೆಂಡತಿ ಬನಹಟ್ಟಿಯ ಅವಟೆ ಮನೆತನದ ಹೆಣ್ಣುಮಗಳು. ಅವನಿಗೆ ದಾನವ್ವ ಎಂಬ ಒಬ್ಬ ಮಗಳೂ ಸಿದ್ದರಾಮಪ್ಪ ಎಂಬ ಒಬ್ಬ ಮಗನೂ ಇದ್ದರು. ನಮ್ಮ ಮನೆತನದ ಅಡ್ಡಹೆಸರು ಹೇರಲಗಿ. ಈ ಗ್ರಾಮವು ಎಲ್ಲಿದೆ ಎಂಬುದು ನನಗೆ ಗೊತ್ತಿಲ್ಲ. ಗೋಟೆಯಿಂದ ಒಂದು ಶಾಖೆಯು ಸೊಲ್ಲಾಪುರ ತಾಲೂಕ ಒಳಸಂಗಕ್ಕೆ ಹೋಗಿ ನೆಲೆಸಿದ ಹಾಗೆ ತಿಳಿಯುತ್ತದೆ. ಈ ಶಾಖೆಯವರು ತಮಗೆ ಗೋಟೆಯವರೆಂದು ಕರೆದುಕೊಳ್ಳುತ್ತಾರೆ. ವಿಜಾಪುರದಲ್ಲಿ ಹೇರಲಗಿ ಎಂಬ ಹೆಸರಿನ ಎಷ್ಟೋ ಮನೆತನಗಳಿರುತ್ತವೆ. ಅವುಗಳಲ್ಲಿ ಬಹಳ ಮನೆತನಗಳು ಒಳ್ಳೇ ಸ್ಥಿತಿಯಲ್ಲಿರುತ್ತವೆ. ಶಿವಲಿಂಗಪ್ಪವನರ ಮನೆತನವು ಇವುಗಳಲ್ಲಿ ಬಹಳ ಪ್ರಸಿದ್ಧಿಗೆ ಬಂದಿರುತ್ತದೆ.

ನಾನು ಬಹಳ ಚಿಕ್ಕವನಿರುವಾಗಲೇ ನನ್ನ ತಂದೆಯು ತೀರಿಕೊಂಡನು. ನನ್ನ ತಾಯಿಗೂ ಆಕೆಯ ಭಾವ ಕರಿಬಸಪ್ಪನ ಹೆಂಡತಿಗೂ ಕೂಡಿ ಬರಲಿಲ್ಲವೆಂದು ತೋರುತ್ತದೆ. ಆದುದರಿಂದ ಆಕೆಯು ನನ್ನನ್ನು ಕರೆದುಕೊಂಡು ಗೋಕಾವಿಗೆ ಬಂದಳು. ಅಲ್ಲಿ ಗೌರವ್ವನೆಂಬ ಆಕೆಯ ಅಕ್ಕ ಇರುತ್ತಿದ್ದಳು. ಆಕೆ ಬಸಪ್ಪ ಹಾಲ(ಳ)ಭಾವಿ ಎಂಬವನ ಹೆಂಡತಿ. ಬಸಪ್ಪನ ಮೊದಲನೆ ಹೆಂಡತಿಯಿಂದ ಸಿದ್ದಪ್ಪನೆಂಬ ಒಬ್ಬ ಮಗನಿದ್ದನು. ಗೌರವ್ವನ ಹೊಟ್ಟೆಯಲ್ಲಿ ಮಕ್ಕಳಿದ್ದಿಲ್ಲ. ನನ್ನ ತಾಯಿಯು ಗೋಕಾವಿಗೆ ಬಂದ ಮೇಲೆ ಬಸಪ್ಪನ ಕೂಡ ಆಕೆಯ ಉಡಿಕೆಯಾಯಿತು. ಆಕೆಯಿಂದ ವೀರಪ್ಪ, ರೇವಪ್ಪ, ಸಿದ್ಧಲಿಂಗಪ್ಪ ಎಂಬ ಗಂಡುಮಕ್ಕಳೂ, ನೀಲವ್ವ ಎಂಬ ಹೆಣ್ಣುಮಗಳೂ ಹುಟ್ಟಿದರು.

ಬಸಪ್ಪನಿಗೆ ಶಿವಪ್ಪನೆಂಬ ಅಣ್ಣನೂ ಘಟಿಗೆಪ್ಪ ಮತ್ತು ಸಿದ್ಧರಾಮಪ್ಪ ಎಂಬ ತಮ್ಮಂದಿರೂ ಇದ್ದರು. ಶಿವಪ್ಪ ಮತ್ತು ಘಟಿಗೆಪ್ಪ ಇವರ ವಂಶದವರು ಈಗ ಯಾರೂ ಇಲ್ಲ. ಸಿದ್ಧರಾಮಪ್ಪನ ಮಗನು ಈಶ್ವರನು. ಹಾಲಭಾವಿಯವರ ಮತ್ತೆರಡು ಮನೆತನಗಳು ಗೋಕಾವಿಯಲ್ಲಿಯೂ, ಒಂದು ಮನೆತನವು ಸಂಬರಗಿಯಲ್ಲಿಯೂ ಮತ್ತು ಕೆಲವು ಮನೆತನಗಳು ನಿಪ್ಪಾಣಿ ಹತ್ತಿರ ಶಿರಗಾಂವಿಯಲ್ಲಿಯೂ ಇರುತ್ತವೆ.

ನನ್ನ ತಾಯಿಯ ತಂದೆ ಹೆಸರು ಹೋರ್ತೆಪ್ಪ ಕಾಮೋಜಿ. ಅವನಿಗೆ ೫ ಮಂದಿ ಹೆಣ್ಣುಮಕ್ಕಳೂ ಒಬ್ಬ ಗಂಡು ಮಗನೂ ಇದ್ದರು. ಅವರಲ್ಲಿ ಗುರುಬಸವ್ವ ಎಂಬುವಳು ರಬಕವಿಯ ಬಾಳಪ್ಪ ಗಿರಿಸಾಗರ ಎಂಬವನ ಮಲತಾಯಿ.

ಗೋಟೆಯ ನನ್ನ ಮನೆತನದ ಹಿರಿಯರು ಬರೆಯಿಸಿದ ಕೆಲವು ಕೈಬರಹ ಗ್ರಂಥಗಳು ನನ್ನ ಕಡೆಗೆ ಬಂದಿರುತ್ತವೆ. ಅವು ಯಾವುವೆಂದರೆ -

**೧. ಸಟೀಕ ಬಸವೇಶ್ವರ ವಚನಗಳು :**

ಬರೆಯಿಸಿದವನು ಹೇರಲಗಿ ದಾನಪ್ಪನ ಮಗ ಶಾಂತವೀರಪ್ಪನು. ಶಕೆ ೧೭೬೪ ಶುಭಕೃತ ನಾಮ ಸಂವತ್ಸರದ ಕಾರ್ತಿಕ ಬ। ೩ ರು ಗುರುವಾರದೊಳಗೆ ಸಮಾಪ್ತಿಯಾಯಿತು. ಬರೆದವರು ಪುರಾಣಿಕ ಶ್ರೇಷ್ಠಿ ಪ್ರಭುಸ್ವಾಮಿ.

**೨. ಪ್ರಭುಲಿಂಗ ಲೀಲೆ :**

ಗೋಟೆಯಲ್ಲಿರುವ ಹೇರಲಗಿ ನಾಗಲಿಕ ಬಸಪ್ಪನ ಪುತ್ರ ವೀರಪ್ಪನ ಮಗ ಮಡಿವಾಳಪ್ಪನು ಬರೆದಿದ್ದಾನೆ. ಬರೆದು ಮುಗಿದ ವ್ಯಯನಾಮ ಸಂವತ್ಸರದ (ಶಕೆ ೧೭೪೮, ಸನ್ ೧೮೨೬) ಆಶ್ವಿನ ಮಾಸದ ಭರಣಿ ನಕ್ಷತ್ರದಲ್ಲಿ ಗುರುವಾರ.

**೩. ರಾಘವಾಂಕನ ಕಾವ್ಯ :**

೨ನೇ ಗ್ರಂಥವನ್ನು ಬರೆದ ಮಡಿವಾಳಪ್ಪನೇ ಇದನ್ನು ಬರೆದಿದ್ದಾನೆ. ಬರೆದು ಮುಗಿಸಿದ ಮಿತಿ ಶಕೆ ೧೬೯೯ ಹೇಳವಿಂಬಿ ನಾಮ ಸಂವತ್ಸರ (ಸೂರ ಸನ್ ೧೧೮೬) ಜ್ಯೇಷ್ಠ ವದ್ಯ ೧೨ ಬುಧವಾರ ರೋಹಿಣೀ ನಕ್ಷತ್ರ.

**೪. ಶಂಕರದಾಸಿಮಯ್ಯನ ಪುರಾಣ :**


ಮೇಲೆ ಹೇಳಿದ ಮಡಿವಾಳಪ್ಪನೇ ಇದನ್ನು ಬರೆದಿದ್ದಾನೆ. ಮಿತಿ ಬರೆದಿಲ್ಲ.


**೫. ಜೈಮಿನಿ ಭಾರತ :**

ಪ್ರಭುಲಿಂಗಲೀಲೆಯನ್ನು ಬರೆದ ಮಡಿವಾಳಪ್ಪನೇ ಇದನ್ನು ಬರೆದಿದ್ದಾನೆ. ಬರೆದು ಮುಗಿದಿದ್ದು ಶಕೆ ೧೭೩೨ ಪ್ರಮಾ(ಥಿ) ಸಂವತ್ಸರ ವೈಶಾಖ ವದ್ಯ ೧೧ ಸೋಮವಾರ.


ರಾಜಮಹಾರಾಜರನ್ನು ಹೊಗಳು ಭಟ್ಟಂಗಿಗಳಿರುವಂತೆ ಕೆಲವು ಮನೆತನಗಳನ್ನು ಹೊಗಳುವ ಭಟ್ಟಂಗಿಗಳಿರುತ್ತಾರೆ. ಇವರಿಗೆ ಹೆಳವರೆಂದೂ ಕರೆಯುತ್ತಾರೆ. ನಮ್ಮ ಮನೆತನದ ಹೆಳವನು ಬಬಲೇಶ್ವರದ ಹತ್ತಿರ ಗುಣದಾಳದಲ್ಲಿರುವ ತಿಪ್ಪಣ್ಣನ ಮಗ ಫಕೀರಪ್ಪ. ಅವನ ಮಗ ಭೀಮಪ್ಪ ಎಂಬುವನು ದಿ. ೧೧.೮.೧೯೬೯ನೇ ದಿವಸ ನನ್ನ ಕಡೆಗೆ ಬಂದಿದ್ದನು. ಜಾತಿ ಹಂಡೆಕುರುಬರ ಹೆಳವರು. ತಾವು ಹೊಗಳುವ ಮನೆತನಗಳ ವಂಶಾವಳಿಯನ್ನು ಪುಸ್ತಕದಲ್ಲಿ ಬರೆದಿಟ್ಟುಕೊಂಡಿರುತ್ತಾರೆ. ಅದರಂತೆ ಭೀಮಪ್ಪನು ಬರೆದು ಇಟ್ಟುಕೊಂಡ ವಂಶಾವಳಿಯನ್ನು ಕೆಳಗೆ ಕೊಟ್ಟಿರುತ್ತದೆ.

ಶಾಲಬಿದರಿ ಗೌಡಕಿ ಮನೆತನದ ನೀಲಗಂಗವ್ವ ಭೀಮಾನದಿ ದಾಟಿ ಗೋಟೆಯಲ್ಲಿ ಬಂದು ಇರಹತ್ತಿದಳು. ಅಲ್ಲಿಂದ ಒಂದು ಶಾಖೆ ರಬಕವಿಗೆ, ಎರಡನೆಯದು ವಿಜಾಪುರಕ್ಕೆ, ಮೂರನೆಯದು ಒಳಸಂಗಕ್ಕೆ ಹೋಯಿತು. ರಬಕವಿ ಶಾಖೆಯವರಿಗೆ ದೊಡಕಲ್ಲು ಎನ್ನುವರು. ನನ್ನ ಅಜ್ಜ ಶಾಂತವೀರಪ್ಪನು ಬಸವೇಶ್ವರ ವಚನ ಗ್ರಂಥವನ್ನು ಬರೆಯಿಸಿದನು. ಅವನ ತಂದೆಯ ಹೆಸರು ದಾನಪ್ಪ ಅಂತ ಇದರಲ್ಲಿ ಬರೆದಿದೆ.






ಮೇಲಿನ ವಂಶಾವಳಿಯಲ್ಲಿ ಶಾಂತವೀರಪ್ಪನಿಂದ ಕೆಳಗಿನ ಸಂತತಿಯು ಸರಿಯಾದದ್ದಿರುತ್ತದೆ. ನನ್ನ ಅಜ್ಜ ಶಾಂತವೀರಪ್ಪನು ಬಸವೇಶ್ವರ ವಚನ ಗ್ರಂಥವನ್ನು ಬರೆಯಿಸಿದನು. ಅವನ ತಂದೆಯ ಹೆಸರು ದಾನಪ್ಪ ಅಂತ ಇದರಲ್ಲಿ ಬರೆದಿದೆ. ಕರಿಬಸಪ್ಪನು ನನ್ನ ದೊಡ್ಡಪ್ಪನೆಂದು ಈ ಮೊದಲೇ ಹೇಳಿದೆ. ನನ್ನ ಕಡೆಗಿರುವ ಕೈಬರಹ ಪ್ರತಿಗಳನ್ನು ಬರೆಯಿಸಿದ ಬಸಪ್ಪನ ಪುತ್ರನಾದ ವೀರಪ್ಪನ ಮಗ ಮಡಿವಾಳಪ್ಪನ ಹೆಸರು ಇರುವುದೇ ಇಲ್ಲ. ಒಳಸಂಗಕ್ಕೆ ಹೋದ ರಾಚಪ್ಪನ ಪೂರ್ವಜರ ಹೆಸರುಗಳು ಸಹ ಸರಿಯಾಗಿದ್ದಂತೆ ತೋರುವುದಿಲ್ಲ. ಈಗ ಅಲ್ಲಿರುವ ಮನೆತನದವನೊಬ್ಬ ಶಿವರುದ್ರಪ್ಪನೆಂಬುವನು ನನ್ನ ಕಡೆಗೆ ಬಂದಿದ್ದನು. ಅವನು ಹೇಳಿದ ವಂಶಾವಳಿಯು ಕೆಳಗಿನಂತಿರುತ್ತದೆ–



ಮೊದಲನೆ ಶಾಖೆಯಲ್ಲಿರುವ ರಾಚಪ್ಪನೆಂಬುವನು, ನಾನು ೧೯೧೪ನೇ ಇಸ್ವಿಯಲ್ಲಿ ಗುಡ್ಡಾಪುರಕ್ಕೆ ಹೋದ ಕಾಲಕ್ಕೆ ವಿಜಾಪುರದಲ್ಲಿ ಶಿವರುದ್ರಪ್ಪನ ಉಡಕಿ ಕಾರಣಕ್ಕೆ ಬಂದಿದ್ದನು.ವಿಜಾಪುರದಲ್ಲಿ ಕೆಲವು ಜನರನ್ನು ಕೂಡಿಕೊಂಡು ನನಗೆ ಭೇಟಿಯಾಗಿದ್ದನು. ಮತ್ತು ನನ್ನ ಮಗಳಾದ ಶಾರದೆಯ ಲಗ್ನದ ಕಾಲಕ್ಕೆ ಸಹ ಧಾರವಾಡಕ್ಕೆ ಬಂದಿದ್ದನು (೧೯೪೩).

ನನ್ನ ಸೋದರತ್ತೆಯಾದ ನೀಲವ್ವ ತೆಲಸಂಗ ಎಂಬುವಳು ವಿಜಾಪುರದಲ್ಲಿರುತ್ತಿದ್ದಳು. ಅವಳ ಮಗ ಮಲ್ಲಪ್ಪ, ಮೊಮ್ಮಗ ರೇವಣಸಿದ್ಧ. ಆಕೆಯ ಮಗಳು ಸಿದ್ದವ್ವ ಎಂಬುವಳು. ನಾನು ಗೋಟಿಯಲ್ಲಿ ಹುಟ್ಟಿರುವೆನೆಂದೂ ನಮ್ಮ ಬೆಡಗು ಕೊಳಕಿ ಎಂದೂ ಹೇಳುತ್ತಿದ್ದಳು.

ನಾನು ದೊಡ್ಡ ಡವಗಿ ಬರದ ಗೋಕುಲಾಷ್ಟಮಿಯ ದಿವಸ ಮಧ್ಯರಾತ್ರಿ ಹುಟ್ಟಿದೆನೆಂದು ನನ್ನ ತಾಯಿಯು ಹೇಳುತ್ತಿದ್ದರು. ನಾನು ತೀರ ಚಿಕ್ಕವನಿರುವಾಗಲೇ ನನ್ನ ತಂದೆಯು ತೀರಿಕೊಂಡನೆಂದು ಈ ಮೊದಲೇ ಹೇಳಿದೆ. ಆಗ ನನ್ನ ದೊಡ್ಡಪ್ಪನಾದ ಕರಿಬಸಪ್ಪನಿಗೆ ಇನ್ನೂ ಸಂತತಿ ಆಗಿದ್ದಿಲ್ಲ. ನಮ್ಮದೊಂದು ಚಿಕ್ಕತಕ್ಕಡಿ ಅಂಗಡಿ. ಊರೂ ಚಿಕ್ಕದು. ಮನೆಯ ತಲೆಬಾಗಿಲೊಳಗೆ ಹೋದ ಕೂಡಲೇ ಒಂದು ಹುಸಿ, ಅದರ ಬಲಗಡೆಗೆ ಒಂದು ದೊಡ್ಡ ಪಡಸಾಲೆ, ಅದರ ಬಲಭಾಗಕ್ಕೆ ಒಂದು ಕೋಣೆ, ಎಡಭಾಗಕ್ಕೆ ಅಡುಗೆ ಮನೆ. ತಲೆಬಾಗಿಲದ ಎಡಭಾಗಕ್ಕೆ ಅಂಗಡಿ. ಹೀಗಿದ್ದದ್ದು ನನಗೆ ನೆನಪಿದೆ. ಇದು ಸರಿಯಾಗಿದೆಯೋ ಎಂಬುದನ್ನು ನೋಡಲಿಕ್ಕೆ ನಾನು ವಿಜಾಪುರ ಕೋರ್ಟಿನಲ್ಲಿ ಕೆಲಸಮಾಡುತ್ತಿದ್ದಾಗ, ಸುಮಾರು ೧೯೨೮ ಇಸ್ವಿಯಲ್ಲಿ ಗೋಟೆಗೆ ಹೋಗಿದ್ದೆನು. ಅದರೊಳಗಾಗಿ, ನನ್ನ ದೊಡ್ಡಪ್ಪನ ಮಗನಾದ ಸಿದ್ಧರಾಮಪ್ಪನು ನಾನು ಆ ಊರು ಬಿಟ್ಟು ಎಷ್ಟೋ ವರುಷಗಳಾಗಿದ್ದರೂ ನನ್ನ ಸಮ್ಮತಿಯಿಂದ ಅದನ್ನು ಮಾರಿದ್ದನು. ನಾನು ಹೋದಾಗ ಪಡಸಾಲೆಯು ಮತ್ತು ಒಂದು ಕೋಣೆಯು ಮಾತ್ರ ಉಳಿದಿದ್ದು, ಉಳಿದ ಭಾಗವೆಲ್ಲ ಬಿದ್ದುಹೋಗಿತ್ತು.

ನನ್ನ ತಂದೆಯು ತೀರಿದ ಮೇಲೆ ನನ್ನ ತಾಯಿಯ ಎರಡನೆಯವರ ಹೊಲಗಳಲ್ಲಿ ಕಸ ತೆಗೆಯಲಿಕ್ಕೆ ಹೋಗುತ್ತಿದ್ದಳು. ಆಕೆಯು ಆಗ ನನಗೆ ಮಧ್ಯಾಹ್ನದಲ್ಲಿ ತಿನ್ನಲಿಕ್ಕೆ ರೊಟ್ಟಿಯ ಮೇಲೆ ಏನಾದರೂ ಹಚ್ಚಿ, ಪಡಸಾಲೆಯ ಒಂದು ಮಾಡಿನೊಳಗೆ ಇಟ್ಟು ಹೋಗುತ್ತಿದ್ದಳು. ನಾನು ಅದನ್ನು ತಿಂದು, ಅವಳು ಸಂಜೆಗೆ ಹೊಲದಿಂದ ಬರುವ ವರೆಗೆ ಆಡುತ್ತ ಕಾಲಕಳೆಯುತ್ತಿದ್ದೆನು. ಇದು ಸಹ ನನಗೆ ನೆನಪಿದೆ.

ನನ್ನ ತಾಯಿಯು ನನ್ನನ್ನು ಕರೆದುಕೊಂಡು ಗೋಕಾವಿಗೆ ಬಂದಾಗ್ಗೆ, ಅಲ್ಲಿಯ ಕುಟುಂಬದಲ್ಲಿ ಬಸಪ್ಪನ ಲಗ್ನದ ಹೆಂಡತಿಯಿಂದ ಸಿದ್ದಪ್ಪನೆಂಬ ಒಬ್ಬ ಮಗನೂ ಮತ್ತು ಎರಡನೇ ಹೆಂಡತಿಯಾದ ಗೌರಮ್ಮ ಇಷ್ಟು ಜನರು ಇರುತ್ತಿದ್ದರು. ಬಸಪ್ಪನು ನನ್ನನ್ನು ತನ್ನ ಮಗನೆಂದೇ ಭಾವಿಸಿ, ನನ್ನ ತಂದೆಯ ಹೆಸರಿನಲ್ಲಿ ತನ್ನ ಹೆಸರು ಹಚ್ಚಿಸಿ, ನನ್ನನ್ನು ಶಾಲೆಗೆ ಕಳಿಸಹತ್ತಿದನು. ಅವನು ತುಸು ದಿವಸಗಳ ಹಿಂದೆಯೇ ತನ್ನ ಅಣ್ಣತಮ್ಮಂದಿರಿಂದ ಬೇರೆಯಾಗಿ ಇರುವ ಸಲುವಾಗಿ, ಈಗಿರುವ ಮನೆಯನ್ನು (ಇದರ ಪಡಸಾಲೆಯ ಗೋಡೆಗಳನ್ನಷ್ಟು ಬಿಟ್ಟು ಉಳಿದದ್ದೆಲ್ಲ ಹೊಸದಾಗಿಯೇ ಕಟ್ಟಿರುತ್ತದೆ) ಕೊಂಡುಕೊಂಡಂತೆ ತಿಳಿಯುತ್ತದೆ. ಈ ಮನೆ ಇರುವುದು ಸೋಮವಾರ ಪೇಟೆಯಲ್ಲಿ. ಈ ಕುಟುಂಬದ ಉಪಜೀವನದ ಸಾಧನವು ಸಹ ಒಂದು ಕಿರಾಣಿ ಅಂಗಡಿಯೇ. ಇದು ರವಿವಾರ ಪೇಟೆಯಲ್ಲಿದೆ (ಇದೆಲ್ಲ ಬಿದ್ದು ಹೋಗಿ ಹೊಸದಾಗಿ ಕಟ್ಟಿಸಲ್ಪಟ್ಟಿರುತ್ತದೆ). ಇದರ ಉತ್ಪನ್ನದಿಂದ ಪ್ರಪಂಚದ ಖರ್ಚು ಆಗ ಸರಿಯಾಗಿ ಸಾಗುತ್ತಿತ್ತು. ನಾನು ಚುರುಕ ಬುದ್ಧಿಯುಳ್ಳನಿದ್ದು ಗೋಕಾವಿಯಲ್ಲಿ ಇಂಗ್ಲೀಷ ೩ನೆಯತ್ತೆಯ ವರೆಗೆ ನನ್ನ ಅಭ್ಯಾಸವು ಮುಗಿಯುವ ವರೆಗೆ, ಯಾವಾಗಲೂ ವರ್ಗದಲ್ಲಿ ನನ್ನ ನಂಬರು ೧ನೆಯದು ಇರುತ್ತಿತ್ತು. ಪ್ರಾಥಮಿಕ ಶಾಲೆಯಲ್ಲಿ ನನ್ನ ಅಭ್ಯಾಸವನ್ನು ಆರಂಭ ಮಾಡಿದಾಗ ವಾಚನದ ಪಾಠಗಳನ್ನು ನಾನು ಬಾಯಿಪಾಠ ಅನ್ನುತ್ತಿದ್ದೆನು. ಇದರಿಂದ ಸಹಜವಾಗಿ ನನ್ನ ಶಾಲಾಗುರುಗಳು (ಆಗ ಶಾಲಾ ಗುರುಗಳೆಲ್ಲ ಬ್ರಾಹ್ಮಣರೇ ಇರುತ್ತಿದ್ದರು) ನನ್ನ ಮೇಲೆ ಬಹಳ ಪ್ರೀತಿ ಮಾಡುತ್ತಿದ್ದರು. ನನ್ನ ಮನೆಯವರು ಮತ್ತು

ನೆರೆಹೊರೆಯವರು ಸಹ ನನ್ನ ಮೇಲೆ ಪ್ರೀತಿ ಮಾಡುವದು ಸಹಜವೇ. ಆಗ ಗೋಕಾವಿಯಲ್ಲಿ ಎರಡನೆ ಗ್ರೇಡ ಆಂಗ್ಲೋ ವರನ್ಯಾಕ್ಯುಲರ್ ಸ್ಕೂಲ ಎಂದರೆ ಇಂಗ್ಲೀಷ ೩ನೇ ಯತ್ತೆಯ ವರೆಗೆ ಇತ್ತು. ಮುನಸಿಪಾಲ್ಟಿಯಲ್ಲಿ ಲಿಂಗಾಯತ ಮೆಂಬರರ ಬಹುಮತವಿತ್ತು. ಅದರ ವೈಸ ಪ್ರೆಸಿಡೆಂಟ್ ಡಾ. ನಂದೀಮಠವರ ಅಜ್ಜಂದಿರಾದ ಬಸಲಿಂಗಯ್ಯನೆಂಬವರಿದ್ದರು. ಬೆಳಗಾವಿ ಜಿಲ್ಲೆ. ಆ ಭಾಗದ ಡೆಪ್ಯೂಟಿ ಕಲೆಕ್ಟರರು ರಾ. ಬ. ಅರಟಾಳ ರುದ್ರಗೌಡರಿದ್ದರು. ಮುನಸಿಪಾಲ್ಟಿಯವರು ಪ್ರಯತ್ನಪಟ್ಟು ಇಂಗ್ಲೀಷ ಶಾಲೆಯು ೫ನೇಯತ್ತೆಯ ವರೆಗೆ ಕಲಿಸುವ ಒಂದನೆಯ ಗ್ರೇಡ್ ಮಾಡಿದರು. ಇದರಿಂದ ನನ್ನ ೩ನೇಯತ್ತೆಯು ಮುಗಿದ ಮೇಲೆ, ಮುಂದೆ ೨ ವರ್ಷ ಅಲ್ಲಿಯೇ ಅಭ್ಯಾಸ ಮಾಡಲಿಕ್ಕೆ ಅನುಕೂಲವಾಯಿತು.

ಆರಂಭದಲ್ಲಿ ಅಂಗಡಿಯ ಉತ್ಪನ್ನವು ಮನೆತನದ ಖರ್ಚಿಗೆ ಸಾಕಾಗಿ ಹೆಚ್ಚಾಗುತ್ತಿದ್ದರೂ ನನ್ನ ತಾಯಿಯ ಹೊಟ್ಟೆಯಿಂದ ಮಕ್ಕಳು ಹುಟ್ಟಹತ್ತಿ ಮತ್ತು ನನ್ನ ಮಲ ಅಣ್ಣನಾದ ಸಿದ್ದಪ್ಪನ ಲಗ್ನವಾಗಿ, ಖರ್ಚಿಗೆ ಕಡಿಮೆ ಬೀಳಹತ್ತಿತ್ತು. ಇದನ್ನು ಪೂರೈಸಲಿಕ್ಕೆ ನನ್ನ ತಾಯಂದಿರು ಅಡವಿಗೆ ಹೋಗಿ ಉರುವಲಿನ ಪುರುವಟೆ ಮಾಡುವದು, ನೂಲು ರೇಶಿಮೆ ತೋಡುವುದು ಮತ್ತು ಕಡಲೆ ತೊಗರಿಗಳ ಬೇಳೆ ಮಾಡುವದು ಮೊದಲಾದ ಕೆಲಸಗಳನ್ನು ಮಾಡಬೇಕಾಯಿತು. ಮನೆಯಲ್ಲಿ ಮಾಡತಕ್ಕ ಕೆಲಸಗಳಲ್ಲಿ ನಾನು ಸಹ ಶಕ್ಯವಿದ್ದ ಮಟ್ಟಿಗೆ ನೆರವಾಗುತ್ತಿದ್ದೆನು. ಲಗ್ನವಾದ ಕೆಲ ದಿವಸಗಳ ಮೇಲೆ ಅವನಿಗೂ ಅವನ ಹೆಂಡತಿಗೂ ಮತ್ತು ನನ್ನ ತಾಯಂದಿರಿಗೂ ಸರಿಬೀಳಲಿಲ್ಲವಾದ್ದರಿಂದ ಅವನು ಬೇರೆ ಇರಹತ್ತಿ, ತಾನೊಂದು ಕಿರಾಣಿ ಅಂಗಡಿಯನ್ನು ಹಾಕಿ ಜೀವಮಾನವನ್ನು ಸಾಗಿಸಹತ್ತಿದ್ದನು. ಹಿಂದೂ ಜನರಲ್ಲಿ ತಂದೆ ತಾಯಿಗಳು ತಮ್ಮ ಮಕ್ಕಳ ಲಗ್ನಮಾಡಬೇಕೆಂದು–ಈಗಿನ ಕಾಲದಲ್ಲಿ ಸಹ ಕೆಲವರು ತಮ್ಮ ಕರ್ತವ್ಯವೆಂದು–ತಿಳಿಯುತ್ತಿರುವಾಗ ೫೦ ವರ್ಷಗಳ ಹಿಂದೆ ಎಲ್ಲರಲ್ಲಿ ಈ ಕಲ್ಪನೆಯು ಬೇರೂರಿತ್ತೆಂಬುದನ್ನು ಬೇರೆ ಹೇಳಲಿಕ್ಕೆ ಬೇಡ. ಅದು ಸಹ ಗಂಡು ಹೆಣ್ಣು ಮಕ್ಕಳು ಇನ್ನೂ ಚಿಕ್ಕವರಿರುವಾಗಲೇ ಬಹುತರವಾಗಿ ನಡೆಯುತ್ತಿತ್ತು. ಈ ರೂಢಿಯು ಶ್ರೀಮಂತರಿಂದ ತೀರ ಬಡವರ ತನಕ ಸಹ ಹಬ್ಬಿತ್ತು. ನಾನು ಇನ್ನೂ ಇಂಗ್ಲೀಷ ೫ ನೆಯತ್ತೆಯಲ್ಲಿ ಅಭ್ಯಾಸಮಾಡುತ್ತಿದ್ದು ನನ್ನ ವಯಸ್ಸು ಸುಮಾರು ೧೪ ಇತ್ತು. ಈಗ ಅದೇ ಊರಲ್ಲಿ ಕಾಗಲಿ ಚೆನ್ನಬಸಪ್ಪನೆಂಬ ಗೃಹಸ್ಥನಿಗೆ ಸುಮಾರು ೧೮ ಜನ ಮಕ್ಕಳಾಗಿದ್ದು, ಅವುಗಳಲ್ಲಿ ಇಬ್ಬರು ಹೆಣ್ಣುಮಕ್ಕಳು ಮಾತ್ರ ಜೀವಂತ ಉಳಿದಿದ್ದರು. ಹಿರಿಯ ಮಗಳು ಗಂಗಾ ಎಂಬಾಕೆಗೆ ೧೨ ವರ್ಷ. ಆಕೆಯ ತಂಗಿ ಗೌರವ್ವನಿಗೆ ೧೦ ವರ್ಷ. ಇಬ್ಬರೂ ಚಲುವೆಯರಿದ್ದರೂ ಹಿರಿಯಾಕೆ ಹೆಚ್ಚು ಚೆಲುವೆ. ಆಕೆಯನ್ನು ಲಗ್ನವಾಗಬೇಕೆಂದು ಅದೇ ಊರ ಪ್ರಮುಖ ಮನೆತನದ ಹಿರಿಯ ಮನುಷ್ಯನು ಪ್ರಯತ್ನಪಡುತ್ತಿದ್ದನು. ಅವನು ಒಳ್ಳೇ ಸ್ಥಿತಿವಂತನೂ ಇದ್ದನು. ಆದರೆ ಚೆನ್ನಬಸಪ್ಪನು ಮತ್ತು ಅವನ ಮನೆಯವರು ಮಕ್ಕಳು ಸಹಿತ ಇದಕ್ಕೆ ಒಪ್ಪದೆ, ಹಿರಿಯ ಮಗಳನ್ನು ನನಗೇ ಕೊಡಬೇಕೆಂದು ಗೊತ್ತಾಗಿ ಲಗ್ನವು ಆಗಿ ಹೋಯಿತು. ಕಿರಿಯ ಮಗಳ ಲಗ್ನವೂ ಅದೇ ಕಾಲಕ್ಕೆ ನನ್ನ ದೊಡ್ಡಪ್ಪನ ಮಗನಾದ ಮಹದೇವಪ್ಪನ ಕೂಡ ಆಯಿತು.

ನನ್ನ ಇಂಗ್ಲೀಷ ೫ನೆಯತ್ತೆಯ ಅಭ್ಯಾಸವು ಮುಗಿದ ಮೇಲೆ, ಅದನ್ನು ಮುಂದೆ ನಡೆಸಲಿಕ್ಕೆ ಬೆಳಗಾವಿಗೆ ಹೋಗುವ ಪ್ರಸಂಗ ಬಂತು. ಲಿಂಗಾಯತರು ಮುಖ್ಯವಾಗಿ ವ್ಯಾಪಾರ ಮತ್ತು ಒಕ್ಕಲುತನದಲ್ಲಿ ಉದ್ಯೋಗಗಳನ್ನು ಮಾಡುವವರಿದ್ದು, ಶಿಕ್ಷಣದಲ್ಲಿ ಆಗ ಬಹಳ ಹಿಂದುಳಿದಿದ್ದರು. ತಮ್ಮ ಊರು ಬಿಟ್ಟು ಎರಡನೆ ಊರಿಗೆ ಶಿಕ್ಷಣ ಸಲುವಾಗಿ ಹೋಗುವ ರೂಢಿಯು ಆಗ ಇದ್ದಿಲ್ಲೆಂದರೂ ಸಲ್ಲುವದು. ನನ್ನ ಮನೆತನದ ಸಾಂಪತ್ತಿಕ ಸ್ಥಿತಿಯು ವಿಶೇಷ ಚನ್ನಾಗಿಲ್ಲದಿದ್ದರೂ ನನ್ನ ಅಭ್ಯಾಸದ ಪ್ರಗತಿಯನ್ನು ನೋಡಿ, ಮುಂದಿನ ಅಭ್ಯಾಸಕ್ಕೆ ನನ್ನನ್ನು ಬೆಳಗಾವಿಗೆ ಕಳಿಸಬೇಕೆಂದು ನನ್ನ ತಂದೆಯು ನಿಶ್ಚಯಿಸಿದನು. ಗೋಕಾವಿಯ ದಕ್ಷಿಣ ಮತ್ತು ಪಶ್ಚಿಮಕ್ಕೆ ಸಾಧಾರಣ ದೊಡ್ಡ ಗುಡ್ಡಗಳ ಸಾಲುಗಳಿದ್ದು, ಅಲ್ಲಿ ಜೇನು ಹುಟ್ಟುಗಳು ದೊರೆಯುವುದು ಬಹಳ. ಅದರ ಮೇಣವನ್ನು ಮಾರುವುದಕ್ಕೆ

ಸರಕಾರದಿಂದ ಪರವಾನಿಗೆ(licence) ಪಡೆಯಬೇಕಾಗುತ್ತದೆ. ಈ ಪರವಾನಿಗೆಯನ್ನು ಪಡೆಯಲಿಕ್ಕೆ ಬೆಳಗಾವಿಗೆ ಹೋಗಬೇಕಾಗುತ್ತದೆ. ಇದನ್ನು ನಮ್ಮ ತಂದೆಯೇ ಪ್ರತಿವರ್ಷ ಬೆಳಗಾವಿಗೆ ಹೋಗಿ ಪಡೆಯುತ್ತಿದ್ದನು. ಈಗ ನನ್ನನ್ನು ಕರೆದುಕೊಂಡು ಹೋಗಿ ಅಲ್ಲಿ ಇಡುವ ಪ್ರಸಂಗ ಬಂತು. ಆಗ ಅಂದರೆ ೧೮೭೨ನೇ ಇಸ್ವಿ ಸುಮಾರಿಗೆ ಆ ಭಾಗದಲ್ಲಿ ರೇಲ್ವೆ ರಸ್ತೆಯು ತುಸು ದಿವಸಗಳ ಹಿಂದೆಯೇ ಪೂರ್ಣವಾಗಿತ್ತು. ಬೆಳಗಾವಿಗೆ ಹೋಗಬೇಕಾದರೆ ಈಗ ಗೋಕಾಕ ರೋಡ ಎಂದು ಹೆಸರಿರುವ ಸ್ಟೇಷನಕ್ಕೆ ಆಗ ಧೂಪದಾಳ ಎಂದು ಹೆಸರಿತ್ತು. ಅದು ಗೋಕಾವಿಯಿಂದ ೬ ಮೈಲು ದೂರ. ಘಟಪ್ರಭಾ ತಡಸಲವು ಗೋಕಾವಿಯಿಂದ ೩ ಮೈಲು ದೂರ. ಅಲ್ಲಿ ನೂಲಿನ ಗಿರಣಿಯು ಇನ್ನೂ ಸ್ಥಾಪನೆಯಾಗಿದ್ದಿಲ್ಲ. ತಡಸಲದ ವರೆಗೆ ಸುಮಾರು ಅರ್ಧದಾರಿ ಗುಡ್ಡದ ಕಣಿವೆ ಹತ್ತಿ ಹೋಗಬೇಕಾಗುತ್ತಿತ್ತು. ಸ್ಟೇಶನದ ವರೆಗೆ ಕಾಲುದಾರಿಯೇ. ನನಗೆ ಬೇಕಾಗುವ ಅರಿವೆ ಅಂಚಡಿ ಹಾಸಿಗೆ ಮುಂತಾದ್ದನ್ನು ಒಂದು ದೊಡ್ಡ ಪಾಕೀಟಿನಲ್ಲಿ ಹಾಕಿ, ಅದನ್ನು ನನ್ನ ತಂದೆಯು ಸ್ವಲ್ಪ ದಾರಿ ಮತ್ತು ನಾನು ಸ್ವಲ್ಪ ದಾರಿ ಹೊತ್ತುಕೊಂಡು ಸ್ಟೇಶನಕ್ಕೆ ಹೋದೆವು. ನಾನು ರೇಲ್ವೆಯನ್ನು ನೋಡಿದ್ದು ಅದೇ ಮೊದಲನೇ ಸಾರಿ.

ನನ್ನ ತಂದೆಯು ಬೆಳಗಾವಿಗೆ ಹೋದಾಗ, ಬೆಳಗಾವಿಯಿಂದ ಶಹಪೂರಿಗೆ ಹೋಗುವ ದಾರಿಯ ಮೇಲೆ ಇರುವ ರೇಲ್ವೆ ಕ್ರಾಸಿನ ಹತ್ತಿರ ಒಂದು ಮಠದಲ್ಲಿ ಇಳಕೊಳ್ಳುತ್ತಿದ್ದನು. ಅಲ್ಲಿ ಇನ್ನೊಂದಿಬ್ಬರ ಹೊರತು ಹೆಚ್ಚು ಜನರಿಗೆ ಇಳಕೊಳ್ಳುವ ಅನುಕೂಲ ಇದ್ದಿಲ್ಲ. ನನ್ನನ್ನು ಆ ಮಠದಲ್ಲಿ ಇಡುವ ವ್ಯವಸ್ಥೆ ಮಾಡಿದನು. ಸರದಾರ ಹೈಸ್ಕೂಲಿನಲ್ಲಿ ೬ನೇ ಇಯತ್ತೆಗೆ ನನ್ನ ಹೆಸರು ಹಚ್ಚಿಸಿ, ನಾನು ಮೊದಲನೆ ದಿವಸ ಸಾಲೆಗೆ ಹೋದಾಗ ನನ್ನ ತಂದೆಯು ನನ್ನ ಸಂಗಡ ಬಂದನು. ನಾನು ವರ್ಗದಲ್ಲಿ ಕುಳಿತ ಮೇಲೆ ನನ್ನ ತಂದೆಯು ತಿರುಗಿ ಊರಿಗೆ ಹೋಗಲಿಕ್ಕೆ ಹೊರಟಾಗ, ವರ್ಗದ ಕೋಣೆಯ ಹೊರಗಿರುವ ವರಾಂಡದಲ್ಲಿ ನಿಂತು ಕಣ್ಣೀರ ಸುರಿಸಹತ್ತಿದನು. ಅದನ್ನು ನೋಡಿ ನಮ್ಮ ವರ್ಗದ ಶಿಕ್ಷಕರಾದ ಶ್ರೀ ಪೋತದಾರ ಎಂಬುವರು ಅವನ ಹತ್ತಿರ ಹೋಗಿ ಅವನನ್ನು ಸಮಾಧಾನಪಡಿಸಿ ಕಳುಹಿಸಿ, ವರ್ಗದೊಳಗೆ ಬಂದು "An old man. He has never parted with his son" ಎಂದು ಅಂದು, ಮುಂದೆ ತಮ್ಮ ಪಾಠವನ್ನು ಆರಂಭಮಾಡಿದರು. ಗೋಕಾವಿಯ ಶಾಲೆಯ ಅಭ್ಯಾಸಕ್ರಮದ ಮಟ್ಟವು ಬೆಳಗಾವಿ ಶಾಲೆಯ ಅಭ್ಯಾಸಕ್ರಮದ ಮಟ್ಟಕ್ಕೆ ಬರುವದಿಲ್ಲವೆಂದು ಕೂಡಲೇ ತಿಳಿದು ಬಂತು. ವರ್ಗದಲ್ಲಿಯ ವಿದ್ಯಾರ್ಥಿಗಳಲ್ಲಿ ನನ್ನ ನಂಬರ ಬಹುಶಃ ಮಧ್ಯದಲ್ಲಿರುತ್ತಿತ್ತು. ಆಗ ಮ್ಯಾಟ್ರಿಕ್ ಪರೀಕ್ಷೆಗೆ ಕೂಡ್ರಬೇಕಾದರೆ ಮುಂಬಯಿಗೆ ಹೋಗಬೇಕಾಗುತ್ತಿತ್ತು. ನಾನು ಮೊದಲನೇ ಸಾರೆ ಆ ಪರೀಕ್ಷೆಗೆ ಕೂತಾಗ (೧೮೮೩) ಅದರಲ್ಲಿ ತೇರ್ಗಡೆ ಹೊಂದಲಿಲ್ಲ. ಮರುವರುಷ ಮೊದಲಿನ ಅರ್ಧ ಕಾಲ ಮನೆಯಲ್ಲಿಯೇ ಅಭ್ಯಾಸ ಮಾಡಿ, ಆಮೇಲೆ ಪುನಃ ಶಾಲೆಗೆ ಹೋದೆನು. ಆ ವರುಷ ಬೆಳಗಾವಿಯು ಒಂದು ಪರೀಕ್ಷೆಯ ಕೇಂದ್ರ ಮಾಡಲ್ಪಟ್ಟಿತ್ತು. ಆ ಸಾರೆ ನನ್ನ ಅಭ್ಯಾಸವು ಚನ್ನಾಗಿ ಆಗಿದ್ದರಿಂದ, ಪರೀಕ್ಷೆಯಲ್ಲಿ ಸಹಜವಾಗಿ ತೇರ್ಗಡೆ ಹೊಂದಿದೆನು. ಈ ಅವಧಿಯೊಳಗಾಗಿ ನನ್ನ ಹೆಂಡತಿಯು ಋತುಮತಿಯಾಗಿದ್ದು ನನ್ನ ಶೋಭನ ಕಾರ್ಯವು ಸಹ ಮುಗಿದಿತ್ತು.

ಮುಂದೆ ಕಾಲೇಜದ ಅಭ್ಯಾಸಕ್ಕೆ ಪುಣೆಗೆ ಹೋಗುವ ಪ್ರಸಂಗ ಬಂತು. ಅಲ್ಲಿಯ ವರೆಗೆ ಬೆಳಗಾವಿಯ ನನ್ನ ವೆಚ್ಚವನ್ನು ನನ್ನ ತಂದೆಯು ಕಷ್ಟಪಟ್ಟು ಸಹಿಸಿದನು. ಮುಂದಿನ ವೆಚ್ಚವನ್ನು ಕೈಕೊಳ್ಳುವುದು ಅವನಿಗೆ ಸಾಧ್ಯವಿದ್ದಿಲ್ಲ. ಅಷ್ಟರಲ್ಲಿ ಲಿಂಗಾಯತ ಸಮಾಜದ ಸುದೈವದಿಂದ ಅದರ ಮುಖಂಡರಾದ ಶ್ರೀ ಗಿಲಗಂಚಿ ಗುರುಸಿದ್ದಪ್ಪನವರು ಮತ್ತು ರಾ. ಬ. ಅರಟಾಳ ರುದ್ರಗೌಡರು ಧಾರವಾಡದಲ್ಲಿ "ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ"ಯನ್ನು ಸ್ಥಾಪಿಸಿ ಒಂದು ಫಂಡನ್ನು ಕೂಡಿಸಿದ್ದರು. ಅದರ ಸಹಾಯದಿಂದ ಶ್ರೀ ಕಿತ್ತೂರ ರೇವಣಸಿದ್ದಪ್ಪನವರು

ಮತ್ತು ಶ್ರೀ ಪಾಟೀಲ ಚನ್ನವೀರಗೌಡರು ಎಂಜಿನೀಯರಿಂಗ (L.I.C.) ಪರೀಕ್ಷೆಯಲ್ಲಿ ಮತ್ತು ಶ್ರೀ ಸತ್ಯಪ್ಪ ಘಾಳಿ ಎಂಬುವರು ಬಿ.ಎ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ, ಸರಕಾರಿ ನೌಕರಿಯಲ್ಲಿ ಸೇರಿದ್ದರು. ನಾನು ಪುಣೆಗೆ ಹೋಗುವ ಸಂಧಿಯಲ್ಲಿ ಉಚ್ಚ ಶಿಕ್ಷಣದ ಸಲುವಾಗಿ ಈ ಫಂಡಿನಿಂದ ಸಹಾಯವು ಸಹಜವಾಗಿ ದೊರೆಯುವಂತಿದ್ದು, ನನಗೂ ದೊರೆಯಿತು. ನನ್ನ ಅಭ್ಯಾಸವನ್ನು ಅಲ್ಲಿಯ ಡೆಕ್ಕನ್ ಕಾಲೇಜದಲ್ಲಿ ಸಾಗಿಸಿದೆನು. ಈಕಾಲೇಜದಲ್ಲಿ ೪ ಲಿಂಗಾಯತ ವಿದ್ಯಾರ್ಥಿಗಳು ನನ್ನೊಡನೆ ಸೇರಿದರು. ಇಲ್ಲಿ ನನ್ನ ಅಭ್ಯಾಸವು ವಿಶೇಷ ಆಯಾಸವಿಲ್ಲದೆ ನಡೆಯಿತು. ಇಂಟರ ಕ್ಲಾಸಿನಲ್ಲಿದ್ದಾಗ ನನಗೆ ಕೆಲವು ತಿಂಗಳು ಸರಕಾರಿ ಸ್ಕಾಲರ್ ಶಿಪ್ ಸಹ ದೊರೆಯಿತು. ಇಲ್ಲಿದ್ದಾಗ ನನ್ನ ಪ್ರಕೃತಿಯು ಕೆಡಲಿಕ್ಕೆ ಆರಂಭವಾಯಿತೆಂದು ಈ ಮೊದಲೇ ತಿಳಿಸಿದ್ದೇನೆ.

ಪ್ಲೇಗ ಬೇನೆಯು ಪುಣೆಯಲ್ಲಿ ೧೮೯೬ನೇ ಇಸ್ವಿಯಲ್ಲಿ ಆರಂಭವಾಯಿತು. ನಾನು ೧೮೯೮ನೇ ಇಸ್ವಿಯ ಅಂತ್ಯದಲ್ಲಿ ನನ್ನ ಬಿ.ಎ. ಪರೀಕ್ಷೆಯನ್ನು ಮುಗಿಸಿಕೊಂಡು ಗೋಕಾವಿಗೆ ಬರುವಷ್ಟರಲ್ಲಿ ಪ್ಲೇಗ ಬೇನೆಯು ಅಲ್ಲಿಯೂ ಹಬ್ಬಿ, ಕೆಲವು ಜನರು ಊರಹೊರಗೆ ಜೋಪಡಿಗಳನ್ನು ಕಟ್ಟಿ, ಅಲ್ಲಿ ಇರಲಿಕ್ಕೆ ಹತ್ತಿದರು. ನನ್ನ ಮನೆಯವರು ಇನ್ನೂ ಊರಲ್ಲಿಯೇ ಇದ್ದರು. ಆಗ ನನಗೊಂದು ಹೆಣ್ಣು ಕೂಸು ಹುಟ್ಟಿ ಸುಮಾರು ೩ ತಿಂಗಳಾಗಿದ್ದವು. ನಾನು ಗೋಕಾವಿಗೆ ಹೋದ ಕೂಡಲೇ ಊರಿಂದ ಸುಮಾರು ೧ ಮೈಲು ದೂರ ಉತ್ತರಕ್ಕೆ ಹಳ್ಳದ ದಂಡೆಯ ಮೇಲೆ ಒಂದು ಜೋಪಡಿಯನ್ನು ಹಾಕಲಾಯಿತು. ಅದರ ಜೋಡಿಗೆ ಅಲ್ಲೆ ೩.೪ ಜೋಪಡಿಗಳು ಮಾತ್ರ ಇದ್ದವು. ನಮ್ಮ ಜೋಪಡಿಯ ತಯಾರಾದ ಮೇಲೆ ನನ್ನ ಹೆಂಡತಿಗೆ ಪ್ಲೇಗ ಬೇನೆಯು ತಗಲಿತು. ಕೂಡಲೇ ಆಕೆಯನ್ನು ನದಿಯ ದಂಡೆಯ ಮೇಲಿರುವ ನನ್ನ ಅಣ್ಣತಮ್ಮಂದಿರ ಜೋಪಡಿಗೆ ಕಳಿಸಿಕೊಟ್ಟಿತು. ಆಮೇಲೆ ೧-೨ ದಿವಸಗಳಲ್ಲಿ ನನ್ನ ಹೆಂಡತಿಯು ತೀರಿಕೊಂಡಳು. ಆಮೇಲೆ ನಾನು ರಬಕವಿಗೆ ಹೋದೆನು.

ನನ್ನ ತಾಯಿಯ ಹಿರೇ ಅಕ್ಕ ಸೀಮಂತೆವ್ವ ಎಂಬಾಕೆಯನ್ನು ರಬಕವಿಯಲ್ಲಿಯೇ ಹತ್ತಿಕಾಳ ಮನೆತನದ ಹಿರಿಯನಾದ ವೀರಪ್ಪನೆಂಬುವವನಿಗೆ ಕೊಟ್ಟಿತ್ತು. ನನ್ನ ತಾಯಿಯ ತಂಗಿಯಾದ ಗುರುಬಸವ್ವ ಎಂಬಾಕೆಯನ್ನು ಅಲ್ಲಿಯೇ ಗಿರಿಸಾಗರ ವಿರೂಪಾಕ್ಷನೆಂಬುವವನಿಗೆ ಕೊಟ್ಟಿತ್ತು. ಕಡೆಯ ತಂಗಿಯಾದ ಗಂಗವ್ವ ಎಂಬುವಳನ್ನು ನಿಪ್ಪಾಣಿಯಲ್ಲಿ ಸಾತಾರೆಯವರ ಮನೆತನಕ್ಕೆ ಕೊಟ್ಟಿತ್ತು. ಇವರೆಲ್ಲರ ತವರುಮನೆಯು ರಬಕವಿಯೆಂದು ಈ ಮೊದಲೇ ತಿಳಿಸಿದೆ. ನಾನು ಚಿಕ್ಕವನಿರುವಾಗ ನನ್ನ ತಾಯಿಯ ಕೂಡ ಕೆಲವು ಸಾರೆ ರಬಕವಿಗೆ ಹೋದದ್ದು ನೆನಪಿನಲ್ಲಿದೆ. ಹತ್ತಿಕಾಳ ಮತ್ತು ಗಿರಿಸಾಗರ ಮನೆತನದವರು ಸ್ಥಿತಿವಂತರು. ರಬಕವಿಯು ಸಾಂಗಲಿ ಸಂಸ್ಥಾನದ ತೇರದಾಳ ತಾಲೂಕಿನ ಒಂದು ಗ್ರಾಮವು. ಅದರ ಸಮೀಪಕ್ಕಿರುವ ಬನಹಟ್ಟಿಯು ಜಂಬುಕಂಡಿ ಸಂಸ್ಥಾನದ ಒಂದು ಗ್ರಾಮವು. ಈ ಎರಡೂ ಗ್ರಾಮಗಳಲ್ಲಿ ಬಣಗಾರರ ಮತ್ತು ನೇಕಾರರ ಸಂಖ್ಯೆಯೇ ಹೆಚ್ಚು. ಇಲ್ಲಿ ವ್ಯಾಪಾರವು ಚೆನ್ನಾಗಿ ನಡೆಯುತ್ತಿದ್ದು, ಈ ಗ್ರಾಮಗಳು ಊರ್ಜಿತ ಸ್ಥಿತಿಯಲ್ಲಿದ್ದವು. ಇಲ್ಲಿಯ ವ್ಯಾಪಾರಸ್ಥರು ಸುಶಿಕ್ಷಿತರಿದ್ದು, ವಾಚನಾಭಿರುಚಿಯುಳ್ಳವರು. ಹತ್ತಿಕಾಳ ಈರಪ್ಪನ ತಮ್ಮನಾದ ಕೊಟ್ರಪ್ಪ ಮತ್ತು ರಾ.ಬ. ಹಳಕಟ್ಟಿಯವರ ಮಾವಂದಿರಾದ ತಮ್ಮಣ್ಣಪ್ಪ ಚಿಕ್ಕೋಡಿ ಇವರಿಬ್ಬರೂ ಕನ್ನಡ ಟ್ರೇನಿಂಗ ಕಾಲೇಜದಲ್ಲಿ ಅಭ್ಯಾಸ ಮಾಡಿದವರಿದ್ದು, ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರಾಗಿದ್ದರು. ಆದರೆ ತಮ್ಮ ಉದ್ಯೋಗ ವ್ಯಾಪಾರಗಳಲ್ಲಿ ತೊಡಗುವುದೇ ಲಾಭದಾಯಕವೆಂದು ಬಗೆದು ತಮ್ಮ ನೌಕರಿಗೆ ರಾಜಿನಾಮೆ ಕೊಟ್ಟು, ವ್ಯಾಪಾರ ಉದ್ಯೋಗಗಳಲ್ಲಿ ತೊಡಗಿದ್ದರು. ಇಂಥವರದೊಂದು ಗುಂಪೇ ರಬಕವಿಯಲ್ಲಿತ್ತು. ಅದರಲ್ಲಿ ದರಬಾರ ಎಂಬ ಮನೆತನದ ಸರಾಫೀ (Banking) ಅಂಗಡಿಯು ವಹಿವಾಟದಾರ ಪಾಂಡಪ್ಪ ನಾಯಕ, ಬಸಲಿಂಗಪ್ಪ ಶೀಲವಂತ, ಆನೆಕಿಂಡಿ ಬಾಳಪ್ಪ ನಾಯಕ ಮುಂತಾದವರು ಇದ್ದರು. ಇವರ ಹಿರಿಯರು ತಮ್ಮಣ್ಣಪ್ಪ ಚಿಕ್ಕೋಡಿಯವರು. ಇವರು ಕೇಸರಿ, ಕಾಳ ಮುಂತಾದ ಪುಣೆಯ ವರ್ತಮಾನ ಪತ್ರಗಳನ್ನು ತರಿಸಿ ಓದುತ್ತಿದ್ದರು. ಇವರ ಚಳುವಳಿಯಿಂದಲೇ ರಬಕವಿ

ಮತ್ತು ಬನಹಟ್ಟಿ ಗ್ರಾಮಗಳಲ್ಲಿ ಕನ್ನಡ ಶಾಲೆಗಳುಂಟಾಗಿದ್ದವು. ಇವರು ತರುಣ ವಿದ್ಯಾವಂತರನ್ನು ಆದರದಿಂದ ಕಾಣುವದು ಸಹಜವೇ.

ಮೇಲೆ ಹೇಳಿದಂತೆ ನಾನು ರಬಕವಿಗೆ ಹೋದಾಗ ೧೦ ದಿವಸ ಕ್ವಾರಂಟಾಯಿನ (ಸಂಪರ್ಕ ನಿಷೇಧ) ದಲ್ಲಿ ಕೂಡ್ರಬೇಕಾಯಿತು. ಅಲ್ಲಿ ಕೆಲವು ದಿವಸ ಹತ್ತಿಕಾಳವರ ಮನೆಯಲ್ಲಿ ಇದ್ದೆನು. ಹಳಕಟ್ಟಿ ಫಕೀರಪ್ಪನು ಶಿಕ್ಷಣದಲ್ಲಿ ನನಗಿಂತ ೨ ವರ್ಷ ಹಿಂದಿನವನು. ಅವನದು ಇಂಟರ ಪರೀಕ್ಷೆಯು ಆಗಿತ್ತು. ಅವನು ಸಹ ಆಗ ಅವನ ಮಾವಂದಿರು ಇರುತ್ತಿದ್ದ ಬನಹಟ್ಟಿ ಗ್ರಾಮಕ್ಕೆ ಬಂದಿದ್ದನು. ಆಗ ಪದವೀಧರರಿಗೆ ಸಹಜವಾಗಿ ಸರಕಾರಿ ನೌಕರಿಗಳು ಸಿಗುತ್ತಿದ್ದವು. ನಾನು ಮುಂದೆ ಏನು ಮಾಡಬೇಕೆಂಬ ವಿಚಾರದಲ್ಲಿ ತೊಡಗಿದೆನು. ವಿಶ್ವವಿದ್ಯಾಲಯದಲ್ಲಿ ಎಮ್.ಎ ಪರೀಕ್ಷೆಗೆ ಪ್ರಾದೇಶಿಕ ಭಾಷೆಗಳನ್ನು ಐಚ್ಛಿಕವಾಗಿ ತೆಗೆದುಕೊಳ್ಳಬಹುದೆಂದು ಅದೇ ನಿರ್ಣಯವಾಗಿತ್ತು. ನಾನು ಇಂಗ್ಲೀಷದ ಜೊತೆಗೆ ಕನ್ನಡ ತೆಗೆದುಕೊಂಡು ಎಮ್.ಎ. ಪರೀಕ್ಷೆಗೆ ಅಭ್ಯಾಸ ಮಾಡಬೇಕೆಂದು ಇಂಗ್ಲೀಷ ಪುಸ್ತಕಗಳನ್ನು ಸಹ ಕೊಂಡೆನು. ೧ನೇ ಎಲ್. ಎಲ್.ಬಿ (LL.B) ವರ್ಗದ ಟರ್ಮ (ಕಾಲೇಜದ ಅಭ್ಯಾಸದ ಸಲುವಾಗಿ ಪ್ರತಿ ವರ್ಷದಲ್ಲಿ ವೇಳೆಯ ಎರಡು ಭಾಗಮಾಡಿ, ಒಂದೊಂದರಲ್ಲಿ ಇಂತಿಷ್ಟೇ ದಿವಸಗಳಾದರೂ ಹಾಜರ ಇರಬೇಕೆಂದು ವಿಶ್ವವಿದ್ಯಾಲಯದವರು ಗೊತ್ತುಪಡಿಸಿರುತ್ತಾರೆ.) ಗಳನ್ನು ತುಂಬಲಿಕ್ಕೆ ಡೆಕ್ಕನ ಕಾಲೇಜಿನಲ್ಲಿ ಅವಕಾಶವಿತ್ತು. ನಾನು ಹಾಗೆ ಮಾಡಿದ್ದೆನು. ಆದರೆ ಪರೀಕ್ಷೆಗೆ ಕೂತಿರಲಿಲ್ಲ. ಆದರೂ ಎರಡನೇ ಎಲ್.ಎಲ್.ಬಿ ವರ್ಗದಲ್ಲಿ ಟರ್ಮ ತುಂಬಲಿಕ್ಕೆ ಬರುತ್ತಿತ್ತು. ಎಮ್.ಎ. ಅಭ್ಯಾಸದ ಜತೆಗೆ ಮುಂಬೈಯಲ್ಲಿ ಎರಡನೆ ಎಲ್.ಎಲ್.ಬಿ ಟರ್ಮ ತುಂಬಬೇಕೆಂದು ಗೊತ್ತುಮಾಡಿ ಮುಂಬೈಗೆ ಹೋದೆನು. ಆಗ ಮುಂಬೈಯಲ್ಲಿ ದರ ವರ್ಷ ೧ನೇ ಟರ್ಮದ ವೇಳೆಗೆ ಪ್ಲೇಗದ ಹಾವಳಿ ಆಗುತ್ತಿತ್ತು. ಈ ಕಾರಣದಿಂದ ನಿಜವಾಗಿ ಟರ್ಮ ತುಂಬದೆ ಟರ್ಮ ತುಂಬಿದ ಸರ್ಟಿಫಿಕೀಟ ದೊರೆಯುತ್ತಿದ್ದವು. ಆಗ ವಿದ್ಯಾರ್ಥಿಗಳೆಲ್ಲ ತಮ್ಮ ಊರುಗಳಿಗೆ ತಿರುಗಿ ಹೋಗುತ್ತಿದ್ದರು. ಅಷ್ಟರೊಳಗಾಗಿ ನನ್ನ ಮೊದಲನೆ ಹೆಂಡತಿಯು ತೀರಿಕೊಂಡ ಸುದ್ದಿಯು ಹಳಕಟ್ಟಿ ಫಕ್ಕೀರಪ್ಪನ ಮುಖಾಂತರ ಅವನ ತಂದೆಗೆ ತಿಳಿಯಿತು. ಅವರು ಎಜ್ಯುಕೇಶನಲ್ ಇನಸ್ಪೆಕ್ಟರ್ ಕಚೇರಿಯಲ್ಲಿ ಕಾರಕೂನರಿದ್ದರು. ಅವರ ಮುಖಾಂತರ ಮೇಲಿನ ಸುದ್ದಿಯು ಕಲಬುರ್ಗಿ ವೀರಪ್ಪ ಎಂಬವರಿಗೆ ತಿಳಿಯಿತು. ಇವರ ತಂದೆಯು ಮುಲಕೀ ಖಾತೆಯಲ್ಲಿ ಮಹಾಲ್ಕರಿ ಇದ್ದರು. ಆ ಕಾಲಕ್ಕೆ ಅವರನ್ನು ಕೆಲವೊಂದು ಕಾರಣಗಳಿಂದ ನೌಕರಿಯಿಂದ ತೆಗೆದಿದ್ದರು. ವೀರಪ್ಪನವರು ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಪಾಸಾಗಿ ಒಂದೆರಡು ವರ್ಷ ಡೆಕ್ಕನ ಕಾಲೇಜದಲ್ಲಿ ಸಹ ಅಭ್ಯಾಸ ಮಾಡಿದ್ದರು. ಆಗ ಪುಣೆಗೆ ಹೋಗಬೇಕಾದರೆ ಮೇಲ ಟಾಂಗಾದಿಂದ ಹೋಗಬೇಕಾಗುತ್ತಿತ್ತು. ಅವರು ಕಾಲೇಜದಲ್ಲಿ (ಅಲ್ಲಿಯ ಮೊದಲನೆ ಪರೀಕ್ಷೆಗೆ Little Go ಎಂಬ ಹೆಸರಿತ್ತು.) ಪಾಸಾಗಿರಲಿಲ್ಲ. ಹಾಗೇ ಮುಲಕೀ ಖಾತೆಯಲ್ಲಿ ನೌಕರರಿಗೆ ಆ ಕಾಲಕ್ಕೆ ಕಲೆಕ್ಟರ್ ಕಚೇರಿಯಲ್ಲಿ ಚಿಟನೀಸ್ ಇದ್ದರು. ಇನ್ನೊಂದು ಕಲಬುರ್ಗಿ ಮನೆತನದಲ್ಲಿ ರಾಚಪ್ಪ ಎಂಬುವರು ಮಾಮಲೆದಾರ ಇದ್ದರು. ಆ ಸುಮಾರಕ್ಕೆ ಅವರು ತೀರಿಕೊಂಡಿದ್ದರು.

ವೀರಪ್ಪನವರಿಗೆ ರಾಣೆಬೆನ್ನೂರು ಬಣಗಾರ ಮನೆತನದ ಹೆಣ್ಣು ಮಗಳು ಮೊದಲನೆ ಹೆಂಡತಿ. ಅವರಿಗೆ ಆಕೆಯಿಂದ ನೀಲವ್ವ, ಚೆನ್ನಬಸವ್ವ ಮತ್ತು ರಾಚವ್ವ ಎಂಬ ಮೂವರು ಹೆಣ್ಣುಮಕ್ಕಳು ಹುಟ್ಟಿದ ಮೇಲೆ, ಆಕೆ ತೀರಿಕೊಂಡಿದ್ದಳು. ಆಮೇಲೆ ಶಿವಮೊಗ್ಗಾ ಜಿಲ್ಹೆಯ ಬೆಂಕಿಪುರ (ಈಗಿನ ಭದ್ರಾವತಿ) ಗ್ರಾಮದ ಹೊಳೆಹೊನ್ನೂರು ಎಂಬ ಮನೆತನದ ಗೌರವ್ವ ಎಂಬ ಹೆಣ್ಣು ಮಗಳನ್ನು ಲಗ್ನವಾಗಿದ್ದರು. ಅವರ ಹೆಣ್ಣುಮಕ್ಕಳಲ್ಲಿ ೧ನೇ ಮತ್ತು ೩ನೇ ಯವರ ಲಗ್ನವಾಗಿ ನಡುವಿನವಳು ಹಾಗೇ ಉಳಿದಿದ್ದಳು. ನನ್ನ ಹೆಂಡತಿಯು ತೀರಿದ ಸುದ್ದಿಯು ಅವರಿಗೆ ತಿಳಿದ ಕೂಡಲೇ, ಫಕೀರಪ್ಪನ ತಂದೆಯಾದ ಗುರುಬಸಪ್ಪನವರ ಮುಖಾಂತರ ನನ್ನನ್ನು

ಧಾರವಾಡಕ್ಕೆ ಕರೆಯಿಸಿಕೊಂಡರು. ನಾನು ಮುಂಬೈಯಿಂದ ಗೋಕಾವಿಗೆ ಹೋಗಿ, ಅಲ್ಲಿ ಇನ್ನೂ ಪ್ಲೇಗ ಇದ್ದುದರಿಂದ ಧಾರವಾಡಕ್ಕೆ ಹೋಗಿ, ಗುರುಬಸಪ್ಪನವರ ಮನೆಯಲ್ಲಿಳಿದುಕೊಂಡೆನು. ಅವರದು ಮತ್ತು ವೀರಪ್ಪನವರದು ಅತ್ಯಂತ ಸ್ನೇಹ. ಗುರುಬಸಪ್ಪನವರು ಕಲಬುರ್ಗಿಯವರ ಮನೆತನಗಳ ಎಲ್ಲ ವೃತ್ತಾಂತವನ್ನು ನನಗೆ ತಿಳಿಸಿದರು. ಮತ್ತು ವೀರಪ್ಪನವರ ೨ನೆಯ ಮಗಳನ್ನು ಒಬ್ಬ ವಿದ್ಯಾವಂತನಿಗೆ ಲಗ್ನಮಾಡಿಕೊಡಬೇಕೆಂದು ಹಾಗೇ ಇಟ್ಟಿರುವರೆಂದು ಹೇಳಿದರು. ಆಮೇಲೆ ಅವರು ಆಕೆಯನ್ನು ತಮ್ಮ ಮನೆಗೆ ಕರೆಯಿಸಿಕೊಂಡು, ನನಗೆ ತೋರಿಸಿದರು. ಆಕೆಗೆ ಮೈಲಿಯೆದ್ದು ಹಣೆಯ ಮೇಲೆ ಒಂದು ದೊಡ್ಡ ಮತ್ತು ಕೆಲವು ಸಣ್ಣ ಕಲೆಗಳಿದ್ದವು. ಇವುಗಳಿಂದ ಮೋರೆಯು ಕುರೂಪವಾಗಿದ್ದಿಲ್ಲ. ಅವಳು ಮತ್ತು ಅವಳ ಅಕ್ಕತಂಗಿಯರು ಶಾಲೆಗೆ ಹೋಗಿ ತುಸುಮಟ್ಟಿಗೆ ಕನ್ನಡದ ಅಭ್ಯಾಸ ಮಾಡಿದ್ದರು. ಇವೆಲ್ಲ ಕಾರಣಗಳಿಂದ ಆಕೆಯನ್ನು ಲಗ್ನಮಾಡಿಕೊಳ್ಳಲಿಕ್ಕೆ ನನ್ನ ಮನವೊಲಿಸಲಿಕ್ಕೆ ಗುರುಬಸಪ್ಪನವರಿಗೆ ಕಠಿಣವಾಗಲಿಲ್ಲ. ನನ್ನ ತಂದೆಯವರು ಇಷ್ಟು ದೂರ ಬಂದು, ಮನೆತನವನ್ನೂ ಕನ್ಯೆಯನ್ನೂ ನೋಡುವುದು ಸಾಧ್ಯವಿದ್ದಿಲ್ಲ. ನನ್ನ ಸೋದರಮಾವ ಲುಕ್ ಗುರುಸಿದ್ದಪ್ಪ ಎಂಬುವರು ಧಾರವಾಡಕ್ಕೆ ಬಂದು ನೋಡಿ, ಈ ಸಂಬಂಧಕ್ಕೆ ಒಪ್ಪಿದರು. ಕೂಡಲೇ ಹೆಚ್ಚಿಗೇನೂ ವಿಚಾರ ನಡೆಯದೆ ನಿಶ್ಚಯ ಕಾರಣವಾಗಿ, ವೀರಪ್ಪನವರ ಮನೆಗೆ ಹೋಗಿ ಅಲ್ಲೇ ಇರಹತ್ತಿದೆನು.

ಆಗಿನ ಕಾಲದಲ್ಲಿ ಧಾರವಾಡ ಜಿಲ್ಹೆಯಲ್ಲಿ ಹೆಚ್ಚು ಜನ ಲಿಂಗಾಯತರು ಸರಕಾರೀ ನೌಕರಿಯಲ್ಲಿದ್ದರು. ಧಾರವಾಡದಲ್ಲಿ ಇಂಥ ಜನರ ಗುಂಪು ಇತ್ತು. ಸರಕಾರದಲ್ಲಿ ಉಳಿದ ನೌಕರರೆಲ್ಲ ಬ್ರಾಹ್ಮಣರು. ಯಾವಾಗಲೂ ಬ್ರಾಹ್ಮಣ ಲಿಂಗಾಯತರ ನಡುವೆ ಒಳ್ಳೇ ಸ್ಪರ್ಧೆ. ಉಚ್ಚ ಅಧಿಕಾರ ಸ್ಥಾನಗಳಲ್ಲಿ ಇಂಗ್ಲೀಷ ಇತ್ತು. ಆ ಜಿಲ್ಹೆಯ ಲಿಂಗಾಯತ ನೌಕರರೆಲ್ಲ ಒಳ್ಳೇ ಅಭಿಮಾನಿಗಳು. ಬಹಳ ಉದಾರಿ ಮತ್ತು ಇಂಗ್ಲೀಷ ಭಾಷೆಯನ್ನು ಚೆನ್ನಾಗಿ ಬಲ್ಲವರು. ಮೇಲಧಿಕಾರಿಗಳಿಗೆ ಏನಾದರೂ ದೂರು ಒಯ್ಯತಕ್ಕದಿದ್ದರೆ, ಉಳಿದವರು ಆ ಬಗ್ಗೆ ಅರ್ಜಿಯನ್ನು ತಯಾರು ಮಾಡಿಸಿಕೊಳ್ಳಲಿಕ್ಕೆ ಇವರ ಕಡೆಗೇ ಬರುತ್ತಿದ್ದರು.

ಆ ಕಾಲಕ್ಕೆ ಧಾರವಾಡದಲ್ಲಿ ಗದಿಗಯ್ಯ ಹುಚ್ಚಯ್ಯಸ್ವಾಮಿ ಹೊನ್ನಾಪುರಮಠವೆಂಬ ಒಬ್ಬರೇ ಲಿಂಗಾಯತ ವಕೀಲರಿದ್ದರು. ಇವರು ಹೈಕೋರ್ಟ ವಕೀಲಿ ಪರೀಕ್ಷೆ ಪಾಸಾದವರಿದ್ದರು. (ಹುಚ್ಚಯ್ಯನವರು ಒಂದು ಶಿಲಾ ಛಾಪಖಾನೆಯನ್ನು ಇಟ್ಟು 'ಚಂದ್ರೋದಯ'ವೆಂಬ ವರ್ತಮಾನ ಪತ್ರ ಸಹ ತೆಗೆಯುತ್ತಿದ್ದರು) LL.B ಪರೀಕ್ಷೆಯಲ್ಲಿ ಪಾಸಾದ ಲಿಂಗಾಯತ ವಕೀಲರು ಅಲ್ಲಿ ಯಾರೂ ಇದ್ದಿಲ್ಲ. ಗದಿಗಯ್ಯನವರ ವಕೀಲಿವೃತ್ತಿಯು ಚೆನ್ನಾಗಿ ನಡೆದಿತ್ತು. ಈ ಕಾರಣಗಳಿಂದ ನಾನು LL.B ಪರೀಕ್ಷೆಯನ್ನು ಕೊಟ್ಟೇ ತೀರಬೇಕೆಂದು ನನ್ನ ಮಾವಂದಿರು ಆಗ್ರಹಪಟ್ಟರು. ಅಷ್ಟರಲ್ಲಿ ನಾನು ಮುಲ್ಕಿ ಖಾತೆಯೊಳಗೆ ಕಾರಕೂನಿಯ ನೌಕರಿಯ ಬಗ್ಗೆ ಧಾರವಾಡ ಮತ್ತು ಕಾರವಾರ ಜಿಲ್ಹೆಗಳ ಕಲೆಕ್ಟರರ ಕಡೆಗೆ ಅರ್ಜಿಗಳನ್ನು ಕಳಿಸಿದ್ದೆನು. ಎರಡೂ ಕಡೆಯಿಂದ ನನ್ನನ್ನು ನೌಕರಿಗೆ ನೇಮಿಸಿದ ಬಗ್ಗೆ ಉತ್ತರಗಳು ಸಹ ತುಸು ದಿವಸಗಳಲ್ಲಿ ಬಂದವು. ನನಗೆ ವಕೀಲಿ ವೃತ್ತಿಯಿಂದ ಲಾಭವಾಗಲಿಕ್ಕಿಲ್ಲೆಂದೆನಿಸಿದ್ದರೂ, ನನ್ನ ಮನಸಿನ ವಿರುದ್ಧ ಅವುಗಳನ್ನು ನಿರಾಕರಿಸಬೇಕಾಯಿತು. ವಿದ್ಯಾಖಾತೆಯಲ್ಲಿ ಆಗ ಲಿಂಗಾಯತ ಪದವೀಧರರು ಯಾರೂ ಇದ್ದಿದ್ದಿಲ್ಲ. ಅಲ್ಲಿ ಸಹ ಸುಲಭವಾಗಿ ಕೆಲಸ ದೊರೆಯುವಂತಿತ್ತು. ಶ್ರೀ ರಾವಜಿ ಬಾಳಾಜಿ ಕರಂದಿಕರ ಆಗ ಕನ್ನಡ ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರಾಗಿದ್ದರು. ಅವರು ಲಿಂಗಾಯತರ ಬಗ್ಗೆ ಸಹಾನುಭೂತಿಯುಳ್ಳವರಿದ್ದರು. ಕಾಲೇಜದ ಗಣಿತ ಶಿಕ್ಷಕರು ಒಂದು ತಿಂಗಳು ರಜೆ ತಕ್ಕೊಂಡಾಗ ಅವರು ನನ್ನನ್ನು ವಿಚಾರಿಸದೆ, ಅವರ ರಜೆಯಲ್ಲಿ ಕೆಲಸ ಮಾಡಲಿಕ್ಕೆ ನನ್ನನ್ನು ನೇಮಿಸಿಕೊಂಡರು. ಆ ಪ್ರಕಾರ ನಾನು ಕಾಲೇಜದಲ್ಲಿ ಒಂದು ತಿಂಗಳ ಕೆಲಸಮಾಡಿದೆನು. LL.B ಪರೀಕ್ಷೆಯ ಅಭ್ಯಾಸವನ್ನು ಸಾಗಿಸುತ್ತ ೧೯೦೯ನೇ ಇಸ್ವಿಯಲ್ಲಿ ಒಂದನೇ LL.B. ಯಲ್ಲಿ ಮತ್ತು ೧೯೧೧ ನೇ ಇಸ್ವಿಯಲ್ಲಿ ೨ನೇ LL.B ಯಲ್ಲಿ ಪಾಸಾದೆನು. ಆಗ

ಪ್ರತಿ ವರ್ಷ ಎರಡನೇ ಟರ್ಮಿನಲ್ಲಿ ಮುಂಬೈನಲ್ಲಿ ಇರಬೇಕಾಗುತ್ತಿತ್ತು. ಆ ಮೂರೂ ವರ್ಷ ನನ್ನ ಜತೆಗೆ ಶ್ರೀ ವೀರಪ್ಪ ಬಿಳೇಅಂಗಡಿಯವರು ಅಭ್ಯಾಸ ಮಾಡುತ್ತಿದ್ದರು. ಮೊದಲನೆ ವರ್ಷ ಶ್ರೀ ಸಿದ್ಧರಾಮಪ್ಪ ಪಾವಟೆಯವರು ಎರಡನೆ LL.B ಕ್ಲಾಸಿನಲ್ಲಿ ನಮ್ಮ ಕೂಡ ಇರುತ್ತಿದ್ದರು. ಈ ಭಾಗದ ಕೆಲವು ಲಿಂಗಾಯತ ವ್ಯಾಪಾರಸ್ಥರು ಮೊದಲಿನಿಂದಲೂ ಮುಬೈಯಲ್ಲಿ ದಲಾಲಿ ಅಂಗಡಿಗಳನ್ನಿಟ್ಟು ವ್ಯಾಪಾರ ನಡೆಸುತ್ತಿದ್ದರು. ಸೊಲ್ಲಾಪುರದ ಶ್ರೀ ಮಲ್ಲಪ್ಪ ಬಸಪ್ಪಣ್ಣ ವಾರದ ಇವರ ಅಂಗಡಿಯು ಅಲ್ಲಿ ಬಹಳ ಪ್ರಸಿದ್ಧಿಯನ್ನು ಪಡೆದಿತ್ತು. ಇವರ ಬಗ್ಗೆ ಇಲ್ಲಿ ಒಂದೆರಡು ಸಂಗತಿಗಳನ್ನು ಬರೆದರೆ ಅಪ್ರಸ್ತುತವಾಗಲಾರದು. ಅವರು ಸೊಲ್ಲಾಪುರದ ಹಿರಿಯರಂತಿದ್ದು ವ್ಯಾಪಾರ, ಒಕ್ಕಲುತನ, ಯಾಂತ್ರಿಕ ಕಲೆಯ ಸಹಾಯದಿಂದ ಬಟ್ಟೆಗಳನ್ನು ತಯಾರಿಸುವುದು, ಶಿಕ್ಷಣಪ್ರಸಾರ, ಧರ್ಮಜಾಗ್ರತೆ ಮೊದಲಾದ ದಿಶೆಗಳಲ್ಲಿ ಪಟ್ಟಣದ ಉತ್ಕರ್ಷವಾಗುವ ಬೀಜಗಳನ್ನು ಬಿತ್ತಿದ್ದರು. ಈಗ ನಾವು ಕಾಣುವ ಸೊಲ್ಲಾಪುರ ಪಟ್ಟಣವು ಅದರ ಫಲವೆಂದೇ ಹೇಳಬಹುದು. ಅವರು ೧೮೫೧ನೇ ಇಸ್ವಿಯಲ್ಲಿ ಹುಟ್ಟಿ ೧೯೧೧ನೇ ಇಸ್ವಿಯಲ್ಲಿ ಲಿಂಗೈಕ್ಯರಾದರು. ಅವರ ಸಮಗ್ರ ಚರಿತ್ರವನ್ನು ಅವರ ಸ್ಮಾರಕ ಮಂಡಲದವರು ಶ್ರೀ ನಾರಾಯಣ ರಾಮಚಂದ್ರ ಉರ್ಫ ನಾನಾಸಾಹೇಬ ಬಾಮಣಗಾವಕರ ಎಂಬ ವರಾಡ ಪ್ರಾಂತದ ಅಮರಾವತಿಯ ವಿದ್ವಾನ್ನ ಗೃಹಸ್ಥರಿಂದ ೧೯೪೮ನೇ ಇಸ್ವಿಯಲ್ಲಿ ಮರಾಠಿಯಲ್ಲಿ ಬರೆಸಿರುತ್ತಾರೆ. ಅದೊಂದು ಅಮೂಲ್ಯ ಗ್ರಂಥವಿದ್ದು, ಎಲ್ಲರೂ ಓದತಕ್ಕಂಥದ್ದಿರುತ್ತದೆ. ಮುಂಬೈಯ ಇತರ ಲಿಂಗಾಯತ ವ್ಯಾಪಾರಸ್ಥರಲ್ಲಿ ಶ್ರೀ ಗಂಗಾಧರಪ್ಪ ಸಂಗಪ್ಪ ಸಾಬೋಜಿ ಎಂಬುವರು ಪ್ರಮುಖರು. ಇವರು ಸಹ ವಿದ್ಯಾಪಕ್ಷಪಾತಿಗಳೂ ಉದಾರರೂ ಇದ್ದರು. ನಾನು ಮುಂಬೈಯಲ್ಲಿದ್ದಾಗ ಇವರಿಬ್ಬರ ಪರಿಚಯವು ಚೆನ್ನಾಗಿ ಆಯಿತು. ಆ ಕಾಲಕ್ಕೆ ಇವರ ಮನಸ್ಸಿನಲ್ಲಿ, 'ಮುಂಬೈ ಲಿಂಗಾಯತ ಫಂಡ' ಎಂಬ ಸಂಸ್ಥೆಯನ್ನು ಸ್ಥಾಪಿಸುವ ವಿಚಾರ ಹೊರಟು, ನಾನು ಅದರ ನಿಯಮಗಳನ್ನು ತಯಾರಿಸಿಕೊಟ್ಟೆನು (ಸುಮಾರು ೧೯೦೦).

ಈ ಸಂಸ್ಥೆಯಿಂದ ೧೯೨೯ನೇ ಇಸ್ವಿಯ ವರೆಗೆ ವಿಶೇಷ ಕಾರ್ಯವಾಗಲಿಲ್ಲ. ಆಗ ಶ್ರೀ ಘಟನಟ್ಟಿ ಬಸವಪ್ರಭಪ್ಪನವರ ವಿಶೇಷ ಪ್ರಯತ್ನದಿಂದ ದಿನಾಂಕ ೧೬-೧೦-೧೯೨೯ ನೇ ದಿವಸ ಧಾರವಾಡದ ಶ್ರೀ. ನಿ.ಪ್ರ ಮೃತ್ಯುಂಜಯ ಮಹಾಸ್ವಾಮಿಗಳವರ ಅಮೃತಹಸ್ತದಿಂದ ಸಂಸ್ಥೆಯ ಪುನರುತ್ಥಾನ ಸಮಾರಂಭವು ನೆರವೇರಿದ ನಂತರ, ಅದು ಉತ್ಸಾಹದಿಂದ ಕಾರ್ಯ ಮಾಡುತ್ತ ೧೯೪೧ನೇ ಇಸ್ವಿಯಲ್ಲಿ ಗಿರಗಾಂವ ಭಾಗದಲ್ಲಿ 'ಬಸವ ಸದನ'ವೆಂಬ ಕಟ್ಟಡವನ್ನು ಪೂರ್ತಿಗೊಳಿಸಿ, ಬಡ ಲಿಂಗಾಯತ ವಿದ್ಯಾರ್ಥಿಗಳಿಗೆ ಅಭ್ಯಾಸ ಮಾಡುವ ಸಲುವಾಗಿ ಧನಸಹಾಯ ಮಾಡುತ್ತ ಬಂದಿರುತ್ತದೆ. ಈ ಸಂಸ್ಥೆಯ ಹೆಚ್ಚಿನ ವಿವರಗಳು ೧೯೫೨ನೇ ಇಸ್ವಿಯಲ್ಲಿ ಪ್ರಸಿದ್ಧಪಡಿಸಿದ ಅದರ ವರದಿಯಿಂದ ಗೊತ್ತಾಗುವವು. ನಾನು LL.B ಪರೀಕ್ಷೆ ಪಾಸಾದ ಮೇಲೆ ಈ ಸಂಸ್ಥೆಯ ಜನರಲ್ ಕಮೀಟಿಯು ತಾ. ೨೦-೨-೧೯೦೨ ನೇ ಇಸ್ವಿಯಿಂದ ನಿರ್ಣಯ ಮಾಡಿದ ಮೇರೆಗೆ, ಈ ಸಂಸ್ಥೆಯ ಅಧ್ಯಕ್ಷರಾದ ಶ್ರೀಮಂತ ಮಲ್ಲಪ್ಪಣ್ಣ ವಾರದ ಇವರು ಶ್ರೀ ಬಿಳೆಅಂಗಡಿ, ಹಳಕಟ್ಟಿ ಮತ್ತು ನನಗೆ ಒಂದು ಮಾನಪತ್ರವನ್ನು ಕೊಟ್ಟಿದ್ದು ಅದು ನನ್ನ ಸಂಗ್ರಹದಲ್ಲಿದೆ.ನನ್ನ LL.B ಪರೀಕ್ಷೆಯು ಮುಗಿದ ಮೇಲೆ ಧಾರವಾಡದಲ್ಲಿ ವಕೀಲಿವೃತ್ತಿಯನ್ನು ಆರಂಭಿಸಿ, ನನ್ನ ಮಾವಂದಿರ ಮನೆಯಲ್ಲಿಯೇ ಇರಹತ್ತಿದೆನು. ನನ್ನ ಒಲವು ಈ ವೃತ್ತಿಯ ಕಡೆಗೆ ವಿಶೇಷವಿಲ್ಲದ್ದರಿಂದ ಅದರಲ್ಲಿ ನಾನು ಮುಂದೆ ಬರಲಿಲ್ಲ. ಕನ್ನಡದ ಅಭ್ಯಾಸದ ಕಡೆಗೆ ನನ್ನ ಲಕ್ಷವು ಹೆಚ್ಚಾಗಿದ್ದರಿಂದ ಅದನ್ನು ಮುಂದುವರೆಸಿದೆನು. ಧಾರವಾಡದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘ ಎಂಬ ಸಂಸ್ಥೆಯು ಶ್ರೀ ರಾಮಚಂದ್ರ ಹಣಮಂತ ದೇಶಪಾಂಡೆ M.A ಅವರ ಪ್ರಯತ್ನದಿಂದ ಕನ್ನಡ ಸಾಹಿತ್ಯದ ಬೆಳವಣಿಗೆಗಾಗಿ ಸ್ಥಾಪಿಸಲ್ಪಟ್ಟಿದ್ದು, ಅದು ಇವರ ಚಟುವಟಿಕೆಗಳ ಕೂಡ 'ವಾಗ್ಭೂಷಣ'ವೆಂಬ ಮಾಸಪತ್ರಿಕೆಯನ್ನು ಹೊರಡಿಸುತ್ತಿತ್ತು. ಅದರಲ್ಲಿ ನಾನು 'ಹಣದ ಬಗ್ಗೆ ಕೆಲವು ವಿಚಾರಗಳು' ಎಂಬ ಒಂದು ಲೇಖವನ್ನು ಮೊದಲು

ಪ್ರಕಟಿಸಿದೆನು. ಮುಂದೆ ಸಂಘದವರ ಉತ್ತೇಜನದಿಂದ ವಿಜಯನಗರ ಸಾಮ್ರಾಜ್ಯದ ಬಗ್ಗೆ ಮೆ. ಸಿವೆಲ್ ಸಾಹೇಬರು ಬರೆದ A Forgotten Empire ಎಂಬ ಗ್ರಂಥದ ಕನ್ನಡ ಭಾಷಾಂತರವನ್ನು ವಾಗ್ಭೂಷಣದಲ್ಲಿ ಪ್ರಕಟಿಸಹತ್ತಿದೆನು. ಅದು ಮುಗಿದ ಮೇಲೆ ವಿಜಯನಗರ ಸಾಮ್ರಾಜ್ಯ ಸಂಘದವರು ಪ್ರಸಿದ್ಧಿಸಿದರು. ಆ ಬಗ್ಗೆ ಸಂಘದಿಂದ ನನಗೆ ಒಂದು ಇನಾಮು ಸಹ ದೊರೆಯಿತು.

ಕನ್ನಡ ಸಾಹಿತ್ಯವನ್ನು ನನ್ನಷ್ಟಕ್ಕೇ ನಾನೇ ಓದುತ್ತಿದ್ದು ಮಹಾದೇವಿಯಕ್ಕನ ಪುರಾಣದ ಕೆಲವು ಪದ್ಯಗಳನ್ನು ತಿದ್ದಿ ಬರೆದದ್ದು, ಅದರಂತೆ ರಾಘವಾಂಕನ ಕಾವ್ಯದ ಸಂಧಿಗಳನ್ನು ತಿದ್ದಿ ಬರೆದದ್ದು, ಇನ್ನೂ ನನ್ನ ಸಂಗ್ರಹದಲ್ಲಿ ಅವೆ. ೧೯೦೨ನೇ ಡಿಸೆಂಬರ ತಿಂಗಳಲ್ಲಿ ನಾನು ಸರಕಾರಿ ನೌಕರಿ ಸೇರುವ ವರೆಗೆ ಲಿಂಗಾಯತ ಸಮಾಜದ ಏಳಿಗೆಗಾಗಿ ಎರಡನೇ ಕಾರ್ಯಗಳಲ್ಲಿ ತೊಡಗಿದ್ದರಿಂದ ಕನ್ನಡ ಸಾಹಿತ್ಯದ ಹೆಚ್ಚಿನ ಸೇವೆಯು ನನ್ನಿಂದಾಗಲಿಲ್ಲ. ಈ ಅವಧಿಯಲ್ಲಿ ಸಮಾಜದ ಏಳಿಗೆಯ ಮುಖ್ಯ ಮೂರು ಕಾರ್ಯಗಳು ಜರುಗಿದವು. ಅವು ಯಾವುವೆಂದರೆ ೧) ಲಿಂಗಾಯತರು ಹಿಂದೂ ಸಮಾಜದ ಒಂದು ಉಚ್ಚ ವರ್ಗದವರಿರುತ್ತಾರೆ ಎಂಬುದನ್ನು ಸಿದ್ಧಪಡಿಸುವದು, ೨)ಶ್ರೀಮದ್ವೀರಶೈವಮಹಾಸಭೆಯಸ್ಥಾಪನೆ, ೩) ಲಿಂಗಾಯತರ ಮುಖ್ಯ ವಿರಕ್ತಸ್ವಾಮಿಗಳ ಮಠಗಳ ಅಧಿಕಾರಿಗಳಿಗೆ ಅಡ್ಡಪಾಲಿಕೆಯಲ್ಲಿ ಸಂಚರಿಸುವ ನಷ್ಟವಾದ ಹಕ್ಕನ್ನು ಪುನಃ ದೊರಕಿಸಿಕೊಡುವದು.

(೧)

೧೯೦೧ನೇ ಇಸ್ವಿಯಲ್ಲಿ ಹಿಂದೂಸ್ಥಾನದ ಜನಗಣತಿಯು ಆದ ಮೇಲೆ, ಅಲ್ಲಿ ವಾಸಿಸುವ ಬೇರೆ ಬೇರೆ ಜನಾಂಗಗಳ ಬಗ್ಗೆ ಸರಿಯಾದ ಮಾಹಿತಿಯನ್ನು ಕೂಡಿಸಿ ಪ್ರಸಿದ್ಧಪಡಿಸುವುದನ್ನು ಸರಕಾರದವರು ನಿರ್ಣಯಿಸಿ, ಆ ಬಗ್ಗೆ ಮೆ. ಎಂಥೋವೆನ್ ಸಾಹೇಬರನ್ನು ಈ ಕೆಲಸಕ್ಕೆ ನಿಯಮಿಸಿದರು. ಇವರು ಬೇರೆ ಬೇರೆ ಸಮಾಜದ ವಿಷಯವಾಗಿ ಪ್ರಶ್ನಾವಳಿಗಳನ್ನು ತೆಗೆದು, ಅವುಗಳಿಗೆ ಸರಿಯಾದ ಉತ್ತರವನ್ನು ಕೊಡಲಿಕ್ಕೆ ಪ್ರತಿಯೊಂದು ಸಮಾಜದ ಮುಖಂಡರ ಕಡೆಗೆ ಕಳುಹಿಸಿದರು. ಆ ಪ್ರಕಾರ ಲಿಂಗಾಯತ ಸಮಾಜದ ಮುಖಂಡರ ಕಡೆಗೆ ಸಹ ಅವು ಬಂದವು. ಲಿಂಗಾಯತರು ವಾಸಮಾಡುವ ಮುಖ್ಯ ಪ್ರಾಂತಗಳೆಂದರೆ ಮಹಾರಾಷ್ಟ್ರದಲ್ಲಿ ಸೊಲ್ಲಾಪುರ ವಿಭಾಗ. ಉತ್ತರ ಕರ್ನಾಟಕದಲ್ಲಿ ಧಾರವಾಡ ವಿಭಾಗ ಮತ್ತು ಮೈಸೂರು ಸಂಸ್ಥಾನ. ಮುಂಬಯಿ ಹೈಕೋರ್ಟಿನವರು ಗೋಪಾಳ ವಿರುದ್ಧ ಹಣಮಂತ (3 Bombay Page 273) ಎಂಬ ವ್ಯಾಜ್ಯದಲ್ಲಿ ಲಿಂಗಾಯತರು ವೈದಿಕ ಮತದ ನಾಲ್ಕು ವರ್ಣಗಳಲ್ಲಿ ಶೂದ್ರರೆಂದು ನಿರ್ಣಯಿಸಿದ್ದರು. ಈ ನಿರ್ಣಯವು ತಪ್ಪು, ಲಿಂಗಾಯತರು ಈ ನಾಲ್ಕೂ ವರ್ಣಗಳನ್ನು ಮೀರಿದವರಾಗಿ, ಶ್ರೇಷ್ಠರಾದ ಅತಿವರ್ಣಿಗಳಿರುವರೆಂದು ಈ ಸಮಾಜದ ಮುಖಂಡರಿಗೆ ತೋರಿಸಬೇಕಾಗಿತ್ತು. ಹೀಗೆ ಮಾಡಲಿಕ್ಕೆ ಮೇಲೆ ಹೇಳಿದ ಮೂರೂ ಭಾಗದ ಮುಖಂಡರು ತಮತಮಗೆ ಯೋಗ್ಯಕಂಡ ಪ್ರಯತ್ನಗಳನ್ನು ಮಾಡಹತ್ತಿದರು. ಮಹಾರಾಷ್ಟ್ರ ಭಾಗದ ಮುಖಂಡರು ಶ್ರೀ ಮಲ್ಲಪ್ಪಣ್ಣ ಬಸಪ್ಪಣ್ಣ ವಾರದ, ಉತ್ತರ ಕರ್ನಾಟಕದ ಮುಖಂಡರು ಶ್ರೀ ಚನ್ನಮಲ್ಲಪ್ಪ ಟೆಂಗಿನಕಾಯಿ ಮತ್ತು ಮೈಸೂರ ಪ್ರಾಂತದ ಮುಖಂಡರು ಮೈಸೂರ ಸ್ಟಾರ ವರ್ತಮಾನ ಪತ್ರದ ಸಂಪಾದಕರಾದ ವಾಯ್. ವೀರಸಂಗಪ್ಪನೆಂಬುವರು. ಇವರೆಲ್ಲರೂ ತಾವು ಕೊಡತಕ್ಕ ಅಭಿಪ್ರಾಯಗಳಿಗೆ ಶಾಸ್ತ್ರಾಧಾರಗಳನ್ನು ಹುಡುಕಹತ್ತಿದರು. ಹಳೇ ಶಾಸ್ತ್ರ ಪುರಾಣಗ್ರಂಥಗಳಲ್ಲಿ ಲಿಂಗಾಯತ ಎಂಬ ಶಬ್ದವು ದೊರಕುವದಿಲ್ಲ. ಅವುಗಳಲ್ಲಿ ವೀರಶೈವ, ಲಿಂಗಾಂಗಿ, ಲಿಂಗೀಬ್ರಾಹ್ಮಣ ಶಬ್ದಗಳೇ ದೊರೆಯುತ್ತವೆ. ಶ್ರೀ ವಾರದ ಮಲ್ಲಪ್ಪನವರು ಕೆಲವು ಆಗಮ ಗ್ರಂಥಗಳನ್ನು ಶೋಧಿಸಿ ಪ್ರಕಟಿಸಹತ್ತಿದರು. ಅವುಗಳ ಆಧಾರದ ಮೇಲಿಂದ ಎಲ್ಲ ಲಿಂಗಾಯತರು ದೀಕ್ಷೆಯನ್ನು ಹೊಂದಬೇಕು ಮತ್ತು ಅವರನ್ನು ಲಿಂಗೀಬ್ರಾಹ್ಮಣರೆಂದು ಕರೆಯಬೇಕು ಎಂದು ಪ್ರತಿಪಾದಿಸಹತ್ತಿದರು. ಲಿಂಗಾಯತರಲ್ಲಿ ಕೀಳತರದವೆಂದು

ತಿಳಿಯುತ್ತಿರುವ ಉದ್ಯೋಗಗಳನ್ನು ಮಾಡುವ ಜನರು ಇರುವುದರಿಂದ, ಇವರಲ್ಲಿ ಸಹ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರವೆಂಬ ನಾಲ್ಕು ವರ್ಣಗಳನ್ನು ಕಲ್ಪಿಸಬೇಕೆಂದು ಮೈಸೂರು ಮುಖಂಡರ ಅಭಿಪ್ರಾಯ.

ಉತ್ತರ ಕರ್ನಾಟಕದ ಮುಖಂಡರು ಟೆಂಗಿನಕಾಯಿ ಚೆನ್ನಮಲ್ಲಪ್ಪನವರಿದ್ದರೂ ನಿಜವಾಗಿ ಶ್ರೀ ನಿ. ಹಾನಗಲ್ ಕುಮಾರಸ್ವಾಮಿಗಳು ಅಲ್ಲಿಯ ಸೂತ್ರದಾರರು. ಮುಲಕೀ ಖಾತೆಯಲ್ಲಿ ಅವಲ ಕಾರಕೂನ ದರ್ಜೆಯವರಾದ ಶ್ರೀ ಸವದತ್ತಿ ಮೂಗಪ್ಪನವರು , ರಪಾಟಿ. ಚೆನ್ನಮಲ್ಲಯ್ಯನವರು, ಅಳಗವಾಡಿ ರಾಯಪ್ಪನವರು, ಕಿತ್ತೂರ ರೇವಣಸಿದ್ದಪ್ಪನವರು, ಕೊಂಗವಾಡ ಚೆನ್ನಪ್ಪಗೌಡರು ಮತ್ತು ಕೆಲವು ಶಾಸ್ತ್ರಿಗಳು ಶ್ರೀಗಳವರಿಗೆ ಸಹಾಯಕರಾಗಿದ್ದರು. ಇವರು ಸಹ ಮಹಾಭಾರತ ಮೊದಲಾದ ಕೆಲವು ಪುರಾಣಗ್ರಂಥಗಳನ್ನು ಶೋಧಮಾಡುವದಕ್ಕೋಸ್ಕರ ಸಂಗ್ರಹಿಸಿದರು. ಇವರಿಗೆ ಕನ್ನಡ ವಚನಶಾಸ್ತ್ರದ ಪರಿಚಯವು ಚೆನ್ನಾಗಿತ್ತು. ಈ ಶಾಸ್ತ್ರದಲ್ಲಿ ಲಿಂಗಾಯತ, ಲಿಂಗಸ್ವಾಯತ ಮತ್ತು ಲಿಂಗಸನ್ನಿಹಿತ ಎಂಬ ಶಬ್ದಗಳು ದೊರೆಯುತ್ತವೆ. ಲಿಂಗದ ಆಶ್ರಯವುಳ್ಳವನು ಲಿಂಗಾಯತನು. ಲಿಂಗಾಯತರಿಗೆ ವೀರಶೈವರೆಂದು ಕರೆಯುವುದಕ್ಕೆ ಇವರಿಗೆ ವಿರೋಧವಿಲ್ಲದಿದ್ದರೂ ವಾಡಿಕೆಯಲ್ಲಿರುವ ಲಿಂಗಾಯತ ಎಂಬ ಹೆಸರಿನಿಂದ ಇವರನ್ನು ಕರೆಯುವುದು ಸೂಕ್ತವೆಂದೆನಿಸಿತು. ಮೇಲಾಗಿ ಬ್ರಾಹ್ಮಣವರ್ಗದವರ ಕೂಡ ಯಶಸ್ವಿಯಾಗಿ ಹೋರಾಡುವವರು ಈ ಭಾಗದ ಲಿಂಗಾಯತರೇ. ಇವರಿಗೆ ತಮ್ಮ ಹೆಸರಿನ ಕೂಡ ಬ್ರಾಹ್ಮಣ ಶಬ್ದವನ್ನು ಸೇರಿಸುವದು ಎಷ್ಟೂ ಸರಿಬರಲಿಲ್ಲ. ಇವರಿಗೆ ಲಿಂಗಾಯತರೆಂದೇ ಕರೆಯಬೇಕು. ಇವರು ವರ್ಣಾತೀತರಾದ ಹಿಂದೂ ಜನಾಂಗದಲ್ಲಿ ಶ್ರೇಷ್ಠವರ್ಗದವರೆಂದು ಕರೆಯಬೇಕೆಂಬ ಇಲ್ಲಿಯ ಮುಖಂಡರ ಅಭಿಪ್ರಾಯದ ಪ್ರಕಾರ ಆಧಾರ ಸಹಿತ ಇಂಗ್ಲೀಷದಲ್ಲಿ ನಾನು ಬರೆದು ತಯಾರಮಾಡಿದೆನು. ಅದನ್ನು ಮೆ. ಎಂಥೋವೆನ್ ಸಾಹೇಬರ ಕಡೆಗೆ ಕಳುಹಿಸಲಾಯಿತು. ಉಳಿದ ಎರಡು ಭಾಗಗಳ ಮುಖಂಡರ ಅಭಿಪ್ರಾಯಗಳೂ ಅವರ ಕಡೆಗೆ ಹೋದವು. ಅವರು ೧೯೦೬ನೇ ಇಸ್ವಿಯಲ್ಲಿ, 'ಹಿಂದೂಸ್ಥಾನದ ಧರ್ಮಕೋಶ'ವೆಂಬ ಗ್ರಂಥವನ್ನು ಬರೆದು, ಅದರಲ್ಲಿ ಎಲ್ಲ ಅಭಿಪ್ರಾಯಗಳ ವಿಮರ್ಶೆ ಮಾಡಿ, ಧಾರವಾಡ ಪ್ರಾಂತದ ಮುಖಂಡರ ಅಭಿಪ್ರಾಯಕ್ಕೆ ಪ್ರಾಶಸ್ತ್ಯವನ್ನು ಕೊಟ್ಟಿರುವರು. ಅದರ ಅವತರಣಿಕೆಯನ್ನು ನಾನು ಚಿಕ್ಕೋಡಿ ಕೋರ್ಟಿನಲ್ಲಿ ಕೆಲಸಮಾಡುತ್ತಿರುವಾಗ ಒಂದು ವ್ಯಾಜ್ಯದಲ್ಲಿ ಕೊಟ್ಟಿದ್ದು, ಆ ವ್ಯಾಜ್ಯದ ನಿರ್ಣಯವನ್ನು ಈಗ ವಿಜಾಪುರದಲ್ಲಿ ಕೆಲಸಮಾಡುವ ವಕೀಲರಾದ ಶ್ರೀ ಮುಧೋಳಕರ ವಿರಕ್ತಪ್ಪ ಎಂಬ ವಕೀಲರು A Rationale of Lingayatism ಎಂಬ ಹೆಸರಿನಿಂದ ಪ್ರಕಟಿಸಿದ ಚಿಕ್ಕ ಪುಸ್ತಕದಲ್ಲಿ ಮೇಲೆ ಹೇಳಿದ ಅವತರಣಿಕೆಯನ್ನು ಕಾಣಬಹುದು.

(೨)

ಮೇಲೆ ಹೇಳಿದ ಕಾರ್ಯವು ತೀರಿದ ಮೇಲೆ ಇಡೀ ಲಿಂಗಾಯತ ಸಮಾಜದ ಸಂಘಟನೆಯ ಕಡೆಗೆ ಧಾರವಾಡ ಮುಖಂಡರ ಮನಸ್ಸು ತಿರುಗಿತು. ಇದರ ಮೊದಲನೆ ಹೆಜ್ಜೆಯೆಂದರೆ ಮೈಸೂರ ಪ್ರಾಂತದ ಜನರ ಕೂಡ ಸಂಪರ್ಕವನ್ನು ಬೆಳೆಯಿಸುವುದು. ಅಲ್ಲಿ ಸಹ ವಿದ್ಯಾವಂತರ ಸಂಖ್ಯೆಯು ಹೊಸದಾಗಿ ಬೆಳೆಯಹತ್ತಿತ್ತು. ಅವರಲ್ಲಿ ಶ್ರೀ ಪಿ. ಮಹದೇವಯ್ಯನವರು, BA.BL. ಮೈಸೂರು ಹೈಕೋರ್ಟಿನ ನಿವೃತ್ತ ಮುಖ್ಯ ನ್ಯಾಯಾಧೀಶ, ಮತ್ತು ಶ್ರೀ ಜಿ. ಶಾಂತವೀರಪ್ಪ B.A. ನಿವೃತ್ತ ಪೋಲೀಸ ಅಧಿಕಾರಿಗಳು, ಮುಖಂಡರು. ಇವರಿಬ್ಬರನ್ನು ಧಾರವಾಡಕ್ಕೆ ಕರೆಯಿಸಿ ಅವರಿಂದ ವ್ಯಾಖ್ಯಾನಗಳನ್ನು ಕನ್ನಡ ಮತ್ತು ಇಂಗ್ಲೀಷ ಭಾಷೆಯಲ್ಲಿ ಕೊಡಿಸಲಾಯಿತು. ಮುಂದೆ ತುಸು ದಿವಸಗಳಲ್ಲಿಯೇ ಧಾರವಾಡದಲ್ಲಿ ವೀರಶೈವ ಮಹಾಸಭೆಯನ್ನು ನೆರೆಯಿಸಬೇಕೆಂದು ಗೊತ್ತಾಗಿ ಒಂದು ಕಾರ್ಯಕರ್ತರ ಮಂಡಲವು ಸಹ ನೇಮಿಸಲ್ಪಟ್ಟಿತು. ಅದರ ಅಧ್ಯಕ್ಷರು ಟೆಂಗಿನಕಾಯಿ ಚೆನ್ನಮಲ್ಲಪ್ಪನವರು ಮತ್ತು ಶ್ರೀ ಹಳಕಟ್ಟಿ ಗುರುಬಸಪ್ಪನವರು ಮತ್ತು ನಾನು ಕಾರ್ಯದರ್ಶಿಗಳು. ಈ ಕಾರ್ಯಕ್ಕೆ ಮುಖ್ಯವಾಗಿ

ಬೆಂಬಲವನ್ನಿತ್ತವರು ಶ್ರೀ ಹಾನಗಲ್ಲ ಕುಮಾರಸ್ವಾಮಿಗಳು. ಸಭೆಯನ್ನು ಕೂಡಿಸುವ ಸಿದ್ಧತೆಯು ಭರದಿಂದ ಸಾಗಿ ೧೯೦೪ ನೇ ಇಸ್ವಿಯ ತಿಂಗಳಲ್ಲಿ ಸಭೆಯು ನೇರವೇರಿತು. ಅದರ ಅಧ್ಯಕ್ಷರು ಶ್ರೀಮಂತ ಲಿಂಗಪ್ಪ ಜಾಯಪ್ಪ ಸರದೇಸಾಯಿ, ಸಂಸ್ಥಾನ ನವಲಗುಂದ, ಇವರು. ಈ ಮಹಾಶಯರ ಅಭಿಮಾನ ಮತ್ತು ಉದಾರತನಗಳ ಬಗ್ಗೆ ಕರ್ನಾಟಕದ ಜನರಿಗೆ ಹೇಳುವ ಅವಶ್ಯಕತೆಯಿಲ್ಲ. ಮಹಾಸಭೆಯ ಕಾರ್ಯವು ಒಳ್ಳೇ ಉತ್ಸುಕತೆಯಿಂದ ನಡೆದು ಯಶಸ್ವಿಯಾಗಿ ಕೊನೆಗೊಂಡಿತು. ಇದರ ಸಾದ್ಯಂತ ವರದಿಯನ್ನು ಶ್ರೀ ಹಳಕಟ್ಟಿಯವರೂ, ನಾನೂ ಅಚ್ಚು ಹಾಕಿಸಿ ಪ್ರಸಿದ್ಧಪಡಿಸಿರುವೆವು. ಆಮೇಲೆ ಜರುಗಿದ ಯಾವ ಮಹಾಸಭೆಯ ವರದಿಯೂ ಇಷ್ಟು ವಿಸ್ತಾರವಾಗಿ ಪ್ರಸಿದ್ಧಿ ಪಡೆದಿಲ್ಲ.

(೩)

ಲಿಂಗಾಯತ ಸಮಾಜದಲ್ಲಿ ಸಾಮಾನ್ಯ, ಗುರು ಮತ್ತು ನಿರಾಭಾರಿ ಎಂಬ ಮೂರು ವರ್ಗಗಳಿರುವವು. ಲಿಂಗಾಯತ ಸಮಾಜದ ಭಕ್ತರೆಲ್ಲರೂ ಮೊದಲನೆ ವರ್ಗದಲ್ಲಿ ಬರುತ್ತಾರೆ. ಸಮಾಜದಲ್ಲಿ ಧಾರ್ಮಿಕ ವಿಧಿಗಳನ್ನು ಜರುಗಿಸಿ ಧರ್ಮಬೋಧೆ ಮಾಡುವವರು ಗುರುವರ್ಗದವರು. ಇವರ ಅಧಿಕಾರವು ಆಯಾ ಭಾಗದಲ್ಲಿರುವ ತಮ್ಮ ಶಿಷ್ಯರ ಮೇಲೆ ನಡೆಯುತ್ತದೆ. ಇಡೀ ಸಮಾಜದ ಮೇಲೆ ಧರ್ಮಾಧಿಕಾರ ನಡೆಯಿಸಿ ಧರ್ಮಪ್ರಸಾರ ಮಾಡುವವರು ನಿರಾಭಾರಿ ವರ್ಗದವರು ಅಥವಾ ವಿರಕ್ತ ವರ್ಗದವರು. ಧಾರ್ಮಿಕ ದೃಷ್ಟಿಯಿಂದ ಈ ವರ್ಗದವರಲ್ಲಿ ಪಂಗಡಗಳಿರುವದು ಅಯೋಗ್ಯವಾದರೂ ಇವರಲ್ಲಿ ಸಹ ಅಂತಃಕಲಹಗಳು ಹುಟ್ಟಿ ಐದು ಪಂಗಡಗಳು ಅಥವಾ ಸಮಯಗಳು ಉಂಟಾಗಿರುವವು. ಅವುಗಳ ಹೆಸರುಗಳು ಮುರುಘ, ಚೀಲಾಳ, ಕುಮಾರ, ಕೆಂಪಿನ ಮತ್ತು ಸಂಪಾದನೆ ಎಂದಿರುವವು. ಇವುಗಳಲ್ಲಿ ಮೊದಲನೆಯ ಮೂರು ಸಮಯಗಳು ಪ್ರಮುಖವಿದ್ದು ಅವುಗಳ ಪೀಠಗಳು ಅನುಕ್ರಮವಾಗಿ ಮೈಸೂರು ಸಂಸ್ಥಾನದಲ್ಲಿ ಚಿತ್ರಕಲ್‌ದುರ್ಗ, ಗದಗ ತಾಲೂಕಿನಲ್ಲಿ ಡಂಬಳ ಮತ್ತು ಹುಬ್ಬಳ್ಳಿ ಎಂಬಲ್ಲಿ ಇರುವವು. ಈ ಪೀಠದ ಅಧಿಕಾರಿಗಳಿಗೆ ರಾಜಮಹಾರಾಜರಿಂದ ಸನ್ಮಾನದ ಬಿರುದುಗಳು ದೊರೆತಿರುವವು. ಅವುಗಳಲ್ಲಿ ಇವರು ಸಂಚಾರ ಮಾಡುವಾಗ ಸಾರ್ವಜನಿಕ ಮಾರ್ಗಗಳ ಮೇಲೆ ಅಡ್ಡಪಾಲಿಕೆಯಲ್ಲಿ ಕೂಡ್ರುವದೊಂದು ಹೆಚ್ಚಿನ ಮರ್ಯಾದೆಯ ಚಿಹ್ನವು. ಈ ಮರ್ಯಾದೆಯು ಮೈಸೂರು ಸಂಸ್ಥಾನದಲ್ಲಿರುವ ಶೃಂಗೇರಿಮಠದ ಗುರುಗಳ ಹೊರತು ಯಾರಿಗೂ ಇರುವುದಿಲ್ಲ. ಮೈಸೂರು ಸಂಸ್ಥಾನದ ಮಹಾರಾಜರು ಲಿಂಗಾಯತರಿರುವಾಗ ಈ ಬಿರುದು ಚಿತ್ರಕಲ್ಮಠದ ಸ್ವಾಮಿಗಳಿಗೆ ದೊರೆತು, ಮುಂದೆ ಅವರು ಲಿಂಗಾಯತ ಧರ್ಮವನ್ನು ಬಿಟ್ಟು ೧೬೧೦ನೇ ಇಸ್ವಿಯಲ್ಲಿ ವೈಷ್ಣವಧರ್ಮವನ್ನು ಸ್ವೀಕರಿಸಿದ ಮೇಲೆ ಬ್ರಾಹ್ಮಣವಿರೋಧದಿಂದ ಈ ಸ್ವಾಮಿಗಳಿಂದ ಆ ಬಿರುದನ್ನು ಕಸಿದುಕೊಂಡಂತೆ ತೋರುತ್ತದೆ.

೧೯೦೨ ನೇ ಇಸ್ವಿಯ ಸುಮಾರಕ್ಕೆ ಚಿತ್ರಕಲ್ಲದುರ್ಗದ ಪೀಠವು ಬರಿದಾಗಿತ್ತು. ಇದನ್ನು ತುಂಬುವ ಅಧಿಕಾರವು ಇಡೀ ಲಿಂಗಾಯತ ಸಮಾಜಕ್ಕೆ ಸೇರಿರುತ್ತದೆ. ಆಗ ಇದಕ್ಕೆ ಉಮೇದವಾರರು ಇಬ್ಬರು. ಒಬ್ಬರು ಈಗ ಆ ಪೀಠದ ಮುಖ್ಯ ಅಧಿಕಾರಿಗಳಾಗಿರುವ ಶ್ರೀಮನ್ನಿರಂಜನ ಜಗದ್ಗುರು ಶ್ರೀ ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳು. ಇವರು ಸೊಲ್ಲಾಪುರದಲ್ಲಿ ವಾರದ ಸಂಸ್ಕೃತಪಾಠಶಾಲೆಯಲ್ಲಿ ಅಭ್ಯಾಸಮಾಡಿ ಆಮೇಲೆ ಕೆಲವು ವರ್ಷ ಶ್ರೀಮಂತ ಮಲ್ಲಪ್ಪ ಉರ್ಫ ಅಪ್ಪಾಸಾಹೇಬ ಇವರ ಆಶ್ರಯದಿಂದ ಕಾಶಿಯಲ್ಲಿ ಅಭ್ಯಾಸ ಮಾಡಿದವರಾಗಿದ್ದರು. ಇವರಿಗೆ ಅಪ್ಪಾಸಾಹೇಬರ ಬೆಂಬಲವಿತ್ತು. ಇನ್ನೊಬ್ಬ ಉಮೇದುವಾರರು ಶ್ರೀ. ನಿ. ಹಾನಗಲ್ ಕುಮಾರ ಸ್ವಾಮಿಗಳು. ಇವರಿಗೆ ಧಾರವಾಡ ಪ್ರಾಂತ ಜನರ ಬೆಂಬಲವಿತ್ತು. ಎರಡೂ ಭಾಗದ ಜನರು ಮಠದಲ್ಲಿ ಕೂಡಿ ಮತಗಳನ್ನು ಹಾಕಲಾಗಿ ಮೊದಲನೆಯವರಿಗೆ ಹೆಚ್ಚು ಮತಗಳು ಬಿದ್ದು,

ಮಠಾಧಿಕಾರಿಗಳಾಗಿ ಆರಿಸಲ್ಪಟ್ಟರು. ಮೈಸೂರು ಸರ್ಕಾರದ ನಿಯಮಗಳ ಪ್ರಕಾರ ಇದಕ್ಕೆ ಆ ಸರ್ಕಾರದ ಒಪ್ಪಿಗೆಯೂ ದೊರೆಯಿತು. ಆಗ ನಾನು ಧಾರವಾಡ ಪ್ರಾಂತದ ಜನರ ಕೂಡ ಚಿತ್ರಕಲ್ಲದುರ್ಗದ ಮಠಕ್ಕೆ ಹೋಗಿದ್ದೆನು. ವಿರಕ್ತಮಠಾಧಿಕಾರಿಗಳ ಅಧಿಕಾರವು ಇಡೀ ಲಿಂಗಾಯತ ಸಮಾಜದ ಮೇಲಿದ್ದರೂ ರೂಢಿಯಿಂದ ಅದು ಅವರ ಪೀಠಗಳ ಸುತ್ತು ಮುತ್ತಲಿನ ಭಾಗಗಳಲ್ಲಿ ಮಾತ್ರ ವಿಶೇಷವಾಗಿ ನಡೆಯುತ್ತದೆ. ಈ ರೀತಿ ಡಂಬಳ ಮತ್ತು ಹುಬ್ಬಳ್ಳಿ ಪೀಠಾಧಿಕಾರಿಗಳ ಅಧಿಕಾರವು ಸಂಕುಚಿತವಾಗಿರುತ್ತದೆ. ಇವರಿಬ್ಬರ ಭಾಗಗಳನ್ನು ಬಿಟ್ಟು ಉಳಿದ ಎಲ್ಲ ಭಾಗಗಳಲ್ಲಿ ಚಿತ್ರಕಲ್ಲದುರ್ಗದ ಅಧಿಕಾರವು ನಡೆಯುತ್ತದೆ. ಈಗಿನ ಅಧಿಕಾರಿಗಳು ಒಳ್ಳೇ ಮಹತ್ವಾಕಾಂಕ್ಷಿಗಳು. ತಮಗೂ ಸಹ ಅಡ್ಡಪಾಲಿಕೆಯ ಮರ್ಯಾದೆಯು ದೊರೆಯಬೇಕೆಂದು ಇವರ ಹಂಬಲ. ಮೈಸೂರ ಸಂಸ್ಥಾನದ ಪರಿಸ್ಥಿತಿಯಲ್ಲಿ ಆ ಸಂಸ್ಥಾನದಲ್ಲಿ ಅವರಿಗೆ ಈ ಮರ್ಯಾದೆಯು ದೊರೆಯುವುದು ಅಶಕ್ಯವಿತ್ತು. ಆದುದರಿಂದ ಬ್ರಿಟಿಶರ ಆಳಿಕೆಯಲ್ಲಿರುವ ಭಾಗದಲ್ಲಿಯಾದರೂ ಅದನ್ನು ದೊರಕಿಸಬೇಕೆಂದು ಅವರ ಇಚ್ಛೆ. ಈ ಭಾಗದ ಕೇಂದ್ರವು ಧಾರವಾಡ. ಇಲ್ಲಿಯ ಜನರು ಡಂಬಳ ಮತ್ತು ಹುಬ್ಬಳ್ಳಿ ಪೀಠಾಧಿಕಾರಿಗಳನ್ನು ಬಿಟ್ಟು ಚಿತ್ರಕಲ್ಲದುರ್ಗದ ಅಧಿಕಾರಿಗಳ ಬಗ್ಗೆಯೆ ಮಾತ್ರ ಪ್ರಯತ್ನಪಡುವುದು ಶಕ್ಯವಿದ್ದಿಲ್ಲ. ಹುಬ್ಬಳ್ಳಿಯ ಮಠಾಧಿಕಾರಿಗಳ ಈ ಮರ್ಯಾದೆಯ ಹಕ್ಕಿನ ವಿಷಯವಾಗಿ ವ್ಯಾಜ್ಯವು ಹಿಂದಕ್ಕೊಮ್ಮೆ ಪ್ರಿವ್ಹಿ ಕೌನ್ಸಿಲ್ಲದವರಿಗೆ ಹೋಗಿದ್ದು, ಅವರ ವಿರುದ್ಧ ನಿರ್ಣಯವಾಗಿತ್ತು. ಈಗ ಮೂರು ಮುಖ್ಯ ಪೀಠಾಧಿಕಾರಿಗಳಿಗೆ ಈ ಹಕ್ಕನ್ನು ದೊರಕಿಸಿಕೊಡುವ ಬಗ್ಗೆ ಪ್ರಯತ್ನಗಳು ನಡೆದವು. ಈ ಭಾಗದ ಭಕ್ತಜನರು ಈ ಬಗ್ಗೆ ಧಾರವಾಡ ಕಲೆಕ್ಟರ ಸಾಹೇಬರಿಗೆ ಅರ್ಜಿಯನ್ನು ಮಾಡಿದರು. ಧಾರವಾಡ ಜಿಲ್ಹೆಯ ಕೂಡಲಗಿ ಎಂಬ ಗ್ರಾಮದಲ್ಲಿ ಶ್ರೀ ಶಂಕರಾಚಾರ್ಯರ ಒಂದು ಮಠವಿದೆ. ಅದರ ಪರವಾಗಿ ಬ್ರಾಹ್ಮಣರು ಲಿಂಗಾಯತರು ಮಾಡಿದ ಅರ್ಜಿಗೆ ವಿರೋಧಿಗಳಾದರು. ಆ ಕಾಲಕ್ಕೆ ಜಿಲ್ಹಾಧಿಕಾರಿಗಳು ಲಿಂಗಾಯತರಿಗೆ ಸಹಾನುಭೂತಿಯುಳ್ಳವರಾಗಿದ್ದರು. ಸಾರ್ವಜನಿಕ ರಸ್ತೆಗಳನ್ನು ಎರಡನೆಯವರಿಗೆ ತೊಂದರೆಯಾಗದಂತೆ ಯಾರಾದರೂ ಬೇಕಾದ ಹಾಗೆ ಉಪಯೋಗಿಸಬಹುದು ಎಂಬ ಸಾಮಾನ್ಯ ನಿಯಮದ ಆಧಾರದ ಮೇಲಿಂದ, ಈ ಮೂವರು ಸ್ವಾಮಿಗಳಿಗೆ ಅಡ್ಡಪಾಲಿಕೆಯ ಸಂಚಾರದ ಹಕ್ಕು ಇರುವದೆಂದು ನಿರ್ಣಯವಾಯಿತು. ಈ ವ್ಯಾಜ್ಯದಲ್ಲಿ ಅರ್ಜಿದಾರರವತಿಯಿಂದ ಜನಾರ್ದನ ಪಂತ ಅಠವಲೆ, ಸಿದ್ಧರಾಮಪ್ಪ ಪಾವಟೆ, ವೀರಪ್ಪ ಬಿಳೆಲಿಂಗಡಿ ಮತ್ತು ಬೆಂಗಳೂರಿನ ಶ್ರೀ ಪಿ. ಮಹದೇವಯ್ಯನವರು ವಕೀಲರಿದ್ದರು. ಈ ಪ್ರಕರಣವು ಮುಂಬೈ ಸರ್ಕಾರದ ವರೆಗೆ ಹೋಗಿ ಕಲೆಕ್ಟರ ಸಾಹೇಬರು ಮಾಡಿದ ನಿರ್ಣಯವು ಸ್ಥಿರಗೊಳಿಸಲ್ಪಟ್ಟಿತು.

## ವಿಕ್ಟೋರಿಯಾ ಜುಬಿಲಿ ಇನಾಮ ಫಂಡ

೧೮೮೭ನೇ ಇಸ್ವಿಯಲ್ಲಿ ಮಹಾರಾಣಿ ವಿಕ್ಟೋರಿಯಾ ಸುವರ್ಣ ಜುಬಿಲಿಯ ನಿಮಿತ್ತ ಬೆಳಗಾವಿ ಜಿಲ್ಹೆಯ ಅಥಣಿ ತಾಲೂಕಿನ ಮಹಾಜನರು ೧೦೦೦ ರೂ. ಗಳ ನಿಧಿ ಕೂಡಿಸಿ, ಅದರಿಂದ ಸರಕಾರಿ ಪ್ರಾಮಿಜರಿ ನೋಟುಗಳನ್ನು ಕೊಂಡು, ಅದರಲ್ಲಿ ೬೦೦. ರೂ. ಗಳು ಮತ್ತು ಅವುಗಳ ಮೇಲಿನ ಬಡ್ಡಿಯಿಂದ ಲಿಂಗಾಯತರಲ್ಲಿ ಮೊದಲು LL.B. ಪದವಿಯನ್ನು ಪಡೆದ ಇಬ್ಬರು ವಿದ್ಯಾರ್ಥಿಗಳಿಗೆ ಒಂದೊಂದು ಇನಾಮು ಮತ್ತು ಉಳಿದ ೪೦೦. ರೂ. ಗಳು ಮತ್ತು ಅವುಗಳ ಮೇಲಿನ ಬಡ್ಡಿಯಿಂದ ಲಿಂಗಾಯತರಲ್ಲಿ ಮೊದಲು M.A ಪದವಿಯನ್ನು ಪಡೆದ ವಿದ್ಯಾರ್ಥಿಗೆ ಒಂದು ಇನಾಮು ಕೊಡುವಂತೆ ಗೊತ್ತುಪಡಿಸಿ, ಆ ಪ್ರಾಮಿಜರಿ ನೋಟುಗಳನ್ನು ಸರಕಾರದಲ್ಲಿ ಠೇವು ಇಟ್ಟಿದ್ದರು. ಈ ಇನಾಮುಗಳನ್ನು ಬೆಳಗಾವಿಯ ಕಲೆಕ್ಟರ ಸಾಹೇಬರು ಸಾರ್ವಜನಿಕ ಸಭೆಯಲ್ಲಿ ಆ ವಿದ್ಯಾರ್ಥಿಗಳಿಗೆ ಕೊಡಬೇಕೆಂದು ಗೊತ್ತಾಗಿತ್ತು. ಶ್ರೀ ಪಾವಟೆ ಸಿದ್ಧರಾಮಪ್ಪನವರು ೧೮೯೮ನೇ ಇಸ್ವಿಯಲ್ಲಿ LL.B ಪರೀಕ್ಷೆ ಪಾಸಾಗಿ ಮರುವರ್ಷ ವಿಶ್ವವಿದ್ಯಾಲಯದಿಂದ ಅದರ ಪದವಿಯನ್ನು ಹೊಂದಿದರು.

ಶ್ರೀ ಬಿಳೇಲಿಂಗಡಿ ವೀರಪ್ಪನವರು ಮತ್ತು ನಾನು ೧೯೦೧ನೇ ಇಸ್ವಿಯಲ್ಲಿ ಆ ಪರೀಕ್ಷೆಯಲ್ಲಿ ಪಾಸಾಗಿ ಮರುವರ್ಷ ಪದವಿಯನ್ನು ಹೊಂದಿದೆವು. ನಮ್ಮಿಬ್ಬರಲ್ಲಿ ನನಗೆ ಪರೀಕ್ಷೆಯಲ್ಲಿ ಹೆಚ್ಚು ಗುಣಗಳು ಬಿದ್ದಿರುವುದರಿಂದ, ೧ನೇ ಇನಾಮು ಪಾವಟೆಯವರಿಗೆ ಹೋಗಲಾಗಿ ೨ನೇ ಇನಾಮು ಸುಮಾರು ೧೦ ತೋಲಿಯ ಬಂಗಾರದ ಪದಕ ನನಗೆ ಕೊಡಬೇಕೆಂದು ಗೊತ್ತಾಯಿತು. ಇವುಗಳನ್ನು ಕೊಡುವ ಸಮಾರಂಭವು ೧೯೦೨ ನೇ ಇಸ್ವಿಯಲ್ಲಿ ಬೆಳಗಾವಿಯ ಕಲೆಕ್ಟರ ಸಾಹೇಬರ ಹಸ್ತದಿಂದ ಜರುಗಿತು. ಆ ಸಮಾರಂಭಕ್ಕೆ ಶ್ರೀಮಂತ ಲಿಂಗಪ್ಪ ಜಾಯಪ್ಪ ಸರದೇಸಾಯಿ, ಸಂಸ್ಥಾನ ನವಲಗುಂದ ಅವರು ಮತ್ತು ಡೆಪ್ಯುಟಿ ಕಲೆಕ್ಟರರಾದ ರಾ.ಬ. ಅರಟಾಳ ರುದ್ರಗೌಡರು ಹಾಜರಿದ್ದರು. ಸಮಾರಂಭವು ಮುಗಿದ ಮೇಲೆ ದೇಸಾಯರು ಶ್ರೀ ಪಾವಟೆಯವರನ್ನು ಮತ್ತು ನನ್ನನ್ನು ತಮ್ಮ ಬಗಿಯೊಳಗೆ ಕೂಡ್ರಿಸಿಕೊಂಡು ಬಾಜಾರದೊಳಗಿಂದ ಹಾಯ್ದು, ತಮ್ಮ ಬಂಗಲೆಗೆ ಕರೆದುಕೊಂಡು ಹೋಗಿ ಒಳ್ಳೇ ಸನ್ಮಾನ ಮಾಡಿದರು.

## ಕೆಲವು ಕೌಟುಂಬಿಕ ಸಂಗತಿಗಳು

ಇನ್ನು ಪುನಃ ಕೆಲವು ಕುಟುಂಬದ ಸಂಗತಿಗಳ ಕಡೆಗೆ ತಿರುಗೋಣ. ಗೋಕಾವಿಯಲ್ಲಿ ನನ್ನ ತಾಯಿಗೆ ವೀರಪ್ಪನೆಂಬ ಮಗನು ಮೊದಲು ಹುಟ್ಟಿ, ಕನ್ನಡ ಶಿಕ್ಷಣಹೊಂದಿ ಅಂಗಡಿಯಲ್ಲಿ ತಂದೆಗೆ ಸಹಾಯಕನಿರುವಾಗ ತುಸು ದಿವಸಗಳ ಮೇಲೆ ತೀರಿಕೊಂಡನು. ಆಮೇಲೆ ರೇವಪ್ಪನೆಂಬುವನು ಹುಟ್ಟಿ ೧-೨ ವರ್ಷ ಇಂಗ್ಲೀಷ ಅಭ್ಯಾಸ ಮಾಡಿ ಆಮೇಲೆ ಅಂಗಡಿಯಲ್ಲಿ ಕೂಡ್ರಹತ್ತಿದನು. ೩ನೆಯವನಾದ ಸಿದ್ಧಲಿಂಗನು ಇಂಗ್ಲೀಷ ಶಾಲೆಯಲ್ಲಿ ಅಭ್ಯಾಸಮಾಡಹತ್ತಿದನು. ಕಡೆಗೆ ಹುಟ್ಟಿದ ನೀಲವ್ವನೆಂಬುವಳು ಚಿಕ್ಕಂದಿನಲ್ಲಿಯೇ ತೀರಿಕೊಂಡಳು.

ನನ್ನ ಎರಡನೆ ಲಗ್ನವು ಧಾರವಾಡದಲ್ಲಿ ೧೯೦೦ನೇ ಇಸ್ವಿಯ ಮೇ ತಿಂಗಳಲ್ಲಿ ಆಯಿತು. ಮುಂದೆ ೧೯೦೧ ನೇ ಇಸ್ವಿಯ ಡಿಸೆಂಬರ ೩೧ನೇ ತಾರೀಖಿನ ದಿವಸ ನನ್ನ ಹಿರೇ ಮಗನಾದ ಸಿದ್ದಪ್ಪನು ಹುಟ್ಟಿದನು. ಆಮೇಲೆ ಒಂದು ೧ ವರ್ಷ ಅಂತರದಿಂದ ಮೂವರು ಮಕ್ಕಳು ಹುಟ್ಟಿ, ಹುಟ್ಟಿದ ದಿವಸವೇ ತೀರಿಕೊಂಡವು. ಈ ಅವಧಿಯಲ್ಲಿ ನನ್ನ ಮಾವಂದಿರಿಗೆ ಸಹ ಇಬ್ಬರು ಮಕ್ಕಳು ಹುಟ್ಟಿ ಅವು ಸಹ ಹುಟ್ಟಿದ ಕೆಲವು ದಿವಸಗಳ ನಂತರ ತೀರಿಕೊಂಡವು. ಈ ಕಾಲಕ್ಕೆ ಅಂದರೆ ೧೯೦೫ನೇ ಇಸ್ವಿಯ ಸುಮಾರಕ್ಕೆ ನಾನು ನನ್ನ ಮಾವಂದಿರ ಮನೆಬಿಟ್ಟು, ಬೇರೆ ಇರಲಿಕ್ಕೆ ಹತ್ತಿದೆನು. ನನ್ನ ಮಾವಂದಿರಿಗೆ ಅವಲ ಕಾರಕೂನಿಯ ಹುದ್ದೆಯ ಮೇಲೆ ಬೇರೆ ತಾಲೂಕಿಗೆ ವರ್ಗವಾಗಿ ಹೋದ ಮೇಲೆ, ಸುಮಾರು ೧೯೦೭ನೇ ಇಸ್ವಿಯಲ್ಲಿ ಅವರ ಮನೆಯು ಖಾಲಿಯಾಗಿರುವುದರಿಂದ ಪುನಃ ಅಲ್ಲಿ ಇರಹತ್ತಿದೆನು. ಮುಂದೆ ಅದೇ ಇಸ್ವಿಯ ನವ್ಹೆಂಬರ ೨೪ನೇ ತಾರೀಖಿನ ದಿನ ನನ್ನ ಮಗನಾದ ದಾನಪ್ಪನು ಹುಟ್ಟಿದನು. ಇದರ ಮುಂದಿನ ಸಂಗತಿಗಳನ್ನು ಹೇಳುವ ಮೊದಲು ನಾನು ನನ್ನ ಮಾವಂದಿರ ಮನೆಯಲ್ಲಿ ಎಂಥ ಪರಿಸ್ಥಿತಿಯಲ್ಲಿ ಕಾಲ ಕಳೆಯಬೇಕಾಗಿತ್ತು ಎಂಬುದನ್ನು ವಿವರಿಸಿದರೆ, ನನ್ನ ವ್ಯಕ್ತಿ ವೈಶಿಷ್ಟ್ಯವು ಒಡೆದು ಕಾಣುವುದು.

ಯಾವ ಕಾಲದಲ್ಲಿಯಾದರೂ ಯಾವ ಖಾತೆಯಲ್ಲಾದರೂ, ಕೆಳಗಿನ ದರ್ಜೆಯಲ್ಲಿರುವ ಸರಕಾರಿ ನೌಕರರು ಲಂಚ ತೆಗೆದುಕೊಳ್ಳುವ ರೂಢಿಯು ಅವರ ಮೈಯುಂಡಿರುತ್ತದೆ. ಮಧ್ಯಮ ವೃತಿಯ ನೌಕರರಲ್ಲಿ ಬಹುಜನರು ಇದಕ್ಕೆ ಅಪವಾದವಾಗಿರುವುದಿಲ್ಲ. ನನ್ನ ಮಾವಂದಿರ ತಂದೆ ರಾಚಪ್ಪನವರು ಇದರಿಂದ ಬಹಳ ಹಣ ಸಂಪಾದಿಸಿದ್ದನು. ಈ ಕಾರಣದಿಂದಲೇ ಸರಕಾರದವರು ಅವರನ್ನು ನೌಕರಿಯಿಂದ ತೆಗೆದುಹಾಕಿದಂತೆ ತೋರುತ್ತದೆ. ನನ್ನ ಮಾವಂದಿರು ಇವರ ಮೊದಲನೆ ಹೆಂಡತಿಯ ಮಗ. ಇವರ ಎರಡನೆ ಹೆಂಡತಿಯಿಂದ ಒಬ್ಬ ಮಗಳು ಒಬ್ಬ ಮಗನು ಹುಟ್ಟಿದ್ದರು. ನಾನು ಮೊದಲನೆ ಸಾರೆ ಧಾರವಾಡಕ್ಕೆ ಹೋಗುವ ತುಸು ದಿವಸಗಳ

ಮುಂಚೆ, ಇವರು ನನ್ನ ಮಾವಂದಿರಿಗೆ ಪಾಲು ಮಾಡಿ ಕೊಟ್ಟಿದ್ದರು. ಇವರ ಪಾಲಿಗೆ ಕೆಲವು ಸಾವಿರ ರೂಪಾಯಿಗಳೂ ಧಾರವಾಡ ಜೇಲಿನ ಹತ್ತಿರವಿರುವ ಒಂದು ಸಣ್ಣ ಬಂಗಲೆಯೂ ಬಂದಿದ್ದವು. ಅದರ ಹತ್ತಿರ ಬೆಳಗಾವಿಯ ರಸ್ತೆಯ ಮೇಲಿರುವ ದೊಡ್ಡ ಬಂಗಲೆಯು ಇವರ ಮತ್ತು ಇವರ ಮಲತಮ್ಮನ ನಡುವೆ ಸಾಮೂಹಿಕವಾಗಿತ್ತು. ತಮಗೆ ಬಂದ ರೋಖ ಹಣದೊಳಗಿಂದ ಅವರು ಇರಹತ್ತಿದ ಮನೆಯನ್ನೂ ಮತ್ತು ಸಬ್‌ಜಜ್ಜ ಕೋರ್ಟಿನ ಹತ್ತಿರ ಈಗ ಡಾ. ಶಿರೂರ ಇರುವ ಬಂಗಲೆಯನ್ನು ಕೊಂಡಿದ್ದರು. ಇವರಿಗಾದರೂ ಲಂಚ ತೆಗೆದುಕೊಳ್ಳುವ ಚಟವು ಅಂಟಿಕೊಂಡಿತ್ತು. ಆದರೆ ಅದು ದೊರಕುವ ಹುದ್ದೆಯು ಯಾವಾಗಲೂ ಇರಬೇಕಲ್ಲವೇ ? ಇಂಥವರನ್ನು ಅಕೌಂಟ ವಿಭಾಗಕ್ಕೆ ವರ್ಗಮಾಡಿ ಆ ಚಟವನ್ನು ತಪ್ಪಿಸುವ ಒಂದು ಮಾರ್ಗ.

ಪ್ರತಿಷ್ಠಿತ ಜನರು ಸೂಳೆಯನ್ನು ಇಡುವ ರೂಢಿಯು ಸಹ ಆಗ ಪ್ರಚಾರದಲ್ಲಿತ್ತು. ಈ ರೂಢಿಯು ಸಹ ನನ್ನ ಮಾವಂದಿರನ್ನು ಬಿಟ್ಟಿದ್ದಿಲ್ಲ. ಇವುಗಳಿಗಿಂತಲೂ ಹೆಚ್ಚಿನ ಚಟವೆಂದರೆ ಕುಡಿಯುವದು. ಇದು ಆರಂಭವಾಗಬೇಕಾದರೆ ಪ್ಲೇಗ ಪ್ರತಿಬಂಧಕ ಉಪಾಯವೆಂದು ಇದನ್ನು ಅವಲಂಬಿಸಹತ್ತಿದರೆಂದು ಹೇಳುತ್ತಿದ್ದರು. ಆದರೆ ಹಾಗೆ ಹೇಳುವವರಲ್ಲಿ ಸತ್ಯಾಂಶವಿದ್ದಂತೆ ತೋರಲಿಲ್ಲ. ಈ ಚಟವು ನನ್ನ ಮಾವಂದಿರ ಬಂಧುವಾದ ಮಾಮಲೆದಾರ ರಾಚಪ್ಪನವರ ಮಕ್ಕಳಾದ ಗಂಗಾಧರಪ್ಪ ಮತ್ತು ಚಂದ್ರಶೇಖರಪ್ಪ ಮತ್ತು ಇವರ ಆಪ್ತರಾದ ರಾಣೇಬೆನ್ನೂರು ಬಣಗಾರ ಮನೆತನದವರು ಮತ್ತು ಇವರ ಹಿರಿಯ ಅಳಿಯರಾದ ಸೀರಿ ಪುಟ್ಟಪ್ಪನವರು, ಈ ಎಲ್ಲರನ್ನೂ ಆವರಿಸಿಕೊಂಡಿತ್ತು.

ಆ ಕಾಲದ ಬ್ರಿಟಿಶ್ ಅಧಿಕಾರಿಗಳು ಕಚೇರಿಗೆ ಹೋಗುವಾಗ ಮತ್ತು ಫಿರತಿಯ ಮೇಲೆ ಹೋಗುವಾಗ ಕುದುರೆಯ ಉಪಯೋಗವನ್ನು ಮಾಡುತ್ತಿದ್ದರು. ಮಾಮಲೆದಾರ ರಾಚಪ್ಪನವರು ಆರಂಭದಲ್ಲಿ ಕಾರಕೂನರಿರುವಾಗ ಸಹ ಕುದುರೆಯ ಮೇಲೆ ಕೂತು ಹೋಗುತ್ತಿದ್ದರೆಂದು ಇವರ ಮಕ್ಕಳು ವರ್ಣನೆ ಮಾಡುತ್ತಿದ್ದರು. ಇವರ ಚಿಕ್ಕಮಗನಾದ ಗರಗದ ಶಂಕರಪ್ಪನು ಗರಗಲ್ಲಿ ಕುರ್ಲಿ ಮನೆತನಕ್ಕೆ ದತ್ತಕ ಹೋಗಿದ್ದು, ಇನ್ನೂ ಹೈಸ್ಕೂಲಿನಲ್ಲಿ ಅಭ್ಯಾಸ ಮಾಡುತ್ತಿದ್ದನು. ಅವನ ಅಣ್ಣಂದಿರು ಹೆಸರಿಗೆ ಒಂದು ಅರಿವೆಯ ಅಂಗಡಿಯನ್ನಿಟ್ಟಿದ್ದು, ಹಿರಿಯರು ಸಂಪಾದಿಸಿದ ಆಸ್ತಿಯ ಉತ್ಪನ್ನದಿಂದಲೇ ತಮ್ಮ ಪ್ರಪಂಚವನ್ನು ಸಾಗಿಸುತ್ತಿದ್ದರು. ಅಂಗಡಿಯ ವ್ಯವಹಾರವನ್ನು ಇವರ ಆಪ್ತನಾದ ಹಡಗಲಿ ಪುಟ್ಟಪ್ಪನೆಂಬುವನು ನೋಡಿಕೊಳ್ಳುತ್ತಿದ್ದನು. ಇವರು ಯಾವಾಗಾದರೂ ತುಸು ಹೊತ್ತು ಅಂಗಡಿಯಲ್ಲಿ ಕೂತು ನನ್ನ ಮಾವಂದಿರ ಮನೆಯ ಮೇಲೆ ಹಾಯ್ದು ತಮ್ಮ ಮನೆಗೆ ಹೋಗುತ್ತಿದ್ದರು. ನನ್ನ ಮಾವಂದಿರು ಇವರನ್ನು ಮುಂದೆ ಬಿಡದೆ ತಮ್ಮಲ್ಲಿಯೇ ಊಟವಾಗಲೆಂದು ಕರೆಯುತ್ತಿದ್ದರು. ರಾಣೇಬೆನ್ನೂರ ಮತ್ತು ಮುಂಡರಗಿಯ ಆಪ್ತರು ಧಾರವಾಡಕ್ಕೆ ಬಂದರೆ ಬಹಳ ಸಾರೆ ನನ್ನ ಮಾವಂದಿರಲ್ಲೇ ಊಟಕ್ಕೆ ಬರುತ್ತಿದ್ದರು. ಊಟಕ್ಕೆ ಕೂಡುವದಕ್ಕಿಂತ ಮುಂಚೆ ಹೆಚ್ಚು ಕಡಿಮೆ ಕುಡಿಯುವದು ನಡೆಯಲಿಕ್ಕೇ ಬೇಕು. ಊಟಕ್ಕೆ ಕೂತಾಗ ಹೊರಗಿನವರು ಯಾರಾದರೂ ಇವರನ್ನು ನೋಡಿದರೆ ಇವರು ಪೂರ್ಣ ಸ್ಮೃತಿಯಿಂದಿದ್ದ ಬಗ್ಗೆ ಸಂಶಯವುಂಟಾಗುತ್ತಿತ್ತು. ಪಂಕ್ತಿಯಲ್ಲಿ ರಾವು ತುಂಬುತ್ತಿತ್ತು. ನಾನು ಈ ಗುಂಪನ್ನು ಸೇರಬೇಕೆಂದು ಇವರೆಲ್ಲರ ಇಚ್ಛೆಯಿದ್ದರೂ ನನ್ನ ಸ್ವಭಾವವನ್ನು ನೋಡಿ, ಇವರಲ್ಲಿ ಯಾರೂ ನನ್ನ ಮೇಲೆ ಒತ್ತಾಯಪಡಿಸಲಿಲ್ಲ. ಇದೊಂದು ನನ್ನ ಪೂರ್ವ ಸುಕೃತದ ಫಲವೆಂದೇ ಹೇಳಬೇಕು. ಇಂಥ ಗುಂಪಿನಲ್ಲಿ ನಾನು ಸುಮಾರು ೬ ವರ್ಷ ಕಳೆದೆನು. ನನ್ನ ಮಾವಂದಿರು ಬಹಳ ಉದಾರಿಗಳಿದ್ದರೆಂದು ಮೇಲೆ ಹೇಳಿರುವೆನಷ್ಟೇ. ಆದರೆ ಇವರಿಗೆ ಉದಾರಿಗಳೆನ್ನುವದಕ್ಕಿಂತ ದುಂದುಗಾರರೆಂದು ಅನ್ನುವದು ಯೋಗ್ಯವು. ಮೇಲೆ ಹೇಳಿದಂತೆ ಇವರ ವರ್ತನವಿರುವುದರಿಂದ ಇವರಿಗೆ ದೊರೆಯುವ ಪಗಾರವು ಇವರಿಗೆ ಸಾಕಾಗದೆ, ಇವರ ಪಾಲಿಗೆ ಬಂದ ಹಣವೆಲ್ಲ ಹೋಗಿ, ಕೋರ್ಟಿನ ಹತ್ತರಿರುವ ಬಂಗ್ಲೆಯನ್ನು ರಾಣೇಬೆನ್ನೂರು ಬಣಗಾರರಿಗೆ ಮಾರಿದರು.

ಈ ಬಣಗಾರ ಮನೆತನದ ವಿಷಯವಾಗಿ ಹೇಳುವದು ನನ್ನ ಚರಿತ್ರಕ್ಕೆ ಸಂಬಂಧವಿಲ್ಲದಿದ್ದರೂ, ಆ ಬಗ್ಗೆ ಒಂದೇ ಒಂದು ಸಂಗತಿಯನ್ನು ಇಲ್ಲಿ ಹೇಳುತ್ತೇನೆ. ಆ ಮನೆತನದ ರಾ.ಬ. ಸಿದ್ದಪ್ಪನೆಂಬುವನು ಒಳ್ಳೇ ರೀತಿಯಿಂದ ನಡೆದು ತನ್ನ ಮನೆತನದ ಯೋಗ್ಯತೆಯನ್ನು ಕಾಯ್ದುಕೊಂಡು ಪ್ರಸಿದ್ಧನಾಗಿರುವನಷ್ಟೇ. ಅವನ ಅಣ್ಣನಾದ ಪುಟ್ಟಪ್ಪನಲ್ಲಿ ಎಲ್ಲ ತರದ ದುಶ್ಚಟಗಳು ಸೇರಿ ಮನೆತನದ ಎಷ್ಟೋ ಆಸ್ತಿಯನ್ನು ಹಾಳುಮಾಡಿ, ನನ್ನ ಮಾವಂದಿರು ಮಾರಿದ ಬಂಗ್ಲೆಯನ್ನು ಸಹ ಶಿರೂರ ಡಾಕ್ಟರರಿಗೆ ಒತ್ತಿ ಹಾಕಿ, ತುಸು ಹಣ ತೆಗೆದುಕೊಂಡಿದ್ದನು. ಮುಂದೆ ಮನೆತನದ ಆಸ್ತಿಯಲ್ಲಿ ಪಾಲು ದೊರೆಯಬೇಕೆಂದು ಅದಕ್ಕೆ ಹಕ್ಕುದಾರರಿಂದ ಇತರರ ಮೇಲೆ ಕೋರ್ಟಿನಲ್ಲಿ ೧೯೧೫ ಸುಮಾರಕ್ಕೆ ವ್ಯಾಜ್ಯ ಹೂಡಿದನು. ಆಗ ಅದು ಪಂಚರ ಕಡೆಗೆ ನಿರ್ಣಯಕ್ಕೆ ಕಳಿಸಲ್ಪಟ್ಟಿತು. ನಾನೂ ಪಂಚರಲ್ಲಿ ಒಬ್ಬನಿದ್ದೆನು. ಅವನು ಒತ್ತಿಕೊಟ್ಟ ಬಂಗ್ಲೆಯನ್ನು ಅವನ ಪಾಲಿಗೆ ಹಾಕಿ ಶಿರೂರವರ ಕಡೆಯಿಂದ ಸಲ್ಲತಕ್ಕ ಹಣವನ್ನು ಅವನಿಗೆ ಕೊಡಿಸಿತು. ಒಬ್ಬೊಬ್ಬರ ಪಾಲಿಗೆ ಸುಮಾರು ೫೦೦೦೦ ಬೆಲೆಯ ಆಸ್ತಿಯು ಬಂತು. ಅದನ್ನೆಲ್ಲ ತುಸು ದಿವಸಗಳಲ್ಲಿಯೇ ಪುಟ್ಟಪ್ಪನು ಕಳೆದುಕೊಂಡು, ತನ್ನ ತಮ್ಮನ ಮನೆಯಲ್ಲಿ ಊಟಮಾಡಿಕೊಂಡಿರುತ್ತಾನೆ.

## ನಾನು ನೌಕರಿಯನ್ನು ಸೇರಿದ್ದು

ಸರಕಾರಿ ನ್ಯಾಯಖಾತೆಯ ಹೆಚ್ಚಿನ ಸ್ಥಾನಗಳನ್ನು ಸೇರಲಿಚ್ಛಿಸುವವರು ೩೦ ವರ್ಷಗಳೊಳಗಿನವರು ಇರಬೇಕಾಗುತ್ತದೆ. ಈ ನಿರ್ಬಂಧದ ಅಡಚಣೆಯನ್ನು ದೂರ ಮಾಡುವುದಕ್ಕೆ ಕೆಲವರು ತಮ್ಮ ವಯಸ್ಸನ್ನು ನಿಜವಾದ ವಯಸ್ಸಿಗಿಂತ ಕಡಿಮೆ ಹಚ್ಚುತ್ತಾರೆ. ಹೀಗೆ ಮಾಡುವುದು ಕ್ಷಮ್ಯವೆಂದು ಸಾಧಾರಣವಾಗಿ ತಿಳಿಯುತ್ತಾರೆ. ನಾನು ಸಹ ನನ್ನ ವಯಸ್ಸನ್ನು ೧½ ವರ್ಷ ಕಡಿಮೆ ಹಚ್ಚಿದೆನು. ಲಿಂಗಾಯತರಲ್ಲಿ ಸಬ್‌ಜಡ್ಜ ಕೆಲಸವನ್ನು ಹಿಂದಕ್ಕೆ ಅಂದರೆ ೧೮೮೦ರ ಮುಂಚೆ ಬೆಳಗಾವಿಯ ಶ್ರೀ ಪಂಡಿತ ವೀರಭದ್ರಪ್ಪನವರೆಂಬವರೊಬ್ಬರೇ ಮಾಡಿದ್ದರೆಂದು ತಿಳಿಯುತ್ತದೆ. ಆಮೇಲೆ ಈ ಕೆಲಸಕ್ಕೆ ಯೋಗ್ಯರಾದವರು ಶ್ರೀ ಪಾವಟೆಯವರು, ಬಿಳೇಅಂಗಡಿಯವರು ಮತ್ತು ನಾನು. ಮೊದಲನೆಯವರು ಈ ಕೆಲಸದಲ್ಲಿ ಸೇರಲಿಕ್ಕೆ ಹೆಚ್ಚು ಪ್ರಯತ್ನ ಮಾಡಲಿಲ್ಲ. ಎರಡನೆಯವರಿಗೆ ವಯಸ್ಸು ಹೆಚ್ಚಾಗಿದ್ದರಿಂದ ಈ ಕೆಲಸವು ದೊರೆಯುವ ಸಂಭವವಿದ್ದಿಲ್ಲ. ನನಗೆ ದೊರೆಯುವ ಸಂಭವವಿದ್ದರೂ ಸಕಾಲದಲ್ಲಿ ಆ ಕೆಲಸದ ಒಂದು ಸ್ಥಾನವು ಬರಿದಾಗಿರಬೇಕಲ್ಲವೇ ? ಈ ತೊಂದರೆಯನ್ನು ದೂರ ಮಾಡಲಿಕ್ಕೆ ಸರ್ಕಾರದವರು ಒಂದು ನಿಯಮವನ್ನು ಮಾಡಿದ್ದರು. ಅದೇನೆಂದರೆ ಜಡ್ಜ ಕೋರ್ಟ ಅಥವಾ ಒಂದನೆಯ ವರ್ಗ ಸಬ್‌ಜಡ್ಜ ಕೋರ್ಟದಲ್ಲಿ ಕೆಲವು ನಿರ್ದಿಷ್ಟ ಸ್ಥಾನಗಳಲ್ಲಿ ಕೆಲಸಕ್ಕೆ ಹತ್ತಿದ್ದರೆ ಅಂಥವರಿಗೆ ೩೦ ವರ್ಷ ಮೀರಿದ್ದರೂ ಸಬ್‌ಜಡ್ಜ ಕೆಲಸ ದೊರೆಯುತ್ತಿತ್ತು. ನನಗೆ ೩೦ ವರ್ಷ ಆಗುತ್ತ ಬಂದಿದ್ದರೂ ಕೂಡಲೆ ಸಬ್‌ಜಡ್ಜ ಕೆಲಸ ದೊರೆಯುವ ಸಂಭವ ಕಂಡುಬಾರದ್ದರಿಂದ ಜಡ್ಜ ಕೋರ್ಟಿಲ್ಲಿ ೧೯೦೭ನೇ ಇಸ್ವಿಯಲ್ಲಿ ಕೆಲಸಕ್ಕೆ ಸೇರಿದೆನು. ಅದೇ ವರ್ಷದ ಡಿಸೆಂಬರ ತಿಂಗಳಲ್ಲಿ ನನ್ನನ್ನು ಸಬ್‌ಜಡ್ಜ ಕೆಲಸಕ್ಕೆ ನಿಯಮಿಸಿಕೊಂಡ ಹುಕುಮ ದೊರೆಯಿತು. ಇದರಿಂದ ಇಡೀ ಲಿಂಗಾಯತ ಸಮಾಜವರಿಗೆ ಸಮಾಧಾನವೆನಿಸಿತು. ರಾಣೆಬೆನ್ನೂರು ಬಣಗಾರ ಮನೆತನದ ವಯೋವೃದ್ಧ ಹಿರಿಯ ಮನುಷ್ಯನು ನನ್ನ ಹೆಂಡತಿಯ ಅಕ್ಕತಂಗಿಯರ ಲಗ್ನವಾದ ಮೇಲೆ ನಿನಗೆ ಮುನಸೀಫನು ಗಂಡನಾಗಿ ದೊರೆಯುವನೆಂದು ಆಕೆಗೆ ಚೇಷ್ಟೆ ಮಾಡುತ್ತಿದ್ದನಂತೆ. ಆ ಮಾತು ಈಗ ನಿಜವಾಯಿತು. ಈ ಕೆಲಸವನ್ನು ನನಗೆ ದೊರಕಿಸಿ ಕೊಡುವಲ್ಲಿ ಮೆ. ಎಂಥೋವೆನ್ ಸಾಹೇಬರು ಸಹಾಯ ಮಾಡಿದರೆಂದು ಇಲ್ಲಿ ಹೇಳದೆ ಇರಲಾರೆನು. ಆ ಕಾಲಕ್ಕೆ ಧಾರವಾಡದ ಕಲೆಕ್ಟರರಾಗಿರುವ ಮೆ. ಹಡ್ಸನ್ ಸಾಹೇಬರ ಸಹಾಯವೂ ಆಯಿತು. ನನ್ನನ್ನು ಮೊದಲು ಬೆಳಗಾವಿ ಕೋರ್ಟಿನ ಜಾಯಂಟ ಸಬ್‌ಜಡ್ಜ ಕೆಲಸಕ್ಕೆ

ನಿಯಮಿಸಿದರು. ಅಲ್ಲಿ ೧೯೦೮ ನೇ ಇಸ್ವಿಯ ಬೇಸಿಗೆಯ ರಜೆಯ ವರೆಗೆ ಕೆಲಸ ಮಾಡಿದ ಮೇಲೆ ತಿರುಗಿ ಧಾರವಾಡ ಜಜ್ಜ ಕೋರ್ಟಿನಲ್ಲಿಯ ಮೊದಲನೆ ಸ್ಥಳಕ್ಕೆ ಹೋಗಬೇಕಾಯಿತು. ಆಮೇಲೆ ಅದೇ ವರ್ಷ ಸಪ್ಟೆಂಬರ ತಿಂಗಳಲ್ಲಿ ನನ್ನನ್ನು ಕುಲಾಬಾ ಜಿಲ್ಹೆಯಲ್ಲಿಯ ಅಲೀಭಾಗ ಸಬ್‌ಜಜ್ ಸ್ಥಳಕ್ಕೆ ನೇಮಿಸಿದರು. ಅದು ಮುಂಬಯಿಯ ದಕ್ಷಿಣಕ್ಕೆ ಸಮುದ್ರ ದಂಡೆಯ ಮೇಲೆ ೩ ತಾಸಿನ ಉಗಿ ಡೋಣಿಯ ಪ್ರವಾಸದ ಅಂತರದ ಮೇಲಿದೆ. ಅಲ್ಲಿ ನಾನು ನನ್ನ ತಾಯಿ, ಹೆಂಡತಿ ಮತ್ತು ಚಿಕ್ಕ ಮಗು ಸಹಿತ ಹೋದೆನು. ಆಗ ಅಲ್ಲಿ ಪ್ಲೇಗದ ಹಾವಳಿಯು ನಡೆದಿತ್ತು. ಊರೊಳಗೆ ಇರುವ ಹಾಗಿದ್ದಿಲ್ಲ. ಕೋರ್ಟಿನ ಆವಾರದೊಳಗೆ ಸಾಕ್ಷಿದಾರರ ಸಲುವಾಗಿ ಇರುವ ಕಟ್ಟಡದಲ್ಲಿ ಅಡಿಗೆ ಮಾಡಿಕೊಂಡು ಕೋರ್ಟ ಕಟ್ಟಡದ ಒಂದು ಭಾಗದಲ್ಲಿ ತುಸು ದಿವಸ ಉಳಿದು, ಆಮೇಲೆ ಎರಡನೆ ಕಡೆಗೆ ಹೋಗುವ ವ್ಯವಸ್ಥೆ ಮಾಡಿಕೊಂಡೆನು. ಆ ಜಿಲ್ಹೆಯು ಮುಂಬಯಿ ಇಲಾಖೆಯ ದಕ್ಷಿಣ ಭಾಗದಲ್ಲಿರುವದರಿಂದ ಕೆಲವು ಕನ್ನಡ ಭಾಗದ ಅಧಿಕಾರಿಗಳು ಸಹ ಅಲ್ಲಿ ಇದ್ದರು. ಆಗ ಅವರು ಕಟ್ಟಡದ ಕಚೇರಿಯಲ್ಲಿ ಚಿಟ್‌ನೀಸರಾಗಿದ್ದರು. ಶ್ರೀ ಗಜೇಂದ್ರಗಡಕರ ಎಂಬುವರು ಅವರೊಳಗಿನವರೊಬ್ಬರು. ಅವರು ಬಿ.ಎ. ಪರೀಕ್ಷೆಯಲ್ಲಿ ಪಾಸಾದ ಕೂಡಲೆ ಬೆಳಗಾವಿ ಹೈಸ್ಕೂಲಿನಲ್ಲಿ ಶಿಕ್ಷಕರಾಗಿದ್ದು, ನಾನು ಅಲ್ಲಿ ೬ನೇ ಇಯತ್ತೆಯಲ್ಲಿ ಕಲಿಯುತ್ತಿದ್ದಾಗ್ಗೆ ಅವರಿಂದ ಕೆಲವು ತಿಂಗಳ ಶಿಕ್ಷಣ ಪಡೆದಿದ್ದೆನು. ಅವರು ನಿಷ್ಠುರ ಸ್ವಭಾವದವರು. ಇತಿಹಾಸ ವಿಷಯದಲ್ಲಿ Royal History of England ಪುಸ್ತಕವನ್ನು ಹಚ್ಚಿದ್ದರು. ಅದರ ಭಾಷೆಯು ಬಹಳ ಪ್ರೌಢ. ಗಜೇಂದ್ರಗಡಕರ ಅವರು ಈ ಪುಸ್ತಕದ ಭಾಗಗಳನ್ನು ಬಾಯಪಾಠಮಾಡಲು ಹೇಳಿ ವರ್ಗದಲ್ಲಿ ಹೇಳಿಸಿಕೊಳ್ಳುತ್ತಿದ್ದರು. ತಪ್ಪಿದವರಿಗೆ ಒಂದು ಬೆತ್ತದಿಂದ ಜೋರಾಗಿ ಅಂಗೈಗೆ ಹೊಡೆಯುತ್ತಿದ್ದರು. ಅದೊಂದು ಎಂದೂ ಮರೆಯದ ಶಿಕ್ಷೆ, ಇರಲಿ.

ನನಗೆ ಕೈನೋವು, ತಲೆನೋವು ಯಾವಾಗಲೂ ಇರುವವೇ. ನನ್ನ ಮಗನಾದ ದಾನಪ್ಪನಿಗೆ ಹುಟ್ಟಿದಾಗಿನಿಂದ ಒಂದರ ಮೇಲೊಂದು ಬೇನೆಗಳು ಬರಹತ್ತಿದವು. ಹುಟ್ಟಿದ ಕೂಡಲೇ ಅವನಿಗೆ Rickets ಮತ್ತು Scurvy ಎಂಬ ಬೇನೆಗಳು ಉಂಟಾಗಿ ಕೈಕಾಲುಗಳಲ್ಲೆಲ್ಲ ನೋವು ಇದ್ದು, ಎತ್ತಿಕೊಳ್ಳಲಿಕ್ಕೆ ಸಹ ಬರದಂತೆ ಅವನ ಸ್ಥಿತಿ ಇತ್ತು. ಎಷ್ಟೋ ದಿವಸ ಈ ಬಗ್ಗೆ ಔಷಧೋಪಚಾರಗಳು ನಡೆದು ಪೂರ್ಣ ನೆಟ್ಟಗಾಗುವದರೊಳಗಾಗಿ ಅವನಿಗೆ ಗೊಬ್ಬರ ಎದ್ದವು. ಅವು ಮಾಯುವದರೊಳಗಾಗಿ ಅತಿಸಾರ ಹತ್ತಿತು. ಇದರಿಂದ ಅವನು ಉಳಿಯುವ ಸಂಭವ ತೋರದ ಕಾಲಕ್ಕೆ ಸಮೀಪದಲ್ಲಿಯೇ ಇರುತ್ತಿದ್ದ ಗಜೇಂದ್ರಗಡಕರ ಅವರ ತಾಯಿಯು ಒಂದು ಔಷಧ ಹೇಳಿದಳು. ಅದರಿಂದ ಅವನಿಗೆ ಗುಣವಾಗಹತ್ತಿತು.

ಅವನಿಗೆ ದಾನಪ್ಪ ಎಂಬ ಹೆಸರು ಯಾವ ಕಾರಣದಿಂದ ಬಂತು ಎಂಬುದನ್ನು ಇಲ್ಲಿ ಹೇಳುವದು ಅವಶ್ಯ. ಹಿರೇ ಮಗನಾದ ಸಿದ್ದಪ್ಪನು ಹುಟ್ಟಿದ ಮೇಲೆ ಮೂರು ಕೂಸುಗಳು ಒಂದೇ ಸವನೆ ಹುಟ್ಟಿದ ದಿವಸವೇ ತೀರಿಕೊಂಡದ್ದರಿಂದ ಹೀಗೆ ಯಾಕಾಯಿತೆಂಬ ವಿವಂಚನೆಯು ಮನೆಯಲ್ಲಿ ವಿಶೇಷವಾಗಿ ಮನೆಯ ಹೆಣ್ಣುಮಕ್ಕಳಲ್ಲಿ ಉಂಟಾಗುವದು ಸಹಜ. ಹೆಣ್ಣು ಮಕ್ಕಳು ವಾಡಿಕೆಯಾಗಿ ಇಂಥ ಪ್ರಸಂಗದಲ್ಲಿ ಜ್ಯೋತಿಷಿಯನ್ನು ಕೇಳುವ ಸಂಪ್ರದಾಯ. ಅವರಲ್ಲಿ ವಯಸ್ಸಾದವರಿದ್ದರಂತೂ ಅದೊಂದು ಮುಖ್ಯ ಕೆಲಸವೇ ಆಗಿರುತ್ತದೆ. ನನ್ನ ಮಾವಂದಿರ ಮನೆಯಲ್ಲಿ ಆಗ ಸಾತಮ್ಮನೆಂಬ ಅವರ ಅಕ್ಕ ಮತ್ತು ಬಸಮ್ಮನೆಂಬ ಒಬ್ಬ ಸಂಬಂಧಿಕಳು ಇರುತ್ತಿದ್ದಳು. ಬಸಮ್ಮನು ಬಹಳ ಗಡಬಡಿಯವಳು. ಆಕೆ ಈ ಬಗ್ಗೆ ವಿಚಾರಿಸಿ ನಾವು ನಮ್ಮ ಮನೆದೇವರನ್ನು ಮರೆತುಬಿಟ್ಟಿರುವ ಕಾರಣ ಹಾಗಾಗಹತ್ತಿದೆಯೆಂದು ಸುದ್ದಿ ತಂದಳು. ಆಮೇಲೆ ಶೋಧಮಾಡಲಾಗಿ ಶ್ರೀ ಗುಡ್ಡಾಪುರ ದಾನಮ್ಮನು ನಮ್ಮ ಮನೆ ದೇವತೆಯೆಂದು ಗೊತ್ತಾಗಿ, ಇನ್ನು ಮುಂದೆ ಹುಟ್ಟುವ ಕೂಸಿಗೆ ಆಕೆಯ ಹೆಸರು ಇಡಬೇಕೆಂದು ನಿರ್ಣಯವಾಯಿತು. ಈ ಕಾರಣದಿಂದ ಅವನಿಗೆ ದಾನಪ್ಪನೆಂಬ ಹೆಸರು ಬಂದಿರುವದು. ಅವನಿಗೆ ಮೇಲಿಂದ

ಮೇಲೆ ಬೇನೆಗಳು ಯಾಕೆ ಉಂಟಾಗುತ್ತಿರುತ್ತವೆ ಎಂಬುದೂ ಒಂದು ಸಮಸ್ಯೆ. ಮನೆಯಲ್ಲಿ ಯಾರಾದರೂ ಅವನು ಹುಟ್ಟಿದ ಮೇಲೆ ಶ್ರೀ ದಾನಮ್ಮನ ಕ್ಷೇತ್ರಕ್ಕೆ ಹೋಗಿಬರಬೇಕೆಂಬ ಹರಕೆಯನ್ನು ಹೊತ್ತಿರಬೇಕು ಮತ್ತು ಅದನ್ನು ಪೂರ್ಣ ಮಾಡದ ಹೊರತು ಅವನು ನೆಟ್ಟಗಾಗುವದಿಲ್ಲೆಂಬ ಅಭಿಪ್ರಾಯವು ಉಂಟಾಯಿತು. ಆಗ ಅವನಿಗೆ ಮೂರನೇ ವರ್ಷ ತುಂಬುತ್ತ ಬಂದಿತ್ತು. ಅಷ್ಟರೊಳಗಾಗಿ ದೇವಸ್ಥಾನಕ್ಕೆ ಹೋಗಿ ಬರಬೇಕು. ಆಗ ಇನ್ನೂ ಹಿಂಗಾರಿ ಮಳೆಗಾಲ ಆದರೂ ಎರಡನೆ ಉಪಾಯವಿಲ್ಲದೆ ದೇವಸ್ಥಾನಕ್ಕೆ ಹೋಗಿ ಬರಬೇಕೆಂದು ಅಲಿಬಾಗದಿಂದ ಹೊರಟೆವು. ಗುಡ್ಡಾಪುರವು ವಿಜಾಪುರದಿಂದ ೧೨ ಹರದಾರಿ ಅಂತರದ ಮೇಲಿದೆ. ಆಗ ಈ ದಾರಿಯಲ್ಲಿ ಚಕ್ಕಡಿಯಿಂದಲೇ ಪ್ರವಾಸ ಮಾಡಬೇಕಾಗುತ್ತಿತ್ತು. ನಾವು ಮುಂಬೈಗೆ ಬಂದು ಒಂದು ಖಾನಾವಳಿಯಲ್ಲಿ ಇಳಕೊಂಡಾಗ, ಅಲ್ಲಿಯ ಜನರು ಇಂಥ ಜಡ್ಡಿನಲ್ಲಿರುವ ಕೂಸನ್ನು ತೆಗೆದುಕೊಂಡು ಈ ಕಾಲದಲ್ಲಿ ಇಷ್ಟು ದೂರ ಪ್ರವಾಸ ಹೇಗೆ ಮಾಡುತ್ತೀರೆಂದು ಆಕ್ಷೇಪಿಸಿದರು. ದಾನಮ್ಮನೇ ಕಾಯತಕ್ಕವಳೆಂದು ನಮ್ಮ ಪ್ರಯಾಣವನ್ನು ಮುಂದುವರಿಸಿ ವಿಜಾಪುರಕ್ಕೆ ಬಂದೆವು. ಆಗ ಅಲ್ಲಿ ಶ್ರೀ ಘಾಳಿ ಸತ್ಯಪ್ಪನೆಂಬುವರು ಮಾಮಲೆದಾರರಿದ್ದರು. ಮುಂದಿನ ಪ್ರವಾಸಕ್ಕೆ ಅವರ ದಮಣಿ ಗಾಡಿಯನ್ನು ತೆಗೆದುಕೊಂಡು ಹೊರಟೆವು. ಮಧ್ಯದಲ್ಲಿ ದಾರಿ ದೂರ ಇರುವುದರಿಂದ ಎಲ್ಲಿಯಾದರೂ ವಸತಿ ಇರಬೇಕಾಗುತ್ತಿತ್ತು. ಸಿದ್ಧನಾಥ ಎಂಬ ಗ್ರಾಮಕ್ಕೆ ಬಂದಾಗ ಮುಂದಿನ ಊರಿಗೆ ಹೋಗುವಷ್ಟು ದಿವಸವು ಉಳಿದಿತ್ತು. ಆದರೂ ಆಕಾಶದಲ್ಲಿ ಮೋಡ ಕವಿದಿತ್ತು. ಆ ಗ್ರಾಮವು ಒಂದು ದೊಡ್ಡ ಹಳ್ಳದ ದಂಡೆಯ ಮೇಲೆ ಇರುತ್ತದೆ. ಮಳೆ ಬಂದು ಹಳ್ಳವು ತುಂಬಿ ಹರಿಯಹತ್ತಿದರೆ ನಮ್ಮ ಗಾಡಿಯು ಅದನ್ನು ದಾಟಿ ಹೋಗುವದು ದುಸ್ತರವು. ಈ ಭೀತಿಯಿಂದ ನಾವು ಅಲ್ಲಿಯೇ ಒಂದು ದೇವಸ್ಥಾನದಲ್ಲಿಳಿದುಕೊಂಡೆವು. ಮುಂದೆ ತುಸು ಹೊತ್ತಿನಲ್ಲಿಯೇ ನಾವು ನಿರೀಕ್ಷಿಸಿದಂತೆ ಒಂದು ದೊಡ್ಡ ಮಳೆಯು ಹೊಯ್ಯಿತು. ಹಳ್ಳವು ತುಂಬಿ ಹರಿಯ ಹತ್ತಿತು. ಶ್ರೀ ದಾನಮ್ಮನೇ ನಮ್ಮನ್ನು ಉಳಿಸಿದಳೆಂದು ಸಮಾಧಾನ ಪಟ್ಟೆವು. ಮರುದಿವಸ ಗುಡ್ಡಾಪುರಕ್ಕೆ ಮುಟ್ಟಿದೆವು. ದೇವಸ್ಥಾನವು ವಿಶಾಲವಾಗಿದ್ದು, ಅದರಲ್ಲಿ ಆಕೆಯ ಗುರುಗದ್ದಿಗೆ ಮತ್ತು ಆಕೆಯ ಇಷ್ಟದೇವರಾದ ಮಲ್ಲಿಕಾರ್ಜುನಲಿಂಗವು ಸಹ ಅವೆ. ಆಕೆಯ ಮೂರ್ತಿಯು ಬಹಳ ಸುಂದರವಾಗಿ ಕರೇ ಕಲ್ಲಿನಿಂದ ಮಾಡಲ್ಪಟ್ಟಿದ್ದು, ದಿನಾಲು ಮುಂಜಾನೆ ಮಧ್ಯಾಹ್ನ ಮತ್ತು ಸಾಯಂಕಾಲಗಳಲ್ಲಿ ಪೂಜೆಯು ನಡೆಯುತ್ತದೆ. ಮುಂಜಾನೆ ಕುಮಾರಿಯಂತೆ, ಮಧ್ಯಾಹ್ನದಲ್ಲಿ ಯುವತಿಯಂತೆ ಮತ್ತು ಸಾಯಂಕಾಲ ವೃದ್ಧ ಸ್ತ್ರೀಯಂತೆ, ಆ ಮೂರ್ತಿಗೆ ಉಡುಪನ್ನು ಹಾಕಿ ಮೈತುಂಬ ಪುಷ್ಪಾಭರಣಗಳನ್ನು ಧರಿಸಿ, ಆಡಂಬರದಿಂದ ಆಕೆಯ ಪೂಜೆಯನ್ನು ಮಾಡುತ್ತಾರೆ. ಆಕೆಯ ಭಕ್ತರು ಬಹು ದೂರದ ವರೆಗಿದ್ದು ಇಡೀ ವರ್ಷ ತಮಗೆ ಬೇಕಾದಾಗ ಬರುತ್ತಿರುತ್ತಾರೆ. ಅಲ್ಲಿ ನಡೆಯುವ ಪೂಜಾಪುನಸ್ಕಾರಗಳನ್ನು ನೋಡಿ ಅವರ ಪ್ರಯಾಣದ ಶ್ರಮವೆಲ್ಲ ಮರೆತು ಆನಂದಭರಿತರಾಗುತ್ತಾರೆ. ಆಕೆಯು ಮಹಾ ದೊಡ್ಡ ಶರಣೆ. ತ್ರಿಕಾಲದಲ್ಲಿ ಗುರುವಿನ ಪಾದೋದಕವನ್ನು ಸೇವಿಸಲೇ ಬೇಕು. ನಾವು ಅಲ್ಲಿ ನಮ್ಮ ಹರಕೆಯನ್ನು ಪೂರೈಸಿಕೊಂಡು ಮರುದಿವಸ ಅಲ್ಲಿಂದ ಹೊರಟು ಸುರಕ್ಷಿತವಾಗಿ ತಿರುಗಿ ಅಲಿಭಾಗಕ್ಕೆ ಮುಟ್ಟಿದೆವು. ದಾನಮ್ಮನ ದಯೆಯಿಂದ ದಾನಪ್ಪನ ಬೇನೆಯೆಲ್ಲ ಹೋಗಿಬಿಟ್ಟಿತು.

೧೯೧೯ನೇ ಸಾಲಿನಲ್ಲಿ ಅಲಿಭಾಗ ಕೋರ್ಟಿನಲ್ಲಿ ಕೆಲಸವು ಕಡಿಮೆಯಾದ್ದರಿಂದ ಅಕ್ಟೋಬರದಿಂದ ೩ ತಿಂಗಳ ವರೆಗೆ ಅದೇ ಜಿಲ್ಹೆಯ ದಕ್ಷಿಣಕ್ಕಿರುವ ಮಹಾಡ ತಾಲೂಕಿನ ಸಬ್‌ಜಜ್ಜನಿಗೆ ಸಹಾಯವಾಗುವ ಸಲುವಾಗಿ ನನ್ನನ್ನು ಅಲ್ಲಿಗೆ ಕಳಿಸಿದರು. ಅದು ಅಲಿಭಾಗದಿಂದ ಸುಮಾರು ನಾಲ್ಕು ತಾಸು ಸಮುದ್ರ ದಂಡೆಗುಂಟ ಪ್ರವಾಸದ ನಂತರ ದಂಡೆಯ ಒಳಗೆ ಸುಮಾರು ೨೦ ಮೈಲು ಅಂತರದ ಮೇಲಿದೆ. ಈ ಪಟ್ಟಣವು ಸಹ ಸಮುದ್ರ ಪಾತಳಿಯ ಎತ್ತರದ ಮೇಲಿದ್ದು ಒಂದು ಸಣ್ಣ ಹೊಳೆಯ ದಂಡೆಯ ಮೇಲೆ ಅದೆ. ಸಮುದ್ರವು ಏರಿದಾಗ ಆ

ಪಟ್ಟಣದ ವರೆಗೆ ನೀರು ಬರುತ್ತದೆ. ಅಲ್ಲಿ ಈಶ್ವರನ ಮುಖ್ಯ ದೇವಸ್ಥಾನವಿದ್ದು, ಅದರ ಪೂಜಾರಿಯು ಲಿಂಗಧಾರಿಯಾದ ಗೊರವನಿದ್ದನು. ಮತ್ತು ಅಲ್ಲಿಯ ವ್ಯಾಪಾರಸ್ಥರ ಮುಖ್ಯಸ್ಥನು ಮಹಾಜನ ಎಂಬುವನಿದ್ದು, ಅವನು ಸಹ ಲಿಂಗಾಯತನಿದ್ದನು. ಆ ಊರಿನಿಂದ ತುಸು ಅಂತರದ ಮೇಲೆ ಒಂದು ಹೊಲದೊಳಗೆ ಒಂದು ಬಿಸಿ ನೀರಿನ ಝರಿಯಿದ್ದು, ಅದರ ಸಲುವಾಗಿ ಕಟ್ಟಿದ ಒಂದು ಸಣ್ಣ ೨ ಫೂಟು ಎತ್ತರದೊಳಗಿನ ಹೌದಿನೊಳಗಿಂದ ಹಾಯ್ದು ಮುಂದೆ ಹರಿಯ ಹತ್ತುತ್ತದೆ. ಆ ಹೌದಿನೊಳಗೆ ಕೂತುಬಿಟ್ಟರೆ ಶರೀರಕ್ಕೆ ಆರಾಮವೆನಿಸುತ್ತದೆ. ಅಲ್ಲಿಂದ ಸುಮಾರು ೧೫ ಮೈಲುಗಳ ಅಂತರದ ಮೇಲೆ ಸಹ್ಯಾದ್ರಿ ಘಟ್ಟದ ತುದಿಯ ಮೇಲೆ ಶಿವಾಜಿಯ ಪಟ್ಟಾಭಿಷೇಕ ಹೊಂದಿದ ರಾಯಗಡ ಕೋಟೆಯು ಇರುತ್ತದೆ. ಅದರೊಳಗೆ ಒಂದು ಸ್ವಚ್ಛ ನೀರಿನ ಕೆರೆಯು ಉಂಟು. ಅರಮನೆಯು ಎಲ್ಲಾ ಬಿದ್ದು ಹೋಗಿ, ಅದರ ಕೆಲವು ಗೋಡೆಗಳು ಮಾತ್ರ ನಿಂತಿದ್ದವು. ಒಂದು ಚಿಕ್ಕ ಬಾಜಾರದ ಗುರುತುಗಳು ಸಹ ಇದ್ದವು. ಅಲ್ಲಿ ಹೋಗಿ ನಾನು ಅದನ್ನು ನೋಡಿ ಬಂದೆನು.

ನಾನು ನನ್ನ ಮನೆಯವರನ್ನೆಲ್ಲ ಅಲೀಭಾಗದಲ್ಲಿ ಬಿಟ್ಟು ಒಬ್ಬನೇ ಒಬ್ಬ ಅಡುಗಿಯ ಮನುಷ್ಯನನ್ನು ಕರೆದುಕೊಂಡು ಮಹಾಡಕ್ಕೆ ಹೋಗಿದ್ದೆನು. ಆ ಅವಧಿಯಲ್ಲಿ ೧ನೇ ನವಂಬರ ದಿವಸ ಗಂಗಾಧರನು ಅಲೀಭಾಗದಲ್ಲಿ ಹುಟ್ಟಿದನು. ನನ್ನ ಸಂಗಡ ತೆಗೆದುಕೊಂಡ ಮನುಷ್ಯನು ಧಾರವಾಡದ ಹತ್ತಿರ ಇರುವ ಹೆಬ್ಬಳ್ಳಿಯ ವೀರಪ್ಪನೆಂಬವನು. ಅವನು ಬಹಳ ದಿವಸಗಳ ವರೆಗೆ ನನ್ನ ಮಾವಂದಿರಲ್ಲಿ ಕೆಲಸಕ್ಕೆ ಇದ್ದನು. ನಾನು ನೌಕರಿಯ ಮೇಲೆ ಹೋಗುವಾಗ ಅವನನ್ನು ನನ್ನ ಕಡೆಗೆ ತೆಗೆದುಕೊಂಡೆನು. ಅವನು ಬಹಳ ವಿಶ್ವಾಸಿಕನೂ, ಮನಃ ಪೂರ್ವಕವಾಗಿ ಕೆಲಸ ಮಾಡುವವನೂ ಆಗಿದ್ದು ಮನೆಯವನಂತೆಯೇ ಇದ್ದನು. ಅವನು ಕಡೆತನಕ ನಮ್ಮಲ್ಲಿಯೇ ಕೆಲಸ ಮಾಡಿ, ನಾನು ವಿಜಾಪುರದಲ್ಲಿ ಕೆಲಸಮಾಡುತ್ತಿದ್ದಾಗ ೧೯೨೮ನೇ ಇಸ್ವಿಯಲ್ಲಿ ಅಲ್ಲಿಯೇ ತೀರಿಕೊಂಡನು.

ಅಲಿಬಾಗವು ಜಿಲ್ಹೆಯ ಮುಖ್ಯಸ್ಥಳವಾಗಿದ್ದರೂ ಅದೊಂದು ಸಣ್ಣ ಊರು. ಅಲ್ಲಿ ಒಂದು ವೇದಶಾಲೆಯೂ ಮತ್ತು ಸಮುದ್ರ ದಂಡೆಯಿಂದ ತುಸು ಅಂತರದೊಳಗೆ ಒಂದು ಚಿಕ್ಕ ಕೋಟೆಯೂ ಇರುತ್ತದೆ. ಇಳಿತವಿದ್ದಾಗ ಸಮುದ್ರದೊಳಗಿಂದ ಹಾದು ಆ ಕೋಟೆಗೆ ಹೋಗಿ ಬರುವ ಹಾಗಿದೆ. ದಿವಾಣಿ ಕೆಲಸದ ಸಲುವಾಗಿ ಈ ಜಿಲ್ಹೆಯ ಠಾಣೆ ಜಿಲ್ಹೆಯ ಜಜ್ಜರ ಆಧೀನಕ್ಕೊಳಪಟ್ಟಿದೆ. ೧೯೧೧ನೇ ಸಾಲಿನ ಬೇಸಿಗೆಯ ರಜೆಯ ಆರಂಭದಲ್ಲಿ ನನಗೆ ಕಾರವಾರ ಜಿಲ್ಹೆಯ ಶಿರಸಿಗೆ ವರ್ಗವಾಯಿತು. ಪ್ರತಿ ವರ್ಷ ಬೇಸಿಗೆಯ ರಜೆಯ ಕಾಲದಲ್ಲಿ ಗೋಕಾವಿ ಮತ್ತು ಧಾರವಾಡದ ಕಡೆಗೆ ಬರುತ್ತಿದ್ದೆನು. ಅದೇ ರೀತಿ ೧೯೧೧ನೇ ಇಸ್ವಿಯಲ್ಲಿ ಬಂದು ಮುಂದೆ ಕೋರ್ಟು ಆರಂಭವಾಗುವ ಕಾಲಕ್ಕೆ ಶಿರಸಿಗೆ ಹೋದೆನು. ಅಲ್ಲಿ ಹೋಗಬೇಕಾದರೆ ಹಾವೇರಿ ಸ್ಟೇಶನಕ್ಕಿಳಿದು ಮುಂದೆ ೪೫ ಮೈಲು ಬೇರೆ ವಾಹನದಿಂದ ಪ್ರವಾಸ ಮಾಡಬೇಕು. ದೇವಿಹೊಸೂರು ಚನಬಸಪ್ಪ ಶೆಟ್ಟರು ಮೊದಲಿನಿಂದಲೂ ನನ್ನ ಪರಿಚಿತರು. ಅವರು ದೊಡ್ಡ ಜಮೀನುದಾರರಲ್ಲದೆ ವ್ಯಾಪಾರವನ್ನು ಸಹ ಮಾಡುತ್ತಿದ್ದರು. ಹಾವೇರಿಯಲ್ಲಿ ಅವರ ದಲಾಲಿ ಅಂಗಡಿಯು ಇತ್ತು. ಅವರು ನನಗೆ ಶಿರಸಿಗೆ ಹೋಗುವ ಅನುಕೂಲತೆಗಳನ್ನೆಲ್ಲ ಮಾಡಿಕೊಟ್ಟು, ನಾನು ಶಿರಸಿಗೆ ಮುಟ್ಟುವಂತೆ ಮಾಡಿದರು. ನಾನು ಅಲ್ಲಿ ಒಂದೇ ವರ್ಷ ಕೆಲಸಮಾಡಿದೆನು. ಅಲ್ಲಿ ಹೋದ ಮೇಲೆ ತುಸು ದಿವಸಗಳಲ್ಲಿ ನನ್ನ ತಾಯಿಯು ಗೋಕಾವಿಯಲ್ಲಿ ಪ್ಲೇಗದಿಂದ ತಾ। ೧೬-೧೧-೧೯೧೧ನೇ ದಿವಸಗಳಲ್ಲಿ ತೀರಿಕೊಂಡಳು. ಶಿರಸಿಯಲ್ಲಿಯೂ ಪ್ಲೇಗ ಆರಂಭವಾಗಿತ್ತು. ಆಗ ಊರೊಳಗಿರುವ ಕೋರ್ಟಿನ ಇಮಾರತಿಯನ್ನು ಬಿಟ್ಟು ಊರ ಹೊರಗಿರುವ ಒಂದು ಸರಕಾರೀ ಬಂಗಲೆಯಲ್ಲಿ ಕೆಲಸ ನಡೆಸಬೇಕಾಯಿತು. ನಾತಾಳಿಯ ರಜೆಯಲ್ಲಿ ನಾನು ಬನವಾಸಿಯ ಮಧುಕೇಶ್ವರನ ದರ್ಶನಕ್ಕೆ ಹೋಗಿದ್ದೆನು. ಆಗ ನನ್ನ ಹೆಂಡತಿಯು ಗರ್ಭಿಣಿಯಿದ್ದು ಹಡೆಯುವ ದಿವಸ ಸಮೀಪಿಸಿದ್ದಿತು. ನಾನು ಬನವಾಸಿಗೆ ಮುಟ್ಟುವಷ್ಟರಲ್ಲಿಯೇ ನನ್ನ ಹೆಂಡತಿಯು ಗಂಡು ಕೂಸನ್ನು ಹಡೆದಳೆಂಬ ಸುದ್ದಿ ಬಂತು. ದೇವರ ದರ್ಶನ

ತೆಗೆದುಕೊಂಡು ನಾನು ಕೂಡಲೆ ತಿರುಗಿ ಬಂದೆನು. ನಾನು ಬನವಾಸಿಗೆ ಹೋದಾಗ ಕೂಸು ಹುಟ್ಟಿದ್ದರಿಂದ ಅದಕ್ಕೆ ಮಧುಕೇಶ್ವರನೆಂಬ ಹೆಸರಿಡಲಾಯಿತು. ಸೂಟಿಯು ತೀರಿದ ಮೇಲೆ ತುಸು ದಿವಸಗಳಲ್ಲಿಯೇ ನನ್ನ ಮಾವಂದಿರು ಒಮ್ಮಿಂದೊಮ್ಮೆ ಹುಬ್ಬಳ್ಳಿಯಲ್ಲಿ ತೀರಿಕೊಂಡರೆಂಬ ವರ್ತಮಾನ ಬಂತು. ಅವರ ಅಕ್ಕ ಸಾತಮ್ಮನವರು ಆಗ ನಮ್ಮ ಕೂಡ ಇರುತ್ತಿದ್ದರು. ಅವರನ್ನು ಕೂಡಲೇ ಹುಬ್ಬಳ್ಳಿಗೆ ಕಳಿಸಬೇಕಾಯಿತು. ಆಗ ನಾವು ಮೇಲೆ ಹೇಳಿದಂತೆ ಊರಹೊರಗಿನ ಬಂಗ್ಲೆಯ ಒಂದು ಭಾಗದಲ್ಲಿ ಇರುತ್ತಿದ್ದೆವು. ಮನೆಯಲ್ಲಿ ನಾನು ನನ್ನ ಹೆಂಡತಿ ಆಳುಮನುಷ್ಯ ವೀರಪ್ಪ ಮತ್ತು ನಾಲ್ಕು ಜನ ಸಣ್ಣ ಮಕ್ಕಳು ಇಷ್ಟೇ ಉಳಿದೆವು. ಶಿರಸಿಯಂಥ ಮಲ್ಲಾಡದ ಹವೆ. ಮೇಲಾಗಿ ಚಳಿಗಾಲ. ಇಂಥ ಪರಿಸ್ಥಿತಿಯಲ್ಲಿ ಬಹಳ ಕಷ್ಟದಿಂದ ಕಾಲ ಕಳೆಯಬೇಕಾಯಿತು. ನನ್ನ ದೊಡ್ಡವ್ವ ಗೌರವ್ವನು ತಾ। ೨೦-೩-೧೯೧೨ ನೇ ದಿನ ಗೋಕಾವಿಯಲ್ಲಿ ತೀರಿದಳು. ಮುಂದಿನ ಬೇಸಿಗೆಯ ರಜೆಯಲ್ಲಿ ನಾನು ಧಾರವಾಡಕ್ಕೆ ಮತ್ತು ಗೋಕಾವಿಗೆ ಹೋಗಿ ರಜೆಯು ಮುಗಿದ ಮೇಲೆ ಶಿರಸಿಗೆ ಬಂದು ಕೆಲಸದ ಮೇಲೆ ಹಾಜರಾದೆನು.ಆಮೇಲೆ ನನ್ನ ತಂದೆಯು ತಾ । ೨೧-೬-೧೯೧೨ ನೇ ದಿನ ಸಿರಸಿಯಲ್ಲಿ ತೀರಿದನು. ಆಗ ನನ್ನ ಪ್ರಕೃತಿಯು ಬಹಳ ಕೆಟ್ಟಿದ್ದರಿಂದ ಉಪಚಾರದ ಬಗ್ಗೆ ಬೆಂಗಳೂರಿಗೆ ಹೋಗಬೇಕೆಂದು ಗೊತ್ತುಮಾಡಿ ೨ ೧/೨ ತಿಂಗಳ ರಜೆ ಪಡೆದುಕೊಂಡೆನು. ನಾನು ಹಾವೇರಿಯಿಂದ ಶಿರಸಿಗೆ ಹೋಗಿ ಬರುವಾಗಲೆಲ್ಲ ದೇವಿಹೊಸೂರ ಶೆಟ್ಟರ ಸಹಾಯವು ಬಹಳ ದೊರೆಯುತ್ತಿತ್ತು. ಅವರು ಧಾರವಾಡದ ಸನದತ್ತಿ ಮೂಗಪ್ಪಣ್ಣನವರ ಆಪ್ತರಿದ್ದು, ಅವರಂತೆ ಚಿಕ್ಕವರೂ, ಸಮಾಜದ ಏಳಿಗೆಯಲ್ಲಿ ಕಳಕಳಿವುಳ್ಳವರೂ, ಉತ್ಸಾಹಿ ಕಾರ್ಯಕರ್ತರೂ ಇದ್ದರು. ಶ್ರೀಮಂತ ಲಿಂಗಪ್ಪ ಜಾಯಪ್ಪ ಸರದೇಸಾಯವರು ಈ ಮೊದಲು ಲಿಂಗೈಕ್ಯರಾದದ್ದರಿಂದ ದೇವಿಹೊಸೂರ ಶೆಟ್ಟರು ತಮ್ಮ ಗ್ರಾಮದಲ್ಲಿ ಸರದೇಸಾಯಿಯವರ ಸ್ಮಾರಕವಾಗಿ ಒಂದು ಇಂಗ್ಲೀಷ ಶಾಲೆಯನ್ನು ತೆರೆಯಬೇಕೆಂದು ಆ ಬಗ್ಗೆ ಒಂದು ಕಟ್ಟಡವನ್ನು ಊರ ಹೊರಮಗ್ಗಲಿಗೆ ಕಟ್ಟಿಸಿದರು. ಅವರು ಸಮಾಜದ ವಿಷಯವಾಗಿ ಯಾವುದಾದರೂ ಮಾಡಬೇಕಾದರೆ ಬಹುತರವಾಗಿ ನನ್ನ ಕೂಡ ಆಲೋಚನೆ ಮಾಡುತ್ತಿದ್ದರು. ಈ ಸ್ಮಾರಕದ ವಿಷಯವಾಗಿಯೂ ಅವರು ನನ್ನನ್ನು ಕೇಳಿದರು. ಸರದೇಸಾಯವರು ತಮ್ಮ ಜೀವಮಾನದಲ್ಲಿ ಒಕ್ಕಲತನದ ಸುಧಾರಣೆಯ ಸಲುವಾಗಿ ತಮ್ಮ ಸಂಸ್ಥಾನದಲ್ಲಿ ಎಷ್ಟೋ ಕಾರ್ಯವನ್ನು ಮಾಡಿದ್ದರು. ನಮ್ಮ ಸಮಾಜದಲ್ಲಿ ಸಹ ಬಹಳ ಜನರು ಒಕ್ಕಲತನದ ಉದ್ಯೋಗದಲ್ಲಿ ತೊಡಗಿದವರು. ಆಗಿನ ಸರ್ಕಾರದವರು ಸಹ ಒಕ್ಕಲತನದ ಸುಧಾರಣೆಯ ಸಲುವಾಗಿ ಬಹಳ ಪ್ರಯತ್ನಮಾಡುತ್ತಿದ್ದರು. ಈ ಸಂಗತಿಗಳನ್ನು ಲಕ್ಷದಲ್ಲಿ ತಂದು ನಾನು ಶೆಟ್ಟರಿಗೆ ಸೂಚಿಸಿದ್ದೇನೆಂದರೆ - ಅವರು ಕಟ್ಟಿಸಿದ ಇಮಾರತುವನ್ನು ಒಕ್ಕಲುತನದ ಶಾಲೆಯನ್ನು ಸ್ಥಾಪಿಸುವುದಕ್ಕೋಸ್ಕರ ಸರಕಾರಕ್ಕೆ ಕೊಡಬೇಕು. ಈ ಶಾಲೆಗೆ ಸಹ ದೇಸಾಯರ ಹೆಸರಿಡಲಿಕ್ಕೆ ಸರಕಾರದವರು ಒಪ್ಪಬೇಕು. ಈ ಶಾಲೆಯಲ್ಲಿ ಅಭ್ಯಾಸ ಮಾಡಲಿಕ್ಕೆ ವಿದ್ಯಾರ್ಥಿಗಳಲ್ಲಿ ಲಿಂಗಾಯತರ ಸಂಖ್ಯೆಯು ಅರ್ಧಕ್ಕಿಂತ ಕಡಿಮೆಯಿರಬಾರದು. ಈ ಸೂಚನೆಯು ಶೆಟ್ಟರ ಮನಸ್ಸಿಗೆ ಬಂದು ಆಗ ಒಕ್ಕಲುತನದ ಖಾತೆಯ ಡೈರೆಕ್ಟರರಾದ ಮೆ. ಕೀಟಿಂಜ ಸಾಹೇಬರ ಕಡೆಗೆ ಅದನ್ನು ಕಳಿಸಿದರು. ಅವರಾದರೂ ಸಂತೋಷದಿಂದ ಇದಕ್ಕೆ ಒಪ್ಪಿ ಸರಕಾರಿಯ ಮಂಜೂರಿಯನ್ನು ಪಡೆದು ಶಾಲೆಯನ್ನು ಆರಂಭಿಸಿದರು. ಅದಕ್ಕೆ ಬೇಕಾಗುವ ಸಹಾಯವನ್ನು ಸಹ ಶೆಟ್ಟರು ಒದಗಿಸಿಕೊಟ್ಟರು. ಅವರ ಈ ಉದಾರ ಗುಣಕ್ಕಾಗಿ ಸರಕಾರದವರು ಅವರಿಗೆ ರಾವಬಹದ್ದೂರ ಪದವಿಯನ್ನು ದಯಪಾಲಿಸಿದರು. ಆ ಶಾಲೆಯು ಆಗ ಎಷ್ಟು ಬೆಳೆದಿದೆಯೆಂಬುವದು ಎಲ್ಲರ ಕಣ್ಣಿಗೆ ಕಾಣುವಂತಾಗಿದೆ.

೧೯೧೨ನೇ ಸಾಲಿನ ಜೂನ ೨ ತಾರೀಖಿಗೆ ಕೋರ್ಟಿನ ಕೆಲಸ ಎರಡನೆಯವರಿಗೊಪ್ಪಿಸಿ, ನಾನು ನನ್ನ ಹೆಂಡತಿ ನಾಲ್ಕು ಮಕ್ಕಳು ಮತ್ತು ಅಡುಗೆಯ ಮನುಷ್ಯ ವೀರಪ್ಪನ ಸಹಿತ ಬೆಂಗಳೂರಿಗೆ ಹೋಗಿ ಅಲ್ಲಿ ಸ್ಟೇಶನದ ಹತ್ತರಿರುವ ತೋಟಪ್ಪನ ಛತ್ರದಲ್ಲಿ ಇಳಕೊಂಡೆನು. ವೀರಶೈವ ಮಹಾಸಭೆಯ ೧ ನೇ ಅಧಿವೇಶನದ

ಕಾಲಕ್ಕೆ ಧಾರವಾಡದಲ್ಲಿ ಶ್ರೀಗಳಾದ ಪಿ. ಮಹದೇವಯ್ಯ ಜಿ. ಶಾಂತವೀರಪ್ಪ ಮತ್ತು ಎಚ್.ಕೆ. ವೀರಬಸಯ್ಯ ಅಡ್ವೋಕೇಟ ಇವರ ಪರಿಚಯವಾಗಿತ್ತು. ಎರಡನೇ ಅಧಿವೇಶನವು ಬೆಂಗಳೂರಿನಲ್ಲಿ ೧೯೦೬ನೇ ಸಾಲಿನಲ್ಲಿ ಜರುಗಿತು. ಆಗ ಅಲ್ಲಿಯ ಪ್ರಮುಖರಾದ ಮೈಸೂರು ಮಂತ್ರಿಮಂಡಲದ ೨ ನೇ ಕೌನ್ಸಿಲ್ಲರಾದ ಸರ್ ಕೆ.ಪಿ. ಪುಟ್ಟಣ್ಣ ಶೆಟ್ಟರು, ಶ್ರೀ ಸಿವಿಲ್ ಸರ್ಜನ್ ಟಿ.ಎಸ್. ನಂಜಪ್ಪನವರು ಮೊದಲಾದವರ ಪರಿಚಯವಾಯಿತು. ಅಲ್ಲಿ ಇವರ ಸಹವಾಸದಲ್ಲಿದ್ದು ದವಾಖಾನೆಯಲ್ಲಿ ಸುಮಾರು ಎರಡು ತಿಂಗಳು ಉಪಚಾರ ಹೊಂದಿ, ಧಾರವಾಡ ಗೋಕಾವಿಗಳಿಗೆ ಬಂದು, ಹಾಗೇ ರಬಕವಿಗೆ ಹೋಗಿ, ಅಲ್ಲಿಯ ಆಪ್ತೇಷ್ಟರಿಗೆ ಭೆಟ್ಟಿಯಾದೆನು. ಅಷ್ಟರಲ್ಲಿ ನನಗೆ ಹುಬ್ಬಳ್ಳಿಗೆ ವರ್ಗವಾದ ಹುಕುಮು ಬಂದಿದ್ದರಿಂದ ಅಲ್ಲಿಯ ಜಾಯಿಂಟ ಸಬ್‌ಜಜ್ಜ ಕೆಲಸದ ಮೇಲೆ ೧೯೧೨-೯-೧೯ ತಾರೀಖಿನ ದಿವಸ ಹಾಜರಾದೆನು.

ಆಗಿನ ಕಾಲದ ಹುಬ್ಬಳ್ಳಿಯ ಪರಿಸ್ಥಿತಿಯ ಬಗ್ಗೆ ನಾಲ್ಕು ಮಾತು ಹೇಳುವೆನು. ಲಿಂಗಾಯತ ವ್ಯಾಪಾರಸ್ಥರಲ್ಲಿ ನೀಲಿಯವರೂ, ಬೆಂಡಿಗೇರಿಯವರೂ, ವಾಲಿಯವರೂ ಇನ್ನೂ ಕೆಲವರು ಪ್ರಮುಖರು. ಇವರಲ್ಲಿ ನೀಲಿಯ ರಾಚಪ್ಪನವರೇ ಹಿರಿಯರು. ಅವರ ಮಾತನ್ನು ಉಳಿದವರೆಲ್ಲರು ನಡೆಸಿಕೊಡುತ್ತಿದ್ದರೆಂದು ತೋರುತ್ತಿತ್ತು.

ಅಲ್ಲಿಯ ವಕೀಲರಲ್ಲಿ ಬ್ಯಾಹಟ್ಟಿ ಸುಬ್ಬರಾಯರು, ಆಪ್ಟೆ ಶಂಕರರಾಯರು, ವಾಳೆವೇಕರ ಕೃಷ್ಣರಾಯರು, ಗುತ್ತಲ ಇವರು ಪ್ರಮುಖರು. ಲಿಂಗಾಯತರಾದ ಸಿದ್ಧರಾಮಪ್ಪ ಪಾವಟೆ, ವೀರಪ್ಪ ಬಿಳೇಅಂಗಡಿ, ಸಿದ್ದಪ್ಪ ಕಂಬಳಿ, ಫಕೀರಪ್ಪ ಮಾಳಗಿ ಇವರು ಹೊಸದಾಗಿ ಬಂದಿದ್ದರೂ ಇವರು ಸಹ ಪ್ರಮುಖರೆಂದೆನಿಸಿಕೊಳ್ಳುವಷ್ಟು ಯೋಗ್ಯತೆಯುಳ್ಳವರಾಗಿದ್ದರು. ಇವರೆಲ್ಲ ಹುಬ್ಬಳ್ಳಿ ಕೋರ್ಟಿನಲ್ಲಿ ಕೆಲಸ ಮಾಡುವುದಲ್ಲದೇ ಮೇಲಿಂದ ಮೇಲೆ ಧಾರವಾಡದ ಕೋರ್ಟುಗಳಲ್ಲಿಯೂ ಕೆಲಸ ನಡೆಸಲಿಕ್ಕೆ ಹೋಗುತ್ತಿದ್ದರು. ಇವರೆಲ್ಲರಲ್ಲಿ ಬ್ಯಾಹಟ್ಟಿ ಸುಬ್ಬರಾಯರು ವಯಸ್ಸಿನಲ್ಲಿ ಎಲ್ಲರಕ್ಕಿಂತ ಹಿರಿಯರು. ವಿಶೇಷವಾಗಿ ಫೌಜದಾರಿ ಕೋರ್ಟುಗಳಲ್ಲಿ ಕೆಲಸಕ್ಕೆ ಹೋಗುತ್ತಿದ್ದರು. ಒಮ್ಮೆ ನನ್ನ ಮುಂದೆ ಇವರು ಕೆಲಸ ನಡೆಸುತ್ತಿದ್ದಾಗ ಯಾವದೋ ಒಂದು ಮುದ್ದೆಯ ಬಗ್ಗೆ ಹೆಚ್ಚಾಗಿ ಮಾತನಾಡುತ್ತಿದ್ದಾಗ ಅವರಿಗೆ 'ಇನ್ನು ಸಾಕುಮಾಡಿ ಕೂತುಕೊಳ್ಳಿರಿ' ಎಂದು ಅಂದದ್ದು ಅವರಿಗೆ ಅವಮಾನವೆನಿಸಿದಂತೆ ತೋರಿ, ಅವರು 'ಇಷ್ಟು ದಿವಸ ಯಾವ ನ್ಯಾಯಾಧೀಶರೂ ನನಗೆ ಹೀಗೆ ಅಂದಿದ್ದಿಲ್ಲ' ಅಂತ ಅಂದದ್ದು ನೆನಪಿಗೆ ಬರುತ್ತದೆ.

ಪಾವಟೆ ಸಿದ್ಧರಾಮಪ್ಪನವರ ಉಲ್ಲೇಖವು ಈ ಮೊದಲೇ ಬಂದಿರುತ್ತದೆ. ಅವರು ಸುಳ್ಳುಸಂಗತಿಗಳಿಂದ ಕೂಡಿದ ವ್ಯಾಜ್ಯಗಳನ್ನು ಹಿಡಿಯುತ್ತಿದ್ದಿಲ್ಲ. ಆರಂಭದಲ್ಲಿ ಅವರು ಶ್ರೀ ಸಿದ್ಧಾರೂಢರ ಕಡೆಗೆ ಹೋಗುತ್ತಿದ್ದರು. ಮುಂದೆ ಅವರು ಲಿಂಗಧಾರಿಗಳಲ್ಲದ್ದರಿಂದ ಅವರ ಸಂಪರ್ಕವನ್ನು ಪೂರಾ ಬಿಟ್ಟುಬಿಟ್ಟರು. ಶಿವರಾತ್ರಿಯ ಸಮಯದಲ್ಲಿ ಸಿದ್ಧಾರೂಢರನ್ನು ರುದ್ರಾಕ್ಷಿಮಠಕ್ಕೆ ಮೆರವಣಿಗೆಯಿಂದ ತೆಗೆದುಕೊಂಡುಹೋಗುವ ಸಂಪ್ರದಾಯವಿತ್ತು. ಹಾಗಾಗಬಾರದೆಂದು ಪಾವಟೆ ವಕೀಲರ ವಾದ. ಈ ಬಗ್ಗೆ ಕಟ್ಟಾ ತಾಕೀತಿಯನ್ನು ಕೊಡಬೇಕೆಂದು ಅರ್ಜಿಯು ನನ್ನ ಮುಂದೆ ವಿಚಾರಣೆಗೆ ಬಂತು. ಮರುದಿವಸವೇ ಮೆರವಣಿಗೆ. ಮೊದಲನೆ ದಿವಸ ರಾತ್ರಿ ೮ ಘಂಟೆಯ ವರೆಗೆ ವಿಚಾರ ನಡೆದು, ಆ ಅರ್ಜಿಯ ನಿರ್ಣಯವನ್ನು ಅವರ ವಿರುದ್ಧ ಕೊಟ್ಟಂತೆ ನನ್ನ ನೆನಪಿಗೆ ಬರುತ್ತದೆ.[೧]

ನನ್ನ ಪ್ರಕೃತಿಯನ್ನು ಸುಧಾರಿಸುವ ಬಗ್ಗೆ ನಾನು ರಜೆ ತೆಗೆದುಕೊಂಡು ಬೆಂಗಳೂರಿನಲ್ಲಿ ಉಪಚಾರ ಹೊಂದಿ ಬಂದಿದ್ದರೂ ಅದರಲ್ಲಿ ವಿಶೇಷ ಸುಧಾರಣೆಯಾಗಿದ್ದಿಲ್ಲ. ಡಾಕ್ಟರ ಕುನ್ಹೆ ಎಂಬ ಜರ್ಮನ್ನನು ತನ್ನ

---

೧. ಅವರ ವಿರುದ್ಧವೆಂದರೆ ಸಿದ್ಧಾರೂಢರ ವಿರುದ್ಧವೆಂದು ಶ್ರೀ ಅರಟಾಳ ರುದ್ರಗೌಡರ ಚರಿತ್ರೆಯಿಂದ ತಿಳಿದುಬರುತ್ತದೆ,(ಸಂ).

ಅನುಭವದಿಂದ ನಿಸರ್ಗ ಚಿಕಿತ್ಸೆಯ ಬಗ್ಗೆ ಒಂದು ಗ್ರಂಥವನ್ನು ಬರೆದಿದ್ದನು. ಈ ಚಿಕಿತ್ಸೆಯನ್ನು ಹುಬ್ಬಳ್ಳಿಯಲ್ಲಿ ಕೆಲವು ಜನರು ನಡೆಯಿಸಿ ದೊಡ್ಡ ದೊಡ್ಡ ರೋಗಗಳನ್ನು ಸಹ ಕಳಕೊಳ್ಳುತ್ತಿದ್ದದ್ದು ಕಂಡು ಬಂತು. ಅವರಲ್ಲಿ ಈಗ ಗ್ರಂಥ ಪ್ರಕಾಶಕರಾಗಿರುವ ಸೋಮಲಿಂಗಪ್ಪ ಕುಲಕರ್ಣಿಯು ತಂದೆಯಾದ ಶಿವರುದ್ರಪ್ಪ ಎಂಬುವರು ಪ್ರಮುಖರು. ಅವರ ಹೇಳಿಕೆಯಂತೆ ನಾನೂ ಈ ಚಿಕಿತ್ಸೆಯನ್ನು ಆರಂಭಮಾಡಿದೆನು. ಅದನ್ನು ಬಹಳ ಆಸ್ಥೆಯಿಂದ ಒಂದೇ ಸವನೆ ಮಾಡುತ್ತ ಹೋದೆನು. ಅದರಿಂದ ಗುಣವು ತೋರಿಬಂದದ್ದರಿಂದ ಅದನ್ನು ಮುಂದೆ ಎಷ್ಟೋ ವರ್ಷಗಳವರೆಗೆ ನಡೆಸಿ ಪ್ರಸಂಗ ಬಂದಾಗ ಈಗಲೂ ಅದನ್ನು ಅನುಸರಿಸುತ್ತಿರುತ್ತೇನೆ. ಈ ಪ್ರಯೋಗವನ್ನು ನನ್ನ ಕುಟುಂಬದ ಜನರ ವಿಷಯದಲ್ಲಿಯೂ ಮಾಡುತ್ತಿರುತ್ತೇನೆ. ಶಿವರುದ್ರಪ್ಪನವರು ಈ ಚಿಕಿತ್ಸೆಯ ಬಗ್ಗೆ ಕನ್ನಡದಲ್ಲಿ 'ಬೇನಿಗರ ಲಘು ಚಿಂತಾಮಣಿ 'ಎಂಬ ಪುಸ್ತಕವನ್ನು ಬರೆದದ್ದಕ್ಕೆ ನಾನು ಪ್ರಸ್ತಾವನೆಯನ್ನು ಬರೆದಿರುವೆನು. ಕೆಲಕೆಲವು ಜನರು ಈ ವಿಷಯದಲ್ಲಿ ನನ್ನ ಅಭಿಪ್ರಾಯವನ್ನು ಕೇಳಲಿಕ್ಕೆ ಸಹ ಬರುತ್ತಿರುತ್ತಾರೆ. ಒಟ್ಟಿಗೆ ಹುಬ್ಬಳ್ಳಿಯಲ್ಲಿದ್ದಾಗ ನನ್ನ ಕಾಲವು ಚೆನ್ನಾಗಿ ಹೋಯಿತೆಂದರೂ ಅಡ್ಡಿಯಿಲ್ಲ. ಇಲ್ಲಿಯೇ ನನಗೆ ಶಿವಗಂಗಮ್ಮ ಎಂಬ ಮಗಳೂ ಸೋಮಶೇಖರನೆಂಬ ಮಗನೂ ಹುಟ್ಟಿದರು. ಇಲ್ಲಿ ನಾನು ಸಹಾಯಕ ನ್ಯಾಯಾಧೀಶನೆಂದು ಕೆಲವು ದಿನ, ಆಮೇಲೆ ಮುಖ್ಯ ನ್ಯಾಯಾಧೀಶನೆಂದು ಕೆಲವು ದಿನ ಹೀಗೆ ಒಟ್ಟು ೫ ವರ್ಷ ಕಾಲಕಳೆದೆನು.

ಇಲ್ಲಿ ಒಬ್ಬ ವ್ಯಕ್ತಿಯ ವಿಷಯವಾಗಿ ಹೇಳದೆ ಇರಲಾರೆನು. ಅವರು ಯಾರೆಂದರೆ ದಾವಣಗೇರಿಯ ಕರಿಸಿದ್ದಯ್ಯನ ಮಠದ ಹಾಲಯ್ಯನವರು. ಅವರೊಬ್ಬ ವಿಲಕ್ಷಣ ವ್ಯಕ್ತಿಯು. ಚಿಕ್ಕಂದಿನಲ್ಲಿ ಅವರು ನನ್ನ ಮಾವಂದಿರ ಬಂಧುಗಳಾದ ಗಂಗಾಧರಪ್ಪನ ಮನೆಯಲ್ಲಿ ಊಟಮಾಡಿಕೊಂಡು ಹೈಸ್ಕೂಲಿಗೆ ಹೋಗುತ್ತಿದ್ದರು. ವಿದ್ಯಾರ್ಥಿಯಂತೆ ಅಭ್ಯಾಸಮಾಡುವ ಚಟವು ಅವರಿಗೆ ಗೊತ್ತೇ ಇದ್ದಿಲ್ಲ. ಮುಂದೆ ಮುಂಬಯಿಯಲ್ಲಿ ಸಾಬೋಜಿ ಗಂಗಾಧರಪ್ಪನವರ ಮನೆಯಲ್ಲಿ ಊಟ ಮಾಡಿಕೊಂಡು ವ್ಹಿ. ಜೆ. ಟೆಕ್ನಿಕಲ್ ಇನ್‌ಸ್ಟಿಟ್ಯೂಟಕ್ಕೆ ಹೋಗುತ್ತಿದ್ದರು. ಅಲ್ಲಿಯೂ ಸಹ ಅವರ ಅಭ್ಯಾಸ ಅಷ್ಟಕ್ಕಷ್ಟೆ. ಒಂದು ಗಿರಣಿಯಲ್ಲಿ ಅಪ್ರೆಂಟಿಸ್‌ನಂತೆ ಕೆಲಸ ಮಾಡಿ ಹೇಗೋ ಎಂಜಿನೀಯರ ಸರ್ಟಿಫಿಕೇಟ್ ದೊರಕಿಸಿದರು. ನಾನು ಹುಬ್ಬಳ್ಳಿಯಲ್ಲಿದ್ದಾಗ ಅವರು ಸಹ ಲಕ್ಷ್ಮಿ ಪ್ರೆಸ್ಸಿಂಗ ಫ್ಯಾಕ್ಟರಿಯಲ್ಲಿ ಎಂಜಿನೀಯರ ಕೆಲಸ ಮಾಡುತ್ತಿದ್ದರು. ಅಲ್ಲಿಯ ಎಲ್ಲ ಪ್ರೆಸ್ಸಿಂಗ ಫ್ಯಾಕ್ಟರಿಗಳು ಕೂಡಿ ಬಹಳ ಮಾಡಿ ಪ್ರತಿವರ್ಷ Combination ಮಾಡಿಕೊಳ್ಳುತ್ತಿದ್ದುದರಿಂದ ಇವರ ಫ್ಯಾಕ್ಟರಿಯಲ್ಲಿ ಯಾವದೋ ಕಾರಣದಿಂದ ಕೆಲಸ ನಡೆಯುತ್ತಲೇ ಇದ್ದಿಲ್ಲ. ಕೆಲಸ ಮಾಡದೆ ಪಗಾರ ದೊರೆಯುತ್ತಿದ್ದು, ಸುಖವಸ್ತುವಿನಂತೆ ಕಾಲ ಕಳೆಯುತ್ತಿದ್ದರು. ಇವರ ಒಲವು ಆರ್ಯಸಮಾಜದವರ ತತ್ವಗಳ ಕಡೆಗಿದ್ದಿತು. ಪ್ರೆಸ್ಸಿನಲ್ಲಿಯ ಇವರ ವಾಸಸ್ಥಾನದಲ್ಲಿ ದಿನಾಲು ಸಂಜೆಗೆ ಕೆಲವು ಜನರು ಕೂಡುತ್ತಿದ್ದರು. ಅವರಲ್ಲಿ ಆಗಾಗ್ಗೆ ನೀಲಿಯವರು ಮುಂತಾದ ಪ್ರಮುಖ ವ್ಯಾಪಾರಸ್ಥರು ಇರುತ್ತಿದ್ದರು. ಹಾಲಯ್ಯನವರು ತುಸು ಹಟದ ಸ್ವಭಾದವರು. ಯಾವುದಾದರೂ ವಿಷಯ ಚರ್ಚೆಗೆ ಹೊರಟರೆ ಅದರಲ್ಲಿ ಆವೇಶದಿಂದ ಭಾಗತೆಗೆದುಕೊಳ್ಳುತ್ತಿದ್ದರು. ಅವರು ಎಲ್ಲರಿಗೂ ಬೇಕಾಗಿದ್ದರು. ಇತ್ತಿತ್ತಲಾಗಿ ಅವರು ಹಿಂದೂ ಧರ್ಮಗಳ ತುಲನಾತ್ಮಕ ಅಭ್ಯಾಸ ಮಾಡುತ್ತಾ ಒಳ್ಳೇ ಲೇಖಕರಾಗಿದ್ದಾರೆ.

ನನ್ನ ಮಾವಂದಿರು ಒಮ್ಮಿಂದೊಮ್ಮೆ ತೀರಿಕೊಂಡ ಬಗ್ಗೆ ಮೇಲೆ ಹೇಳಿರುತ್ತದೆ. ಅವರು ತೀರಿಕೊಂಡಾಗ ಅವರ ಹೆಂಡತಿಯು ಮತ್ತು ಒಬ್ಬ ಚಿಕ್ಕ ಮಗನು ಉಳಿದಿದ್ದು, ಅವರ ದುಂದುಗಾರಿಕೆಯಿಂದ ಅವರ ಆಸ್ತಿಯ ವ್ಯವಸ್ಥೆಯು ಎಷ್ಟೂ ಸರಿಯಾಗಿದ್ದಿಲ್ಲ. ಧಾರವಾಡದಲ್ಲಿ ಅವರ ಆಪ್ತೇಷ್ಟರು ಯಾರೂ ಅವರಿಗೆ ಸಹಾಯವಾಗುವಂತಿರಲಿಲ್ಲ. ನಾನು ಹುಬ್ಬಳ್ಳಿಯಲ್ಲಿರುವದರಿಂದ ಅವರ ಆಸ್ತಿಯ ವ್ಯವಸ್ಥೆಯನ್ನು ಸರಿಯಾಗಿ

ಮಾಡುವುದಕ್ಕೆ ನನಗೆ ಬಹಳ ಅನುಕೂಲವಾಯಿತು. ಅವರು ವಾಸಿಸುವ ಮನೆಯನ್ನು ಸಹ ಗಂಗಾಧರಪ್ಪನವರ ತಮ್ಮನಾದ ಚಂದ್ರಶೇಖರಪ್ಪನವರ ಹೆಸರಿನಿಂದ ಕೊಂಡುಕೊಂಡಿದ್ದರು. ಎರಡನೆಯವರಿಗೆ ಕೊಡತಕ್ಕ ಸಾಲವು ತುಸುಯಿತ್ತು. ನಾನು ಅವರಲ್ಲಿದ್ದ ಅನಾವಶ್ಯಕವಾದ ಆಭರಣಗಳನ್ನು ಲಿಲಾವಿನಿಂದ ಮಾರಿದೆನು. ನವಲೂರ ಹದ್ದಿನಲ್ಲಿರುವ ಒಂದು ಹೊಲವನ್ನು ಸಹ ಮಾರಬೇಕಾಯಿತು. ಕಂಬಾರಗಣವಿ ಹದ್ದಿನಲ್ಲಿರುವ ಒಂದು ಗದ್ದೆಯ ಭೂಮಿಗೆ ರಾಜೀನಾಮೆ ಕೊಡಬೇಕಾಯಿತು. ಮಾರಾಟದಿಂದ ಬಂದ ಹಣದಿಂದ ಸಾಲವನ್ನು ತೀರಿಸಿ ಉಳಿದ ಹಣವನ್ನು ಬ್ಯಾಂಕಿನಲ್ಲಿಟ್ಟೆನು. ಚಂದ್ರಶೇಖರಪ್ಪನವರಿಂದ ಮನೆಯ ಖರೀದಿ ಪತ್ರವನ್ನು ರಾಚಪ್ಪನ ಹೆಸರಿನಿಂದ ಮಾಡಿಸಿದೆನು. ಈ ರೀತಿ ಅವರ ಮನೆತನದ ಕೆಲಸವು ತೊಂದರೆಯಾಗದೆ ಸಾಗುವ ಹಾಗೆ ಮಾಡಿಕೊಟ್ಟೆನು.

(೧)ಇದೇ ಸಮಯದಲ್ಲಿ ನನ್ನ ಗೋಕಾವಿಯ ಮನೆತನದ ಅಣ್ಣ ತಮ್ಮಂದಿರ ವಿಷಯವಾಗಿ ಹೇಳುವೆನು. ನನ್ನ ಮಲ ಅಣ್ಣನಾದ ಸಿದ್ದಪ್ಪನು ತನ್ನ ಹೆಂಡತಿಯ ಕೂಡ ಬೇರೆ ಇರಹತ್ತಿ, ತನ್ನ ಜೀವನವನ್ನು ಸಾಗಿಸಹತ್ತಿದನೆಂದು ಈ ಮೊದಲೇ ಹೇಳಿದೆ. ಅವನಿಗೆ ಒಬ್ಬ ಮಗನು ಹುಟ್ಟಿ ಆ ಮಗನು ಮತ್ತು ಅವನ ತಾಯಿಯು ಕೆಲವು ವರ್ಷಗಳಲ್ಲಿ ತೀರಿಕೊಂಡರು. ಆಮೇಲೆ ಸಿದ್ದಪ್ಪನು ರಬಕವಿಯ ಯಾತಗಿರಿ ಮನೆತನದ ಬಸವ್ವ ಎಂಬುವಳನ್ನು ಉಡಕಿ ಮಾಡಿಕೊಂಡನು. ಆಕೆಯ ಹೊಟ್ಟೆಯಿಂದ ಮಹಲಿಂಗನೆಂಬ ಮಗನೂ, ಕಾಶವ್ವನೆಂಬ ಮಗಳೂ ಹುಟ್ಟಿದರು. ಆಮೇಲೆ ಆಕೆಯೂ ತೀರಿಕೊಂಡನಂತರ ಬೈಲಹೊಂಗಲದ ಚನಬಸವ್ವ ಎಂಬುವಳ ಉಡಕಿಯಾಗಿ, ಆಕೆಯ ಹೊಟ್ಟೆಯಿಂದ ಇಬ್ಬರು ಹೆಣ್ಣುಮಕ್ಕಳು ಹುಟ್ಟಿದರು. ಆಕೆಯೂ ತೀರಿಕೊಂಡ ಮೇಲೆ ಇಲ್ಲಿಯ ಕೊಳಕಿ ಮನೆತನದ ರಾಚವ್ವ ಎಂಬುವಳ ಉಡಕಿಯಾದನು.

ಮಹಲಿಂಗನಿಗೆ ಅಂಕಲಿಯ ಮಲಕಪ್ಪ ಕರಾಡಕರ ಎಂಬವನ ತಂಗಿಯಾದ ಗಂಗವ್ವನ ಕೂಡ ಲಗ್ನವಾಯಿತು. ಕಾಶವ್ವನನ್ನು ಮುನವಳ್ಳಿಯ ಕರಡೀಗುಡ್ಡ ಮನೆತನಕ್ಕೆ ಕೊಟ್ಟಿತು. ಚನಬಸವ್ವನ ಹಿರಿಯ ಮಗಳಾದ ಈರವ್ವನನ್ನು ಇಲ್ಲಿಯ ಮಟ್ಟಿಕಲ್ಲ ಸಣ್ಣಪ್ಪ ಎಂಬುವವನಿಗೆ ಕೊಟ್ಟಿರುತ್ತದೆ. ಸಿದ್ದಪ್ಪನು ೧೯೨೫ ನೆಯ ಇಸ್ವಿಯಲ್ಲಿ ತೀರಿಕೊಂಡನು. (ಮಾರ್ಚ ೧೯೫೪) ಅವನ ಶಾಖೆಯ ಮಹಲಿಂಗ ಅವನ ಹೆಂಡತಿ ಮಕ್ಕಳು ಮತ್ತು ರಾಚವ್ವ ಇಷ್ಟು ಜನರು ಇರುತ್ತಾರೆ.

(೨) ನನ್ನ ತಾಯಿಯಿಂದ ಮೊದಲು ವೀರಪ್ಪನೆಂಬ ಮಗನು ಹುಟ್ಟಿದನು. ಅವನು ಪ್ರಾಥಮಿಕ ಶಿಕ್ಷಣ ಮುಗಿಸಿ ನನ್ನ ತಂದೆಯ ಕೂಡ ಅಂಗಡಿಯ ವ್ಯವಹಾರದಲ್ಲಿ ತೊಡಗಿ ತುಸು ದಿವಸಗಳಲ್ಲಿ ತೀರಿಕೊಂಡನು. ಅವನ ಬೆನ್ನ ಮೇಲೆ ರೇವಪ್ಪನೆಂಬುವನು ಹುಟ್ಟಿ ಅವನು ಸಹ ಒಂದೆರಡು ಇಯತ್ತೆಗಳ ಅಭ್ಯಾಸಮಾಡಿ, ಅಂಗಡಿಯ ವ್ಯವಹಾರದಲ್ಲಿ ತೊಡಗಿದನು. ಅವನ ಲಗ್ನವು ನಮ್ಮ ಸೋದರತ್ತೆಯ ಮೊಮ್ಮಗಳಾದ ಗಂಗವ್ವ ಲುಕ್ಕ ಎಂಬವಳ ಕೂಡ ಆಗಿ, ಅವಳಿಂದ ಮಲ್ಲಪ್ಪನೆಂಬ ಮಗನು ಹುಟ್ಟಿದನು. ಮುಂದೆ ತುಸು ದಿವಸಗಳಲ್ಲಿ ಆಕೆಯು ತೀರಿದ ಮೇಲೆ ರೇವಪ್ಪನು ನಿಪ್ಪಾಣಿಯ ಚಚಡಿ ಮನೆತನದ ನೀಲವ್ವನನ್ನು ಉಡಕಿಯಾದನು. ಆಕೆಯಿಂದ ಪಾರ್ವತೆವ್ವನೆಂಬ ಮಗಳು ಹುಟ್ಟಿದಳು. ನಮ್ಮ ತಂದೆಯು ತೀರಿದ ಮೇಲೆ ಕೆಲವು ವರ್ಷ ರೇವಪ್ಪನು ಕಿರಾಣಿ ಅಂಗಡಿ ನಡಿಸಿ, ಮುಂದೆ ಬೇರೆ ಬೇರೆ ಉದ್ಯೋಗಗಳನ್ನು ಮಾಡುತ್ತಾ ತನ್ನ ಪ್ರಪಂಚವನ್ನು ಸಾಗಿಸಹತ್ತಿದನು. ನಾನು ೧೯೨೭ ನೇ ಇಸ್ವಿಯಿಂದ ೧೯೩೦ ನೇ ಇಸ್ವಿಯವರೆಗೆ ವಿಜಾಪುರದಲ್ಲಿ ಕೆಲಸಮಾಡುತ್ತಿದ್ದಾಗ್ಗೆ ನನ್ನ ಹೆಂಡತಿ ಮತ್ತು ಅಡುಗೆಯವನಾದ ವೀರಪ್ಪನು ತೀರಿಕೊಂಡಮೇಲೆ ರೇವಪ್ಪನು ತನ್ನ ಮಗಳ ಸಂಗಡ ನನ್ನ ಹತ್ತರ ಇದ್ದು, ವಿಜಾಪುರದಿಂದ ಧಾರವಾಡಕ್ಕೆ ನನ್ನ ವರ್ಗವಾದ ಮೇಲೆ ಅವನು ತಿರುಗಿ ಗೋಕಾವಿಗೆ ಬಂದು ಇರಹತ್ತಿ, ೧೯೩೬ನೇ ಅಕ್ಟೋಬರ್ ತಿಂಗಳಲ್ಲಿ ತೀರಿಕೊಂಡನು.

ಅವನ ಮಗನಾದ ಮಲ್ಲಪ್ಪನು ರಾಮದುರ್ಗದ ಟೊಪ್ಪಿಗೆ (ಕೆರೂರ) ವಿರುಪಾಕ್ಷಪ್ಪನ ಮಗಳಾದ ಗೌರವ್ವನನ್ನು ಲಗ್ನವಾಗಿ ಅವನು ರಾಮದುರ್ಗದಲ್ಲಿಯೇ ಇರಹತ್ತಿದ್ದಾನೆ. ಅವನ ಮಕ್ಕಳಲ್ಲಿ ಹಿರಿಯವನಾದ ಬಸಪ್ಪನು ಈ ವರ್ಷ ಮ್ಯಾಟ್ರಿಕ್ ಪರೀಕ್ಷೆಗೆ ಕುಳಿತಿದ್ದಾನೆ. ರೇವಪ್ಪನ ಮಗಳಾದ ಪಾರ್ವತೆವ್ವನು ಗೋಕಾವಿಯಲ್ಲಿಯೇ ಬಳ್ಳೂರು ಮಲ್ಲಪ್ಪನ ಕೂಡ ಲಗ್ನವಾಗಿ ಒಂದು ಹೆಣ್ಣು ಹಡೆದು ತೀರಿಕೊಂಡಳು.

(೩) ರೇವಪ್ಪನಿಗಿಂತ ಕಿರಿಯವನಾದ ಸಿದ್ಧಲಿಂಗನು ನಾನು ಅಲೀಬಾಗದಲ್ಲಿ ಕೆಲಸ ಮಾಡುತ್ತಿದ್ದಾಗ ಅಲ್ಲಿಯ ಹಾಯಸ್ಕೂಲಿನಲ್ಲಿ ೭ನೆಯ ಇಯತ್ತೆಯಲ್ಲಿ ಅಭ್ಯಾಸ ಮಾಡುತ್ತಿದ್ದನು. ಆದರೆ ಪರೀಕ್ಷೆಗೆ ಕೂಡ್ರದೆ V.J. Technical Institute ದಲ್ಲಿ Architectural Draughts'man ವರ್ಗದಲ್ಲಿ ಅಭ್ಯಾಸ ನಡೆಯಿಸಿ ಸರ್ಟಿಫಿಕೇಟ್ ಪಡೆದನು. ಆಮೇಲೆ ನಾನು ಹುಬ್ಬಳ್ಳಿಯಲ್ಲಿದ್ದಾಗ ಕೆಲವು ದಿವಸ ನನ್ನ ಕಡೆ ಇದ್ದು, ನಂತರ ಗೋಕಾಕ ಗಿರಣಿಯಲ್ಲಿ ಕಾರಕೂನನಾಗಿ ಕೆಲವು ದಿವಸ ಕೆಲಸ ಮಾಡಿದನು. ಆಮೇಲೆ ಮುಂಬಯಿಯಲ್ಲಿ ಒಂದು Architectural Draughts'mans firm ದಲ್ಲಿ ೨-೩ ವರ್ಷ ಕೆಲಸ ಮಾಡಿದ ಮೇಲೆ ಅವನಿಗೆ ಅತಿಸಾರ ರೋಗವಾಗಿ, ಮಿರಜಿಯ ಮಿಶನ್ ದವಾಖಾನೆಯಲ್ಲಿ ಮತ್ತು ಬೇರೆ ಕಡೆ ಉಪಚಾರ ಹೊಂದಿದರೂ ಗುಣಹೊಂದದೆ ೨೧-೫-೧೯೨೦ ನೆಯ ಇಸ್ವಿಯಲ್ಲಿ ಗೋಕಾವಿಯಲ್ಲಿ ತೀರಿಕೊಂಡನು. ಅವನು ಮುಂಬಯಿಯಲ್ಲಿದ್ದಾಗ The Architectural Students' Association ಎಂಬ ಸಂಸ್ಥೆಯ ಸಭಾಸದನಾಗಿದ್ದು, ಅವನ ಮರಣದ ನಂತರ ಆ ಸಂಸ್ಥೆಯವರು ಅವನ ಮರಣಕ್ಕೋಸ್ಕರ ತಮಗೆ ಉಂಟಾದ ವಿಶೇಷ ಅನುತಾಪವನ್ನು ವ್ಯಕ್ತಪಡಿಸಿ ಸಹಾನುಭೂತಿ ಪತ್ರವನ್ನು ತಾ। ೩-೭-೧೯೨೦ ನೆಯ ದಿವಸ ನನಗೆ ಕಳಿಸಿದ್ದಾರೆ. ಅದು ನನ್ನ ಕಾಗದ ಪತ್ರಗಳಲ್ಲಿ ಅದೆ.

ನಮ್ಮ ತಂದೆಯಿರುವಾಗಲೇ ಗೋಕಾವಿಯಲ್ಲಿ ಸೊಗಲಿ ಘಟಿಗೆಪ್ಪನ ಮಗಳಾದ ಸಿದ್ಧಲಿಂಗವ್ವನ ಕೂಡ ಅವನ ಲಗ್ನವಾಗಿ ಬಾಳವ್ವ ಎಂಬ ಮಗಳೂ, ಬಸಪ್ಪ ಎಂಬ ಮಗನೂ ಹುಟ್ಟಿದರು. ಬಾಳವ್ವನನ್ನು ಸಂಬರಗಿಯ ಕರಡಿಗುಡ್ಡ ಶಿವಯೋಗಪ್ಪನಿಗೆ ಕೊಟ್ಟಿತ್ತು. ಆಕೆಗೆ ಒಬ್ಬ ಮಗನು ಹುಟ್ಟಿ ಮುಂದೆ ಆಕೆ ತೀರಿಕೊಂಡಳು. ಸಿದ್ಧಲಿಂಗಪ್ಪನು ತೀರಿಕೊಂಡ ಮೇಲೆ ಅವನ ಹೆಂಡತಿಯೂ ಮಗನಾದ ಬಸಪ್ಪನೂ ನನ್ನ ಕಕ್ಕನ ಮಗನಾದ ಈಶ್ವರಪ್ಪನ ಕೂಡ ಇರಹತ್ತಿದರು. ಬಸಪ್ಪನು ಸಣ್ಣವನಿರುವಾಗಲೇ ೧೯೨೮ ರಲ್ಲಿ ತೀರಿಕೊಂಡನು ಮತ್ತು ಸಿದ್ದಲಿಂಗವ್ವನು ೯-೬-೧೯೩೨ ನೆ ಇಸ್ವಿಯಲ್ಲಿ ತೀರಿಕೊಂಡಳು.

## ಎರಡನೆ ಸಾರೆ ಶ್ರೀ ಗುಡ್ಡಾಪುರ ಕ್ಷೇತ್ರ ದರ್ಶನ

ನಾನು ಅಲಿಬಾಗದಲ್ಲಿ ಕೆಲಸಮಾಡುತ್ತಿದ್ದಾಗ ಈ ಕ್ಷೇತ್ರಕ್ಕೆ ಹೋಗಿಬಂದದ್ದನ್ನು ಈ ಮೊದಲೇ ಹೇಳಿದೆ. ಈಗ ಪುನಃ ಅದನ್ನು ಹೇಳುವ ಕಾರಣವೆಂದರೆ ವಿಜಾಪುರದಿಂದ ಗುಡ್ಡಾಪುರಕ್ಕೆ ಹೋಗುವ ಮಾರ್ಗವನ್ನು ಇನ್ನು ಮುಂದೆ ಹೋಗುವವರಿಗೆ ಸ್ಪಷ್ಟವಾಗಿ ತಿಳಿಸಬೇಕಾಗಿದೆ. ಈ ಸಾರೆ ಹೋದದ್ದು ೧೯೧೪ನೇ ಇಸ್ವಿಯಲ್ಲಿ ಕೋರ್ಟಿಗೆ ಬೇಸಿಗೆಯ ಬಿಡುವು ಇದ್ದಾಗ್ಗೆ, ವಿಜಾಪುರವನ್ನು ಎಪ್ರಿಲ್ ೧೪ನೇ ತಾ. ನ ದಿವಸ ಬಿಟ್ಟು ೨೧ನೇ. ತಾ. ಗೆ ವಿಜಾಪುರಕ್ಕೆ ತಿರುಗಿ ಬಂದೆವು. ದಾರಿಯ ಮೇಲೆ ಮೊದಲು ತೊರವಿ, ಔರಸಂಗ, (ತಿಕೋಟ) ಬಾಬಾನಗರ, ಬಿಜ್ಜರಗಿ, ಸಿದ್ದನಾಥ, ಬಡಚಿ, ಸೋರಡಿ ಈ ಗ್ರಾಮಗಳ ಮೇಲಿಂದ ಗುಡ್ಡಾಪುರಕ್ಕೆ ಮುಟ್ಟಬಹುದು. ಬಿಜ್ಜರಿಗೆಯಿಂದ ಮುಚ್ಚಂಡಿ , ಕೊನ್ನೂರು ಆಮೇಲೆ ಸೋರಡಿಗೆ ಹೋಗಿ ಗುಡ್ಡಾಪುರವನ್ನು ಮುಟ್ಟಬಹುದು. ಆ ಎರಡನೇ ದಾರಿಯೇ ಹೋಗಲಿಕ್ಕೆ ಹೆಚ್ಚು ಅನುಕೂಲವದೆ. ಮುಚ್ಚಂಡಿಯ ವರೆಗೆ ರಹದಾರಿಯಿದ್ದು ಮೋಟರ ಬಸ್ಸುಗಳು ಹೋಗುತ್ತವೆ. ಅಲ್ಲಿ ಒಂದು ದೊಡ್ಡ ಮಠವಿದ್ದು ಇಳಕೊಳ್ಳಲಿಕ್ಕೆ ಅನುಕೂಲವದೆ. ಅಲ್ಲಿಂದ ಗುಡ್ಡಾಪುರದ ವರೆಗೆ ಸುಮಾರು ೧೦ ಮೈಲು ಕಾಡು ದಾರಿ ಚಕ್ಕಡಿಯಲ್ಲಿ ಪ್ರವಾಸ ಮಾಡಬೇಕಾಗುತ್ತದೆ.

ಕನಮಡಿಯಿಂದ ೪ ಮೈಲಿನ ಮೇಲೆ ಡೋಣಿ ನದಿಯ ಸಮೀಪಕ್ಕೆ ಬಸವಣ್ಣನ ಒಂದು ಚಿಕ್ಕ ದೇವಾಲಯವಿದೆ. ಗುಡ್ಡಾಪುರಕ್ಕೆ ಹೋದವರು ಈ ಬಸವಣ್ಣನ (ಇದಕ್ಕೆ ಕೊಟ್ಟಲಿಗೆ ಬಸವಣ್ಣನೆಂದು ಕರೆಯುತ್ತಾರೆ) ದರ್ಶನ ಮಾಡಿಕೊಂಡು ಬರುವ ಸಾಂಪ್ರದಾಯವಿದೆಯೆಂದು ಹೇಳುತ್ತಾರೆ. ಈ ಸಾರೆ ನಾವು ಹೋದಾಗ್ಗೆ ಮಧುಕೇಶ್ವರ ಮತ್ತು ಶಿವಗಂಗವ್ವನ ಜಡೆಯನ್ನು ಕಲಬುರ್ಗಿ ರಾಚಪ್ಪನಿಂದ ತೆಗೆಯಿಸಿತು.

ಶ್ರೀ ದಾನಮ್ಮನ ಚರಿತ್ರವು ವಿಜಯನಗರ ಪ್ರೌಢದೇವರಾಯನ ಪ್ರಧಾನಿಯಾದ ಲಕ್ಕಣ್ಣದಂಡೇಶನ ಶಿವತತ್ವಚಿಂತಾಮಣಿ ಎಂಬ ಕಾವ್ಯದಲ್ಲಿ ವರ್ಣಿತವಾಗಿದೆ. ಇದನ್ನು ಸಂಶೋಧಿಸಿ ನಾನು ರಾ.ಬ. ಹಳಕಟ್ಟಿಯವರು ಹೊರಡಿಸುವ ಶಿವಾನುಭವ ಮಾಸಪತ್ರಿಕೆಯಲ್ಲಿ (ಸಂಪುಟ ೧ ಸಂಚಿಕೆ ೩) ಪ್ರಕಟಿಸಿರುವೆನು.

ಇದೇ ಚರಿತ್ರವನ್ನು ಶಿವಶಂಕರಯ್ಯ ಎಂಬವನು "ಆದಿಯೊಳು ಲಕ್ಕಣ್ಣ ದಂಡೇಶ ಮಮ್ಮಯದಿ ನೆಗಳ್ದ ಶಿವತತ್ವಚಿಂತಾಮಣಿಯ । ದಮ್ಮದದಿ ನೋಡುತ ಅಲ್ಲಿರ್ದ ಗುಡ್ಡವ್ವೆಯರ ಮಹಿಮೆಯಂ ಮನದೊಳರಿದು ॥ ಕೃತಿ ರೂಪಮಾಗಿ ವಿರಚಿಸಿದೆನು" ಎಂದು ವಿಸ್ತಾರವಾಗಿ ಒಟ್ಟು ೫೫೩ ಪದ್ಯಗಳಲ್ಲಿ ವರ್ಣಿಸಿರುವನು.

ಈ ಕಾವ್ಯದ ಹಸ್ತಲಿಖಿತ ಪ್ರತಿಯು ಅಥಣಿಯ ಶೆಟ್ಟರ ಕಡೆಗಿದ್ದು, ಅದರ ಒಂದು ಪ್ರತಿಯನ್ನು ಶ್ರೀ ಪಟ್ಟಣಶೆಟ್ಟಿ ವೀರಭದ್ರಪ್ಪ ಕನ್ನಡ ಶಾಲಾ ಶಿಕ್ಷಕ ಇವರಿಂದ ಮಾಡಿಸಿ ಇಟ್ಟಿರುವೆನು.

೧೯೧೬ನೇ ಮೇ ತಿಂಗಳಲ್ಲಿ ಬೇಸಿಗೆಯನ್ನು ಕಳೆಯಲಿಕ್ಕೆ ಹೊಸಪೇಟೆಯ ಶ್ರೀ ಗುತ್ತಿಗಡ್ಡೆಪ್ಪ ಮತ್ತು ಶ್ರೀ ವೀರಭದ್ರಪ್ಪ ಇವರ ಕೂಡ ಅಲ್ಲಿಂದ ಸುಮಾರು ೧೦ ಮೈಲು ಅಂತರದಲ್ಲಿರುವ ರಾಮನದುರ್ಗವೆಂಬ ಸ್ಥಳಕ್ಕೆ ಹೋಗಿ ಕೆಲವು ದಿನವಿದ್ದು ಬಂದೆನು. ಇದರ ವರ್ಣನೆ ನನ್ನ ಕಾಗದಗಳ ಸಂಗ್ರಹದಲ್ಲಿ ಅದೆ.

## ಯಾವಲದಲ್ಲಿ

ಹುಬ್ಬಳ್ಳಿಯಿಂದ ನನಗೆ ಪೂರ್ವ ಖಾನದೇಶ ಜಿಲ್ಹೆಯ ಯಾವಲಕ್ಕೆ ವರ್ಗವಾದದ್ದರಿಂದ ನಾನು ಅಲ್ಲಿ ೨೬ ಅಕ್ಟೋಬರ್ ೭ ನೆಯ ತಾರೀಖಿಗೆ ಹಾಜರಾದೆನು. ಯಾವಲವು ಭುಸಾವಳ ಸ್ಟೇಶನ್‌ದಿಂದ ತಾಪಿ ನದಿಯ ಉತ್ತರ ಕಡೆಗೆ ಸುಮಾರು ೧೨ ಮೈಲು ಅಂತರದ ಮೇಲಿದೆ. ನಾನು ಅಲ್ಲಿ ಹೋದಾಗ್ಯೂ ಪ್ಲೇಗ ಬೇನೆಯು ಜೋರಿನಲ್ಲಿತ್ತು. ನಾನು ಮನೆಯ ಜನರು ಸಹಿತ ಊರ ಹೊರಗೆ ಇರುವ ಎ. ಹೆ. ಸ್ಕೂಲದಲ್ಲಿ ಇಳಕೊಂಡೆನು. ಅದರ ಸಮೀಪದಲ್ಲಿಯೇ ಸ್ಮಶಾನವಿತ್ತು. ರಾತ್ರಿಯಲ್ಲಿ ಸಹ ಹೆಣಗಳನ್ನು ದೀವಟಿಗೆಯ ಬೆಳಕಿನಲ್ಲಿ ಒಯ್ಯುತ್ತಿದ್ದರು. ಆ ದೃಶ್ಯವು ಅಂಜಬುರುಕರಿಗೆ ಅಂಜಿಕೆ ಹುಟ್ಟಿಸುವಂತಾಗಿತ್ತು. ಪ್ಲೇಗವು ನಿಂತ ಮೇಲೆ ನಾವು ಇರಲಿಕ್ಕೆ ಹೋದೆವು. ಅಲ್ಲಿ ಮಾಮಲೇದಾರ ಮತ್ತು ಸಬ್‌ಜಜ್ಜ ಇರುವ ಮನೆಗಳು ಕಾಯಂ ಆಗಿದ್ದವು. ಅವುಗಳ ಒಡೆಯರು ಅವುಗಳ ಸಲುವಾಗಿ ಬಾಡಿಗೆಯನ್ನು ತೆಗೆದುಕೊಳ್ಳುತ್ತಿದ್ದಿಲ್ಲ. ಆ ಪ್ರದೇಶವು ಸುಭಿಕ್ಷವಾದದ್ದಿದ್ದು ಜನರು ಸಭ್ಯರೂ ಉದಾರಿಗಳೂ ಇರುವರು. ಹವೆಯು ಮಾತ್ರ ಬಿಸಿಲಗಾಲದಲ್ಲಿ ಬಹಳ ಉಷ್ಣ. ನಾನು ಅಲ್ಲಿ ೧೯೨೦ ನೇ ಬೇಸಿಗೆಯ ಬಿಡುವಿನ ವರೆಗೆ ಕೆಲಸ ಮಾಡಿದೆನು.

ನನ್ನ ಪ್ರಕೃತಿಯನ್ನು ಸರಿಯಾಗಿ ಇಟ್ಟುಕೊಳ್ಳುವ ಸಲುವಾಗಿ ನಿಸರ್ಗ ಚಿಕಿತ್ಸೆಯ ಬೇರೆ ಬೇರೆ ಪ್ರಯೋಗಗಳನ್ನು ಮಾಡಿದೆನು. ಆದರೂ ನಡುನಡುವೆ ಡಾಕ್ಟರ ಕಡೆಗೆ ಹೋಗುವ ಪ್ರಸಂಗ ಬರುತ್ತಿತ್ತು. ೧೯೧೯ ನೇ ಇಸ್ವಿಯ ಬೇಸಿಗೆ ಬಿಡುವನ್ನು ನಾನು ಕುಟುಂಬ ಸಹಿತ ನಾಸಿಕದಲ್ಲಿ ಕಳೆದೆನು. ಅಲ್ಲಿ ನಾನು ದಿನಾಲು ಸಾಯಂಕಾಲಕ್ಕೆ ಎನಿಮಾ ಉಪಯೋಗ ಮಾಡುತ್ತಿದ್ದು, ರಾತ್ರಿ ಒಂದೇ ಸಾರೆ ತುಸು ಆಹಾರ ತೆಗೆದುಕೊಳ್ಳುತ್ತಿದ್ದೆನು. ಆದರೂ ಮುಂಜಾನೆ ೫-೬ ಮೈಲು ಅಡ್ಡಾಡಿ ಬರುತ್ತಿದ್ದೆನು. ಆಗ ನನ್ನ ತೂಕವು ೮೮

ಪೌಂಡರ ವರೆಗೆ ಇಳಿದಿತ್ತು. ಅಲ್ಲಿದ್ದಾಗ್ಯೂ ತ್ರಿಂಬಕಕ್ಕೆ ಹೋಗಿ ಗೋದಾವರಿ ನದಿಯ ಉಗಮಸ್ಥಾನವನ್ನು ಕಂಡು ತ್ರಿಂಬಕೇಶ್ವರ ಲಿಂಗದ ದರ್ಶನ ಮಾಡಿಕೊಂಡು ಬಂದೆವು. ಮತ್ತು ವಣಿಗೆ ಹೋಗಿ ಸಪ್ತಶೃಂಗಿ ಪರ್ವತದ ಮೇಲಿರುವ ದೇವಿಯ ದರ್ಶನ ತೆಗೆದುಕೊಂಡು ಬಂದೆವು.

ಅದೇ ವರ್ಷ ನಾತಾಳ ಬಿಡುವಿನಲ್ಲಿ ನಾವು ಮಾಳವಾ ಪ್ರಾಂತಕ್ಕೆ ಪ್ರಯಾಣ ಮಾಡಿದೆವು. ಮೊದಲು ಇಂದೂರಿಗೆ ಹೋದೆವು. ಅಲ್ಲಿ ಯಾವಲದಲ್ಲಿ ವಕೀಲಿ ಕೆಲಸ ಮಾಡುತ್ತಿದ್ದ ಶ್ರೀ ಭುಸಾರಿ ಎಂಬ ವಕೀಲರು ನಾವು ಇಳಕೊಳ್ಳುವ ಸಲುವಾಗಿ ವ್ಯವಸ್ಥೆ ಮಾಡಿದ್ದು, ಸ್ಟೇಶನಕ್ಕೆ ಬಂದು ನಮ್ಮನ್ನು ಕರೆದುಕೊಂಡು ಹೋದರು. ಅಲ್ಲಿ ಮಹಾರಾಜರ ಅರಮನೆ ಮೊದಲಾದ ನೋಡತಕ್ಕ ಸ್ಥಳಗಳನ್ನು ಮತ್ತು ಒಳ್ಳೆಯ ಶ್ರೀಮಂತರಾದ ಸರೂಪಚಂದ ಹುಕುಮಚಂದ ಮತ್ತು ರಾವಬಹದ್ದೂರ ಕಲ್ಯಾಣಲಾಲ ಇವರ ಅಲಂಕೃತವಾದ ಸುಂದರ ಕಟ್ಟಡಗಳನ್ನು ನೋಡಿದೆವು. ಅದರಂತೆ ಗವರ್ನರ್ ಜನರಲ್‌ರ ಎಜೆಂಟ ಮತ್ತು ರೆಸಿಡೆಂಟರು ಇರುವ ಭಾಗವನ್ನು ಸಹ ಕಂಡೆವು. ಈ ಪಟ್ಟಣವು ದೊಡ್ಡ ವ್ಯಾಪಾರ ಸ್ಥಳವಿದ್ದು ಗೋದಿ, ಕಡಲೆ ಮುಂತಾದ ಕಾಳಿನ ಪಡಮೂಲೆಯಾಗಿರುತ್ತದೆ.

೨೬ ನೇ ತಾರೀಖಿನ ದಿವಸ ನಾನು ನನ್ನ ಹೆಂಡತಿ, ಯಾವಲದ ಪ್ರಸಿದ್ಧ ವಕೀಲರಾದ ರಾವಸಾಹೇಬ ಬಾರಜಿಭೆ ಇವರ ಕಾರಕೂನ ಶಂಕರಪ್ಪ ಮತ್ತು ಅವನ ಹೆಂಡತಿ (ಇವರಿಬ್ಬರೂ ನಮ್ಮ ಕೂಡ ಪ್ರವಾಸಕ್ಕೆ ಬಂದಿದ್ದರು) ಸಹಿತ ಉಜ್ಜೈನಿಗೆ ಹೋಗಿ ಮಹಾಂಕಾಳೇಶ್ವರ ಜ್ಯೋತಿರ್ಲಿಂಗದ ದರ್ಶನ ತೆಗೆದುಕೊಂಡೆವು. ಈ ಲಿಂಗವು ಗುಡಿಯ ಭೂಭಾಗದ ಕೆಳಗಿನ ಭಾಗದಲ್ಲಿರುತ್ತದೆ. ಈ ಪಟ್ಟಣವು ಹಿಂದೂಸ್ಥಾನದ ಹಳೇ ಪಟ್ಟಣಗಳ ಉತ್ತಮ ಮಾದರಿಯಾಗಿರುತ್ತದೆ. ಇಲ್ಲಿಯ ಒಂದು ವಟಾರದಲ್ಲಿ ಬೆಲ್ಲದ ಪೆಂಟೆಗಳ ದೊಡ್ಡ ಅಪೂವಿನ ಪೆಂಟೆಗಳನ್ನು ಕಂಡೆವು.

ಇಂದೂರಿಂದ ಹೊರಟು ತಿರುಗಿ ಬರುವಾಗ ಮೊರಟಾ ಸ್ಟೇಶನಕ್ಕೆ ಇಳಿದು, ಅಲ್ಲಿಂದ ೭ ಮೈಲು ಅಂತರದಲ್ಲಿರುವ ಓಂಕಾರೇಶ್ವರ ಸ್ಥಾನಕ್ಕೆ ಬಂದೆವು. ಈ ದೇವಾಲಯವು ನರ್ಮದಾ ನದಿಯ ದಕ್ಷಿಣ ದಂಡಿಯ ಮೇಲಿರುವ ಒಂದು ದಿನ್ನೆಯ ಮೇಲಿರುತ್ತದೆ. ಈ ದಿನ್ನೆಯ ಒಂದು ಮೂಲೆಗೆ ನದಿಯು ಇಬ್ಭಾಗವಾಗಿ ಇದೊಂದು ದ್ವೀಪವಾಗಿರುತ್ತದೆ. ಈ ಲಿಂಗದ ಪೂಜೆಯ ಹಕ್ಕು ಈ ಸ್ಥಳದ ಭಿಲ್ ಇನಾಮದಾರನಿಗೆ ಇರುತ್ತದೆ. ಈ ಲಿಂಗವನ್ನು ಮತ್ತು ಉಜ್ಜೈನಿಯಲ್ಲಿರುವ ಲಿಂಗವನ್ನೂ ಹಿಂದೂ ಧರ್ಮದ ಎಲ್ಲ ಜಾತಿಯವರು ಏನೂ ಆತಂಕವಿಲ್ಲದೆ ಪೂಜಿಸಬಹುದು. ಇಲ್ಲಿಯ ಲಿಂಗವು ಸ್ವಯಂಭು ಇದ್ದು ಅದರ ಸುತ್ತಲೂ ಇರುವ ಒಂದು ಇಂಚು ಅಗಲವಾದ ಹೊದರು ಯಾವಾಗಲೂ ನೀರಿನಿಂದ ತುಂಬಿದ್ದು ಮೇಲಿಂದ ಮೇಲೆ ಒಂದು ಮಗ್ಗಲಿಗೆ ನೀರಿನ ಗುಳ್ಳೆಗಳು ಎದ್ದು ತುಸು ನೀರು ಹೊರ ಚೆಲ್ಲುತ್ತಿರುತ್ತವೆ. ಇಲ್ಲಿ ನಾವು ಮೊರೇಶ್ವರ ಚುನಿಲಾಲ ಜೋಶಿ ಎಂಬ ಪಂಡಾನ ಮನೆಯಲ್ಲಿ ಇಳಕೊಂಡಿದ್ದೆವು. ಅವನಿಂದ ಅಭಿಷೇಕ ಸಂಕಲ್ಪ ಮುಂತಾದವುಗಳನ್ನು ಮಾಡಿಸಿ ಅವನಿಗೆ ೪ ರೂಪಾಯಿ ಭಿಕ್ಷೆ ಕೊಟ್ಟೆವು. ಇದರ ಸಂಬಂಧವಾದ ತುಸು ಹೆಚ್ಚಿನ ವಿವರಗಳು ನನ್ನ ಟಿಪ್ಪಣೆಗಳಲ್ಲಿ ಅವೆ. ಇಲ್ಲಿ ನಾನು ೩ ದಿನ ಇದ್ದು, ಇಲ್ಲಿಂದ ಮಧ್ಯರಾತ್ರಿ ಖಾಂಡಾಕ್ಕೆ ಬರುವಷ್ಟಲ್ಲಿ, ಸಂಬಂಧವಿದ್ದ ಮುಂದಿನ ಗಾಡಿಯು ಹೋಗಿರುವುದರಿಂದ ಬೆಳತನಕ ಚಳಿಯಲ್ಲಿ ಸ್ಟೇಶನದ ಮೇಲೆ ಕೂತು, ಮರುದಿನ ೧ ಗಂಟೆಗೆ ದೊರೆತ ಗಾಡಿಯಿಂದ ಬರ್ಹಾಣಪುರಕ್ಕೆ ಬಂದು, ಅಲ್ಲಿಯ ಜುಮ್ಮಾ ಮಸೀದೆಯನ್ನು ನೋಡಿಕೊಂಡು ಅಲ್ಲಿಂದ ಮೇರ ಮತ್ತು ಸಾವದಾ ಮಾರ್ಗದಿಂದ ಯಾವಲಕ್ಕೆ ತಿರುಗಿ ಬಂದೆವು.

ಯಾವಲ್ ಕೋರ್ಟಿನಲ್ಲಿ ಕೆಲಸ ಬಹಳ. ಈ ಕಾರಣದಿಂದ ಮೇಲಿಂದ ಮೇಲೆ ಸಹಾಯಕ್ಕಾಗಿ ಒಬ್ಬ ಸಬ್‌ಜಜ್ಜನನ್ನು ನೇಮಿಸುತ್ತಿರುತ್ತಾರೆ. ಆ ಊರಲ್ಲಿ ಆಗ ೪-೫ ಲಿಂಗಾಯತರ ಮನೆಗಳಿದ್ದವು. ಅವುಗಳಲ್ಲಿ

ಬಾರಜಿಭೆ ಎಂದು ಒಂದು ಮನೆತನವಿದ್ದು ಅದರಲ್ಲಿ ಯಜಮಾನರಾದ ಶ್ರೀ ವಿಶ್ವನಾಥ ಎಂಬುವರು ಒಬ್ಬ ವಕೀಲರಿದ್ದರು. ಅವರು ಒಳ್ಳೆಯ ಶ್ರೀಮಂತ ವರ್ಚಸ್ಸು ಉಳ್ಳವರು ಇದ್ದು, ಸರಕಾರದಿಂದ ರಾವಸಾಹೇಬ ಪದವಿಯನ್ನು ಪಡೆದಿದ್ದರು. ಅವರಿಗೆ ಇಬ್ಬರು ಮಕ್ಕಳಿದ್ದು ಹಿರಿಯವನಾದ ಗಣಪತಿಯು ಯಾವಲ್‌ದಲ್ಲಿ ಮತ್ತು ಅವನ ತಮ್ಮನಾದ ಶಿವಲಿಂಗಪ್ಪನು ಭುಸಾವಳದಲ್ಲಿ ಇರುತ್ತಾರೆ. ಈ ಕುಟುಂಬದವರು ನಾನು ಯಾವಲದಲ್ಲಿ ಇರುವಾಗ್ಯೆ ನಮ್ಮ ಮನೆಯವರ ಕೂಡ ಬಹಳ ಸಲಿಗೆಯಿಂದಿದ್ದು, ಗಣಪತಿಯಿಂದ ಒಮ್ಮೊಮ್ಮೆ ಪತ್ರಗಳು ಬರುತ್ತಿದ್ದವು. ಇತ್ತಿತ್ತಲಾಗಿ ಅವನ ಕಡೆಯಿಂದ ಪತ್ರವೇನೂ ಇದ್ದಿಲ್ಲ. ಆದರೆ ಈ ಹೊತ್ತೇ (ತಾ ೨೪-೪-೫೪) ಅವನ ಕಡೆಯಿಂದ ಒಂದು ಪತ್ರ ಬಂದು, ಅದರಲ್ಲಿ ತನ್ನ ಕುಟುಂಬದ ಎಲ್ಲ ವರ್ತಮಾನವನ್ನು ತಿಳಿಸಿದ್ದಾನೆ. ಇದೊಂದು ದೈವೀ ಯೋಗವೆಂದೇ ತಿಳಿಯಬಹುದು.

೧೯೧೮ನೇ ಇಸ್ವಿಯಲ್ಲಿ ಇನ್‌ಫ್ಲುಎಂಜಾ ರೋಗವು ಎಲ್ಲ ಕಡೆಗೆ ಹಬ್ಬಿದಂತೆ, ಯಾವಲದಲ್ಲಿಯೂ ಉಂಟಾಯಿತು. ಅಲ್ಲಿ ಅದಕ್ಕೆ ಬಹಳ ಜನರು ತುತ್ತಾದರು. ಅಲ್ಲಿ ತಾ। ೧೮-೬-೧೯೧೮ನೇ ದಿವಸ ನಿಜಗುಣಿ ಎಂಬ ಕೂಸು ಹುಟ್ಟಿ, ತಾ । ೧೮-೧೦-೧೯೧೮ ನೇ ದಿವಸ ಇದೇ ರೋಗದಿಂದ ತೀರಿಕೊಂಡಿತು.

ಯಾವಲದ ಪಶ್ಚಿಮಕ್ಕೆ ಚೋಪಡಾ ತಾಲೂಕಿನಲ್ಲಿ ಸಾತಪುಡಾ ಪರ್ವತದ ಸಮೀಪಕ್ಕೆ ಉನಬ್ಬದೇವ ಎಂಬ ಒಂದು ಬಿಸಿನೀರಿನ ಸ್ಥಳವಿದೆ. ನಾವು ಅಲ್ಲಿ ಹೋಗುವಾಗ್ಗೆ ದಾರಿಯಲ್ಲಿ ಒಂದು ಗ್ರಾಮದಲ್ಲಿಳಿದುಕೊಂಡಿದ್ದೆವು. ಆ ಭಾಗದ ಜನರು ಉದಾರಿಗಳೆಂದು ಈ ಮೊದಲೇ ಹೇಳಿದ್ದೇನೆ. ಅವರು ಆದರಾತಿಥ್ಯ ಪ್ರಿಯರೂ ಇದ್ದರು. ನಾವು ಇಳಕೊಂಡದ್ದು ಒಬ್ಬ ಮಾರವಾಡಿ ಮನೆಯಲ್ಲಿ. ನಮ್ಮ ಉಪಚಾರ ಮಾಡುವಾಗ ಅವನು ಒಂದು ಚಿಮಣಿ ಎಣ್ಣೆ ಹಾಕುವ ಡಬ್ಬಿಯ ಅರ್ಧದಷ್ಟು ಹೆಪ್ಪು ಹಾಕಿದ್ದನ್ನು ನಮ್ಮ ಮುಂದೆ ತಂದು ಇಟ್ಟನು. ಮಾರವಾಡಿ ಜನರು ಸಹ ಈ ತರದ ಸ್ವಭಾವದವರೆಂದು ಆಗ ನಮ್ಮ ದೃಷ್ಟಿಗೆ ಬಂತು. ಉನೊಬ್ಬದೇವದಲ್ಲಿ ತುಸು ಎತ್ತರ ಪ್ರದೇಶದಿಂದ ಬಿಸಿನೀರಿನ ಝುರಿಯು ಹೊರಬಿದ್ದಿದ್ದು, ಒಂದು ಗೋಮುಖದಿಂದ ಬಂದು ಚೌಕಾಗಿ ಕಟ್ಟಿದ ಹೊಂಡದಲ್ಲಿ ಬೀಳುತ್ತದೆ. ಗೋಮುಖದ ಬಾಯಿಯ ಹತ್ತಿರ ಕೈ ಇಡಗೊಡದಷ್ಟು ಬಿಸಿಯಾಗಿ ನೀರು ತೆಳಗೆ ಬೀಳುತ್ತದೆ. ಹೊಂಡದಲ್ಲಿ ಸ್ನಾನಮಾಡುವವರಿಗೆ ಬಿಸಿನೀರಿನಿಂದ ಸ್ನಾನಮಾಡಿದಂತಾಗುತ್ತದೆ. ದೂರಿನಿಂದ ಬರುವವರಿಗೆ ಇದೊಂದು ನೋಡತಕ್ಕ ಸ್ಥಳವೇ ಸರಿ.

ಆಗಿನ ಕಾಲಕ್ಕೆ ಪೂರ್ವ ಮತ್ತು ಪಶ್ಚಿಮ ಖಾನದೇಶ ಜಿಲ್ಹೆಗಳಿಗೆ ಒಂದೇ ಜಿಲ್ಹಾ ಕೋರ್ಟು ಇದ್ದು, ಅದು ಪಶ್ಚಿಮ ಖಾನದೇಶದ ಮುಖ್ಯ ಪಟ್ಟಣವಾದ ಧುಳಿಯಲ್ಲಿತ್ತು. ಆಗ ಶ್ರೀ ಜಿ. ಎ. ಹಿರೇಮಠ ಸಾಹೇಬರು ಧುಳಿಯಾ ಜಿಲ್ಹೆಯಲ್ಲಿ ಇಲಾಖೆಯ ಸಾಹೇಬರಿದ್ದರು. ನಾನು ಯಾವಲಕ್ಕೆ ಹೋದ ಮೇಲೆ ಸಾಂಪ್ರದಾಯದ ಪ್ರಕಾರ ಜಜ್ಜ ಸಾಹೇಬರಿಗೆ ಭೆಟ್ಟಿ ಆಗಬೇಕೆಂದು ಧುಳಿಯಾಕ್ಕೆ ಹೋಗಿ ಹಿರೇಮಠ ಸಾಹೇಬರಲ್ಲಿ ಇಳಕೊಂಡೆನು. ತುಸು ದಿವಸಗಳ ಹಿಂದೆ ಅವರ ಕುಟುಂಬವು ಅಲ್ಲಿಯೇ ತೀರಿಕೊಂಡಿದ್ದರು . ನಾನು ಮುಂಜಾನೆ ಕ್ಷೌರ ಮಾಡಿಕೊಂಡು ಕುಳಿತ ವೇಳೆಗೆ ಜಜ್ಜರಾದ ಶ್ರೀ ಮಡಗಾವಕರ ಸಾಹೇಬರು ಹಿರೇಮಠ ಸಾಹೇಬರನ್ನು ಮಾತಾಡಿಸಲಿಕ್ಕೆಂದು ಅಲ್ಲಿ ಬಂದರು. ಅವರು ಒಳ್ಳೇ ಸುಧಾರಕರು. ನಾನು ಇನ್ನೂ ಮಡಿ ಮೈಲಿಗೆಯನ್ನು ಪಾಲಿಸತಕ್ಕವನು. ಅವರು ಬಂದರೂ ಸಹ ನಾನು ಬರೇ ಒಂದು ಪೈರಣೆ ಹಾಕಿಕೊಂಡು ಹಾಗೇ ಕುಳಿತೆನು. ಅವರು ಈ ಬಗ್ಗೆ ಏನೂ ಮನಸ್ಸಿಗೆ ತಾರದೆ ತಮ್ಮ ಕೆಲಸ ತೀರಿಸಿಕೊಂಡು ಹೋದರು. ಮಧ್ಯಾಹ್ನದಲ್ಲಿ ನಾನು ಅವರ ಬಂಗಲೆಯಲ್ಲಿ ಹೋಗಿ ಭೆಟ್ಟಿ ಆಗಿ ಬಂದೆನು. ಅವರು ಯಾವಲ್ ಕೋರ್ಟಿಗೆ ತಪಾಸಣೆಗೆ ಬಂದಾಗ ವಕೀಲರು ಅವರಿಗೆ ಮೇಜವಾನಿ ಮಾಡಿ ಊಟಕ್ಕೆ ಕರೆದಿದ್ದರು. ನಾನು ಅಲ್ಲಿಯೇ ಹೋಗಬೇಕಾಯಿತು. ಆದರೂ

ನೀರು ಮುಟ್ಟದ ಪದಾರ್ಥಗಳನ್ನಷ್ಟೇ ಸೇವಿಸಿದೆನು. ಇದು ಜಜ್ಜ ಸಾಹೇಬರಿಗೆ ವಿಲಕ್ಷಣವಾಗಿ ತೋರಿತು. ಆದರೂ ಅವರು ಬಹಳ ನ್ಯಾಯನಿಷ್ಠುರರಿದ್ದು, ನಾನು ಮಾಡಿದ ಕೆಲಸವನ್ನು ಸರಿಯಾಗಿ ಪ್ರಶಂಸಿಸಿದರು.

ಇದೇ ಕಾಲಕ್ಕೆ ದಿ. ಬ. ಆರ್. ಎಸ್. ಹಿರೇಮಠ ಸಾಹೇಬರು ಪೂರ್ವ ಖಾನದೇಶ ಜಿಲ್ಹೆಯಲ್ಲಿ ಇಲಾಖೆ ಸಾಹೇಬರಿದ್ದರು. ಅದರ ಮುಖ್ಯ ಸ್ಥಳ ಜಳಗಾವ . ಇನ್‌ಫ್ಲ್ಯುಎಂಜಾದ ಕಾಲಕ್ಕೆ ಅವರ ಕುಟುಂಬ ಸಹ ಅಲ್ಲಿಯೇ ತೀರಿಕೊಂಡರು.

ನನಗೆ ಯಾವಲ್‌ದಿಂದ ೧೯೨೦ನೇ ಇಸ್ವಿಯ ಬೇಸಿಗೆಯ ಬಿಡುವಿನ ಮುಂಚೆ ಹೊನ್ನಾವರಕ್ಕೆ ವರ್ಗವಾಯಿತು. ಅಲ್ಲಿಂದ ಶ್ರೀ ಕ್ಷೇತ್ರ ಕಾಶಿಯು ಬಹಳ ದೂರ ಇಲ್ಲದೆ ಇರುವುದರಿಂದ, ಅದೇ ಸಮಯಕ್ಕೆ ಅದರ ದರ್ಶನ ಮಾಡಿಕೊಂಡು ಬರಬೇಕೆಂದು, ನಾನು ನನ್ನ ಹೆಂಡತಿ ಮತ್ತು ಚಿಕ್ಕ ಮಗ ಸೋಮಶೇಖರ ಸಹಿತ ಒಬ್ಬ ಬೇಲೀಫನನ್ನು ಕರೆದುಕೊಂಡು ಹೊರಟೆನು. ಕಾಶಿಯಲ್ಲಿ ಲಿಂಗಾಯತ ಪಂಚಾಚಾರ್ಯರ (ವಿಶ್ವಾರಾಧ್ಯರ)ರಲ್ಲಿ ಒಬ್ಬ ಆಚಾರ್ಯರ ಪೀಠವಿದ್ದು, ಅದರ ಶಾಖಾಮಠವು ಪ್ರಯಾಗದಲ್ಲಿ ಅದೆ. ನಾವು ಪ್ರಯಾಗಕ್ಕೆ ಬೆಳಗಿನ ೪ ಗಂಟೆ ಸುಮಾರಕ್ಕೆ ಮುಟ್ಟಿದೆವು. ಹಿಂದುಸ್ತಾನದ ಎಲ್ಲ ಕ್ಷೇತ್ರಗಳಲ್ಲಿ ಯಾತ್ರಿಕರ ಯೋಗಕ್ಷೇಮವನ್ನು ನೋಡುವ ಜನರ ಒಂದು ತಂಡವು ಇದ್ದೇ ಇರುತ್ತದೆ. ಆ ಭಾಗದಲ್ಲಿ ಇಂಥ ಜನರಿಗೆ ಪಂಡಾ ಎಂದು ಕರೆಯುತ್ತಾರೆ. ಇವರ ಸೇವಕರು ಸ್ಟೇಶನದಲ್ಲಿ ಯಾತ್ರಿಕರ ಸಲುವಾಗಿ ಕಾದುಕೊಂಡಿರುತ್ತಾರೆ. ಅದರಂತೆ ನಾವು ಸ್ಟೇಶನದಲ್ಲಿಳಿದಾಗ ಕಾದುಕೊಂಡಿದ್ದರು. ನಮಗೆ ಲಿಂಗಾಯತ ಮಠಕ್ಕೆ ಹೋಗಬೇಕಾಗಿತ್ತು. ಅಲ್ಲಿ ಹಾಜರಿದ್ದ ಪಂಡಾರರ ಇಬ್ಬರು ಸೇವಕರಿಗೆ ನಾವು ಹೋಗಬೇಕಾದ ಸ್ಥಳದ ಬಗ್ಗೆ ಹೇಳಿದೆವು. ಅವರು ಬೇರೆ ಬೇರೆ ಪಂಡಾನ ಸೇವಕರಿದ್ದುದರಿಂದ ನಮ್ಮನ್ನು ಕರಕೊಂಡು ಹೋಗುವದರ ಬಗ್ಗೆ ತಮ್ಮ ತಮ್ಮೊಳಗೆ ಜಗಳಾಡಹತ್ತಿದರು. ಅದನ್ನು ನೋಡಿ ನಾವು ಈಗಲೇ ಸ್ಟೇಶನ ಬಿಟ್ಟು ಹೊರಡುವದಿಲ್ಲವೆಂದು  ನಿಂತು ಬಿಟ್ಟೆವು. ಅಷ್ಟರಲ್ಲಿ ಒಬ್ಬನು ಹೊರಟುಹೋದನು. ಇನ್ನೊಬ್ಬನ ಕೂಡ ನಾವು ಅವನ ಯಜಮಾನನ ವಾಸಸ್ಥಳಕ್ಕೆ ಹೋದೆವು. ಅವನು ಲಿಂಗಾಯತ ಮಠಕ್ಕೇ ನಮ್ಮನ್ನು ಕರೆದುಕೊಂಡು ಹೋಗುತ್ತೇನೆಂದು ಹೇಳಿದ್ದನು. ಆದರೆ ನಾವು ಹೋದ ಸ್ಥಳದಲ್ಲಿ ಇದು ಮಠವೆಂದು ತೋರಿಸುವ ಗುರುತು ಯಾವದೂ ತೋರಲಿಲ್ಲ. ಯಾತ್ರಿಕರು ಪ್ರಯಾಗಕ್ಕೆ ಹೋಗುವದು ಮುಖ್ಯವಾಗಿ ತಮ್ಮ ಹಿರಿಯರ ಶ್ರಾದ್ಧವನ್ನು ಗಂಗಾ ಯಮುನೆಗಳ ಸಂಗಮದಲ್ಲಿ ಮಾಡುವ ಉದ್ದೇಶದಿಂದ. ಪಂಡಾರು ಬ್ರಾಹ್ಮಣರೇ ಇರುತ್ತಾರೆ. ನಾವು ಪಂಡಾರ ಮನೆ ಮುಟ್ಟಿದ ಮೇಲೆ ನಮ್ಮನ್ನು ಕರೆದುಕೊಂಡು ಹೋದವನು ಎಲ್ಲಿಯೋ ಹೊರಟು ಹೋದನು. ನಾವು ಬೆಳಗಾದ ಮೇಲೆ ವಿಚಾರ ಮಾಡೋಣವೆಂದು ಅಲ್ಲಿಯತನಕ ವಿಶ್ರಾಂತಿ ಹೊಂದಿದೆವು. ಬೆಳಗಾದ ಮೇಲೆ ಪಂಡಾನು ಬಂದು ನಮಗೆ ಭೆಟ್ಟಿಯಾಗಿ ಸಮಾಚಾರ ಕೇಳಹತ್ತಿದನು. ನಾವು ಅವನಿಗೆ ನಿಮ್ಮ ಕೂಡ ನಮ್ಮದೇನೂ ಕೆಲಸವಿಲ್ಲ. ನಾವು ಲಿಂಗಾಯತ ಮಠಕ್ಕೆ ಹೋಗಬೇಕಾಗಿದೆ. ನಿಮ್ಮ ಸೇವಕನು ನಮ್ಮನ್ನು ವಂಚಿಸಿ ಕರಕೊಂಡು ಬಂದಿದ್ದಾನೆ. ನಮ್ಮನ್ನು ಮಠಕ್ಕೆ ಇಳಿಸುವ ವ್ಯವಸ್ಥೆ ಮಾಡಬೇಕೆಂದು ಸಿಟ್ಟಿನಿಂದ ಹೇಳಿದೆವು. ಮಠವು ಅಲ್ಲಿಂದ ಬಹಳ ದೂರ ಸಂಗಮದ ಹತ್ತಿರ ಇತ್ತು. ಅಷ್ಟು ದೂರ ಹೋಗುವದು ತ್ರಾಸದಾಯಕವಾಗಿದ್ದರಿಂದ ನಮ್ಮ ಊಟ ಉಡಿಗೆಯನ್ನು ತೀರಿಸಿಕೊಂಡು ಹಿಂದಿನಿಂದ ಹೋಗೋಣವೆಂದು ನಿರ್ಣಯಿಸಿದೆವು. ನಮ್ಮ ಸಂಗಡ ಬಂದ ಬೇಲೀಫನು ಮರಾಠಾ ಜಾತಿಯವನಿದ್ದುದರಿಂದ ಅವನಿಗೆ ಶ್ರಾದ್ಧ ಮಾಡುವ ಅವಶ್ಯಕತೆಯಿತ್ತು. ಅವನು ಪಂಡಾನ ಶಿಷ್ಯನನ್ನು ಕರಕೊಂಡು ಸಂಗಮಕ್ಕೆ ಹೋಗಿ ತನ್ನ ಕೆಲಸವನ್ನು ತೀರಿಸಿಕೊಂಡು ಬಂದನು. ಯಮುನಾನದಿಯು ನಾವು ಇಳಕೊಂಡ ಸ್ಥಳಕ್ಕೆ ಸಮೀಪವಾಗಿತ್ತು. ನಾವೂ ನದಿಯಲ್ಲಿ ಸ್ನಾನಮಾಡಿಕೊಂಡು ನಮ್ಮ ಊಟವನ್ನು ತೀರಿಸಿದೆವು. ಮಧ್ಯಾಹ್ನದಲ್ಲಿ ಮಠಕ್ಕೆ ಹೋಗಿ ಅಲ್ಲಿರುವ ಜಂಗಮರನ್ನು ಕಂಡು ತಿರುಗಿ ಬಂದು ಮುಂದೆ ಕಾಶಿಗೆ ಹೋದೆವು.

ಅಲ್ಲಿ ವಿಶ್ವಾರಾಧ್ಯರ ಮಠವು ಬಹಳ ವಿಸ್ತಾರವಾಗಿದ್ದು ಯಾತ್ರಿಕರು ಇಳಕೊಳ್ಳಲಿಕ್ಕೆ ಎಷ್ಟೋ ಸ್ವತಂತ್ರ ಕೋಣೆಗಳಿದ್ದು ಬಹಳ ಅನುಕೂಲವಾಗಿದೆ. ಈ ಮಠಕ್ಕೆ ಸ್ಥಾವರಾಸ್ತಿಯಿಂದ ಬಹು ದೊಡ್ಡ ಉತ್ಪನ್ನವಿದೆ. ದಕ್ಷಿಣದಿಂದ ಬ್ರಾಹ್ಮಣರ ಹೊರತಾಗಿ ಬಹಳಮಾಡಿ ಎಲ್ಲ ಜಾತಿಯ ಜನರೂ ಆ ಮಠಕ್ಕೆ ಹೋಗುತ್ತಾರೆ. ಯಾತ್ರಿಕರಿಂದ ತಮಗೆ ಸಾಕಷ್ಟು ಹಣ ದೊರೆಯುವ ಬಗ್ಗೆ ಅಲ್ಲಿಯ ಸ್ವಾಮಿಗಳು ಒಂದು ಯೋಜನೆಯನ್ನು ಮಾಡಿರುತ್ತಾರೆ. ಅದೇನೆಂದರೆ, ಪ್ರತಿಯೊಬ್ಬ ಯಾತ್ರಿಕನಿಂದಲೂ ಲಿಂಗಸ್ಥಾಪನೆ ಮಾಡಿಸುವದು. ಆ ಲಿಂಗವು ಮಣ್ಣಿನದಿರಬಹುದು ಅಥವಾ ಕಲ್ಲಿನದಿರಬಹುದು. ಅದನ್ನು ಸ್ಥಾಪಿಸಿದ ಸ್ಥಳವು ಆವಾರದೊಳಗಿನ ಬೈಲಕಟ್ಟೆಯ ಮೇಲೆ ಇರಬಹುದು ಅಥವಾ ಅದಕ್ಕೆ ಸ್ವತಂತ್ರವಾದ ಸಣ್ಣ ದೊಡ್ಡ ಕೋಣೆ ಇರಬಹುದು. ಯಾತ್ರಿಕರ ಸ್ಥಿತಿಗತಿಯ ಮೇಲಿಂದ ಅವರಿಗೆ ಯಾವ ತರದ ಲಿಂಗವು ಮತ್ತು ಎಲ್ಲಿ ಸ್ಥಾಪಿಸಲ್ಪಡಬೇಕು ಎಂಬುದನ್ನು ತಿಳಕೊಂಡು, ಆ ಬಗ್ಗೆ ೫ ರೂ. ಯಿಂದ ೧೦೦೦ ರೂ. ಗಳವರೆಗೆ ಕಾಣಿಕೆ ವಸೂಲಮಾಡುತ್ತಾರೆ. ಯಾತ್ರಿಕರಲ್ಲಿ ಯಾರಾದರೂ ಶ್ರಾದ್ಧ ಮಾಡುವಂಥವರಿದ್ದರೆ ಅದನ್ನು ನೆರವೇರಿಸುವಂಥ ಸೇವಕರನ್ನಿಟ್ಟುಕೊಂಡು, ಅವರಿಂದ ಆ ಕಾರ್ಯವನ್ನು ಕಾಶಿಯಲ್ಲಷ್ಟೇ ಅಲ್ಲ ಗಯಾದಲ್ಲೂ ಮಾಡಿಸುತ್ತಾರೆ. ನಮ್ಮ ಬೇಲಿಫನು ಇದನ್ನು ಎರಡೂ ಸ್ಥಳಗಳಲ್ಲಿ ಮಾಡಿಸಿದನು. ಬಹಳ ಜನರು ಮಣ್ಣಿನ ಲಿಂಗಗಳನ್ನೇ ಮಾಡಿಸುವರು. ಅವುಗಳನ್ನು ಮತ್ತು ಆವಾರದಲ್ಲಿ ಸ್ಥಾಪಿಸಿದ ಕಲ್ಲಿನ ಲಿಂಗವನ್ನು ಕಾರ್ಯವು ತೀರಿದ ಮೇಲೆ ಗಂಗಾನದಿಯಲ್ಲಿ ಚೆಲ್ಲಿಬಿಡುತ್ತಾರೆ. ಸ್ವತಂತ್ರ ಕೋಣೆಗಳಲ್ಲಿ ನೆಲಕ್ಕೆ ಗಟ್ಟಿಯಾಗಿ ಕೂಡ್ರಿಸಿದ ಲಿಂಗಗಳು ಮಾತ್ರ ಕಾಯಂ ಉಳಿದು ಅವುಗಳನ್ನು ದಿನಾಲು ಪೂಜಿಸುತ್ತಾರೆ. ಇಂಥ ಮಠಗಳಲ್ಲಿ ಮುಖ್ಯವಾಗಿ ಪೂಜಿಸತಕ್ಕ ವಸ್ತುವು ಅಲ್ಲಿಯ ಕರ್ತೃಗದ್ದಿಗೆಯು. ಆ ಮಠದಲ್ಲಿ ಇದು ಬಹು ದೊಡ್ಡದಿರುತ್ತದೆ. "ಅದರ ಅಭಿಷೇಕ ಮಾಡುವುದೊಂದೇ ಸಾಕು. ಹೆಚ್ಚಿನದೇನು ಬೇಡ" ಎಂದು ನಾನು ಅಲ್ಲಿಯ ಸ್ವಾಮಿಗಳಿಗೆ ತಿಳಿಸಿ ಅದರಂತೆ ಮಾಡಿಸಿದೆನು. ಅಲ್ಲಿ ಕೆಲವು ವಿದ್ಯಾರ್ಥಿಗಳೂ ಇದ್ದರು. ನಾವು ಇಳಕೊಳ್ಳಲಿಕ್ಕೆ ಸ್ವತಂತ್ರ ಕೋಣೆಗಳನ್ನು ಕೊಟ್ಟಿದ್ದರು. ನಮಗೆ ಎಲ್ಲ ಅನುಕೂಲತೆಗಳನ್ನು ಸ್ವಾಮಿಗಳ ಸೇವಕರೂ ವಿದ್ಯಾರ್ಥಿಗಳೂ ಮಾಡಿಕೊಟ್ಟರು. ಅಲ್ಲಿ ನಾವು ಒಂದು ವಾರದ ವರೆಗೆ ಇದ್ದೆವು. ದಿನಾಲು ಗಂಗಾಸ್ನಾನ ವಿಶ್ವನಾಥಲಿಂಗ ದರ್ಶನ ಆಗುತ್ತಿದ್ದವು. ಆ ಲಿಂಗಕ್ಕೆ ಸಹ ಅಭಿಷೇಕ ಮಾಡಿಸಿದೆವು. ಬಿಸಿಲಿನ ತಾಪ ಮಾತ್ರ ಬಹಳ ಆಗಿ ಹೇಗೋ ಒಂದು ವಾರ ಕಳೆದೆವು.

ಈ ಮಠಕ್ಕೆ ಜಂಗಮವಾಡಿಮಠವೆನ್ನುತ್ತಾರೆ. ಶ್ರೀ ಸ್ವಾಮಿಗಳು ನನಗೆ ಎರಡು ಸನದುಗಳನ್ನು ತೋರಿಸಿದರು. ಒಂದರಲ್ಲಿ ಅಕಬರ ಬಾದಶಹನು ಹಿಜರಿ ಸನ್ ೯೯೨ರಲ್ಲಿ ಮಲ್ಲಿಕಾರ್ಜುನ ಸ್ವಾಮಿಗೆ ೨೩೦ ಬಿಘೆ ಇನಾಮು ಕೊಟ್ಟಂತಿದೆ. ಇನ್ನೊಂದರಲ್ಲಿ ಕಾಶಿ ಅರಸನಾದ ಜಯನಂದದೇವನು ಅದೇ ಸ್ವಾಮಿಗೆ ೮೦೦ ಪರಗ ಭೂಮಿಯ ದಾನ ಮಾಡಿದಂತಿದೆ.

ಈ ಮಠದ ಆವಾರದಲ್ಲಿ ಕೊಡಗು ದೇಶದ ವೀರರಾಜೇಂದ್ರ ಒಡೆಯರ ಸಮಾಧಿಯಿದೆ. ಅವರ ದೇಹವನ್ನು ಇಲ್ಲಿ ತಂದು ಸಮಾಧಿ ಮಾಡಿರುತ್ತಾರೆ. ಅದರ ಮೇಲೆ ಕೆಳಗೆ ಬರೆದಂತೆ ಲೇಖನವಿದೆ.

ಕೊಡಗುದೇಶದ ವೀರರಾಜೇಂದ್ರ ಒಡೆಯರು ವಿಲಾಯತಿಯಲ್ಲಿ ಶಿವಾಧೀನರಾದರು. ಅವರ ದೇಹವನ್ನು ಹಿಂದುಸ್ಥಾನ ಕಾಶಿಕ್ಷೇತ್ರಕ್ಕೆ ತಂದು, ಅವರ ಪಟ್ಟದ ರಾಣಿಯಾದ ನಂಜಮ್ಮಾಜಿಯವರು ಅವರ ಪುತ್ರರಾದ ೧) ಲಿಂಗರಾಜ ೨) ಸೋಮಶೇಖರರಾಜ ೩) ವೀರಭದ್ರರಾಜ ೪) ನಂಜರಾಜ ೫)ಮುದ್ದರಾಜ ಒಡೆಯರು ೬) ಪದ್ಮರಾಜ ಒಡೆಯರು ಸುಭೆದಾರ ಕೊಡಗು ರಮಣೀರ ಅಚ್ಚಯ್ಯನಿಗೆ ಅಪ್ಪಣೆ ಕೊಟ್ಟು, ವೀರಶೈವಮಠ ಜಂಗಮ ವಾಡೀ ಲಿಂಗಮುದ್ರೆ ಕಲ್ಲಿನೊಳಗೆ ಜಾಗದಲ್ಲು ಸಮಾಧಿ ಮಾಡಿ ಗದ್ದಿಗೆಯನ್ನು

ಕಟ್ಟಿಸಿ, ಸನ್ ೧೮೬೨ ಫೆಬ್ರುವರಿ ತಾ|| ೧೨ ನೇ ದುರ್ಮುಖಿ ಸಂವತ್ಸರದ ಮಾಘ ಶುದ್ಧ ೧೩ ಬುಧವಾರ ದಿವಾ ಘಂಟೆ ೧೧ ೧/೨ ಲಿಂಗಪ್ರತಿಷ್ಠೆ ಮಾಡಿಸಿದ್ದು, ಆ ಲಿಂಗಕ್ಕೆ ಶ್ರೀ ವೀರೇಶ್ವರ ಅಂತ ಹೆಸರು ಮಾಡಿಸಿ ಅದೆ.

ಶ್ರೀ ಸ್ವಾಮಿಗಳಲ್ಲಿ ಶ್ರೀ ಹರೀಶ್ವರಸ್ವಾಮಿ ಪಾಲ್ಗುಣ ವ. ೧೧, ೧೯೩೬, ಶ್ರೀ ವೀರಭದ್ರಸ್ವಾಮಿ ಶ್ರಾವಣ ಶು. ೧೫, ೧೯೪೮, ಶ್ರೀ ರಾಜೇಶ್ವರಸ್ವಾಮಿ ಆಶಾಢ ವ. ೭, ೧೯೫೪ - ಎಂದು ಇಲ್ಲಿ ಆಗಿಹೋಗಿದ್ದಾರೆ.

ನಾವು ಕಾಶಿಯಿಂದ ಹೊರಟು ತಿರುಗಿ ಬರುವಾಗ್ಗೆ, ಆಗ್ರಾ ತಾಜಮಹಲ ನೋಡಿಕೊಂಡು ಬರಬೇಕೆಂದು ಅಲ್ಲಿಂದ ಮೊಗಲ ಸರಾಯಿ ಸ್ಟೇಶನಕ್ಕೆ ಮುಂಜಾನೆ ಬಂದೆವು. ಅಲ್ಲಿಂದ ಆಗ್ರಾದ ಕಡೆಗೆ ಹೊರಡುವ ಗಾಡಿಯು ಹೊರಟು ಹೋದದ್ದರಿಂದ, ಸಾಯಂಕಾಲದ ವರೆಗೆ ೨ನೇ ಗಾಡಿಯು ಬರುವ ತನಕ ಸ್ಟೇಶನದ ಮೇಲೆಯೇ ಉಳಿಯಬೇಕಾಯಿತು. ೨ನೇ ಗಾಡಿಯು ಬಂದ ಮೇಲೆ ಅಲ್ಲಿಂದ ಹೊರಟು ಮರುದಿವಸ ಸುಮಾರು ಸಾಯಂಕಾಲದ ೫ ಗಂಟೆಗೆ ಆಗ್ರಾಕ್ಕೆ ಮುಟ್ಟಿದೆವು. ಸ್ಟೇಶನದ ಹತ್ತರಿರುವ ಇಳಕೊಳ್ಳುವದಕ್ಕೆ ಒಂದು ಕೋಣೆಯನ್ನು ಹುಡುಕಿ, ಅಲ್ಲಿ ನಮ್ಮ ಸಾಮಾನ ಇಟ್ಟು ಫಲಹಾರ ತೀರಿಸಿಕೊಂಡು, ಕೂಡಲೇ ಒಂದು ವಾಹನವನ್ನು ಗೊತ್ತು ಮಾಡಿ, ತಾಜಮಹಲ ಮತ್ತು ಇನ್ನೊಂದು ನೋಡತಕ್ಕ ಮಸೀದೆಯನ್ನು ನೋಡಿಕೊಂಡು ಬಂದೆವು. ಆ ರಾತ್ರಿಯನ್ನು ಅಲ್ಲಿ ಕಳೆದು ಮರುದಿವಸ ಮುಂಜಾನೆ ಬೆಳಿಗ್ಗೆ ಭುಸಾವಳ ಸ್ಟೇಶನಕ್ಕೆ ಬಂದು ಅಲ್ಲಿಂದ ಯಾವಲಕ್ಕೆ ಮುಟ್ಟಿದೆವು.

ಅಷ್ಟರಲ್ಲಿ ನನ್ನ ಮಗಳಾದ ಶಿವಗಂಗವ್ವನಿಗೆ ವಿಷಮ ಜ್ವರವು ಬರಹತ್ತಿದ್ದು, ಬೇಸಿಗೆಯ ಬಿಡುವು ತೀರಿದರೂ ಸಹ ಅದು ಕಡಿಮೆಯಾಗಿದ್ದಿಲ್ಲ. ಆಕೆಯು ಪ್ರವಾಸಮಾಡುವ ಸ್ಥಿತಿಯಲ್ಲಿ ಇಲ್ಲದ್ದರಿಂದ ಒಂದು ತಿಂಗಳು ರಜೆ ತೆಗೆದುಕೊಳ್ಳಬೇಕಾಯಿತು. ಅಲ್ಲಿಯ ಜನರ ಸಹವಾಸದಲ್ಲಿ ಅಲ್ಲಿ ಕಾಲಕಳೆಯುವುದಕ್ಕೆ ನಮಗೆ ಏಷ್ಟೂ ತ್ರಾಸ ಅನಿಸಲಿಲ್ಲ. ಮುಂದೆ ಅಲ್ಲಿಂದ ತಾ|| ೭-೮-೧೯೨೦ ಹೊರಟು ಧಾರವಾಡಕ್ಕೆ ಬಂದೆವು. ನನ್ನ ಮಗಳಿಗೆ ಇನ್ನೂ ಪೂರಾ ಶಕ್ತಿ ಬಾರದೆ ಇದ್ದುದರಿಂದ, ನಾನು ದಾನಪ್ಪ ಮತ್ತು ಗಂಗಾಧರ ಇವರಿಬ್ಬರನ್ನೇ ಕರೆದುಕೊಂಡು ಹಾವೇರಿ ಶಿರಸಿ ಕುಮಠಾ ಮಾರ್ಗದಿಂದ ಹೊನ್ನಾವರಕ್ಕೆ ಬಂದು, ಅಲ್ಲಿ ಆಗಸ್ಟ ೨೪ ತಾ. ನ ದಿವಸ ಕೆಲಸದ ಮೇಲೆ ಹಾಜರ ಆದೆನು.

ಅಲ್ಲಿ ಸಬ್‌ಜಜ್ಜರು ಇರಲಿಕ್ಕೆ ಬಂಗಲೆ ಇದೆ. ಅದು ಶರಾವತಿ ನದಿ ದಂಡೆಯ ಮೇಲೆ ಒಂದು ಎತ್ತರವಾದ ದಿನ್ನಿಯ ಮೇಲೆ ಕಟ್ಟಿದ್ದಿರುತ್ತದೆ. ಅದಕ್ಕೆ ಹೊಂದಿ ಮುನ್ಸಿಪಲ್ ದವಾಖಾನೆ ಅದೆ. ಶರಾವತಿ ನದಿಯು ಊರ ದಂಡೆಗುಂಟ ಹರಿದು ಸಮುದ್ರಕ್ಕೆ ಕೂಡುವ ಸ್ಥಳದಲ್ಲಿ ಸುಮಾರು ಒಂದು ಫರ್ಲಾಂಗ ಅಗಲಾಗಿ ಎರಡು ಭೂಶಿಖರಗಳ ನಡುವೆ ಸಮುದ್ರಕ್ಕೆ ಕೂಡುತ್ತದೆ. ಒಳಗಡೆಯ ಭೂಶಿಖರದ ಕಡೆಗೆ ಮಾವಿನಕುರುವೆ ಎಂಬ ಗ್ರಾಮವಿದೆ. ಸಮುದ್ರಕ್ಕೆ ಏರಿ ಆರಂಭವಾದಾಗ ದೋಣಿಯಲ್ಲಿ ಕುಳಿತು ಸುಮಾರು ೨೦ ಮೈಲು ದೂರಿರುವ ಗೆರಸಪ್ಪಿಗೆ ಹೋಗಬಹುದು. ಅಲ್ಲಿಂದ ಮುಂದೆ ದಟ್ಟಾದ ಅರಣ್ಯದೊಳಗಿಂದ ಹಾದು ೫-೬ ಮೈಲಿಗೆ ಅಂತರಮೇಲಿರುವ ಪ್ರಸಿದ್ಧವಾದ ಜಲಪಾತವಿರುವುದು. ಅಲ್ಲಿಂದ ಮುಂದೆ ಕೆಲವು ಮೈಲುಗಳ ಮುಂದೆ ತಾಳಗುಪ್ಪೆ ಸ್ಟೇಶನದ ಹತ್ತಿರ ವಿದ್ಯುತ್ತಿನ ದೊಡ್ಡ ಕಾರ್ಯಾಲಯ ಸ್ಥಾಪಿತವಾಗಿರುವುದು. ನಾನು ಹೊನ್ನಾವರದಲ್ಲಿದ್ದಾಗ ಜಲಪಾತವನ್ನು ನೋಡಲಿಕ್ಕೆ ಹೋಗುವುದು ಸಹಜವೇ. ಇತ್ತಿತ್ತಲಾಗಿ ವಿದ್ಯುತ್ ಕಾರ್ಯಾಲಯವು ಆರಂಭಿಸಲ್ಪಟ್ಟಾಗ ಅದನ್ನು ಸಹ ನೋಡಿ ಬಂದಿರುವೆನು.

ನಾನು ಇರುವ ಬಂಗಲೆಯಿಂದ ೧ ೧/೨ ಮೈಲ ಅಂತರದ ಮೇಲೆ ರಾಮತೀರ್ಥವೆಂಬ ಒಂದು ಸುಮಾರು ೨೦ ಫೂಟು ಚಚೌಕ ನೀರಿನ ಹೊಂಡವಿದೆ. ಅದರ ಮೇಲ್ಬಾಗದಲ್ಲಿ ಭೂಮಿಯೊಳಗಿಂದ ತುಸು ಬೆಚ್ಚಗಿರುವ ನೀರು ಒಂದು ಗೋಮುಖದೊಳಗಿಂದ ಹೊಂಡದಲ್ಲಿ ಸುಮಾರ ೮ ಫೂ. ಎತ್ತರದಿಂದ ಬೀಳುತ್ತದೆ. ಆ ಊರ ಎಷ್ಟೋ ಜನರು ಮುಂಜಾನೆ ಅಲ್ಲಿ ಹೋಗಿ ಸ್ನಾನಮಾಡಿ ಬರುತ್ತಿರುತ್ತಾರೆ. ಮೇಂದು ವಿಕಾರ

ಇದ್ದವರು ಗೋಮುಖದ ಕೆಳಗೆ ಕುಳಿತು ತಮ್ಮ ವಿಕಾರವನ್ನು ಕಳಕೊಳ್ಳುವದಕ್ಕೆ ಹೋಗುತ್ತಿರುತ್ತಾರೆ. ನಾನು ಅಲ್ಲಿ ಇರುವ ವರೆಗೆ ದಿನಾಲು ಮುಂಜಾನೆ ಎದ್ದ ಕೂಡಲೆ ಅಲ್ಲಿ ಹೋಗಿ ಜಳಕಮಾಡಿ ಅಲ್ಲಿಂದ ಒಂದು ತಿರುಗಣೆ ಚರಿಗೆಯನ್ನು ನೀರು ತುಂಬಿಕೊಂಡು ಕುಡಿಯಲಿಕ್ಕೆ ತರುತ್ತಿದ್ದೆನು. ಮಧ್ಯದಲ್ಲಿ ೧೯೨೧ ಜುಲೈ ತಿಂಗಳಲ್ಲಿನ ನನ್ನ ಅಜೀರ್ಣವಿಕಾರವು ತಲೆದೋರಿ ಆಗಸ್ಟದಲ್ಲಿ ಒಬ್ಬ ಮಲಬಾರದ ವೈದ್ಯನಿಂದ ತಿಕ್ಕಿಸಿಕೊಂಡದ್ದು, ನನ್ನ ಟಿಪ್ಪಣೆ ಪುಸ್ತಕದಲ್ಲಿ ಬರೆದಿದೆ.

ಘಟ್ಟದ ಮೇಲ್ಭಾಗದ ಜನರಿಗಿಂತ ಕೆಳಭಾಗದ ಜನರು ಒಳ್ಳೇ ಕಾಯದೆಶೀರ ರೀತಿಯಿಂದ ನಡಕೊಳ್ಳುವವರೆಂದು ಪ್ರಸಿದ್ಧಿಯಿದೆ ಅಷ್ಟೆ. ಯಾವಲದ ಜನರು ಸಭ್ಯರೂ ಉದಾರಿಗಳೂ ಇರುವರೆಂದು ಈ ಮೊದಲೇ ಹೇಳಿದೆ. ಆಗ ಒಂದು ವ್ಯಾಜ್ಯದಲ್ಲಿ ನಾನು ಇರುವ ಮನೆಯ ಮಾಲಿಕನೇ ಸಾಕ್ಷಿಗೆ ಬಂದಿದ್ದನು. ಅವನು ಸಾಕ್ಷಿ ಹೇಳಲಿಕ್ಕೆ ಬಂದಾಗ ಅವನು ಆ ಮನೆಯ ಮಾಲಿಕನೆಂದು ನನಗೆ ಗೊತ್ತಿರಲಿಲ್ಲ. ಸಾಕ್ಷಿ ಹೇಳುವಾಗ್ಗೆ ಅವನು ಸರಿಯಾಗಿ ಹೇಳುವದಿಲ್ಲವೆಂದು ನನಗೆ ಅನಿಸಿ, ಅವನಿಗೆ ಏನೋ ಲುಚ್ಚಾ ಎಂಬ ಅಪ ಶಬ್ದವನ್ನು ಆಡಿದೆನು. ಆದರೂ ಅದನ್ನು ಸಹಿಸಿಕೊಂಡು ಸುಮ್ಮನೇ ಹೋದನು. ವಕೀಲರು ಮೊದಲಾದ ಇತರ ಜನರು ಸಹ ಈ ಬಗ್ಗೆ ಆಕ್ಷೇಪಣೆ ತೆಗೆದುಕೊಳ್ಳಲಿಲ್ಲ. ಅದೇ ರೀತಿ ಹೊನ್ನಾವರ ಕೋರ್ಟಿನಲ್ಲಿ ಒಂದು ಪ್ರಸಂಗ ಬಂದಾಗ, ಕೋರ್ಟಿನ ಕೆಲಸ ತೀರಿದ ಮೇಲೆ ಅಂತರಂಗವಾಗಿ ಇಡಗುಂಜಿ ಅಂತ ಒಬ್ಬ ಕಾರಕೂನನು "ಈ ರೀತಿ ನಡೆದರೆ ಇಲ್ಲಿ ಸಾಗುವದಿಲ್ಲ"ವೆಂದು ಸೂಚಿಸಿದನು. ಅದನ್ನು ಮಾನ್ಯಮಾಡಿ ತೊಂದರೆಗೆ ಈಡಾಗದಂತೆ ನೋಡಿಕೊಳ್ಳಬೇಕಾಯಿತು. ಅಲ್ಲಿಯ ಬಹಳ ಜನರು ಬಡವರು. ಹೊಲಗಳ ಸಣ್ಣ ಸಣ್ಣ ತುಂಡುಗಳಿಗೂ ಸಹ ವ್ಯಾಜ್ಯಗಳು ನಡೆಯುತ್ತವೆ. ಇದರಿಂದ ಅಲ್ಲಿಯ ಕೆಲಸವು ಬಹಳ ತ್ರಾಸದಾಯಕವಿರುತ್ತದೆ.

ನಾನು ಮೊದಲು ಅಲ್ಲಿ ಹೋಗುವಾಗ ನನ್ನ ಸಂಗಡ ದಾನಪ್ಪ ಮತ್ತು ಗಂಗಾಧರ ಇವರಿಬ್ಬರನ್ನೇ ಕರಕೊಂಡು ಹೋದೆನೆಂದು ಮೇಲೆ ಹೇಳಿದೆ. ನನ್ನ ಮಕ್ಕಳನ್ನು ಮೊದಲು ಶಾಲೆಗೆ ಕಳಿಸಬೇಕಾದರೆ ೨-೩ ಇಯತ್ತೆಗಳ ವರೆಗೆ ಮನೆಯಲ್ಲಿ ಅಭ್ಯಾಸ ಮಾಡಿಸಿ, ನಂತರ ಶಾಲೆಗೆ ಕಳಿಸುವ ರೂಢಿ. ಮೊದಲು ಹುಬ್ಬಳ್ಳಿಯಲ್ಲಿ ಇವರಿಬ್ಬರನ್ನೂ ಶಾಲೆಗೆ ಕರಕೊಂಡು ಹೋದಾಗ ದಾನಪ್ಪನನ್ನು ೧ನೇ ಇಯತ್ತೆಯಲ್ಲಿ ಮತ್ತು ಗಂಗಾಧರನನ್ನು ೨ ಇಯತ್ತೆಯಲ್ಲಿ ಹಾಕಬೇಕಾಗಿತ್ತು. ಆಗ ಶಿಕ್ಷಕರು ಅವರನ್ನು ಪರೀಕ್ಷೆ ಮಾಡಿದಾಗ ದಾನಪ್ಪನಿಗೆ ಎಷ್ಟೋ ಸಾರೆ ಪ್ರಶ್ನೆ ಮಾಡಿದರೂ ಅವನು ಏನೂ ಉತ್ತರ ಕೊಡದೆ ಸುಮ್ಮನೆ ಕೂತುಬಿಟ್ಟನು. ಅವನನ್ನು ಹಾಗೆ ತಿರುಗಿ ಕರಕೊಂಡು ಮನೆಗೆ ಬರಬೇಕಾಯಿತು. ಹೊನ್ನಾವರಕ್ಕೆ ಹೋದಾಗ ದಿನಾಲು ರಾತ್ರಿ ಇವರಿಬ್ಬರಿಗೆ ಅಭ್ಯಾಸ ಹೇಳುತ್ತಿದ್ದೆನು. ದಾನಪ್ಪನಿಗೆ ಗಣಿತ ಚೆನ್ನಾಗಿ ತಿಳಿಸಿ ಹೇಳಿ ಆ ಬಗ್ಗೆ ಪ್ರಶ್ನೆ ಮಾಡಿದಾಗ ಏನೂ ಮಾತಾಡಲಿಲ್ಲ. ಬಹಳ ಸಿಟ್ಟು ಬಂದು, ಆಮೇಲೆ ಒಂದು ಬಡಿಗೆಯಿಂದ ಅವನ ಬೆನ್ನ ಮೇಲೆ ಕೆಲವು ಏಟುಗಳನ್ನು ಕೊಟ್ಟೆನು. ಆದರೂ ಮಾತಾಡಲಿಲ್ಲ. ಆಮೇಲೆ ಒಳ್ಳೇ ಜೋರಿನಿಂದ ಒಂದು ಏಟು ಕೊಟ್ಟಮೇಲೆ ಅಯ್ಯೋ ಎಂದು ಒದರಿದನು. ನಾನು ಗಾಬರಿ ಹೋದೆನು. ಆಮೇಲೆ ಸಿಪಾಯಿಯನ್ನು ಕರೆದು ಅವನನ್ನು ಕರಕೊಂಡು ಹೋಗಿ ನೋಡಿ ಸಮಾಧಾನವಾಗುವ ಹಾಗೆ ಮಾಡೆಂದು ತಿಳಿಸಿದೆನು. ಅಂದಿನಿಂದ ಹುಡುಗರಿಗೆ ಹೊಡೆಯಬೇಕಾದರೆ ಈ ಸಂಗತಿ ಮೇಲಿಂದ ಮೇಲೆ ನೆನಪಾಗುತ್ತದೆ.

ಅಲ್ಲಿದ್ದಾಗ ತಾ. ೧೪ ಜೂನ ೧೯೨೧ ಇಸ್ವಿಯಲ್ಲಿ ಸಹ ನಿಜಗುಣಿ ಎಂಬ ಮತ್ತೊಬ್ಬ ಮಗನು ಹುಟ್ಟಿದನು. ಅವನು ೮ ವರ್ಷದವನಾದಾಗ ವಿಜಾಪುರದಲ್ಲಿ ಮರಣ ಹೊಂದಿದನು. ಇದರ ಬಗ್ಗೆ ಮುಂದೆ ಹೇಳುವೆನು.

ಇಲ್ಲಿದ್ದಾಗ ನಾತಾಳ ಸೂಟಿಯನ್ನು ಮುರಡೇಶ್ವರ ಎಂಬ ಗ್ರಾಮದಲ್ಲಿ ಕಳೆದು ಅಲ್ಲಿಂದ ತಿರುಗಿ ಬರುವಾಗ್ಗೆ ಗೌಡ ಸಾರಸ್ವತರ ಗುರುಗಳು ಇರುತ್ತಿದ್ದ ಶಿರಾಳಿ ಎಂಬ ಸ್ಥಳಕ್ಕೆ ಸಹ ಹೋಗಿ ಬಂದೆನು. ಹೊನ್ನಾವರದಿಂದ ೧೯೨೨ ನೇ ನಾತಾಳ ಸೂಟಿಯಲ್ಲಿ ಚಿಕ್ಕೋಡಿಗೆ ವರ್ಗವಾಗಿ ಅಲ್ಲಿ ೧೯೨೩ ನೇ ಇಸ್ವಿಯ ೩ನೇ ತಾರೀಖಿಗೆ ಬಂದು ಹಾಜರ ಆದೆನು.

## ಚಿಕ್ಕೋಡಿಯಲ್ಲಿ

ನಾನು ಚಿಕ್ಕೋಡಿ ರೋಡ ಸ್ಟೇಶನಕ್ಕೆ ಮುಟ್ಟಿದ ಕೂಡಲೆ ಆಲೂರ ವೀರಪ್ಪ ಹಂಪಣ್ಣವರ ಎಂಬ ಮನೆತನದವರು ನನಗೆ ಸ್ವಾಗತ ಮಾಡಿದರು. ವೀರಪ್ಪನವರ ಮಗಳಾದ ಚೆನ್ನವ್ವನನ್ನು ನನ್ನ ಹಿರಿಯ ಮಗನಾದ ಸಿದ್ದಪ್ಪನಿಗೆ ಕೊಟ್ಟು ನಿಶ್ಚಯ ಕಾರಣ ಆಗಿದ್ದಿತು. ಚಿಕ್ಕೋಡಿ ತಾಲೂಕ ತಂಟೆಗಾರರ ಸಲುವಾಗಿ ಹೆಸರಾಗಿತ್ತು. ಅಲ್ಲಿ ದಿವಾಣಿ ಮತ್ತು ಫೌಜದಾರಿ ವ್ಯಾಜ್ಯಗಳು ಬಹಳ. ಅದೇ ಕಾಲಕ್ಕೆ ಗಿಲಗಂಚಿ ಗುರುಸಿದ್ದಪ್ಪನವರ ಮಗನಾದ ಬಸವಂತಪ್ಪನವರು ಅಲ್ಲಿ ಮಾಮಲೇದಾರ ಮತ್ತು ೧ನೇ ವರ್ಗ ಮ್ಯಾಜಿಸ್ಟ್ರೇಟರಾಗಿ ಬಂದರು. ನಾವಿಬ್ಬರೂ ನ್ಯಾಯ ನಿಷ್ಠುರರೆಂದು ಹೆಸರಾಗಿದ್ದು, ಅಲ್ಲಿಯ ಜನರಿಗೆ ಮೊದಲೇ ತಿಳಿದಿತ್ತು. ಮೇಲಾಗಿ ತಂಟೆ ಹಚ್ಚುವವನೆಂದು ಹೆಸರಾಗಿದ್ದವನೊಬ್ಬನು ಒಂದು ಫೌಜದಾರಿ ಖಟ್ಲೆಯಲ್ಲಿ ಅದೇ ಸುಮಾರಕ್ಕೆ ದೀರ್ಘಕಾಲದ ವರೆಗೆ ಸಿಕ್ಕು, ಶಿಕ್ಷೆ ಹೊಂದಿದ್ದನು. ಇದರಿಂದ ನಮ್ಮಿಬ್ಬರಿಗೂ ತೊಂದರೆಯು ಬಹಳ ಕಡಿಮೆ ಆಯಿತೆನ್ನಬಹುದು. ನಾನು ಹಂಪಣ್ಣವರ ಬೇರೆ ಒಂದು ಮನೆಯಲ್ಲಿಯೇ ಬಾಡಿಗೆಯಿಂದ ಇರಹತ್ತಿದೆನು.

ಇಲ್ಲಿ ನನ್ನ ಮಕ್ಕಳಲ್ಲಿ ಹಿರಿಯರಾದವರು ಯಾವ ಯಾವ ಸ್ಥಿತಿಯಲ್ಲಿದ್ದರೆಂಬುದನ್ನು ಹೇಳಬೇಕಾಗುತ್ತದೆ. ನಾನು ಹುಬ್ಬಳ್ಳಿಯನ್ನು ಬಿಡುವಾಗ ಸಿದ್ದಪ್ಪನು ಇಂಗ್ಲೀಷ ೬ನೇ ವರ್ಗದಲ್ಲಿದ್ದನು. ಅವನನ್ನು ಹುಬ್ಬಳ್ಳಿಯ ಸಾಲಿಯಲ್ಲಿಯೇ ಮುಂದೆ ಅಭ್ಯಾಸ ನಡೆಸಲಿಕ್ಕೆ ಬಿಟ್ಟು, ನಾನು ಯಾವಲಕ್ಕೆ ಹೋದೆನು. ಅವನು ಚುರುಕು ಬುದ್ಧಿಯವನಿದ್ದರೂ ಏನೋ ಕಾರಣದಿಂದ ಅವನು ಮ್ಯಾಟ್ರಿಕಲೇಶನ್ ಪರೀಕ್ಷೆಯಲ್ಲಿ ೩ನೇ ಸಾರೆ ಕುಳಿತಾಗ ೧೯೨೦ ನೇ ಇಸ್ವಿಯಲ್ಲಿ ತೇರ್ಗಡೆ ಹೊಂದಿದನು. ಮುಂದೆ ಅವನು ಧಾರವಾಡದ ಕರ್ನಾಟಕ ಕಾಲೇಜಕ್ಕೆ ಹೋಗಿ, ೧ ವರ್ಷದ ಮೇಲೆ ಪುಣೆಯ ಮೆಡಿಕಲ್ ಸ್ಕೂಲಿಗೆ ಹೋಗಿ ಅಭ್ಯಾಸ ನಡೆಸಿದನು. ಅಲ್ಲಿಯ ಮೊದಲನೆ ಪರೀಕ್ಷೆಯಲ್ಲಿ ಎರಡನೇ ಸಾರೆ ಕುಳಿತಾಗ ೧೯೨೪ನೇ ಇಸ್ವಿಯಲ್ಲಿ ಪಾಸಾದನು. ಅವನು ಅಲ್ಲಿ ಇರುವಾಗಲೇ ಅವನಿಗೆ ವಿಷಮ ಜ್ವರ ಬಂದವು. ಆಗ ಅಂದರೆ ೧೯೨೩ನೇ ಇಸ್ವಿಯ ಮೇ ತಿಂಗಳಲ್ಲಿ ಕೋರ್ಟಿಗೆ ಬಿಡುವು ಇದ್ದರೂ ನನ್ನ ಪ್ರಕೃತಿಯು ನೆಟ್ಟಗಿಲ್ಲದ್ದರಿಂದ ಕೃಷ್ಣಾ ನದಿ ದಂಡೆಯ ಮೇಲೆ ಅಂಕಲಿ ಗ್ರಾಮದ ಒಂದು ತೋಟದಲ್ಲಿ ನನ್ನ ಉಪಚಾರ ನಡೆಸಿದ್ದರಿಂದ, ನಾನು ಸಿದ್ದಪ್ಪನನ್ನು ನೋಡಲಿಕ್ಕೆ ಪುಣೆಗೆ ಹೋಗುವಂತಿದ್ದಿಲ್ಲ. ನನ್ನ ಹೆಂಡತಿಯೊಬ್ಬಳನ್ನೇ ಅಲ್ಲಿ ಕಳಿಸಿದೆನು. ಅಲ್ಲಿಯ ಫುಟಾಣೆ ಮನೆತನದವರು ಮೊದಲಿನಿಂದಲೂ ಪರಿಚಯದವರಿದ್ದರು. ನನ್ನ ಹೆಂಡತಿಯು ಅವರಲ್ಲಿದ್ದು ಸಿದ್ದಪ್ಪನನ್ನು ನೋಡಲಿಕ್ಕೆ ದವಾಖಾನೆಗೆ ಹೋಗುತ್ತಿದ್ದಳು. ಅವನಿಗೆ ಗುಣವಾಗಹತ್ತಿದ ಮೇಲೆ ಚಿಕ್ಕೋಡಿಗೆ ತಿರುಗಿ ಬಂದಳು.

ದಾನಪ್ಪ ಮತ್ತು ಗಂಗಾಧರನು ಹುಬ್ಬಳ್ಳಿಯಲ್ಲಿ ಕನ್ನಡ ಸಾಲೆಗೆ ಹೋಗುತ್ತಿದ್ದರು. ಅವರು ತೀರ ಚಿಕ್ಕವರಿರುವದರಿಂದ, ಯಾವಲಕ್ಕೆ ಅವರನ್ನು ಸಂಗಡ ಕರಕೊಂಡು ಹೋಗಬೇಕಾಯಿತು. ಅಲ್ಲಿ ಕನ್ನಡ ಸಾಲೆ ಇಲ್ಲದ್ದರಿಂದ ಅವರಿಬ್ಬರಿಗೂ ಮರಾಠಿ ಕಲಿಸಿ ಮರಾಠಿ ಸಾಲೆಗೆ ಹಾಕಿತು. ಅಲ್ಲಿಂದ ಹೊನ್ನಾವರಕ್ಕೆ ವರ್ಗ ಆದ ಮೇಲೆ ಅವರನ್ನು ಪುನಃ ಕನ್ನಡ ಸಾಲೆಗೆ ಕಳಿಸಿತು. ಅವರಿಬ್ಬರೂ ಒಂದೇ ವರ್ಗದಲ್ಲಿದ್ದು ಇಂಗ್ಲೀಷ ೫ನೇ ಇಯತ್ತೆ ವರೆಗೆ ಅಭ್ಯಾಸ ಮಾಡಿದರು. ಅಲ್ಲಿಂದ ನನಗೆ ಚಿಕ್ಕೋಡಿಗೆ ವರ್ಗ ಆದಮೇಲೆ ಅವರನ್ನು ಬೆಳಗಾವಿಯ ಸರದಾರ ಹಾಯಸ್ಕೂಲಿಗೆ ಕಳಿಸಿತು. ಅಲ್ಲಿ ದಾನಪ್ಪನು ೫ನೇ ಇಯತ್ತೆಯಲ್ಲಿ ೨ನೇ ಸಾರೆ ಸಹ ತೇರ್ಗಡೆ

ಹೊಂದಲಿಲ್ಲ. ಆದುದರಿಂದ ಅವನನ್ನು ದೇವಿಹೊಸೂರ ಒಕ್ಕಲುತನದ ಸಾಲೆಗೆ ಕಳಿಸಬೇಕೆಂದು ನಿರ್ಣಯಿಸಿ ೧೯೨೩ನೇ ಇಸ್ವಿಯ ಜೂನ ತಿಂಗಳಿಗೆ ಅವನನ್ನು ಅಲ್ಲಿಗೆ ಕಳಿಸಿತು. ಅವನು ಅಲ್ಲಿ ಒಂದು ಟರ್ಮ ಅಭ್ಯಾಸ ಮುಗಿಸುವದರೊಳಗಾಗಿ ಅವನಿಗೆ ವಿಷಮಜ್ವರ ಬಂದವು. ಇಷ್ಟರಲ್ಲಿ ಚಿಕ್ಕೋಡಿಯಲ್ಲಿ ಪ್ಲೇಗವು ಆರಂಭವಾಗಿ ನಾವು ಊರ ಹೊರಗೆ ಒಂದು ಹಳ್ಳದ ದಂಡೆಯ ಮೇಲೆ ಒಂದು ಗುಡಿಸಲ ಹಾಕಿಕೊಂಡು ಇರುತ್ತಿದ್ದೆವು. ಅದರ ಜೊತೆಗೆ ಒಂದು ರಾಹುಟಿಯನ್ನು ಹೊಡೆದಿದ್ದೆವು. ದಾನಪ್ಪನನ್ನು ರಾಹುಟಿಯಲ್ಲಿ ಮಲಗುವ ವ್ಯವಸ್ಥೆ ಮಾಡಿತು. ಅದೇ ಕಾಲಕ್ಕೆ ಗಂಗಾಧರನಿಗೆ ಮತ್ತು ಮಧುಕೇಶ್ವರನಿಗೆ ಸಹ ಛಳಿ ಜ್ವರ ಬರಹತ್ತಿದ್ದವು. ದಾನಪ್ಪನ ಜಡ್ಡು ಬಹಳ ಜೋರಿನದಿದ್ದು ಅವನಿಗೆ ಸುಮಾರು ೧ ತಿಂಗಳು ಸ್ಮೃತಿ ಇದ್ದಿದ್ದಿಲ್ಲ. ಇವರೆಲ್ಲರ ಉಪಚಾರ ಮಾಡುತ್ತ ನಾನು ಸಹ ರಾಹುಟಿಯಲ್ಲಿಯೇ ಮಲಗುತ್ತಿದ್ದೆನು. ಇದರ ಸಲುವಾಗಿ ನನಗೆ ೨೪ ನೇ ಜನೆವರಿಯಿಂದ ತಿಂಗಳು ರಜೆಯ ಮೇಲೆ ಇರಬೇಕಾಯಿತು. ದೇವರ ದಯೆಯಿಂದ ಎಲ್ಲರಿಗೂ ನೆಟ್ಟಗಾಯಿತು. ಇದೇ ಕಾಲಕ್ಕೆ ಜನೆವರಿ ೮ನೇ ತಾರೀಖಿಗೆ ನನ್ನ ಮಾಗಳಾದ ಶಾರದಾ ಅಲ್ಲಿ ಹುಟ್ಟಿದಳು.

ನನ್ನ ಮಗನಾದ ಸಿದ್ದಪ್ಪನಿಗೆ ಹಂಪಣ್ಣವರ ವೀರಪ್ಪನವರ ಮಗಳಾದ ಚೆನ್ನವ್ವನ ನಿಶ್ಚಯ ಮಾಡಿದ್ದು, ಈ ಮೊದಲೇ ಹೇಳಿರುತ್ತದೆ. ನನ್ನ ಎರಡನೇ ಮಗನಾದ ದಾನಪ್ಪನಿಗೆ ಚಿಕ್ಕೋಡಿ ತಾಲೂಕು ಅಕ್ಕೋಳ ಗ್ರಾಮದ ಸದಲಗಿ ಶಿವಲಿಂಗಪ್ಪನವರ ಮಗಳಾದ ನರ್ಮದಾ ಎಂಬಾಕೆಯನ್ನು ಗೊತ್ತುಮಾಡಿ, ಇವರಿಬ್ಬರ ಲಗ್ನವನ್ನು ಒಂದೇ ಕಾಲಕ್ಕೆ ಮೇ ತಿಂಗಳಲ್ಲಿ ನೆರವೇರಿಸಲಾಯಿತು. ಲಗ್ನವೆಂದರೆ ಮನುಷ್ಯನ ಜೀವಿತದಲ್ಲಿ ಒಂದು ದೊಡ್ಡ ಸಮಾರಂಭ. ಈ ಸಮಾರಂಭದಲ್ಲಿ ಸಾಧಾರಣವಾಗಿ ಮಧ್ಯಮ ಪ್ರತಿಯ ಜನರು ಸಹ ಬ್ಯಾಂಡ ಹಚ್ಚುವದು, ನಾಚ ಮಾಡಿಸುವುದು, ಮದ್ದು ಹಾರಿಸುವುದು, ವಾಡಿಕೆ ಇರುವುದು. ನಾನು ಇವುಗಳಲ್ಲಿ ಯಾವುದಕ್ಕೂ ಆಸ್ಪದ ಕೊಡದೆ ನನ್ನ ಮನಸ್ಸಿಗೆ ಸರಿಯಾದ ರೀತಿಯಿಂದ ಜರುಗಿಸಿದೆನು.

ಮುಂದೆ ೧೯೨೮ನೇ ಇಸ್ವಿಯ ಮೇ ತಿಂಗಳಲ್ಲಿ ನನ್ನ ಹಿರೇ ಮಗಳಾದ ಶಿವಗಂಗಾ ಈಕೆಯನ್ನು ನನ್ನ ಹೆಂಡತಿಯ ತಮ್ಮನಾದ ರಾಚಪ್ಪನಿಗೆ ಕೊಟ್ಟು, ಮೇಲೆ ಹೇಳಿದ ರೀತಿಯಲ್ಲಿಯೇ ಲಗ್ನವನ್ನು ಮಾಡಿದೆನು. ಈ ಕಾಲದಲ್ಲಿ ಆಪ್ತಮಿತ್ರರಿಗೆ ಫಲಾಹಾರ ಮಾಡಿಸುವಲ್ಲಿ ಚಹಾದ ಉಪಯೋಗವನ್ನು ಸಹ ಮಾಡಲಿಲ್ಲ.

ಇದೇ ಸಂಧಿಗೆ ನನ್ನ ಅಣ್ಣನಾದ ಸಿದ್ದಪ್ಪನ ಮಗನಾದ ಮಹಾಲಿಂಗಪ್ಪನ ಲಗ್ನವನ್ನು ನಿಶ್ಚಯಿಸಿತ್ತು. ಅವನಿಗೆ ಅಂಕಲಿಯ ಕರಾಡಕರ ಮಲಕಪ್ಪನ ಮಗಳನ್ನು ಗೊತ್ತುಮಾಡಿತ್ತು. ಇದಕ್ಕಿಂತ ತುಸು ದಿವಸ ಮುಂಚೆ ನನ್ನ ಅಣ್ಣನಾದ ಸಿದ್ದಪ್ಪನು ಒಮ್ಮಿಂದೊಮ್ಮೆ ತೀರಿಕೊಂಡನು. ಅವನ ಮಗನ ಲಗ್ನದ ವ್ಯವಸ್ಥೆಯನ್ನು ನಾನೇ ಮಾಡಬೇಕಾಯಿತು.

ನನ್ನ ಗಂಡು ಮಕ್ಕಳ ಲಗ್ನವನ್ನು ಮೇಲೆ ಹೇಳಿದಂತೆ ಮಾಡಿದ ಮೇಲೆ ಶ್ರೀ ಗುಡ್ಡಾಪುರ ಕ್ಷೇತ್ರಕ್ಕೆ ಹೋಗಿ ಶ್ರೀ ದಾನಮ್ಮನ ಆಶೀರ್ವಾದ ಪಡೆದುಕೊಂಡು ಬಂದೆವು. ಮರುವರ್ಷ ಮತ್ತೊಮ್ಮೆ ಅಲ್ಲಿ ಹೋದೆವು. ಮೊದಲನೇ ಸಾರೆ ೫, ಎರಡನೆ ಸಾರೆ ೩ ಚಕ್ಕಡಿಗಳನ್ನು ತೆಗೆದುಕೊಂಡು ಕಾರ್ತಿಕ ಮಾಸದಲ್ಲಿ ಹೋಗಿದ್ದೆವು. ಮೊದಲನೇ ಯಾತ್ರೆಯ ವರ್ಣನೆಯು ನನ್ನ ಟಿಪ್ಪಣೆ ಪುಸ್ತಕದಲ್ಲಿದೆ.

ನಾನು ಚಿಕ್ಕೋಡಿಯಲ್ಲಿ ಕೆಲಸ ಮಾಡುತ್ತಿದ್ದಾಗ ಕೋರ್ಟಿನಲ್ಲಿ ಚಿಕಲಿ ಗುರುಲಿಂಗಪ್ಪನೆಂಬವನು ಒಳ್ಳೆಯ ನಂಬಿಗೆಯ ಕಾರಕೂನನಿದ್ದನು. ಸಬ್‌ಜಜ್ಜರ ಮುಂದೆ ವ್ಯಾಜ್ಯಗಳು ನಡೆದಾಗ ಸಾಕ್ಷಿದಾರರ ಜವಾಬು ಬರಕೊಳ್ಳುವುದು ಮುಂತಾದ ಕೆಲಸ ಮಾಡುವ ದಫ್ತರವು ಅವನ ಕಡೆಗಿತ್ತು. ಅವನು ಕೋರ್ಟಿನಲ್ಲಿ ವಕೀಲ ಮುಂತಾದವರಿಗೆಲ್ಲ ತನ್ನ ಕಾರ್ಯದಕ್ಷತೆಯಿಂದ ಪ್ರಿಯನಾಗಿರುವ ಹಾಗೆ, ನನ್ನ ಮನೆತನದ ಎಲ್ಲ ವ್ಯವಹಾರಗಳಲ್ಲಿ ಸಹ ಮನಃಪೂರ್ವಕವಾದ ಸಹಾಯ ಮಾಡುತ್ತಿದ್ದರು. ಲಗ್ನಗಳಲ್ಲಿ ಮತ್ತು ಕ್ಷೇತ್ರಯಾತ್ರೆಗಳಲ್ಲಿ ಆತನ ನೆರವು

ನನಗೆ ಬಹಳವಾಯಿತು. ಇದೇ ಕಾಲಕ್ಕೆ ಶ್ರೀ ಹಳಕಟ್ಟಿಯವರು ತಮ್ಮ ಶಿವಾನುಭವ ಮಾಸಪತ್ರಿಕೆಯನ್ನು ಆರಂಭಿಸಿದರು. ಈ ಕಾರ್ಯಕ್ಕೆ ಗುರುಲಿಂಗಪ್ಪನು ವಿಶೇಷ ಸಹಾಯ ಮಾಡಿದನು. ಆ ಸಹಾಯವಿಲ್ಲದೆ ಪತ್ರಿಕೆಯು ಆಗ್ಗೆ ಹೊರಡುವದು ಸಂಭವವಿದ್ದಿಲ್ಲವೆಂದರೂ ಸಲ್ಲುವದು. ಈ ಬಗ್ಗೆ ಅವನನ್ನು ಎಷ್ಟು ಕೊಂಡಾಡಿದರೂ ಕಡಿಮೆಯೇ.

ನಮ್ಮ ದೇಶದಲ್ಲಿ ಹಿಂದೂ ಜನರೊಳಗೆ ವರ್ಣಾಶ್ರಮ ಧರ್ಮದವರು ಬಹು ಸಂಖ್ಯೆಯುಳ್ಳವರಿರುತ್ತಾರೆ. ಈ ಧರ್ಮವನ್ನು ಕಿತ್ತೊಗೆಯುವ ಪ್ರಯತ್ನಗಳು ಫಲಕಾರಿಯಾಗಿರುವುದಿಲ್ಲ. ದಕ್ಷಿಣ ಹಿಂದೂಸ್ಥಾನದಲ್ಲಿ ಬಸವೇಶ್ವರ ಮೊದಲಾದವರು ಮಾಡಿದ ಪ್ರಯತ್ನವು ತುಸು ಮಟ್ಟಿಗೆ ಯಶ ಹೊಂದಿರುತ್ತದೆ. ಆದರೂ ಅದರಲ್ಲಿ ಬ್ರಾಹ್ಮಣ್ಯದ ಪ್ರಭಾವವು ಇನ್ನೂ ತೋರುತ್ತಿದೆ. ಬ್ರಿಟಿಶ್ ರಾಜ್ಯಾಡಳಿತೆಯ ಆರಂಭದಲ್ಲಿ ಈ ಪ್ರಭಾವವು ಹೆಚ್ಚಾಗಿತ್ತು. ನ್ಯಾಯಸ್ಥಾನಗಳಲ್ಲಿ ಲಿಂಗಾಯತರ ವ್ಯಾಜ್ಯಗಳಲ್ಲಿ ಉತ್ತರಾಧಿಕಾರ ಮೊದಲಾದ ಪ್ರಶ್ನೆಗಳು ಹೊರಟರೆ ನ್ಯಾಯಾಧೀಶರು ಬ್ರಾಹ್ಮಣಶಾಸ್ತ್ರಗಳ ಆಧಾರವನ್ನೇ ಅವಲಂಬಿಸುತ್ತಿದ್ದರು. ಇದರ ಪರಿಣಾಮವಾಗಿ ಮುಂಬೈ ಹೈಕೋರ್ಟಿನವರು ಮೊದಲಿನಿಂದಲೂ ಲಿಂಗಾಯತರು ಶೂದ್ರರೆಂದು ನಿರ್ಣಯಿಸುತ್ತ ಬಂದರು. ಲಿಂಗಾಯತರು ವರ್ಣಾಶ್ರಮಗಳನ್ನು ಮೀರಿದವರಿರುವದರಿಂದ ಹೈಕೋರ್ಟಿನ ನಿರ್ಣಯವು ಬಹಳೇ ಅನ್ಯಾಯವಾದದ್ದೆಂದು ಬೇರೆ ಹೇಳಬೇಕಾಗಿಲ್ಲ. ಇದೇ ಪ್ರಶ್ನೆಯು ನಾನು ಚಿಕ್ಕೋಡಿಯಲ್ಲಿರುವಾಗ ಒಂದು ವ್ಯಾಜ್ಯದಲ್ಲಿ ಹೊರಟಿತು. ಅದರಲ್ಲಿ ಮಗಳ/ಮಗನ ದತ್ತಕವು ಕಾಯಿದೆಯ ಪ್ರಕಾರ ಸರಿಯಾದದ್ದೋ ಅಥವಾ ಅಲ್ಲವೋ ಎಂಬುದು ನಿರ್ಣಯವಾಗತಕ್ಕದ್ದಿತ್ತು. ಲಿಂಗಾಯತರು ಶೂದ್ರರಾದರೆ ಹೈಕೋರ್ಟ ನಿರ್ಣಯದ ಪ್ರಕಾರ ಅದು ಸರಿಯಾದದ್ದು. ಆದರೆ ಈ ನಿರ್ಣಯವನ್ನು ಅವಲಂಬಿಸುವುದು ನನ್ನ ಇಚ್ಛೆಯಿರದ್ದರಿಂದ ಹಾಗೆ ಮಾಡದೆ, ಇವರು ಅತಿವರ್ಣಾಶ್ರಮಿಗಳೆಂದು ತೋರಿಸಿಕೊಡುವ ಉದ್ದೇಶದಿಂದ ಆ ವ್ಯಾಜ್ಯದಲ್ಲಿ ನಡೆಸುವ ಎರಡೂ ಪಕ್ಷಗಳ ಅನುಮತಿಯಿಂದ ,ಲಿಂಗಾಯತ ಧರ್ಮಶಾಸ್ತ್ರವನ್ನು ಕೂಲಂಕುಷವಾಗಿ ವಿವೇಚಿಸಿ, ಇವರು ಹಿಂದೂ ಜನಾಂಗದಲ್ಲಿ ಒಂದು ವಿಶಿಷ್ಟ ವರ್ಗದವರಿರುತ್ತಾರೆಂದು ಸಿದ್ಧಪಡಿಸಿ ಸುದೀರ್ಘವಾದ ತೀರ್ಪು ಬರೆದು ನಿರ್ಣಯ ಕೊಟ್ಟೆನು. ಈ ನಿರ್ಣಯವು (ಈರಪ್ಪ ಸಾತಪ್ಪ ವಿರುದ್ಧ ಚೆನ್ನಯ್ಯ ಸಿದ್ಧಲಿಂಗಯ್ಯ, ನಂಬರ ೧೯೩೩ ನೇ ಇಸ್ವಿಯ ೩೭೪ ) ನನ್ನ ಮಿತ್ರರಾದ ಶ್ರೀ ವಿರುಪಾಕ್ಷಪ್ಪ ಮುಧೋಳಕರ, ವಕೀಲ, ವಿಜಾಪೂರ ಇವರಿಂದ ಒಂದು ಚಿಕ್ಕ ಪುಸ್ತಕ ರೂಪಿನಲ್ಲಿ ಪ್ರಸಿದ್ಧಿಸಿಲ್ಪಟ್ಟಿರುತ್ತದೆ. ಇದರ ಕನ್ನಡ ಭಾಷಾಂತರ ೧೦೦೦ ಪ್ರತಿಗಳನ್ನು ಲಿಂ. ಗಂಗಾಧರಪ್ಪ ಸಾಬೋಜಿಯವರು ತಮ್ಮ ವೆಚ್ಚದಿಂದ ಅಚ್ಚು ಹಾಕಿಸಿ ಜನರಲ್ಲಿ ಹಂಚಿರುವರು. ಆದರೂ ಇದರಿಂದ ಹೈಕೋರ್ಟಿನವರ ನಿರ್ಣಯವು ಅಳಿಸಿ ಹೋಗಲಾರದು. ಹೀಗಾಗುವದು ಲೋಕಸಭೆಯವರು ತುಸು ದಿವಸಗಳಲ್ಲಿ ಅಂಗೀಕರಿಸುವ ಹಿಂದೂ ಕೋಡ ಎಂಬ ಕಾಯಿದೆಯಿಂದಲೇ.

ಇನ್ನೊಂದು ಸಂಗತಿಯನ್ನು ವಿವರಿಸಿ ನನ್ನ ಚಿಕ್ಕೋಡಿಯ ಕಥೆಯನ್ನು ಮುಗಿಸುತ್ತೇನೆ-
ಗೋಕಾಂವಿ ತಾಲೂಕಿನ ಕೊಣ್ಣೂರು ಎಂಬ ಗ್ರಾಮದಲ್ಲಿ ಕಾಡಸಿದ್ಧೇಶ್ವರ ಎಂಬ ಮಠವಿದ್ದು ಆ ಮಠದ ಸ್ವಾಮಿಗಳ ವಂಶದಲ್ಲಿ ಕೆಂಪಯ್ಯಸ್ವಾಮಿಗಳೆಂಬ ದೊಡ್ಡ ಸತ್ಪುರುಷರು ಆಗಿ ಹೋದರು. ಅವರ ಸಮಾಧಿಯು ಆ ಗ್ರಾಮದಿಂದ ತುಸು ಅಂತರದಲ್ಲಿ ನದಿಯ ದಂಡೆಯ ಮೇಲಿರುವ ಮರಡೀಮಠದಲ್ಲಿ ಇದೆ. ಈ ಮಠಕ್ಕೆ ಪ್ರತಿ ಅಮಾವಾಸ್ಯೆಯ ದಿನ ಸುತ್ತು ಮುತ್ತಲಿನ ಗ್ರಾಮಗಳ ಜನರು ತಂಡ ತಂಡವಾಗಿ ಬಂದು, ಈ ಸಮಾಧಿಯ ದರ್ಶನ ತೆಗೆದುಕೊಳ್ಳುತ್ತಿರುತ್ತಾರೆ. ಹುಬ್ಬಳ್ಳಿಯ ಮೂರುಸಾವಿರ ಮಠದ ಈಗಿನ ಅಧಿಕಾರಿಗಳಾದ ಶ್ರೀ ಮನ್ನಿರಂಜನ, ಜಗದ್ಗುರು ಶ್ರೀ ಗುರುಸಿದ್ಧಸ್ವಾಮಿಗಳು ಇದೇ ವಂಶದವರು. ನಾನು ಚಿಕ್ಕೋಡಿಯಲ್ಲಿ ಇರುವಾಗ ಇವರು ಕೊಣ್ಣೂರು ಕಾಡಸಿದ್ಧೇಶ್ವರ ಮಠದ ಅಧಿಕಾರಿಗಳಾಗಿದ್ದರು. ಇವರ ಮೇಲೆ ಸುತ್ತು ಮುತ್ತಲಿನ

ಗ್ರಾಮಗಳ ಜನರು ಬಹಳ ಭಕ್ತಿ ವಿಶ್ವಾಸವುಳ್ಳವರಾಗಿದ್ದರು. ಆಗ ಹುಬ್ಬಳ್ಳಿಯ ಮೂರುಸಾವಿರ ಮಠದ ಪೀಠವು ಬರಿದಾಗಿದ್ದು ಅದರ ವ್ಯವಸ್ಥಾಪಕ ಮಂಡಲಿಯವರು ಇವರನ್ನು ಆ ಪೀಠಕ್ಕೆ ಯೋಗ್ಯರೆಂದು ಆರಿಸಿದರು. ಆದರೆ ಕೊಣ್ಣೂರು ಪ್ರಾಂತದ ಜನರು ಇವರನ್ನು ಬಿಟ್ಟುಕೊಡಲಿಕ್ಕೆ ಸಿದ್ಧರಿದ್ದಿಲ್ಲ. ಅವರ ಮನವೊಲಿಸಲಿಕ್ಕೆ ಬಹಳ ಪ್ರಯತ್ನ ಪಡಬೇಕಾಯಿತು. ಚಿಕ್ಕೋಡಿಯಲ್ಲಲ್ಲದೆ ಕೆಲವು ಶಿಷ್ಟ ಜನರೊಂದಿಗೆ ನಾನು ಸಂಕೇಶ್ವರ, ನಿಪ್ಪಾಣಿ, ಗಡಹಿಂಗ್ಲಜ ಗ್ರಾಮಗಳಿಗೆ ಹೋಗಿ, ಇವರು ಹುಬ್ಬಳ್ಳಿಯ ಮಠಕ್ಕೆ ಅಧಿಕಾರಿಗಳಾಗುವುದರಿಂದ ಸಮಾಜಕ್ಕೆ ವಿಶೇಷ ಹಿತವಾಗುವದೆಂದು ತಿಳಿಸಿ ಹೇಳಿದ ಮೇಲೆ, ಆ ಭಾಗದ ಜನರು ಅನಿವಾರ್ಯವಾಗಿ ಇವರನ್ನು ಬಿಟ್ಟು ಕೊಡಲಿಕ್ಕೆ ತಮ್ಮ ಸಮ್ಮತಿ ಕೊಟ್ಟರು. ಇವರು ಈಗ ಈ ಪ್ರಾಂತಕ್ಕೆ ಹಿತವಾಗುವಂತೆ ಮಾಡಿದ ಕಾರ್ಯಗಳು ಜನರ ಕಣ್ಣುಮುಂದೆ ಇವೆ.

## ಮುದ್ದೇಬಿಹಾಳದಲ್ಲಿ

ನನಗೆ ಚಿಕ್ಕೋಡಿಯಿಂದ ವಿಜಾಪುರ ಜಿಲ್ಹೆಯ ಮುದ್ದೇಬಿಹಾಳಕ್ಕೆ ವರ್ಗಾಯಿಸಿದ್ದು, ಅಲ್ಲಿ ೧೪ ಜೂನ ೧೯೨೬ ನೇ ದಿವಸ ಹೋಗಿ ಕೆಲಸದ ಮೇಲೆ ಹಾಜರ ಆದೆನು. ಅಲ್ಲಿ ಮುಂದೆ ಜುಲೈ ೨೭ ನೇ ತಾರೀಖಿನ ವರೆಗೆ ಮಾತ್ರ ಕೆಲಸ ಮಾಡಿ ಅಲ್ಲಿಂದ ವಿಜಾಪುರಕ್ಕೆ ೧ನೇ ವರ್ಗ ಸಬ್‌ಜಜ್ಜ ಆಗಿ ಕಳಿಸಲ್ಪಟ್ಟಿದ್ದರಿಂದ, ಅಲ್ಲಿ ಅದೇ ತಿಂಗಳ ೨೯ ನೇ ತಾರೀಖಿಗೆ ಹೋಗಿ ಕೆಲಸವನ್ನು ವಹಿಸಿಕೊಂಡೆನು. ಮುದ್ದೇಬಿಹಾಳದಿಂದ ಕೂಡಲಸಂಗಮ ಕ್ಷೇತ್ರವು ಬಹಳ ಸಮೀಪ ಇರುವುದರಿಂದ ಆಗ್ಗೆ ಮಳೆಗಾಲವಿದ್ದು, ಎರಡೂ ನದಿಗಳು ಸಾಧಾರಣ ತುಂಬಿ ಹರಿಯುತ್ತಿದ್ದರೂ ಮುದ್ದೇಬಿಹಾಳವನ್ನು ಬಿಡುವ ಮುಂಚೆ ಸಂಗಮನಾಥನ ದರ್ಶನವನ್ನು ಮನೆಯವರೆಲ್ಲರೂ ಮಾಡಿಕೊಂಡೆವು. ಸಂಗಮದ ಕೆಳಗಿನ ಮಗ್ಗಲಿನಿಂದ ಕೃಷ್ಣಾ ನದಿಯನ್ನು ಆಮೇಲೆ ಮಲಪ್ರಭಾನದಿಯನ್ನು ನಾವಿನಿಂದ ದಾಟಿ ದೇವರ ದರ್ಶನ ತೆಗೆದುಕೊಂಡು ತಿರುಗಿ ಬರುವಾಗ, ಮೇಲಿನ ಮಗ್ಗಲು ಬಹುವಿಸ್ತಾರವಾದ ಪಾತ್ರವನ್ನು ಸಹ ನಾವಿನಿಂದ ದಾಟಿ ಮಾಡಿದ ಪ್ರವಾಸವು ಬಹಳ ಆಹ್ಲಾದಕರವೆನಿಸಿತು. ಈ ಶುಭ ಸಂಧಿಯು ದೊರೆತದ್ದಕ್ಕಾಗಿ ಸಂಗಮನಾಥನನ್ನು ಭಕ್ತಿಪೂರ್ವಕವಾಗಿ ಸ್ಮರಿಸುತ್ತೇನೆ.

## ವಿಜಾಪುರದಲ್ಲಿ

ಈ ಪಟ್ಟಣದಲ್ಲಿ ನಾನು ೨೯-೭-೧೯೨೬ ನೇ ಇಸ್ವಿಯಿಂದ ತಾ. ೧೩-೩-೧೯೩೦ ನೇ ಇಸ್ವಿಯ ಸುಮಾರು ೩ ೩/೪ ವರ್ಷ ಕೆಲಸದ ಮೇಲೆ ಇದ್ದೆನು. ಈ ಅವಧಿಯಲ್ಲಿ ನನ್ನ ಪ್ರಪಂಚದಲ್ಲಿ ಅನೇಕ ಸಂಕಟಗಳು ಒದಗಿದವು. ಅವುಗಳಲ್ಲಿ ಮೊದಲನೆದ್ದು ಮತ್ತು ಮುಖ್ಯವಾದದ್ದು, ನನ್ನ ಹೆಂಡತಿಯ ಮರಣ. ಚಿಕ್ಕೋಡಿಯಲ್ಲಿರುವಾಗಲೇ ಆಕೆಗೆ ಮುಖದ ಪೂರ್ತಿ ಅರ್ಧಾಂಗವಾಯು ವಿಕಾರವಾಗಿ ಪೂರ್ಣ ಗುಣವಾಗದೆ, ಒಂದು ಭಾಗವು ತುಸು ಸೊಟ್ಟಾಗಿ ಉಳಿಯಿತು. ಆಮೇಲೆ ಕ್ಷಯ ರೋಗವು ಆರಂಭವಾಗಿ ಮುದ್ದೇಬಿಹಾಳಕ್ಕೆ ಬರುವಷ್ಟರಲ್ಲಿ ಆ ರೋಗವು ಹೆಚ್ಚಾಗುತ್ತ ನಡೆದಿತ್ತು. ಆಗ ಆಕೆ ಗರ್ಭಿಣಿಯಾಗಿದ್ದಳು. ವಿಜಾಪುರಕ್ಕೆ ಬಂದಮೇಲೆ ತಾ. ೨೫-೮-೧೯೨೬ ದಿವಸ ಆಕೆ ಗಂಡು ಕೂಸನ್ನು ಹಡೆದಳು. ಅದು ಮರುದಿವಸ ಮುಂಜಾನೆಯೊಳಗಾಗಿ ಮರಣಹೊಂದಿತು. ನನ್ನ ಹೆಂಡತಿಗೆ ಔಷಧೋಪಚಾರ ನಡೆದೇ ಇತ್ತು. ಆಗ ನನ್ನ ಮಗ ಸಿದ್ದಪ್ಪನು ಪುಣೆಯ ಮೆಡಿಕಲ್ ಸ್ಕೂಲಿನಲ್ಲಿ ಅಭ್ಯಾಸಮಾಡುತ್ತಿದ್ದನು. ಹೆಚ್ಚಿನ ಉಪಚಾರಕ್ಕಾಗಿ ನನ್ನ ಹೆಂಡತಿಯನ್ನು ಪುಣೆಗೆ ಕಳಿಸಿದೆ. ಅಲ್ಲಿ ೨-೩ ತಿಂಗಳು ಉಪಚಾರ ಹೊಂದಿದರೂ ಗುಣ ತೋರದೆ ಇರುವುದರಿಂದ ಆಕೆಯನ್ನು ವಿಜಾಪುರಕ್ಕೆ ಕರಕೊಂಡು ಬರಲಾಯಿತು. ಮುಂದೆ ತಾ. ೨೬-೩-೧೯೨೭ ನೇ ದಿವಸ ಆಕೆ ಶಿವಾಧೀನವಾದಳು. ಆ ಕಾಲಕ್ಕೆ

ಸಿದ್ದನ ಹೊರ್ತಾಗಿ ಮನೆಯ ಎಲ್ಲ ಜನರು ವಿಜಾಪುರದಲ್ಲೇ ಇದ್ದರು. ಜೋರಾಪುರ ಪೇಟೆಯ ಲಿಂಗಾಯತ ಜನರ ಸ್ಮಶಾನಭೂಮಿಯಲ್ಲಿ ಪತ್ರಿ ಗಿಡಗಳ ಗುಂಪು ಇದ್ದು, ಅದರ ಮಧ್ಯದಲ್ಲಿ ಈಕೆಯ ದಫನ ಮಾಡಿ ಅದರ ಮೇಲೆ ಸಮಾಧಿಯನ್ನು ಕಟ್ಟಿಸಿರುತ್ತದೆ. ಈಕೆ ತೀರಿದ ಮೇಲೆ ಈಕೆಯ ಅಕ್ಕ ವಿಧವೆಯಾದ ನೀಲವ್ವನನ್ನು, ನಾನು ಉಡಿಕೆಯನ್ನು ಮಾಡಿಕೊಳ್ಳಬೇಕೆಂದು ಬಹಳೇ ಪ್ರಯತ್ನ ಮಾಡಿದರೂ ಅದು ನಿಷ್ಫಲವಾಯಿತು.

ಹೆಬ್ಬಳ್ಳಿ ವೀರಪ್ಪನು ನನ್ನಲ್ಲಿ ಅಡುಗೆಯ ಕೆಲಸ ಮಾಡುತ್ತಿದ್ದು, ಕಡೆತನಕ ಅಲ್ಲೇ ಇದ್ದು ಮುಪ್ಪಿನವನಾಗಿ ೧೯೨೮ನೇ ಇಸ್ವಿಯ ಅಗಸ್ಟ ತಿಂಗಳಲ್ಲಿ ಮರಣ ಹೊಂದಿದನು.

ದಾನಪ್ಪನ ಹೆಂಡತಿಯಾದ ನರ್ಮದಾ ಈಕೆಯು ವಯಸ್ಸಿಗೆ ಬಂದು ಪ್ರಪಂಚ ಮಾಡಲಿಕ್ಕೆ ಹತ್ತಿದಳು. ಆಕೆಗೆ ಏನೋ ಕಾರಣದಿಂದ ಭೂತಬಾಧೆಯುಂಟಾದಾಗ ಆಕೆ ಏನೇನೋ ಬಡಬಡಿಸುತ್ತಿದ್ದಳು. ಮರಾಠಿಯಲ್ಲಿ ಸಹ ಮಾತಾಡುತ್ತಿದ್ದಳು. ಆ ಮೊದಲೇ ತೀರಿಕೊಂಡಿದ್ದ ಆಕೆಯ ಒಬ್ಬ ಗೆಳತಿಯು "ನಿನ್ನನ್ನು ಬಿಡುವುದಿಲ್ಲ. ಸಂಗಡ ಕರಕೊಂಡು ಹೋಗುತ್ತೇನೆಂದು ಅನ್ನುತ್ತಿದ್ದಳಂತೆ". ಈ ಬಾಧೆಯನ್ನು ತಪ್ಪಿಸುವದಕ್ಕೆ ಇಂಚಗೇರಿಯ ಭಾವುಸಾಹೇಬ ಮಹಾರಾಜರ ಮಠಕ್ಕೆ ದಾನಪ್ಪನು ಆಕೆಯನ್ನು ಕರಕೊಂಡು ಹೋಗಿದ್ದನು. ಅದರಿಂದ ಏನೂ ಉಪಯೋಗವಾಗಲಿಲ್ಲ. ಆಮೇಲೆ ಆಕೆಯನ್ನು ಆಕೆಯ ತವರು ಮನೆಗೆ ಅಕ್ಕೋಳಕ್ಕೆ ಕಳಿಸಿತು. ಮುಂದೆ ಆಕೆಗೆ ಅತಿಸಾರವಾಗಿ ತಾ. ೨೭-೮-೧೯೨೮ ಮೇ ದಿವಸ ಕಾಲವಾದಳು. ಆ ಕಾಲಕ್ಕೆ ದಾನಪ್ಪನು ಅಲ್ಲಿ ಹೋಗಿದ್ದನು.

ಅಡುಗೆಯ ಮನುಷ್ಯನು ತೀರಿಕೊಂಡ ಮೇಲೆ ನನ್ನ ತಮ್ಮನಾದ ರೇವಪ್ಪನೂ, ಅವನ ಮಗಳಾದ ಪಾರ್ವತೆವ್ವನೂ ನನ್ನ ಹತ್ತಿರ ಬಂದು ಇರಹತ್ತಿದರು. ಮನೆಯಲ್ಲಿ ನಾನು ಚಿಕ್ಕಮಗನಾದ ನಿಜಗುಣಿಯೂ ಅಷ್ಟೇ ಇದ್ದೆವು. ಉಳಿದವರೆಲ್ಲ ಅಭ್ಯಾಸಕ್ಕೆ ಪುಣೆ, ಮುಂಬಯಿಗಳಿಗೆ ಹೋಗಿದ್ದರು. ನನ್ನ ಮಗಳು ಶಿವಗಂಗಾ ತನ್ನ ತಂಗಿಯನ್ನು ಕರಕೊಂಡು ಧಾರವಾಡಕ್ಕೆ ಗಂಡನ ಮನೆಗೆ ಹೋಗಿದ್ದಳು. ನಿಜಗುಣಿಯು ಚೆಲುವನೂ, ಸುಸ್ವಭಾವದವನೂ ಇದ್ದನು. ಅವನು ಆಗ ಕನ್ನಡ ೪ನೇ ಇಯತ್ತೆಯಲ್ಲಿ ಅಭ್ಯಾಸ ಮಾಡುತ್ತಿದ್ದನು. ಹುಡುಗರು ತೀರ ಚಿಕ್ಕವರಿರುವಾಗ ಅವರಿಗೆ ಮೈಲೀ ಚುಚ್ಚುವ ಪರಿಪಾಠವು ಇರುವುದಷ್ಟೇ ? ಇದಕ್ಕೆ ಸರಕಾರದ ಒತ್ತಾಯ ಮಾತ್ರ ಇಲ್ಲ, ಮೈಲೀ ಚುಚ್ಚುವದು ನಿಸರ್ಗ ಚಿಕಿತ್ಸೆಗೆ ವಿರುದ್ಧವಾದದ್ದೆಂದು ನಾನು ನಿಜಗುಣಿಗೆ ಮೈಲೀ ಚುಚ್ಚಿಸಿದ್ದಿಲ್ಲ. ಆಕಸ್ಮಾತ್ತಾಗಿ ಅವನಿಗೆ ಮೈಲೀ ರೋಗವು ಗಂಟು ಬಿದ್ದು, ಮೈ ತುಂಬೆಲ್ಲ ಎದ್ದು ಅದರಿಂದ ಅವನು ತಾ. ೧೨-೨-೧೯೨೯ ನೇ ದಿವಸ ತೀರಿಕೊಂಡನು. ಅದರಿಂದ ಎಲ್ಲರಿಗೆ ಬಹಳ ಹಳಹಳಿಯಾಯಿತು. ಅವನನ್ನು ಅವನ ತಾಯಿಯ ಸಮಾಧಿಯ ಹತ್ತರವೇ ದಫನ ಮಾಡಿತು.

ನನ್ನ ನಾಲ್ಕನೆಯ ಮಗನಾದ ಮಧುಕೇಶ್ವರನು ಉಳಿದ ಎಲ್ಲ ಹುಡುಗರಿಗಿಂತ ಬುದ್ಧಿವಂತನಿದ್ದನು. ಅವನು ೧೯೨೬ ನೇ ಇಸ್ವಿಯಲ್ಲಿ ಮ್ಯಾಟ್ರಿಕ್ ಮತ್ತು ಸ್ಕೂಲ ಫಾಯಿನಲ್ ಪರೀಕ್ಷೆಗಳಲ್ಲಿ ವಿಜಾಪೂರ ಹಾಯಸ್ಕೂಲದಿಂದ ಪಾಸಾದನು. ಆಗ ಗಂಗಾಧರನು ಪುಣೆ ಡೆಕ್ಕನ್ ಕಾಲೇಜಿನಲ್ಲಿ ಅಭ್ಯಾಸ ಮಾಡುತ್ತಿದ್ದನು. ಮಧುಕೇಶ್ವರನನ್ನು ಸಹ ಅದೇ ಕಾಲೇಜಿಗೆ ಕಳಿಸಿತು. ಅಲ್ಲಿ ಅವನಿಗೆ ಸರಕಾರೀ ವಿದ್ಯಾರ್ಥಿ ವೇತನ ದೊರೆಯಿತು. ಆಗ ವಿಜಾಪುರ ಕೋರ್ಟಿನಲ್ಲಿ ಕೆಲಸ ಕಡಿಮೆಯಾಗಿರುವುದರಿಂದ ನನ್ನನ್ನು ೧೯೨೭ ನೆಯ ಜೂನದಿಂದ ೩ ತಿಂಗಳ ವರೆಗೆ ಬೆಳಗಾವಿಯ ಕೋರ್ಟಿನಲ್ಲಿ ಕೆಲಸ ಮಾಡಲಿಕ್ಕೆ ತಿಳಿಸಿದರು. ಅಲ್ಲಿಯ ತಂಪು ಹವೆಯಿಂದ ನನ್ನ ಪ್ರಕೃತಿಯು ಕೆಟ್ಟದ್ದರಿಂದ ನಾನು ಅಗಸ್ಟ ತಿಂಗಳು ರಜೆಯ ಮೇಲೆ ಇರಬೇಕಾಯಿತು. ಆ ಕಾಲಕ್ಕೆ ಮಧುಕೇಶ್ವರನಿಗೆ ಪುಪ್ಪುಸಾವರಣ ಕ್ಷೋಭೆ (Pleurisy)ಆದುದರಿಂದ, ಅವನು ಸಹ ಬೆಳಗಾವಿಗೆ ಬಂದು ಡಾಕ್ಟರ ಹೇರೆಕರ ಅವರಿಂದ ಉಪಚಾರ ಹೊಂದಿ ಗುಣವಾಗಿ ಮತ್ತೆ ಕಾಲೇಜಕ್ಕೆ ಹೋದನು. ಆದರೆ ಮೊದಲನೆಯ ಪರೀಕ್ಷೆಯಲ್ಲಿ ಪೂರಾ ತೇರ್ಗಡೆ ಹೊಂದದೆ ಕೆಲವು ವಿಷಯಗಳಲ್ಲಿ ಮಾತ್ರ ತೇರ್ಗಡೆ ಹೊಂದಿದನು. ಮುಂದಿನ ವರ್ಷ

ಅವನು ಅದೇ ವರ್ಗದಲ್ಲಿ ಉಳಿಯಬೇಕಾಯಿತು. ಆದರೆ ಆಗ ಅವನಿಗೆ ಕ್ಷಯರೋಗ ಆರಂಭವಾದುದರಿಂದ ಅವನನ್ನು ಕೆಲವು ದಿವಸ ಹರ್ಡೇಕರ ಮಂಜಪ್ಪನವರ ಆಲಮಟ್ಟಿಯ ಆಶ್ರಮದಲ್ಲಿಟ್ಟಿದ್ದೆನು. ಆದರೂ ಮುಂದಿನ ಅಭ್ಯಾಸ ಕುಂಠಿತವಾಯಿತು. ಅವನ ರೋಗವು ತುಸು ತುಸು ಹೆಚ್ಚಾಗುತ್ತಾ ನಡೆಯಿತು. ನಾನು ೯-೧೦-೧೯೨೯ನೆಯ ದಿವಸದಿಂದ ೪ ತಿಂಗಳು ರಜೆ ತೆಗೆದುಕೊಂಡು, ಅವನನ್ನು ಕರೆದುಕೊಂಡು ಆಗಿನ ಗೋಕಾಕರೋಡ ಸ್ಟೇಶನ ಮೇಲೆ ಇರಲಿಕ್ಕೆ ಹೋದೆನು. ಅಲ್ಲಿಯ ಹವೆ, ನೀರು (Tub bath) ನೀರಾ ಇವುಗಳ ಸಹಾಯದಿಂದ ಅವನಿಗೆ ಗುಣವಾಗಬಹುಥೆಂದು ತಿಳಿದಿದ್ದೆನು. ಆದರೆ ಹಾಗಾಗದೆ ರೋಗವು ಬೆಳೆಯುತ್ತ ಹೋಯಿತು. ಡಿಸೆಂಬರ ತಿಂಗಳಲ್ಲಿ ಅವನನ್ನು ಎಡೂರಿಗೆ ವಝ್ಝು ವೈದ್ಯರಿಗೆ ತೋರಿಸಲಿಕ್ಕೆ ಕರೆದುಕೊಂಡು ಹೋಯಿತು. ಅಲ್ಲಿ ಒಮ್ಮಿಂದೊಮ್ಮೆ ಅವನ ರೋಗವು ಹೆಚ್ಚು ಆದದ್ದರಿಂದ ಅವನನ್ನು ಗೋಕಾವಿಗೆ ಕರೆದುಕೊಂಡು ಹೋದೆನು. ಅವನು ಬದುಕುವ ಆಶೆ ತೋರಲಿಲ್ಲ. ನನ್ನ ಆರೋಗ್ಯವು ಕೆಟ್ಟಿದ್ದರಿಂದ ಅವನನ್ನು ಬಿಟ್ಟು ನಾನು ಪುಣೆ ಮತ್ತು ಲೋಣಾವಳ ಕಡೆಗೆ ಹೋದೆನು. ಅವನು ತಾ. ೧೧-೧-೧೯೩೦ ನೆಯ ದಿವಸ ತೀರಿಕೊಂಡನೆಂದು ಸುದ್ದಿ ಬಂದಿತು.

ಇನ್ನು ಬೇರೆ ವಿಷಯದ ಕಡೆಗೆ ಹೊರಳುವೆನು. ಸಿದ್ದಪ್ಪನು ಮ್ಯಾಟ್ರಿಕ್ ಪರೀಕ್ಷೆ ಪಾಸಾದ ಮೇಲೆ ಒಂದು ವರ್ಷ (೧೯೨೦-೨೧) ಕರ್ನಾಟಕ ಕಾಲೇಜದಲ್ಲಿದ್ದು, ಅದರ ಮೊದಲನೆ ಸಲ ಪರೀಕ್ಷೆಯಲ್ಲಿ ಜಯ ಹೊಂದಲಿಲ್ಲ. ಮುಂದೆ ಅವನು ಪುಣೆಯ ಮೆಡಿಕಲ್ ಸ್ಕೂಲಿಗೆ ಹೋಗಿ ೩ನೆಯ ವರುಷಕ್ಕೆ ಅಲ್ಲಿಯ ಮೊದಲನೆಯ ಪರೀಕ್ಷೆಯಲ್ಲಿ ಪಾಸಾದನು. ಆಮೇಲೆ ೧೯೨೬ನೆಯ ಮಾರ್ಚದಲ್ಲಿ ನಡೆದ ಕಡೆಯ ಪರೀಕ್ಷೆಯಲ್ಲಿ ಒಂದು ವಿಷಯದ ಪ್ರಶ್ನೆ ಕಾಗದವನ್ನು ಬಿಡಿಸಿ, ಮುಂದಿನ ವಿಷಯಗಳಿಗೆ ಕೂಡ್ರಲಿಲ್ಲ. ಮುಂದೆ ಅಕ್ಟೋಬರ ತಿಂಗಳಲ್ಲಿ ೧೯೨೭ನೆಯ ಮಾರ್ಚ ತಿಂಗಳಲ್ಲಿ ಪರೀಕ್ಷೆಗೆ ಕುಳಿತು, ಎರಡೂ ಸಾರೆ ಜಯ ಹೊಂದಲಿಲ್ಲ. ಇದೇ ರೀತಿ ಕಾಲ ಕಳೆಯುವ ಬದಲು ಅವನು ಪಾಸಾಗದಿದ್ದರೂ ಹಾಗೇ ಉದ್ಯೋಗ ನಡೆಸಬೇಕೆಂದು ಅವನನ್ನು ಗೋಕಾವಿಗೆ ಕಳಿಸಿದೆವು. ಅಲ್ಲಿಯ ಮನೆಯು ಬಹಳ ಗೀಳಾಗಿ ಎಷ್ಟೋ ಭಾಗವು ಬಿದ್ದು ಹೋಗಿದ್ದರಿಂದ ಅದನ್ನು ತಿರುಗಿ ಕಟ್ಟಿಸಿ, ಅಲ್ಲಿ ಇರಹತ್ತಿದನು. ಮತ್ತು ಪೇಟೆಯಲ್ಲಿರುವ ಅಂಗಡಿ ಸಹ ಗೀಳಾಗಿದ್ದರಿಂದ ಅದನ್ನು ಹೊಸದಾಗಿ ಕಟ್ಟಿಸಿ, ಅಲ್ಲಿ ತನ್ನ ಉದ್ಯೋಗವನ್ನು ಆರಂಭಿಸಿದನು. ಆಗ ಗೋಕಾವಿಯಲ್ಲಿ ಮುನಸಿಪಲ್ ದವಾಖಾನೆಯ ಹೊರ್ತಾಗಿ ಖಾಸಗಿ ದವಾಖಾನೆ ಒಂದೇ ಇದ್ದುದರಿಂದ ಅವನ ಉದ್ಯೋಗವು ಸರಿಯಾಗಿ ನಡೆಯುವಂತಿತ್ತು.

ದಾನಪ್ಪನು ಇಂಟರಮಿಡಿಯೇಟ ಡ್ರಾಯಿಂಗ ಪರೀಕ್ಷೆಯಲ್ಲಿ ಪಾಸಾಗಿದ್ದರಿಂದ ಅವನು ಲಗ್ನವಾದ ಮೇಲೆ ಚಿಕ್ಕೋಡಿಯಲ್ಲಿ ೧೯೨೬ನೆಯ ಇಸ್ವಿಯ ಮಾರ್ಚ ತಿಂಗಳ ವರೆಗೆ ೨ ವರ್ಷ ಅಲ್ಲಿಯ ಆಂಗ್ಲೋ ವ್ಹರ್ನಾಕ್ಯುಲರ ಸಾಲೆಯಲ್ಲಿ ಡ್ರಾಯಿಂಗ ಟೀಚರ ಕೆಲಸ ಮಾಡಿದನು. ಆಮೇಲೆ ಮುಂಬಯಿಯ ಜೆ. ಜೆ. ಆರ್ಟ ಸ್ಕೂಲಿನಲ್ಲಿ ಡ್ರಾಯಿಂಗ ಟೀಚರ ವರ್ಗದಲ್ಲಿ ೧ ಟರ್ಮ ಅಭ್ಯಾಸ ಮಾಡಿ, ನಂತರ ಜಡ್ಡಾಗಿದ್ದ ಕಾರಣ ೨ನೆಯ ಟರ್ಮಿನಲ್ಲಿ ಅಲ್ಲಿ ಹೋಗಲಿಲ್ಲ. ಮುಂದೆ ಮರು ವರ್ಷ ಪುನಃ ಆ ವರ್ಗದಲ್ಲಿ ಅಭ್ಯಾಸಮಾಡಿ ಪಾಸಾದ ಮೇಲೆ ನಿಪ್ಪಾಣಿಯಲ್ಲಿ ಹಾಯಸ್ಕೂಲಿನೊಳಗೆ ೧೯೨೮ನೆಯ ಡಿಸೆಂಬರದ ವರೆಗೆ ಡ್ರಾಯಿಂಗ ಟೀಚರಿನಂತೆ ಕೆಲಸ ಮಾಡಿದನು. ಅಷ್ಟರಲ್ಲಿ ಅವನ ಹೆಂಡತಿಯು ತೀರಿಕೊಂಡದ್ದರಿಂದ ೧೯೨೯ ನೆಯ ಇಸ್ವಿಯಿಂದ ಮುಂಬೈಯಲ್ಲಿ ಪೇಂಟಿಂಗ ಕ್ಲಾಸುಗಳಲ್ಲಿ ಅಭ್ಯಾಸಮಾಡಿ, ೧೯೩೪ ನೆಯ ಇಸ್ವಿಯಲ್ಲಿ ಆ ವಿಷಯದ ಡಿಪ್ಲೋಮಾ ಸರ್ಟಿಫಿಕೇಟ ಪಡೆದ ಮೇಲೆ, ಧಾರವಾಡದಲ್ಲಿ ತಾನೊಂದು ಕಲಾಮಂದಿರವನ್ನು ತೆಗೆದು ಶಿಕ್ಷಣ ಕೊಡಹತ್ತಿದನು. ಮುಂದೆ ೧೯೩೬ನೆಯ ಇಸ್ವಿಯಲ್ಲಿ ಆರ್ಟ ಮಾಸ್ಟರ ಪರೀಕ್ಷೆಯಲ್ಲಿ ಪಾಸಾದನು.

ನಾನು ಪುಣೆಯಿಂದ ಲೋಣಾವಳಕ್ಕೆ ಗಂಗಾಧರನನ್ನು ಕರಕೊಂಡು ಹೋದೆನು. ಅಲ್ಲಿ ಆಸನಗಳನ್ನು ಹಾಕಿ ರೋಗನಿವಾರಣೆ ಮಾಡುವ ಪದ್ಧತಿಯು ರೂಢಿಯಲ್ಲಿತ್ತು. ಅದು ನನಗೆ ಸರಿಯಾಗುವುದಿಲ್ಲವೆಂದು ತಿಳಿದು ತಿರುಗಿ ಪುಣೆಗೆ ಬಂದು, ಅಲ್ಲಿ ಶ್ರೀ ಗಣಪುಲೆಯೆಂಬ ಮಾನಸೋಪಚಾರದ ಡಾಕ್ಟರರ ಉಪಚಾರವನ್ನು ನಡೆಸಿದೆನು. ಅವರು ಮಾನಸೋಪಚಾರ ಮತ್ತು ಪದ್ಧತಿ, ಮತ್ತು ಮಾನಸೋನ್ನತಿಯೆಂಬ ಎರಡು ಗ್ರಂಥಗಳನ್ನು ಮರಾಠಿಯಲ್ಲಿ ಬರೆದಿದ್ದಾರೆ. ಅವುಗಳನ್ನು ಕೊಂಡು ಓದಿದೆನು. ಅಲ್ಲಿ ಸುಮಾರು ೨ ತಿಂಗಳು ಇದ್ದು ತಿರುಗಿ ವಿಜಾಪುರಕ್ಕೆ ಬಂದೆನು.

ಅಲ್ಲಿಯ ಕೋರ್ಟಿನ ಕೆಲವು ವಕೀಲರು ನಾಮಾಂಕಿತರಾದವರಿದ್ದರು. ಸಾತಾರೆಯ ಪ್ರಸಿದ್ಧ ವಕೀಲರಾದ ಕರಂದಿಕರ ಒಮ್ಮೊಮ್ಮೆ ಕೆಲಸಮಾಡಲಿಕ್ಕೆ ಬರುತ್ತಿದ್ದರು. ನಾನು ಅಲ್ಲಿ ಮೊದಲು ಹೋದಾಗ ಒಂದು ಬಹಳ ಹಳೇ ಮತ್ತು ಬಿಕ್ಕಟ್ಟಿನ ವ್ಯಾಜ್ಯವಿತ್ತು. ಅದು ಬಾಗಲಕೋಟೆಯಲ್ಲಿರುವ ಶಿವಾನಂದ ಜಿನ್ನಿಂಗ ಆಂಡ ಪ್ರೆಸಿಂಗ ಫ್ಯಾಕ್ಟರಿಯ ಪಾಲುಗಾರರ ನಡುವೆ ಲೆಕ್ಕಾಚಾರದ ವಿಷಯವಾಗಿತ್ತು. ಅದರಲ್ಲಿ ಶಿವಯೋಗಮಂದಿರದು ಅರ್ಧಪಾಲು, ಉಳಿದ ಅರ್ಧದಲ್ಲಿ ೪ ಜನ ವ್ಯಾಪಾರಸ್ಥರ ಸರಿಯಾದ ಪಾಲುಗಳಿದ್ದವು. ಇವರಲ್ಲಿ ಇಬ್ಬರು ಮತ್ತಿಬ್ಬರ ಮತ್ತು ಶಿವಯೋಗ ಮಂದಿರದ ಮೇಲೆ ದಾವೆಯನ್ನು ತಂದಿದ್ದರು. ಇದು ಕೋರ್ಟಿನಲ್ಲಿ ನಡೆದಿದ್ದರೆ ಎಷ್ಟು ದಿವಸ ನಡೆಯುತ್ತಿತ್ತೋ, ಎಷ್ಟು ತ್ರಾಸ ಆಗುತ್ತಿತ್ತೋ, ಹೇಳಲಿಕ್ಕಾಗುವುದಿಲ್ಲ. ಶಿವಯೋಗಮಂದಿರದ ಮುಖ್ಯ ಸಂಚಾಲಕರು ಶ್ರೀ ಹಾನಗಲ್ಲ ಕುಮಾರ ಸ್ವಾಮಿಗಳು. ಇವರಲ್ಲಿ ನನ್ನ ಭಕ್ತಿಯು ವಿಶೇಷವಿದೆಯೆಂದು ತಿಳಿದು, ದಾವೆಯನ್ನು ತಂದ ಪಾಲುಗಾರರು ಕೆಲವು ಪ್ರಮುಖರ ಮಧ್ಯಸ್ತಿಕೆಯಿಂದ ಉಳಿದವರ ಕೂಡ ವ್ಯಾಜ್ಯವನ್ನು ತೀರಿಸಿಕೊಂಡರೆಂದು ತಿಳಿದುಬಂತು. ಶಿವಯೋಗಮಂದಿರ ಸಂಸ್ಥೆಯವರು ಉಳಿದ ಪಾಲುಗಾರರಲ್ಲಿ ಪ್ರತಿಯೊಬ್ಬರಿಗೆ ೨೮ ಸಾವಿರ ರೂಪಾಯಿ ಕೊಟ್ಟು, ಸಂಸ್ಥೆಯವರೊಬ್ಬರೇ ಅದರ ಒಡೆಯರಾದರು.

ವಿಜಾಪುರದಲ್ಲಿದ್ದಾಗ ೨೧-೪-೧೯೨೭ ರಿಂದ ಒಂದು ವಾರದೊಳಗೆ ಮತ್ತು ೧೨-೪-೧೯೨೮ ರಿಂದ ಏಪ್ರೀಲ ೩೯ರ ವರೆಗೆ ಅಲ್ಲಿಯ ಡಿಸ್ಟ್ರಿಕ್ಟ ಮತ್ತು ಸೆಶನ್ ಕೋರ್ಟ ಕೆಲಸ ನನ್ನ ಕಡೆಗೆ ಇತ್ತು.

೧೯೨೮ನೇ ಇಸ್ವಿಯ ನಾತಾಳ ಸೂಟಿಯಲ್ಲಿ ಮನೆಯವರೆಲ್ಲರನ್ನು ಕರಕೊಂಡು ಈಜಿಲ್ಹೆಯಲ್ಲಿಯ ನೋಡತಕ್ಕ ಪ್ರಸಿದ್ಧ ಸ್ಥಳಗಳನ್ನೆಲ್ಲಾ ನೋಡಿಕೊಂಡು ಬಂದೆನು. ಮೊದಲು ಬಾಗೇವಾಡಿಗೆ ಹೋಗಿ ಶ್ರೀ ನಂದಿಯ ದರ್ಶನ ತೆಗೆದುಕೊಂಡು ಅಲ್ಲಿಂದ, ಮುದ್ದೇಬಿಹಾಳ ನಾಲ್ವತ್ತವಾಡ ಮಾರ್ಗವಾಗಿ ಕೃಷ್ಣಾ ನದಿಯ ಆಚೆಗಿರುವ ಶಂಕರದಾಸಿಮಯ್ಯನ ನವಿಲೆಯನ್ನು ಕಂಡು ತಿರುಗಿ ನಾಲ್ವತ್ತವಾಡ ರಕ್ಕಸಗಿಗಳ ಮೇಲಿಂದ ಶ್ರೀ ಸಂಗಮೇಶ್ವರನಕ್ಷೇತ್ರಕ್ಕೆ ಬಂದು, ಅಲ್ಲಿಂದ ಐಹೊಳೆ, ಪಟ್ಟದಕಲ್ಲು, ಮಹಾಕೂಟ, ಶಿವಯೋಗ ಮಂದಿರ, ಬನಶಂಕರಿ ಮತ್ತು ಬಾದಾಮಿಯ ಮಾರ್ಗವಾಗಿ ತಿರುಗಿ ವಿಜಾಪುರಕ್ಕೆ ಬಂದೆವು.

## ಧಾರವಾಡದಲ್ಲಿ

ನನಗೆ ವಿಜಾಪುರದಿಂದ ಧಾರವಾಡಕ್ಕೆ ವರ್ಗವಾದುದರಿಂದ ಅಲ್ಲಿ ತಾ ೨-೬-೧೯೨೦ ನೇ ದಿವಸ ಕೋರ್ಟಿನ ಕೆಲಸವನ್ನು ವಹಿಸಿಕೊಂಡೆನು. ಈ ಕೋರ್ಟಿನಲ್ಲಿ ಕೆಲಸ ಬಹಳ. ನನ್ನ ಪ್ರಕೃತಿಯು ಸರಿಯಾಗಿದ್ದಿಲ್ಲ. ಆದರೂ ಅಲ್ಲಿಯ ವಕೀಲ ಮುಂತಾದವರ ಸಹಾನುಭೂತಿಯಿಂದ ಕೆಲಸವನ್ನು ಸಾಧಿಸಿಕೊಂಡು ಹೋದೆನು. ನನ್ನ ಮಗಳಾದ ಶಿವಗಂಗವ್ವನ ಪ್ರಕೃತಿಯು ಮೊದಲಿನಿಂದಲೂ ಅಶಕ್ತವಾಗಿತ್ತು. ಧಾರವಾಡದ ತಂಪು ಹವೆಯಿಂದ ಕ್ಷೀಣವಾಗುತ್ತ ನಡೆದು ಕಡೆಗೆ ಆಕೆಗೆ ಅತಿಸಾರವಾಯಿತು. ಸಿದ್ದಪ್ಪನು ಆಗ ಗೋಕಾವಿಯಲ್ಲಿ ಡಾಕ್ಟರ

ಉದ್ಯೋಗವನ್ನು ನಡೆಸಿದ್ದರಿಂದ ಆಕೆಗೆ ಅಲ್ಲಿ ಉಪಚಾರ ಚೆನ್ನಾಗಿ ಆಗುವದೆಂದು ತಿಳಿದು ಆಕೆಯನ್ನು ಅವನ ಕಡೆಗೆ ಕಳಿಸಿತು. ಆದರೂ ಆಕೆಗೆ ಗುಣವಾಗದೆ ಅಲ್ಲಿಯೆ ತಾ|೮-೧೧-೧೯೩೦ನೇ ದಿವಸ ಕಾಲವಾದಳು.

ಧಾರವಾಡಕ್ಕೆ ಹೋದ ಮೇಲೆ ಕೆಲವು ದಿವಸ ಒಂದು ಸಣ್ಣ ಬಾಡಿಗೆ ಮನೆಯಲ್ಲಿದ್ದು, ೧೯೩೦ನೇ ಜುಲೈ ತಿಂಗಳಲ್ಲಿ ೫೦೦೦ ರೂ. ಗಳಿಗೆ ಶ್ರೀ ಸತ್ಯಪ್ಪ ಘಾಳಿ ಎಂಬುವರ ಮನೆಯನ್ನು ಕೊಂಡೆನು. ಇವರು ಬಿ.ಎ. ಪರೀಕ್ಷೆ ಪಾಸಾದ ಕೂಡಲೆ ಬೆಳಗಾವಿಯ ಸರದಾರ ಹೈಸ್ಕೂಲಿನಲ್ಲಿ ಶಿಕ್ಷಕರಾಗಿದ್ದರು. ಆಮೇಲೆ ಮುಲ್ಕೀಖಾತೆಯಲ್ಲಿ ಸೇರಿದ್ದರು.

ನಾನು ಮೊದಲನೇ ಸಾರೆ ಶ್ರೀ ಗುಡ್ಡಾಪುರ ಕ್ಷೇತ್ರಕ್ಕೆ ಹೋದಾಗ ಇವರು ವಿಜಾಪುರದ ಮಾಮಲೇದಾರರಾಗಿದ್ದು, ಅವರ ಸಹಾಯವು ದೊರೆಯಿತೆಂದು ಈ ಮೊದಲೇ ಹೇಳಿದೆ. ಇವರಿಂದ ನಾನು ಕೊಂಡಾಗ ಕೆಳಗಿನ ತಗ್ಗು ಸ್ಥಳದಲ್ಲಿಯ ಮನೆಯೊಂದೇ ಇತ್ತು. ಅಲ್ಲಿ ನಾನು ಇರಹತ್ತಿ, ಬರಬರುತ್ತ ಈಗಿನ ಹೊಸ ಮನೆಗಳನ್ನು ಕಟ್ಟಿಸಿದೆನು.

೧೯೩೧ನೇ ಇಸ್ವಿಯ ಬೇಸಿಗೆಯ ರಜೆಯಲ್ಲಿ ಮನೆಯ ಜನರ ಕೂಡ ನಾನು ಮೈಸೂರ ಪ್ರಾಂತದ ಪ್ರವಾಸವನ್ನು ಕೈಕೊಂಡೆನು. ಅರಸಿಕೆರೆ ಸ್ಟೇಶನ್ನದಲ್ಲಿಳಿದು ಅಲ್ಲಿಂದ ಹಳೆಬೀಡಿಗೆ ಹೋಗಿ ಹೊಯ್ಸಳೇಶ್ವರ ದೇವಾಲಯ, ಆಮೇಲೆ ಬೇಲೂರು ವಿಷ್ಣು ದೇವಾಲಯದ ಶಿಲ್ಪಕಲೆಯನ್ನು ನಿರೀಕ್ಷಿಸಿ, ಅಲ್ಲಿಂದ ಶ್ರವಣಬೆಳಗೊಳದ ಗೋಮಟೇಶ್ವರ ಶಿಲಾಮೂರ್ತಿ ಕಂಡು ಮೈಸೂರಿಗೆ ಹೋದೆವು. ಅಲ್ಲಿ ಪುಂಗನೂರಿನ ಮಹಾದೇವ ರಾಜರ ಬಂಗಲೆಯ ಆವಾರದೊಳಗೆ ಔಟಹೌಸದಲ್ಲಿ (ಲಕ್ಷ್ಮೀಪುರ ನಂ. ೯೬೦) ಒಂದು ವಾರ ಉಳಿದೆವು. ಮಹಾದೇವರಾಜರು ನೀಲಗಿರಿ ಜಿಲ್ಹೆಯ ನೆಲ್ಲ್ಯಾಳವೆಂಬ ಚಿಕ್ಕ ಸಂಸ್ಥಾನದ ರಾಣಿಯ ಸಂಬಂಧಿಕರು. ಈ ರಾಣಿಯವರು ಒಳ್ಳೇ ಅಭಿಮಾನಿಗಳೂ ಉದಾರಿಗಳೂ ಆಗಿದ್ದರು. ಇವರು ಧಾರವಾಡದಲ್ಲಿ ಅಖಿಲ ಭಾರತ ವೀರಶೈವ ಸಹಾಸಭೆಯು ನೆರೆದ ಕಾಲಕ್ಕೆ ಅದರ ಎಲ್ಲ ಪ್ರತಿನಿಧಿಗಳಿಗೆ ಉಪಹಾರದ ವ್ಯವಸ್ಥೆಯನ್ನು ಮಾಡಿಸಿದ್ದರು. ಈ ಸಂಸ್ಥಾನದ ವಿಷಯದಲ್ಲಿ ಏನಾದರೂ ಕಾಯಿದೆಯ ಪ್ರಶ್ನೆಗಳು ಹೊರಟರೆ, ಆ ಬಗ್ಗೆ ನನ್ನ ಕೂಡ ಪತ್ರ ವ್ಯವಹಾರ ನಡೆಸುತ್ತಿದ್ದರು. ಇವರು ವಾಡಿಕೆಯಾಗಿ ಮೈಸೂರಿನಲ್ಲಿ (960 Basappaji Gardens) ವಾಸ ಮಾಡುತ್ತಿದ್ದರು. ಇವರ ಸಹಾಯದಿಂದ ನಮಗೆ ಮಹಾದೇವರಾಜರ ಆವಾರದಲ್ಲಿ ನಿಲ್ಲಲಿಕ್ಕೆ ಸ್ಥಳ ದೊರೆಯಿತು. ಆಗ ರಾಜರು ಊರಲ್ಲಿದ್ದಿಲ್ಲ. ಸುತ್ತುಮುತ್ತಲಿನ ಸ್ಥಳಗಳನ್ನು ನೋಡಿಕೊಂಡು ಬರಲಿಕ್ಕೆ ಅವರ ಮೋಟರ ಕಾರು ನಮಗೆ ದೊರಕಿತು. ಅದರಲ್ಲಿ ಹೋಗಿ ಶಿವಸಮುದ್ರದ ವಿದ್ಯುತ್ತಿನ ಕಾರಖಾನೆ, ಕೃಷ್ಣರಾಜ ಸಾಗರದ ಅಣೆಕಟ್ಟು, ಶ್ರೀರಂಗಪಟ್ಟಣ ಮೊದಲಾದವುಗಳನ್ನು ನೋಡಿಬಂದೆವು.

ಹಿಂದಕ್ಕೊಮ್ಮೆ ನಾನು ಹುಬ್ಬಳ್ಳಿಯಲ್ಲಿದ್ದಾಗ, ಮೈಸೂರು ದಸರೆಯ ಮಹೋತ್ಸವವನ್ನೂ ಆಗಿನ ಕಾಲಕ್ಕೆ ನಡೆಯುವ ವಸ್ತುಪ್ರದರ್ಶನವನ್ನೂ ನನ್ನ ತಮ್ಮ ಸಿದ್ಧಲಿಂಗನನ್ನು ಕರಕೊಂಡು ನೋಡಲಿಕ್ಕೆ ಹೋದದ್ದು ನೆನಪಿಗೆ ಬರುತ್ತದೆ. ಆಗ ನಾವು ಅಲ್ಲಿ ಸುಬ್ಬಣ್ಣನವರೆಂಬ ಎಲ್.ಎಲ್.ಬಿ. ವಕೀಲರ ಅತಿಥಿಗಳಾಗಿದ್ದೆವು. ಅವರು ಹುಟ್ಟ ಗಾಣಿಗರು. ನಮ್ಮನ್ನು ಒಳ್ಳೆಯ ಆದರದಿಂದ ಸತ್ಕರಿಸಿದರು. ದಿನಾಲು ಸಾಯಂಕಾಲಕ್ಕೆ ಮಹಾರಾಜರ ದರ್ಬಾರು ನಡೆಯುತ್ತಿರುವದಷ್ಟೇ ದರ್ಬಾರಕ್ಕೆ ಹೋಗಬೇಕಾದರೆ ವಿಶಿಷ್ಟವಾದ ಪೋಷಾಕು, ಅಂದರೆ ಉದ್ದ ನಿಲುವಂಗಿ, ಅದಕ್ಕೆ ಒಂದು ನಡುಕಟ್ಟು ಮತ್ತು ರುಮಾಲು ಅವಶ್ಯವಾದಂಥವು. ಮೇಲಾಗಿ ಅರಮನೆಯ ಮೇಲಾಧಿಕಾರಿಗಳ ಅಪ್ಪಣೆಯ ಚೀಟಿ ಸಹ ಬೇಕು. ಇವೆಲ್ಲವುಗಳನ್ನು ವಕೀಲರು ನಮಗೆ ದೊರಕಿಸಿಕೊಟ್ಟು, ದಿನಾಲು ನಮ್ಮನ್ನು ದರ್ಬಾರಕ್ಕೆ ಕರಕೊಂಡು ಹೋಗುತ್ತಿದ್ದರು. ಅಲ್ಲಿ ನಡೆಯುವ ಪದ್ಧತಿಯನ್ನು ಪ್ರತಿಯೊಬ್ಬರು ಅನುಸರಿಸಬೇಕಾಗುತ್ತಿತ್ತು. ದಿನಾಲು ಬೇರೆ ಬೇರೆ ತರದ ಮನರಂಜನ ಕಾರ್ಯಕ್ರಮಗಳು ನಡೆಯುತ್ತಿದ್ದವು.

ಕಡೆಯ ದಿವಸ ಮಹಾರಾಜರು ಬನ್ನಿಮಂಟಪಕ್ಕೆ ಆನೆಯ ಮೇಲೆ ಅಂಬಾರಿಯಲ್ಲಿ ವಾದ್ಯಗಳೊಂದಿಗೆ ಮೆರವಣಿಗೆಯಿಂದ ಹೋಗುವರು. ದೂರಿನ ಪ್ರಾಂತದವರಿಗೆ ಇದನ್ನು ನೋಡುವ ಸಂಧಿ ದೊರೆಯುವದು ಅಪೂರ್ವ. ನಾವು ಮೈಸೂರು ಬಿಡುವಾಗ ವಕೀಲರು ಬಹಳಷ್ಟು ಉಪ್ಪಿಟ್ಟುಮಾಡಿ ಕಟ್ಟಿಕೊಟ್ಟು ಕಳುಹಿಸಿದರು. ನಾವು ಶ್ರೀರಂಗಪಟ್ಟಣಕ್ಕೆ ಬಂದು ಅಲ್ಲಿ ನೋಡತಕ್ಕ ಸ್ಥಳಗಳನ್ನೆಲ್ಲ ನೋಡಿಕೊಂಡು ಬುತ್ತಿಯನ್ನು ಹೊಟ್ಟೆ ತುಂಬ ತಿಂದು, ಅಲ್ಲಿಂದ ಹೊರಟು ಹುಬ್ಬಳ್ಳಿಗೆ ತಿರುಗಿ ಬಂದೆವು.

ನನ್ನ ಹೆಂಡತಿ ಇರುವಾಗಲೆ ಗಂಗಾಧರನಿಗೆ ಕುರ್ಲಿ ಶಂಕರಪ್ಪನ ಮಗಳಾದ ಅನ್ನಪೂರ್ಣಾ ಈಕೆಯನ್ನು ತೆಗೆದುಕೊಳ್ಳಬೇಕೆಂದು ಗೊತ್ತಾಗಿ, ಅದರಂತೆ ೧೯೨೩ ನೇ ಮೇ ತಿಂಗಳದಲ್ಲಿ ನಿಶ್ಚಯ ಕಾರಣವಾಗಿತ್ತು. ದಾನಪ್ಪನ ಮೊದಲನೇ ಹೆಂಡತಿಯು ತೀರಿಕೊಂಡದ್ದರಿಂದ ಅವನಿಗೆ ಬೈಲಹೊಂಗಲದ ಜವಳಿ ಸಿದ್ರಾಮಪ್ಪನ ಮಗಳು ಸರ್ವಮಂಗಲಾ ಈಕೆಯನ್ನು ಗೊತ್ತುಮಾಡಿತು. ಈ ಸಂದರ್ಭದಲ್ಲಿ ಒಂದು ವಿಶೇಷ ಸಂಗತಿಯನ್ನು ಹೇಳುವದು ಅವಶ್ಯ ಕಾಣುತ್ತದೆ. ಸಿದ್ರಾಮಪ್ಪನವರ ಅಣ್ಣ ಅದೃಶಪ್ಪನನ್ನು ಶಹಪೂರದ ಬೋಳಮಲ್ಲ ಮನೆತನಕ್ಕೆ ದತ್ತಕ ಕೊಟ್ಟಿತ್ತು. ಆ ಮನೆತನವು ಆಗ ಒಳ್ಳೆಯ ಶ್ರೀಮಂತಿಕೆಯಲ್ಲಿತ್ತು. ಆ ಭಾಗದ ಬಹಳ ಜನರು ಬಿಳ್ಳೂರು ಶ್ರೀ. ನಿ. ಪ್ರ. ಮಹಾಸ್ವಾಮಿಗಳಲ್ಲಿ ಬಹಳ ಭಕ್ತಿಯುಳ್ಳವರು. ಅವರ ವಾಕ್ಯವೆಂದರೆ ದೇವರ ವಾಕ್ಯ. ಅದೃಶ್ಯಪ್ಪನು ತನ್ನ ಮಗಳನ್ನು ನನ್ನ ಮಗ ಸಿದ್ದಪ್ಪನಿಗೆ ಕೊಡಬೇಕೆಂದು ಶ್ರೀಗಳವರಿಗೆ ಕೇಳಿದಾಗ, ಅವರು ಸಂತೋಷದಿಂದ ಹಾಗೆ ಮಾಡಲಿಕ್ಕೆ ಹೇಳಿದಂತೆ ತಿಳಿಯುತ್ತದೆ. ಇದಕ್ಕನುಸರಿಸಿ ಡಾವಣಗೇರಿಯ ಶ್ರೀ ಹಾಲಯ್ಯ ಎಂಜಿನಿಯರ್ ಅವರು ನಾನು ಹೊನ್ನಾವರದಲ್ಲಿದ್ದಾಗ ಅದೃಶಪ್ಪನ ಮಗಳನ್ನು ನೋಡಲಿಕ್ಕೆ ಬರಬೇಕೆಂದು ತಂತಿ ಕೊಟ್ಟರು. ಬೇಸಗೆಯ ಬಿಡುವು ಸಮೀಪವಿರುವುದರಿಂದ ಆಗ ಬರುತ್ತೇವೆಂದು ಉತ್ತರ ಕೊಟ್ಟಿತು. ಬೇಸಿಗೆಯಲ್ಲಿ ನಾವೆಲ್ಲರು ಧಾರವಾಡಕ್ಕೆ ಬಂದೆವು. ಅಷ್ಟರಲ್ಲಿ ಶಿರಸಿಯಲ್ಲಿರುವ ಬೋಳಮಲ್ಲರವರ ಆಪ್ತೇಷ್ಟರ ಒತ್ತಾಯದಿಂದ ಅದೃಶಪ್ಪನ ಮನಸು ಬದಲಾಗಿ, ಶಿರಸಿಯ ಕುಬಸದ ಪುಟ್ಟಪ್ಪನೆಂಬವನಿಗೆ ಗಂಡುಮಗ ಇಲ್ಲದ್ದರಿಂದ, ಅವನಿಗೆ ಅದೇ ಪಟ್ಟಣದ ನವಲಗುಂದ ಬಸೆಟ್ಟೆಪ್ಪನ ಮಗನಾದ ಬಂಗಾರೆಪ್ಪನೆಂಬುವನನ್ನು ದತ್ತಕ ಮಾಡಿಸಿ, ಅವನಿಗೆ ತನ್ನ ಮಗಳನ್ನು ಕೊಡಮಾಡಿದ್ದು ತಿಳಿಯಿತು. ಇದರಿಂದ ನಾವು ಆಕೆಯನ್ನು ನೊಡಲಿಕ್ಕೆ ಹೋಗುವದು ಉಳಿದುಬಿಟ್ಟಿತು. ಇದರ ಪರಿಣಾಮವು ಅದೃಶಪ್ಪನ ಮೇಲೆ ಏನಾಯಿತೆಂಬುದನ್ನು ಹೇಳುವದು ನನ್ನ ಕೆಲಸವಲ್ಲದಿದ್ದರೂ ಮುಂದಿನ ಸಂಗತಿಗಳು ಸ್ಪಷ್ಟವಾಗಿ ತಿಳಿಯುವ ಸಲುವಾಗಿ ಹೇಳಬೇಕಾಗುತ್ತದೆ. ಅವನ ಮೂಗಿನಲ್ಲಿ ಏನೋ ರೋಗವಾಗಿ ಶಸ್ತ್ರಕ್ರಿಯೆ ನಡೆದು ಕಷ್ಟ ಅನುಭವಿಸಬೇಕಾಯಿತು. ಮುಂದೆ ನಾನು ೧೯೨೭ನೇ ಇಸ್ವಿಯಲ್ಲಿ ಬೆಳಗಾಂವಿಯ ಕೋರ್ಟಿನಲ್ಲಿ ಕೆಲಸ ಮಾಡಲಿಕ್ಕೆ ಬಂದಾಗ, ಅದೃಶಪ್ಪನ ಒಂದು ವ್ಯಾಜ್ಯವು ನನ್ನ ಕಡೆಗೇ ನಿರ್ಣಯಕ್ಕೆ ಬಂತು. ಅದರಲ್ಲಿ ಅವನು ವಾದಿಯಾಗಿದ್ದು ನನ್ನ ಮುಂದೆ ಸಾಕ್ಷಿ ಕೊಡಬೇಕಾಯಿತು. ವ್ಯಾಜ್ಯವು ಸರಳಿದ್ದು ಅವನಂತೆ ನಿರ್ಣಯವಾಯಿತೆಂದು ಹೇಳುವುದರಲ್ಲಿ ಹೆಚ್ಚಿನ ಮಹತ್ವವೇನೂ ಇಲ್ಲ.

ಇದೇ ಸಂದರ್ಭದಲ್ಲಿ ಇನ್ನೆರಡು ವ್ಯಾಜ್ಯಗಳ ಬಗ್ಗೆ ಹೇಳಬಯಸುತ್ತೇನೆ. ಒಂದರಲ್ಲಿ ಶ್ರೀಮಂತ ವಂಟಮುರಿ ಸರದೇಸಾಯಿಯವರ ಆಪ್ತರೊಬ್ಬರು ಪಕ್ಷಕಾರರಿದ್ದರು. ಇದರಲ್ಲಿ ಅವರ ವಿರುದ್ಧ ನಿರ್ಣಯ ಕೊಡಬೇಕಾಯಿತು. ಇನ್ನೊಂದರಲ್ಲಿ ಶ್ರೀ ಪಂಡಿತಪ್ಪ ಚಿಕ್ಕೋಡಿ ಅವರ ಪಕ್ಷದವರು ವಾದಿಯಾಗಿದ್ದು, ಶ್ರೀ ಅಂಗಡಿ ವಕೀಲರ ಪಕ್ಷದವರು ಒಂದು ಕೊಲೆ ಮಾಡಿದ್ದ ಬಗ್ಗೆ ಅವರಿಂದ ಆದ ಹಾನಿಯನ್ನು ತುಂಬಿ ಕೊಡಬೇಕೆಂದು ಬೇಡಿದ್ದರು. ಗುಣಾವಗುಣಗಳ ಮೇಲಿಂದ ಈ ವ್ಯಾಜ್ಯದ ನಿರ್ಣಯವು ವಾದಿಯಂತೆ ಆಗುವಂತಿದ್ದರೂ, ಒಂದು ಕಾಯಿದೆಯ ಪ್ರಶ್ನೆಯಿಂದ ಅದು ಅವರ ವಿರುದ್ಧವಾಯಿತು.

ಇನ್ನು ಧಾರವಾಡದ ಕಥೆಯ ಕಡೆಗೆ ತಿರುಗುವೆನು. ನಾನು ಇಲ್ಲಿ ಬಂದ ಮೇಲೆ ತುಸು ದಿವಸ ಒಂದು ಚಿಕ್ಕ ಬಾಡಿಗೆಯ ಮನೆಯಲ್ಲಿದ್ದು, ಆಮೇಲೆ ಶ್ರೀ ಫಾಳಿಯವರ ಮನೆಯನ್ನು ಕೊಂಡು ಅಲ್ಲಿ ಇರಲಿಕ್ಕೆ ಹೋದೆನು. ಶ್ರೀ ಉಳವಿ ಬಸವೇಶ್ವರ ದೇವಸ್ಥಾನದ ಸಂಸ್ಥೆಯವರು ಅದರ ಸುತ್ತಲಿರುವ ಭೂಮಿಯಲ್ಲಿ ವಸತಿ ಗೃಹಗಳನ್ನು ಕಟ್ಟುವ ಸಲುವಾಗಿ ತುಂಡುಗಳನ್ನು ಮಾಡಿ, ಅವುಗಳನ್ನು ನೆಲಬಾಡಿಗೆಯಿಂದ ಕೊಟ್ಟು, ಸುಮಾರು ಅರ್ಧ ಎಕರೆಯ ತುಂಡಿನ ಕೆಳಭಾಗದಲ್ಲಿ ಅವರು ಆ ಮನೆಯನ್ನು ಕಟ್ಟಿಸಿದ್ದರು.

ಇಲ್ಲಿ ನನ್ನ ಪ್ರಕೃತಿಯು ಸರಿಯಾಗಿ ಉಳಿಯಲಿಲ್ಲ. ನನ್ನ ಎರಡೂ ಕೈಬೆರಳುಗಳಿಗೆ ಇಸಬು ಹಬ್ಬಿ ಕೈಗಳು ಬರೆಯಲಿಕ್ಕೆ ಬರದಂತಾದವು. ಇದರ ಸಲುವಾಗಿ ನಾನು ೧೯೩೨ ನೇ ಇಸ್ವಿಯ ಫೆಬ್ರುವರಿ ೯ನೇ ತಾರೀಖಿನಿಂದ ೨ ೧/೨ ತಿಂಗಳುಗಳ ವರೆಗೆ ರಜೆಯ ಮೇಲೆ ಹೋಗಬೇಕಾಯಿತು ಮತ್ತು ಇಡೀ ಪ್ರಕೃತಿಯ ಸರಿಯಾಗಿದ್ದರಿಂದ, ಅದೇ ವರ್ಷ ಜುಲೈ ೯ನೇ ತಾರೀಖಿನಿಂದ ರಜೆಯ ಮೇಲೆ ಹೋಗಿ, ಹಾಗೆಯೇ ೧೯೩೩ನೇ ಇಸ್ವಿಯ ಫೆಬ್ರುವರಿ ೮ನೇ ತಾರೀಖಿನಿಂದ ಕೆಲಸದಿಂದ ನಿವೃತ್ತನಾದೆನು. ಅದೇ ವೇಳೆ ನನ್ನ ಮುಖದಲ್ಲಿ ಪಾರ್ಶ್ವವಾಯು ಆಗಿ ಅದು ಬಹುಮಟ್ಟಿಗೆ ಕಡಿಮೆ ಆಯಿತು. ನನ್ನ ಮೂಲವ್ಯಾಧಿ ಹೆಚ್ಚಾಗಿ ಮದ್ರಾಸೀ ವೈದ್ಯನ ಔಷಧದಿಂದ ಅದೂ ಹೋಯಿತು. ಇಷ್ಟರಲ್ಲಿ ೧೯೩೨ ನೇ ಇಸ್ವಿಯ ಫೆಬ್ರುವರಿ ತಿಂಗಳಲ್ಲಿ ನನ್ನ ಹಲ್ಲುಗಟ್ಟಿಯಿದ್ದರೂ pyorea ಉಂಟಾಗಿ ಅವುಗಳನ್ನು ಕೀಳಿಸಿ ಡಾ. ಕಬಾಡಿಯವರಿಂದ ಹೊಸಹಲ್ಲು ಹಾಕಿಸಿದೆನು. ದಾನಪ್ಪನ ಮದುವೆಯು ಜವಳೀ ಸಿದ್ರಾಮಪ್ಪನ ಮಗಳು ಸರ್ವಮಂಗಲಾ ಈಕೆಯ ಕೂಡ ಗೋಕಾವಿಯಲ್ಲಿ ಜರುಗಿತು. ಮತ್ತು ಅದೇ ವರ್ಷ ಬೇಸಿಗೆಯಲ್ಲಿ ಗಂಗಾಧರನ ಮದುವೆಯು ಕುರ್ಲಿ ಶಂಕರಪ್ಪನ ಮಗಳು ಅನ್ನಪೂರ್ಣಾ ಆಕೆಯ ಕೂಡ ಗರಗದಲ್ಲಿ ಆಯಿತು. ದಾನಪ್ಪನು ಆಗ ಮುಂಬೈದ ಜೆ. ಜೆ. ಆರ್ಟ ಸ್ಕೂಲಿನಲ್ಲಿ ಅಭ್ಯಾಸ ಮಾಡುತ್ತಿದ್ದನು. ಗಂಗಾಧರನು ಎಲ್.ಎಲ್.ಬಿ ವರ್ಗದಲ್ಲಿ ಅಭ್ಯಾಸ ಮಾಡುತ್ತಿದ್ದು, ಅದರ ಮೊದಲನೇ ಪರೀಕ್ಷೆಯಲ್ಲಿ ೨ನೇ ವರ್ಗದಲ್ಲಿ ಪಾಸಾಗಿ ರೋಮನ್ ಲಾ ಎಂಬ ವಿಷಯದಲ್ಲಿ ವಿಶ್ವವಿದ್ಯಾಲಯದ ಇನಾಮು ಪಡೆದನು. ಕಡೆಯ ಪರೀಕ್ಷೆಯಲ್ಲಿ ೧೯೩೪ನೇ ಇಸ್ವಿಯಲ್ಲಿ ಸಹ ೨ನೇ ವರ್ಗದಲ್ಲಿ ಪಾಸಾಗಿ ವಕೀಲಿಯ ವೃತ್ತಿಯನ್ನು ಆರಂಭಿಸಿದನು. ಆ ಸುಮಾರಕ್ಕೆ ಹುಬ್ಬಳ್ಳಿಯ ಶ್ರೀ ಕಂಬಳಿ ಸಿದ್ದಪ್ಪನವರು ಮುಂಬೈ ಸರಕಾರದ ಮಂತ್ರಿಗಳಲ್ಲಿ ಒಬ್ಬರಾಗಿದ್ದು, ಅವರ ಕಡೆಗೆ ಇತರ ಖಾತೆಗಳ ಕೂಡ ಅಬಕಾರಿ ಖಾತೆಯೂ ಸಹ ಇತ್ತು. ಅವರು ಗಂಗಾಧರನಿಗೆ ಅಬಕಾರಿ ಇನ್‌ಸ್ಪೆಕ್ಟರನ ಸ್ಥಳವನ್ನು ತೆಗೆದುಕೊಳ್ಳಲಿಕ್ಕೆ ಕೇಳಿದ್ದರಿಂದ ಅವನು ಅದಕ್ಕೆ ಒಪ್ಪಿಕೊಂಡು ನವಕರಿಯಲ್ಲಿ ಸೇರಿದನು. ಸಿದ್ದಪ್ಪನು ೧೯೨೭ನೇ ಇಸ್ವಿಯಿಂದ ಗೋಕಾವಿಯಲ್ಲಿ ಇರಹತ್ತಿದ್ದು ಅಲ್ಲಿ ಡಾಕ್ಟರ್ ಉದ್ಯೋಗವನ್ನು ನಡೆಸಿದ್ದನು.

ಸೋಮಶೇಖರನು ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಪಾಸಾಗಿ, ಆಮೇಲೆ ಪುಣೆಯ ಎಂಜಿನಿಯರಿಂಗ ಕಾಲೇಜಿನಲ್ಲಿ ಮೆಕ್ಯಾನಿಕಲ್ ಎಂಜಿನಿಯರಿಂಗದ ಒಂದನೇ ವರ್ಷದ ವರ್ಗದಲ್ಲಿ ಅಭ್ಯಾಸ ಮಾಡಿ, ಪರೀಕ್ಷೆಗೆ ಕುಳಿತಾಗ ನಡೆಸಿದ ಅಕ್ರಮ ವರ್ತನದಿಂದ ಹೊರಗೆ ಹಾಕಲ್ಪಟ್ಟನು. ಮರುವರ್ಷ ಅವನು ಬೆಳಗಾಂವಿಯ ಲಿಂಗರಾಜ ಕಾಲೇಜದಲ್ಲಿ ಒಂದನೇ ವರ್ಷದ ವರ್ಗದಲ್ಲಿ ಅಭ್ಯಾಸ ಮಾಡಹತ್ತಿ ಅದನ್ನು ಅರ್ಧಕ್ಕೆ ಬಿಟ್ಟು ಕೊಯಿಮತ್ತೂರ ಫಾರೆಸ್ಟ ಕಾಲೇಜ ಸೇರಿದನು. ಅಲ್ಲಿಯ ಪರೀಕ್ಷೆಗಳನ್ನು ಪಾಸಾದ ಮೇಲೆ ಕೆಲವು ವಿದ್ಯಾರ್ಥಿಗಳ ಕೂಡ ತಾಪೀ ನದಿಯ ಉತ್ತರಕ್ಕೆ ಸೂರತ ಜಿಲ್ಹೆಯ ಸಮೀಪಕ್ಕಿರುವ ಡಾಂಗ್ಸ ಅಡವಿಯಲ್ಲಿ ಕೆಲಸ ಮಾಡಲಿಕ್ಕೆ ಕಳಿಸಲ್ಪಟ್ಟನು. ಇದು ೧೯೩೭ನೇ ಇಸ್ವಿಯ ಮೇ ತಿಂಗಳಲ್ಲಿ, ಆಗ ಗಂಗಾಧರನು ನಾಸಿಕ ಜಿಲ್ಹೆಯ ಇಗತ್ತಪುರಿಯಲ್ಲಿ ಕೆಲಸ ಮಾಡುತ್ತಿದ್ದನು. ಅವನಿಗೆ ನಾನು ತೆಗೆದುಕೊಂಡ ಮೋಟರ ಕಾರ ಕೊಡಲಿಕ್ಕೆ ಒಯ್ಯಬೇಕಾಯಿತು. ಅಲ್ಲಿಯ ವರೆಗೆ ಸಿದ್ದಪ್ಪನು ಅದರ ಉಪಯೋಗ ಮಾಡುತ್ತಿದ್ದನು. ಪೂಜಾರಿ ಬಸಯ್ಯನು ಡ್ರಾಯವರನಿದ್ದನು.

ನಾನು ಶಾರದಮ್ಮನನ್ನು ಕರಕೊಂಡು ಕಾರಿನಲ್ಲಿ ಹೊರಟು ದಾರಿಯ ಮೇಲೆ ಸಾತಾರೆಯಿಂದ ಮಹಾಬಲೇಶ್ವರಕ್ಕೆ ಹೋಗಿ, ಅಲ್ಲಿ ಪುಟಾಣಿ ಸೋಮನಲ್ಲಿ ೨/೩ ದಿವಸ ಇದ್ದು ಅಲ್ಲಿಂದ ಪುಣೆಯಲ್ಲಿ ವಸ್ತಿಮಾಡಿ, ಅಲ್ಲಿಂದ ನೆಟ್ಟಗೆ ನಾಸಿಕಕ್ಕೆ ಹೋದೆವು. ಪುಣೆಯಲ್ಲಿ ವಸ್ತೀ ಮಾಡಿದಾಗ ಜೇಜೂರಿ ಖಂಡೋಬನ ದರ್ಶನ ಮಾಡಿಬಂದೆವು. ಈ ನಡುವಿನ ರಸ್ತೆಯು ಅಪರಿಚಿತವಾದದ್ದು. ಅಲ್ಲಿ ಸರಿಯಾದ ಮೈಲುಗಲ್ಲುಗಳು ಸಹ ಇದ್ದಿಲ್ಲ. ಅಲ್ಲಲ್ಲಿ ದಾರಿಯ ಮೇಲೆ ವಿಚಾರಿಸುತ್ತ ಸಾಯಂಕಾಲದ ಸುಮಾರಕ್ಕೆ ಪ್ರಯಾಸದಿಂದ ನಾಸಿಕಕ್ಕೆ ಮುಟ್ಟಿದೆವು. ಸೋಮಶೇಖರನು ಆಗ ಅಲ್ಲಿ ಇರುತ್ತೇನೆಂದು ತಿಳಿಸಿದ್ದನು. ಅವನ ಪತ್ತೆಯು ಗೊತ್ತಿದ್ದಿಲ್ಲ. ಅದನ್ನು ಶೋಧಿಸುವ ಬಗ್ಗೆ ವಿಚಾರ ಮಾಡುವಷ್ಟರಲ್ಲಿ ಅವನು ಕಾಲು-ಗಾಡಿಯ ಮೇಲೆ ಎದುರಿಗೆ ಬಂದನು. ಆ ರಾತ್ರಿಯನ್ನು ಅಲ್ಲಿ ಕಳೆದು ಒಂದು ಮರಾಠೀ ನಾಟಕ ನೋಡಿ ಮರುದಿವಸ ಅವನನ್ನು ಕರಕೊಂಡು ಇಗತ್ತಪುರಿಗೆ ಹೋದೆವು. ಅಲ್ಲಿ ತುಸು ದಿವಸ ಇದ್ದು, ನಾನು ಮತ್ತು ಶಾರದಮ್ಮನು ಉಗಿಬಂಡಿಯಿಂದ ತಿರುಗಿ ಧಾರವಾಡಕ್ಕೆ ಬಂದೆವು. ಅಲ್ಲಿಂದ ಹೊರಡುವ ಮೊದಲು ನಾವೆಲ್ಲರು ಅಹಮ್ಮದನಗರ ಜಲ್ಹೆಯ ಹದ್ದಿಯಲ್ಲಿರುವ ಭಾಂಡಾರಧಾರಾ ಎಂಬ ಅಣೆಕಟ್ಟನ್ನು ನೋಡಿ ಬಂದೆವು. ಅಲ್ಲಿ ನೀರಿನ ಸಂಗ್ರಹವು ಬಹಳಿದ್ದು, ಕೆಳಗಿನ ಮಗ್ಗಲು ಸೃಷ್ಟಿ ಸೌಂದರ್ಯವು ನೋಡತಕ್ಕಂಥಾದ್ದದೆ. ಆಗ್ಗೆ ಒಂದು ಫಿಲ್ಮ ಕಂಪನಿಯವರು ಶೂಟಿಂಗ್ ಮಾಡಲಿಕ್ಕೆ ಬಂದಿದ್ದರು. ಅದರೊಳಗೆ ಭಾಗವಹಿಸುವವರಲ್ಲಿ ಹೆಸರಾದ ನಟಿ ದೇವಿಕಾರಾಣಿ ಸಹ ಇದ್ದಳು.

ಈ ಸುಮಾರಕ್ಕೆ ಸೋಮನಿಗೆ ಮುಂಡರಗಿಯ ಕಾತರಕಿ ತೋಟಪ್ಪನ ಮಗಳು ರಾಚವ್ವನನ್ನು ತೆಗೆದುಕೊಳ್ಳಬೇಕೆಂದು ಗೊತ್ತಾಯಿತು. ಇಲ್ಲಿ ಮುಂಡರಗಿಯ ಆಪ್ತೇಷ್ಟರ ಬಗ್ಗೆ ತುಸು ಬರೆಯಬೇಕಾಗಿದೆ. ನನ್ನ ಹೆಂಡತಿಯ ಅಕ್ಕ ನೀಲವ್ವನನ್ನು ಅಲ್ಲಿಯ ಸೀರಿ ಪುಟ್ಟಪ್ಪನಿಗೆ ಕೊಟ್ಟಿತ್ತು. ಅವನ ಮನೆತನದವರು ಬಡ್ಡೀವ್ಯವಹಾರ, ಹೊಲ ಮಾಡಿಸುವುದು ವ್ಯಾಪಾರಗಳನ್ನು ಮಾಡುತ್ತ ಒಳ್ಳೇ ಸ್ಥಿತಿಯಲ್ಲಿದ್ದರು. ನಾನು ಧಾರವಾಡದಲ್ಲಿ ವಕೀಲಿ ಮಾಡುತ್ತಿದ್ದಾಗ ಕೆಲವು ಸಾರೆ ಮುಂಡರಗಿಗೆ ಹೋಗಿ ಬಂದಿದ್ದೆನು. ಪುಟ್ಟಪ್ಪನ ಕಕ್ಕ ಮತ್ತು ಅಜ್ಜ ಜೀವಂತಿದ್ದರು. ಅವನು ಚಿಕ್ಕವನಿದ್ದರೂ ಸಹ ಊರ ಪ್ರಮುಖನಾಗಿದ್ದನು. ಅಲ್ಲಿ ಗದಗಿನ ಶ್ರೀ ಜಗದ್ಗುರು ತೋಂಟದಸ್ವಾಮಿಗಳ ಶಾಖಾಮಠವೊಂದಿದೆ. ಪುಟ್ಟಪ್ಪನು ಅಂದಾನಿ ಸ್ವಾಮಿಗಳ ಪಕ್ಷದವನು. ತೋಂಟದಸ್ವಾಮಿಗಳ ಪಕ್ಷದವರ ಆಟ ಏನೂ ನಡೆಯಗೊಡುತ್ತಿದ್ದಿಲ್ಲ. ತೋಟಪ್ಪನು ಪುಟ್ಟಪ್ಪನ ಆಶ್ರಯದಿಂದ ತನ್ನ ವ್ಯಾಪಾರ ಉದ್ಯೋಗವನ್ನು ಚೆನ್ನಾಗಿ ನಡೆಸುತ್ತಿದ್ದನು. ಪುಟ್ಟಪ್ಪನಂತೆ ಇವನೂ ಒಬ್ಬ ದೊಡ್ಡಮನುಷ್ಯನಾಗಿದ್ದನು. ನಾನು ಹುಬ್ಬಳ್ಳಿಯಲ್ಲಿ ಕೆಲಸ ಮಾಡುತ್ತಿದ್ದಾಗ ಇವರು ಮೇಲಿಂದ ಮೇಲೆ ನನ್ನ ಕಡೆಗೆ ಬರುತ್ತಿದ್ದರು. ನಾನು ನನ್ನ ಶಿಲುಕು ಹಣವನ್ನು ಪುಟ್ಟಪ್ಪನ ಕಡೆಗೆ ಇಡುತ್ತಿದ್ದೆನು. ಇವನಿಗೆ ನಮ್ಮ ಮಾವಂದಿರ ಸಂಪರ್ಕದಿಂದ ಕುಡಿಯುವ ಚಟವು ತುಸು ಸೇರಿತ್ತು. ಗಾಂಜಿಯನ್ನೂ ಸೇದುತ್ತಿದ್ದನು. ನೀಲವ್ವನಿಗೆ ಮಕ್ಕಳಾಗಿಲ್ಲದ್ದರಿಂದ ಇನ್ನೊಬ್ಬ ಹೆಂಡತಿಯನ್ನು ೧೯೧೪ನೇ ಇಸ್ವಿಯ ಎಪ್ರಿಲ ತಿಂಗಳದಲ್ಲಿ ಮದುವೆಯಾಗಿದ್ದನು. ಆಕೆಗೂ ಮಕ್ಕಳಾಗಿದ್ದಿಲ್ಲ. ಆದುದರಿಂದ ನೀಲವ್ವನೂ ನನ್ನ ಹೆಂಡತಿಯೂ ತಮ್ಮ ತಮ್ಮೊಳಗೆ ನನ್ನ ಮಕ್ಕಳಲ್ಲಿ ಒಬ್ಬರನ್ನು ದತ್ತಕ ತೆಗೆದುಕೊಳ್ಳುವ ಬಗ್ಗೆ ಮಾತಾಡುತ್ತಿದ್ದರೆಂದು ತಿಳಿಯುತ್ತದೆ. ಅಷ್ಟರಲ್ಲಿ ೧೯೧೯ನೇ ಇಸ್ವಿಯ ಆರಂಭದಲ್ಲಿ ಪುಟ್ಟಪ್ಪನು ಒಮ್ಮಿಂದೊಮ್ಮೆ ಕಾಲವಾದನು. ಆಗ ನಾನು ಯಾವಲದಲ್ಲಿ ಇರುತ್ತಿದ್ದೆನು. ಅವನ ಮರಣದ ಸುದ್ದಿಯು ಕೂಡಲೆ ನನಗೆ ತಾರಿನಿಂದ ತಿಳಿಯಿತು. ನಾನು ನನ್ನ ಹೆಂಡತಿ ಮತ್ತು ಗಂಗಾಧರನನ್ನು ಕೂಡಿಕೊಂಡು ಮುಂಡರಗಿಗೆ ಹೋದೆವು. ನಾವು ಅಲ್ಲಿ ಮುಟ್ಟುವಕಿಂತ ಮುಂಚೆಯೆ ಕುರ್ಲಿ ಶಂಕರಪ್ಪನು ಸಮೀಪವಾಗಿದ್ದರಿಂದ ಮುಂಡರಗಿಗೆ ಹೋಗಿದ್ದನು. ತೋರಿಕೆಗೆ ಪುಟ್ಟಪ್ಪನ ಸ್ಥಿತಿಯು ಆಗ ಬಹಳ ಚೆನ್ನಾಗಿತ್ತು. ಆಗ ಅವನ ವಾರಸುದಾರರು ನೀಲವ್ವ ಮತ್ತು ಎರಡನೆ ಹೆಂಡತಿ ರುದ್ರವ್ವ. ಶಂಕರಪ್ಪನು ನೀಲವ್ವನ ಮನವೊಲಿಸಿ

ಪುಟ್ಟಪ್ಪನ ಮರಣದ ಮರುದಿವಸವೇ ಮುಹೂರ್ತ ನೆಟ್ಟಗಿಲ್ಲದಿದ್ದರೂ ತನ್ನ ಚಿಕ್ಕ ಮಗನನ್ನು ಆಕೆಗೆ ದತ್ತಕ ಕೊಟ್ಟನು. ಈ ಸುದ್ದಿಯು ನಾವಿನ್ನೂ ಗದಗಿನಲ್ಲಿರುವಾಗಲೇ ತಿಳಿಯಿತು. ನಾವು ಹಾಗೆಯೇ ಮುಂಡರಗಿಗೆ ಹೋಗಿ ಸಮಾಧಾನದ ಮಾತುಗಳನ್ನು ಹೇಳಿ, ತಿರುಗಿ ಯಾವಲಕ್ಕೆ ಹೋದೆವು. ಮುಂದೆ ಬೇಸಿಗೆ ರಜೆಯಲ್ಲಿ ಪುನಃ ಮುಂಡರಗಿಗೆ ಹೋದೆವು. ಶಂಕರಪ್ಪನೂ ಆಗ ಅಲ್ಲಿಗೆ ಬಂದನು. ಪುಟ್ಟಪ್ಪನ ದಾಗೀನೆಗಳು ತಿಜೋರಿಯಲ್ಲಿಯೇ ಇದ್ದವು. ಅವುಗಳನ್ನು ತೆಗೆದುಕೊಂಡು ಹೋಗಬೇಕೆಂದು ಶಂಕರಪ್ಪನ ಮನಸಿನಲ್ಲಿತ್ತು. ಪುಟ್ಟಪ್ಪನ ಕಡೆಯಿಂದ ನಾನು ಠೇವು ಇಟ್ಟ ಬಹಳ ಹಣ ನನಗೆ ಬರತಕ್ಕದ್ದದೆಯೆಂದು ನೀಲವ್ವನಿಗೆ ಗೊತ್ತಿದ್ದ ಕಾರಣ ಅವಳು ಶಂಕರಪ್ಪನಿಗೆ ದಾಗೀನೆಗಳನ್ನು ಕೊಡಲಿಕ್ಕೆ ಒಪ್ಪಲಿಲ್ಲ. ಈ ಬಗ್ಗೆ ಚರ್ಚೆಯಾದ ಮೇಲೆ ಶಂಕರಪ್ಪನು ನನ್ನ ಹಣವನ್ನು ಕೊಡಲಿಕ್ಕೆ ಒಪ್ಪಿ, ಅದರ ಸಲುವಾಗಿ ಒಂದು ಪ್ರೋ ನೋಟ ಬರಕೊಡಲಿಕ್ಕೆ ಕಬೂಲ ಮಾಡಿದನು. ಪುಟ್ಟಪ್ಪನ ಜವಳಿ ಅಂಗಡಿ ಲೆಕ್ಕದಲ್ಲಿ ನಾನು ಇಟ್ಟ ಹಣದ ಲೆಕ್ಕವಿತ್ತು. ಬಡ್ಡಿ ಸಹಿತ ನನಗೆ ಸುಮಾರು ೫೫೦೦ ರೂ. ಬರುವದಾಯಿತು. ಅಷ್ಟಕ್ಕೇ ಶಂಕರಪ್ಪನು ನನಗೆ ಪ್ರೋನೋಟ ಬರಕೊಟ್ಟು, ದಾಗೀನಗಳನ್ನು ತಾನು ತೆಗೆದುಕೊಂಡು ಹೋದನು. ಇದರಿಂದ ನನಗೆ ಹಣ ಬರತಕ್ಕ ಮಾರ್ಗವು ಬಹಳ ಸುಲಭವಾಯಿತು.

ಮುಂದೆ ತುಸು ದಿವಸಗಳಲ್ಲಿ ದತ್ತಕ ಮಗನು ತೀರಿಕೊಂಡನು. ಪುಟ್ಟಪ್ಪನು ಕೆಲವು ಸಟ್ಟಾ ವ್ಯವಹಾರಗಳನ್ನು ಮಾಡಿದ್ದನು. ಅವುಗಳಲ್ಲಿ ಎಷ್ಟೋ ಹಾನಿಯಾಗಿತ್ತು. ಅವುಗಳ ಲೆಕ್ಕವನ್ನು ಸರಿಯಾಗಿ ಮಾಡಿ ಸೇರಿಸಲಿಕ್ಕೆ ಯಾರೂ ಇಲ್ಲದಂತಾಯಿತು. ನೀಲವ್ವನು ಸಹ ತನ್ನ ಮನಸಿಗೆ ಬಂದಂತೆ ನಡೆಯಹತ್ತಿದಳು. ಪುಟ್ಟಪ್ಪನ ಕಾಲದಿಂದಲೆ ಅವನ ದೂರಿನ ಅಣ್ಣ ತಮ್ಮಂದಿರಾದ ಸೀರಿ ವೀರಭದ್ರಪ್ಪನವರ ಮನೆಯವರ ಮೇಲೆ ವಿಶ್ವಾಸವಿದ್ದಿಲ್ಲ. ಹೀಗಾಗಿ ಅವನ ಹೆಂಡತಿ ಮೇಲೆ ಕೆಲವು ದಾವೆಗಳು ನಡೆದು ಹುಕುಮನಾಮಿಗಳಾಗಿ, ಅವರ ಹೊಲ ಮನೆಗಳು ಕೋರ್ಟಿನಿಂದ ಜಪ್ತಾಗಿ ಲಿಲಾವಿಗೆ ಬಂದವು. ಬರದೂರ ಗ್ರಾಮದ ಎರಡು ನಂಬರುಗಳನ್ನು ಶಂಕರಪ್ಪನು ಲಿಲಾವಿನಲ್ಲಿ ತನ್ನ ಗೆಳೆಯನಾದ ಉಮರಸಾಹೇಬನ ಹೆಸರಿಲೆ ತೆಗೆದುಕೊಂಡನು. ಇದಕ್ಕೆ ಹಣವನ್ನು ಪುಟ್ಟಪ್ಪನ ಆಸ್ತಿಗಳ ವಹಿವಾಟ ಮಾಡುತ್ತಿದ್ದಾಗ್ಗೆ ಬಂದದ್ದನ್ನು ಕೊಟ್ಟನು. ಮತ್ತು ಅವನ ಕೆಲವು ದಾಗೀನೆಗಳನ್ನು ಸಹ ಮಾರಿದನು. ನನಗೆ ಬರಕೊಟ್ಟ ಪ್ರೋನೋಟ ಹಣವನ್ನು ಉಮರಸಾಹೇಬನ ಕಡೆಯಿಂದ ಹೊಲಗಳ ವಿಕ್ರಯ ಪತ್ರವನ್ನು ನನಗೆ ಮಾಡಿಸಿಕೊಟ್ಟು ಮತ್ತು ಕೆಲವು ದಾಗೀನೆಗಳನ್ನು ಕೊಟ್ಟು ತೀರಿಸಿದನು.

ಇನ್ನು ಕಾತರಕಿ ತೋಟಪ್ಪನ ಕಡೆ ತಿರುಗೋಣ. ನನ್ನ ಮನೆತನದ ಕೂಡ ಶರೀರ ಸಂಬಂಧ ಮಾಡಬೇಕೆಂದು ಅವನ ಬಲವಾದ ಆಶೆ. ಹಾಗೆ ಮಾಡಬಾರದೆಂದು ಅಷ್ಟೇ ಬಲವಾದ ನನ್ನ ವಿರೋಧ. ತನ್ನ ಉದ್ದೇಶವನ್ನು ಸಾಧಿಸಲಿಕ್ಕೆ ಅವನು ನಾನಾ ಪರಿಯಿಂದ ಪ್ರಯತ್ನ ಮಾಡಹತ್ತಿದನು. ತನ್ನ ಮಗಳನ್ನು ಯಾರಾದರು ನೋಡಲಿಕ್ಕೆ ಬಂದರೆ ಆಕೆಯನ್ನು ಮುನಸೂಫರ ಮನೆಗೆ ಕೊಟ್ಟದೆ ಎಂದು ಹೇಳಿ ಆಕೆಯನ್ನು ಅವರಿಗೆ ತೋರಿಸುತ್ತಿದ್ದಿಲ್ಲ. ನನ್ನ ಎಷ್ಟೋ ಮಿತ್ರರ ವರ್ಚಸ್ಸಿನ ಉಪಯೋಗ ಮಾಡಿದನು. ಕಡೆಗೆ ತನ್ನ ಮೋರೆಯನ್ನು ಎರಡನೆಯವರಿಗೆ ತೋರಿಸದಂತೆ ಆಗಿದೆಯೆಂದು ಹೇಳಹತ್ತಿದನು. ಇವೆಲ್ಲ ಕಾರಣಗಳಿಂದ ಇತ್ತಿತ್ತಲಾಗಿ ಅವನ ಮಗಳನ್ನು ನಾನು ನೋಡದೆ ಇದ್ದರೂ ನನ್ನ ಮನಸು ಕರಗಿತು. ಇದಕ್ಕೆ ಸೋಮನನ್ನು ಕೇಳಬೇಕೆಂದು ಆಗ ಅವನು ಕೊಯಿಮತ್ತೂರಲ್ಲಿದ್ದುದರಿಂದ ಪತ್ರ ಬರೆದೆನು. ಈ ಬಗ್ಗೆ ಅವನು ಹೆಚ್ಚಿಗೆ ವಿಚಾರ ಮಾಡದೆ ತನ್ನ ಸಮ್ಮತಿ ಕೊಟ್ಟನು. ಮದುವೆಯ ಸಲುವಾಗಿ ೭೫೧ ರೂಪಾಯಿ ಕೊಡಬೇಕೆಂದು ಗೊತ್ತಾಗಿ ಮುಂದೆ ಅವರ ಲಗ್ನವಾಯಿತು.

೧೯೪೩ನೇ ಇಸ್ವಿಯ ಮಳೆಗಾಲದಲ್ಲಿ ನಾನು ರಾಚವ್ವನು ಸಹಿತ ಗೋಕಾವಿಯಲ್ಲಿದ್ದೆನು. ಆಗ ಆಕೆ ಬಸುರಾಗಿದ್ದಳು. ಇದನ್ನು ಕೇಳಿ ತೋಟಪ್ಪನಿಗೆ ಹಿಡಿಸಲಾರದಷ್ಟು ಆನಂದ. ಅವನು ಗೋಕಾವಿಗೆ ಬಂದು ಒಳ್ಳೇ ಉತ್ಸಾಹದಿಂದ ಆಕೆಗೆ ಸೀರೆ ಕುಪ್ಪಸ ಮಾಡಿ ಹೋದನು. ಆಕೆಗೆ ಟಬ್ bath ಮಾಡಲಿಕ್ಕೆ ಹಚ್ಚಿ ಅಡ್ಡಾಡಲಿಕ್ಕೆ ಕಳಿಸುತ್ತಿದ್ದೆನು. ಅದು ಆಕೆಗೆ ಸರಿ ಹೋದಂತೆ ಕಾಣಲಿಲ್ಲ. ಆಕೆಗೆ ಅತಿಸಾರ ಹತ್ತಿದಂತಾಯಿತು. ಆಕೆಗೆ bath ಮಾಡುವದನ್ನು ಬಿಡಿಸಿದೆನು. ಅದರಿಂದ ಪ್ರಕೃತಿಯು ಸರಿಯಾದಂತೆ ಕಂಡಿತು. ಆಕೆಯ ತಂದೆ ತಾಯಿಗಳಿಬ್ಬರೂ ಬಂದು ಆಕೆಯನ್ನು ನೋಡಿ ಸಮಾಧಾನಪಟ್ಟು ಹೋದರು. ಆಮೇಲೆ ಆಕೆಗೆ ಅತಿಸಾರ ಹೆಚ್ಚಾಗಿ Jotiv anaemia ಸಲುವಾಗಿ ಸಿದ್ದಪ್ಪನು ಆಕೆಯನ್ನು ಹುಕ್ಕೇರಿ ರೋಡ ದವಾಖಾನೆಗೆ ತೋರಿಸಲಿಕ್ಕೆ ಕರಕೊಂಡು ಹೋಗಿ, ಆಗ ನಾನು ಧಾರವಾಡದಲ್ಲಿದ್ದುದರಿಂದ ನನಗೆ ತಾರ ಕಳಿಸಿದನು. ನಾನು ಗೋಕಾವಿಗೆ ಹೋದೆನು. ಅಷ್ಟರಲ್ಲಿ (೨-೧೦-೧೯೪೩ ನೇ ದಿನ) ಆಕೆ ದವಾಖಾನೆಯಲ್ಲಿ ತೀರಿಕೊಂಡಳೆಂಬ ಸುದ್ದಿ ಬಂತು. ಆಗ ಸೋಮನು ಸಹ ಸಮೀಪದಲ್ಲಿದ್ದುದರಿಂದ ಅವನು ಸಹ ದವಾಖಾನೆಗೆ ಹೋದನು. ಶವವನ್ನು ಕಾರಿನಲ್ಲಿ ತೆಗೆದುಕೊಂಡು ಬಂದರು. ಸೋಮನು ಸಹ ಕಣ್ಣೀರು ಸುರಿಸಿದನು. ಈ ಸುದ್ದಿಯನ್ನು ತೋಟಪ್ಪನಿಗೆ ತಾರಿನಿಂದ ತಿಳಿಸಿ ಆಕೆಯ ಅಂತ್ಯವಿಧಿಯನ್ನು ಮಾಡಿತು. ಈ ಸುದ್ದಿಯು ಮುಂಡರಗಿಗೆ ಮುಟ್ಟಿದ ಕೂಡಲೆ ಆ ಊರ ತುಂಬ ದುಃಖದ ಕೋಲಾಹಲ ಎದ್ದಿತಂತೆ. ಮರುದಿವಸ ತೋಟಪ್ಪನು ಗೋಕಾವಿಗೆ ಬಂದು ಪಡಸಾಲೆಯಲ್ಲಿ ಧೊಪ್ಪನೆ ಬಿದ್ದು ಶೋಕ ಮಾಡಹತ್ತಿದನು. ಅವನನ್ನು ಸಮಾಧಾನ ಮಾಡಬೇಕಾದರೆ ಸಾಕು ಸಾಕಾಯಿತು. ಪೂರ್ವ ಕರ್ಮದ ಪರಿಣಾಮವೋ ಏನೋ ? ಅವನು ಯೋಚಿಸಿದ ಆಶೆಗಳೆಲ್ಲಾ ಬಯಲಾದವು.

ನನ್ನ ಮಗಳು ಶಾರದಮ್ಮನಿಗೆ ಚೆನ್ನಾಗಿ ಶಿಕ್ಷಣ ಕೊಡಿಸಬೇಕೆಂದು ಆಕೆಯನ್ನು ಏ. ಕೆ. ಗರ್ಲ್ಸ್ ಹಾಯಸ್ಕೂಲಿಗೆ ಕಳಿಸಿತು. ಆಕೆ ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಹೆಚ್ಚು ಗುಣಗಳನ್ನು ಹೊಂದಿ ಪಾಸಾದಳು. ಹೆಣ್ಣುಮಕ್ಕಳಿಗೆ ಸಹ ತಕ್ಕ ವಯಸ್ಸಾದ ಮೇಲೆಯೇ ಅವರ ಲಗ್ನ ಮಾಡಬೇಕೆಂದು ನನ್ನ ಅಭಿಪ್ರಾಯ. ಆಕೆಗೆ ಆ ವಯಸ್ಸಾಗಿದ್ದರೂ ಆಕೆಯ ಪ್ರಕೃತಿಯು ಗಟ್ಟಿ ಇರದ್ದರಿಂದ ಆಕೆಯ ಲಗ್ನದ ವಿಚಾರವನ್ನು ಮಾಡದೆ ಆಕೆಯನ್ನು ಕಾಲೇಜಕ್ಕೆ ಅಭ್ಯಾಸದ ಸಲುವಾಗಿ ಕಳಿಸಿತು. ಇಂಟರ್ ಪರೀಕ್ಷೆಯವರೆಗೆ ಅಭ್ಯಾಸ ಮಾಡಿ ಅದರಲ್ಲಿ ಸಹ ಪಾಸಾದಳು. ನಮ್ಮ ಪಂಗಡದಲ್ಲಿ ಆಕೆಗೆ ತಕ್ಕ ವರ ದೊರೆಯುವದು ಅಪರೂಪ. ಲಿಂಗಾಯತರಲ್ಲಿ ಸಹ ಎಷ್ಟೋ ಒಳಪಂಗಡಗಳಿವೆ. ಇವುಗಳಲ್ಲಿ ಪರಸ್ಪರ ಲಗ್ನ ವ್ಯವಹಾರಗಳು ಆಗುವುದಿಲ್ಲ. ತಾತ್ವಿಕವಾಗಿ ಇದಕ್ಕೇನೂ ಅಡ್ಡಿಯಿಲ್ಲ. ಒಬ್ಬಿಬ್ಬ ಎರಡನೇ ಪಂಗಡದವರು ಈಕೆಯನ್ನು ತೆಗೆದುಕೊಳ್ಳಬೇಕೆಂಬ ವಿಚಾರ ನಡೆಸಿದರು. ಆಗ ಗಂಗಾಧರನು ರಾಣೇಬೆನ್ನೂರಲ್ಲಿ ಕೆಲಸ ಮಾಡುತ್ತಿದ್ದನು. ಮರಿಕಟ್ಟಿಯ ಶ್ರೀ ಸಿದ್ದನಗೌಡ ಪಾಟೀಲರು ಹಾನಗಲ್ಲ ತಾಲೂಕಿನಲ್ಲಿ ಆಡೂರ ಪೋಲೀಸ ಸಬ್‌ಇನ್‌ಸ್ಪೆಕ್ಟರ ಕೆಲಸದಲ್ಲಿದ್ದರು. ಹಾವೇರಿಯಲ್ಲಿ ಹಿರೇಮಠ ಎಂಬುವರು ಸಹ ಅಬಕಾರಿ ಖಾತೆಯಲ್ಲಿದ್ದರು. ಇವರ ಮಧ್ಯಸ್ಥಿಕೆಯಿಂದ ಶಾರದಮ್ಮನನ್ನು ಪಾಟೀಲರಿಗೆ ಕೊಡಬೇಕೆಂದು ಗೊತ್ತಾಯಿತು. ಪಾಟೀಲರು ೫೦೦೦ ರೂ. ವರದಕ್ಷಿಣೆ ಬೇಡಿದರು. ಕಡೆಗೆ ಅವರಿಗೆ ೧೫೦೦ ರೂ. ನಗದು ಮತ್ತು ಶಾರದಮ್ಮನಿಗೆ ಗೋವನಕೊಪ್ಪದಲ್ಲಿರುವ ೨೦೦೦ ರೂ. ಬೆಲೆ ಬಾಳುವ ಭೂಮಿಯನ್ನು ಕೊಡಬೇಕೆಂದು ಗೊತ್ತಾಗಿ ೧೯೪೩ನೇ ಇಸ್ವಿಯ ಮಾರ್ಚ ತಿಂಗಳಲ್ಲಿ ೧ನೇ ತಾರೀಖಿನ ದಿನ ಅವರ ಲಗ್ನವಾಯಿತು. ಮರಿಕಟ್ಟಿಯಿಂದ ಸುಮಾರು ೧೦೦ ಜನರು ಲಗ್ನಕ್ಕೆ ಬಂದಿದ್ದರು. ಎಲ್ಲ ಕಾರ್ಯವು ಸಮಾಧಾನಕರವಾಗಿ ನಡೆಯಿತು.ಬರಬರುತ್ತ ಪಾಟೀಲರು ಕಿತ್ತೂರ ದೇಶಗತಿ ಮನೆತನದವರೆಂದು ಗೊತ್ತಾಯಿತು. ಇವರ ತಾಯಿಯು ಕಾಗತಿ ದೇಶಗತಿಯ ಹೆಣ್ಣುಮಗಳು. ಪಾಟೀಲರು ಶಾರದಮ್ಮನನ್ನು ಮೊದಲು ಮರಿಕಟ್ಟಿಗೆ ಕರಕೊಂಡು ಹೋಗಿ, ನಂತರ ಆಡೂರಿಗೆ ಕರಕೊಂಡು ಹೋದರು. ಅಲ್ಲಿ ಅವಳ ಪ್ರಕೃತಿಯು ಬಹಳ ದಿವಸ ಚೆನ್ನಾಗಿ ಉಳಿಯಲಿಲ್ಲ.

ಅವಳನ್ನು ಹಾವೇರಿಯಲ್ಲಿರುವ ಶ್ರೀ ದೇವಧರ ಡಾಕ್ಟರರಿಗೆ ತೋರಿಸಿ ಔಷಧಿ ಕೊಡಿಸಿದರು. ಆಕೆ ಮೇಲಿಂದ ಮೇಲೆ ಬಸ್ಸಿನಿಂದ ಹಾವೇರಿಗೆ ಬಂದು ಉಪಚಾರಹೊಂದಿ ಹೋಗುತ್ತಿದ್ದಳು. ನಾನೂ ಒಮ್ಮೆ ಆಡೂರಿಗೆ ಹೋಗಿದ್ದೆನು. ಪಾಟೀಲರಿಗೆ ಆಡೂರಿಂದ ಶಿಗ್ಗಾವಿಗೆ ವರ್ಗವಾಯಿತು. ನಾನು ಸಹ ಅಲ್ಲಿ ಹೋಗಿ ಕೆಲವು ದಿವಸ ಇದ್ದೆನು. ೧೯೪೪ನೇ ಇಸ್ವಿಯಲ್ಲಿ ಆಕೆ ಗರ್ಭಿಣಿಯಾದ ಮೇಲೆ ಹಡೆಯುವದಕ್ಕೆ ಕೆಲವು ದಿವಸ ಮುಂಚೆ ಆಕೆಯನ್ನು ಧಾರವಾಡಕ್ಕೆ ಕರೆದುಕೊಂಡು ಬಂದಿತು. ಹೆಣ್ಣು ಮಕ್ಕಳು ಗರ್ಭಿಣಿಯಾದಾಗ ಅವರಿಂದ ನಾನು ಟಬ್‌ಬಾತ ಮಾಡಿಸುತ್ತಿರುತ್ತೇನೆ. ಅದರಂತೆ ಈಕೆಗೂ ಮಾಡಿಸಿದೆನು. ಏನೂ ಆಯಾಸವಿಲ್ಲದೆ ತಾ। ೧೧-೧೦-೧೯೪೪ನೇ ಇಸ್ವಿಯ ದಿನ ಗಂಡು ಕೂಸನ್ನು ಹಡೆದಳು.

ಮುಂದೆ ಒಂದು ತಿಂಗಳೊಳಗೆ ಒಂದು ಘಟನೆ ನಡೆಯಿತು. ಆಗ ಗಂಗಾಧರನು ಹುಬ್ಬಳ್ಳಿಯಲ್ಲಿ ಕೆಲಸ ಮಾಡುತ್ತಿದ್ದನು. ನಾನೂ ಸಹಜವಾಗಿ ಅಲ್ಲಿಯೇ ಇದ್ದೇನು. ಒಂದು ದಿವಸ ಬೆಳಿಗ್ಗೆ ದಾನಪ್ಪನು ಶಾರದಮ್ಮ ಮತ್ತು ಎಳೆಯ ಕೂಸನ್ನು ಸಹ ಕರಕೊಂಡು ಅಲ್ಲಿಗೆ ಬಂದನು. ಅದರ ಕಾರಣವನ್ನು ಕೇಳಲಾಗಿ ಪಾಟೀಲರ ಕಡೆಯಿಂದ ಶಾರದಮ್ಮನಿಗೆ Patil is not well come at once ಎಂಬ ಅಭಿಪ್ರಾಯದ ತಾರು ಬಂದುದರಿಂದ ಗಾಬರಿಯಾಗಿ ಇವರನ್ನು ಕರಕೊಂಡು ಬಂದನೆಂದು ಹೇಳಿದನು. ಇದಲ್ಲದೆ ಎರಡು ಪತ್ರಗಳು ಸಹ ಅವರಿಂದ ಶಾರದಮ್ಮಗೆ ಬಂದಿದ್ದವು. ಅವುಗಳಲ್ಲಿ ಅಂಥದೇನು ಮಹತ್ವದ ವಿಷಯ ಇರಲಿಲ್ಲ. ಹೀಗಾಗಿ ಇವುಗಳನ್ನು ನೋಡಿ ತಾರಿನ ವಿಷಯ ಗಂಭೀರವಿರಲಿಕ್ಕಿಲ್ಲ ಎಂದೆನಿಸಿ ಶಾ ಶಿಗ್ಗಾಂವಿಗೆ ಕರೆದುಕೊಂಡು ಹೋಗದೆ, ಒಬ್ಬ ಡಾಕ್ಟರರನ್ನು ಗಂಗಾಧರ ಮತ್ತು ಮಿಣಜಿಗಿ ಅವರನ್ನು ಒಂದು ಕಾರಿನಲ್ಲಿ ಕಳಿಸಿತು. ಅವರು ಪಾಟೀಲರ ಮನೆಗೆ ಮುಟ್ಟುವಷ್ಟರಲ್ಲಿ ಪಾಟೀಲರು ಚೆನ್ನಾಗಿ ಇದ್ದದ್ದನ್ನು ಕಂಡು ನೋಡಿ ಸಮಾಧಾನ ಪಟ್ಟುಕೊಂಡು ಹಾಗೆಯೇ ತಿರುಗಿ ಊರಿಗೆ ಬಂದರು ಮತ್ತು ಶಾರದಮ್ಮನನ್ನು ತಿರುಗಿ ಧಾರವಾಡಕ್ಕೆ ಕಳಿಸಿತು.

ಮುಂದೆ ಪಾಟೀಲರಿಗೆ ನವಲಗುಂದಕ್ಕೆ ವರ್ಗವಾಯಿತು. ನಾನು ಸಹ ಅಲ್ಲಿ ಹೋಗಿ ಎಷ್ಟೋ ದಿವಸ ಇದ್ದೆನು. ಆಗ ಆಕೆ ಪುನಃ ಗರ್ಭಿಣಿಯಾದಳು. ಆಗ ಮತ್ತೆ ಆಕೆಯಿಂದ ಟಬ್‌ಬಾತ ಮಾಡಿಸಿತು. ಮುಂದೆ ತಾ। ೧೨-೩-೧೯೪೬ ನೇ ಇಸ್ವಿಯ ದಿವಸ ಏನೂ ಆಯಾಸವಿಲ್ಲದೆ ಆಕೆ ಎರಡನೆ ಗಂಡುಕೂಸನ್ನು ಹಡೆದಳು. ಆದರೂ ಆಕೆ ಪ್ರಕೃತಿಯು ಚೆನ್ನಾಗಿಲ್ಲವಾದ್ದರಿಂದ ಗದಗಿನ ಮಿಶನ್ ಆಸ್ಪತ್ರೆಗೆ ಆಕೆಯನ್ನು ಕರಕೊಂಡುಹೋಗಿ ತೋರಿಸಲಾಗಿ, ಆಕೆಗೆ ಕ್ಷಯರೋಗದ ಚಿಹ್ನವಿದ್ದಂತೆ ಕಂಡುಬರುತ್ತದೆಂದು ಹೇಳಿದರು. ಇದರಿಂದ ಕೂಸಿಗೆ ಮೊಲೆ ಕುಡಿಸುವದನ್ನು ಬಿಡಿಸಿ ಆಕೆಯನ್ನು, ಮೊದಲನೇ ಹುಡುಗ ಶಂಕರಗೌಡನನ್ನು ಸಹ ಧಾರವಾಡಕ್ಕೆ ಕರೆದುಕೊಂಡು ಹೋದೆನು. ಈ ಹುಡುಗನಿಗೆ ಸಹ ಯಕೃತ್ತಿನ ವಿಕಾರವಾಗಿ ಚೆನ್ನಾಗಿ ಇದ್ದಿಲ್ಲ. ಪಾಟೀಲರು ಮಿರಜಿಯ ಡಾಕ್ಟರರಿಗೆ ತೋರಿಸುವುದಕ್ಕಾಗಿ ಅವನನ್ನು ಶಾರದಮ್ಮನು ಸಹಿತ ಕರಕೊಂಡು ಹೋಗಿ ಅಲ್ಲಿ ಇಟ್ಟು ಬಂದರು. ಅವನಿಗೆ ಗುಣವಾಗದೆ ಅಲ್ಲಿಯೆ ತಾ। ೧೯-೬-೧೯೪೬ ನೇ ಇಸ್ವಿಯ ದಿವಸ ಅವನು ತೀರಿಕೊಂಡನು. ಆಮೇಲೆ ೪-೫ ದಿವಸ ಅಲ್ಲಿ ಇದ್ದು ಶಾರದಮ್ಮನ ಪ್ರಕೃತಿಯ ಪರೀಕ್ಷೆ ಮಾಡಿಸಿ ಧರ್ಮನಗೌಡರು ಆಕೆಯನ್ನು ಕರಕೊಂಡು ಧಾರವಾಡಕ್ಕೆ ಬಂದು, ಅಲ್ಲಿಂದ ಮುಂದೆ ೨೬ನೇ ತಾರೀಖಿನ ದಿವಸ ಬೆಳಿಗ್ಗೆ ನವಲಗುಂದಕ್ಕೆ ಹೋದರು. ಶಾರದಮ್ಮನ ಅತ್ತೆಯವರು ಆಕೆಯ ಎರಡನೆ ಕೂಸಿನ ಜೋಕೆ ಮಾಡುತ್ತಿದ್ದರು. ಅದು ಹುಟ್ಟಿದಾಗಿನಿಂದ ರೋಗಗ್ರಸ್ತವಾಗಿದ್ದು. ಶಾರದಮ್ಮನು ಅಲ್ಲಿ ಮುಟ್ಟುವಷ್ಟರಲ್ಲಿ ತೀರಿಕೊಂಡಿದ್ದು ಅವಳ ದೃಷ್ಟಿಗೆ ಬಿತ್ತು. ಆಗ ಅವಳ ಸ್ಥಿತಿ ಏನಾಗಿರಬಹುದೆಂಬುದನ್ನು ಹೇಳುವುದು ಅಸಾಧ್ಯ. ಇಂಥವರಿಗೆ ದೇವರೇ ಗತಿ.

ಮುಂದೆ ಹೈದರಾಬಾದ ಪ್ರಾಂತದಲ್ಲಿ ರಜಾಕಾರರ ಹಾವಳಿಯು ಹೆಚ್ಚಾಗಿ ಬ್ರಿಟಿಷರು ಅವರಿಂದ ಅದನ್ನು ಮುಕ್ತಮಾಡಿ, ತಮ್ಮ ಅಧೀನಕ್ಕೆ ತೆಗೆದುಕೊಂಡ ಮೇಲೆ ಪಾಟೀಲರನ್ನು ಆ ಪ್ರಾಂತಕ್ಕೆ ಕಳಿಸಿದರು. ಆಗ

ಅವರೊಬ್ಬರೆ ಅಲ್ಲಿ ಹೋಗಿ ಶಾರದಮ್ಮನನ್ನು ಧಾರವಾಡದಲ್ಲಿ ಬಿಟ್ಟಿದ್ದರು. ಆಕೆ ಪುನಃ ಗರ್ಭಿಣಿಯಾಗಿದ್ದು ತಾ। ೧೩-೮-೧೯೪೪ರ ನೇ ಇಸ್ವಿಯ ದಿವಸ ಹೆಣ್ಣು ಕೂಸನ್ನು ಹಡೆದಳು. ಈಕೆಯೇ ಗೌರಮ್ಮನು. ಅದೇ ವರ್ಷ ಅಕ್ಟೋಬರ ಮಧ್ಯದಲ್ಲಿ ನಾವು ಮನೆಯವರೆಲ್ಲರು ಶಾರದಮ್ಮ ಮತ್ತು ಗೌರಮ್ಮ ಸಹಿತ ಶ್ರೀ ಗುಡ್ಡಾಪುರ ಕ್ಷೇತ್ರಕ್ಕೆ ಹೋಗಿ ದಾನಮ್ಮನ ದರ್ಶನ ತೆಗೆದುಕೊಂಡು ಬಂದೆವು.

ಈ ಸಮಯಕ್ಕೆ ಪಾಟೀಲರಿಗೆ ಕಲಬುರ್ಗಿ ಜಿಲ್ಹೆಯ ಜೇವರಗಿ ಎಂಬ ಗ್ರಾಮಕ್ಕೆ ವರ್ಗವಾಗಿದ್ದು ಅವರು ಶಾರದಮ್ಮನನ್ನು ಅಲ್ಲಿಗೆ ಕರಕೊಂಡು ಹೋಗಬೇಕೆಂದು ಧಾರವಾಡಕ್ಕೆ ಬಂದರು. ಶಾರದಮ್ಮನು ನನಗೂ ತನ್ನ ಸಂಗಡ ಬರಬೇಕೆಂದು ಆಗ್ರಹಮಾಡಿದಳು. ಆ ಗ್ರಾಮವು ಧಾರವಾಡದಿಂದ ಬಹಳ ದೂರ ಇರುವದರಿಂದ ಮತ್ತು ಬೇರೆ ಕೆಲವು ಕಾರಣಗಳಿಂದ ನಾನು ಅದಕ್ಕೆ ಒಪ್ಪಲಿಲ್ಲ. ಅದರಿಂದ ಆಕೆಗೆ ಸಮಾಧಾನವಾಗಲಿಲ್ಲ. ಮುಂದೆ ತುಸು ದಿವಸಗಳಲ್ಲಿ ಕಲಬುರ್ಗಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಕೂಡತಕ್ಕದ್ದಿರುವುದರಿಂದ ಆ ಕಾಲಕ್ಕೆ ಬರುವೆನೆಂದು ಆಕೆಗೆ ಸಮಾಧಾನ ಹೇಳಿ ಕಳಿಸಿಕೊಟ್ಟೆನು ಆಮೇಲೆ ೧೯೪೫ನೇ ಫೆಬ್ರುವರಿ ತಿಂಗಳದಲ್ಲಿ ಪೊಂಡಿಚೇರಿಗೆ ಶ್ರೀ ಅರವಿಂದರ ದರ್ಶನಕ್ಕೆ ಶ್ರೀ ಬುದ್ಧಯ್ಯಸ್ವಾಮಿಗಳು, ಭೂಸನೂರಮಠ, ದಾನಪ್ಪ, ಪ್ರೇಮಾ ಮೊದಲಾದವರನ್ನು ಕೂಡಿಕೊಂಡು ಹೋದೆನು. ನಮ್ಮ ಸಂಗಡ ಬುದ್ಧಯ್ಯ ಸ್ವಾಮಿಗಳ ಚಿಕ್ಕ ಮಗನಾದ ಮಗಿಪ್ರಭು (ಅಜ್ಜ) ಸಹ ಬಂದಿದ್ದನು. ಅವನಿಗೆ ಆಗ ಗೊಬ್ಬರ ಬಂದಿದ್ದರಿಂದ ಅದು ಸುಂಕರೋಗವೆಂದು ೨೦ನೇ ತಾರೀಖಿನ ದಿವಸ ಆಗತಕ್ಕ ಶ್ರೀ ಅರವಿಂದರ ದರ್ಶನಕ್ಕೆ ನಮ್ಮಲ್ಲಿ ಯಾರಿಗೂ ಅಪ್ಪಣೆ ದೊರೆಯಲಿಲ್ಲ. ಶ್ರೀ ಭೂಸನೂರಮಠ, ದಾನಪ್ಪ,ಪ್ರೇಮಾ, ಹರ್ಡೇಕರ ಮನೆಯವರು ಕೂಡಲೇ ಹೊರಟು, ಅರುಣಾಚಲಕ್ಕೆ ಹೋಗಿ, ಶ್ರೀ ರಮಣ ಮಹರ್ಷಿಯ ದರ್ಶನ ತೆಗೆದುಕೊಂಡು, ಅಲ್ಲಿಂದ ತಿರುಪತಿಯಲ್ಲಿ ದೇವರ ದರ್ಶನ ಮಾಡಿಕೊಂಡು ಧಾರವಾಡಕ್ಕೆ ತಿರುಗಿ ಬಂದರು. ಅಜ್ಜನ ಬೇನೆಯು ಕಡಿಮೆಯಾಗುವ ವರೆಗೆ ಕೆಲವು ದಿವಸ ನಾವು ಪೊಂಡಿಚೇರಿಯಲ್ಲಿಯೇ ಉಳಿಯಬೇಕಾಯಿತು. ಇಷ್ಟರಲ್ಲಿ ಕಲಬುರ್ಗಿಯಲ್ಲಿ ಸಾಹಿತ್ಯ ಪರಿಷತ್ತು ಕೂಡಿತ್ತು. ಆಗ ಪಾಟೀಲರು ಶಾರದಮ್ಮನನ್ನು ಕರಕೊಂಡು ಅಲ್ಲಿ ಹೋಗಿ ನನ್ನನ್ನು ಹುಡಿಕಿ ಅಲ್ಲಿ ಕಾಣದೆ ಇರುವುದರಿಂದ ನಿರಾಶೆಯಾಗಿ, ಜೇವರಗಿಗೆ ತಿರುಗಿ ಹೋದರು. ಬುದ್ಧಯ್ಯ ಸ್ವಾಮಿಗಳು ಮತ್ತು ನಾನು ಅಜ್ಜನಿಗೆ ಗುಣವಾದ ಮೇಲೆ ಬೆಂಗಳೂರ ಮಾರ್ಗದಿಂದ ತಿರುಗಿ ಧಾರವಾಡಕ್ಕೆ ಬಂದೆವು. ಆಮೇಲೆ ಶಾರದಮ್ಮನಿಂದ ತಾವು ಕಲಬುರ್ಗಿಗೆ ಹೋದ ಸುದ್ದಿಯನ್ನು ತಿಳಿಸುವ ಪತ್ರ ಬಂತು. ಅದರಲ್ಲಿ ಕೂಸಿಗೆ ಯಕೃತ್ ರೋಗದ ವಿಕಾರವಾಗಿರುವುದರಿಂದ ಮದ್ರಾಸದ ಜಮ್ಮೀ ವೈದ್ಯನ ಔಷಧದ ಬಾಟಲಿಯನ್ನು ಕಳಿಸಲಿಕ್ಕೆ ಸಹ ಬರೆದಿದ್ದಳು. ಅದರಂತೆ ನಾನು ಅದನ್ನು ಪಾರ್ಸಲ್ ಮಾಡಿ ಕಳಿಸಿದೆನು. ಮುಂದೆ ತಾ। ೨೩-೩-೧೯೪೫ನೇ ಇಸ್ವಿಯ ದಿವಸ ಮುಂಜಾನೆ ಪಾಟೀಲರಿಂದ ಶಾರದಮ್ಮನಿಗೆ ವಿಶೇಷ ಜಡ್ಡಾದ ಬಗ್ಗೆ ತಾರು ಬಂತು. ಮುಂದೆ ತುಸು ಹೊತ್ತಿನಲ್ಲಿಯೇ ಆಕೆಯು ತೀರಿಕೊಂಡಳೆಂದೂ ನಾವು ಬರುವವರೆಗೆ ಶವವನ್ನು ಇಡುವೆವೆಂದೂ ಮತ್ತೊಂದು ತಾರು ಬಂತು. ಆಗ ಗುಂತಕಲ್ಲ ಮಾರ್ಗದ ಹೊರತು ಬೇರೆ ಮಾರ್ಗದಿಂದ ಹೋಗಲಿಕ್ಕೆ ಅನುಕೂಲವಿದ್ದಿಲ್ಲ. ಆದುದರಿಂದ ದಾನಪ್ಪನು ಸುಲೋಚನಾ ಮತ್ತು ಲೀಲಾ ಇವರನ್ನು ಕರಕೊಂಡು ಆ ಮಾರ್ಗದಿಂದ ಹೋಗಿ ಮರುದಿವಸ ಸಾಯಂಕಾಲಕ್ಕೆ ಜೇವರಗಿಗೆ ಮುಟ್ಟಿದೆನು. ಅವರು ತಿರುಗಿ ಬಂದ ಮೇಲೆ ಶಾರದಮ್ಮನ ಮರಣದ ನಿಜವಾದ ಕಾರಣವು ಗೊತ್ತಾಯಿತು. ೨೩ನೇ ತಾರೀಖಿನ ದಿವಸ ನಸುಕಿರುವಾಗ ಪಾಟೀಲರು ಎದ್ದು ಶಾರದಮ್ಮನಿಗೆ ಚಹಾ ಮಾಡಲಿಕ್ಕೆ ಹೇಳಿ ಬೈಲುಕಡೆಗೆ ಹೋದರು. ಇವರು ಆ ಗ್ರಾಮದ ಕುಲಕರ್ಣಿಯವರ ಮನೆಯ ಅಟ್ಟದ ಮೇಲೆ ಇರುತ್ತಿದ್ದರು. ಪಾಟೀಲರ ಟ್ರಂಕದಲ್ಲಿ ಕಾಡತೋಸು ತುಂಬಿದ ಸಣ್ಣ ಬಂದೂಕು (revolver) ಇತ್ತು. ಶಾರದಮ್ಮನು ಅದನ್ನು ತೆಗೆದುಕೊಂಡು ಒಂದು ಆರಾಮ ಕುರ್ಚಿಯ ಮೇಲೆ ಗೋಡೆಯ ಹತ್ತಿರ ಕುಳಿತು

ಪಾಟೀಲರು ಬೈಲು ಕಡೆಯಿಂದ ತಿರುಗಿ ಅಟ್ಟದ ಮೇಲೆ ಹತ್ತುವ ಕಾಲಕ್ಕೆ ಬಂದೂಕನ್ನು ಎದೆಯ ಗುಂಡಿಗೆ ಇಟ್ಟು ಹಾರಿಸಿದಳು. ಇದರ ಸಪ್ಪಳವನ್ನು ಕೇಳಿ ಪಾಟೀಲರು ಓಡಿ ಬಂದು ನೋಡುವಷ್ಟರಲ್ಲಿ ಕೂಸನ್ನು ಜೋಕೆ ಮಾಡಿರೆಂದು ಹೇಳಿ ಪ್ರಾಣ ಬಿಟ್ಟಳಂತೆ. ಆಕೆ ಹೀಗೆ ಯಾಕೆ ಮಾಡಿದಳೆಂಬ ಕಾರಣ ತಿಳಿಯದಾಯಿತು.

ಮುಂದಿನ ವರುಷ ಫೆಬ್ರುವರಿ ತಿಂಗಳದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಸೊಲ್ಲಾಪುರದಲ್ಲಿ ಜರುಗಿತು. ಆ ಕಾಲಕ್ಕೆ ಜೇವರಗಿಯಲ್ಲಿಯ ಆಕೆಯ ಸಮಾಧಿಯನ್ನು ಕಾಣುವ ಉದ್ದೇಶದಿಂದಲೇ ದಾನಪ್ಪ ಮತ್ತು ಸರ್ವಮಂಗಲಾ ಇವರನ್ನು ಕೂಡಿಕೊಂಡು ನಾನು ಅಲ್ಲಿ ಹೋದೆನು. ನನಗೆ ಅಲ್ಲಿ ನನ್ನ ಆರೋಗ್ಯ ಸರಿಯಿಲ್ಲದ್ದರಿಂದ ಪರಿಷತ್ತಿನ ಸಭೆಗೆ ಹೋಗಲೇ ಇಲ್ಲ. ಆಗ ಪಾಟೀಲರು ವಿಜಾಪುರ ಜಿಲ್ಹೆಯ ಇಂಡೀ ತಾಲೂಕಿನಲ್ಲಿ ಕೆಲಸ ಮಾಡುತ್ತಿದ್ದು, ಅವರು ನಮ್ಮನ್ನೆಲ್ಲ ಜೇವರಗಿಗೆ ತೆಗೆದುಕೊಂಡು ಹೋದರು. ಹಿಂದಕ್ಕೆ ವಿಜಾಪುರ ಜಿಲ್ಹೆಯ ಪಟ್ಟಣಶೆಟ್ಟಿ ಎಂಬ ಕನ್ನಡ ಶಿಕ್ಷಕರು ಧಾರವಾಡಕ್ಕೆ ಟ್ರೇನಿಂಗ ಕಾಲೇಜಿಗೆ ಬಂದಾಗ, ವಾರದ ಊಟಕ್ಕೆ ನಮ್ಮ ಮನೆಗೆ ಬರುತ್ತಿದ್ದರು. ಅವರು ಸಹ ನಮ್ಮ ಕೂಡ ಜೇವರಗಿಗೆ ಬಂದರು. ಆಗ ಶಾರದಮ್ಮನು ಗುಂಡು ಹಾರಿಸಿಕೊಂಡ ಸ್ಥಳಗಳನ್ನು ನೋಡಲಾಗಿ, ಗುಂಡು ಆಕೆಯ ಬೆನ್ನೊಳಗಿಂದ ಪಾರಾಗಿ ಹಿಂದಿನ ಗೋಡೆಗೆ ಹೋಗಿ ಬಡಿದದ್ದನ್ನು ತೋರಿಸಿದರು. ಆ ಗ್ರಾಮದ ಹತ್ತರ ಒಂದು ದೊಡ್ಡ ಹಳ್ಳ ಹರಿದಿದೆ. ಅದರ ಊರ ಕಡೆಯ ಮಗ್ಗಲಿಗೆ ಶ್ರೀ ಅಖಂಡೇಶ್ವರನ ಮಠವಿದೆ. ಎರಡನೇ ಮಗ್ಗುಲಿಗೆ ಇರುವ ಅಲ್ಲಿಯ ಪಾಟೀಲರ ತೋಟದಲ್ಲಿ ನಮ್ಮ ಪಾಟೀಲರು ಶಾರದಮ್ಮನ ದಫನ ಮಾಡಿ, ಆ ಸ್ಥಳದ ಮೇಲೆ ಒಂದು ಚಂದವಾದ ಸಮಾಧಿಯನ್ನು ಕಟ್ಟಿಸಿದ್ದಾರೆ. ಅದರ ಮಗ್ಗುಲಿಗೆ ಒಂದು ದೊಡ್ಡ ಬಾವಿಯ ದಂಡೆಯ ಮೇಲೆ ಬಹಳ ಹಳೆ ದೊಡ್ಡ ಮರವು ಅದೆ. ಸ್ಥಳವು ನೋಡಲಿಕ್ಕೆ ಬಹಳ ರಮ್ಯವಾಗಿದೆ. ಸಮಾಧಿಗೆ ನಮ್ಮ ಶ್ರದ್ಧಾಂಜಲಿಯನ್ನು ಅರ್ಪಿಸಿ, ಅಲ್ಲಿಯ ಶ್ರೀ ಬಸಪ್ಪ ಗುರುಮೂರ್ತಿಯವರ ಆತಿಥ್ಯವನ್ನು ಹೊಂದಿ ತಿರುಗಿಬಂದೆವು.

ನನ್ನ ಗಂಡು ಮಕ್ಕಳಲ್ಲಿ ಹಿರಿಯನಾದ ಸಿದ್ದಪ್ಪನು ೧೯೨೭ನೇ ಇಸ್ವಿಯಿಂದ ಗೋಕಾವಿಯಲ್ಲಿ ತನ್ನ ಡಾಕ್ಟರ ಉದ್ಯೋಗವನ್ನು ನಡೆಸುತ್ತಿದ್ದನೆಂದು ಈ ಮೊದಲೇ ಹೇಳಿದೆ. ಗಂಗಾಧರನು ಸಹ ೧೯೩೪ ನೇ ಇಸ್ವಿಯ ಏಪ್ರಿಲದಲ್ಲಿ ಸರಕಾರಿ ನವಕರಿಯಲ್ಲಿ ಸೇರಿದನು. ಇವರ ಮತ್ತು ದಾನಪ್ಪನ ಲಗ್ನಗಳು ಈ ಮೊದಲೇ ಆಗಿದ್ದವು. ಇವರಲ್ಲಿ ಸ್ವಾತಂತ್ರ್ಯದಿಂದ ಇರುವ ವೃತ್ತಿಯು ಕಂಡು ಬಂದದ್ದರಿಂದ ಆಗಿನ ಕಾಲಕ್ಕೆ ಗಳಿಸಿರುವ ಎಲ್ಲ ಆಸ್ತಿಯನ್ನು ೧೯೩೪ನೇ ಇಸ್ವಿಯ ನವ್ಹಂಬರ ತಿಂಗಳಲ್ಲಿ ನನ್ನ ನಾಲ್ಕು ಮಂದಿ ಮಕ್ಕಳಲ್ಲಿ ಹಂಚಿ ಹಾಕಿದೆನು. ಈ ಬಗ್ಗೆ ಮೃತ್ಯುಪತ್ರಗಳನ್ನು ಮೇಲಿಂದ ಮೇಲೆ ಮಾಡುತ್ತ ಬಂದಿರುತ್ತೇನೆ. ಇವರಲ್ಲಿ ಸಿದ್ದಪ್ಪನೊಬ್ಬನೆ ಗೋಕಾವಿಯಲ್ಲಿದ್ದು, ಅವನಿಗೆ ಕೊಟ್ಟ ಆಸ್ತಿಯ ಉಪಭೋಗವನ್ನು ಮಾಡುತ್ತ ಬಂದನು. ನಾನು ಮುಖ್ಯವಾಗಿ ಧಾರವಾಡದಲ್ಲಿರುತ್ತಿದ್ದು ಉಳಿದ ಆಸ್ತಿಯ ವ್ಯವಸ್ಥೆಯನ್ನು ನಾನೇ ನೋಡಹತ್ತಿದೆನು. ಇದೇ ಕುಟುಂಬದ ಮುಖ್ಯಸ್ಥಳವಾಗಿ ಉಳಿದವರೆಲ್ಲರು ಇಲ್ಲಿಯೆ ಇರುತ್ತಿದ್ದು, ಇಲ್ಲಿಂದಲೇ ತಮ್ಮ ಕೆಲಸಗಳಿಗೆ ಹೋಗುತ್ತಿದ್ದರು. ಸಿದ್ದಪ್ಪನು ಸಹ ಪ್ರಸಂಗಾನುಸಾರ ಇಲ್ಲಿ ಬರುತ್ತಿದ್ದನು. ಅವನ ಎರಡನೇ ಮಗಳು ಗೋಕಾವಿಯಲ್ಲಿ ಹುಟ್ಟಿ ೩ ತಿಂಗಳಿಗೆ ತೀರಿಕೊಂಡಿತು. ೩ನೇ ಮಗಳಾದ ಚೆನಬಸವ್ವ(ಬೇಬಿ)ನು ಧಾರವಾಡದ ಸಿವ್ಹಿಲ್ ಆಸ್ಪತ್ರೆಯಲ್ಲಿಯೇ ೧೯೩೨ನೇ ಜೂನದಲ್ಲಿ ಹುಟ್ಟಿದಳು. ಮುಂದೆ ೧೯೩೪ನೇ ಇಸ್ವಿಯ ತಿಂಗಳಲ್ಲಿ ಮತ್ತೊಮ್ಮೆ ಆಸ್ಪತ್ರೆಗೆ ಕಳಿಸಲ್ಪಟ್ಟಾಗ ಕೂಸು ಹೊರಗೆ ಬಾರದೆ ಇದ್ದುದರಿಂದ ಅದನ್ನು ಕೊಯ್ದು ಹೊರಗೆ ತೆಗೆದರು. ಆಕೆ ಅಲ್ಲಿ ಸುಮಾರು ಒಂದು ತಿಂಗಳು ಉಪಚಾರ ಹೊಂದಿದರೂ ನೆಟ್ಟಗಾಗದೆ, ವಿಷವು ಬಲಗಾಲಿನ ಮೊಳಕಾಲಿನ ಕೆಳಗೆ ಹಬ್ಬಿ ಹದಡದ ವರೆಗೆ ಕೊಳೆಯಹತ್ತಿತು. ಆಗ ಆಕೆಯನ್ನು ಸಿದ್ದಪ್ಪನು ವೆಂಗುರ್ಲಿಯ ಮಿಶನ್ ದವಾಖಾನೆಗೆ ತೆಗೆದುಕೊಂಡು ಹೋದನು. ಅಲ್ಲಿ ಕಾಲಿಗೆ ಶಸ್ತ್ರ ಕ್ರಿಯೆಯನ್ನು ಮಾಡಲಾಗಿ ಬಹಳ ಅಶಕ್ತಳಾಗಿ ಉಳಿಯುವ

ಸಂಭವ ಕಾಣಲಿಲ್ಲ. ಹೊಸ ರಕ್ತವನ್ನು ಹಾಕಬೇಕಾಯಿತು. ಸಿದ್ದಪ್ಪನ ರಕ್ತವು ಆಕೆಯ ರಕ್ತಕ್ಕೆ ಮೇಳ ಬಿದ್ದಿದ್ದರಿಂದ ಅವನ ಸುಮಾರು ೮ ಅಂಶ ರಕ್ತವನ್ನು ಆಕೆಗೆ ಹಾಕಿದರು. ಅಲ್ಲಿ ೩ ತಿಂಗಳ ಉಪಚಾರ ಹೊಂದಿ ಸುದೈವದಿಂದ ನೆಟ್ಟಗಾದಳು. ಅವರ ಕೂಡ ನನ್ನ ತಮ್ಮ ರೇವಪ್ಪನು ಸಹ ಹೋಗಿದ್ದನು. ನಾನೂ ಅಲ್ಲಿ ಹೋಗಿ ಕೆಲವು ದಿವಸ ಇದ್ದೆನು. ನನ್ನ ಪ್ರಕೃತಿಯನ್ನು ಅಲ್ಲಿ ತೋರಿಸಿದೆ. ಅಲ್ಲಿಯ ಪದ್ಧತಿ ಪ್ರಕಾರ ಡಾಕ್ಟರರು ಮಲಮೂತ್ರ ರಕ್ತ ಮುಂತಾದ ಎಲ್ಲವನ್ನೂ ಪರೀಕ್ಷಿಸಿ, ಕಡೆಗೆ ಯಕೃತ್ತಿನ ದೋಷದ ಬಗ್ಗೆ ಶಸ್ತ್ರಕ್ರಿಯೆಯನ್ನು ಮಾಡಬೇಕಾಗುತ್ತದೆಯೆಂದು ಹೇಳಿದರು. ಅದು ನನಗೆ ಸರಿ ತೋರದ್ದರಿಂದ ಕೂಡಲೆ ಬೆಳಗಾಂವಿಗೆ ಬಂದು ಡಾ. ಹೆರೇಕರ ಅವರನ್ನು ಕೇಳಲಾಗಿ, ಅವರು ಶಸ್ತ್ರಕ್ರಿಯೆಯ ಅವಶ್ಯಕತೆಯು ಇಲ್ಲವೆಂದು ಹೇಳಿದರು. ಆ ಪ್ರಸಂಗವು ತಪ್ಪಿ ಹೋಯಿತು.

ಸಿದ್ದಪ್ಪನು ಗೋಕಾವಿಗೆ ತಿರುಗಿ ಬಂದು ಮೊದಲಿನಂತೆ ತನ್ನ ಉದ್ಯೋಗವನ್ನು ನಡೆಸಿದನು. ಬ್ರಿಟಿಶ್ ಪದ್ಧತಿಯ ಪ್ರಕಾರ ಕೆಲಸ ಮಾಡುವ ಡಾಕ್ಟರರು Practitioners Act ಎಂಬ ಕಾಯಿದೆಗೆ ಅನುಸರಿಸಿ ತಮ್ಮ ಕೆಲಸವನ್ನು ಮಾಡಬೇಕಾಗುತ್ತದೆ. ವಿಶ್ವವಿದ್ಯಾಲಯದವರು ಅಥವಾ ಸರ್ಕಾರದವರು ಈ ಬಗ್ಗೆ ಇಟ್ಟ ಹೆಚ್ಚಿನ ಪರೀಕ್ಷೆಯನ್ನು ಪಾಸಾದವರ ಹೆಸರುಗಳನ್ನು ಮಾತ್ರ ಈ ರಜಿಸ್ಟರದಲ್ಲಿ ಹಾಕುತ್ತಾರೆ. ಪಾಸಾಗದೆ ಇದ್ದವರ ಹೆಸರುಗಳನ್ನು ಇದರಲ್ಲಿ ಹಾಕುವುದಿಲ್ಲ. ಇತರ ರೀತಿಯಿಂದ ಅವರು ಯೋಗ್ಯ ಕಂಡರೆ ಅವರ ಒಂದು ಪಟ್ಟಿಯನ್ನು ಇಟ್ಟು, ಅದರಲ್ಲಿ ಅವರ ಹೆಸರುಗಳನ್ನು ಸೇರಿಸುತ್ತಾರೆ. ಸಿದ್ದಪ್ಪನು ಪರೀಕ್ಷೆಯಲ್ಲಿ ಪಾಸಾಗದೆ ಇರುವುದರಿಂದ ಅವನ ಹೆಸರನ್ನು ಈ ಪಟ್ಟಿಯಲ್ಲಿ ಹಾಕಿದರು. ಇಂಥವರಿಗೆ ಅಸಿಸ್ಟೆಡ್ ಪ್ರ್ಯಾಕ್ಟಿಶನರ್ ಎಂದು ಅನ್ನುತ್ತಾರೆ. ಇಂಥ ಪಟ್ಟಿಯು ೧೯೪೧ನೇ ಇಸ್ವಿಗೆ ತಯಾರಾಯಿತು. ಮೇಲೆ ಹೇಳಿದ ಕಾಯಿದೆ ಮತ್ತು ಈ ಉದ್ಯೋಗಕ್ಕೆ ಸಂಬಂಧಿಸಿದ ಬೇರೆ ಕಾಯಿದೆಗಳ ವಿರುದ್ಧ ಯಾರಾದರೂ ನಡೆದರೆ, ಅವರು ಅಪರಾಧಕ್ಕೆ ಪಾತ್ರರಾಗಿ ಶಿಕ್ಷೆಹೊಂದುತ್ತಾರೆ. ಆದರೆ ಇವು ಅಮಲಿನಲ್ಲಿ ಬರುವುದು ಬಹಳ ಕಡಿಮೆ.

ಸಿದ್ದಪ್ಪನು ಬಹಳ ಸಂಶಯಯುಕ್ತ ಮತ್ತು ಮೆತ್ತನ್ನ ಸ್ವಭಾವದವನು. ಕೆಲವು ರೋಗಗಳಿಗೆ ವಿಷಕಾರ ಔಷಧಿಗಳನ್ನು ಉಪಯೋಗಿಸಬೇಕಾಗುತ್ತದೆ. ಅವುಗಳನ್ನು ಅಸಿಸ್ಟೆಡ್ ಪ್ರ್ಯಾಕ್ಟಿಶನರರು ಉಪಯೋಗಿಸಲಿಕ್ಕೆ ಪ್ರತಿಬಂಧವಿರುತ್ತದೆ.

ಸಿದ್ದಪ್ಪನು ಇಂಥವುಗಳನ್ನು ಉಪಯೋಗಿಸಿರುವುರಿಂದ ತನ್ನನ್ನು ಅಪರಾಧಕ್ಕೆ ಗುರಿ ಮಾಡುತ್ತಾರೆಂಬ ಸಂಶಯ ಉಂಟಾಗಿ, ೧೯೪೨ನೇ ಇಸ್ವಿಯಲ್ಲಿ ಅವನು ಉದ್ಯೋಗ ಮಾಡುವುದನ್ನು ಬಿಟ್ಟು ಮನೆಯಲ್ಲಿ ಅಡಗಿಕೊಂಡು ಕೂತು, ತನ್ನನ್ನು ಯಾರಾದರೂ ಕೇಳಲಿಕ್ಕೆ ಬಂದರೆ ಊರಿಗೆ ಹೋಗಿರುತ್ತಾನೆಂದು ತಿಳಿಸಲಿಕ್ಕೆ ತನ್ನ ಹೆಂಡತಿಗೆ ಹೇಳಿ, ಊಟ ಸಹ ಮಾಡದೆ ಒಮ್ಮೊಮ್ಮೆ ಬರೇ ಚಹ ಕುಡಿದು ಸುಮಾರು ೮-೧೦ ದಿವಸ ಕಳೆದ ಮೇಲೆ ಚನ್ನವ್ವನು ಗಾಬರಿಯಾಗಿ ಧಾರವಾಡಕ್ಕೆ ನನಗೆ ಹೇಳಿ ಕಳಿಸಿದನು. ನಾನು ಕೂಡಲೇ ಹೋಗಿ ನೋಡುವಷ್ಟರಲ್ಲಿ ದೇವರ ಮನೆಯಲ್ಲಿ ಕೂತಿದ್ದು ಮಾತಾಡಲಿಕ್ಕೆ ಬರದಷ್ಟು ಸಹ ಅಶಕ್ತನಾಗಿದ್ದುದು ಕಂಡುಬಂತು. ನಾನು ಅವನನ್ನು ಹೊರಗೆ ಕರೆದುಕೊಂಡು ಬಂದು ,ಜನರಿಗೆ ಅವನು ಈಗ ಊರಿಂದ ಬಂದನೆಂದು ಹೇಳಿ ಅವನನ್ನು ಕೂಡಲೇ ಧಾರವಾಡಕ್ಕೆ ಕರೆದುಕೊಂಡು ಹೋದೆನು. ಇಂಥ ಕಾಯಿದೆಗಳು ಅಮಲಿನಲ್ಲಿ ಬರುವುದು ಬಹಳ ಅಪರೂಪ, ನಿನ್ನಂಥವನನ್ನು ಯಾರೂ ಕೋರ್ಟಿಗೆ ಒಯ್ಯುವುದಿಲ್ಲ. ಒಂದು ವೇಳೆ ಒಯ್ದರೂ ಹೆಚ್ಚಾದರೆ ತುಸು ದಂಡಮಾಡಿ ಬಿಡುತ್ತಾರೆ. ಮೊದಲಾಗಿ ಅವನಿಗೆ ಸಮಾಧಾನ ಹೇಳಿ, ತಿರುಗಿ ಗೋಕಾವಿಗೆ ಕಳಿಸಿದೆ. ಮತ್ತೆ ಅವನು ಮೆಲ್ಲಗೆ ತನ್ನ ಉದ್ಯೋಗವನ್ನು ನಡೆಸುತ್ತ ಹೋದರೂ ಅವನ ಮನಸ್ಸಿನ ಸಂಶಯವು ಹಾಗೇ ಉಳಿಯಿತು.

ಅವನ ಸ್ಥಿತಿಯು ನೆಟ್ಟಗೆ ಅಲ್ಲಿ ಉಳಿಯುವುದು ಕಾಣದ್ದರಿಂದ ಅವನನ್ನು ಹೆಂಡತಿ ಮಗನ ಸಹಿತ ಧಾರವಾಡದಲ್ಲಿರಲಿಕ್ಕೆ ೧೯೪೫ನೇ ನವ್ಹೆಂಬರ ತಿಂಗಳಲ್ಲಿ ಕರೆದುಕೊಂಡು ಬಂದೆನು. ಅವರು ೧೯೪೭ನೇ ಇಸ್ವಿಯ ಜೂನ ತಿಂಗಳದ ವರೆಗೆ ಇಲ್ಲಿ ಉಳಿದು ಪುನಃ ಹೋದರು. ಆದರೆ ಅವನ ಮನಸ್ಸಿನ ಸಂಶಯವು ಕಡೆತನಕ ಹೋಗದೆ ಬರೆ ನೆವಕ್ಕಾಗಿ ತನ್ನ ಉದ್ಯೋಗವನ್ನು ಮಾಡುತ್ತ ನಡೆದನು. ಆಗಿನಕಾಲಕ್ಕೆ ಇವನು ನನಗೆ ಬರೆದ ಪತ್ರಗಳನ್ನು ನೋಡಿದರೆ ಅರ್ಥವೇ ಆಗುವುದಿಲ್ಲ. ಕಡೆಗೆ ಇವನಿಗೆ ಉತ್ತರವನ್ನು ಕೊಡುವುದೇ ಬಿಡಬೇಕಾಯಿತು. ಗೋಕಾವಿಗೆ ಬರಲಿಕ್ಕೆ ನನಗೆ ಮೇಲಿಂದ ಮೇಲೆ ಅವನು ಬರೆಯುತ್ತಿದ್ದನು. ಅಲ್ಲಿ ಹೋಗಿ ಏನೂ ಉಪಯೋಗಿವಿಲ್ಲೆಂದು ಅಲ್ಲಿ ಹೋಗುವುದನ್ನು ಬಿಟ್ಟಿದ್ದೆನು.

ಇಷ್ಟರಲ್ಲಿ ಅವನ ಹೆಂಡತಿಗೆ ಹೊಟ್ಟೆನೋವು ಉಂಟಾಗಿ ಹುಕ್ಕೇರಿ ರೋಡ ದವಾಖಾನೆಗೆ ಆಕೆಯನ್ನು ತೆಗೆದುಕೊಂಡು ಹೋಗಿ ,ಅಲ್ಲಿ ಉಪಚಾರ ಮಾಡಿಸಿಕೊಂಡು ತಿರುಗಿ ಕರೆದುಕೊಂಡು ಬಂದನು. ಆಗಿನ ಕಾಲಕ್ಕೆ ಆಕೆಯ ತಾಯಿಯನ್ನು ಮತ್ತು ಒಮ್ಮೊಮ್ಮೆ ಪಾರಕ್ಕನನ್ನು ಮತ್ತು ಬೇಬಿಯನ್ನು ಕರೆಯಿಸಿದ್ದನು. ತನ್ನ ಉದ್ಯೋಗದಿಂದ ಗಳಿಕೆ ಬರುವದು ಅಷ್ಟುಕಷ್ಟೇ. ಇತ್ತ ಖರ್ಚು ಬಹಳ ನಡೆಯಿತು. ಇದರ ಸಲುವಾಗಿ ನಾನು ಸುಮಾರು ೫೦೦ ರೂ. ಕೊಡಬೇಕಾಯಿತು. ಇದು ೧೯೫೨ ಮತ್ತು ೧೯೫೩ ನೇ ಇಸ್ವಿಯಲ್ಲಿ.

ಮಳೆಗಾಲದಲ್ಲಿ ಮತ್ತು ಚಳಿಗಾಲದಲ್ಲಿ ಧಾರವಾಡದಲ್ಲಿ ನನಗೆ ಬಹಳ ಚಳಿ ಆಗುವುದರಿಂದ ಗೋಕಾವಿಯಲ್ಲಿ ಇರಲಿಕ್ಕೆ ಹೋಗುತ್ತಿದ್ದೆನು. ೧೯೫೨ನೇ ಇಸ್ವಿಯಲ್ಲಿ ನಾನು ಅಲ್ಲಿ ಹೋದಾಗ ಚನ್ನವ್ವನು ಹುಕ್ಕೇರಿ ರೋಡ ಆಸ್ಪತ್ರೆಯಿಂದ ತಿರುಗಿ ಬಂದಿದ್ದು, ಏನೂ ಕೆಲಸ ಮಾಡಲಿಕ್ಕೆ ಶಕ್ತಿಯಿರದೆ ಪೂರ್ಣವಿಶ್ರಾಂತಿಯನ್ನು ಹೊಂದುತ್ತಿದ್ದಳು. ಅವಳ ಉಪಚಾರಕ್ಕಾಗಿ ಆಕೆಯ ತಾಯಿ ಮತ್ತು ಇಬ್ಬರು ಮಕ್ಕಳು ಅಲ್ಲಿಯೇ ಇದ್ದರು. ಆಕೆಗೆ ಆರಾಮವೆನಿಸ ಹತ್ತಿದ ಹಾಗೆ, ಆಕೆಯ ತಾಯಿ ಮತ್ತು ಒಬ್ಬ ಮಗಳು ತಿರುಗಿ ಹೋದರು. ಆಕೆಯಿಂದ ಶ್ರಮ ಬೀಳುವಂಥ ಯಾವ ಕೆಲಸವೂ ಮುಂದೆ ಆಗುವಂತೆ ಇದ್ದಿದ್ದಿಲ್ಲ. ಆದುದರಿಂದ ಮರುವರ್ಷ ನಾನು ಅಲ್ಲಿ ಹೋಗದೆ ಗಂಗಾಧರನು ಸೋಲ್ಲಾಪುರದಲ್ಲಿಯಿದ್ದುದರಿಂದ ಅಲ್ಲಿ ಹೋದೆನು. ಸಿದ್ದಪ್ಪನು ತನಗೆ ತಿಳಿದ ಹಾಗೆ ಪತ್ರಗಳನ್ನು ಬರೆಯುತ್ತಿದ್ದನು. ಅವುಗಳಲ್ಲಿ ತಾನು ಎರಡನೆಯವರ ಕಡೆಯಿಂದ ಮಾಡಿದ ಸಾಲದ ಬಗ್ಗೆಯೂ ಬರೆಯುತ್ತಿದ್ದನು. ಇದನ್ನು ತೀರಿಸಲಿಕ್ಕೆ ದಲಾಲನಿಂದ ತೆಗೆದುಕೊಂಡ ಆಸ್ತಿಯನ್ನು ಮಾರಬೇಕೆಂಬ ಪತ್ರ ಬರೆದರೂ ಚಿ. ಮಲ್ಲಪ್ಪ ಮತ್ತು ಶ್ರೀ ಸಾಂಬಶಿವಪ್ಪ ಇವರಿಂದ ಹೇಳಿಸಿದರೂ ಸಿದ್ದಪ್ಪನು ಒಪ್ಪಲಿಲ್ಲ. ಆಮೇಲೆ ನನ್ನಿಂದ ಆವ ತರದ ಹಣದ ಸಹಾಯ ದೊರೆಯುವುದಿಲ್ಲವೆಂದು ಮತ್ತು ನಾನು ಅಲ್ಲಿ ಬರುವುದಿಲ್ಲೆಂದು ಖಂಡಿತವಾಗಿ ಬರೆದು, ಅವನಿಗೆ ಮತ್ತು ಚನ್ನವ್ವನಿಗೆ ತಿಳಿಸಿದೆನು. ಆದರೂ ೧೯೫೩ನೇ ಇಸ್ವಿಯ ಮಾರ್ಚ ತಿಂಗಳ ಸುಮಾರಕ್ಕೆ ನಾನು ಧಾರವಾಡಕ್ಕೆ ಹೋಗುವ ಮುಂಚೆ ಅಲ್ಲಿಯ ಪರಿಸ್ಥಿತಿಯನ್ನು ತಿಳಿದುಕೊಳ್ಳುವ ಬಗ್ಗೆ ಗೋಕಾವಿಗೆ ಹೋದೆನು. ಚನ್ನವ್ವನ ಪ್ರಕೃತಿಯು ಸಾಧಾರಣ ನೆಟ್ಟಗಿತ್ತು. ಸಿದ್ದಪ್ಪನು ತನ್ನ ಉದ್ಯೋಗವನ್ನು ಪೂರಾ ನಿಲ್ಲಿಸಿಬಿಟ್ಟಿದ್ದನು. ಅಂಥ ಕಾರಣಗಳನ್ನೆಲ್ಲ ಅವನಿಂದ ತಿಳಿದುಕೊಂಡು, ಅವನ ಮನಸ್ಸಿನೊಳಗಿನ ಎಲ್ಲ ಸಂಶಯಗಳ ನಿವಾರಣೆ ಮಾಡಿದೆನು ಮತ್ತು ಮಲ್ಲಪ್ಪನ ಸಮಕ್ಷಮ ಚನ್ನವ್ವನಿಗೆ ಸಿದ್ದಪ್ಪನು ಏನೂ ಕೆಲಸ ಮಾಡಲಿ ಬಿಡಲಿ, ನೀನು ಮನೆಯ ಎಲ್ಲ ವ್ಯವಸ್ಥೆಯನ್ನು ಮಲ್ಲಪ್ಪನ ಸಹಾಯದಿಂದ ನೋಡಿಕೊಂಡು ಹೋಗಬೇಕು ಮತ್ತು ಮನೆಯ ಪೂರ್ವ ಕಡೆಯ ಸಣ್ಣ ಭಾಗದಲ್ಲಿ ಇದ್ದು, ದೊಡ್ಡ ಭಾಗವನ್ನು ದುರಸ್ತ ಮಾಡಿಸಿ ಬಾಡಿಗೆಯಿಂದ ಕೊಡಬೇಕು. ಇದರ ಮತ್ತು ಪೇಟೆಯಲ್ಲಿರುವ ಅಂಗಡಿಯ ಬಾಡಿಗೆ ಮತ್ತು ಹೊಲಗಳ ಲಾವಣಿ ಹಣದಿಂದ ಮನೆಯ ಖರ್ಚು ಸಾಗಿಸಬೇಕು. ದಲಾಲನ ಕಟ್ಟಡವನ್ನು ಮಾರಾಟಕ್ಕೆ ಹಚ್ಚಿ ಸಾಲ ತೀರಿಸಬೇಕು. ಮೊದಲಾಗಿ ಹೇಳಿ ಧಾರವಾಡಕ್ಕೆ ಬಂದೆನು.

ಆಮೇಲೆ ಕಿತ್ತೂರ ಸಿದ್ದಪ್ಪನು ಅಲ್ಲಿ ಬಂದು, ತನ್ನ ಮಗ ಗುರುಬಸಪ್ಪ (ಬಾಬು) ನ ಹೊರತಾಗಿ ಎರಡನೇ ಮಕ್ಕಳಿಗೆ ಕನ್ಯಾ ವರಗಳು ಗೊತ್ತಾಗದೆ ಇದ್ದುದರಿಂದ ಒಂದೇ ಲಗ್ನವನ್ನು ತಾನು ಮಾಡಿಕೊಡುವುದು ಬಹಳ ದುಬಾರಿ ಆಗುತ್ತಿರುವುದರಿಂದ, ನಿಮ್ಮಲ್ಲಿಯೇ ಲಗ್ನವಾಗಬೇಕೆಂದು ಹೇಳಿಕೊಂಡದ್ದರಿಂದ ಅದಕ್ಕೆ ನಾನು ಒಪ್ಪಿ, ಆ ಲಗ್ನವು ಧಾರವಾಡದಲ್ಲಿ ಮೇ ೨೭ ನೇ ತಾರೀಖಿಗೆ ಆಗಬೇಕೆಂದು ಗೊತ್ತಾಯಿತು. ಆ ಕಾಲಕ್ಕೆ ಗೋಕಾವಿಯಿಂದ ಸಿದ್ದಪ್ಪನ ಮನೆಯವರೆಲ್ಲರು ಮತ್ತು ಮಲ್ಲಪ್ಪನು ಬಂದರು. ಲಗ್ನ ತೀರಿದ ಮೇಲೆ ಸಿದ್ದಪ್ಪನನ್ನು ಬಿಟ್ಟು ಉಳಿದವರೆಲ್ಲರು ಗೋಕಾವಿಗೆ ತಿರುಗಿ ಹೋದರು. ಆಗ ದಲಾಲನ ಕಟ್ಟಡಕ್ಕೆ ಯೋಗ್ಯ ಬೆಲೆಯು ಇರುವಂತಿದ್ದಿಲ್ಲ. ಅಲ್ಲಿಯ ಬ್ಯಾಂಕಿನಲ್ಲಿ ವತ್ತಿ ಇಟ್ಟ ದಾಗೀನೆಗಳನ್ನು ಮಾರಿ ಎಲ್ಲ ಸಾಲ ತೀರಿಸಬೇಕೆಂದು ಚನ್ನವ್ವನ ಮನಸ್ಸಿನಲ್ಲಿ ಬಂದದ್ದು ಯೋಗ್ಯ ತೋರಿದ್ದರಿಂದ ಹಾಗೆ ಮಾಡಬೇಕೆಂದು ನಾನು ತಿಳಿಸಿದೆನು. ಅದರಂತೆ ಮಾಡಿ ಚನ್ನವ್ವನು ಶಂಕರನು ಸಹಿತ ಅಲ್ಲಿಯ ವ್ಯವಸ್ಥೆಯನ್ನು ಮಾಡಿಕೊಂಡಿದ್ದಾಳೆ. ಗಂಗಾಧರನ ಮನೆಯವರು ಮತ್ತು ನಾನು ಜೂನ ತಿಂಗಳಲ್ಲಿ ಸೊಲ್ಲಾಪುರಕ್ಕೆ ಬರುವಾಗ ಸಿದ್ದಪ್ಪನು ಸಹ ನಮ್ಮ ಕೂಡ ಬಂದು, ಇಲ್ಲಿ ಆರಾಮದಿಂದ (ತಾ. ೧-೮-೧೯೫೪)ಇದ್ದಾನೆ.

ಉಳಿದ ಮಕ್ಕಳ ವಿಷಯವಾಗಿ ಇಲ್ಲಿ ಹೆಚ್ಚು ಬರೆಯುವ ಅವಶ್ಯಕತೆ ಇಲ್ಲ. ದಾನಪ್ಪನು ಬಹಳ ಮಹತ್ವಾಕಾಂಕ್ಷಿ. ಬಿಡುವಿಲ್ಲದೆ ಒಂದೇ ಸವನೆ ಕೆಲಸಮಾಡುತ್ತಾನೆ. ಅವನಿಗೆ ಈಗ ೪೭ ವರ್ಷ. ಈ ಭಾಗದಲ್ಲಿ ಅನುಕೂಲ ಪರಿಸ್ಥಿತಿಯಲ್ಲದಿರುವುದರಿಂದಲೋ ಅವನ ದುರ್ದೈವದಿಂದಲೋ ಅವನ ಆಕಾಂಕ್ಷೆಯು ಪೂರ್ಣವಾಗುವ ಚಿಹ್ನೆ ಕಾಣಲೊಲ್ಲದು. ಅವನ ಅತ್ತೆಯು ಮೂಲವ್ಯಾಧಿಯಿಂದ ಬಳಲುತ್ತಿದ್ದಾಳೆ. ಅವನ ಮಾವನು ಸಹ ಅಶಕ್ತನು. ಅವರ ಉಪಚಾರಕ್ಕಾಗಿ ಮೇಲಿಂದ ಮೇಲೆ ಯಾರಾದರೂ ಬೈಲಹೊಂಗಲಕ್ಕೆ ಹೋಗುವ ತೊಂದರೆಯನ್ನು ತಪ್ಪಿಸುವುದಕ್ಕಾಗಿ ಅವರನ್ನು ಇಲ್ಲಿಯೇ ತಮ್ಮ ಕೂಡ ಇಟ್ಟುಕೊಂಡರೂ ಅವನಿಗೆ ತ್ರಾಸು ಕಡಿಮೆಯಾಗದೆ ಮತ್ತಿಷ್ಟು ಹೆಚ್ಚಾಗಿದೆ. ಅವನು ನಡೆಸಿರುವ ಕಲಾಶಾಲೆಯಿಂದಲೂ ಜನರಿಗೆ ಏನೂ ಲಾಭವಾಗುವುದಿಲ್ಲ. ಇಂಥ ಪ್ರಸಂಗದಲ್ಲಿ ದೇವರೇ ಅವನ ಅಡಚಣೆಗಳನ್ನು ದೂರಮಾಡಬೇಕು.

ಗಂಗಾಧರನು ಸೌಮ್ಯ ಮತ್ತು ಸರಳ ಸ್ವಭಾವದವನು. ಅವನು ವಕೀಲಿವೃತ್ತಿಯನ್ನು ಮುಂದುವರಿಸಿದ್ದರೆ ನ್ಯಾಯಖಾತೆಯಲ್ಲಿ ಅವನಿಗೆ ಕೆಲಸ ದೊರೆಯುವ ಸಂಭವವಿತ್ತು. ಹಾಗಾಗಿದ್ದರೆ ಅವನ ಜೀವಿತವು ಸುಗಮವಾಗಿ ಸಾಗಬಹುದಾಗಿತ್ತು. ಆದರೆ ದೇವರ ಸಂಕೇತವೇ ಬೇರೆಯಿತ್ತು. ಅಬಕಾರೀ ಖಾತೆಯಲ್ಲಿ ಕಳ್ಳತನದಿಂದ ಸೆರೆ ತಯಾರಮಾಡಿ ಕುಡಿಯುವ ಜನರನ್ನು ಶೋಧಿಸಿ ಶಿಕ್ಷೆಗೆ ಗುರಿಮಾಡುವ ಒಂದು ವಿಭಾಗವು ಕೆಲವು ದಿವಸಗಳ ಹಿಂದೆ ಅದರಲ್ಲಿತ್ತು. ಈ ಶೋಧ ಮಾಡುವ ಕೆಲಸವು ಗಂಡಾಂತರದಿಂದ ಕೂಡಿದ್ದು. ಇಂಥದೊಂದು ಪ್ರಸಂಗವು ೧೯೪೭ನೇ ಜನವರಿ ತಿಂಗಳದಲ್ಲಿ ಅವನು ರಾಣೇಬೆನ್ನೂರಿನಲ್ಲಿರುವಾಗ್ಗೆ ಸಂಭವಿಸಿತು. ಒಂದು ರಾತ್ರಿ ಕಳ್ಳತನದಿಂದ ಸೆರೆ ತಯಾರ ಮಾಡುವ ಒಂದು ತಂಡವನ್ನು ಶೋಧಿಸಲಿಕ್ಕೆ ಹೋದ ಶಿಪಾಯಿಯನ್ನು ಅವರು ಹಿಡಿದು ಕಟ್ಟಿಹಾಕಿದರು. ಇವನು ಬೇರೆ ಶಿಪಾಯರ ಕೂಡ ಸಮೀಪದಲ್ಲಿಯೇ ಇದ್ದು, ಅವರು ತಮ್ಮ ಎಲ್ಲ ಸಾಹಿತ್ಯಗಳನ್ನು ತೆಗೆದುಕೊಂಡು ಇಲ್ಲವಾದರು. ಮುಂದೆ ಹೆಚ್ಚಿನ ಸಂಗತಿ ಏನೂ ನಡೆಯದಿದ್ದರೂ ಸರಕಾರದಿಂದ ಏನಾದರೂ ದೋಷಾರೋಪಣೆ ಬರಬಹುದೆಂದು ಇವನ ಮನಸ್ಸಿನ ಮೇಲೆ ಪರಿಣಾಮವಾಗಿ ಗಾಬರಿಯಿಂದ ಧಾರವಾಡಕ್ಕೆ ಬರಬೇಕೆಂದು ನನಗೆ ಪತ್ರ ಬರೆದನು. ನಾನು ಅಲ್ಲಿ ಹೋಗಿ ಎಲ್ಲ ಸಂಗತಿಯನ್ನು ತಿಳಿದುಕೊಂಡೆನು. ಮುಂದೆ ಏನೂ ತೊಂದರೆಯಾಗದೆ ಎಲ್ಲ ಶಾಂತವಾಯಿತು.

ಒಮ್ಮೆ ಸ್ಟೇಶನದಿಂದ ಮನೆಗೆ ಹೋಗುವಾಗ್ಗೆ ನನ್ನ ಸ್ಮರಣವು ಇಲ್ಲದಾಗಿ, ಏನೂ ತಿಳಿಯದಾಯಿತು. ಆಗ ಚಳಿಗಾಲವಿರುವುದರಿಂದ ನನಗೆ ಚಳಿಹತ್ತಿ ಕಾಸಿಕೊಳ್ಳಲಿಕ್ಕೆ ಒಲೆಯ ಮುಂದೆ ಕುಳಿತೆನು. ಆಗ ಸಂಪೂರ್ಣ

ಸ್ಮೃತಿ ತಪ್ಪಿ ಗೋಡೆಗೆ ಆತುಕೊಂಡೆನು. ಇದನ್ನು ನೋಡಿ ಸಮೀಪದಲ್ಲಿದ್ದವರು ನನ್ನನ್ನು ಎಬ್ಬಿಸಿದರು. ಕೂಡಲೇ ಎಚ್ಚರಿಕೆಯಾಗಿ ಆರಾಮವೆನಿಸಿತು. ಆದರೂ ಗಂಗಾಧರನು ಡಾಕ್ಟರರನ್ನು ಕರೆಯಿಸಿ ನನ್ನನ್ನು ತೋರಿಸಿದನು. ಅವರಾದರೂ ವಿಶೇಷ ಏನೂ ಇಲ್ಲವೆಂದು ಹೇಳಿ ಹೋದರು.

ಇವನು ೧೯೪೬ ನೇ ಜೂನದ ವರೆಗೆ ಮುಂಬೈಯಲ್ಲಿ ಕೆಲಸಮಾಡುತ್ತಿದ್ದನು. ಆಗ ಇವನ ಹೆಂಡತಿಯು ಇವನ ಬಗ್ಗೆ ಇಲ್ಲದ ಸಂಶಯ ತೆಗೆದುಕೊಂಡು ಬಹಳ ತೊಂದರೆ ಕೊಡಹತ್ತಿದಳು. ನಾನು ಆಗ ಕೆಲವು ದಿವಸ ಅಲ್ಲಿ ಇದ್ದೆನು. ಆಕೆಗೆ ಎಷ್ಟು ತಿಳಿಸಿ ಹೇಳಿದರೂ ಆಕೆಯ ಮನಸ್ಸಿನ ಸಂಶಯವು ಹೋಗದೆ ಆಕೆಯ ಮನಸ್ಸಿನ ಸ್ಥಿತಿಯೂ ಕೆಟ್ಟಿತು. ಇವನಿಗೂ ಬಹಳ ತ್ರಾಸವಾಯಿತು. ಬರುಬರುತ್ತ ಅದು ಕಡಿಮೆಯಾಗುತ್ತ ಹೋಯಿತು.

೧೯೪೭ನೇ ಇಸ್ವಿಯ ಆಗಸ್ಟ ೧೫ನೇ ತಾರೀಖಿಗೆ ಬ್ರಿಟಿಶ್ ಸರ್ಕಾರದವರು ಈ ದೇಶದ ಜನರಿಗೆ ಸ್ವಾತಂತ್ರ್ಯವನ್ನು ವಹಿಸಿಕೊಟ್ಟರು. ಆಗ ಸಹ ನಾನು ಮುಂಬೈಯಲ್ಲಿಯೇ ಇದ್ದೆನು. ಆ ದಿವಸ ಜನರಲ್ಲಿ ಉಂಟಾದ ಉತ್ಸಾಹವನ್ನು ವರ್ಣಿಸುವುದು ಶಕ್ಯವಿಲ್ಲ. ಪಟ್ಟಣವೆಲ್ಲ ಶೃಂಗಾರವಾಗಿತ್ತು. ಸಾಯಂಕಾಲದಲ್ಲಿ ಎಸ್‌ಪ್ಲೇನೇಡ ಮೈದಾನದಲ್ಲಿ ಮುಂಬಯಿಯ ಗವ್ಹರ್ನರರು ಸ್ವಾತಂತ್ರ್ಯದ ಜಾಹೀರನಾಮೆಯನ್ನು ಜನರಿಗೆ ಓದಿ ಹೇಳಿ, ಸೈನ್ಯ ವಿಭಾಗಗಳ ಪರೇಡ ಮಾಡಿಸಿದಾಗ ಜನರು ಅಲ್ಲಿ ಕಿಕ್ಕಿರಿದು ತುಂಬಿದ್ದರು. ಅವರೆಲ್ಲರೂ ತಿರುಗಿ ತಮ್ಮ ತಮ್ಮ ಬಿಡಾರಗಳಿಗೆ ಹೋಗಬೇಕಾದರೆ ಸಮುದ್ರದ ಪ್ರವಾಹದಂತೆ ಕಾಣುತ್ತಿದ್ದರು. ಟ್ರಾಮ, ಬಸ್ಸ, ಟ್ರಕ್ ಮೊದಲಾದ ವಾಹನಗಳಲ್ಲಿ ನಿಲ್ಲಲಿಕ್ಕೆ ಸಹ ಸ್ಥಳ ದೊರೆಯದಾಗಿತ್ತು. ಆದರೂ ಏನೂ ಅಪಘಾತವಿಲ್ಲದೆ ಉತ್ಸವವು ಕೊನೆಗೊಂಡಿತು.

ಗಂಗಾಧರನಿಗೆ ಎಲ್ಲರಿಗಿಂತ ಹೆಚ್ಚು ಜನ ಮಕ್ಕಳಿದ್ದು, ಈಗಿನ ಪರಿಸ್ಥಿತಿಯಲ್ಲಿ ತನ್ನ ಕುಟುಂಬದ ಚರಿತಾರ್ಥವನ್ನು ಸಾಗಿಸುವದು ಸಹ ಕಠಿಣವೆನಿಸುತ್ತದೆ. ಅವನ ಹಿರಿಯ ಮಗನು ಈಗ ಹುಬ್ಬಳ್ಳಿ ಎಂಜಿನಿಯರಿಂಗ ಕಾಲೇಜದಲ್ಲಿ ೨ನೇ ವರ್ಷದ ಅಭ್ಯಾಸಮಾಡುತ್ತಿದ್ದ. ತನ್ನ ಅಭ್ಯಾಸ ಮುಗಿದ ಮೇಲೆ ಒಳ್ಳೇ ಸ್ಥಿತಿಗೆ ಏರಬಹುದೆಂದು ಸದ್ಯಕ್ಕೆ ಸಮಾಧಾನ ಮಾಡಿಕೊಳ್ಳಬಹುದು.

ಸೋಮಶೇಖರನು ತನ್ನ ಪ್ರಪಂಚವನ್ನು ನಡೆಸಿಕೊಂಡು ಹೋಗಹತ್ತಿದ್ದಾನೆ. ಅವನಿಗೆ ಮೂವರು ಗಂಡುಮಕ್ಕಳಿದ್ದು ಇನ್ನೂ ಚಿಕ್ಕವರು. ಅನುಭವವು ಆಗುತ್ತ ಹೋದ ಹಾಗೆ ಎಲ್ಲವೂ ಸರಿಯಾಗಬಹುದು.

## ನಾನು ನೋಡಿದ ಕೆಲವು ಸ್ಥಳಗಳು

೧. **ಶ್ರೀ ಗುಡ್ಡಾಪುರ -** ಇದಕ್ಕೆ ನಾನು ಒಟ್ಟು ೮ ಸಾರೆ ಹೋಗಿದ್ದೆನು. ಮೊದಲಿನ ೪ ಸಾರೆ ಹೋದದ್ದು ಈ ಮೊದಲೇ ಹೇಳಿರುತ್ತದೆ. ೫ನೇ ಸಾರೆ ೧೯೩೭ನೇ ಇಸ್ವಿಯಲ್ಲಿ ಗೋಕಾವಿಯಿಂದ ಒಂದು ಬಸ್ಸನೊಳಗೆ ಹೋಗಿದ್ದೆವು. ಆಮೇಲೆ ೧೯೪೫ನೇ ಇಸ್ವಿಯ ಡಿಸೆಂಬರದಲ್ಲಿ, ನಂತರ, ೧೯೪೮ನೇ ಇಸ್ವಿಯ ಅಕ್ಟೋಬರದಲ್ಲಿ ವಿಜಾಪುರದ ಮಾರ್ಗದಿಂದ ಹೋಗಿದ್ದೆವು. ಈ ೭ನೇ ಸಾರೆ ಶಾರಮ್ಮನು ತನ್ನ ಕೂಸಿನ ಸಹಿತ ನಮ್ಮ ಕೂಡ ಬಂದಿದ್ದಳು. ಕಡೆಯ ಸಾರೆ ೧೯೫೩ನೇ ಇಸ್ವಿಯ ಅಕ್ಟೋಬರ ತಿಂಗಳಲ್ಲಿ ಸೀಗೆಹುಣ್ಣಿಮೆಗೆ ನಾನು ಮತ್ತು ಗಂಗಾಧರನ ಮನೆಯವರಷ್ಟೇ ಸೊಲ್ಲಾಪುರದಿಂದ ಹೋಗಿದ್ದೆವು. ಇವರಲ್ಲಿ ಮನೋಹರ ಮತ್ತು ಉಮೇಶ ಇವರು, ಧಾರವಾಡದಿಂದ ವಿಮಲಾ ಮತ್ತು ಸುರೇಶ ಇವರನ್ನು ಕರೆದುಕೊಂಡು ಬಂದಿದ್ದರು. ವೇಳೆಯ ಅನುಕೂಲತೆಯಿಲ್ಲದ್ದರಿಂದ ಧಾರವಾಡದಿಂದ ಮತ್ತು ಗೋಕಾವಿಯಿಂದ ಯಾರೂ ಬರಲಿಲ್ಲ.

೨. **ಶ್ರೀ ಉಳವಿ -** ನಾನು ಹುಬ್ಬಳ್ಳಿಯಲ್ಲಿ ಕೆಲಸ ಮಾಡುತ್ತಿದ್ದಾಗ ೧೯೧೭ನೇ ಇಸ್ವಿಯ ಫೆಬ್ರುವರಿ ತಿಂಗಳಲ್ಲಿ ನಾನು, ಎಂಜಿನೀಯರ ಹಾಲಯ್ಯನವರು, ಮುಂಡರಗಿಯ ಸೀರಿ ಪುಟ್ಟಪ್ಪ, ಸಾಬೋಜಿ

ಗಂಗಾಧರಪ್ಪನವರು ಮತ್ತು ಚಿಕ್ಕವೀರಮಠದ ಚಿಕ್ಕವೀರಯ್ಯನವರು ನಮ್ಮ ಕುಟುಂಬಗಳು ಸಹಿತ ಚಕ್ಕಡಿಗಳಲ್ಲಿ ಹೋಗಿದ್ದೆವು. ಹುಬ್ಬಳ್ಳಿಯಿಂದ ಹೋಗಬೇಕಾದರೆ ಧಾರವಾಡ, ಹಳ್ಯಾಳ, ಸುಪೆ ಮತ್ತು ಕುಂಬಾರವಾಡಿ ಈ ಸ್ಥಳಗಳಲ್ಲಿ ವಸತಿ ಮಾಡಬೇಕಾಗುತ್ತದೆ. ನನ್ನೊಬ್ಬನನ್ನು ಬಿಟ್ಟು ಉಳಿದವರೆಲ್ಲ ಮೊದಲೇ ಹೊರಟು ಹಳ್ಯಾಳದಲ್ಲಿ ಇಳಕೊಂಡರು. ನನಗೆ ಸಾಕಷ್ಟು ರಜೆಯು ಇಲ್ಲದ್ದರಿಂದ ನಾನು ನನ್ನ ಕೋರ್ಟಿನ ಕೆಲಸ ತೀರಿಸಿಕೊಂಡು, ಸುಮಾರು ೪ ಘಂಟೆಗೆ ಕುದುರೆಯ ಮೇಲೆ ಹೊರಟು ಉಳಿದವರನ್ನು ಹಳ್ಯಾಳದಲ್ಲಿ ಕೂಡಬೇಕಾಗಿತ್ತು. ಸವಣೂರು ಎಂಬ ವೈಶ್ಯ ಸಾಹುಕಾರರ ಒಂದು ಉತ್ತಮ ಕುದುರೆಯನ್ನು ಚಿಕ್ಕವೀರಯ್ಯನವರು ಗೊತ್ತುಮಾಡಿಕೊಟ್ಟಿದ್ದರು. ನಾನು ಹೊರಡುವ ಹೊತ್ತಿಗೆ ಮಳೆಯು ಜಿಟಿಜಿಟಿ ಆರಂಭವಾಗಿತ್ತು. ಧಾರವಾಡವನ್ನು ಮುಟ್ಟುವದರೊಳಗಾಗಿ ಜೋರಾಗಿ ಹತ್ತಿ ನನ್ನನ್ನೂ ಕುದುರೆಯ ಮನುಷ್ಯನನ್ನೂ ತೊಯ್ಯಿಸಿಬಿಟ್ಟಿತು. ಮಳೆಯು ಹಾಗೇ ಹತ್ತಿತ್ತು. ಆದರೆ ಮಧ್ಯದಲ್ಲಿ ನಿಲ್ಲುವ ಹಾಗಿಲ್ಲ. ಹೇಗಾದರೂ ಮಾಡಿ ಹಳ್ಯಾಳವನ್ನು ಕೂಡಲೇ ಮುಟ್ಟಲೇಬೇಕು. ಧಾರವಾಡದಲ್ಲಿ ದಾರಿಯ ಮೇಲಿರುವ ಡಾಕ್ಟರ ಶಿರೂರ ಇವರ ಕಡೆಯಿಂದ ಕಂಬಳಿ ಕೊಡೆಗಳನ್ನು ತೆಗೆದುಕೊಂಡು, ಮಳೆಯೊಳಗೇ ಮುಂದೆ ಸಾಗಿ ೯ ಘಂಟೆಯ ಸುಮಾರಕ್ಕೆ ಹಳ್ಯಾಳಕ್ಕೆ ಮುಟ್ಟಿದೆವು. ಅಷ್ಟರೊಳಗೆ ಮಳೆನಿಂತು ಬೆಳದಿಂಗಳು ಬಿತ್ತು. ಕುದುರೆಯು ಬಹಳ ದಣಿದಿತ್ತು. ಅದಕ್ಕೆ ಸೆರೆ ಕುಡಿಸಿ, ನಾನೂ ಕಾಸಿಕೊಂಡು, ಮುಂದೆ ಏನೂ ತೊಂದರೆಯಿಲ್ಲದೆ ಉಳವಿ ಶ್ರೀ ಚನ್ನಬಸವೇಶ್ವರ ಸಮಾಧಿಯ ದರ್ಶನ ತೆಗೆದುಕೊಂಡು ಉತ್ಸವವನ್ನು ತೀರಿಸಿಕೊಂಡು ಬಂದೆವು. ಪವಿತ್ರ ಸ್ಥಳಗಳಿಗೆ ಹೋಗಬೇಕಾದರೆ ಒಬ್ಬೊಬ್ಬರು ಒಂದೊಂದು ವ್ರತವನ್ನು ಕೈಕೊಂಡಿದ್ದರು. ಅದರಂತೆ ಸಾಬೋಜಿ ಗಂಗಾಧರಪ್ಪನವರು ಕಡೆತನಕ ಕಾಲು ನಡಿಗೆಯಿಂದಲೇ ಬಂದರು. ಮತ್ತೊಮ್ಮೆ ಧಾರವಾಡದಿಂದ ಬಸ್ಸಿನೊಳಗೆ ಅಲ್ಲಿ ಹೋಗಿದ್ದೆವು. ಅದು ಯಾವ ಸಾಲಿನಲ್ಲಿ ನೆನಪಿಲ್ಲ. ಮತ್ತೊಮ್ಮೆ ೧೯೩೦ನೇ ಜನವರೀ ತಿಂಗಳದಲ್ಲಿ ನಾವು ಮತ್ತು ಪುರಾಣಿ ಸೋಮನ ಕುಟುಂಬ ಸಹಿತ ನಮ್ಮ ನಮ್ಮ ಕಾರುಗಳಲ್ಲಿ ಹೋಗಿ ಬಂದೆವು.

೩. **ರೇಣಾವಿ -** ನಾನು ಜಮಖಂಡಿ ತಾಲೂಕಿನ ಗೋಟೆ ಎಂಬ ಗ್ರಾಮದಲ್ಲಿ ಹುಟ್ಟಿರುವೆನೆಂದು ಆರಂಭದಲ್ಲಿಯೇ ಹೇಳಿರುವೆನು. ಇದು ವಿಜಾಪುರದಿಂದ ಅಥಣಿಗೆ ಹೋಗುವ ಮಾರ್ಗದ ಮೇಲಿರುವ ಹೊನವಾಡ ಎಂಬ ಗ್ರಾಮದಿಂದ ದಕ್ಷಿಣಕ್ಕೆ ೨ ಮೈಲು ಅಂತರದ ಮೇಲಿದೆ. ನಾನು ೧೯೨೪ನೇ ಇಸ್ವಿಯಲ್ಲಿ ಆಗ ನನ್ನ ಸಂಗಡ ಇರುತ್ತಿದ್ದ ನನ್ನ ತಮ್ಮ ರೇವಪ್ಪ ಮತ್ತು ಅವನ ಮಗಳು ಪಾರ್ವತೆವ್ವ ಇವರನ್ನು ಕರಕೊಂಡು ಹೋಗಿದ್ದೆನು. ಆಗ ನಾತಾಳ ರಜೆಯಿತ್ತು. ಅದೇ ಕಾಲಕ್ಕೆ ನಮ್ಮ ಗುರುಗಳ ಊರು ಮಾಲಗಾವಿ ಮತ್ತು ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ರೇವಣಸಿದ್ಧೇಶ್ವರನ ಸ್ಥಾನವಾದ ರೇಣಾವಿ ಎಂಬಲ್ಲಿಗೆ ಸಹ ಹೋಗಿದ್ದೆನು.

ನಾನು ಹೇರಲಗಿ ಮನೆತನದವನು. ಈ ಮನೆತನದ ಗುರುಗಳು ಮ್ಹೈಸಾಳ ಮಠದ ಪಟ್ಟದ ಸ್ವಾಮಿಗಳು. ಹಾಲಬಾವಿ ಮನೆತನದ ಗುರುಗಳು ಮಾಲಗಾವಿ ಮಠದ ಪಟ್ಟದ ಸ್ವಾಮಿಗಳು. ನಾನು ಈ ಮನೆತನದಲ್ಲಿಯೇ ಬೆಳೆದುದರಿಂದ ಈ ಸ್ವಾಮಿಗಳ ದರ್ಶನ ಮೇಲಿಂದ ಮೇಲೆ ಆಗುತ್ತಿತ್ತು. ಆದುದರಿಂದ ಇವರನ್ನೆ ನಮ್ಮ ಗುರುಗಳೆಂದು ಭಾವಿಸಿಕೊಂಡು ಬಂದಿದ್ದೇನೆ. ಮಾಲಗಾವಿಯು ಮಿರಜಿಯಿಂದ ಸುಮಾರು ೬ ಮೈಲು ದೂರದಲ್ಲಿದೆ. ನಾವು ಅಲ್ಲಿ ಹೋದಾಗ ಈಗಿನ ಸ್ವಾಮಿಗಳ ಗುರುಗಳು ಅಲ್ಲಿ ಇರುತ್ತಿದ್ದರು. ಮಠವು ವಿಶಾಲವಾಗಿದೆ. ಇವರ ಶಿಷ್ಯರ ಸಂಖ್ಯೆಯು ಉತ್ತರದ ಕಡೆಗೂ ದಕ್ಷಿಣದ ಕಡೆಗೂ ಬಹಳ ದೊಡ್ಡದದೆ. ಇವರ ದರ್ಶನಮಾಡಿಕೊಂಡು ಮುಂದೆ ಮಿರಜಿಯಿಂದ ಸಾತಾರೆ ತಾಲೂಕಿನಲ್ಲಿರುವ ವಿಟಾ ಎಂಬ ಗ್ರಾಮಕ್ಕೆ ಬಂದು ಅಲ್ಲಿಂದ ೫ ಮೈಲು ಅಂತರದ ಮೇಲಿರುವ ರೇಣಾವಿ ಕ್ಷೇತ್ರಕ್ಕೆ ಹೋದೆವು. ಇದರ ವರ್ಣನೆಯನ್ನು ನಾನು ಶಿವಾನುಭವದ ೪ನೇ ಸಂಪುಟದ ಸಂಚಿಕೆಯಲ್ಲಿ (ಪುಟ ೧೪೯) ಪ್ರಸಿದ್ಧಿಸಿರುವೆನು.

೪. **ಆಳಂದಿ** - ೧೯೩೦ನೇ ಸಾಲಿನಲ್ಲಿ ನಾನು ನನ್ನ ಪ್ರಕೃತಿಯ ಉಪಚಾರಕ್ಕೆಂದು ಕೆಲವು ದಿವಸ ಪುಣೆಯಲ್ಲಿದ್ದೆನೆಂದು ಈ ಮೊದಲೇ ಹೇಳಿದ್ದೇನೆ. ಆಗ ನಾನು ಶ್ರೀ ಕರಾಡಕರ ಅಲ್ಲಪ್ಪನ ಮನೆಯಲ್ಲಿದ್ದೆನು. ಆ ಕಾಲಕ್ಕೆ ಅವರ ಸಂಗಡ ಹೋಗಿ ಶ್ರೀ ಸಂತ ಜ್ಞಾನದೇವನ ಆಳಂದಿಯನ್ನು ನೋಡಿ ಬಂದೆನು.

೫. **ಸ್ವಾದಿ** - ಗಂಗಾಧರನು ಶಿರಸಿಯಲ್ಲಿ ಕೆಲಸಮಾಡುತ್ತಿದ್ದಾಗ (೧೯೩೫) ನಾನು ಬೆಂಗಳೂರಿನ ಶ್ರೀ ಶಿವಮೂರ್ತಿಶಾಸ್ತ್ರಿಗಳ ಕೂಡ ಅಲ್ಲಿ ಹೋಗಿದ್ದೆನು. ಅಲ್ಲಿಂದ ೧೦ ಮೈಲುಗಳ ಮೇಲಿರುವ ಸ್ವಾದಿಯನ್ನು ನಾವು ನೋಡಲಿಕ್ಕೆ ಹೋಗಿದ್ದೆವು. ಅದು ಹಿಂದಿನ ರಾಜರ ಕಾಲದಲ್ಲಿ ಬಹಳ ವಿಸ್ತಾರವಾದ ಪಟ್ಟಣವಿದ್ದಂತೆ ಕಂಡುಬಂತು. ವಿಜಯನಗರದಂತೆ ಅದು ಹಾಳಾಗಿದೆ. ಅಲ್ಲಲ್ಲಿ ತುಸು ಜನವಸತಿ ಅದೆ. ಅದರ ವರ್ಣನೆಯು ಶಿವಾನುಭವದ ೧೧ನೇ ಸಂಪುಟದ ೨ನೇ ಸಂಚಿಕೆಯಲ್ಲಿ (ಪುಟ ೯೪) ಕೊಟ್ಟಿರುವೆನು.

೬. **ಕಲ್ಯಾಣ** - ಅದೇ ವರ್ಷ (೧೯೩೫) ಡಿಸೆಂಬರ ತಿಂಗಳಲ್ಲಿ ನಾನು ಮತ್ತು ಶ್ರೀ ಪುರಾಣಿಕ ಬುದ್ಧಯ್ಯಸ್ವಾಮಿಗಳು ಅವರ ಮಗನ ಸಲುವಾಗಿ ಕನ್ಯೆಯನ್ನು ನೋಡಲಿಕ್ಕೆ ಸೊಲ್ಲಾಪುರಕ್ಕೆ ಬಂದಿದ್ದೆವು. ಅಲ್ಲಿಂದ ಕಲಬುರ್ಗಿಗೆ ಹೋಗಿ, ಮುಂದೆ ಶ್ರೀ ಭೂಮರಡ್ಡಿಯವರ ಸಹಾಯದಿಂದ ಕಲ್ಯಾಣವನ್ನು ನೋಡಿಕೊಂಡು ಬಂದೆವು. ಇದರ ವರ್ಣನೆಯು ಶಿವಾನುಭವದ ೧೧ನೇ ಸಂಪುಟದ ೫ನೇ ಸಂಚಿಕೆಯಲ್ಲಿ (ಪುಟ ೩೯) ಕೊಡಲ್ಪಟ್ಟಿದೆ.

೭. **ಹಂಪಿ** - ವಿಜಯನಗರ ಸಾಮ್ರಾಜ್ಯವು ಸ್ಥಾಪನೆಯಾಗಿ ೧೯೩೬ನೇ ಇಸ್ವಿಗೆ ೬೦೦ ವರ್ಷಗಳಾದವು. ಇದರ ಇತಿಹಾಸವನ್ನು ಈ ಶತಮಾನದ ಆರಂಭದಲ್ಲಿ ಡಾ. ಸಿವೆಲ್ ಸಾಹೇಬರೆಂಬುವರು ಮರೆತುಹೋದ ಸಾಮ್ರಾಜ್ಯ (Forgotten Empire) ಎಂಬ ಹೆಸರಿನಿಂದ ಪ್ರಕಟಿಸಿದರು. ಮುಂದೆ ನಾನು ಈ ಶತಮಾನದ ಮೊದಲನೇ ದಶಕದಲ್ಲಿ ಇದರ ಕನ್ನಡ ಭಾಷಾಂತರವನ್ನು ಧಾರವಾಡದ ವಿದ್ಯಾವರ್ಧಕ ಸಂಘದವರು ಹೊರಡಿಸುತ್ತಿರುವ 'ವಾಗ್ಭೂಷಣ' ಎಂಬ ಮಾಸಪತ್ರಿಕೆಯಲ್ಲಿ ಪ್ರಕಟಿಸಿದೆನು. ಆಮೇಲೆ ಈ ಬಗ್ಗೆ ೨ನೇ ಚಿಕ್ಕ ದೊಡ್ಡ ಪುಸ್ತಕಗಳು ಹೊರಬಿದ್ದು ಆ ರಾಜ್ಯದ ಸ್ಮರಣವು ಜನರಲ್ಲಿ ಬೆಳೆಯಹತ್ತಿತು. ಇದರ ಷಟ್‌ಸಾಂವತ್ಸರಿಕ ಉತ್ಸವವನ್ನು ನೆರವೇರಿಸಬೇಕೆಂಬ ಕಲ್ಪನೆಯು ೧೯೨೯ನೇ ಇಸ್ವಿಯಲ್ಲಿ ಬೆಳಗಾವಿಯಲ್ಲಿ ಕೂಡಿದ ಕರ್ನಾಟಕ ಸಾಹಿತ್ಯ ಸಮ್ಮೇಳನದಲ್ಲಿ ಹುಟ್ಟಿ, ಮುಂದೆ ೧೯೩೬ ನೇ ಇಸ್ವಿಯ ಆರಂಭದಲ್ಲಿ ಇದನ್ನು ಮೂರ್ತಸ್ವರೂಪಕ್ಕೆ ತರುವ ಒಂದು ಕಾರ್ಯಕಾರಿ ಮಂಡಳವು ಸ್ಥಾಪಿಸಲ್ಪಟ್ಟಿತು. ಅದರಲ್ಲಿ ನನ್ನನ್ನು ಅಧ್ಯಕ್ಷನನ್ನಾಗಿ ನೇಮಿಸಿದರು. ಈ ಬಗ್ಗೆ ಕಾರ್ಯವು ವಿಶೇಷ ಜೋರಿನಿಂದ ಕಡೆಯ ಒಂದೆರಡು ತಿಂಗಳು ನಡೆದು, ಆ ಸಾಲಿನ ಕಡೆಯ ವಾರದಲ್ಲಿ ಈ ಉತ್ಸವವು ಹಂಪೆಯ ಶ್ರೀ ವಿರೂಪಾಕ್ಷದೇವರ ಕೃಪೆಯಿಂದ ಸಾಂಗವಾಗಿ ನೆರವೇರಿತು. ಆ ಕಾಲಕ್ಕೆ ಸಾಮ್ರಾಜ್ಯಕ್ಕೆ ಸಂಬಂಧಿಸಿದ ಬೇರೆ ಬೇರೆ ವಿಷಯಗಳ ಮೇಲೆ ವಿದ್ವತ್ಪೂರ್ಣ ಲೇಖನಗಳ "Vijayanagar empire six centenery commemoration volume" ಎಂಬ ಗ್ರಂಥವು ಪ್ರಕಟವಾಯಿತು. ಇದರ ಸಾದ್ಯಂತ ವರ್ಣನೆಯು ವಿಜಯನಗರ ಸ್ಮಾರಕೋತ್ಸವ ಎಂಬ ೧೯೩೮ನೇ ಇಸ್ವಿಯಲ್ಲಿ ಹೊರಡಿಸಿದ ವರದಿಯಲ್ಲಿ ಕೊಡಲ್ಪಟ್ಟಿದೆ.

೮. **ಜೇಜೂರಿ** - ೧೯೩೭ ನೇ ಇಸ್ವಿಯಲ್ಲಿ ನಾನು ಶಾರದಮ್ಮ ಸಹಿತ ನಮ್ಮ ಕಾರಿನಲ್ಲಿ ಇಗತ್ತಪೂರಿಗೆ ಹೋದದ್ದು ಈ ಮೊದಲೇ ಬಂದಿದೆ. ಆಗ ಮಧ್ಯದಲ್ಲಿ ಪುಣೆಯಲ್ಲಿ ಇಳಿದಾಗ್ಗೆ ಪುರಾಣೆ ಗಣಪತರಾಯರ ಮನೆಯವರನ್ನು ಕೂಡಿಕೊಂಡು, ಜೇಜೂರಿಯ ಖಂಡೋಬನ ದರ್ಶನ ಮಾಡಿಕೊಂಡು ಬಂದೆವು. ಈ ಬಗ್ಗೆ ಮಾಹಿತಿಯು ನನಗೆ ಶ್ರೀ ಶಂಕರದಾಸಿಮಯ್ಯನ ಚರಿತ್ರೆಯ ಬಗ್ಗೆ ಬೇಕಾಗಿತ್ತು.

೯. **ಶ್ರೀಶೈಲ** - ಈ ಕ್ಷೇತ್ರವು ಹೈದ್ರಾಬಾದ ಮತ್ತು ಮದ್ರಾಸ ಸಂಸ್ಥಾನಗಳ ನಡುವೆ ಹಬ್ಬಿರುವ ಪರ್ವತಗಳ ಸಾಲುಗಳ ಮಧ್ಯದಲ್ಲಿ ಅದೆ. ದಕ್ಷಿಣ ಹಿಂದೂಸ್ಥಾನದಲ್ಲಿ ಇದೊಂದು ದೊಡ್ಡ ಕ್ಷೇತ್ರವು.

ಜ್ಯೋತಿರ್‌ಲಿಂಗದ ಸ್ಥಳವು. ವೀರಶೈವರ ಪಂಚಾಚಾರ್ಯರ ಪೀಠಗಳಲ್ಲಿ ಒಂದಾಗಿದೆ. ಪೂರ್ವಕಾಲದಲ್ಲಿ ತಪಸ್ವಿಗಳು ಇಲ್ಲಿ ವಾಸವಾಗಿದ್ದಂತೆ ತೋರುತ್ತದೆ. ಶ್ರೀ ಅಲ್ಲಮಪ್ರಭು, ಮಹದೇವಿಯಕ್ಕ ಇವರು ಇಲ್ಲಿಯೇ ಐಕ್ಯವಾದಂತೆ ತಿಳಿಯುತ್ತದೆ. ಈಗ ಇಲ್ಲಿ ಜನವಸತಿ ಇಲ್ಲ. ಸುತ್ತಮುತ್ತಲಿನ ಗುಡ್ಡಗಳಲ್ಲಿ ಗುಡ್ಡಗಾಡು ಜನರು ಇರುತ್ತಾರೆ. ಇದು ಅರಣ್ಯಪ್ರದೇಶವಾಗಿದ್ದರೂ ಘೋರಾರಣ್ಯವಲ್ಲ. ಕ್ಷೇತ್ರದ ಮಗ್ಗಲಿಗೆ ಬುಡದಲ್ಲಿ ಎತ್ತರವಾದ ಗುಡ್ಡಗಳ ನಡುವೆ ಕೃಷ್ಣಾನದಿಯು ಹರಿಯುತ್ತದೆ. ಅಲ್ಲಿ ಇದಕ್ಕೆ ಪಾತಾಳಗಂಗೆಯೆಂದು ಕರೆಯುತ್ತಾರೆ. ಈ ಪವಿತ್ರ ಸ್ಥಳವನ್ನು ಹಿಂದುಸ್ಥಾನದ ಶೈವರು ಅವಶ್ಯ ಕಾಣತಕ್ಕದು.

ಪ್ರತಿವರ್ಷ ಶಿವರಾತ್ರಿ ಮತ್ತು ಯುಗಾದಿಗಳಲ್ಲಿ ಯಾತ್ರಿಕರು ಇಲ್ಲಿ ಕೂಡುತ್ತಾರೆ. ಶಿವರಾತ್ರಿಯಲ್ಲಿ ಕೂಡುವವರ ಸಂಖ್ಯೆಯೇ ಹೆಚ್ಚು. ಇದರ ದರ್ಶನ ಪಡೆಯಬೇಕೆಂದು ನನಗೂ ಬಯಕೆಯಾಗಿ, ೧೯೩೮ನೇ ಫೆಬ್ರುವರಿ ೨೮ನೇ ತಾರೀಖಿನ ದಿವಸ ನಾನು ಮತ್ತು ಶಾರಮ್ಮನು ಹಾವೇರಿಪೇಟೆಯ ಶ್ರೀ ಗುರುಲಿಂಗಶಾಸ್ತ್ರಿಗಳು, ಶ್ರೀ ಆಲೂರು ಸಬ್‌ಜಜ್ಜರ ತಾಯಿಯವರು ಮತ್ತು ಕೆಲವರು ರಾತ್ರಿಯ ಗಾಡಿಯಿಂದ ಹೊರಟು, ಮರುದಿವಸ ಮಧ್ಯಾಹ್ನಕ್ಕೆ ನಂದ್ಯಾಲ ಸ್ಟೇಶನ ಮುಟ್ಟಿದೆವು. ಅಲ್ಲಿಂದ ೩೦ ಮೈಲು ಅಂತರದಲ್ಲಿರುವ ಆತ್ಮಕೂರಕ್ಕೆ ಸರ್ವಿಸ ಬಸ್ಸಿನಿಂದ ಸಂಜೆಗೆ ಹೋಗಿ, ಅದೇ ರಾತ್ರಿ ೨೫ ಮೈಲು ಅಂತರದಲ್ಲಿರುವ ಪೆಚ್ಚರುವಿಗೆ ಚಕ್ಕಡಿಯಲ್ಲಿ ಹೊರಟು ಮರುದಿವಸ ಸಂಜೆಗೆ ಮುಟ್ಟಿದೆವು. ಅಲ್ಲಿಂದ ಶ್ರೀಶೈಲಕ್ಷೇತ್ರವು ೬ ಮೈಲು ಅದೆ. ಇದರ ನಡುವೆ ಭೀಮನಕೊಳ್ಳ ಎಂಬ ದೊಡ್ಡ ಕೊಳ್ಳವಿರುವುದು. ಇಷ್ಟು ದಾರಿಯನ್ನು ಕಾಲ್ನಡಿಗೆಯಿಂದಲೇ ತೀರಿಸಬೇಕು. ಹಾಗೆ ಮಾಡಲಿಕ್ಕೆ ಶಕ್ಯವಿಲ್ಲದವನು ತೊಟ್ಟಿಲದಲ್ಲಿ ಕೂತು ಹೋಗಬೇಕು. ಹೊತ್ತುಕೊಂಡು ಹೋಗುವವರು ದೊರೆಯುತ್ತಾರೆ. ನನಗೆ ತೊಟ್ಟಿಲು ದೊರೆಯಲಿಲ್ಲ. ಕಡೆಗೆ ಕುದುರೆಯ ಮೇಲೆ ಹೋಗಬೇಕಾಯಿತು. ಅದರ ಆಳು ಒಬ್ಬ ಚಂಚ ಹೆಂಗಸು. ಕುದುರೆಯ ಮೇಲೆ ಕೂತುಕೊಳ್ಳುವುದೂ ಇಳಿಯುವುದೂ ಏರುವದೂ ಬಹಳ ಕಠಿಣ. ದಾರಿಯ ಮಗ್ಗುಲಿಗೆ ಕೆಲವು ಕಡೆಗೆ ಬಹಳ ಕಡದು. ಕುದುರೆಯು ದಂಡೆಗುಂಟಲೇ ಸಾಗುತ್ತಿತ್ತು. ಆಳು ಬಹಳ ಚತುರಳು. ಆಕೆಯ ಸಹಾಯದಿಂದ ಏನೂ ತೊಂದರೆಯಿಲ್ಲದೇ ಕ್ಷೇತ್ರದ ದೇವಾಲಯವನ್ನು ಮುಟ್ಟಿದೆನು. ಉಳಿದವರೆಲ್ಲರೂ ಕಾಲ್ನಡಿಗೆಯಿಂದ ಬಂದರು. ಸಾಮಾನುಗಳನ್ನು ಒಯ್ಯಲಿಕ್ಕೆ ಕತ್ತೆಗಳ ಉಪಯೋಗವನ್ನು ಮಾಡುತ್ತಾರೆ.

ದೇವಾಲಯದ ಆವಾರವು ಚಚ್ಚೌಕ ಒಂದು ಫರ್ಲಾಂಗವಾಗಬಹುದು. ಆವಾರದ ಗೋಡೆಯು ಬಹಳ ಎತ್ತರವಾಗಿದ್ದು ಕೋಟೆಯಂತೆ ಕಾಣುತ್ತದೆ. ನಡುವೆ ಗುಡಿಯು ವಿಶಾಲವಾಗಿದ್ದು ಜನರು ಉಳಿದುಕೊಳ್ಳಲಿಕ್ಕೆ ಸುತ್ತಲೂ ಪೌಳಿಗಳಿವೆ. ಪೌಳಿಗಳ ಗುಡಿಯ ಹಿಂದಿನ ಸಾಲಿನಲ್ಲಿ ಆಲೂರು ಸಬ್‌ಜಜ್ಜರು ಒಂದು ಪೌಳಿಯನ್ನು ಕಟ್ಟಿಸಿರುತ್ತಾರೆ. ಅವರ ಮನೆಯವರೂ ನಾವೂ ಅಲ್ಲೇ ಇಳಕೊಂಡೆವು. ಮರುದಿವಸ ಮುಂಜಾನೆ ಪಾತಾಳಗಂಗೆಯಲ್ಲಿ ಸ್ನಾನಮಾಡಿ ಬಂದೆವು. ನಾನು ತೊಟ್ಟಿಲದಲ್ಲಿ ಕೂತುಕೊಂಡು ಹೋಗಿ ಬಂದೆನು. ಆಗ ಬಳ್ಳಾರಿಯ ಶ್ರೀ ಟಿ.ಎಚ್ ಎಮ್. ಸದಾಶಿವಯ್ಯನವರು ಅಲ್ಲಿ ಬಂದಿದ್ದರು. ಪದ್ಧತಿಯ ಪ್ರಕಾರ ಪೂಜಾ ಮುಂತಾದ ಕಾರ್ಯಗಳು ತೀರಿದವು. ಜನರ ಸಂದಣಿಯು ಹೆಚ್ಚಾಗಿರುವುದರಿಂದ ರಾತ್ರಿ ಲಿಂಗದರ್ಶನವಾಗಬೇಕಾದರೆ ಬಹಳ ಕಷ್ಟ. ಸರ್ಕಾರದವರು ಮತ್ತು ವ್ಯವಸ್ಥಾಪಕರು ಮಂಡಲದವರು ಯೋಗ್ಯ ವ್ಯವಸ್ಥೆಯನ್ನಿಟ್ಟಿರುತ್ತಾರೆ. ಆಗ ಅಲ್ಲಿ ಏನಾದರೂ ವಿಶೇಷ ಸಂಗತಿ ನಡೆದದ್ದು ನನಗೆ ನೆನಪಿಲ್ಲ.

ಮಾರ್ಚ ೩ನೇ ತಾರೀಖಿನ ದಿವಸ ಅಲ್ಲಿಂದ ಹೊರಟು ಸಾಯಂಕಾಲಕ್ಕೆ ಪೆಚ್ಚರುವಿಗೆ ಬಂದೆವು. ಮರುದಿವಸ ಅಲ್ಲಿಂದ ೧೦ ಮೈಲಿನ ಅಂತರದಲ್ಲಿರುವ ನಾಗಲೋಟಿಯ ಮಾರ್ಗವಾಗಿ ಮುಂದೆ ೧೨ ಮೈಲು ಅಂತರದ ಮೇಲಿರುವ ಆತ್ಮಕೂರಿಗೆ ಚಕ್ಕಡಿಯಲ್ಲಿ ೫ನೇ ತಾ ದಿವಸ ಮುಟ್ಟಿದೆವು. ನಾನು ತೊಟ್ಟಿಲದಲ್ಲಿ ಬಂದಂತೆ ತೋರುತ್ತದೆ. ಅಲ್ಲಿಂದ ಬಸ್ಸಿನಲ್ಲಿ ಮಹಾನಂದಿ ಕ್ಷೇತ್ರಕ್ಕೆ ೬ನೇ ತಾರೀಖಿನ ದಿವಸ ಬಂದೆವು.

ಇಲ್ಲಿಯ ದೇವಸ್ಥಾನವು ಬಹಳ ವಿಶಾಲವಾಗಿದ್ದು ಸುತ್ತಲೂ ನೀರಿನ ಹೊಂಡವದೆ. ಇಲ್ಲಿ ದಾಸೋಹದ ವ್ಯವಸ್ಥೆಯಿದ್ದು, ಯಾತ್ರಿಕರಿಗೆ ಬಹಳ ಅನುಕೂಲವಿರುತ್ತದೆ. ಅಲ್ಲಿಂದ ಸಮೀಪದಲ್ಲಿರುವ ಗಜಲಪಲ್ಲಿ ಸ್ಟೇಶನದಿಂದ ಬಳ್ಳಾರಿಗೆ ಬಂದು ನಮ್ಮ ಆಪ್ತರಾದ ಜಡೆ ಸಿದ್ದಲಿಂಗಪ್ಪನವರಲ್ಲಿಳಿದುಕೊಂಡು ಮುಂದೆ ಧಾರವಾಡಕ್ಕೆ ತಿರುಗಿ ಬಂದೆವು.

ನಾವು ಶ್ರೀಶೈಲಕ್ಕೆ ಹೋಗುವಾಗ ದಾರಿಯಲ್ಲಿ ಆಲೂರು ತಾಲೂಕಿನ ಹೊಳೆಗುಂದಿ ಗ್ರಾಮದ ಕುರುಡಿ ಲಿಂಗಪ್ಪನೆಂಬುವನು ನಮ್ಮನ್ನು ಕೂಡಿದನು. ಅವನು ಮಧ್ಯವಯಸ್ಸಿನವನಿದ್ದು ದೇಹವು ಸಾಧಾರಣ ಸ್ಥೂಲವಾಗಿತ್ತು. ದಾರಿಯು ಏರಿಳಿತಗಳಿಂದ ಕಷ್ಟತರದ್ದಾಗಿರುವುದರಿಂದ ಕೆಲವರಿಗೆ ಹೆಚ್ಚು ನೀರಡಿಕೆಯಾಗುವುದು ಸಹಜವದೆ. ನಡುನಡುವೆ ಸ್ವಚ್ಛನೀರಿನ ಭಾವಿಗಳಿವೆ. ಕೆಲವು ಕಡೆ ಮಳೆಯ ನೀರು ನಿಂತಿರುತ್ತದೆ. ಈ ನೀರು ಕುಡಿಯುವುರಿಂದ ರೋಗಹುಟ್ಟುವುದು ಸಹಜವು. ಲಿಂಗಪ್ಪನಿಗೆ ಈ ನೀರು ಕುಡಿಯಬೇಡವೆಂದರೂ ಬಹಳ ನೀರಡಿಕೆಯಾಗಿ ಇಂಥ ನೀರನ್ನು ಒಮ್ಮೆ ಕುಡಿದನು. ಕ್ಷೇತ್ರವನ್ನು ಮುಟ್ಟಿ ತಿರುಗಿ ಬರುವ ವರೆಗೆ ಸಹ ಅವನ ಪ್ರಕೃತಿಯು ಚೆನ್ನಾಗಿದ್ದಿಲ್ಲ. ತಿರುಗಿ ಬರುವಾಗ ನಮ್ಮ ಹಿಂದಿನಿಂದ ಹೊರಟು ಸಾವಕಾಶ ಬರುತ್ತಿದ್ದನು. ತನ್ನ ಗುಂಡಗಡಿಗೆ ಮುಂತಾದ ಕೆಲವು ಸಾಮಾನುಗಳನ್ನು ನನ್ನ ಕಡೆಗೆ ಕೊಟ್ಟಿದ್ದನು. ದೇವಸ್ಥಾನದಿಂದ ಬಹಳದೂರ ನಡೆಯುವದು ಅವನಿಂದಾಗಲಿಲ್ಲವೆಂದು, ಅವನು ದೇವಸ್ಥಾನಕ್ಕೆ ತಿರುಗಿ ಹೋದನೆಂದು ತಿಳಿಯಿತು. ಅವನ ಸಾಮಾನುಗಳನ್ನು ಅವನು ತಿರುಗಿ ಬಂದದ್ದು ಶೋಧಮಾಡಿ ಅವನಿಗೆ ಮುಟ್ಟಿಸಲಿಕ್ಕೆ ಸಿದ್ಧಲಿಂಗಪ್ಪನವರಿಗೆ ಹೇಳಿ ಬಂದೆವು. ಲಿಂಗಪ್ಪನು ದೇವಸ್ಥಾನದಲ್ಲಿಯೇ ಐಕ್ಯನಾದನೆಂದು ತಿಳಿಯಿತು. ಇದು ಅವನ ಪೂರ್ವದ ಪುಣ್ಯದ ಫಲವಿರಬಹುದು.

೧೦. **ತೇರದಾಳ** - ಶ್ರೀ ಪುರಾಣಿಕ ಬುದ್ಧಯ್ಯ ಸ್ವಾಮಿಗಳು ತೇರದಾಳದಲ್ಲಿರುವ ಶ್ರೀ ಅಲ್ಲಮಪ್ರಭುವಿನ ಗದ್ದಿಗೆಯ ಪೂಜಾರಿಗಳ ಮನೆತನದ ಒಂದು ಶಾಖೆಯವರಿರುತ್ತಾರೆ. ಅಲ್ಲಿ ಪ್ರತಿವರ್ಷ ಶ್ರಾವಣಮಾಸದಲ್ಲಿ ಪ್ರಭುದೇವರ ಪುರಾಣವು ನಡೆಯುತ್ತಿರುತ್ತದೆ. ಅವರು ಪ್ರತಿವರ್ಷ ಈ ತಿಂಗಳನ್ನು ತೇರಾದಾಳದಲ್ಲಿಯೇ ಕಳೆಯುವುದಲ್ಲದೆ ಇತ್ತಿತ್ತಲಾಗಿ ಪುರಾಣವನ್ನು ಸಹ ಅವರೇ ಹೇಳುತ್ತಾರೆ. ೧೯೪೬ನೇ ಇಸ್ವಿಯ ಶ್ರಾವಣ ತಿಂಗಳನ್ನು ನಾನು ಅವರ ಕೂಡ ಅಲ್ಲಿಯೇ ಕಳೆದೆನು. ಅಲ್ಲಿ ನಡೆಯುವ ಪೂಜೆಯ ಉತ್ಸವವು ನೋಡತಕ್ಕಂಥದ್ದಿದೆ. ಇದರ ಸುಯೋಗವು ನನಗೆ ಸ್ವಾಮಿಗಳ ಸಹವಾಸದಿಂದ ದೊರೆಯಿತೆಂದು ಹೇಳುವುದಕ್ಕೆ ಆನಂದವೆನಿಸುತ್ತದೆ.

೧೧. **ಕಂಚಿ** - ೧೯೪೭ನೇ ಜನೆವರಿಯಲ್ಲಿ ದಿ. ಬ. ಆರ್. ಎಸ್. ಹಿರೇಮಠ ಸಾಹೇಬರು ಮತ್ತು ನಾನು ಸ್ವರಾಜ್ಯ ವಿಮಾ ಕಂಪನಿಗೆ ಹಣದ ಕೊರತೆಯಾಗಿರುವುದರಿಂದ ಪಾಂಡಿಚೇರಿಯಲ್ಲಿರುವ ಶ್ರೀಮಂತ ಬಸವಪ್ರಭು ಸರದೇಸಾಯಿ ವಂಟಮುರಿ ಇವರ ಕಡೆಗೆ ಹಣವನ್ನು ದೊರೆಕಿಸಲಿಕ್ಕೆ ಹೋಗಿದ್ದೆವು. ನಮ್ಮಿಬ್ಬರದು ಕಂಪನಿಗೆ ವಿಶೇಷ ಸಂಬಂಧವಿದ್ದು ಅದರ ಇತಿಹಾಸವು ಮುಂದೆ ಬರುವುದು. ಅಲ್ಲಿ ಹಣದ ವ್ಯವಸ್ಥೆ ಆದ ಮೇಲೆ ಹಿರೇಮಠ ಸಾಹೇಬರು ಕೂಡಲೇ ಧಾರವಾಡಕ್ಕೆ ತಿರುಗಿ ಬಂದರು. ಫೆಬ್ರುವರಿ ತಾರೀಖಿಗೆ ಶ್ರೀ ಅರವಿಂದರ ದರ್ಶನಗೋಸ್ಕರ ನಾನು ಅಲ್ಲಿ ಉಳಿದು, ಆ ತಿಂಗಳ ಅಂತ್ಯದಲ್ಲಿ ತಿರುಗಿ ಹೊರಟೆನು. ಆಗ ನನ್ನ ಆಪ್ತನಾದ ಎಮ್. ಪಂಚಪ್ಪನು ಮದ್ರಾಸದ ಹತ್ತಿರ ತಂಬರಂದಲ್ಲಿಯ ಮಿಶನ್ ಕಾಲೇಜದಲ್ಲಿ ಫೆಲೋ ಆಗಿದ್ದನು. ನಾನು ಅಲ್ಲಿ ಇಳಿದು, ಅವನ ಕೂಡ ೨-೩ ದಿವಸ ಕಳೆದು ಮದ್ರಾಸದಲ್ಲಿಯ ನೋಡತಕ್ಕ ಸ್ಥಳಗಳನ್ನೆಲ್ಲ ಕಂಡು ಅಲ್ಲಿಂದ ಕಂಚಿಗೆ (conjeevaram) ಹೋದೆವು. ಅದು ಪೂರ್ವಕಾಲದಲ್ಲಿ ಪಲ್ಲವ ಅರಸರ ರಾಜಧಾನಿಯಾಗಿದ್ದು ಬಹಳ ಪ್ರಸಿದ್ಧಿಪಡೆದಿತ್ತು. ಇತರ ಹಳೇ ರಾಜಧಾನಿಗಳಂತೆ ಇದು ಸಹ ಹಾಳಾಗಿಯೇ ಇದೆ. ಇದರಲ್ಲಿ ಶಿವಕಂಚಿ, ವಿಷ್ಣುಕಂಚಿ ಎಂಬ ಎರಡು ಭಾಗಗಳಿವೆ. ಶಿವಕಂಚಿಯಲ್ಲಿ ಕಾಮಾಕ್ಷಿ ಮತ್ತು ಈಶ್ವರನ (ಏಕಾಂಬರನಾಥ)

ದೊಡ್ಡ ದೇವಾಲಯಗಳಿವೆ. ಕಾಮಾಕ್ಷಿಯ ಪೂಜೆ ಮುಂತಾದದ್ದು ಸರಿಯಾಗಿ ನಡೆಯುತ್ತಿದ್ದಂತೆ ತೋರಿತು. ಈಶ್ವರನ ದೇವಾಲಯವು ಬಹಳ ವಿಸ್ತಾರವಾಗಿದ್ದರೂ ಅಲ್ಲಿ ಏನೂ ವ್ಯವಸ್ಥೆಯಿದ್ದಂತೆ ಕಾಣಲಿಲ್ಲ. ಅಲ್ಲಿಂದ ಸುಮಾರು ೨ಮೈಲು ದೂರದ ಮೇಲೆ ವಿಷ್ಣುದೇವಾಲಯವಿದೆ. ಇಲ್ಲಿ ವಿಷ್ಣುವಿನ (ವರದರಾಜನ) ಪೂಜೆಯು ಒಳ್ಳೇ ವೈಭವದಿಂದ ನಡೆಯುತ್ತಿದ್ದಂತೆ ಕಂಡಿತು. ಇವುಗಳ ದರ್ಶನಮಾಡಿಕೊಂಡು ಕೂಡಲೇ ನಾವು ತಿರುಗಿ ತಂಬರಂಕ್ಕೆ ಬಂದೆವು. ಆಗ ನಾನು ತಿರುಗಿ ಧಾರವಾಡಕ್ಕೆ ಬಂದೆನು. ಪಂಚಪ್ಪನ ಕೂಡ ನಾನು ಇದ್ದಾಗ ನನ್ನ ವಿಷಯವಾಗಿ ಅವನು ವಿಶೇಷ ಕಾಳಜಿ ತಕ್ಕೊಂಡು, ಎಲ್ಲ ವ್ಯವಸ್ಥೆಯನ್ನು ಮಾಡಿದನೆಂದು ಹೇಳಲಿಕ್ಕೆ ಬಹಳ ಆನಂದವೆನಿಸುತ್ತದೆ.

೧೨. **ತುಳಜಾಪುರ -** ೧೯೪೬ನೇ ಇಸ್ವಿಯಲ್ಲಿ ಸ್ವಲ್ಪಕಾಲದ ವರೆಗೆ ಗಂಗಾಧರನು ಸೊಲ್ಲಾಪುರದಲ್ಲಿ ಕೆಲಸಮಾಡುತ್ತಿದ್ದನು. ಆಗ ನಾನು ಒಮ್ಮೆ ಅಲ್ಲಿ ಹೋಗಿದ್ದೆನು. ಅಲ್ಲಿಂದ ಕೆಲವು ಮೈಲುಗಳ ಮೇಲೆ ನಿಜಾಮ ಸಂಸ್ಥಾನದ ಹದ್ದಿನಲ್ಲಿ ತುಳಜಾಪುರವೆಂಬ ಕ್ಷೇತ್ರದಲ್ಲಿ ಭವಾನಿಯ ಪ್ರಸಿದ್ಧ ದೇವಾಲಯವಿದೆ. ಆಕೆಯ ಭಕ್ತರು ಸುತ್ತಲಿನ ದೂರ ದೂರ ಭಾಗಗಳಲ್ಲಿ ಸಹ ಭಿಕ್ಷಾಟನಕ್ಕೆ ಬರುವುದನ್ನು ಕಂಡಿರಬಹುದು. ಗಂಗಾಧರನ ಮನೆಯವರು ಮತ್ತು ನಾನು ಅಲ್ಲಿ ಹೋಗಿ ಭವಾನಿಯ ದರ್ಶನ ಮಾಡಿಕೊಂಡು ಬಂದೆವು.

## ಸಾರ್ವಜನಿಕ ಸಂಸ್ಥೆಗಳಲ್ಲಿ ನನ್ನ ಅಂಗ

ಪ್ರಸಂಗಾನುಸಾರ ಇಂಥ ಸಂಸ್ಥೆಗಳಲ್ಲಿ ನಾನು ಭಾಗವಹಿಸಿದ್ದು, ಈ ಮೊದಲೇ ವರ್ಣಿತವಾಗಿದೆ. ಉಳಿದ ಕೆಲವು ಸಂಸ್ಥೆಗಳು ಕೆಳಗಿನಂತೆ ಅವೆ.

೧. ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ

೨. ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ

೩. ಕರ್ನಾಟಕ ಐತಿಹಾಸಿಕ ಸಂಶೋಧನ ಸಂಸ್ಥೆ, ಧಾರವಾಡ

೪. ಕರ್ನಾಟಕ ಲಿಂಗಾಯತ (ಲಿಬರಲ್) ವಿದ್ಯಾಸಂಸ್ಥೆ, ಬೆಳಗಾಂವಿ

೫. ಲಿಂಗಾಯತ ಕಾನೂನ ಮಂಡಳ

೬. ಕಿತ್ತೂರ ಚನ್ನಮ್ಮ ರಾಣಿ ಇತಿಹಾಸ ಮಂಡಳ, ಬೈಲಹೊಂಗಲ

೭. ಸ್ವರಾಜ್ಯ ಜೀವ ವಿಮಾ ಕಂಪನಿ , ಧಾರವಾಡ

ಇವುಗಳ ಬಗ್ಗೆ ಅನುಕ್ರಮವಾಗಿ ಹೇಳುವೆನು.

**೧. ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ**

ಲಿಂಗಾಯತರು ಶಿಕ್ಷಣದಲ್ಲಿ ಬಹಳ ಹಿಂದುಳಿದವರಾಗಿರುವುದರಿಂದ ೧೮೮೩ನೇ ಇಸ್ವಿಯಲ್ಲಿ ಗತಿಸಿದ ಶ್ರೀ ಗಿಲಗಂಚಿ ಗುರುಸಿದ್ದಪ್ಪನವರು ಮತ್ತು ರಾ. ಬ. ಅರಟಾಳ ರುದ್ರಗೌಡರು ಆ ಹೆಸರಿನ ಸಂಸ್ಥೆಯನ್ನು ಸ್ಥಾಪಿಸಿ ಹಣ ಕೂಡಿಸಿ, ಅದನ್ನು ಸರಕಾರಿ ಸಾಲಪತ್ರಗಳ ರೂಪದಿಂದ ಸರಕಾರದಲ್ಲಿಟ್ಟು ಅದರಿಂದ ಬಂದ ಉತ್ಪನ್ನವನ್ನು ಹೈಸ್ಕೂಲ ಮತ್ತು ಕಾಲೇಜುಗಳಲ್ಲಿ ಅಭ್ಯಾಸಮಾಡುವ ಬಡವಿದ್ಯಾರ್ಥಿಗಳಿಗೆ ವೇತನವನ್ನು(Scholarship) ಕೊಡಲಿಕ್ಕೆ ಆರಂಭಿಸಿದರು. ಸರಕಾರದ ಒಪ್ಪಿಗೆಯಿಂದ ಧಾರವಾಡದ ಕಲೆಕ್ಟರ ಸಾಹೇಬರು ಆ ಸಂಸ್ಥೆಯ ಅಧ್ಯಕ್ಷರಾಗಿರುತ್ತಿದ್ದರು. ಶ್ರೀ ಟೆಂಗಿನಕಾಯಿ ಚೆನ್ನಮಲ್ಲಪ್ಪನವರು ಇದರ ವ್ಯವಸ್ಥಾಪಕ ಮಂಡಲದ ಕಾರ್ಯದರ್ಶಿಗಳಿದ್ದರು.

ಇದರ ಸಹಾಯದಿಂದಲೇ ನಾನು ನನ್ನ ಕಾಲೇಜ ಶಿಕ್ಷಣವನ್ನು ಪಡೆದುಕೊಳ್ಳಲಿಕ್ಕೆ ಸಾಧ್ಯವಾಯಿತು. ನನ್ನ ಎಲ್.ಎಲ್.ಬಿ. ಪರೀಕ್ಷೆಯನ್ನು ಮುಗಿಸಿಕೊಂಡು ಧಾರವಾಡದಲ್ಲಿ ವಕೀಲಿ ವೃತ್ತಿಯನ್ನು ಮಾಡುತ್ತಿದ್ದಾಗ ನಾನು ಕೆಲವು ದಿವಸ ಈ ಸಂಸ್ಥೆಯ ಕಾರ್ಯದರ್ಶಿಯಾಗಿ ಕೆಲಸಮಾಡಿದೆನು.

ಈ ಸಂಸ್ಥೆಯ ೧೯೨೯ನೇ ಇಸ್ವಿಯಲ್ಲಿ ತನ್ನ ಅಂಗವಾಗಿ' ಲಿಂಗಾಯತರ ವಾಙ್ಮಯ ಶಾಖೆ ' ಎಂಬ ಮಂಡಲವನ್ನು ಸ್ಥಾಪಿಸಿದರು. ಆರಂಭದಲ್ಲಿ ಕೆಲವು ದಿವಸ ನಾನು ಈ ಮಂಡಲದ ಅಧ್ಯಕ್ಷನಿದ್ದೆನು. ಆಗ ಚನ್ನಬಸವ ಪುರಾಣವನ್ನು ಮೊದಲು ಸಂಶೋಧಿಸಿ ಪ್ರಕಟಿಸಬೇಕೆಂದು ಆ ಕಾರ್ಯವನ್ನು ೧೯೩೧ನೇ ಇಸ್ವಿಯಲ್ಲಿ ಕೈಕೊಂಡು, ಆ ಕಾರ್ಯವನ್ನು ೧೯೩೪ನೇ ಇಸ್ವಿಯಲ್ಲಿ ಮುಗಿಸಲಾಯಿತು. ತುಸು ಅವಧಿಯಲ್ಲಿ ಈ ಹೆಬ್ಬೊತ್ತಿಗೆ ಒಳ್ಳೇ ಅಂದವಾಗಿ ಆಗಿದ್ದು ಆಶ್ಚರ್ಯವನ್ನುಂಟುಮಾಡುವಂಥಾದ್ದಾಗಿದೆ. ಇದಕ್ಕೆ ಧನಸಹಾಯವನ್ನು ದೊರಕಿಸಲಿಕ್ಕೆ ಡಾ. ನಂದೀಮಠ, ಶ್ರೀ ಮಳೀಮಠ ವಕೀಲರು ಮತ್ತು ನಾನು ಶ್ರೀಮಂತ ರಾಜಾ ಲಖಮನಗೌಡರು ಸರದೇಸಾಯಿ ವಂಟಮುರಿ ಇವರ ಕಡೆಗೆ ಹೋಗಿದ್ದೆವು. ಅವರ ಕೂಡ ಅವರ ಆಪ್ತರಾದ ಅಮ್ಮಿಣಗಿಯ ಪಾಟೀಲ ಶಂಕರಗೌಡರು ಸಹ ಇರುತ್ತಿದ್ದರು. ಕನ್ನಡ ವಾಙ್ಮಯ ಸ್ಥಾನವು ಎಷ್ಟು ಮಹತ್ವದ್ದದೆ ಎಂಬ ಬಗ್ಗೆ ಒಂದು ಪತ್ರಿಕೆಯನ್ನು ಅವರಿಗೆ ಅರ್ಪಿಸಿ, ಸಹಾಯ ಕೇಳಿಕೊಂಡೆವು. ಅವರು ಅದಕ್ಕೆ ಸಂತೋಷದಿಂದ ಒಪ್ಪಿ ೨೫೦೦ ರೂ. ಗಳ ದಾನಮಾಡಿದರು. ಇದರಿಂದ ವಾಙ್ಮಯ ಶಾಖೆಯ ಕಾರ್ಯಕ್ಕೆ ಬಹಳ ಉತ್ತೇಜನ ದೊರೆಯಿತು.

ಮುಂದೆ ಪ್ರಭುಲಿಂಗಲೀಲೆ ಮೊದಲಾದ ಗ್ರಂಥಗಳು ಪ್ರಕಟವಾದವು. ಪ್ರಭುಲಿಂಗಲೀಲೆಯ ಮುನ್ನುಡಿಯನ್ನು ನಾನು ಬರೆದಿದ್ದೇನೆ. ೧೯೪೧ನೇ ಇಸ್ವಿಯ ಶ್ರೀ ಬಸವಜಯಂತಿಯ ಶುಭಮಹೂರ್ತದಲ್ಲಿ 'ಸಾಹಿತ್ಯ ಸಮಿತಿ' ಪತ್ರಿಕೆಯೆಂಬ ಹೆಸರಿನ ಕನ್ನಡ ಇಂಗ್ಲೀಷ ದ್ವಿಭಾಷೆಯ ತ್ರೈಮಾಸಿಕವು ಆರಂಭಿಸಲ್ಪಟ್ಟಿತು. ಅದರ ಮೂರು ಜನ ಪ್ರಕಾಶಕರಲ್ಲಿ ನಾನೊಬ್ಬನು, ಉಳಿದ ಇಬ್ಬರು ಡಾ. ನಂದೀಮಠ ಮತ್ತು ಪ್ರೊ. ಬಸವನಾಳ. ಈ ಪತ್ರಿಕೆಯು ಜನರಲ್ಲಿ ಪ್ರಸಿದ್ಧಿಪಡೆದು ಒಳ್ಳೇ ರೀತಿಯಿಂದ ನಡೆಯಹತ್ತಿತು. ಆದರೆ ದುರ್ದೈವದಿಂದ ಅದರ ಆಯುಷ್ಯವು ಏಳೇ ವರ್ಷವಾಗಿ ಮುಂದೆ ಅದು ನಿಂತುಹೋಯಿತು. ವ್ಯವಸ್ಥಾಪಕ ಮಂಡಲಿಯಲ್ಲಿ ಸಹ ಹೆಚ್ಚು ಕಡಿಮೆಯಾಗಿ ಕಾರ್ಯದಲ್ಲಿ ಶಿಥಿಲತೆವುಂಟಾಗಿದ್ದರಿಂದ ಮತ್ತು ಲೆಕ್ಕ ಪತ್ರ ಸಹ ಸರಿಯಾಗಿಡದೆ ಇದ್ದುದರಿಂದ, ನಾನು ಮಂಡಲದ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟೆನು. ಮಂಡಲದ ಎಲ್ಲ ಕಾರ್ಯಗಳು ನಿಂತುಹೋದವು. ಈಗಾದರೂ ಮಂಡಲದ ಸಭೆಗಳು ನಡೆಯುತ್ತಿರುತ್ತದೆ. ಆದರೆ ವಿಶೇಷ ಕಾರ್ಯವೇನೂ ಜರುಗುತ್ತಿದ್ದಂತೆ ಕಾಣುವುದಿಲ್ಲ (ಅಗಸ್ಟ ೧೯೫೪).

## ನನ್ನ ಸ್ವಂತ ಪ್ರಕಟನೆಗಳು

೧. **ಶಂಕರದಾಸಿಮಯ್ಯನ ಪುರಾಣ -** ಶಂಕರದಾಸಿಮಯ್ಯನು ದೊಡ್ಡ ಶರಣ. ಇವನು ಶ್ರೀ ಬಸವೇಶ್ವರನ ಕಾಲಕ್ಕಿಂತ ಮುಂಚಿನವನು. ಇವನ ಪುರಾಣದಲ್ಲಿ ಐತಿಹಾಸಿಕ ಸಂಗತಿಗಳು ಕೆಲವು ಇರುವುದರಿಂದ ಇದನ್ನು ಪ್ರಕಟಿಸಬೇಕೆಂಬ ಇಚ್ಛೆಯಾಗಿ ಕೆಲವು ಹಳೇ ಕೈಬರಹದ ಪ್ರತಿಗಳ ಸಹಾಯದಿಂದ ಇದನ್ನು ಸಂಶೋಧಿಸಿ ನನ್ನ ವೆಚ್ಚದಿಂದ ೧೯೪೧ನೇ ಇಸ್ವಿಯಲ್ಲಿ ಪ್ರಕಟಿಸಿ, ಅದರ ಅಚ್ಚಾದ ಪ್ರತಿಗಳನ್ನೆಲ್ಲ ಬಾಧ್ಯತೆ ಸಹಿತ ವಾಙ್ಮಯ ಶಾಖೆಗೆ ಒಂದು ಕರಾರಿನಿಂದ ಕೊಟ್ಟೆನು. ಆ ಕರಾರವು ಯಾವವೆಂದರೆ - ಗೋಕಾವಿಯ ಹೈಸ್ಕೂಲಿನ ವಿದ್ಯಾರ್ಥಿಗಳಲ್ಲಿ ಆರನೆಯ ಇಯತ್ತೆಯಲ್ಲಿ ೧ನೇ ಅಥವಾ ೨ನೇ ನಂಬರ ಪಡೆದು ತೇರ್ಗಡೆ ಹೊಂದಿದವರಿಗೆ 'ನಿಜಗುಣ ಹಾಲಭಾವಿ ಪಾರಿತೋಷಕ' ಎಂಬ ಹೆಸರಿನಿಂದ ಯೋಗ್ಯ ಇನಾಮು ಕೊಡುವುದು.

೨. ಮೋಳಿಗೆಯ ಮಾರಯ್ಯ ಮತ್ತು ರಾಣಿ ಮಹದೇವಿಯರ ವಚನಗಳು : ಕರ್ನಾಟಕದಲ್ಲಿ ಶ್ರೀ ಉತ್ತಂಗಿ ಚೆನ್ನಪ್ಪನವರ ಹೆಸರು ಕೇಳದವರು ಚಿಕ್ಕವರಲ್ಲಿ ಸಹ ಯಾರೂ ಇಲ್ಲ. ಇವರು ಪ್ರಸಿದ್ಧಿಸಿದ ತ್ರಿಪದಿಗಳ ಸರ್ವಜ್ಞನಂತೆ ಇವರೂ ಎಲ್ಲರಿಗೆ ಪರಿಚಿತರು. ಇವರು ಪರಧರ್ಮಿಯರಾದರೂ ಇವರಿಗೆ ಲಿಂಗಾಯತರ ವಚನಧರ್ಮದ ಪರಿಚಯವು ಮಿಗಿಲಾಗಿದೆ. ಇವರ ಜ್ಞಾನದ ಲಾಭ ಪಡೆಯದ ವಿರಳ. ಶ್ರೀ ಹಳಕಟ್ಟಿಯವರು ವಚನಸಾಹಿತ್ಯವನ್ನು ಪ್ರಕಟಿಸಿ ಲಿಂಗಾಯತ ಧರ್ಮದ ಪುನರುದ್ಧಾರ ಮಾಡಿರುವರೆಂಬುದು ನಿಜ. ಆದರೆ ಇವರಿಗೆ ಕನ್ನಡಭಾಷಾ ಪಂಡಿತರ ಸಹಾಯವಿಲ್ಲದಿರುವುದರಿಂದ ಇವರು ಪ್ರಕಟಿಸಿದ ವಚನಗ್ರಂಥಗಳು ಸಂಶೋಧನಾತ್ಮಕವಿರುವುದಿಲ್ಲ. ಶ್ರೀ ಉತ್ತಂಗಿಯವರ ಸಹಾಯದಿಂದ ಇಂಥದೊಂದು ವಚನಗ್ರಂಥವನ್ನು ಪ್ರಕಟಿಸಬೇಕೆಂದು ನನ್ನ ಮನಸ್ಸಿನಲ್ಲಿ ಬಂದು, ಅವರನ್ನು ಕೇಳಲಾಗಿ ಅದಕ್ಕೆ ಅವರು ಸಂತೋಷದಿಂದ ಒಪ್ಪಿ, ಆ ಬಗ್ಗೆ ಈ ವಚನ ಗ್ರಂಥವನ್ನು ಆರಿಸಿದರು. ಅವರ ಮತ್ತು ಅದರ ಪ್ರಸ್ತಾವನೆಯನ್ನು ಬರೆದ ಪ್ರೊ. ಭೂಸನೂರಮಠ ಅವರ ಸಹಾಯದಿಂದ ಪ್ರಕಟಿಸಿದ ಈ ಗ್ರಂಥವು ಜನತೆಯ ಮುಂದೆ ಅದೆ.

೩. ಮೋಳಿಗಯ್ಯನ ಪುರಾಣ - ಮೇಲೆ ಹೇಳಿದ ಇವನ ವಚನ ಗ್ರಂಥವು ಪ್ರಕಟವಾದ ಮೇಲೆ ಇವನ ಚರಿತ್ರವು ಸಹ ಪ್ರಕಟವಾಗುವುದು ಯೋಗ್ಯವೆಂದೆನಿಸಿ, ಅದನ್ನು ಸಹ ಪ್ರೊ. ಭೂಸನೂರಮಠ ಇವರು ಬರೆದ ಪ್ರಸ್ತಾವನೆ ಸಹಿತ ಪ್ರಕಟಿಸಿದೆನು.

೪. ಅನುಭವ ಮಂಟಪದ ಐತಿಹಾಸಿಕತೆ - ಶ್ರೀ ಬಸವೇಶ್ವರನ ಕಾಲದಲ್ಲಿ ಅನುಭವ ಮಂಟಪವೆಂಬ ಹೆಸರಿನ ವಿದ್ವತ್ಸಭೆಯು ಇದ್ದಿಲ್ಲವೆಂದು ಕೆಲವು ಪರಧರ್ಮಿಯರು ಏನೋ ಉದ್ದೇಶದಿಂದ ಪತ್ರಿಕೆಗಳಲ್ಲಿ ಲೇಖಗಳನ್ನು ಕೊಡಹತ್ತಿದರು. ಅವುಗಳಿಗೆ ಉತ್ತರರೂಪವಾಗಿ ಶ್ರೀ ಉತ್ತಂಗಿ ಚೆನ್ನಪ್ಪನವರು ಪ್ರೊ. ಬಸವನಾಳರು ಹೊರಡಿಸುವ ಜಯಕರ್ನಾಟಕ ಮಾಸಪತ್ರಿಕೆಯಲ್ಲಿ ಲೇಖಗಳನ್ನು ಕೊಟ್ಟರು. ಅವೆಲ್ಲ ಸ್ವತಂತ್ರ ಒಂದು ಪುಸ್ತಕವಾಗಿ ಪ್ರಕಟಿಸಬೇಕೆಂದು ನಾನು ಅವರಿಗೆ ಸೂಚಿಸಲಾಗಿ, ಅದಕ್ಕೆ ಅವರು ಒಪ್ಪಿ ಈ ಪುಸ್ತಕವನ್ನು ಸಿದ್ಧಪಡಿಸಿದರು. ಅವರ ಇಚ್ಛೆಯ ಪ್ರಕಾರ ನಾನು ಇದರ ಪ್ರಕಾಶಕನು ಮಾತ್ರ.

**೨. ಕರ್ನಾಟಕ ವಿದ್ಯಾವರ್ಧಕ ಸಂಘ**

ನಾನು ಧಾರವಾಡದಲ್ಲಿ ವಕೀಲಿ ಮಾಡುತ್ತಿದ್ದಾಗ ಮೆ. ಸಿವೆಲ್ ಸಾಹೇಬರ ಇಂಗ್ಲೀಷ ಗ್ರಂಥದ ಆಧಾರದಿಂದ ವಿಜಯನಗರ ಸಾಮ್ರಾಜ್ಯವೆಂಬ ಪುಸ್ತಕ ಬರೆದು, ಸಂಘವು ಪ್ರಕಟಿಸುತ್ತಿರುವ ವಾಗ್ಭೂಷಣ ಮಾಸಪತ್ರಿಕೆಯಲ್ಲಿ ಪ್ರಸಿದ್ಧಿಪಡಿಸಿದ ಸಂಗತಿಯನ್ನು ಈ ಮೊದಲೇ ಹೇಳಿದೆ. ಮುಂದೆ ನಾನು ಸರಕಾರೀ ಕೆಲಸವನ್ನು ಸೇರಿ ಅದರಿಂದ ನಿವೃತ್ತನಾಗುವ ವರೆಗೆ ಯಾವ ಸಾರ್ವಜನಿಕ ಕೆಲಸದಲ್ಲಿ ಸೇರುವುದಕ್ಕೆ ಆಸ್ಪದವಿರಲಿಲ್ಲ. ಮೊದಲು ಸಂಘದ ಕಚೇರಿಯು ಧಾರವಾಡದ ಶುಕ್ರವಾರ ಪೇಟೆಯಲ್ಲಿ ಒಂದು ಬಾಡಿಗೆಯ ಮನೆಯಲ್ಲಿತ್ತು. ಮುಂದೆ ಅದಕ್ಕೆ ಮೈಸೂರ ಸರ್ಕಾರದ ಧನಸಹಾಯವು ದೊರೆತು ಪಟ್ಟಣದ ಹೊರಮಗ್ಗಲು ಮೈಸೂರ ಮಹಾರಾಜರ ಸ್ಮಾರಕವಾಗಿ 'ಚಾಮರಾಜ ಮಂದಿರ'ವೆಂಬ ಹೊಸ ಕಟ್ಟಡವು ಕಟ್ಟಿಸಲ್ಪಟ್ಟಿತು. ನನಗೆ ವಿಜಯನಗರ ಸಾಮ್ರಾಜ್ಯಪುಸ್ತಕವನ್ನು ಬರೆದ ಬಗ್ಗೆ ಆಗಲೇ ಸಂಘದಿಂದ ಇನಾಮು ದೊರೆತಿತ್ತು. ಆಗಿನಿಂದ ನಾನು ಅದರ ಆಜೀವ ಸಭಾಸದನಿದ್ದೆನು. ನಾನು ಸರಕಾರೀ ಕೆಲಸದಿಂದ ನಿವೃತ್ತನಾದ ಮೇಲೆ ೧೯೩೬ನೇ ಇಸ್ವಿಯ ಸುಮಾರಕ್ಕೆ ಕೆಲವು ಕಾಲ ಅದರ ವ್ಯವಸ್ಥಾಪಕ ಮಂಡಲದ ಅಧ್ಯಕ್ಷನಿದ್ದೆನು. ಆದರೆ ಅದರ ಸಾಂಪತ್ತಿಕ ಸ್ಥಿತಿಯು ಚೆನ್ನಾಗಿದ್ದಿಲ್ಲ. ಕಟ್ಟಡದ ಸಲುವಾಗಿ ಅದು ಬ್ಯಾಂಕದಿಂದ ಸಾಲವನ್ನು ಸಹ ಮಾಡಬೇಕಾಗಿತ್ತು. ನನ್ನ ಕಾಲದಲ್ಲಿ ಜನರ ಸಹಾಯವು ದೊರೆಯದೇ ಇದ್ದುದರಿಂದ ಅದರ ಸಾಂಪತ್ತಿಕ ಸ್ಥಿತಿಯನ್ನು ಸುಧಾರಿಸಲಿಕ್ಕೆ ನನಗೆ ಅನುಕೂಲವಾಗಲಿಲ್ಲ. ಅದರ ವೆಚ್ಚವನ್ನು ಕಡಿಮೆಮಾಡಿ ಅದರ ಸ್ಥಿತಿಯನ್ನು ಹೆಚ್ಚು ಕೆಡದಂತೆ ಮಾತ್ರ ಮಾಡಿದೆನು. ಆಗ ಕೆಲವು

ದಿವಸ ನನ್ನ ಚಿ. ದಾನಪ್ಪನು ತನ್ನ ಕಲಾಶಾಲೆಯನ್ನು ಸಂಘದ ಕಟ್ಟಡದ ಮೇಲಂತಸ್ತಿನ ಮೇಲೆ ಹಾಕಿ, ತಿಂಗಳಿಗೆ ೧೦ ರೂ. ಬಾಡಿಗೆಯನ್ನು ಕೊಡುತ್ತಿದ್ದನು.

**೩. ಕರ್ನಾಟಕ ಐತಿಹಾಸಿಕ ಸಂಶೋಧನ ಸಂಸ್ಥೆ**

ಇದು ೧೯೧೪ನೇ ಇಸ್ವಿಯಲ್ಲಿ ಶ್ರೀ ಆಲೂರ ವೆಂಕಟರಾಯರಿಂದ ಕೆಲವು ತರುಣ ಉತ್ಸಾಹಿ ಗೆಳೆಯರ ಸಹಾಯದಿಂದ ಸ್ಥಾಪಿಸಲ್ಪಟ್ಟು ಕಾರ್ಯವನ್ನು ಆರಂಭಿಸಿತು. ನಾನು ಸಹ ಅದರ ಆಜೀವ ಸಭಾಸದನಾದೆನು. ಸರಕಾರಿ ಕೆಲಸದಿಂದ ೧೯೩೩ನೇ ಇಸ್ವಿಯಲ್ಲಿ ನಿವೃತ್ತನಾದ ಮೇಲೆ ನನ್ನನ್ನು ಅದರ ವ್ಯವಸ್ಥಾಪಕ ಮಂಡಲಿಯಲ್ಲಿ ತೆಗೆದುಕೊಂಡಂತೆ ತೋರುತ್ತದೆ. ಅದಕ್ಕೆ ತನ್ನ ಸ್ವಂತ ಕಟ್ಟಡವಿಲ್ಲದಿದ್ದರೂ ಬಾಡಿಗೆ ಕಟ್ಟಡದಲ್ಲಿ ತನ್ನ ಕಚೇರಿಯನ್ನಿಟ್ಟು ೨೫ ವರ್ಷಗಳ ವರೆಗೆ ಚೆನ್ನಾಗಿ ಕೆಲಸವನ್ನು ಸಾಗಿಸುತ್ತ ಬಂತು. ಅದರ ರಜತ ಮಹೋತ್ಸವವು ಸಹ ೧೯೪೦ ನೇ ಇಸ್ವಿಯಲ್ಲಿ ಹಿಂದುಸ್ತಾನ ಸರ್ಕಾರದ ಪುರಾತನ ವಸ್ತು ಸಂಶೋಧನ ಶಾಖೆಯ ಮುಖ್ಯಾಧಿಕಾರಿಯಾದ ಶ್ರೀ. ಕೆ. ಇ. ಎನ್. ದೀಕ್ಷಿತ ಇವರ ಅಧ್ಯಕ್ಷತೆಯಲ್ಲಿ ನೆರವೇರಿತು. ಮುಂದೆ ನಾನು ಅದರ ಟ್ರಸ್ಟಿಗಳ ಮತ್ತು ವ್ಯವಸ್ಥಾಪಕ ಮಂಡಲದ ಅಧ್ಯಕ್ಷನಾದೆನು. ಶ್ರೀ ಕಮಲಾಪೂರ ವಕೀಲರು ಅದರ ಕಾರ್ಯದರ್ಶಿಗಳಾಗಿದ್ದರು. ಅದರ ಕಚೇರಿಯು ಕಿಲ್ಲೆಯೊಳಗೆ ಶ್ರೀ ದೇಶಪಾಂಡೆಯೆಂಬವರ ಮನೆಯ ಒಂದು ಭಾಗದಲ್ಲಿತ್ತು. ಮಂಡಲದ ಸಭಾಸದರ ಉತ್ಸಾಹವು ಕಡಿಮೆಯಾಗುತ್ತ ಬಂತು. ನನ್ನ ಅಶಕ್ತ ಪ್ರಕೃತಿಯ ಮೂಲಕ ನನ್ನಿಂದ ವಿಶೇಷ ಕೆಲಸವೇನೂ ಆಗುತ್ತಿದ್ದಿಲ್ಲ. ಇವೆಲ್ಲ ಕಾರಣಗಳಿಂದ ಅಧ್ಯಕ್ಷ ಪದಕ್ಕೆ ರಾಜೀನಾಮೆಯನ್ನು ಬರೆದುಕೊಟ್ಟೆನು. ಆದರೂ ಮಂಡಲದ ಸಭೆಗಳನ್ನು ಕರೆದಾಗ್ಗೆ ನನಗೆ ನೋಟೀಸು ಕಳಿಸುತ್ತಿದ್ದರು. ಕೆಲಸಕ್ಕೆ ಅಡಚಣೆಯಾಗಬಾರದೆಂದು ನಾನು ಧಾರವಾಡದಲ್ಲಿದ್ದಾಗ ಸಭೆಗಳಿಗೆ ಹೋಗುತ್ತಿದ್ದೆನು. ಚಳಿಗಾಲ ಮತ್ತು ಮಳೆಗಾಲದಲ್ಲಿ ಅಲ್ಲಿಯ ತಂಪು ಹವೆಯು ನನಗೆ ಸರಿಯಾಗುತ್ತಿದಿದಲ್ಲವೆಂದು ನಾನು ಅಲ್ಲಿರದೆ ಗೋಕಾವಿಯಲ್ಲಿರುತ್ತಿದ್ದೆನು. ಮುಂದೆ ಮನೆಯ ಒಡೆಯರಾದ ದೇಶಪಾಂಡೆಯವರು ಸಂಘಕ್ಕೆ ಕೊಟ್ಟ ಭಾಗವು ತಮ್ಮ ಉಪಯೋಗಕ್ಕೆ ಬೇಕೆಂದು ಅದನ್ನು ಬಿಟ್ಟುಕೊಡಲಿಕ್ಕೆ ನೋಟೀಸು ಕೊಟ್ಟರು. ಕಾರ್ಯದರ್ಶಿಗಳು ಕಮಲಾಪೂರವರು ಈ ಸರ್ಕಾರಿ ಕೆಲಸದಲ್ಲಿ ಸೇರಿ ಸಂಘದ ಕೆಲಸವು ನಿಂತುಹೋಯಿತು. ದೇಶಪಾಂಡೆಯವರ ಮನೆಯನ್ನು ಬಿಡದೇ ಇದ್ದುದರಿಂದ, ಅವರು ಸಂಘದ ಮೇಲೆ ಕೋರ್ಟಿನಲ್ಲಿ ವ್ಯಾಜ್ಯ ಹೂಡಿ ತಮ್ಮ ಮನೆಯನ್ನು ವಶಪಡಿಸಿಕೊಳ್ಳುವ ಬಗ್ಗೆ ಹುಕುಮ ನಾಮೆಯನ್ನು ಪಡೆದುಕೊಂಡು, ಆ ಬಗ್ಗೆ ಅಮಲು ನಡೆಸಿ ಮನೆಯ ಕಬ್ಜೆಯನ್ನು ಪಡೆದುಕೊಳ್ಳಲಿಕ್ಕೆ ಕೋರ್ಟಿನಿಂದ ವಾರಂಟು ಸಹ ತೆಗೆದುಕೊಂಡು ಬಂದರು. ಆಗ ಆಕಸ್ಮಾತ್ತಾಗಿ ಧಾರವಾಡದಲ್ಲಿ ನನಗೆ ಈ ಸುದ್ದಿಯನ್ನು ತಿಳಿಸಿದರು. ಸಂಘದ ಎಲ್ಲ ಸಾಮಾನುಗಳ ವ್ಯವಸ್ಥೆಯನ್ನು ಹ್ಯಾಗೆ ಮಾಡಬೇಕೆಂಬ ಕಠಿಣ ಪ್ರಶ್ನೆಯು ಬಂದಿತು. ಪುಸ್ತಕಗಳ ಕಪಾಟುಗಳನ್ನು ಮತ್ತು ಫೋಟೋದಂಥ ಕೆಲವು ಸಾಮಾನುಗಳನ್ನು ವಿದ್ಯಾವರ್ಧಕ ಸಂಘದವರ ಒಪ್ಪಿಗೆಯನ್ನು ಪಡೆದು ಅವರ ವಶಕ್ಕೆ ಕೊಟ್ಟು, ಕಾಗದ ಪತ್ರಗಳ ಪೆಟ್ಟಿಗೆಗಳನ್ನು ಮತ್ತು ಉಳಿದ ಸಾಮಾನುಗಳನ್ನು ನನ್ನ ಮನೆಯಲ್ಲಿಟ್ಟುಕೊಂಡೆನು. ಇದರ ವ್ಯವಸ್ಥಾಪಕ ಮಂಡಲದಲ್ಲಿ ಶ್ರೀ ಡಿ.ಪಿ. ಕರಮರಕರ, ಪ್ರೊ. ಸಿ.ಡಿ. ದೇಶಪಾಂಡೆ, ಪ್ರೊ. ಬಾಗಿ, ಶ್ರೀ. ಎನ್.ಕೆ. ದೀಕ್ಷಿತ ಇಂಥವರು ಇರುತ್ತಾರೆ. ಸುಮಾರು ೨೦೦೦ ರೂಪಾಯಿ ಶಿಲ್ಕು ಇದ್ದವು. ಹೀಗಿದ್ದರೂ ೮-೧೦ ವರ್ಷಗಳಿಂದ ಸಂಘದ ಸಲುವಾಗಿ ಬೇರೆ ಕಚೇರಿಯ ವ್ಯವಸ್ಥೆಯಾಗದೇ ಅದರ ಎಲ್ಲ ಕಾರ್ಯವು ನಿಂತು ಹೋಗಿತ್ತೆಂಬುದು ಬಹಳ ಶೋಚನೀಯವು.

ಇಷ್ಟರಲ್ಲಿ ಇಲ್ಲಿಯ ಹಳೇ ದರ್ಬಾರ ಹಾಲದ ಸಮೀಪದಲ್ಲಿ ಈ ಸಂಘದ ಕಟ್ಟಡ ಕಟ್ಟಿಸಲಿಕ್ಕೆ ಸರಕಾರದಿಂದ ಒಂದು ಸ್ಥಳವು ಉಚಿತವಾಗಿ ದೊರೆತಿತ್ತು. ಶ್ರೀ ಕಮಲಾಪೂರವರು ಹೋದ ಮೇಲೆ ಕರ್ನಾಟಕ

ಕಾಲೇಜದ ಪ್ರೊ. ಶ್ರೀ ಸಿ.ಡಿ. ದೇಶಪಾಂಡೆ ಅವರು ಕಾರ್ಯದರ್ಶಿಯ ಕೆಲಸವನ್ನು ತುಸು ಮಟ್ಟಿಗೆ ನಡೆಸುತ್ತ ಬಂದರು. ಅವರು ಧಾರವಾಡದಿಂದ ವರ್ಗವಾಗಿ ಎರಡನೆ ಕಡೆಗೆ ಹೋಗುವಾಗ ಸಂಘದ ಕೆಲಸವನ್ನು ಕೆ.ಇ. ಬೋರ್ಡಿನ ಸದಸ್ಯರಾದ ಶ್ರೀ. ವಿ. ಆರ್ ಮುಧೋಳಕರವರಿಗೆ ವಹಿಸಿಕೊಟ್ಟರು. ಸುಮಾರು ೨ ವರ್ಷಗಳ ಹಿಂದೆ ನನ್ನ ಹತ್ತರ ಇದ್ದ ಹಣವನ್ನು ಶ್ರೀ ಮುಧೋಳಕರ ಮತ್ತು ಧಾರವಾಡ ಇಲೆಕ್ಟ್ರಿಕ್ ಕಂಪನಿಯ ಒಡೆಯರಾದ ಶ್ರೀ ಸಿ.ಎಸ್. ದೇಸಾಯಿಯವರ ವಶಕ್ಕೆ ಕೊಟ್ಟು, ಸರಕಾರದವರು ಕೊಟ್ಟ ಸ್ಥಳದ ಮೇಲೆ ಕಚೇರಿಯ ಕೆಲಸದ ಸಲುವಾಗಿ ಒಂದು ಚಿಕ್ಕ ಕಟ್ಟಡವನ್ನು ರಚಿಸಬೇಕೆಂದು ಸೂಚಿಸಿದೆನು. ಅವರು ಕೆಲವು ಹೆಚ್ಚು ಹಣವನ್ನು ಕೂಡಿಸಿ ಈ ಕಟ್ಟಡವನ್ನು ತಯಾರಿಸಿದರು. ಶ್ರೀ ಮುಧೋಳಕರವರು ಚಿಲ್ಲಾಪಿಲ್ಲಿಯಾಗಿದ್ದ ಸಂಘದ ಕಾರ್ಯವನ್ನು ಮುಂದುವರಿಸಬೇಕೆಂದು ಆಲೋಚಿಸಿದರು. ಇಷ್ಟರಲ್ಲಿ ಮಧ್ಯವರ್ತಿ ಸರಕಾರದ ವ್ಯಾಪಾರ ಮಂತ್ರಿಗಳಾದ ಶ್ರೀ ಕರಮರಕರವರು ಮತ್ತು ರೇಲ್ವೆ ಮಂತ್ರಿಗಳಾದ ಶ್ರೀ ಲಾಲಬಹಾದ್ದೂರ ಶಾಸ್ತ್ರಿಯವರು ಧಾರವಾಡಕ್ಕೆ ಬಂದಿದ್ದರು. ಇದರ ಲಾಭ ಪಡೆದು ಸಂಘದ ವ್ಯವಸ್ಥಾಪಕ ಮಂಡಲದವರು ಶ್ರೀ ಲಾಲಬಹದ್ದೂರ ಶಾಸ್ತ್ರಿಯವರಿಂದ ಈ ಕಟ್ಟಡದ ಉದ್ಘಾಟನೆ ಮತ್ತು ಮುಖ್ಯ ಕಟ್ಟಡದ ಶಂಕುಸ್ಥಾಪನೆ ಮಾಡಿಸಬೇಕೆಂದು ಯೋಚಿಸಿ ಆ ಕಾರ್ಯವನ್ನು ತಾ. ೨೩-೬-೧೯೫೫ ನೇ ಇಸ್ವಿಯ ದಿವಸ ಒಳ್ಳೇ ವಿಜೃಂಭಣೆಯಿಂದ ನೆರವೇರಿಸಿದರು. ಇನ್ನು ಮುಂದೆ ಸಂಘದ ಕಾರ್ಯವು ಸರಿಯಾಗಿ ಸಾಗಲೆಂದು ಹಾರೈಸೋಣ.

**೪. ಕರ್ನಾಟಕ ಲಿಂಗಾಯತ ಶಿಕ್ಷಣಸಂಸ್ಥೆ,(KLE) ಬೆಳಗಾವ**

ವಿಕ್ಟೋರಿಯಾ ಮಹಾರಾಣಿಯ ಸುವರ್ಣಮಹೋತ್ಸವದ ಸ್ಮಾರಕವೆಂದು ಅಥಣಿಯ ಸದ್ಗೃಹಸ್ಥರು ೧೦೦೦ ರೂ. ಯ ನಿಧಿ ಕೂಡಿಸಿ ಅದರಿಂದ ಲಿಂಗಾಯತರಲ್ಲಿ ಮೊದಲು ಎಲ್. ಎಲ್.ಬಿ. ಪರೀಕ್ಷೆ ಪಾಸಾದ ಮೊದಲನೇ ಇಬ್ಬರು ವಿದ್ಯಾರ್ಥಿಗಳಿಗೆ ಒಂದು ಇನಾಮು ಕೊಡಬೇಕೆಂದು ಗೊತ್ತುಪಡಿಸಿ ಸರ್ಕಾರದಲ್ಲಿ ಇಟ್ಟಿದ್ದರಲ್ಲಿ ಎಲ್.ಎಲ್.ಬಿ. ಪರೀಕ್ಷೆ ಪಾಸಾದ ಇಬ್ಬರಿಗೆ ಇನಾಮು ದೊರೆತ ಸಂಗತಿಯು ಈ ಮೊದಲೇ ಹೇಳಲ್ಪಟ್ಟಿದೆ. ೧೯೧೬ನೇ ಇಸ್ವಿಯ ವರೆಗೆ ಎಮ್.ಎ. ಪರೀಕ್ಷೆಯಲ್ಲಿ ಯಾರೂ ಪಾಸಾಗಲಿಲ್ಲ. ಆ ವರ್ಷ ಶ್ರೀ ಎಸ್.ಎಸ್. ಬಸವನಾಳ ಮತ್ತು ಎಮ್.ಎಸ್.ಸಾಖರೆ ಎಂಬವರು ಒಂದೇ ಕಾಲಕ್ಕೆ ಪಾಸಾದರು. ಅವರಿಗೆ ಮೇಲೆ ಬರೆದ ನಿಧಿಯಲ್ಲಿ ಉಳಿದ ೪೦೦ ರೂ. ಮತ್ತು ಅದರ ಬಡ್ಡಿಯ ಹಣವು ಇನಾಮು ರೂಪಿನಿಂದ ಸರಿಯಾಗಿ ಕೊಡಲ್ಪಟ್ಟಿತು. ಆ ಕಾಲಕ್ಕೆ ವಿದ್ಯಾಖಾತೆಯಲ್ಲಿ ಲಿಂಗಾಯತರು ಹೆಚ್ಚಾಗಿ ಇದ್ದಿದ್ದಿಲ್ಲ. ಇವರು ಸೇರಿದ್ದರೆ ಸಹಜವಾಗಿ ಹೆಚ್ಚಿನ ಅಧಿಕಾರಿಗಳ ಸ್ಥಳಗಳಿಗೆ ಏರಬಹುದಾಗಿತ್ತು. ಆದರೆ ಲಿಂಗಾಯತರ ಸಮಾಜದ ಸುದೈವದಿಂದ ಇವರು ಸ್ವಾರ್ಥತ್ಯಾಗ ಮಾಡಿ ಬೇರೆ ಕೆಲವರನ್ನು ಕೂಡಿಕೊಂಡು ಮೇಲ್ಕಂಡ ಸಂಸ್ಥೆಯನ್ನು ಬೆಳಗಾವಿಯಲ್ಲಿ ಸ್ಥಾಪಿಸಿ, ಅಲ್ಲಿ ಧಾರವಾಡದ ಲಿಂಗಾಯತ ವಿದ್ಯಾಭಿವೃದ್ಧಿಯ ಸಂಸ್ಥೆಯ ಉತ್ಪಾದಕರಾದ ಶ್ರೀ ಗಿಲಗಂಚಿ ಮತ್ತು ರಾ. ಬ. ಅರಟಾಳ ಸಾಹೇಬರ ಸ್ಮಾರಕವಾಗಿ ಗಿಲಗಂಚಿ ಅರಟಾಳ ಹೈಸ್ಕೂಲವನ್ನು ಆರಂಭಿಸಿದರು. ಈ ಸಂಸ್ಥೆಯು ಈಗ ಎಷ್ಟು ಬೆಳೆದಿದೆಯೆಂಬುದು ಕರ್ನಾಟಕಸ್ಥರ ಕಣ್ಣ ಮುಂದೆ ಇರುತ್ತದೆ.

ಶ್ರೀಮಂತ ಲಿಂಗಪ್ಪ ಜಾಯಪ್ಪ ಸರದೇಸಾಯಿ ಸಿರಸಂಗಿಯವರು ತಮಗೆ ಸಂತಾನವಿಲ್ಲದ್ದರಿಂದ ತಮ್ಮ ದೇಸಗತಿಯ ಇಡಿಯ ಆಸ್ತಿಯನ್ನು ಲಿಂಗಾಯತರ ವಿದ್ಯಾಭ್ಯಾಸದ ಸಹಾಯಕ್ಕಾಗಿ ಧಾರೆಯೆರೆದು ಮೃತ್ಯುಲೇಖವನ್ನು ಮಾಡಿ ಲಿಂಗೈಕ್ಯರಾಗಿದ್ದರು. ಈ ಆಸ್ತಿಯ ವ್ಯವಸ್ಥೆಯನ್ನು ಮಾಡಲಿಕ್ಕೆ ಅವರು ಬೆಳಗಾವಿಯ ಕಲೆಕ್ಟರ ಮತ್ತು ಕೆಲವು ಲಿಂಗಾಯತರನ್ನು ವಿಶ್ವಸ್ಥ (Trustee) ರಾಗಿ ನೇಮಿಸಿದ್ದರು. ಇವರಲ್ಲಿ ಶ್ರೀ ಸತ್ಯಪ್ಪ ಘಾಳಿಯೆಂಬವರೊಬ್ಬರಿದ್ದರು. ಅವರ ಸ್ಥಳವು ಬರಿದಾದಾಗ ನಾನು ಕೆಲವು ದಿವಸ ವಿಶ್ವಸ್ಥನಾಗಿ ನಿಯಮಿಸಲ್ಪಟ್ಟಿದ್ದೆನು. ಆ ಆಸ್ತಿಯ ಉತ್ಪನ್ನದಿಂದ ಲಿಂಗಾಯತ ವಿದ್ಯಾರ್ಥಿಗಳು ಪರದೇಶಗಳಿಗೆ ಸಹ ಹೋಗಿ

ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಲಿಕ್ಕೆ ಸಹಾಯವಾಯಿತು. ಇಂಥ ವಿದ್ಯಾರ್ಥಿಗಳಲ್ಲಿ ಶ್ರೀ ಡಿ. ಸಿ. ಪಾವಟೆ M.A. (Cantub) ಇವರೊಬ್ಬರು. ಇವರು ವಿಲಾಯತಿಯಲ್ಲಿ ತಮ್ಮ ಅಭ್ಯಾಸ ತೀರಿಸಿಕೊಂಡು ಸುಮಾರು ೧೯೩೦ನೇ ಇಸ್ವಿಯಲ್ಲಿ ತಿರುಗಿ ಬಂದಮೇಲೆ ಇವರನ್ನು ಮುಂದುಮಾಡಿಕೊಂಡು ಒಂದು ಆರ್ಟ್ಸ್ ಕಾಲೇಜ ಸ್ಥಾಪಿಸಬೇಕೆಂದು ಮೇಲಿನ ಸಂಸ್ಥೆಯವರು ಮಾಡಿದ ಪ್ರಯತ್ನವು ಸಫಲವಾಗಲಿಲ್ಲ. ಆಮೇಲೆ ತುಸು ಕಾಲದ ನಂತರ ಡಾ. ನಂದೀಮಠವರು Ph.D ಪದವಿಯನ್ನು ಪಡಕೊಂಡು ತಿರುಗಿ ಬಂದಮೇಲೆ ಇವರ ನೇತೃತ್ವದಲ್ಲಿ ಸಂಸ್ಥೆಯವರು ಪುನಃ ಪ್ರಯತ್ನಮಾಡಲಾಗಿ ಅದು ಸಫಲವಾಗಿ ೧೯೩೩ನೇ ಇಸ್ವಿಯಲ್ಲಿ ಬೆಳಗಾವಿಯಲ್ಲಿ ಲಿಂಗರಾಜ ಕಾಲೇಜೆಂಬ ಹೆಸರಿನಿಂದ ಆರ್ಟ್ಸ್ ಕಾಲೇಜದ ಸ್ಥಾಪನೆಯಾಯಿತು.

ಸಂಸ್ಥೆಯ ಸ್ಥಾಪಕರಲ್ಲಿ ಶ್ರೀ ಸಾಖರೆಯವರು ಯಾವಾಗಲೂ ಅಧಿಕಾರ ನಡೆಸುವ ಸ್ಥಾನದಲ್ಲಿ ಇರಬೇಕೆಂಬುವ ಇಚ್ಛೆಯುಳ್ಳವರು. ಹೈಸ್ಕೂಲ ಸ್ಥಾಪನೆಯಾದಂದಿನಿಂದ ಅವರು ಹೆಡ್ ಮಾಸ್ತರರಾಗಿದ್ದರು. ಕಾಲೇಜದ ಪ್ರಿನ್ಸಿಪಾಲರಾಗುವುದು ಅವರಿಗೆ ಶಕ್ಯತೋರದ್ದರಿಂದ ಕಡೆಗೆ ಅದರಲ್ಲಿ ಪ್ರಾಧ್ಯಾಪಕರಾಗಿ ಸೇರಲಿಕ್ಕೆ ಪ್ರಯತ್ನಪಟ್ಟರೂ ಅದಕ್ಕೆ ಮೇಲಧಿಕಾರಿಗಳು ಒಪ್ಪಲಿಲ್ಲ. ಮುಂದೆ ಅವರು ಇಂಗ್ಲಂಡಕ್ಕೆ ಹೋಗಿ Diploma of Education ಪದವಿಯನ್ನು ಪಡಕೊಂಡು ಬಂದರು. ಆಮೇಲೆ ಅವರನ್ನು ಪ್ರೈಮರಿ ಟೀಚರ ಟ್ರೇನಿಂಗ ಕಾಲೇಜದ ಮುಖ್ಯಾಧ್ಯಾಪರರನ್ನಾಗಿ ಮಾಡಿ ನೇಮಿಸಿದರು ಆದರೆ ಡಾ. ನಂದೀಮಠ ಅವರು ಆರ್ಟ್ಸ್ ಕಾಲೇಜದ ಪ್ರಿನ್ಸಿಪಾರಾಗಿರುವುದು ಸಹನವಾಗದೆ ಸಂಸ್ಥೆಯ ಕೆಲವು ಸಭಾಸದರನ್ನು ಮತ್ತು ಆಜೀವ ಸಭಾಸದರನ್ನು ಕೂಡಿಕೊಂಡು, ಅವರ ವಿರುದ್ಧ ಚಳುವಳಿಯನ್ನೆಬ್ಬಿಸಿ ಅವರ ಮೇಲೆ ಕೆಲವು ಆರೋಪಗಳನ್ನು ಮಾಡಿದರು. ಈ ಚಳುವಳಿಯು ವಿಕೋಪಕ್ಕೆ ಹೋಗಿ ಹೈಸ್ಕೂಲ ಕಾಲೇಜಗಳಲ್ಲಿ ವಿದ್ಯಾರ್ಥಿಗಳ ಅಭ್ಯಾಸ ನಡೆಯಲಿಕ್ಕೆ ಸಹ ಆತಂಕವಾಯಿತು. ಇದನ್ನು ನೋಡಿ ಸಂಸ್ಥೆಯ ಹಿತಚಿಂತಕರು ತಾ. ೨೬-೬-೧೯೪೧ ನೇ ದಿವಸ ಬೆಳಗಾವಿಯಲ್ಲಿ ಸಂಸ್ಥೆಯ ಸಾಧಾರಣ ಸಭೆಯನ್ನು ಕೂಡಿಸಿ ಸುದೀರ್ಘವಾಗಿ ಚರ್ಚಿಸಿ, ಎಲ್ಲ ಅಂಗಸಂಸ್ಥೆಗಳನ್ನು ಸರಿಯಾಗಿ ನಡೆಯಿಸಿಕೊಂಡು ಹೋಗಬೇಕು ಮತ್ತು ಆಜೀವ ಸಭಾಸದರ ಮತ್ತು ಇತರರ ತಕರಾರುಗಳನ್ನು ಕೇಳಿಕೊಂಡು ನಿಜಸ್ಥಿತಿಯನ್ನು ಕಂಡುಹಿಡಿದು, ಜನರ ವಿಕಲ್ಪಗಳನ್ನು ದೂರಮಾಡಬೇಕು ಎಂಬ ಉದ್ದೇಶದಿಂದ ಕೆಳಗೆ ಬರೆದ ೭ ಜನರ ಒಂದು ವ್ಯವಸ್ಥಾಪಕರ ಮಂಡಲವನ್ನು ನೇಮಿಸಿದರು. ಈ ಜನರು ಯಾರೆಂದರೆ :

೧. ಬಸವಂತಪ್ಪ ಗಿಲಗಂಚಿ ನಿವೃತ್ತ ಮಾಮಲೇದಾರ - ಅಧ್ಯಕ್ಷ

೨. ರಾ.ಬ. ಷಣ್ಮುಖಪ್ಪ ಅಂಗಡಿ ಬಿ.ಎ.ಎಲ್.ಎಲ್.ಬಿ, ವಕೀಲ

೩. ಶ್ರೀ. ಅಣ್ಣಪ್ಪ ಮೆಟಗುಡ್ಡ, ಬೈಲಹೊಂಗಲ

೪. ಶ್ರೀ ಮಲ್ಲಪ್ಪ ಸಾತಪ್ಪ ಕತ್ತಿ, ಬೆಲ್ಲದ ಬಾಗೇವಾಡಿ

೫. ಶ್ರೀ ಪಂಡಿತಪ್ಪ ಚಿಕ್ಕೋಡಿ ಬಿ.ಎ.

೬. ಶ್ರೀ ವೀರಪ್ಪ ಉಪ್ಪಿನ, ಬೆಳಗಾವ

೭. ವೀರಭದ್ರಪ್ಪ ಬಸಪ್ಪ ಹಾಲಭಾವಿ

ಈ ಮಂಡಲದವರು ಸುಮಾರು ೬ ತಿಂಗಳು ಒಳ್ಳೇ ಪರಿಶ್ರಮದಿಂದ ದುಡಿದು ಸಂಸ್ಥೆಯಲ್ಲಿ ಅನೇಕ ಸುಧಾರಣೆಗಳನ್ನು ಮಾಡಿ, ಡಾ. ನಂದೀಮಠ ಇವರ ವಿರುದ್ಧ ಬಂದ ದೂರುಗಳನ್ನು ಕೂಲಂಕುಷವಾಗಿ ಕೇಳಿಕೊಂಡು ತಮ್ಮ ವರದಿಯನ್ನು ಒಪ್ಪಿಸಿದರು.

ಅದರೆ ಶ್ರೀ ಸಾಖರೆಯವರು ವರ್ತನ ಉದ್ದೇಶ ಮೊದಲಾದವು ಸರಿಯಾಗಿಲ್ಲವೆಂದೂ ಅವರೇ ಈ ಗದ್ದಲವನ್ನು ಸುಮ್ಮನೆ ಎಬ್ಬಿಸಿರುವರೆಂದೂ ಈ ಎಲ್ಲ ತೊಂದರೆಗೆ ಅವರೇ ಮೂಲಕಾರಣವೆಂದೂ ತೋರಿಸಲಾಗಿದೆ.

ಮುಂದೆ ತಾ. ೪.೧.೧೯೪೨ ನೇ ದಿವಸ ಕೂಡಿದ ಸಂಸ್ಥೆಯ ಸಭೆಯಲ್ಲಿ ವಿಶೇಷ ಚರ್ಚೆಯಾಗಿ ಸಂಸ್ಥೆಯ ಆಡಳಿತೆಯು ಆಜೀವ ಸಭಾಸದರ ಕೈಯಲ್ಲಿರದೆ, ಹೊರಗಿನ ಹೊಣೆಗಾರ ಮುಖಂಡರ ಕೈಯಲ್ಲಿರುವುದು. ಸಂಸ್ಥೆಗೆ ಹಿತಕರವೆಂದು ಕಂಡುಬಂದುದರಿಂದ ಅಂತಹ ೧೨ ಜನರ ಒಂದು ಕಮೀಟಿಯನ್ನು ನೇಮಿಸಿ, ಅವರು ೨ ವರ್ಷಗಳ ವರೆಗೆ ಸಂಸ್ಥೆಯು ಎಲ್ಲ ಅಂಗ ಸಂಸ್ಥೆಗಳನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗಲು ಎಲ್ಲ ಅಧಿಕಾರ ಅವರಿಗೆ ಕೊಟ್ಟು ಮುಂದೆ ಇಂತಹ ತೊಂದರೆಗಳು ಉಂಟಾಗದಂತೆ ಉಪಾಯಗಳನ್ನೊಳಗೊಂಡ ಒಂದು ಘಟನೆ (constitution) ಯನ್ನು ಏರ್ಪಡಿಸಬೇಕು ಎಂದು ಬಹುತರ ಒಮ್ಮನಸ್ಸಿನಿಂದ ನಿರ್ಣಯಿಸಿ, ಸಂಸ್ಥೆಯ ಆಡಳಿತೆಯ ಎಲ್ಲ ಅಧಿಕಾರವನ್ನು ಈ ಕಮೀಟಿಯ ವಶಕ್ಕೆ ಕೊಟ್ಟರು. ಈ ಕಮೀಟಿಯಲ್ಲಿ ನೇಮಿಸಿದ ಸಭಾಸದರ ಹೆಸರುಗಳನ್ನು ಮತ್ತು ಇದರ ಉಪಾಧ್ಯಕ್ಷರಾದ ಶ್ರೀ ಗಿಲಗಂಚಿ ಮತ್ತು ಅಂಗಡಿಯವರು ಈ ಕಮೀಟಿಯನ್ನು ನೇಮಿಸುವ ಮುಂಚೆ ಮತ್ತು ನಂತರ ಆದ ಎಲ್ಲ ಸಂಗತಿಗಳ ಒಂದು ವರದಿಯನ್ನು ಬರೆದು ತಾ. ೧೩-೮-೧೯೪೩ ನೇ ದಿವಸ ಪ್ರಸಿದ್ಧಪಡಿಸಿರುತ್ತಾರೆ. ಅದರ ಒಂದು ಪ್ರತಿಯು ಮತ್ತು ಅದರಲ್ಲಿ ಕಾಣಿಸಿದ ಡಾ. ನಂದೀಮಠ ಅವರ ವಿರುದ್ಧ ನಡೆದ ಮೂರನೆಯ ಖಟ್ಲೆಯ ನಿರ್ಣಯದ ಒಂದು ಪ್ರತಿಯು ಕೂಡ ಅದೆ. ಅವುಗಳನ್ನು ನೊಡಬೇಕು.

ಈ ಸಂಸ್ಥೆಗೆ ನಾನು ೧೯೨೮ನೇ ಇಸ್ವಿಯ ಡಿಸೆಂಬರ ತಿಂಗಳಲ್ಲಿ ೫೦೦ ರೂ. ಗಳ ದೇಣಿಗೆಯನ್ನು ಕೊಟ್ಟಂದಿನಿಂದ ಇದರ ಸಭಾಸದನಾದೆನು. ಮುಂದೆ ೧೯೩೪ನೇ ಇಸ್ವಿಯ ಜುಲೈ ತಿಂಗಳದಲ್ಲಿ ಕಾಲೇಜದ ವಿದ್ಯಾರ್ಥಿಗೃಹ ವಸತಿಯಲ್ಲಿ ನನ್ನ ತಂದೆಯ ಹೆಸರಿನಲ್ಲಿ ಒಂದು ಕೋಣೆಯನ್ನು ಕಟ್ಟಲಿಕ್ಕೆ ೧೦೦೦ ರೂ. ಗಳ ದೇಣಿಗೆಯನ್ನು ಕೊಟ್ಟೆನು. ಆ ನಂತರ ನವಂಬರ ೧೯೩೩ನೇ ಇಸ್ವಿಯಲ್ಲಿ ನನ್ನ ತಾಯಿಯ ಸ್ಮಾರಕಕ್ಕಾಗಿ ಒಂದು ವಿದ್ಯಾರ್ಥಿವೇತನವನ್ನು ಇಡುವ ಬಗ್ಗೆ ೨೦೦೦ ರೂ. ಗಳ ದೇಣಿಗೆಯನ್ನು ಕೆಲವು ಕರಾರುಗಳನ್ನು ಹಾಕಿ ಕೊಟ್ಟೆನು. ಈ ಕರಾರುಗಳಲ್ಲಿ ಹೆಚ್ಚುಕಡಿಮೆ ಮಾಡಿ ಕಡೆಗೆ ೧೯೪೪ ನೇ ಜೂನ ೨ ನೇ ತಾರೀಖಿನ ದಿವಸ ಗೊತ್ತುಪಡಿಸಿದ ಕರಾರುಗಳು ಈ ರೀತಿ ಅವೆ.

೧. ಈ ದೇಣಿಗೆಯ ಹಣವನ್ನು ಸರಕಾರೀ ಸೆಕ್ಯೂರಿಟಿ ಅಥವಾ ಸಂಸ್ಥೆಗೆ ಯೋಗ್ಯ ಕಂಡ Co-operative Bankದಲ್ಲಿ ಇಡಬೇಕು.

೨. ಈ ಹಣದ ಬಡ್ಡಿಯನ್ನು ಶ್ರೀಮತಿ ಶಿವಗಂಗವ್ವ ಹಾಲಭಾವಿ Scholarship. ಈ ಹೆಸರಿನಿಂದ ಲಿಂಗರಾಜ ಕಾಲೇಜದಲ್ಲಿ ಒಂದನೇ ವರ್ಷದ ವರ್ಗದಲ್ಲಿ ಅಭ್ಯಾಸ ಮಾಡುವ ಮೇಲೆ ಬಂದ ಲಿಂಗಾಯತ ವಿದ್ಯಾರ್ಥಿನಿಗೆ ಕೊಡಬೇಕು.

೩. ಇಂಥ ವಿದ್ಯಾರ್ಥಿನಿಯು ದೊರೆಯದಿದ್ದರೆ ಇದರ ಮೇಲಿನ ವರ್ಗದಲ್ಲಿ ಅಭ್ಯಾಸ ಮಾಡುವ ವಿದ್ಯಾರ್ಥಿನಿಗೆ ಕೊಡಬೇಕು. ಅಲ್ಲಿ ಅಂಥವಳು ದೊರೆಯದಿದ್ದರೆ ಅದರ ಮೇಲಿನ ವರ್ಗದ ವಿದ್ಯಾರ್ಥಿನಿಗೆ ಕೊಡಬೇಕು.

೪. ಇಂಥ ವರ್ಗದಲ್ಲಿ ಒಬ್ಬರಿಗಿಂತ ಹೆಚ್ಚು ವಿದ್ಯಾರ್ಥಿನಿಯರು ಇದ್ದು ಮೇಲೆ ಬಂದ ವಿದ್ಯಾರ್ಥಿನಿಗೆ ಬೇರೆ ಯಾವ Scholarship ದೊರೆಯುತ್ತಿದ್ದರೆ ಈ Scholarshipನ್ನು ಪ್ರಿನ್ಸಿಪಾಲರ ಮರ್ಜಿಯ ಪ್ರಕಾರ ೨ನೆಯ ಬಡ ಲಿಂಗಾಯತ ವಿದ್ಯಾರ್ಥಿನಿಗೆ ಕೊಡಬೇಕು.

೫. ಮೇಲೆ ಬರೆದಂತೆ ಯಾವ ವಿದ್ಯಾರ್ಥಿನಿಯೂ ದೊರೆಯದಿದ್ದರೆ ಈ Scholarship ನ್ನು ಗೋಕಾಕ ಹಾಯಸ್ಕೂಲದಲ್ಲಿ ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಎಲ್ಲಕ್ಕಿಂತ ಹೆಚ್ಚು ಗುಣ ಪಡೆದು ಪಾಸಾಗಿ ಮುಂದಿನ ಅಭ್ಯಾಸವನ್ನು ಲಿಂಗರಾಜ ಕಾಲೇಜದಲ್ಲಿ ಮಾಡುವ ವಿದ್ಯಾರ್ಥಿಗೆ ಕೊಡಬೇಕು.

೬. ಹೀಗೆ Scholarship ಕೊಟ್ಟದ್ದನ್ನು ಪ್ರತಿ ವರ್ಷ ನನಗೆ ತಿಳಿಸಬೇಕು.

೭. ಅವಶ್ಯ ಕಂಡಲ್ಲಿ ಈ ಕರಾರುಗಳಲ್ಲಿ ನಾನು ಹೆಚ್ಚು ಕಡಿಮೆ ಮಾಡಬಹುದು.

**೫. ಲಿಂಗಾಯತ ಕಾಯದೆ ಮಂಡಲದ ವರದಿ**

೧೯೪೦ನೇ ಇಸ್ವಿಯಲ್ಲಿ ಕುಂಭಕೋಣದಲ್ಲಿ ಶ್ರೀ ಎಮ್.ಎಸ್. ಸರದಾರ, ಬ್ಯಾರಿಸ್ಟರ ಇವರ ಅಧ್ಯಕ್ಷತೆಯಲ್ಲಿ ನೆರೆದ ಅಖಿಲ ಹಿಂದುಸ್ಥಾನ ವೀರಶೈವ ಸಹಾಸಭೆಯ ಅಧಿವೇಶನದಲ್ಲಿ ಕೆಳಗೆ ಬರೆದ ನಿರ್ಣಯವು ಸ್ವೀಕೃತವಾಯಿತು. ಅದು ಹೀಗಿರುತ್ತದೆ.

ಬ್ರಿಟಿಶ್ ಹಿಂದುಸ್ಥಾನ ಮತ್ತು ಸಂಸ್ಥಾನಗಳಲ್ಲಿಯ ಕೋರ್ಟುಗಳು ಲಿಂಗಾಯತ ಸಮಾಜದವರಿಗೆ ಹಿಂದೂ ಧರ್ಮಶಾಸ್ತ್ರವನ್ನು ಅನ್ವಯಿಸುವುದರಿಂದ ಆಗುವ ಮಹದನ್ಯಾಯದ ಬಗ್ಗೆ ಖೇದವನ್ನು ವ್ಯಕ್ತಪಡಿಸಿ, ಈ ಸಮಾಜದವರ ಬಗ್ಗೆ ವೀರಶೈವ ಧರ್ಮಶಾಸ್ತ್ರ ಮತ್ತು ಪುರಾತನ ಪದ್ಧತಿಗಳ ಆಧಾರದಿಂದ ಒಂದು ಸ್ವತಂತ್ರ ಕಾಯಿದೆ ಸಂಗ್ರಹವನ್ನು ತಯಾರಿಸುವ ಅವಶ್ಯಕತೆಯು ಈ ಸಭೆಗೆ ತೋರಿದುದುರಿಂದ, ಅಂಥ ಕಾಯಿದೆ ಸಂಗ್ರಹವನ್ನು ತಯಾರಿಸಲಿಕ್ಕೆ ಕೆಳಗೆ ಬರೆದ ಸದ್ಗೃಹಸ್ಥರ ಒಂದು ಮಂಡಲವನ್ನು ನಿಯಮಿಸಿ ಅವರು ತಮ್ಮ ವರದಿಯನ್ನು ಮುಂದೆ ನೆರೆಯುವ ಮಹಾಸಭೆಯ ಅಧಿವೇಶನಕ್ಕೆ ಒಪ್ಪಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತದೆ.

೧. ಶ್ರೀ ವ್ಹಿ. ಬಿ. ಹಾಲಬಾವಿ ಅಧ್ಯಕ್ಷ

೨. ಶ್ರೀ. ಎಮ್.ಎಸ್. ಸರದಾರ

೩. ಡಾ. ಎಸ್.ಸಿ. ನಂದೀಮಠ

೪. ಪ್ರೊ. ಎಸ್. ಎಸ್. ಬಸವನಾಳ

೫. ಶ್ರೀ ವ್ಹಿ. ವ್ಹಿ. ಮುಧೋಳಕರ

೬. ಶ್ರೀ. ಬಿ.ಎಸ್. ಪುಟ್ಟಸ್ವಾಮಿ

೭. ಶ್ರೀ. ಜಿ. ಶಾಂತವೀರಪ್ಪ

ಈ ನಿರ್ಣಯದ ಒಂದು ಪ್ರತಿಯನ್ನು ಮುಂದಿನ ಕಾರ್ಯ ನಡೆಸಲಿಕ್ಕೆಂದು ಅಧ್ಯಕ್ಷರು ನನ್ನ ಕಡೆಗೆ ಕಳಿಸಿದರು. ನಾನು ಈ ಅಧಿವೇಶನಕ್ಕೆ ಹೋಗಿದ್ದಿಲ್ಲ ಮತ್ತು ಮಂಡಲದ ಅಧ್ಯಕ್ಷನಾಗುವುದಕ್ಕೆ ನನ್ನ ಒಪ್ಪಿಗೆಯನ್ನು ಸಹ ಕೇಳಿದ್ದಿಲ್ಲ. ಆದರೂ ನಿರ್ಣಯದ ಮಹತ್ವವನ್ನರಿತು ಸಮಾಜಕ್ಕೋಸ್ಕರ ನಾನು ಕಾರ್ಯಮಾಡಲಿಕ್ಕೆ ಆರಂಭಿಸಿದೆನು. ಮೊದಲು ವಿಷಯ ವಿಭಾಗಗಳನ್ನು ಕೆಳಗೆ ಬರೆದಂತೆ ಮಾಡಿ, ಅವುಗಳ ಮೇಲೆ ಲೇಖಗಳನ್ನು ಬರೆಯಲಿಕ್ಕೆ ಯಾರ ಯಾರ ಒಪ್ಪಿಗೆ ಅದೆಯೆಂಬುದನ್ನು ತಿಳಿದುಕೊಳ್ಳಲಿಕ್ಕೆ ಈ ಮಂಡಲದ ಸಭಾಸದರಿಗೆ ಪತ್ರ ಬರೆದೆನು. ಈ ವಿಭಾಗಗಳು ಕೆಳಗೆ ಬರೆದಂತೆ :

೧. ಲಿಂಗಾಯತ (ವೀರಶೈವ) ಸಮಾಜದ ರಚನೆ ಮತ್ತು ಬೆಳವಣಿಗೆಯ ಸಂಕ್ಷಿಪ್ತ ಇತಿಹಾಸವನ್ನು ತಿಳಿಸುವ ಪ್ರಸ್ತಾವೆ.

೨. ವಿರಕ್ತ ಮಠಗಳು

೩. ಗುರುಸ್ಥಲದ ಮಠಗಳು.

೪. ವಿವಾಹ

೫. ದತ್ತಕ

೬. ಉತ್ತರಾಧಿಕಾರಿ ಮತ್ತು ಆಸ್ತಿಯ ವಿಭಾಗ

೭. ಸ್ತ್ರೀಯರ ಹಕ್ಕು ಬಾಧ್ಯತೆಗಳು

೮. ಮರಣ ಶಾಸನ, ದಾನ, ಚಿಕ್ಕ ಮಕ್ಕಳ ಹಕ್ಕುಗಳು ಮುಂತಾದವು

ಇವುಗಳಲ್ಲಿ ಮೊದಲನೇ ವಿಭಾಗವು ಬಹಳ ಮಹತ್ವದಿದ್ದು, ಅದರ ಮೇಲೆ ಲೇಖವು ಮೊದಲು ಸಿದ್ಧವಾದರೆ ಮುಂದಿನ ವಿಭಾಗಗಳ ಮೇಲೆ ಬರೆಯಲಿಕ್ಕೆ ಬಹಳ ಅನುಕೂಲವಾಗುವುದೆಂದು ಅಭಿಪ್ರಾಯವು ಹೊರಡಲಾಗಿ, ಅದಕ್ಕೆ ಸಂಬಂಧಿಸಿದ ಒಂದು ಪ್ರಶ್ನೆಮಾಲಿಕೆಯನ್ನು ತೆಗೆದು ಆ ಪ್ರಶ್ನೆಗಳ ಮೇಲೆ ಉತ್ತರಗಳನ್ನು ಬೇಡಿ, ೧೦೦ಕ್ಕಿಂತ ಹೆಚ್ಚು ಜನ ಲಿಂಗಾಯತ ಪ್ರಮುಖರಿಗೆ ಕೇಳಿಕೊಂಡಿತು. ಇವರೊಳಗೆ ೪ ಜನರಿಂದ ಮಾತ್ರ ಉತ್ತರಗಳು ಬಂದವು. ಅವುಗಳನ್ನು ನೋಡಿ ಮುಂದೇನು ಮಾಡಬೇಕೆಂದು ವಿಚಾರಿಸುವಷ್ಟರಲ್ಲಿ ಅಂದರೆ ೧೯೪೧ನೇ ಇಸ್ವಿಯ ಜನವರಿ ತಿಂಗಳಲ್ಲಿ ಹಿಂದುಸ್ಥಾನ ಸರ್ಕಾರದವರು ಸ್ತ್ರೀಯರ ಆಸ್ತಿ ಬಾಧ್ಯತೆ ಹಕ್ಕಿನ ೧೯೩೭ನೇ ಕಾಯದೆಯನ್ನು ೧೯೩೮ನೇ ಇಸ್ವಿಯ ೧೧ನೇ ಕಾಯದೆಯಿಂದ ತಿದ್ದುಪಡೆಯಾದದ್ದು (Hindu womens rights to Property Act of 1937 amended by Act XI of 1938) ಪರೀಕ್ಷಿಸಿ ಅದರಲ್ಲಿ ಯಾವ ತಿದ್ದುಪಡೆಗಳನ್ನು ಮಾಡುವ ಅವಶ್ಯಕತೆ ಉಂಟೆಂಬುದರ ಬಗ್ಗೆ ವರದಿ ಮಾಡಲಿಕ್ಕೆ ಶ್ರೀ ರಾವ್ ಎಂಬವರ ಅಧ್ಯಕ್ಷತೆಯಲ್ಲಿ ಒಂದು ಮಂಡಲವನ್ನು ನೇಮಿಸಿದ್ದು, ಆ ವರದಿಯ ಸಿದ್ಧವಾದ ವರ್ತಮಾನವು ತಿಳಿಯಿತು. ಈ ಮಂಡಲದವರು ತಮ್ಮ ವರದಿಯಲ್ಲಿ ಮೇಲಿನ ಕಾಯದೆಯಲ್ಲಿರುವ ದೋಷಗಳನ್ನು ತೋರಿಸಿ ಕೊಡುವುದಲ್ಲದೇ, ಹೇಳಿರುವದೇನೆಂದರೆ: ಹಿಂದೂ ಕಾಯದೆ (Hindu Law) ಯಲ್ಲಿಯ ಇಂಥ ಭಾಗಗಳ ವಿಚಾರಮಾಡುವಾಗ ಈ ತರದ ದೋಷಗಳು ಅನಿವಾರ್ಯವಾಗಿ ಹೊರಡುತ್ತವೆ. ಇದನ್ನು ತಪ್ಪಿಸುವ ಒಂದೇ ಮಾರ್ಗವೆಂದರೆ ಇಂಥ ಸಣ್ಣ ಸಣ್ಣ ಭಾಗಗಳ ವಿಚಾರವನ್ನು ಪ್ರತ್ಯೇಕವಾಗಿ ಮಾಡದೆ ಇಡೀ ಹಿಂದೂ ಕಾಯದೆಯ ಅವಲೋಕನ ಮಾಡಿ ಅದರ ಸರಿಯಾದ ಸಂಗ್ರಹವನ್ನು (Code) ಮಾಡಬೇಕು. ಯಾಕೆಂದರೆ ಒಂದೊಂದು ಭಾಗದೊಳಗಿನ ಕಲಮುಗಳು ಎರಡನೇ ಭಾಗದೊಳಗಿನ ಕಲಮುಗಳಿಗೆ ಸಂಬಂಧಿಸಿರುತ್ತವೆ. ಹೀಗೆ ಮಾಡಿದ ಮೇಲೆ ಸಹ ಒಂದೊಂದು ಭಾಗವನ್ನು ವಿಚಾರಕ್ಕೆ ತೆಗೆದುಕೊಂಡು ಅದಕ್ಕೆ ಕಾಯದೆ ಮಂಡಲದಿಂದ ಒಪ್ಪಿಗೆಯನ್ನು ಪಡೆದುಕೊಂಡರೂ ಅಡ್ಡಿಯಿಲ್ಲ.

ಈ ಅಭಿಪ್ರಾಯಕ್ಕೆ ಸರ್ಕಾರದವರ ಒಪ್ಪಿಗೆಯಾಗಿ ಅವರು ಅದೇ ಮಂಡಲಕ್ಕೆ (Raw Committee) ಇಡೀ ಹಿಂದೂ ಕಾಯದೆಯ ಮಸೂದೆಯನ್ನು ತಯಾರಮಾಡಲಿಕ್ಕೆ ನೇಮಿಸಿದರು. ಅದರಂತೆ ಅವರು ಮಸೂದೆಯನ್ನು ಸಿದ್ಧಪಡಿಸಿದರು. ಇದಕ್ಕಿಂತ ಮೊದಲು ಈ ಮಂಡಲದಲ್ಲಿ ಒಬ್ಬ ಲಿಂಗಾಯತನನ್ನು ಸಭಾಸದನನ್ನಾಗಿ ಸೇರಿಸಿಕೊಳ್ಳಬೇಕು. ಇದು ಶಕ್ಯವಿಲ್ಲದಿದ್ದರೆ ಲಿಂಗಾಯತರ ಸಾಕ್ಷಿಯನ್ನು ಈ ಮಂಡಲದವರು ತೆಗೆದುಕೊಳ್ಳಬೇಕು ಎಂಬ ಸೂಚನೆಯನ್ನು ಹಿಂದೂಸ್ಥಾನ ಸರ್ಕಾರದ ಕಾಯದೆಯ ಮೆಂಬರರಿಗೆ (Law Member) ಮಾಡಬೇಕೆಂದು ಮಹಾಸಭೆಯ ಅಧ್ಯಕ್ಷರಾದ ಶ್ರೀ ಸರದಾರ ಇವರಿಗೆ ತಿಳಿಸಿದ ಪ್ರಕಾರ ಅವರು ಸೂಚನೆ ಮಾಡಿದರು. ಆದರೆ ಅದಕ್ಕೆ ಏನೂ ಉತ್ತರ ದೊರೆಯಲಿಲ್ಲ. ಆಮೇಲೆ ಈ ಮಂಡಲದವರು ಸಿದ್ಧಮಾಡಿದ ಮಸೂದೆಯನ್ನು ದೊರಕಿಸಲಿಕ್ಕೆ ಪ್ರಯತ್ನಮಾಡಿದರೆ ಅದೂ ಸಾಧ್ಯವಾಗಲಿಲ್ಲ. ಆಮೇಲೆ ಹಿಂದೂ ಲಾ ಕೋಡಿಫಿಕೇಶನ ಕಮೀಟಿಯ ಕಾರ್ಯದರ್ಶಿಗಳಿಗೆ ತಾ. ೧೨.೨.೧೯೪೪ ನೇ ಇಸ್ವಿಯ ದಿವಸ ನಾನೊಂದು ಪತ್ರ ಕಳಿಸಿದೆನು. ಅದರಲ್ಲಿ ವೀರಶೈವ ಮಹಾಸಭೆಯವರು ಲಿಂಗಾಯತರ ಸಲುವಾಗಿ ಬೇರೆ ಬೇರೆ ಕಾಯದೆಯನ್ನು ತಯಾರಮಾಡಲಿಕ್ಕೆಒಂದು ಕಮೀಟಿಯನ್ನು ನೇಮಿಸಿರುವುದನ್ನು ತಿಳಿಸಿ, ಮುಂದೆ ಬರೆದಿರುವುದೇನೆಂದರೆ, ಹಿಂದೂಸ್ಥಾನ ಸರ್ಕಾರದವರು ಇಡೀ ಹಿಂದೂ ಜನರ ಕಾಯದೆಯನ್ನು ಸಂಗ್ರಹದಿಂದ ಮಾಡುವುದಕ್ಕೆ ತಮ್ಮ ಕಮೀಟಿಯನ್ನು ನೇಮಿಸಿರುವುದರಿಂದ, ಈ ಸಂಗ್ರಹದ ಬಗ್ಗೆ ಸೇರುವ ಎಷ್ಟೋ ಭಾಗಗಳ ವಿಷಯವಾಗಿ

ಲಿಂಗಾಯತರ ಸಲುವಾಗಿ ಬೇರೆ ಕಾಯದೆ ಮಾಡುವುದು ಅವಶ್ಯ ಕಾಣುವದಿಲ್ಲ. ತಮ್ಮ ಕಮೀಟಿಯ ಅಧ್ಯಕ್ಷರು ಈ ಸಂಗ್ರಹದ ಮಸೂದೆಯನ್ನು ತಯಾರಮಾಡಿರುವುರೆಂದೂ ಅದರ ಮುಂದಿನ ವಿಚಾರವನ್ನು ತಮ್ಮ ಕಮೀಟಿಯ ಸಭೆಯಲ್ಲಿ ಮಾಡತಕ್ಕದ್ದಿರುವುದೆಂದೂ ವರ್ತಮಾನ ಪತ್ರಿಕೆಗಳಲ್ಲಿ ಪ್ರಸಿದ್ಧವಾಗಿರುತ್ತದೆ. ಹಿಂದೂ ಕಾಯಿದೆಯ ಯಾವ ಭಾಗಕ್ಕಾದರೂ ಲಿಂಗಾಯತರ ಸಲುವಾಗಿ ಬೇರೆ ಏನಾದರೂ ವ್ಯವಸ್ಥೆಯನ್ನು ಮಾಡಬೇಕಾಗುವುದೋ? ಎಂಬುದನ್ನು ವಿಚಾರಿಸುವ ಸಲುವಾಗಿ ಮತ್ತು ಕಾಯದೆಯ ದೃಷ್ಟಿಯಿಂದ ಲಿಂಗಾಯತ ಸಮಾಜದ ಹಿತದ ರಕ್ಷಣೆ ಮಾಡುವುದಕ್ಕೆ ತಮ್ಮ ಕಮೀಟಿಗೆ ಏನಾದರೂ ಸೂಚನೆ ಮಾಡುವುದರ ಸಲುವಾಗಿ ತಮ್ಮ ಅಧ್ಯಕ್ಷರು ತಯಾರಿಸಿದ ಮಸೂದೆಯ ಒಂದು ಪ್ರತಿಯನ್ನು ನನಗೆ ಕಳಿಸಿದರೆ ಬಹಳ ಉಪಕಾರವಾಗುವುದು ಮತ್ತು ತಮ್ಮ ಕಮೀಟಿಯು ಇನ್ನು ಮುಂದೆ ಕೈಕೊಳ್ಳತಕ್ಕ ಕ್ರಮಗಳ ಬಗ್ಗೆ ಅವಶ್ಯ ತೋರಿದಾಗ ನನಗೆ ಬರೆದು ತಿಳಿಸಬೇಕೆಂದು ಬಿನ್ನಹವಿದೆ.

ಇದಕ್ಕೆ ಕಾರ್ಯದರ್ಶಿಗಳಿಂದ "ಇನ್ನೂ ಮಸೂದೆಯು ತಯಾರಾಗಿಲ್ಲವೆಂದೂ ಅದು ತಯಾರಾದ ಮೇಲೆ ಲಿಂಗಾಯತ ಕಮೀಟಿಯವರ ವಿಮರ್ಶೆಗಾಗಿ ಅದರ ಪ್ರತಿಯನ್ನು ಕಳಿಸುವೆನೆಂದೂ ಮತ್ತು ಮುಂದಿನ ಕ್ರಮಗಳ ಬಗ್ಗೆ ಸಹ ತಿಳಿಸುವುದರಲ್ಲಿ ಬರುವದೆಂದೂ" ತಾ. ೭-೩-೧೯೪೪ನೇ ದಿವಸ ಉತ್ತರ ಬಂತು. ಆಮೇಲೆ ಅವರು ನನಗೆ ಪತ್ರ ಬರೆದು ಮಸೂದೆಯ ಪ್ರತಿಯನ್ನು ಕಳಿಸಿದರು. ಅದಕ್ಕೆ ನಾನು ತಾ. ೨೧-೯-೧೯೪೪ ನೇ ದಿವಸ ಉತ್ತರವನ್ನು ಬರೆದು ಅದರಲ್ಲಿ ಮಸೂದೆಯಲ್ಲಿರುವ ಹಿಂದೂ ಶಬ್ದದ ವ್ಯಾಖ್ಯೆಯಲ್ಲಿ ಸೀಖರು, ಜೈನರು, ಬೌದ್ಧರು ಇವರ ಜೊತೆಗೆ ಲಿಂಗಾಯತರು (ವೀರಶೈವರು) ಎಂಬ ಶಬ್ದವನ್ನು ಸೇರಿಸಬೇಕೆಂದು ಹೇಳಿ, ಲಿಂಗಾಯತ ಮಠಗಳ ರಚನೆಯು ವರ್ಣಾಶ್ರಮ ಧರ್ಮದ ಆಶ್ರಮಗಳಿಗಿಂತ ತೀರ ಭಿನ್ನವಾಗಿರುವುದರಿಂದ, ಲಿಂಗಾಯತ ಮಠಗಳ ವಿಷಯವಾಗಿ ಒಂದು ಸ್ವತಂತ್ರ ಕಾಯಿದೆಯನ್ನು ನಮ್ಮ ಕಮೀಟಿಯು ಮಾಡುವದರಲ್ಲಿದೆಯೆಂದು ತಿಳಿಸಿರುವೆನು. ಅದಕ್ಕೆ ಹಿಂದೂ ಕಾಯದೆ ಕಮೀಟಿಯ ಕಾರ್ಯದರ್ಶಿಗಳಿಂದ ೧-೧೦-೧೯೪೪ ನೇ ದಿವಸ ಉತ್ತರ ಬಂತು, ಅದರಲ್ಲಿ ಅವರು ಅಂದಿರುವುದೇನೆಂದರೆ "ಹಿಂದೂ ಶಬ್ದದ ವ್ಯಾಖ್ಯೆಯಲ್ಲಿ ಹೆಚ್ಚು ಕಡಿಮೆ ಮಾಡಬೇಕಾದರೆ ಬಹಳ ವಿಚಾರಮಾಡಬೇಕಾಗುತ್ತದೆ. ಆ ಬಗ್ಗೆ ನಿಮ್ಮ ಕಮೀಟಿಯವರು ಸಾಕ್ಷಿಯನ್ನು ಕೊಡಲಿಕ್ಕೆ ಸಿದ್ಧರಿರುವರೆಂದು ನಂಬುತ್ತೇವೆ. ನೀವು ಸೂಚಿಸಿದ ತಿದ್ದುಪಡೆಯ ಸಮರ್ಥನೆಗಾಗಿ ಏನಾದರೂ ಗ್ರಂಥಾಧಾರಗಳಿದ್ದರೆ ಕಳುಹಿಸಬೇಕೆಂದು ವಿನಂತಿ ಅದೆ."

ಆ ಮೇಲೆ ನಾನು ಲಿಂಗಾಯತ (ವೀರಶೈವ) ಮಠಗಳ ಕಾಯದೆಯ ಮಸೂದೆಯನ್ನು ತಯಾರಿಸಿ, ಅದರ ಇಂಗ್ಲೀಷ ಪ್ರತಿಯನ್ನು ಧಾರವಾಡದ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ ಸಾಹಿತ್ಯ ಪತ್ರಿಕೆಯ ನಾಲ್ಕನೇ ಸಂಚಿಕೆಯ ೨ ಮತ್ತು ೩ ನೆಯ ಸಂಪುಟಗಳಲ್ಲಿಯೂ ಮತ್ತು ಕನ್ನಡ ಪ್ರತಿಯನ್ನು ೫ನೇ ಸಂಚಿಕೆಯ ೧ನೇ ಸಂಪುಟದಲ್ಲಿಯೂ ಸಾರ್ವಜನಿಕ ಅಭಿಪ್ರಾಯದ ಸಲುವಾಗಿ ಪ್ರಕಟಿಸಿದೆನು. ನಂತರ ತಾ. ೧೯-೧೦-೧೯೦೪ ನೇ ದಿವಸ ಲಿಂಗಾಯತ ಕಮೀಟಿಯ ಸಭೆಯನ್ನು ಬಾಗಲಕೋಟೆಯಲ್ಲಿ ನೋಟೀಸು ಕೊಟ್ಟು ಕರೆದೆನು. ಅದರಲ್ಲಿ ಕೆಳಗೆ ಬರೆದಂತೆ ನಿರ್ಣಯಗಳು ಅಂಗೀಕೃತವಾದವು.

೧. ಹಿಂದೂ ಲಾ ಕಮೀಟಿಯ ಕಾರ್ಯದರ್ಶಿಗಳ ೧.೧೦.೧೯೪೪ನೇ ಇಸ್ವಿಯ ಪತ್ರದ ಪ್ರಕಾರ ಅವರಿಗೆ ಗ್ರಂಥಸಾಹಿತ್ಯವನ್ನು ಕಳಿಸಿ, ಮಠಗಳ ವಿಷಯವಾಗಿ ಆ ಕಮೀಟಿಯವರು ಮಾಡಿದ ಮಸೂದೆಯಲ್ಲಿಯ ನ್ಯೂನ್ಯತೆಯನ್ನು ಅವರ ಲಕ್ಷಕ್ಕೆ ತರಬೇಕು.

೨. ಆ ಕಮೀಟಿಯ ಮುಂದೆ ಸಾಕ್ಷಿ ಹೇಳಲಿಕ್ಕೆ,೧. ತೋಟಪ್ಪ ಕಂಬಳಿ ಬಿ.ಎ.ಎಲ್.ಎಲ್.ಬಿ., ೨. ಶ್ರೀ. ಎಸ್.ಎಸ್. ಬಸವನಾಳ ಎಮ್.ಎ., ೩. ಶ್ರೀ. ವ್ಹಿ.ಪಿ. ಕಿತ್ತೂರ ಬಿ.ಎ.ಎಲ್.ಎಲ್.ಬಿ., ೪.

ಶ್ರೀ ಎಮ್. ಎಸ್. ಸರದಾರ ಬ್ಯಾರಿಸ್ಟರ, ೪. ಶ್ರೀ ಎಮ್. ಎಸ್. ಸರದಾರ, ೫. ಶ್ರೀ ಡಿ.ಎಚ್. ಚಂದ್ರಶೇಖರಯ್ಯ ಬಿ.ಎ.ಎಲ್.ಎಲ್.ಬಿ, ೬. ರಾ.ಬ.ಪಿ.ಜಿ.ಹಳಕಟ್ಟಿ ಬಿ.ಎ.ಎಲ್.ಎಲ್.ಬಿ ಇವರಿಗೆ ವಿನಂತಿ ಮಾಡಿಕೊಳ್ಳಬೇಕು.

೩. ಲಿಂಗಾಯತ ಮಠಗಳ ಕಾಯದೆಯ ಮಸೂದೆಯನ್ನು ವೀರಶೈವ ಮಹಾಸಭೆಯ ಅಧ್ಯಕ್ಷರಿಗೆ ಮುಂದಿನ ಕ್ರಮ ತೆಗೆದುಕೊಳ್ಳುವದರ ಸಲುವಾಗಿ ಕಳುಹಿಸಬೇಕು.

೪. ಮೇಲೆ ಬರೆದ ಕಾರ್ಯಗಳಿಗೆ ಬೇಕಾಗುವ ವೆಚ್ಚಕ್ಕಾಗಿ ಹಣದ ಬಗ್ಗೆ ಸಾರ್ವಜನಿಕ ವಿನಂತಿ ಪತ್ರವನ್ನು ತೆಗೆಯಲಿಕ್ಕೆ ವಿನಂತಿಮಾಡಿಕೊಳ್ಳಬೇಕು.

ಮೇಲಿನ ನಿರ್ಣಯದಲ್ಲಿ ಕೊಟ್ಟ ಹೆಸರುಗಳಲ್ಲಿ ಸರ್ ಕಂಬಳಿಯವರು ಸಾಕ್ಷಿ ಕೊಡಲಿಕ್ಕೆ ಒಪ್ಪಲಿಲ್ಲ. ಅವರ ಬದಲಾಗಿ ಶ್ರೀ ಆಯ್. ಎಸ್. ಪಾವಟೆ ಸಬ್ ಜಜ್ಜ ಇವರ ಹೆಸರು ಸೂಚಿಸಿ ಹಿಂದೂ ಲಾ ಕಮೀಟಿಗೆ ತಿಳಿಸಲಾಯಿತು ಮತ್ತು ಅವರಿಗೆ ಕೆಲವು ಆಧಾರ ಗ್ರಂಥಗಳನ್ನು ಸಹ ಕಳಿಸಲಾಯಿತು. ಇದಕ್ಕಿಂತ ಮೊದಲು-ಅನಂತರ, ಈ ಜನರ ಕೂಡ ಮತ್ತು ಹಿಂದೂ ಲಾ ಕಮೀಟಿಯವರ ಕೂಡ ಎಷ್ಟೋ ಪತ್ರ ವ್ಯವಹಾರ ನಡೆದಿದ್ದು ಅವುಗಳ ಬಗ್ಗೆ ಉಲ್ಲೇಖಿಸುವುದು ಅವಶ್ಯ ಕಾಣುವದಿಲ್ಲ. ಕಡೆಗೆ ನಮ್ಮ ಕಮೀಟಿಯವರು ಮಾಡತಕ್ಕ ಎಲ್ಲ ಸೂಚನೆಗಳನ್ನು ತಾ. ೨೩.೧.೧೯೪೫ನೇ ದಿವಸ ಹಿಂದೂ ಲಾ ಕಮೀಟಿಯವರಿಗೆ ಕಳಿಸಲಾಯಿತು. ನಮ್ಮ ಕಮೀಟಿಯ ಪರವಾಗಿ ಸಾಕ್ಷಿಯನ್ನು ತೆಗೆದುಕೊಳ್ಳಲಿಕ್ಕೆ ಹಿಂದೂ ಲಾ ಕಮೀಟಿಯವರಿಗೆ ಅನುಕೂಲವಾಗದೇ ಹೋಯಿತು. ಆಮೇಲೆ ಅವರು ಸಾರ್ವಜನಿಕರಿಂದ ಬಂದ ಸೂಚನೆಗಳ ವಿಚಾರ ಮಾಡಿ ತಮ್ಮ ಮಸೂದೆಯನ್ನು ತಿದ್ದಿದರು. ಅದರಲ್ಲಿ ನಾವು ಮಾಡಿದ ಸೂಚನೆಗಳಲ್ಲಿ ಮೊದಲನೆಯ ಸೂಚನೆಯ ಪ್ರಕಾರ ಹಿಂದೂ ಶಬ್ದದ ವ್ಯಾಖ್ಯೆಯಲ್ಲಿ ಲಿಂಗಾಯತ ಎಂಬ ಶಬ್ದವನ್ನು ಸೇರಿಸಿ ತಿದ್ದಿದರು. ಉಳಿದ ಯಾವ ಸೂಚನೆಯನ್ನು ಅಂಗೀಕರಿಸಲಿಲ್ಲ. ಆಮೇಲೆ ಹಿಂದೂಸ್ಥಾನದ ಕಾಯದೆ ಮಂಡಲದ ಸಭೆಯಲ್ಲಿ ಹೀಗೆ ತಿದ್ದಿದ ಹಿಂದೂ ಕೋಡ್ ಬಿಲ್ ಎಂಬುದನ್ನು ವಿಚಾರಣೆಗೆ ತಂದು, ಪುನಃ ಆ ಬಗ್ಗೆ ಸಾರ್ವಜನಿಕ ಅಭಿಪ್ರಾಯವನ್ನು ಕೋರಿದರು. ಆಗ ನಮ್ಮ ಕಮೀಟಿಯವರು ಹಿಂದೂ ಶಬ್ದದ ವ್ಯಾಖ್ಯೆಯನ್ನು ತಿದ್ದಿದ ಬಗ್ಗೆ ಅಭಿವಂದಿಸಿ, ಉಳಿದ ಸೂಚನೆಗಳನ್ನು ಮೇಲೆ ಹೇಳಿದಂತೆ ಸೂಚಿಸಿದರು. ಈ ಬಿಲ್ಲು ಇನ್ನೂ ಅಂಗೀಕೃತವಾಗದೆ ನೆನಗುದಿಗೆ ಬಿದ್ದು, ಈಗ ಹಿಂದೂ ಕೋಡದ ಒಂದು ಭಾಗವಾದ ವಿಶಿಷ್ಟ ವಿವಾಹ ವಿಷಯದ ಬಿಲ್ (Special Marriage Bill) ಎಂಬುದು ಅಂಗೀಕೃತವಾಗಿದೆ.

ಇನ್ನು ಮುಂದೆ ಲಿಂಗಾಯತ ಮಹಾಸಭೆಯು ಈ ವಿಷಯದಲ್ಲಿ ಮಾಡಬೇಕಾದುದೇನೆಂದರೆ, ಹಿಂದೂ ಕೋಡದ ಯಾವ ಭಾಗಗಳಾದರೂ ಸರಕಾರದ ಕಾಯದೆ ಮಂಡಲಗಳಲ್ಲಿ ವಿಚಾರಕ್ಕೆ ಬಂದಾಗ ಲಿಂಗಾಯತರ ಹಿತದ ಬಗ್ಗೆ ಸಹಾನುಭೂತಿಯುಳ್ಳ ಈ ಮಂಡಲಗಳ ಸಭಾಸದರಿಗೆ ಈ ಭಾಗಗಳಲ್ಲಿ ಲಿಂಗಾಯತರ ಹಿತಕ್ಕೆ ಬಾಧೆ ಬರುವಂಥ ವಿಷಯಗಳೇನಾದರೂ ಇದ್ದರೆ ಅವುಗಳಿಗೆ ಯೋಗ್ಯ ತಿದ್ದುಪಡಿಗಳನ್ನು ಸೂಚಿಸಿ, ಅವು ಮಂಡಲಗಳಿಂದ ಸ್ವೀಕಾರವಾಗುವಂತೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳತಕ್ಕದ್ದು. ಈ ಸಮಯಗಳನ್ನು ಮಹಾಸಭೆಯ ಕಾರ್ಯಕಾರಿ ಮಂಡಲದವರು ಸಹ ನೋಡುತ್ತಲೇ ಇರಬೇಕು. ಇದರ ಹೊರತು ಬೇರೆ ಮಾರ್ಗವಿಲ್ಲ.

ಇನ್ನು ನಮ್ಮ ಕಮೀಟಿಯವರು ತಯಾರ ಮಾಡಿದ ಲಿಂಗಾಯತ ಮಂಡಳ ಕಾಯದೆಗೆ ಇದರ ಸಭಾಸದರ ಸಂಪೂರ್ಣ ಒಪ್ಪಿಗೆಯಿದ್ದು, ಲಿಂಗಾಯತ ಸಮಾಜದ ಅಭಿಪ್ರಾಯದ ಬಗ್ಗೆ ಇದನ್ನು ಪ್ರಕಟಿಸಿದರೂ ಇದರ ವಿರುದ್ಧ ಸೂಚನೆಗಳು ಒಬ್ಬರಿಂದಲೂ ಸಹ ನನಗೆ ಬಂದಿರುವುದಿಲ್ಲ. ಆದುದರಿಂದ ಇದಕ್ಕೆ ಇಡೀ

ಲಿಂಗಾಯತ ಸಮಾಜದ ಒಪ್ಪಿಗೆಯಿದೆಯೆಂದು ತಿಳಿಯಲಿಕ್ಕೆ ಯಾವ ಆತಂಕವೂ ಇಲ್ಲ. ಇದನ್ನು ಸರಕಾರದ ಕಾಯದೆ ಮಂಡಲಗಳಲ್ಲಿ ಒಯ್ದರೆ ಆ ಮಂಡಲಗಳು ಇದನ್ನು ಒಪ್ಪುವ ಸಂಭವ ತೋರುವುದಿಲ್ಲ. ಇಂಥ ಪ್ರಸಂಗದಲ್ಲಿ ಲಿಂಗಾಯತ ಮಹಾಸಭೆಯವರು ಇದಕ್ಕೆ ತಮ್ಮ ಒಪ್ಪಿಗೆಯನ್ನು ಕೊಡುವಂತೆ ವಿಷಯನಿಯಾಮಕ ಕಮೀಟಿಯವರು ಮಾಡಬೇಕೆಂದು ನಮ್ಮ ಕಮೀಟಿಯು ಸೂಚಿಸುತ್ತದೆ.

ಇದಕ್ಕೆ ಸಂಬಂಧಿಸಿದ ಬಿಲ್ಲುಗಳು ಕೆಲವು ಪತ್ರಗಳು ಮತ್ತು ಸಾಹಿತ್ಯ ಸಮಿತಿಯ ತ್ರೈಮಾಸಿಕದ ಅಂಕಗಳು ನನ್ನ ಸಂಗ್ರಹದಲ್ಲಿದೆ. ಅವುಗಳನ್ನು ತೆಗೆದು ನೋಡಬಹುದು.

**೬. ಕಿತ್ತೂರ ರಾಣಿ ಚೆನ್ನಮ್ಮ ಇತಿಹಾಸ ಮಂಡಲ ಬೈಲಹೊಂಗಲ**

ಕಿತ್ತೂರ ಚನ್ನಮ್ಮ ರಾಣಿಯ ಹೆಸರನ್ನು ಕೇಳದವರು ಕರ್ನಾಟಕದಲ್ಲಿ ಯಾರೂ ಇರಲಾರರು. ಈ ದೇಸಗತಿಯು ೧೬ನೇ ಶತಮಾನದ ಕಡೆಯ ಭಾಗದಲ್ಲಿ ಸ್ಥಾಪಿಸಲ್ಪಟ್ಟು, ಮುಂದೆ ೧೮೨೪ನೇ ಇಸ್ವಿಯಲ್ಲಿ ಇಂಗ್ಲೀಷರ ವಶಕ್ಕೆ ಹೋಯಿತು. ಹೀಗೆ ಸುಮಾರು ೨೦೦ ವರ್ಷ ೩ ಲಕ್ಷ ರೂಪಾಯಿಗಳ ಮೇಲೆ ಬರುವ ಉತ್ಪನ್ನದ ಈ ಸಂಸ್ಥಾನವನ್ನು ದೇಸಾಯರು ಆಳಿದರು. ಕಡೆಗೆ ಒಂದು ದತ್ತಕದ ವಿಷಯವಾಗಿ ದೇಸಾಯರಿಗೆ ಮತ್ತು ಇಂಗ್ಲೀಷರಿಗೆ ವ್ಯಾಜ್ಯ ಹುಟ್ಟಿ ಈ ಸಂಸ್ಥಾನವು ದೇಸಾಯರ ಕೈಬಿಟ್ಟಿತು. ಕಾಳಗವು ಬೆಳೆದು ಅದರಲ್ಲಿ ಶಿವಲಿಂಗಸರ್ಜನ ಮಲತಾಯಿಯಾದ ಚನ್ನಮ್ಮನು ಸ್ವತಃ ಕೈಯಲ್ಲಿ ಆಯುಧವು ಹಿಡಿದು ಹೋರಾಡಿದಳು. ಇಂಗ್ಲೀಷರ ವಿರುದ್ಧ ಹೋರಾಡಿದ ಈ ದೇಶದವರಲ್ಲಿ ಚೆನ್ನಮ್ಮನೇ ಮೊದಲಿನವಳೆಂದು ತೋರುತ್ತದೆ.

ಇಂಥ ಸಂಸ್ಥಾನದ ಇತಿಹಾಸವು ಕನ್ನಡಿಗರಷ್ಟೇ ಅಲ್ಲದೇ ಇಡೀ ಹಿಂದೂಸ್ಥಾನ ಜನರಿಗೆ ಗೊತ್ತಾಗಿರಬೇಕೆಂಬುದು ಸಹಜವೇ. ಈ ಉದ್ದೇಶದಿಂದ ಈ ಸಂಸ್ಥಾನದ ಇತಿಹಾಸವು ಸಂಶೋಧನವಾಗಿ ಪ್ರಸಿದ್ಧಿಸಬೇಕೆಂದು ಶ್ರೀ ತಲ್ಲೂರ ರಾಯನಗೌಡರ ಮನಸ್ಸಿನಲ್ಲಿ ಬಂದು, ಅವರು ಸುಮಾರು ೧೦ ವರ್ಷಗಳ ಹಿಂದೆ ಈ ಸಂಸ್ಥೆಯನ್ನು ಸ್ಥಾಪಿಸಿ ರಜಿಸ್ಟರ ಮಾಡಿದರು. ಮುಂದೆ ತುಸು ದಿವಸಗಳಲ್ಲಿ ಅವರು ನನ್ನ ಕಡೆಗೆ ಬಂದು, ಈ ಸಂಸ್ಥೆಯ ಅಧ್ಯಕ್ಷನಾಗಬೇಕೆಂದು ಕೇಳಿದರು. ನನ್ನಿಂದ ಏನೂ ಕಾರ್ಯಮಾಡುವುದಾಗುವುದಿಲ್ಲವೆಂದು ಹೇಳಿದರೂ ಸಂಸ್ಥೆಯಲ್ಲಿ ನಿಮ್ಮ ಹೆಸರೊಂದಿದ್ದರೆ ಸಾಕು ಎಂದು ಹೇಳಿ, ನನ್ನನ್ನು ಅಧ್ಯಕ್ಷನನ್ನಾಗಿ ಮಾಡಿದರು. ಅವರು ಕರ್ತೃತ್ವಶಾಲಿಗಳು, ಮೇಲಾಗಿ ಸವಿ ಮಾತಾಡುವವರು. ಆರಂಭದಲ್ಲಿ ಅವರಿಗೆ ಕಿತ್ತೂರು ಕಲ್ಮಠದ ಸ್ವಾಮಿಗಳಾದ ಶ್ರೀ ನಿ. ಚನ್ನವೀರಸ್ವಾಮಿಗಳಿಂದಲೂ ಮತ್ತು ಶ್ರೀ ದಾಶನೂರು ಬಸರೀಗಿಡದ ವೀರಪ್ಪನವರಿದಂಲೂ ವಿಶೇಷ ಧನಸಹಾಯ ದೊರೆಯಿತು. ಇದರಿಂದ ಸಂಸ್ಥೆಯ ಚಟುವಟಿಕೆಗಳು ಬಹುವಿಧವಾಗಿ ನಡೆದು, ಈ ಸಂಸ್ಥಾನದ ಬಗ್ಗೆ ಕನ್ನಡ ಮತ್ತು ಇಂಗ್ಲೀಷಿನಲ್ಲಿ ಆ ಮೊದಲು ಪ್ರಸಿದ್ಧವಾಗಿರುವ ಲೇಖಗಳ ಸಂಗ್ರಹವು ಸಹ 'ಕಿತ್ತೂರ ಬಂಡಾಯ' ಎಂಬ ಹೆಸರಿನಿಂದ ಪ್ರಸಿದ್ಧವಾಯಿತು.

ಬೈಲಹೊಂಗಲದಲ್ಲಿ ಶ್ರೀ ಮೂಗಿ ದೊಡ್ಡಭಾವೆಪ್ಪ ಎಂಬವರೊಬ್ಬ ಹಳೆಯ ಮನುಷ್ಯರು ಈ ಸಂಸ್ಥಾನದ ಸಂಬಂಧದ ಸಾವಿರಗಟ್ಟಲೆ ಕಾಗದಪತ್ರಗಳನ್ನು ಒಳ್ಳೇ ಅಭಿಮಾನದಿಂದ ಕೂಡಿಸಿಟ್ಟರುವರು. ಇವುಗಳ ಸಂಶೋಧನೆಯಾಗಿ ಪ್ರಸಿದ್ಧಪಡಿಸುವುದು ಮುಖ್ಯ ಕರ್ತವ್ಯವು. ಇವುಗಳಲ್ಲಿ ಕೆಲವು ಫಾರಸಿ ಭಾಷೆಗಳಲ್ಲಿ ಮತ್ತು ಅದೇ ಲಿಪಿಯಲ್ಲಿ ಇರುತ್ತವೆ. ನನ್ನ ಕೈಲಾದಷ್ಟು ಏನಾದರೂ ಕೆಲಸಮಾಡಬೇಕೆಂದು ನಾನು ಇವುಗಳನ್ನು ತೆಗೆದುಕೊಂಡು, ಒಂದು ಚಿಕ್ಕ ಗ್ರಂಥರೂಪಿನಿಂದ ಇದರ ಮುನ್ನುಡಿಯಲ್ಲಿ, ಶ್ರೀ ಭಾವೆಪ್ಪನವರಲ್ಲಿರುವ ಕಾಗದ ಪತ್ರಗಳ ವರ್ಗೀಕರಣವು ಮಾಡಲ್ಪಟ್ಟಿದೆ. ಅದರ ಮೇಲಿಂದ ಇವುಗಳು ಎಷ್ಟಿವೆಯೆಂಬುವದು ಗೋಚರವಾಗುವುದು.

ಮಲ್ಲಸರ್ಜನ ಮೇಲಿರುವ ಒಂದು ಕಾವ್ಯವನ್ನು ಇಂಗ್ಲೀಷ ಭಾಷಾಂತರ ಸಹಿತ ನಾನು ಪ್ರಸಿದ್ಧಪಡಿಸಿದೆನು.

ಇಷ್ಟರಲ್ಲಿ ಶ್ರೀ. ತಲ್ಲೂರ ರಾಯನಗೌಡರ ಲಕ್ಷವು ಬೇರೆ ಕಡೆಗೆ ತಿರುಗಿ, ಈ ಸಂಸ್ಥೆಯ ಕಡೆಗೆ ಬಹಳ ದುರ್ಲಕ್ಷವಾಯಿತು. ಮೇಲೆ ಹೇಳಿದ ಪುಸ್ತಕಗಳ ಬಗ್ಗೆ ವೆಚ್ಚವಾಗಿರುವ ಹಣವು ಸಹ, ಅವುಗಳನ್ನು ಅಚ್ಚು ಹಾಕಿದ ಲಿಂಗರಾಜ ಪ್ರೆಸ್ಸಿನವರಿಗೆ ಇನ್ನೂ ಪೂರಾ ಮುಟ್ಟಿಲ್ಲ. ಈಗ ೩ ವರ್ಷಗಳ ಹಿಂದೆ ಆ ಪ್ರೆಸ್ಸಿನವರು ರಾಯನಗೌಡರಿಗೆ ಎಷ್ಟೋ ಸಾರೆ ಕೇಳಿದರೂ ಅವರಿಂದ ಏನೂ ಹಣ ದೊರೆಯದೆ ನನಗೆ ದೂರು ಹೇಳಹತ್ತಿದರು. ತಮಗೆ ಹಣದ ಅಡಚಣೆ ಬಹಳ ಅದೆಯೆಂದು ನನ್ನ ಕಡೆಯಿಂದ ೧೦೦ ರೂ, ತೆಗೆದುಕೊಂಡರು. ೩-೪ ವರ್ಷಗಳಿಂದ ರಾಯನಗೌಡರು ಮೋರೆ ತಪ್ಪಿಸಲಿಕ್ಕೆ ಹತ್ತಿರುತ್ತಾರೆ. ಅವರಿಂದ ನನ್ನ ಹಣ ಬರುವದು ಶಕ್ಯವಿಲ್ಲ ಮತ್ತು ಆ ಬಗ್ಗೆ ಪ್ರೆಸ್ಸಿನವರಿಗೆ ಸಹ ತಿರುಗಿ ಕೇಳದಂತೆ ಆಗಿದೆ. ರಾಯನಗೌಡರು ಒಳ್ಳೇ ಕಾಂಗ್ರೆಸ ಭಕ್ತರು. ಈ ಸಂಸ್ಥೆಯ ಬಗ್ಗೆ ಹೆಚ್ಚು ಬರೆಯುವದೇನೂ ಉಳಿದಿಲ್ಲ. ಕರ್ನಾಟಕದಲ್ಲಿ ಕೆಲವು ಸಂಸ್ಥೆಗಳು ಹೇಗೆ ಕೆಲಸ ನಡೆಸುತ್ತವೆ ಎಂಬುದನ್ನು ತೋರಿಸುವುದಕ್ಕೆ ಇದೊಂದು ಉದಾಹರಣೆಯಾಗಿದೆ.

**೭. ದಿ. ಸ್ವರಾಜ್ಯ ಇನ್ಸುರೆನ್ಸ ಕಂಪನಿ ಲಿಮಿಟೆಡ್ ಧಾರವಾಡ**

ಈ ಕಂಪನಿಯು ದಿ. ಸ್ವರಾಜ್ಯ ಬ್ಯಾಂಕಿಂಗ ಅಂಡ ಇನ್ಸುರೆನ್ಸ ಈ ಹೆಸರಿನಿಂದ ಶ್ರೀ ಎಸ್.ಕೆ. ಹೊಸಮನಿ ವಕೀಲ, ಹಾವೇರಿ, ಅವರ ಮುಖಂಡತ್ವದಲ್ಲಿ ಕಾಯದೇ ಪಂಡಿತರಾದ ಶ್ರೀ ಎಮ್.ಎಸ್. ಕೇಸರಿ ವಕೀಲ ಧಾರವಾಡ ಮತ್ತು ವ್ಯವಹಾರ ಚತುರರಾದ ಶ್ರೀ ವ್ಹಿ.ಡಿ. ಕಲಕೋಟಿ. ಕೊರಡೂರ ತಾಲೂಕ ಹಾವೇರಿ ಇವರಿಂದ ಮೊದಲು ಪ್ರಾಯವೇಟ ಕಂಪನಿಯಂತೆ ೧೯೩೩ ನೇ ಇಸ್ವಿಯಲ್ಲಿ ಸ್ಥಾಪಿಸಲ್ಪಟ್ಟಿತು. ಪ್ರಾಯವೇಟ ಕಂಪನಿ ಅಂದರೆ ಅದರಲ್ಲಿ ೫೦ ಜನರಿಗಿಂತ ಹೆಚ್ಚು ಜನ ಸಭಾಸದರಾಗಲಿಕ್ಕೆ ಬರುವುದಿಲ್ಲ. ಈ ಕಂಪನಿಯ ಪ್ರತ್ಯೇಕ ಪಾಲಿನ (Share) ಬೆಲೆ ಆಗ ೫೦೦ ರೂ, ಇತ್ತು. ಶ್ರೀ. ಕೇಸರಿ ಮತ್ತು ಕಲಕೋಟಿಯವರು ದಿ. ಮಾಡರ್ನ ಕಮರ್ಸಿಯಲ್ ಸಿಂಡಿಕೇಟ ಎಂಬ ಹೆಸರಿನಿಂದ ಈ ಕಂಪನಿಯ ಆಡಳಿತಗಾರರು (Manager) ಆದರು. ಇವರ ಹೇತುವು ಕೈಯಿಂದ ಹಣ ಬೀಳದೆ ವಿಶೇಷ ಲಾಭ ಪಡೆಯಬೇಕೆಂದು ಇದ್ದಂತೆ ತೋರುತ್ತದೆ.

ಇವರು ಮೊದಲು ಪ್ರಾವಿಡೆಂಟ ವಿಮೆಯ (ಆಪದ್ರಕ್ಷಣ) ಉದ್ಯೋಗವನ್ನು ಆರಂಭಿಸಿದರು. ಈ ಉದ್ಯೋಗದ ಕಲ್ಪನೆಯನ್ನು ಮೊದಲು ತಿಳಿಸಿಕೊಡುವುದು ಅವಶ್ಯವೆನಿಸುತ್ತದೆ. ಇದರ ಯೋಜನೆಯು ಜನನ, ಲಗ್ನ ಮತ್ತು ಮರಣವೆಂಬ ಮೂರು ಪ್ರಕಾರದ್ದಿರುತ್ತದೆ. ಆ ವಿಮೆಯನ್ನು ಪಡಕೊಳ್ಳಲಿಚ್ಛಿಸುವವರು ಪ್ರತಿ ತಿಂಗಳಿಗೆ ಒಂದೊಂದು ರೂಪಾಯಿ ಕಂತುಕೊಡುತ್ತ ಹೋದರೆ ಸಾಕು. ಜನನ ವಿಮೆಯನ್ನು ಪಡಕೊಳ್ಳುವ ಹೆಂಡಂದಿರು ಆ ಕಾಲಕ್ಕೆ ಗರ್ಭಿಣಿ ಇರಬಾರದು. ಲಗ್ನ ವಿಮೆಯನ್ನು ಪಡಕೊಳ್ಳುವವರು ಲಗ್ನವನ್ನು ಎರಡು ವರ್ಷ ಅವಧಿಯ ನಂತರ ಮಾಡಿಕೊಳ್ಳಬೇಕು. ಮರಣ ವಿಮೆಯನ್ನು ಪಡಕೊಳ್ಳುವವರು ಆಗ ಒಂದು ವರ್ಷಕ್ಕಿಂತ ಹೆಚ್ಚು ಕಾಲ ಮರಣ ಸಂಭವಿಸುವಂಥ ರೋಗಪೀಡಿತರಾಗಿರಬಾರದು. ಮೊದಲನೆಯ ಪ್ರಕಾರದ ವಿಮೆ ಪಡಕೊಳ್ಳುವವರಿಗೆ ಕೂಸು ಹುಟ್ಟಿದ ತಿಂಗಳಲ್ಲಿ ಅಂಥ ವಿಮೆ ಪಡೆದವರಿಂದ ಎಷ್ಟು ಹಣ ವಸೂಲಾಗಿರುತ್ತದೆ, ಅಷ್ಟು ಹಣದಲ್ಲಿ ರಿಜರ್ವ ಫಂಡ ಮತ್ತು ಆಡಳಿತೆಯ ವೆಚ್ಚವು ಕಂಪನಿಯ ನಿಯಮಗಳ ಪ್ರಕಾರ ಹೋಗಲಾಗಿ, ಉಳಿದ ಹಣವನ್ನು ಕೂಸು ಹುಟ್ಟಿದ ವಿಮೆ ಪಡಕೊಂಡವರಲ್ಲಿ ಹಂಚಿಕೊಡಬೇಕಾಗುತ್ತದೆ. ಒಬ್ಬರಿಗೆ ದೊರೆಯುವ ಈ ಹಣದ ಮಿತಿಯು ೫೦೦ ರೂ. ಗಳ ವರೆಗಿರುತ್ತದೆ. ಒಂದು ಉದಾಹರಣೆಯನ್ನು ತೆಗೆದುಕೊಳ್ಳೋಣ. ಒಂದು ತಿಂಗಳಲ್ಲಿ ೧೦ ಜನರಿಗೆ ಸಂತತಿಯಾಗಿರುತ್ತದೆ. ಆ ತಿಂಗಳಲ್ಲಿ ವಿಮೆ ಪಡಕೊಂಡವರಿಂದ ೧ ಸಾವಿರ ರೂಪಾಯಿ ಬಂದಿರುತ್ತದೆ. ಇದರಲ್ಲಿ ರಿಝರ್ವ ಫಂಡ ಮತ್ತು ಕಂಪನಿಯ ಆಡಳಿತೆಯ ವೆಚ್ಚದ ಬಗ್ಗೆ ೨೦೦ ರೂಪಾಯಿ ಹೋಗಿ ೮೦೦ ರೂ. ಗಳನ್ನು ೧೦ ಜನರಲ್ಲಿ ಹಂಚಿದರೆ ಒಬ್ಬೊಬ್ಬರಿಗೆ ೮೦ ರೂ. ದೊರೆಯುವವು. ಒಬ್ಬನಿಗೆ ವಿಮೆ ಪಡಕೊಂಡ ತಾರೀಖಿನಿಂದ ೩ ವರ್ಷಗಳ ಮೇಲೆ ಸಂತತಿಯಾಗಿದ್ದರೆ ಅವನ ಕೈಯಿಂದ

ಪ್ರವೇಶ ಫೀ ೫ ರೂ. ವಾರ್ಷಿಕ ಫೀ. ೧ ರೂ. ಮತ್ತು ಕಂತು ೩೬ ರೂ. ಹೋಗಿರುವವು. ಅಂದರೆ ಈ ಅವಧಿಗೆ ೭೯ ರೂ. ಗಳು ಮಾತ್ರ ಹೆಚ್ಚಿಗೆ ದೊರೆತಂತಾಯಿತು. ಆ ರೀತಿಯೇ ಉಳಿದ ಎರಡು ಪ್ರಕಾರದ ವಿಮೆಗಳನ್ನು ಪಡಕೊಂಡವರಿಗೆ ಸಹ ಆಗುವದು. ಇದನ್ನು ಸ್ಪಷ್ಟ ಮಾಡುವದಕ್ಕೆ ಒಂದು ಲಗ್ನ ವಿಮೆಯ ಪಾಲಿಸಿಯ ನಮೂನೆಯನ್ನು ಇದರ ಕೂಡ ಇಟ್ಟಿರುತ್ತದೆ.

ಈ ತರದ ಕಂಪನಿಗಳು ದೇಶದ ಎರಡನೇ ಭಾಗದಲ್ಲಿ ಸಹ ಇದ್ದಂತೆ ತೋರುತ್ತದೆ. ಇದೊಂದು ತರದ ಜೂಜಾಟವೇ. ಆ ಕಾಲಕ್ಕೆ ಇದಕ್ಕೆ ಸರಕಾರದ ಪ್ರತಿಬಂಧವೇನೂ ಇದ್ದಿಲ್ಲ. ಆದರೆ ಇಂಥ ಕಂಪನಿಗಳು ಬಹಳ ದಿವಸ ಬಾಳಿದಂತೆ ಕಾಣುವುದಿಲ್ಲ. ಇವುಗಳ ಏಜೆಂಟರು ಪ್ರಾಮಾಣಿಕತನದಿಂದ ಈ ವಿಮೆಗಳ ಸ್ವರೂಪಗಳನ್ನು ಜನರಿಗೆ ಸರಿಯಾಗಿ ತಿಳಿಸಿಕೊಡುವ ಸಂಭವವಿರಲಿಲ್ಲ. ಆರಂಭದಲ್ಲಿ ಮಾತ್ರ ಈ ಕಂಪನಿಗಳು ಜನರನ್ನು ಮಬ್ಬಿನಲ್ಲಿ ಹಾಕುತ್ತವೆ.

ಇದೇ ಸ್ಥಿತಿಯು ಈ ಕಂಪನಿಗೆ ಆಯಿತು. ಇದು ಆರಂಭವಾದ ೨-೩ ವರ್ಷಗಳಲ್ಲಿಯೇ ಇದರ ಕಚೇರಿಯಲ್ಲಿ ಸುಮಾರು ೫೦ ಜನ ಕೆಲಸ ಮಾಡುತ್ತಿದ್ದರು. ಪ್ರಚಾರಕರ (ಏಜೆಂಟ) ಸಂಖ್ಯೆಯು ಸುಮಾರು ೬೦೦ ರ ವರೆಗೆ ಏರಿತು. ಪ್ರತಿ ತಿಂಗಳಿಗೆ ಸಾವಿರಾರು ರೂಪಾಯಿಗಳ ವಸೂಲಾಗುತ್ತಿತ್ತು. ಹೊರಗಿನವರಿಗೆ ಇದು ಒಳ್ಳೇ ಊರ್ಜಿತ ಸ್ಥಿತಿಯಲ್ಲಿರುವಂತೆ ತೋರುತ್ತಿತ್ತು.

ವಿಮೆದಾರರ ಕಡೆಯಿಂದ ಬಂದ ಹಣವನ್ನು ಬ್ಯಾಂಕಿಂಗ ಖಾತೆಯನ್ನು ತೆಗೆದು, ಅದರಲ್ಲಿ ಇಟ್ಟು, ಈ ವ್ಯವಹಾರವನ್ನು ಸಹ ಈ ಕಂಪನಿಯು ಮಾಡುತ್ತಿತ್ತು. ಇದು ಸಹ ಜನರನ್ನು ಮಬ್ಬಿನಲ್ಲಿ ಹಾಕುವದಕ್ಕೆ ಕಾರಣವಾಯಿತು.

ಇಂಥ ಪರಿಸ್ಥಿತಿಯಲ್ಲಿ ಶ್ರೀ. ಕೇಸರಿ ವಕೀಲರು ನಾನು ಇದರಲ್ಲಿ ಸೇರಬೇಕೆಂದು ಆಗ್ರಹ ಮಾಡಿದರು. ಇದರ ನಿಜವಾದ ಸ್ವರೂಪವು ನನಗೆ ಏನೂ ಗೊತ್ತಿಲ್ಲದ್ದರಿಂದ, ನನ್ನಿಂದ ಕಂಪನಿಗೆ ಏನಾದರೂ ಉಪಯೋಗವಾಗಬಹುದೆಂದು ನಾನು ಇದರಲ್ಲಿ ಸೇರಲಿಕ್ಕೆ ಒಪ್ಪಿ ಅದರ ಪಾಲುಗಳನ್ನು ತೆಗೆದುಕೊಂಡೆನು.

ಕಂಪನಿಯ ಡಾಯರೆಕ್ಟರ ಆಗಬೇಕಾದರೆ ೧೦೦೦ ರೂಪಾಯಿಯ ಬೆಲೆಯ ಪಾಲುಗಳನ್ನು ತೆಗೆದುಕೊಳ್ಳಬೇಕಾಗುತ್ತಿತ್ತು. ಆದ್ದರಿಂದ ನಾನು ಎರಡು ಪಾಲುಗಳನ್ನು ತೆಗೆದುಕೊಂಡದ್ದರಿಂದ ತಾ। ೧೦.೩.೧೯೩೫ ನೆಯ ದಿವಸ ಡಾಯರೆಕ್ಟರ ಸಭೆಯವರು ಅವುಗಳನ್ನು ಸ್ವೀಕರಿಸಿದರು. ಮುಂದೆ ತಾ। ೪.೫.೧೯೩೫ ನೆಯ ದಿವಸ ಡಾಯರೆಕ್ಟರ ಸಭೆಯು ಕೂಡಿದಾಗ ನನ್ನನ್ನು ಒಬ್ಬ ಡಾಯರೆಕ್ಟರನೆಂದು ಮತ್ತು ಅದೇ ಕಾಲಕ್ಕೆ ಆ ಬೋರ್ಡಿನ ಉಪಾಧ್ಯಕ್ಷ (Vice Chairman) ನನ್ನಾಗಿ ಸಹ ಆರಿಸಿದರು. ಆಮೇಲೆ ಮ್ಯಾನೇಜಿಂಗ ಏಜೆಂಟರಾಗಿದ್ದ ಶ್ರೀ ಕೇಸರಿ ಮತ್ತು ಕಲಕೋಟಿಯವರಿಂದ ಅವರು ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟರು. ಅದನ್ನು ತಾರೀಖು ೨.೮.೩೬ ನೇ ಇಸ್ವಿಯ ದಿವಸ ಕೂಡಿದ ಡಾಯರೆಕ್ಟರ ಬೋರ್ಡಿನ ಸಭೆಯವರು ಅಂಗೀಕಾರ ಮಾಡಿ, ಕಂಪನಿಯ ಆಡಳಿತೆಯ ಕೆಲಸವನ್ನು ಮಾಡಲಿಕ್ಕೆ ನನಗೆ ಅಧಿಕಾರ ಕೊಟ್ಟರು.

ಆಗ ಕಂಪನಿಯು ಪ್ರೊವ್ಹಿಡೆಂಟ ವಿಮೆಯ ಕಾರ್ಯದ ಹೊರತು ಬ್ಯಾಂಕದ ಕಾರ್ಯವನ್ನು ನಡೆಸುತ್ತಿತ್ತು. ಜೀವ ವಿಮೆಯ ಕಾರ್ಯವನ್ನು ಮಾಡಲಿಕ್ಕೆ ಸರಕಾರದಿಂದ ಅಪ್ಪಣೆ ದೊರೆಯಬೇಕಾದರೆ ಸರಕಾರದಲ್ಲಿ ೨೫೦೦೦ ರೂ. ಠೇವವನ್ನು ಇಡಬೇಕಾಗುತ್ತಿತ್ತು. ಇಷ್ಟು ಹಣವನ್ನು ತಾ ೪.೧೨.೩೫ ನೇ ದಿವಸ ಕಂಪನಿಯು ಇಟ್ಟು ಜೀವ ವಿಮೆಯ ಕಾರ್ಯವನ್ನು ತಾ. ೨.೨.೩೫ ನೇ ದಿವಸ ಆರಂಭಮಾಡಿತು. ಆಮೇಲೆ ತಾ. ೧೩.೫.೧೯೩೬ ನೇ ದಿನ ಕಂಪನಿಯನ್ನು ಪಬ್ಲಿಕ ಕಂಪನಿಯನ್ನಾಗಿ ಮಾಡಿ, ಅದರ ಭಂಡವಲವನ್ನು ೧ ಲಕ್ಷ ರೂಪಾಯಿಗಳಿಂದ ೨ ಲಕ್ಷಕ್ಕೇರಿಸಿ ಒಂದು ಪಾಲಿನ ಬೆಲೆಯನ್ನು ೫೦ ರೂಪಾಯಿಗಿಳಿಸಿತು.

ಮುಂದೆ ೧೯೩೮ನೇ ಇಸ್ವಿಯಲ್ಲಿ ಈಗ ಅಮಲಿನಲ್ಲಿರುವ ಹೊಸ ವಿಮೆಯ ಕಾಯದೆಯು ಮಾಡಲ್ಪಟ್ಟು ಅದು ೧.೭.೧೯೩೯ನೇ ದಿವಸ ಅಮಲಿನಲ್ಲಿ ಬಂದಿತು. ಇದರಿಂದ ಬ್ಯಾಂಕದ ವ್ಯವಹಾರವು ಪ್ರತಿಬಂಧಿಸಲ್ಪಟ್ಟಿತು. ಈ ವ್ಯವಹಾರವು ಧಾರವಾಡದಲ್ಲಿ ಮುಖ್ಯವಾಗಿ ನಡೆದು, ಬೆಂಗಳೂರು ಮತ್ತು ಹಾವೇರಿಯಲ್ಲಿ ಅದರ ಶಾಖೆಗಳು ತೆಗೆಯಲ್ಪಟ್ಟಿದ್ದವು. ತಾ। ೨೮.೯.೩೮ ನೇ ಇಸ್ವಿಯ ದಿವಸ ಕಂಪನಿಯ ಹೆಸರಿನಲ್ಲಿರುವ ಬ್ಯಾಂಕಿಂಗ ಶಬ್ದವನ್ನು ತೆಗೆದುಹಾಕಿ, ಇದರ ವ್ಯವಹಾರವನ್ನು ೧.೧೧.೧೯೩೮ನೇ ಇಸ್ವಿಯಿಂದ ಸಂಪೂರ್ಣ ನಿಲ್ಲಿಸಲಾಯಿತು.

Provident ವಿಮೆಯ ಕಾರ್ಯವು ಸರಕಾರದ ಹುಕುಮಿನ ಪ್ರಕಾರ ೧.೧.೧೯೩೭ನೇ ದಿವಸವೇ ನಿಲ್ಲಿಸಲ್ಪಟ್ಟಿತು.

ಹೊಸ ಜೀವ ವಿಮೆಯ ಕಾಯಿದೆಯ ಪ್ರಕಾರ ಸರಕಾರದಲ್ಲಿ ೨೦೦೦೦೦ ಠೇವನ್ನು ೧೦ ಕಂತುಗಳಿಂದ ಇಡಬೇಕಾಗುತ್ತಿತ್ತು. ಆರಂಭದಲ್ಲಿ ೧ನೇ ಕಂತು ೫೦೦೦೦ ರೂಪಾಯಿ ಮತ್ತು ೨ನೇ ಕಂತು ಉಳಿದ ಹಣದ ೧/೯ ಭಾಗವನ್ನು ಕಾಯಿದೆಯು ಅಮಲಿನಲ್ಲಿ ಬಂದ ೪ ತಿಂಗಳೊಳಗಾಗಿ ಮತ್ತು ಉಳಿದ ಪ್ರತಿಯೊಂದು ೨ನೇ ಕಂತಿಗೆ ಕಡಿಮೆಯಾಗದಷ್ಟು ಪ್ರತಿ ವರ್ಷ ಜಾನೇವರಿ ೧ನೇ ತಾರೀಖಿನೊಳಗಾಗಿ ಕೊಡುತ್ತ ಹೋಗಬೇಕು. ಆಗ ಸಾವಿರಾರು Provident ವಿಮೆಯ ಪಾಲಿಸಿಗಳು ಅಮಲಿನಲ್ಲಿದ್ದು, ಅವುಗಳಲ್ಲಿ ಎಷ್ಟೋ ಪಾಲಿಸಿಗಳ ಕಂತುಗಳು ಪೂರಾ ಮುಟ್ಟಿದ್ದು ಫಲಾಪೇಕ್ಷಿ (Mature) ಆಗಿದ್ದವು. ಉಳಿದ ಪಾಲಿಸಿಗಳ ಕೆಲವು ಕಂತುಗಳು ಮುಟ್ಟಿ ಮುಂದಿನ ಕಂತುಗಳು ಬರತಕ್ಕವುವಿದ್ದವು. ಈ ಕಂತುಗಳನ್ನು ಕಂಪನಿಯು ತೆಗೆದುಕೊಳ್ಳದೇ ಮೊದಲು ಕೊಟ್ಟ ಕಂತುಗಳ ಹಣವನ್ನು ಅದು ತಿರುಗಿ ಕೊಡಬೇಕಾಯಿತು. ಜೀವ ವಿಮೆಯ ಕಾರ್ಯವನ್ನು ಆರಂಭಿಸುವಾಗ ಕಂಪನಿಯು ಸರಕಾರದಲ್ಲಿ ೨೫೦೦೦ ರೂಪಾಯಿಗಳ ಠೇವು ಇಟ್ಟಿದ್ದು, ಹೊಸ ಕಾಯ್ದೆಯ ಪ್ರಕಾರ ಇನ್ನೂ ೨೫೦೦೦ ರೂಪಾಯಿಗಳನ್ನು ಕೂಡಲೆ ಕೊಡಬೇಕಾಯಿತು. ಇಷ್ಟು ಹಣವನ್ನು ಕೂಡಿಸಲಿಕ್ಕೆ ಬಹಳ ಶ್ರಮ ಪಡಬೇಕಾಯಿತೆಂಬುದನ್ನು ಹೇಳುವ ಅವಶ್ಯವಿಲ್ಲ. ಶ್ರೀಮಂತ ರಾವಬಹಾದ್ದೂರ ತಲ್ಲೂರದ ಸಿ.ಬಿ. ದೇಸಾಯಿಯವರು ಬೇರೆ ಕಂಪನಿಯಲ್ಲಿ ೧೦ ಸಾವಿರ ರೂಪಾಯಿಗಳ ವಿಮೆ ಇಳಿಸಿದ್ದು ಡಿಸ್‌ಕೌಂಟ ಮುರಕೊಂಡು ಉಳಿದ ಹಣವನ್ನು ತಂದು ಕೊಟ್ಟರು. ಅದರಂತೆ ಶ್ರೀ ಡಿ.ಸಿ. ಸಿಗ್ಲಿ ಹಾಗೂ ಬೆಳವಡಿಯ ಶ್ರೀ ಎಸ್.ಎಮ್. ಪಾಟೀಲ ಮತ್ತು ಎಮ್. ವ್ಹಿ ಪಾಟೀಲ ಮತ್ತು ಇನಾಮ ಹೊಂಗಲದ ಬಸನಗೌಡರು ಪಾಟೀಲ ತಮ್ಮ ತಮ್ಮ ಶಕ್ತ್ಯಾನುಸಾರ ಸಹಾಯ ಮಾಡಿದರು. ಶ್ರೀ ಬಿ.ಆರ್.ತಂಬಾಕದ, ಕಲಕೋಟಿ, ಕೇಸರಿ ಮತ್ತು ಡಾ. ಎಸ್.ಎಮ್. ಕುರ್ಡಿಕೇರಿ ಅವರು ಕೆಲವು ಪಾಲುಗಳನ್ನು ಕೂಡಿಸಿದರು. ಕಂಪನಿಯ ಮ್ಯಾನೇಜರರು ಮತ್ತು ಕಾರಕೂನರು ಮತ್ತು ಬಿ. ವಿ. ಹಿರೇಮಠ ಶಕ್ತ್ಯಾನುಸಾರ ಸಹಾಯ ಮಾಡಿದರು. ನಾನು ಸಹ ತುಸು ಹಣ ಕೊಟ್ಟೆನು. ಆದರೂ ೨೫೦೦೦ ಕ್ಕೆ ೨೦೦೦ ರೂಪಾಯಿ ಕಡಿಮೆ ಬಿತ್ತು. ಆ ಹಣವನ್ನು ನನ್ನ ಸ್ವಂತ ಹೊಣೆಯಿಂದ ಶ್ರೀ ದಿವೇಕರ ಎಂಬುವರಿಗೆ ಬಡ್ಡಿಯ ಮೇಲೆ ಪ್ರಾಮೀಜರಿ ನೋಟ ಬರಕೊಟ್ಟು ತಂದೆನು. ಹೀಗೆ ೨೫೦೦೦ ರೂಪಾಯಿಗಳನ್ನು ಕೂಡಿಸಿ ಅದನ್ನು ಸರಕಾರದಲ್ಲಿ ೩೦.೯.೧೯೩೯ ನೆಯ ಇಸ್ವಿಯ ದಿವಸ ಇಟ್ಟಿತು. ಮುಂದೆ ೩ನೆಯ ಕಂತಿನ ಸುಮಾರು ೧೬೬೦೦ ರೂಪಾಯಿಗಳನ್ನು ವಿಮೆ ಕಾಯ್ದೆಯ ಅಮಲಿನಲ್ಲಿ ಬಂದ ನಾಲ್ಕು ತಿಂಗಳಿಗೆ ಅಂದರೆ ತಾ। ೧.೧೧.೧೯೩೯ನೇ ದಿವಸದೊಳಗಾಗಿ ಇಡಬೇಕಾಯಿತು. ಹೀಗೆ ಮಾಡಲಿಕ್ಕೆ ಕಂಪನಿಗೆ ಶಕ್ಯವಾಗಲಿಲ್ಲವಾದ್ದರಿಂದ ವಿಮೆಯ ವ್ಯವಹಾರವನ್ನು ತಾ। ೧.೧೦.೧೯೩೯ ನೇ ಇಸ್ವಿಯಿಂದ ನಿಲ್ಲಿಸಬೇಕಾಯಿತು. ನಂತರ ಮೂರನೆಯ ಕಂತು ೧.೧.೧೯೪೦ ನೇ ಇಸ್ವಿಯ ದಿವಸ ತುಂಬಬೇಕಾಗುತ್ತಿತ್ತು. ಈ ಕಂತುಗಳ ಹಣವನ್ನು ಕೂಡಿಸಲಿಕ್ಕೆ ಶ್ರೀ ಎಸ್.ಎಸ್.ಸಾಲಿಮಠ, ಶ್ರೀ ಕೇಸರಿ ವಕೀಲ ಮತ್ತು ಶ್ರೀ ಕಲಕೋಟಿಯವರು ಎಷ್ಟು ಪ್ರಯತ್ನ ಮಾಡಿದರೂ ಸಾಧ್ಯವಾಗಲಿಲ್ಲ. ಈ ಕಂಪನಿಯನ್ನು ಎರಡನೇ ಯಾವುದಾದರೂ ಕಂಪನಿಗೆ ಕೂಡಿಸಬೇಕೆಂದು ಮಾಡಿದ ಪ್ರಯತ್ನವೂ

ವ್ಯರ್ಥವಾಯಿತು. ಕಂತುಗಳನ್ನು ತುಂಬದೇ ಇದ್ದ ಮತ್ತು ಕಂಪನಿಯು ವಿಮೆ ವ್ಯವಹಾರವನ್ನು ನಿಲ್ಲಿಸಿದ ಸಂಗತಿಗಳು ಸರಕಾರದ ಕಂಟ್ರೋಲರ ಆಫ್ ಇನ್ಸುರೆನ್ಸ ಆಫೀಸರರಿಗೆ ತಿಳಿದು, ಅವರು ಈ ಕಂಪನಿಯು ನಾದಾರ ಅಂತ ನಿರ್ಣಯಿಸಲಿಕ್ಕೆ ಧಾರವಾಡದ ಡಿಸ್ಟ್ರಿಕ್ಟ ಜಜ್ಜ ಕೋರ್ಟಿಗೆ ಅಲ್ಲಿಯ ಸರಕಾರೀ ವಕೀಲರ ಮುಖಾಂತರ ಅರ್ಜಿ ಮಾಡಿದ್ದರು. ಅಷ್ಟರಲ್ಲಿ ಜೀವ ವಿಮೆಯ ಬದಲಾಗಿ Provident ವಿಮೆಯ ಕಾರ್ಯವನ್ನು ನಡೆಸಬೇಕೆಂದು ನಿಶ್ಚಯಿಸಿ ತಾ. ೧೫.೧೦.೧೯೪೦ ನೇ ದಿವಸ ಕೂಡಿದ ಬೋರ್ಡಿನ ಸಭೆಯಲ್ಲಿ ಹೀಗೆ ನಿಶ್ಚಯಿಸಿದ ಸಂಗತಿಯನ್ನು ಸರಕಾರಿ ವಕೀಲರಿಗೆ ತಿಳಿಸಲಾಗಿ, ಆ ಅರ್ಜಿಯನ್ನು ತಿರುಗಿ ತಕ್ಕೊಂಡರು. ಅದೇ ಸಭೆಯಲ್ಲಿ ಕಂಪನಿಯ ಹೆಸರನ್ನು The Social Provident Insurance Co. Limited ಅಂತಾ ಬದಲು ಮಾಡಿ, Insurance Superintendent ಅವರಿಗೆ ತಿಳಿಸಲಾಗಿ, ಅದಕ್ಕೆ ಅವರು ಅಡ್ಡಿ ತೆಗೆದುಕೊಂಡದ್ದರಿಂದ ಈ ವಿಮೆಯ ಕಾರ್ಯವನ್ನು ಸಹ ನಿಲ್ಲಿಸಿ ತಾ. ೫.೧.೪೧ ನೆಯ ದಿವಸ ಕೂಡಿದ ಬೋರ್ಡಿನ ಸಭೆಯಲ್ಲಿ ಕಂಪನಿಯ ಹೆಸರನ್ನು The Navayug Insurance Company Limited ಅಂತಾ ಬದಲು ಮಾಡಿ ಇದಕ್ಕೆ ಸುಪರಿಂಟೆಂಡೆಂಟರು ಅಡ್ಡಿ ತೆಗೆದುಕೊಂಡರೆ ಇದಕ್ಕೆ THe International Insurance Company Limited ಅಂತಾ ಇರಬೇಕೆಂದು ನಿರ್ಣಯಿಸಲಾಯಿತು. ಇದೇ ಸಭೆಯಲ್ಲಿ ಡಾಯರೆಕ್ಟರ ಆಗಲಿಕ್ಕೆ ಯೋಗ್ಯತೆ ಪಡೆಯಲಿಕ್ಕೆ ೨೦೦೦ ರೂಪಾಯಿಗಳ ಬೆಲೆಯ ಪಾಲುಗಳನ್ನು ತೆಗೆದುಕೊಂಡಿರಬೇಕೆಂದು ಗೊತ್ತಾಯಿತು.

ಈ ಮೊದಲು ದಿವಾಣ ಬಹಾದ್ದೂರ ಆರ್.ಎಸ್. ಹಿರೇಮಠ ಸಾಹೇಬರು ಜೀವ ವಿಮೆಯ ಕಾರ್ಯವನ್ನು ಮುಂದುವರಿಸಬೇಕಾದರೆ ಕಂಪನಿಯು ಸರಕಾರದಲ್ಲಿ ಇಡಬೇಕಾಗುವಷ್ಟು ಹಣವನ್ನು ಕೊಡಲಿಕ್ಕೆ ಒಪ್ಪಿಕೊಂಡು ೧ ಪತ್ರವನ್ನು ತಾ. ೨೭.೧೦.೧೯೪೦ನೇ ಇಸ್ವಿಯ ದಿವಸ ಬರೆದಿದ್ದರು. ಆ ಪ್ರಕಾರ ಅವರ ಕೂಡ ಕಂಪನಿಯ ಮಾಡಿಕೊಂಡ ಕರಾರ ಪತ್ರವು ಸಹಿತ ಈ ಸಭೆಯಲ್ಲಿ ಮಂಜೂರಾಯಿತು. ಆ ಕರಾರ ಪತ್ರದ ಮುಖ್ಯ ಕರಾರುಗಳು ಹೀಗಿವೆ.-

೧. ದಿ। ಬ। ಹಿರೇಮಠ ಸಾಹೇಬರು ಗವರ್ನರ ಎಂಬ ಹೆಸರಿನಿಂದ ಕಂಪನಿಯ ಮುಖ್ಯ ಆಡಳಿತಗಾರರಾಗಿ ಕೆಲಸ ಮಾಡಬೇಕು.

೨. ಅವರ ನಿಯೋಗದ ಅವಧಿಯು ೩೦ ವರ್ಷ ಇರತಕ್ಕದ್ದು.

೩. ಅವರು ಗವ್ಹರ್ನರರಾಗಿರುವಾಗ ಕಂಪನಿಯ ಡಾಯರೆಕ್ಟರರಲ್ಲಿ ಒಬ್ಬರಾಗಿ ಇರತಕ್ಕದ್ದು.

೪. ಅವರಿಗೆ ಹಿಂದಿನ ವರ್ಷ ಪಾಲಸಿಗಳ ಬಗ್ಗೆ ವಸೂಲಾದ ಒಟ್ಟು ಪ್ರೀಮಿಯಮ್ ಕಂತುಗಳ ಹಣದ ಮೇಲೆ ೧೦೦ ಕ್ಕೆ ೧ ರಂತೆ ಪ್ರತಿ ತಿಂಗಳಿಗೆ ವೇತನ ದೊರೆಯತಕ್ಕದ್ದು. ಇದರ ಹೊರ್ತು ಕಂಪನಿಯ ಕೆಲಸದ ಸಲುವಾಗಿ ಪ್ರವಾಸದ ವೆಚ್ಚ ದೊರೆಯಬೇಕು.

೫. ಅವರು ಕಂಪನಿಯ ಗವ್ಹರ್ನರರಿರುವಾಗ ಈ ಕಂಪನಿಯ ಬರಹದ ಅಪ್ಪಣೆಯ ಹೊರತು ೨ನೆಯ ಯಾವ ವಿಮಾ.ಕಂಪನಿಯ ಕೆಲಸ ತೆಗೆದುಕೊಳ್ಳಬಾರದು.

ಮೇಲೆ ಹೇಳಿದಂತೆ ತಾ। ೧.೧.೧೯೩೭ ನೇ ಇಸ್ವಿಯ ದಿವಸ Provident ವಿಮೆಯ ಕಾರ್ಯವು ನಿಲ್ಲಿಸಲ್ಪಟ್ಟಾಗ ಜನನ (೩೩೩೫) ಲಗ್ನ (೨೧೬೨) ಮತ್ತು ಮರಣ (೧೪೨)ಅಂತೂ (೫೬೯) ಪಾಲಿಸಿಗಳು ಅಮಲಿನಲ್ಲಿದ್ದವು. ಇವುಗಳಲ್ಲಿ ಮೆಚ್ಯುಅರ ಆದ ಪಾಲಿಸಿಗಳಿದ್ದ ಕೆಲವರ ಬೇಡಿಕೆಗಳ ಹಣ ಸುಮಾರು ೪೦೨೮ ರೂಪಾಯಿಗಳನ್ನು ೧೯೩೭, ೧೯೩೮ ಮತ್ತು ೧೯೩೯ ಮೂರು ವರ್ಷಗಳಲ್ಲಿ ಕೊಟ್ಟು ತೀರಿಸಲಾಗಿತ್ತು. ಇವುಗಳನ್ನು ತೀರಿಸಲಿಕ್ಕೂ ಸಹ ಸಾಕಷ್ಟು ಹಣ ಕಂಪನಿಯಲ್ಲಿ ಶಿಲ್ಕು ಇಲ್ಲದ್ದರಿಂದ ನಾನು ಬೇಡಿಕೆದಾರರ ಕಾಟ ತಪ್ಪಿಸುವದಕ್ಕಾಗಿ ೧೯೩೮ ರಲ್ಲಿ ೩೫೦೦ ರೂಪಾಯಿ ಮತ್ತು ೧೯೩೯ ನೆಯ ಇಸ್ವಿಯಲ್ಲಿ ೪೦೦೦ ರೂಪಾಯಿ

ಕೈಗಡ ಕೊಟ್ಟೆನು. ದಿ| ಬ | ಹಿರೇಮಠ ಸಾಹೇಬರು ಕಂಪನಿಯಲ್ಲಿ ಕಾರ್ಯವನ್ನು ಕೈಕೊಳ್ಳುವ ಮುಂಚೆ ಪ್ರೊವಿಡಂಟ ಪಾಲಿಸಿಗಳ ಎಲ್ಲ ಬಾಕಿ ಹಣವನ್ನು ತೀರಿಸಬೇಕಾಗುತ್ತಿತ್ತು. ಇವುಗಳಲ್ಲಿ ೧೨೧ ಪಾಲಿಸಿಗಳು ಜೀವ ವಿಮೆಯ ಪಾಲಿಸಿಗಳಾಗಿ ಬದಲಿಸಲ್ಪಟ್ಟವು. ೧೨ ಪಾಲಿಸಿಗಳ ಹಣವು ಕಂಪನಿಯ ಪಾಲುಗಳಲ್ಲಿ ಬದಲಿಸಲ್ಪಟ್ಟವು. ೧೧೦ ಪಾಲಿಸಿದಾರರು ಕೆಲವು ಹಣ ತಕ್ಕೊಂಡು ಪಾಲಿಸಿಗಳ ಹಕ್ಕನ್ನು ಬಿಡಲಿಕ್ಕೆ ಒಪ್ಪಿದರು. ೨೭ ಜನರಿಗೆ ಅವರು ಕೊಟ್ಟಷ್ಟು ಹಣವನ್ನು ತಿರುಗಿ ಕೊಡಬೇಕಾಯಿತು. ಈ ಹಣವನ್ನು ಮತ್ತು ಸರಕಾರಕ್ಕೆ ಕೊಡಬೇಕಾದ ಹಣವನ್ನು ಅಂದರೆ ಒಟ್ಟು ೫೦೦೦೦ ರೂಪಾಯಿ ತುಂಬಿದ ಮೇಲೆ ವಿಮೆಯ ಕಾರ್ಯವನ್ನು ಆರಂಭ ಮಾಡಲಿಕ್ಕೆ ಸುಪರಿಂಟೆಂಡೆಂಟರಿಂದ ೧೯೪೧ ನೇ ಫೆಬ್ರುವರಿಯಲ್ಲಿ ಸರ್ಟಿಫೀಕೇಟು ದೊರೆಯಿತು. ದಿ. ಬ. ಹಿರೇಮಠ ಸಾಹೇಬರು ಕಂಪನಿಯ ಗವ್ಹರ್ನರರೆಂಬ ಕಾರ್ಯವನ್ನು ಕೈಕೊಂಡು ಇನ್ನೂ ವರೆಗೆ ಅದನ್ನು ನಡೆಸುತ್ತಾ ಬಂದಿರುತ್ತಾರೆ.

ನಾನು ಕಾರ್ಯ ಮಾಡಿದ ಅವಧಿಯಲ್ಲಿ ಕಂಪನಿಯ ವೆಚ್ಚವನ್ನು ಕಡಿಮೆ ಮಾಡುವುದರ ಸಲುವಾಗಿ ಕೆಲವು ಕ್ರಮಗಳನ್ನು ತೆಗೆದುಕೊಂಡು ವೆಚ್ಚವು ಏರದಂತೆ ನೋಡಿಕೊಳ್ಳಬೇಕಾಯಿತು. ೧೯೩೬ನೆಯ ಏಪ್ರಿಲ್ ೧ನೇ ತಾರೀಖಿನಿಂದ ಶ್ರೀ ಡಿ.ವ್ಹಿ. ಎಲ್ ನರಸಿಂಹರಾವ ಎಂಬ ಒಬ್ಬ ಪರದೇಶದಲ್ಲಿ ಶಿಕ್ಷಣ ಹೊಂದಿದವರನ್ನು ತಿಂಗಳಿಗೆ ೧೫೦ ರೂ. ಪಗಾರದ ಮೇಲೆ ಕಂಪನಿಯ ಮ್ಯಾನೇಜರ ಎಂದು ನಿಯಮಿಸಿದ್ದು, ಮುಂದಿನ ವರ್ಷದ ಜುಲೈ ೧೬ನೆಯ ತಾರೀಖಿಗೆ ಅವರನ್ನು ಕಡಿಮೆ ಮಾಡಿ, ಶ್ರೀ ಶೆಟ್ಟರ ಎಂಬವರನ್ನು ತಿಂಗಳಿಗೆ ೭೫ ರೂ. ಪಗಾರದ ಮೇಲೆ ನಿಯಮಿಸಲಾಯಿತು.ಅವರು ತಾ. ೩೧.೩.೧೯೩೯ನೇ ದಿನ ರಾಜೀನಾಮೆ ಕೊಟ್ಟದ್ದರಿಂದ ಈಗಿನ ಮ್ಯಾನೇಜರ ಶ್ರೀ ಶೀರನಹಳ್ಳಿಯವರು ಕೆಲಸ ಮಾಡುತ್ತ ಬಂದಿರುತ್ತಾರೆ. ಸಿಟಿಂಗ ಫೀ ೧೯೩೯ನೆಯ ಇಸ್ವಿಯ ಅಕ್ಟೋಬರದಲ್ಲಿ ೧೦ ರೂಪಾಯಿಗಳಿಂದ ೩ ರೂಪಾಯಿಗಳಿಗೆ ಇಳಿಸಲಾಯಿತು. ನನಗೆ ೧೯೩೬ನೆಯ ಇಸ್ವಿಯ ಸಪ್ಟೆಂಬರ ತಿಂಗಳಿನಿಂದ ಕಚೇರಿಗೆ ಹೋಗುವುದಕ್ಕೆ ವಾಹನದ ವೆಚ್ಚದ ಸಲುವಾಗಿ ಮಾತ್ರ ತಿಂಗಳಿಗೆ ೫೦ ರೂಪಾಯಿ ಕೊಡುತ್ತಿದ್ದರು. ಮುಂದೆ ೧೯೩೭ ಇಸ್ವಿಯ ಅಕ್ಟೋಬರ ತಿಂಗಳದಿಂದ ೭೫ ರೂಪಾಯಿಯಂತೆ ಸಂಭಾವನೆ (ಆನರೇರಿಯಮ್) ಕೊಡುತ್ತಿದ್ದರು.

ವಿಮಾ ಕಂಪನಿಗಳ ಉದ್ದೇಶವು ಅದರ ಪಾಲಿಸಿಗಳನ್ನು ತೆಗೆದುಕೊಳ್ಳುವವರಿಗೆ ಆಪತ್ಕಾಲದಲ್ಲಿ ಉಪಯೋಗವಾಗುವಂತೆ ಧನನಿಧಿಯನ್ನು ಕೂಡಿಸಿ ಕೊಡುವುದಲ್ಲದೆ, ಅವುಗಳಲ್ಲಿ ಪ್ರಿಮಿಯಂ ರೂಪದಿಂದ ಬರುವ ಹಣದಿಂದ ದೇಶದ ಉದ್ಯೋಗ, ವ್ಯವಹಾರಗಳಿಗೆ ಸಹಾಯವಾಗಿ ದೇಶದ ಆರ್ಥಿಕ ಸ್ಥಿತಿಯು ಬಲವಾಗಲಿಕ್ಕೆ ಅನುಕೂಲವಾಗುವುದು. ಈ ಕಂಪನಿಗಳು ತಮ್ಮ ಕಾರ್ಯವನ್ನು ಸರಿಯಾಗಿ ನಡೆಸಿವೆಯೋ ಇಲ್ಲವೋ ಎಂಬುದನ್ನು ತಿಳಿದುಕೊಳ್ಳಲಿಕ್ಕೆ ಇವುಗಳ ಲೆಕ್ಕಾಚಾರವನ್ನು ಪರೀಕ್ಷಿಸಿ ವರದಿ ಮಾಡುವುದಕ್ಕೆ ಪ್ರತಿಯೊಂದು ಕಂಪನಿಗೆ ಒಬ್ಬ ಗಣಕ (Actuary) ನಿರಬೇಕೆಂದು ಸರಕಾರದ ನಿಯಮವಿರುತ್ತದೆ. ಅದರಂತೆ ಈ ಕಂಪನಿಗೆ ಶ್ರೀ ಕೆ.ಬಿ.ಮಾಧವ, ಎಮ್.ಎ.ಎಫ್.ಎನ್.ಆಯ್.ಎ. ಆಯ್.ಎ. (ಲಂಡನ್) ಎಂಬ ಆಕ್ಟುಅರಿ ಇದ್ದು ಅವರು ಇದರ ಮೊದಲನೆಯ ಐದು ವರ್ಷಗಳ ಲೆಕ್ಕವನ್ನು ಪರೀಕ್ಷಿಸಿ ವರದಿಯನ್ನು ೩೧.೧.೧೯೪೧ನೆಯ ದಿವಸ ಒಪ್ಪಿಸಿದರು. ಅದರಲ್ಲಿ ಪಾಲಿಸಿದಾರರಿಗೆ ಸಲ್ಲತಕ್ಕ ಹಣದ ಸುರಕ್ಷಿತತೆಯ ಬಗ್ಗೆ ಇಡತಕ್ಕ ನಿಧಿಗೆ ೨೦,೧೧೮ ರೂ. ಗಳ ಕೊರತೆ ಬಂತು. ಆಗ ಪಾಲುಗಾರರ ಪಾಲಿನ ಹಣವು ೬೫,೧೬೨ ರೂ. ಗಳು ಇದ್ದುದರಿಂದ, ಮೇಲೆ ಹೇಳಿದ ಕೊರತೆಯನ್ನು ತುಂಬಿಕೊಡಲಿಕ್ಕೆ ಆತಂಕವಿದ್ದಿಲ್ಲ.

ಮುಂದೆ ೩೧.೧೨.೧೯೪೫ನೇ ಇಸ್ವಿ ದಿವಸ ಆಕ್ಟುಅರಿಯವರು ತಮ್ಮ ಎರಡನೆಯ ವರದಿಯನ್ನು ಒಪ್ಪಿಸಿದಾಗ ೧,೭೧,೪೮೧ ರೂಪಾಯಿಗಳ ಕೊರತೆ ಬಂದದ್ದರಲ್ಲಿ ಪಾಲುಗಾರರ ಪಾಲಿನ ಹಣವು ೧೧೮೭೧೬

ರೂ. ಹೋಗಲಾಗಿ ೬೨೭೬೧ ರೂ. ಮತ್ತು ಪ್ರೊವಿಡೆಂಟ ಖಾತೆಯ ಕೊರತೆಯ ೧೭,೮೪೧ ರೂ. ಕೂಡಿ ಅಂತೂ ೮೦,೬೧೨ ರೂ. ತುಂಬಬೇಕಾಯಿತು. ಈ ಹಣವನ್ನು ಶ್ರೀಮಂತ ಬಸವಪ್ರಭು ಸರದೇಸಾಯಿ ವಂಟಮುರಿ ಅವರು ಆಗ್ಗೆ ಪಾಂಡಿಚೇರಿಯ ಶ್ರೀ ಅರವಿಂದರ ಆಶ್ರಮದಲ್ಲಿ ಇರುತ್ತಿದ್ದುದರಿಂದ ದಿ। ಬ । ಹಿರೇಮಠ ಸಾಹೇಬರು ಮತ್ತು ನಾನು ೧೯೪೭ ನೇ ಜನವರಿ ತಿಂಗಳಲ್ಲಿ ಅಲ್ಲಿಗೆ ಹೋದೆವು. ಅವರ ಕೂಡ ಶ್ರೀ ಪಾಟೀಲ ಶಂಕರಗೌಡರು ಇರುತ್ತಿದ್ದರು. ಅವರಿಗೆ ಕಂಪನಿಯ ಸ್ಥಿತಿಗತಿಯನ್ನೆಲ್ಲ ತಿಳಿಸಿದೆವು. ಅವರು ಕಂಪನಿಗೆ ಬೇಕಾಗುವ ಹಣವನ್ನು ಸಂತೋಷದಿಂದ ಕೊಡಲೊಪ್ಪಿದರು. ಅವರ ಹಣವು ಗವ್ಹರ್ನಮೆಂಟ ಸೆಕ್ಯೂರಿಟಿಗಳ ಸ್ವರೂಪದಲ್ಲಿತ್ತು. ಅವುಗಳ ಮೇಲೆ ಬರುವ ಬಡ್ಡಿಯನ್ನೇ ನಿಮಗೆ ಕೊಡುತ್ತೇವೆಂದು ಅವರಿಗೆ ತಿಳಿಸಿದೆವು. ಮುಂದೆ ಫೆಬ್ರುವರಿ ತಿಂಗಳಲ್ಲಿ ಶ್ರೀ ಅರವಿಂದರ ದರ್ಶನವಾಗತಕ್ಕದ್ದು ಇದ್ದುದರಿಂದ ಅಲ್ಲಿಯ ವರೆಗೆ ನಾನು ಪಾಂಡಿಚೇರಿಯಲ್ಲಿ ಉಳಿದೆನು. ದಿ।ಬ। ಹಿರೇಮಠ ಸಾಹೇಬರು ಧಾರವಾಡಕ್ಕೆ ತಿರುಗಿ ಬಂದು ಈ ರೀತಿ ಕಂಪನಿಯವರು ಹಣದ ವ್ಯವಸ್ಥೆ ಮಾಡಿರುವುದಾಗಿ ಇನ್ಸೂರೆನ್ಸ ಸುಪರಿಂಟೆಂಡೆಂಟರವರಿಗೆ ತಿಳಿಸಲಾಗಿ, ಈ ಹಣವು ದೇಣಿಗೆಯೋ, ಬಡ್ಡಿ ಇಲ್ಲದ ಸಾಲವೋ ಎಂದು ಪ್ರಶ್ನೆ ಮಾಡಿದರು. ಅದಕ್ಕೆ ಬಡ್ಡಿ ಇಲ್ಲದ ಸಾಲವೆಂದು ತಿಳಿಸಲಾಯಿತು. ಆಮೇಲೆ ಸುಪರಿಂಟೆಂಡೆಂಟರು ಶ್ರೀಮಂತ ಸರದೇಸಾಯಿಯವರಿಗೆ ಬರಕೊಟ್ಟ ಕರಾರದ ನಕಲು ಬೇಡಿದರು. ಈ ಮೊದಲು ಶ್ರೀಮಂತ ಸರದೇಸಾಯಿಯವರಿಗೆ ಬಡ್ಡೀ ಸಹಿತ ಹಣ ಕೊಡಲಾಗುವುದೆಂದು ಪ್ರಾಮಿಸರಿ ನೋಟ ಬರಕೊಟ್ಟಿತ್ತು. ಸುಪರಿಂಟೆಂಡೆಂಟರ ಕೂಡ ನಡೆದ ಪತ್ರ ವ್ಯವಹಾರದ ಸಂಗತಿಯನ್ನು ಶ್ರೀಮಂತ ಸರದೇಸಾಯಿಯವರಿಗೆ ತಿಳಿಸಲಾಗಿ ಅವರು ಬಡ್ಡಿ ಇಲ್ಲದ ಸಾಲವೆಂದು ಬರಕೊಡಲು ಒಪ್ಪಿ ಅದರಂತೆ ಬರಕೊಟ್ಟರು. ಅದರ ನಕಲನ್ನು ಸುಪರಿಂಟೆಂಡೆಂಟರಿಗೆ ಕಳಿಸಲಾಯಿತು. ಈ ರೀತಿ ಕಂಪನಿಗೆ ಸಹಾಯ ಮಾಡಿದ್ದಕ್ಕಾಗಿ ಶ್ರೀಮಂತ ಸರದೇಸಾಯಿಯವರ ಉಪಕಾರವನ್ನೂ ಎಷ್ಟು ಸ್ಮರಿಸಿದರೂ ತೀರದು.

ಮುಂದೆ ಆ್ಯಕ್ಚುಅರಿಯವರು ೧೯೫೦ನೇ ಇಸ್ವಿಯ ಅಂತ್ಯದ ವರೆಗಿನ ೩ನೆಯ ವರದಿಯನ್ನು ಒಪ್ಪಿಸಿದರು.೧೧೧೩೮೫ ರೂ. ಗಳ ಕೊರತೆ ಬಂದಿತು. ಆಗ ರಿಝರ್ವ ಬ್ಯಾಂಕಿನಲ್ಲಿದ್ದ ಕಂಪನಿಯ ಸೆಕ್ಯೂರಿಟಿಗಳು ಮತ್ತು ಕಂಪನಿಯಲ್ಲಿರುವ ಶಿಲ್ಕು ಹಣವೂ ಮೇಲೆ ಹೇಳಿದ ಕೊರತೆಯ ಹಣಕ್ಕಿಂತ ಹೆಚ್ಚಾಗುವಂತೆ ಕಂಡುಬಂತು. ಇಲ್ಲಿಯವರೆಗೆ ಕಾಯ್ದೆ ಪ್ರಕಾರ ಐದು ವರ್ಷಕ್ಕೊಮ್ಮೆ ಲೆಕ್ಕಾಚಾರ ಮಾಡಬೇಕಾಗುತ್ತಿತ್ತು. ಮುಂದೆ ಇದನ್ನು ಮೂರು ವರ್ಷಕ್ಕೊಮ್ಮೆ ಮಾಡಬೇಕೆಂದು ಸರ್ಕಾರದವರು ಗೊತ್ತು ಮಾಡಿದರು. ಆ ಪ್ರಕಾರ ೧೯೫೩ನೆಯ ಅಂತ್ಯದವರೆಗೆ ಮಾಡಿದ ೪ನೆಯ ವರದಿಯಲ್ಲಿ ೧೯೯೮೫ ರೂ. ಗಳ ಉಳಿತಾಯವಾಯಿತು. ಹೀಗೆ ಉಳಿತಾಯವಾದಾಗ ಅದರ ಅರ್ಧದ ವರೆಗೆ ಶ್ರೀಮಂತ ಸರದೇಸಾಯಿಯವರ ಸಾಲವನ್ನು ತಿರುಗಿ ಕೊಡುತ್ತ ಹೋಗಬೇಕೆಂಬ ಶರ್ತಿಗೆ ಅನುಸರಿಸಿ, ಈ ವರ್ಷ ತಾರೀಖು ೧೩.೫.೧೯೫೫ ನೇ ದಿವಸ ಕೂಡಿದ ಬೋರ್ಡಿನ ಸಭೆಯ ನಿರ್ಣಯದ ಪ್ರಕಾರ ಈ ಉಳಿತಾಯದ ಹಣದ ಅರ್ಧ ಹಣವನ್ನು ಕಳಿಸಲಾಗಿದೆ.

ನಾನು ಕೆಲಸ ಮಾಡಿದ ಅವಧಿಯಲ್ಲಿ ೨.೮.೧೯೩೬ ರಿಂದ ೫.೧.೧೯೪೧ ರ ವರೆಗೆ ಎಷ್ಟು ಕಷ್ಟಪಡಬೇಕಾಯಿತೆಂಬುದನ್ನು ಹೇಳಿದರೆ ಆತ್ಮಪ್ರಶಂಸೆಯ ದೋಷಕ್ಕೆ ಗುರಿಯಾಗಬೇಕಾಗುತ್ತದೆ. ಹಾಗೆ ಮಾಡದೆ ಒಂದೇ ಸಂಗತಿಯನ್ನು ಇಲ್ಲಿ ತಿಳಿಸುತ್ತೇನೆ. ಸಮಾಜದಲ್ಲಿ ವಿಘ್ನ ಸಂತೋಷಿಗಳು ಕೆಲವರು ಇರುತ್ತಾರೆ. ಕಂಪನಿಯ ಏಜಂಟರಲ್ಲಿ ಇಂಥ ಒಬ್ಬ ಚಂದ್ರಶೇಖರಯ್ಯ ಹಿರೇಮಠ ಎಂಬವನ ಬಗ್ಗೆ ಬರೆಯುವುದು ಅವಶ್ಯವೆನಿಸುತ್ತದೆ. ಅವನು ಕೊಪ್ಪಳ ಸಂಸ್ಥಾನದಲ್ಲಿ ಆರಂಭದಲ್ಲಿ ಅವನು ಒಳ್ಳೇ ಕೆಲಸವನ್ನು ಮಾಡಿ ಇನಾಮುಗಳನ್ನು ಸಹ ಪಡೆದಿರುವನು. ಬರಬರುತ್ತಾ ತನಗೆ ಬೇಕಾದ ಒಬ್ಬ ಗೃಹಸ್ಥರ ಪಕ್ಷ ಹಿಡಿದು, ಅವರಿಗೆ ನಾನು ಉಪಕಾರ ಮಾಡಬೇಕೆಂದು ಆಗ್ರಹ ಮಾಡಿದನು. ಸ್ವತಃ ಆ ಗೃಹಸ್ಥರ ಆಗ್ರಹವೇನೂ ಇದ್ದಿಲ್ಲ. ನಾನು ಹಿರೇಮಠ ಈತನ

ಆಗ್ರಹಕ್ಕೆ ಒಪ್ಪದೆ ಇದ್ದುದರಿಂದ ಅವನು ಬಹಿರಂಗವಾಗಿ ಬಾಯಿ ಮಾತಿನಿಂದ ಮತ್ತು ಬರಹದ ಮೂಲಕ ನನ್ನ ಮತ್ತು ಕಂಪನಿಯ ವಿಷಯವಾಗಿ ಬಹಳ ಅಪಪ್ರಚಾರ ನಡೆಸಿದನು. ಈ ಕಾರಣದಿಂದ ನಾನು ಅವನ ಏಜನ್ಸಿ ಕರಾರನ್ನು ರದ್ದು ಮಾಡಿ ಅವನಿಗೆ ಕಂಪನಿಯಿಂದ ಸಲ್ಲತಕ್ಕ ಎಲ್ಲ ಹಣವನ್ನು ಜಪ್ತ ಮಾಡಿದೆನು. ಇದರಿಂದ ಅವನು ತನಗೆ ಸಲ್ಲತಕ್ಕ ಹಣದ ಬಗ್ಗೆ ಧಾರವಾಡ ಸಬ್ ಜಜ್ಜ ಕೋರ್ಟಿನಲ್ಲಿ ವ್ಯಾಜ್ಯ (೧೯೩೯ ನೇ ಇಸ್ವಿಯ ನಂಬರ ೧೭೫) ಹೂಡಿದನು. ಸಬ್‌ಜಜ್ಜರಾದ ಶ್ರೀ ಟಿ.ಕೆ. ತುಕೋಳ ಎಂಬುವರು ದೀರ್ಘವಾದ ತೀರ್ಪಿನಲ್ಲಿ ಹಿರೇಮಠನ ಆಪಾದನೆಗಳನ್ನೆಲ್ಲ ಖಂಡಿಸಿ ವ್ಯಾಜ್ಯವನ್ನು ಕಿತ್ತು ಹಾಕಿದರು. ಇವರ ಮೇಲೆ ಅಪೀಲು ಕೋರ್ಟಿಗೆ ಮತ್ತು ಹಾಯ್‌ಕೋರ್ಟಿಗೆ ಹಿರೇಮಠ ಹೋಗಲಾಗಿ, ಅಲ್ಲಿಯೂ ಅವನಿಗೆ ಯಶಸ್ಸು ದೊರೆಯದೆ ಹೋಯಿತು. ಈ ತೀರ್ಪುಗಳ ಪ್ರತಿಗಳು ಓದತಕ್ಕಂಥವುಗಳಿದ್ದು ಕಂಪನಿಯ ಕಾಗದ ಪತ್ರಗಳಲ್ಲಿ ಇವೆ. ಬೇಕಾದವರು ಅವುಗಳನ್ನು ನೋಡಬಹುದು.

ಈ ಕಂಪನಿಯ ಆರಂಭದಿಂದ ಇಲ್ಲಿಯ ವರೆಗಿನ ಪ್ರಗತಿಯು ಇದಕ್ಕೆ ಜೋಡಿಸಿದ ಪತ್ರಿಕೆಯ ಮೇಲಿಂದ ಕಂಡುಬರುವುದು. ದಿ। ಬ। ಹಿರೇಮಠ ಸಾಹೇಬರು ಕಂಪನಿಯ ಕೆಲಸವನ್ನು ಕೈಕೊಂಡಂದಿನಿಂದ ಈ ಪ್ರಗತಿಯು ಅಬಾಧಿತವಾಗಿ ನಡೆದಿರುವುದು. ಇದಕ್ಕೆ ಅವರ ಕಾರ್ಯದಕ್ಷತೆ ಅಲ್ಲದೆ ಅವರ ಸ್ವಾರ್ಥತ್ಯಾಗವು ಒಂದು ಕಾರಣವಾಗಿದೆ. ಅವರು ಕಂಪನಿಯ ಕೂಡ ಮಾಡಿಕೊಂಡ ಕರಾರಿನ ಪ್ರಕಾರ ಅವರ ವೇತನವು ತಿಂಗಳಿಗೆ ೧೬೦೦ ರೂ. ಆಗುತ್ತಿದ್ದರೂ ೩೫೦ ರೂ. ಗಳನ್ನು ಮಾತ್ರ ತೆಗೆದುಕೊಳ್ಳುತ್ತ ಬಂದಿರುವರು. ಈ ಬಗ್ಗೆ ಅವರಿಗೆ ಇಡೀ ಕರ್ನಾಟಕಸ್ಥರು ಕೃತಜ್ಞರಾಗಿರುತ್ತಾರೆ.

ಇದರ ಕಚೇರಿಯ ಕಾರಕೂನರು ಕಾರ್ಯದಕ್ಷರಾದ ಮ್ಯಾನೇಜರ ಶ್ರೀ ಎಸ್. ಕೆ. ಶೀರನಹಳ್ಳಿಯವರು ಮತ್ತು ಅಕೌಂಟಂಟ ಶ್ರೀ ಬಿದ್ರಿಯವರು ಇದರ ನೇತೃತ್ವವಹಿಸಿ ಕಂಪನಿಯ ಅಭಿವೃದ್ಧಿಯ ಕಡೆಗೆ ಲಕ್ಷಕೊಟ್ಟು ಚನ್ನಾಗಿ ದುಡಿಯುತ್ತಿದ್ದಾರೆ.

ಕಂಪನಿಯು ಏಜಂಟರಲ್ಲಿ ಎರಡನೆ ಉದ್ಯೋಗ ಮಾಡದೆ ಬರೇ ಏಜನ್ಸಿಯ ಉದ್ಯೋಗವನ್ನು ಮಾಡುವವರು ಇಲ್ಲೆಂದರೂ ಸಲ್ಲುವದು. ಇದರಲ್ಲಿ ವಿಶೇಷ. ಹೆಚ್ಚಿನ ಕೆಲಸ ಮಾಡಿದವರೆಂದರೆ ವಿಜಾಪುರದ ಶ್ರೀ ಬಿ.ಪಿ. ಹಿರೇಮಠ ಎಂಬುವರು. ಕೆಲವು ದಿವಸಗಳಿಂದ ಧಾರವಾಡದ ಶ್ರೀ. ಎಮ್. ಆರ್. ಪೈ ಎಂಬುವರು ಒಳ್ಳೇ ಆಸ್ಥೆ ವಹಿಸಿ ಕಾರ್ಯ ಮಾಡಲಾರಂಭಿಸಿದ್ದಾರೆ.

ಈ ದೇಶದ ವಿಮಾ ಕಂಪನಿಗಳಲ್ಲಿ ಈ ಕಂಪನಿಯು ಈಗ ಸುವ್ಯವಸ್ಥಿತವಾಗಿದ್ದರೂ ಕೆಳಗಿನ ಮಟ್ಟದಲ್ಲಿರುವುದು. ಮೇಲೆ ಹೇಳಿದ ಎಲ್ಲರ ಸಹಕಾರದಿಂದ ತುಸು ವರ್ಷಗಳಲ್ಲಿಯೇ ಇದು ಪ್ರಥಮ ದರ್ಜೆಯ ಕಂಪನಿಗಳಲ್ಲಿ ಒಂದು ಆಗಬಹುದು ಎಂದು ಆಶಿಸುತ್ತೇನೆ. ಹೀಗಾಗಲಿಕ್ಕೆ ಪರಮಾತ್ಮನ ಅನುಗ್ರಹವಿರಲೆಂದು ಅವನನ್ನು ಅನನ್ಯ ಭಾವದಿಂದ ಬೇಡಿಕೊಳ್ಳುತ್ತೇನೆ.

* * *

## ಅನುಬಂಧ : ೧

### ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಮಾನಪತ್ರ ಸಮರ್ಪಣೆ

ಸುಪ್ರಸಿದ್ಧ ಸಾಹಿತಿಗಳಾದ ಆಸ್ಥಾನ ಮಹಾ ವಿದ್ವಾನ್ ಶ್ರೀ ನಂಜನಗೂಡು ಶ್ರೀಕಂಠ ಶಾಸ್ತ್ರಿಗಳಿಗೂ ನನಗೂ ತಾ । ೯.೧೧.೧೯೫೨ ನೇ ದಿವಸ ಶ್ರೀ ಕೃಷ್ಣರಾಜ ಪರಿಷತ್ ಮಂದಿರದಲ್ಲಿ ಮಾನಪತ್ರ ಸಮರ್ಪಣೋತ್ಸವವನ್ನು ಪರಿಷತ್ತಿನವರು ನೆರವೇರಿಸಿದರು. ಆಗ ಚಿ. ಲೀಲಾ ಮತ್ತು ಅವಳ ಗೆಳತಿಯಾದ

ಶ್ರೀಮತಿ ತಾರಾ ಪವಾರ ನನ್ನ ಕೂಡ ಬೆಂಗಳೂರಿಗೆ ಬಂದಿದ್ದರು. ಉತ್ಸವವು ಸರಿಯಾಗಿ ನಡೆಯಿತು. ಆಗ ನಾನು ಗವರ್ನಮೆಂಟ ಲಾ ಕಾಲೇಜ ಪ್ರೊಫೆಸರರಾದ ಶ್ರೀ ಶಿವಶಂಕರ ಅವರಲ್ಲಿ ಇಳಕೊಂಡಿದ್ದೆವು. ಉತ್ಸವವನ್ನು ತೀರಿಸಿಕೊಂಡು ನಾವು ತಿರುಗಿ ಧಾರವಾಡಕ್ಕೆ ಬಂದ ಮೇಲೆ ಪರಿಷತ್ತಿನ ಅಧ್ಯಕ್ಷರಾದ ಶ್ರೀ. ಎಮ್. ಆರ್. ಶ್ರೀನಿವಾಸಮೂರ್ತಿಗಳು ನನಗೆ ಬರೆದ ಪತ್ರದಲ್ಲಿ ಹೀಗಂದಿರುತ್ತಾರೆ.-

"ತಮ್ಮ ಆಗಮನದಿಂದಲೂ ತಮ್ಮ ಭಾಷಣಾದಿ ಕಾರ್ಯಕಲಾಪಗಳಿಂದಲೂ ಇಲ್ಲಿನ ನಾಗರಿಕರು ಬಹಳ ಸಂತೋಷಪಟ್ಟಿದ್ದಾರೆಂದೂ ತಮ್ಮನ್ನು ಪದೇ ಪದೇ ಜ್ಞಾಪಿಸಿಕೊಳ್ಳುತ್ತಿದ್ದಾರೆಂದೂ ತಮಗೆ ತಿಳಿಸಬಯಸುತ್ತೇನೆ."


ಮಾನಪತ್ರವು ಬಿಳೀ ರೇಶಿಮೆಯ ಅರಿವೆಯ ಮೇಲೆ ಅಚ್ಚಾಗಿ ಕನ್ನಡಿಯ ಚೌಕಟ್ಟಿನಲ್ಲಿ ಕೂಡ್ರಿಸಿದ್ದು ನೋಡಲಿಕ್ಕೆ ಚಂದವಾಗಿರುತ್ತದೆ.

## ಅನುಬಂಧ :೨

ವಿಕ್ಟೋರಿಯಾ ಜುಬ್ಲಿ ಇನಾಮು ವಿಕ್ಟೋರಿಯಾ ಮಹಾರಾಣಿಯವರು ತಮ್ಮ ಆಳಿಕೆಯ ಆರಂಭದಿಂದ ೧೮೮೭ನೇ ಇಸ್ವಿಗೆ ೫೦ ವರುಷಗಳನ್ನು ಮುಗಿಸಿದರು. ಆಗ ಹಿಂದುಸ್ತಾನದ ತುಂಬೆಲ್ಲ ಜುಬಿಲಿ ಉತ್ಸವವೆಂದು ದೊಡ್ಡ ಸಮಾರಂಭವು ಜರುಗಿತು. ಅದರ ನಿಮಿತ್ತವಾಗಿ ಅಥಣಿ ಗ್ರಾಮದ ಮಹಾಜನರು ೧೦೦೦ ರೂ. ಗಳ ಫಂಡ ಕೂಡಿಸಿ ಅದರಿಂದ ಮೊದಲನೆಯ ಇಬ್ಬರು ಲಿಂಗಾಯತ ಎಲ್.ಎಲ್.ಬಿ. ಗಳಿಗೆ ಒಂದೊಂದು ಇನಾಮು ಮತ್ತು ಎಮ್.ಎ ಪರೀಕ್ಷೆಯಲ್ಲಿ ಮೊದಲು ಪಾಸಾದವರಿಗೆ ಒಂದು ಇನಾಮು ಕೊಡಬೇಕೆಂದು ಗೊತ್ತು ಮಾಡಿ, ಆ ಹಣವನ್ನು ಸರಕಾರದಲ್ಲಿ ಇಟ್ಟರು. ಲಿಂ. ಸಿದ್ಧರಾಮಪ್ಪ ಪಾವಟೆ ಎಂಬುವರು ಮೊದಲು, ಆ ನಂತರ ನಾನು ಎಲ್.ಎಲ್.ಬಿ ಪರೀಕ್ಷೆಯಲ್ಲಿ ಪಾಸಾದ ಪ್ರಕಾರ ನಮಗೆ ಆ ಇನಾಮುಗಳು ದೊರೆತವು. ಇದು ೧೯೦೨ ನೇ ಇಸ್ವಿಯಲ್ಲಿ. ಆಗ ಈ ಇನಾಮುಗಳ ಹಣವು ಬಡ್ಡಿ ಸಹಿತವಾಗಿ ಸುಮಾರು ೬೦೦ ರೂ. ಆಯಿತು. ಇದರಿಂದ ಬಂಗಾರದ ಪದಕಗಳನ್ನು ಮಾಡಿಸಿ ಬೆಳಗಾವಿಯ ಕಲೆಕ್ಟರ ಸಾಹೇಬರ ಅಧ್ಯಕ್ಷತೆಯಲ್ಲಿ ಸಭೆ ಕೂಡಿಸಿ ನಮಗೆ ಆ ಪದಕಗಳನ್ನು ಕೊಟ್ಟರು. ಆಗ ಲಿಂಗಾಯತರಿಗೆಲ್ಲ ವಿಶೇಷ ಆನಂದವಾಗುವುದು ಸಹಜವೇ. ಸಭೆಯಲ್ಲಿ ಶ್ರೀ ಅರಟಾಳ ರುದ್ರಗೌಡರು ಮತ್ತು ಸಿರಸಂಗಿ ದೇಸಾಯಿಯರಾದ ಶ್ರೀಮಂತ ಲಿಂಗಪ್ಪ ಜಾಯಪ್ಪ ಸರದೇಸಾಯಿಯವರು ಹಾಜರಿದ್ದರು. ಮುಂದೆ ಕೆಲವರ್ಷಗಳ ಮೇಲೆ ಎಮ್.ಎ. ಪರೀಕ್ಷೆಯಲ್ಲಿ ಲಿಂ. ಬಸವನಾಳ ಶಿವಲಿಂಗಪ್ಪನವರು ಪಾಸಾದರಿಂದ ಅವರಿಗೆ ಒಂದು ಪದಕವು ಇನಾಮ ದೊರೆಯಿತು. ನನಗೆ ದೊರೆತ ಪದಕದ ತೂಕವು ಸುಮಾರು ೧೧ ತೊಲೆ ಇತ್ತು. ಇಂಥ ಇನಾಮುಗಳು ಮನೆತನದ ಕಾದಿಡತಕ್ಕವೇ. ಆದರೆ ಆಕಸ್ಮಾತ್ತಾಗಿ ನನಗೆ ಹಣದ ಕೊರತೆಯುಂಟಾದದ್ದರಿಂದ ಅದನ್ನು ನಾನು ಹೋದ ವರ್ಷ ಎಪ್ರೀಲ ತಿಂಗಳಲ್ಲಿ ೬೭೫ ರೂ. ಗಳಿಗೆ ಮಾರಿದೆನು. ಈ ಬಗ್ಗೆ ಮನೆಯವರೆಲ್ಲರಿಗೆ ಬಹಳ ವಿಷಾದವಾಯಿತು. ಹೆಚ್ಚು ವಿಚಾರ ಮಾಡದೆ ಮಾರಿದ್ದಕ್ಕಾಗಿ ನನಗಾದರೂ ಪಶ್ಚಾತ್ತಾಪವಾಗುತ್ತದೆ. ಆದರೆ ಆಗಿಹೋದ ಮಾತಿಗೆ ಉಪಾಯವಿಲ್ಲ. ಆ ಪದಕದ ಫೋಟೋ ಚಿ. ದಾನಪ್ಪನಿಂದ ತೆಗೆಸಿ ಇಟ್ಟಿರುತ್ತದೆ. ಇಷ್ಟರಿಂದಲೇ ಸಮಾಧಾನ ಮಾಡಿಕೊಳ್ಳುವ ಪ್ರಸಂಗ ಬಂದಿದೆ.

೬.೧.೧೯೫೭

❖❖


ವೀರಭದ್ರಪ್ಪ ಹಾಲಭಾವಿಯವರ ವಂಶವೃಕ್ಷ ೨೦೦೭ ರಲ್ಲಿ
ವೀರಭದ್ರಪ್ಪ
+ಚೆನ್ನಬಸವ್ವ
ಸಿದ್ದಪ್ಪ
+ಚೆನ್ನವ್ವ
ಶಂಕರ
+ಶಕುಂತಲಾ
ಪಾರ್ವತಿ
ಚನ್ನಬಸವ್ವ
ದಾನಮ್ಮ
ಶ್ರೀ ನಾಗೇಶ
+ಉಮಾ
ಶ್ರೀ
ವಿನಾಯಕ
ದಾನಪ್ಪ
+ನರ್ಮದಾ
+ಸರ್ವಮಂಗಳಾ
ವಿಶ್ವನಾಥ
ಸುರೇಶ
+ಪಾರ್ವತಿ
ಸವಿತಾ
ಸಚಿನ
ಅಶ್ವಿನ
ಪ್ರೇಮಾ
ಲೀಲಾ
ವಿಮಲಾ
ಗಂಗಾಧರ
+ಅನ್ನಪೂರ್ಣಾ
ಬಸವರಾಜ
+ವನಿತಾ
ವಿನಯ
+ವಿದ್ಯಾ
ಪ್ರಿಯಾಂಕಾ
ಸುಲೋಚನಾ
ಗಿರಿಜಾ
ಮನೋಹರ
+ಲತಾ
ಪಾಮೆಲಾ
ರಾಜಶೇಖರ
+ಸ್ಟೇಫನಿ
ಉಮೇಶ
+ಗೌರಾ
ಲಕ್ಷ್ಮೀ
ಶುಭಾ
ಶಶಿಧರ
+ವತ್ಸಲಾ
ಸುಧೀರ
+ಚೇತನಾ
ರಿಯಾ
ಗೀತು
ನವೀನ
+ಶಿವಾನಿ
ಅಭಿದ್ಯು
ಅರುಣ
+ಪ್ರೇಮಾ
ವಿಶಾಲ
x
x
ಸೋಮಶೇಖರ
+ರಾಚವ್ವ
+ರತ್ನಾ
ಸೂರ್ಯಕಾಂತ
+ವಿಜಯಲಕ್ಷ್ಮೀ
ಜ್ಯೋತಿ
ದೀಪಕ
ಅಶೋಕಕುಮಾರ
+ಅಂಬಿಕಾ
ಅರ್ಚನಾ
ಅಮಿತ
ಮಹೇಶ
+ಪುಷ್ಪಾ
ಮಯೂರ
+ಪೂಜಾ
ಮಿಥುನ
ರಮೇಶ
+ಸುಜಾತಾ
ದೀಪ್ತಿ
ಮಂಜೂಷ
ಪ್ರತಾಪ
+ಶಕುಂತಲಾ
ಪ್ರವೀಣ
ಪ್ರದೀಪ
+ಗೀತಾ
ಪವನ
ಶಾರದಾ

ಶಿವಾನುಭವ ಗ್ರಂಥಮಾಲೆ : ಪುಷ್ಪ : ೧

ಸಂಪಾದಕರು : ಡಾ. ಎಸ್. ಆರ್. ಗುಂಜಾಳ

# ಡಾ. ಫ.ಗು. ಹಳಕಟ್ಟಿ ಆತ್ಮಚರಿತ್ರೆ

ಫ. ಗು. ಹಳಕಟ್ಟಿ

ಎಂ. ಎಂ. ಕಲಬುರ್ಗಿ

ಬಸವತತ್ವ ಪ್ರಸಾರ ಸಂಸ್ಥೆ

ಧಾರವಾಡ

೨೦೦೮

*

## ಪರಿವಿಡಿ

### ಭಾಗ – ೧

### ಪೂರ್ವಾರ್ಧ(೧೯೨೬–೧೯೫೦)



### ಉತ್ತರಾರ್ಧ(೧೯೫೧–೧೯೬೧)



### ಭಾಗ : ೨

### ಜೀವನ ಚರಿತ್ರೆ

❖❖

*

# ಅರಿಕೆ

## ಎಂ. ಎಂ. ಕಲಬುರ್ಗಿ

ಶಿವಾನುಭವ ಕರ್ನಾಟಕದ ಇತಿಹಾಸದಲ್ಲಿ ಕೇವಲ ಒಂದು ಪತ್ರಿಕೆಯಲ್ಲ, ಆಂಗ್ಲ ವಿದ್ಯಾಭ್ಯಾಸದಿಂದಾಗಿ ಹೊಸ ತಿರುವು ಪಡೆಯುತ್ತಲಿದ್ದ ವೀರಶೈವ ಸಮಾಜದ ಇತಿಹಾಸವನ್ನು ಶೋಧಿಸಿದ, ಅದರ ವರ್ತಮಾನವನ್ನು ರೂಪಿಸಿದ ಒಂದು ದೊಡ್ಡ ಶಕ್ತಿ. ಇದು ಜಾಹಿರಾತು ಮೊದಲಾದ ಲಾಭಗಳ ಬೆನ್ನು ಹತ್ತದೆ, ಪ್ರಚೋದಕ ವಿಷಯ ಬೆರಸಿ ಪ್ರಚಾರದ ದುರಾಸೆಗೆ ಬೀಳದೆ, ಪತ್ರಿಕಾಧರ್ಮದ ಪರಿಶುದ್ಧಿಯನ್ನು ವ್ರತವೆಂಬಂತೆ ಪಾಲಿಸಿ, ಮೂರುವರೆ ದಶಕಗಳ ತನ್ನ ಜೀವಮಾನದಲ್ಲಿ ಆರ್ಥಿಕ ಮುಗ್ಗಟ್ಟನ್ನು ಅನುಭವಿಸುತ್ತಲೇ ಸಮಾಜದ ಶ್ರೇಯಸ್ಸಿಗಾಗಿ ಶ್ರಮಿಸಿತು; ವೀರಶೈವ ಪತ್ರಿಕಾಪ್ರಪಂಚದಲ್ಲಿ ನ ಭೂತೋ ನ ಭವಿಷ್ಯತಿ ಎಂಬಂತೆ ದುಡಿಯಿತು.

ಇಂದಿನಂತೆ ಅಂದಿನವರಿಗೆ ಪತ್ರಿಕೆ ಒಂದು ಉದ್ಯಮವಾಗಿರಲಿಲ್ಲ; ಸಮಾಜಸೇವೆಯ ಮಾಧ್ಯಮವಾಗಿದ್ದಿತು. ನವಕರ್ನಾಟಕ ವಾರಪತ್ರಿಕೆಯನ್ನು ಕರ್ನಾಟಕದ ಏಳ್ಗೆಗಾಗಿ ದುಡಿಸಿದ ಡಾ. ಹಳಕಟ್ಟಿಯವರು, ಶಿವಾನುಭವ ಪತ್ರಿಕೆಯನ್ನು ವೀರಶೈವದ ಏಳ್ಗೆಗಾಗಿ ದುಡಿಸಿದರು. ಇಂಥ ಪತ್ರಿಕೆಯ ಗುರಿ-ಗಮ್ಯ, ನೋವು-ನಲಿವು ಇತ್ಯಾದಿಗಳನ್ನು ಸಾರ್ವಜನಿಕರಿಗೆ ತಿಳಿಸಿಕೊಡುವ ಉದ್ದೇಶದಿಂದ ಈ ಪುಸ್ತಿಕೆಯನ್ನು ಪ್ರಕಟಿಸಲಾಗಿದೆ.

ಡಾ. ಫ. ಗು. ಹಳಕಟ್ಟಿಯವರು ಈ ಪತ್ರಿಕೆಗೆ ೨೫ ವರ್ಷ ತುಂಬಿದ ಸಂದರ್ಭದಲ್ಲಿ ಶಿವಾನುಭವ ಪತ್ರಿಕೆಯ ೨೫ ವರ್ಷಗಳ ವರದಿಯು ಎಂಬ ಸುದೀರ್ಘ ಲೇಖನವನ್ನು (೧೯೫೧) ಪ್ರಕಟಿಸಿದ್ದರು (ಶಿವಾನುಭವ ೨೫-೧೨). ಈ ಲೇಖನವನ್ನು ಸಾದ್ಯಂತ ಪರಿಷ್ಕರಿಸಿ - ಸಂಕ್ಷೇಪಿಸಿ, ತರುವಾಯದ ೧೦ ವರ್ಷಗಳ ಚರಿತ್ರೆಯನ್ನು ಹೊಸದಾಗಿ ಬರೆದು ಇದಕ್ಕೆ ಸೇರಿಸಲಾಗಿದೆ ಮತ್ತು ಇವುಗಳನ್ನು ಪೂರ್ವಾರ್ಧ- ಉತ್ತರಾರ್ಧ ಎಂದು ಹೆಸರಿಸಲಾಗಿದೆ. ಶೈಲಿಯಲ್ಲಿ ಏಕಮುಖತೆಯನ್ನು ಮುಂದುವರಿಸಿಕೊಂಡು ಹೋಗುವುದರ ಸಲುವಾಗಿ ಈ ಉತ್ತರಾರ್ಧದ ಬರವಣಿಗೆಯನ್ನೂ ಉತ್ತಮಪುರುಷ ಶೈಲಿಯಲ್ಲಿಯೇ ಬರೆಯಲಾಗಿದೆ. ಇದರಿಂದಾಗಿ ಪೂರ್ವಾರ್ಧದಲ್ಲಿ ಡಾ. ಹಳಕಟ್ಟಿಯವರ ಬರವಣಿಗೆ, ಉತ್ತರಾರ್ಧದಲ್ಲಿ ನನ್ನ ಬರವಣಿಗೆಗಳಿದ್ದರೂ, ಬೆಸುಗೆ ಕಾಣದಂತೆ ಇದಕ್ಕೆ ಒಂದು ಅಖಂಡಶಿಲ್ಪ ಪ್ರಾಪ್ತವಾಗಿದೆ.

ಡಾ. ಹಳಕಟ್ಟಿಯವರು ಒಂದು ಮಾದರಿ, ಒಂದು ಆದರ್ಶ, ಸಾಹಿತ್ಯಮಾದ್ಯಮದ ಮೂಲಕ ಸಮಾಜಸೇವೆ ಸಲ್ಲಿಸುವ ವಿಷಯದಲ್ಲಿ ಅವರ ಆದರ್ಶವನ್ನು ಕಣ್ಣು ಮುಂದಿಟ್ಟುಕೊಂಡವನು,

ನಾನು. ಈ ಮೊದಲು ಅವರ ವಚನ ಶಾಸ್ತ್ರಸಾರ – ೧ ಮಹಾಕೃತಿಯನ್ನು ಪರಿಷ್ಕರಿಸಿ ಪ್ರಕಟಿಸಬೇಕಾಗಿ ಬಂದುದು ತನ್ನ ಪುಣ್ಯ ವಿಶೇಷ. ಈಗ ಅವರ ಉಸಿರಾಗಿದ್ದ ಶಿವಾನುಭವ ಪತ್ರಿಕೆಯ ಉತ್ತರಕಾಲೀನ ಬದುಕನ್ನೂ ಕುರಿತು ಬರೆಯಬೇಕಾಗಿ ಬಂದುದು ನನ್ನ ಇನ್ನೊಂದು ಪುಣ್ಯವಿಶೇಷವೆಂದು ಭಾವಿಸುತ್ತ, ಅವರಿಗೆ ಪ್ರಣಾಮಗಳನ್ನು ಅರ್ಪಿಸುತ್ತೇನೆ. ಈ ಕೃತಿಯನ್ನು ಸಂಪಾದಿಸಿದ ಡಾ. ಎಸ್. ಆರ್. ಗುಂಜಾಳ ಅವರಿಗೆ, ಪ್ರಕಟಿಸಿದ ಧಾರವಾಡ ಬಸವತತ್ವ ಪ್ರಸಾರ ಸಂಸ್ಥೆಯ ಪದಾಧಿಕಾರಿಗಳಿಗೆ ವಂದನೆಗಳನ್ನು ಸಲ್ಲಿಸುತ್ತೇನೆ.

❖❖

ಭಾಗ : ೧

# ಆತ್ಮಚರಿತ್ರೆ

*

# ಪೂರ್ವಾರ್ಧ

(೧೯೨೬-೧೯೫೦)

## ೧. ಪ್ರಾರಂಭದ ಪ್ರಯತ್ನಗಳು

ಶಿವಾನುಭವ ಪತ್ರಿಕೆ ೧೯೨೬ರಲ್ಲಿ ಸ್ಥಾಪಿತವಾಗಿರುವುದೇನೋ ನಿಜ. ಇದರ ಹಿನ್ನೆಲೆ ಅದಕ್ಕೂ ಮೊದಲು ೨೦-೩೦ ವರ್ಷಗಳಾಚೆ ಹೋಗುತ್ತದೆ. ೧೯೦೪ನೆಯ ಇಸ್ವಿಯಲ್ಲಿ ೧ನೆಯ ವೀರಶೈವ ಮಹಾಸಭೆಯು ಜರುಗಿತು. ಆ ಕಾಲದಲ್ಲಿ ಅನೇಕ ಮಹತ್ವದ ಸಾಮಾಜಿಕ ಮತ್ತು ಶೈಕ್ಷಣಿಕ ನಿರ್ಣಯಗಳಾಗಿದ್ದರೂ ವೀರಶೈವ ವಾಙ್ಮಯದ ಸಂಬಂಧವಾಗಿ ಯಾವ ಜಾಗ್ರತಿಯೂ ಸಮಾಜದಲ್ಲಿ ಉಂಟಾಗಲಿಲ್ಲವೆಂದು ನಿರ್ವಿವಾದವಾಗಿ ನಾವು ಹೇಳಬಹುದಾಗಿದೆ. ಆದರೂ ನಾವು ಈ ಬಗ್ಗೆ ಕೆಲವು ವಿವರಗಳನ್ನು ಇಲ್ಲಿ ನಿವೇದಿಸುವುದು ಅವಶ್ಯವಾಗಿದೆ.

**ವೀರಶೈವವಾಙ್ಮಯದ ಬಗ್ಗೆ ಜನತೆಯಲ್ಲಿಯ ಅಜ್ಞಾನ :**

ಈ ಕಾಲದಲ್ಲಿ ಕೆಲವು ವೀರಶೈವ ವಿದ್ಯಾವಂತರೂ ಶಾಸ್ತ್ರಿಗಳೂ ಪಂಡಿತರೂ ಇದ್ದುದು ಕಂಡು ಬಂದಿತು. ಅವರು ವೀರಶೈವ ಧರ್ಮ ಗ್ರಂಥಗಳ ಕೆಲವು ಹೆಸರುಗಳನ್ನು ಜನರು ಮುಂದೆ ನಿರ್ದೇಶ ಮಾಡುತ್ತಿದ್ದರು. ಕ್ರಿಯಾಸಾರ, ನೀಲಕಂಠಭಾಷ್ಯ, ಶಿವಗೀತೆ – ಇವು ವೀರಶೈವರಿಗೆ ಆಧಾರಗ್ರಂಥಗಳೆಂದು ಅವರು ಹೇಳುತ್ತಿದ್ದುದು, ಆದರೆ ಅವುಗಳಲ್ಲಿರುವ ವಿಚಾರಗಳಾವುವು? ಅವು ಯಾವ ತತ್ವಗಳನ್ನು ಸಮರ್ಥಿಸುತ್ತವೇ? ಎಂಬುದನ್ನು ಹೇಳುವವರು ಆ ಕಾಲದಲ್ಲಿ ಯಾರೂ ಇರಲಿಲ್ಲ. ಈಗ ವಚನಶಾಸ್ತ್ರದಲ್ಲಿ ಪ್ರಚಲಿತವಿರುವ ಷಟ್‌ಸ್ಥಲಗಳು, ಏಕೋತ್ತರ ಶತಸ್ಥಲಗಳು, ಸಕೀಲಗಳು, ಕರಣಹಸಿಗೆ, ಶಿವಾನುಭವಶಾಸ್ತ್ರ, ವಚನವಾಙ್ಮಯ ಈ ಶಬ್ದಗಳು ಈ ಕಾಲದಲ್ಲಿ ಯಾರಿಗೂ ಗೊತ್ತಿರಲಿಲ್ಲ. ಆದರೆ ನಿಜಗುಣ ಶಿವಯೋಗಿಗಳು ರಚಿಸಿದ ಆರು ಶಾಸ್ತ್ರಗಳನ್ನು ಮನಮುಟ್ಟಿ ಓದುತ್ತಿರುವವರು ಈ ಪ್ರಾಂತದಲ್ಲಿ ಬಹು ಕಡೆಗೆ ಕಂಡುಬರುತ್ತಿದ್ದರು. ಅವರು ಕೇವಲ ಅದ್ವೈತ ಸಿದ್ಧಾಂತ ಅಂದರೆ ಮಾಯಾವಾದವನ್ನು ಸಮರ್ಥಿಸುತ್ತ ಕೆಲವೊಂದು ಮಾರ್ಗವನ್ನು ಅನುಸರಿಸುವವರಾಗಿದ್ದರು. ಆದರೆ ಅವರ ಬಾಯಿಯಿಂದ ಲಿಂಗಾಂಗ ಸಾಮರಸ್ಯ, ಷಟ್‌ಸ್ಥಲ ಇವುಗಳ ಬಗ್ಗೆ ಯಾವ ವಿಚಾರಗಳೂ ಹೊರಡುತ್ತಿರಲಿಲ್ಲ. ಅವುಗಳ ಅರಿವೂ ಅವರಿಗಿರಲಿಲ್ಲ. ಈ ಸ್ಥಿತಿಯಲ್ಲಿ ಕೆಳಗೆ ಕಾಣಿಸಿದ ಸಂಗತಿಗಳು ನನ್ನ ಗಮನ ಸೆಳೆದಿದ್ದು ಅವುಗಳನ್ನು ಇಲ್ಲಿ ನಿರ್ದೇಶ ಮಾಡುತ್ತೇನೆ.

**ರಬಕವಿ : ಬನಹಟ್ಟಿಗಳಲ್ಲಿ ನನ್ನ ಸಂಶೋಧನೆಗಳು :**

೧೯೦೧ ಮತ್ತು ೧೯೦೨ ಈ ಎರಡು ವರ್ಷಗಳಲ್ಲಿ ಧಾರವಾಡದಲ್ಲಿ ಪ್ಲೇಗ ಬೇನೆಯು ಬಹು ತೀವ್ರಸ್ಥಿತಿಯಲ್ಲಿ ಇದ್ದುದರಿಂದ ನಾನು ಆಗ ಕೆಲವು ಕಾಲ ಜಮಖಂಡಿ ಸಂಸ್ಥಾನದಲ್ಲಿರುವ ಬನಹಟ್ಟಿ ಗ್ರಾಮದಲ್ಲಿ ನನ್ನ ಮಾವಂದಿರಾದ ಕೈ. ವಾ. ತಮ್ಮಣ್ಣಪ್ಪ ಚಿಕ್ಕೋಡಿ ಇವರಲ್ಲಿಗೆ ಹೋಗಿ ಉಳಿಯಬೇಕಾಯಿತು. ಇದೇ ಕಾಲಕ್ಕೆ ಈಗಿನ ನಿವೃತ್ತ ನ್ಯಾಯಾಧೀಶರಾದ ಶ್ರೀಯುತ ವೀರಭದ್ರಪ್ಪ ಹಾಲಭಾವಿ ಬಿ. ಎ. ಎಲ್. ಎಲ್. ಬಿ. ಇವರು ರಬಕವಿಯಲ್ಲಿಯ ತಮ್ಮ ಆಪ್ತರ ಕಡೆಗೆ ಬರುತ್ತಿದ್ದರು. ನಾವು ಉಭಯತರು ಕಾಲೇಜಿನಲ್ಲಿ ಕೇವಲ ಮಿತ್ರತ್ವದಿಂದ ಇರುತ್ತಿದ್ದು, ಇಲ್ಲಿಯಾದರೂ ಕೂಡಿಯೇ ಕಾಲ ಕಳೆಯುತ್ತಿದ್ದೆವು. ಶ್ರೀಯುತ ವೀರಭದ್ರಪ್ಪನವರು ಜಮಖಂಡಿ ಸಂಸ್ಥಾನದಲ್ಲಿರುವ ಗೋಠೆ ಎಂಬ ಗ್ರಾಮದಲ್ಲಿ ತಮ್ಮ ಬಂಧುಗಳ ಮನೆಯಲ್ಲಿ ಕೆಲವು ಪುರಾತನ ಗ್ರಂಥಗಳಿದ್ದು, ಅವುಗಳನ್ನು ಅವರು ರಬಕವಿಗೆ ತಂದು ನನಗೆ ತೋರಿಸಿದರು. ಅವುಗಳಲ್ಲಿ ಪ್ರಭುಲಿಂಗಲೀಲೆ ಮತ್ತು ಗಣಭಾಷ್ಯ ರತ್ನಮಾಲೆ ಎಂಬ ಗ್ರಂಥಗಳಿದ್ದು, ಅವುಗಳನ್ನು ನಾನು ಸಮಗ್ರ ಓದಿ, ಅವುಗಳಲ್ಲಿರುವ ಅನೇಕ ವಿಷಯಗಳ ಬಗ್ಗೆ ಟಿಪ್ಪಣಿಗಳನ್ನು ಮಾಡಿಕೊಂಡೆನು.

ನಾನು ಶ್ರೀಯುತ ಹಾಲಭಾವಿಯವರಿಂದ ಇಸಿದುಕೊಂಡು ಬಂದ ಗ್ರಂಥಗಳಲ್ಲಿ ಒಂದಾದ ಪ್ರಭುಲಿಂಗ ಲೀಲೆಯಲ್ಲಿ ಉಚ್ಚತರದ ಧಾರ್ಮಿಕ ತತ್ವಗಳು ಇದ್ದುದಾಗಿ ಕಂಡುಬಂದಿತು ಮತ್ತು ಅದರ ಭಾಷೆಯು ಹೆಚ್ಚಿನ ತರದ್ದಾಗಿದ್ದಿತು. ನನ್ನ ತಂದೆಯವರು ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಒಂದು ಮುಖ್ಯ ಸಭಾ ಸದಸ್ಯರಾದ್ದರಿಂದ ಈ ಪ್ರಭುಲಿಂಗಲೀಲಾ ಗ್ರಂಥವನ್ನು ಅದರ ವಾರ್ಷಿಕ ಪರೀಕ್ಷಾ ಕಾಲದಲ್ಲಿ ಪರೀಕ್ಷೆಗೋಸ್ಕರ ಇಡಲು ನಾನು ಸೂಚಿಸಿದೆನು. ಆ ಪ್ರಕಾರ ಅವರು ಏರ್ಪಾಟು ಮಾಡಲು, ಈ ಗ್ರಂಥವು ಕೆಲವು ವರ್ಷ ಪರೀಕ್ಷೆಗಾಗಿ ಇಡಲ್ಪಟ್ಟಿದ್ದಿತು.

ಈ ಕಾಲದಲ್ಲಿ ನಾನು ನೋಡಿದ ಎರಡನೇ ಗ್ರಂಥವಾದ ಗಣಭಾಷ್ಯ ರತ್ನಮಾಲೆಯಲ್ಲಿ ಗದ್ಯ ರೂಪದ ಹೊಸ ರಚನೆಯುಳ್ಳ ಅನೇಕ ವಚನಗಳು ನನ್ನ ದೃಷ್ಟಿಗೆ ಬಿದ್ದವು. ಅವುಗಳೆಲ್ಲವನ್ನು ನಾನು ಟಿಪ್ಪಣಿ ಮಾಡುಕೊಂಡೆನು. ಅವುಗಳಲ್ಲಿ ನಿರೂಪಿತವಾದ ವಿಚಾರಗಳು ಹೊಸ ತರಹದ ಶೈಲಿಯಲ್ಲಿದ್ದು, ಹೊಸ ತರಹದ ಶ್ರೇಷ್ಠ ವಿಚಾರವುಳ್ಳವುಗಳಾಗಿದ್ದವು. ಅವುಗಳ ನಿಜಸ್ವರೂಪಿನ ವಿವರವು ನನಗೆ ಈ ಕಾಲದಲ್ಲಿ ಎಷ್ಟು ಮಾತ್ರವೂ ಇರಲಿಲ್ಲ. ಕೈ. ವಾ. ತಮ್ಮಣ್ಣಪ್ಪನವರು ಉಚ್ಚ ವಾಙ್ಮಯಿಗಳೂ ಕನ್ನಡ ಭಾಷಾಪ್ರೇಮಿಗಳೂ ವಿದ್ವಾಂಸರೂ ಇದ್ದರು. ಅವರಿಗೂ ಕೂಡ ಅವುಗಳ ಪರಿಚಯವಿರಲಿಲ್ಲ. ಈ ಎಲ್ಲ ಸಂಗತಿಗಳು ೧೯೦೧ರಲ್ಲಿ ಅಂದರೆ ನಾನು ಬಿ. ಎ. ಕ್ಲಾಸಿನಲ್ಲಿ ಇದ್ದಾಗ ಸಂಭವಿಸಿದವು.

೧೯೦೨ನೇ ಇಸ್ವಿಯಲ್ಲಿ ನಾನು ಪುನಃ ಬನಹಟ್ಟಿಗೆ ಹೋದ ಕಾಲದಲ್ಲಿ ಅಲ್ಲಿ ಗಲಗಲಿ ಶಿವಲಿಂಗಪ್ಪ ಎಂಬುವರು ಇದ್ದು, ಅವರಲ್ಲಿ ೩೨ ಹಳೇ ಗ್ರಂಥಗಳು ಮತ್ತು ಗುರುಬಸವಯ್ಯ ಕಂತಿ ಎಂಬವರಿದ್ದು, ಅವರಲ್ಲಿ ೧೬ ಗ್ರಂಥಗಳು ನನ್ನ ದೃಷ್ಟಿಗೆ ಬಿದ್ದವು. ಮುಂದೆ ನಾನು ಒಂದು ಸಮಯದಲ್ಲಿ ಬೆಳಗಾವಿಗೆ ಹೋದ ಕಾಲದಲ್ಲಿ ವೀರಶೈವ ಸಮಾಜದಲ್ಲಿ ಪ್ರಸಿದ್ಧರಾದ ಕೈ. ವಾ. ಗುರುಸಿದ್ದಪ್ಪ ಗಿಲಗಂಚಿ ಹಿಂದಿನ ಡಿಸ್ಟ್ರಿಕ್ಟ್ ಡೆಪ್ಯೂಟಿ ಕಲೆಕ್ಟರ್ ಇವರ ಮನೆಯಲ್ಲಿ ೧೭ ಗ್ರಂಥಗಳನ್ನು ಮತ್ತು ನನ್ನ ಆಪ್ತರಾದ ಭೋಜಪ್ಪ ಭೋಜ ಇವರಲ್ಲಿ ೧೦ ಗ್ರಂಥಗಳನ್ನು ನಾನು ನೋಡಿದೆನು.

ಅವುಗಳಲ್ಲಿ ಗ್ರಂಥಗಳ ಪಟ್ಟಿಯನ್ನು ನಾನು ಮಾಡಲಾಗಿ, ಅವುಗಳಲ್ಲಿ ಭಾವಚಿಂತಾರತ್ನ, ಕವಿಕರ್ಣರಸಾಯನ, ಲಕ್ಕಣ್ಣ ದಂಡೇಶನ ಶಿವತತ್ವ ಚಿಂತಾಮಣಿ, ಏಕೋರಾಮೇಶ್ವರ ಪುರಾಣ, ಪುಲಿಗೆರೆಯ ಜಕ್ಕಣ್ಣನ ಏಕೋತ್ತರ ಶತಸ್ಥಲ, ಗುರುಬಸವ ಕವಿಯ ಮನೋವಿಜಯ ಅಲ್ಲದೆ ಅನೇಕ ಪುರಾಣಗಳೂ ಚಿಕ್ಕ ಚಿಕ್ಕ ಕಾವ್ಯಗಳೂ ಇದ್ದವು. ನಾನು ಮಾಡಿದ ಈ ಗ್ರಂಥಗಳ ಪಟ್ಟಿಯಲ್ಲಿ ಅವುಗಳ ಗ್ರಂಥಕರ್ತರು ಯಾರು? ಅವರು ಯಾವ ಶೈಲಿಯಲ್ಲಿ ಬರೆದಿದ್ದಾರೆ? ಗ್ರಂಥಗಳ ವಿಷಯ, ಪುಟ ಸಂಖ್ಯೆ, ಗ್ರಂಥಕಾರನ ಕಾಲದ ವಿವರವು ಇದ್ದರೆ, ಅದರ ಉಲ್ಲೇಖ ಇವೆಲ್ಲವುಗಳ ಸಮಾವೇಶವನ್ನು ಮಾಡಿಕೊಂಡೆನು. ಇದರಿಂದ ಆಯಾ ಗ್ರಂಥಗಳ ಸಾಮಾನ್ಯ ಸ್ವರೂಪ ನನಗೆ ಚೆನ್ನಾಗಿ ಗೊತ್ತಾಗುತ್ತಿತ್ತು. ಇವುಗಳ ಮೇಲಿಂದ ವೀರಶೈವರಲ್ಲಿ ಆವುದೋ ಒಂದು ಮಹತ್ವದ ವಾಙ್ಮಯವಿದೆ. ಅದಕ್ಕೊಂದು ಸಿದ್ಧಾಂತವಿದೆ. ಧರ್ಮವಿದೆ ಎಂಬುದರ ತಿಳುವಳಿಕೆಯು ನನಗೆ ಆಗಹತ್ತಿತು. ಆ ಕಾಲದಲ್ಲಿ ಈಗ ಪ್ರಕಟವಾಗಿರುವ ವಿಶ್ವವಿದ್ಯಾಲಯದಲ್ಲಿ ಎಮ್. ಎ. ಅಭ್ಯಾಸಕ್ಕೋಸ್ಕರ ಉಪಯೋಗಿಸಲು ಯೋಗ್ಯವಾದ ಗ್ರಂಥಗಳು ಕನ್ನಡದಲ್ಲಿ ಇವೆಯೋ? ಎಂಬುದರ ವಿಷಯವಾಗಿ ಸಂದೇಹವು ಬಹು ಜನರಿಂದ ಮಾಡಲ್ಪಡುತ್ತಿತ್ತು. ಆದ್ದರಿಂದ ನಾನು ಮೇಲೆ ಹೇಳಿದ ರೀತಿಯಾಗಿ ಬರೆದ ಸಂಗತಿಗಳನ್ನು ವಾಚಕರು ಈಗ ನೋಡಿ ಆಶ್ಚರ್ಯಪಡಬೇಕಾದುದು ಏನೂ ಇರುವುದಿಲ್ಲ.

**ಶಿವಶರಣರ ವಾಙ್ಮಯ ಸಂಶೋಧನೆ :**

ಮುಂದೆ ಮರು ವರ್ಷ ನಾನು ಧಾರವಾಡದಲ್ಲಿ ಇದ್ದಾಗ್ಗೆ, ಅಲ್ಲಿಯ ನಾಗರಿಕರಾದ ಶಿವಲಿಂಗಪ್ಪ ಮಂಚಾಲಿ ಎಂಬವರಲ್ಲಿ ಆಕಸ್ಮಾತ್ತಾಗಿ ಹೋದಾಗ್ಗೆ. ಅವರಲ್ಲಿ ಪುರಾತನ ಗ್ರಂಥಗಳ ಒಂದು ದೊಡ್ಡ ಸಮುದಾಯವೇ ಕಂಡು ಬಂದಿತು. ಅವುಗಳಲ್ಲಿ ಅನೇಕ ಗ್ರಂಥಗಳನ್ನು ನೋಡಿದ್ದು ಇದೇ ಮೊದಲು. ನಾನು ಈ ಗ್ರಂಥಗಳಲ್ಲಿ ಕೆಲವುಗಳನ್ನು ಓದಲಿಕ್ಕೆ ಅವರಿಂದ ಇಸಿದುಕೊಂಡು ಬಂದೆನು. ಅವುಗಳಲ್ಲಿ ಪ್ರಭುದೇವರ ವಚನಗಳು, ಷಟ್‌ಸ್ಥಲ ತಿಲಕ, ಶಿವಾಧಿಕ್ಯ ಪುರಾಣ ಎಂಬವುಗಳು ಇದ್ದವು. ಇವೆಲ್ಲವೂ ನಾನು ಆಕಸ್ಮಾತ್ತಾಗಿ ಆರಿಸಿಕೊಂಡವುಗಳು. ಷಟ್‌ಸ್ಥಲ ತಿಲಕವು ಷಟ್ಪದಿ ಗ್ರಂಥವಿದ್ದು ವೀರಶೈವರ ಆರು ಸ್ಥಲಗಳ ವಿವರಣೆಯು ಅದರಲ್ಲಿ ಅತ್ಯುತ್ತಮವಾಗಿ ವಿವರಿಸಲ್ಪಟ್ಟಿತ್ತು.

ನಾನು ೧೯೦೪ನೇ ಇಸ್ವಿಯಲ್ಲಿ ಎಲ್. ಎಲ್. ಬಿ. ಪರೀಕ್ಷೆಯನ್ನು ಮುಗಿಸಿ, ವಿಜಾಪುರ ಪಟ್ಟಣದಲ್ಲಿ ವಕೀಲಿ ವ್ಯವಸಾಯವನ್ನು ಪ್ರಾರಂಭಿಸಿದೆನು. ಈ ಪಟ್ಟಣಕ್ಕೆ ಬಂದ ಬಳಿಕ ೧೯೧೪ ಇಸ್ವಿಯವರೆಗೂ ನನ್ನ ವಾಙ್ಮಯ ಸಂಶೋಧನ ಕಾರ್ಯಗಳನ್ನು ಎಡೆಬಿಡದೆ ಸಾಗಿಸಿಯೇ ಇದ್ದೆನು. ಈ ಕಾಲದಲ್ಲಿ ವಕೀಲಿ ವ್ಯವಸಾಯಕ್ಕೋಸ್ಕರ ನನಗೆ ಬೇರೆ ಬೇರೆ ಗ್ರಾಮಗಳಿಗೆ ಹೋಗಬೇಕಾಗುತ್ತಿತ್ತು. ಆಗ ನನಗೆ ಅನೇಕ ಪುರಾತನ ಹಸ್ತ ಪ್ರತಿ ಕಟ್ಟುಗಳು ಉಪಲಬ್ಧವಾದವು. ಅವುಗಳಲ್ಲಿ ಮಹತ್ವವಾದವುಗಳನ್ನು ನಾನು ಹಣಕೊಟ್ಟು ಕೊಳ್ಳುತ್ತ ಬಂದೆನು. ಈ ಕಾಲದಲ್ಲಿ ವೀರಶೈವ ಧರ್ಮದ ನಿಜಸ್ಥಿತಿ ಯಾವುದು? ಎಂಬುದನ್ನು ಕಂಡುಹಿಡಿಯಬೇಕೆಂಬುದೇ ನನ್ನ ಮುಖ್ಯ ಧ್ಯೇಯವಾಯಿತು. ಇದರಲ್ಲಿ ಬಸವೇಶ್ವರನ ಕಾಲದಲ್ಲಿ ಯಾವ ತತ್ವಗಳು ರೂಢವಾಗಿದ್ದವು? ಎಂಬುದನ್ನು ಕಂಡು ಹಿಡಿಯುವುದು ಮಹತ್ವದ್ದೆಂದು ನನಗೆ ತೋರಹತ್ತಿತು.

ಈ ದೃಷ್ಟಿಯನ್ನು ಇಟ್ಟುಕೊಂಡು ನಾನು ಪುರಾತನ ಗ್ರಂಥಗಳ ಸಂಶೋಧನೆ ಮಾಡಬೇಕೆಂದಣಿಸಿ ಅವುಗಳನ್ನು ಸಂಗ್ರಹಿಸುತ್ತ ಬಂದೆನು. ಹೀಗೆ ಸಂಗ್ರಹವಾದ ಗ್ರಂಥಸಂಖ್ಯೆಯು ನನ್ನಲ್ಲಿ ಒಂದು ಸಾವಿರದ ವರೆಗೆ ಹೋಯಿತು.

ಸಂಶೋಧನ ಕಾರ್ಯದಲ್ಲಿ ತೊಡಗಿದ ನಾವು, ಬೇರೆ ಇತರ ಕಾರ್ಯಗಳನ್ನು ಕೈಕೊಂಡಿದ್ದಾದರೆ, ಈ ಸಂಶೋಧನಕಾರ್ಯಗಳು ಒಂದೇ ಸವನೇ ನಡೆಯುವುದು ಶಕ್ಯವಿಲ್ಲವೆಂದೇ ಹೇಳಬೇಕು. ನಾನು ೧೯೦೪ರಿಂದ ೧೯೨೦ರವರೆಗೂ ಅನೇಕ ಸಾರ್ವಜನಿಕ ಸಂಸ್ಥೆಗಳಲ್ಲಿ ತೊಡಗಿಕೊಂಡವನಾಗಿದ್ದೆನು. ನಾನು ಅನೇಕ ವರ್ಷ ಮುನ್ಸಿಪಾಲಿಟಿಯ ಚೇರ್ ಮನ್ನ ಮತ್ತು ವ್ಹಾಯಿಸ್ ಪ್ರೆಸಿಡೆಂಟ್ ನಾಗಿದ್ದೆನು. ಜಿಲ್ಹಾ ಒಕ್ಕಲುತನ ಸಂಘದ ಕಾರ್ಯದರ್ಶಿಯಾಗಿ ಅದರ ಕಾರ್ಯಗಳಲ್ಲಿ ತೊಡಗಿದ್ದೆನು. ವಿಜಾಪುರದಲ್ಲಿ ವೀರಶೈವ ವಿದ್ಯಾವರ್ಧಕ ಸಂಸ್ಥೆಯನ್ನು ಸ್ಥಾಪಿಸಿ ಒಂದು ಹೈಸ್ಕೂಲನ್ನು ನಡೆಸುತ್ತ ಬಂದೆನು. ಯುದ್ಧ ಪ್ರಚಾರ ಕಾರ್ಯಗಳಲ್ಲಿಯೂ ತೊಡಗಿದ್ದೆನು. ಮುಂದೆ ನಾನು ಮುಂಬಯಿ ಪ್ರಾಂತಿಕ ಕೌನ್ಸಿಲಿನ ಸಭಾಸಧನಾಗಿದ್ದೆನು. ಹೀಗೆ ವಾಙ್ಮಯ ಸಂಶೋಧನಕಾರ್ಯಗಳು ಈ ಕಾಲದಲ್ಲಿ ಒಮ್ಮೆ ಹೆಚ್ಚು ಪ್ರಮಾಣದಿಂದ, ನಡೆಯುತ್ತ ಬಂದವು. ಆದರೂ ಇವುಗಳು ಬೇರೆ ಚಟುವಟಿಕೆಗಳಿಗಿಂತಲೂ ಮಿಗಿಲಾದವುಗಳು, ಶಾಶ್ವತವಾದವುಗಳು, ಸುಧಾರಣೆಗೆ ಸಹಾಯಕವಾದವುಗಳು–ಎಂಬ ತಿಳಿವಳಿಕೆಯು ನನ್ನಲ್ಲಿ ಉಂಟಾಗಿದ್ದರಿಂದ ನಾನು ಈ ವಾಙ್ಮಯ ಕಾರ್ಯಗಳನ್ನು ಬಿಟ್ಟು ಬಿಡದೆ ಮಾಡುತ್ತಲೇ ಬಂದೆನು.

ಈ ಸ್ಥಿತಿಯಲ್ಲಿ ನಾನು ಗ್ರಂಥಗಳನ್ನು ಪರಿಶೀಲಿಸುತ್ತಿರುವಾಗ ಕೆಲವು ವಚನಗಳಲ್ಲಿ ಷಟ್‌ಸ್ಥಲಗಳ ಭೇದ ವಿಭೇದಗಳ ನಿರೂಪಣೆಗಳು ಕಂಡುಬಂದವು. ಅವುಗಳ ಸಹಾಯದಿಂದ ಈ ಸ್ಥಲಗಳಲ್ಲಿರುವ ಪರಸ್ಪರ ಸಂಬಂಧಗಳನ್ನು ಅರಿತುಕೊಳ್ಳಲು ಸಾಧ್ಯ ಎಂದು ತೋರಿತು. ಆ ಪ್ರಕಾರ ನಾನು ಪ್ರಯತ್ನಿಸಲು ಅವುಗಳ ಮೇಲೆ ಕೆಲವೊಂದು ಪ್ರಕಾಶವು ಬೀಳಹತ್ತಿತು. ಕೂಡಲೇ ನಾನು ಸಂಗ್ರಹಿಸಿದ ವಚನಗಳನ್ನು ಸ್ಥಲಾನುಸಾರವಾಗಿ ವರ್ಗೀಕರಣ ಮಾಡಲು ಉದ್ಯುಕ್ತನಾದೆನು.

ವಚನಶಾಸ್ತ್ರದಲ್ಲಿ ಆಧುನಿಕ ಕಾಲಕ್ಕೆ ಅನ್ವಯಿಸುವಂತೆ ವಿಷಯಗಳ ವಿವರಣೆಗಳು ಇದ್ದುದು ಕಂಡುಬರುತ್ತದೆ. ಆದ್ದರಿಂದ ಇಂಥ ವಿಷಯಗಳಿಗೆ ಸಂಬಂಧಿಸಿದ ವಚನಗಳನ್ನೆಲ್ಲ ಒತ್ತಟ್ಟಿಗೆ ತರಲು ಪ್ರಯತ್ನಿಸುತ್ತ ಬಂದೆನು. ಈ ವಚನಗಳಲ್ಲಿ ಮುಖ್ಯವಾಗಿ ಜಾತಿಬೇಧ ನಿರಾಕರಣೆ, ಧರ್ಮಮೂಢತೆ ಮತ್ತು ಕರ್ಮಠತನದ ನಿರಾಕರಣೆ, ಭಿಕ್ಷೆಯ ಬದಲು ಉದ್ಯೋಗ ಮಾಡುವುದು, ಸ್ತ್ರೀಯರ ಸಮಾನತೆ ಇವೇ ಮೊದಲಾದ ವಿಷಯಗಳು ಇದ್ದು, ಅವುಗಳಿಗೆ ಸಂಬಂಧಿಸಿದ ವಚನಗಳನ್ನು ನಾನು ಒತ್ತಟ್ಟಿಗೆ ಸೇರಿಸಲಿಕ್ಕೆ ಹತ್ತಿದೆನು.

ನಾನು ೧೯೨೧ರಲ್ಲಿ ವಿಷಮಜ್ವರದಿಂದ ಪೀಡಿತನಾಗಿ ಮೂರು ತಿಂಗಳುಗಳವರೆಗೆ ಹಾಸಿಗೆ ಹಿಡಿದಿರಬೇಕಾಯಿತು. ಈ ಕಾಲದಲ್ಲಿ ನಾನು ಸಂಗ್ರಹಿಸಿದ ಅವತರಣಗಳನ್ನೂ ಟಿಪ್ಪಣಿಗಳನ್ನೂ ಷಟ್‌ಸ್ಥಲಾತ್ಮಕ ಪದ್ಧತಿಯಂತೆ ವಿಂಗಡಿಸಿದೆನು. ಮೊದಲು ವಚನ ಶಾಸ್ತ್ರಸಾರ ಭಾಗ – ೧ ಇದನ್ನು ಹೀಗೆ ಸಿದ್ಧಪಡಿಸಿ ಬರೆಯಿಸಹತ್ತಿದೆನು. ಅದು ಎರಡು ತಿಂಗಳುಗಳಲ್ಲಿ ಪೂರ್ಣವಾಯಿತು.

ಇದನ್ನು ಸುಂದರವಾಗಿ ಅಚ್ಚು ಹಾಕಿಸಬೇಕೆಂದು ಮಂಗಳೂರು ಬ್ಯಾಸೆಲ್ ಮಿಶನ್ ಪ್ರೆಸ್ಸಿಗೆ ಕಳಿಸಿಕೊಟ್ಟೆನು. ಆಶ್ಚರ್ಯದ ಸಂಗತಿ ಏನೆಂದರೆ, ಮಿಶನ್ ಪ್ರೆಸ್ಸಿನವರು ನಿಮ್ಮ ಗ್ರಂಥದಲ್ಲಿ ಪರಮಾತ್ಮನ

ಸಂಬಂಧವಾಗಿ ಇರುವ ವಿಚಾರಗಳನ್ನು ಪ್ರಕಾಶಪಡಿಸಲು ನಾವು ಇಷ್ಟಪಡುವುದಿಲ್ಲ. ಅವು ನಮ್ಮ ಕ್ರಿಶ್ಚನ್ ಧರ್ಮತತ್ವಗಳನ್ನು ಹೋಲುತ್ತವೆ. ಇಂಥ ಧಾರ್ಮಿಕ ಗ್ರಂಥಗಳನ್ನು ಅಚ್ಚು ಹಾಕುವುದರಿಂದ ನಮ್ಮ ಮಿಶನ್ನಿನ ಉದ್ದೇಶಕ್ಕೆ ಭಂಗಬರುತ್ತದೆ. ಎಂಬ ಕಾರಣವನ್ನು ತೋರಿಸಿ, ನಾನು ಕಳಿಸಿದ ಹಸ್ತಲಿಖಿತ ಗ್ರಂಥವನ್ನೂ ೫೦೦ ರೂ. ಮುಂಗಡ ಹಣವನ್ನೂ ನನಗೆ ತಿರುಗಿ ಕಳಿಸಿದರು!

ಗ್ರಂಥವು ನನ್ನ ಕಡೆಗೆ ತಿರುಗಿ ಬಂದ ಬಳಿಕ ಅದನ್ನು ಶ್ರೀಯುತ ಚೌಗಲೆ ಇವರ ಮಹಾವೀರ ಪ್ರೆಸ್ಸಿಗೆ ಮುದ್ರಣ ಮಾಡಲಿಕ್ಕೆ ಕೊಟ್ಟೆನು. ಅವರೇ ಈ ಗ್ರಂಥವನ್ನು ೧೯೨೩ರಲ್ಲಿ ಪೂರ್ಣವಾಗಿ ಮುದ್ರಣಗೊಳಿಸಿದರು.

ಆರ್. ನರಸಿಂಹಾಚಾರ್ಯರು ಕವಿಚರಿತೆಯ ೧ನೆಯ ಭಾಗವನ್ನು ಇಷ್ಟರಲ್ಲಿ ಹೊರಪಡಿಸಿದ್ದರು. ಅದರಲ್ಲಿ ೪೦-೫೦ ವಚನಕಾರರ ಉಲ್ಲೇಖಗಳಿದ್ದವು. ಆದರೆ ನಾನು ಪ್ರಕಟಿಸಿದ ಗ್ರಂಥದಲ್ಲಿ ೨೧೩ ಜನ ವಚನಕಾರರ ಹೆಸರುಗಳಿದ್ದದ್ದಲ್ಲದೆ ಸುಮಾರು ೧೩೦ ವಚನಕಾರರು ರಚಿಸಿದ ಅನೇಕ ವಚನಗಳನ್ನು ನಾನು ಈ ಗ್ರಂಥದಲ್ಲಿ ಉದಹರಿಸಿದ್ದೆನು.

ವಚನಶಾಸ್ತ್ರಸಾರ ಗ್ರಂಥವು ಹೊರಬಿದ್ದ ಬಳಿಕ ಅನೇಕ ಮಹನೀಯರು ಅದನ್ನು ಬಹಳವಾಗಿ ಹೊಗಳಿ ನನಗೆ ಪತ್ರವನ್ನು ಬರೆದರು. ಆದರೆ ಈ ಗ್ರಂಥದಲ್ಲಿ ಬರೆದಿರುವ ಕೆಲವು ವಿಷಯಗಳ ಬಗ್ಗೆ ಮಾತ್ರ ವೀರಶೈವ ಸಮಾಜದಲ್ಲಿರುವ ಕೆಲವೊಂದು ವರ್ಗದವರು ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದ್ದು ತಿಳಿದುಬಂದಿತು. ಇವರೆಲ್ಲರೂ ಬಹುಶಃ ಬ್ರಾಹ್ಮಣ ಪದ್ಧತಿಗಳೇ ಮೇಲಾದವುಗಳೆಂದು ತಿಳಿದುಕೊಂಡು ಅವುಗಳನ್ನು ಅನುಸರಿಸುವವರಾಗಿದ್ದರು. ನಾನು ಬರೇ ವಚನ ಶಾಸ್ತ್ರಸಾರ ಈ ಗ್ರಂಥದ ಭಾಗಗಳನ್ನು ಪ್ರಕಟಮಾಡುವುದರಿಂದ ಈ ನನ್ನ ಉದ್ದೇಶವು ಸಫಲವಾಗದೆಂದು ನನಗೆ ತೋರಹತ್ತಿತು. ಆದ್ದರಿಂದ ನಾನು ವಚನಗಳ ಸಂಗ್ರಹಕಾರ್ಯವನ್ನು ವಿಸ್ತಾರವಾಗಿ ಮಾಡುವಲ್ಲಿ ಪ್ರವೃತ್ತನಾದೆನು.

೧೯೨೪ರಲ್ಲಿ ನಾನು ಆವರೆಗೆ ಸಂಗ್ರಹಿಸಿದ್ದ ಹಸ್ತಲಿಖಿತ ಗ್ರಂಥಗಳನ್ನು ಶಬ್ದಶಃ ಬರೆಯಿಸಲಿಕ್ಕೆ ಪ್ರಾರಂಭಿಸಿದೆನು. ಹೀಗೆ ಪ್ರಾರಂಭಿಸುವ ಮೊದಲು ನನ್ನಲ್ಲಿದ್ದ ಪ್ರಸಿದ್ಧ ವಚನಕಾರರ ವಚನ ಸಂಗ್ರಹ ಗ್ರಂಥಗಳನ್ನೂ ಅತ್ಯಂತ ಮಹತ್ವದ ಬೇರೆ ಸ್ವತಂತ್ರ ವಚನಗಳನ್ನೂ ಆರಿಸಿಕೊಂಡು, ಮೊದಲು ಅವುಗಳನ್ನು ಬರೆಯಿಸಲು ಪ್ರಾರಂಭಿಸಿದೆನು. ಈ ಗ್ರಂಥಗಳನ್ನು ನಾನು ವಚನ ಶಾಸ್ತ್ರಸಾರ ಭಾಗ – ೧ ಇದರಲ್ಲಿ ಉಲ್ಲೇಖಿಸಿದ್ದೇನೆ. ಇವುಗಳ ಸಂಖ್ಯೆಯು ३೦ ಇದ್ದು, ಇವುಗಳಲ್ಲದೆ ಇವುಗಳಿಗೆ ಸಂಬಂಧಪಟ್ಟ ಇತರ ಶಿವಶರಣರ ಉಕ್ತಿಗಳುಳ್ಳ ಚಿಕ್ಕಪುಟ್ಟ ಗ್ರಂಥಗಳನ್ನು ಕೂಡ ಆಯ್ದು, ಅವುಗಳಲ್ಲಿಯ ವಚನಗಳ ನಕಲುಗಳನ್ನು ಮಾಡಿಸತೊಡಗಿದೆನು. ಈ ಸಂದರ್ಭದಲ್ಲಿ ಶ್ರೀ ಸಂಗಪ್ಪ ಮಿರ್ಜಿ (ಬಬಲೇಶ್ವರ), ಶ್ರೀ ಚಂದ್ರಶೇಖರಯ್ಯ ಮಠ (ಚೊಳಚಗುಡ್ಡ) ಇವರು ಪ್ರತಿ ಮಾಡುವಲ್ಲಿ, ಶ್ರೀ ಧರ್ಮಗೌಡ ಪಾಟೀಲ ಇವರು ಹಣಕಾಸು ಪೂರೈಸುವುದರಲ್ಲಿ ಸಹಾಯ ಮಾಡದೇ ಹೋಗಿದ್ದರೆ ನನ್ನಿಂದ ವಚನ ವಾಙ್ಮಯವನ್ನು ಪ್ರಕಟಿಸುವ ಕಾರ್ಯ ಕೈಗೂಡುತ್ತಿರಲಿಲ್ಲ.

ಮುಂದೆ ಒಂದೇ ಮುದ್ರಿಕೆಯುಳ್ಳ ವಚನಗಳನ್ನು ಆಯ್ದು ಆವುಗಳನ್ನು ಒತ್ತಟ್ಟಿಗೆ ಸೇರಿಸುವ ಕಾರ್ಯವನ್ನು ಜರುಗಿಸುತ್ತ ಬಂದಿದೆನು. ಹೀಗೆ ಆಯಾ ವಚನಕಾರರ ಸ್ವತಂತ್ರ ವಚನಗ್ರಂಥಗಳು ಸಿದ್ಧವಾಗಹತ್ತಿದವು.

೧೯೧೫ರಲ್ಲಿ ಬಸವೇಶ್ವರ ವಚನಗಳನ್ನು ಇಂಗ್ಲೀಷ್ ಭಾಷೆಯಲ್ಲಿ ಭಾಷಾಂತರಿಸಲು ಪ್ರಾರಂಭಿಸಿ ಅದನ್ನು ನಾನು ಮರುವರ್ಷ ಮುಗಿಸಿದೆನು. ನಾನು ಇದಕ್ಕೂ ಪೂರ್ವದಲ್ಲಿ ೧೦-೧೫ ವರ್ಷ ಅನೇಕ ವಚನಗಳನ್ನು ನೋಡುತ್ತ ಬಂದಿದ್ದರೂ ಅವುಗಳ ಭಾಷಾಪದ್ಧತಿ, ಸರಳತನ ಮತ್ತು ಮೋಹಕತನ ಇವುಗಳ ದೃಷ್ಟಿಯಿಂದ ಬಸವೇಶ್ವರನ ವಚನಗಳಿಗೆ ಶ್ರೇಷ್ಠಸ್ಥಾನವು ಸಲ್ಲುತ್ತದೆಂದು ನನಗೆ ತೋರಿದ್ದರಿಂದ ಇದರ ಭಾಷಾಂತರ ಮಾಡಿದೆನು. ನಾನು ರೆವ. ಜೇ. ಎನ್. ಫಾರಕ್ವಹಾರ ಎಂಬ ಹೆಸರಿನ ವಾಙ್ಮಯ ಸಂಶೋಧಕರ ಸೂಚನೆಯ ಮೇರೆಗೆ ಬಸವೇಶ್ವರನ ಈ ವಚನಗಳಲ್ಲಿ ಮುಖ್ಯವಾದವುಗಳನ್ನು ಆರಿಸಿ, ಇಂಡಿಯನ್ ಯಂಟಿಕ್ವರಿ ಎಂಬ ಇಂಗ್ಲೀಷ್ ಪತ್ರಿಕೆಯಲ್ಲಿ ೧೯೨೨ನೇ ಇಸ್ವಿಯಲ್ಲಿ ಪ್ರಸಿದ್ಧ ಪಡಿಸಿದೆನು.

## ೨. ಶಿವಾನುಭವ ಪತ್ರಿಕೆ : (೧೯೨೬-೧೯೫೦)

ನನ್ನ ಪಬ್ಲಿಕ್ ಪ್ರಾಸಿಕ್ಯೂಟರ ಹುದ್ದೆಯ ಅವಧಿಯು ೧೯೨೬ರಲ್ಲಿ ಮುಗಿಯುವುದರ ಒಳಗಾಗಿ ಅಂದರೆ ೨೨-೦೧-೨೫ನೇ ದಿವಸ, ಈವರೆಗೆ ನಾನು ಸಂಶೋಧಿಸುತ್ತ ಬಂದಿದ್ದ ವಚನವಾಙ್ಮಯವನ್ನು ಪ್ರಕಟಿಸುವ ಕಾರ್ಯವನ್ನು ಕೈಕೊಳ್ಳಬೇಕೆಂದು ನಿಶ್ಚಯಿಸಿ, ಒಂದು ಅಚ್ಚುಕೂಟವನ್ನು ವಿಜಾಪುರದಲ್ಲಿಯೇ ಸ್ಥಾಪಿಸಿದೆನು ಮತ್ತು ಅದರಲ್ಲಿ ಶಿವಾನುಭವ ಹೆಸರಿನ ಮಾಸಪತ್ರಿಕೆಯನ್ನು ೧-೨-೧೯೨೬ ನೇ ದಿವಸ ಪ್ರಸಿದ್ಧಿಸಲು ಪ್ರಾರಂಭಿಸಿದೆನು.

ಶಿವಶರಣರ ತತ್ವಗಳ ಉದ್ದೇಶವು ಶಿವನ ಅನುಭವ ಎಂದರೆ ಶಿವನನ್ನು ಕಾಣುವುದು ಅಥವಾ ಅರಿಯುವುದು. ಇದೇ ಮುಖ್ಯವಾಗಿದ್ದರಿಂದಲೂ ಬಸವಾದಿ ಪ್ರಮಥರು ಕಲ್ಯಾಣ ಪಟ್ಟಣದಲ್ಲಿದ್ದಾಗ ತಮ್ಮ ಶರಣರ ಕೂಟಕ್ಕ ಶಿವಾನುಭವ ಮಂಟಪ ಎಂಬ ಹೆಸರನ್ನು ಇಟ್ಟಿದ್ದರಿಂದಲೂ ನಾನು ಈ ಪತ್ರಿಕೆಗೆ ಶಿವಾನುಭವ ಎಂಬ ಹೆಸರನ್ನಿಟ್ಟೆನು. ಇಂಗ್ಲೀಷ ಭಾಷೆಯಲ್ಲಿ ಶಿವಾನುಭವ ತತ್ವವನ್ನು ಮಿಸ್ಟಿಸಿಜಮ್ ಎಂದು ಕರೆಯಬಹುದು. ಈ ಇಂಗ್ಲೀಷ್ ಶಬ್ದವು ಅದರ ಸ್ವರೂಪವನ್ನು ಚೆನ್ನಾಗಿ ವಿವರಿಸುವಂಥದಿರುತ್ತದೆ.

ನಾನು ಈ ಪತ್ರಿಕೆಯನ್ನು ಮೊದಲು ತ್ರೈಮಾಸಿಕವನ್ನಾಗಿ ಮಾಡಿದೆನು. ಒಂದು ವೇಳೆ ಇದನ್ನು ನಾನು ಮಾಸಿಕವಾಗಿ ಮಾಡಿದ್ದರೆ ಈವರೆಗೆ ಅಪರಿಚಿತವಾಗಿದ್ದ ಈ ವಾಙ್ಮಯದ ವಿಷಯವಾಗಿ ಸಾರ್ವಜನಿಕರಿಂದ ಸಾಕಷ್ಟು ಲೇಖನಗಳು ಬರಲಾರವೆಂದು ನನಗೆ ತೋರಿತು. ಹೀಗೆ ಈ ಪತ್ರಿಕೆಯು ತ್ರೈಮಾಸಿಕವಾಗಿದ್ದರೂ ಅದರ ಪುಟ ಸಂಖ್ಯೆಯು ೧ಳಳ ಇದ್ದಿತು. ಇದರಿಂದ ಪ್ರತಿಯೊಂದು ಸಂಚಿಕೆಯಲ್ಲಿ ಗ್ರಂಥಗಳನ್ನು ಸಮಗ್ರವಾಗಿ ಅಚ್ಚು ಹಾಕುವುದು ಸುಲಭವಾಗುವುದೆಂದು ನನಗೆ ತೋರಿತು. ಹೀಗೆ ನಾನು ಶಿವಾನುಭವ ಪತ್ರಿಕೆಯನ್ನು ೧೯೨೬ರಲ್ಲಿ ಪ್ರಾರಂಭಿಸಿ, ಅಂದಿನಿಂದ ಒಂದೇ ಸವನೇ ಅದನ್ನು ಪ್ರಕಟಮಾಡುತ್ತ ಬಂದಿದ್ದೇನೆ. ಮಧ್ಯದಲ್ಲಿ ಅನಿವಾರ್ಯ ಕಾರಣಗಳ ಮೂಲಕ ನಾನು ಕೆಲವು ಸಂಚಿಕೆಗಳನ್ನು ನಿಲ್ಲಿಸಿರಬಹುದು. ಆದರೆ ಕೆಲವು ಅಪವಾದಗಳನ್ನುಳಿದು ವರ್ಷಾಂತ್ಯದಲ್ಲಿ ಪ್ರಕಟವಾಗಬೇಕಾದಷ್ಟು ಪುಟಗಳನ್ನು ಪೂರ್ತಿಮಾಡುತ್ತಲೇ ಬಂದಿದ್ದೇನೆ. ಈ ಪತ್ರಿಕೆಯ ಮೂಲಕ ಈವರೆಗೆ ಜರುಗಿದ ಕಾರ್ಯಗಳು ಸಾರ್ವಜನಿಕರ ಇದಿರಿಗೆ ಇರುತ್ತವೆ. ಆದರೂ ಅವುಗಳನ್ನು ನಾನು ಇಲ್ಲಿ ಸಂಕ್ಷಿಪ್ತವಾಗಿ ವಿವರಿಸುತ್ತೇನೆ.

## ೩. ಪತ್ರಿಕೆಯ ಮೂಲಕ ಗ್ರಂಥಪ್ರಕಟನೆ

ನಾನು ಕಳೆದ ೨೫ ವರ್ಷಗಳಲ್ಲಿ ಈ ಪತ್ರಿಕೆಯ ಮೂಲಕ ಒಟ್ಟು ೭೫ ಗ್ರಂಥಗಳನ್ನು ಪ್ರಕಟಿಸುವ ಕಾರ್ಯ ಮಾಡಿದ್ದೇನೆ. ಇವುಗಳಲ್ಲಿ ನಾಲ್ಕೈದು ಗ್ರಂಥಗಳು ಮಾತ್ರ ಪೂರ್ತಿಯಾಗಿರಲಿಲ್ಲ. ಇವುಗಳು ಸಹ ಶಿವಾನುಭವ ಪತ್ರಿಕೆಯಲ್ಲಾಗಲೀ ಅಥವಾ ಸ್ವತಂತ್ರ ರೀತಿಯಿಂದಾಗಲೀ ಪ್ರಕಟವಾಗುವುಧರಲ್ಲಿವೆ. ಈ ಎಲ್ಲ ಗ್ರಂಥಗಳು ಪುರಾತನ ಮೂಲಗ್ರಂಥಗಳಾಗಿವೆ. ಇವೆಲ್ಲವುಗಳ ಒಟ್ಟು ಪುಟ ಸಂಖ್ಯೆ ೮೦೬೫ ಇರುತ್ತದೆ. ಪ್ರತಿಯೊಂದು ಗ್ರಂಥದ ಪುಟ ಸಂಖ್ಯೆ ೨೫ ರಿಂದ ೬೫೦ ಪುಟಗಳವರೆಗೂ ಇರುತ್ತದೆ. ಈ ಎಲ್ಲವುಗಳನ್ನು ಕೂಡಿಸಿ ಸರಾಸರಿ ಲೆಕ್ಕ ಮಾಡಿದಲ್ಲಿ ಒಂದು ಗ್ರಂಥವು ೧೧೦ ಪುಟಗಳುಳ್ಳದ್ದಾಗುವುದು ಮತ್ತು ಒಂದು ವರ್ಷದಲ್ಲಿ ಮೂರು ಗ್ರಂಥಗಳನ್ನು ಹೊರಪಡಿಸಿದಂತಾಗುತ್ತದೆ. ಆ ಅವಧಿಯಲ್ಲಿ ಹಳೇ ಗ್ರಂಥಗಳನ್ನು ಬರೆಯಿಸುವುದು, ಶೋಧಿಸುವುದು, ಪ್ರೂಫು ನೋಡುವುದು, ಅಚ್ಚು ಹಾಕಿಸುವುದು–ಇವೆಲ್ಲವುಗಳು ಸಮಾವೇಶವಾಗುತ್ತವೆ. ಈ ಕಾರ್ಯಗಳಲ್ಲದೆ ಪ್ರತಿಯೊಂದು ಸಂಚಿಕೆಗೆ ವಿದ್ವಜ್ಜನರ ಲೇಖನಗಳನ್ನು ಸಂಗ್ರಹಿಸುವುದು ಮತ್ತು ನಾನು ಲೇಖನಗಳನ್ನು ಬರೆಯುವುದು ಈ ಕಾರ್ಯಗಳನ್ನು ಸಹ ಮಾಡಿದ್ದಾಗಿರುತ್ತದೆ. ಇಂಥ ನನ್ನ ಮತ್ತು ಅನ್ಯರ ಲೇಖನಗಳ ಪುಟ ಸಂಖ್ಯೆ ಒಟ್ಟು ಸುಮಾರು ೧೨೦೦೦ ಆಗಿರುತ್ತದೆ. ಈ ಗ್ರಂಥಗಳಲ್ಲದೆ, ನಾಲ್ಕಾರು ಗ್ರಂಥಗಳು ಸ್ವತಂತ್ರವಾಗಿ ಮುದ್ರಣ ಹೊಂದಿರುತ್ತವೆ. ಹೋದ ೨೫ ವರ್ಷಗಳ ವರೆಗೆ ಬಿಡುವಿಲ್ಲದೆ ಒಂದೇ ಸವನೆ ಕಾರ್ಯಮಾಡುತ್ತ ಬಂದಿದ್ದರ ಫಲವು ಇದಾಗಿರುತ್ತದೆ.

ನಾನು ಈ ಅವಧಿಯಲ್ಲಿ ಹೊರಗಿನ ಬೇರೆ ಯಾವ ಚಳವಳಿಯಲ್ಲಿ ಸೇರಿಕೊಂಡಿರುವುದಿಲ್ಲ, ಆದರೆ ಶಿಕ್ಷಣಕ್ಕೆ ಸಂಬಂಧಿಸಿರುವ ಕಾರ್ಯಗಳು ಅಂದರೆ ಮುಂಬಯಿ ವಿಶ್ವವಿದ್ಯಾಲಯ ಅಥವಾ ಬಿಜಾಪುರ ಮುನಿಪಲ್ ಸ್ಕೂಲ್ ಬೋರ್ಡ ಇವುಗಳಲ್ಲಿ ಮಾತ್ರ ಸಭಾಸದನಾಗಿ ಕಾರ್ಯಮಾಡಿದ್ದೇನೆ. ಕೆಲವು ವರ್ಷ ನಾನು ವಿಜಾಪುರ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯಲ್ಲಿ ಸರ್ವಾಧಿಕಾರಿಯಾಗಿ ಕೆಲಸಮಾಡಿದೆನು. ನಾನು ಈ ಅವಧಿಯಲ್ಲಿ ಬಹುಶಃ ವ್ಯಾಖ್ಯಾನಗಳಿಗೋಸ್ಕರ ಪರ ಊರುಗಳಿಗೆ ಹೋಗಿರುವುದಿಲ್ಲ. ಒಂದು ವೇಳೆ ನಾನು ಹೋಗುವ ಪರಿಸ್ಥಿತಿಯನ್ನು ಇಟ್ಟುಕೊಂಡಿದ್ದರೆ ನನ್ನ ಕಾಲ ವ್ಯಯವಾಗುತ್ತಿತ್ತು. ಇದರಿಂದ ಪ್ರೆಸ್ಸಿನ ಕಾರ್ಯಗಳಿಗೆ ವ್ಯತ್ಯಯ ನಿಃಸಂಶಯವಾಗಿ ಬಂದು ನನಗೆ ಹಾನಿಯಾಗುತ್ತಿತ್ತು. ಈ ಕಾಲದಲ್ಲಿ ಪರ ಗ್ರಾಮಗಳಿಗೆ ಹೋಗಲೇ ಬೇಕಾದರೆ ಅಲ್ಲಿ ಕೆಲಸವು ತೀರಿದ ಕೂಡಲೇ ಒಂದು ದಿನವನ್ನಾದರೂ ಕಳೆಯದೇ ವಿಜಾಪುರಕ್ಕೆ ಹಿಂದಿರುಗಿ ಬರುತ್ತಿದ್ದೆನು. ಇಷ್ಟೇ ಅಲ್ಲ, ಆ ಪಟ್ಟಣಗಳಲ್ಲಿರುವ ನೋಡತಕ್ಕ ಸ್ಥಳಗಳನ್ನು ಸಹ ನಾನು ನೋಡುವುದರಲ್ಲಿ ವೇಳೆ ಕಳೆಯುತ್ತಿದ್ದಿಲ್ಲ. ನಾನು ಬೆಂಗಳೂರು, ಮೈಸೂರು ಮೊದಲಾದ ಕೆಲವು ಪಟ್ಟಣಗಳಿಗೆ ಹೋಗಿದ್ದರೂ ಅವುಗಳಲ್ಲಿ ನೋಡತಕ್ಕಂಥ ಸ್ಥಳಗಳನ್ನು ಸಹ ನಾನು ಇನ್ನೂ ಪೂರ್ಣವಾಗಿ ನೋಡಿರುವುದಿಲ್ಲ. ನಾನು ವಿಜಾಪುರದಲ್ಲಿ ನಾಲ್ಕೆಂಟು ಬಾರಿ ಮಾತ್ರ ಸಿನೇಮಾ ಗೃಹಗಳಿಗೆ ಹೋಗಿದ್ದೇನೆಯೇ ಹೊರ್ತು, ಹೆಚ್ಚು ಬಾರಿ ನೋಡಲಿಕ್ಕೆ ಹೋಗಿರುವುದಿಲ್ಲ. ಆದರೆ ಹೊರಗಿನಿಂದ ವ್ಯಾಖ್ಯಾನಕಾರರು ವಿಜಾಪುರಕ್ಕೆ ಬಂದಿದ್ದರೆ ಅಥವಾ ಇಲ್ಲಿ ಬೇರೆ ಸಭಾ ಕಾರ್ಯಗಳು ಜರುಗುತ್ತಿದ್ದರೆ ಮಾತ್ರ ನಾನು ಅವುಗಳಿಗೆ ತಪ್ಪದೆ ಹೋಗುತ್ತಿರುತ್ತೇನೆ. ಆದರೂ ಒಕ್ಕುಲತನ ಸುಧಾರಣೆ ಅಥವಾ ಸಹಕಾರಿ ಸಂಘಗಳು ಇಂಥ ಉಪಯುಕ್ತ ಚಟುವಟಿಕೆಗಳಲ್ಲಿ ಭಾಗವಹಿಸುವ ಸಂಧಿಗಳು ಒದಗಿದರೆ ಅವುಗಳಿಂದ

ನಾನು ದೂರ ಇರುವುದಿಲ್ಲ. ಈ ಪ್ರಕಾರ ನಾನು ಹೋದ ೨೫ ವರ್ಷಗಳಿಂದ ವಾಙ್ಮಯ ಕಾರ್ಯ ಮಾಡುತ್ತ ಬಂದಿದ್ದರಿಂದ ಮೇಲೆ ವಿವರಿಸಿದಂತೆ ನನ್ನಿಂದ ಕೆಲಮಟ್ಟಿಗಾದರೂ ಕಾರ್ಯಗಳು ಜರುಗಿರುತ್ತವೆ. ಇನ್ನು ಮೇಲೆ ನಾನು ಪತ್ರಿಕೆಯ ಮೂಲಕ ಪ್ರಕಟಿಸಿದ ೭೫ ಗ್ರಂಥಗಳು ಯಾವ ರೀತಿಯವಾಗಿರುತ್ತವೆಂಬುದನ್ನು ಸ್ಥೂಲ ದೃಷ್ಟಿಯಿಂದ ವಿವರಿಸುತ್ತೇನೆ.

**೧. ಮೂಲ ವಚನಗ್ರಂಥಗಳು :**

ನಾನು ಪ್ರಕಟಿಸಿದ ಗ್ರಂಥಗಳಲ್ಲಿ ಮೂಲ ವಚನಗ್ರಂಥಗಳು ಕೆಲವು ಇದ್ದು, ಅವುಗಳನ್ನು ನಾನು ಇದ್ದಕ್ಕಿದ್ದಂತೆ ಪ್ರಕಟಿಸಿರುತ್ತೇನೆ. ಅವುಗಳಲ್ಲಿ ನಾನು ಯಾವ ಬದಲಾವಣೆಗಳನ್ನೂ ಮಾಡಿರುವುದಿಲ್ಲ. ಇವು ವೀರಶೈವರಲ್ಲಿ ಮಹತ್ವದ ಗ್ರಂಥಗಳು, ಅವುಗಳನ್ನು ಕೆಳಗೆ ವಿವರಿಸಿದ್ದೇನೆ.

**ಬಸವೇಶ್ವರರ ವಚನಗಳು :** ಈ ವಚನಗಳ ಗ್ರಂಥವನ್ನು ನಾನು ಶಿವಾನುಭವ ಪತ್ರಿಕೆಯ ೧ನೆಯ ಸಂಪುಟದ ಒಂದನೆಯ ಮತ್ತು ಎರಡನೆಯ ಸಂಚಿಕೆಗಳಲ್ಲಿ ಪೂರ್ಣವಾಗಿ ಮುದ್ರಿಸಿದೆನು. ಆ ಆವೃತ್ತಿಯನ್ನು ನಾನು ಬಳ್ಳಾರಿಯಲ್ಲಿ ಪ್ರಸಿದ್ಧಿಸಿದ ಒಂದು ಅಚ್ಚು ಹಾಕಿದ ಪ್ರತಿ ಮತ್ತು ಮುದ್ದೇಬಿಹಾಳ ತಾಲೂಕಿನಲ್ಲಿ ಕುಚಬಾಳ ಎಂಬ ಗ್ರಾಮದ ಗೌಡರಲ್ಲಿ ದೊರೆತ ಒಂದು ಹಸ್ತಲಿಖಿತ ಪ್ರತಿ-ಇವುಗಳ ಸಹಾಯದಿಂದ ಸಿದ್ದ ಮಾಡಿದೆನು. ಇದರಿಂದ ಈ ಪ್ರತಿಯು ಸ್ವಾಭಾವಿಕವಾಗಿಯೇ ಶುದ್ಧವಾಗಿರಲಿಲ್ಲ. ಈ ಕಾಲದಲ್ಲಿ ನನಗೆ ಈ ವಚನಗಳ ಪ್ರತಿಗಳು ಹೆಚ್ಚಿಗೆ ದೊರಕಿದ್ದಿಲ್ಲ. ಆದರೆ ೭-೮ ವರ್ಷಗಳ ತರುವಾಯ ಎರಡನೆಯ ಆವೃತ್ತಿಯನ್ನು ಸಿದ್ದಪಡಿಸುವ ಸಂಧಿಯು ಬರಲಾಗಿ, ಆಗ ನನಗೆ ದೊರೆತ ಮೂರು ನಾಲ್ಕು ಪ್ರತಿಗಳು ಮತ್ತು ಟೀಕಾತ್ಮಕ ಒಂದು ಪ್ರತಿಯು ದೊರೆತದ್ದರಿಂದ, ಈ ಗ್ರಂಥಗಳ ಸಹಾಯದಿಂದ ಹೆಚ್ಚು ಶುದ್ಧವಾದ ಪ್ರತಿಯು ದೊರತದ್ದರಿಂದ, ಈ ಗ್ರಂಥಗಳ ಸಹಾಯದಿಂದ ಹೆಚ್ಚು ಶುದ್ದವಾದ ಪ್ರತಿಯನ್ನು ಸಿದ್ದಪಡಿಸಿಲು ನನಗೆ ಶಕ್ಯವಾಯಿತು. ಮುಂದೆ ಕೆಲವು ವರ್ಷಗಳು ಆದ ಬಳಿಕ ಈ ಗ್ರಂಥವು ಶಿವಾನುಭವ ಸಂಘಗಳಲ್ಲಿ ಉಪಯೋಗಿಸುವುದಕ್ಕೆ ಪಠ್ಯ ಪುಸ್ತಕವಾಗಿರಬೇಕೆಂಬ ಉದ್ದೇಶದಿಂದ, ವಿಷಯಾನುಸಾರವಾಗಿ ಅದನ್ನು ಕ್ರಮಗೊಳಿಸಿ ಅಚ್ಚು ಹಾಕಿಸಿದೆನು. ಅದು ಈಗ ಪ್ರಚಲಿತವಿರುತ್ತದೆ. ಈ ಗ್ರಂಥವನ್ನು ಈಚೆಗೆ ಶ್ರೀಯುತ ಶಿ. ಶಿ. ಬಸವನಾಳ ಇವರು ಬಸವಣ್ಣನವರ ಷಟ್‌ಸ್ಥಲದ ವಚನಗಳು ಈ ಹೆಸರಿನಿಂದ ಸಿದ್ದಪಡಿಸಿದ್ದು, ಅದನ್ನು ಈ ಪ್ರತಿಗೆ ಹೋಲಿಸಲಾಗಿ ಈ ವಚನಗಳಲ್ಲಿ ಕೆಲವು ಮಾತ್ರ ವ್ಯತ್ಯಾಸಗಳು ಕಂಡು ಬರುತ್ತವೆಯೇ ಹೊರತು ಅರ್ಥಕ್ಕೆ ಬಾಧೇ ಬರುವಂಥ ವಚನಗಳ ಸಂಖ್ಯೆ ಹೆಚ್ಚು ಇರುವುದಿಲ್ಲ. ಇದಕ್ಕೆ ಅಪವಾದವಾಗಿ ಕೆಲವು ವಚನಗಳು ಮಾತ್ರ ಇವೆ. ಅವುಗಳನ್ನು ಶ್ರೀಯುತ ಬಸವನಾಳ ಇವರು ತಮ್ಮ ಗ್ರಂಥದ ಪ್ರಸ್ತಾವನೆಯಲ್ಲಿ ಉಲ್ಲೇಖಿಸಿರುತ್ತಾರೆ.

**ಪ್ರಭುದೇವರ ವಚನಗಳು :** ಈ ಗ್ರಂಥದ ಕೆಲಭಾಗವನ್ನು ನಾನು ೧೯೦೨ ಇಸ್ವಿಯಲ್ಲಿ ಬರೆದಿಟ್ಟಿದ್ದೆನು. ಮುಂದೆ ಕೆಲವು ಪ್ರತಿಗಳು ದೊರೆಯಲಾಗಿ ಅವುಗಳ ಸಹಾಯದಿಂದ ಈ ಮಹತ್ವದ ಗ್ರಂಥವನ್ನು ನಾನು ಶಿವಾನುಭವದಲ್ಲಿ ಪ್ರಕಟಿಸಿದೆನು. ಈ ಗ್ರಂಥದಲ್ಲಿಯ ವಚನಗಳಲ್ಲದೆ ಅದರ ಇನ್ನೂ ಅನೇಕ ವಚನಗಳು ನನಗೆ ದೊರೆತಿದ್ದು ಅವುಗಳನ್ನು ಈ ಗ್ರಂಥದ ಎರಡನೆಯ ಆವೃತ್ತಿಯಲ್ಲಿ ಸೇರಿಸಿ ಪ್ರಕಟಿಸಲು ಇಚ್ಛೆಸಿದ್ದೇನೆ.

**ಚೆನ್ನಬಸವೇಶ್ವರನ ವಚನಗಳು :** ಈ ವಚನಗಳನ್ನು ಮೂಲದಲ್ಲಿ ಇದ್ದಂತೆಯೇ ಪ್ರಸಿದ್ದಿಸಿದ್ದೇನೆ. ಆದರೆ ಅನೇಕ ಹೊಸ ವಚನಗಳು ಈಚೆಗೆ ನನಗೆ ಉಪಲಬ್ಧವಾಗಿದ್ದು, ಅವು ಬಹಳ ಮಹತ್ವದವಿರುತ್ತವೆ. ಅವುಗಳನ್ನು ಸಹ ಇದರಲ್ಲಿ ಸಮಾವೇಶ ಮಾಡುವುದು ಅವಶ್ಯವಿದೆ. ಅವುಗಳನ್ನೊಳಗೊಂಡು ಈ ವಚನಗಳನ್ನು ಪ್ರಕಟನೆಗೆ ಸಿದ್ದಪಡಿಸಿರುತ್ತೇನೆ.

**ಸಿದ್ದರಾಮೇಶ್ವರನ ವಚನಗಳು :** ಈ ಗ್ರಂಥದಲ್ಲಿಯ ಅನೇಕ ವಚನಗಳನ್ನು ವಚನ ಶಾಸ್ತ್ರಸಾರ ಭಾಗ –೩ ಇದರಲ್ಲಿ ಹೆಚ್ಚಾಗಿ ಉಪಯೋಗಿಸಿದ್ದೇನೆ. ಇದು ಒಂದು ಮಹತ್ವದ ವಚನ ಗ್ರಂಥವಾಗಿದೆ. ಈತನ ವಾದದ ವಚನಗಳು ಎರಡು ಬೇರೆ ಬೇರೆ ಇದ್ದು, ಅವುಗಳನ್ನು ಪ್ರಕಟಿಸಲು ನಾನು ಬರೆಯಿಸಿ ಇಟ್ಟಿದ್ದೇನೆ.

**ಶೂನ್ಯಸಂಪಾದನೆ :** ಇದು ಅತ್ಯಂತ ಮಹತ್ವದ ವಚನಗ್ರಂಥವಾಗಿದೆ. ನಾನು ಪ್ರಕಟಮಾಡುವ ಪೂರ್ವದಲ್ಲಿ ಈ ಗ್ರಂಥದ ಅಸ್ತಿತ್ವವು ಸಹ ಸಾರ್ವಜನಿಕರಲ್ಲಿ ಗೊತ್ತು ಇರಲಿಲ್ಲ. ಪ್ರಕಟವಾದ ಬಳಿಕ ಇದರ ಮಹತ್ವವು ಎಷ್ಟಿದೆಂಬುದು ಜನರಿಗೆ ತಿಳಿಯಹತ್ತಿದೆ. ಇದು ಬಹು ದೊಡ್ಡ ಗ್ರಂಥವಾಗಿರುತ್ತದೆ.

**ಸಂಗನಬಸವೇಶ್ವರ ವಚನಗಳು, ಶಿವಾನುಭವ ಸೃಷ್ಟಿಯ ವಚನಗಳು**–ಇವು ಸ್ವತಂತ್ರ ವಚನಗ್ರಂಥಗಳಾಗಿರುತ್ತವೆ. ಮಹಾನುಭಾವ ಪ್ರಕಾಶಿಕೆ ಎಂಬ ಗ್ರಂಥವನ್ನು ಹಾಗಲವಾಡಿ ಸಂಸ್ಥಾನದ ಒಬ್ಬ ರಾಜರು ಬರೆದಿದ್ದಾರೆ. ಅದನ್ನು ನಾನು ಇದ್ದಂತೆ ಪ್ರಕಟಿಸಿದ್ದೇನೆ.

**ಪ್ರಾಣಲಿಂಗ ಜ್ಞಾನದರ್ಪಣ :** ಈ ಗ್ರಂಥ ಬಹು ಅಮೂಲ್ಯವಾದದ್ದು, ಶಿವಾನುಭವಶಾಸ್ತ್ರದ ಒಳಗಿನ ಗುಟ್ಟುಗಳನ್ನು ಅರುಹುವಂಥದ್ದು, ಅದನ್ನು ನಾನು ಇದ್ದಕ್ಕಿದ್ದ ಹಾಗೆ ಈಚೆಗೆ ಪ್ರಕಟಿಸಿರುತ್ತೇನೆ.

**ಮಹಿಮ್ನ ಸ್ತೋತ್ರ :** ಈ ಗ್ರಂಥವನ್ನು ಶ್ರೀ ಪ್ರಭುಲಿಂಗ ಶಿವಾಚಾರ್ಯರು, ವಿಜಾಪುರ ಇವರು ಅರ್ಥ ಸಹಿತವಾಗಿ ಬರೆದು ಸಿದ್ಧಪಡಿಸಿರುವರು.

**೨. ಸಂಯೋಜಿತ ವಚನ ಗ್ರಂಥಗಳು :**

ಅನೇಕ ವಚನ ಗ್ರಂಥಗಳು ಸಮಗ್ರವಾಗಿ ದೊರೆತಿದ್ದರೂ ಅವುಗಳ ಅಂತಸ್ಥ ಜೋಡಣೆಯಲ್ಲಿ ಯಾವ ಪದ್ಧತಿಯೂ ಇರದ್ದರಿಂದ ವಚನಕಾರನ ಭಾವವು ಚೆನ್ನಾಗಿ ಗೊತ್ತಾಗುವುದಿಲ್ಲ. ಆದ್ದರಿಂದ ಇಂಥ ಮೂಲ ಗ್ರಂಥಗಳಲ್ಲಿರುವ ಹತ್ತೆಂಟು ವಚನಗಳನ್ನು ಓದಿದಲ್ಲಿ ವಚನಕಾರನ ಅಭಿಪ್ರಾಯವು ಯಾವ ವಿಷಯಗಳ ಸಂಬಂಧವಾಗಿ ಹೇಗಿರುತ್ತದೆಂಬುದರ ತಿಳಿವಳಿಕೆ ವಾಚಕರಿಗೆ ಆಗುವುದಿಲ್ಲ. ಇಂಥವುಗಳನ್ನು ನಾನು ಅಷ್ಟಾವರಣ ಅಥವಾ ಷಟ್‌ಸ್ಥಲಗಳಿಗನುಸಾರವಾಗಿ ಜೋಡಣೆಯನ್ನು ಮಾಡಿದ್ದುಂಟು. ಹೀಗೆ ಮಾಡುವಲ್ಲಿ ಈ ವಿಷಯಗಳಿಗೆ ಸಂಬಂಧಿಸಿದ ಅವುಗಳೊಳಗಿನ ಅವಾಂತರ ವಿಷಯಗಳನ್ನು ಸಹ ವ್ಯವಸ್ಥೆಗೊಳಿಸಲು ಯತ್ನಿಸಿದ್ದೇನೆ. ಈ ಒಳಗಿನ ವಿಷಯಗಳಿಗೆ ತಕ್ಕ ಶೀರ್ಷಿಕೆಗಳನ್ನು ಹಾಕಿದ್ದೇನೆ. ವಚನ ಶಾಸ್ತ್ರಸಾರ ಗ್ರಂಥಗಳನ್ನು ರಚಿಸುವಲ್ಲಿ ನಾನು ಕೈಕೊಂಡ ಪದ್ಧತಿಯನ್ನೇ ಇವುಗಳಲ್ಲಿ ಸ್ವೀಕರಿಸಿದ್ದೇನೆ. ಈ ಪ್ರಕಾರ ವ್ಯವಸ್ಥೆಯನ್ನು ಮಾಡಿದ್ದ ವಚನಗಳು ಯಾವುವೆಂದರೆ, ಗಣದಾಸಿ ವೀರಣ್ಣ, ಘನಲಿಂಗಿ, ಹಡಪದಪ್ಪಣ್ಣ, ಲಿಂಗಮ್ಮ ಮತ್ತು ಮೆರೆಮಿಂಡದೇವ ಇವರ ವಚನಗಳಲ್ಲಿ ಈ ತೆರದ ವ್ಯವಸ್ಥೆ ಮಾಡಿ ಪ್ರಸಿದ್ಧಿಸಿದ್ದೇನೆ.

೩. **ಸಂಗ್ರಹ ಗ್ರಂಥಗಳು :** ನನ್ನ ದೃಷ್ಟಿಗೆ ಬಿದ್ದ ವಚನಗಳಲ್ಲಿ ಅನೇಕ ಸಂಗ್ರಹ ವಚನಗಳಿರುತ್ತವೆ. ಅಂದರೆ ಅನೇಕ ವಚನಕಾರರ ವಚನಗಳು ಕೆಲ ಕೆಲವು ಮಾತ್ರ ಎಲ್ಲವುಗಳಲ್ಲಿ ದೊರೆಯುತ್ತವೆ. ಇಂಥವುಗಳನ್ನು ನಾನು ಬೇರೆಯಾಗಿ ತೆಗೆದು, ಹಿಂದುಗಡೆ ಅವುಗಳನ್ನು ಒತ್ತಟ್ಟಿಗೆ ಸೇರಿಸಿ, ಅನೇಕ ಗ್ರಂಥಗಳನ್ನು ಸಿದ್ದಪಡಿಸಿದ್ದೇನೆ. ಹೀಗೆ ಸಿದ್ದಪಡಿಸಿದ ಬಳಿಕ ಅವುಗಳನ್ನು ಮೇಲೆ ವಿವರಿಸಿದಂತೆ ಕೆಲವೊಂದು ಪದ್ಧತಿಯ ಮೇರೆಗೆ ವ್ಯವಸ್ಥೆಗೊಳಿಸಿದ್ದೇನೆ. ಇಂಥ ವಚನಗಳು ಯಾವುದೆಂದರೆ, ಮಹಾದೇವಿಯಕ್ಕ, ಅಂಬಿಗರ ಚೌಡಯ್ಯ, ಆದಯ್ಯ, ದೇವರ ದಾಸಿಮಯ್ಯ, ಸಕಳೇಶ ಮಾದರಸ, ಉರಿಲಿಂಗ ಪೆದ್ದಿ, ಮಡಿವಾಳ ಮಾಚಿದೇವ ಮತ್ತು ಲಿಂಗಪೂಜೆಯ ತತ್ವಗಳು. ಇವೆಲ್ಲವೂ ಅತ್ಯಂತ ಮಹತ್ವದ ವಚನ ಗ್ರಂಥಗಳಾಗಿರುತ್ತೆ.

೪. **ಸಂಕೀರ್ಣ ವಚನಗಳು :** ನನಗೆ ದೊರೆತ ವಚನಗ್ರಂಥಗಳಲ್ಲಿ ಸ್ವಲ್ಪ ಸಂಖ್ಯೆಯಿಂದ ಕೆಲವರ ವಚನಗಳು ದೊರೆತಿರುತ್ತೆ. ಹೀಗಿದ್ದರೂ ಅವು ಬಹಳ ಗಂಭೀರ ವಿಚಾರಗಳುಳ್ಳವು ಇರುತ್ತವೆ. ಆದ್ದರಿಂದ ನಾನು ಅವುಗಳನ್ನೆಲ್ಲ ಒಂದೊಂದೇ ಭಾಗದಲ್ಲಿ ಸೇರ್ಪಡೆಮಾಡಿ ಸಂಕೀರ್ಣ ವಚನಗಳು ಎಂದು ಮೂರು ಭಾಗಗಳನ್ನು ಮಾಡಿ ಪ್ರಸಿದ್ದಿಸಿದೆನು. ಇವುಗಳಲ್ಲಿ ಅನೇಕ ವಚನಗಳು ಅತ್ಯಂತ ಮಹತ್ವದವಾಗಿವೆ. ಆದರೆ ಈ ಎಲ್ಲವುಗಳಲ್ಲಿ ನಿರ್ದೇಶವಾದ ವಚನಕಾರರ ಹೆಸರುಗಳು ಸಾರ್ವಜನಿಕರಿಗೆ ಗೊತ್ತಾಗದೆ ಹೋಗಿದೆ. ಆದ್ದರಿಂದ ಇವುಗಳನ್ನು ಬೇರೆಯಾಗಿ ತೆಗೆದು ಯೋಗ್ಯವಾದ ಟಿಪ್ಪಣಿಗಳೊಂದಿಗೆ ಮುದ್ರಿಸಿದಲ್ಲಿ ಅವುಗಳ ಮಹತ್ವವು ಎಲ್ಲರಿಗೂ ತಿಳಿಯಬಹುದಾಗಿತ್ತು. ಅರುವಿನ ಮಾರಿತಂದೆ, ಚಂದಿಮರಸು, ಹಾವಿನಾಳ ಕಲ್ಲಯ್ಯ, ಮಧುವರಸ, ಗಜೇಶ ಮಸಣಯ್ಯ, ಈ ಮೊದಲಾದವರ ವಚನಗಳ ಪರಿಚಯವು ಜನರಲ್ಲಿ ಈಗ ಏನೂ ಇರುವುದಿಲ್ಲ. ಆದ್ದರಿಂದ ಅವರ ವಚನಗಳನ್ನು ಬೇರೆಯಾಗಿ ತೆಗೆದುಕೊಂಡು ಮುದ್ರಿಸಬೇಕೆಂದಿರುವೆನು.

೫. **ವಚನಗ್ರಂಥಗಳಿಗೆ ಅರ್ಥ :** ನಾನು ಹೀಗೆ ವಚನಗ್ರಂಥಗಳನ್ನು ಪ್ರಕಟಿಸುತ್ತಿರುವಲ್ಲಿ ಅವು ತಮಗೆ ತಿಳಿಯುವುದಿಲ್ಲವೆಂದು ಬಹು ಜನರು ಅಭಿಪ್ರಾಯಪಡಹತ್ತಿದರು. ಅವುಗಳ ಅರ್ಥವನ್ನು ಸಿದ್ಧಪಡಿಸಬೇಕೆಂದು ನನಗೆ ಅನೇಕರ ಸೂಚನೆಗಳು ಬಂದಿದ್ದರಿಂದ, ಕೆಲವು ವಚನಗ್ರಂಥಗಳಲ್ಲಿ ಅರ್ಥವನ್ನು ಪ್ರತಿಯೊಂದು ವಚನದ ಕೆಳಗೆ ಬರೆದು ಪ್ರಸಿದ್ಧಿಸತೊಡಗಿದೆನು. ಅವು ಯಾವುವೆಂದರೆ, ದೇವರ ದಾಸಿಮಯ್ಯ, ಅಂಬಿಗರ ಚೌಡಯ್ಯ, ಉರಿಲಿಂಗಪೆದ್ದಿ ಇವರ ವಚನಗಳಿಗೆ ಸಮಗ್ರ ಅರ್ಥವನ್ನು ಬರೆದಿದ್ದೇನೆ.

ಇದರಿಂದ ಗ್ರಂಥಗಳ ಗಾತ್ರವು ಬಹಳ ಬೆಳೆಯಹತ್ತಿತು. ಅವುಗಳ ಬೆಲೆ ಹೆಚ್ಚಾಯಿತು. ಆದ್ದರಿಂದ ಈ ಪದ್ಧತಿಯನ್ನು ಬಿಟ್ಟು ಪ್ರತಿಯೊಂದು ಶಿರೋಲೇಖದ ಕೆಳಗೆ ಅದರಲ್ಲಿ ಸೇರ್ಪಡೆಯಾದ ವಚನಗಳ ಸಂಕ್ಷಿಪ್ತ ವಿವರಣೆಯನ್ನು ಕೊಡಹತ್ತಿದೆನು. ಹೀಗೆ ನಾನು ಮಡಿವಾಳ ಮಾಚಿದೇವ ಮೊದಲಾದ ಅನೇಕರ ವಚನಗಳಲ್ಲಿ ಮಾಡದೆ, ಅವುಗಳ ಅಂತ್ಯದಲ್ಲಿ ಸಮಗ್ರವಾಗಿ ಆ ವಚನಗಳ ಭಾವವನ್ನು ಬರೆಯುವ ಪದ್ಧತಿಯನ್ನು ಇಟ್ಟುಕೊಂಡೆನು. ಆದರೆ ಈ ರೀತಿ ವಚನಗಳನ್ನು ಟೀಕಾತ್ಮಕವಾಗಿ ರಚಿಸುವುದರಿಂದ ನನ್ನ ಕಾರ್ಯಗತಿಯು ಮಂದವಾಗತೊಡಗಿತು. ಗ್ರಂಥಗಳು ದೊಡ್ಡವಾದ್ದರಿಂದ ಬೆಲೆಗಳನ್ನು ಹೆಚ್ಚಿಸಬೇಕಾಯಿತು. ಇದರಿಂದ ಈ ಪದ್ಧತಿಯನ್ನು ಬಿಟ್ಟುಕೊಟ್ಟು ವಚನಗಳ ಕೆಳಗೆಯೇ ಕಠಿಣ ಶಬ್ದಗಳ ಅರ್ಥಗಳನ್ನು ಮಾತ್ರ ಕೊಡಹತ್ತಿದೆನು. ಈ ಪ್ರಕಾರ ನಾನು ಮಹಾದೇವಿಯಕ್ಕ

ಮತ್ತು ಸಕಳೇಶ ಮಾದರಸ – ಇವರ ವಚನಗ್ರಂಥಗಳಲ್ಲಿ ಮಾಡಿದ್ದೇನೆ. ಆದರೆ ಕೆಲವು ಕಾಲ ಗತಿಸಿ ಹೋದ ಬಳಿಕ ಜನರಿಗೆ ವಚನಗಳ ಪ್ರಕಟನೆ ಕಾರ್ಯದ ಯಾವ ಪದ್ಧತಿಯು ಪ್ರಿಯವಾಗುವುದೆಂಬುದನ್ನು ತಿಳಿದುಕೊಂಡು ಈ ಕಾರ್ಯವನ್ನು ಮುಂದುವರಿಸಬೇಕೆಂದೆಣಿಸಿ ಹೀಗೆ ಮಾಡುವುದನ್ನು ಈಗ ನಿಲ್ಲಿಸಿದ್ದೇನೆ.

**೬. ವಚನಶಾಸ್ತ್ರಸಾರದ ಭಾಗಗಳು :** ಶಿವಶರಣರ ತತ್ವಗಳು ಜನರಿಗೆ ಅರಿಕೆಯಾಗಬೇಕೆಂದು ಮೊದಲು ವಚನ ಶಾಸ್ತ್ರಸಾರ ಭಾಗ ೧ ಪೂರ್ವಾರ್ಧ – ಉತ್ತರಾರ್ಧವನ್ನು ಪ್ರಕಟಿಸಿದ್ದ ನಾನು, ಶಿವಾನುಭವ ಪತ್ರಿಕೆ ಹುಟ್ಟಿದ ಬಳಿಕ ಭಾಗ – ೨ ಮತ್ತು ಭಾಗ – ೩ ಪೂರ್ವಾರ್ಧ – ಉತ್ತರಾರ್ಧಗಳನ್ನು ಪ್ರಕಟಿಸಿದ್ದೇನೆ.

**೭. ಶಿವಾನುಭವ ಪಠ್ಯಪುಸ್ತಕಗಳು :** ಮೇಲೆ ವಿವರಿಸಿದ ಗ್ರಂಥಗಳು ಪೂರ್ತಿಯಾಗಲು ಕೆಲವು ವರ್ಷಗಳು ಗತಿಸಿದವು. ಈ ಅವಧಿಯಲ್ಲಿ ವಚನಶಾಸ್ತ್ರವು ಎಷ್ಟು ಮಹತ್ವದ್ದೆಂಬುದರ ತಿಳುವಳಿಕೆಯು ಜನರಲ್ಲಿ ಹೆಚ್ಚೆಗೆ ಬೆಳೆಯುತ್ತ ಬಂದಿತು. ಇಷ್ಟರಲ್ಲಿ ಈ ವಾಙ್ಮಯದ ವಿಷಯವಾಗಿ ಅನೇಕ ಮಹತ್ವದ ಲೇಖನಗಳು ವಿದ್ವಾಂಸರಿಂದ ಪತ್ರಿಕೆಗಳಲ್ಲಿ ಪ್ರಕಟವಾಗಹತ್ತಿದವು. ನಾಡ ಹಬ್ಬಗಳಲ್ಲಿ ಮತ್ತು ಬಸವೇಶ್ವರನ ಜಯಂತಿ ಕಾಲದಲ್ಲಿ ಶಿವಶರಣರ ವಚನವಾಙ್ಮಯದ ಬಗ್ಗೆ ಯಾವಾಗಲೂ ಉಪನ್ಯಾಸಗಳು ಜರುಗ ಹತ್ತಿದವು. ಶಿವಾನುಭವದ ಸಮ್ಮೇಲನಗಳ ಏರ್ಪಾಡುಗಳು ಎಲ್ಲ ಕಡೆಗೂ ಆಗಹತ್ತಿದವು. ವಿಶ್ವವಿದ್ಯಾಲಯಗಳ ಮೇಲ್ತರಗತಿಯ ವರ್ಗಗಳಲ್ಲಿ ವಚನ ಗ್ರಂಥಗಳು ನಿಯಮಿಸಲ್ಪಡಹತ್ತಿದವು. ಆದರೆ ಈ ಚಟುವಟಿಕೆಗಳೆಲ್ಲ ಉಚ್ಚ ತರಗತಿಯ ವಾಙ್ಮಯ ಪ್ರೇಮಿಗಳು ಮಾತ್ರ ತಮ್ಮಂಥವರಿಗೋಸ್ಕರ ಮಾಡಿದವುಗಳಾಗಿದ್ದವು. ಇವು ಗ್ರಾಮಾಂತರಗಳಲ್ಲಿ ವಾಸಿಸುವ ಹಿಂದುಳಿದ ಜನರಿಗೋಸ್ಕರ ಯಾವವೂ ಇರಲಿಲ್ಲ. ಆದ್ದರಿಂದ ಗ್ರಾಮಗಳಲ್ಲಿ ಶಿವಾನುಭವ ಸಂಘಗಳನ್ನು ಏರ್ಪಾಡು ಮಾಡಿ, ಅವುಗಳ ಮೂಲಕ ವಚನವಾಙ್ಮಯ ಪ್ರಸಾರಮಾಡುವುದು ಅವಶ್ಯವೆಂದು ನಾನು ಶಿವಾನುಭವ ಮತ್ತು ನವ ಕರ್ನಾಟಕ ಪತ್ರಿಕೆಗಳಲ್ಲಿ ಪ್ರಚಾರ ಮಾಡಹತ್ತಿದೆನು. ಇದರ ಪರಿಣಾಮವಾಗಿ ಕರ್ನಾಟಕದಲ್ಲಿ ಸುಮಾರು ೧೫೦ ಗ್ರಾಮದವರು ಹೀಗೆ ಕಾರ್ಯಮಾಡಲು ಸಿದ್ಧರಾದರು. ಅವರಲ್ಲಿ ಕೆಲವರು ಕೂಡಲೇ ಈ ಕಾರ್ಯ ಕೈಕೊಂಡು ಶಿವಾನುಭವ ಗ್ರಂಥಗಳನ್ನು ಪರಿಶೀಲಿಸಹತ್ತಿದರು. ಆಗ ಇಂಥ ಸಂಘಗಳ ಉಪಯೋಗಕ್ಕೋಸ್ಕರ ಪಠ್ಯಪುಸ್ತಕಗಳನ್ನು ನಿರ್ಮಿಸುವುದು ಅವಶ್ಯವೆಂದು ತೋರಲಾಗಿ ಆ ರೀತಿ ನಾನು ಪ್ರಯತ್ನಿಸಹತ್ತಿದೆನು. ಅದರ ಪರಿಣಾಮವಾಗಿ ನಾನು ಕೆಳಗೆ ಕಾಣಿಸಿದ ಗ್ರಂಥಗಳನ್ನು ಪ್ರಕಟಿಸಿದೆನು.

**ಪರಮಾತ್ಮನ ವಚನಗಳು :** ಇದರಲ್ಲಿ ಪರಮಾತ್ಮನ ಸ್ವರೂಪದ ವಿಷಯವಾಗಿ ಇರುವ ವಚನಗಳನ್ನು ಒತ್ತಟ್ಟಿಗೆ ಸಂಗ್ರಹಿಸಿದೆನು. ಇದರಲ್ಲಿಯ ಪ್ರತಿಯೊಂದು ವಚನದ ಕೆಳಗೆ ಅರ್ಥವನ್ನು ಸಹ ಕೊಟ್ಟಿದ್ದೇನೆ. ಧಾರ್ಮಿಕ ಶಿಕ್ಷಣದಲ್ಲಿ ಪರಮಾತ್ಮನ ಸ್ವರೂಪ ಹೇಗಿರುತ್ತದೆಂಬುದರ ತಿಳಿವಳಿಕೆಯು ಮೊದಲು ಆಗುವುದು ಅವಶ್ಯವಾದುದು. ಆದ್ದರಿಂದ ನಾನು ಈ ಗ್ರಂಥಕ್ಕೆ ಪ್ರಾಧಾನ್ಯತೆಯನ್ನು ಕೊಟ್ಟೆನು. ಬಹುಜನ ಸಮಾಜದಲ್ಲಿ ದೇವರ ಬಗ್ಗೆ ನಿಜವಾಗಿ ತಿಳಿವಳಿಕೆಗಳು ಇದ್ದರಿಂದ ಅವರಲ್ಲಿ ಅನೇಕ ತರದ ಧಾರ್ಮಿಕ ಮೂಢನಂಬಿಕೆಗಳೂ, ಹಿಂಸಾಕರ್ಮಗಳೂ ಜರುಗುತ್ತವೆ. ಇವುಗಳನ್ನು ದೂರ ಮಾಡುವ ಉದ್ದಿಶ್ಯವಾಗಿ ನಾನು ಈ ತರದ ವಚನಗ್ರಂಥವನ್ನು ರಚಿಸಿದೆನು.

**ಭಕ್ತಿಯ ವಚನಗಳು :** ಭಕ್ತಿಯೂ ಧರ್ಮಕ್ಕೆ ತಳಹದಿಯಾಗಿರುತ್ತದೆ. ಆದ್ದರಿಂದ ಇಂಥ ವಚನಗಳನ್ನು ನಾನು ಈ ಗ್ರಂಥದಲ್ಲಿ ಸಂಗ್ರಹಿಸಿದೆನು. ಇದರಲ್ಲಿಯ ಪ್ರತಿಯೊಂದು ವಚನಕ್ಕೆ ಅರ್ಥವನ್ನು ಬರೆದಿದ್ದೇನೆ.

**ಹೊಸ ಪದ್ಧತಿಯ ಬಸವೇಶ್ವರನ ವಚನಗಳು :** ಈವರೆಗೆ ನಾನು ಪ್ರಸಿದ್ಧ ಮಾಡುತ್ತ ಬಂದ ಬಸವೇಶ್ವರನ ವಚನಗ್ರಂಥದಿಂದ ಬಸವೇಶ್ವರನ ವಿಚಾರಗಳು ಬೇರೆ ಬೇರೆ ವಿಷಯಗಳ ಬಗ್ಗೆ ಯಾವವಿರುತ್ತವೆಂಬುದು ತಿಳಿಯುವುದಿಲ್ಲ. ಆದ್ದರಿಂದ ನಾನು ವಚನಶಾಸ್ತ್ರಸಾರ ಗ್ರಂಥದಲ್ಲಿಯ ಪದ್ಧತಿಯ ಮೇರೆಗೆ, ವಿಷಯಾನುಗುಣವಾಗಿ ಬಸವೇಶ್ವರನ ವಚನಗಳಲ್ಲಿ ಜೋಡಣೆಯನ್ನು ಮಾಡಿ ಇದನ್ನು ಪ್ರಕಟಿಸಿದೆನು. ಇದು ಬಹು ಜನ ಸಮಾಜಕ್ಕೆ ಉಪಯುಕ್ತವಾದುದೆಂದು ತೋರಿಬಂದಿದೆ. ಇದರಲ್ಲಿ ೧೦೮ ಪಾಠಗಳಿರುತ್ತವೆ. ಅನೇಕ ಶಿವಾನುಭವ ಸಭೆಗಳಿಗೆ ವೀರಶೈವರಲ್ಲದವರೂ ಹೋಗುತ್ತಿರುವುದು ಕಂಡುಬರುತ್ತದೆ. ಆದ್ದರಿಂದ ಕೇವಲ ವೀರಶೈವಾಚಾರ ಪರವಾಗಿ ಇರುವ ಸುಮಾರು ೧೫೦ ಉಕ್ತಿಗಳನ್ನು ಅಷ್ಟಾವರಣಕ್ಕೆ ಸರಿಯಾಗಿ ಕ್ರಮಗೊಳಿಸಿ, ಇದರ ಕಡೆಯ ಭಾಗದಲ್ಲಿ ಪ್ರಕಟಿಸಿದ್ದೇನೆ. ಬೇರೆಯವುಗಳು ಸಾಮಾನ್ಯವಾಗಿರುತ್ತವೆ. ಈ ಗ್ರಂಥವು ವಿಶ್ವವಿದ್ಯಾಲಯಗಳಲ್ಲಿ ಈಗಲೂ ಕೂಡ ಉಪಯೋಗಿಸಲ್ಪಡುತ್ತಿದೆ. ಉಪನ್ಯಾಸಕರು ಈ ಗ್ರಂಥವನ್ನು ಅವಲಂಬಿಸಿ ಸಣ್ಣ ಪುಟ್ಟ ವಚನ ಗ್ರಂಥಗಳನ್ನು ಸ್ವತಂತ್ರವಾಗಿ ಪ್ರಕಟಪಡಿಸಿದ್ದು ಸಹ ಕಂಡುಬರುತ್ತದೆ.

**ದೇವರ ದಾಸಿಮಯ್ಯನ ವಚನಗಳು :** ಈ ವಚನ ಗ್ರಂಥವನ್ನು ಶಿವಾನುಭವ ಸಂಘದವರು ಉಪಯೋಗ ಮಾಡುತ್ತಿರುವುದು ಕಂಡು ಬರುತ್ತದೆ. ಮೈಸೂರು ಪ್ರಾಂತದಲ್ಲಿರುವ ಸಮಾಜ ಶಿಕ್ಷಣಕಾರ್ಯದಲ್ಲಿ ಇದರ ಉಪಯೋಗ ಬಹಳವಾಗುತ್ತಲಿದೆಯೆಂದು ತಿಳಿಯಹತ್ತಿದೆ.

**ವಚನಗಾಯನ :** ಶಿವಾನುಭವ ಸಂಘಗಳ ಸಭೆಯಲ್ಲಿ ಗಾಯನದ ಕ್ರಮವನ್ನು ಇಟ್ಟುಕೊಳ್ಳುವುದು ಅತ್ಯಂತ ಉಪಯುಕ್ತವಾಗಿರುತ್ತದೆ. ಅದರಿಂದ ವಿಜಾಪುರದಲ್ಲಿಯ ಸಿದ್ಧೇಶ್ವರ ಹೈಸ್ಕೂಲಿನಲ್ಲಿರುವ ಕೆಲವು ಶಿಕ್ಷಕರು ಮತ್ತು ಅಲ್ಲಿಯ ಗಾಯನ ಮಾಸ್ತರರಾದ ಶ್ರೀಯುತ ಪಾಟೀಲ ಇವರು ಅನೇಕ ವಚನಗಳನ್ನು ಗಾಯನಕ್ಕೆ ಹೊಂದಿಸಲು ಪ್ರಯತ್ನಮಾಡಿದರು. ಅದು ಸಫಲವಾದುದೆಂದು ಕಂಡುಬಂದದ್ದರಿಂದ ವಚನ ಗಾಯನ ಎಂಬ ಹೆಸರಿನಿಂದ ಪುಸ್ತಕವನ್ನು ಅಚ್ಚು ಹಾಕಿಸಿದೆನು.

**ಹಾಡುಗಬ್ಬ ಕೃತಿಗಳು :** ಮೈಲಾರ ಬಸಪ್ಪ, ಕರಿ ವೃಷಭೇಂದ್ರರು, ಹೊನ್ನುಡಿಕೆಯ ಗಂಗಾಧರ ಈ ಕವಿಗಳು ಶಿವಾನುಭವ ತತ್ವಗಳ ವಿಷಯವಾಗಿ ಬಹು ಸುಂದರವಾದ ಹಾಡುಗಳನ್ನು ರಚಿಸಿದ್ದಾರೆ. ಈ ಸಾಧುವರ್ಯರ ಗ್ರಂಥಗಳನ್ನೂ ನಾನು ಪ್ರಕಟಿಸಿದೆನು.

**ಗದ್ಯ ಗ್ರಂಥಗಳು :** ಶಿವಾನುಭವ ಪತ್ರಿಕೆಯಲ್ಲಿ ಬಸವೇಶ್ವರನ ತತ್ವಗಳು ಮತ್ತು ಶಿವಾನುಭವಮಾರ್ಗ ಈ ವಿಷಯವಾಗಿ ಅನೇಕ ಮಹನೀಯರು ಲೇಖನಗಳನ್ನು ಬರೆಯುತ್ತ ಬಂದಿದ್ದಾರೆ ಅವುಗಳನ್ನು ನಾನು ಒತ್ತಟ್ಟಿಗೆ ಸಂಗ್ರಹಿಸಿ ಬಸವೇಶ್ವರನ ತತ್ವಗಳು ಮತ್ತು ಶಿವಾನುಭವ ಸತ್ಯಮಾರ್ಗ ಎಂಬ ಹೆಸರಿನ ಎರಡು ಗ್ರಂಥಗಳನ್ನು ಪ್ರಕಟಿಸಿದೆನು. ಇವು ಸಹ ಪಠ್ಯಪುಸ್ತಕಗಳಾಗಿ ಉಪಯೋಗಿಸಲ್ಪಡುತ್ತವೆ.

**ಕೃಷಿಜ್ಞಾನ ಪ್ರದೀಪಿಕೆ :** ಈ ಗ್ರಂಥವು ಸಾಧುವರ್ಯರಾದ ಘನಮಠದಾರ್ಯದಿಂದ ರಚಿಸಲ್ಪಟ್ಟಿದ್ದಿರುತ್ತದೆ. ಇದರಲ್ಲಿ ಒಕ್ಕಲಿಗರಿಗೆ ಉಪಯುಕ್ತವಿರುವ ಅನೇಕ ಮಹತ್ವದ ವಿಷಯಗಳು ನಿರೂಪಿಸಲ್ಪಟ್ಟಿವೆ. ಈ ಗ್ರಂಥದ ಅಂತ್ಯದಲ್ಲಿ ಶ್ರೀ ಸ್ವಾಮಿಗಳವರು ವೀರಶೈವಮಾರ್ಗವನ್ನು ಕುರಿತು

ಬಹು ಚೆನ್ನಾಗಿ ವಿವೇಚನೆ ಮಾಡಿದ್ದಾರೆ. ಅವು ಪ್ರಮಥರ ತತ್ವಗಳೇ ಇರುತ್ತವೆ. ಆದ್ದರಿಂದ ಈ ಗ್ರಂಥವು ಶಿವಾನುಭವ ಸಂಸ್ಥೆಗಳಲ್ಲಿ ಉಪಯೋಗಿಸಲು ಯೋಗ್ಯವಿರುತ್ತದೆಂದು ಭಾವಿಸಿ ನಾನು ಈ ಗ್ರಂಥವನ್ನು ಸ್ವತಂತ್ರವಾಗಿ ಮುದ್ರಣ ಮಾಡಿಸಿರುತ್ತೇನೆ.

**ನೈತಿಕ ಮತ್ತು ಭಕ್ತಿಯ ವಚನಗಳು :** ಈ ಹೆಸರಿನಿಂದ ಒಂದು ಗ್ರಂಥವನ್ನು ಕೆಲವು ವರ್ಷಗಳ ಹಿಂದೆ ರಚಿಸಿ ಪ್ರಕಟಿಸಿದೆನು. ಇದರಲ್ಲಿ ಭಕ್ತಿ ಮತ್ತು ನೈತಿಕ ವಚನಗಳು ಮಿಶ್ರವಾಗಿದ್ದವು. ಆದರೆ ಇವುಗಳನ್ನು ನಾನು ಈಚೆಗೆ ವಿಂಗಡಿಸಿ ಪ್ರಸಿದ್ಧಿಸಲು ಪ್ರಾರಂಭಿಸಿದ್ದೇನೆ. ಇವುಗಳಲ್ಲಿ ಭಕ್ತಿಯ ವಚನಗಳು ಮಾತ್ರ ಪ್ರಕಟವಾಗಿವೆ. ನೈತಿಕ ವಚನಗಳು ಸಿದ್ಧ ಆಗಿದ್ದು ಅವುಗಳನ್ನು ಬೇಗನೆ ಬೇರೆಯಾಗಿ ಮುದ್ರಣಗೊಳಿಸುವವನಿದ್ದೇನೆ.

**ಚೆನಬಸಪ್ಪ ಧಾರವಾಡ ಎಜ್ಯುಕೇಶನ್ ಇನಸ್ಪೆಕ್ಟರ ಇವರ ಚರಿತ್ರೆ :** ಕರ್ನಾಟಕ ಭಾಷೆಗೋಸ್ಕರ ಜನತೆಯಲ್ಲಿ ಆಸಕ್ತಿಯನ್ನು ಹುಟ್ಟಿಸಿದವರಲ್ಲಿ ಇವರೇ ಮೊದಲಿನವರಿರುತ್ತಾರೆ. ಗ್ರಾಮಗಳಲ್ಲಿರುವ ಶಿವಾನುಭವ ಸಂಸ್ಥೆಗಳ ಸಭಾಸದರು ಇವರ ಚರಿತ್ರೆಯನ್ನು ಅರಿಯುವುದು ಅವಶ್ಯವೆಂದು ಭಾವಿಸಿ ಈ ಗ್ರಂಥವನ್ನು ಸಿದ್ಧಪಡಿಸಿದ್ದೇನೆ.

**ಲಿಂಗಪೂಜೆಯ ತತ್ವಗಳು :** ಇದರಲ್ಲಿ ಪುರಾತನ ವಚನಕಾರರ ವಚನಗಳಿವೆ.

**೮. ಐತಿಹಾಸಿಕ ಗ್ರಂಥಗಳು :**

ನಾನು ಕೆಳಗೆ ಕಾಣಿಸಿದ ಐತಿಹಾಸಿಕ ಗ್ರಂಥಗಳನ್ನು ಸಹ ಪ್ರಕಟಮಾಡಿದೆನು. ಪುರಾತನ ಮತ್ತು ಆಧುನಿಕ ಕಾಲಗಳಲ್ಲಿ ಅನೇಕ ರಾಜಕೀಯ ಮತ್ತು ಧಾರ್ಮಿಕ ಪುರುಷರು ವೀರಶೈವ ಸಮಾಜದಲ್ಲಿ ಆಗಿ ಹೋಗಿದ್ಧಾರೆ. ಅವರ ಚರಿತ್ರೆಗಳನ್ನು ಶೋಧಿಸಿ ಇದರಲ್ಲಿ ಪ್ರಕಟಿಸಿದ್ದೇನೆ.

**ಬೀಳಗಿ ಅರಸುರುಗಳ ವಂಶಾವಳಿ :** ಇದು ಒಂದು ಪುರಾತನ ಕಾವ್ಯವಾಗಿರುತ್ತದೆ. ಇದನ್ನು ದಿವಂಗತ ಬೆನಗಲ್ಲ ರಾಮರಾಯರು ಕನ್ನಡ ಟ್ರಾನ್‌ಸಲೇಟರರು ಮದ್ರಾಸ ಇವರು ಸಂಶೋಧಿಸಿ ಶಿವಾನುಭವ ಪತ್ರಿಕೆಯ ದ್ವಾರಾ ಪ್ರಕಟಿಸಿದ್ದಾರೆ. ಇದು ಉಚ್ಚತರದ ಕಾವ್ಯವಾಗಿದೆ. ಇದರಲ್ಲಿ ಐತಿಹಾಸಿಕ ವಿಷಯಗಳೇ ಹೇಳಲ್ಪಟ್ಟಿರುತ್ತವೆ.

**ರಾಜೇಂದ್ರನಾಮೆ :** ಇದು ಕೊಡಗು ರಾಜರಲ್ಲಿ ಹೆಸರಾದ ವೀರರಾಜೇಂದ್ರ ಇವರ ಸಹಾಯದಿಂದ ಅವರ ಕಾಲದಲ್ಲಿದ್ದ ಒಬ್ಬರು ರಚಿಸಿರುತ್ತಾರೆ. ಇದರ ಪ್ರತಿಯನ್ನು ದಿವಗಂತ ಬಿ. ರಾಮರಾವ ಇವರು ದೊರಕಿಸಿ ನಮ್ಮ ಕಡೆಗೆ ಪ್ರಕಟನೆಗೆ ಕಳಿಸಿಕೊಟ್ಟರು. ಇದು ಅರ್ಧ ಪ್ರಕಟವಾಗುವಷ್ಟರಲ್ಲಿಯೇ ಅವರು ತೀರಿಕೊಂಡದ್ದರಿಂದ ಗ್ರಂಥ ಮುದ್ರಣವು ಅಷ್ಟಕ್ಕೇ ನಿಂತಿರುತ್ತದೆ.

**ಕೆಳದಿ ರಾಯರ ವಂಶಾವಳಿ :** ದಿವಗಂತ ಬಿ. ರಾಮರಾಯರು ಈ ಗ್ರಂಥವನ್ನು ಹುಡುಕಿ ಪ್ರಕಟನೆಗೋಸ್ಕರ ನಮ್ಮ ಕಡೆಗೆ ಕಳಿಸಿಕೊಟ್ಟರು. ಇದು ಮುದ್ರಣ ಹೊಂದಿರುತ್ತದೆ.

**ವೀರಶೈವ ರಾಮಜನೆತನಗಳ ಇತಿಹಾಸ :** ಬಸವೇಶ್ವರನ ಕಾಲದಿಂದ ಹಿಡಿದು ಈವರೆಗೆ ರಾಜ್ಯವಾಳಿದ ವೀರಶೈವ ರಾಜರ ಇತಿಹಾಸಗಳನ್ನು ನಾನು ಅನೇಕ ಗ್ರಂಥಗಳ ಸಹಾಯದಿಂದ ಸಂಗ್ರಹಿಸಿ ಪ್ರಸಿದ್ಧಿಸಿದೆನು. ಅದು ಈಗ ೧೫೦ ಪುಟಗಳುಳ್ಳ ಗ್ರಂಥವಾಗಿರುತ್ತದೆ. ಈ ಗ್ರಂಥದ ರಚನೆಯು ಇನ್ನೂ ಪೂರ್ಣವಾಗಿಲ್ಲ.

**ಶಿವಶರಣರ ಚರಿತ್ರೆಗಳು :** ಶಿವಶರಣರ ಚರಿತ್ರೆಗಳು ಭಾಗ – ೧, ಭಾಗ– ೨, ಭಾಗ–೩ ಹೀಗೆ ಸುಮಾರು ೧೫೦ ಜನ ಧಾರ್ಮಿಕ ಪುರುಷರ ಚರಿತ್ರೆಗಳನ್ನು ಈ ಗ್ರಂಥಗಳಲ್ಲಿ ಪ್ರಕಟಿಸಿದ್ದೇನೆ. ಅವುಗಳಲ್ಲಿ ಶಕ್ಯವಿದ್ದ ಮಟ್ಟಿಗೆ ಐತಿಹಾಸಿಕ ವಿಷಯಗಳನ್ನು ಸಂಗ್ರಹಿಸಲು ಪ್ರಯತ್ನಿಸಿದ್ದೇನೆ. ಇವರಲ್ಲಿ ಅನೇಕ ನಾಡುಗಳಲ್ಲಿದ್ದ ಶಿವಶರಣರಾಗಿದ್ದಾರೆ. ಅವರಲ್ಲಿ ವಚನಕಾರರೂ ಇದ್ದಾರೆ. ಅವರ ಚರಿತ್ರೆಗಳನ್ನೆಲ್ಲ ಪುರಾತನ ಗ್ರಂಥಗಳ ಸಹಾಯದಿಂದ ಸಂಗ್ರಹಿಸಿ ಇಲ್ಲಿ ಪ್ರಕಟಿಸಿದ್ದೇನೆ. ಇನ್ನು ಮುಂದೆ ಇವುಗಳ ೪ನೆಯ ಭಾಗವನ್ನು ಪ್ರಾರಂಭಿಸುವವನಿದ್ದೇನೆ.

**ನಿರಂಜನವಂಶ ರತ್ನಾಕರ :** ಶ್ರೀ ಮಜ್ಜಗದ್ಗುರು ಚಿತ್ರಕಲ್‌ದುರ್ಗ ಸಿಂಹಾಸನ ಮಠಾಧೀಶರ ವಂಶಾವಳಿಯು ಇದರಲ್ಲಿ ಕೊಡಲ್ಪಟ್ಟಿರುತ್ತದೆ. ಇದರಲ್ಲಿ ಬಸವೇಶ್ವರನ ಕಾಲದಿಂದ ೧೭ನೇ ಶತಮಾನದವರೆಗೂ ಆಗಿ ಹೋದ ಶ್ರೀಮನ್ನಿರಂಜನ ಸಿಂಹಾಸನಾಧೀಶ್ವರರ ಚರಿತ್ರೆಗಳಿವೆ. ಗ್ರಂಥವು ಅಪೂರ್ಣವಿದೆ. ಇದು ಹಿಂದಿನ ಕಾಲದಲ್ಲಿ ಸಿದ್ಧಪಡಿಸಿದ ಗ್ರಂಥವು.

**ಕಾಲಜ್ಞಾನದ ವಚನಗಳು:** ಇದರಲ್ಲಿ ಬಸವೇಶ್ವರನಿಂದ ಹಿಡಿದು ೧೬ನೇಯ ಶತಮಾನದವರೆಗೆ ಆಗಿ ಹೋದ ಶಿವಶರಣರ ಮತ್ತು ಅವರ ವಂಶಾವಳಿಗಳ ಚರಿತ್ರೆಗಳು ಬಂದಿರುತ್ತವೆ. ಆದರೆ ಇವುಗಳಲ್ಲಿ ದಂತಕಥೆಗಳು ಬಹಳ ಮಿಶ್ರವಾಗಿರುತ್ತವೆ.

**೯. ಶಿವಾನುಭವದ ಸ್ವತಂತ್ರ ಗ್ರಂಥಗಳು :**

**ಶಿವಾನುಭವ ಸೂತ್ರಸಾರ :** ಷಟ್‌ಸ್ಥಲಶಾಸ್ತ್ರದಲ್ಲಿ ಅಸಂಖ್ಯ ಭೇದ ವಿಭೇದಗಳಿದ್ದು ಅವುಗಳೆಲ್ಲಕ್ಕೆ ಸ್ಥಲಗಳೆಂಬ ಹೆಸರು ಇದೆ. ಅವುಗಳ ಪರಸ್ಪರ ಸಂಬಂಧವನ್ನು ಕಂಡು ಹಿಡಿಯುವುದು ಬಹು ಕಷ್ಟಕರವಿರುತ್ತದೆ. ಇದು ತಿಳಿಯದ ಹೊರತು ಈ ಶಾಸ್ತ್ರದ ನಿಜಸ್ಥಿತಿಯನ್ನು ಅರಿಯುವುದು ಕಠಿಣವೇ ಸರಿ. ಇವುಗಳ ರೀತಿಯನ್ನು ತಿಳಿಯಲು ಮೊಗ್ಗೆಯ ಮಾಯಿದೇವರ ಶಿವಾನುಭವ ಸೂತ್ರಸಾರ ಎಂಬ ಸಂಸ್ಕೃತ ಗ್ರಂಥವು ಬಹಳ ಸಹಾಯಕಾರಿಯಾಗಿದೆ. ಇದರಲ್ಲಿ ಬಹುತರ ಎಲ್ಲ ಸ್ಥಲಗಳ ಮತ್ತು ಅವುಗಳ ಅವಾಂತರ ಭೇದಗಳ ವಿವರಣೆಗಳನ್ನು ಸ್ಪಷ್ಟವಾಗಿ ಗ್ರಂಥಕಾರರು ತಿಳಿಯಪಡಿಸಿದ್ದಾರೆ. ಇದರ ಕನ್ನಡ ಅನುವಾದವನ್ನು ಪಂಡಿತ ನಾಗೇಶಶಾಸ್ತ್ರಿಗಳವರು ಮಾಡಿದ್ದು ಈ ಗ್ರಂಥವನ್ನು ನಾನು ಪ್ರಸಿದ್ಧಿಸಿದ್ದೇನೆ. ಇದು ವಿಶ್ವವಿದ್ಯಾಲಯದಲ್ಲಿಯ ವಿದ್ಯಾರ್ಥಿಗಳಿಗೆ ಮತ್ತು ಸಾಮಾನ್ಯ ವಾಚಕರಿಗೆ ಸಹ ಬಹಳ ಉಪಯುಕ್ತವಾಗಿರುತ್ತದೆ.

**ಶಿವಾನುಭವ ಶಬ್ದಕೋಶ :** ಶಿವಾನುಭವಶಾಸ್ತ್ರದಲ್ಲಿ ವಿಶೇಷಾರ್ಥವುಳ್ಳ ಶಬ್ದಗಳ ಟಿಪ್ಪಣಿಗಳನ್ನು ಬರೆದು ಈ ಗ್ರಂಥದಲ್ಲಿ ಮುದ್ರಿಸಿದ್ದೇನೆ. ಇಂಥ ಶಬ್ದಗಳು ಶಿವಾನುಭವಶಾಸ್ತ್ರದಲ್ಲಿ ಒಂದು ಸಾವಿರಕ್ಕೆ ಮೇಲ್ಪಟ್ಟು ಇರುತ್ತವೆ. ಇವುಗಳಲ್ಲಿರುವ ಪರಸ್ಪರ ಸಂಬಂಧ ಮತ್ತು ವ್ಯತ್ಯಾಸಗಳನ್ನು ವಿವರಿಸಲು ಇದರಲ್ಲಿ ಪ್ರಯತ್ನಿಸಿದ್ದೇನೆ ಇಡೀ ವಚನಶಾಸ್ತ್ರದ ಸಂಕ್ಷಿಪ್ತ ವಿವರಣೆಯು ಈ ಗ್ರಂಥದಲ್ಲಿ ಅಡಕವಾಗಿರುತ್ತದೆಂದು ಹೇಳಬಹುದು. ಇದಕ್ಕೆ ಆಧಾರವಾಗಿ ನಾನು ವಚನ ಗ್ರಂಥಗಳನ್ನೇ ಇಟ್ಟುಕೊಂಡಿದ್ದೇನೆ. ವಚನಶಾಸ್ತ್ರ ಅಥವಾ ಶಿವಾನುಭವಕ್ಕೆ ಮೂಲಗ್ರಂಥವಾವುದೂ ನಮಗೆ ಇನ್ನೂ ಅವಗತವಾಗಿಲ್ಲ. ಆದರೆ ಅನೇಕ ಗ್ರಂಥಗಳಲ್ಲಿ ಉಪಲಬ್ಧವಿರುವ ಬಿಡಿ ಬಿಡಿ ವಚನಗಳಲ್ಲಿರುವ ಅರ್ಥಪೂರ್ಣ ಶಬ್ದಗಳನ್ನು ಮೊದಲು ಸಂಗ್ರಹಿಸಿ ಅವುಗಳ ದ್ವಾರಾ ಮೂಲಸಿದ್ಧಾಂತವು ಹೇಗಿರಬೇಕೆಂಬುದನ್ನು ನಿರ್ಧರಿಸಲು ಮಾಡಿದ ಪ್ರಯತ್ನದ ಫಲವು ಇದಾಗಿದೆ. ಇನ್ನು ಮುಂದೆ

ಷಟ್‌ಸ್ಥಲಶಾಸ್ತ್ರದ ಮೂಲಗ್ರಂಥವು ಎಂದಾದರೂ ದೊರಕಿದಲ್ಲಿ ಅದರಲ್ಲಿಯ ವಿವೇಚನೆಗಳು ಈ ಗ್ರಂಥದಲ್ಲಿ ಊಹಿದವುಗಳಂತೆಯೇ ಇರುವವೆಂದು ಭರವಸೆ ತಾಳಿದ್ದೇನೆ. ವಚನ ಗ್ರಂಥಗಳನ್ನೆಲ್ಲ ಮೊದಲು ಸಂಗ್ರಹಿಸಿ, ಅವುಗಳಲ್ಲಿರುವ ವಿವೇಚನೆಗಳನ್ನು ಆಧಾರವಾಗಿ ಇಟ್ಟುಕೊಂಡು ರಚಿಸಿದ ಗ್ರಂಥವು ಇದಾಗಿದೆ. ಈ ಗ್ರಂಥವನ್ನು ಇನ್ನೂ ವಿಸ್ತರಿಸಬೇಕೆಂದು ನಾನು ಬಯಸಿದ್ದೇನೆ. ಆದರೆ ಅನೇಕ ಆತಂಕಗಳ ಮೂಲಕ ಇದು ಇನ್ನೂ ಸಿದ್ದಿಗೆ ಹೋಗಿರುವುದಿಲ್ಲ. ಇದಕ್ಕೆ ಕಾಲಾವಧಿಯೂ ಬೇಕಾಗುತ್ತದೆ.

**೧೦. ಶಿವಾನುಭವದ ಕಾವ್ಯಗ್ರಂಥಗಳು :**

**ಸಿದ್ದಲಿಂಗ ಏಕೋತ್ತರ ಶತಸ್ಥಲ** : ಇದು ೧೦೧ ಸ್ಥಲಗಳನ್ನು ವಿವರಿಸುವ ಅತ್ಯಂತ ಮಹತ್ವದ ಗ್ರಂಥವಾಗಿದೆ. ಇದು ಆದವಾನಿಯಿಂದ ಒಬ್ಬ ಸದ್ಗೃಹಸ್ಥರು ಕಳಿಸಿದ್ದಾರೆ. ಇದರ ನಿಜವಾದ ಗ್ರಂಥಕಾರರಾರೆಂಬುದು ತಿಳಿದಿಲ್ಲ. ಏಕೋತ್ತರ ಶತಸ್ಥಲದ ವಿಷಯವಾಗಿ ಬೇರೆ ಅನೇಕ ಗ್ರಂಥಗಳಲ್ಲಿದ್ದು, ಅವುಗಳಿಂದ ಇದನ್ನು ವಿಂಗಡಿಸುವುದಕ್ಕೋಸ್ಕರ ನಾನು ಇದಕ್ಕೆ ಈ ಬಗೆಯ ಹೆಸರಿಟ್ಟು ಕರೆದಿದ್ದೇನೆ. ಈ ಗ್ರಂಥದ ಪ್ರಾರಂಭದಲ್ಲಿ ಸೂತ್ರ ರೂಪವಾಗಿ ಬರೆದ ಒಂದು ಉಕ್ತಿ. ಆ ಮೇಲೆ ಅದರ ಭಾವವನ್ನು ವ್ಯಕ್ತಪಡಿಸುವ ಒಬ್ಬ ಶಿವಶರಣನ ವಚನ ಮತ್ತು ಈ ವಚನದ ಅರ್ಥವನ್ನು ವಿಸ್ತರಿಸುವ ಕೆಲವು ಸುಂದರ ಪದ್ಯಗಳು ಮತ್ತು ಕಡೆಗೆ ಒಂದು ವೃತ್ತ ಹೀಗೆ ಈ ಗ್ರಂಥದ ರಚನೆ ಇದೆ. ಏಕೋತ್ತರ ಶತಸ್ಥಲಗಳನ್ನು ವಿವರಿಸುವ ಗ್ರಂಥಗಳಲ್ಲಿ ಇದು ಉಚ್ಚತಮವಾದುದೆಂದು ಹೇಳಲು ಯಾವ ಪ್ರತ್ಯವಾಯವೂ ಇರುವುದಿಲ್ಲ.

**ಟೀಕಾತ್ಮಕ ಸಿದ್ದಲಿಂಗ ಏಕೋತ್ತರ ಶತಸ್ಥಲ** : ಮೇಲೆ ಹೇಳಿದ ಗ್ರಂಥದ ವಿಸ್ತೃತ ಟೀಕೆಯು ಇದರಲ್ಲಿದೆ. ಟೀಕಾಕಾರನು ಶಿವಾನುಭವಶಾಸ್ತ್ರದ ತತ್ವಗಳನ್ನು ಬಹು ಚೆನ್ನಾಗಿ ಬಲ್ಲವನಾಗಿದ್ದಾನೆ. ಇದು ಬಹು ದೊಡ್ಡ ಗ್ರಂಥವಾಗಿರುತ್ತದೆ. ಇದರ ಕೆಲವು ಪುಟಗಳನ್ನು ಮಾತ್ರ ನಾನು ಶಿವಾನುಭವ ಪತ್ರಿಕೆಯಲ್ಲಿ ಪ್ರಸಿದ್ಧಿಸಿದ್ದೇನೆ.

**ಶಿವಶರಣರ ಪದಗಳು** : ಮೈಲಾರ ಬಸಪ್ಪನವರ ಶಿವಾನುಭವ ದರ್ಪಣ, ಸೋಮೇಕಟ್ಟಿ ಕರಿವೃಷಭೇಂದ್ರ ಪದ್ಯಗಳು, ಗಂಗಾಧರ ಸ್ವಾಮಿಗಳು ಮತ್ತು ಇತರ ಸಾಧುವರ್ಯರ ಪದ್ಯಗಳು, ಇದರಲ್ಲಿವೆ. ಈ ಪದ್ಯಗ್ರಂಥಗಳನ್ನು ಕುರಿತು ನಾನು ಹಿಂದೆಯೇ ವಿವರಿಸಿದ್ದೇನೆ.

**೧೧. ಕಾವ್ಯಗಳು :**

ವೀರಶೈವ ವಾಙ್ಮಯದಲ್ಲಿ ಅನೇಕ ಉಚ್ಚ ತರದ ಕಾವ್ಯ ಗ್ರಂಥಗಳಿರುತ್ತವೆ. ಅವುಗಳಲ್ಲಿ ಪುರಾಣಗ್ರಂಥಗಳು ಬಹು ಮಹತ್ವದ್ದಾಗಿರುತ್ತವೆ. ಅವುಗಳನ್ನು ಪ್ರಕಟಮಾಡುವ ಕಾರ್ಯವನ್ನು ಧಾರವಾಡ ಲಿಂಗಾಯತ ವಿದ್ಯಾವರ್ಧಕ ಸಂಘದ ವಾಙ್ಮಯ ಶಾಖೆಯವರೂ ಇತರ ಅನೇಕ ಸಭ್ಯಗೃಹಸ್ಥರೂ ಕೈಕೊಂಡಿರುವುದರಿಂದ ನಾನು ಇಂಥ ಗ್ರಂಥಗಳನ್ನು ಪ್ರಕಟಿಸುವ ಕಾರ್ಯವನ್ನು ಹೆಚ್ಚಾಗಿ ಕೈಕೊಂಡಿರುವುದಿಲ್ಲ. ಆದರೂ ವೀರಶೈವರ ಇತಿಹಾಸ, ಶಿವಶರಣರ ಚರಿತ್ರೆಗಳು ಮತ್ತು ವೀರಶೈವ ಮತತತ್ವಗಳು ಇವುಗಳನ್ನು ವಿವರಿಸುವ ಗ್ರಂಥಗಳಿದ್ದಲ್ಲಿ ಅವುಗಳನ್ನ ಪ್ರಕಟಿಸುವ ಕಾರ್ಯವನ್ನು ಈ ೨೫ ವರ್ಷಗಳಲ್ಲಿ ಕೆಲಮಟ್ಟಿಗೆ ಮಾತ್ರ ಮಾಡಿದ್ಧೇನೆ. ಆದರೆ ಇತ್ತ ಕಡೆಗೆ ನಾನು ನನ್ನ ಲಕ್ಷವನ್ನು ಪೂರ್ಣವಾಗಿ ಹಾಕಿರುವುದಿಲ್ಲ. ನಾನು ಪ್ರಕಟಿಸಿದ ಕಾವ್ಯಗ್ರಂಥಗಳು ಯಾವುವೆಂದರೆ :

**ವರದಾನಿ ಗುಡ್ಡಮ್ಮೆಯ ಚರಿತ್ರೆ :** ಲಕ್ಕಣ್ಣ ದಂಡೇಶನು ರಚಿಸಿದ ಶಿವತತ್ವಚಿಂತಾಮಣಿ ಎಂಬ ಗ್ರಂಥದಲ್ಲಿರುವ ಭಾಗವು ಇದಾಗಿರುತ್ತದೆ. ಗುಡ್ಡಮ್ಮೆಯು ಒಬ್ಬ ಪ್ರಸಿದ್ಧ ಶಿವಶರಣೆಯು. ಅವಳು ಶೂರಳು, ಮಹಾಯೋಗಿಣಿಯೂ ಆಗಿ ಧರ್ಮ ಪ್ರಸಾರಕಾರ್ಯ ಮಾಡಿದ್ದಾಳೆ. ಇದು ವಾರ್ಧಕ ಷಟ್ಪದಿಯಲ್ಲಿ ಇದೆ.

**ಅವಧೂತ ಗೀತೆ :** ಈ ಗೀತೆಯನ್ನು ೧೬ ನೆಯ ಶತಮಾನದಲ್ಲಿದ್ದ ಗುರು ಬಸವ ಕವಿಯು ರಚಿಸಿದ್ದಾನೆ. ಇದು ಚೌಪದನದಲ್ಲಿದ್ದು ಒಂದು ಹೊಸ ತರದ ಗ್ರಂಥವಾಗಿದೆ. ಆದ್ದರಿಂದ ಇದನ್ನು ನಾನು ಅಚ್ಚು ಹಾಕಿಸಿದೆನು.

**ಹರಳಯ್ಯನ ತ್ರಿಪದಿ :** ಇಂಡೀ ತಾಲೂಕಿನಲ್ಲಿರುವ ಒಬ್ಬ ಸದ್ಗೃಹಸ್ಥರು ಈ ಚಿಕ್ಕ ಗ್ರಂಥವನ್ನು ತಂದು ಕೊಟ್ಟರು. ಇದು ಒಬ್ಬ ಅಸ್ಪೃಶ್ಯ ಶರಣನ ಚರಿತ್ರೆಯಾಗಿರುವುದರಿಂದ ಇದನ್ನು ಪ್ರಸಿದ್ಧಿಸಿದೆನು.

**ಆದಿಶೆಟ್ಟಿ ಪುರಾಣ :** ಇದು ಮಹಾಕವಿಯಾದ ರಾಘವಾಂಕನಿಂದ ರಚಿತವಾದುದು. ಇದು ಕೈ, ವಾ. ಬಸವಾರಾಧ್ಯರು ಬೆಂಗಳೂರು ಇವರು ತಯಾರಿಸಿದ್ದು, ಅದರ ಸ್ವಾಮಿತ್ವವು ನನ್ನ ಕಡೆಗೆ ಬಂದಿದ್ದರಿಂದ ಇದನ್ನು ನಾನು ಶಿವಾನುಭವ ಗ್ರಂಥಮಾಲೆಯಲ್ಲಿ ಸೇರ್ಪಡೆ ಮಾಡಿದೆನು.

**ವೇಮಯ್ಯನ ಜ್ಞಾನಯೋಗದ ಪದ್ಯಗಳು :** ಈ ಪದ್ಯಗಳು ಮೊದಲು ಅಂದ್ರ ಭಾಷೆಯಲ್ಲಿದ್ದವು. ಈ ಕವಿಯು ಹಿಂದುಗಡೆ ವೀರಶೈವನಾದನೆಂದು ತಿಳಿದದ್ದರಿಂದ ಮತ್ತು ಅವುಗಳು ಸರ್ವಜ್ಞನ ಪದಗಳನ್ನು ಹೋಲುತ್ತಿರುವುದರಿಂದ ಈ ಗ್ರಂಥವನ್ನು ಶಿವಾನುಭವ ಪತ್ರಿಕೆಯಲ್ಲಿ ವಿಷಯಾನುಸಾರವಾಗಿ ಕ್ರಮಗೊಳಿಸಿ ಪ್ರಕಟಿಸಿದೆನು. ಈ ಪ್ರಕಾರ ಕೆಲವು ಕಾವ್ಯಗ್ರಂಥಗಳನ್ನು ಪ್ರಕಟಿಸುವ ಕಾರ್ಯವು ಕೆಲಮಟ್ಟಿಗೆ ಮಾತ್ರ ನನ್ನಿಂದ ಆಗಿರುತ್ತದೆ.

**೧೨. ರಗಳೆಗಳು :**

ಪದ್ಯ ವಾಙ್ಮಯ ಪ್ರಕಟನೆಯ ನನ್ನ ಕಾರ್ಯದಲ್ಲಿ ಹರಿಹರ ಕವಿಯು ರಚಿಸಿದ ರಗಳೆಗಳನ್ನು ಪ್ರಕಟ ಮಾಡಿದ್ದು ಮುಖ್ಯವಾಗಿರುತ್ತದೆ. ಈತನ ಅಲೌಕಿಕ ಕಾವ್ಯಸಾಮರ್ಥ್ಯವನ್ನು ಈತನ ರಗಳೆಗಳಲ್ಲಿ ನಾವು ಸ್ಫುಟವಾಗಿ ಕಾಣಬಹುದು. ಈ ರಗಳೆಗಳು ಈಚೆಗೆ ಲೋಕಪ್ರಿಯವಾಗ ಹತ್ತಿರುವುದು ಸಮಾಧಾನಕರವು. ಆದರೆ ಕನ್ನಡದಲ್ಲಿ ಇಂಥ ಕಾವ್ಯಗಳು ಇದ್ದುದರ ಪರಿಚಯವು ಕೆಲವು ವಿದ್ವಜ್ಜನರಿಗೆ ಮಾತ್ರ ಇದ್ದಿತು. ಈ ರಗಳೆಗಳ ರಚನೆಯು ಬಹುಮಟ್ಟಿಗೆ ಪಾಶ್ಚಿಮಾತ್ಯ ಕಾವ್ಯಪದ್ಧತಿಯನ್ನು ಹೋಲುತ್ತದೆ. ಇವುಗಳನ್ನು ಹಿಂದಿನ ಕಾಲದ ಶಿವಶರಣರು ತಮ್ಮ ಧರ್ಮ ಪ್ರಚಾರಕಾರ್ಯದಲ್ಲಿ ಉಪಯೋಗಿಸುತ್ತಿದ್ದ ಹಾಗೆ ತೋರುತ್ತದೆ. ಈ ರಗಳೆಗಳು ಅತ್ಯಂತ ಸುಂದರವಾದ ಭಾಷೆಯುಳ್ಳವಾಗಿರುತ್ತವೆ. ಆದರೆ ಇವುಗಳನ್ನು ವೀರಶೈವರು ಈವರೆಗೆ ದುರ್ಲಕ್ಷಿಸುತ್ತ ಬಂದಿರುವರು. ಇದು ಅತ್ಯಂತ ದುರ್ದೈವದ ಸಂಗತಿಯಾಗಿರುತ್ತದೆ. ಆದ್ದರಿಂದ ಇವುಗಳನ್ನು ನಾನು ಶಿವಾನುಭವಪತ್ರಿಕೆಯಲ್ಲಿ ಕೆಲವು ವರ್ಷಗಳ ವರೆಗೆ ಪ್ರಕಟಿಸುತ್ತ ಬಂದೆನು. ಇವುಗಳ ಸಂಖ್ಯೆಯು ಈಗ ೪೦ ರ ವರೆಗೆ ಹೋಗಿರುತ್ತದೆ.

ಹರಿಹರನು ತಮಿಳು ದೇಶದಲ್ಲಿದ್ದ ಪುರಾತನರ ರಗಳೆಗಳನ್ನು ರಚಿಸಿದ್ದಾನೆ. ನಾನು ಪ್ರಕಟಿಸಿದ ಇಂಥ ರಗಳೆಗಳ ಸಂಖ್ಯೆಯು ೧೮ ಇರುತ್ತದೆ. ಬಸವಾದಿ ಪ್ರಮಥರ ಕಾಲದಲ್ಲಿ ಪ್ರಸಿದ್ಧ ಹೊಂದಿದ

ಶಿವಶರಣರ ರಗಳೆಗಳು ೧೧ ಇವೆ. ಇತರ ಶೈವವಿಭೂತಿಗಳ ರಗಳೆಗಳು ೬ ಇವೆ. ಇವಲ್ಲದೆ ಹರಿಹರನು ಸ್ತೋತ್ರರೂಪವಾಗಿ ಕೆಲವು ರಗಳೆಗಳನ್ನು ರಚಿಸಿದ್ದಾನೆ. ಅವು ಅತ್ಯಂತ ಸುಂದರವಾದವುಗಳು. ಅವುಗಳ ಸಂಖ್ಯೆ ೫ ಹೀಗೆ ನಾನು ಒಟ್ಟು ೪೦ ರಗಳೆಗಳನ್ನು ಪ್ರಸಿದ್ದಿಸಿದೆನು.

ಇವುಗಳಲ್ಲದೆ ತೋಂಟದಾರ್ಯರ ರಗಳೆ ಮತ್ತು ವೀರಶೈವ ರಗಳೆ ಎಂಬ ಬೇರೆ ಎರಡು ರಗಳೆಗಳನ್ನು ಅಚ್ಚು ಹಾಕಿಸಿದೆನು. ಈ ರಗಳೆಗಳು ಹರಿಹರ ಕವಿಯವಿರದೆ, ಅವುಗಳನ್ನು ಬೇರೆ ಕವಿಗಳು ರಚಿಸಿರುತ್ತಾರೆ.

ಹರಿಹರನ ರಗಳೆಗಳನ್ನು ಪ್ರಸಿದ್ಧಿಸುವ ಕಾರ್ಯವು ಇಷ್ಟು ಮಾತ್ರ ಜರುಗುವಷ್ಟರಲ್ಲಿ ಬೇರೆ ಕೆಲ ಮಹನೀಯರು ಈ ಕಾರ್ಯವನ್ನು ಕೈಕೊಂಡಿದ್ದರಿಂದ ನಾನು ಇದನ್ನು ಅಲ್ಲಿಯೇ ನಿಲ್ಲಿಸಿದೆನು.

ಹೀಗೆ ಶಿವಾನುಭವ ಪತ್ರಿಕೆಯ ಮೂಲಕವಾಗಿ, ಹೋದ ೨೫ ವರ್ಷಗಳಲ್ಲಿ ನಾನಾ ವಿಧ ಗ್ರಂಥಗಳು ಪ್ರಕಟವಾಗುತ್ತ ಬಂದಿವೆ. ಇವುಗಳ ಸಂಖ್ಯೆಯು ೭೫ ಇದ್ದು, ಅವುಗಳ ಹೆಸರುಗಳನ್ನು ನಾನು ಕಾಲ ಕಾಲಕ್ಕೆ ಹೊರಪಡಿಸಿದ ಪುಸ್ತಕಗಳ ಕ್ರಯಪಟ್ಟಿಗಳಲ್ಲಿ ವಾಚಕರು ಕಾಣಬಹುದು.

* * *

ಬಹುಜನ ಸಮಾಜದಲ್ಲಿ ಚಳವಳಿಗಳು ಉದ್ಭವಿಸಿದ ಕಾಲದಲ್ಲಿ ಉಂಟಾದ ವಾಙ್ಮಯವು ಅನೇಕ ಮುಖವಾಗಿ ಪ್ರವಹಿಸುತ್ತ ಹೋಗುವುದುಂಟು. ಆದ್ದರಿಂದ ವೀರಶೈವರ ವಾಙ್ಮಯವು ಅನೇಕ ವಿಧವಾಗಿ ಬೆಳೆದಿರುತ್ತದೆ. ಇದು ಈ ಪತ್ರಿಕೆಯಲ್ಲಿ ಪ್ರಕಟವಾದ ಗ್ರಂಥಗಳ ಮೂಲಕ ತಿಳಿದು ಬರುತ್ತದೆ. ಇವುಗಳಲ್ಲಿ ಪ್ರಭುದೇವರು ಮತ್ತು ದೇವರ ದಾಸಿಮಯ್ಯನ ವಚನಗಳಂಥ ಕೇವಲ ತಾತ್ವಿಕ ಗ್ರಂಥಗಳು ಅನೇಕವಿರುತ್ತವೆ. ಬಸವೇಶ್ವರನ ವಚನಗಳು ಮತ್ತು ಅಂಬಿಗರ ಚೌಡಯ್ಯನ ವಚನಗಳು ಇವು ಭಕ್ತಿಯ ಮತ್ತು ನೈತಿಕ ವಿಷಯಗಳಿಗೆ ಮಹತ್ವದ ಸ್ಥಾನವನ್ನು ಕೊಟ್ಟಿವೆ. ಇಂಥ ಗ್ರಂಥಗಳು ಈ ಮಾಲೆಯಲ್ಲಿ ಅನೇಕವಾಗಿರುತ್ತವೆ. ಸಾಮಾಜಿಕ ವಿಚಾರಗಳನ್ನು ನಿರೂಪಣೆ ಮಾಡುವ ವಚನಗಳು ಅನೇಕವಿರುತ್ತವೆ. ಇವು ಪ್ರತಿಯೊಂದು ವಚನಗ್ರಂಥದಲ್ಲಿ ಹೇರಳವಾಗಿ ಕಾಣಬಹುದು. ಶಿವಾನುಭವ ಪತ್ರಿಕೆಯಲ್ಲಿ ಬೀಳಗಿ ರಾಜರ ವಂಶಾವಳಿ, ಕೊಡಗು ರಾಜರ ವಂಶಾವಳಿಯಂಥ ಐತಿಹಾಸಿಕ ಗ್ರಂಥಗಳೂ ಇವೆ. ಪುರಾತನ ಶಿವಶರಣರ ಚರಿತ್ರೆಗಳು ಪತ್ರಿಕೆಯಲ್ಲಿ ಈಚೆಗೆ ಹೆಚ್ಚಾಗಿ ಪ್ರಕಟವಾಗಿರುತ್ತವೆ. ಆದಿಶೆಟ್ಟಿ ಪುರಾಣದಂಥ ಕಾವ್ಯಗಳೂ ಅನೇಕ ರಗಳೆಗಳೂ ಇದರಲ್ಲಿ ಪ್ರಸಿದ್ಧವಾಗಿವೆ. ವೀರಶೈವ ಸಮಾಜದಲ್ಲಿ ಅನೇಕ ಸಾಧು ಸತ್ಪುರುಷರು ಆಗಿ ಹೋಗಿದ್ದು, ಅವರು ರಚಿಸಿದ ಪದ್ಯ ಗ್ರಂಥಗಳೂ, ಈ ಪತ್ರಿಕೆಯ ಮೂಲಕ ಪ್ರಕಟವಾಗಿವೆ. ಹೀಗೆ ಈ ಪತ್ರಿಕೆಯು ೨೫ ವರ್ಷಗಳಿಂದಲೂ ಬಿಟ್ಟೂ ಬಿಡದೆ ಕಾರ್ಯಮಾಡುತ್ತ ಬಂದಿದ್ದರಿಂದ ಅನೇಕ ಬಗೆಯ ಗ್ರಂಥಗಳು ಇದರಲ್ಲಿ ಪ್ರಕಟವಾಗಿವೆ.

ಈ ಕಾರ್ಯದಲ್ಲಿ ಕೆಲವು ಮಹನೀಯರು ನನಗೆ ಅನುಕೂಲವಾಗಿ ವರ್ತಿಸಿದ್ದರಿಂದ ಈ ವಾಙ್ಮಯ ಪ್ರಕಟನೆಯ ಕಾರ್ಯ ಮುಂದುವರಿಯಿತೆಂದು ಇಲ್ಲಿ ಹೇಳುವುದು ಅಗತ್ಯವಿರುತ್ತದೆ. ನಾನು ಈ ಕಾರ್ಯವನ್ನು ಕೈಕೊಂಡ ಕೆಲವು ವರ್ಷಗಳಲ್ಲಿಯೇ ಶ್ರೀಯುತ ರಂಗರಾವ ದಿವಾಕರ ಇವರು ವಚನಶಾಸ್ತ್ರದ ಮಹತ್ವವನ್ನು ತಿಳಿದವರಾಗಿ ಅದರ ವಿಷಯವಾಗಿ ಒಂದು ಮಹತ್ವದ ವಿಸ್ತಾರವಾದ ಗ್ರಂಥವನ್ನು ಪ್ರಸಿದ್ಧಿಸಿದರು. ಇವರ ತರುವಾಯ ಪ್ರೊ. ಕೆ. ಜಿ. ಕುಂದಣಗಾರ

ಇವರು ಹರಿಹರ ಕವಿಯ ಪ್ರಶಸ್ತಿಯನ್ನು ಬರೆದರು. ಹಾಗೆಯೇ ಅನೇಕ ಮಹನೀಯರು ಮಹಾದೇವಿಯಕ್ಕನ ವಚನಗಳ ವಿಷಯವಾಗಿಯೂ ಬಸವೇಶ್ವರನ ವಿಷಯವಾಗಿಯೂ ಲೇಖನಗಳನ್ನೂ ಗ್ರಂಥಗಳನ್ನೂ ಬರೆಯುತ್ತ ಬಂದಿದ್ದಾರೆ. ಇದರಿಂದ ವಚನಗಳು ನಾಡಿನಲ್ಲಿ ಬಹಳ ಪ್ರಸಾರವಾಗಿವೆ. ಹೀಗೆ ಅನೇಕ ಪ್ರಸಿದ್ಧ ಗ್ರಂಥಕಾರರು ವಚನ ವಾಙ್ಮಯದ ಬಗ್ಗೆ ಜನರಲ್ಲಿ ಜಾಗ್ರತಿಯನ್ನು ಹುಟ್ಟಿಸುತ್ತ ಬಂದಿದ್ದಾರೆ. ಇವರೆಲ್ಲರಿಗೆ ನಾನು ಬಹಳ ಆಭಾರಿಯಾಗಿದ್ದೇನೆ.

ಇದಲ್ಲದೆ ಕರ್ನಾಟಕದಲ್ಲಿಯ ಅನೇಕ ವಿದ್ವಾಂಸರು ಶಿವಶರಣರ ವಿಚಾರಗಳನ್ನು ಕುರಿತು ಯಾವಾಗಲೂ ಸಾರ್ವಜನಿಕ ವ್ಯಾಖ್ಯಾನಗಳಲ್ಲಿ ತಮ್ಮ ಅಭಿಪ್ರಾಯಗಳನ್ನು ಹೇಳುತ್ತ ಬಂದಿದ್ದಾರೆ. ಇವರಲ್ಲಿ ಶ್ರೀಯುತ ಶ್ರೀನಿವಾಸಮೂರ್ತಿಗಳು, ಶ್ರೀ ಬಿ. ಎಂ. ಶ್ರೀಕಂಠಯ್ಯನವರು ಮುಖ್ಯರಾಗಿದ್ದಾರೆ. ಇವರಿಗೆ ನಾನು ಅತ್ಯಂತ ಆಭಾರಿಯಾಗಿದ್ದೇನೆ.

ಈಚೆಗೆ ರಾಜಕೀಯ ರಂಗದಲ್ಲಿಯೂ ರಾಷ್ಟ್ರೀಯ ವೃತ್ತಿಯ ಅನೇಕ ಮಹನೀಯರು ಶಿವಶರಣರ ವಾಙ್ಮಯದಲ್ಲಿಯ ಉಕ್ತಿಗಳನ್ನು ತಮ್ಮ ಉಪನ್ಯಾಸಗಳಲ್ಲಿ ಹೇರಳವಾಗಿ ಉಪಯೋಗಿಸುತ್ತ ಬಂದಿದ್ಧಾರೆ. ಇವರು ಮುಖ್ಯವಾಗಿ ಅಸ್ಪೃಶ್ಯತಾ ನಿವಾರಣೆ, ಕಾಯಕದ ಮಹತ್ವ, ವಿಶ್ವಬಂಧುತ್ವದ ವಿಚಾರಗಳ ವಚನ ಮತ್ತು ನೈತಿಕ ವಚನಗಳನ್ನು ಉದಹರಿಸುವುದುಂಟು. ಇದರಿಂದ ಶಿವಾನುಭವ ಪತ್ರಿಕೆಯ ಮೂಲಕ ಪ್ರಕಟವಾಗುತ್ತ ಬಂದ ಗ್ರಂಥಗಳಿಗೆ ಸಮಾಜದಲ್ಲಿ ಕೆಲವೊಂದು ಆದರ ಭಾವವು ಹೆಚ್ಚುತ್ತಲೇ ಬಂದಿರುತ್ತದೆ.

ವಚನ ವಾಙ್ಮಯದ ಕಾರ್ಯದಲ್ಲಿ ಶ್ರೀ ಮಹಾದೇವಸ್ವಾಮಿಗಳು ಸರ್ಪಭೂಷಣ ಮಠ ಬೆಂಗಳುರು ಇವರು ನಮಗೆ ಮಾಡಿದ ಸಹಾಯವು ಘನತರವಾದದ್ದು. ಅವರು ಸಂಸ್ಕೃತ ಪಂಡಿತರಾಗಿದ್ದಾರೆ. ಆದರೂ ಅವರು ವಚನ ವಾಙ್ಮಯವನ್ನು ಬಹಳ ಪ್ರೀತಿಸುವವರಾಗಿದ್ಧಾರೆ. ಅವರು ಶಿವಾನುಭವ ಗ್ರಂಥಮಾಲೆಯಲ್ಲಿರುವ ಗ್ರಂಥಗಳನ್ನೆಲ್ಲ ತಮ್ಮ ಮಠದಲ್ಲಿಟ್ಟುಕೊಂಡು ಮಠದಲ್ಲಿ ದಿನಾಲು ಪ್ರವಚನ ನಡೆಸುತ್ತಿರುವಾಗ್ಗೆ ಈ ಗ್ರಂಥಗಳ ಕಡೆಗೆ ತಮ್ಮ ಶ್ರೋತೃಗಳ ಲಕ್ಷ್ಯವನ್ನು ಯಾವಾಗಲೂ ಸೆಳೆಯುತ್ತ ಬಂದಿದ್ಧಾರೆ. ಇದರಿಂದ ಅನೇಕರು ಈ ಗ್ರಂಥಗಳನ್ನು ಬೆಲೆಗೆ ತೆಗೆದುಕೊಂಡಿದ್ದುಂಟು. ಮುಂದೆ ಅವರು ಈ ಕಾರ್ಯವನ್ನು ಶ್ರೀಯುತ ಎಮ್. ಎನ್. ಶಿವಪ್ಪ ಇವರ ಕಡೆಗೆ ಒಪ್ಪಿಸಲಾಗಿ ಅವರು ಈ ಗ್ರಂಥಗಳನ್ನು ತಮ್ಮ ಹೋಟೆಲಿನಲ್ಲಿ ಇಟ್ಟುಕೊಂಡು ಅಲ್ಲಿ ಅವುಗಳ ಪ್ರಸಾರ ಮಾಡುತ್ತ ಬಂದಿದ್ಧಾರೆ. ಇವರ ಈ ಪ್ರಯತ್ನಗಳು ಶಿವಾನುಭವ ಪತ್ರಿಕೆಗೆ ಬಹಳ ಸಹಾಯಕಾರಿಯಾಗಿರುತ್ತವೆ. ಅವರಿಗೆ ನಾನು ಅತ್ಯಂತ ಆಭಾರಿಯಾಗಿದ್ದೇನೆ. ಮುಂದೆ ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ಕಲಬುರ್ಗಿ ಈ ಸ್ಥಳಗಳಲ್ಲಿಯೂ ಕೂಡ ಕೆಲವು ಬುಕ್ಕ ಡಿಪೋದವರು ಶಿವಾನುಭವ ಗ್ರಂಥಮಾಲೆಯ ಗ್ರಂಥಗಳನ್ನು ತಮ್ಮಲ್ಲಿ ತರಿಸುತ್ತ ಇದ್ದಾರೆ.

ಪತ್ರಿಕೆಯಲ್ಲಿ ಪ್ರಕಟವಾದ ಗ್ರಂಥಗಳನ್ನು ಮೈಸೂರು ವಿಶ್ವವಿದ್ಯಾಲಯದವರು ಯಾವಾಗಲೂ ಪಠ್ಯ ಪುಸ್ತಕಗಳನ್ನಾಗಿ ನಿಯಮಿಸುತ್ತಾ ಬಂದಿದ್ದಾರೆ. ಇವುಗಳಲ್ಲಿ ಬಸವೇಶ್ವರ, ದೇವರ ದಾಸಿಮಯ್ಯ, ಆದಯ್ಯ, ಅಂಬಿಗರ ಚೌಡಯ್ಯ, ಮಹಾದೇವಿಯಕ್ಕ ಇವರ ವಚನಗಳು ಬಹು ಮುಖ್ಯವಾದವುಗಳು. ಮೈಸೂರ ಸಂಸ್ಥಾನದಲ್ಲಿರುವ ಪ್ರೌಢಶಿಕ್ಷಣ ಕಾರ್ಯಾಲಯದವರೂ ಈ ಗ್ರಂಥಗಳನ್ನು ತರಿಸುವುದುಂಟು. ಈಚೆಗೆ ಮೈಸೂರು ವಿಶ್ವವಿದ್ಯಾಲಯದವರು ವಚನ ಧರ್ಮಸಾರ ಎಂಬ

ಗ್ರಂಥವನ್ನು ಪ್ರಕಟಿಸಿ ಅದನ್ನು ತಮ್ಮಲ್ಲಿಯ ಕಾಲೇಜುಗಳಲ್ಲಿ ಉಚ್ಚ ಪರೀಕ್ಷೆಗಳಲ್ಲಿ ಉಪಯೋಗಿಸುತ್ತಲಿದ್ದಾರೆ. ಮುಂದೆ ಮುಂಬಯಿ ವಿಶ್ವವಿದ್ಯಾಲಯದವರು ಸಹ ವಚನ ಗ್ರಂಥಗಳನ್ನು ಉಚ್ಚ ಪರೀಕ್ಷೆಗಳಿಗಾಗಿ ಉಪಯೋಗಿಸುತ್ತ ಬಂದಿದ್ದಾರೆ. ಅವುಗಳಲ್ಲಿ ವಚನಶಾಸ್ತ್ರ ಸಾರ ಭಾಗ–೧ ಮತ್ತು ಭಾಗ –೨ ಇವುಗಳಲ್ಲಿಯ ಕೆಲವು ಭಾಗಗಳು, ಮಹಾದೇವಿಯಕ್ಕನ ವಚನಗಳು, ಬಸವೇಶ್ವರ ವಚನಗಳು ಇವೇ ಮುಖ್ಯವಾಗಿರುತ್ತವೆ. ಹರಿಹರನ ರಗಳೆ ಗ್ರಂಥಗಳನ್ನು ಮೈಸೂರು ಮತ್ತು ಮುಂಬೈ ವಿಶ್ವವಿದ್ಯಾಲಯದವರು ಯಾವಾಗಲೂ ತಮ್ಮ ಪರೀಕ್ಷೆಗಳಿಗಾಗಿ ಉಪಯೋಗಿಸುತ್ತ ಬಂದಿದ್ದಾರೆ. ಈ ಪ್ರಕಾರ ಶಿವಾನುಭವ ಪತ್ರಿಕೆಯು ನಡೆಸುತ್ತ ಬಂದ ಕಾರ್ಯಗಳು ಕೆಲವೊಂದು ಸ್ವರೂಪಕ್ಕೆ ಬಂದಿದ್ದು, ವಾಚಕರ ಲಕ್ಷ್ಯಕ್ಕೆ ಬಂದಿರಬಹುದು.

ಈ ಎಲ್ಲ ವಿವರಣೆಗಳಿಂದ ಶಿವಾನುಭವ ಗ್ರಂಥಗಳಿಗೆ ಅನೇಕ ಆವೃತ್ತಿಗಳು ಉಂಟಾಗಿರಬಹುದೆಂದು ಬಹುಜನರು ಭಾವಿಸಿರಬಹುದು. ಆದರೆ ನಿಜಸ್ಥಿತಿಯು ಬೇರೆಯಾಗಿರುತ್ತದೆ. ಬಸವೇಶ್ವರ, ದೇವರ ದಾಸಿಮಯ್ಯ, ಘನಲಿಂಗ, ಮಹಾದೇವಿಯಕ್ಕ ಇವರ ವಚನಗಳು ಮಾತ್ರ ಒಂದಕ್ಕಿಂತ ಹೆಚ್ಚು ಆವೃತ್ತಿಯನ್ನು ಕಂಡಿವೆಯೇ ಹೊರತು ಉಳಿದ ಗ್ರಂಥಗಳು ಖರ್ಚಾಗದೆ ನನ್ನ ಮುದ್ರಣಾಲಯದಲ್ಲಿ ಬಿದ್ದುಬಿಟ್ಟಿರುತ್ತವೆ. ವೀರಶೈವ ಸಮಾಜದಲ್ಲಿ ವಿದ್ಯಾಪ್ರಸಾರವು ಬಹಳ ಕಡಿಮೆ ಇರುವುದರಿಂದ ಇಂಥ ಉಚ್ಚ ವಾಙ್ಮಯವು ಅವರಿಗೆ ಇನ್ನೂ ಅಪರಿಚಿತವಾಗಿರುತ್ತದೆ. ಇದರಿಂದ ಹೀಗಾಗುವುದು ಸ್ವಾಭಾವಿಕವೇ ಇರುತ್ತದೆ. ಇದಲ್ಲದೆ ಈಚೆಗೆ ಮುದ್ರಣದ ಖರ್ಚು ಮಿತಿಮೀರಿ ಬೆಳೆದಿರುವುದರಿಂದ ಈ ಗ್ರಂಥಗಳ ಹೊಸ ಆವೃತ್ತಿಗಳನ್ನು ಪ್ರಸಿದ್ಧಿಸುವುದು ಸಾಧ್ಯವಾಗಿರುವುದಿಲ್ಲ.

ಶಿವಾನುಭವ ಪತ್ರಿಕೆಯ ಚಂದಾದಾರರ ಸಂಖ್ಯೆಯು ಬಹುಶಃ ೩೦೦ ಕ್ಕಿಂತಲೂ ಹೆಚ್ಚು ಯಾವಾಗಲೂ ಇರುವುದಿಲ್ಲ. ಆದರೂ ಅದನ್ನು ಕರ್ನಾಟಕದಲ್ಲಿಯ ಮುಖ್ಯ ಮುಖ್ಯ ಜನರು ಗ್ರಹಿಸುತ್ತ ಬಂದಿದ್ದಾರೆ ಮತ್ತು ಅವರು ವಚನ ವಾಙ್ಮಯದ ಮಹತ್ವದ ವಿಷಯವಾಗಿ ವಿದ್ವಾಂಸರ ಉಪನ್ಯಾಸಗಳನ್ನು ಆಗಿಂದಾಗ್ಗೆ ಕೇಳುತ್ತ ಬಂದಿದ್ದಾರೆ. ಈ ಬಗೆಯ ಪ್ರಚಾರವು ಬಹು ದಿವಸಗಳಿಂದಲೂ ಎಲ್ಲ ಕಡೆಗೆ ನಡೆಯುತ್ತ ಬಂದಿರುವುದರಿಂದ ಇದರ ಪರಿಣಾಮವು ಜನತೆಯ ಮೇಲೆ ಆಗದೆ ಹೋಗಿಲ್ಲೆಂದೂ ಮತ್ತು ಬೇರೆ ಭಾಗಗಳಲ್ಲಿ ಕಡಿಮೆ ಪ್ರಮಾಣದಿಂದ ಆಗಿದೆಯೆಂದೂ ತೋರಿಬರುತ್ತದೆ. ಮೈಸೂರು ಪ್ರಾಂತವು ಸಾಂಸ್ಕೃತಿಕ ಪ್ರಯತ್ನಗಳಲ್ಲಿ ಮತ್ತು ನಾಗರಿಕತೆಯಲ್ಲಿ ಯಾವಾಗಲೂ ಮುಂದೆ ಬಂದದ್ದಾಗಿರುತ್ತದೆ. ಆದ್ದರಿಂದ ವಚನ ವಾಙ್ಮಯವವನ್ನು ಅಲ್ಲಿಯವರು ಹೆಚ್ಚಿಗೆ ಆಳವಾಗಿ ಪರಿಶೀಲಿಸುತ್ತಿದ್ದುದರಿಂದ ಅಲ್ಲಿಯ ವೀರಶೈವ ಸಮಾಜದ ಮೇಲೆ ಅದು ಪರಿಣಾಮಕಾರಿ ಯಾಗಿದೆಯೆಂದು ಕಂಡು ಬಂದಿದೆ. ಸುಮಾರು ೨೦ ವರ್ಷಗಳ ಹಿಂದೆ ಅಲ್ಲಿರುವ ವೀರಶೈವ ಪಂಗಡಗಳಲ್ಲಿ ಅನ್ನೋದಕ ವ್ಯವಹಾರಗಳ ಶರೀರ ಸಂಬಂಧಗಳೂ ಪರಸ್ಪರ ಎಷ್ಟು ಮಾತ್ರವೂ ನಡೆಯುತ್ತಿದ್ದಿಲ್ಲ. ಆದರೆ ಈಗ ಆ ಪ್ರಾಂತದಲ್ಲಿ ಇಂಥ ವ್ಯವಹಾರಗಳು ನಿರಾತಂಕವಾಗಿ ನಡೆದಿರುವುದರಿಂದ ಯಾರೂ ಇಂಥ ವ್ಯವಹಾರಗಳಿಗೆ ಆಕ್ಷೇಪವನ್ನು ಎತ್ತುವುದು ಕಂಡು ಬಂದಿಲ್ಲ.

ಆದರೆ ಉತ್ತರ ಕರ್ನಾಟಕವು ಮೈಸೂರು ಪ್ರಾಂತದಷ್ಟು ವಾಙ್ಮಯ ಕಾರ್ಯಗಳಲ್ಲಿ ಮುಂದುವರಿದಿರುವುದಿಲ್ಲ, ಜನತೆಯಲ್ಲಿ, ವಿಶೇಷವಾಗಿ ವೀರಶೈವರಲ್ಲಿ ಓದುವ ಅಭಿರುಚಿಯು ಬಹಳ ಕಡಿಮೆ ಇರುತ್ತದೆ. ಆದ್ದರಿಂದ ಈ ಭಾಗದಲ್ಲಿ ಶಿವಾನುಭವ ಪತ್ರಿಕೆಯ ಪ್ರಸಾರವು ಮತ್ತು ವಚನ ಗ್ರಂಥಗಳ ಅಭ್ಯಾಸವು ಬಹಳ ಕಡಿಮೆ ಪ್ರಮಾಣದಿಂದ ನಡೆದಿರುತ್ತದೆ. ಈ ಭಾಗದಲ್ಲಿ

ವೀರಶೈವರ ಉಪಪಂಗಡಗಳು ಕ್ವಚಿತ್ತಾಗಿ ಆಗಿರುತ್ತವೆ. ಇದಲ್ಲದೆ ಇತ್ತ ರಾಜಕೀಯ ಮೇಲಾಟಗಳು ಬಹಳ ಹೆಚ್ಚಾಗಿರುವುದರಿಂದ ಸಾಂಸ್ಕೃತಿಕ ಚಟುವಟಿಕೆಗಳು ಸಾವಕಾಶವಾಗಿ ಸಾಗಿರುತ್ತವೆ. ಇದರಿಂದ ಈ ಭಾಗದಲ್ಲಿ ವಚನ ವಾಙ್ಮಯವ ಪ್ರಸಾರವು ಬಹು ಮಂದವಾಗಿ ನಡೆದಿರುತ್ತದೆ.

ಹೈದ್ರಾಬಾದ ಸಂಸ್ಥಾನದಲ್ಲಿ ಶಿವಶರಣರ ವಾಙ್ಮಯದ ವಿಷಯವಾಗಿ ಅತ್ಯಂತ ಪೂಜ್ಯ ಭಾವವಿರುವುದು ಕಂಡು ಬಂದಿದೆ. ಶಿವಾನುಭವ ಪತ್ರಿಕೆಯ ಪ್ರಸಾರವು ಇಲ್ಲಿ ಯಾವಾಗಲೂ ಹೆಚ್ಚಾಗಿರುತ್ತದೆ. ಉದಾಹರಣಾರ್ಥವಾಗಿ ಮಹಾರಾಷ್ಟ್ರಕ್ಕೆ ಗಡಿನಾಡಾದ ಉದಗಿರಿ ಭಾಗದಲ್ಲಿ ಕೆಲ ಮಹನೀಯರು ಒಬ್ಬ ಉಪದೇಶಕನವನ್ನು ನಿಯಮಿಸಿಕೊಂಡು ಶಿವಾನುಭವದ ತತ್ವಪ್ರಸಾರ ಮಾಡುತ್ತಿರುವುದು ನನಗೆ ಕಂಡು ಬಂದಿದೆ. ಇಲ್ಲಿ ಕಾರ್ಯ ಮಾಡುತ್ತಿದ್ದ ಒಬ್ಬ ಉಪದೇಶಕನು ನನಗೆ ಭೇಟ್ಟಿಯಾದಾಗ ತಾನು ಹಳ್ಳಿ ಹಳ್ಳಿಗೆ ಪಾದಚಾರಿಯಾಗಿ ಹೋಗಿ ಶಿವಶರಣರ ತತ್ವ ಪ್ರಸಾರ ಮಾಡುತ್ತಿರುವುದುನ್ನು ಕೇಳಿ ನಾನು ವಿಸ್ಮಯಪಟ್ಟೆನು. ಈ ಭಾಗದ ಜನತೆಯಲ್ಲಿ ಬಸವೇಶ್ವರ ಮತ್ತು ಶಿವಶರಣರ ವಿಷಯವಾಗಿ ಅತುಲವಾದ ಆದರ ಇದೆ. ಆದ್ದರಿಂದ ಈ ಸ್ಥಿತಿಯು ಅಲ್ಲಿ ಉಂಟಾಗಿದೆಯೆಂದು ನನಗೆ ತೋರುತ್ತದೆ. ಆದರೆ ಈ ಭಾಗದಲ್ಲಿ ಕನ್ನಡದ ಪ್ರಚಾರವು ಇನ್ನೂ ಬಹಳ ಕಡಿಮೆಯಿದೆ. ಇದು ಮುಂದೆ ಹೆಚ್ಚುತ್ತ ಹೋದ ಹಾಗೆ ಶಿವಶರಣರ ವಿಚಾರಗಳ ಪ್ರಭಾವವು ಅಲ್ಲಿ ಬೆಳೆಯುತ್ತ ಹೋಗಬಹುದೆಂದು ನನಗೆ ತೋರುತ್ತದೆ.

ಬಳ್ಳಾರಿ ಜಿಲ್ಲೆಯಲ್ಲಿ ಶಿವಶರಣರ ವಿಚಾರಗಳ ವಿಷಯವಾಗಿ ಕೆಲವು ಕಾರಣಗಳ ಮೂಲಕ, ಜನತೆಯಲ್ಲಿ ಕೆಲವು ವರ್ಷಗಳ ಹಿಂದೆ ವಿರೋಧಭಾವವು ಬಲವಾಗಿ ಇದ್ದಿತು. ಆದ್ದರಿಂದ ಇಲ್ಲಿ ಶಿವಾನುಭವ ಪ್ರಚಾರವು ಬಹಳ ಕಡಿಮೆ ಇದ್ದ ಹಾಗೆ ನನಗೆ ತೋರುತ್ತಿದೆ. ಈಗಿನ ಪರಿಸ್ಥಿತಿಯು ಹೇಗಿದೆಂಬುದು ನನಗೆ ತಿಳಿದಿಲ್ಲ.

ವಿಜಾಪುರ ಮತ್ತು ಸೊಲ್ಲಾಪುರ ಜಿಲ್ಲೆಗಳು ವಾಙ್ಮಯ ಚಟುವಟಿಕೆಗಳಲ್ಲಿ ಬಹು ಹಿಂದೆ ಬಿದ್ದ ಪ್ರದೇಶಗಳಾಗಿರುತ್ತವೆ. ಆದ್ದರಿಂದ ಶಿವಾನುಭವದ ಪ್ರಚಾರವಾದರೂ ಇಲ್ಲಿ ಈಗಲೂ ಅಲ್ಪ ಪ್ರಮಾಣದಲ್ಲಿ ಇರುತ್ತದೆ.

ಈ ಪ್ರಕಾರ ಕರ್ನಾಟಕದ ಆಯಾ ಭಾಗಗಳಲ್ಲಿ ಶಿವಶರಣರ ತತ್ವಗಳ ಪ್ರಸಾರವು ಹೇಗೆ ನಡೆದಿದೆಯೆಂಬುದನ್ನು ನಾನು ಸಂಕ್ಷಿಪ್ತವಾಗಿ ವಿವರಿಸಿದ್ದೇನೆ. ಶಿವಾನುಭವವು ಉಚ್ಚ ತಾತ್ವಿಕ ವಿಚಾರಗಳಿಗೆ ಮಹತ್ವ ಕೊಡುವಂತಹದಿರುತ್ತದೆ. ಆದ್ದರಿಂದ ನಾಗರಿಕತೆಯಲ್ಲಿ ಮುಂದುವರಿಯದ ಸಮಾಜಗಳಲ್ಲಿ ಅದರ ತತ್ವಗಳು ತೀವ್ರ ತೀವ್ರ ಪ್ರಸಾರಾಗುವ ಸಂಭವವು ಕಡಿಮೆ. ಆದರೆ ಕರ್ನಾಟಕದಲ್ಲಿಯ ವೀರಶೈವ ಸಮಾಜವು ಈ ದೃಷ್ಟಿಯಿಂದ ಬಹು ಹಿಂದೆ ಇರುವುದರಿಂದ ಇವರಲ್ಲಿನ ವಿಶೇಷ ಪ್ರಯತ್ನಗಳು ನಡೆಯುವುದು ಬಹು ಅವಶ್ಯವೆಂದು ನಮಗೆ ತೋರುತ್ತದೆ. ವಾಙ್ಮಯ ಸಂಶೋಧನೆಯು ಯಶಸ್ವಿಯಾಗಬೇಕಾದರೆ ಅದರೊಡನೆ ಪ್ರಚಾರ ಕಾರ್ಯವೂ ಬಲವಾಗಿ ಸಾಗಬೇಕು. ಆದ್ದರಿಂದ ಈ ವಿಷಯವನ್ನು ಕುರಿತು ನಾವು ಇಲ್ಲಿ ಹೆಚ್ಚಾಗಿ ವಿವರಣೆ ಮಾಡಿದ್ದೇವೆ.

## ೪. ಪತ್ರಿಕೆಯ ಮೂಲಕ ಲೇಖನಗಳ ಪ್ರಕಟನೆ

ಈ ವರೆಗೆ ನಾವು ಶಿವಾನುಭವ ಪತ್ರಿಕೆಯಲ್ಲಿ ಪ್ರಕಟವಾದ ಗ್ರಂಥಗಳ ವಿಷಯವಾಗಿ ಉಲ್ಲೇಖಿಸಿದೆವು. ಇನ್ನು ಮುಂದೆ ಈ ಪತ್ರಿಕೆಯಲ್ಲಿ ಹೋದ ೨೫ ವರ್ಷಗಳಲ್ಲಿ ಪ್ರಕಟವಾದ ಲೇಖನಗಳ ವಿಷಯವಾಗಿ

ಸಂಕ್ಷಿಪ್ತವಾಗಿ ಇಲ್ಲಿ ವಿವರಿಸುವೆವು. ಈವರೆಗೆ ಇದರಲ್ಲಿ ಪ್ರಕಟವಾದ ಲೇಖಗಳ ಪುಟಸಂಖ್ಯೆಯು ಕನಿಷ್ಠ ೧೨೦೦೦ವರೆಗೆ ಇದೆ. ಈ ಲೇಖನಗಳು ಅನೇಕ ವಿಷಯಗಳ ಬಗ್ಗೆ ಇರುತ್ತವೆ. ಇವುಗಳನ್ನು ಬರೆದವರು ಕರ್ನಾಟಕದ ಎಲ್ಲ ಭಾಗಗಳಲ್ಲಿಯವರಿದ್ದು, ಅವರ ಸಂಖ್ಯೆಯು ಬಹಳ ದೊಡ್ಡದಾಗಿರುತ್ತದೆ. ವಿಸ್ತಾರ ಭಯಕ್ಕೋಸ್ಕರ ನಾವು ಅವರೆಲ್ಲರ ಹೆಸರುಗಳನ್ನು ಇಲ್ಲಿ ವಿವರಿಸುವುದು ಶಕ್ಯವಿಲ್ಲ. ಆದರೆ ಅವರಲ್ಲಿ ಮುಖ್ಯರಾದ ಕೆಲವರ ಹೆಸರುಗಳನ್ನು ಮಾತ್ರ ಇಲ್ಲಿ ಕೊಡುವುದು ಅವಶ್ಯವೆನಿಸುತ್ತದೆ.

ಸಿದ್ಧರಾಮಪ್ಪ ದುಂಡಪ್ಪ ಪಾವಟೆ (ಹುಬ್ಬಳ್ಳಿ), ವೀರಪ್ಪ ಬಸಪ್ಪ ಬಿಳೀ ಅಂಗಡಿ (ಹುಬ್ಬಳ್ಳಿ) ಮತ್ತು ಜೀರಗೆ ಬಸವಲಿಂಗಪ್ಪ (ಬೆಂಗಳೂರು)–ಈ ಮಹನೀಯರು ವೀರಶೈವ ಸಮಾಜವು ಪ್ರಮಥರ ತತ್ವಗಳಿಂದ ದೂರವಾಗಿದೆಯೆಂದು ಭಾವಿಸಿ, ಅವುಗಳನ್ನು ಅದರಲ್ಲಿ ಪುನಃ ಪ್ರತಿಷ್ಠಾಪಿಸಬೇಕೆಂದು ಬಹಳ ಶ್ರಮವಹಿಸಿದರು. ಈ ಮಹನೀಯರು ಶಿವಾನುಭವದ ಆರಂಭದ ಕಾಲದಲ್ಲಿ, ಅದರಲ್ಲಿ ಅನೇಕ ಮಹತ್ವದ ಲೇಖನಗಳನ್ನು ಪ್ರಕಟಿಸಿದರು. ಈ ಕಾಲದಲ್ಲಿ ಬೆಂಗಳೂರಿನ ನಿವೃತ್ತ ಪೊಲೀಸ್ ಸೂಪರಿಂಟೆಂಡೆಂಟ್‌ರಾದ ಶ್ರೀ ಜಿ. ಶಾಂತವೀರಪ್ಪನವರು ಮತ್ತು ನಿವೃತ್ತ ಸಬ್ ಜಜ್ಜರಾದ ವ್ಹಿ. ಬಿ. ಹಾಲಭಾವಿಯವರು ಕಾಲ ಕಾಲಕ್ಕೆ ಅನೇಕ ಲೇಖನಗಳನ್ನು ಇದರಲ್ಲಿ ಬರೆದಿದ್ದಾರೆ. ಹಾಗೆಯೇ ಪ್ರೋ. ಎಸ್. ಎಸ್. ಮಾಳವಾಡ, ಪ್ರೊ. ಕೆ. ಜಿ. ಕುಂದಣಗಾರ ಇವರು ವೀರಶೈವ ಗ್ರಂಥಕಾರರ ಮತ್ತು ಶಿವಶರಣರ ವಿಷಯವಾಗಿ ಅನೇಕ ಲೇಖನಗಳನ್ನು ಬರೆದಿರುವರು. ಹಾಗೆಯೇ ವಿದ್ಯಾವಾಚಸ್ಪತಿ ಶ್ರೀ ಶಂಭುಲಿಂಗ ಸ್ವಾಮಿಗಳು ಹಿರೇಮಠ (ವಿಜಾಪುರ), ಶ್ರೀ ಬಂಥನಾಳ ಶಿವಯೋಗಿಗಳು (ಬಂಥನಾಳ), ಡಾ. ಎಸ್. ಪಿ. ನಂದಿಮಠ (ಬಾಗಲಕೋಟೆ) ಇವರು ವೀರಶೈವ ವಾಙ್ಮಯ ಮತ್ತು ಅನೇಕ ಶಿಲಾಶಾಸನಗಳ ಬಗ್ಗೆ ಮಹತ್ವದ ಲೇಖನಗಳನ್ನು ಇದರಲ್ಲಿ ಬರೆದಿದ್ದಾರೆ. ಇದರಂತೆಯೇ ಶ್ರೀ ಕೆ. ಡಿ. ಬ್ಯಾಳಿ (ಹುನಗುಂದ), ಶ್ರೀ ಮಹಾದೇವ ಸ್ವಾಮಿಗಳು (ಸರ್ಪಭೂಷಣ ಮಠ, ಬೆಂಗಳೂರು), ಹಲಸಂಗಿಯ ಮಧುರಚೆನ್ನ, ಸಿಂಪಿ ಲಿಂಗಣ್ಣ (ಚಡಚಣ), ಶ್ರೀ ವ್ಹಿ. ಸಿ. ಯುಗಟಿ (ಹಾವೇರಿ), ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು (ಬೆಂಗಳೂರು), ಶ್ರೀ ಜಗದ್ಗುರು ನಿಡುಮಾಮಿಡಿ ಮಹಾಸ್ವಾಮಿಗಳು, ಪಂ. ನಾಗೇಶ ಶಾಸ್ತ್ರಿಗಳು (ಬಳ್ಳಾರಿ), ಶ್ರೀ ಬುದ್ದಯ್ಯ ಸ್ವಾಮಿ ಪುರಾಣಿಕಮಠ (ಧಾರವಾಡ), ಶ್ರೀ ಟಿ. ಎಚ್. ಎಮ್. ಸದಾಶಿವಯ್ಯನವರು (ಜ್ಯುಡಿಶಿಯಲ್ ಡಿಸ್ಟ್ರೀಕ್ಟ್ ಮ್ಯಾಜಿಸ್ಟ್ರೇಜ್ ಮು. ನೆಲ್ಲೂರು), ಶ್ರೀ ಮೂರುಸಾವಿರಪ್ಪ ಸಾದರಹಳ್ಳಿ (ಹುಬ್ಬಳ್ಳಿ), ಶ್ರೀ ಅನ್ನದಾನೀಶ್ವರ ವಿರಕ್ತಮಠ (ಬಾಗಲಕೋಟೆ), ಶ್ರೀ ಬಸವಪ್ಪ ಕೆ. ಜೀರಗೆ (ಬೆಂಗಳೂರು), ಶ್ರೀ ವ್ಹಿ. ಆರ್. ಕೊಪ್ಪಳ (ಧಾರವಾಡ), ಶ್ರೀ. ಎ. ವ್ಹಿ. ಹಂಜಿ (ಬಾಗಲಕೋಟೆ), ಶ್ರೀ ವ್ಹಿ. ಸಿ. ಬ್ಯಾಹಟ್ಟಿ (ಪ್ರಿನ್ಸಿಪಾಲ ಬಸವೇಶ್ವರ ಕಾಲೇಜು, ಬಾಗಲಕೋಟೆ), ಶ್ರೀ ಲಕ್ಕಪ್ಪ ಶಿರಹಟ್ಟಿ (ವಿಜಾಪುರ), ಶ್ರೀ ಮ. ಮಲ್ಲಪ್ಪ (ಹಲಗೂರು) ಈ ಮೊದಲಾದ ಮಹನೀಯರು ಕಾಲಕಾಲಕ್ಕೆ ಶಿವಾನುಭವಪತ್ರಿಕೆಗೆ ಲೇಖನಗಳನ್ನು ಕಳಿಸುತ್ತ ಇದ್ದಾರೆ. ಇವರಲ್ಲದೆ ಶ್ರೀಯುತ ಸಿ. ನಾ. ಮಹಾಂತಣ್ಣವರ (ಹೂನೂರು ತಾ. ಜಮಖಂಡಿ) ಮತ್ತು ಶ್ರೀ ಬಸಪ್ಪ ಚನ್ನಪ್ಪ ಪಟ್ಟೇದ (ಹುಕ್ಕೇರಿ) ಇವರು ಷಟ್‌ಸ್ಥಲಶಾಸ್ತ್ರದ ತತ್ವಗಳನ್ನು ಆಳವಾಗಿ ಅಭ್ಯಾಸಮಾಡಿ ಈ ವಿಷಯವಾಗಿ ಅನೇಕ ಮಹತ್ವದ ಲೇಖನಗಳನ್ನು ಯಾವಾಗಲೂ ಪ್ರಕಟ ಮಾಡುತ್ತ ಬಂದಿದ್ದಾರೆ. ಇವರಲ್ಲದೆ ಇನ್ನೂ ಅನೇಕ ಮಹನೀಯರು ಪತ್ರಿಕೆಯಲ್ಲಿ ಆಗಿಂದಾಗ್ಗೆ ಲೇಖನಗಳನ್ನು ಕಳಿಸಿಕೊಡುತ್ತ ಇದ್ದಾರೆ. ಇವರೆಲ್ಲರಿಗೆ ನಾನು ಅತ್ಯಂತ ಕೃತಜ್ಞನಾಗಿದ್ದೇನೆ.

ಈ ಯಾವತ್ತೂ ಲೇಖನಗಳ ಅನುಕ್ರಮಣಿಕೆಗಳನ್ನು ನಾನು ಸಿದ್ಧಮಾಡಿದ್ದು, ಪ್ರಸಿದ್ಧಿಸಿದರೆ ಅದು ಒಂದು ದೊಡ್ಡ ಗ್ರಂಥವೇ ಆಗುವುದು. ಅದರಲ್ಲಿ ಎಲ್ಲ ಲೇಖನಗಳು ಬರಹಗಾರರ ಹೆಸರುಗಳೂ ಇವೆ. ಅದರಿಂದ ಸಂಶೋಧಕರಿಗೆ ಬಹಳ ಸಹಾಯವಾಗಬಹುದಾಗಿದೆ. ಆದರೆ ಅಂಥ ಕಾಲವು ವೀರಶೈವ ಸಮಾಜದಲ್ಲಿ ಇನ್ನೂ ಪ್ರಾಪ್ತವಾಗಿಲ್ಲ. ಪತ್ರಿಕೆಯ ಹಳೇ ಸಂಪುಟಗಳನ್ನು ಕಾದಿಟ್ಟುಕೊಂಡವರು ಕೆಲವರು ಮಾತ್ರ ಇದ್ದಾರೆ, ಆದ್ದರಿಂದ ಇಂಥ ಗ್ರಂಥವನ್ನು ಪ್ರಸಿದ್ಧಿಸುವುದರಿಂದ ಬಹಳ ಜನರಿಗೆ ಸದ್ಯಕ್ಕೆ ಪ್ರಯೋಜನವಾಗಲಾರದೆಂದು ನಾನು ಭಾವಿಸಿದ್ದೇನೆ.*

(ಗುಂಜಾಳ (ಎಸ್. ಆರ್.) ಡಾ. ಫ.ಗು. ಹಳಕಟ್ಟಿಯವರ ಶಿವಾನುಭವ ಪತ್ರಿಕೆಯ ಲೇಖನ ಸೂಚಿ (೧೯೨೬-೧೯೬೧) ಸಿದ್ಧಪಡಿಸಿದ್ದು ಬಿ. ಎಲ್. ಡಿ. ಇ. ಸಂಸ್ಥೆ, ವಿಜಾಪುರ ೨೦೦೨ರಲ್ಲಿ ಪ್ರಕಟಿಸಿ ಡಾ. ಹಳಕಟ್ಟಿಯವರ ಆಸೆಯನ್ನು ಪೂರೈಸಿದೆ.

ನಾನು ಪತ್ರಿಕೆಯಲ್ಲಿ ಲೇಖಗಳನ್ನು ಪ್ರಸಿದ್ಧಿಸುವಲ್ಲಿ ಸಂಶೋಧನಾತ್ಮಕವಾಗಿ ಬರೆದವುಗಳಿಗೆ ಪ್ರಥಮಸ್ಥಾನವನ್ನು ಕೊಡುತ್ತ ಬಂದಿದ್ದೇನೆ. ಕೇವಲ ಕಥೆ, ವಿನೋಧ, ನಾಟಕ, ಕವಿತೆಗಳಿಗೆ ಮಹತ್ವದ ಸ್ಥಾನವನ್ನು ಕೊಟ್ಟಿರುವುದಿಲ್ಲ.

ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳಲ್ಲಿ ಕೆಲವು ವರ್ಗಗಳನ್ನು ನಾನು ಮಾಡಬಹುದಾಗಿದೆ. ಅವುಗಳನ್ನು ನಾನು ಇಲ್ಲಿ ಸ್ಥೂಲವಗಿಯೂ ಬಹು ಸಂಕ್ಷಿಪ್ತವಾಗಿಯೂ ವಿವರಿಸಲು ಯತ್ನಿಸುತ್ತೇನೆ. ಇದರಿಂದ ಶಿವಾನುಭವ ಪತ್ರಿಕೆಯು ಯಾವ ಯಾವ ಕಾರ್ಯಗಳನ್ನು ಹೇಗೆ ಮಾಡಿದೆಂಬುದರ ಕಲ್ಪನೆಯು ವಾಚಕರಿಗೆ ಉಂಟಾಗಬಹುದೆಂದು ಭಾವಿಸಿದ್ದೇನೆ.

**ಪತ್ರಿಕೆಯ ವಿಷಯ ವೈವಿಧ್ಯ :**

ಶಿವಾನುಭವ ಪತ್ರಿಕೆಯ ಮೂಲಕ ಜರುಗಿದ ಕಾರ್ಯಗಳಲ್ಲಿ ಗ್ರಂಥಗಳ ಸಂಶೋಧನೆ ಮತ್ತು ಗ್ರಂಥಗಳ ಪ್ರಕಟನೆ ಇವೇ ಬಹು ಮಹತ್ವದವಾಗಿರುತ್ತವೆ. ಇವುಗಳ ವಿವರಣೆಗಳನ್ನು ನಾನು ಹಿಂದೆಯೇ ಮಾಡಿದ್ದೇನೆ. ಆದರೆ ಇದರಲ್ಲಿ ನಾನು ಕರ್ನಾಟಕದಲ್ಲಿ ಉಂಟಾದ ವಾಙ್ಮಯ ಪ್ರಯತ್ನಗಳಿಗೆ ಮಾತ್ರ ಮಹತ್ವದ ಸ್ಥಾನವನ್ನು ಕೊಟ್ಟಿದ್ದೇನೆ. ಆಂಧ್ರ, ದ್ರಾವಿಡ ಭಾಷೆಗಳಲ್ಲಿ ಮತ್ತು ಸಂಸ್ಕೃತದಲ್ಲಿ ಆದ ಪ್ರಯತ್ನಗಳಿಗೆ ನಾನು ವಿಶೇಷ ಲಕ್ಷವನ್ನು ಪೂರೈಸಿರುವುದಿಲ್ಲ. ಬಸವೇಶ್ವರನ ಕಾಲದಲ್ಲಿ ಕರ್ನಾಟಕದಲ್ಲಿ ಒಂದು ಅದ್ಭುತ ಸಾಮಾಜಿಕ ಮತ್ತು ವಾಙ್ಮಯಾತ್ಮಕ ಕ್ರಾಂತಿಯುಂಟಾದ್ದರಿಂದಲೂ ಅದರ ಪರಿಚಯವು ನಾಡಿನಲ್ಲಿ ಇಲ್ಲದ್ದರಿಂದಲೂ ಈ ಕಾರ್ಯಕ್ಕೆ ನಾನು ಮಹತ್ವದ ಸ್ಥಾನವನ್ನು ಕೊಡುತ್ತ ಬಂದಿದ್ದೇನೆ.

**ಶಾಸನ ಸಂಶೋಧನೆ :** ಹೋದ ಸಾವಿರ ವರ್ಷಗಳಲ್ಲಿ ವೀರಶೈವ ಐತಿಹಾಸಿಕದಲ್ಲಿ ಯಾವ ಘಟನೆಗಳುಂಟಾದವೆಂಬುದನ್ನು ತಿಳಿಯುವುದು ಬಹಳ ಮಹತ್ವದ್ದಾಗಿದೆ. ಭಾರತದಲ್ಲಿ ಗತಕಾಲದ ಇತಿಹಾಸವನ್ನು ಬರೆದಿಡುವ ಪದ್ಧತಿಯು ಇರುವುದಿಲ್ಲ. ಆದ್ದರಿಂದ ಭಾರತ ಇತಿಹಾಸಜ್ಞರು

---

* ಗುಂಜಾಳ(ಎಸ್. ಆರ್) ಡಾ. ಫ.ಗು. ಹಳಕಟ್ಟಿಯವರ ಶಿವಾನುಭವ ಪತ್ರಿಕೆಯ ಲೇಖನಸೂಚಿ(೧೯೨೬-೧೯೬೧)ಸಿದ್ಧಪಡಿಸಿದ್ದು ಬಿ.ಎಲ್. ಡಿ.ಇ. ಸಂಸ್ಥೆ, ವಿಜಾಪುರ ೨೦೦೨ರಲ್ಲಿ ಪ್ರಕಟಿಸಿ ಡಾ. ಹಳಕಟ್ಟಿಯವರ ಆಸೆಯನ್ನು ಪೂರೈಸಿದೆ.

ಶಿಲಾಶಾಸನಗಳ ಮೇಲೆ ಮುಖ್ಯವಾಗಿ ಅವಲಂಬಿಸಬೇಕಾಗುತ್ತದೆ. ಆದ್ದರಿಂದ ವೀರಶೈವ ಪುರಾತನ ಇತಿಹಾಸದ ವಿಷಯವಾಗಿ ಇಂಥ ಶಾಸನಗಳನ್ನು ನಾವು ಅವಲಂಬಿಸಿ ಅನೇಕ ಲೇಖನಗಳನ್ನು ಇದರಲ್ಲಿ ಪ್ರಸಿದ್ಧಿಸಿದ್ದೇವೆ. ಶರಣ ಅಮುಗಿದೇವಯ್ಯನ ಶಿಲಾಶಾಸನವು ಭೀಮಾ ತೀರದಲ್ಲಿರುವ ಪುಳಜ ಗ್ರಾಮದಲ್ಲಿದ್ದು ಅದನ್ನು ನಾವು ಈ ಪತ್ರಿಕೆಯಲ್ಲಿ ಪ್ರಸಿದ್ಧಿಸಿದ್ದೇವೆ. ಹುಕ್ಕೇರಿ ಗ್ರಾಮಕ್ಕೆ ಸಮೀಪವಾಗಿರುವ ಅರ್ಜುನವಾಡದಲ್ಲಿ ದೊರೆತ ಶಾಸನದಲ್ಲಿ ಬಸವೇಶ್ವರನ ಮತ್ತು ಅವನು ಜನ್ಮ ತಾಳಿದ ಗ್ರಾಮದ ಮತ್ತು ಅವನ ತಂದೆಯ ಉಲ್ಲೇಖಗಳಿರುತ್ತವೆ. ಇದಲ್ಲದೆ ಅವನ ಅಣ್ಣನ ವಂಶದವರ ಉಲ್ಲೇಖಗಳೂ ಅದರಲ್ಲಿ ಇವೆ. ಈ ಶಿಲಾಶಾಸನವನ್ನು ಸಮಗ್ರವಾಗಿ ನಾವು ಈ ಪತ್ರಿಕೆಯಲ್ಲಿ ಪ್ರಸಿದ್ಧಿಸಿದ್ದೇವೆ. ಏಕಾಂತ ರಾಮಯ್ಯನ ಅಬ್ಬಲೂರು ಗ್ರಾಮದ ಶಿಲಾಶಾಸನ, ಸೊನ್ನಲಿಗೆಯ ಕಪಿಲಸಿದ್ಧ ದೇವಾಲಯವನ್ನು ಉಲ್ಲೇಖಿಸುವ ಸಂಗೂರು ಶಿಲಾಶಾಸನ, ಚೌಡದಾನಪುರದಲ್ಲಿ ದೊರೆತ ಅನೇಕ ಶಿಲಾಶಾಸನಗಳನ್ನು, ಶಿವಮೊಗ್ಗ ಜಿಲ್ಲೆಯ ಕೋಳಿಸಾಲೆ ಎಂಬ ಗ್ರಾಮದಲ್ಲಿಯ ಸಿದ್ಧರಾಮನ ಶಿಲಾಶಾಸನ – ಇವುಗಳು ಈ ಪತ್ರಿಕೆಯಲ್ಲಿ ಪ್ರಸಿದ್ಧವಾಗಿರುತ್ತವೆ. ಡಾ. ಎಸ್. ಸಿ. ನಂದಿಮಠ ಎಮ್. ಎ. (ಪಿಎಚ್. ಡಿ.) ಇವರು ತಮಗೆ ಲಂಡನ್ ಮ್ಯೂಜಿಯಮ್‌ದಲ್ಲಿ ದೊರೆತ ರೇವಣ ಸಿದ್ದೇಶ್ವರನ ಸಿರಿವಾಳ ಶಾಸನ, ದೇವರ ದಾಸಿಮಯ್ಯನ ಉಲ್ಲೇಖವಿದ್ದ ಗೊಬ್ಬೂರು ಶಿಲಾಶಾಸನ, ಈ ಎಲ್ಲ ಶಾಸನಗಳ ಮೂಲಕ ೧೨ನೆಯ ಮತ್ತು ೧೩ನೆಯ ಶತಮಾನಗಳಲ್ಲಿ ವೀರಶೈವ ಸಮಾಜದ ಪರಿಸ್ಥಿತಿಯೂ ಹೇಗಿತ್ತೆಂಬುದನ್ನು ನಾವು ಕಂಡು ಹಿಡಿಯಬಹುದಾಗಿದೆ.

**ರಾಜಮನೆತನಗಳ ಸಂಶೋಧನೆ :** ಮಧ್ಯಯುಗದಲ್ಲಿ ವಿಜಾಪುರ, ಕಲಬುರ್ಗಿ, ಬೀದರ ಜಿಲ್ಲೆಗಳಲ್ಲಿ ಮುಸಲ್ಮಾನರ ರಾಜ್ಯಗಳು ಉಂಟಾದವು. ದಕ್ಷಿಣದಲ್ಲಿ ವಿಜಯನಗರ, ಕೆಳದಿ, ಸ್ವಾದಿ, ಬೀಳಗಿ, ಕೊಡಗು, ಮೈಸೂರು ರಾಜ್ಯಗಳು ಉದ್ಭವಿಸಿದವು. ಅಲ್ಲದೆ ಈ ಕಾಲದಲ್ಲಿ ಅನೇಕ ದೇಸಗತಿಗಳೂ ಸಂಸ್ಥಾನಗಳೂ ಉಂಟಾದವು. ಆದರೆ ಈ ಮನೆತನಗಳಲ್ಲಿರುವ ಮೂಲ ಕಾಗದ ಪತ್ರಗಳು ನಮಗೆ ಉಪಲಬ್ಧವಾಗಿರುವುದಿಲ್ಲ. ಆದರೂ ಈ ಮನೆತನಗಳ ಬಗ್ಗೆ ನಮಗೆ ದೊರೆತ ಐತಿಹಾಸಿಕ ವಿವರಣೆಗಳನ್ನು ನಾವು ಈ ಪತ್ರಿಕೆಯಲ್ಲಿ ಸವಿಸ್ತಾರವಾಗಿ ಕಾಲ ಕಾಲಕ್ಕೆ ನಿರೂಪಿಸುತ್ತ ಬಂದಿದ್ದೇವೆ. ಅವು ಯಾವುವೆಂದರೆ :

ಬೆಳಗಾವಿ ಜಿಲ್ಹಾ ಕೊಕಟನೂರು ದೇಸಗತಿಯು ಸಿರಸಂಗಿ ದೇಸಗತಿಗೆ ಸಂಬಂಧಪಟ್ಟಿದೆ. ಇದರ ಮನೆತನದ ಇತಿಹಾಸವು ನಮಗೆ ಸಮಗ್ರವಾಗಿ ದೊರೆತದ್ದರಿಂದ ಅದನ್ನು ಈ ಪತ್ರಿಕೆಯಲ್ಲಿ ಪ್ರಸಿದ್ಧಿಸಿದ್ದೇವೆ. ಹಾಗಲವಾಡಿಯ ಗತಿಸಿದ ರಾಜರು ತಮ್ಮ ಮನೆತನದ ಕೈಬರಹದ ಇತಿಹಾಸವನ್ನು ನನಗೆ ಓದಿ ತೋರಿಸಿದ್ದನ್ನು ಈ ಪತ್ರಿಕೆಯಲ್ಲಿ ಅಚ್ಚು ಹಾಕಿದ್ದೇವೆ. ಬೀಳಗಿ ರಾಜರ ವಂಶಾವಳಿಯು ಕಾವ್ಯರೂಪದಲ್ಲಿದ್ದು ಅದನ್ನು ನಾವು ಸಮಗ್ರ ಅಚ್ಚು ಹಾಕಿಸಿದ್ದೇವೆ. ಕೊಡಗು ರಾಜರ ಮೂಲ ಇತಿಹಾಸವನ್ನು ಸ್ವತಂತ್ರವಾಗಿ ಪ್ರಕಟಿಸಿದ್ದೇವೆ. ಪೋರ್ತುಗೀಸ ಪ್ರವಾಸಿಗರು ಸ್ವಾದಿ ಮತ್ತು ಕೆಳದಿ ರಾಜರ ಸೀಮೆಗಳಲ್ಲಿ ಪ್ರವಾಸ ಮಾಡಿದಾಗ್ಗೆ ಅವರು ತಾವು ಕಂಡ ವಿಷಯಗಳನ್ನು ಬರೆದಿಟ್ಟಿದ್ದಾರೆ. ಅವುಗಳ ವಿವರಣೆಗಳು ಗ್ಯಾಝೇಟಿಯರಗಳಲ್ಲಿವೆ. ಇವುಗಳಲ್ಲದೆ ವಿಲ್ಕ್ಸ ಸಾಹೇಬರು ಬರೆದ ಇತಿಹಾಸ ಮತ್ತು ಬುಕನಾನ ಎಂಬ ಇಂಗ್ಲೀಷ ಅಧಿಕಾರಿಯು ಬರೆದ ವಿವರಣೆ ಇವುಗಳ ಸಹಾಯದಿಂದ ಕೆಳದಿ, ಸ್ವಾದಿ ಮತ್ತು ಕೊಡಗು ರಾಜರುಗಳ ಬಗ್ಗೆ ಅನೇಕ ಲೇಖನಗಳನ್ನು ಈ ಪತ್ರಿಕೆಯಲ್ಲಿ ಪ್ರಸಿದ್ಧಿಸಿದ್ದೇವೆ.

ಕೆಳದಿಯ ಚೆನ್ನಮ್ಮ ರಾಣಿ, ಬಿದನೂರಿನ ಶಿವಪ್ಪ ನಾಯಕ ಇವರಲ್ಲದೆ ಸ್ವಾದಿಯ ಸದಾಶಿವರಾಯ, ಬಸವರಾಜ ಇವರ ಚರಿತ್ರೆಗಳು ಮತ್ತು ಕೊಡಗಿನ ವೀರರಾಜೇಂದ್ರ ಇವರ ಚರಿತ್ರೆಯು ಈ ಪತ್ರಿಕೆಯಲ್ಲಿ ಬಂದಿರುತ್ತದೆ. ಬೆಳವಡಿ ಮಲ್ಲಮ್ಮನು ಯಾವ ಮನೆತನದವಳು? ಮತ್ತು ಯಾವ ಗ್ರಾಮದವಳು? ಎಂಬುದರ ಬಗ್ಗೆ ಒಂದು ಕಾಲದಲ್ಲಿ ಬಹಳ ಮತ ಭೇದವಿತ್ತು. ಮಹಾರಾಷ್ಟ್ರ ಇತಿಹಾಸಕಾರರು ಅವಳು ಪ್ರಭು ಅಥವಾ ಕೊಂಕಣಸ್ಥ ಬ್ರಾಹ್ಮಣಳು ಎಂದು ತಿಳಿದು ಆಕೆಯು ಮಹಾರಾಷ್ಟ್ರೀಗಳೆಂದು ವಾದಿಸುತ್ತಿದ್ದರು. ಹಿಂದಿನ ಕಾಲದ ಮುಸಲ್ಮಾನ ಇತಿಹಾಸಕಾರರು ಸಹ ಅವಳ ವಿವರಣೆಗಳನ್ನು ಭಿನ್ನ ಭಿನ್ನವಾಗಿ ತಮ್ಮ ಇತಿಹಾಸಗಳಲ್ಲಿ ಕೊಡುತ್ತ ಬಂದಿದ್ದಾರೆ. ಆದರೆ ಈ ಬಗ್ಗೆ ಬೈಲಹೊಂಗಲದ ಕೈ. ವಾ. ಮಲ್ಲಿನಾಯಕ ಪಾಟೀಲ ಇವರ ಪ್ರಯತ್ನಗಳ ಮೂಲಕ ಆಕೆಯ ಉಲ್ಲೇಖಗಳಿದ್ದ ಮೂಲ ಕಾಗದಪತ್ರಗಳು ನಮಗೆ ದೊರೆತದ್ದರಿಂದ ಮತ್ತು ಇತ್ತೀಚೆಗೆ ಪ್ರಸಿದ್ಧವಾದ ಈಸ್ಟ ಇಂಡಿಯಾ ಕಂಪನಿಯ ಕಾಗದ ಪತ್ರಗಳ ಮೇಲಿಂದ ಇವಳು ಸಂಪಗಾಂವ ತಾಲೂಕಿನಲ್ಲಿರುವ ಬೆಳವಡಿ ಗ್ರಾಮದಲ್ಲಿದ್ದ ವೀರಶೈವ ದೇಸಗತಿಯವಳೆಂದು ಕಂಡು ಬಂದಿತು. ಆದ್ದರಿಂದ ಈಕೆಯ ಸಮಗ್ರ ಚರಿತ್ರೆಯನ್ನು ನಾನು ಮೊದಲು ಶ್ರೀಯುತ ಆಲೂರ ವೆಂಕಟರಾಯರ ಸೂಚನೆಯ ಮೇರೆಗೆ ಜಯ ಕರ್ನಾಟಕ ಪತ್ರಿಕೆಯಲ್ಲಿ ಪ್ರಸಿದ್ಧಿಸಿದೆನು. ಆಮೇಲೆ ಅದನ್ನೇ ಮುಂದೆ ಶಿವಾನುಭವ ಪತ್ರಿಕೆಯಲ್ಲಿ ಪ್ರಕಟಮಾಡಿದ್ದೇನೆ. ಶ್ರೀಯುತ ಕಲ್ಮೇಶ್ವರ ಶೆಟ್ಟಿ ಮು. ಬೈಲಹೊಂಗಲ ಇವರು ಕಿತ್ತೂರು ರಾಜರ ಸಹಾಯದಿಂದ ವೀರಶೈವ ರಾಜಮನೆತನಗಳ, ಸಂಸ್ಥಾನಗಳ ಮತ್ತು ದೇಸಗತಿಗಳ ಇತಿಹಾಸಗಳು ವೀರಪ್ಪ ಈ ಮಂತ್ರಿಗಳು ಬಹು ಪ್ರಸಿದ್ಧರಾಗಿದ್ದಾರೆ. ಇವರ ಚರಿತ್ರೆಗಳನ್ನು ಶ್ರೀಯುತ ಕೃಷ್ಣರಾವ ಕಪಟ್ರಾಳ ಮು. ಕಲಬುರ್ಗಿ ಇವರು ಪತ್ರಿಕೆಯಲ್ಲಿ ಪ್ರಸಿದ್ಧಿಸಿದ್ಧಾರೆ. ಈ ಪ್ರಕಾರ ವೀರಶೈವ ಇತಿಹಾಸದ ಮೇಲೆ ಮಹತ್ವದ ಪ್ರಕಾಶವನ್ನು ಕೆಡಹುವಂತಹ ಅನೇಕ ಲೇಖನಗಳು ಈ ಪತ್ರಿಕೆಯಲ್ಲಿ ಕಾಲ ಕಾಲಕ್ಕೆ ಪ್ರಸಿದ್ಧವಾಗಿರುತ್ತವೆ.

**ಮಠಗಳ ಮಹಾತ್ಮರ ಚರಿತ್ರೆ :** ವೀರಶೈವ ಸಮಾಜದಲ್ಲಿ ಮಠಾಧಿಕಾರಿಗಳೂ ಸಾಧು ಸತ್ಪುರುಷರೂ ಅನೇಕರಾಗಿದ್ದು, ಅವರು ಸಮಾಜೋದ್ಧಾರ ಕಾರ್ಯಗಳಲ್ಲಿ ಬಹು ಮಹತ್ವದ ಅಂಗವನ್ನು ವಹಿಸುತ್ತ ಬಂದಿದ್ದಾರೆ. ಹೀಗೆ ಕಾರ್ಯ ಮಾಡಿದಂಥ ಅನೇಕ ಮಠಾಧೀಶರ ಮಠಗಳ ಮತ್ತು ಸಾಧು ಸತ್ಪುರುಷರ ಚರಿತ್ರೆಗಳನ್ನು ಶಿವಾನುಭವ ಪತ್ರಿಕೆಯಲ್ಲಿ ಪ್ರಸಿದ್ಧಿಸುತ್ತ ಬಂದಿದ್ದೇವೆ. ವಿಜಯನಗರ ರಾಜ್ಯಕ್ಕಿಂತ ಮೊದಲಿದ್ದ ಮಠಗಳ ಮತ್ತು ಮಠಾಧಿಕಾರಿಗಳ ಚರಿತ್ರೆಗಳು ಇನ್ನೂ ಸಾಕಷ್ಟು ಸಂಶೋಧಿಸಲ್ಪಟ್ಟಿಲ್ಲ. ನಾವು ಪ್ರಕಟಿಸಿದ ಶಿವಶರಣರ ಚರಿತ್ರೆಗಳಲ್ಲಿ ಮತ್ತು ಕಾಲಜ್ಞಾನ ವಚನಗಳಲ್ಲಿ ಮತ್ತು ನಿರಂಜನವಂಶ ರತ್ನಾಕರದಂಥ ಗ್ರಂಥಗಳಲ್ಲಿ ಅವರ ವಿವರಣೆಗಳು ಕೆಲ ಮಟ್ಟಿಗೆ ಮಾತ್ರ ಉಪಲಭ್ಧವಿರುತ್ತವೆ. ಆದರೆ ವಿಜಯನಗರ ರಾಜರ ಮತ್ತು ವಿಜಾಪುರ ಬಾದಶಹರ ಕಾಲದಲ್ಲಿ ಮಹತ್ವದ ಮಠಗಳುಂಟಾಗಿದ್ದು, ಅವುಗಳಲ್ಲಿ ಆಗಿ ಹೋದ ಅನೇಕ ಮಠಾಧೀಶರ ಚರಿತ್ರೆಗಳನ್ನು ಪತ್ರಿಕೆಯಲ್ಲಿ ಪ್ರಕಟ ಮಾಡುತ್ತ ಬಂದಿದ್ದೇವೆ. ಸಾರಂಗದೇವ ಅವನ ತಮ್ಮ ಶಿವಸಂಗಪ್ಪಯ್ಯ ಮತ್ತು ಈತನ ಮಗ ಸಣ್ಣ ಸಾರಂಗದೇವ ಇವರು ಧರ್ಮಜಾಗ್ರತಿಯ ಮಹತ್ವದ ಕಾರ್ಯಗಳನ್ನು ಮಾಡಿದ್ದಾರೆ. ಅವುಗಳ ವಿವರಣೆಗಳುಳ್ಳ ಮೂಲ ಲೇಖನಗಳು ಕಪ್ಪಡಿ ಸಂಗಮೇಶ್ವರ ಸ್ಥಾನದಲ್ಲಿದ್ದ ಅವರ ಮಠದ ಅಧಿಕಾರಿಗಳ ಕಡೆಗೆ ಈಗಲೂ ಇರುತ್ತವೆ. ಅದರಂತೆ ಗುಳೇದಗುಡ್ಡ ಮಠದಲ್ಲಿಯೂ ಇವು ಇವೆ. ಅವುಗಳ ಆಧಾರದ ಮೇಲಿಂದ ಅವರ ಚರಿತ್ರೆಗಳನ್ನು ಪತ್ರಿಕೆಯಲ್ಲಿ ಪ್ರಸಿದ್ಧಿಸಿದ್ದೇನೆ.

ಅದರಂತೆ ಪಂಚವಣ್ಣಿಗೆಯ ಹೂಲಿಯ ಮಠ, ಹುನಗುಂದ ತಾಲೂಕಿನಲ್ಲಿಯ ಹಡಗಲಿ ಮಠ, ಬೀಳಗಿ ಪೇಠಾ ಗಲಗಲಿಯ ಪುಣೇದ ಮಠ, ಬೆಳಗಾವಿ ಜಿಲ್ಲೆಯಲ್ಲಿಯ ದುರದುಂಡೇಶಮಠ ಇವುಗಳ ವಿವರಣೆಗಳು ಪತ್ರಿಕೆಯಲ್ಲಿ ಬಂದಿರುತ್ತವೆ. ಹಾಗೇಯೇ ಮಲ್ಲೇನಹಳ್ಳಿ ಚೆನ್ನಬಸವದೇವರು, ಸರ್ಪಭೂಷಣ ಸ್ವಾಮಿಗಳು, ನಾಗಭೂಷಣ ಘನಮಠದಾರ್ಯರು, ಸೋಮೇಕಟ್ಟೆಯ ಕರಿವೃಷಭ ಸ್ವಾಮಿಗಳು, ವೈರಾಗ್ಯ ಚೆನ್ನಬಸವ ಸ್ವಾಮಿಗಳು, ಕಡಕೋಳ ಮಡಿವಾಳಪ್ಪನವರು, ಗುರುಪಾದ ಶಿವಯೋಗಿಗಳು ಬಬಲೇಶ್ವರ, ತುಮಕೂರು ನಂಜುಂಡ ಶಿವಯೋಗಿಗಳು, ಶ್ರೀ ನಯನಸ್ವಾಮಿಗಳು, ಮಲೆಯ ಮಹದೇಶ್ವರರು, ನೀಲಗುಂದದ ಶಿವಪ್ಪಯ್ಯನವರು, ಶ್ರೀ ಜಗದ್ಗುರು ನಿಡುಮಾಮಿಡಿ ಮಠಾಧೀಶ್ವರರು, ರಾಚವಟ್ಟಿ ಮಠಾಧೀಶ್ವರರು, ಮೈಲಾರ ಬಸಪ್ಪನವರು–ಹೀಗೆ ಅನೇಕ ಮಹತ್ವಿಕರಾದ ಶಿವಯೋಗೀಶ್ವರರ, ಮಠಾಧಿಕಾರಿಗಳ ಮತ್ತು ಮಠಗಳ ವೃತ್ತಾಂತಗಳು ಪತ್ರಿಕೆಯಲ್ಲಿ ಪ್ರಕಟವಾಗಿರುತ್ತವೆ. ಅವುಗಳೆಲ್ಲವು ಮೂಲ ಗ್ರಂಥಗಳ ಆಧಾರಗಳಿಂದ ಅಥವಾ ಸ್ಥಾನಿಕ ಸಂಶೋಧನೆಗಳ ಸಹಾಯದಿಂದ ಅನೇಕ ಲೇಖಕರು ಬರೆದವುಗಳಾಗಿರುತ್ತವೆ. ಇಂಥ ಧಾರ್ಮಿಕ ಪುರುಷರು ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಕಾಲ ಕಾಲಕ್ಕೆ ಉತ್ಪನ್ನರಾಗಿ, ವೀರಶೈವ ಸಮಾಜಕ್ಕೆ ಮಹತ್ವವನ್ನು ತಂದು ಕೊಟ್ಟಿದ್ದಾರೆ. ಅಂಥವರ ಚರಿತ್ರೆಗಳನ್ನು ವೀರಶೈವರು ಅರಿಯುವುದು ಅವಶ್ಯವೆಂದು ತೋರಿದ್ದರಿಂದ ಇವುಗಳನ್ನು ನಾನು ಪತ್ರಿಕೆಯಲ್ಲಿ ಸಂಗ್ರಹಿಸಿದ್ದೇನೆ.

**ಶಿವಶರಣ ಚರಿತ್ರೆ :** ಶಿವಶರಣರ ಚರಿತ್ರೆಗಳ ಮೂರು ವಿಭಾಗಗಳನ್ನು ನಾನು ಈ ವರೆಗೆ ಪ್ರಕಟಿಸಿದ್ದು ಇನ್ನು ಎರಡು ಭಾಗಗಳು ಪ್ರಕಟನೆಗೆ ಸಿದ್ಧವಾಗಿರುತ್ತವೆ. ಈ ಕಡೆಯವುಗಳಲ್ಲಿ ಬಸವೇಶ್ವರನ ಸಮಕಾಲೀನರ ಚರಿತ್ರೆಗಳು ಮುಖ್ಯವಾಗಿ ಕೊಡಲ್ಪಡುವುವು. ಐತಿಹಾಸಿಕ ದೃಷ್ಟಿಯಿಂದ ನಂಬಲರ್ಹವಾದ ಸಂಗತಿಗಳನ್ನು ಆರಿಸಿ ಈ ಎಲ್ಲ ಭಾಗಗಳಲ್ಲಿ ಸಂಗ್ರಹಿಸಲು ಶಕ್ಯವಿದ್ದಷ್ಟರಮಟ್ಟಿಗೆ ನಾನು ಪ್ರಯತ್ನಿಸಿದ್ದೇನೆ. ಅವುಗಳನ್ನು ಬರೆಯುವಲ್ಲಿ ಸ್ಥಾನಿಕ ಐತಿಹ್ಯಗಳನ್ನೂ ಕಾಗದ ಪತ್ರಗಳನ್ನೂ ಅವಲಂಬಿಸಿ ಬರೆದಿದ್ದೇನೆ. ಬಸವೇಶ್ವರ ಕಾಲದ ಮತ್ತು ಅವನಕ್ಕಿಂತ ಪೂರ್ವದಲ್ಲಿದ್ದ ಜಂಗಮ ವರ್ಗದವರು ವೀರಶೈವಧರ್ಮದ ಪ್ರಸಾರ ಕಾರ್ಯದಲ್ಲಿ ಮಹತ್ವದ ಕಾರ್ಯಗಳನ್ನು ಮಾಡಿದ್ದಾರೆ. ಇವುಗಳ ವಿವರಗಳನ್ನು ನಾನು ಶಿವಶರಣರ ಚರಿತ್ರೆಗಳು ಮೂರನೆಯ ಭಾಗ ಇದರ ಅಂತ್ಯದಲ್ಲಿ ಕೊಟ್ಟಿದ್ದೇನೆ.

ಬಸವೇಶ್ವರನ ಕಾಲ ವಿಚಾರದ ಬಗ್ಗೆ ಮತ್ತು ಅವನ ಚರಿತ್ರೆಯ ಬಗ್ಗೆ ನಾನು ೨೬ ಲೇಖನಗಳನ್ನು ಬರೆದು ಪತ್ರಿಕೆಯಲ್ಲಿ ಪ್ರಸಿದ್ಧಿಸಿದ್ದೇನೆ. ಇದಲ್ಲದೆ ಅವನ ವಿಚಾರಗಳು, ಅವನು ಮಾಡಿದ ಸಮಾಜ ಸುಧಾರಣೆಯ ಕಾರ್ಯಗಳು, ಅವನ ತತ್ವಬೋಧನೆಗಳು–ಇವುಗಳ ವಿಷಯವಾಗಿ ಬಹು ಜನರು ಲೇಖನಗಳನ್ನು ಬರೆದು ಯಾವಾಗಲೂ ಪತ್ರಿಕೆಯಲ್ಲಿ ಪ್ರಕಟಿಸುತ್ತ ಬಂದಿದ್ದಾರೆ. ಅವುಗಳನ್ನೆಲ್ಲ ಇಲ್ಲಿ ವಿವರಿಸುವುದು ಅಶಕ್ಯವೇ ಸರಿ. ಬಸವೇಶ್ವರನು ಮಾಡಿದ ಕ್ರಾಂತಿಕಾರಕ ಕಾರ್ಯಗಳನ್ನು ವಿವರಣೆ ಮಾಡಿದಲ್ಲಿ ಅವರ ಬಗ್ಗೆ ಒಂದು ದೊಡ್ಡ ಗ್ರಂಥವೇ ಆಗುವುದು. ಇಷ್ಟೂ ಲೇಖನ ಸಾಮಗ್ರಿಗಳನ್ನು ಶಿವಾನುಭವ ಪತ್ರಿಕೆಯಲ್ಲಿ ಕಾಣಬಹುದೆಂದು ಹೇಳಿದಲ್ಲಿ ಅದು ಅತಿಶಯೋಕ್ತಿಯಾಗಲಾರದೆಂದು ನಾನು ಭಾವಿಸಿದ್ದೇನೆ.

**ಪುಣ್ಯಕ್ಷೇತ್ರಗಳ ಚರಿತ್ರೆ :** ವೀರಶೈವ ಸಮಾಜದಲ್ಲಿ ಅನೇಕ ಧಾರ್ಮಿಕ ಮತ್ತು ರಾಜಕೀಯ ಪುರುಷರು ಆಗಿ ಹೋಗಿರುವುದರಿಂದ ಅವರ ಹೆಸರಿನ ಪುಣ್ಯ ಸ್ಥಳಗಳು ಕರ್ನಾಟಕ ಮಾತ್ರವಲ್ಲ ಅದರ ಸುತ್ತಲಿನ ಪ್ರದೇಶಗಳಲ್ಲಿ ಸಹ ಉಂಟಾಗಿರುತ್ತವೆ. ಅನೇಕ ಲೇಖಕರು ಅಂಥ ಸ್ಥಳಗಳನ್ನು ಸಂದರ್ಶಿಸಿ ಅವುಗಳ ವೃತ್ತಾಂತಗಳನ್ನು ಶಿವಾನುಭವ ಪತ್ರಿಕೆಯಲ್ಲಿ ಪ್ರಕಟಿಸಿರುತ್ತಾರೆ. ಶ್ರೀ ಬಿ. ಶಿವಮೂರ್ತಿಶಾಸ್ತ್ರಿಗಳು ರೇವಣ ಸಿದ್ಧೇಶ್ವರನ ಸ್ಥಾನಗಳನ್ನು ನೋಡಿ ಅನೇಕ ಮಹತ್ವದ ಲೇಖನಗಳನ್ನು ಬರೆದಿದ್ದಾರೆ. ಅವು ಮಂಗಳವಾಡ, ಮಾಸನೂರು, ಸಿದ್ದನಕೆರೆ, ಕ್ಲೋಜಪೇಟೆ ಸಿದ್ದಗಿರಿ ಮುಂತಾದವುಗಳು ಇರುತ್ತವೆ. ಶ್ರೀಯುತ ವೀರಭದ್ರಪ್ಪ ಹಾಲಭಾವಿಯವರು ಸಾತಾರಾ ಜಿಲ್ಲೆಯಲ್ಲಿರುವ ರೇವಣಸಿದ್ದನ ರೇಣಾವಿ ಕ್ಷೇತ್ರ, ಶಂಕರದಾಸಿಮಯ್ಯನ ಕೃಷ್ಣಾ ತೀರದಲ್ಲಿರುವ ನವಿಲಿ ಗ್ರಾಮದಲ್ಲಿರುವ ಜಡೆಶಂಕರ ದೇವಾಲಯ ಇವುಗಳ ವಿವರಣೆಗಳನ್ನು ಪತ್ರಿಕೆಯಲ್ಲಿ ಪ್ರಸಿದ್ಧಿಸಿದ್ದಾರೆ. ಶ್ರೀಯುತ ಗೊಲ್ಲಾಳ ಪೂಜಾರಿ ಇವರು ದೇವರ ದಾಸಿಮಯ್ಯನ ಗ್ರಾಮವಾದ ಮುದನೂರು ಮತ್ತು ಅದಕ್ಕೆ ಸಮೀಪವಿರುವ ಕೆಂಭಾವಿ, ಅಗ್ನಿ ಮುಂತಾದ ಸ್ಥಳಗಳನ್ನು ಸಂದರ್ಶಿಸಿ, ಲೇಖನಗಳನ್ನು ಬರೆದಿದ್ದಾರೆ. ಇದಲ್ಲದೆ ಪತ್ರಿಕೆಯ ಸಂಚಿಕೆಗಳಲ್ಲಿ ಹಾವಿನಾಳ, ಸೊನ್ನಲಿಗೆ, ಹಿಪ್ಪರಿಗೆ, ಶ್ರೀಶೈಲ, ಬಳ್ಳಿಗಾವಿ, ಉಡುತಡಿ, ಗುಬ್ಬಿ, ಏಕಾಂತದ ರಾಮಯ್ಯನ ಸ್ಥಾನವಾದ ಅಲಂದೆ ಅಲ್ಲದೆ ಪುಲಿಗೆರೆ, ಸುತ್ತೂರು, ಸಿದ್ಧಗಂಗ, ಎಡೂರು, ಕೂಡಲಸಂಗಮ, ಗೊಬ್ಬೂರು, ದ್ರಾಕ್ಷಾರಾಮ, ಮುತ್ತಿಗಿ, ಕೊಲ್ಲಾಪೂರ, ಪಾಲ್ಕುರಿಕೆ, ಕೇದಾರ, ಸೋಸಲೆ, ಗುಡ್ಡಾಪುರ ಮುಂತಾದ ಕ್ಷೇತ್ರಗಳ ಬಗ್ಗೆ ವರ್ಣನಾತ್ಮಕ ಲೇಖನಗಳು ಪತ್ರಿಕೆಯ ಅನೇಕ ಸಂಚಿಕೆಗಳಲ್ಲಿ ಬಂದಿರುತ್ತವೆ. ಹಾಗೆಯೇ ವೀರಶೈವ ರಾಜಮನೆತನಗಳು ರಾಜ್ಯವಾಳಿದ ಸ್ಥಳಗಳಾದ ಬೀಳಗಿ, ಸ್ವಾದಿ, ಇಕ್ಕೇರಿ, ಕೆಳದಿ, ಹಾಗಲವಾಡಿ ಈ ಮೊದಲಾದ ಗ್ರಾಮಗಳ ವರ್ಣನೆಗಳೂ ಬಂದಿರುತ್ತವೆ.

ವೀರಶೈವರು ಯಾವ ಕ್ಷೇತ್ರವನ್ನೂ ಮನ್ನಿಸಬಾರದೆಂದು ಪ್ರಮಥರ ಸ್ಪಷ್ಟ ಉಕ್ತಿಯಗಳು ಇರುತ್ತವೆ. ಅಂದರೆ ಕೇವಲ ಧರ್ಮ ದೃಷ್ಟಿಯಿಂದ ವಿಚಾರ ಮಾಡಲು, ಅಲ್ಲಿಯ ಮೂರ್ತಿಗಳು ವೀರಶೈವನು ಸಾಧಿಸಬೇಕಾದ ಇಷ್ಟ, ಪ್ರಾಣ, ಭಾವಲಿಂಗಗಳಿಗೆ ಪ್ರತಿಯಾಗಿರುವುವೆಂದು ಭಾವಿಸುವುದು ನಿಷಿದ್ಧವಾದುದೆಂಬುದರಲ್ಲಿ ಏನೂ ಸಂದೇಹವಿರಲಾರದು. ಆದರೆ ಈ ಸ್ಥಳಗಳಲ್ಲಿರುವ ಪ್ರತಿಮೆಗಳು ಮಹಾಪುರುಷರ ಸ್ಮಾರಕಗಳೆಂದು ತಿಳಿದು ಅವುಗಳಿಗೆ ಅವರು ಮನ್ನಣೆ ಕೊಡುವುದರಲ್ಲಿ ಯಾವ ದೋಷವೂ ಇರಲಾರದು. ಇಂಥ ಸ್ಮಾರಕಗಳ ಸಹಾಯದಿಂದಲೇ ನಾವು ವೀರಶೈವರಲ್ಲಿ ಆಗಿ ಹೋದ ಅನೇಕ ರಾಜಕೀಯ ಮತ್ತು ಧಾರ್ಮಿಕ ಮಹಾಪುರುಷರ ಚರಿತೆಗಳಲ್ಲಿರುವ ಮಹತ್ವದ ಅಂಶಗಳನ್ನು ಕಂಡು ಹಿಡಿಯುವುದು ಸಾಧ್ಯವಾಗಿರುತ್ತದೆ.

**ಆಧುನಿಕ ಗಣ್ಯರ ಪರಿಚಯ :** ಇಂಗ್ಲೀಷರು ನಮ್ಮ ದೇಶಕ್ಕೆ ಬಂದ ಬಳಿಕ ಹೊಸ ತರದ ಶಿಕ್ಷಣವು ಇಲ್ಲಿ ಪ್ರಾರಂಭವಾಗಲು, ಆಗ ಅನೇಕ ವೀರಶೈವ ಗ್ರಂಥಕಾರರು ಉದಯವಾದರು. ಅವರು ನಾಡಿನಲ್ಲಿ ಮಹತ್ವದ ಶೈಕ್ಷಣಿಕ ಕಾರ್ಯಗಳನ್ನು ಮಾಡಿದ್ಧಾರೆ. ಅಂಥವರ ಚರಿತ್ರೆಗಳು ಈ ಪತ್ರಿಕೆಯಲ್ಲಿ ಬಂದಿರುತ್ತವೆ. ಉತ್ತರ ಕರ್ನಾಟಕದಲ್ಲಿ ಚೆನಬಸಪ್ಪ ಧಾರವಾಡ ಇವರು ಪ್ರಸಿದ್ಧಿಗೆ ಬಂದರು. ಅವರ ಬೋಧಪ್ರದ ಚರಿತ್ರೆಯು ಪತ್ರಿಕೆಯಲ್ಲಿ ಬಂದಿದೆ. ಮೈಸೂರು ಪ್ರಾಂತದಲ್ಲಿ ಆಸ್ಥಾನ ವಿದ್ವಾನ್ ಬಸವಪ್ಪಶಾಸ್ತ್ರಿಗಳು, ಎನ್. ಆರ್. ಕರಿಬಸವಶಾಸ್ತ್ರಿಗಳು, ಪಿ. ಆರ್.

ಕರಿಬಸವಶಾಸ್ತ್ರಿಗಳು, ಮಾಗಡಿ ವೀರಪ್ಪಶಾಸ್ತ್ರಿಗಳು, ಕರಿಬಸವ ಕವೀಂದ್ರ ಶಾಬಕ, ವ್ಯಾಕರಣದ ಮಲ್ಲಪ್ಪನವರು, ಧಾರ್ಮಿಕ ಪುರುಷರಾದ ಕಡಕೋಳ ಮಡಿವಾಳಪ್ಪನವರು–ಈ ಮುಂತಾದವರ ಚರಿತ್ರೆಗಳನ್ನು ಪತ್ರಿಕೆಯಲ್ಲಿ ಪ್ರಸಿದ್ಧಿಸಿದ್ದೇವೆ. ಈ ಎಲ್ಲ ಮಹನೀಯರು ಕರ್ನಾಟಕ ಸಂಸ್ಕೃತಿಯನ್ನು ಜನತೆಯಲ್ಲಿ ಹೆಚ್ಚಿಸಿದವರು ಇದ್ದಾರೆ.

**ಹೊರನಾಡ ವೀರಶೈವ ವೃತ್ತಾಂತ :** ಈ ಪ್ರಾಂತಗಳಲ್ಲಿರುವ ಕೆಲವು ಸಮಾಜಗಳು ವೀರಶೈವ ಸಮಾಜಕ್ಕೆ ಅನುವರ್ತಿಸಿ ನಡೆಯುವಂಥವು ಇವೆ. ಇಂಥ ಸಮಾಜಗಳ ವೃತ್ತಾಂತಗಳು ಪತ್ರಿಕೆಯ ಸಂಚಿಕೆಗಳಲ್ಲಿ ಬಂದಿರುತ್ತವೆ. ಶ್ರೀ ಜಗದ್ಗುರು ನಿಡುಮಾಮಿಡಿ ಮಠದ ಮಹಾಸ್ವಾಮಿಗಳು ತಮಿಳು ದೇಶದಲ್ಲಿರುವ ಪಂಡಾರ, ವೇಳಾಳರು, ಜಂಗಾಲರು, ಚೇಣಿಗರು, ಒಕಲಿನ್ ಮೊದಲಾದವರ ವಿವರಣೆಗಳನ್ನು ಪ್ರಕಟಿಸಿದ್ದಾರೆ. ಕಾಶೀ ಕ್ಷೇತ್ರದಲ್ಲಿ ಪೀಠಾಧಿಕಾರಿಗಳಾಗಿ ಜಗದ್ಗುರು ಸ್ಥಾನವನ್ನು ಹೊಂದಿದ್ದ ಚಿದರೆಮಠದ ವೀರಭದ್ರಶರ್ಮರು ಆಂಧ್ರಪ್ರದೇಶದಲ್ಲಿ ವಾಸಿಸುವ ಅನೇಕ ವೀರಶೈವ ಪಂಗಡಗಳ ಚರಿತ್ರೆಗಳನ್ನು ಕೊಟ್ಟಿದ್ದಾರೆ. ಈ ವಿವರಣೆಗಳು ಸಮಾಜೇತಿಹಾಸವನ್ನು ಬರೆಯುವವರಿಗೆ ಬಹಳ ಸಹಾಯವಾಗದೆ ಇರಲಾರವು.

**ವಚನ ಸಾಹಿತ್ಯ ಲೇಖನಗಳು :** ನಾವು ಪ್ರಕಟ ಮಾಡಿದ ವಚನಗಳ ವಿಷಯವಾಗಿ ಅನೇಕ ಲೇಖಕರು ಮಹತ್ವದ ಲೇಖನಗಳನ್ನು ಪತ್ರಿಕೆಯ ಆರಂಭದಿಂದ ಈವರೆಗೂ ಇದರಲ್ಲಿ ಯಾವಾಗಲೂ ಬರೆಯುತ್ತ ಬಂದಿದ್ದಾರೆ. ಅವು ನಾನಾ ವಿಧವಾಗಿವೆ. ಕೆಲವು ವಿಮರ್ಶಾತ್ಮಕವಾಗಿವೆ. ಕೆಲವು ತತ್ವ ಪರಿಶೀಲನೆ ಮಾಡಿದವುಗಳಾಗಿವೆ. ಅವುಗಳ ವಿವೇಚನಾ ಪದ್ಧತಿಗಳು ಬಹುಶಃ ರಸಭರಿತವೂ ಆಕರ್ಷಕವೂ ಆಗಿರುತ್ತವೆ. ಈ ವಿಷಯವನ್ನು ಕುರಿತು ನಾನು ಹೆಚ್ಚಿಗೆ ಇಲ್ಲಿ ವಿವರಿಸುವುದು ಅನವಶ್ಯಕವಾಗಿರುತ್ತದೆ.

**ಆಂಧ್ರ ವೀರಶೈವವಾಙ್ಮಯ :** ವೀರಶೈವ ಧರ್ಮವು ಆಂಧ್ರದೇಶದಲ್ಲಿಯೂ ಪ್ರಸಾರ ಹೊಂದಿರುತ್ತದೆ. ಅಲ್ಲಿ ಶ್ರೀಪತಿ ಪಂಡಿತಾರಾಧ್ಯ, ಪಾಲ್ಕುರಿಕೆ ಸೋಮಾರಾಧ್ಯ, ಅನ್ನಮಾಮಾತ್ಯ ಮೊದಲಾದವರು ಆಗಿ ಹೋಗಿರುತ್ತಾರೆ. ಅವರ ವಿಷಯವನ್ನು ಕುರಿತು ಶ್ರೀ ಟಿ. ಎಚ್. ಎಮ್. ಸದಾಶಿವಯ್ಯನವರು ಸಂಶೋಧನಾತ್ಮಕವಾಗಿ ಅನೇಕ ಲೇಖನಗಳನ್ನು ಪತ್ರಿಕೆಯಲ್ಲಿ ಬರೆದಿರುತ್ತಾರೆ.

ಆಂಧ್ರಪ್ರದೇಶದಲ್ಲಿ ಪ್ರಸಾರವಾದ ವೀರಶೈವ ಪದ್ಧತಿಗಳಲ್ಲಿ ಬ್ರಾಹ್ಮಣ ಧರ್ಮದ ಛಾಯೆಯು ಬಹಳ ಇರುವುದರಿಂದ ಅದರ ವೀರಶೈವತ್ವದ ವಿಷಯವಾಗಿ ಕರ್ನಾಟಕದಲ್ಲಿ ಕೆಲವು ಮತಭೇದಗಳುಂಟಾಗಲು ಕಾರಣವಾಗಿದೆ. ಈ ಸಂಗತಿಯು ಶ್ರೀಕರಭಾಷ್ಯದ ವಿಮರ್ಶೆಯಲ್ಲಿ ಕಂಡು ಬರುತ್ತದೆ. ಆಂಧ್ರವಾಙ್ಮಯದ ಆರಂಭ ಕಾಲದಲ್ಲಿ ಇದು ಕಂಡು ಬಂದರೂ ೧೩ನೆಯ ಶತಮಾನದ ತರುವಾಯ ಉಂಟಾದ ಆಂಧ್ರವಾಙ್ಮಯದಲ್ಲಿ ಈ ತರದ ವ್ಯತ್ಯಾಸಗಳು ಕಂಡು ಬರುವುದಿಲ್ಲ. ಅದು ಶಿವಶರಣರ ವಾಙ್ಮಯವನ್ನೇ ಅನುಸರಿಸುತ್ತ ಬಂದಿವೆ. ಒಲಿದ ಇಲ್ಲಿಯ ಕೆಲವು ವೀರಶೈವ ವಿದ್ವಾಂಸರು ಸಹ ಮೊದಲಿನ ಕಾಲದ ಆಂಧ್ರಪ್ರದೇಶದ ವಾಙ್ಮಯದಲ್ಲಿಯ ತತ್ವಗಳನ್ನು ಮತ್ತು ಆಚರಣೆಗಳನ್ನು ಗ್ರಂಥಗಳನ್ನು ಕೆಲವು ಕಾಲ ಪುರಸ್ಕರಿಸುತ್ತ ಬಂದುದು ಕಂಡುಬರುತ್ತದೆ.

**ಶೈವಧರ್ಮಗಳ ಪರಿಚಯ :** ಕಾಶ್ಮೀರ ಶೈವಧರ್ಮ, ಪಾಶುಪತ ಮತ್ತು ಕಾಳಾಮುಖ ಧರ್ಮ –ಈ ಮೂರು ಧರ್ಮಗಳ ವಿಷಯವಾಗಿ ಶಿವಾನುಭವ ಪತ್ರಿಕೆಯಲ್ಲಿ ಕೆಲವು ಲೇಖನಗಳು ಪ್ರಕಟವಾಗಿರುತ್ತವೆ. ಅವುಗಳನ್ನು ಮುಖ್ಯವಾಗಿ ಡಾ. ಎಸ್. ಸಿ. ನಂದೀಮಠ, ಹಲಸಂಗಿಯ ಮಧುರಚೆನ್ನ, ಶ್ರೀ ಜೀರಗೆ ಬಸವಲಿಂಗ ಅವರು ಬರೆದಿದ್ದಾರೆ. ಈ ಮೂರು ಸಮಾಜಗಳಿಗೆ ಹೊಂದಿದವರು ಕರ್ನಾಟಕವನ್ನು ಕಾಲ ಕಾಲಕ್ಕೆ ಪ್ರವೇಶಮಾಡಿ ಇಲ್ಲಿ ವಸಾಹತುಮಾಡಿದ್ದು ಕಂಡು ಬರುತ್ತದೆ. ಆದ್ದರಿಂದ ಪತ್ರಿಕೆಯಲ್ಲಿ ನಾವು ಇವುಗಳ ವಿವೇಚನೆಗೆ ಸ್ಥಾನವನ್ನು ಕೊಡುತ್ತ ಬಂದಿದ್ದೇವೆ.

**ತಮಿಳು ಶೈವ ವಾಙ್ಮಯ :** ತಮಿಳು ದೇಶದಲ್ಲಿರುವ ಶೈವರಿಗೂ ವೀರಶೈವ ವಿದ್ವಜ್ಜನರಿಗೂ ನಿಕಟ ಸಂಬಂಧವಿದೆ. ಆದರೆ ವಚನಕಾರರು ತಮಿಳು ಶೈವರನ್ನು ಅಂಧತೆಯಿಂದ ಅನುಸರಿಸಿರುವುದಿಲ್ಲ. ಹಾಗೆಯೇ ತಮಿಳರೂ ಕೂಡ ಕರ್ನಾಟಕದ ಶಿವಶರಣರನ್ನು ಹಿಂಬಾಲಿಸಿರುವುದಿಲ್ಲ. ಉಭಯತರು ಸ್ವತಂತ್ರವಾಗಿಯೇ ತಮ್ಮ ತಮ್ಮ ವಿಚಾರಗಳನ್ನು ತಮ್ಮದೇ ಆದ ರೀತಿಗಳಿಂದ ಪ್ರಬಲಗೊಳಿಸುತ್ತ ಬಂದಿದ್ದಾರೆ. ಬಸವೇಶ್ವರನ ತರುವಾಯ ಕರ್ನಾಟಕ ವೀರಶೈವರು ತಮಿಳು ಪುರಾತನರನ್ನು ಮನ್ನಿಸುತ್ತಿರುವುದನ್ನು ನಾವು ಕಾಣುತ್ತೇವೆ. ಆದರೆ ತಮಿಳು ದೇಶದ ೬೩ ಪುರಾತನರ ಚರಿತ್ರೆಗಳು, ಸಂಸ್ಕೃತಿಯು ಉಚ್ಚಮಟ್ಟವನ್ನು ಹೊಂದಿದ್ದು ಕಂಡು ಬರುತ್ತದೆ. ವಾಚಕರು ಶಿವಶರಣರ ಚರಿತ್ರೆಗಳು ಭಾಗ–೨ ಈ ಗ್ರಂಥವನ್ನು ನೋಡಬೇಕು. ಕರ್ನಾಟಕ ವೀರಶೈವರು ತಮ್ಮ ವಾಙ್ಮಯವನ್ನು ಮರೆತಿದ್ಧಾರೆ. ಆದ್ದರಿಂದ ಅವರು ತಮಿಳರ ಬೆನ್ನು ಹತ್ತಿರುವಂತೆ ನಮಗೆ ತೋರುತ್ತದೆ.

**ಆಗಮಗ್ರಂಥಗಳ ಪರಿಚಯ :** ಅನೇಕ ವೀರಶೈವ ಪಂಡಿತರು ಸಂಸ್ಕೃತದಲ್ಲಿರುವ ಆಗಮಗ್ರಂಥಗಳಿಗೆ ಮಹತ್ವ ಕೊಡುತ್ತಿರುವುದು ಕಂಡು ಬರುತ್ತಿದೆ. ಅವರಲ್ಲಿ ಕೆಲವರು ಈ ಗ್ರಂಥಗಳೇ ವೀರಶೈವರಿಗೆ ಅಧಾರಗಳೆಂದು ತಿಳಿಯುವುದುಂಟು. ಆದರೆ ಅವುಗಳ ನಿಜಸ್ವರೂಪವನ್ನು ಕುರಿತು ಶಿವಾನುಭವ ಪತ್ರಿಕೆಯಲ್ಲಿ ಕೆಲವು ಲೇಖನಗಳು ಬಂದಿರುತ್ತವೆ. ಅವುಗಳಲ್ಲಿ ಡಾ. ಎಸ್. ಸಿ. ನಂದೀಮಠ ಇವರು ಸಂಶೋಧನಾತ್ಮಕವಾಗಿ ಬರೆದ ಲೇಖನಗಳು ಪತ್ರಿಕೆಯಲ್ಲಿ ಪ್ರಕಟವಾಗಿವೆ. ಆಗಮ ಗ್ರಂಥಗಳು ಶೈವರಿಗೆ ಮಹತ್ವದವಾಗಿದ್ದರೂ ಕರ್ನಾಟಕದ ಶಿವಶರಣರು ಅವುಗಳ ತತ್ವಗಳನ್ನು ಅಂಧತೆಯಿಂದ ಅನುಸರಿಸಿರುವುದಿಲ್ಲ. ಅವರು ಸ್ವತಂತ್ರ ವಿಚಾರವುಳ್ಳವರಾಗಿ ತಮ್ಮದೇ ಆದ ಷಟ್‌ಸ್ಥಲಮಾರ್ಗವನ್ನು ಕಂಡು ಹಿಡಿದು ಅದನ್ನು ಪುರಸ್ಕರಿಸುತ್ತ ಬಂದಿದ್ದಾರೆ.

**ಧರ್ಮಗಳ ತುಲನಾತ್ಮಕ ವಿವೇಚನೆ :** ಸಂಸ್ಕೃತಿಯ ನಿಜವಾದ ಸ್ವರೂಪವನ್ನು ತಿಳಿಯಲಿಕ್ಕೆ ಇತರ ಧರ್ಮಗಳ ವ್ಯಾಸಂಗವೂ ಉಪಯುಕ್ತ ಆಗಿರುತ್ತದೆ. ಪಾಶ್ವಿಮಾತ್ಯ ತತ್ವವೇತ್ತಿಗಳ ಮತ್ತು ಜೈನ ಬೌದ್ಧ ಧರ್ಮೀಯರ ತತ್ವಗಳನ್ನು ಅರಿಯುವುದು ಬಹಳ ಮಹತ್ವದ್ದಿರುತ್ತದೆ. ಈ ದೃಷ್ಟಿಯಿಂದ ಶ್ರೀಯುತ ವಿ. ಸಿ. ಯಗಟಿ ಇವರು ಪಾಶ್ಚಿಮಾತ್ಯ ತತ್ವಜ್ಞಾನ ಮತ್ತು ಜೈನಧರ್ಮ ಇವುಗಳ ಸಂಬಂಧವಾಗಿ ಕೆಲವು ತುಲನಾತ್ಮಕ ಲೇಖಗಳನ್ನು ಬರೆದಿರುವರು. ಅವು ಬಹು ಉಪಯುಕ್ತ ಆಗಿರುತ್ತವೆ. ನಾವು ಅವುಗಳನ್ನು ಶಿವಾನುಭವ ಪತ್ರಿಕೆಯಲ್ಲಿ ಪ್ರಸಿದ್ಧಿಸಿದ್ದೇವೆ.

**ಶಿವಾನುಭವ ತತ್ವಗಳು :** ಶಿವಾನುಭವ ಈ ವಿಷಯವು ವಿಶೇಷ ಸ್ವರೂಪದ್ದಿದ್ದು ಇದರ ಬಗ್ಗೆ ಶ್ರೀ ಶಿವಯೋಗಿ ಬಂಥನಾಳ ಸ್ವಾಮಿಗಳೂ ಶ್ರೀ ವಿದ್ಯಾವಾಚಸ್ಪತಿ ಶಂಭುಲಿಂಗಸ್ವಾಮಿಗಳೂ ಬೆಂಗಳೂರು ಸರ್ಪಭೂಷಣಮಠದ ಸ್ವಾಮಿಗಳೂ ಇನ್ನೂ ಅನೇಕರೂ ಮಹತ್ವದ ಲೇಖನಗಳನ್ನು ಬರೆದಿರುವರು.

ಅವು ಪತ್ರಿಕೆಯಲ್ಲಿ ಪ್ರಕಟವಾಗಿರುತ್ತವೆ. ಇಂಥ ಲೇಖನಗಳಲ್ಲಿ ಕೆಲವುಗಳನ್ನು ನಾವು ಆರಿಸಿ ಶಿವಾನುಭವ ಸತ್ಯಮಾರ್ಗ ಎಂಬ ಗ್ರಂಥದಲ್ಲಿ ಮುದ್ರಣಪಡಿಸಿರುತ್ತೇವೆ.

**ಶೂನ್ಯಸಂಪಾದನೆ :** ಶೂನ್ಯಸಂಪಾದನೆ ಇದು ವೀರಶೈವ ವಾಙ್ಮಯದಲ್ಲಿ ಅದ್ವಿತೀಯ ಗ್ರಂಥವಾಗಿದೆ. ಅದು ವೀರಶೈವನಿಗೆ ಒಂದು ಆಧಾರ ಗ್ರಂಥವಾಗಿರುತ್ತದೆ. ಅದರಲ್ಲಿ ಶಿವಾನುಭವ ತತ್ವಗಳ ವಿವೇಚನೆಗಳು ತುಂಬಿ ಹೋಗಿರುತ್ತವೆ. ಆದ್ದರಿಂದ ಮಠಾಧಿಪತಿಗಳಿಗೆ ಸ್ಥಲ ಕೊಡುವ ಕಾಲದಲ್ಲಿ ಶೂನ್ಯ ಸಂಪಾದನೆ ಗ್ರಂಥವನ್ನು ಇತರೆ ಗ್ರಂಥಗಳೊಡನೆ ಕೊಡುವ ಪದ್ಧತಿಯು ಇರುತ್ತದೆ. ಇದರಿಂದ ಈ ಗ್ರಂಥದ ಮಹತ್ವವು ಎಷ್ಟಿದೆಂಬುದು ತಿಳಿದುಬರುವುದು. ಈ ಗ್ರಂಥದ ಸಾರವನ್ನು ಶ್ರೀ ಕಲ್ಯಾಣಪ್ಪ ಬ್ಯಾಳಿ ಇವರು ಸ್ಥೂಲವಾಗಿ, ಸಂಕ್ಷಿಪ್ತವಾಗಿಯೂ ಕೆಲವು ಲೇಖನಗಳಲ್ಲಿ ವಿವರಿಸಿದ್ದಾರೆ. ಬಹು ಉಪಯುಕ್ತ ಲೇಖನಗಳಾಗಿರುವ ಅವು ಪತ್ರಿಕೆಯಲ್ಲಿ ಪ್ರಸಿದ್ಧವಾಗಿರುತ್ತವೆ.

**ಷಟ್‌ಸ್ಥಲವಿವೇಚನೆ :** ವಚನಶಾಸ್ತ್ರದಲ್ಲಿ ಷಟ್‌ಸ್ಥಲಗಳ ವಿವೇಚನೆಯು ಅತ್ಯಂತ ಮಹತ್ವದ್ದಾಗಿರುತ್ತದೆ. ವಚನಶಾಸ್ತ್ರ ಮತ್ತು ಷಟ್‌ಸ್ಥಲಜ್ಞಾನ ಈ ಶಬ್ದಗಳು ಸಮಾನಾರ್ಥವುಳ್ಳವಾಗಿವೆಯೆಂದು ನಾವು ಹೇಳಬಹುದು. ವಚನಶಾಸ್ತ್ರದ ಉಲ್ಲೇಖವು ಷಟ್‌ಸ್ಥಲಗಳ ಜ್ಞಾನವನ್ನು ಮಾಡಿಕೊಡುವುದೇ ಇರುತ್ತದೆ. ಷಟ್‌ಸ್ಥಲಗಳು ಆತ್ಮವಿಕಾಸವನ್ನುಂಟು ಮಾಡಲು ಬಹು ಸಹಾಯಕಾರಿಗಳಾಗಿರುತ್ತವೆ. ಇದರಲ್ಲಿ ೧, ೩, ೬, ೩೬, ೨೧೬ ಹೀಗೆ ಬೇರೆ ಬೇರೆ ಸ್ಥಲಗಳು ಇರುತ್ತವೆ. ಇವುಗಳನ್ನು ವಿವರಿಸುವ ಅನೇಕ ಲೇಖನಗಳು ಈ ಪತ್ರಿಕೆಯಲ್ಲಿ ಬಂದಿರುತ್ತವೆ. ಈ ವಿಷಯಗಳ ವಿವರಣೆಗಳನ್ನು ಮುಖ್ಯವಾಗಿ ಶ್ರೀ ಕಲ್ಯಾಣಪ್ಪ ಬ್ಯಾಳಿ, ಶ್ರೀ ಬಸಪ್ಪ ಪಟ್ಟೇದ, ಶ್ರೀ ಸಿ. ನಾ. ಮಹಾಂತಣ್ಣವರು, ಶ್ರೀ ವ್ಹಿ. ಸಿ. ಯಗಟಿ ಈ ಮೊದಲಾದವರು ತಮ್ಮ ಲೇಖನಗಳಲ್ಲಿ ಮಾಡಿರುತ್ತಾರೆ.

**ಏಕೋತ್ತರಶತಸ್ಥಲಗಳು :** ಈ ಸ್ಥಲಗಳು ಷಟ್‌ಸ್ಥಲಗಳಲ್ಲಿ ಸಮಾವೇಶವಾಗುತ್ತವೆ. ಇವುಗಳ ಸವಿಸ್ತಾರವಾದ ವಿವರಣೆಗಳನ್ನು ಷಟ್‌ಸ್ಥಲಗಳನ್ನು, ವಿವೇಚನೆಮಾಡಿರುವ ಮೇಲೆ ಕಾಣಿಸಿದ ವಿದ್ವಜ್ಜನರೇ ತಮ್ಮ ಲೇಖನಗಳಲ್ಲಿ ಮಾಡಿರುತ್ತಾರೆ. ಅವೆಲ್ಲವೂ ಈ ಪತ್ರಿಕೆಯಲ್ಲಿ ಪ್ರಸಿದ್ಧವಾಗಿವೆ.

**ಲಿಂಗಪೂಜೆ ಮತ್ತು ಯೋಗಾಭ್ಯಾಸ :** ಈ ವಿಷಯಗಳ ಬಗ್ಗೆ ಅನೇಕ ಮಹತ್ವದ ಲೇಖನಗಳು ಪತ್ರಿಕೆಯಲ್ಲಿ ಬಂದಿರುತ್ತವೆ. ಲಿಂಗಪೂಜೆಯ ಉದ್ದೇಶವು ಷಟ್‌ಚಕ್ರಗಳಲ್ಲಿ ಲಿಂಗಶಕ್ತಿಯನ್ನು ಉಂಟು ಮಾಡುವುದೇ ಇರುತ್ತದೆ. ಇದಕ್ಕೆ ಸಂಬಂಧಿಸಿದ ವಿವೇಚನೆಗಳು ಅನೇಕ ಲೇಖನಗಳಲ್ಲಿ ಬಂದಿರುತ್ತವೆ. ಇವುಗಳಲ್ಲಿ ಇಷ್ಟಲಿಂಗದ ಪೀಠದ ಸ್ವರೂಪು. ಅದರ ಕಾಂತಿಯ ಉದ್ಧೇಶ ಇವೇ ಮೊದಲಾದವುಗಳು ಹೇಳಲ್ಪಟ್ಟಿವೆ. ಆಧಾರಾದಿಗಳಲ್ಲಿ ೬ ಲಿಂಗಗಳಲ್ಲದೆ ಅವುಗಳಿಗಿಂತಲೂ ಸೂಕ್ಷ್ಮವಾದ ೩ ಅವ್ಯಕ್ತ ಲಿಂಗಗಳು ಕಡೆಯ ೩ ಚಕ್ರಗಳಲ್ಲಿವೆ. ಈ ಪ್ರಕಾರ ನವಲಿಂಗಗಳಿದ್ದು ಅವುಗಳ ಸಾಧನೆಯ ಬಗ್ಗೆ ಅನೇಕ ಲೇಖನಗಳು ಈ ಪತ್ರಿಕೆಯಲ್ಲಿ ಬಂದಿವೆ. ಇವುಗಳಲ್ಲಿ ಇಷ್ಟಲಿಂಗದ ಅವಶ್ಯಕತೆ ಏನು? ತ್ರಿಲಿಂಗಗಳೆಂದರೇನು? ಇವು ವಿವರಿಸಲ್ಪಟ್ಟಿವೆ. ಇದಲ್ಲದೆ ೨೧ ದೀಕ್ಷೆಗಳಾವುವು? ಅವುಗಳ ಉದ್ದೇಶಗಳೇನು? ಎಂಬುದು ಸಹ ಹೇಳಲ್ಪಟ್ಟಿದೆ. ಸರ್ವಾಂಗಲಿಂಗ ಸಾಧನೆಯ ಬಗ್ಗೆ ಪತ್ರಿಕೆಯಲ್ಲಿ ಲೇಖನಗಳು ಬಂದಿವೆ.

ಲಿಂಗದ ಬಗ್ಗೆ ವೀರಶೈವರಲ್ಲಿ ಇಂಥ ವಿಚಾರಗಳು ಇರುವುದರಿಂದ ಅವರು ಯೋಗಾಭ್ಯಾಸವನ್ನು ಲಕ್ಷಿಸುವುದಿಲ್ಲ. ಸಿದ್ಧಿಗಳನ್ನು ಹೊಂದಲು ಅವರು ಅಪೇಕ್ಷಿಸುವುದಿಲ್ಲ. ಯೋಗಸಾಧನೆಗಳು

ವೀರಶೈವರನ್ನು ತಪ್ಪುದಾರಿಗೆ ಹಚ್ಚುತ್ತವೆಂದು ಅವರ ಅಭಿಪ್ರಾಯವಿದೆ. ಈ ವಿಷಯಗಳ ಬಗ್ಗೆ ಸವಿಸ್ತಾರವಾದ ಲೇಖನಗಳು ಶಿವಾನುಭವ ಸಂಚಿಕೆಗಳಲ್ಲಿ ಬಂದಿರುತ್ತವೆ.

ಮೇಲ್ಕಂಡ ವಿಚಾರಗಳು ವೀರಶೈವರಲ್ಲಿರುವುದರಿಂದ ಮೂರ್ತಿ ಪೂಜೆಯನ್ನು ಅವರು ಮಾಡಬಾರದೆಂದು ಶಿವಶರಣರ ಉಕ್ತಿಗಳಿರುತ್ತವೆ. ವೀರಶೈವರು ದೇಹವೇ ದೇವಾಲಯವೆಂದು ಭಾವಿಸಬೇಕು. ಆದ್ದರಿಂದ ಅವರು ಸ್ಥಾವರಲಿಂಗಗಳನ್ನು ಪ್ರತಿಷ್ಠೆ ಮಾಡುವುದನ್ನು ನಿಷೇಧಿಸುತ್ತಾರೆ. ಈ ವಿಷಯಗಳ ಬಗ್ಗೆ ಅನೇಕ ಮಹನೀಯರು ಈ ಪತ್ರಿಕೆಯ ಸಂಚಿಕೆಗಳಲ್ಲಿ ಅನೇಕ ಲೇಖನಗಳನ್ನು ಬರೆದಿರುತ್ತಾರೆ.

**ಪಂಚಾಚಾರ – ಸಪ್ತಾಚಾರ :** ಪಂಚಾಚಾರಗಳು ಮನುಷ್ಯನು ಸಮಾಜದಲ್ಲಿ ಹೇಗೆ ವರ್ತಿಸಬೇಕೆಂಬುದನ್ನು ಹೇಳುತ್ತವೆ. ಹೀಗೆ ವರ್ತಿಸಿದರೆ ಆತ್ಮ ವಿಕಾಸವಾಗುವುದಲ್ಲದೆ ಸಮಾಜೋದ್ಧಾರವೂ ಆಗುವುದೆಂದು ಶಿವಶರಣರ ತಿಳಿವಳಿಕೆ ಇದೆ. ಈ ವಿಷಯದ ಬಗ್ಗೆ ಅನೇಕ ಮಹನೀಯರು ಪತ್ರಿಕೆಯಲ್ಲಿ ಲೇಖನಗಳನ್ನು ಬರೆದಿದ್ದಾರೆ.

ಸಪ್ತಾಚಾರಗಳು ಪಂಚಾಚಾರಗಳಿಗಿಂತಲೂ ಸೂಕ್ಷ್ಮ ತರವಾದವುಗಳು. ಇವುಗಳ ವಿವರಣೆಗಳು ಪತ್ರಿಕೆಯಲ್ಲಿ ಬಂದಿರುತ್ತವೆ.

**ಅಷ್ಟಾವರಣ :** ಈ ವಿಷಯದ ಬಗ್ಗೆ ಅನೇಕ ಲೇಖನಗಳು ಪತ್ರಿಕೆಯಲ್ಲಿ ಬಂದಿರುತ್ತವೆ. ಇವುಗಳಲ್ಲಿ, ಸಾಮಾನ್ಯ ವಿವರಣೆಗಳಲ್ಲದೆ ಆಯಾ ಆವರಣಗಳ ಬಗ್ಗೆ ವಿಶೇಷ ತರದ ವಿವೇಚನೆಗಳು ಬಂದಿರುತ್ತವೆ. ಸಾಮಾನ್ಯ ವಿವರಣೆಗಳಲ್ಲಿ ಅಂತರಷ್ಟಾವರಣ ಮತ್ತು ಬಾಹ್ಯ ಅಷ್ಟಾವರಣಗಳು ಹೇಳಲ್ಪಟ್ಟಿರುತ್ತವೆ. ಹಾಗೆಯೇ ಇವು ತ್ರಿವಿಧ ಮತ್ತು ಪಂಚವಿಧವಾಗಿಯೂ ಇರುತ್ತವೆ. ಇವುಗಳ ಬಗ್ಗೆ ಅನೇಕ ಮಹತ್ವದ ಲೇಖನಗಳು ಪತ್ರಿಕೆಯಲ್ಲಿ ಬಂದಿರುತ್ತವೆ.

**ಗುರುಲಿಂಗಜಂಗಮ :** ವೀರಶೈನ ಆಚಾರಗಳಲ್ಲಿ ಗುರು 'ಲಿಂಗ' ಜಂಗಮವನ್ನು ಸಾಧಿಸುವುದು ಬಹು ಮುಖ್ಯವಾದದ್ದು, ಇವು ಅನುಕ್ರಮವಾಗಿ ಸ್ಥೂಲ, ಸೂಕ್ಷ್ಮ ಮತ್ತು ಕಾರಣ ಶರೀರಗಳಲ್ಲಿ ದೃಢಪಡುವಂತೆ ವೀರಶೈವನು ಆಚರಿಸತಕ್ಕದ್ದು. ಇದೇ ಶಿವಾನುಭವದ ಉದ್ದೇಶವಾಗಿರುತ್ತದೆ. ಈ ವಿಷಯವಾಗಿ ಪತ್ರಿಕೆಯಲ್ಲಿ ಅನೇಕ ಲೇಖನಗಳು ಬಂದಿರುತ್ತವೆ.

**ಪಾದೋದಕ ಪ್ರಸಾದ :** ಇವು ತ್ರಿಲಿಂಗಾಂಗಿಯ ಆಚಾರಗಳಲ್ಲಿ ಬಹು ಗಡಚಾದವುಗಳು. ತ್ರಿಲಿಂಗಗಳು ತನ್ನಲ್ಲಿ ಸಂಬಂಧ ಪಡುವಂತೆ ಪಾದೋದಕ ಪ್ರಸಾದಗಳ ವ್ಯವಸ್ಥೆ ಇರುತ್ತದೆ. ಈ ವಿಷಯವನ್ನು ಶಿವಶರಣರು ತಮ್ಮ ವಚನಗಳಲ್ಲಿ ಬಹು ವಿಸ್ತಾರವಾಗಿ ನಿರೂಪಿಸಿದ್ದಾರೆ. ಇವುಗಳ ವಿವೇಚನೆಯನ್ನು ಕೆಲವು ಮಹಾನುಭಾವರು ತಮ್ಮ ಲೇಖನಗಳಲ್ಲಿ ಮಾಡಿದ್ದು ಅವುಗಳನ್ನು ಪತ್ರಿಕೆಯಲ್ಲಿಯೇ ಅವಲೋಕಿಸುವುದು ಅವಶ್ಯವಿರುತ್ತದೆ. ಪಾದೋದಕ ಪ್ರಸಾದಗಳಲ್ಲಿ ಅನೇಕ ಭೇದ ವಿಭೇದಗಳಿರುತ್ತವೆ. ಅವುಗಳನ್ನು ತಿಳಿಯುವುದು ಬಹು ಗಡುಚಾದ ವಿಷಯವಾಗಿರುತ್ತದೆ.

**ವರ್ಣಾಶ್ರಮಧರ್ಮ ಜಾತಿ ಭೇದಗಳು :** ಈ ವಿಷಯವಾಗಿ ಅನೇಕ ಲೇಖನಗಳು ಶಿವಾನುಭವ ಪತ್ರಿಕೆಯಲ್ಲಿ ಬಂದಿರುತ್ತವೆ. ಒಂದು ಕಾಲದಲ್ಲಿ ವೀರಶೈವ ಸಮಾಜದಲ್ಲಿ ಬ್ರಾಹ್ಮಣ ಧರ್ಮದ

ಅನುಕರಣ ಮಾಡುವುದರಿಂದಲೇ ಅದರ ಮಹತ್ವವು ಹೆಚ್ಚುವದೆಂಬ ತಿಳಿವಳಿಕೆ ಇತ್ತು. ಕೇವಲ ಸಂಸ್ಕೃತ ವಾಙ್ಮಯದ ಅಭ್ಯಾಸ ಮಾಡಿದವರು ಈ ತರದ ವಿಚಾರಗಳನ್ನು ಪುರಸ್ಕರಿಸುತ್ತ ಬರುತ್ತಿದ್ದರು. ಶಿವಾನುಭವ ಪತ್ರಿಕೆಯನ್ನು ಹೊರಡಿಸುವ ಕಾಲದಲ್ಲಿ ಇಂಥ ವಿಚಾರಗಳು ಸಮಾಜದಲ್ಲಿ ಬಹಳ ಪ್ರಬಲವಾಗಿದ್ದವು. ಈ ವಿಚಾರಗಳನ್ನು ವಿರೋಧಿಸುವವರು ಬಹು ಜನರಿದ್ದರೂ ಅವರು ತಮ್ಮ ಪಕ್ಷವನ್ನು ಸಮರ್ಥಿಸಲಿಕ್ಕೆ ಬೇಕಾಗುವ ವಾಙ್ಮಯವು ಅವರಿಗೆ ಉಪಲಬ್ಧವಿರಲಿಲ್ಲ. ಆದರೆ ವಚನಶಾಸ್ತ್ರ ಗ್ರಂಥಗಳು ಶಿವಾನುಭವ ಪತ್ರಿಕೆಯಲ್ಲಿ ಪ್ರಕಟವಾಗ ಹತ್ತಿದಂದಿನಿಂದ ಇವರಿಗೆ ಬೇಕಾದ ಆಧಾರಗ್ರಂಥಗಳು ದೊರೆಯಲಿಕ್ಕೆ ಹತ್ತಲು, ಇವರ ಪಕ್ಷವು ಕ್ರಮೇಣ ಪ್ರಬಲವಾಗುತ್ತ ನಡೆಯಿತು. ಈ ವಿಷಯದ ಬಗ್ಗೆ ಪತ್ರಿಕೆಯ ಆರಂಭ ಕಾಲದಲ್ಲಿ ಅನೇಕ ಮಹನೀಯರು ಆಧಾರಪೂರ್ವಕವಾಗಿ ಜಾತಿ, ವರ್ಣ ಮತ್ತು ಆಶ್ರಮಗಳನ್ನು ಖಂಡಿಸಿ ಬರೆದ ಲೇಖನಗಳು ಯಾವಾಗಲೂ ಬರುತ್ತಿದ್ದವು. ಶಿವಶರಣರ ವಿಚಾರಗಳು ಬಹುಶಃ ಕೆಲವೊಂದು ತತ್ವವನ್ನು ಅವಲಂಬಿಸಿದವುಗಳಿರುತ್ತವೆ. ಇದಲ್ಲದೆ ಅವರ ಹೆಸರುಗಳು ನಾಡಿನಲ್ಲೆಲ್ಲ ಪೂಜ್ಯವಾದವುಗಳು. ಆದ್ದರಿಂದ ಜಾತಿವರ್ಣಾಶ್ರಮ ಧರ್ಮಗಳನ್ನು ಪುರಸ್ಕರಿಸುವಂಥವರ ಸಂಖ್ಯೆಯು ಕ್ರಮೇಣ ಸಮಾಜದಲ್ಲಿ ಕಡಿಮೆಯಾಗಹತ್ತಿತು. ಇಷ್ಟೇ ಅಲ್ಲ, ಈಚೆಗೆ ವೀರಶೈವರ ಉಪ ಪಂಗಡಗಳಲ್ಲಿ ಅನ್ನೋದಕ ಮತ್ತು ಲಗ್ನಾದಿ ವ್ಯವಹಾರಗಳು ನಿರಾತಂಕವಾಗಿ ನಡೆಯುವುದು ಸಹ ಆರಂಭವಾಗಿದೆ. ಇದೂ ಒಂದು ಸಮಾಜ ಸುಧಾರಣೆಯ ಕಾರ್ಯವೆಂದು ಹೇಳಬಹುದಾಗಿದೆ. ಈ ವಿಷಯದ ಬಗ್ಗೆ ಅನೇಕ ಲೇಖನಗಳನ್ನು ಸಿದ್ದರಾಮಪ್ಪ ಪಾವಟೆ, ವೀರಪ್ಪ ಬಿಳೇಅಂಗಡಿ, ಜೀರಗೆ ಬಸವಲಿಂಗಪ್ಪ ಮೊದಲಾದವರು ಶಿವಾನುಭವ ಪತ್ರಿಕೆಯಲ್ಲಿ ಬರೆದಿದ್ದಾರೆ.

**ಸಮಾಜಸುಧಾರಣೆಯ ಲೇಖನಗಳು :** ಶಿವಾನುಭವ ಪತ್ರಿಕೆಯಲ್ಲಿ ಇಂಥ ಲೇಖನಗಳು ಅಸಂಖ್ಯಾತವಾಗಿ ಬಂದಿರುತ್ತವೆ. ವೀರಶೈವರ ಏಳ್ಗೆ, ವೀರಶೈವ ಧರ್ಮದ ರಹಸ್ಯ, ವೀರಶೈವಾಚಾರಗಳು, ವೀರಶೈವ ಸ್ತ್ರೀಯರ ಹಕ್ಕು ಬಾಧ್ಯತೆಗಳು, ವೀರಶೈವರ ಆರ್ಥಿಕ ಉನ್ನತಿ, ವೀರಶೈವರ ಸಂಸ್ಕೃತಿ, ವೀರಶೈವ ಕವಿಗಳು ಇಂಥ ಅನೇಕಾನೇಕ ಲೇಖನಗಳನ್ನು ಅನೇಕ ಮಹನೀಯರು ಶಿವಾನುಭವ ಸಂಚಿಕೆಗಳಲ್ಲಿ ಯಾವಾಗಲೂ ಪ್ರಕಟಿಸುತ್ತಾ ಬಂದಿದ್ದಾರೆ. ಇವರು ದೊಡ್ಡವರೂ ಸಣ್ಣವರೂ ಎಲ್ಲ ತರಗತಿಯವರೂ ಇದ್ದಾರೆ. ಅವರ ಹೆಸರುಗಳನ್ನೆಲ್ಲ ವಿಸ್ತಾರ ಭಯಕ್ಕಾಗಿ ಇಲ್ಲಿ ಕೊಟ್ಟಿರುವುದಿಲ್ಲ.

**ವಾದಭೂಮಿ :** ಶಿವಾನುಭವ ಪತ್ರಿಕೆಯನ್ನು ಪ್ರಾರಂಭಿಸಿದಾಗ ವೀರಶೈವ ವಿದ್ಯಾವಂತರಲ್ಲಿಯೂ ಅದರ ಮುಖ್ಯಸ್ಥರಲ್ಲಿಯೂ ಅನೇಕ ತರದ ಮತಭೇದಗಳು ಉಂಟಾಗಿದ್ದವು. ಭಕ್ತ ಜಂಗಮ ವಿರೋಧಗಳು, ಜಂಗಮ ಜಂಗಮರಲ್ಲಿ ಕಲಹಗಳು, ಭಕ್ತ ಭಕ್ತರಲ್ಲಿ ಜಾತಿ ವಿಷಯ ಕಲಹಗಳು, ಭಕ್ತರು ಜಂಗಮರಾಗಬಹುದೇ ಹೇಗೆಂಬುದರ ಬಗ್ಗ ಮತ ಭೇದಗಳು, ಮಠ ಮಠಗಳಲ್ಲಿ ಕಲಹಗಳು ಸಮಾಜದಲ್ಲಿ ತುಂಬಿ ಹೋಗಿದ್ದವು. ಇಂಥ ಕಲಹಗಳನ್ನು ತಿರಸ್ಕರಿಸುವಂಥ ಅಸಂಖ್ಯಲೇಖನಗಳು ನಮ್ಮ ಕಡೆಗೆ ಯಾವಾಗಲೂ ಬರುತ್ತಾ ಇದ್ದವು. ಆದರೆ ಸಮಾಜದಲ್ಲಿ ಕಲಹಾಗ್ನಿಯನ್ನು ಬೆಳೆಸುವ ಇಂಥ ಲೇಖನಗಳನ್ನು ನಾವು ಪತ್ರಿಕೆಯಲ್ಲಿ ಎಂದೂ ಪ್ರಕಟಮಾಡಿಲ್ಲ. ಇದರಿಂದ ನಾವು ಅನೇಕರ ರೋಷಕ್ಕೆ ಗುರಿಯಾಗಬೇಕಾಯಿತು. ನಾವು ಉಚ್ಚ ತತ್ವಗಳನ್ನು ನಿರೂಪಿಸುವಂಥ ಲೇಖನಗಳಿಗೆ ಯಾವಾಗಲೂ ಪತ್ರಿಕೆಯಲ್ಲಿ ಮುಖ್ಯಸ್ಥಾನವನ್ನು ಕೊಡುತ್ತ ಬಂದಿದ್ದೇವೆ.

ನಾವು ಕೈಕೊಂಡ ಈ ಧೋರಣೆಯ ಅಂತ್ಯದಲ್ಲಿ ಸಮಾಜಕ್ಕೆ ಒಳಿತನ್ನೇ ಮಾಡಿತೆಂದು ನಾವು ಭಾವಿಸಿದ್ದೇವೆ.

ಒಂದು ಕಾಲದಲ್ಲಿ ಕೆಲವೊಂದು ಪಂಗಡದವರು ಬಸವೇಶ್ವರಾದಿ ಪ್ರಮಥರನ್ನು ನಿಂದಿಸುವುದು ಮತ್ತು ಬೇರೊಂದು ಪಂಗಡದವರು ಪಂಡಿತಾರಾಧ್ಯ ರೇವಣಸಿದ್ಧೇಶ್ವರಾದಿಗಳನ್ನು ಹೀಯಾಳಿಸುವುದು ನಿರಾತಂಕವಾಗಿ ನಡೆದಿದ್ದವು. ಆರಂಭಕಾಲದಲ್ಲಿ ಶಿವಾನುಭವ ಪತ್ರಿಕೆಯು ವಿರಕ್ತವರ್ಗದವರ ಪತ್ರಿಕೆಯೆಂದು ಭಾವಿಸಲ್ಪಟ್ಟಿತು. ಮುಂದೆ ಇದರಲ್ಲಿ ರೇವಣಸಿದ್ಧೇಶ್ವರಾದಿಗಳ ಕಾರ್ಯಗಳ ವಿವರಣೆಗಳು ಬರಹತ್ತಲು ಈ ಪತ್ರಿಕೆಯು ಗುರುವರ್ಗದವರನ್ನೂ ಪುರಸ್ಕರಿಸುವಂಥದೆಂದು ಹೇಳಹತ್ತಿದರು. ಒಮ್ಮೊಮ್ಮೆ ನಾವು ಪತ್ರಿಕೆಯಲ್ಲಿ ಪ್ರಯೋಗಿಸಿದ ಆಕಸ್ಮಿಕ ಶಬ್ದಗಳ ಮತ್ತು ವಿಚಾರಗಳಿಗೋಸ್ಕರ ಕೆಲವರು ಪತ್ರಿಕೆಯನ್ನು ನಿಲ್ಲಿಸಿದ್ದೂ ಉಂಟು. ಒಟ್ಟಿಗೆ ವೀರಶೈವಸಮಾಜದಲ್ಲಿ ನಿಷ್ಪಕ್ಷಪಾತದಿಂದ ಪತ್ರಿಕೆಯನ್ನು ನಡೆಸುವುದು ಮತ್ತು ಸಾರ್ವಜನಿಕ ಕೆಲಸ ಮಾಡುವುದು ಬಹು ಕಠಿಣವೆಂದು ನಮಗೆ ಆಗಿಂದಾಗ್ಗೆ ತೋರಿಬರುತ್ತಿತ್ತು. ಆದರೂ ಈ ಸ್ಥಿತಿಯಲ್ಲಿ ಪತ್ರಿಕೆಯನ್ನು ನಿಲ್ಲಿಸದೇ ಈ ೨೫ ವರ್ಷಗಳ ವರೆಗೆ ಅದನ್ನು ನಡೆಸುತ್ತ ಬಂದಿದ್ದೇವೆ.

ಆದರೆ ಕೆಲವು ಬಾರಿ ಮಾತ್ರ ನಾವು ಅಪವಾದಾತ್ಮಕವಾಗಿ ಕೆಲವು ಭಿನ್ನಮತಗಳಿಗೆ ಪತ್ರಿಕೆಯಲ್ಲಿ ಇಂಬುಗೊಟ್ಟಿದ್ದೇವೆ. ಅವು ಯಾವುವೆಂದರೆ, ಮಹಾದೇವಿಯಕ್ಕನಿಗೆ ಲಗ್ನವಾಗಿತ್ತೋ ಹೇಗೆ? ಮಗು ಹುಟ್ಟಿದ ಕೂಡಲೆ ಲಿಂಗಧಾರಣೆಯನ್ನು ಅದಕ್ಕೆ ಮಾಡಬೇಕೋ ಹೇಗೆ? ಲಿಂಗಧಾರಣೆಯನ್ನು ಮಾಡಿದ್ದಾದರೆ, ೮ನೇ ವರ್ಷದ ತರುವಾಯ ಅದಕ್ಕೆ ಪುನಃ ದೀಕ್ಷೆ ಮಾಡಬೇಕೋ ಹೇಗೆ? ಈ ವಿಷಯಗಳ ಬಗ್ಗೆ ಭಿನ್ನವಿರುವ ಅಭಿಪ್ರಾಯಗಳನ್ನು ಪ್ರಕಟಿಸಲಿಕ್ಕೆ ನಾವು ಪತ್ರಿಕೆಯಲ್ಲಿ ಸ್ಥಾನವನ್ನು ಕೊಟ್ಟೆವು. ಹೀಗೆ ವಿವಾದಕ್ಕೆ ಇಂಬುಗೊಟ್ಟಿದ್ದರಲ್ಲಿ ಕೆಲಮಟ್ಟಿಗೆ ಅತಿರೇಕ ಆಯಿತೆಂದು ನಮಗೆ ತೋರಹತ್ತಿದೆ. ಈಚೆಗೆ ಸಮಾಜದಲ್ಲಿ ಸಿದ್ಧಿಗಳನ್ನು ಮಾಡಬಲ್ಲ ಮಹತ್ವಿಕರಾಗಿರುವರೋ ಹೇಗೆ? ಮತ್ತು ಇಂಥ ಮಹತ್ವಗಳನ್ನು ನಂಬಬೇಕೋ ಹೇಗೆ? ಎಂಬ ಬಗ್ಗೆಯೂ ವಾದವು ಪತ್ರಿಕೆಯಲ್ಲಿ ಉಪಸ್ಥಿತವಾಗಿತ್ತು. ಆದರೆ ಇದನ್ನು ನಾವು ಮಧ್ಯದಲ್ಲಿಯೇ ನಿಲ್ಲಿಸಿ ಬಿಟ್ಟೆವು. ಹೀಗೆ ಮಾಡಿದ್ದು ಹಿತಕರವಾಯಿತೆಂದೇ ನಮ್ಮ ತಿಳಿವಳಿಕೆ ಇದೆ.

ನಾವು ಈವರೆಗೆ ನಮ್ಮ ಗ್ರಂಥರಚನೆಯ ಉದ್ದೇಶ ಮತ್ತು ನಮ್ಮ ಸಾಂಸ್ಕೃತಿಕ ಪ್ರಯತ್ನಗಳು– ಈ ವಿಷಯಗಳನ್ನು ಕುರಿತು ಉಲ್ಲೇಖಿಸಿದೆವು. ಇದರಲ್ಲಿ ಕರ್ನಾಟಕದಲ್ಲಿಯ ಎಲ್ಲ ಭಾಗಗಳ ವಿದ್ವಜ್ಜನರು ಹೇಗೆ ನಮ್ಮೊಡನೆ ಸಹಕರಿಸುತ್ತ ಬಂದಿರುವರೆಂಬುದನ್ನು ವಿವರಿಸಿದ್ದೇವೆ. ಅವರೆಲ್ಲರ ಹೆಸರುಗಳನ್ನು ಈ ವರದಿಯ ಗಾತ್ರದ ದೃಷ್ಟಿಯಿಂದ ಇಲ್ಲಿ ಕಾಣಿಸಿರುವುದಿಲ್ಲ. ಇದಕ್ಕೋಸ್ಕರ ನಾವು ಅವರ ಕ್ಷಮಾಪಣೆಯನ್ನು ಬೇಡಿಕೊಳ್ಳುತ್ತೇವೆ. ಒಟ್ಟಿಗೆ ಶಿವಾನುಭವ ಪತ್ರಿಕೆಯು ಕರ್ನಾಟಕದಲ್ಲಿ ವಿದ್ವಜ್ಜನರ ಒಂದು ಸಾಮೂಹಿಕ ಪ್ರಯತ್ನಗಳ ಫಲವಾಗಿದೆಂದು ನಾವು ಹೇಳಬಹುದು. ಇನ್ನು ಮೇಲೆ ಈ ಕಾರ್ಯದಲ್ಲಿ ನಮಗುಂಟಾದ ಕೆಲವು ಆತಂಕ, ನೆರವುಗಳನ್ನು ಕುರಿತು ವಿವರಿಸುವುದು ಅವಶ್ಯವೆನಿಸುತ್ತವೆ.

## ೫. ಆತಂಕ – ನೆರವು

ನಾನು ಶಿವಾನುಭವದ ಪತ್ರಿಕೆಯನ್ನು ೧೯೨೬ನೇ ಫೆಬ್ರವರಿಯಲ್ಲಿ ಪ್ರಾರಂಭಿಸಿದೆನು. ಆ ವರೆಗೆ ಲೇಖಕರಾಗಿ ಕಾರ್ಯಮಾಡುತ್ತ ಬಂದ ಶ್ರೀಯುತ ಸಂಗಪ್ಪ ಮಿರ್ಜಿ ಇವರನ್ನು ಪ್ರೆಸ್ಸಿನ ಮ್ಯಾನೇಜರರಾಗಿ ಮತ್ತು ಇನ್ನೊಬ್ಬರಾದ ಶ್ರೀ ಚಂದ್ರಶೇಖರಯ್ಯ ಮಠ ಇವರನ್ನು ಅವರ ಸಹಾಯಕರಾಗ್ಗಿ ನೇಮಿಸಿದೆನು. ಈ ಉಭಯತರು ಶಿವಾನುಭವ ಕಾರ್ಯದಲ್ಲಿ ನನಗೆ ಬಹಳ ಸಹಾಯಮಾಡುತ್ತ ಬಂದರು. ೫–೬ ವರ್ಷ ಕೆಲಸ ನಡೆಯುತ್ತಿರಲು ೧೯೩೧ ರಲ್ಲಿ ನನಗೆ ಅತ್ಯಂತ ಅಸ್ವಸ್ಥತೆಯುಂಟಾಯಿತು. ಆಗ ನಾನು ಮುಂಬಯಿಗೆ ಹೋಗಿ ಕೆ. ಇ. ಎಮ್. ಹಾಸ್ಪಿಟಲಿನಲ್ಲಿ ಮೂತ್ರಾಶಯದ ಬಗ್ಗೆ ಆಪರೇಶನ್ ಮಾಡಿಸಿಕೊಳ್ಳಬೇಕಾಯಿತು. ಆಗ ನನ್ನ ಹಿರಿಯ ಮಗನಾದ ಚಿ. ಚಂದ್ರಶೇಖರ ಇವರು ವ್ಹಿಕ್ಟೋರಿಯ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್‌ನಲ್ಲಿ ಅಭ್ಯಾಸ ಮಾಡಹತ್ತಿದ್ದರು. ಅವರಲ್ಲಿಯೂ ದವಾಖಾನೆಯಲ್ಲಿಯೂ ೨ ತಿಂಗಳ ವರೆಗೆ ನಾನು ಕಾಲ ಕಳೆಯಬೇಕಾಯಿತು. ಇದರಿಂದ ನನ್ನ ಶಿವಾನುಭವ ಕಾರ್ಯಗಳಿಗೆ ತಡೆಯುಂಟಾಯಿತು.

ಮುಂದೆ ಎರಡನೇ ಮಹಾಯುದ್ಧವು ಪ್ರಾರಂಭವಾಯಿತು. ಈ ಕಾಲದಲ್ಲಿ ಕಾಗದ ಮಸಿ ಮೊದಲಾದ ಪ್ರೆಸ್ಸಿನ ಉಪಕರಣಗಳೆಲ್ಲ ಬಹಳ ತುಟ್ಟಿಯಾದ್ದರಿಂದ ಒಮ್ಮೊಮ್ಮೆ ಅವು ಸಿಗದ್ದರಿಂದಲೂ ಪತ್ರಿಕೆಯ ಕಾರ್ಯಗಳನ್ನು ನಡೆಸುವುದು ಬಹಳ ದುಸ್ತರವಾಗಹತ್ತಿತು ಮತ್ತು ನನಗೆ ಹಾನಿಯೂ ಸಂಭವಿಸಿತು. ಆಗ ನಾನು ಶಿವಾನುಭವ ಪ್ರಚಾರಕ್ಕೋಸ್ಕರ ನನ್ನ ಪ್ರಚಾರಕರಾದ ಶ್ರೀ ವೀರಭದ್ರಯ್ಯ ಶಿವಯ್ಯ ಗುಡಿಗಂಟಿ ಇವರನ್ನು ಬೇರೆ ಬೇರೆ ಕಡೆಗೆ ಕಳಿಸಿಕೊಟ್ಟೆನು. ಅವರ ಪ್ರಚಾರದ ಕಾರ್ಯಗಳು ಬೆಳಗಾವಿ ಜಿಲ್ಲೆಯಲ್ಲಿ ಬಹಳ ಫಲಕಾರಿಯಾದವು. ಆಗ ಏರ್ಪಡಿಸಿದ್ದ ಶಿವಾನುಭವ ಆಪದ್ಧನ ನಿಧಿಗೆ ಈ ಜಿಲ್ಹೆಯವರು ಬಹಳ ಸಹಾಯ ಮಾಡಿದರು. ಇದಕ್ಕೋಸ್ಕರ ನಾನು ಇವರೆಲ್ಲರಿಗೆ ಬಹಳ ಋಣಿಯಾಗಿದ್ದೇನೆ. ಅವರು ಹೀಗೆ ಸಹಾಯ ಮಾಡದೆ ಹೋಗಿದ್ದರೆ ಶಿವಾನುಭವ ಪತ್ರಿಕೆಯನ್ನು ನಾನು ಪೂರ್ಣವಾಗಿ ನಿಲ್ಲಿಸುವ ಪ್ರಸಂಗವು ಉಂಟಾಗುತ್ತಿತ್ತು.

ಇದೇ ರೀತಿಯ ಕಠಿಣ ಪ್ರಸಂಗವು ೧೯೪೯ರಲ್ಲಿ ನನಗೊದಗಿತು. ನಾನು ರೇಲ್ವೆ ಪ್ರವಾಸ ಮಾಡುವಾಗ ಮೇಲೆ ಮಲಗಲು ಉಪಯೋಗಿಸುವ ಬರ್ಥವನ್ನು ಏರುವಾಗ ಕಾಲು ಜಾರಿ ನೆಲಕ್ಕೆ ಬಿದ್ದ ಮೂಲಕ ನನ್ನ ಹಿಮ್ಮಡಿನ ಎಲವು ಮುರಿಯಿತು. ಇದರಿಂದ ನಾನು ಸುಮಾರು ಒಂದು ವರ್ಷದವರೆಗೆ ಹಾಸಿಗೆಯನ್ನು ಹಿಡಿಯಬೇಕಾಯಿತು. ಈ ಕಾಲದಲ್ಲಿ ನನ್ನ ಪ್ರೆಸ್ಸಿಗೆ ಬಹಳ ಹಾನಿಯುಂಟಾಯಿತು ಅಲ್ಲದೆ ಅಂದಿನಿಂದ ಈ ವರೆಗೆ ನನಗೆ ಅನೇಕ ಬಗೆಯ ಶಾರೀರಿಕ, ಮಾನಸಿಕ ಮತ್ತು ಕೌಟುಂಬಿಕ ವಿಪತ್ತುಗಳು ಒದಗಿದವು. ಆದ್ದರಿಂದ ಕೆಲವು ತಿಂಗಳು ಪತ್ರಿಕೆಯನ್ನು ನಿಲ್ಲಿಸಬೇಕಾಯಿತು. ಆಫೀಸಿನ ಅವ್ಯವಸ್ಥೆಯೂ ಉಂಟಾಯಿತು. ಈ ಸ್ಥಿತಿಯು ಈಗ ಕ್ರಮೇಣ ಸುಧಾರಿಸುತ್ತಲಿದೆ. ಆದರೂ ಆಗ ನನಗೆ ಉಂಟಾದ ವಿಶೇಷ ಹಾನಿಯಿಂದ ನಾನು ಇನ್ನೂ ಪಾರಾಗಿರುವುದಿಲ್ಲ. ಆದರೆ ಬಸವಾದಿ ಪ್ರಮಥರ ಕರುಣೆಯಿಂದ ಅನುಕೂಲ ಕಾಲವು ಒದಗುವುದೆಂದು ಹಾರೈಸಿದ್ದೇನೆ.

ನಾನು ಶಿವಾನುಭವ ಪತ್ರಿಕೆಯನ್ನು ೧೯೨೬ರಲ್ಲಿ ಪ್ರಾರಂಭಿಸಿದ ಕಾಲದಲ್ಲಿ ಅದು ಹೊಸ ಪ್ರಯತ್ನವಾದ್ದರಿಂದ ನನಗೆ ಅನೇಕ ತೊಂದರೆಗಳುಂಟಾದವು. ನಷ್ಟಗಳೂ ಉಂಟಾದವು. ಆಗ

ನಾನು ಪ್ರಚಾರಕ್ಕೋಸ್ಕರ ಶ್ರೀ ಚಂದ್ರಶೇಖರಯ್ಯ ಮಠ ಇವರನ್ನು ಬೇರೆ ಬೇರೆ ಕಡೆಗೆ ಕಳಿಸಬೇಕಾಯಿತು. ಈ ಕಾಲದಲ್ಲಿ ಬಸವೇಶ್ವರನ ವಚನ ಪ್ರಸಿದ್ಧಿಸಿದವರಿಗೆ ಒಂದು ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ಕೈ. ವಾ. ಮಸಿಗಿ ಮರಿಶಾಂತಪ್ಪನವರು ಮು. ದಾವಣಗೆರೆ ಇವರು ಮೃತ್ಯುಪತ್ರ ಬರೆದಿಟ್ಟಿದ್ದರಿಂದ ಅದಕ್ಕನುಸರಿಸಿ ಅವರ ವಾರಸುದಾರರಾದ ಇಬ್ಬರು ಚಿರಂಜೀವಿಗಳೂ ಶ್ರೀಮತಿ ಮರಿಶಾಂತಮ್ಮನವರು ಸಿದ್ದಪ್ಪ (ಅಜ್ಜಂಪುರ), ಶ್ರೀಮತಿ ಗಂಗಮ್ಮನವರು ಮುರಿಗೆಪ್ಪ (ಹೊದ್ದಿಗೆರೆ) ಇವರು ನನಗೆ ದೇಣಿಗೆಯನ್ನು ಕಳಿಸಿಕೊಟ್ಟರು. ಈ ಹಣವು ಸಕಾಲದಲ್ಲಿ ಬಂದದ್ದರಿಂದ ಶಿವಾನುಭವ ಪತ್ರಿಕೆಗೆ ಬಹಳ ಸಹಾಯವಾಯಿತು. ಈ ಕಾರ್ಯದಲ್ಲಿ ನನಗೆ ಶ್ರೀ ಮನ್ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳು ಬಹಳ ಸಹಾಯಮಾಡಿದರು. ಮುಂದೆ ಶ್ರೀ ಮನ್ನಿರಂಜನ ಜಗದ್ಗುರು ಶ್ರೀ ಗುರುಸಿದ್ಧಸ್ವಾಮಿಗಳು ಮೂರು ಸಾವಿರ ಮಠ ಹುಬ್ಬಳ್ಳಿ ಇವರು ಪ್ರಭುದೇವರ ವಚನಕ್ಕೋಸ್ಕರ, ಶ್ರೀ ವೀರಭದ್ರಪ್ಪ ಹಾಲಭಾವಿ ನಿವೃತ್ತ ಸಿವಿಲ್ ಜಜ್ಜ ಧಾರವಾಡ ಇವರು ಶೂನ್ಯ ಸಂಪಾದನೆಗೋಸ್ಕರ, ಈಚೆಗೆ ಶ್ರೀ ಮೂರುಸಾವಿರದಪ್ಪ ಸಾದರಹಳ್ಳಿ (ಹುಬ್ಬಳ್ಳಿ), ಶ್ರೀ ಶಿವಯೋಗಿ ಬಂಥನಾಳ ಸ್ವಾಮಿಗಳವರು ಮತ್ತು ಶ್ರೀ ನೇಮಪ್ಪ ಕಾಡಾದಿ ಸೊಲ್ಲಾಪುರ ಇವರು ಬಸವೇಶ್ವರ ವಚನಗಳನ್ನು ಪ್ರಸಿದ್ಧಿಸುವುದಕ್ಕೋಸ್ಕರ ಬಹಳ ಸಹಾಯಮಾಡಿದರು. ಕೈ. ವಾ. ಮಂಜಪ್ಪ ಹರ್ಡೇಕರ ಅವರು ವಚನಶಾಸ್ತ್ರಸಾರ ಭಾಗ-೨ ಗ್ರಂಥವು ಬಹಳ ಮಹತ್ವದ್ದೆಂದು ತಿಳಿದು, ಅದರ ಅಚ್ಚಿಗೆ ಹತ್ತುವಷ್ಟು ಹಣವನ್ನು ವಿಜಾಪುರ ಜಿಲ್ಲೆಯಲ್ಲಿ ಸಂಚರಿಸಿ ಶೇಖರಿಸಿದರು. ಹೀಗೆ ಸಹಾಯಮಾಡಿದ ಈ ಮಹನೀಯರಿಗೆಲ್ಲ ನಾನು ಅತ್ಯಂತ ಋಣಿಯಾಗಿದ್ದೇನೆ. ಇವಲ್ಲದೆ ಮಧ್ಯದಲ್ಲಿ ಕೆಲವು ಚಿಕ್ಕ ದೇಣಿಗೆಗಳು ಬಂದಿವೆ. ಹೀಗೆ ಸಹಾಯ ಮಾಡಿದವರಿಗೆಲ್ಲ ನಾನು ಕೃತಜ್ಞನಾಗಿದ್ದೇನೆ.

❖❖

# ಉತ್ತರಾರ್ಧ

(೧೯೫೧-೧೯೬೧)

೧೯೨೬ ಫೆಬ್ರವರಿ ೧ ರಂದು ಹುಟ್ಟಿದ ಶಿವಾನುಭವ ಪತ್ರಿಕೆ ಮೊದಲಿನ ೩ ವರ್ಷ ತ್ರೈಮಾಸಿಕವಾಗಿ, ಬಳಿಕ ೨ ವರ್ಷ ಮಾಸಿಕವಾಗಿ, ಆಮೇಲೆ ೫ ವರ್ಷ ದ್ವೈಮಾಸಿಕವಾಗಿ ರೂಪ ಬದಲಿಸಿಕೊಳ್ಳುತ್ತ ೧೦ ವರ್ಷ ಹಾದಿ ಕ್ರಮಿಸಿತು. ಬಳಿಕ ೧೧ ರಿಂದ ೩೫ ನೆಯ ವರ್ಷದ ವರೆಗೆ ಮಾಸಿಕವಾಗಿ ಮುಂದುವರಿಯಿತು. ಈ ಅವಧಿಯಲ್ಲಿ ಅಚ್ಚಿನ ತೊಂದರೆ, ಆರ್ಥಿಕ ಮುಗ್ಗಟ್ಟು ಕಾರಣವಾಗಿ ಅದು ಕೆಲವೊಮ್ಮೆ ಸಂಯುಕ್ತ ಸಂಚಿಕೆಗಳನ್ನು ಪ್ರಕಟಿಸಿತು. ಹೀಗೆ ನಿಯತದಲ್ಲಿಯೇ ಒಂದಿಷ್ಟು ಅನಿಯತವೆಂಬಂತೆ ತನ್ನ ಒಟ್ಟು ೩೫ ವರ್ಷಗಳಲ್ಲಿ ೩೫ ಸಂಪುಟಗಳನ್ನು ಅಂದರೆ ೩೧೯ ಸಂಚಿಕೆಗಳನ್ನು ಹೊರ ತಂದು ಸ್ಥಗಿತವಾಯಿತ್ತು (೧೯೬೧) ಒಂದು ಸಂಚಿಕೆಗೆ ಸರಾಸರಿ ೬೪ ಪುಟ ಹಿಡಿದರೆ ಒಟ್ಟು ೨೦೪೧೬ ಪುಟಗಳ ಸಾಹಿತ್ಯವನ್ನು ವೀರಶೈವಸಮಾಜಕ್ಕೆ, ಕರ್ನಾಟಕದ ಪತ್ರಿಕಾ ಕ್ಷೇತ್ರಕ್ಕೆ ಶಿವಾನುಭವ ನೀಡಿತೆಂದು ಹೇಳಬಹುದು.

ಈ ಪತ್ರಿಕೆಗೆ ೨೫ ವರ್ಷ ತುಂಬುವಲ್ಲಿ (೧೯೫೧) ನನಗೆ ೭೧ ವರ್ಷ ತುಂಬಿದವು. ಬಳಿಕ ದೈಹಿಕ ಅನಾರೋಗ್ಯ, ಆರ್ಥಿಕ ಅಡಚಣೆಗಳಲ್ಲಿಯೇ ಈ ಮಾಸಿಕ ಪತ್ರಿಕೆ ಮುಂದೆ ೧೦ ವರ್ಷ ಮುನ್ನಡೆಯಿತು. ಈ ಅವಧಿಯಲ್ಲಿ ಮ್ಯಾನೇಜರರಾಗಿ ಶ್ರೀ ಲಿಂಗಣ್ಣ ಬಾಣದ, ಕೊನೆಕೊನೆಗೆ ನನ್ನ ಮಗ ಚಿ. ಗುರುಪುತ್ರಪ್ಪ ಕಾರ್ಯ ನಿರ್ವಹಿಸಿದರು. ಪತ್ರಿಕೆಯ ಚಂದಾದಾರರ ಸಂಖ್ಯೆಯನ್ನು ಕಾಯ್ದುಕೊಂಡು ಹೋಗುವ ಉದ್ದೇಶಕ್ಕಾಗಿ ಆಗಾಗ ವಿನಂತಿಪತ್ರವನ್ನು ಮುದ್ರಿಸುತ್ತಿದ್ದೆನಾದರೂ ಇದು ಫಲಕಾರಿಯಾಗದೆ ೩೫ನೆಯ ಸಂಪುಟದ ೧-೨ ಸಂಯುಕ್ತ ಸಂಚಿಕೆಯೊಂದಿಗೆ ಈ ಪತ್ರಿಕೆ ನಿಂತುಕೊಂಡಿತು (೧೯೬೦). ಆಗ ನನಗೆ ೮೧ ವರ್ಷ ವಯಸ್ಸು.

ಪತ್ರಿಕೆಯ ಪ್ರಕಟನೆ, ವೀರಶೈವ ಗ್ರಂಥಗಳ ಪ್ರಕಟನೆ ಅಸಾಧ್ಯದ ಅಂಚನ್ನು ಮುಟ್ಟಿದಾಗ ನಾನು ಶಿವಾನುಭವ ಸಂಘಟನೆ ಹೆಸರಿನ ಸಂಪಾದಕೀಯ ಬರೆದು (೨೮-೮) ಸಾರ್ವಜನಿಕರು ಇದಕ್ಕಾಗಿ ಒಂದು ನಿಧಿಸ್ಥಾಪಿಸಲು ಸೂಚಿಸಿದೆನು. ಈ ಸೂಚನೆಯನ್ನು ಅನುಮೋದಿಸಿ ತೆಗ್ಗಿಹಳ್ಳಿಯ ಶ್ರೀ ಶಿವಾನಂದಸ್ವಾಮಿಗಳು ತೆಗ್ಗಿಮಠ ಅವರು ಶಿವಾನುಭವ ಪತ್ರಿಕೆಯಲ್ಲಿ ನೇರವಾಗಿ, ಪರ್ಯಾಯವಾಗಿ ಅನೇಕ ಲೇಖನಗಳನ್ನು ಬರೆದರು. ಹುನ್ನೂರಿನ ಶ್ರೀ ಶಿ. ಸಾ. ಮಹಾಂತಣ್ಣನವರ ಅವರು ಬೆಂಬಲ ವ್ಯಕ್ತಪಡಿಸಿದರು. ಶ್ರೀ ಬಂಥನಾಳ ಸ್ವಾಮಿಗಳು ೫೦೦೦ ರೂ. ವಾಗ್ದಾನ ಮಾಡಿದರು.

ಮುಧೋಳ ಮೃತ್ಯುಂಜಯಸ್ವಾಮಿಗಳಂತೂ ತಮ್ಮ ಅಧ್ಯಕ್ಷತೆಯಲ್ಲಿ ನಿಧಿಸಂಗ್ರಹ ಸಮಿತಿಯನ್ನು ಅಸ್ತಿತ್ವಕ್ಕೆ ತಂದು ಅಲ್ಲಲ್ಲಿ ಹಣ ಸಂಗ್ರಹಿಸಿ ನನಗೆ ಒದಗಿಸಿದರು. ಶ್ರೀ. ಎಸ್. ಆರ್. ಪಾಟೀಲ ಮಾಸ್ತರರು ಬೇಸಿಗೆ ಬಿಡುವಿನಲ್ಲಿ ಸ್ವಯಂ ಸ್ಫೂರ್ತಿಯಿಂದ ಊರೂರು ಅಲೆದು, ಹಣ ಸಂಗ್ರಹಿಸಿ ಕೊಟ್ಟರು. ಹುಬ್ಬಳ್ಳಿಯ ಶ್ರೀ ಅನ್ನದಾನೀಶ್ವರ ಹಿರೇಮಠ, ಚೋಳಚಗುಡ್ಡದ ಚಂದ್ರಶೇಖರಯ್ಯ, ರೇವಣಸಿದ್ದಪ್ಪ ಶೀಲವಂತ, ಮಠದ ಪರ್ವತಯ್ಯ ಮೊದಲಾದವರು ಆರ್ಥಿಕ ಸಹಾಯದ ಅವಶ್ಯಕತೆ ಮತ್ತು ಪತ್ರಿಕೆಯ ಮಹತ್ವವನ್ನು ಕುರಿತು ಲೇಖನ ಬರೆದರು. ವಿಜಾಪುರದ ಸಿದ್ಧೇಶ್ವರ ಬ್ಯಾಂಕಿನವರು ನಿಧಿಸಂಗ್ರಹ ವಿಜ್ಞಾಪನ ಪತ್ರ ಪ್ರಕಟಿಸಿದರು. ಹಾವೇರಿ, ಚೋಳಚಗುಡ್ಡ, ಮುಧೋಳ, ಬನಹಟ್ಟಿ, ಧಾರವಾಡದ ನವಕಲ್ಯಾಣ ಮಠಗಳಲ್ಲಿ ನನಗೆ ಹಣ ಕೂಡಿಸಿ ಕೊಟ್ಟರು. ಗದುಗಿನ ಮಲ್ಲಿಕಾರ್ಜುನ ಸ್ವಾಮಿಗಳು ತಮ್ಮ ಪ್ರವಚನಗಳಲ್ಲಿ ಶಿವಾನುಭವ ಪತ್ರಿಕೆಯ ಸುದೀರ್ಘ ಸೇವೆಯನ್ನು ಕೊಂಡಾಡಿ, ಧನಸಹಾಯ ಮಾಡಲು ಜನರನ್ನು ಪ್ರೋತ್ಸಾಹಿಸಿದರು. ಈ ಎಲ್ಲ ಪ್ರಯತ್ನಗಳು ತುಂಬ ಶ್ಲಾಘನೀಯವಾದರೂ ಪತ್ರಿಕೆಯನ್ನು ಬದುಕಿಸುವಷ್ಟು ಸಶಕ್ತವಾಗಿರಲಿಲ್ಲ.

ನನ್ನ ಸೇವೆಯನ್ನು ಗಮನಿಸಿ ಈ ಅವಧಿಯಲ್ಲಿ ಶಿವಾನುಭವ ಪತ್ರಿಕೆ (೨೯-೧೧), ಡಾ. ರಾವ್ ಬಹದ್ದೂರ ಹಳಕಟ್ಟಿಯವರ ಕಾಯಕ ಕೀರ್ತಿ (೩೧-೩), ರಾವ್ ಬಹುದ್ದೂರ ಹಳಕಟ್ಟಿಯವರು (೩೪-೫) ಶೀರ್ಷಿಕೆಯ ಕವನಗಳನ್ನು ಆತ್ಮೀಯರು ಪ್ರಕಟಿಸಿದರು. ವಿಜಾಪುರದ ವಕೀಲರ ಸಂಘ, ಧಾರವಾಡ ಮುರುಘಾಮಠ, ಬನಹಟ್ಟಿಯ ಸಾರ್ವಜನಿಕರು ಹೀಗೆ ಅನೇಕ ಗ್ರಾಮದ ಜನರು ಮಾನಪತ್ರ ಸಮರ್ಪಿಸಿದರು. ಇವೆಲ್ಲವುಗಳಿಗೆ ಕಳಸವಿಟ್ಟಂತೆ ಕರ್ನಾಟಕ ವಿಶ್ವವಿದ್ಯಾಲಯ ೧೯೫೬ರಲ್ಲಿ ಶ್ರೀ ಬಿ. ಜಿ. ಖೇರ, ಮಾಸ್ತಿ ವೆಂಕಟೇಶ ಅಯ್ಯಂಗಾರ ಮೊದಲಾದವರ ಜೊತೆ ಡಿಲಿಟ್ ಪದವಿಯನ್ನು ನೀಡಿ ಗೌರವಿಸಿತು. ಇಷ್ಟೆಲ್ಲ ವಿನಂತಿ, ಪ್ರಚಾರ, ಗೌರವ, ಸನ್ಮಾನಗಳು ನಡೆದರೂ ಜನತೆ ನೀಡುತ್ತ ಬಂದ ಹಣ ನನ್ನ ವ್ಯಾಪಕ ಯೋಜನೆಗೆ ಸಾಲದೇ ಹೋಯಿತು. ಶಿವಾನುಭವ ಪತ್ರಿಕೆ ಕುಂಟುತ್ತಲೇ ಸಾಗಿತು. ಹೀಗಿದ್ದೂ ನಾನು ಧೃತಿಗೆಡದಿರುವುದಕ್ಕೆ ನನ್ನ ಈ ಜೀವನದೃಷ್ಟಿ ಕಾರಣವಾಗಿದ್ದಿತು. ರಚನಾತ್ಮಕ ಕಾರ್ಯಗಳಿಂದ ಆರೋಗ್ಯಮಯ ಹಾಗೂ ಉಪಯುಕ್ತ ಜೀವನವನ್ನು ಬದುಕಲು ಸಾಧ್ಯವೆಂದು ತೋರಿಸುವುದೇ ನನ್ನ ಉದ್ದೇಶವಾಗಿದೆ. ಅದು ಜೀವನವನ್ನು ಹಿಗ್ಗಿಸುತ್ತದೆ ಮತ್ತು ಮನುಷ್ಯನು ಉತ್ಸಾಹಶಾಲೀ ಹಾಗೂ ಸಮರ್ಥನನ್ನಾಗಿ ಮಾಡುತ್ತದೆ. ಜೀವನದಲ್ಲಿ ಯಾವಾಗಲೂ ತೊಂದರೆಗಳು ಬಂದೇ ಬರುತ್ತವೆ. ಅವುಗಳನ್ನು ನಿವಾರಿಸಲು ಮಾಡುವ ಪ್ರಯತ್ನ ಯಾವಾಗಲೂ ಉತ್ಸಾಹವನ್ನು ತಂದು ಕೊಡುತ್ತದೆ. ಈ ರೀತಿ ಮನುಷ್ಯನು ಕ್ರಮವಾಗಿ ಮುಂದುವರಿಯಬೇಕು. ನಾವು ಮುಂದುವರಿದಂತೆ ಹೊಸ ಸನ್ನಿವೇಶ ಹಾಗೂ ಸಮಸ್ಯೆಗಳು ಬರುತ್ತವೆ. ಅವುಗಳನ್ನು ನಾವು ಎದುರಿಸಬೇಕಾಗುತ್ತದೆ. ಆದರೆ ಮನುಷ್ಯನು ನಿರಾಶನಾಗಬಾರದು. ಏಕೆಂದರೆ ನಾವು ಕೈಕೊಂಡ ಕೆಲಸಗಳಲ್ಲಿ ಯಾವಾಗಲೂ ಆಸೆಯ ಕಿರಣಗಳು ಇದ್ದೇ ಇರುತ್ತವೆ. ಈ ಆಶಾಕಿರಣ ಶಿವಾನುಭವವನ್ನು ಒಟ್ಟು ೩೫ ವರ್ಷ ಮುನ್ನಡೆಸಿತು.

ಪ್ರಾರಂಭದಲ್ಲಿ ೩ ರೂಪಾಯಿ ೧೨ ಆಣೆ ಇದ್ದ ವಾರ್ಷಿಕ ಚಂದಾ ಹಣ, ಕೊನೆ ಕೊನೆಗೆ ೫ ರೂ. ೧೨ ಆಣೆ ತಲುಪಿತು. ಇದನ್ನು ೬ ರೂ. ಗೆ ಏರಿಸಿದ ವಿನಂತಿಪತ್ರ ದೊಂದಿಗೆ (೩೫-೧,೨) ಪತ್ರಿಕೆ ನಿಂತು ಹೋಯಿತು. ೬ ರೂಪಾಯಿ ವರ್ಗಣಿ ಅಸ್ತಿತ್ವಕ್ಕೆ ಬರಲೇ ಇಲ್ಲ.

೧೯೫೧ನೇಯ ಇಸ್ವಿಯ ಸಂಪುಟ ೨೬ ರಿಂದ ೧೯೬೦ನೆಯ ಇಸ್ವಿಯ ಸಂಪುಟದ ೩೫ರ ವರೆಗಿನ ೧೦ ವರ್ಷದ ಅವಧಿಯಲ್ಲಿ ಶಿವಾನುಭವ ಪ್ರಕಟಿಸಿದ ಎಲ್ಲ ಬರವಣಿಗೆಯನ್ನು ೧ ಪ್ರಾಚೀನ ಗ್ರಂಥಗಳು, ೨. ಸ್ವತಂತ್ರ ಗ್ರಂಥಗಳು, ೩. ನನ್ನ ಲೇಖನಗಳು, ೪. ವಿದ್ವಾಂಸರ ಲೇಖನಗಳು, ೫. ಮಹತ್ವದ ಸುದ್ದಿಗಳು ೬. ಸ್ಪುಟ ವಿಷಯಗಳು ಹೆಸರಿನ ಸಂಪಾದಕೀಯಗಳೆಂದು ವರ್ಗೀಕರಿಸಬಹುದು.

## ೬. ಪ್ರಾಚೀನ ಗ್ರಂಥಗಳು

ಶಿವಾನುಭವ ಪತ್ರಿಕೆ, ಮೊದಲಿನಿಂದಲೂ ಪ್ರಾಚೀನ ವೀರಶೈವ ಗ್ರಂಥಗಳನ್ನು ಮತ್ತು ನಾನು ರಚಿಸಿದ ಸ್ವತಂತ್ರ ಗ್ರಂಥಗಳನ್ನು ಧಾರಾವಾಹಿ ರೂಪದಲ್ಲಿ ಪ್ರಕಟಿಸುತ್ತ ಬಂದಿದೆ. ಈ ಉತ್ತರಾರ್ಧ ಅವಧಿಯಲ್ಲಿಯೂ ಅದು ಪ್ರಕಟಿಸಿದ ಪ್ರಾಚೀನಗ್ರಂಥಗಳು ಹೀಗಿವೆ:

೧. **ಅರಿವಿನ ಮಾರಿತಂದೆಗಳ ವಚನಗಳು** : ಹಿಂದಿನ ಸಂಪುಟದಿಂದ ಆರಂಭವಾಗಿದ್ದು ಈ ಶರಣನ ವಚನಗಳ ಪ್ರಕಟನೆಯನ್ನು ಟೀಕಾ ಸಹಿತ (೨೬-೬) ಮುಕ್ತಾಯಗೊಳಿಸಲಾಯಿತು. ಈ ಗ್ರಂಥ ೭೯ ವಚನಗಳನ್ನೊಳಗೊಂಡಿದೆ.

೨. **ಸಟೀಕು ಬಸವೇಶ್ವರನ ವಚನಗಳು** : ಬಸವಣ್ಣನವರ ವಚನಗಳು ವೀರಶೈವದ ಮುಖ್ಯ ಸಂಪತ್ತು. ಈ ಕೃತಿ ಜನಪ್ರಿಯವಾಗುವುದರ ಸಲುವಾಗಿ ಟೀಕೆ ಬರೆದು ೨೭-೩ನೆಯ ಸಂಚಿಕೆಯಿಂದ ಅದರ ಪ್ರಕಟಣೆಯನ್ನು ಪ್ರಾರಂಭಿಸಿ, ೨೭-೧೦ ರವರೆಗೆ ಮುಂದುವರೆಸಿ, ಮುಗಿಸಲಾಯಿತು. ಇದರಲ್ಲಿ ೯೩ ವಚನಗಳಿಗೆ ಟೀಕೆ ಬರೆಯಲಾಗಿದೆ.

೩. **ಸಕಲಾಗಮ ಶಿಖಾಮಣಿ ವಚನ** : ಅಪ್ರಮಾಣ ಕೂಡಲ ಸಂಗಮ ದೇವಾ ಮುದ್ರಿಕೆಯ ಈ ಕೃತಿ ಪ್ರಕಟನೆ ಪ್ರಾರಂಭವಾದುದು ೨೮-೩ನೆಯ ಸಂಚಿಕೆಯಿಂದ, ಮುಗಿದುದು ೩೧-೩ ನೆಯ ಸಂಚಿಕೆಯಲ್ಲಿ.

೪. **ನೂರೊಂದರ ಹಾಡುಗಳು** : ಏಕೋತ್ತರ ಶತಸ್ಥಲ ವೀರಶೈವ ಸಾಹಿತ್ಯದ ಮುಖ್ಯ ಗ್ರಂಥ. ಸೂತ್ರ, ವಚನ, ಹಾಡುಗಳನ್ನು ಜೋಡಿಸಿ ರೂಪಿಸಿದ ಮಹಾಲಿಂಗದೇವನ ಏಕೋತ್ತರ ಶತಸ್ಥಲ ತುಂಬ ಪ್ರಸಿದ್ಧವಿದೆ. ಈ ಕೃತಿಯಿಂದ ಕೇವಲ ಸೂತ್ರ - ಹಾಡುಗಳನ್ನು ಎತ್ತಿಕೊಂಡು ಶಿಷ್ಯನಾದ ಜಕ್ಕಣಾರ್ಯ ರೂಪಿಸಿದ ಗ್ರಂಥವಾಗಿದೆ. ನೂರೊಂದರ ಹಾಡುಗಳು. ಈ ಕೃತಿಯನ್ನು ೨೯-೫ನೆಯ ಸಂಚಿಕೆಯಿಂದ ಆರಂಭಿಸಿ ೩೧-೩ನೆಯ ಸಂಚಿಕೆಯ ವರೆಗೆ ಪ್ರಕಟಿಸಲಾಯಿತು.

ವಚನಗಳನ್ನು ಸಂಗೀತ ಮಾಧ್ಯಮದಲ್ಲಿ ಪ್ರಚಾರಪಡಿಸಲು ಯೋಚಿಸಿ ಶ್ರೀ ಸಿದ್ಧೇಶ್ವರ ಹೈಸ್ಕೂಲಿನ ಸಂಗೀತ ಶಿಕ್ಷಕರಾದ ಪಿ. ವ್ಹಿ. ಪಾಟೀಲ ಅವರ ಮೂಲಕ ಆ ಕೆಲಸವನ್ನು ೧೯೩೮ ರಷ್ಟು ಪೂರ್ವದಲ್ಲಿಯೇ ಪ್ರಾರಂಭಿಸಿದ್ದೆನು. ಹೀಸ್ ಮಾಸ್ಟರ್ಸ್ ವೈಸ್ ಕಂಪನಿಯಲ್ಲಿ ಧ್ವನಿ ಮುದ್ರಣವನ್ನು ಮಾಡಿಸಿದ್ದೆನು. ದಯವಿಲ್ಲದ ಧರ್ಮ (ರಾಗ: ಷಟ್‌ದೀಪ್, ತಾಳ: ತ್ರಿತಾಳ), ಚಕೋರಂಗೆ ಚಂದ್ರಮನ (ರಾಗ: ಭೈರವಿ, ತಾಳ : ದಾದರು) - ಇವುಗಳ ಹಿಂದುಸ್ಥಾನಿ ಪದ್ಧತಿಯಲ್ಲಿ ಮೊದಲು ಹಾಡಿದ ವಚನಗಳು, ಶ್ರೀ ಪಾಟೀಲ ಅವರಿಂದ ೭೫ ವಚನಗಳಿಗೆ ರಾಗ-ತಾಳ ಸಂಯೋಜನೆ ಮಾಡಿ

ಸಂಗೀತದಲ್ಲಿ ಶಿವಶರಣರ ವಚನಗಳು ಹೆಸರಿನ ಪುಸ್ತಕವನ್ನು ಪ್ರಕಟಿಸಿದ್ದೆನು (೧೯೪೦). ಈಗ ನನಗೆ ಈ ಬಗೆಯ ಶರಣರ ಹಾಡುಗಳ ಗತಿಯನ್ನು ಕಂಡು ಸಂತೋಷವಾಯಿತು. ಹೀಗಾಗಿ ನೂರೊಂದರ ಹಾಡುಗಳು ಕೃತಿಯನ್ನು ಪತ್ರಿಕೆಯ ಮೂಲಕ ಪ್ರಕಟಿಸಲು ಆರಂಭಿಸಿದೆನು.

**೫. ಸದಾಶಿವ ನೀತಿ :** ಸ್ವಾದಿ ಅರಸು ಸದಾಶಿವರಾಯ ವಿರಚಿತ ನೀತಿರೂಪದ ಪದ್ಯಕೃತಿಯಾದ ಸದಾಶಿವ ನೀತಿಯನ್ನು ಸಂಪೂರ್ಣವಾಗಿ ಪ್ರಕಟಿಸಲು ಯೋಚಿಸಿದೆನಾದರೂ ೩೧-೭ನೆಯ ಸಂಚಿಕೆಯಲ್ಲಿ ಆರಂಭದ ೩೨ ಪದ್ಯಗಳು ಮಾತ್ರ ಬೆಳಕು ಕಂಡವು.

ಹೀಗೆ ಉತ್ತರಾರ್ಧ ಅವಧಿಯಲ್ಲಿ ನಾನು ಮೇಲೆ ಹೇಳಿದ ಪ್ರಾಚೀನ ಗ್ರಂಥಗಳನ್ನು ಶಿವಾನುಭವ ಪತ್ರಿಕೆಯ ಮೂಲಕ ಪ್ರಕಟಿಸಿದೆನು.

## ೭. ಸ್ವತಂತ್ರ ಗ್ರಂಥಗಳು

ವೀರಶೈವ ಸಾಹಿತ್ಯ, ತತ್ವ, ಸಮಾಜಗಳನ್ನು, ಕುರಿತು ಬರೆಯುತ್ತ ಬಂದ ನಾನು, ಆ ಕೆಲಸವನ್ನು ಶಿವಾನುಭವ ಪತ್ರಿಕೆಯ ೨೫ನೆಯ ವರ್ಷದ ಬಳಿಕವೂ ಮುಂದುವರಿಸಿ, ಕೆಳಗಿನ ಗ್ರಂಥಗಳನ್ನು ಸಂಚಿಕೆಗಳಲ್ಲಿ ಪ್ರಕಟಿಸುತ್ತ ಹೋದೆನು.

**೧. ವಚನ ಶಾಸ್ತ್ರಸಾರ ಭಾಗ – ೩ ಉತ್ತರಾರ್ಧ :** ವಚನ ಶಾಸ್ತ್ರಸಾರ ನನ್ನ ಮಹಾತ್ವಾಕಾಂಕ್ಷಿ ಕೃತಿ. ಈ ಮೊದಲು ಈ ಹೆಸರಿನ ಎರಡು ಭಾಗಗಳನ್ನು, ಮೂರನೆಯ ಭಾಗದ ಪೂರ್ವಾರ್ಧವನ್ನು ಪ್ರಕಟಿಸಿದ್ದೆನು. ಇದರ ಉತ್ತರಾರ್ಧವನ್ನು ಹಿಂದಿನ ಸಂಪುಟಗಳಲ್ಲಿ ಪ್ರಕಟಿಸತೊಡಗಿ ೨೭-೩ರ ವರೆಗೆ ಮುಂದುವರಿಸಿ ಮುಕ್ತಾಯಗೊಳಿಸಿದೆನು. ಇದರಿಂದಾಗಿ ವೀರಶೈವ ತತ್ವಗಳನ್ನು ವಚನಸಾಹಿತ್ಯದ ಸಹಾಯದಿಂದ ಪುನರ್ರಚಿಸಿದ ನೆಮ್ಮದಿ ನನ್ನದಾಯಿತು. ಈ ಸಂಪುಟಗಳು ವೀರಶೈವ ಸಿದ್ಧಾಂತ, ಸಾಹಿತ್ಯದ ಬಹು ಮುಖ್ಯ ಬರವಣಿಗೆಗಳೆಂದು ವಿದ್ವಾಂಸರು ಇವುಗಳನ್ನು ಮನ್ನಿಸಿದರು.

**೨) ಶಿವಶರಣರ ಚರಿತ್ರೆಗಳು ಭಾಗ–೪ :** ವಚನಶಾಸ್ತ್ರಸಾರದಂತಹ ಇನ್ನೊಂದು ದೊಡ್ಡ ಕೆಲಸ ಶಿವಶರಣ ಚರಿತ್ರೆಯ ಪ್ರಕಟನೆ. ಮಾಡಿದೆನೆಂಬುದು ಮನದಲ್ಲಿ ಹೊಳೆದರೆ ಏಡಿಸಿತ್ತು. ಕಾಡಿತ್ತು ಶಿವನ ಡಂಗುರ ಎಂಬ ಧೋರಣೆಗನುಗುಣವಾಗಿ ಶಿವಶರಣರು ತಾವು ಮಾಡಿದ ಯಾವುದೇ ಕಾರ್ಯವನ್ನು ದಾಖಲಿಸಲಿಲ್ಲ. ಆಕಾಯ ಚರಿತ್ರೆಯನ್ನು ನಂಬಿದ್ದ ಅವರು ತಮ್ಮ ಕಾಯಚರಿತ್ರೆಯನ್ನು ಬರೆಯಲಿಲ್ಲ. ಬರೆಯಿಸಲಿಲ್ಲ. ಆದರೆ ಆಮೇಲೆ ಬಂದ ವೀರಶೈವ ಕವಿಗಳು ಕಾವ್ಯ–ಪುರಾಣಗಳಲ್ಲಿ ಇವರ ಚರಿತ್ರೆಯನ್ನು ಪವಾಡ ಸಹಿತ ದಾಖಲಿಸಿದರು. ಈ ಆಕರ ಸಾಮಗ್ರಿ ಸಂಖ್ಯೆಯಲ್ಲಿ ವಿಪುಲವಾಗಿದ್ದರೂ ಅಭಿಪ್ರಾಯಭೇದ ಎದ್ದು ತೋರುತ್ತದೆ. ಈ ಭೇದವನ್ನು ನಿವಾರಿಸಿ ಸರ್ವಸಮ್ಮತ ಚರಿತ್ರೆಯನ್ನು ರೂಪಿಸಿ ಕೊಡುವುದು ಅಗತ್ಯವೆನಿಸಿದ ಕಾರಣ, ನಾನು ಆ ಕಾರ್ಯವನ್ನು ಕೈಗೆತ್ತಿಕೊಂಡೆನು. ಈ ಮೊದಲು ೩ ಭಾಗವನ್ನು ಪ್ರಕಟಿಸಿದ್ದ ನಾನು ಶಿವಾನುಭವ ಪತ್ರಿಕೆಯ ೨೬–೩ರಿಂದ ೪ ನೆಯ ಭಾಗವನ್ನು ಪ್ರಕಟಿಸಲು ತೊಡಗಿ, ೨೯–೧ ರ ವರೆಗೆ ಮುಂದುವರಿಸಿ ಮುಕ್ತಾಯಗೊಳಿಸಿದೆನು. ಇದರಿಂದ ಶರಣರ ಚರಿತ್ರೆ ಓದುಗರಿಗೆ ಸಹಜ ಲಭ್ಯವಾಯಿತು. ಉಪನ್ಯಾಸಕರಿಗೆ, ಸಂಶೋಧಕರಿಗೆ ತುಂಬಾ ಪ್ರಯೋಜಕವೆನಿಸಿತು.

**೩. ೭೭೦ ಅಮರ ಗಣಾಧೀಶ್ವರರು :** ವಿಜಾಪುರದಲ್ಲಿ ಜರುಗಿದ ೭೭೦ ಅಮರ ಗಣಾಧೀಶ್ವರರ ಮಂಟಪ ಪೂಜಾ ಸಮಾರಂಭ ಒಂದು ಐತಿಹಾಸಿಕ ಘಟನೆ. ಈ ಸಂದರ್ಭದಲ್ಲಿ ಅಮರ ಗಣಗಳ

ಚರಿತ್ರೆಯನ್ನು ಬರೆದು ಶಿವಾನುಭವ ಪತ್ರಿಕೆಯಲ್ಲಿ ೨೮-೯ ರಿಂದ ಪ್ರಕಟಿಸಲು ಪ್ರಾರಂಭಿಸಿ, ಅನೇಕ ಸಂಚಿಕೆಗಳವರೆಗೆ ಮುಂದುವರಿಸಿ ಮುಕ್ತಾಯಗೊಳಿಸಲಾಯಿತು.

**೪. ಬಸವೇಶ್ವರನ ಚರಿತ್ರೆ :** ವೀರಶೈವರ ಕೇಂದ್ರ ವ್ಯಕ್ತಿಯಾಗಿರುವ ಬಸವಣ್ಣನವರ ಚರಿತ್ರೆ ಅನೇಕ ವಿರೋಧಾಭಾಸ ಆಕರಗಳಿಂದ ಕೂಡಿದೆ. ಇವೆಲ್ಲವನ್ನು ಸಮೀಕರಿಸಿಕೊಂಡು ಮೂಲಕ್ಕೆ ಸಮೀಪವಾಗಿರುವ ಚರಿತ್ರೆಯನ್ನು ಬರೆಯುವುದು ಇಂದಿನ ತೀರ ಅವಶ್ಯಕತೆಯಾಗಿದ್ದಿತು. ಹೀಗಾಗಿ ಈ ಪುಸ್ತಕವನ್ನು ಬರೆದು, ಶಿವಾನುಭವ ಪತ್ರಿಕೆಯ ೨೯-೫ನೆಯ ಸಂಚಿಕೆಯಿಂದ ಪ್ರಕಟನೆಯನ್ನು ಆರಂಭಿಸಿ ಮುಗಿಸಿದೆನು.

**೫. ಶಿವಶರಣೆಯರ ಚರಿತ್ರೆಗಳು :** ಈ ಹಿಂದೆ ಶಿವಶರಣರ ಚರಿತ್ರೆಗಳನ್ನು ನಾಲ್ಕು ಭಾಗಗಳಲ್ಲಿ ಪ್ರಕಟಿಸಿದ ನಾನು, ಪ್ರತ್ಯೇಕವಾಗಿ ಶಿವಶರಣೆಯರ ಚರಿತ್ರೆಗೆ ಸಂಬಂಧಿಸಿದ ಕೃತಿಯನ್ನು ಬರೆದು ಶಿವಾನುಭವ ಪತ್ರಿಕೆಯ ಮೂಲಕ ಪ್ರಕಟಿಸಲು ನಿರ್ಧರಿಸಿದೆ. ಅನೇಕ ಮೂಲಗಳಿಂದ ವಿಷಯವನ್ನು ಸಂಗ್ರಹಿಸಿ, ಈ ಪತ್ರಿಕೆಯ ೩೨-೧೦ನೆಯ ಸಂಚಿಕೆಯಿಂದ ಪ್ರಾರಂಭಿಸಿ, ೩೩-೧ನೆಯ ಸಂಚಿಕೆಗೆ ಮುಕ್ತಾಯಗೊಳಿಸಿದೆನು. ಇದರಲ್ಲಿ ೪೫ ಜನ ಶಿವಶರಣೆಯರ ಚರಿತ್ರೆ ಇದ್ದು, ಕರ್ನಾಟಕ ಸಂಸ್ಕೃತಿಗೆ ಸ್ತ್ರೀಯರು ಇಷ್ಟು ದೊಡ್ಡ ಸಂಖ್ಯೆಯಲ್ಲಿ ಕಾಣಿಕೆ ನೀಡಿದುದನ್ನು ಎತ್ತಿ ತೋರಿಸಿದೆನು.

**೬. ಶಿವಶರಣರ ಅಹಿಂಸಾಧರ್ಮ :** ಅಹಿಂಸೆ ೨೦ನೆಯ ಶತಮಾನದಲ್ಲಿ ಗಾಂಧೀಜಿಯವರಿಂದಾಗಿ ಹೊಸ ಮೌಲ್ಯ ಪಡೆಯಿತು. ಇದಕ್ಕೆ ಸಮಾನವಾದ ವಿಚಾರ ಶರಣರ ವಚನಗಳಲ್ಲಿ ಇರುವುದನ್ನು ತೋರಿಸುವ ಉದ್ದೇಶದಿಂದ, ಈ ಗ್ರಂಥವನ್ನು ಶಿವಾನುಭವ ಪತ್ರಿಕೆಯಲ್ಲಿ (೩೦-೨,೩) ಪ್ರಕಟಿಸಲಾಯಿತು. ಇದರಲ್ಲಿ ೧೫ ಜನ ಶರಣರು ಅಹಿಂಸೆಯ ಬಗ್ಗೆ ವ್ಯಕ್ತಪಡಿಸಿದ ವಿಚಾರಗಳನ್ನು ಪ್ರತಿಪಾದಿಸಲಾಗಿದೆ. ಶರಣರ ವಿಚಾರಗಳನ್ನು ಸಮಕಾಲೀನ ಸಂದರ್ಭದಲ್ಲಿಟ್ಟು ನೋಡುವ ಉದ್ಧೇಶದಿಂದ ಬರೆದ ಇಂಥ ಗ್ರಂಥಗಳು ತುಂಬಾ ಉಪಯುಕ್ತವೆಂದು ಬೇರೆ ಹೇಳಬೇಕಿಲ್ಲ.

**೭. ಸಾರಂಗ ಮಠಾಧೀಶ್ವರರು :** ವೀರಶೈವ ಮಠಗಳ ವ್ಯವಸ್ಥೆ ಭಾರತದಲ್ಲಿಯೇ ತುಂಬಾ ವಿಶಿಷ್ಟವಾದದ್ದು, ಈ ಮಠಗಳ ಅಂತರ್ ವ್ಯವಸ್ಥೆ ಮತ್ತು ಪರಸ್ಪರ ಸಂಬಂಧಗಳು ಒಂದು ಕ್ರಮಬದ್ಧ ರಾಜ್ಯ ಪದ್ಧತಿಯನ್ನು ಹೋಲುತ್ತವೆ. ಇಂಥ ಮಠ ಪರಂಪರೆಯಲ್ಲಿ ಸಾರಂಗಮಠ ಪರಂಪರೆಯೂ ಒಂದು. ಕೂಡಲ ಸಂಗಮ ಮತ್ತು ಗುಳೇದಗುಡ್ಡದಲ್ಲಿ ಸಿಕ್ಕ ದಾಖಲೆಗಳನ್ನಾಧರಿಸಿ ಈ ಪರಂಪರೆಯ ಬಗ್ಗೆ ಒಂದು ಪುಸ್ತಕವನ್ನು ಬರೆದು ಶಿವಾನುಭವ ಪತ್ರಿಕೆ ೩೦-೪ ರಲ್ಲಿ ಪ್ರಕಟಿಸಿದೆ. ತುಂಬ ವಿಶಿಷ್ಟವಾಗಿರುವ, ಇತಿಹಾಸ ದೃಷ್ಟಿಯಿಂದಲೂ ಮಹತ್ವದ್ದಾಗಿರುವ ಸಾರಂಗಮಠ ಪರಂಪರೆ ಮೊದಲ ಸಲ ಜನರ ಗಮನವನ್ನು ಸೆಳೆಯಿತು.

**೮. ಬ್ರಾಹ್ಮಣ ಶಿವಶರಣರ ಚರಿತ್ರೆ :** ಬೇರೆ ಬೇರೆ ನೆಲೆಗಳಿಂದ ವೀರಶೈವ ಮತಕ್ಕೆ ಬಂದ ಶಿವಶರಣರನ್ನು ಕುರಿತು ಸ್ವತಂತ್ರ ಗ್ರಂಥ ಬರೆಯತೊಡಗಿ, ಬ್ರಾಹ್ಮಣ ಶಿವಶರಣರ ಚರಿತ್ರೆ ಕೃತಿಯಲ್ಲಿ ನಾನು ರೂಪಿಸಿದೆನು. ಶಿವಾನುಭವ ಪತ್ರಿಕೆಯ ೩೩ನೆಯ ಸಂಪುಟದಲ್ಲಿ ಇದು ಪ್ರಕಟವಾಯಿತು.

ಹೀಗೆ ಸುಮಾರು ೮ ಆಧುನಿಕ ಸ್ವತಂತ್ರ ಗ್ರಂಥಗಳನ್ನು ಶಿವಾನುಭವ ಪತ್ರಿಕೆ ತನ್ನ ಉತ್ತರಾರ್ಧ ಅವಧಿಯಲ್ಲಿ ಪ್ರಕಟಿಸಿತು.

## ೮. ನನ್ನ ಲೇಖನಗಳು

ಶಿವಾನುಭವ ಪತ್ರಿಕೆಯಲ್ಲಿ ಮೊದಲಿನಿಂದಲೂ ನಾನು ಬರೆಯುತ್ತಲಿದ್ದ ವೀರಶೈವ ತತ್ವ, ಸಾಹಿತ್ಯ, ಇತಿಹಾಸ ಮೊದಲಾದವುಗಳನ್ನು ಕುರಿತ ಲೇಖನಗಳ ಬರವಣಿಗೆಯನ್ನು ಈ ಅವಧಿಯಲ್ಲಿಯೂ ಮುಂದುವರಿಸಿದೆನು.

ನಮ್ಮ ದೇಶದ ಸಂವಿಧಾನ ಮಾನ್ಯಮಾಡಿರುವ ಸ್ತ್ರೀ ಪುರುಷರ ಹಕ್ಕುಗಳನ್ನು ಚರ್ಚಿಸುತ್ತ, ಈ ಧೋರಣೆಯನ್ನು ೮೦೦ ವರ್ಷಗಳ ಹಿಂದೆಯೇ ಶರಣರು ಆಚರಿಸಿದ್ದರೆಂದು ಸ್ತ್ರೀ-ಪುರುಷರು ಸಮಾನ ಹಕ್ಕುಳ್ಳವರು (೨೬-೧) ಎಂಬ ಲೇಖನದಲ್ಲಿ ಪ್ರತಿಪಾದಿಸಿದ್ದೇನೆ. ಶ್ರಮ ಮತ್ತು ಆಹಾರ ಸಮಸ್ಯೆಗಳನ್ನು ಶಿವಶರಣ ಆಯದಕ್ಕಿ ಮಾರಯ್ಯನ ನಡೆ (೨೬-೧) ಎಂಬ ಲೇಖನದಲ್ಲಿ ವಿಶ್ಲೇಷಿಸಿದ್ದೇನೆ. ವರ್ತಮಾನಕ್ಕೆ ಮಾರ್ಗದರ್ಶಿಯಾಗಬಲ್ಲ ಸಿದ್ಧಾಂತಗಳು ವಚನ ಸಾಹಿತ್ಯದಲ್ಲಿವೆ ಎಂದು ತೋರಿಸಿ ಕೊಡುವುದು ಇಲ್ಲಿ ನನ್ನ ಉದ್ದೇಶವಾಗಿತ್ತು. ಇದೇ ಧೋರಣೆಯಿಂದ ಕಾಯಕದ ಉಗಮ (೨೭-೭) ಹೆಸರಿನ ಲೇಖನ ಬರೆದು ಸಾರ್ವಜನಿಕರ ಗಮನವನ್ನು ಸೆಳೆದೆನು.

ವೀರಶೈವ ಧರ್ಮ ಪ್ರಸಾರ (೨೬-೫, ೩) ಲೇಖನದಲ್ಲಿ ಈ ಧರ್ಮ ೧೨ನೆಯ ಶತಮಾನದಲ್ಲಿ ಪ್ರಸಾರವಾದ ರೀತಿಯ ವಿವರಗಳನ್ನು ಪ್ರತಿಪಾದಿಸಿದ್ದೇನೆ. ಶಿವಾನುಭವ ಸಂಘಗಳು ಹೆಸರಿನ ಲೇಖನವನ್ನು (೨೭-೭) ಬರೆದು, ಗ್ರಾಮೀಣ ಪ್ರದೇಶಗಳಲ್ಲಿ ಈ ಬಗೆಯ ಸಂಘಗಳ ಅವಶ್ಯಕತೆಯಿರುವುದನ್ನು ಬಿಂಬಿಸಿ, ಇದರ ಧ್ಯೇಯ ಧೋರಣೆಗಳನ್ನು ವಿವರಿಸಿದ್ದೇನೆ. ಇದು ತುಂಬ ಮಹತ್ವದ ವಿಚಾರವಾಗಿರುವುದರಿಂದ ಕೆಲವು ಗ್ರಾಮಗಳಲ್ಲಿ ಇಂಥ ಸಂಘಗಳು ಅಸ್ತಿತ್ವಕ್ಕೆ ಬಂದವು. ಪ್ರತಿ ವರ್ಷ ಇವು ಸಮ್ಮೇಳನ ನಡೆಸುವ ಮೂಲಕ ಶರಣರ ಸಂಸ್ಕೃತಿಯ ಪ್ರಸಾರವು ವ್ಯಾಪಕಗೊಂಡಿತು. ಈ ಮಾದರಿಯಲ್ಲಿ ಸಾರ್ವಜನಿಕ ಜೀವನದ ಸುಧಾರಣೆಗಾಗಿ ಗ್ರಾಮ ರಕ್ಷಕ ದಳಗಳು (೨೮-೩) ಲೇಖನ ಬರೆದು, ಅದರ ಮಹತ್ವವನ್ನು ಪ್ರತಿಪಾದಿಸಿದೆನು. ದುಷ್ಟರನ್ನು ದುರ್ವ್ಯಸನಿಗಳನ್ನು ನಿಗ್ರಹಿಸುವುದರ ಸಲುವಾಗಿ, ಹಳ್ಳಿಗಳನ್ನು ಶುದ್ಧೀಕರಿಸುವ ಸಲುವಾಗಿ, ಇವುಗಳನ್ನು ಬಳಸಿಕೊಳ್ಳಬೇಕೆಂದು ಸೂಚಿಸಿದೆನು.

೨೬-೩-೧೯೫೩ರಂದು ಧಾರವಾಡ ಆಕಾಶವಾಣಿಯಲ್ಲಿ ಬಸವೇಶ್ವರರು ಕನ್ನಡ ವಾಙ್ಮಯದ ಸೀಮಾಪುರುಷರು ವಿಷಯವನ್ನು ಕುರಿತು ನೀಡಿದ್ದ ಉಪನ್ಯಾಸ, ಅವನ ಸಾಹಿತ್ಯಿಕ ಕೊಡುಗೆಯನ್ನು ಬಿಂಬಿಸುವಂತೆ ಇದ್ದಿತು. ಆ ಲೇಖನವನ್ನು ಶಿವಾನುಭವ ಪತ್ರಿಕೆ (೨೭-೪)ಯಲ್ಲಿಯೂ ಪ್ರಕಟಿಸಿದೆನು.

ವೀರಶೈವ ಸಿದ್ಧಾಂತದ ಜೊತೆ ಚರಿತ್ರೆಗೆ ಸಂಬಂಧಿಸಿದ ಸಾಹಿತ್ಯವನ್ನು ಪ್ರಕಟಿಸುವುದು ನನ್ನ ಹವ್ಯಾಸವಾಗಿದ್ದಿತೆಂದು ಬೇರೆ ಹೇಳಬೇಕಾಗಿಲ್ಲ. ಹೀಗಾಗಿ ಈ ಮೊದಲು ಅಂತಹ ಕೆಲವು ಚಾರಿತ್ರಿಕ ಗ್ರಂಥ ಮತ್ತು ಲೇಖನಗಳನ್ನು ಪ್ರಕಟಿಸುತ್ತ ಬಂದ ನಾನು, ಹಾನಗಲ್ ಕುಮಾರ ಸ್ವಾಮಿಗಳವರ ಬಗ್ಗೆ ನನ್ನ ಕೆಲವು ನೆನಪುಗಳು ಎಂಬ ಲೇಖನವನ್ನು ಬರೆದು, ಅವರು ವೀರಶೈವದ ಪುನರುಜ್ಜೀವನ ಪ್ರಸಂಗದಲ್ಲಿ ವಹಿಸಿದ್ದ ಪಾತ್ರವನ್ನೂ ವಿವರಿಸಿದ್ದೇನೆ. ಧಾರವಾಡ ಆಕಾಶವಾಣಿಯಲ್ಲಿ ನಾನು ನೀಡಿದ್ದ ಬೀಳಗಿ ಸಂಸ್ಥಾನ ಹೆಸರಿನ ಭಾಷಣವನ್ನು ಲೇಖನ ರೂಪದಿಂದ ಶಿವಾನುಭವ ಪತ್ರಿಕೆಯಲ್ಲಿ ಪ್ರಕಟಿಸಿದ್ದೇನೆ.

ಹೀಗೆ ೧೯೫೧ರ ಬಳಿಕ ವೃದ್ಧಾಪ್ಯದಲ್ಲಿಯೂ ಹಲವು ಉಪಯುಕ್ತ ಲೇಖನಗಳನ್ನು ಪ್ರಕಟಿಸಲು ನನ್ನಿಂದ ಸಾಧ್ಯವಾಯಿತು.

## ೯. ವಿದ್ವಾಂಸರ ಲೇಖನಗಳು

ಶಿವಾನುಭವ ಪತ್ರಿಕೆ, ಕರ್ನಾಟಕ ವ್ಯಾಪ್ತಿಯ ಪ್ರಸಿದ್ಧಿ ಪಡೆಯುವುದೇ ತಡೆ, ಅನೇಕ ಜನ ವಿದ್ವಾಂಸರು ಇದಕ್ಕೆ ಪ್ರೌಢಲೇಖನ ಬರೆದು ಕಳಿಸತೊಡಗಿದರು. ಬೆಳ್ಳಿ ಹಬ್ಬದ ಮೊದಲ ಘಟ್ಟದಲ್ಲಿ ಬರೆಯುತ್ತಲಿದ್ದ ಲೇಖಕರೊಂದಿಗೆ ಹೊಸ ಹೊಸ ಲೇಖಕರೂ ತರುವಾಯದ ಘಟ್ಟದಲ್ಲಿ ಬರೆಯತೊಡಗಿದರು. ೧೯೫೧ರ ಬಳಿಕಿನ ಸಂಚಿಕೆಗಳಿಗೆ ಬರೆದ ಲೇಖಕರನ್ನು ವೀರಶೈವ ತತ್ವಜ್ಞರು, ಇತರ ವಿದ್ವಾಂಸರೆಂದು ವಿಭಾಗಿಸಬಹುದು. ವೀರಶೈವ ವ್ಯಾಸಂಗಿಗಳಲ್ಲಿ ಮುಖ್ಯವೆಂದರೆ ಶ್ರೀ. ಮ. ಮಲ್ಲಪ್ಪ, ಶ್ರೀ. ಶಿ. ನಾ. ಮಹಾಂತಣ್ಣನವರ, ಶ್ರೀ ಶಿವಾನಂದಸ್ವಾಮಿ ತೆಗ್ಗಿನಮಠ, ಶ್ರೀ ಅನ್ನದಾನೀಶ್ವರ ವಿರಕ್ತಮಠ, ಶ್ರೀ ಬಸಪ್ಪ. ಚ. ಪಟ್ಟೇದ, ಶ್ರೀ ವೀರಪ್ಪ ಯಗಟಿ ಮೊದಲಾದವರು. ಇವರು ಬರೆದ ವೀರಶೈವ ಧಾರ್ಮಿಕ, ಸಾಮಾಜಿಕ ಲೇಖನಗಳು ಇವರ ಶ್ರದ್ಧೆ-ಶ್ರಮಗಳನ್ನು ಪ್ರತಿನಿಧಿಸುತ್ತವೆ. ವಚನ ಪಿತಾಮಹ ಎಂಬ ವಿಶೇಷಣವನ್ನು ಮೊದಲು ಬಳಸಿ, ಅದನ್ನು ನನಗೆ ಶಾಶ್ವತಗೊಳಿಸಿದ ಶ್ರೀ. ಮ. ಮಲ್ಲಪ್ಪ ಅವರನ್ನು, ನನಗೆ ದತ್ತಿ ನಿಧಿ ಕೂಡಿಸಿ ಕೊಡಲು ಪದೇ ಪದೇ ಲೇಖನ ಬರೆದ ಶಿವಾನಂದ ಸ್ವಾಮಿ ತೆಗ್ಗಿಮಠ ಅವರನ್ನು ಇಲ್ಲಿ ನಾನು ವಿಶೇಷ ನೆನೆಯುತ್ತೇನೆ. ಇವರಲ್ಲದೆ ಸಿಂಪಿ ಲಿಂಗಣ್ಣ, ಬಂಡಾರು ತಮ್ಮಯ್ಯಗಾರು, ಕಪಟರಾಳ ಕೃಷ್ಣರಾಯ, ಸ.ಸ.ಮಾಳವಾಡ, ವೆಂಕಟರಾಮಾಚಾರ್, ಸುರತ್ಕಲ್ಲು, ಡಿ.ಕೆ. ಭೀಮಸೇನರಾವ್, ಪಿ. ಬಿ. ದೇಸಾಯಿ, ಬಿ. ಎಸ್. ಗದಗಿಮಠ, ಮೊದಲಾದ ರಾಜ್ಯಪ್ರಸಿದ್ಧಿಯ ವಿದ್ವಾಂಸರ ಬೆಲೆಯುಳ್ಳ ಲೇಖನಗಳನ್ನು ಶಿವಾನುಭವ ಪತ್ರಿಕೆ ಪ್ರಕಟಿಸಿತು.

ವೀರಶೈವ ಸಾಹಿತ್ಯ, ಸಮಾಜ, ಸಂಘಟನೆಗಳನ್ನು ಕುರಿತಂತೆ ಅನೇಕ ವಿಷಯವನ್ನೊಳಗೊಂಡ ಲೇಖನಗಳು ಇಲ್ಲಿ ಪ್ರಕಟಗೊಂಡವು. ಡಾ. ಪಿ. ಬಿ. ದೇಸಾಯಿಯವರ ಕರ್ನಾಟಕದ ಕಳಚೂರಿಗಳು ಹೆಸರಿನ ಲೇಖನಗಳು ಮೂರು ಸಂಚಿಕೆಗಳಲ್ಲಿ (೨೭-೬,೯,೧೦) ಪ್ರಕಟವಾದವು. ಇದರಿಂದ ಬಸವಣ್ಣನವರ ಚರಿತ್ರೆಯ ಹಿನ್ನೆಲೆ ಸ್ಪಷ್ಟವಾಯಿತು. ವೀರಶೈವ ಧರ್ಮದ ಪೂರ್ವಕಾಲದ ಶೈವಧರ್ಮ ಹೆಸರಿನ ಲೇಖನವನ್ನು ಕಪಟರಾಳ ಕೃಷ್ಣರಾಯರು (೨೬-೪), ಬಸವೇಶ್ವರನ ಪೂರ್ವದಲ್ಲಿ ವೀರಶೈವ ಧರ್ಮ ಇದ್ದ ಬಗ್ಗೆ ಐತಿಹಾಸಿಕ ಆಧಾರಗಳು, (೩೦-೯) ರೇಣುಕ ರೇವಣಸಿದ್ದರ ಐತಿಹ್ಯವೇನು? (೨೭-೮), ಮುರಭಾವಿಯಲ್ಲಿ ಮಹತ್ವದ ಶೋಧ, (೨೭-೪), ಶಿವಶರಣರ ಯುದ್ಧ ಭೂಮಿ ಅಥವಾ ಉಳಿವಿಯ ಸೆರಗು (೩೦-೧) ಈ ಲೇಖನಗಳನ್ನು ಶ್ರೀ ವ್ಹಿ. ಜಿ. ಪಾಟೀಲ ಅವರು ಬರೆದಿದ್ದು ತುಂಬಾ ಜಿಜ್ಞಾಸು ಹುಟ್ಟಿಸುತ್ತವೆ.

ಕ್ಷೇತ್ರ ಕಾರ್ಯದ ಫಲಿತಾಂಶಗಳನ್ನೊಳಗೊಂಡ ನುಲಿಯ ಚಂದಯ್ಯನ ಗ್ರಾಮ, ನುಲಿಯಚಂದಯ್ಯನ ಗದ್ದುಗೆ, ನುಲಿಯ ಚಂದಪ್ಪನ ಜಾತ್ರೆಯು, ಗವಿಯಪ್ಪನ ಗದ್ದುಗೆ ಇತ್ಯಾದಿ ಲೇಖನಗಳನ್ನು ಈ ಅವಧಿಯಲ್ಲಿ ಪ್ರಕಟಿಸಲಾಯಿತು. ಇವುಗಳಲ್ಲದೆ ದೇವನೂರುಮಠದ ಶ್ರೀ ತೋಂಟದಾರ್ಯ ಮಹಾಸ್ವಾಮಿಗಳು, ಅರಭಾವಿ ಮಠದ ದುರುದುಂಡೇಶ್ವರ ಮಹಿಮೆ, ತೋಪಿನಮಠದ ಸ್ವಾಮಿಗಳ ಜೀವನ ಚರಿತ್ರೆ, ಶಿವಶರಣ ಲಿಂಗಪ್ಪನವರ ಚರಿತ್ರೆ (ಚಿಕ್ಕಬೆಣಕಲ್ಲು),

ಕಿತ್ತೂರಿನ ಅಂತ್ಯಕಾಲದ ಕಥೆ ಇತ್ಯಾದಿ ಚಾರಿತ್ರಿಕ ಲೇಖನಗಳನ್ನು, ವ್ಯಕ್ತಿ ಚರಿತ್ರೆಗಳನ್ನು ಪ್ರಕಟಿಸಿ, ಸಾರ್ವಜನಿಕ ಗಮನವನ್ನು ಸೆಳೆಯಲಾಯಿತು.

ಹೇಳಲೇಬೇಕಾದ ಒಬ್ಬ ಆಧುನಿಕ ಮಹಾತ್ಮ ಹರ್ಡೆಕರ ಮಂಜಪ್ಪ, ಇವರ ಬಗ್ಗೆ ನಾನು ಆಗಾಗ ಸಂಪಾದಕೀಯದಲ್ಲಿ ಬರೆದುದಲ್ಲದೆ ಕರ್ನಾಟಕದ ಗಾಂಧೀ (೩೨-೭,೮) ಹೆಸರಿನಲ್ಲಿ ಜ್ಞಾನೋಪಾಸಕರು ಬರೆದ ಲೇಖನವನ್ನು ಪ್ರಕಟಿಸುವ ಮೂಲಕ ಮಂಜಪ್ಪನವರ ನಿಜದ ನಿಲುವನ್ನು ಸ್ಪಷ್ಟಪಡಿಸಿದ್ಧೇನೆ.

ಈ ಸಂದರ್ಭದಲ್ಲಿ ಅಖಿಲಭಾರತ ವೀರಶೈವ ಮಹಾಸಭೆ ಮತ್ತು ಇತರ ವೀರಶೈವ ಸಂಘಟನೆಗಳು ಎದ್ದು ಕಾಣುತ್ತಿದ್ದವು. ಅನೇಕ ಜನರು ಇವುಗಳಿಗೆ ಸಂಬಂಧಪಟ್ಟ ಲೇಖನ ಬರೆಯುತ್ತಿದ್ದರು. ಈ ದಿಸೆಯಲ್ಲಿ ಅಖಿಲ ಭಾರತ ವೀರಶೈವ ಮಹಾಸಭೆಯ ಬಗ್ಗೆ ನನ್ನ ವಿಚಾರಗಳು, ಕೇಂದ್ರ ಸಾಹಿತ್ಯ ಪ್ರಚಾರ ಸಂಘ, ವೀರಶೈವ ಸಾಹಿತ್ಯ ಪರಿಷತ್ತು ಸಿದ್ಧವಾಗಲಿ, ವೀರಶೈವ ವಿದ್ಯಾಪೀಠದ ಅವಶ್ಯಕತೆ, ಅಕ್ಕನ ಬಳಗದವರಲ್ಲಿ ವಿನಂತಿ, ಅಕ್ಕನಬಳಗಗಳ ಸಂಘಟನೆ ಮತ್ತು ಕಾರ್ಯಕ್ಷೇತ್ರ, ಅಂದು - ಇಂದು - ಮುಂದಿನ ವೀರಶೈವ ಮೊದಲಾದ ಲೇಖನಗಳು ಈ ಪತ್ರಿಕೆಯಲ್ಲಿ ವಿದ್ವಾಂಸರಿಂದ ಪ್ರಕಟವಾಗಿ, ಸಾಮಾಜಿಕ ಸಂಘಟನೆಗೆ ದಾರಿ ತೋರಿದವು.

ಈ ಲೇಖನಗಳನ್ನಲ್ಲದೆ ಆನಂದ ಕವಿ ಕುರುಗುಂದ ಮೊದಲಾದವರ ಕವಿತೆಗಳನ್ನು, ಸೋನುಬಾಯಿ ಎಸ್. ಪಾಟೀಲ ಅವರ (೩೩-೧೧,೧೨) ಮತ್ತು ರೇವಣಸಿದ್ದಪ್ಪ ಶೀಲವಂತ (೨೮-೫) ಅವರ ಸ್ವರಚಿತ ವಚನಗಳನ್ನು ಪ್ರಕಟಿಸಿ, ಬರಹಗಾರರಿಗೆ ಪ್ರೋತ್ಸಾಹಿಸಲಾಯಿತು. ನಿಜದ ಅರಿವು ಶೀರ್ಷಿಕೆಯಲ್ಲಿ ಸಂಗಮೇಶ್ವರ ಮುದ್ರಿಕೆಯ ಸ್ವರವಚನಗಳನ್ನು (೩೦-೯) ಈ ಪತ್ರಿಕೆ ಪ್ರಕಟಿಸಿತು.

ಈ ಕಾಲಾವಧಿಯಲ್ಲಿ ಜರುಗುತ್ತಲಿದ್ದ ವೀರಶೈವರ ಕಾರ್ಯಕ್ರಮಗಳನ್ನು ಲೇಖನರೂಪದಲ್ಲಿಲ ಪ್ರಕಟಿಸಿ, ಅವುಗಳಿಗೆ ಪ್ರಚಾರ ಕೊಡುವ ಕೆಲಸವನ್ನು ಈ ಶಿವಾನುಭವ ಪತ್ರಿಕೆ ಮಾಡಿತು. ಈಗ ವಿಜಾಪುರದಲ್ಲಿ ಸಂಬಂವಿಸಿದ ಎರಡು ಮುಖ್ಯ ಘಟನೆಗಳೆಂದರೆ ೭೭೦ ಅಮರ ಗಣಾಧೀಶ್ವರರ ಮಂಟಪ ಪೂಜೆ ಮತ್ತು ಗದುಗಿನ ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳ ಪ್ರವಚನ. ಈ ಎರಡೂ ಕಾರ್ಯಕ್ರಮಗಳು ವಿಜಾಪುರ ಪರಿಸರದಲ್ಲಿ ಬಹು ದೊಡ್ಡ ಜಾಗೃತಿಯನ್ನುಂಟು ಮಾಡಿದವು. ಈ ಜಾಗೃತಿಗೆ ವಾಹಕವಾಗುವ ರೀತಿಯಲ್ಲಿ ಶಿವಾನುಭವ ದುಡಿದುದು ಸ್ಮರಣೀಯವಾಗಿದೆ. ಇದಲ್ಲದೆ ಲಚ್ಯಾಣ, ಹೊನ್ನೂರು, ಬಂಥನಾಳ ಮೊದಲಾದ ಗ್ರಾಮಗಳಲ್ಲಿ ಜರುಗಿದ ವೀರಶೈವ ಕಾರ್ಯಕ್ರಮವನ್ನು ಕುರಿತ ಲೇಖನಗಳಿಗೂ ಮಾಧ್ಯಮವಾಗುವ ಮೂಲಕ, ಈ ಪತ್ರಿಕೆ ಸುತ್ತೂ ಕಡೆಗೆ ಧಾರ್ಮಿಕ ವಾತಾವರಣವನ್ನು ಹಬ್ಬಿ ಹರಡಿಸಿತು.

## ೧೦. ಮಹತ್ವದ ಸುದ್ದಿಗಳು

ಶಿವಾನುಭವ ಪತ್ರಿಕೆ ದಿನಪತ್ರಿಕೆಯಲ್ಲದಿದ್ದರೂ ಕರ್ನಾಟಕಕ್ಕೆ ಅದಕ್ಕಿಂದ ವೀರಶೈವಕ್ಕೆ ಸಂಬಂಧಿಸಿದ ಮಹತ್ವದ ಸುದ್ದಿಗಳನ್ನು ಪ್ರಕಟಿಸಿ, ಅವುಗಳತ್ತ ಜನರ ಗಮನವನ್ನು ಸೆಳೆಯಿತು. ಭಾರತದ ತತ್ವಜ್ಞಾನ ಪರಿಷತ್ತು. ಧಾರವಾಡದ ಸರಕಾರಿ ಟ್ರೇನಿಂಗ್ ಕಾಲೇಜದ ಶತ ಸಾಂಸ್ಕೃತಿಕೋತ್ಸವದ ಉದ್ಘಾಟನೆ ಭಾಷಣದಂತಹ ಕೆಲವು ಲೇಖನಗಳಿಗೆ ಈ ಪತ್ರಿಕೆ ಅವಕಾಶ ಮಾಡಿಕೊಟ್ಟಿತು. ಇದಕ್ಕಿಂತ, ವೀರಶೈವದ

ಮುಖವಾಣಿಯಾಗಿರುವ ಕಾರಣ ಈ ಕ್ಷೇತ್ರದ ಮಹತ್ವದ ಸುದ್ದಿಗಳು ಶಿವಾನುಭವ ಪತ್ರಿಕೆಯಲ್ಲಿ ಕಾಣಿಸಿಕೊಂಡವು. ಅಖಿಲ ಭಾರತ ವೀರಶೈವ ಮಹಾಸಭೆಯ ವರದಿಗಳನ್ನು, ಸಾರ್ವಜನಿಕರಿಂದ ಈ ಮಹಾಸಭೆಗೆ ಸಂದ ಸೂಚನೆಗಳನ್ನು ಇಲ್ಲಿ ಆಗಾಗ ಪ್ರಕಟಿಸುತ್ತ ಹೋಗಿದ್ದೇನೆ.

ಇಂತಹದೇ ವಿಶಿಷ್ಟ ಸಂಘಟನೆ ಅಖಿಲ ಭಾರತ ಶಿವಾನುಭವ ಸಂಸ್ಥೆ, ಧಾರವಾಡ, ಬೆಟ್ಟದಪುರ, ಹಂಸಭಾವಿ, ನಿಡಸೋಸಿ, ಶಿವಪುರಗಳಲ್ಲಿ ಜರುಗಿದ ಇದರ ವಾರ್ಷಿಕ ಅಧಿವೇಶನಗಳ ಬಗ್ಗೆ, ಬೈಲಹೊಂಗಲ ಮೊದಲಾದ ಗ್ರಾಮಗಳಲ್ಲಿ ನಡೆದ ಶಿಬಿರಗಳ ಬಗ್ಗೆ ಬರೆದು, ಈ ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ.

ಇವುಗಳಲ್ಲದೆ ಇತರ ವೀರಶೈವ ಸಂಘಟನೆಗಳ ಸುದ್ದಿಯನ್ನೂ ಆಗಾಗ ಪ್ರಕಟಿಸಲಾಯಿತು. ಉದಾ: ಕಲ್ಯಾಣದಲ್ಲಿ ಅಸ್ತಿತ್ವಕ್ಕೆ ಬಂದ ವೀರಶೈವ ಆಶ್ರಮ. ಈ ಸಂಸ್ಥೆಯ ಸ್ಥಾಪನೆಯ ಸಮಾಲೋಚನೆ ಸಭೆಗೆ ಅನೇಕ ಗಣ್ಯರಲ್ಲದೆ ನಾನೂ ಹೋಗಿದ್ದೆನು. ಸುಧೀರ್ಘ ಚರ್ಚೆಯ ಬಳಿಕ ಇದರ ಘಟನಾವಳಿಯನ್ನು ರಚಿಸುವ ಹೊಣೆಯನ್ನು ಸಭೆ ನನಗೆ ವಹಿಸಿಕೊಟ್ಟಿತು.

ಇಂತಹದೇ ಇನ್ನೊಂದು ಸಂಸ್ಥೆ ಮುಂಬಯಿಯ ಅಖಿಲ ಭಾರತ ವೀರಶೈವ ಸಂಘ ಎಂ. ಪಿ. ಪಾಟೀಲ, ಬಿ. ಡಿ. ಜತ್ತಿ. ಡಿ. ಸಿ. ಪಾವಟೆ, ಪಾಲ್ಕಂಡವಾಲ, ನಂದಿಮಠ, ಬಸವನಾಳ ಮತ್ತು ನಾನು ಮೊದಲಾದವರು ಸೇರಿ ಅಸ್ತಿತ್ವಕ್ಕೆ ತಂದ ಈ ಸಂಸ್ಥೆಯ ಸುದ್ದಿಯನ್ನು ಶಿವಾನುಭವ ಪ್ರಕಟಿಸಿದೆ.

ವಿಜಾಪುರದಲ್ಲಿ ಜರುಗಿದನ ೭೭೦ ಅಮರ ಗಣಂಗಳ ಮಂಟಪ ಪೂಜಾವಿಷಯವನ್ನು ಪುಸ್ತಕ-ಲೇಖನ ರೂಪಗಳಲ್ಲಿ ಬೆಳಕಿಗೆ ತಂದ ನಾನು, ಸುದ್ದಿ ರೂಪದಿಂದಲೂ ಪ್ರಕಟಿಸಿದೆನು. ಇವುಗಳಲ್ಲದೆ ಬಿಡಿ ಸುದ್ದಿಗಳಾದ ಮಾದೇಶ್ವರ ಸ್ವಾಮಿಯ ಘಟಕ್ಷೇತ್ರ ಪ್ರಾರಂಭೋತ್ಸವ, ಏಣಗಿ ಬಾಳಪ್ಪನವರ ಜಗಜ್ಯೋತಿ ಬಸವೇಶ್ವರ ನಾಟಕ, ತಮ್ಮಣ್ಣಪ್ಪ ಚಿಕ್ಕೋಡಿಯವರ ಪುಣ್ಯತಿಥಿ ಆಚರಣೆ, ಹಲಗೂರು ಮಠದ ಪಟ್ಟಾಧಿಕಾರ ಮಹೋತ್ಸವ, ಅ. ನ. ಕೃ. ಭಾಷಣಕ್ಕೆ ತೋರಿ ಬಂದ ಪ್ರತಿಕ್ರಿಯೆ ಮೊದಲಾದ ಸುದ್ದಿಗಳನ್ನು ಈ ಅವಧಿಯಲ್ಲಿ ಪ್ರಕಟಿಸಲಾಯಿತು.

ಹೀಗೆ ಅಲ್ಲಲ್ಲಿ ಸ್ಫೋಟಗೊಂಡು, ಅಲ್ಲಲ್ಲಿಯೇ ಇಂಗೀ ಹೋಗಬಹುದಾಗಿದ್ದ ಸುದ್ದಿಗಳನ್ನು ಶಿವಾನುಭವ ಪತ್ರಿಕೆ ಪ್ರಕಟಿಸಿದುದು, ಅದರ ವಿಶೇಷತೆಯಾಗಿದೆ.

## ೧೧. ಸಂಪಾದಕೀಯ

ಮಹತ್ವದ ಘಟನೆ ಮತ್ತು ವಿಷಯಗಳನ್ನು ಕುರಿತು ಪತ್ರಿಕೆಯ ಸಂಪಾದಕರು ಅದರ ನಿರ್ಣಯಾತ್ಮಕ ಧ್ವನಿಯೆಂಬಂತೆ ಸಂಪಾದಕೀಯವನ್ನು ಬರೆಯುವುದು ಸಾಮಾನ್ಯ ಪದ್ದತಿ. ಶಿವಾನುಭವ ಪತ್ರಿಕೆ ಟೀಕೆ ಟಿಪ್ಪಣೆಗಳು ಸ್ಪುಟ ವಿಚಾರ ಹೆಸರಿನಲ್ಲಿ ಸಂಪಾದಕೀಯವನ್ನು ಹೋಲುವ ಲೇಖನಗಳನ್ನು ಪ್ರಕಟಿಸುತ್ತ ಬಂದಿದೆ.

ಹಿಂದಿನ ಕಾಲದಲ್ಲಿ ವೀರಶೈವ ಗ್ರಂಥಕಾರರು ಷಟ್ಸ್ಥಲ ತತ್ವಗಳ ಬಗ್ಗೆ ಚಿಕ್ಕ ಚಿಕ್ಕ ಪದ್ಯಗಳನ್ನು ಬರೆದಿದ್ದಾರೆ. ಇದು ಸಹ ಒಂದು ಹೊಸ ತರಹದ ವಾಙ್ಮಯವಾಗಿದೆ. ಅವುಗಳನ್ನು ನಾವು ಪತ್ರಿಕೆಯಲ್ಲಿ ಪ್ರಕಟಮಾಡುತ್ತ ಹೋಗುವೆವು. ಈ ವಾಙ್ಮಯವಾದರೂ ಉಚ್ಚತರದ್ದಿರುತ್ತದೆ. ಇದರ

ಪರಿಚಯ ನಮ್ಮ ಸಮಾಜದಲ್ಲಿ ಏನೂ ಇರುವುದಿಲ್ಲ – ಹೀಗೆ ವೀರಶೈವ ಸಾಹಿತ್ಯಕ್ಕೆ ಸಂಬಂಧಪಟ್ಟ ಅನೇಕ ಹೊಸ ವಿಷಯಗಳ ಬಗ್ಗೆ ಬರೆದು, ಜನತೆಯ ಗಮನ ಸೆಳೆಯಲಾಯಿತು. ಇದೇ ರೀತಿ ಬಸವ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲು ವೀರಶೈವ ಮಹಾಸಭೆಯ ಅಧಿವೇಶನದಲ್ಲಿ ಸ್ವೀಕರಿಸಿದ ನಿರ್ಣಯಗಳನ್ನು ಅನುಷ್ಠಾನಕ್ಕೆ ತರಲು, ಜನತೆಗೆ ನೈತಿಕ ಶಿಕ್ಷಣ ನೀಡಲು, ಶೂನ್ಯ ಸಂಪಾದನೆಯಂತಹ ಮಹತ್ವದ ಗ್ರಂಥದ ಪ್ರಕಟನೆಗೆ ಧನ ಸಹಾಯ ಒದಗಿಸಲು, ಶಿವಾನುಭವ ಪರೀಕ್ಷೆಗಾಗಿ ಪಠ್ಯಪುಸ್ತಕ ರೂಪಿಸಲು, ವೀರಶೈವ ಹಸ್ತಪ್ರತಿಗಳನ್ನು ಸಂಗ್ರಹಿಸಲು, ಆಲಮಟ್ಟಿ ವಿದ್ಯಾಲಯವನ್ನು ಪುನರುಜ್ಜೀವನಗೊಳಿಸಲು ಕೋರಿ, ಸಂಪಾದಕೀಯ ರೂಪದ ಲೇಖನಗಳನ್ನು ಶಿವಾನುಭವ ಪತ್ರಿಕೆ ಪ್ರಕಟಿಸಿತು.

ಆರೂಢ ಪಂಥೀಯರ ಪ್ರಭಾವಕ್ಕೆ ವೀರಶೈವರು ಒಳಗಾಗುವುದು ಅಪಾಯಕಾರಿ ಚಟುವಟಿಕೆ. ಹಾನಗಲ್ಲು ಕುಮಾರ ಸ್ವಾಮಿಗಳು, ಶಿವಯೋಗ ಮಂದಿರ ಸ್ಥಾಪಿಸುವ ಉದ್ದೇಶಗಳಲ್ಲಿ ಒಂದು, ಈ ಅಪಾಯವನ್ನು ತಡೆಗಟ್ಟುವುದು, ಶಿವರಾತ್ರಿ ದಿನದ ಆರೂಢರ ಜಾತ್ರೆಯ ಪ್ರಭಾವ ಕಡಿಮೆ ಮಾಡುವುದಕ್ಕಾಗಿಯೇ ಶಿವಯೋಗ ಮಂದಿರದಲ್ಲಿ ಜಾತ್ರೆಯನ್ನು ಆರಂಭಿಸಲಾಯಿತು. ಇತ್ಯಾದಿ ವೀರಶೈವ ರಕ್ಷಣಾಪರ ಸಂಪಾದಕೀಯಗಳನ್ನು ಶಿವಾನುಭವ ಪತ್ರಿಕೆ ಬರೆದು ಪ್ರಕಟಿಸಿತು. ಈ ದಿಸೆಯಲ್ಲಿ ದೇವಾಲಯಗಳು, ವೀರಶೈವ ಮಠಗಳು, ಶಿವಶರಣ ತತ್ವಗಳ ಪ್ರಸಾರ, ಶಿವಾನುಭವ ಪಾಠಶಾಲೆಗಳ ಏರ್ಪಾಡು, ಇತ್ಯಾದಿ ಲೇಖನಗಳನ್ನು (೨೯–೯)ಬರೆಯಲಾಯಿತು.

ಈ ಕಾಲಾವಧಿಯಲ್ಲಿ ಪುನರುಜ್ಜೀವನಗೊಳ್ಳತೊಡಗಿದ್ದ ವೀರಶೈವ ಸಮಾಜ, ಕಾಲೇಜುಗಳನ್ನು ಸ್ಥಾಪಿಸುವಲ್ಲಿ ಉತ್ಸಾಹ ತೋರುತ್ತಿದ್ದುದು ಒಳ್ಳೆಯ ವಿಚಾರವೇ ಸರಿ. ಆದರೆ ಈ ಉತ್ಸಾಹವನ್ನು ವಿಶ್ಲೇಷಿಸಿ ನಾನು ಹೀಗೆ ಬರೆದೆನು :

ಧಾರವಾಡ, ಬಾಗಲಕೋಟೆ, ಬೆಳಗಾವಿ, ಹುಬ್ಬಳ್ಳಿ, ಬಳ್ಳಾರಿ, ಸೊಲ್ಲಾಪುರ ಈ ಪಟ್ಟಣಗಳಲ್ಲಿ ಕಾಲೇಜುಗಳು ಆಗಿವೆ. ಬೇರೆ ಸ್ಥಳಗಳಲ್ಲಿಯೂ ಅವು ಆಗುವುದರಲ್ಲಿವೆ. ಇವುಗಳ ಸಲುವಾಗಿ ಸುಮಾರು ಒಂದು ಕೋಟಿ ರೂಪಾಯಿಗಳನ್ನು ವೀರಶೈವ ಸಮಾಜ ಕೂಡಿಸಿರುತ್ತದೆ. ಇವುಗಳಲ್ಲಿ ವೀರಶೈವರಿಗಿಂತ ವೀರಶೈವೇತರರೇ ಹೆಚ್ಚಾಗಿ ಕಲಿಯುತ್ತಿದ್ದಾರೆ. ಈ ವಿಷಯವು ಒತ್ತಟ್ಟಿಗಿರಲಿ, ಅವುಗಳಿಂದ ವೀರಶೈವ ಸಮಾಜಕ್ಕೆ ಪ್ರಯೋಜನ ಆಗಿದೆಯೋ ಹೇಗೆ? ಎಂಬುದನ್ನು ವಿಚಾರ ಮಾಡುವಲ್ಲಿ, ಅವು ಕೇವಲ ವಾಙ್ಮಯಾತ್ಮಕ ಸಂಸ್ಥೆಗಳು ಇರುವುದರಿಂದ, ಉದ್ಯೋಗ ಪ್ರಧಾನವಾಗಿರುವ ವೀರಶೈವ ಸಮಾಜಕ್ಕೆ ಅವುಗಳಿಂದ ಉಪಯೋಗವಾಗಿರುವುದಿಲ್ಲ. ಬ್ರಾಹ್ಮಣ ಸಮಾಜಕ್ಕೆ ಮಾತ್ರ ಹಿತವಾಗಿರುತ್ತದೆ. ಬ್ರಾಹ್ಮಣ ಸಮಾಜದಿಂದ ಈ ಕಾಲೇಜುಗಳಿಗೆ ಏನೂ ಹಣ ಬಂದಿರುವುದಿಲ್ಲ. ಆದ್ದರಿಂದ ಕಾಲೇಜುಗಳ ಧೋರಣೆಯನ್ನು ಬದಲಾಯಿಸುವುದು ಅವಶ್ಯವೆಂದು ನನಗೆ ತೋರುತ್ತದೆ (೨೯–೧೦) ಎಂಬ ಪೀಠಿಕೆ ಹಾಕಿ, ಇವುಗಳನ್ನು ಉಚ್ಚಮಟ್ಟದ ಔದ್ಯೋಗಿಕ ಕಾಲೇಜುಗಳಾಗಿ ಮುಂದುವರಿಸುವುದು ಅವಶ್ಯವಿದೆಯೆಂದು ವಿವರವಾದ ಸಂಪಾದಕೀಯ ಬರೆದೆನು. ಅಲ್ಲದೆ ಈ ವಿಚಾರವನ್ನು ಅಂದಿನ ವೀರಶೈವ ಮಹಾಸಭೆಯ ಅಧ್ಯಕ್ಷರಾಗಿದ್ದ ಶ್ರೀ ಬಂಥನಾಳ ಸ್ವಾಮಿಗಳಿಗೆ ಬರೆದು ಕಳಿಸಿದೆನು. ಅವರು ಮಹಾಸಭೆಯ ಕಾರ್ಯಕಾರೀ ಸಭೆಯ ಮುಂದೆ ಈ ವಿಷಯ ಮಂಡಿಸಿದರು. ನನ್ನ ಅಭಿಪ್ರಾಯವನ್ನು ಎಲ್ಲ ಕಾಲೇಜುಗಳ ಪ್ರಿನ್ಸಿಪಾಲರಿಗೂ, ವಿಶ್ವವಿದ್ಯಾಲಯದ

ಕುಲಪತಿಗಳಿಗೂ ಕಳಿಸಿಕೊಟ್ಟು, ನಾನು ಅವರಿಂದ ಅಭಿಪ್ರಾಯ ಸಂಗ್ರಹಿಸಬೇಕೆಂಬ ನಿರ್ಣಯವನ್ನು ಸಭೆ ಸ್ವೀಕರಿಸಿತು. ಇಂತಹ ಮಹತ್ವದ ಸಂಪಾದಕೀಯಗಳನ್ನು ಶಿವಾನುಭವ ಪತ್ರಿಕೆ ಬರೆಯುತ್ತಲಿದ್ದಿತು.

ವೀರಶೈವದ ಮುಖವಾಣಿಯಾಗಿದ್ದರೂ ಶಿವಾನುಭವ ಪತ್ರಿಕೆಯಲ್ಲಿ ಕೆಲವೊಮ್ಮೆ ಮಹತ್ವದ ಅನ್ಯ ವಿಷಯಗಳನ್ನೂ ಕುರಿತು ಸಂಪಾದಕೀಯ ರೂಪದ ಲೇಖನಗಳನ್ನು ಬರೆದೆನು. ಕರ್ನಾಟಕ ಏಕೀಕರಣ (೨೬-೧೧ ಮತ್ತು ೩೦-೫) ಶೀರ್ಷಿಕೆಯಲ್ಲಿ ಸಂಪಾದಕೀಯವನ್ನು ಒತ್ತಿ ಹೇಳಿ, ಈ ಕಾರ್ಯ ಬೇಗ ಕೈಗೂಡಲೆಂದು ಹಾರೈಸಿದೆನು.

ಇದಲ್ಲದೆ ಆಡಳಿತೆಯ ಧೋರಣೆಗಳು (೨೯-೮) ಹೆಸರಿನಲ್ಲಿ ಬರೆದ ವಿಶ್ಲೇಷಣಾತ್ಮಕ, ಸುದೀರ್ಘ ಸಂಪಾದಕೀಯ ತುಂಬಾ ಮಹತ್ವದೆಂದು ನನ್ನ ಅಭಿಪ್ರಾಯ. ಇಲ್ಲಿಯೇ ಮಹಾಸಭೆ ಮತ್ತು ಕಾಂಗ್ರೆಸ್ಸಿನ ಅಧಿವೇಶನಗಳು ಎಂಬ ಶೀರ್ಷಿಕೆಯಲ್ಲಿ ಕೆಳಗಿನ ಮಾತುಗಳನ್ನು ಬರೆದಿದ್ದೇನೆ. ಶಿವಾನುಭವ ಪತ್ರಿಕೆಯಲ್ಲಿ ಕಾಂಗ್ರೆಸ ಅಧಿವೇಶನಗಳ ಚರ್ಚೆ ಏಕೆ? ಎಂದು ಅನೇಕರು ಪ್ರಶ್ನೆ ಮಾಡಬಹುದು. ಇದು ಅವಶ್ಯವೆಂದು ನಮಗೆ ತೋರಹತ್ತಿದೆ. ದೇಶದಲ್ಲಿ ಅನೇಕ ತರಹದ ಪರಿಷತ್ತುಗಳು ಎಲ್ಲ ಸಮಾಜಗಳಲ್ಲಿ ನಡೆಯುವುದು ಕಂಡು ಬರುತ್ತದೆ. ಅವೆಲ್ಲವು ಕಾಂಗ್ರೆಸ್ಸಿನ ಅನುಕರಣಮಾಡುತ್ತ ಬಂದಿವೆ. ಇದು ಕಾಂಗ್ರೆಸ್ಸಿನ ಪ್ರಭಾವವೇ ಸರಿ. ಉದಾಹರಣಾರ್ಥವಾಗಿ ೧೯೦೩ರಲ್ಲಿ ಧಾರವಾಡದಲ್ಲಿ ಪ್ರಾಂತಿಕ ರಾಜಕೀಯ ಪರಿಷತ್ತು ಕೂಡಿತ್ತು. ಅದರ ಮರು ವರ್ಷ ಅಂದರೆ ೧೯೦೪ನೆಯ ಇಸ್ವಿಯಲ್ಲಿ ಮೊದಲನೆಯ ವೀರಶೈವ ಮಹಾಸಭೆಯು ಧಾರವಾಡದಲ್ಲಿ ನೆರವೇರಿತು. ರಾಜಕೀಯ ಪರಿಷತ್ತಿನಲ್ಲಿ ವಾಡಿಕೆಯ ಪ್ರಕಾರ ಆಗಿನ ಆಡಳಿತೆಯ ಬಗ್ಗೆ ಚರ್ಚೆಗಳು ನಡೆದವು. ಈ ಕಾಲಕ್ಕೆ ಪ್ರಗತಿಕರೂ ರಾಷ್ಟ್ರೀಯ ಪಕ್ಷದವರೂ ಒಮ್ಮತವಾಗಿ ಕಾರ್ಯ ಮಾಡುತ್ತಿದ್ದರು. ಅವರಲ್ಲಿ ಇನ್ನೂ ಎರಡು ಪಕ್ಷಗಳಾಗಿದ್ದಿಲ್ಲ. ೧೯೦೭ರಲ್ಲಿ ಸುರತ್ ಕಾಂಗ್ರೆಸ್ಸಿನ ತರುವಾಯ ಉಭಯತರಲ್ಲಿ ಸ್ಪಷ್ಟವಾಗಿ ಎರಡು ವಿಭಾಗಗಳಾದವು. ಟಿಳಕರು ಅವರ ಅನುಯಾಯಿಗಳು ರಾಷ್ಟ್ರೀಯ ಪಕ್ಷವನ್ನು ಸ್ಥಾಪಿಸಿದರು. ಪ್ರಗತಿಕರು ಮೊದಲಿನ ಕಾಂಗ್ರೆಸ್ಸನ್ನು ಮುಂದುವರಿಸಿದರು. ಆಡಳಿತೆಯ ಸುಧಾರಣೆಯೇ ಈ ಪ್ರಗತಿಗೆ ಧ್ಯೇಯವಾಗಿತ್ತು.

ಇದೇ ಕಾಲದಲ್ಲಿ ಭಾರತದಲ್ಲಿಯ ಬಹುಶಃ ಎಲ್ಲ ಜಾತಿಯ ಜನರು ತಮ್ಮ ತಮ್ಮ ಪರಿಷತ್ತುಗಳನ್ನು ಕೂಡಿಸಿ ಸಮಾಜ ಸುಧಾರಣೆಯ ಕಾರ್ಯಗಳನ್ನು ಕೈಕೊಳ್ಳುತ್ತ ಬಂದರು. ವೀರಶೈವರು ತಮ್ಮ ಮಹಾಸಭೆಯ ಮುಖಾಂತರ ಶಿಕ್ಷಣ ಪ್ರಸಾರದ ಕಾರ್ಯಗಳನ್ನು ಮುಖ್ಯವಾಗಿ ಕೈಕೊಂಡರು. ಇದರಿಂದ ಸೊಲ್ಲಾಪುರ, ಬೆಂಗಳೂರು, ಬಳ್ಳಾರಿ ಈ ಜಿಲ್ಲೆಗಳಲ್ಲಿ ಶಿಕ್ಷಣ ಸಂಸ್ಥೆಗಳು ಉಂಟಾದವು. ಅವು ಈವರೆಗೂ ಉತ್ತಮ ರೀತಿಯಿಂದ ಶಿಕ್ಷಣ ಕಾರ್ಯವನ್ನು ಮಾಡುತ್ತ ಬಂದಿವೆ.

ಹೇಗೆ ಕಾಂಗ್ರೆಸ್ಸಿನಲ್ಲಿ ಒಡಕು ಉತ್ಪನ್ನವಾಯಿತೋ ಹಾಗೆಯೇ ಈ ಕಾಲದಲ್ಲಿ ವೀರಶೈವರಲ್ಲಿಯೂ ಕೆಲವು ಭೇದವಿಭೇದಗಳು ಉಂಟಾಗಿ ಅವರ ಮಹಾಸಭೆಗಳು ನಿಂತು ಹೋದವು. ಆರಂಭದಲ್ಲಿ ವೀರಶೈವರಲ್ಲಿ ವರ್ಣಗಳು ಇವೆ ಎಂದು ಹೇಳುವ ಪಕ್ಷ ಒಂದು ಮತ್ತು ಇದನ್ನು ವಿರೋಧಿಸುವ ಪಕ್ಷ ಬೇರೊಂದು. ಹೀಗೆ ಇವು ಪ್ರತಿಸ್ಪರ್ಧಿಯಾಗಿ ಹೋರಾಡಹತ್ತಿದವು. ಪಂಚಾಚಾರ್ಯ ಪಕ್ಷದವರು ವರ್ಣಾಶ್ರಮಗಳಿವೆ ಎಂದು, ಪುರಸ್ಕಾರ ಮಾಡುವವರಾದರು. ವಿರಕ್ತ ಪಕ್ಷದವರು ಕೆಲವು ಕಾರಣಗಳ ಮೂಲಕ ಪ್ರಮಥರನ್ನು ಹಿಂಬಾಲಿಸುವವರಾದರು ಹಲವರು ಭಕ್ತರು ಬೇರೆ, ಜಂಗಮರು ಬೇರೆ

ಎಂದು, ಬೇರೆ ಕೆಲವರು ಅವರಲ್ಲಿ ಭಿನ್ನತೆ ಇಲ್ಲವೆಂದು ಮತಭೇದಗಳು ಉಂಟಾದವು. ಈ ಕಲಹವು ಸೊಲ್ಲಾಪುರ ಮಹಾಸಭೆಯಲ್ಲಿ ಪ್ರಾರಂಭವಾಗಿ, ಮುಂದೆ ಬಳ್ಳಾರಿ ಮಹಾಸಭೆಯಲ್ಲಿ ವಿಕೋಪಕ್ಕೆ ಬಂದಿತು. ಈ ಸ್ಥಿತಿಯ ಮೂಲಕ ಮಹಾಸಭೆಯ ಜಗಳದ್ದೆಂದು ಯಾರೂ ಇದರ ಗೊಡವೆಗೆ ಹೋಗಲಿಲ್ಲ. ಅದು ನಿಂತು ಹೋಯಿತು.

ಮುಂದೆ ರಾಜಕೀಯ ಪಕ್ಷಗಳು ವೀರಶೈವ ಸಮಾಜದಲ್ಲಿ ತಲೆದೋರಿದವು. ಅವು ಕೇವಲ ವೈಯಕ್ತಿಕ ಪಕ್ಷಗಳು. ಈ ಪಕ್ಷಗಳನ್ನು ಅನುಸರಿಸುವವರು ಸಮಾಜದಲ್ಲಿ ತಮ್ಮ ವರ್ಚಸ್ಸನ್ನು ಬೆಳೆಯಿಸಬೇಕೆಂದು ಮಹಾಸಭೆಗೋಸ್ಕರ ಪ್ರಯತ್ನಿಸ ಹತ್ತಿದರು. ಧಾರವಾಡ ಮಹಾಸಭೆಯು ಹುಲಕೋಟಿ ಪಕ್ಷದವರು, ರಾಯಚೂರು ಮಹಾಸಭೆಯು ಕಂಬಳಿಪಕ್ಷದವರದು ಎಂಬ ತಿಳಿವಳಿಕೆಯಾಯಿತು.

ಕಾಂಗ್ರೆಸ್ಸನ್ನು ವಿಲ್ಲಿಂಗಡನ್ ವ್ಹಾಯಿಸರಾಯರ ಕಾಲದಲ್ಲಿ ಹತ್ತಿಕ್ಕಲಾಗಿ ಅದರ ಚಳುವಳಿಗಳು ನಿಂತು ಹೋದವು. ಆಗ ಕರ್ನಾಟಕದಲ್ಲಿ ಇದ್ದ ಕಾಂಗ್ರೆಸ್ ಪಕ್ಷದವರು ಕಾಂಗ್ರೆಸ್ಸಿನ ಬದಲಾಗಿ ವೀರಶೈವ ಮಹಾಸಭೆಯನ್ನು ಬೆಳೆಸಲು ಮುಂದಾದರು. ಇಂಥ ಪ್ರಯತ್ನಗಳು ಹುಬ್ಬಳ್ಳಿ ಮಹಾಸಭೆಯಲ್ಲಿ ನಡೆದು ಅದರಲ್ಲಿ ಅವರು ಯಶಸ್ವಿಗಳಾದರು. ಮೊದಲು ಮಹಾಸಭೆಯು ರಾಜಕೀಯ ವಿಷಯಗಳನ್ನು ಎಂದೂ ಚರ್ಚಿಸುತ್ತಿದ್ದಿಲ್ಲ. ಈಗ ಅವುಗಳನ್ನು ಚರ್ಚಿಸಬಹುದೆಂದು ಹುಬ್ಬಳ್ಳಿಯ ಮಹಾಸಭೆಯಲ್ಲಿ ಗೊತ್ತಾಯಿತು ಮತ್ತು ಆ ರೀತಿ ಅದರ ನಡೆವಳಿಕೆಗಳು ಜರುಗಿದವು. ಇದರಿಂದ ವೀರಶೈವ ಮಹಾಸಭೆಯು ಒಂದು ಪ್ರಬಲ ಸಂಸ್ಥೆಯಾಗುವುದೆಂದು ಎಲ್ಲರೂ ಭಾವಿಸಿದರು. ಆದರೆ ಆ ಸ್ಥಿತಿಯು ಮುಂದೆ ಉಂಟಾಗಲಿಲ್ಲ. ಈಗಲೂ ಕೂಡ ಉಂಟಾಗಿರುವುದಿಲ್ಲ. ಇದಕ್ಕೆ ಕಾಂಗ್ರೆಸ್ಸಿನವರಲ್ಲಿ ಉಂಟಾದ ಪರಸ್ಪರ ವಿರೋಧ ಭಾವ, ಮಾತ್ಸರ್ಯ ಬುದ್ಧಿ ಇವುಗಳೇ ಕಾರಣ ಹೊರತು ಬೇರಾವ ಕಾರಣಗಳಿಲ್ಲ.

ಅಂತಸ್ಥ ಕಲಹಗಳು ಬೆಳೆಯುತ್ತ ಬಂದದ್ದರಿಂದ ಮಹಾಸಭೆಯು ಮುಂದುವರೆಯಲಿಲ್ಲ. ಮಧ್ಯದಲ್ಲಿ ಕೈ. ವಾ. ಹುಲಕೋಟಿಯವರು ಆರ್ಥಿಕ ಅಭಿವೃದ್ಧಿಗಾಗಿ ಪ್ರಯತ್ನಿಸಿದರು. ಅದು ಸಿದ್ಧಿಗೆ ಹೋಗಲಿಲ್ಲ. ಮುಂದೆ ಬ್ಯಾರಿಸ್ಟರ ಸರದಾರರು ಸಮಾಜದಲ್ಲಿ ಒಂದು ಸಂಘಟನೆಯನ್ನು ಮಾಡಲು ಪ್ರಯತ್ನಿಸಿದರು. ಆದರೆ ಅವರು ಮಾಡಿದ ಕಮಿಟಿಗಳು ಸಮಾಜದ ಪರಿಸ್ಥಿತಿಯಲ್ಲಿ ಕಾಗದದಲ್ಲಿ ಉಳಿದವೇ ಹೊರತು. ಕಾರ್ಯ ಮಾಡುವ ಕಮಿಟಿಗಳಾಗಿರಲಿಲ್ಲ. ಹೀಗೆ ಮಹಾಸಭೆಯು ದುರ್ಬಲವಾಯಿತು ಎಂಬ ಮಾತುಗಳು ಮನನೀಯವಾಗಿವೆಯೆಂದು ನನ್ನ ಅಭಿಪ್ರಾಯ. ಹೀಗೆ ವೀರಶೈವ ಸಮಾಜ ಸರಿಯಾದ ಸ್ವರೂಪ ಪಡೆದುಕೊಳ್ಳದಿರುವಾಗ ಶಿವಾನುಭವ ಪತ್ರಿಕೆ, ಶಿವಾನುಭವ ಗ್ರಂಥಮಾಲೆಗಳು ಹುಟ್ಟಿಕೊಂಡು ಈ ಸಮಾಜದಲ್ಲಿ ಸಂಘಟನೆಗಾಗಿ ದುಡಿಯಹತ್ತಿತು. ಆದರೆ ಆರ್ಥಿಕ ತೊಂದರೆ ಪದೇ ಪದೇ ಸಂಭವಿಸಿದುದು ಅದರ ಬದುಕಿನ ಒಂದು ದುರಂತವೇ ಸರಿ. ಈಗ ಧರ್ಮದ ಮರ್ಮ ತಿಳಿಯದ ಸ್ವಾಮಿಗಳು, ಜ್ಞಾನವಿಲ್ಲದ ವಿದ್ಯಾವಂತರು, ಔದಾರ್ಯವಿಲ್ಲದ ವ್ಯಾಪಾರಸ್ಥರು ಇದ್ದ ಯಾವ ಸಮಾಜಕ್ಕೆ ಭೂಷಣವು? ಎಂದು ಬರೆದೆ. ನಮ್ಮ ಸಮಾಜದಲ್ಲಿಯ ಯಾವ ಸ್ವಾಮಿಗಳೂ, ವಿದ್ಯಾವಂತರೂ, ವ್ಯಾಪಾರಸ್ಥರೂ ಕೇವಲ ಅಪವಾದಗಳನ್ನು ಬಿಟ್ಟರೆ, ನಮಗೆ ಎಳ್ಳಷ್ಟು ಸಹಾನುಭೂತಿ, ಸಹಕಾರ, ಸಹಾಯ, ಏನನ್ನೂ ತೋರಿಸಲಿಲ್ಲ (೧೯೫೫). ಹೀಗಿದ್ದೂ ಆರ್ಥಿಕವಾಗಿ ಪತ್ರಿಕೆಯನ್ನು ಸಬಲಗೊಳಿಸಲು ಈ ರೀತಿ ವಿನಂತಿ ಮಾಡಿಕೊಳ್ಳಲಾಯಿತು.

ಶಿವಾನುಭವ ಪತ್ರಿಕೆಗೆ ಸಹಾಯ ಇರುವದಿಲ್ಲಾದ್ದರಿಂದ ಅದು ಅತ್ಯಂತ ಬಡತನ ಸ್ಥಿತಿಯಲ್ಲಿದೆ. ಅದು ಕೈಕೊಂಡ ಕಾರ್ಯಗಳೇನೋ ಘನತರವಾದವುಗಳು. ಆದರೆ ಬಹಳ ವೆಚ್ಚದವು ಇರುತ್ತದೆ. ಇದರಿಂದ ಅದರ ಕಾರ್ಯಗಳು ಕುಂಠಿತವಾಗಿ ನಡೆದಿರುತ್ತವೆ. ಈ ಸ್ಥಿತಿಯಲ್ಲಿ ಸಮಾಜದವರು, ನಿರಂಜನ ಸ್ವಾಮಿಗಳು, ಪಟ್ಟಚರ ಮೂರ್ತಿಗಳು, ಶ್ರೀಮಂತರು ಶಿವಾನುಭವಕ್ಕೆ ಸಹಾಯ ಮಾಡಬೇಕೆಂದು ನಾವು ಅವರಿಗೆ ಆದರ ಪೂರ್ವಕವಾಗಿ ವಿನಂತಿ ಮಾಡಿಕೊಳ್ಳುತ್ತೇವೆ (೨೯-೯). ಹೀಗೆ ಹಲವು ಬಾರಿ ಕೇಳಿಕೊಂಡೆನು. ಈಗ ಯಾವ ಕಾಲಕ್ಕೂ ಚಂದಾದಾರರ ಸಂಖ್ಯೆ ೨೦೦ನ್ನು ಮಿಕ್ಕಲಿಲ್ಲ. ನನ್ನ ಸಮಾಜ ಆಗಾಗ ಸಹಾಯ ಮಾಡಿತಾದರೂ ಅದು ಸಾಲದೇ ಹೋಗಿ, ಪತ್ರಿಕೆ ಸಾಲಕ್ಕೆ ಗುರಿಯಾಗಬೇಕಾಯಿತು. ಕೊನೆಗೆ ವಾರ್ಷಿಕ ಚಂದಾ ಹಣ ೪ ಅಣೆ ವರ್ಧಿಸಿದ ಅನಿವಾರ್ಯ ವಿನಂತಿಯನ್ನು ಪತ್ರಿಕೆಯಲ್ಲಿ ಹೀಗೆ ಪ್ರಕಟಿಸಲಾಯಿತು.

## ನಮ್ಮ ಶಿವಾನುಭವ ಪತ್ರಿಕೆಯ ಚಂದಾದಾರರಲ್ಲಿ ವಿನಂತಿ

ಮಹನೀಯರೇ,

ನಮ್ಮ ಶಿವಾನುಭವ ಪತ್ರಿಕೆಯು ಇದು ವರೆಗೂ ಯೋಗ್ಯ ರೀತಿಯಿಂದ ತನ್ನ ಕೀರ್ತಿಯನ್ನು ಸಂಪಾದಿಸಿರುವುದು. ಇದಕ್ಕೆ ತಮ್ಮೆಲ್ಲರ ಉದಾರ ದೇಣಿಗೆಯೇ ಪ್ರಾಮುಖ್ಯವಾಗಿದೆ. ಆದರೆ ಇಲ್ಲಿನ ವರೆಗೂ ನಮ್ಮ ಸಂಚಿಕೆಯ ವಾರ್ಷಿಕ ಚಂದಾ (೫-೧೨) ದಂತೆಯೇ ನಾವು ಸ್ವೀಕರಿಸಿ, ಕಳಿಸುತ್ತಾ ಬಂದೆವು. ಈಗ ನಮಗೆ ಪ್ರತಿಯೊಂದು ಸಂಸ್ಥೆಯ ಖರ್ಚುಗಳು ಹೆಚ್ಚಾಗಿ ಬರಹತ್ತಿದ್ದರಿಂದ ಮುಂದಿನ ಮಾರ್ಚ ೧೫-೩-೧೯೬೧ರಿಂದ ವಾರ್ಷಿಕ ಚಂದಾಹಣ (೬) ರೂಪಾಯಿಯಂತೆ ನಮ್ಮ ಕಾರ್ಯಾಲಯದಿಂದ ನಿರ್ಧರಿಸಲ್ಪಟ್ಟಿದೆ. ಮೊದಲು ನಮ್ಮಲ್ಲಿ ವರ್ಷದ ಹಣವನ್ನು ತುಂಬಿದವರಿಗೆ ಅದು ಮುಗಿಯುವ ವರೆಗೆ ಕಳಿಸುತ್ತೇವೆ. ಅದು ಮುಗಿದ ಮೇಲೆ (೬) ರೂಪಾಯಿಯಂತೆಯೇ ಎಲ್ಲರೂ ಶಿವಾನುಭವದ ಪ್ರೋತ್ಸಾಹನೆಗಾಗಿ ಕಳಿಸುವಿರೆಂದು ನಂಬಿದ.

ಹಿತಚಿಂತಕ ಪ್ರಿಂಟಿಂಗ್ ಪ್ರೆಸ್

ಶಿವಾನುಭವ ಕಾರ್ಯಾಲಯ, ವಿಜಾಪುರ.

ಈ ನಾಲ್ಕಾಣೆಯ ವಿನಂತಿಯು ಕೊನೆಯ ಸಂಚಿಕೆಯ, ಕೊನೆಯ ಪುಟದ, ಕೊನೆಯ ಬರೆವಣಿಗೆಯಾಗಿ (೩೫-೧, ೨) ಶಿವಾನುಭವ ಪತ್ರಿಕೆ ನಿಂತೇ ಹೋಯಿತು.

❖❖

ಭಾಗ : ೨

# ಜೀವನ ಚರಿತ್ರೆ

## ೧೨. ಧರೆಗಿಳಿದ ಶರಣ

ಧಾರವಾಡವು ಉತ್ತರ ಕರ್ನಾಟಕದ ಗಂಡುಮೆಟ್ಟಿನ ಸ್ಥಳ. ಕಳೆದ ನೂರೈವತ್ತು ವರುಷಗಳಿಂದಲೂ ಕರ್ನಾಟಕದ ಸರ್ವತೋಮುಖ ಪ್ರಗತಿಗೆ, ಕನ್ನಡ ನುಡಿಯ ಅಭಿವೃದ್ಧಿಗೆ ಧಾರವಾಡವು ಕೇಂದ್ರಸ್ಥಳವಾಗಿ ಕೆಲಸ ಮಾಡಿದೆ. ಶಿಕ್ಷಣದ ತವರೂರು ಎಂದೂ ಪ್ರಸಿದ್ಧಿ ಪಡೆದಿದೆ.

ಇಲ್ಲಿಯ ಹಳಕಟ್ಟಿ ಎಂಬ ಮನೆತನದಲ್ಲಿ ಗುರುಬಸಪ್ಪ ಮತ್ತು ದಾನಮ್ಮ ಎಂಬ ದಂಪತಿಗಳಿದ್ದರು. ಗುರುಬಸಪ್ಪನವರು ಸುಸಂಸ್ಕೃತ ಹೃದಯದವರು. ಶರಣ ಪ್ರೇಮಿಗಳು. ಕನ್ನಡ ಶಾಲಾ ಶಿಕ್ಷಕರಾಗಿ ಅವರು ಧಾರವಾಡ ಜಿಲ್ಲೆಯ ಅಮರಗೋಳ, ಅಣ್ಣಿಗೇರಿ ಮುಂತಾದ ಊರುಗಳಲ್ಲಿ ಸೇವೆ ಸಲ್ಲಿಸಿದರು. ಕೆಲವು ವರುಷ ಧಾರವಾಡ ಸರಕಾರಿ ಗಂಡುಮಕ್ಕಳ ಟ್ರೇನಿಂಗ ಕಾಲೇಜಿನ ಪ್ರ್ಯಾಕ್ಟಿಸಿಂಗ್ ಸ್ಕೂಲಿನಲ್ಲಿ ಶಿಕ್ಷಕರೆಂದು ಕೆಲಸ ಮಾಡಿದರು. ದಕ್ಷ ಶಿಕ್ಷಕರೆಂದು ಹೆಸರು ಪಡೆದ ಅವರನ್ನು ಧಾರವಾಡ ಡೆಪ್ಯೂಟಿ ಎಜ್ಯುಕೇಶನಲ್ ಇನ್‌ಸ್ಪೇಕ್ಟರರ ಆಫೀಸನಲ್ಲಿ ಸೀನಿಯರ ಕರಣಿಕರೆಂದು ವರ್ಗಾಯಿಸಲಾಯಿತು. ಅಲ್ಲಿಯೇ ೧೯೧೨ರಲ್ಲಿ ಅವರು ಸರಕಾರಿ ಸೇವೆಯಿಂದ ನಿವೃತ್ತಿ ಹೊಂದಿದರು.

ಗುರುಬಸಪ್ಪನವರಿಗೆ ಪುಸ್ತಕಗಳನ್ನು ಓದುವದೊಂದು ಹವ್ಯಾಸ ಇಂಗ್ಲೀಷ್ ಹಾಗೂ ಕನ್ನಡ ಭಾಷೆಗಳ ಒಂದಿಲ್ಲೊಂದು ಉತ್ತಮ ಗ್ರಂಥವನ್ನು ಓದುತ್ತಲೂ, ಕನ್ನಡದಲ್ಲಿ ಸ್ವತಂತ್ರವಾಗಿ ಗ್ರಂಥಗಳನ್ನು ಬರೆಯುತ್ತಲೂ ಇದ್ದರು. ಅವರು ರಚಿಸಿದ ಡ್ಯೂಕ್ ಆಫ್ ವೆಲಿಂಗ್ಟನ್, ನೆಪೋಲಿಯನ್ ಬೋನಾಪಾರ್ಟ, ಗ್ಲಾಡಸ್ಟನ್, ಯುಕ್ಲಿಡನ ಆರು ಪುಸ್ತಕಗಳು, ಫ್ರಾನ್ಸಿನ ರಾಜ್ಯಕ್ರಾಂತಿ, ಶಿಕಂದರಬಾದಶಹ, ಏಕನಾಥಸಾಧುಗಳ ಚರಿತ್ರೆ, ಇಂಗ್ಲಂಡದ ಇತಿಹಾಸ–ಮುಂತಾದ ಪುಸ್ತಕಗಳು ಅಂದಿನ ಕಾಲದಲ್ಲಿ ಜನಪ್ರೀಯವಾಗಿದ್ದವು. ಇವರು ಕರ್ನಾಟಕ ವಿದ್ಯಾವರ್ಧಕ ಸಂಘದ ಕಾರ್ಯಕ್ಕಾಗಿ ಮಂಡಳದ ಸದಸ್ಯರೂ ಆಗಿದ್ದರು.

ಶ್ರೀ ಗುರುಬಸಪ್ಪ ಮಾಸ್ತರರ ಹೆಂಡತಿಯಾದ ಶ್ರೀಮತಿ ದಾನಮ್ಮ ಸಹ ಧಾರ್ಮಿಕ ಪ್ರವೃತ್ತಿಯವಳು. ದೇವರಲ್ಲಿ ಅತಿಶಯ ಭಕ್ತಿಯನ್ನಿಟ್ಟವಳು. ಗುರುಗಳ ಉಪದೇಶದಲ್ಲಿ ನಂಬಿಗೆ ಇದ್ದವಳು. ಇಷ್ಟಲಿಂಗ ಪೂಜೆಯಲ್ಲಿ ಆಸಕ್ತಳು. ಜಂಗಮ ದಾಸೋಹದಲ್ಲಿ ನಿರತಳು.

ಈ ಶರಣ ದಂಪತಿಗಳಿಗೆ ಕ್ರಿ. ಶ. ೧೮೮೦ರ ಜುಲೈ ತಿಂಗಳ ೨ನೆಯ ದಿನಾಂಕದಂದು ಗಂಡುಮಗು ಜನಿಸಿತು. ಫಕೀರಪ್ಪ ಎಂದು ಮಗುವಿಗೆ ನಾಮಕರಣ ಮಾಡಿದರು. ಮುದ್ದು ಮಗು ಫಕೀರಪ್ಪನಿಗೆ ಮೂರು ವರುಷಗಳಾದವು. ಅದೇನು ದೈವದಾಟವೋ! ಯಾರು ಬಲ್ಲರು? ಪ್ರೀತಿಯ

ತಾಯಿ ದಾನಮ್ಮ ತೀರಿಕೊಂಡಳು. ಫಕೀರಪ್ಪ ತಾಯಿ ಇಲ್ಲದ ತಬ್ಬಲಿಯಾದ. ಸ್ನೇಹದ ಬಾಳ ಸಂಗಾತಿಯಾದ ಪತ್ನಿ ದಾನಮ್ಮನನ್ನು ಕಳೆದುಕೊಂಡ ಗುರುಬಸಪ್ಪನವರಿಗೆ ದಿಗ್ಭ್ರಮೆಯಾಯಿತು. ಆಕಾಶವೇ ಕಳಚಿ ತಲೆಯ ಮೇಲೆ ಅಪ್ಪಳಿಸಿದಂತಾಯಿತು. ಹೆಂಡತಿಯ ಮರಣದಿಂದ ಉದ್ಭವಿಸಿದ ಚಿಂತೆ ಒಂದು ಕಡೆ; ಮಗು ಫಕ್ಕಿರಪ್ಪನನ್ನು ರಕ್ಷಿಸಿ ಬೆಳೆಸುವ ಚಿಂತೆ ಇನ್ನೊಂದು ಕಡೆ. ಹೀಗಾಗಿ ಅವರಿಗೆ ದಿಕ್ಕೇ ತೋರದಾಯಿತು.

ನಾಳಿಗೆ ಬಪ್ಪುದು ನಮಗಿಂದೆ ಬರಲಿ
ಇಂದೇ ಬಪ್ಪುದು ನಮಗೀಗಲೇ ಬರಲಿ
ಇದಕಾರಂಜುವರು; ಇದಕಾರಳುಕುವರು!
ಜಾತಸ್ಯ ಮರಣಂ ಧ್ರುವಂ ಎಂಬುದಾಗಿ
ನಮ್ಮ ಕೂಡಲ ಸಂಗಮದೇವರು ಬರೆದ ಬರೆಹವ ತಪ್ಪಿಸುವರೆ
ಹರಿ ಬ್ರಹ್ಮಾದಿಗಳವಲ್ಲ....."

ಎಂಬ ವಚನೋಕ್ತಿ ಅವರ ದುಃಖವನ್ನು ದೂರ ಮಾಡಿತು. ಮನದಲ್ಲಿ ಸ್ಥೈರ್ಯವನ್ನು ತುಂಬಿತು. ಹೃದಯದ ಭಾರವನ್ನು ಹಗುರಗೊಳಿಸಿತು. ತಮ್ಮ ಬಾಳಿನ ಬಳ್ಳಿಯಾದ ಫಕೀರಪ್ಪನನ್ನು ಬೆಳೆಸುವುದಕ್ಕೆ ಅವರು ಸನ್ನದ್ಧರಾದರು.

## ೧೩. ಶಿಕ್ಷಣ

ಬಾಲಕ ಫಕೀರಪ್ಪನಿಗೆ ಮನೆಯಲ್ಲಿ ಮುಪ್ಪಿನ ಅಜ್ಜಿ ಇದ್ದಳು. ಮೊಮ್ಮಗನಿಗೆ ಉಣ್ಣಿಸಿ ತಿನ್ನಿಸುವ ಭಾರ ಅಜ್ಜಿಯದಾದರೆ, ಮಗನಿಗೆ ನೀತಿ ನಡತೆಗಳನ್ನು ಕಲಿಸುವ ಭಾರ ತಂದೆಯದಾಯಿತು.

ಹುಡುಗ ಫಕೀರಪ್ಪ ತುಂಬ ಚಾಣ, ಧಾರವಾಡದಲ್ಲಿಯೇ ಕನ್ನಡ ಶಾಲೆಯನ್ನು ಸೇರಿದ. ಚುರುಕು ಬುದ್ಧಿಯ ಆತ ವರ್ಗದಲ್ಲಿ ಮುಂದಾಗಿದ್ದ; ಗುರುಗಳಿಗೆ ಬೇಕಾದವನಾಗಿದ್ದ, ಬಹು ಸುಲಭದಲ್ಲಿ ಪ್ರಾಥಮಿಕ ಅಭ್ಯಾಸದ ಕೊನೆಯ ಪರೀಕ್ಷೆಯಲ್ಲಿ ಹೆಚ್ಚು ಗುಣಾಂಕ ಪಡೆದು ಪಾಸಾದ.

ಅನಂತರ ಮಾಧ್ಯಮಿಕ ಶಾಲೆಯನ್ನು ಸೇರಿದ. ತಂದೆಯಂತೆ ಗ್ರಂಥಪಠಣ ಹಾಗೂ ಸತತಾಭ್ಯಾಸ ಪ್ರವೃತ್ತಿಗಳಿಂದಾಗಿ ೧೮೯೬ರಲ್ಲಿ ಮ್ಯಾಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆಯಾದ. ಆಗ ಅವನಿಗೆ ವಯಸ್ಸು ಕೇವಲ ಹದಿನಾರು ವರುಷ.

ಮಗನು ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಪಾಸಾದ ಸಂಗತಿ ತಂದೆಗೆ ಹೆಮ್ಮೆಯನ್ನುಂಟು ಮಾಡಿತು. ತಾಯಿಯ ಆಶ್ರಯ ತಪ್ಪಿದ ಮಗ ವಿದ್ಯಾವಂತನಾದನೆಂದು ಗುರುಬಸಪ್ಪನವರು ಹರ್ಷಿತರಾದರು. ಮಗನಿಗೆ ಉಚ್ಚ ಶಿಕ್ಷಣವನ್ನು ಕೊಡಿಸಬೇಕೆಂದು ಅವರಿಗೆ ಯೋಚನೆಯುಂಟಾಯಿತು. ಆದರೆ ಅಂದಿನ ಕಾಲದಲ್ಲಿ ಧಾರವಾಡದಲ್ಲಿ ಉಚ್ಚ ಶಿಕ್ಷಣವನ್ನೀಯುವ ಒಂದು ಕಾಲೇಜೂ ಇರಲಿಲ್ಲ. ಹುಡುಗ ಫಕೀರಪ್ಪನು ಸಹ ಕಾಲೇಜು ಸೇರಿ ಹೆಚ್ಚಿನ ಜ್ಞಾನ ಸಂಪಾದಿಸಬೇಕೆಂಬ ಮನಸ್ಸುಳ್ಳವನಾಗಿದ್ದನು. ಆದರೆ ಕಾಲೇಜುಗಳಿದ್ದುದು ದೂರದ ಪುಣೆ, ಮುಂಬಯಿಗಳಲ್ಲಿ, ಅಷ್ಟು ದೂರ, ಇದ್ದ ಒಬ್ಬನೇ ಮಗನನ್ನು ಕಳಿಸುವದು ಹೇಗೆ? ವಯಸ್ಸೂ ಚಿಕ್ಕದು. ಆದುದರಿಂದ ಇಷ್ಟು ವಿದ್ಯೆ ಕಲಿತದ್ದೇ ಸಾಕು ಎಂದು ಒಮ್ಮೆ ತಂದೆ ಮನದಲ್ಲಿ ಅಂದುಕೊಂಡರು. ಆದರೆ ಕಾಲೇಜು ಸೇರಿ ವಿದ್ಯಾಭ್ಯಾಸವನ್ನು

ಮುಂದುವರಿಸಬೇಕೆಂಬ ಉತ್ಸಾಹದಲ್ಲಿದ್ದ ಮಗನನ್ನು ದೂರದ ಪಟ್ಟಣಕ್ಕಾದರೂ ಸರಿ; ಕಳಿಸುವುದೇ ಉತ್ತಮ ಮಾರ್ಗ ಎಂದು ತಂದೆಯ ಹೃದಯ ಹೇಳಿತು.

ಕೊನೆಗೆ ಮುಂದಿನ ವಿದ್ಯಾಭ್ಯಾಸಕ್ಕಾಗಿ ಮಗನನ್ನು ಮುಂಬಯಿಗೆ ಕಳಿಸುವುದೆಂದು ನಿಶ್ಚಯಿಸಿದರು. ಅಲ್ಲಿಯ ಸೇಂಟ್ ಝೇವಿಯರ ಕಾಲೇಜಿನಲ್ಲಿ ಪ್ರವೇಶವೂ ಸಿಕ್ಕಿತು.

ತಮ್ಮ ಕರುಳಿನ ಒಂದೇ ಒಂದಾದ ಕುಡಿ ಫಕೀರಪ್ಪ, ಅವನಿಂದಲೇ ಮನೆತನದ ದೀಪ ಬೆಳಗಬೇಕು. ಅಷ್ಟು ದೂರದ ಮುಂಬಯಿಗೆ ನೆಚ್ಚಿನ ಪುತ್ರನನ್ನು ಕಳಿಸುವಾಗ ತಂದೆಗೆ ಕರುಳು ಕತ್ತರಿಸಿದಷ್ಟು ವೇದನೆಯಾಯಿತು. ಆದರೆ ಅವನ ಭವಿಷತ್ತಿನಲ್ಲಿಯ ಭವ್ಯ ಬಾಳನ್ನು ಮನಗಂಡು ಅಗಲುವಿಕೆಯಿಂದಾದ ದುಃಖವನ್ನು ನುಂಗಿಕೊಂಡು ಮಗನನ್ನು ಹರಸಿ ಮುಂಬಯಿಗೆ ಬೀಳ್ಕೊಟ್ಟರು.

ತಂದೆಯ ಆಶೀವಾದಗಳನ್ನು ಶಿರದಲ್ಲಿ ಹೊತ್ತು ಫಕೀರಪ್ಪ ಮುಂಬಯಿ ತಲುಪಿದ. ಕಾಲೇಜಿನಲ್ಲಿ ಚಿತ್ತವಿಟ್ಟು ಅಭ್ಯಾಸ ಮಾಡಿದ. ಅಲ್ಲಿ ರಸಾಯನಶಾಸ್ತ್ರ ಮತ್ತು ಭೌತಶಾಸ್ತ್ರಗಳನ್ನು ಪರೀಕ್ಷೆಗೆ ಐಚ್ಛಿಕ ವಿಷಯಗಳನ್ನಾಗಿ ಆಯ್ದುಕೊಂಡಿದ್ದುದೊಂದು ವಿಶೇಷವೆಂದೇ ಹೇಳಬೇಕು. ಬಿ. ಎ. ಪರೀಕ್ಷೆಯನ್ನು ಉತ್ತಮ ಗುಣಗಳನ್ನು ಪಡೆದು ಉತ್ತೀರ್ಣರಾದರು. ಇದರಿಂದ ಅವರ ಉತ್ಸಾಹ (೧೯೦೧) ಇಮ್ಮಡಿಸಿತು. ಪದವೀಧರರಾದ ಅವರಿಗೆ ಕಾಯಿದೆ ಪರೀಕ್ಷೆಯಲ್ಲಿ ಪಾಸಾಗಿ ವಕೀಲಿ ವೃತ್ತಿಯನ್ನು ಅವಲಂಬಿಸಬೇಕೆಂಬ ಆಶೆ ಅವರನ್ನು ಲಾ ಕಾಲೇಜು ಸೇರುವಂತೆ ಮಾಡಿರಲಿಕ್ಕೆ ಸಾಕು. ಇದೇ ಸಮಯಕ್ಕೆ ಎಂ. ಎ. ಪರೀಕ್ಷೆಯ ಅಭ್ಯಾಸವನ್ನು ಸ್ವಂತಾಗಿ ಮಾಡಿದ್ದರೂ ಆ ಪರೀಕ್ಷೆಗೆ ಕುಳಿತುಕೊಳ್ಳಲಿಲ್ಲ. ಆದರೆ ಕಾಯಿದೆ ಪರೀಕ್ಷೆಯಲ್ಲಿ ತೇರ್ಗಡೆಯಾದರು.

ಫಕೀರಪ್ಪನವರು ಹಾಯಸ್ಕೂಲಿನ ವಿದ್ಯಾರ್ಥಿಯಾಗಿದ್ದಾಗ ಕರ್ನಾಟಕದಲ್ಲಿ ಶಿಕ್ಷಣ ಪದ್ಧತಿಯು ಬಹಳ ಕೀಳು ಸ್ಥಿತಿಯಲ್ಲಿತ್ತು. ನಮ್ಮ ನಾಡಿನ ಹಿರಿಯ ಕವಿಗಳ ಜೀವನ ಹಾಗೂ ಕೃತಿಗಳ ಬಗೆಗೆ ಶಿಕ್ಷರಿಗೆ ಏನೂ ಪರಿಚಯವಿರಲಿಲ್ಲ. ಆ ಬಗ್ಗೆ ತಿಳುವಳಿಕೆ ಕೊಡುವ ಮೂಲ ಗ್ರಂಥಗಳೂ ಕನ್ನಡದಲ್ಲಿ ಇರಲಿಲ್ಲ. ಹೀಗಾಗಿ ಶಿಕ್ಷಕರು ತಮ್ಮ ಮನಬಂದಂತೆ ವಿದ್ಯಾರ್ಥಿಗಳಿಗೆ ಬೋಧಿಸುತ್ತಿದ್ದರು. ಅವರ ಬೋಧನೆಯು ವಿದ್ಯಾರ್ಥಿಗಳ ಕೋಮಲವಾದ ಮನಸ್ಸಿನಲ್ಲಿ ತಪ್ಪು ಭಾವನೆಗಳನ್ನು ಮೂಡಿಸುತ್ತಿತ್ತು. ಇಂತಹ ತಮ್ಮ ಒಂದು ಅನುಭವವನ್ನು ಶ್ರೀ ಫಕೀರಪ್ಪ ಹಳಕಟ್ಟಿಯವರೇ ತಮ್ಮ ಶಿವಾನುಭವ ಪತ್ರಿಕೆಯಲ್ಲಿ (೧೯೫೧) ಈ ರೀತಿ ವಿವರಿಸಿದ್ದಾರೆ.

"೧೮೯೦ ರಿಂದ ೧೮೯೬ರ ವರೆಗೆ ನಾನು ಮಾಧ್ಯಮಿಕ ಶಾಲೆ ಎಂದರೆ ಧಾರವಾಡದ ಹಾಯಸ್ಕೂಲಿನಲ್ಲಿ ವಿದ್ಯಾರ್ಥಿಯಾಗಿದ್ದಾಗ್ಗೆ. ಇದ್ದ ಪರಿಸ್ಥಿತಿಯನ್ನು ಇಲ್ಲಿ ಹೇಳುವುದು ಅವಶ್ಯವೆನಿಸುತ್ತದೆ. ಆಗ ಜನರಿಗೆ ವೀರಶೈವ ಸಂಸ್ಕೃತಿ, ಅವರ ವಾಙ್ಮಯ ಮತ್ತು ಅದರ ಇತಿಹಾಸ ಇವುಗಳ ನಿಜಸ್ಥಿತಿಯ ಪರಿಚಯವು ಏನೂ ಇರಲಿಲ್ಲ. ವಾಚನ ಪುಸ್ತಕಗಳಲ್ಲಿ ಸೋಮೇಶ್ವರ ಕವಿ, ಸರ್ವಜ್ಞ ಕವಿ, ಸರ್ಪಭೂಷಣ ಕವಿ, ಷಡಕ್ಷರ ಕವಿ, ನಿಜಲಿಂಗ ಕವಿ ಈ ಮೊದಲಾದವರ ಪದ್ಯಗಳು ಉದಾಹರಿಸಲ್ಪಟ್ಟಿದರೂ ಅವರು ಯಾರು? ಎಲ್ಲಿಯವರು? ಅವರು ಬರೆದ ಗ್ರಂಥಗಳಾವುವು? ಎಂಬುದರ ವಿವೇಚನೆಯು ಈ ಪುಸ್ತಕಗಳಲ್ಲಿ ಎಷ್ಟು ಮಾತ್ರವೂ ಇರುತ್ತಿದ್ದಿಲ್ಲ. ಶಿಕ್ಷಕರಿಗೂ ಕೂಡ ಈ ತರದ ತಿಳಿವಳಿಕೆ ಇರದ್ದರಿಂದ ಅವರೂ ಕೂಡ ವಿದ್ಯಾರ್ಥಿಗಳಿಗೆ ಇವುಗಳ ಜ್ಞಾನವನ್ನು

ಮಾಡಿಕೊಡುತ್ತಿದ್ದಿಲ್ಲ. ಆದರೆ ಒಂದು ಸಮಾಜದ ಇತಿಹಾಸ ಮತ್ತು ಅದರ ವಾಙ್ಮಯ ಇವುಗಳ ಪರಿಚಯವು ವಿದ್ಯಾರ್ಥಿಗಳಲ್ಲಿ ಇಲ್ಲದೇ ಹೋದರೆ ಆ ಸಮಾಜಕ್ಕೋಸ್ಕರ ಅದರ ಭಾವವು ಅವರಲ್ಲಿ ಹುಟ್ಟುವುದು ಹೇಗೆ? ವಿಪರೀತ ಭಾವನೆಗಳು ವಿದ್ಯಾರ್ಥಿಗಳಲ್ಲಿ ಮಾತ್ರವಷ್ಟೇ ಅಲ್ಲ; ನಾಡಿನಲ್ಲಿಯೂ ಕೂಡ ಉಂಟಾಗಿದ್ದುದು ಕಂಡುಬರುತ್ತದೆ."

ಓದುವ ಹವ್ಯಾಸವನ್ನು ಬೆಳೆಯಿಸಿಕೊಂಡು ಬಂದ ಫಕೀರಪ್ಪನವರಿಗೆ ಪುಸ್ತಕಗಳ ಮುಖಾಂತರ ಅಪಾರ ಜ್ಞಾನಾರ್ಜನೆ ಮಾಡಿಕೊಳ್ಳಲು ಬಹು ಸುಲಭವಾಯಿತು. ರಸಾಯನಶಾಸ್ತ್ರ ಹಾಗೂ ಭೌತಶಾಸ್ತ್ರಗಳನ್ನು ಐಚ್ಛಿಕ ವಿಷಯಗಳೆಂದು ಬಿ. ಎ. ಪರೀಕ್ಷೆಗೆ ಆಯ್ಕೆ ಮಾಡಿಕೊಂಡಿದ್ದ ಅವರಲ್ಲಿ ವಿಮರ್ಶಾತ್ಮಕ ಶಕ್ತಿ ತಾನಾಗಿಯೇ ಕುದುರಿತ್ತೆಂದು ಹೇಳಬಹುದು. ವಿಜ್ಞಾನಿಯಲ್ಲಿರಬೇಕಾಗಿದ್ದ ವಿಶ್ಲೇಷಣ ಬುದ್ಧಿ ಅವರ ಭಾವೀ ಜೀವನಕ್ರಮವನ್ನೇ ಬದಲಾಯಿಸಿತೆನ್ನಬಹುದು. ಅಲ್ಲದೆ ಆಂಗ್ಲ ಸಾಹಿತ್ಯದಲ್ಲಿಯ ಉತ್ತಮೋತ್ತಮ ಕವಿಗಳ ಕೃತಿಗಳನ್ನು ಓದಿ ಅರಗಿಸಿಕೊಂಡ ಅವರ ಹೃದಯ ಕವಿಹೃದಯವಾಗಿತ್ತು. ಹಾಯಸ್ಕೂಲು ಮತ್ತು ಕಾಲೇಜುಗಳಲ್ಲಿ ವಿದ್ಯಾರ್ಥಿಯಾಗಿದ್ದಾಗ ಅವರು ತಮ್ಮ ಓದು ಬರಹಗಳನ್ನು ಕುರಿತು ಹೀಗೆ ಬರೆದಿರುವರು :

"ನಾನು ಕೇಳಿದ ಮಹತ್ವದ ವ್ಯಾಖ್ಯಾನಗಳು, ಕಾಲೇಜಿನ ಪ್ರೋಫೆಸರರು ಕಾಲೇಜಿನಲ್ಲಿ ಹೇಳಿದ ವಿಷಯಗಳು, ನಾನು ಓದಿದ ಮಹತ್ವದ ಗ್ರಂಥಗಳು – ಇವುಗಳ ಸಾರಾಂಶಗಳನ್ನು ಬರೆದಿಡುವುದು ನನ್ನ ವಾಡಿಕೆಯಾಗಿತ್ತು. ಹಾಯಸ್ಕೂಲಿನಲ್ಲಿ ವಿದ್ಯಾರ್ಥಿಯಾಗಿದ್ದಾಗಿನಿಂದಲೂ ಹೀಗೆ ಬರೆದಿಡುವದು ನನ್ನ ಪದ್ಧತಿ. ನಾನು ಇತರರು ಬರೆದ ನೋಟಬುಕ್ಕುಗಳನ್ನು ಎಂದೂ ಕೊಳ್ಳಲಿಲ್ಲ. ಅಥವಾ ಓದುತ್ತಿರಲಿಲ್ಲ. ಪರೀಕ್ಷೆ ಕಾಲದಲ್ಲಿ ನಾನು ಬರೆದಿಟ್ಟ ಇಂಥ ಸಾರಾಂಶಗಳನ್ನೇ ಓದಿಕೊಳ್ಳುತ್ತಿದ್ದು ಹಾಗೆ ಮಾಡಿದ ಕೂಡಲೇ ಸಮಗ್ರ ಗ್ರಂಥದ ರಿವಿಜನ್ ಬಹು ತೀವ್ರವಾಗಿ ಆದಂತೆ ನನಗೆ ಆಗುತ್ತಿತ್ತು. ಇಂಥ ಸಾರಾಂಶಗಳು ಮತ್ತು ಟಿಪ್ಪಣಿಗಳು ನನ್ನ ಸಂಶೋಧನ ಕಾರ್ಯಗಳಲ್ಲಿ ನನಗೆ ಬಹಳ ಉಪಯುಕ್ತವಾಗುತ್ತ ಬಂದಿವೆ."

ತಮ್ಮ ವ್ಯಕ್ತಿತ್ವವನ್ನು ವಿದ್ಯಾರ್ಥಿ ಜೀವನದಲ್ಲಿಯೇ ಸಂಪೂರ್ಣವಾಗಿ ಅರಳಿಸಿಕೊಂಡ ಫಕೀರಪ್ಪನವರು ಮುಂದಿನ ಜೀವನದಲ್ಲಿ ಪರಿಮಳವನ್ನು ಸೂಸುವ ಪುಷ್ಪದಂತಾದರು. ಅವರ ಜನನವು ನಾಡ ಜನತೆಯನ್ನು ಬೆಳಕಿನತ್ತ ಒಯ್ಯುವಂತಾಯಿತು. ಹನ್ನೆರಡನೆಯ ಶತಮಾನದಲ್ಲಿ ಮೂಡಿ ಮಾಯವಾಗಿದ್ದ ಮಹಾಶರಣನೊಬ್ಬ ಇಪ್ಪತ್ತನೆಯ ಶತಮಾನದಲ್ಲಿ ಮತ್ತೆ ಧರೆಗಿಳಿದು ಬಂದಂತಾಯಿತು.

## ೧೪. ವಚನಪಿತಾಮಹ

ಫಕೀರಪ್ಪ ಹಳಕಟ್ಟಿಯವರು ತಮ್ಮ ಕಾಯಿದೆ ಪರೀಕ್ಷೆಯಲ್ಲಿ ಪಾಸಾಗಿ ಧಾರವಾಡಕ್ಕೆ ಮರಳಿದಾಗ ಪ್ರಾಸಿಕ್ಯೂಟರ ಹುದ್ದೆಯು ಅವರಿಗಾಗಿ ಕಾದಿತ್ತು. ಅದನ್ನು ಸ್ವೀಕರಿಸಿದ ಹಳಕಟ್ಟಿಯವರು ಅಲ್ಲಿ ನಿಸ್ಪೃಹ ಸೇವೆ ಸಲ್ಲಿಸತೊಡಗಿದರು. ಮುಂದೆ ಅವರಿಗೆ ಕೆಲವೇ ದಿನಗಳಲ್ಲಿ ಬೆಳಗಾವಿಗೆ ವರ್ಗವಾಯಿತು. ಅಲ್ಲಿಯ ಹವೆಯು ಅವರ ಪ್ರಕೃತಿಗೆ ಒಗ್ಗದ್ದಕ್ಕೆ ಬಿಜಾಪುರಕ್ಕೆ ವರ್ಗಮಾಡಿಸಿಕೊಂಡು ಬಂದರು. ಅಲ್ಲಿ ನಾಲ್ಕು ವರುಷಗಳವರೆಗೆ ವಕೀಲಿವೃತ್ತಿಯನ್ನು ಮಾಡಿದರು. ಈ ಅವಧಿಯಲ್ಲಿ ಕೋರ್ಟಿನಲ್ಲಿಯ

ನ್ಯಾಯ ನಿಗದಿಗಳು ಹಳ್ಳಿಯ ಜನರವೇ ಹೆಚ್ಚಿಗೆ ಇದ್ದವು. ಅವರ ನ್ಯಾಯ ಪಕ್ಷಪಾತ ಬುದ್ಧಿಯನ್ನು ಹಳ್ಳಿಯ ಜನರು ಬಹುವಾಗಿ ಮೆಚ್ಚಿಕೊಂಡರು ಮತ್ತು ತಮ್ಮ ನ್ಯಾಯ ನಿರ್ಣಯದ ಭಾರವನ್ನು ಅವರ ಮೇಲೆಯೇ ಹಾಕುತ್ತಿದ್ದರು. ಕೋರ್ಟಿಗೆ ಹೋಗಿ ಅಪಾರ ಹಣವನ್ನು ವೆಚ್ಚಮಾಡಿಕೊಂಡರೂ ಗೊತ್ತಿಗೆ ಮುಟ್ಟದ ಹಳ್ಳಿಗರು ಹಳಕಟ್ಟಿಯವರಲ್ಲಿ ಅಪ್ತಾಲೋಚನೆ ಮಾಡಲು ಬರಹತ್ತಿದರು. ಹೊಲ ಮನೆಗಳ ಚಿಕ್ಕ ಪುಟ್ಟ ನ್ಯಾಯಗಳಿಗಾಗಿ ಕೆಲವು ಹಳ್ಳಿಯ ಶ್ರೀಮಂತರ ಮನೆತನಗಳು ಕೋರ್ಟಿನ ಕಟ್ಟೆಯನ್ನೇರಿ ಸರ್ವನಾಶವಾಗಿದ್ದವು. ಹೀಗೆ ದುರಭಿಮಾನ ಮತ್ತು ಒಣ ಪ್ರತಿಷ್ಠೆಗಳಿಗೆ ಬಲಿಯಾದ ಹಳ್ಳಿಯ ಅಶಿಕ್ಷಿತ ಶ್ರೀಮಂತರು ಹಳಕಟ್ಟಿಯವರ ಬಳಿ ಸೂಕ್ತ ಸಲಹೆ ಪಡೆಯಲು ಬರುತ್ತಿದ್ದರು. ಆಗ ಹಳಕಟ್ಟಿಯವರು ಅವರ ಹಳ್ಳಿಗೆ ಹೋಗಿ ಆ ಊರ ಹಿರಿಯರ ಸಮಕ್ಷಮದಲ್ಲಿ ಎರಡೂ ಪಂಗಡದವರಿಗೆ ತಿಳಿ ಹೇಳಿ ನ್ಯಾಯವನ್ನು ಬಗೆಹರಿಸಿ ಬರುತ್ತಿದ್ದರು. ಎರಡೂ ಪಕ್ಷಗಾರರು ಹಳಕಟ್ಟಿಯವರನ್ನು ಪ್ರೀತಿಸುವಂತಾಯಿತು.

ಹೀಗೆ ಪರೋಪಕಾರ ಕಾರ್ಯಗಳನ್ನು ಮಾಡುತ್ತ ಹೋದ ಅವರಿಗೆ ವಕೀಲಿ ವೃತ್ತಿಯಿಂದ ಬರಬೇಕಾಗಿದ್ದ ದುಡ್ಡು ಕಡಿಮೆಯಾಯಿತು. ಆದರೆ ಅವರಿಗೆ ಈ ಗ್ರಾಮಗಳಲ್ಲಿಯೂ ಜನರ ಪರಿಚಯ ಬೆಳೆಯಿತು. ಅವರು ಕಾಲೇಜಿನ ವಿದ್ಯಾರ್ಥಿಯಾಗಿದ್ದಾಗ (೧೯೦೧-೧೯೦೨) ರಬಕವಿ, ಬನಹಟ್ಟಿ, ಗೋಠೆ ಮುಂತಾದ ಗ್ರಾಮಗಳಿಗೆ ಭೇಟಿಯಿತ್ತಿದ್ದರು. ಅಲ್ಲಿ ಕೆಲವು ವೀರಶೈವ ಮನೆಗಳಲ್ಲಿ "ಅನೇಕ ಓಲೆ ಗ್ರಂಥಗಳನ್ನು ನೋಡಿದ್ದರು. ಕ್ರಮೇಣ ಅವರು ತಮ್ಮ ವಕೀಲಿ ವೃತ್ತಿಯನ್ನು ಕಡಿಮೆ ಮಾಡುತ್ತ ಕನ್ನಡದ ಅತ್ಯಂತ ಮಹತ್ವದ ನಿಧಿಯಂತಿದ್ದ ತಾಳೆ ಗ್ರಂಥಗಳನ್ನು ಸಂಗ್ರಹಿಸಿ ಪುಸ್ತಕ ರೂಪದಲ್ಲಿ ಪ್ರಕಟಿಸುವ ಕಾರ್ಯಕ್ಕೆ ತಮ್ಮ ಸಮಯವನ್ನು ಮೀಸಲಾಗಿರಿಸಿದರು. ವಚನ ಸಾಹಿತ್ಯದ ಕೆಲಸವನ್ನೇ ಹೆಚ್ಚು ಉತ್ಸಾಹದಿಂದ ಮುಂದುವರಿಸಿದೆ ಮತ್ತು ಈ ಮಹತ್ವದ ಸಾಹಿತ್ಯ ಪ್ರಕಟನೆಗಾಗಿ ನನ್ನ ಸಂಪೂರ್ಣ ಲಕ್ಷ್ಯ ಪೂರೈಸಲು ಸಾಧ್ಯವಾಗಬೇಕೆಂದು ಹೀಗೆ ಮಾಡಿದೆ" ಎಂದು ಅವರೇ ಒಂದೆಡೆ ಹೇಳಿಕೊಂಡಿದ್ದಾರೆ.

ಕನ್ನಡ ಸಾಹಿತ್ಯದಲ್ಲಿ ಶಿವಶರಣರಿಂದ ರಚಿಸಲ್ಪಟ್ಟ ವಚನಗಳಿಗೆ ವಿಶೇಷ ಮಹತ್ವವಿದೆ. ಸುಪ್ರಸಿದ್ಧ ಸಾಹಿತಿಗಳಾದ ಅ. ನ. ಕೃಷ್ಣರಾಯರು (ಕ್ರಿ. ಶ. ೧೯೫೧ ರಲ್ಲಿ) ಈ ವಚನ ಸಾಹಿತ್ಯವನ್ನು ಮತ್ತು ಹಳಕಟ್ಟಿಯವರನ್ನು ಕುರಿತು ಹೇಳಿದ ಮಾತುಗಳು ಮನನೀಯವಾಗಿವೆ.

"ಬಸವೇಶ್ವರ ವಚನಗಳಿಂದ ಆರಂಭವಾದ ಕೆಲಸವನ್ನು ಇಪ್ಪತ್ತು ನಾಲ್ಕು ವರ್ಷ ಸತತವಾಗಿ ಹಳಕಟ್ಟಿಯವರು ಮುಂದುವರಿಸಿಕೊಂಡು ಬಂದಿದ್ದಾರೆ. ಅವರ ಅವಿಶ್ರಾಂತ ಪ್ರಯತ್ನದ ಫಲವಾಗಿ ಕನ್ನಡಿಗರಿಗೆ ಅಲ್ಲಮಪ್ರಭು, ಸಿದ್ಧರಾಮ, ಚೆನ್ನಬಸವಣ್ಣ, ಅಕ್ಕಮಹಾದೇವಿ ಮೊದಲಾದ ನೂರಾರು ಶಿವಶರಣ- ಶರಣೆಯರ ದಿವ್ಯ ವಚನಗಳು ದೊರೆತವು. ಹಳಕಟ್ಟಿಯವರು ಪ್ರಕಟಿಸಿದ ಶೂನ್ಯ ಸಂಪಾದನೆ ಮತ್ತು ವಚನಶಾಸ್ತ್ರಸಾರ ಇವು ಅನೇಕ ವಿಮರ್ಶಾತ್ಮಕ ಗ್ರಂಥಗಳು, ನೂರಾರು ಲೇಖನಗಳು ಬರುವುದಕ್ಕೆ ಹೆದ್ದಾರಿ ಹಾಕಿಕೊಟ್ಟವು."

ಕನ್ನಡದಲ್ಲಿ ವೀರಶೈವ ವಚನ ಸಾಹಿತ್ಯಕ್ಕೆ ಒಂದು ವಿಶಿಷ್ಟ ಸ್ಥಾನವಿದೆ. ಬಸವಾದಿ ಪ್ರಮಥರು ಹನ್ನೆರಡನೆಯ ಶತಮಾನದಲ್ಲಿ ಈ ಸಾಹಿತ್ಯ ಪ್ರವರ್ತಕರಾಗಿ ನಾಡಿನಲ್ಲಿ ಸಾಹಿತ್ಯ ವಿಚಾರ, ಧಾರ್ಮಿಕ

ಮಹಾಕ್ರಾಂತಿಗೆ ಕಾರಣರಾದರು. ವಚನ ಸಾಹಿತ್ಯಕ್ಕೆ ಸಮಕಾಲಿಕ ಸ್ಥಾನವಲ್ಲದೆ ಚಿರಕಾಲಿಕ ಸ್ಥಾನವೂ ಇದೆ. ಅಲ್ಲಮಪ್ರಭು, ಮಹಾದೇವಿಯಕ್ಕನಂತ ಜ್ಞಾನಜ್ಯೋತಿಗಳ ಮಹಾ ತಪಸ್ಸಿನ ಪ್ರತೀಕವಾಗಿದೆ ವಚನ ಸಾಹಿತ್ಯ.

ವಚನ ಸಾಹಿತ್ಯದ ಪುನರೋದ್ಧಾರ ಕೆಲಸವನ್ನು ಹಳಕಟ್ಟಿಯವರು ಕೈಕೊಳ್ಳದಿದ್ದರೆ ಅದರ ಬಹುಭಾಗ ನಶಿಸಿ ಹೋಗುತ್ತಿತ್ತು. ಈ ಬಗೆಯ ಸಾಹಿತ್ಯ ಸಂಗ್ರಹ ಎಷ್ಟು ಕಷ್ಟಸಾಧ್ಯವೆಂಬುದು ಅನುಭವಿಕರಿಗೆ ಮಾತ್ರ ಗೊತ್ತಿರುವ ವಿಷಯ. ಹಳಕಟ್ಟಿಯವರು ಶ್ರೀಮಂತರೇನಲ್ಲ, ಆದರೆ ಅವರು ಕಾಲು ಶತಮಾನದಲ್ಲಿ ಮಾಡಿರುವ ಕೆಲಸ ಹತ್ತು ಜನ ಶ್ರೀಮಂತರಿಗೆ ಸಾಧ್ಯವಿಲ್ಲ.

## ೧೫. ಕಾಯಕ ಜೀವಿ

ವಚನಪಿತಾಮಹ ಡಾ. ಫ. ಗು. ಹಳಕಟ್ಟಿಯವರು ತಮ್ಮ ಜೀವನದುದ್ದಕ್ಕೂ, ಸ್ವಾವಲಂಬಿಗಳಾಗಿಯೇ ಬಾಳಿದರು. ಅವರು ಪ್ರತಿಯೊಂದು ಕಾರ್ಯವನ್ನು ತಮ್ಮ ಕೈಹಚ್ಚಿ ಮಾಡುತ್ತಿದ್ದರು. ಸಣ್ಣ ಕೆಲಸವಿರಲಿ ದೊಡ್ಡ ಕೆಲಸವಿರಲಿ – ಅದನ್ನು ಒಮ್ಮನಸ್ಸಿನಿಂದ ಮಾಡುವುದು ಅವರ ಪದ್ಧತಿ. ಕೆಲಸಗಳಲ್ಲಿ ಮೇಲು ಕೀಳುಗಳೆಂಬುದೇ ಅವರ ದೃಷ್ಟಿಯಲ್ಲಿರಲಿಲ್ಲ. ಸತ್ಯಶುದ್ಧ ಕಾಯಕವೇ ಕೈಲಾಸವೆಂದು ಅವರು ಅರಿತಿದ್ದರು. ಅಂತೆಯೇ ಅದನ್ನು ತಮ್ಮ ಜೀವನ ಕ್ರಮದಲ್ಲಿ ಅಳವಡಿಸಿಕೊಂಡಿದ್ದರು.

ನವಕರ್ನಾಟಕ ಎಂಬ ವಾರಪತ್ರಿಕೆಯನ್ನು ಹಳಕಟ್ಟಿಯವರು ೧೯೨೮ ರಲ್ಲಿ ಪ್ರಾರಂಭಿಸಿದರು. ಇದರಲ್ಲಿ ಹೆಚ್ಚಾಗಿ ರಾಜಕೀಯ ಹಾಗೂ ಸಾಮಾಜಿಕ ವಿಷಯಗಳನ್ನು ಕುರಿತ ಲೇಖನಗಳಿಗೆ ಹೆಚ್ಚು ಪ್ರಾಧಾನ್ಯವಿರುತ್ತಿತ್ತು. ಹರಿದು ಹಂಚಿ ಹೋಗಿದ್ದ ಕರ್ನಾಟಕವು ಒಂದಾಗಬೇಕು, ರಾಜಕೀಯವಾಗಿ ಅದು ಒಂದಾದರೆ ಕನ್ನಡ ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿಗಳು ಅಭಿವೃದ್ಧಿ ಹೊಂದುವವು; ಕರ್ನಾಟಕದ ಏಕೀಕರಣದಲ್ಲಿ ಕನ್ನಡಿಗರ ಹಿತವೇ ಅಡಗಿದೆ; ಏಕೀಕರಣವಾದರೆ ನಾಡಿನಲ್ಲಿ ನವಚೇತನವು ಕಾಣಿಸಿಕೊಳ್ಳುವುದು. ನಾಡು ಸಮೃದ್ಧಿಯಾಗುವುದು; ಕನ್ನಡಿಗರ ಬಾಳ ಸುಖಮಯವಾಗುವುದು; "ಕರ್ನಾಟಕದ ಐಕ್ಯತೆಯು ಭಾರತದ ಐಕ್ಯತೆಗೆ ಪೂರಕವಾಗುವುದು ಎಂದು ಪ್ರತಿಪಾದಿಸುವ ಕ್ರಾಂತಿಕಾರಿ ವಿಚಾರ ಪ್ರಚೋದಕ ಲೇಖನಗಳನ್ನು ಹಳಕಟ್ಟಿಯವರು ನವಕರ್ನಾಟಕ ವಾರಪತ್ರಿಕೆಯಲ್ಲಿ ಪ್ರಕಟಿಸಿದರು. ಕರ್ನಾಟಕದ ಏಕೀಕರಣ, ಸಾಮಾಜಿಕ, ರಾಜಕೀಯುತ ವಿವೇಚನೆಯನ್ನು ಬಿಚ್ಚುಮನಸ್ಸಿನಿಂದ ಪ್ರಕಟಿಸಿ ಧೀರವ್ಯಕ್ತಿತ್ವವನ್ನು ನವಕರ್ನಾಟಕ ಪತ್ರಿಕೆಯ ಮುಖೇನ ಕಂಡುಕೊಳ್ಳುವೆವು" ಎಂದು ಉತ್ತರ ಕರ್ನಾಟಕ ಜನಪ್ರಿಯ ಮಹಾಸ್ವಾಮಿಗಳಾಗಿದ್ದ ಬಂಥನಾಳ ಶ್ರೀಸಂಗನಬಸವ ಶಿವಯೋಗಿಗಳು ಅಭಿಪ್ರಾಯ ಪಟ್ಟಿರುವರು.

ಧಾರವಾಡದಲ್ಲಿ (ಕ್ರಿ. ಶ. ೧೯೨೮) ಜರುಗಿದ ಕರ್ನಾಟಕ ಏಕೀಕರಣ ಸಮ್ಮೇಳನದ ಅಧ್ಯಕ್ಷ ಸ್ಥಾನವಹಿಸಿ ಮಾಡಿದ ಅವರ ಭಾಷಣ ಇಂದಿಗೂ ಪ್ರಸ್ತುತವಾಗಿದೆ. ಹಳಕಟ್ಟಿಯವರು ನಾಡಜನತೆಯ ಹಿತಕ್ಕೋಸ್ಕರ ತಮ್ಮ ಹಿತವನ್ನೇ ಮರೆತು. ಪರೋಪಕಾರದ ದೆಶೆಯಿಂದ ಗಿಡಗಳು ಹಣ್ಣುಗಳನ್ನು ಬಿಡುತ್ತವೆ, ಬಿಟ್ಟ ಹಣ್ಣುಗಳಲ್ಲಿ ಒಂದನ್ನಾದರೂ ಗಿಡವು ತಿಂದು ರುಚಿನೋಡುವದೇ? ಇಲ್ಲ, ಫಕೀರಪ್ಪನವರ ಹಾಡೂ ಹಣ್ಣಿನ ಗಿಡದ ಪಾಡಿನಂತಿದೆ. ಹಿತಚಿಂತಕ ಮುದ್ರಣ ಯಂತ್ರವನ್ನು ಕೊಳ್ಳುವಾಗ ಅವರಲ್ಲಿ ಹಣವಿರಲಿಲ್ಲ. ಆ ದಿನದ ದುಡಿಮೆ ಆ ದಿನದ ಊಟಕ್ಕಾಗುತ್ತಿತ್ತು. ಬಡತನವು

ಅವರ ಸತ್ವಪರೀಕ್ಷೆಗಾಗಿ ಬೆನ್ನು ಹತ್ತಿತ್ತು. ಅದಕ್ಕಾಗಿ ಅವರು ವ್ಯಥೆಪಡದೆ ಸ್ವಂತಕ್ಕಾಗಿದ್ದ ತಮ್ಮ ಮನೆಯನ್ನು ಮಾರಿದರು. ಮಾರಿ ಬಂದ ಹಣದಿಂದ ಅಚ್ಚಕೂಟ ಕೊಂಡರು. ಕೈ ಬರಿದಾಯಿತು. ಬಾಡಿಗೆಯ ಮನೆಯನ್ನು ಹಿಡಿದು ಅಚ್ಚುಕೂಟ ಪ್ರಾರಂಭಿಸಿದರು. ಸ್ವಂತ ಮನೆಮಾರಿ ಬಾಡಿಗೆ ಮನೆಯಲ್ಲಿ ವಾಸಮಾಡುವ ವ್ಯಕ್ತಿಗಳು ಸಿಗುವದು ವಿರಳ. ಮಹತ್ಕಾರಗಳ ಸಾಧನೆಗಾಗಿ ಮಹಾತ್ಮರು ಎಂಥ ತ್ಯಾಗಕ್ಕಾದರೂ ಸಿದ್ಧರಾಗುತ್ತಾರೆ. ಅಂತಹ ಸ್ವಾರ್ಥತ್ಯಾಗಿಗಳಾದ ಮಹಾಪುರುಷರ ಸಾಲಿನಲ್ಲಿ ನಿಲ್ಲುತ್ತಾರೆ. ಡಾ. ಹಳಕಟ್ಟಿಯವರು.

ಹಳಕಟ್ಟಿಯವರು ತಮ್ಮ ಮುದ್ರಣಾಲಯದ ಕೆಲಸಗಾರರನ್ನು ನಡೆಯಿಸಿಕೊಂಡ ರೀತಿಯೂ ಅವರ ಸುಸಂಸ್ಕೃತಿಯ ಜೀವನದ ಪ್ರತೀಕವಾಗಿದೆ. ಕೂಲಿಕಾರರ ಹಿತರಕ್ಷಣೆಯ ಕಾನೂನುಗಳು ಇನ್ನೂ ಭಾರತದಲ್ಲಿ ರೂಪುಗೊಂಡಿರದಿದ್ದರೂ ಕೆಲಸಗಾರರನ್ನು ಎಂಟು ತಾಸುಗಳಿಗಿಂತ ಹೆಚ್ಚು ಅವರು ದುಡಿಸಿಕೊಳ್ಳುತ್ತಿರಲಿಲ್ಲ. ಕಾರ್ಯಭಾರದಿಂದ ಹೆಚ್ಚು ದುಡಿಸಿಕೊಳ್ಳಬೇಕಾಗಿ ಬಂದರೂ ಹೆಚ್ಚಿನ ವೇತನ ಕೊಡುವುದನ್ನು ಎಂದು ಮರೆಯಲಿಲ್ಲ. ಕೆಲಸಗಾರರನ್ನು ಮಕ್ಕಳಿಗಿಂತಲೂ ಹೆಚ್ಚಾಗಿ ಕಾಣುತ್ತಿದ್ದರು. ಮನೆಯಿಂದ ಮುದ್ರಣಾಲಯಕ್ಕೆ ಹೋದಾಗ ಹತ್ತಿ ಬಂದ ತಮ್ಮ ಸೈಕಲ್‌ನ್ನು ಪ್ರೆಸ್ಸಿನ ಒಳಗೆ ಎತ್ತಿಡಲು ಕೆಲಸಗಾರರ ಕೈಯಲ್ಲಿ ಕೊಡದೆ ತಾವೇ ಸ್ವತಃ ಎತ್ತಿಡುತ್ತಿದ್ದರು. ಮುದ್ರಣಾಲಯದ ಕೆಲಸಗಾರರಲ್ಲಿ ಯಾರಿಗಾದರೂ ಹೊಟ್ಟೆಗೆ ಹಿಟ್ಟಿಲ್ಲದೆ ಉಪವಾಸ ಬೀಳುವ ಪ್ರಸಂಗ ಬಂದಾಗ ತಮ್ಮ ಮನೆಯಿಂದಲೇ ಹಿಟ್ಟು ಕಳುಹಿಸುತ್ತಿದ್ದರು. ಅವರ ವ್ಯಕ್ತಿತ್ವದ ಹಿರಿಮೆಯನ್ನು ಸಾರುವ ಇಂತಹ ಅಸಂಖ್ಯ ಸಂಗತಿಗಳನ್ನು ಮುದ್ರಣಾಲಯದಲ್ಲಿ ಅನೇಕ ವರುಷ ದುಡಿದವರು ನನ್ನ ಮುಂದೆ ನುಡಿದಿದ್ದಾರೆ ಎಂದು ಹಳಕಟ್ಟಿಯವರ ನಿಕಟವರ್ತಿಗಳಾಗಿ ಮುದ್ದೇಬಿಹಾಳ ಕಾಲೇಜಿನ ನಿವೃತ್ತ ಪ್ರಿನ್ಸಿಪಾಲ ಚ. ವಿ. ಮುಳಗುಂದ ಅವರು ವಿವರಿಸಿರುವರು.

ಶಿವಶರಣರ ವಚನಗಳಲ್ಲಿ ಒಂದು ಮಾತನ್ನು ನಾವು ಪದೇ ಪದೇ ಓದುತ್ತೇವೆ. ಜ್ಞಾನವೇ ಕ್ರಿಯೆ, ಕ್ರಿಯೇ ಜ್ಞಾನ, ಉತ್ತಮತತ್ವಗಳನ್ನು ನಾವು ಪುಸ್ತಕ ಓದಿ ಅರಿತುಕೊಳ್ಳಬಹುದು. ಜ್ಞಾನ ಮಾಡಿಕೊಳ್ಳಬಹುದು. ಇದು ಬಹು ಸುಲಭ. ಆದರೆ ಅರಿತುಕೊಂಡುದುದನ್ನು ಆಚರಣೆಯಲ್ಲಿ ತರುವದು ಬಹಳ ಕಷ್ಟ. ಸುಳ್ಳು ಮಾತನಾಡಬಾರದು ಎಲ್ಲರಿಗೂ ಗೊತ್ತಿದ್ದ ಮಾತು. ಸುಳ್ಳು ಮಾತನಾಡದೆ, ತನ್ನ ನಡತೆಯನ್ನು ಪರಿಶುದ್ಧವಾಗಿಟ್ಟುಕೊಳ್ಳುವದು ಎಂದು ಎಲ್ಲರಿಗೂ ಸಾಧಿಸುವ ಕ್ರಿಯೆಯಲ್ಲ. ಆದರೆ ಶರಣ ತತ್ವಾನುಯಾಯಿಗಳಾದ ಹಳಕಟ್ಟಿಯವರ ಮಾತು – ಕೃತಿಗಳಲ್ಲಿ, ಕ್ರಿಯಾ ಜ್ಞಾನಗಳಲ್ಲಿ ಐಕ್ಯತೆಯನ್ನು ಕಾಣುತ್ತೇವೆ. ಅವರ ಆಚರಣೆಯು ಲಿಂಗ ಮೆಚ್ಚಿ ಅಹುದಹುದು ಎನ್ನುವಂತಿತ್ತು. ಅಂತೆಯೇ ಅವರು ಆಧುನಿಕ ಕಾಲದ ಮಹಾಶರಣರೆಂದು ವಚನ ಪಿತಾಮಹರೆಂದು ಕರೆಯಿಸಿಕೊಂಡರು. ಇಂತಹ ಮಹಂತರು ಸಿಗುವದು ಕೋಟಿಯಲ್ಲಿ ಒಬ್ಬರೇ ಸೈ.

## ೧೬. ಮುತ್ತಿಗಿಂತ ಹೊತ್ತು ಉತ್ತಮ

ಹಳಕಟ್ಟಿಯವರದು ಸುಸಂಬದ್ಧ ಜೀವನ. ಜೀವನದ ಒಂದು ಕ್ಷಣವನ್ನೂ ಅವರು ವ್ಯರ್ಥವಾಗಿ ಕಳೆಯಲಿಲ್ಲ. ತಮ್ಮ ಜೀವನದಲ್ಲಿ ಅನೇಕ ಮಹತ್ವದ ಕಾರ್ಯಗಳನ್ನು ಹಮ್ಮಿಕೊಂಡಿದ್ದರು. ಆದರೆ ಯಾವ ಕಾರ್ಯಕ್ಕೂ ಚ್ಯುತಿ ಬಾರದಂತೆ ಎಚ್ಚರಿಕೆ ವಹಿಸಿದರು. ಇದಕ್ಕೆ ಅವರು ವೇಳೆಗೆ ಕೊಟ್ಟ ಮಹತ್ವವೇ ಕಾರಣವೆನ್ನಬಹುದು. ಹಿಡಿದ ಕಾರ್ಯವನ್ನು ಮನಃ ಪೂರ್ವಕ ಮಾಡುತ್ತಿದ್ದರೆಂದೇ

ಅವರು ಮಾಡಿದ ಪ್ರತಿಯೊಂದು ಕಾರ್ಯ ಚೊಕ್ಕಟವಾಗಿರುತ್ತಿತ್ತು. ಬಿಜಾಪುರ ಜಿಲ್ಲೆಯಲ್ಲಿ ಅವರು ವಿದ್ಯಾಸಂಸ್ಥೆಯ ಸ್ಥಾಪಕರಾದರು. ಶಾಲಾ ಮಂಡಳದ ಸದಸ್ಯರಾದರು. ನೇಕಾರರ ಸಹಕಾರಿ ಸಂಘ ಸ್ಥಾಪಿಸುವಲ್ಲಿ ಕಾರಣಪುರುಷರಾದರು; ಹತ್ತಿ ಮಾರಾಟ ಸಂಘವನ್ನು ಪ್ರಾರಂಭಿಸಿ ಹಿರಿಯತನ ವಹಿಸಿಕೊಂಡರು. ಸಾಹಿತ್ಯಿಕ ಸಾಂಸ್ಕೃತಿಕ ಸಭೆ ಸಮ್ಮೇಳನಗಳನ್ನು ತಮ್ಮ ಮಾರ್ಗದರ್ಶನದಲ್ಲಿ ಜರುಗಿಸಿದರು. ಧಾರ್ಮಿಕ ಚರ್ಚಾಕೂಟಗಳಲ್ಲಿ ಅವರದೇ ಪ್ರಮುಖ ಪಾತ್ರ. ರಾಜಕೀಯ ಕಾರ್ಯಕ್ರಮಗಳು ಅವರಿಲ್ಲದೇ ನಡೆಯುತ್ತಿರಲಿಲ್ಲ. ದ್ವಿತೀಯ ಮಹಾಯುದ್ಧ ಪ್ರಾರಂಭವಾದಾಗ ಅದರಲ್ಲಿ ನೊಂದು ಬೆಂದವರಿಗೆ ಸಹಾಯ ಸಲ್ಲಿಸುವ ಕಾರ್ಯವೂ ಇವರ ಮುಖಾಂತರ ಮುಂದುವರಿಯಿತು.

ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಯ ಪಟ್ಟ ಇವರಿಗೆ ಅನೇಕ ವರುಷಗಳವರೆಗೆ ಮೀಸಲಾಗಿತ್ತು. ಮುಂಬಯಿ ರಾಜ್ಯ ವಿಧಾನಪರಿಷತ್ತಿನ ಸದಸ್ಯರಾಗಿ ಮಾಡಿದ ಕಾರ್ಯ ಪ್ರಶಂಸನೀಯವಾಗಿದೆ. ವಚನಗಳಿಗೆ ಸಂಗೀತ ಶಾಸ್ತ್ರದ ಮೆರಗು ಕೊಟ್ಟರಲ್ಲದೆ ಸಂಗೀತ ಕಲಿಯುವುದಕ್ಕೆ ಏರ್ಪಾಟು ಮಾಡಿದರು. ವಿದ್ಯಾರ್ಥಿಗಳಲ್ಲಿ ಶಿಸ್ತು-ಸಂಯಮಗಳನ್ನು ರೂಢಿಸುವುದಕ್ಕಾಗಿ ಸ್ಕೌಟ ವರ್ಗಗಳನ್ನು ತೆರೆದರು. ಗ್ರಾಮೀಣ ಅಭಿವೃದ್ಧಿ ಮಂಡಳಿಯ ಕೆಲಸಗಳಿಗೆ ಅವರೇ ಯೋಗ್ಯರೆಂದು ತೀರ್ಮಾನಿಸಲಾಯಿತು. ಅದರ ಕಾರ್ಯದರ್ಶಿಯಾಗುವ ಭಾಗ್ಯ ಅವರದಾಯಿತು. ಅದರ ಹರಹು ವಿಸ್ತಾರವಾಗಿ ಬರಗಾಲ ನಿವಾರಣಾಸಂಸ್ಥೆ ಹಳಕಟ್ಟಿಯವರ ಕೊರಳಿಗೆ ಬಿತ್ತು. ಅವರದಕ್ಕೆ ಹೆದರಲಿಲ್ಲ. ಹದಿನೈದು ವರುಷ ಕಾರ್ಯದರ್ಶಿಯಾಗಿ ಸಮರ್ಥ ರೀತಿಯಿಂದ ಅದನ್ನು ನಡೆಯಿಸಿಕೊಂಡು ಬಂದರು.

ಮರಾಠಿ ವ್ಯಾಮೋಹದ ಕನ್ನಡ ವರ್ತಕರನ್ನು ಒತ್ತಾಯಿಸಿದರು. ಅವರ ಮನಸ್ಸನ್ನು ಕನ್ನಡಕ್ಕೆ ಪರಿವರ್ತನಗೊಳಿಸಿದರು. ಧಾರ್ಮಿಕ ಚಟುವಟಿಕೆಗಳಿಂದ ಜನಜಾಗೃತಿ ಮಾಡಲು ಶ್ರೀ ಸಿದ್ದೇಶ್ವರ ದೇವಾಲಯ ಕಟ್ಟಿಸಿದರು. ಸಾರ್ವಜನಿಕ ಸಭೆ ಸಮಾರಂಭಗಳಿಗಾಗಿ ಶೆಫರ್ಡ ಹಾಲ್ ನಿರ್ಮಾಣವಾಯಿತು. ಹೆಚ್ಚೇನು? ಹಳಕಟ್ಟಿಯವರು ಅಡಿಯಿಟ್ಟ ನೆಲ ಅವಿಮುಕ್ತ ಕ್ಷೇತ್ರವಾಯಿತು.

ಇಷ್ಟೆಲ್ಲ ಕೆಲಸಗಳನ್ನು ಸುಸಬಂಧ್ಧ ರೀತಿಯಿಂದ ನೆರವೇರಿಸಲು ಅವರಿಗೆ ವೇಳೆ ಹೇಗೆ ಸಿಗುತ್ತಿತ್ತು? ಹೌದು. ಅವರಿಗೆ ವೇಳೆ ಸಾಕಷ್ಟು ಸಿಗುತ್ತಿತ್ತು; ಸಿಕ್ಕ ಸಮಯವನ್ನು ಸರಿಯಾಗಿ ಉಪಯೋಗಿಸುವ ಶಕ್ತಿ ಅವರಲ್ಲಿತ್ತು. ಹೀಗೆ ನೂರೆಂಟು ಸತ್ಕಾರ್ಯಗಳನ್ನು ಮಾಡಬಲ್ಲ ಶಕ್ತಿ ಇದ್ದುದರಿಂದಲೇ ಅವರು ನಮಗೆ ಮಹಾವ್ಯಕ್ತಿಗಳಾಗಿದ್ದಾರೆ; ಸಿದ್ಧಪುರುಷರಾಗಿದ್ದಾರೆ.

## ೧೭. ಶಿಕ್ಷಣ ತಜ್ಞ

ಡಾ. ಹಳಕಟ್ಟಿಯವರದು ಬಹುಮುಖ ವ್ಯಕ್ತಿತ್ವ. ಶಿವಶರಣರ ವಾಙ್ಮಯದ ಪ್ರಕಟಣೆಯನ್ನೇ ಹೇಗೆ ತಮ್ಮ ಜೀವನದ ಮಹೋದ್ದೇಶವನ್ನಾಗಿಟ್ಟುಕೊಂಡಿದ್ದರೋ ಹಾಗೆಯೇ ಸಾರ್ವಜನಿಕ ಜೀವನದಲ್ಲಿಯೂ ಅಮೋಘ ಸೇವೆ ಸಲ್ಲಿಸುವ ಆಕಾಂಕ್ಷೆಯನ್ನು ಇಟ್ಟುಕೊಂಡಿದ್ದರು.

ನಾಡಿನ ಪ್ರತಿಯೊಬ್ಬ ಪ್ರಜೆಯೂ ಸುಶಿಕ್ಷಿತನಾಗಬೇಕೆಂಬುದು ಅವರ ಮನೀಷೆ. ತಾಯಿ ನುಡಿಯಲ್ಲಿ ಸರ್ವರಿಗೂ ಶಿಕ್ಷಣ ದೊರೆಯುವುದು ಅತ್ಯಾವಶ್ಯಕವೆಂದು ಅವರ ಅಭಿಮತ. ಉತ್ತಮ ಶಿಕ್ಷಣವು

ವ್ಯಕ್ತಿಯ ಜೀವನವನ್ನೇ ಪರಿವರ್ತನೆಗೊಳಿಸುವುದೆಂದು ನಂಬಿದ್ದರು. ಸಮಾಜದಲ್ಲಿ ಶಾಂತಿ ಸುವ್ಯವಸ್ಥೆಗಳು ನೆಲೆಸಬೇಕಾದರೆ, ಸಾಹಿತ್ಯ, ಲಲಿತಕಲೆಗಳು ಹೆಚ್ಚಬೇಕಾದರೆ, ಸಂಸ್ಕೃತಿಯ ಸಂವರ್ಧನೆಯಾಗಬೇಕಾದರೆ, ಸಕಲರಿಗೂ ಶ್ರೇಷ್ಠತರದ ಶಿಕ್ಷಣವನ್ನು ಒದಗಿಸಲೇಬೇಕೆಂಬ ತತ್ವಕ್ಕೆ ಬಲವಾಗಿ ಅಂಟಿಕೊಂಡಿದ್ದರು.

"ನಾನು ವಿಜಾಪುರದಲ್ಲಿ ನೆಲೆಸಿದ ನಂತರ ನಗರಪಾಲಿಕೆಯಲ್ಲಿ ಪ್ರವೇಶಿಸಿದೆ ಮತ್ತು ಅದರ ಕಾರ್ಯನಿರ್ವಾಹಕ ಸಮಿತಿಯ ಅಧ್ಯಕ್ಷನು ಆದೆ. ನನ್ನ ಆಡಳಿತೆಯಲ್ಲಿಯೇ ಈಗಿದ್ದ ನೀರು ಪೂರೈಸುವ ಯೋಜನೆಯು ಆಗಿದೆ. ಆ ಸಮಯದಲ್ಲಿ ೩ ಕನ್ನಡ ಗಂಡುಮಕ್ಕಳ ಶಾಲೆಗಳೂ ೬ ಮರಾಠಿ ಗಂಡು ಮಕ್ಕಳ ಹಾಗೂ ೧ ಮರಾಠಿ ಹೆಣ್ಣುಮಕ್ಕಳ ಶಾಲೆಗಳೂ ಇದ್ದವು. ಕನ್ನಡವೇ ಪ್ರಮುಖ ಭಾಷೆಯಾದ ನಗರದಲ್ಲಿ ಕನ್ನಡ ಹೆಣ್ಣು ಮಕ್ಕಳ ಶಾಲೆಯೇ ಇರಲಿಲ್ಲ. ನಾನು ಶಾಲಾ ಮಂಡಳದ ಸದಸ್ಯನಾದ ಕೂಡಲೇ ಜನರಲ್ಲಿ ಅವರ ಸಾಹಿತ್ಯ ಹಾಗೂ ಧಾರ್ಮಿಕ ಗ್ರಂಥಗಳು ಕನ್ನಡದಲ್ಲಿ ಇದ್ದುದನ್ನು ಅವರ ಗಮನಕ್ಕೆ ತಂದು ಕನ್ನಡದ ಬಗ್ಗೆ ಪ್ರೇಮವನ್ನು ಹುಟ್ಟಿಸಲು ಪ್ರಾರಂಭಿಸಿದೆ. ಮೇಲಿಂದ ಮೇಲೆ ಅವರಲ್ಲಿ ಸಭೆಗಳನ್ನು ಕೂಡಿಸಿ ಈ ಪ್ರಯತ್ನದಲ್ಲಿ ಬಹುಮಟ್ಟಿಗೆ ಯಶಸ್ವಿಯಾದೆ. ನಾನು ಮಂಡಲದಲ್ಲಿ ಸುಮಾರು ೫ ವರುಷಗಳವರೆಗೆ ಇದ್ದೆ. ನನ್ನ ಅವಧಿಯ ಕೊನೆಗೆ ೩ ಕನ್ನಡ ಹೆಣ್ಣು ಮಕ್ಕಳ ಶಾಲೆಗಳೂ ೭ ಕನ್ನಡ ಗಂಡುಮಕ್ಕಳ ಶಾಲೆಗಳೂ ಇದ್ದವು. ಮೊದಮೊದಲು ಜನರು ಬದಲಾವಣೆಗೆ ಅನುಕೂಲವಾಗಿರಲಿಲ್ಲ. ಏಕೆಂದರೆ, ತಮ್ಮ ಉದ್ಯೋಗದಲ್ಲಿ ಮರಾಠಿಯು ಉಪಯುಕ್ತವಾದುದೆಂದು ಅವರು ತಿಳಿದಿದ್ದರು. ಆದರೂ ನಿರಂತರ ಪ್ರಚಾರದಿಂದ ಅವರನ್ನು ಒಲಿಸಿಕೊಳ್ಳಲಾಯಿತು" ಎಂದು ಹಳಕಟ್ಟಿಯವರೇ ಹೇಳಿಕೊಂಡಿರುವರು.

ಅಂದು ಬಿತ್ತಿದ ಕನ್ನಡ ಬೀಜ ಮೊಳಕೆಯೊಡೆದು ೮-೧೦ ಎಲೆ ಮೂಡಿದುದನ್ನು ತಮ್ಮ ಅಧಿಕಾರದ ಅವಧಿಯಲ್ಲಿಯೇ ಅವರು ಕಂಡರು. ಅವರ ಅಮೃತ ಹಸ್ತದಿಂದ ಹುಟ್ಟಿದ ಕನ್ನಡದ ಬಳ್ಳಿ ವಿಜಾಪುರ ನಗರವನ್ನೇ ವ್ಯಾಪಿಸಿತು. ಅದರ ಕುಡಿಗಳು ಆ ಜಿಲ್ಲೆಯಲ್ಲಿ ಕ್ರಮೇಣ ಹಬ್ಬಿ ಹರಡಿದುದನ್ನು ನಾವಿಂದು ಹರ್ಷ ಪುಲಕಿತರಾಗಿ ನೋಡುತ್ತಿದ್ದೇವೆ. ಹಳಕಟ್ಟಿಯವರು ಸಹ ತಮ್ಮ ಜೀವನದಲ್ಲಿ ಕಂಡು ತೃಪ್ತಿಪಟ್ಟರು.

ಪ್ರಾಥಮಿಕ ಹಂತದಲ್ಲಿ ಕನ್ನಡದ ಜ್ಞಾನವನ್ನು ಪಡೆದ ಮಕ್ಕಳಿಗೆ ಮಾಧ್ಯಮಿಕ ಹಂತದಲ್ಲಿಯೂ ದೊರೆಯುವುದು ಅವಶ್ಯವೆಂದು ಅವರಿಗೆ ತೋರಿತು. ಅದು ಮುಂದುವರಿದು ಕಾಲೇಜು ಮಟ್ಟವನ್ನು ತಲುಪಬೇಕೆಂಬ ಆಶೆ ಅವರದು. ಅದಕ್ಕಾಗಿ ಅವರು ಜಿಲ್ಲಾ ಸ್ಥಳವಾದ ವಿಜಾಪುರದಲ್ಲಿ ಹಾಗೂ ಅದರ ತಾಲೂಕ ಸ್ಥಳಗಳಲ್ಲಿ ಮೇಲಿಂದ ಮೇಲೆ ಶೈಕ್ಷಣಿಕ ಸಭೆ ಸಮ್ಮೇಳನಗಳನ್ನು ಜರುಗಿಸಲು ಪ್ರಾರಂಭಿಸಿದರು. ಜಿಲ್ಲೆಯ ಪ್ರಮುಖ ಊರುಗಳಲ್ಲಿ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸುವಂತೆ ಜನರನ್ನು ಪ್ರೋತ್ಸಾಹಿಸಹತ್ತಿದರು. ಈ ಬಗೆಯ ಪ್ರಾರಂಭದ ತಮ್ಮ ಪ್ರಯತ್ನದ ಫಲವನ್ನು ಹೀಗೆ ವರ್ಣಿಸಿರುವರು:

"ಶಿಕ್ಷಣ ಹಾಗೂ ಜ್ಞಾನದ ದೃಷ್ಟಿಯಿಂದ ಮುಂಬಯಿ ರಾಜ್ಯದಲ್ಲಿ (ಅಂದಿನ) ವಿಜಾಪುರವು ಅತ್ಯಂತ ಹಿಂದುಳಿದ ಪ್ರದೇಶವಾಗಿತ್ತು. ಆದ್ದರಿಂದ ನಾನು ಈ ಪರಿಸ್ಥಿತಿಯನ್ನು ಸುಧಾರಿಸಲು ನನ್ನ ಎಲ್ಲ ಲಕ್ಷ್ಯವನ್ನು ಇದಕ್ಕಾಗಿ ನೀಡಿದೆ ಮತ್ತು ವಿಜಾಪುರದಲ್ಲಿ ಲಿಂಗಾಯತ ಶೈಕ್ಷಣಿಕ ಸಂಘವನ್ನು ಸ್ಥಾಪಿಸಿದೆ. ಅದಕ್ಕಾಗಿ ಮೇಲಿಂದ ಮೇಲೆ ಪ್ರವಾಸ ಮಾಡಬೇಕಾಗುತ್ತಿತ್ತು."

ಅವರು ಸ್ಥಾಪಿಸಿದ ಸಿದ್ಧೇಶ್ವರ ಮಾಧ್ಯಮಿಕ ಶಾಲೆಯು ವಿಜಾಪುರ ಜಿಲ್ಲೆಯ ಶಿಕ್ಷಣ ಪ್ರಸಾರದ ಪ್ರಮುಖ ಕೇಂದ್ರವಾಗಿ ಕಾರ್ಯಗೈದಿದೆ. ಇದು ಪ್ರಾರಂಭವಾದ ಕೆಲವು ವರುಷಗಳ ನಂತರ ವಿಜಯ ಕಾಲೇಜು ಹುಟ್ಟಿಕೊಂಡಿತು. ಇಂದು ಅದು ಬೃಹದಾಕಾರವಾಗಿ ಬೆಳೆದಿದೆ. ಇದನ್ನು *೧) ಎಸ್. ಬಿ. ಆರ್ಟ್ಸ ಕಾಲೇಜು, ೨) ಕೆ.ಸಿ.ಪಿ. ಸಾಯನ್ಸ್ ಕಾಲೇಜುಗಳು ಎಂದು ಪರಿವರ್ತನೆಗೊಂಡಿವೆ. ೩) ಎ. ಎಸ್. ಪಿ. ಕಾಮರ್ಸ ಕಾಲೇಜು, ೪) ನ್ಯೂ ಆರ್ಟ್ಸ ಕಾಲೇಜು ಇತ್ತೀಚೆಗೆ ಜನ್ಮ ತಳೆದಿವೆ. ಜಮಖಂಡಿಯಲ್ಲಿಯ ಆರ್ಟ್ಸ ಮತ್ತು ಸಾಯನ್ಸ ಕಾಲೇಜುಗಳೆರಡು ವಿಜಾಪುರ ಜಿಲ್ಲಾ ಲಿಂಗಾಯತ ವಿದ್ಯಾಪ್ರಸಾರ ಸಂಸ್ಥೆಯಿಂದಲೇ ಸ್ಥಾಪಿತಗೊಂಡು ಕಾರ್ಯೋನ್ಮುಖವಾಗಿವೆ. ಹಳಕಟ್ಟಿಯವರಿಂದ ಜನ್ಮ ತಳೆದ ಈ ವಿದ್ಯಾ ಸಂಸ್ಥೆಯು ಪ್ರಾಥಮಿಕ ಶಾಲೆ, ಮಾಧ್ಯಮಿಕ ಶಾಲೆ, ಕಾಲೇಜುಗಳನ್ನು ಸ್ಥಾಪಿಸಿ ಈ ಭಾಗದ ಶಿಕ್ಷಣ ರಂಗದಲ್ಲಿ ಅಪಾರ ಸೇವೆ ಸಲ್ಲಿಸುತ್ತ ಬಂದಿದೆ. ಈ ಸಂಸ್ಥೆಯಲ್ಲಿ ಕೆಲಸ ಮಾಡಿ ಅನುಭವ ಪಡೆದ ಪ್ರಾಧ್ಯಾಪಕರನೇಕರು ಕಲಬುರ್ಗಿ, ಮುದ್ದೇಬಿಹಾಳ ಮುಂತಾದ ನಾಡಿನ ಇಂತಹ ಶಹರಗಳಲ್ಲಿ ಸ್ಥಾಪಿತಗೊಂಡ ಹೊಸ ಕಾಲೇಜುಗಳಿಗೆ ಪ್ರಿನ್ಸಿಪಾಲರಾಗಿ ಆಯ್ಕೆಗೊಂಡಿದ್ದುಂಟು. ಇದೇ ಸಂಸ್ಥೆಯ ಉತ್ತಮ ಶೈಕ್ಷಣಿಕ ಚಟುವಟಿಕೆಗಳಿಂದ ಪ್ರೇರಣೆ ಹೊಂದಿದ ಇತರ ಭಾಗದ ಜನರು ತಮ್ಮ ತಮ್ಮ ಊರುಗಳಲ್ಲಿ ಸ್ವತಂತ್ರವಾದ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿಕೊಂಡು ಶಾಲೆ, ಕಾಲೇಜುಗಳನ್ನು ನಡೆಸುತ್ತಿರುವುದಕ್ಕೆ ಅನೇಕ ಉದಾಹರಣೆಗಳುಂಟು.

ಡಾ. ಹಳಕಟ್ಟಿಯವರ ಮುಂಧೋರಣೆ, ಸತತ ಪ್ರಯತ್ನಗಳಿಂದಾಗಿ ವಿಜಾಪುರ ಜಿಲ್ಲೆಯ ಅನೇಕ ಸ್ಥಳಗಳಲ್ಲಿ ಶಾಲೆ ಕಾಲೇಜುಗಳು ಬಹುಸಂಖ್ಯೆಯಲ್ಲಿ ಬೆಳೆದು ಬಂದು ಜನತೆಯಲ್ಲಿ ವಿದ್ಯಾಪ್ರಸಾರವಾಗಲು ಕಾರಣೀಭೂತವಾದವು. ಆದರೆ ಹಳಕಟ್ಟಿಯವರಿಗೆ ಇಷ್ಟರಿಂದ ತೃಪ್ತಿಯಿರಲಿಲ್ಲ. ಸರಕಾರಕ್ಕೆ ಸದ್ಯದ ಶಿಕ್ಷಣ ಪದ್ಧತಿಯು ದೋಷಯುಕ್ತವಾಗಿದೆಯೆಂದು ಅವರು ಹೇಳುತ್ತಿದ್ದರು. ನಮ್ಮ ಸಂಸ್ಕೃತಿಗೆ ಪೋಷಕವಾಗುವ ವ್ಯವಹಾರಿಕ ಶಿಕ್ಷಣವಿರಬೇಕು; ತೀವ್ರ ಸಮಾಜ ಸುಧಾರಣೆಯಾಗಲೂ ವಯಸ್ಕರ ಶಿಕ್ಷಣ ಬಳಕೆಯಲ್ಲಿ ಬರಬೇಕು ಹಾಗೂ ಅಲ್ಲಿ ಸಾಮಾನ್ಯ ಶಿಕ್ಷಣದ ಜೊತೆಗೆ ಔದ್ಯೋಗಿಕ ಒಲವನ್ನು ಜೊತೆಗೂಡಿಸಬೇಕು ಎಂಬ ಧೋರಣೆ ತಾಳಿದ್ದರು. ಇದೀಗ ಬಿ. ಎಲ್. ಡಿ. ಇ. ಸಂಸ್ಥೆಯ ಹಳಕಟ್ಟಿಯವರ ಸ್ಮರಣೆಯಲ್ಲಿ ಒಂದು ಎಂಜನಿಯರಿಂಗ್ ಕಾಲೇಜನ್ನು ಪ್ರಾರಂಭಿಸಿದೆ. ಡಾ. ಹಳಕಟ್ಟಿ ಸಮಗ್ರ ಸಾಹಿತ್ಯವನ್ನು ೧೫ ಸಂಪುಟಗಳಲ್ಲಿ ಪ್ರಕಟಿಸಲಿದೆ.

ಪ್ರಾಥಮಿಕ, ಮಾಧ್ಯಮಿಕ ಶಾಲೆಗಳನ್ನು ಸ್ಥಾಪಿಸಿ ನಡೆಯಿಸಿಕೊಂಡು ಬಂದ ಅನುಭವ ಕ್ಲಿಷ್ಟ ಸಮಸ್ಯೆಗಳ ಅರಿವೂ ಅವರಿಗಿತ್ತು. ಈ ಮೂರು ಹಂತಗಳಲ್ಲಿ ತೇರ್ಗಡೆಯಾಗಿ ವಿಶ್ವವಿದ್ಯಾಲಯಕ್ಕೆ ಬರುವ ಯುವಕ ವಿದ್ಯಾರ್ಥಿಗಳಿಗೆ ಎಂತಹ ಶಿಕ್ಷಣವನ್ನು ಕೊಡಬೇಕೆಂಬುದರ ಬಗೆಗೂ ಅವರು ಚಿಂತಿಸಿದ್ದರು. ವೃತ್ತಿಮೂಲ ಶಿಕ್ಷಣವು ವಿಶ್ವವಿದ್ಯಾಲಯದಲ್ಲಿ ಸಿಗಬೇಕೆಂದು ಅವರು ಪ್ರತಿಪಾದಿಸುತ್ತಿದ್ದರು. ಕನ್ನಡ ವಿದ್ಯಾರ್ಥಿಗಳಿಗೆ ಉದ್ಯೋಗವನ್ನು ಕಲ್ಪಿಸಿಕೊಡುವಂತಹ ಪ್ರತ್ಯೇಕ ಔದ್ಯೋಗಿಕ ವಿಶ್ವವಿದ್ಯಾಲಯವೊಂದು ಮೂಡಿಬರಬೇಕೆಂದು ಕನಸು ಕಾಣುತ್ತಿದ್ದರು. ಅವರು ಕಂಡ ಕನಸು

* ಸದ್ಯ ಎಸ್.ಬಿ.ಆರ್ಟ್ಸ್ ಕಾಲೇಜು ಮತ್ತು ಕೆ.ಸಿ.ಪಿ.ಸಾಯನ್ಸ ಕಾಲೇಜು ಇವೆರಡೂ ಕೂಡಿ ಒಂದೇ ಕಾಲೇಜು ಆಗಿದೆ.

ನನಸಾಗುವ ಸಮಯ ೧೯೪೭ ರಲ್ಲಿ ಒದಗಿ ಬಂತು. ಸರಕಾರವು ಧಾರವಾಡದಲ್ಲಿ ಕರ್ನಾಟಕ ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಶುಭ ಚಿಹ್ನೆಗಳು ಕಂಡು ಬಂದವು. ಆ ಸಮಯದಲ್ಲಿ ತಮ್ಮ ಮನಸ್ಸಿನ ಭಿತ್ತಿಯಲ್ಲಿ ಚಿತ್ರಿಸಿಕೊಂಡಿದ್ದ, ಆ ವಿಶ್ವವಿದ್ಯಾಲಯದ ವರ್ಣನೆಯನ್ನು ಅವರ ಮಾತುಗಳಲ್ಲಿ ಕಾಣುತ್ತೇವೆ.

"ಈಗಿನ ಶಿಕ್ಷಣವು ಕೇವಲ ವಾಙ್ಮಯಾತ್ಮಕವಾಗಿದ್ದು ಅದು ಸರಕಾರಿ ನೌಕರರನ್ನು ಸಿದ್ದಪಡಿಸುವ ಉದ್ದೇಶವುಳ್ಳದ್ದೆಂದು ಅದರ ಮೇಲೆ ಒಂದು ಬಲವಾದ ಆಕ್ಷೇಪಣೆಯೇ ಇದೆ. ಇದು ನಿಜವೂ ಇದೆ. ಕರ್ನಾಟಕಕ್ಕೆ ಕೆಲವು ನೈಸರ್ಗಿಕ ಅನುಕೂಲತೆಗಳಿವೆ. ಕರಾವಳಿಯಲ್ಲಿ ಉತ್ತಮ ಬಂದರು, ವಿಪುಲವಾದ ಖನಿಜ ಸಂಪತ್ತು, ವಿದ್ಯುತ್ ನಿರ್ಮಾಣ ಸೌಕರ್ಯಗಳಿವೆ. ಆದುದರಿಂದ ಕರ್ನಾಟಕ ವಿಶ್ವವಿದ್ಯಾಲಯವು ಇಂಗ್ಲಂಡಿನ ಮಾಂಚೆಸ್ಟರ್ ವಿಶ್ವವಿದ್ಯಾಲಯದಂತೆ ಔದ್ಯೋಗಿಕ ಮತ್ತು ವೈಜ್ಞಾನಿಕ ವಿಶ್ವವಿದ್ಯಾಲಯದ ಸ್ವರೂಪವನ್ನು ಹೊಂದುವಂತೆ ಅದರ ಯೋಜನೆ ಇರುವುದು ಅಗತ್ಯವೆಂದು ನನಗೆ ತೋರುತ್ತದೆ."

ವಾಙ್ಮಯಾತ್ಮಕವಾದ ಕರ್ನಾಟಕ ವಿಶ್ವವಿದ್ಯಾಲಯವೇನೋ ೧೯೪೯ ರಲ್ಲಿ ಜನ್ಮ ತಳೆಯಿತು. ಆದರೆ ಹಳಕಟ್ಟಿಯವರ ಕನಸಿನ ಔದ್ಯೋಗಿಕ ಸ್ವರೂಪದ ಕರ್ನಾಟಕ ವಿಶ್ವವಿದ್ಯಾಲಯ ಮಾತ್ರ ರೂಪ ತಳೆದಿಲ್ಲ.

ಹಳಕಟ್ಟಿಯವರ ಘನವ್ಯಕ್ತಿತ್ವವನ್ನು ಅತ್ಯಂತ ಹೆಚ್ಚಿನ ಭಕ್ತಿ, ಗೌರವ ಅಭಿಮಾನಗಳಿಂದ ಕಂಡವರಲ್ಲಿ ಡಾ. ಆರ್. ಸಿ. ಹಿರೇಮಠರೂ ಒಬ್ಬರು ಸಿದ್ಧೇಶ್ವರ ಹೈಸ್ಕೂಲ ಮತ್ತು ಅದರ ಸಂಸ್ಥಾಪಕರಾದ ಹಳಕಟ್ಟಿಯವರ ಬಗೆಗೆ ಹೇಳಿದ ಅವರ ಮಾತುಗಳು ಸ್ಫೂರ್ತಿದಾಯಕವಾಗಿವೆ;

"ಶ್ರೀ ಸಿದ್ಧೇಶ್ವರ ಹೈಸ್ಕೂಲು ಪ್ರಾಯಶಃ ಉತ್ತರ ಕರ್ನಾಟಕದಲ್ಲಿ ಗಾತ್ರದಲ್ಲಿಯೂ, ಸತ್ವದಲ್ಲಿಯೂ ಅತಿದೊಡ್ಡ ಶಾಲೆಯೆಂದು ಪರಿಗಣಿತವಾಗಿದೆ. ವಿಜಯ ಕಾಲೇಜಕ್ಕಂತೂ ನಮ್ಮ ಭಾಗದ ಉಚ್ಚ ಶಿಕ್ಷಣ ಸಂಸ್ಥೆಗಳಲ್ಲಿ ಅಗ್ರಸ್ಥಾನ. ಒಂದೇ? ಎರಡೇ? ಹಳಕಟ್ಟಿಯವರ ಸಾಮಾಜಿಕ ಜೀವನ ವೈವಿಧ್ಯಮಯವಾಗಿದೆ. ಯಾವ ಸಂಸ್ಥೆಯ ಕಾರ್ಯವನ್ನೇ ತೆಗೆದುಕೊಂಡರೂ ಅದನ್ನು ಅತ್ಯಂತ ನಿಷ್ಠೆಯಿಂದ ನಿರ್ವಹಿಸತಕ್ಕವರು. ಸಿದ್ಧೇಶ್ವರ ಹೈಸ್ಕೂಲನ್ನು ಸ್ಥಾಪನೆ ಮಾಡಿದಾಗ ಅದನ್ನು ಹೇಗೆ ಅಭಿವೃದ್ಧಿಗೊಳಿಸಬೇಕೆಂಬ ರೂಪರೇಷೆಗಳನ್ನೊಳಗೊಂಡ ಒಂದು ಪುಸ್ತಕವನ್ನು ನೋಡುವ ಯೋಗ ನನಗೆ ಪ್ರಾಪ್ತವಾಯಿತು. ವಿದ್ಯಾರ್ಥಿಗಳಲ್ಲಿ ಸ್ವತಂತ್ರಧೀಶಕ್ತಿ, ಲೇಖನಶಕ್ತಿ, ವಾಕ್‌ಶಕ್ತಿಗಳನ್ನು ಹೇಗೆ ಬೆಳೆಸಬೇಕು, ಪರಸ್ಪರರಲ್ಲಿ, ವರ್ಗವರ್ಗಗಳಲ್ಲಿ ಸ್ಪರ್ಧೆ ಹೇಗೆ ಏರ್ಪಡಿಸಬೇಕು, ಪರೀಕ್ಷೆ, ಪಠ್ಯ, ಪಠ್ಯೇತರ ಚಟುವಟಿಕೆ ಇವೆಲ್ಲ ವಿವರಗಳನ್ನು ನೋಡಿದ ನನಗೆ ಸಮಿತಿಯು ಮಾಡಿದ ಶಿಫಾರಸ್ಸುಗಳು, ಅತೀ ಪೂರ್ವದಲ್ಲಿಯೇ ಹಳಕಟ್ಟಿಯವರಿಂದ ಕಾರ್ಯರೂಪಕ್ಕೆ ಬಂದುದು ಅವರು ಎಂತಹ ಶಿಕ್ಷಣ ತಜ್ಞರಾಗಿದ್ದರೆಂಬುದರ ದ್ಯೋತಕವಾಗಿರುತ್ತದೆ. ಇಂತಹ ಉದಾತ್ತ ಪೀಠಿಕೆಯ ಮೇಲೆ ನಿಂತ ಅವರ ಶಿಕ್ಷಣ ಸಂಸ್ಥೆಗಳು ಉಜ್ವಲವಾಗಿ ಬೆಳೆಯುವುದರಲ್ಲಿ ಸಂದೇಹವೇನು?"

## ೧೮. ಬರಗಾಲ ನಿವಾರಣೆ

ವಿಜಾಪುರ ಜಿಲ್ಲೆ ಶತಶತಮಾನಗಳಿಂದ ಬರಗಾಲಕ್ಕೆ ತುತ್ತಾಗುತ್ತ ಬಂದ ಪ್ರದೇಶ. ಭೂಮಿಯು ಫಲವತ್ತಾಗಿದೆಯಾದರೂ ಮಳೆರಾಯನ ಕೃಪೆ ಅಲ್ಲಿ ಸಾಕಾಗಿಲ್ಲ. ಕಳೆದ ಒಂದು ನೂರು ವರುಷಗಳಲ್ಲಿ ೩೫ ಸಾರೆ ಅಲ್ಲಿಯ ಜನ ಬರಗಾಲಕ್ಕೆ ಬಲಿಯಾಗಿ ತತ್ತರಿಸಿ ಹೋಗಿರುವರೆಂದು ಅಂಕಿ ಸಂಖ್ಯೆಗಳಿಂದ ತಿಳಿದು ಬರುತ್ತದೆ. ಪ್ರತಿಮೂರು ವರುಷಕ್ಕೆ ಒಮ್ಮೆ ಅಲ್ಲಿ ಅನಾವೃಷ್ಟಿಯಿಂದ ಜನ ತೊಂದರೆಗಿಡಾಗುತ್ತಾರೆ. ಪದೇ ಪದೇ ಹೀಗೆ ಬರಗಾಲದ ಬವಣೆಗೊಳಗಾದರೆ ಜನರ ಆರ್ಥಿಕ ಅಡಚಣೆ ತಪ್ಪುವುದೆಂತು? ಬರಗಾಲಕ್ಕೊಂದು ಶಾಶ್ವತವಾದ ಪರಿಹಾರ ಕಂಡು ಹಿಡಿಯಬೇಡವೇ? ಎಷ್ಟು ವರುಷಗಳವರೆಗೆ ಬರಗಾಲದಲ್ಲಿ ಹೊಲ, ಮನೆ, ದನ, ಕರು, ಧನ-ಕನಕಗಳನ್ನು ಕಳೆದುಕೊಂಡು ನಿರಾಶ್ರಿತರಾಗುವ ಲಕ್ಷೋಪಲಕ್ಷ ಹಳ್ಳಿಗರ ಕಷ್ಟವನ್ನು ನೋಡುವದು? ಅದಕ್ಕಾಗಿ ವಿಜಾಪುರದಲ್ಲಿ ಬರಗಾಲ ನಿವಾರಕ ಸಂಸ್ಥೆಯೊಂದನ್ನು ಸಾರ್ವಜನಿಕರ ಹಾಗೂ ಸರಕಾರದ ಸಹಾಯ ಪಡೆದು ಪ್ರಾರಂಭಿಸಲಾಯಿತು. ಈ ಸಂಸ್ಥೆಗೆ ಯಂಟಿ ಫ್ಯಾಮಿನ್ ಇನ್‌ಸ್ಟಿಟ್ಯೂಟ್ ಎಂದು ಹೆಸರು. ಈ ಸಂಸ್ಥೆಯ ಮುಖಾಂತರ ಹಳಕಟ್ಟಿಯವರು ಮಾಡಿದ ಜನೋಪಯೋಗಿ ಕಾರ್ಯಗಳನ್ನು ಯಾರೂ ಮರೆಯುವಂತಿಲ್ಲ.

“ನಾನು ಜಿಲ್ಲಾ ಗ್ರಾಮೀಣ ಅಭಿವೃದ್ಧಿ ಮಂಡಳದ ಕಾರ್ಯದರ್ಶಿಯಾಗಿ ನಿಯಮಿಸಲ್ಪಟ್ಟೆ. ಅದರ ಕೆಲಸಗಳು ವಿಜಾಪುರ ಯಂಟಿ ಫ್ಯಾಮಿನ್ ಇನ್‌ಸ್ಟಿಟ್ಯೂಟಿಗೆ ಒಪ್ಪಿಸಲ್ಪಟ್ಟಿದ್ದವು. ೧೫ ವರುಷಗಳಲ್ಲಿ ಭೂಮಿಯ ಅಭಿವೃದ್ಧಿಯೇ ನನ್ನ ಮುಖ್ಯ ಕೆಲಸವಾಗಿತ್ತು. ಜಿಲ್ಲೆಯಲ್ಲಿ ದೊಡ್ಡ ಪ್ರಮಾಣದ ಮೇಲೆ ಒಡ್ಡು ಹಾಕಿಸುವುದು ಪ್ರಾರಂಭಿಸಲ್ಪಟ್ಟಿತು. ಇಲ್ಲಿಯವರೆಗೆ ಭೂಸುಧಾರಣೆಗಾಗಿ ಒಡ್ಡು ಹಾಕಿಸಬೇಕೆಂಬ ವಿಚಾರ ಜನರ ಮನಸ್ಸನ್ನು ವಿಶೇಷವಾಗಿ ಆಕರ್ಷಿಸಿರಲಿಲ್ಲ. ಜಿಲ್ಲೆಯಲ್ಲಿ ಒಡ್ಡು ಹಾಕುವ ಕಾರ್ಯದಲ್ಲಿ ಕಂಡು ಬಂದ ಯಶಸ್ಸು ಹಾಗೂ ತಮ್ಮ ತಮ್ಮ ಹೊಲಗಳಲ್ಲಿ ಒಡ್ಡು ಹಾಕಿಸುವ ಬಗೆಗೆ ಒಕ್ಕಲಿಗರ ಆತುರತೆಯು ಒಕ್ಕಲುತನ ಖಾತೆಯವರು ಜಿಲ್ಲೆಯಲ್ಲಿ ಈ ಕೆಲಸವನ್ನು ದೊಡ್ಡ ಪ್ರಮಾಣದಲ್ಲಿ ಕೈಕೊಳ್ಳುವಂತೆ ಮಾಡಿದವು” ಎಂದು ಹೇಳಿದ ಮಾತುಗಳು ಅವರ ದಿವ್ಯ ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿವೆ.

ಡಾ. ಹಳಕಟ್ಟಿಯವರು ಪ್ರಾರಂಭಿಸಿದ ರೈತಾಭಿವೃದ್ಧಿ ಕೆಲಸಗಳ ಮಹತ್ವವನ್ನು ಅಂದಿನ ಸರಕಾರ ಮನವರಿಕೆ ಮಾಡಿಕೊಂಡಿತು. ಅವರ ಈ ಕಾರ್ಯಗಳನ್ನು ಸತತವಾಗಿ ಮುಂದುವರಿಸಿಕೊಂಡು ಹೋಗಲು ತನ್ನದೆ ಆದ ಪ್ರತ್ಯೇಕ ಇಲಾಖೆಯನ್ನೇ ಸ್ಥಾಪಿಸಿಕೊಳ್ಳಬೇಕಾಯಿತು.

## ೧೯. ಕೃಷಿ ಹಾಗೂ ಸಹಕಾರ ಕ್ಷೇತ್ರಗಳಲ್ಲಿ ಸೇವೆ

ಕಂಚಾಣಂ ಕಾರ್ಯ ಸಿದ್ಧಿಃ ಎಂದು ಸಂಸ್ಕೃತದಲ್ಲಿ ಒಂದು ಗಾದೆ ಮಾತುಂಟು, ಯಾವುದೊಂದು ಸಾಮಾಜಿಕ ಕಾರ್ಯವನ್ನು ನೆರವೇರಿಸಬೇಕಾದರೆ ಹಣ ಅವಶ್ಯವಾಗಿ ಬೇಕಾಗುತ್ತದೆ. ದುಡ್ಡ ಇಲ್ಲವಾದರೆ ವ್ಯಕ್ತಿಯು ಮಾಡಬೇಕೆಂದು ಹಮ್ಮಿಕೊಂಡ ಕೆಲಸಗಳು ಕುಂಠಿತಗೊಳ್ಳುತ್ತವೆ. ಆದುದರಿಂದ ವ್ಯಕ್ತಿಯು ತನ್ಮೂಲಕ ಸಾಮಾಜಿಕ ಆರ್ಥಿಕ ಸ್ಥಿತಿಯನ್ನು ಸುಧಾರಿಸುವುದು ಭಾರತದ ಸಮಾಜ ಸುಧಾರಕನ ಮಹತ್ವದ ಕರ್ತವ್ಯಗಳಲ್ಲೊಂದಾಗಿದೆ.

ಭಾರತ ಹಳ್ಳಿಗಳಿಂದಾದ ದೇಶ. ಒಕ್ಕಲುತನವೇ ನಮ್ಮ ಜನರ ಮೂಲೋದ್ಯೋಗ. ಸುಧಾರಿಸಿದ ಕೃಷಿ ಪದ್ಧತಿಯನ್ನು ಜಾರಿಗೆ ತರಬೇಕು. ಆಹಾರದಲ್ಲಿ ಸ್ವಾವಲಂಬನೆ ಇದ್ದರೆ ಸಮಾಜದಲ್ಲಿ ಕ್ಷೋಭೆಯುಂಟಾಗುವುದಿಲ್ಲ. ಊಟ ವಸತಿಗಳ ಸಮಸ್ಯೆಯನ್ನು ಬಿಡಿಸಿದರೆ ಸಮಾಜದಲ್ಲಿ ಶಾಂತಿ ಸಮಾಧಾನಗಳು ಸ್ವಾಭಾವಿಕವಾಗಿ ನೆಲೆಗೊಳ್ಳುತ್ತವೆ. ಸಾಹಿತ್ಯ, ಸಂಸ್ಕೃತಿ ಕಲೆಗಳು ಸಂಪತ್‌ಭರಿತ ಸಮಾಜದಲ್ಲಿ ಬೆಳೆಯಲು ಅನುಕೂಲವಾಗುತ್ತದೆ. ಈ ಬಗೆಯ ಸಮಾಜ ವ್ಯವಸ್ಥೆಗೆ ಬಸವಾದಿ ಶಿವಶರಣರು ಹೇಳಿದ ಕಾಯಕ ಪದ್ಧತಿಯು ಹಳಕಟ್ಟಿಯವರ ಮನಸ್ಸನ್ನು ಬಹಳವಾಗಿ ಆಕರ್ಷಿಸಿತು.

ಕಾಯಕವೇ ಕೈಲಾಸವೆಂಬ ತತ್ವವನ್ನು ಆಧುನಿಕ ಕಾಲದ ಸಹಕಾರತತ್ವದಲ್ಲಿ ಅವರು ಕಂಡುಕೊಂಡರು. ಈ ತತ್ವವನ್ನು ಕಾರ್ಯರೂಪದಲ್ಲಿಯೂ ತಂದರು. ಈ ಬಗೆಯ ಅವರ ದೂರದೃಷ್ಟಿ, ಆಳವಾದ ಅನುಭವ, ವಿಶಾಲ ಮನೋಭಾವನೆಗಳು ಸಹಕಾರ ತತ್ವದ ಮೇಲೆ ಅವರು ಒಂದು ಬ್ಯಾಂಕನ್ನು ಸ್ಥಾಪಿಸುವಲ್ಲಿ ಸಹಾಯಕವಾದವು. ಈ ಬ್ಯಾಂಕಿನ ಹೆಸರು ಶ್ರೀ ಸಿದ್ಧೇಶ್ವರ ಅರ್ಬನ್ ಬ್ಯಾಂಕು ಎಂದು. ಇದು ಇಂದು ಸಹಕಾರ ಕ್ಷೇತ್ರದಲ್ಲಿ ಗಣ್ಯಸ್ಥಾನದಲ್ಲಿ ನಿಂತಿದೆ. ಇದರ ಮೂಲಕ ಒಕ್ಕಲುತನ ಅಭಿವೃದ್ಧಿಗೆ ಸಾಲ ಕೊಡಲು ಪ್ರಾರಂಭಿಸಿದರು. ಸಾಲ ಪಡೆದ ರೈತರು ತಮ್ಮ ಜಮೀನುಗಳಿಗೆ ಒಡ್ಡು ಹಾಕಿಸುವುದು, ಭಾವಿ ತೋಡಿಸುವುದು, ಕರಿಕೆ ಕಡಿಸುವುದು – ಇವೇ ಮುಂತಾದ ಸುಧಾರಣೆಗಳನ್ನು ಕೈಕೊಂಡರು. ಹೀಗಾಗಿ ಬೇಸಾಯದಲ್ಲಿ ಪ್ರಗತಿಯಾಗಲು ಅನುವಾಯಿತು.

ಹೀಗೆ ಹಣಕಾಸಿನ ಸೌಲಭ್ಯಕ್ಕಾಗಿ ಸಹಕಾರಿ ಬ್ಯಾಂಕನ್ನೂ ಸ್ಥಾಪಿಸಿದರು. ಸಹಕಾರ ತತ್ವಗಳ ಆಧಾರದ ಮೇಲೆ ಉತ್ತಮ ತರಗತಿಯ ಬೇಸಾಯ ಮಾಡಬೇಕೆಂದು ಗ್ರಂಥ ಪ್ರಕಟನೆಯ ಮೂಲಕ ಜನರಿಗೆ ಅಂದು ತಿಳಿಯಪಡಿಸಿದ ಹಳಕಟ್ಟಿಯವರ ಮುಂಧೋರಣೆ ಹಾಗೂ ದೂರದೃಷ್ಟಿಗಳ ಅರಿವಾಗುತ್ತದೆ.

ಯಾವುದೊಂದು ಮಹತ್ವದ ಸಾಮಾಜಿಕ ಸುಧಾರಣೆಗೆ ಅಂದಿನ ಕಾಲದಲ್ಲಿ ಸರಕಾರದಿಂದ ಸಾಕಷ್ಟು ಸಹಾಯವಿರಲಿಲ್ಲ. ಸರಕಾರಕ್ಕೆ ಸಹಾಯ ಮಾಡುವ ಆಸ್ಥೆಯೂ ಇರಲಿಲ್ಲ. ಅಜ್ಞಾನದಲ್ಲಿ ಮುಳುಗಿದ ಸಾರ್ವಜನಿಕರು ಮೂಢನಂಬಿಕೆಗಳ ದಾಸರಾಗಿ ಇಂಥ ಸುಧಾರಣೆಗಳನ್ನು ಸ್ವಾಗತಿಸುತ್ತಿರಲಿಲ್ಲ. ಬದಲಾಗಿ ವಿರೋಧಿಸುತ್ತಿದ್ದರು. ಇಂತಹ ಕಠಿಣ ಪರಿಸ್ಥಿತಿಯಲ್ಲಿಯೂ ಹಳಕಟ್ಟಿಯವರು ಎದೆಗುಂದದೆ ಕಾರ್ಯ ಗೈದು ಸಫಲರಾದರು. ಅವರು ಮಾಡಿದ ಸೇವೆಯು ಉಸುಕನ್ನು ಹಿಂಡಿ ನೀರನ್ನು ತೆಗೆದಷ್ಟು ಕಷ್ಟಕರವಾಗಿದೆ. ಹೀಗಿದ್ದರೂ ಅವರು ಬಹು ವಿನಯಶೀಲರು, ನಿಗರ್ವಿಗಳು, "ನಾನು ಮುಖ್ಯವಾಗಿ ಮೂರು ಕಾರ್ಯಗಳನ್ನು ಕೈಕೊಂಡಿದ್ದೇನೆ, ಶಿಕ್ಷಣ, ಸಾಹಿತ್ಯ, ಹಣಕಾಸು, ಕೊನೆಯದು ಒಕ್ಕಲುತನ ಮತ್ತು ಸಹಕಾರಕ್ಕೆ ಸಂಬಂಧಿಸಿದೆ. ನಾನು ಮಾಡಿದ ಕೆಲಸ ಸಾರ್ವಜನಿಕರ ಲಕ್ಷ್ಯವನ್ನು ವಿಶೇಷವಾಗಿ ಸೆಳೆದಿಲ್ಲ. ಏಕೆಂದರೆ ಸಮಾಜದಲ್ಲಿ ನನ್ನ ಸ್ಥಾನ ಸಾಮಾನ್ಯವಾಗಿದೆ" ಎಂದು ಅವರೇ ವಿನೀತರಾಗಿ ಹೇಳಿಕೊಂಡಿರುವರು. ಅವರ ಈ ಮಾತು ಶರಣರಲ್ಲಿ ಅಗ್ರಗಣ್ಯರಾದ ಭಕ್ತಿಭಂಡಾರಿ ಬಸವಣ್ಣನವರು ಹೇಳಿದ ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ ಎಂಬ ಮಾತನ್ನು ಜ್ಞಾಪಕಕ್ಕೆ ತರುವದಿಲ್ಲವೇ?

## ೨೦. ಡಾ. ಹಳಕಟ್ಟಿಯವರು ಮತ್ತು ಶ್ರೀ ಕುಮಾರ ಶಿವಯೋಗಿಗಳು

ಡಾ. ಫ. ಗು. ಹಳಕಟ್ಟಿಯವರು ಹಾನಗಲ್ಲ ಶ್ರೀ ಕುಮಾರ ಶಿವಯೋಗಿಗಳ ನಿಕಟ ಒಡನಾಟದಲ್ಲಿದ್ದರು. ಶ್ರೀಗಳು ೧೯೩೦ರಲ್ಲಿ ಲಿಂಗೈಕ್ಯರಾದಾಗ ಡಾ. ಹಳಕಟ್ಟಿಯವರು ಶಿವಾನುಭವ ಪತ್ರಿಕೆಯಲ್ಲಿ (ಸಂಪುಟ : ೪, ಸಂಚಿಕೆ ೧೧) ಒಂದು ಉತ್ತಮ ಸಂಪಾದಕೀಯ ಲೇಖನವನ್ನು ಬರೆದಿರುವರು. ಅದರಲ್ಲಿ ಶ್ರೀಗಳೊಂದಿಗಿದ್ದ ತಮ್ಮ ಸಂಬಂಧವನ್ನು ವ್ಯಕ್ತಪಡಿಸುವ ಕೆಲವು ಅವತರಣಿಕೆಗಳನ್ನು ಕೆಳಗೆ ಎತ್ತಿಕೊಟ್ಟಿದ್ದೇವೆ:

ಶ್ರೀ ಹಾನಗಲ್ಲು ಕುಮಾರ ಸ್ವಾಮಿಗಳು ಈಗಿನ ಕಾಲದಲ್ಲಿ ಷಟ್‌ಸ್ಥಲ ಶಾಸ್ತ್ರದಲ್ಲಿ ಬಹಳ ಪ್ರಾವೀಣ್ಯತೆಯನ್ನು ಹೊಂದಿದವರಾಗಿದ್ದರು. ಅದರ ಮರ್ಮಗಳು ಅವರಿಗೆ ಗೊತ್ತಿದ್ದಷ್ಟು ಬೇರೆ ಯಾರಿಗೂ ಬಹುಶಃ ಗೊತ್ತಿರಲಿಕ್ಕಿಲ್ಲ. ವಚನ ಶಾಸ್ತ್ರದಲ್ಲಿ ಅವರು ಪಾರಂಗತರಾದ್ದರಿಂದಲೇ ಈ ಸಂಗತಿಗಳು ಅವರಿಗೆ ಪೂರ್ಣ ಮನವರಿಕೆಯಾಗಿದ್ದವು. ಅವರ ಬಗ್ಗೆ ಈ ಸಂಗತಿಯನ್ನು ನಾವು ಸ್ವತಃ ಬಲ್ಲೆವು. "ನಾನು ವಚನಶಾಸ್ತ್ರಸಾರ ೧ನೇ ಭಾಗವನ್ನು ರಚಿಸಿದ ಕಾಲಕ್ಕೆ ಈ ಸಂಗತಿಯನ್ನು ಕೇಳಿದ ಕೂಡಲೆ ಅವರು ಕೆಲವು ಶಾಸ್ತ್ರಿಗಳನ್ನು ಕರೆದುಕೊಂಡು ವಿಜಾಪುರಕ್ಕೆ ಸಮಕ್ಷಮ ಬಂದು ಆ ಗ್ರಂಥದ ಬಹುಭಾಗವನ್ನು ನನ್ನಿಂದ ಓದಿಸಿದರು. ಆಗ ನಾನು ವಿಷಮಜ್ವರಿಂದ ಅಶಕ್ತನಾಗಿದ್ದ ಕಾರಣ ಅವರು ತಾವೇ ವಿಜಾಪುರಕ್ಕೆ ಹೀಗೆ ಕೇಳಲಿಕ್ಕೆ ಬಂದಿದ್ದರ ಮೇಲಿಂದ ಅವರು ಈ ವಿಷಯದ ಬಗ್ಗೆ ಎಷ್ಟು ಮಹತ್ತರ ಪ್ರೀತಿಯುಳ್ಳವರಾಗಿದ್ದರೆಂಬುದು ಯಾರಾದರೂ ಊಹಿಸಬಹುದಾಗಿದೆ. ಮತ್ತು ಅವರೇ ಈ ಗ್ರಂಥವನ್ನು ಅಚ್ಚು ಹಾಕಲು ನನಗೆ ಉತ್ತೇಜನ ಕೊಟ್ಟರು. ಅವರು ಶಿವಯೋಗಮಂದಿರದಲ್ಲಿ ಅಸಂಖ್ಯ ಪುರಾತನ ತಾಡವೋಲೆ ಗ್ರಂಥಗಳನ್ನು ಸಂಗ್ರಹಿಸಿರುವರು. ಅನೇಕವುಗಳು ಬಹಳ ಬೆಲೆಯುಳ್ಳ ಗ್ರಂಥಗಳಾಗಿವೆ." ನನಗೆ ಬೇಕಾಗುವ ಗ್ರಂಥಗಳ ಬಗ್ಗೆ ಶಿವಯೋಗ ಮಂದಿರಕ್ಕೆ ನಾನು ಬರೆದ ಕೂಡಲೇ ಅವರು ಅವುಗಳನ್ನು ನನ್ನ ಕಡೆಗೆ ತಪ್ಪದೆ ಕಳಿಸಿ ಪ್ರೋತ್ಸಾಹಿಸುತ್ತಿದ್ದರು.

ಶ್ರೀ ಸ್ವಾಮಿಗಳು ಸಮಾಜದಲ್ಲಿ ರೂಢವಾಗಿರುವ ಭೇದಗಳನ್ನು ಮುರಿಯಲಿಕ್ಕೆ ಯಾವಾಗಲೂ ಬಹಳ ಪ್ರಯತ್ನಿಸುತ್ತಿದ್ದರು. ಇದಕ್ಕೋಸ್ಕರ ಅವರು ಕರ್ನಾಟಕದಲ್ಲೆಲ್ಲ ಬಹಳ ಸಂಚಾರ ಮಾಡುತ್ತ ಬಂದರು. ಯಾವ ಊರಲ್ಲಾದರೂ ಏನಾದರೂ ತಂಟೆಗಳು ಉತ್ಪನ್ನವಾದರೆ ಸಾಕು, ಅವರನ್ನು ಕರೆಯಲಿಕ್ಕೆ ಯಾರಾದರೂ ಬಂದರೆ ಅವರು ತಟ್ಟನೇ ಅಲ್ಲಿಗೆ ಹೋಗಿ ಎಲ್ಲ ಜನರಿಗೂ ಸಮಾಧಾನ ಹೇಳಲು ಸಿದ್ಧರಾಗಿರುತ್ತಿದ್ದರು. ಈ ವಿಷಯದಲ್ಲಿ ಅವರು ತೋರಿಸುತ್ತಿದ್ದ ಚಟುವಟಿಕೆಗಳು ಅವರ್ಣನೀಯವಾಗಿರುತ್ತವೆ. ಇದರಲ್ಲಿ ಅವರಿಗೆ ಜನರು ಸರಿಯಾಗಿ ನಡೆಯಬೇಕೆಂಬ ಅಭಿಲಾಷೆಯೇ ಹೊರತು ಬೇರೆ ಯಾವ ಉದ್ದೇಶವೂ ಇರಲಿಲ್ಲ. ಇದರಿಂದ ಅವರು ಎಲ್ಲರಿಗೂ ಬೇಕಾದವರಾಗಿದ್ದರು. ಅವರು ಮಾಡಿದ ಮತ್ತೊಂದು ಮಹತ್ವದ ಕಾರ್ಯವೆಂದರೆ, ಸಮಯ ಭೇದಗಳನ್ನು ಮುರಿದದ್ದು, ವಿರಕ್ತ ವರ್ಗದವರಲ್ಲಿರುವ ಈ ಭೇದಗಳ ಮೂಲಕ ದೇಶದಲ್ಲಿ ಅನೇಕ ಮನಸ್ತಾಪಗಳು ಬಹು ದಿವಸಗಳಿಂದಲೂ ನಡೆದಿದ್ದವು. ಆದರೆ ಶ್ರೀ ಸ್ವಾಮಿಗಳವರು ಈ ಸಮಯಗಳನ್ನು ಸಂಪೂರ್ಣ ಮುರಿದುಹಾಕಿದರು. ಇದರ ಶ್ರೇಯಸ್ಸು ಇವರಿಗೆ ಇರುತ್ತದೆ. ಇವರಿಂದ ಈಗ ಮುರಿಗೀ, ಕುಮಾರ,

ಕೆಂಪಿನ, ಚಿಂಲ್ಲಾಳ ಎಂಬ ಸಮಯ ಭೇದಗಳು ಬಹಳ ಕಡಿಮೆಯಾಗಿವೆ. ಶ್ರೀ ಹಾನಗಲ್ಲ ಕುಮಾರಸ್ವಾಮಿಗಳು ಈ ಪ್ರಕಾರ ಒಂದು ಮಹತ್ತರವಾದ ಕಾರ್ಯವನ್ನು ಸಮಾಜಕ್ಕೆ ಮಾಡಿರುವರು.

ಶ್ರೀ ಸ್ವಾಮಿಗಳು ದೀರ್ಘೋದ್ಯೋಗಿಗಳು. ಸ್ವಲ್ಪ ತೊಂದರೆ ಬಂದ ಕೂಡಲೇ ಅವರು ಎಂದೂ ಹಿಂದೆಗೆಯುವವರಲ್ಲ, ಮಹಾಕೂಟಸ್ಥಾನದಲ್ಲಿ ಮಂದಿರವನ್ನು ಸ್ಥಾಪಿಸಿದ ವರುಷ ಅವರಿಗೆ ಅನೇಕ ತೊಂದರೆಗಳು ಉತ್ಪನ್ನವಾದವು. ಈ ಪ್ರದೇಶವು ವನ್ಯಮೃಗಗಳಿಂದ ತುಂಬಿದ ಅರಣ್ಯಭಾಗವು. ಆಗ ಅಲ್ಲಿ ಇರಲಿಕ್ಕೆ ಸ್ಥಳವಿರಲಿಲ್ಲ. ಅಲ್ಲಿ ಇದ್ದವರಿಗೆ ಭಯಂಕರ ಮಲೇರಿಯ ಜ್ವರವು ವ್ಯಾಪಿಸಿತು. ಆಗ ಅನೇಕರು ಶ್ರೀ ಸ್ವಾಮಿಗಳಿಗೆ ಈ ಕಾರ್ಯವನ್ನು ಬಿಟ್ಟುಕೊಡಲು ಉಪದೇಶಿಸಿದರು. ಆದರೆ ಶ್ರೀ ಸ್ವಾಮಿಗಳು ಅಚಲವಾದ ಧೈರ್ಯದಿಂದ ಆ ಸ್ಥಳದಲ್ಲಿಯೇ ಇದ್ದುಕೊಂಡು ಸುತ್ತಲಿನ ಗ್ರಾಮಗಳಲ್ಲಿ ಸಂಚರಿಸಿ ಹಣವನ್ನು ಶೇಖರಿಸಿ ಇರಲಿಕ್ಕೆ ಕಟ್ಟಡಗಳನ್ನೂ ಯೋಗ್ಯ ಜಲಾಶಯವನ್ನೂ ಬೇಕಾದ ವ್ಯವಸ್ಥೆಗಳನ್ನೂ ಏರ್ಪಡಿಸಿಕೊಂಡು ಆ ನಿರ್ಜನ ಪ್ರದೇಶವನ್ನು ಊರ್ಜಿತ ಸ್ಥಿತಿಗೆ ತಂದರು. ಒಂದು ಸಂಸ್ಥೆಯನ್ನು ಸ್ಥಾಪಿಸುವುದು ದುಸ್ತರವು. ಆದರೆ ಈ ಕಾರ್ಯವು ಒಬ್ಬ ಯೋಜಕನ ಹೊರತು ಯಾರಿಗೂ ಆಗಲಾರದು. ಇಂಥ ಯೋಜನಾ ಸಾಮರ್ಥ್ಯವನ್ನು ಶ್ರೀ ಹಾನಗಲ್ಲ ಕುಮಾರ ಸ್ವಾಮಿಗಳು ಪಡೆದಿದ್ದರಿಂದಲೇ ಅವರಿಂದ ಈ ಮಹತ್ಕಾರ್ಯವು ಸಿದ್ಧಿಸಿತು.

ಮುಳುಗುಂದ ಬಾಲಲೀಲಾ ಮಹಾಂತ ಶಿವಯೋಗಿಗಳು ಲಿಂಗದೊಳಗಾಗಿ ೧೯೫೬ನೆಯ ಇಸ್ವಿಗೆ ನೂರು ವರುಷಗಳಾದವು. ಅವರ ಸವಿ ನೆನಪಿಗಾಗಿ ಸ್ಮಾರಕ ಗ್ರಂಥವನ್ನು ಪ್ರಕಟಿಸಲಾಯಿತು. ಅದರಲ್ಲಿ ಶ್ರೀ ಹಾನಗಲ್ಲ ಕುಮಾರ ಸ್ವಾಮಿಗಳವರ ಬಗ್ಗೆ ಕೆಲವು ನೆನಹುಗಳು ಎಂಬ ಲೇಖನವನ್ನು ಡಾ. ಹಳಕಟ್ಟಿಯವರು ಸಂಕ್ಷೇಪವಾಗಿ ಬರೆದಿರುವರು. ಈರ್ವರು ಆಧುನಿಕ ಶರಣ ಹಾಗೂ ಶಿವಯೋಗಿಗಗಳ ನಡುವೆ ಇದ್ದ ಸಂಬಂಧದ ಬಗೆಗಿನ ಕೆಲವು ಉಚಿತ ಭಾಗವನ್ನು ನಾವಿಲ್ಲಿ ಉದ್ಧರಿಸುತ್ತೇವೆ.

ಶ್ರೀ ಹಾನಗಲ್ಲ ಕುಮಾರ ಸ್ವಾಮಿಗಳವರು ಹೇಗೆ ಧನ ಸಂಚಯ ಮಾಡುತ್ತ ಬಂದರೋ ಹಾಗೆಯೇ ಅವರು ಗ್ರಂಥ ಸಂಚಯವನ್ನು ಸಹ ಮಾಡುತ್ತ ಬಂದರು. ಅವರ ಈ ಕಾರ್ಯವು ಅತ್ಯಂತ ಮಹತ್ವವಾದುದು. ಶ್ರೀ ಸ್ವಾಮಿಗಳವರ ದರ್ಶನ ಹೊಂದಲು ಎಲ್ಲ ಕಡೆಯಿಂದಲೂ ಪ್ರಮುಖ ವ್ಯಕ್ತಿಗಳು ಈ ಮಂದಿರಕ್ಕೆ ಬರುವುದು ರೂಢಿಯಾಗಿತ್ತು. ಅವರನ್ನು ಶ್ರೀ ಸ್ವಾಮಿಗಳು ಕಂಡು ಅವರ ಗ್ರಾಮದಲ್ಲಿ ತಾಡವೋಲೆಯ ಗ್ರಂಥಗಳು ಇವೆಯೋ ಹೇಗೆ ಎಂಬುದನ್ನು ಪ್ರಶ್ನೆ ಮಾಡದೇ ಬಿಡುತ್ತಿದ್ದಿಲ್ಲ. ಯಾರಾದರೂ ತಮ್ಮಲ್ಲಿ ಇಂಥ ಗ್ರಂಥಗಳು ಇವೆ ಎಂದು ಅವರು ಉತ್ತರ ಕೊಟ್ಟಲ್ಲಿ ಅವುಗಳನ್ನು ಮಂದಿರಕ್ಕೆ ಕಳಿಸಬೇಕೆಂದು ಶ್ರೀ ಸ್ವಾಮಿಗಳು ತಪ್ಪದೆ ಹೇಳುವರು. ಅವರನ್ನು ಕಾಣಬಂದವರಲ್ಲಿ ಯಾರೂ ತಾವು ಕಳಿಸುವದಿಲ್ಲ ಎಂದು ಅನ್ನುತ್ತಿದ್ದಿಲ್ಲ. ಎಲ್ಲರೂ ಭಕ್ತಿಯಿಂದ ತಮ್ಮಲ್ಲಿಯ ಗ್ರಂಥಗಳನ್ನು ಅವರ ಕಡೆಗೆ ಸಮರ್ಪಿಸುತ್ತಿದ್ದರು. ಈ ಪ್ರಕಾರ ಮಂದಿರದಲ್ಲಿ ವೀರಶೈವ ಗ್ರಂಥಗಳ ಒಂದು ದೊಡ್ಡ ಸಮುದಾಯವು ಸ್ವಲ್ಪ ದಿವಸಗಳಲ್ಲಿ ಉಂಟಾಯಿತು.

ಶ್ರೀ ಸ್ವಾಮಿಗಳವರು ಮಂದಿರದ ಒಂದು ದೊಡ್ಡ ನಿಧಿಯನ್ನು ಕೂಡಿಸಿದ್ದೂ, ಅಲ್ಲಿ ಕಟ್ಟಡಗಳನ್ನು ನಿರ್ಮಾಣ ಮಾಡಿದುದೂ ಮಹತ್ವದ ಕಾರ್ಯಗಳೆಂಬುದು ನಿಸ್ಸಂದೇಹವಾದದ್ದು, ಆದರೆ ಹಣಕ್ಕಿಂತಲೂ

ಮಹತ್ವವೆನಿಸಿಕೊಳ್ಳುವದು ಗ್ರಂಥಗಳನ್ನು ಸಂಗ್ರಹ ಮಾಡುವದು ಅಷ್ಟೇ ಶ್ರೇಯಸ್ಕರವಾದದ್ದು ಇರುತ್ತದೆ. ಇಂಥ ಗ್ರಂಥಗಳು ಸಮಾಜದಲ್ಲಿ ಇರದಿದ್ದರೆ ಸಂಸ್ಕೃತಿಯು ಬಾಳುವ ಸಂಭವವೇ ಇಲ್ಲ.

ಇದೇ ಕಾಲದಲ್ಲಿ ನಾನು ವಚನ ಶಾಸ್ತ್ರದ ಉಕ್ತಿಗಳನ್ನು ಸಂಗ್ರಹಿಸುವ ಕಾರ್ಯದಲ್ಲಿ ತೊಡಗಿದ್ದೆನು. ಈ ಸಂಗತಿಯನ್ನು ನಾನು ಸ್ವಾಮಿಗಳವರ ನಿದರ್ಶನಕ್ಕೆ ಆಗಿಂದಾಗ್ಗೆ ತರುತ್ತಿದ್ದೆನು. ಅವರು ಇದನ್ನು ನೋಡಿ ಬಹಳ ಸಂತೋಷಿಸುತ್ತಿದ್ದರು ಮತ್ತು ನನಗೆ ಅದರಲ್ಲಿ ಪ್ರೋತ್ಸಾಹವನ್ನೂ ಕೊಡುತ್ತಿದ್ದರು.

ಮುಂದೆ ನಾನು ವಚನ ಶಾಸ್ತ್ರ ಸಾರ ಎಂಬ ಗ್ರಂಥವನ್ನು ನಿರ್ಮಾಣ ಮಾಡಿ ಅದರಲ್ಲಿ ನಾಲ್ಕು ವಿಭಾಗಗಳನ್ನು ತಯಾರಿಸಿದ್ದೆನು. ಮೊದಲನೆಯ ಭಾಗವು ಪೂರ್ಣವಾಗಲು ಬಾಗಲಕೋಟೆಯ ಕೆಲ ಮಹನೀಯರು ಸ್ವಾಮಿಯವರಿಗೆ ಹೇಳಲು ಅವರು ಖುದ್ದಾಗಿ ನಾನಿದ್ದ ಮನೆಯ ಸಮೀಪದಲ್ಲಿ ಸೊನ್ನದ ಶ್ರೀಮಂತ ಗಂಗಪ್ಪ ದೇಸಾಯಿಯವರ ಕಟ್ಟಡವು ಪ್ರಾರಂಭವಾಗಿದ್ದು ಅದೇ ಮನೆಯಲ್ಲಿ ಅವರು ಇಳಿದರು. ಆಗ ನಾನು ವಿಷಮಜ್ವರ ಪೀಡಿತನಾಗಿ ಚನ್ನಾಗಿ ಕುಳ್ಳಿರಲಿಕ್ಕೆ ಬರುತ್ತಿದ್ದಿಲ್ಲ. ಆದರೂ ಶ್ರೀ ಸ್ವಾಮಿಗಳು ನನ್ನ ಅನುಕೂಲತೆಗಾಗಿ ಈ ಗೃಹದಲ್ಲಿ ಇಳಿದು ಕೆಲವು ದಿವಸಗಳವರೆಗೆ ನಾನು ಸಂಗ್ರಹಿಸಿದ ಉಕ್ತಿಗಳನ್ನು ನನ್ನ ಕಡೆಯಿಂದ ಓದಿಸಿಕೊಳ್ಳುತ್ತಿದ್ದರು. ಅವುಗಳಲ್ಲಿರುವ ವಚನಗಳಲ್ಲಿಯ ಉಚ್ಚ ವಿಚಾರಗಳು ಸುಂದರ ನುಡಿಗಳು ಇವುಗಳನ್ನು ಕೇಳಿ ಅವರು ಹರ್ಷಿಸುತ್ತಿದ್ದರು ಮತ್ತು ನನಗೆ ಈ ಗ್ರಂಥವನ್ನು ಅಚ್ಚು ಹಾಕಲಿಕ್ಕೆ ಪ್ರೋತ್ಸಾಹಿಸಿದರು. ಈ ಅಚ್ಚು ಹಾಕುವ ಕಾರ್ಯದಲ್ಲಿ ನನಗೆ ಶ್ರೀಮಂತ ಗಂಗಪ್ಪ ದೇಸಾಯರು ಧನ ಸಹಾಯವನ್ನು ಮಾಡಲು ಒಪ್ಪಿದರು. ಶ್ರೀ ಸ್ವಾಮಿಗಳು ಇದನ್ನು ಕೇಳಿ ಸಂತೋಷ ಪ್ರದರ್ಶನವನ್ನು ಮಾಡಿದರು. ಗ್ರಂಥದ ಮುದ್ರಣವು ಬೆಳಗಾವಿಯಲ್ಲಿ ಮುಗಿದ ಬಳಿಕ ನಾನು ಅದನ್ನು ಅವರಿಗೆ ತಲುಪಿಸಿದೆನು.

ಸ್ವಾಮಿಗಳವರ ಹಸ್ತದಲ್ಲಿ ಈ ಗ್ರಂಥವು ಬಂದ ಬಳಿಕ ಅವರು ತಮ್ಮ ಭೋಜನೋತ್ತರ ಕಾಲದಲ್ಲಿ ಅದರಲ್ಲಿಯ ಶ್ರೇಷ್ಠ ಉಕ್ತಿಗಳನ್ನು ತಮ್ಮನ್ನು ಕಾಣಲಿಕ್ಕೆ ಬಂದಂಥ ಜನರಿಗೆ ತಿಳಿಸಿ ಹೇಳುವರು. ಈ ಕಾರ್ಯವನ್ನು ಅವರು ಬಹುದಿನ ಮಾಡುತ್ತ ಬಂದರು. ಹೀಗೆ ತಾವಷ್ಟೇ ಅಲ್ಲ, ಮಂದಿರಕ್ಕೆ ಬಂದ ಮಠಾಧಿಕಾರಿಗಳಿಗೂ, ಶಾಸ್ತ್ರಗಳಿಗೂ ಶಿವಶರಣರು ಎಂಥ ಮಹತ್ವದ ಕಾರ್ಯವನ್ನು ಮಾಡಿದ್ದಾರೆ ನೋಡಿರಿ ಎಂದು ಅವರಿಗೆ ತಿಳಿಸಿ ಹೇಳುವರು.

ಹೀಗೆ ಶಿವಶರಣರ ವಚನಗಳನ್ನು ಮೊದಲು ಪ್ರಸಾರ ಮಾಡಿದವರು ಶ್ರೀ ಹಾನಗಲ್ಲ ಕುಮಾರಸ್ವಾಮಿಗಳೇ ಇದ್ದಾರೆ. ಅವರು ಹೋದಲ್ಲೆಲ್ಲ ಶರಣರ ವಿಚಾರಗಳನ್ನು ತಮ್ಮ ಅಧಿಕಾರ ವಾಣಿಯಿಂದ ಜನರ ಮುಂದೆ ಪ್ರಸ್ತಾಪಿಸಿ ಅವುಗಳನ್ನು ಮುಂದಕ್ಕೆ ತಂದರು.

ಹೀಗೆ ಇಪ್ಪತ್ತನೆಯ ಶತಮಾನದ ವೀರಶೈವ ಸಮಾಜ ಮಂದಿರದ ಭದ್ರಬುನಾದಿಯಾಗಿರುವ ಶ್ರೀ ಹಾನಗಲ್ಲ ಕುಮಾರ ಮಹಾಸ್ವಾಮಿಗಳ ಜೀವನದ ಕೆಲವು ನೈಜ ಸಂಗತಿಗಳನ್ನು ಡಾ. ಹಳಕಟ್ಟಿಯವರು ಬರೆದು ಮಹೋಪಕಾರ ಮಾಡಿರುವರು.

## ೨೧. ಸ್ಥಿತಪ್ರಜ್ಞ

ಸಮಾಜ ಸೇವೆಯನ್ನು ಅಂತಃಕರಣಪೂರ್ವಕ ಮಾಡಿದ ಹಳಕಟ್ಟಿಯವರ ಹೆಸರು ಅಂದಿನ ಬ್ರಿಟಿಷ್ ಸರಕಾರದ ಕಿವಿಗೆ ತಲುಪಿತು. ಅವರು ಮಾಡಿದ ನಿಸ್ವಾರ್ಥ ಸೇವೆಯ ಪರಿಶೀಲನೆಯನ್ನು ಅದು ಮಾಡಿತು. ಅವರ ಕಾರ್ಯಗಳ ಮಹತ್ತನ್ನು ಅಂದಿನ ಸರಕಾರ ಮನವರಿಕೆ ಮಾಡಿಕೊಂಡಿತಲ್ಲದೆ ಸಮಾಜದಲ್ಲಿ ಅವರ ಅಗ್ರಸ್ಥಾನವನ್ನು ಗುರುತಿಸುವದಕ್ಕಾಗಿ ರಾವಸಾಹೇಬ ಎಂಬ ಗೌರವ ಪದವಿಯನ್ನಿತ್ತು ಗೌರವಿಸಿತು.

ಕೆಲ ವರುಷ ಗತಿಸಿದವು. ಹಳಕಟ್ಟಿಯವರು ತಮ್ಮ ಕಾರ್ಯಗಳನ್ನು ಮೊದಲಿನಂತೆಯೇ ಸಾಗಿಸಿದ್ದರು. ತಮ್ಮ ಸನ್ಮಾರ್ಗದಲ್ಲಿ ವಿಚಲಿತರಾಗದೇ ಮುಂದುವರಿದಿದ್ದರು. ಅವರ ಅವಿರತ ಪರಿಶ್ರಮದ ಪರಿವೆ ಮತ್ತೊಮ್ಮೆ ಸರಕಾರಕ್ಕೆ ಗೋಚರವಾಯಿತು. ರಾವಬಹಾದ್ದೂರ ಎಂಬ ಮತ್ತೊಂದು ಪದವಿಯನ್ನು ಕೊಟ್ಟು ಮನ್ನಣೆ ಮಾಡಿತು. ಹಳಕಟ್ಟಿಯವರ ಕೀರ್ತಿ ಎಲ್ಲ ಕಡೆಗೂ ಹಬ್ಬಿತು. ಅವರ ಕಾರ್ಯವನ್ನು ಮೆಚ್ಚಿದ ಜನರು ಇಪ್ಪತ್ತನೆಯ ಶತಮಾನದ ನೂತನ ಶರಣರೆಂದು ಕರೆದರು. ಅವರ ಸಂಶೋಧನಾ ಕಾರ್ಯಗಳನ್ನು ಕಂಡವರು ಅವರನ್ನು ಕರ್ನಾಟಕ ಮ್ಯಾಕ್ಸಮುಲ್ಲರ್‌ರೆಂದು ಹೊಗಳಿದರು. ಬಸವಾದಿ ಶರಣರ ವಚನಗಳ ಅಮೂಲ್ಯನಿಧಿಯನ್ನು ಮೊದಲು ಬೆಳಕಿಗೆ ತಂದುದರಿಂದ ವಚನಪಿತಾಮಹರೆಂಬ ಅಭಿದಾನದಿಂದ ಕರೆದರು.

ಅವರ ನಿಸ್ಸೀಮ ಹಾಗೂ ನಿಸ್ವಾರ್ಥ ಸಾಹಿತ್ಯ ಸೇವೆಯನ್ನು ಮನಗಂಡು ಬಳ್ಳಾರಿಯಲ್ಲಿ ಜರುಗಿದ (೧೯೨೬) ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನವಿತ್ತು ಸನ್ಮಾನಿಸಲಾಯಿತು. ಅದೇ ಕನ್ನಡ ಸಾಹಿತ್ಯ ಪರಿಷತ್ತು ಮತ್ತೊಮ್ಮೆ (೧೯೫೦) ಮರ್ಯಾದೆ ಸಲ್ಲಿಸಿತು. ಮಗುದೊಮ್ಮೆ (೧೯೫೬) ಮಾನಪತ್ರವನ್ನಿತ್ತು ಕೃತಾರ್ಥವಾಯಿತು. ಕೊನೆಗೆ ಕರ್ನಾಟಕ ವಿಶ್ವವಿದ್ಯಾಲಯವು ಡಾಕ್ಟರ್ ಆಫ್ ಲಿಟರೇಚರ ಎಂಬ ಉನ್ನತ ಪದವಿಯನ್ನು ದಯಪಾಲಿಸಿತು (೧೯೫೬) ಅವರ ಕೀರ್ತಿ ನಾಡಿನ ಮೂಲೆ ಮೂಲೆಗಳಲ್ಲಿ ಪಸರಿಸಿತು. ಇಡಿಯ ನಾಡಿಗೆ ನಾಡೇ ಅವರಿಗೆ ಗಂಧದ ಕರಂಡಕಗಳಲ್ಲಿ ಮಾನಪತ್ರವನ್ನಿತ್ತು ಗೌರವಿಸಹತ್ತಿತು.

ಆದರೇನು? ತನು ಮನ ಧನವ ಹಿಂದಕ್ಕಿಟ್ಟುಕೊಂಡು ಮಾತಿನ ಬಣಬೆಯ ಒಣಲೊಟ್ಟೆಯ ಈ ಪದವಿಗಳಿಂದ ಹಳಕಟ್ಟಿಯವರ ಆರ್ಥಿಕ ಸ್ಥಿತಿ ಸುಧಾರಿಸಲಿಲ್ಲ. ಬಡತನದ ದೀಕ್ಷೆ ತೊಟ್ಟು ಬಂದಂತ್ತಿತ್ತು ಅವರ ಜೀವನ ಸ್ಥಿತಿ. ಪರರ ಸುಖಕ್ಕಾಗಿ ಅವರು ತಮ್ಮ ಸುಖವನ್ನು ಈಡಾಡಿದ ಮಹಿಮರು.

ಅವರು ನಾಡು – ನುಡಿಗಳ ಸೇವೆಗಾಗಿ ತಮ್ಮ ಸ್ವಂತ ಸುಖವನ್ನೇ ಮರೆತರು. ಸೇವೆಯಲ್ಲಿಯೇ ಸಂತೃಪ್ತಿಯನ್ನು ಪಡೆದರು. ಜೀವನದುದ್ದಕ್ಕೂ ಅವರು ಒಂದೇ ಸಮನೆ ಹೋರಾಡಬೇಕಾಯಿತು. ಸಾಹಿತ್ಯ ಸೇವೆಗಾಗಿ ಕಂಕಣಬದ್ಧರಾದ ಅವರು ತಮ್ಮ ವಕೀಲಿ ಉದ್ಯೋಗಕ್ಕೆ ಶರಣು ಹೊಡೆದು ಬಡತನವನ್ನು ಅನುಭವಿಸಬೇಕಾಗಿ ಬಂದಿತು. ಪ್ರಾಪಂಚಿಕ ವಿಪತ್ತುಗಳಂತು ಅವರ ಜೀವನವನ್ನೇ ಹಿಂಡಿ ಹಿಪ್ಪೆ ಮಾಡಲೆತ್ನಿಸಿದವು.

ಮತ್ತೊಮ್ಮೆ ಅವರು ಹೊಟ್ಟೆ ನೋವಿನಿಂದ ಬಹುವಾಗಿ ಬಳಲಿದರು. ಕೊನೆಗೆ ಹೊಟ್ಟೆಗೆ ಶಸ್ತ್ರಚಿಕಿತ್ಸೆ ಮಾಡಬೇಕಾಯಿತು. ಅನಂತರ ಅನೇಕ ದಿನಗಳವರೆಗೆ ಮೇಲು ಮುಖವಾಗಿಯೇ

ಪವಡಿಸುವಂತೆ ವೈದ್ಯರು ಸೂಚಿಸಿದರು. ಮಗ್ಗುಲಾಗಿ ಹೊರಳಿ ಮಲಗುವುದು ಸಹ ಜೀವಕ್ಕೆ ಗಂಡಾಂತರಕಾರಿಯಾಗಿತ್ತು. ಇಂತಹ ರೋಗದ ಬಳಲಿಕೆಯಲ್ಲೂ ಸಹ ಅವರು ಹೊರಳಾಡದೆ ತಮ್ಮ ಪತ್ರಿಕೆಯ ಕರಡುಗಳನ್ನು ತಿದ್ದಿ ಕಳಿಸುತ್ತಿದ್ದರಂತೆ.

ಮಗುದೊಮ್ಮೆ ರೈಲಿನಲ್ಲಿ ಪ್ರವಾಸ ಮಾಡುವಾಗ ಕಾಲು ಜಾರಿತು. ಹಿಮ್ಮಡದ ಎಲುವಿಗೆ ಪೆಟ್ಟು ತಗುಲಿತು. ಅಡ್ಡಾಡಲು ಬಾರದಂತಾಯಿತು. ಆರು ತಿಂಗಳ ಕಾಲ ಹಾಸಿಗೆಯಲ್ಲಿಯೇ ಕುಳಿತುಕೊಳ್ಳಬೇಕಾಯಿತು. ಆದರೆ ಅವರು ಸುತ್ತೆಲ್ಲ ತಾಡೋಲೆಯ ಕಟ್ಟುಗಳನ್ನು ಹರವಿಕೊಂಡು ಅವುಗಳ ಅವಲೋಕನ ಅಭ್ಯಾಸಗಳಲ್ಲಿ ಕಾಲಿನ ನೋವನ್ನು ಮರೆತರು.

ಇಂತಹ ಅನೇಕ ಶಾರೀರಿಕ ಬಾಧೇಗಳನ್ನವರು ಶಾಂತ ಚಿತ್ತರಾಗಿ ಸಹಿಸಿಕೊಂಡಿರುವುರು. ದೇಹಕ್ಕಾದ ಗಾಯಗಳು ಕಾಲಾಂತರದಲ್ಲಿ ಮಾಯ್ದುಹೋಗುತ್ತವೆ. ಆದರೆ ಮನಸ್ಸಿಗಾದ ಗಾಯಗಳು ಸುಲಭವಾಗಿ ಮಾಯುವುದಿಲ್ಲ. ಹಳಕಟ್ಟಿಯವರ ಮನಸ್ಸಿಗಾದ ನೋವು ಅತ್ಯದ್ಭುತ, ಸಹಿಸಲಸಾಧ್ಯ, ಅವರ ಹಿರಿಯ ಮಗ ಚಂದ್ರಶೇಖರ ಕ್ರೀಡಾಪಟುವಾಗಿದ್ದಂತೆ ಬುದ್ಧಿವಂತನಾಗಿದ್ದ. ಇಂಗ್ಲಂಡ ದೇಶದ ಮ್ಯಾಂಚೆಸ್ಟರ್ ನಗರದಲ್ಲಿದ್ದು ವಿದ್ಯಾಭ್ಯಾಸ ಮಾಡಿ ಪರಿಣತಿಪಡೆದು ಭಾರತಕ್ಕೆ ಬಂದ ಮೇಲೆ ಅವನಿಗೆ ಅತ್ಯಂತ ದೊಡ್ಡ ಹುದ್ದೆ ಸಿಕ್ಕಿತ್ತು. ತಿಂಗಳೊಂದಕ್ಕೆ ೧೨೦೦ ರೂಪಾಯಿಗಳ ಪಗಾರ ದೊರೆಯಹತ್ತಿತು. ಇಂದಿನ ದಿನಮಾನಕ್ಕೆ ಅದನ್ನು ಹೋಲಿಸಿದರೆ ಹನ್ನೆರಡು ಸಾವಿರಕ್ಕೂ ಹೆಚ್ಚಿನ ಮೊತ್ತದ ಸಂಬಳವದು. ಪ್ರಬುದ್ಧ ವಯಸ್ಕನಾದ ಮಗನು ದುಡಿಯುವುದಕ್ಕೆ ಹತ್ತಿದನು. ಸಿಗುವ ಸಾಕಷ್ಟು ಸಂಬಳದಿಂದ ಸುಖವಾಗಿ ಮನೆತನದ ಭಾರಹೊತ್ತು ನಡೆಯುವಂತಾದನು. ಇನ್ನೇನು ಸಂಸಾರಕ್ಕೆ ತಂದುಕೊಡುವ ಚಿಂತೆ ತಪ್ಪಿತು ಎನ್ನುವಷ್ಟರಲ್ಲಿ ಆ ಮಗನು ಆಕಸ್ಮಾತ್ತಾಗಿ ಸಾವನ್ನಪಿದನು. ದೂರದ ಊರಾದ ದಿಲ್ಲಿಯಲ್ಲಿ. ಎಂಥ ದುರ್ಘಟನೆಯಿದು! ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲವೆನ್ನುವಂತಾಯಿತು. ಈ ಭಯಂಕರ ಸುದ್ಧಿಯನ್ನು ಕೇಳಿದ ಹಳಕಟ್ಟಿಯವರು ಕ್ಷಣಹೊತ್ತು ಸ್ಥಂಭೀಭೂತರಾದರು. ಕೊಟ್ಟದೇವರು ಕಸಿದುಕೊಂಡು ಹೋದನು ಎಂದು ಮರುಕ್ಷಣದಲ್ಲಿ ಮನಸ್ಸಿಗೆ ಸಮಾಧಾನ ತಂದುಕೊಂಡರು. ದಿಲ್ಲಿಯವರೆಗೆ ಹೋಗಿ ಅವನ ಅಂತ್ಯಕ್ರಿಯೆಯನ್ನು ಮುಗಿಸಿ ಬಂದರು. ಎಂದಿನಂತೆ ಪುನಃ ಸಾಹಿತ್ಯ ಸಂಶೋಧನೆಯಲ್ಲಿ ತನ್ಮಯರಾದರು. ಅವರು ತಮ್ಮ ಕರುಳು ಕತ್ತರಿಸಿದಾಗಲೂ ಧೀರರಂತೆ ವರ್ತಿಸಿದುದು ಸಾಮಾನ್ಯವೇ? ಅವರ ಸಂಯಮವನ್ನು ಎಷ್ಟೆಂದು ವರ್ಣಿಸಬೇಕು. ಅವರ ಕರ್ತವ್ಯ ನಿಷ್ಠೆಯನ್ನು ಶಬ್ದಗಳಲ್ಲಿ ಬಣ್ಣಿಸುವುದು ಅಸಾಧ್ಯ.

ಅವರು ಬಸವಣ್ಣನವರ ತತ್ವಕ್ಕೆ ಅಂಟಿಕೊಂಡವರು. ಅದನ್ನು ಆಚಾರದಲ್ಲಿ ಅಳವಡಿಸಿಕೊಂಡವರು. ಹೊರಗೊಂದು ತೋರಿ ಒಳಗೊಂದು ತೋರುವ ಊಸರಬಳ್ಳಿಯಂತಹ ಬಾಳು ಅವರದಲ್ಲ.

ಕಾಯದ ಕಳವಳಕ್ಕಂಜಿ ಕಾಯಯ್ಯಾ ಎನ್ನೆನು
ಜೀವನೋಪಾಯಕ್ಕಂಜಿ ಈಯಯ್ಯಾ ಎನ್ನೆನು
ಯದ್ ಭಾವಂ ತದ್ಭವತಿ
ಉರಿ ಬರಲಿ ಸಿರಿ ಬರಲಿ ಬೇಕು – ಬೇಡೆನ್ನೆನಯ್ಯಾ
ಆನು ನಿಮ್ಮ ಹಾರೆನು ಮಾನವರ ಬೇಡೆನು
ಆಣೆ, ನಿಮ್ಮಾಣೆ, ಕೂಡಲಸಂಗಮದೇವಾ,

ಎಂಬ ಅಣ್ಣನವರ ವಚನ, ಹಳಕಟ್ಟಿಯವರ ಮನೋಸ್ಥೈರ್ಯವನ್ನು ಕಂಡಾಗ, ನಮ್ಮ ಮನದಲ್ಲಿ ಮೂಡಿನಿಲ್ಲುತ್ತದೆ.

ದೈಹಿಕ ನೋವುಗಳನ್ನು ಅವರು ನಗುತ್ತ ಸಹಿಸಿಕೊಂಡರು. ಮಾನಸಿಕ ವ್ಯಥೆಗಳನ್ನು ಹಸನ್ಮುಖದಿಂದ ನುಂಗಿದರು. ಅದರಂತೆ ಪ್ರಾಪಂಚಿಕ ಚಿಂತೆಗಳನ್ನು ಸಹ ನಿರ್ಲಿಪ್ತ ಮನೋಭಾವದಿಂದ ದೂರೀಕರಿಸಿದುದನ್ನು ಅವರ ಬಾಳ ಬಟ್ಟೆಯಲ್ಲಿ ಅನೇಕ ಸಲ ಕಾಣುತ್ತೇವೆ. ಒಮ್ಮೆ ಅವರಿಗೆ ಅತ್ಯಂತ ಕಠಿಣತರ ಆರ್ಥಿಕ ಅಡಚಣೆಯುಂಟಾಯಿತು. ಒಪ್ಪೊತ್ತಿನ ಊಟಕ್ಕೂ ಗತಿಯಿಲ್ಲದಾಯಿತು. ಮನೆತನದ ಈ ತೊಂದರೆಯನ್ನು ಯಾರಿಗೆ ಹೇಳುವುದು? ಹೇಗೆ ಹೇಳುವುದು.

ಹೊನ್ನಿನೊಳಗೊಂದೊರೆಯ, ಸೀರೆಯೊಳಗೊಂದೆಳೆಯ,
ಇಂದಿಂಗೆ, ನಾಳಿಂಗೆ ಬೇಕೆಂದೆನಾದೊಡೆ
ನಿಮ್ಮಾಣೆ, ನಿಮ್ಮ ಪುರಾತರಾಣೆ
ನಿಮ್ಮ ಶರಣರಿಗಲ್ಲದೆ ಮತ್ತೊಂದನರಿಯೆ ಕೂಡಲಸಂಗಮದೇವಾ

ಎಂಬ ಸ್ಥಿತಿ ಅವರದಾಯಿತು. ಬೇಕು ಬೇಡೆಂಬ ಬಯಕೆಯ ಎರಡು ಮುಖಗಳಿಂದ ಮೀರಿ ನಿಂತವರಾಗಿದ್ದರು. ಹಳಕಟ್ಟಿಯವರು! ಸರ್ವಾರ್ಪಣ ಭಾವದಿಂದ ಸಾಹಿತ್ಯ ಸೇವೆ, ಜನಸೇವೆಯಲ್ಲಿ ತೊಡಗಿದ್ದ ಅವರು ಬಡತನದ ಚರಮ ಅವಸ್ಥೆಯನ್ನು ತಲುಪಿದರು. ಇದು ಹೇಗೋ ಬಬಲೇಶ್ವರ ಶ್ರೀ ಶಾಂತವೀರ ಸ್ವಾಮಿಗಳವರ ಕಿವಿಗೆ ತಲುಪಿತು. ನಿರಪೇಕ್ಷಭಾವದ ಈ ಶರಣರಿಗೆ ಐದು ಚೀಲ ಜೋಳ, ಒಂದು ಚೀಲ ಗೋದಿ, ಮುನ್ನೂರು ಐವತ್ತು ರೂಪಾಯಿಗಳ ನಗದು ಹಣ – ಇಷ್ಟನ್ನು ಸ್ವಾಮಿಗಳು ತಕ್ಷಣ ಕಳಿಸಿಕೊಟ್ಟರಂತೆ, ಇಂತಹ ಅನೇಕ ಆರ್ಥಿಕ ಮುಗ್ಗಟ್ಟಿಗೆ ಒಳಗಾದ ಹಳಕಟ್ಟಿಯವರು ಶಿವಕೃಪೆಯಿಂದ ಹೇಗೋ ಪಾರಾದರೆಂದು ನಾವು ಹೇಳಬಹುದು. ಆದರೆ ಅವರು ಕೊನೆಯ ಉಸಿರನ್ನೆಳೆದುದು ಬಾಡಿಗೆಯ ಮನೆಯಲ್ಲಿ, ಬಡತನದ ಬವಣೆಯಲ್ಲಿ ಎಂಬ ವಾಸ್ತವಿಕ ಸ್ಥಿತಿಯನ್ನು ಯಾರೂ ಅಲ್ಲಗಳೆಯಲಾರರು. ಲಿಂಗಾಯತ ಸ್ವಾಮಿಗಳು ಕರ್ನಾಟಕದಲ್ಲಿ ಇಪ್ಪತ್ತು ಸಾವಿರ ಇರುವರಂತೆ, ನೂರಾರು ಜಗದ್ಗುರುಗಳೂ ಉಂಟು. ಅವರಿಗೆ ಲಕ್ಷಾಂತರ ರೂಪಾಯಿಗಳ ಉತ್ಪನ್ನ ಪ್ರತಿವರುಷವುಂಟು. ಆದರೆ ಸಾಹಿತ್ಯ ಸಂಶೋಧಕರಿಗೆ ಶಾಂತವೀರ ಸ್ವಾಮಿಗಳಂತಹ ಉದಾರಹೃದಯದ ಧರ್ಮಗುರುಗಳು ಸಿಗುವುದು ಬಹಳ ವಿರಳ.

ಮತ್ತೊಮ್ಮೆ ಬೆಳಗಾವಿಯ ನಾಗನೂರ ಶ್ರೀ ರುದ್ರಾಕ್ಷಿಮಠದ ಅಧಿಪತಿಗಳಾಗಿದ್ದ ಲಿಂಗೈಕ್ಯ ಡಾ. ಶಿವಬಸವ ಮಹಾಸ್ವಾಮಿಗಳು ವಿಜಾಪುರಕ್ಕೆ ಭೇಟ್ಟಿ ಇತ್ತಾಗ ಡಾ. ಹಳಕಟ್ಟಿಯವರನ್ನು ಕಾಣಲು ಹೋದರು. ಹಳಕಟ್ಟಿಯವರು ಆಗ ತಮ್ಮ ಹಳೆಯ ಸಾದಾ ಬಟ್ಟೆಗಳನ್ನು ಧರಿಸಿದ್ದರು. ಶರಣ ಸಾಹಿತ್ಯವನ್ನು ಓದುವದರಲ್ಲಿ ಮಗ್ನರಾಗಿದ್ದರು. ಕಟ್ಟುಬಿಚ್ಚಿದ ತಾಳೆಗ್ರಂಥಗಳು ಅವರು ಕುಳಿತ ಹರಕು ಚಾಪೆಯ ಮೇಲೆ ಹರವಿಕೊಂಡಿದ್ದವು. ಪೂಜ್ಯ ಶ್ರೀಗಳನ್ನು ಕಂಡೊಡನೆಯೇ ವಿನೀತರಾಗಿ ಎದ್ದು ಬಂದು ಭಕ್ತಿಭಾವದಿಂದ ನಮಸ್ಕರಿಸಿದರು. ಕರೆದೊಯ್ದು ತಮ್ಮ ಹಳೆಯ ಖುರ್ಚಿಯ ಮೇಲೆ ಕುಳ್ಳಿರಿಸಿದರು. ತಾವು ಕೈಕೊಂಡ ಶರಣ ಸಾಹಿತ್ಯ ಪ್ರಕಟಣೆಯ ಬೃಹತ್ ಯೋಜನೆಯನ್ನು ವಿವರಿಸಿದರು. ಹಣದ ಕೊರತೆಯಿಂದ ಪ್ರಕಟಣಾ ಕಾರ್ಯ ಸ್ಥಗಿತಗೊಂಡಿದೆಯೆಂದು ಹೇಳಿದರು.

ಅವರ ಆರ್ಥಿಕ ತೊಂದರೆಯನ್ನು ಕೇಳಿ, ಕಂಡು ಸ್ವಾಮಿಗಳಿಗೆ ವ್ಯಸನವಾಯಿತು. ಯೋಗಕ್ಷೇಮದ ಮಾತುಕತೆಗಳು ಮುಗಿದ ನಂತರ ಸ್ವಾಮಿಗಳು ತಾವು ಒಯ್ದಿದ್ದ ಧೋತರ ಜೋಡಿಯನ್ನೂ, ರುಂಬಾಲನ್ನೂ ಖರ್ಚಿಗಾಗಿ ಸ್ವಲ್ಪ ಹಣವನ್ನೂ ಹಳಕಟ್ಟಿಯವರಿಗೆ ಶುಭಾಶೀರ್ವಾದ ಕೋರಿ ಅರ್ಪಿಸಿದರು. ಸ್ವಾಮಿಗಳವರ ಉದಾರ ಭಾವವನ್ನು ಕಂಡು ಹಳಕಟ್ಟಿಯವರ ಹೃದಯದಲ್ಲಿ ಕೃತಜ್ಞತಾಭಾವ ಮೂಡಿತು. ಕಣ್ಣು ಹನಿಗೂಡಿದವು. ಅದನ್ನು ಕಂಡ ಶ್ರೀಗಳ ಕಣ್ಣುಗಳೂ ತೇವಗೊಂಡು ಶ್ರೀಗಳು ಭಾರವಾದ ಹೃದಯದಿಂದ ಅವರನ್ನು ಬೀಳ್ಕೊಟ್ಟು ಬೆಳಗಾವಿಗೆ ಮರಳಿದರು.

ಆಧುನಿಕ ಶರಣರೆಂದು ಪ್ರಸಿದ್ಧಿ ಪಡೆದ ಡಾ. ಫ. ಗು. ಹಳಕಟ್ಟಿಯವರ ಬಡತನದ ಚಿತ್ರ ಪುನಃ ನಾಗನೂರ ಶ್ರೀಗಳ ಕಣ್ಣುಮುಂದೆ ಬಂದು ನಿಲ್ಲಹತ್ತಿತು. ಆಗ ಬೆಳಗಾವಿಯ ಪ್ರಮುಖರ ಸಭೆ ಕರೆದರು. ಹಳಕಟ್ಟಿಯವರಿಗೆ ಸಾರ್ವಜನಿಕರಿಂದ ನಿಧಿ ಸಂಗ್ರಹಿಸಿ ಕೊಡಬೇಕೆಂಬ ವಿಚಾರವನ್ನು ಸಭೆಯಲ್ಲಿ ಚರ್ಚಿಸಿದರು. ಈ ಸದ್ವಿಚಾರಕ್ಕೆ ಎಲ್ಲರೂ ಒಪ್ಪಿಗೆ ಕೊಟ್ಟರು. ಅನಂತರ ಬೈಲಹೊಂಗಲ, ನಾಗನೂರು, ಸಂಪಗಾವಿ, ಹಿರೇಬಾಗೇವಾಡಿ ಮುಂತಾದ ಊರುಗಳ ಜನಸ್ಫೂರ್ತಿಯಿಂದ ಹಣ ಸಂಗ್ರಹಿಸಿದರು. ಹಳಕಟ್ಟಿ ಸತ್ಕಾರ ಸಮಿತಿಯ ಗೌರವ ಕಾರ್ಯದರ್ಶಿಗಳಾದ ಶ್ರೀ ವಿ. ಚ. ಮಾಲಗತ್ತಿಯವರು ಹಳಕಟ್ಟಿಯವರಿಗೆ ಸತ್ಕರಿಸಿ ನಿಧಿ ಸಮರ್ಪಣೆ ಮಾಡಿದ ಪ್ರಸಂಗವನ್ನು ಕೆಳಗಿನಂತೆ ವರದಿ ಮಾಡಿರುವರು. (೨೦೦೮ ರಲ್ಲಿ ಶ್ರೀ ಮಾಲಗತ್ತಿಯವರನ್ನು ಕಂಡು ಈ ಲೇಖಕನು ಕ್ಷೇಮಸಮಾಚಾರ ವಿಚಾರಿಸಿದನು).

"ಕರ್ನಾಟಕದ ಶ್ರೇಷ್ಠ ಅನುಭಾವಿಗಳಾದ ಪರಮಪೂಜ್ಯ ಶ್ರೀ ಕುಮಾರಸ್ವಾಮಿಗಳು ನವಕಲ್ಯಾಣಮಠ ಧಾರವಾಡ ಅವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದು ಒಂದು ಅಪೂರ್ವ ಯೋಗವೇ ಆಗಿದೆ. ಅವರ ದರ್ಶನ ಲಾಭವು ಬೆಳಗಾವಿಯ ಜನತೆಗೆ ಆದುದು ಪುಣ್ಯಪ್ರದವೆಂದು ಬಗೆಯುತ್ತೇವೆ. ಅವರಿಗೆ ಅನಂತ ಪ್ರಣಾಮಗಳು."

"ದಿನಾಂಕ ೪-೧೨-೧೯೫೬ನೇ ದಿನ ಸಾಯಂಕಾಲ ೫ ಗಂಟೆಗೆ ಸತ್ಕಾರ ಸಮಾರಂಭವು ಇಲ್ಲಿಯ ಉಚಿತ ಪ್ರಸಾದ ನಿಲಯದ ಒಳ ಅಂಗಣದಲ್ಲಿ ಸುಂದರ ಸಭಾಮಂಟಪದಲ್ಲಿ ಜರುಗಿತು. ಪ್ರಾರಂಭದಲ್ಲಿ ಈಶಸ್ತವನದ ನಂತರ ಕಾರ್ಯದರ್ಶಿಗಳು ಸಮಿತಿಯ ವರದಿಯನ್ನು ಓದಿದರು. ಉಪಾಧ್ಯಕ್ಷರಾದ ಎಸ್. ಬಿ. ಜವಳಿ ಅವರು ಮಾನಪತ್ರವನ್ನರ್ಪಿಸಿದರು. ಕೋಶಾಧ್ಯಕ್ಷರಾದ ಶ್ರೀ ಎಸ್. ವ್ಹಿ. ಬೆಂಬಳಗಿ ಅವರು ೨೮೬೩=೦೦ರೂಪಾಯಿಗಳ ಹಮ್ಮಿಣಿ ಅರ್ಪಿಸಿದರು. (ಅಲ್ಲದೆ ಸಭೆಯಲ್ಲಿ ಓರ್ವ ಮಹಿಳೆ ೨೫ ರೂ. ಗಳನ್ನು ಸಲ್ಲಿಸಿದಳು. ಸಮಿತಿಯು ನಂತರ ೨೫ ರೂ. ಗಳನ್ನು ಮನಿಯಾರ್ಡರ ಮಾಡಿದೆ. ಒಟ್ಟು ೨೮೮೮=೦೦ ರೂಪಾಯಿಗಳನ್ನರ್ಪಿಸಿದಂತಾಯಿತು) ಶ್ರೀ ಮಲ್ಲಪ್ಪಣ್ಣ ಹೊಸಮನಿ ಅವರು ಒಂದು ಕಾಶ್ಮೀರಿ ಶಾಲನ್ನು ಅರ್ಪಿಸಿದರು. ಸಭೆಗೆ ಬಂದ ಅನೇಕ ಮಹನೀಯರು ನೂರಾರು ಮಾಲೆಗಳಿಂದ ಸತ್ಕರಿಸಿದರು. ಪ್ರಿ. ಬ. ಗಂ. ತುರಮರಿ ಅವರು ಗಣ್ಯವ್ಯಕ್ತಿಗಳಿಂದ ಬಂದ ಸಂದೇಶಗಳನ್ನು ಓದಿದರು. ಆಮೇಲೆ ಶ್ರೀ ಹಳಕಟ್ಟಿ ಅವರ ಜೀವನ, ಅವರು ಸಲ್ಲಿಸಿದ ಸೇವೆಯ ಬಗ್ಗೆ ಪ್ರಿ. ಜಿ. ಎಸ್. ಪರಮಶಿವಯ್ಯ, ಪ್ರೊ. ವ್ಹಿ. ಜಿ. ಕುಲಕರ್ಣಿ, ಶ್ರೀಮತಿ ಪದ್ಮಾವತಿದೇವಿ ಅಂಗಡಿ, ಶ್ರೀ ಅನಂತರಾವ ಚಿಕ್ಕೋಡಿ ಮೊದಲಾದವರು ಮಾತನಾಡಿದರು."

"ಸಮಾರಂಭದ ಅಧ್ಯಕ್ಷ ಸ್ಥಾನ ವಹಿಸಿದ ಶ್ರೀ ಮ. ನಿ. ಪ್ರ. ಕುಮಾರಸ್ವಾಮಿಗಳು ಮೂರು ತಾಸುಗಳವರೆಗೆ ನಿರರ್ಗಳವಾಗಿ ತಮ್ಮದೇ ಆದ ಅಭೂತಪೂರ್ವ ಶೈಲಿಯಲ್ಲಿ ಶ್ರೀ ಹಳಕಟ್ಟಿ ಅವರ ವಿಷಯವಾಗಿಯೂ, ವೀರಶೈವ ಧರ್ಮದಲ್ಲಿ ಅಡಕವಾದ ಮಹತ್ತರವಾದ ತತ್ವಗಳ ಬಗ್ಗೆ ಹೃದಯಂಗಮವಾಗಿ ಮಾತನಾಡಿದರು. ಕೊನೆಗೆ ಶ್ರೀ ಎಸ್. ಡಿ. ಇಂಚಲ ಅವರು ಎಲ್ಲರ ಆಭಾರ ಮನ್ನಿಸಿದರು."

(ಡಾ. ಫ. ಗು. ಹಳಕಟ್ಟಿ ಅವರಿಗೆ ಸತ್ಕಾರ ಹಾಗೂ ನಿಧಿ ಸಮರ್ಪಣೆ, ವರದಿ ೧೯೫೭)

ಅನೇಕಸಲ ಇಂತಹ ಆರ್ಥಿಕ ಮುಗ್ಗಟ್ಟಿಗೆ ಒಳಗಾದ ಹಳಕಟ್ಟಿಯವರು ಶಿವಕೃಪೆಯಿಂದ ಹೇಗೋ ಪಾರಾದರೆಂದು ನಾವು ಹೇಳಬಹುದು. ಆದರೆ ಅವರು ಕೊನೆಯ ಉಸಿರನ್ನೆಳೆದುದು ಬಾಡಿಗೆಯ ಮನೆಯಲ್ಲಿ, ಬಡತನದ ಬವಣೆಯಲ್ಲಿ ಎಂಬ ವಾಸ್ತವಿಕ ಸ್ಥಿತಿಯನ್ನು ಯಾರೂ ಅಲ್ಲಗಳೆಯಲಾರರು.

ಹಳಕಟ್ಟಿಯವರಿಗೆ ೬೪ ವರುಷ ತುಂಬಿದಾಗ ಕೆಲವು ಅಭಿಮಾನಿಗಳು ೬೪ ಸಾವಿರ ರೂಪಾಯಿಗಳ ಹಣವನ್ನು ಸಂಗ್ರಹಿಸಿ ಅವರ ಬಡತವನ್ನು ನೀಗಿಸಬೇಕೆಂದು ಪಣತೊಟ್ಟರು. ಅವರ ಬಡತನದ ಚಿಂತೆ ದೂರವಾದರೆ ಮತ್ತೆ ನೂರಾರು ಸಂಶೋಧನಕಾರ್ಯ ಮಾಡಬಹುದು. ಸಾವಿರಾರು ಗ್ರಂಥಗಳನ್ನು ಜನ ಬದುಕಲೆಂದು ಪ್ರಕಟಿಸಬಹುದು ಎಂಬ ಆಶಾಗೋಪುರವನ್ನು ಕಟ್ಟಿಕೊಂಡು ಹಣ ಸಂಗ್ರಹದ ಕಾರ್ಯಕ್ಕೆ ಅಣಿಯಾದರು. ಇಂತಹ ಸತ್ಕಾರ್ಯಕ್ಕಾಗಿ ಜನ ಕೈಬಿಟ್ಟು ಕೊಟ್ಟೀತೆ? ಕೊಡಲಿಲ್ಲ. ಎಷ್ಟು ಪ್ರಯತ್ನಿಸಿದರೂ ನಿರೀಕ್ಷಿಸಿದಷ್ಟು ಹಣವು ಸಂಗ್ರಹವಾಗಲಿಲ್ಲ. ಅಜ್ಞ ಸಮಾಜದ ಬುದ್ಧಿಯೇ ಇಷ್ಟು!

ಕಳ್ಳರಿಗೆ ಸುಳ್ಳರಿಗೆ ಡೊಳ್ಳರಿಗೆ ಡೊಂಬರಿಗೆ
ಸುಳ್ಳು ಗೊರವರಿಗೆ ಕೊಡುವವರು ಧರ್ಮಕ್ಕೆ
ಎಳ್ಳಷ್ಟು ಕೊಡರು ಸರ್ವಜ್ಞ

ಎಂಬ ಸರ್ವಜ್ಞಕವಿಯ ಮಾತು ಆ ಅಭಿಮಾನಿಗಳ ಅನುಭವಕ್ಕೆ ಬಂದಿತು. ಆ ದೊಡ್ಡ ಮೊತ್ತದ ಹಮ್ಮಿಣಿಯನ್ನರ್ಪಿಸಬೇಕೆಂದಿದ್ದ ಕಾರ್ಯ ನಿರಾಶಾದಾಯಕವಾಯಿತು.

ಯಾವುದೋ ಒಂದು ಊರಲ್ಲಿ ಗೌರವಪದವಿಯನ್ನಿತ್ತು ಸನ್ಮಾನ ಮಾಡಬೇಕೆಂದು ಜನರು ಹಳಕಟ್ಟಿಯವರನ್ನು ಕರೆದೊಯ್ದರಂತೆ. ಸತ್ಕಾರ ಸಮಾರಂಭದಲ್ಲಿ ಅನೇಕರು ಅವರ ಗುಣಗಾನ ಮಾಡಿದರು. ಅವರ ಸ್ವಾರ್ಥ ತ್ಯಾಗವನ್ನು ಬಾಯಿತುಂಬ ಹೊಗಳಿದರು. ಸಂಶೋಧನಾ ಕಾರ್ಯವನ್ನು ಮನಸಾರೆ ಪ್ರಶಂಸಿಸಿದರು. ಕಾರ್ಯಕ್ರಮ ಮುಕ್ತಯವಾದ ನಂತರ ಸಭಿಕರಲ್ಲೊಬ್ಬರು ಹಳಕಟ್ಟಿಯವರೇ, ನೀವು ಇಂತಹ ಗೌರವ ಪದವಿಯನ್ನು ಸ್ವೀಕರಿಸುವ ಸಮಾರಂಭಗಳಿಗೆ ಬರುವಾಗಲಾದರೂ ಈ ತ್ಯಾಪೆ ಹಚ್ಚಿದ ಕೋಟು, ಹರಕು ರುಮಾಲು ಬಿಟ್ಟು ಬರಬಾರದೇನ್ರಿ? ಎಂದು ಆಕ್ಷೇಪವೆತ್ತಿದರು.

ಹೌದು, ನೀವನ್ನುವುದು ನಿಜ. ಆದರೆ ನೀವು ನನಗೆ ನೀಡುವ ಈ ಗೌರವಪದವಿಗಳಿಂದ ಆಗುವುದಾದರೂ ಏನು? ಪದವಿಗಳನ್ನು ಮೈಯಲ್ಲಿ ತೊಟ್ಟುಕೊಳ್ಳಲು ಬಂದೀತೆ? ಸದ್ಯ ನನಗಿರುವುದೊಂದೇ ಕೋಟು, ಒಂದೇ ರುಮಾಲು, ಮಡಿ ಮಾಡಿ ಧರಿಸಿಕೊಂಡು ಬಂದಿರುವೆ ಎಂದು ಹಸನ್ಮುಖದಿಂದಲೇ ಉತ್ತರಿಸಿದರು.

ನಾವು ನಮ್ಮ ಸುತ್ತಲಿನ ನಿಸ್ವಾರ್ಥ ಸಮಾಜ ಸೇವಕರನ್ನು ಗುರುತಿಸಲು ಕಲಿಯಬೇಕು. ಜೀವಿಸಿರುವಾಗಲೇ ಅವರನ್ನು ಗೌರವಿಸಬೇಕು. ಅವರು ಕೈಕೊಂಡ ಮಹಾಕಾರ್ಯಗಳು ನೆರವೇರುವಂತೆ ತನು – ಮನ – ಧನಗಳಿಂದ ಸಹಾಯ ಮಾಡಬೇಕು. ಅಂದರೆ ದೊಡ್ಡ ದೇಶದ ದೊಡ್ಡ ಜನರೆಂಬ ಹೆಗ್ಗಳಿಕೆಗೆ ನಾವು ಅರ್ಹರಾಗುತ್ತೇವೆ. ಜುಳು ಜುಳು ನಾದ ಮಾಡುತ್ತಾ ತುಂಬಿ ಹರಿಯುವ ಹೊಳೆ ಹಳ್ಳಗಳಿಂದ ಆಕಾಶವನ್ನು ಮುದ್ದಿಡುವಂತೆ ತೋರುವ ಉನ್ನತ ಗಿರಿ ಶಿಖರಗಳಿಂದ, ಫಲವತ್ತಾದ ಭೂಮಿಯಿಂದ ಯಾವದೊಂದು ದೇಶದ ಕೀರ್ತಿ ಬೆಳೆಯುವುದಿಲ್ಲ, ಅಲ್ಲಿಯ ಪ್ರಾಮಾಣಿಕರಾದ, ಉದ್ಯೋಗಶೀಲರಾದ ಸುಸಂಸ್ಕೃತ ಹೃದಯದ ಪ್ರಜೆಗಳಿಂದ ಆ ದೇಶದ ಗೌರವ ಗಗನಕ್ಕೇರುತ್ತದೆ. ಮಹಾತ್ಮರು ಸತ್ತನಂತರ ಅವರ ಸ್ಮಾರಕದಲ್ಲಿ ಗುಡಿ–ಗುಂಡಾರಗಳನ್ನು ಕಟ್ಟಿಸಿ ನಾವು ಹೊಟ್ಟೆ ತುಂಬಿಕೊಳ್ಳುವಂತಾಗಬಾರದು. ಹಳಕಟ್ಟಿಯವರಂತಹ ಪುಣ್ಯವಂತರನ್ನು ಜೀವಿಸಿರುವಾಗ ಅವರಿಗೆ ಆರ್ಥಿಕ ಅಡಚಣೆ ಆಗದಂತೆ ನೋಡಿಕೊಳ್ಳಬೇಕು. ಮರಣಾನಂತರ ಅವರು ಆಚರಿಸಿ ತೋರಿಸಿದ ಆದರ್ಶಗಳನ್ನು ಅನುಸರಿಸಿ ನಡೆಯಬೇಕು. ಅಂದಾಗ ನಾವು ನಿಜವಾದ ಕನ್ನಡಿಗರೂ ನಿಜವಾದ ಭಾರತೀಯರೂ ಆಗುತ್ತೇವೆ.

## ೨೨. ಉನ್ನತ ಚರಿತರು

ಹಳಕಟ್ಟಿಯವರದು ಪರಿಶುದ್ಧ ಚಾರಿತ್ರ್ಯ, ಅವರ ಬಹಿರಂಗ ಜೀವನವು ಎಷ್ಟು ಪವಿತ್ರವೋ ಅಷ್ಟೇ ಪವಿತ್ರ ಅವರ ಅಂತರಂಗ ಜೀವನವಿತ್ತು. ಜ್ಞಾನ ಕ್ರಿಯೆಗಳ ಸುಂದರ ಸಂಗಮವನ್ನು ಅವರ ಬಾಳಿನಲ್ಲಿ ಕಾಣುತ್ತೇವೆ. ಅವರು ಅಡಿ ಮಾಡಿದವರಲ್ಲ; ಮಾಡಿದ ನಂತರ ಆಡಿದವರು. ಅವರು ಮಾತಾಡಿದ್ದಕ್ಕಿಂತಲೂ ಮಾಡಿದ್ದೇ ಹೆಚ್ಚು, ಮಂಗಳಮೂರ್ತಿ ಸಂಗಮದೇವರ ನಿಲವನರಿದ ಶರಣರವರು, ವಚನದಲ್ಲಿ, ಕೃತಿಯಲ್ಲಿ ಲೇಸೆನಿಸಿಕೊಂಡು ಬದುಕಿದ ಮಹಾವ್ಯಕ್ತಿಗಳವರು. ಅವರನ್ನು ಕಂಡಾಗ ಅಂಬಲಿಯ ನೇಮದ ವಯೋವೃದ್ಧ, ಅನುಭಾವ ಶಿಖಾಮಣಿ ಶರಣ ಮಾದರ ಚೆನ್ನಯ್ಯನ ನೆನಪು ಬರುತ್ತದೆ.

ಕಾಮವ ತೊರೆದ, ಹೇಮದ ಜರೆದ, ಭಾನುವಿನ ಉದಯಕ್ಕೆ ಒಳಗಾಗದ ಶರಣರವರು. ಶರಣ ಸಾಹಿತ್ಯ ಸೇವೆಗಾಗಿ ಅವರ ತನುಮೀಸಲಾಯಿತು; ಮನ ಮೀಸಲಾಯಿತು, ಧನ ಮೀಸಲಾಯಿತು, ಶರಣರ ವಚನಗಳನ್ನು ನಿರಂತರ ಹಾಡಿ, ನೋಡಿ, ಕೂಡಿ, ಭಾವಿಸಿ, ಸುಖಿಸಿದ ಹಳಕಟ್ಟಿಯವರು ಆಧುನಿಕ ಶರಣರಾಗಿದ್ದರು. ಶಿವಶರಣರ ಸನ್ನಿಹಿತರಾದ, ಅನುಪಮ ಚರಿತರಾದ ಹಳಕಟ್ಟಿಯವರನ್ನು ಯಾರಿಗೆ ಹೋಲಿಸಬೇಕು? ಹೋಲಿಸಲು ಪ್ರತಿಯಿಲ್ಲ.

ಅವರದು ತೆಳುವಾದ ದೇಹ, ಎತ್ತರವಾದ ನಿಲುವು. ಮಾತು ಮೃದು, ಮಿತ. ಅವರು ನೊಸಲಿಗೆ ವಿಭೂತಿಯನ್ನಿಟ್ಟು, ತಲೆಗೆ ಪರಿಶುಭ್ರವಾದ ರುಮಾಲು ಸುತ್ತಿ, ಮೈಗೆ ಮಡಿಮಾಡಿದ ಹಳೆಯ ಕೋಟು ತೊಟ್ಟು, ಸ್ವಚ್ಛ ಮಾಡಿದ ಬಿಳಿ ಧೋತರವನ್ನು ಉಟ್ಟು ನಡೆದರೆ ನೋಡುವವರ ಹೃದಯದಲ್ಲಿ ಭಕ್ತಿರಸದ ಸೆಲೆ ಸ್ರವಿಸುತ್ತಿತ್ತು. ತಮ್ಮ ಎಪ್ಪತ್ತೈದು ವರುಷಗಳ ತುಂಬು ಜೀವನದ ಸಂದರ್ಭದಲ್ಲಿ ಹೇಳಿದ ಅವರ ವಿಚಾರಗಳು ನಿತ್ಯ ಸತ್ಯವಾಗಿವೆ:

ಸಾಹಿತ್ಯದಲ್ಲಡಗಿದ ಅದ್ಭುತ ಶಕ್ತಿಯನ್ನರಿತ ಹಳಕಟ್ಟಿಯವರು ರೆವರೆಂಡ್ ಜೆ. ಎಸ್. ಪಾರಕ್ಷಹಾರ ಎಂಬ ಆಂಗ್ಲ ಪಂಡಿತರ ಸಲಹೆಯ ಮೇರೆಗೆ ಬಸವಣ್ಣನವರ ಕೆಲವು ವಚನಗಳನ್ನು ಇಂಗ್ಲೀಷಿಗೆ ಭಾಷಾಂತರಿಸಿ ಇಂಡಿಯನ್ ಎಂಟಿಕ್ವರಿ ಎಂಬ ಪತ್ರಿಕೆಯಲ್ಲಿ ಪ್ರಸಿದ್ಧಿಸಿದ್ದರು. ಶರಣರ ತತ್ವಗಳನ್ನು ಪ್ರಪಂಚದ ಪ್ರಮುಖ ಭಾಷೆಯಾದ ಇಂಗ್ಲೀಷನಲ್ಲಿ ಅನುವಾದ ಮಾಡಿ ಪ್ರಚಾರ ಮಾಡಬೇಕೆಂಬ ಆಶಾ ಗೋಪುರವನ್ನು ಕಟ್ಟಿಕೊಂಡಿದ್ದರೂ ದಾರಿದ್ರ್ಯದ ದವಡೆಯಲ್ಲಿ ಸಿಕ್ಕ ಅವರಿಗೆ ತಮ್ಮ ಕನಸನ್ನು ನನಸಾಗಿ ಮಾಡಿಕೊಳ್ಳುವ ಅವಕಾಶ ಸಿಕ್ಕದೆ ಹೋಯಿತು. ಆದರೆ ಅವರು ನಿರಾಶರಾಗಿರಲಿಲ್ಲ. ಆಶಾಕಿರಣಗಳನ್ನು ತಳೆದವರಾಗಿದ್ದರು. ೧೯೬೧ನೆಯ ಇಸ್ವಿಯಲ್ಲಿ ಅವರ ಆಶೆಯು ಈಡೇರುವ ಸಂದರ್ಭವೊಂದು ಒದಗಿಬಂತು.

ಧಾರವಾಡದ ನವಕಲ್ಯಾಣಮಠದ ಕುಮಾರಸ್ವಾಮಿಗಳೊಂದಿಗೆ ಕೂಡಿ ಶೂನ್ಯ ಸಂಪಾದನೆ ಎಂಬ ಪ್ರಸಿದ್ಧ ವಚನಗ್ರಂಥವನ್ನು ಇಂಗ್ಲೀಷಿಗೆ ಅನುವಾದಿಸಲು ಬರಬೇಕೆಂಬ ಆಮಂತ್ರಣ ಶ್ರೀ ಎಸ್. ಎಂ. ಅಂಗಡಿಯವರಿಗೆ ಬಂದಿತು. ಆಮಂತ್ರಣ ಕಳಿಸಿದವರು ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ರ್‍ಯಾಂಗ್ಲರ್ ಡಿ. ಸಿ. ಪಾವಟೆಯವರು. ಆ ಆಮಂತ್ರಣವನ್ನು ಸ್ವೀಕರಿಸುವ ಮುನ್ನ ನಡೆದ ಒಂದು ಚಿಕ್ಕ ಘಟನೆಯನ್ನು ಶ್ರೀ ಅಂಗಡಿಯವರು ಈ ಲೇಖಕನಿಗೆ ಹೇಳಿದ ಮಾತುಗಳಲ್ಲಿಯೇ ಕೇಳೋಣ.

ನಾನು ಬಿ. ಎ. ದಲ್ಲಿ ಮೂರನೆಯ ಶ್ರೇಣಿಯಲ್ಲಿ ಪಾಸಾದವ. ಇಂಗ್ಲೀಷ ಸಾಹಿತ್ಯದಲ್ಲಿ ಅದೇನೋ ಸ್ವಲ್ಪ ಹೆಚ್ಚು ಅಭಿರುಚಿ. ಆ ಸಾಹಿತ್ಯವನ್ನು ಅಷ್ಟಿಷ್ಟು ಓದಿಕೊಂಡಿದ್ದೆ. ಇಷ್ಟು ಅಲ್ಪಜ್ಞನಾದ ನಾನು ಶೂನ್ಯ ಸಂಪಾದನೆಯಂತಹ ಗಹನ ತತ್ವಗಳನ್ನೊಳಗೊಂಡ ಕನ್ನಡ ಗ್ರಂಥಗಳನ್ನು ಇಂಗ್ಲೀಷ ಭಾಷೆಗೆ ಅನುವಾದ ಮಾಡುವುದು ಅಸಾಧ್ಯವೆನಿಸಿತು. ಮೈಮನಗಳೆರಡೂ ನಡುಗಿದವು. ಈ ಕಾರ್ಯವು ನನ್ನಿಂದ ಆಗದೆಂದು ಹೇಳಿದರೆ ಉಪಕುಲಪತಿಗಳಿಗೆ ಬಹಳ ನಿರಾಶೆಯುಂಟಾಗುವುದೆಂದೂ ಗೊತ್ತಿತ್ತು. ಉಭಯ ಸಂಕಟದಲ್ಲಿ ಸಿಕ್ಕು ಕೊನೆಗೆ ನನ್ನ ತಂದೆಯ ಸಮಾನರಾಗಿದ್ದ ಪೂಜ್ಯ ಹಳಕಟ್ಟಿಯವರ ದರ್ಶನಾಶೀರ್ವಾದಗಳನ್ನು ಪಡೆಯಲು ಬಿಜಾಪುರಕ್ಕೆ ಹೋದೆ.

ನಾನು ಅವರ ಮನೆಯಲ್ಲಿ ಕಾಲಿರಿಸಿದಾಗ ಅವರು ತಮ್ಮ ಮನೆಯ ಮುಂದಿನ ವರಾಂಡದಲ್ಲಿ ಕುಳಿತಿದ್ದುದನ್ನು ಕಂಡೆ, ಹಳೆಯ ಗೋಣಿಚೀಲವನ್ನು ಹಾಸಿಕೊಂಡಿದ್ದರು. ಅಲ್ಲಲ್ಲಿ ಕೈಯಿಂದ ಹೊಲಿದು ರಿಪೇರಿ ಮಾಡಿದ ಶರ್ಟ ಹಾಕಿಕೊಂಡಿದ್ದರು. ಉಟ್ಟ ಧೋತರವೂ ಅಲ್ಲಲ್ಲಿ ಹರಿದಿತ್ತು. ಯಾವುದೋ ಹಳೆಯ ಗ್ರಂಥವನ್ನು ಅವಲೋಕಿಸುತ್ತಲೇ ಆತ್ಮೀಯತೆಯಿಂದ ನನಗೆ ಕುಳಿತುಕೊಳ್ಳಲು ತಿಳಿಸಿದರು.

ಒಂದೆರಡು ನಿಮಿಷ ಆ ಮಾತುಕತೆಗಳಾದವು. ಅನಂತರ ನಾನು ಬಂದ ಕಾರಣವನ್ನು ಅವರಿಗೆ ಅರುಹಿದೆ. ಆಗ ಅವರಿಗಾದ ಆನಂದ ಅಷ್ಟಿಷ್ಟಲ್ಲ. ನಾನು ಅನೇಕ ವರುಷಗಳಿಂದ ಕಂಡ ಕನಸು ಈಗ ನನಸಾಗುವ ಕಾಲ ಬಂದಿದೆ. ನೀವದನ್ನು ಒಲ್ಲೆನೆನ್ನದೆ ಒಪ್ಪಿಕೊಂಡು ನಿರ್ವಹಿಸಿರಿ ಎಂದು ಪ್ರೋತ್ಸಾಹಿಸಿದರು. ನೀವು ಹೃದಯ ತುಂಬಿ ಆಶೀರ್ವದಿಸಿದರೆ ಮಾತ್ರ ನಾನು ಆ ಭಾಷಾಂತರ ಕಾರ್ಯವನ್ನು ನಿರ್ವಹಿಸಬಲ್ಲೆ ಎಂದು ಅವರಿಗೆ ನಾನಾಗ ಸಾಷ್ಟಾಂಗ ನಮಸ್ಕಾರ

ಹಾಕಿದೆ. ಒಂದು ನಿಮಿಷ ಅವರ ಪದತಲದಲ್ಲಿಯೇ ಮಲಗಿದೆ. ಆಗವರು, ನಾನು ಯಾರಿಂದಲೂ ಎಂದೂ ನಮಸ್ಕಾರ ಹಾಕಿಸಿಕೊಂಡವನಲ್ಲ, ಆದರೆ ಮಿಸ್ಟರ ಅಂಗಡಿ, ನಾನು ಎಂದಿನಿಂದ ಹಂಬಲಿಸಿದ ಕಾರ್ಯವನ್ನು ನೆರವೇರಿಸಲು ನೀನು ಹೊರಟಿರುವೆ. ನಿನಗೆ ಹೃದಯ ತುಂಬಿ ಹರಿಸಿದ್ದೇನೆ. ಏಳು ಎಂದರು. ಆಗ ನನ್ನ ಶರೀರದಲ್ಲಿ ಮಿಂಚಿನ ಸಂಚಾರವಾದಂತಾಯಿತು. ಅಂದು ಅವರ ಆಶೀರ್ವಾದಗಳನ್ನು ಹೊತ್ತು ಬಂದ ನಾನು. ಬಸವಣ್ಣ, ಚೆನ್ನಬಸವಣ್ಣ, ಅಕ್ಕಮಹಾದೇವಿ, ಸಿದ್ಧರಾಮ, ಪ್ರಭುದೇವ ಇವರ ವಚನಗಳನ್ನೆಲ್ಲ ಆಂಗ್ಲ ಭಾಷೆಗೆ ಭಾಷಾಂತರಿಸಿರುವೆ. ಶೂನ್ಯ ಸಂಪಾದನೆಯ ಭಾಷಾಂತರ ಕಾರ್ಯದಲ್ಲಿ ಸಂಪೂರ್ಣ ಸಹಕರಿಸಿ ಸಹಾಯ ಮಾಡಿರುವೆ. ಇಂದು ಆಂಗ್ಲ ಭಾಷೆ ನನ್ನ ಕರಗತವಾದಂತೆ ಭಾಸವಾಗುತ್ತಿದೆ. ಆ ಭಾಷೆಯಲ್ಲಿ ಇನ್ನೂ ನಾಲ್ಕಾರು ಕನ್ನಡ ಗ್ರಂಥಗಳನ್ನು ಅನುವಾದ ಮಾಡಿರುವೆ. ಭಕ್ತಿ ಭಂಡಾರಿ ಬಸವಣ್ಣನವರನ್ನು ಕುರಿತ ಮಹಾಕಾವ್ಯವನ್ನು ಇಂಗ್ಲೀಷಿನಲ್ಲಿ ಬರೆಯಹತ್ತಿರುವೆ. ಅಲ್ಪನಾದ ನನ್ನಿಂದ ಇಂತಹ ಮಹತ್ ಕಾರ್ಯಗಳಾಗಬೇಕಾದರೆ ಹಳಕಟ್ಟಿಯವರ ಅಂದಿನ ಕೃಪೆಯೇ ಕಾರಣವೆಂದು ಕೈಯೆತ್ತಿ ಹೇಳುತ್ತೇನೆ.

ಪುರಾಣ ಕಾಲದ ಒಂದು ಪವಾಡದಂತೆ ತೋರುತ್ತದೆಯಾದರೂ ಇದು ಪ್ರತ್ಯಕ್ಷ ಸತ್ಯಸಂಗತಿ. ಶರಣರ ಒಲುಮೆಯಾದರೆ ಕೊರಡು ಕೊನರದೆ?

ಶರಣರಾಗಿದ್ದ ಹಳಕಟ್ಟಿಯವರು ನುಡಿದುದೇ ವೇದವಾಯಿತು. ನಡೆದುದೇ ಬಟ್ಟೆಯಾಯಿತು. ಅವರದು ಎಂಬತ್ತನಾಲ್ಕು ವರುಷಗಳ ಸಾರ್ಥಕ ಬಾಳು. ಮುಪ್ಪಿನಿಂದ ಶರೀರವು ಹಣ್ಣಾದಂತೆ ಮನವು ಹಣ್ಣಿನೊಳಗಿನ ತನಿರಸದಂತಾಯಿತು. ಅವರು ನಿದ್ರೈದುದೇ ಜಪವಾಯಿತು; ಎದ್ದು ಕುಳಿತುದೇ ಶಿವರಾತ್ರಿಯಾಯಿತು; ನಡೆದ ದಾರಿ ಪಾವನವಾಯಿತು; ನುಡಿದ ಮಾತು ಶಿವತತ್ವವಾಯಿತು. ಅವರು ಕಾಯವಂಚನೆ ಮಾಡಲಿಲ್ಲ. ತನ್ನದೆನ್ನುವುದೆಲ್ಲವನ್ನು ಸಕಲ ಜೀವಾತ್ಮರ ಲೇಸಿಗಾಗಿ ಈಡಾಡಿದ ಮಹಾಶರಣರವರು. ಅವರು ಉಪಮಾತೀತರು. ಕಾಲ ಕರ್ಮರಹಿತರು; ಭವರಹಿತರು. ಇಂತಹ ದೈವೀಗುಣಗಳನ್ನು ಅಳವಡಿಸಿಕೊಂಡ ಶಿವಶರಣ ಡಾ. ಹಳಕಟ್ಟಿ ಫಕೀರಪ್ಪನವರು ದಿನಾಂಕ: ೨೯-೬-೧೯೬೪ರಂದು ಲಿಂಗೈಕ್ಯರಾದರು.

ಭಕ್ತಿಯೆಂಬ ಪೃಥ್ವಿಯ ಮೇಲೆ
ಗುರುವೆಂಬ ಬೀಜವಂಕುರಿಸಿ,
ಲಿಂಗವೆಂಬ ಎಲೆಯಾಯಿತ್ತು;
ಲಿಂಗವೆಂಬ ಎಲೆಯ ಮೇಲೆ
ವಿಚಾರವೆಂಬ ಹೂವಾಯಿತ್ತು;
ಆಚಾರವೆಂಬ ಕಾಯಾಯಿತ್ತು
ನಿಷ್ಪತ್ತಿಯೆಂಬ ಹಣ್ಣು ತೊಟ್ಟು ಬಿಟ್ಟು ಕಳಚಿ ಬೀಳುವಲ್ಲಿ
ಕೂಡಲಸಂಗಮದೇವ ತನಗೆ ಬೇಕೆಂದು ಎತ್ತಿಕೊಂಡ.

❖❖

# ಮಡಿವಾಳಪ್ಪ ಸಾಸನೂರ
# ಬರೆಹ-ಬದುಕು

ಸಂಪಾದಕರು
ಎಂ.ಎಂ.ಕಲಬುರ್ಗಿ
ರವೀಂದ್ರನಾಥ ಸಾಸನೂರ

ಸಾಸನೂರ ಪ್ರಕಾಶನ, ವಿಜಾಪೂರ
೨೦೦೯

*

# ಅರಿಕೆ

ಎಂ.ಎಂ.ಕಲಬುರ್ಗಿ

'ಸಾಸನೂರ' ಕುಟುಂಬ ಇಂದು ಕರ್ನಾಟಕದ ತುಂಬ ಮನೆಮಾತು. ವಿಜಾಪುರ ಜಿಲ್ಲೆಯ ಬಾಗೇವಾಡಿ ತಾಲೂಕಿನ ಸಾಸನೂರು ಒಂದು ಸಣ್ಣ ಹಳ್ಳಿ. ಈ ಹಳ್ಳಿಯ ಸಣ್ಣ ಸಮಾಜದ ಕುಟುಂಬ. ಆರ್ಥಿಕವಾಗಿಯೂ ಸಣ್ಣದು. ಆದರೆ ಇದರ ಸದಸ್ಯರಾದ ಎಂ.ಟಿ., ಏ.ಟಿ., ಎಚ್.ಟಿ., ಬಿ.ಟಿ.-ಸಾಸನೂರ ಹೆಸರು ಕಿವಿಗೆ ಬಿದ್ದೊಡನೆಯೇ ನಮ್ಮ ಕೈಗಳು ತಾನಾಗಿಯೇ ಮುಗಿಯುತ್ತವೆ. ಇದಕ್ಕೆ ಕಾರಣ, ಇವರೆಲ್ಲ ವ್ಯಷ್ಟಿಯಾಗಿ ಉಳಿಯದೆ, ಸಮಷ್ಟಿಯಾಗಿ ಬೆಳೆದುದು. ಈ ಬೆಳವಣಿಗೆಯ ತಾಯಿಬೇರು ಎಂ.ಟಿ. ಸಾಸನೂರ. ಇವರ ಪೂರ್ಣ ಹೆಸರು ಮಡಿವಾಳಪ್ಪ ತುಳಜಪ್ಪ ಸಾಸನೂರ.

ಮಡಿವಾಳಪ್ಪ ಮಾಸ್ತರ ಎಂದೇ ಖ್ಯಾತನಾಮರಾಗಿದ್ದ ಇವರು, ಸ್ವಾತಂತ್ರ್ಯಪೂರ್ವ ಅವಧಿಯ ಕನ್ನಡ ಮಾಸ್ತರರು. ಇವರ ತ್ಯಾಗದಲ್ಲಿ ತಮ್ಮಂದಿರಾದ ಏ.ಟಿ; ಎಚ್.ಟಿ; ಬಿ.ಟಿ; ಸುಪ್ರಸಿದ್ಧ ಕನ್ನಡ ಪ್ರಾಧ್ಯಾಪಕರಾಗಿ ಬೆಳೆದರು. ಒಂದೇ ಮನೆತನದ ನಾಲ್ಕು ಜನ ಸೋದರರು ಶಿಕ್ಷಕವೃತ್ತಿ ಆಯ್ದುಕೊಂಡುದು, ಅಸಾಮಾನ್ಯ ಶಿಕ್ಷಕರಾಗಿ ಬೆಳೆದುದು, ನಮ್ಮ ನಾಡಿನ ಒಂದು ಅಪೂರ್ವ ಉದಾಹರಣೆ.

ಶ್ರೀರಂಗ, ಅ.ನ.ಕೃ. ಮೊದಲಾದವರೊಂದಿಗೆ ಬೆಳಕಾಗಿ ಬೆಳೆಯುತ್ತಲಿದ್ದ ಧಾರವಾಡ ಕರ್ನಾಟಕ ಕಾಲೇಜಿನ ಕನ್ನಡ ಅಧ್ಯಾಪಕ ಪ್ರೊ. ಏ.ಟಿ. ಸಾಸನೂರ ತಮ್ಮ ೨೮ನೆಯ ವಯಸ್ಸಿನಲ್ಲಿಯೇ ನಿಧನರಾದರು. ಜೀವಿಸಿದ್ದರೆ ಈ ಭಾಗದ ಕನ್ನಡ ಶಿಕ್ಷಣದ ಶಕಪುರುಷರೆನಿಸುತ್ತಿದ್ದರು. ಸಾಹಿತ್ಯ-ಸಂಸ್ಕೃತಿ ಲೋಕದ ಯುಗಪುರುಷರೆನಿಸುತ್ತಿದ್ದರು. ಇಂಥ ಸ್ಮರಣೀಯ ವ್ಯಕ್ತಿ ಅಯ್ಯಪ್ಪ ಅವರನ್ನು ರೂಪಿಸಿದವರು, ಅಣ್ಣ ಮಡಿವಾಳಪ್ಪನವರು.

ಎಚ್.ಟಿ. ಸಾಸನೂರ ವಿಜಾಪುರ ವಿಜಯ ಕಾಲೇಜಿನಲ್ಲಿ ಕನ್ನಡ-ಇಂಗ್ಲಿಷ್ ಪ್ರಾಧ್ಯಾಪಕ ಮತ್ತು ಪ್ರಿನ್ಸಿಪಾಲ. ಎಲ್ಲ ಅರ್ಥಗಳಲ್ಲಿಯೂ ಎತ್ತರದ ವ್ಯಕ್ತಿ. 'ನಾನು' ಎಂಬುದು 'ನಾವು' ಆಗಿ ಬದುಕುವುದು ಹೇಗೆ? ವರ್ಣಮಯ ವ್ಯಕ್ತಿತ್ವ ಸುವರ್ಣಮಯವಾಗಿರುವುದು ಹೇಗೆ? ಎಂಬುದಕ್ಕೆ ನಿದರ್ಶನವಾಗಿ ಬಾಳಿದ ಹನುಮಂತರಾಯ ಅವರನ್ನು ಕಂಡರಿಸಿದ ಶಿಲ್ಪಿ, ಅಣ್ಣ ಮಡಿವಾಳಪ್ಪನವರು.

ಕೊನೆಯ ತಮ್ಮ ಬಿ.ಟಿ. ಸಾಸನೂರ ವಿಜಾಪುರದಲ್ಲಿ ಕನ್ನಡ ಪ್ರಾಧ್ಯಾಪಕ, ಬೀದರದಲ್ಲಿ ಪ್ರಿನ್ಸಿಪಾಲ, ಬೆಂಗಳೂರಿನಲ್ಲಿ ಲೋಕಸೇವಾ ಆಯೋಗದ ಸದಸ್ಯರಾಗಿದ್ದು, ಈ ಮೂರೂ ನೆಲೆಗಳಿಗೆ ಬೆಲೆಯನ್ನು ತಂದುಕೊಟ್ಟವರು. ಮಗ ವಿಜಯ ಸಾಸನೂರ ಅವರನ್ನು ದೊಡ್ಡ ಅಧಿಕಾರಿಯಾಗಿ, ಸಾಹಿತಿಯಾಗಿ ಬೆಳೆಸಿದ ಭೀಮಸೇನ ಅವರನ್ನು ಬೆಳೆಸಿದವರು ಅಣ್ಣ ಮಡಿವಾಳಪ್ಪನವರು.

ಹೀಗೆ ರಕ್ತ ಹಂಚಿಕೊಂಡು ಹುಟ್ಟಿದ ತಮ್ಮಂದಿರ ಅಭ್ಯುದಯಕ್ಕೆ ರಕ್ತ ಸುರಿಸಿ ದುಡಿದ ಮಡಿವಾಳಪ್ಪ ಮಾಸ್ತರರು ಶಿಕ್ಷಣದಲ್ಲಿ- ಸಂಸ್ಕೃತಿಯಲ್ಲಿ ತಮ್ಮಂದಿರೆಲ್ಲ ಸೇರಿ ಒಂದು ತೂಕ, ಇವರೇ ಒಂದು ತೂಕವೆಂಬಂತಿದ್ದರು. ಹೀಗೆ ಕುಟುಂಬವತ್ಸಲರಾಗಿದ್ದ ಇವರು ವಸುಧೈವ ಕುಟುಂಬ ವತ್ಸಲರೂ ಆಗಿದ್ದರು.

ಮಡಿವಾಳಪ್ಪ ಮಾಸ್ತರರು ಕಲಿತದ್ದು ಕನ್ನಡ ೭ನೆಯ ವರ್ಗದ ವರೆಗೆ. ಬಳಿಕ ಮುಗಿಸಿದ್ದು ಟ್ರೇನಿಂಗ್ ಕಾಲೇಜು ಶಿಕ್ಷಣ. ವೃತ್ತಿ ಬಾಗೇವಾಡಿ, ಸಿಂದಗಿ ತಾಲೂಕುಗಳಲ್ಲಿ ಕನ್ನಡ ಶಾಲೆಯ ಮಾಸ್ತರ, ಬಹಳೆಂದರೆ ಹೆಡ್‌ಮಾಸ್ತರ, ಇನ್ನೂ ಬಹಳೆಂದರೆ ತಾಲೂಕು ಶಾಲಾ ಹೆಡ್‌ಮಾಸ್ತರ್. ಗಳಗನಾಥ, ಸಿಂಪಿ ಲಿಂಗಣ್ಣ ಮೊದಲಾದವರಂತೆ ಮಡಿವಾಳಪ್ಪನವರೂ ಕನ್ನಡ ಮಾಸ್ತರರೇ. ಆದರೆ ಇವರೆಲ್ಲ ಸಂಸ್ಕೃತಿ ಲೋಕದಲ್ಲಿ ಬೆಳೆದದ್ದು, ಬೆಳೆಸಿದ್ದು ಬೆರಗು ಹುಟ್ಟಿಸುವಂತಹದು. ಕೇವಲ ಕುಟುಂಬವರ್ಗದವರಲ್ಲ; ಗ್ರಾಮದವರಲ್ಲ - ತನ್ನ ಸಂಪರ್ಕಕ್ಕೆ ಬಂದವರೆಲ್ಲ ಬೆಳಯಬೇಕೆಂಬುದು ಮಡಿವಾಳಪ್ಪನವರ ಸಂಕಲ್ಪವಾಗಿದ್ದಿತು. ಕೇವಲ ಶೈಕ್ಷಣಿಕವಾಗಿಯಲ್ಲ, ಸಾಂಸ್ಕೃತಿಕವಾಗಿಯೂ ಬೆಳೆಯಬೇಕೆಂಬ ಮಹಾಸಂಕಲ್ಪವಾಗಿದ್ದಿತು. ಈ ಆದರ್ಶ ಕಾರಣವಾಗಿ ಅವರ ತಲೆಮಾರಿನವರು ಆಮೇಲಿನ ತಲೆಮಾರಿನವರು, ಬೆಳೆದ ಫಲವಾಗಿ, ಆ ಪ್ರದೇಶದಲ್ಲಿ ಸಾಂಸ್ಕೃತಿಕ ಪ್ರಜ್ಞೆ ಜಾಗ್ರತವಾಯಿತು.

ಬಾಗೇವಾಡಿಯಲ್ಲಿ ಹಮ್ಮಿಕೊಂಡಿದ್ದ ತಾಲೂಕ ಶಿಕ್ಷಣ ಸಮ್ಮೇಲನಕ್ಕೆ ಅಂದಿನ ಮುಂಬೈ ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀ ಬಿ.ಜಿ. ಖೇರ್ ಆಗಮಿಸಿದ್ದರು. ತಾಳಿಕೋಟೆಗೆ ಪಯಣಿಸುತ್ತಿದ್ದ ಡಾ|| ರಾಜೇಂದ್ರ ಪ್ರಸಾದ ಅವರಿಗೆ ಸಾಸನೂರ ಗ್ರಾಮದ ನಾಗರಿಕರೊಂದಿಗೆ ಹೋಗಿ, ಮಾರ್ಗಮಧ್ಯದಲ್ಲಿ ಅವರಿ ಹೂವಿನ ಮಾಲೆಯಿಂದ ಸ್ವಾಗತಿಸಿದರು. ವಿಜಾಪುರ ವರೆಗೂ ಹೋಗಿ ಗಾಂಧೀಜಿಯವರನ್ನು ಕಂಡರು. ಹಳ್ಳಿ-ಪಳ್ಳಿಗಳಲ್ಲಿ ನಾಡಹಬ್ಬ ಆಚರಿಸಿದರು. ಸಭೆ-ಸಮಾರಂಭಗಳಲ್ಲಿ ಮುಖ್ಯಅತಿಥಿಗಳಾದರು. ತಮ್ಮ ಮನೆಯಲ್ಲಿ ಬಹುಭಾಷಾ ಗ್ರಂಥ ಬೆಳೆಸಿದರು. ಬಡವರಿಗೆ ನೆರಳಾದರು. ಶ್ರೀಮಂತರಿಗೆ ತೋರು ಬೆರಳಾದರು- ಇವೆಲ್ಲ ಮಡಿವಾಳಪ್ಪ ಮಾಸ್ತರರ ವ್ಯಕ್ತಿತ್ವವನ್ನು ತೆರೆದು ತೋರಿಸುವ ಸಣ್ಣ ದೊಡ್ಡ ಗವಾಕ್ಷಗಳು.

ಮಾಸ್ತರ ಅವರದು ಆಧ್ಯಾತ್ಮ ಕೇಂದ್ರಿತ ವ್ಯಕ್ತಿತ್ವ. ಹುಬ್ಬಳ್ಳಿಯ ಸಿದ್ಧಾರೂಢರು ಇವರ ನೇರ ಗುರುಗಳು. ಸನ್ಯಾಸಿಯಾಗಲು ನಿರ್ಧರಿಸಿದ್ದ ಇವರು, ಗುರುಗಳ ಉಪದೇಶಕ್ಕೆ ಮಣಿದು ಸಂಸಾರಿಯಾದರು. ಮಧುರಚೆನ್ನ ಮೊದಲಾದ ಅನುಭಾವಿ ಕವಿಗಳ ಸಾಹಿತ್ಯಯೋಗದಲ್ಲಿ ಬಾಳಿದರು. ಇಂಥ ನಿಲುವಿನ ಮಾಸ್ತರ್ ರಾಮಕೃಷ್ಣ ಪರಮಹಂಸ, ಅರವಿಂದ ಘೋಷ ಮೊದಲಾದ ಆಧುನಿಕ ಮಹಾತ್ಮರ ಸಿದ್ಧಾಂತ, ಸಾಹಿತ್ಯಗಳಿಂದ ಪ್ರಭಾವಿತರಾಗಿದ್ದರು. ಇದಕ್ಕೆ ಪೂರಕವೆಂಬಂತೆ ಕನ್ನಡ, ಮರಾಠಿ, ಬೆಂಗಾಲಿ, ಸಂಸ್ಕೃತ ಭಾಷೆಗಳ ಸಾಹಿತ್ಯ ಸಂಸ್ಕಾರ ಅವರನ್ನು ಸುಸಂಸ್ಕೃತರನ್ನಾಗಿಸಿದ್ದಿತು. ಬಾಗೇವಾಡಿ, ಸಿಂದಗಿ ತಾಲೂಕುಗಳಲ್ಲಿ ಆಯುಷ್ಯ ಕಳೆದರೂ ದೂರದ ಬೆಂಗಾಲಿ ಭಾಷೆ ಕಲಿಯುವದು, ಬೆಂಗಾಲಿ- ಮರಾಠಿ, ಹಿಂದಿ ಸಾಹಿತ್ಯ ಓದುವುದು-ಬರೆಯುವುದು-ಅನುವಾದಿಸುವುದು ಇವರಿಗೆ ಒಂದು ವ್ರತವೇ ಆಗಿದ್ದಿತು. ಇದರಿಂದಾಗಿ ಮಾಸ್ತರರು ಒಬ್ಬ ಬರೆಹಗಾರರಾಗಿಯೂ ಆಕಾರ ಪಡೆದರು.

ಸಾಹಿತ್ಯ-ಶಾಸ್ತ್ರ ; ಸಾಹಿತ್ಯದಲ್ಲಿಯೇ ಲೌಕಿಕ - ಆಧ್ಯಾತ್ಮಿಕ; ಶಾಸ್ತ್ರದಲ್ಲಿಯೇ ಕಾವ್ಯಶಾಸ್ತ್ರ-ಲೌಕಿಕಶಾಸ್ತ್ರ ಹೀಗೆ ಬಹುಮುಖಿ ಅಧ್ಯಯನ, ಬಹುಮುಖಿ ಬರೆವಣಿಗೆ ಮಾಸ್ತರರದು. ಗಾಂಧೀಯುಗದ ವ್ಯಕ್ತಿಗಳ ಬದುಕು -ಬರೆಹವೇ ಅಂತಹದು. ಆ ಕಾಲಧರ್ಮಕ್ಕನುಗುಣವಾಗಿ ಬೆಳೆದ ಮಾಸ್ತರರು ಅಂದಿನ ಕಾಲದ ಪತ್ರಿಕೆಗಳಲ್ಲಿ ಲೇಖನ ಪ್ರಕಟಿಸುತ್ತಿದ್ದರು. ಹೀಗಿದ್ದೂ ಅವರ ಬರೆವಣಿಗೆಯ ಹಲವು ಭಾಗ ಅಪ್ರಕಟಿತ ಸ್ಥಿತಿಯಲ್ಲಿ ಉಳಿಯಿತು.

ಇನ್ನೂ ಕೆಲವು ಭಾಗ ಕಳೆದು ಹೋಯಿತು. ಹೀಗೆಯೇ ಬಿಟ್ಟರೆ ಉಳಿದಿರುವ ಸಾಹಿತ್ಯವೂ ಕೈತಪ್ಪಿಹೋಗಬಹುದೆಂಬ ಭಯದಿಂದ ಲಭ್ಯವಿದ್ದ ಪತ್ರಿಕೆ, ಹಸ್ತಪ್ರತಿಗಳಿಂದ ಪೂರ್ಣ ಲೇಖನಗಳನ್ನು ಸಂಗ್ರಹಿಸಿ, ಇಲ್ಲಿ ಪ್ರಕಟಿಸುತ್ತಿದ್ದೇವೆ. ಇವುಗಳನ್ನು ಪ್ರಕಟಿತ, ಅಪ್ರಕಟಿತ, ಪ್ರಕಟಿತಗಳಲ್ಲಿಯೇ ಶಿವಾನುಭವ, ಜಯಕರ್ನಾಟಕ ಪತ್ರಿಕೆಗಳಲ್ಲಿ ಪ್ರಕಟಿತವೆಂದು ವರ್ಗೀಕರಿಸಿದ್ದೇವೆ. ಅಪೂರ್ಣ ಲೇಖನಗಳನ್ನೂ ಗಮನಿಸಿದರೆ ಮಾಸ್ತರರ ಒಟ್ಟು ಸಾಹಿತ್ಯ ಹೀಗೆ ಬಿಚ್ಚಿ ನಿಲ್ಲುತ್ತದೆ.

## ಪ್ರಕಟಿತ ಸಾಹಿತ್ಯ

| | ಶಿವಾನುಭವ | ಸಂಪುಟ - ಸಂಚಿಕೆ |
|---|---|---|
| ೧. | ನಿನ್ನನ್ನು ನೀನು ಅರಿ | ೫-೫ |
| ೨. | ಉಪನಿಷತ್ತುಗಳು | ೭-೪ |
| ೩. | ಬ್ರಹ್ಮಸೂತ್ರಗಳು | ೭-೩ |
| ೪. | ಯೋಗ | ೪-೨ |
| ೫. | ಜ್ಞಾನಯೋಗ | ೩-೧೨ |
| ೬. | ಹಠಯೋಗ | ೪-೯ |
| ೭. | ಕರ್ಮಯೋಗ | ೫-೧೧,೧೨ |
| ೮. | ರಾಜಯೋಗ ಮತ್ತು ಅದರ ಎಂಟು ಅಂಗಗಳು | ೫-೯,೧೦ |
| ೯. | ಭಕ್ತಿಯೋಗದಿಂದ ಮೋಕ್ಷಸಾಧನೆ | ೩-೧೧ |
| ೧೦. | ಲೋಕಗಳ ವಿಚಾರ | ೨೧-೧೧,೧೨. ೨೨-೧ |
| | **ಜಯಕರ್ನಾಟಕ** | **ಸಂಪುಟ-ಸಂಚಿಕೆ** |
| ೧೧. | ಬ್ರಹ್ಮಸೂತ್ರಗಳು | ೫-೬ |
| ೧೨. | ರುದ್ರನ ವೈದಿಕ ಸ್ವರೂಪ | ೨೯-೪ |
| ೧೩. | ಬೌದ್ಧರು ಹಿಂದೂಗಳಲ್ಲವೋ? | ೨-೧೧ |
| ೧೪. | ಬೌದ್ಧಧರ್ಮದಲ್ಲಿ ಸೃಷ್ಟಿಯ ಉತ್ಪತ್ತಿ | ೩-೫, ೬ |
| ೧೫. | ಬೌದ್ಧ ಸಾಹಿತ್ಯ | ೪-೬, ೮ |

**ಅಪ್ರಕಟಿತ ಸಾಹಿತ್ಯ**

೧೬. ಶಿವಲಿಂಗ ರಹಸ್ಯ

೧೭. ಶ್ರೀಕಂಠನ ವಿಶಿಷ್ಟ ಶಿವಾದ್ವೈತವಾದ

೧೮. ಶ್ರೀಪತಿಯ ವಿಶೇಷಾದ್ವೈತವಾದ

೧೯. ನಾಥಪಂಥ

೨೦. ನಾಥ ಸಂಪ್ರದಾಯ

೨೧. ನಾಥ ಯೋಗ

೨೨. ಯೌಗಿಕ ಪರಿಭಾಷಾ

೨೩. ನಾಥಯೋಗಿ ಸಂಪ್ರದಾಯ

೨೪. ನಾಥ ಸಂಪ್ರದಾಯದಲ್ಲಿ ಮಹಾಶ್ರಿಸಿದ್ಧ ಮತ್ಸೇಂದ್ರನಾಥಜೀ

**ಅಲಭ್ಯ ಲೇಖನ**

ಶಿವೋಪಾಸನೆಯ ಪ್ರಾಚೀನತೆ ಜಯಕರ್ನಾಟಕ ೨೯-೨

**ಅಪೂರ್ಣ ಲೇಖನಗಳು**

೧. ಪರಲೋಕವಿದ್ಯೆ

೨. ಪರಲೋಕವಿದ್ಯೆಯ ಸ್ವರೂಪ ಮತ್ತು ಸಾಧನೆ

೩. ನಾಥಸಂಪ್ರದಾಯದಲ್ಲಿ ಶಕ್ತಿತತ್ವ

೪. ಶಿವಾದ್ವೈತವಾದ

೫. ಚೀನದೇಶದ ಜೆನ್‌ಧರ್ಮ

೬. ಚೀನದೇಶದ ತಾವೋಧರ್ಮ

೭. ಋಗ್ವೇದೋಕ್ತ ಆರ್ಯ ನಿವಾಸದ ಭೌಗೋಲಿಕ ವಿವರಣೆ

೮. ವ್ರಜರ ಕೃಷ್ಣನು ಯಾವನು? ಮತ್ತು ಎಂದು ಇದ್ದನು?

೯. ಭಾರತೀಯ ಸಂಗೀತದಲ್ಲಿ ಮುಸಲ್ಮಾನ ಸಾಧಕರು

೧೦. ವೈಭವಶಾಲಿಯಾದ ಭರತಖಂಡ

೧೧. ಬಂಗಾಲಿಭಾಷೆಯ ವ್ಯಾಕರಣ

೧೨. ರವೀಂದ್ರನಾಥ ಟ್ಯಾಗೋರ್ ಅವರ ಜೀವನ ಚರಿತ್ರೆ

೧೩. ರವಿಂದ್ರನಾಥ ಟ್ಯಾಗೋರ್ ಅವರ ಕಾವ್ಯತತ್ವ

೧೪. ಆಚಾರ್ಯ ಪ್ರಫುಲ್ಲಚಂದ್ರ : ಜೀವನ ಚರಿತ್ರೆ

೧೫. ಭಜನೆಗಳ ಸಂಗ್ರಹ

೧೬. ಜನಪದ ಸಾಹಿತ್ಯ ಸಂಗ್ರಹ

ಇಲ್ಲಿ ಅಲಭ್ಯ, ಅಪೂರ್ಣ ಲೇಖನಗಳನ್ನು ಹೊರತುಪಡಿಸಿ, ಲಭ್ಯ ಪ್ರಕಟಿತ ಮತ್ತು ಅಪ್ರಕಟಿತ ೨೪ ಲೇಖನಗಳನ್ನು ಸಂಗ್ರಹಿಸಿ ಪ್ರಕಟಿಸುತ್ತಿದ್ದೇವೆ. ಶಿವಾನುಭವ ಪತ್ರಿಕೆಯ ಎಲ್ಲ ಲೇಖನಗಳೂ ನಮಗೆ ಸಿಕ್ಕವು. ಜಯಕರ್ನಾಟಕ ಪತ್ರಿಕೆಯಲ್ಲಿ ಪ್ರಕಟವಾದ "ಶಿವೋಪಾಸನೆಯ ಪ್ರಾಚೀನತೆ" (೨೯-೨) ಲೇಖನವನ್ನು ಹೊರತುಪಡಿಸಿ ಮಿಕ್ಕ ಎಲ್ಲ ಲೇಖನಗಳೂ ಲಭ್ಯವಾದವು. ಮಾಸ್ತರರ ಲೇಖನಗಳನ್ನೊಳಗೊಂಡ 'ಶರಣಸಂದೇಶ' ಪತ್ರಿಕೆಯ ಒಂದೂ ಸಂಚಿಕೆ ನಮಗೆ ಸಿಗಲಿಲ್ಲ. ಒಟ್ಟಾರೆ, ಈ ಸಂಚಿಕೆಗಳ ಶೋಧ ನಮಗೆ ಒಂದು ಸಾಹಸವಾಗಿ ಪರಿಣಮಿಸಿತು. ಅಪ್ರಕಟಿತ ಪೂರ್ಣ ಮತ್ತು ಅಪೂರ್ಣ ಲೇಖನಗಳನ್ನು ನಾವು ಶ್ರೀ ಮಡಿವಾಳಪ್ಪ ಮಾಸ್ತರರ ಮಕ್ಕಳಾದ ಪ್ರೊ. ರವೀಂದ್ರನಾಥ ಸಾಸನೂರ ಅವರಿಂದ ಪಡೆದುಕೊಂಡು, ಇವುಗಳಲ್ಲಿ ಅಪೂರ್ಣ ಲೇಖನಗಳನ್ನು ಕೈಬಿಟ್ಟು, ಪೂರ್ಣಲೇಖನಗಳನ್ನು ಮಾತ್ರ ಪ್ರಕಟಿಸಿದ್ದೇವೆ.

ಮಡಿವಾಳಪ್ಪನವರು ಗಾಂಧಿಯುಗದ ವ್ಯಕ್ತಿಗಳು. ಆ ಯುಗದ ಮೌಲ್ಯಗಳನ್ನು ತ್ರಿಕರಣ ಪೂರ್ವಕ ಬಾಳಿದ ಇವರು, ಹೆಜ್ಜೆ ಇಟ್ಟಲ್ಲೆಲ್ಲ ಹೆಸರು ಮಾಡಿದರು. ರಾಷ್ಟ್ರೀಯ ಪ್ರಜ್ಞೆ, ಸಾಮಾಜಿಕ ಪ್ರಜ್ಞೆಗಳು ಜಾಗ್ರತವಾಗಿದ್ದ ಕಾಲವದು. ಈ ಎರಡೂ ನೆಲೆಗಳಲ್ಲಿ ಶ್ರಮಿಸಿದ ಶ್ರೇಯಸ್ಸು ಮಾಸ್ತರದಾಗಿದೆ. ಶಿಕ್ಷಕರಾಗಿದ್ದ ಅವರು ಸರಕಾರದ ಭೀತಿಯನ್ನು ಲೆಕ್ಕಿಸದೆ ರಾಷ್ಟ್ರಪ್ರೀತಿಯನ್ನು ಮೆರೆದರು. ಗ್ರಾಮೀಣ ಜನತೆಯಲ್ಲಿ, ವಿದ್ಯಾರ್ಥಿಗಳಲ್ಲಿ ಸ್ವಾತಂತ್ರ್ಯ ಚಳುವಳಿಯ ತಿಳುವಳಿಕೆಯನ್ನು ಮೂಡಿಸಿದರು.

'ಶಿಕ್ಷಣವೇ ಶಕ್ತಿ'ಯೆಂಬುದನ್ನು ಅರ್ಥಮಾಡಿಕೊಂಡಿದ್ದ ಅವರು ಕೃಷಿಮೂಲ ತಮ್ಮ ಕುಟುಂಬದ ಸದಸ್ಯರು ರಾಜ್ಯಮಟ್ಟದ ವಿದ್ವಾಂಸರಾಗಿ ಬೆಳೆಯುವಂತೆ ಶ್ರಮಿಸಿದುದು ದೊಡ್ಡ ಸಾಧನೆಯೆಂದೇ ಹೇಳಬೇಕು. ಮುಂದುವರಿದು ತಮ್ಮ ಪರಿಸರದ ಜನರಲ್ಲಿಯೂ ಶಿಕ್ಷಣ ಪ್ರಜ್ಞೆ ಜಾಗ್ರತಗೊಳಿಸಿ, ಅವರ ಅಭಿವೃದ್ಧಿಗೂ ನೆರವಾದರು.

ರಾಷ್ಟ್ರಪ್ರಜ್ಞೆ, ಶಿಕ್ಷಣ ಪ್ರಸಾರಗಳಲ್ಲದೆ ಮಡಿವಾಳಪ್ಪ ಮಾಸ್ತರರ ವ್ಯಕ್ತಿತ್ವದ ಇನ್ನೊಂದು ಆಯಾಮ ಸಾಹಿತ್ಯಪ್ರೀತಿ. ಈ ಧೋರಣೆ ಕಾರಣವಾಗಿ ಅವರು ಬಹುಭಾಷಾ ವಿದ್ವಾಂಸರಾಗಿ ಬೆಳೆದರು. ಆ ಭಾಷೆಗಳ ಸಾಹಿತ್ಯವನ್ನು ಅಭ್ಯಸಿಸಿ, ಹಳ್ಳಿಯ ಜನರಲ್ಲಿ ಸಾಹಿತ್ಯದ ಬಗೆಗೆ ಅಭಿರುಚಿ ಹುಟ್ಟಿಸಿದರು.

ಹೀಗೆ ರಾಷ್ಟ್ರೀಯತೆ, ಶಿಕ್ಷಣ, ಸಾಹಿತ್ಯಕ್ಷೇತ್ರಗಳಲ್ಲಿ ಬಿಚ್ಚಿಕೊಂಡ ಇವರ ಕೇಂದ್ರಪ್ರಜ್ಞೆ ಆಧ್ಯಾತ್ಮ. ಇದು ಆರೂಢ ತತ್ವಜ್ಞಾನದಷ್ಟು ಪ್ರಾಚೀನ, ಅರವಿಂದ ತತ್ವಜ್ಞಾನದಷ್ಟು ಆಧುನಿಕ. ಈ ವ್ಯಾಪ್ತಿಯಲ್ಲಿ ಬರುವ ನಾಥ, ವೈದಿಕ, ಬೌದ್ಧ, ಶೈವ ಮೊದಲಾದ ಸಿದ್ಧಾಂತಗಳು ಅವರಿಗೆ ರಕ್ತಗತವಾಗಿದ್ದವು. ಸಾಮಾನ್ಯವಾಗಿ ಎಲ್ಲರಂತೆ ಸುಪ್ರಸಿದ್ಧ ವೈದಿಕ, ಶೈವ ತತ್ವಜ್ಞಾನಗಳಿಗೆ ನಿಂತುಬಿಡದೆ. ಮುಂದುವರಿದು ಬೌದ್ಧ-ನಾಥ ಪಂಥಗಳನ್ನು, ಇನ್ನೂ ಮುಂದುವರಿದು ಚೀನದೇಶದ ತಾವೋ, ಝೆನ್ ಧರ್ಮಗಳನ್ನೂ ಅಭ್ಯಸಿಸಿದ್ದರು. ಆದರೆ ಹಸ್ತಪ್ರತಿಗಳ ತ್ರುಟಿತತೆ ಕಾರಣವಾಗಿ ಚೀನೀ ಧರ್ಮಗಳನ್ನು ಕುರಿತ ಲೇಖನಗಳನ್ನು ಪ್ರಕಟಿಸಲು ನಮಗೆ ಸಾಧ್ಯವಾಗಲಿಲ್ಲ. ಅದೇನೇ ಇರಲಿ, ಆ ಕಾಲದಲ್ಲಿ ನಾಥಪಂಥದ ಬಗ್ಗೆ ಅಭ್ಯಸಿಸಿ ಅನೇಕ ಲೇಖನ ಬರೆದ ಉತ್ತರ ಕರ್ನಾಟಕದ ಏಕೈಕ ಕನ್ನಡಿಗ ಮಡಿವಾಳಪ್ಪ ಮಾಸ್ತರರೆಂಬುದು ಗಮನಾರ್ಹವೆನಿಸುತ್ತದೆ. ರವೀಂದ್ರನಾಥ ಟ್ಯಾಗೋರ್, ಆಚಾರ್ಯ ಪ್ರಫುಲ್ಲಚಂದ್ರರ ಚರಿತ್ರೆ-ಸಾಹಿತ್ಯಗಳ ಅಭ್ಯಾಸ ಅವರ ವ್ಯಾಸಂಗದ ವಿಸ್ತಾರಕ್ಕೆ ನಿದರ್ಶನವೆನಿಸಿದೆ.

ಈ ಲೇಖನಗಳಲ್ಲಿ ಬಹಳಷ್ಟು ಅನುವಾದಗಳಾಗಿವೆ. ಮರಾಠಿ, ಬೆಂಗಾಲಿ, ಹಿಂದಿ ಭಾಷೆಗಳಿಂದ ಇವುಗಳನ್ನು ಅನುವಾದಿಸಲಾಗಿದ್ದು, ಕೆಲವು ಲೇಖನಗಳಿಗೆ ಮಾತ್ರ ಹಸ್ತಪ್ರತಿಯಲ್ಲಿ ಮೂಲಗಳನ್ನು ಸೂಚಿಸಲಾಗಿದೆ. ನಾವು ಲಭ್ಯ ಸ್ಥಿತಿಯಲ್ಲಿಯೇ ಅವುಗಳನ್ನು ಇಲ್ಲಿ ಸಂಪಾದಿಸಿದ್ದೇವೆ.

ಹೀಗೆ ಅನುವಾದಗಳಾಗಿದ್ದರೂ ಈ ಲೇಖನಗಳು ಸ್ವತಂತ್ರವೆಂಬಂತೆ ಓದಿಸಿಕೊಳ್ಳುತ್ತವೆ. ಲಲಿತಗದ್ಯ, ಆಗಾಗ ಮಿಂಚು ಅಪೂರ್ವ ಪದಪ್ರಯೋಗಗಳಿಂದಾಗಿ ಇವು ತುಂಬ ಆಕರ್ಷಕವೆನಿಸಿವೆ. ಒಬ್ಬ ಕನ್ನಡ ಶಾಲೆಯ ಮಾಸ್ತರರ ಬರೆವಣಿಗೆಯೆಂದು ನಂಬಲು ಬಾರದಂಥ ಉತ್ಕೃಷ್ಟ ಶೈಲಿ ಇಲ್ಲಿ ಎದ್ದು ಕಾಣುತ್ತದೆ.

ಸಾಸನೂರ ಮನೆತನದಲ್ಲಿ ಮೂರು ಜನ ಸುಪ್ರಸಿದ್ಧ ಕನ್ನಡ ಪ್ರಾಧ್ಯಾಪಕರಾಗಿದ್ದರೂ, ಅವರು ಸರ್ವಶ್ರೇಷ್ಠ ಬೋಧಕರಾಗಿ ಬೆಳಗಿದರೇ ಹೊರತು, ಬರೆವಣಿಗೆ ಮಾಡಲಿಲ್ಲ. ಆದರೆ ಪ್ರಾಥಮಿಕ ಶಾಲೆಯ ಮಾಸ್ತರರಾಗಿದ್ದೂ, ಮೂರು ಜನ ತಮ್ಮಂದಿರನ್ನು ಬೆಳೆಸುವದರಲ್ಲಿ ಸಮಯ ವ್ಯಯಿಸಿಯೂ ಬಿಡುವು ಮಾಡಿಕೊಂಡು ಈ ಪ್ರಮಾಣದಲ್ಲಿ ಮಾಡಿದ ಸಾಹಿತ್ಯಕೃಷಿ, ಮಡಿವಾಳಪ್ಪ ಮಾಸ್ತರರ ಸಾಧನೆಯ ದ್ಯೋತಕವೆನಿಸಿದೆ.

ಸಾಸನೂರ ಕುಟುಂಬದ ಪ್ರೊ. ಬಿ.ಟಿ. ಸಾಸನೂರ ಅವರನ್ನು ಕುರಿತು ನನ್ನ ಸಂಪಾದಕತ್ವದಲ್ಲಿ 'ವಜ್ರ ಕುಸುಮ' ಹೆಸರಿನ ಅಭಿನಂದನ ಗ್ರಂಥ ೨೦೦೩ರಲ್ಲಿ ಪ್ರಕಟವಾಯಿತು. ನನ್ನ ಮಾರ್ಗದರ್ಶನದಲ್ಲಿ ಶ್ರೀಮತಿ ಗಾಯತ್ರಿ ಹಿರೇಮಠ ಅವರು ಪ್ರೊ. ಏ.ಟಿ. ಸಾಸನೂರ ಅವರನ್ನು ಕುರಿತು ಸಿದ್ಧಪಡಿಸಿದ್ದ ಎಂ.ಫಿಲ್. ಪ್ರಬಂಧ ೧೯೯೮ರಲ್ಲಿ ಬೆಳಕು ಕಂಡಿತು. ಡಾ. ಎಚ್.ಟಿ. ಸಾಸನೂರ ಅವರನ್ನು ಕುರಿತು ಮಿತ್ರರಾದ ಪ್ರೊ. ಬಿ.ಬಿ. ನಾಡಗೌಡ ಅವರ ಪ್ರಧಾನ ಸಂಪಾದಕತ್ವದಲ್ಲಿ 'ಸಾಸನೂರ ಸಿರಿ' ಹೆಸರಿನ ಅಭಿನಂದನ ಗ್ರಂಥ ೧೯೯೮ರಲ್ಲಿ ಪ್ರಕಟವಾಯಿತು. ಇವರೆಲ್ಲರನ್ನು ರೂಪಿಸಿದ ಹಿರಿಯ ಸೋದರರರನ್ನು ಕುರಿತ "ಮಡಿವಾಳಪ್ಪ ಸಾಸನೂರ ಬರೆಹ-

ಬದುಕು" ಹೆಸರಿನ ಗ್ರಂಥ ಈಗ ಹೊರಬರುತ್ತಲಿದೆ. ಇದರಿಂದಾಗಿ ವಿಜಾಪುರ ಪರಿಸರಕ್ಕೆ ಸಾಂಸ್ಕೃತಿಕ ಘನತೆಯನ್ನು ತಂದುಕೊಟ್ಟ ಈ ಕುಟುಂಬದ ನಾಲ್ಕೂ ಜನ ಸೋದರರನ್ನು ಸೂಕ್ತ ರೀತಿಯಲ್ಲಿ ಗೌರವಿಸಿದ ತೃಪ್ತಿ ನಮ್ಮದಾಗಿದೆ.

ಈ ಕಾರ್ಯದಲ್ಲಿ ನಮಗೆ ತುಂಬ ನೆರವಾದವರು ಮಡಿವಾಳಪ್ಪ ಮಾಸ್ತರರ ಪುತ್ರ ಪ್ರೊ. ರವೀಂದ್ರನಾಥ ಸಾಸನೂರ. ತಂದೆಯವರನ್ನು ಕುರಿತು ಒಂದು ಪೂರ್ಣಪ್ರಮಾಣದ ಲೇಖನವನ್ನಲ್ಲದೆ, ತಮ್ಮ ವಶದಲ್ಲಿದ್ದ ಅಪ್ರಕಟಿತ ಹಸ್ತಪ್ರತಿಗಳನ್ನೂ ಇವರು ಒದಗಿಸಿದರು. ಪ್ರಕಟಿತ ಲೇಖನಗಳನ್ನು ಸಂಗ್ರಹಿಸುವಲ್ಲಿ ಡಾ. ಹನುಮಂತ ಮೇಲಿನಮನಿ ಅವರು ನೀಡಿದ ನೆರವು ವಿಶೇಷವಾದುದು. ಜಯಕರ್ನಾಟಕ ಸಂಚಿಕೆಯ ಎರಡು ಲೇಖನಗಳ ಶೋಧದಲ್ಲಿ ಸೋತುಹೋಗಿದ್ದ ನಮಗೆ ಲೇಖನವೊಂದನ್ನು ಶೋಧಿಸಿ ಕಳಿಸಿದವರು, ಬೆಂಗಳೂರಿನ 'ಪುಸ್ತಕ ಮನೆ'ಯ ಮಿತ್ರರಾದ ಶ್ರೀ ಹರಿಹರಪ್ರಿಯ. ಇವರೆಲ್ಲರಿಗೂ ಕೃತಜ್ಞತೆಗಳು.

ಈ ಯೋಜನೆಯನ್ನು ನನಗೆ ವಹಿಸಿಕೊಟ್ಟ ಮಿತ್ರರಾದ ಪ್ರೊ. ಬಿ.ಬಿ. ನಾಡಗೌಡ, ಶ್ರೀ ಮಹಾಂತ ಗುಲಗಂಜಿ, ಶ್ರೀ ಸೋಮಶೇಖರ ಸುಂಕದ ಅವರಿಗೂ, ಸಾಸನೂರ ಕುಟುಂಬದ ಅಶೋಕ, ಅಜಿತ, ಮೋಹನ ಅವರಿಗೂ ಧನ್ಯವಾದಗಳು, ಬೆರಳಚ್ಚು ಪೂರೈಸಿದ ಶ್ರೀ ದೇವರಾಜ ನಾಡಿಗ, ಮುದ್ರಿಸಿದ ಶ್ರೀ ರವೀಂದ್ರ ಆಕಳವಾಡಿ ಅವರಿಗೆ ನೆನೆಕೆಗಳು.

❖❖

*

# ಪರಿವಿಡಿ

**ಅನುಬಂಧ**



❖❖

# ಶಿವಾನುಭವ

೧

# ನಿನ್ನನ್ನು ನೀನು ಅರಿ

ಶಿವಾನುಭವ ೫-೫

ಸತ್ಯವಾದ ಧರ್ಮವೆಂಬುದು ಅನುಭವಾತ್ಮಕವಾಗಿದೆ. ಅನುಭವವೇ ಅದರ ಅಡಿಗಲ್ಲು ಹೊರತು, ಬರಿ ಮಾತುಗಳಾಗಲಿ ಕಲ್ಪನೆಗಳಾಗಲಿ ಅಲ್ಲ. ಯಾಕೆಂದರೆ ಮಾತುಗಳ ಅಥವಾ ಸಿದ್ಧಾಂತಗಳ ಕೊನೆಯೇ ಧರ್ಮದ ಮೊದಲು. ಸ್ವಭಾವವನ್ನು ಮಾರ್ಪಡಿಸಿಕೊಂಡು ಆತ್ಮನ ದೈವಿಕ ಸ್ವರೂಪವನ್ನು ಬೆಳಕಿಗೆ ತಂದುಕೊಡುವದೂ, ಅಧ್ಯಾತ್ಮಿಕ ಕ್ಷೇತ್ರದಲ್ಲಿನ ಇರುವಿಕೆಯನ್ನು ನಮ್ಮ ಅಳವಿನಲ್ಲಿ ತಂದುಕೊಡುವದೂ ಸಾಧ್ಯವಾಗಿದೆ. ಆತ್ಯಂತಿಕ ಸತ್ಯದ ಅರಿವನ್ನು ಮಾಡಿಕೊಟ್ಟು ನಮ್ಮ ಪ್ರತಿದಿನದ ಕೆಲಸಗಳಲ್ಲಿ ದೈವಿಕತೆಯನ್ನು ತೋರಿಸುವದು, ಅದರ ಗುರಿಯಾಗಿದೆ.

ಅಧ್ಯಾತ್ಮಿಕತೆಗೆ ಧರ್ಮಶಾಸ್ತ್ರಗಳನ್ನೋದುವುದಾಗಲಿ, ವಾದವಿವಾದವಾಗಲಿ ಉಪಯೋಗದ್ದಲ್ಲ. ಅದಕ್ಕೆ ಬೇಕಾದದ್ದು ನಿರ್ವಿಕಾರ ಸತ್ಯದ ಅರಿವು. ಹಿಂದುಸ್ತಾನದಲ್ಲಿ ನಾವು ಯಾವನೊಬ್ಬನಿಗೆ ಧಾರ್ಮಿಕನೆಂದು ಕರೆಯುವದು, ಅವನು ಕೆಲವು ಪುಸ್ತಕಗಳನ್ನು ಬರೆದಿರುವನೆಂದಾಗಲಿ ಅಥವಾ ಒಳ್ಳೇ ಮಾತುಗಾರನಿರುವನೆಂದಾಗಲಿ ಅಲ್ಲ. ಆದರೆ ಅವನು ದೈವಿಕಶಕ್ತಿಗಳನ್ನು ತನ್ನ ಮಾತುಗಳಲ್ಲಿಯೂ, ಮಾಡುವಿಕೆಯಲ್ಲಿಯೂ ಹೊರಗೆಡಹುತ್ತಾನೆ. ತೀರ ನಿರಕ್ಷರಕುಕ್ಷಿಯಾದವನೊಬ್ಬನು ಶಾಲೆ ಅಥವಾ ವಿಶ್ವವಿದ್ಯಾಲಯಗಳಿಗೆ ಹೋಗದೆ, ಯಾವುದೊಂದು ಧರ್ಮಶಾಸ್ತ್ರವನ್ನು ಓದದೆ, ಆಧ್ಯಾತ್ಮಿಕ ಪರಿಪೂರ್ಣತೆಯ ಕಡೆಯ ಮೆಟ್ಟಿಲನ್ನು ಮುಟ್ಟಬಲ್ಲನು. ಅದಾಗುವ ಬಗೆಯೆಂದರೆ, ತನ್ನ ಸ್ವರೂಪವನ್ನೂ ತನಗೂ ವಿಶ್ವಕ್ಕೂ ಇರುವ ಸಂಬಂಧವನ್ನೂ ಅರಿತುಕೊಂಡು, ಪಾಶವೀವೃತ್ತಿಯನ್ನು ಜಯಿಸುವದು. ಎಂದರೆ ತನ್ನಲ್ಲಿಯೇ ಇದ್ದ ಸಚ್ಚಿದಾನಂದರೂಪವನ್ನು ತಿಳಿಯುವದು. ಎಲ್ಲ ಧರ್ಮಗ್ರಂಥಗಳನ್ನೂ, ತತ್ವದರ್ಶನಗಳನ್ನೂ, ಶಾಸ್ತ್ರಗಳನ್ನೂ ಕಲಿತವನು ಮೀರಿದ ಪಂಡಿತನೆಂದು ಜನರಲ್ಲಿ ಮೆರೆಯಬಹುದು. ಆದರೂ ಆ ಆತ್ಯಂತಿಕ ಸತ್ಯವನ್ನು ತಿಳಿದು, ಅದರೊಡನೆ ಒಂದಾಗಿ, ಎಲ್ಲೆಲ್ಲಿಯೂ ಈಶ್ವರನನ್ನೇ ಕಾಣುವವನಾಗಿ, ಈ ಪ್ರಪಂಚದಲ್ಲಿ ಆ ದೇವನ ಪ್ರತಿರೂಪವೆಂದೇ ಇದ್ದುಬಿಡುವ ನಿರಕ್ಷರಕುಕ್ಷಿಗಿಂತ ಅವನು ಮೇಲು ಹರಿಯಲಾರನು.

ಇದಕ್ಕೆ ಉತ್ತಮ ಉದಾಹರಣೆ ಎಂದರೆ ರಾಮಕೃಷ್ಣಪರಮಹಂಸ. ಅವನೆಂದಿಗೂ ಸಾಲೆಗೆ ಹೋಗುತ್ತಿರಲಿಲ್ಲ. ಎಂದೂ ಧರ್ಮಗ್ರಂಥಗಳನ್ನಾಗಲಿ, ದರ್ಶನಗಳನ್ನಾಗಲಿ, ಭೌತಿಕಶಾಸ್ತ್ರಗಳನ್ನಾಗಲಿ ಅಭ್ಯಸಿಸಲಿಲ್ಲ. ಆದರೂ ಆತ್ಮಿಕಬಲದಿಂದ ದೇವರನ್ನು ಕಾಣಿಸಿಕೊಂಡು ಪೂರ್ಣತೆ ಪಡೆದಿದ್ದನು. ಅವನು

ತತ್ವಜ್ಞಾನದ ಅಥವಾ ವಿಜ್ಞಾನದ ಅತ್ಯಂತ ಗಹನವಾದ ಸಿದ್ಧಾಂತಗಳನ್ನು ಕೂಡ ಚಿಕ್ಕಮಕ್ಕಳಿಗೆ ತಿಳಿಯುವ ತಿಳಿವಿನಿಂದ ಹೇಳುತ್ತಿದ್ದನು. ಬಹಳ ತೊಡಕುಳ್ಳ ಪ್ರಶ್ನೆಗಳಿಗೂ ಸಹ ಕೇಳುವವರ ಸಂಶಯಗಳೆಲ್ಲವೂ ದೂರವಾಗುವ ಹಾಗೆ ಉತ್ತಮರೀತಿಯಿಂದ ಉತ್ತರಿಸುವ ಬಲವುಳ್ಳವನಾಗಿದ್ದನು. ಇದೆಲ್ಲವನ್ನೂ ಅವನು ಪುಸ್ತಕಗಳನ್ನೋದದೆ ಹೇಗೆ ಮಾಡಬಲ್ಲವನಾಗಿದ್ದನು? ಅವನು ವಸ್ತುಗಳೆಲ್ಲವುಗಳ ನಿಜರೂಪವನ್ನು ಒಳಗಣ್ಣಿನಿಂದ ನೋಡಬಲ್ಲವನಾಗಿದ್ದನು. ಅವನ ಅಧ್ಯಾತ್ಮಿಕ ಚಕ್ಷುವು ತೆರೆದಿತ್ತು. ಸಾಮಾನ್ಯ ಜನರೆದುರಿನಲ್ಲಿ ಜೋತಾಡುತ್ತ ಬದುಕಿ, ಇಂದ್ರಿಯ ಜ್ಞಾನದಾಚೆಗಿನದನ್ನು ತಿಳಿಯುವುದನ್ನಸಾಧ್ಯವಾಗಿ ಮಾಡುವಂಥ ಅಜ್ಞಾನಪಟದೊಳಗಿಂದ ಅವನ ದೃಷ್ಟಿಯು ಮುಂದೆ ಹರಿಯುತ್ತಿತ್ತು.

ಆತ್ಯಂತಿಕ ಸತ್ಯವನ್ನರಿತ ಆತ್ಮನಲ್ಲಿಯೇ ಇಂಥ ಶಕ್ತಿಗಳು ತಲೆದೋರುವವು. ಆಗ ಒಮ್ಮೆಲೆ ಸ್ವತಂತ್ರವಾಗಿ ಹೆಚ್ಚಿನ ಸತ್ಯಗಳನ್ನರಿಯುವಂಥ ಶಕ್ತಿಯೊಂದು (ಇಂದ್ರಿಯ ಶಕ್ತಿಗಳಿಗೆ ಆಧೀನವಾಗದ್ದು) ತಲೆದೋರುವದು. ಈ ಜ್ಞಾನಚಕ್ಷುವು ಪ್ರತಿಯೊಬ್ಬರಿಗೂ ಉಂಟು. ಆದರೆ ಅದು ಲಕ್ಷಕ್ಕೊಬ್ಬನಲ್ಲಿ ತೆರೆದಿರುವದು. ಅವರೇ ಯೋಗಿಗಳು, ಶಿವಯೋಗಿಗಳು. ಬಹುತರ ಜನರಲ್ಲಿ ಅದು ಅಜ್ಞಾನವೆಂಬ ದಪ್ಪನ್ನ ಪರದೆಯಿಂದ ಮುಚ್ಚಲ್ಪಟ್ಟು, ಇನ್ನೂ ಆರಂಭ ಸ್ಥಿತಿಯಲ್ಲಿರುತ್ತದೆ. ಯೋಗಾಭ್ಯಾಸದಿಂದ ಅದು ತೆರೆದೊಡನೆಯೇ ಉಚ್ಚತರವಾದ ಅದೃಶ್ಯಸೃಷ್ಟಿಯ ಹಾಗು ಅಧ್ಯಾತ್ಮಸೃಷ್ಟಿಯಲ್ಲಿನ ಪ್ರತಿಯೊಂದು ಪದಾರ್ಥದ ಅರಿವು ಅವನಿಗಾಗುತ್ತಿದೆ. ಅವನು ಹೇಳಿದ್ದೆಲ್ಲವು ಪ್ರತಿಯೊಂದು ಯುಗದ ಹಾಗು ಪ್ರತಿಯೊಂದು ದೇಶದ ಮಹಾತ್ಮರಾದ ಸತ್ಯದೃಷ್ಟ್ಯಗಳ ಮಾತುಗಳನ್ನು ಹೋಲುತ್ತದೆ. ಅವನು ಪುಸ್ತಕಗಳನ್ನೋದುವದಿಲ್ಲ. ಹಾಗೆ ಮಾಡುವ ಅಗತ್ಯವೂ ಅವನಿಗಿಲ್ಲ. ಯಾಕೆಂದರೆ ಮಾನವೀ ಬುದ್ಧಿಗೆ ನಿಲುಕುವಂತಹದೆಲ್ಲವೂ ಅವನಿಗೆ ಗೊತ್ತಿರುತ್ತದೆ. ಯಾವದೊಂದು ಗ್ರಂಥವನ್ನೋದದೆ ಅದರ ಮಥಿತಾರ್ಥವನ್ನು ತಿಳಿಯಬಲ್ಲನು. ಮಾನವೀ ಮನಸ್ಸು ಶಬ್ದರೂಪವಾಗಿ ಹೇಳುವದೆಲ್ಲವನ್ನೂ ಅವನು ತಿಳಿದಿರುವನು. ವಿಚಾರಗಳಿಗೆ ನಿಲುಕದಂಥದನ್ನು, ಶಬ್ದಗಳಿಂದ ಹೇಳಲಿಕ್ಕೆ ಬಾರದಂಥದನ್ನು ಅವನು ಅರಿತಿರುವನು. ಹ್ಯಾಗೂ ಅವನು ಇಂದ್ರಿಯ ಜ್ಞಾನದ ಎಲ್ಲೆಯೊಳಗೆ ಇಳಿಯಲಾಶಿಸುವುದಿಲ್ಲ. ಹಾಗು ಸಂಬಂಧಿಕ ಸತ್ಯ (Relative reality)ವನ್ನು ಬುದ್ಧಿಬಲದಿಂದ ತಿಳಿಯುವಷ್ಟರಿಂದಲೇ ತೃಪ್ತನಾಗುವುದಿಲ್ಲ. ವಿಶ್ವದ (ದೃಶ್ಯ ಜಗತ್ತು) ಮೊದಲು-ಕೊನೆಯಾದ ಆ ಪೂರ್ಣತತ್ವದ ನಾಡನ್ನು ಸೇರುವದೇ ಅವನ ಹೆಗ್ಗುರಿ. ಈ ರೀತಿ ಸತ್‌ತತ್ವ ಜ್ಞಾನಕ್ಕಾಗಿ ಹೆಣಗಾಡುತ್ತಿರುವ ಅವನು ತನಗಡ್ಡಿಮಾಡುವ ಸಕಲ ದೃಶ್ಯಜಗತ್ತಿನ ಜ್ಞಾನವನ್ನು ತನ್ನ ಆತ್ಮಸ್ವರೂಪಜ್ಞಾನವೆಂಬ ಧ್ಯೇಯದ ಕಡೆಗೆ ಸಾಗುತ್ತಿರುವಾಗ ಮಾಡಿಕೊಳ್ಳುವನು.

ನಮ್ಮ ನಿಜವಾದ ಸ್ವರೂಪನಾದ ಆತ್ಮನು ಸರ್ವಜ್ಞನಿದ್ದಾನೆ. ಅವನು ನಮ್ಮೊಳಗಿನ ಅನಂತಜ್ಞಾನದ ಉಗಮಸ್ಥಾನವಾಗಿದ್ದಾನೆ. ದೇಶಕಾಲ ಪರಿಸ್ಥಿತಿಗಳಿಂದ ಬದ್ಧಿತನಾಗಿದ್ದುದರಿಂದ ನಾವು ನಮ್ಮಲ್ಲಿನ ಶಕ್ತಿಗಳೆಲ್ಲವನ್ನೂ ನಿಜವಾಗಿ ಹೊರಗೆಡವಲಾರೆವು. ಈ ಬಂಧನಗಳನ್ನು ಹೆಚ್ಚು ಹೆಚ್ಚು ಬಿಸುಟಿದಂತೆ ಸರ್ವಜ್ಞತ್ವ ಮತ್ತು ಸರ್ವಶಕ್ತಿತ್ವಗಳೆಂಬ ದೈವೀಗುಣಗಳು ಹೆಚ್ಚು ಹೆಚ್ಚು ತಲೆದೋರುವವು. ಅದಕ್ಕೆ ವಿರುದ್ಧವಾಗಿ ದೃಶ್ಯಜಗತ್ತಿನ ಮೇಲೆಯೇ ನಮ್ಮ ಮನಸ್ಸನ್ನಿಟ್ಟು, ಇಂದ್ರಿಯ ಜ್ಞಾನವನ್ನು ಅವಲಂಬಿಸಿರುವ ಜ್ಞಾನವನ್ನೇ ದೊರಕಿಸುವದರಲ್ಲಿ ಬಲವನ್ನು ವೆಚ್ಚಮಾಡುತ್ತ ಇದ್ದು ಬಿಟ್ಟರೆ, ಈ ದೃಶ್ಯ ಜಗತ್ತಿನ ಜ್ಞಾನದ ಕೊನೆಯನ್ನು ನಾವು ಎಂದಾದರು ಮುಟ್ಟುವೆವೋ? ಎಂದಾದರೂ ಈ ವಿಶ್ವದ ಸತ್ಯಸ್ವರೂಪವನ್ನು ಅರಿಯಲು ಸಮರ್ಥರಾಗುವೆವೋ? ಇಲ್ಲ. ಯಾಕೆಂದರೆ ಇಂದ್ರಿಯಗಳು, ಇಂದ್ರಿಯ ವಿಷಯಗಳ ಪೊಳ್ಳು ಜ್ಞಾನವನ್ನು ದೊರಕಿಸುವ ಆಚೆಗೆ ನಮ್ಮನ್ನೊಯ್ಯುವದಿಲ್ಲ. ಅದೃಶ್ಯ ಜಗತ್ತಿನಲ್ಲಿ ಆಳವಾಗಿ ಹೋಗಬೇಕಾದರೆ ನಾವು ಉಪಕರಣಗಳನ್ನು

ಉಪಯೋಗಿಸುತ್ತೇವೆ. ಅವುಗಳ ಬೆಂಬಲದಿಂದ ಸ್ವಲ್ಪ ದೂರಹೋಗಬಲ್ಲೆವು. ಆದರೆ ಈ ಉಪಕರಣಗಳಿಗೂ ಎಲ್ಲೆಯುಂಟು. ಒಂದು ಬಗೆಯ ಸಾಧನವನ್ನು ಉಪಯೋಗಿಸಿದ ನಂತರ ಆ ಪರಿಣಾಮಗಳಿಂದ ನಮಗೆ ತೃಪ್ತಿಯಾಗದು. ಮತ್ತು ಹೆಚ್ಚು ಹೆಚ್ಚಿನದಕ್ಕಾಗಿ ಶೋಧಿಸಹತ್ತುವೆವು. ಪೂರ್ಣತತ್ವದ ಜ್ಞಾನದ ಹಾದಿಯಲ್ಲಿ ಇಂದ್ರಿಯಶಕ್ತಿಗಳು ಎಷ್ಟು ದುರ್ಬಲವಾಗಿರುತ್ತವೆಯೆಂಬದು ತಿಳಿದು ಹೆಣಗಾಡಹತ್ತುತ್ತೇವೆ. ಕಟ್ಟಕಡೆಗೆ ಎಷ್ಟು ಸೂಕ್ಷ್ಮವಾಗಿದ್ದ ಉಪಕರಣವು ಕೂಡ ಇಂದ್ರಿಯಜ್ಞಾನ ಬುದ್ಧಿ ಹಾಗೂ ವಿಚಾರಗಳಿಗೆ ಮೀರಿದ್ದನ್ನು ತಿಳಿಯುವದಕ್ಕೆ ಸಹಾಯಕಾರಿಯಾಗಲಾರದೆಂದು ತಿಳಿದುಕೊಳ್ಳುವನು.

ಈ ರೀತಿ ನಮ್ಮ ಕಾಲ-ಬಲಗಳನ್ನು ದೃಶ್ಯಜಗತ್ತನ್ನಧ್ಯಯಿಸುವದರಲ್ಲಿಯೇ ಕಳೆದು ಬಿಟ್ಟರೆ, ನಾವು ಯಾವುದೊಂದು ತೃಪ್ತಿಕರವಾದ ಪರಿಣಾಮವನ್ನು ನೋಡಲಾರೆವು. ಅಥವಾ ಪದಾರ್ಥಗಳ ನಿಜರೂಪವನ್ನರಿಯಲಾರೆವು. ಇಂದು ಕೆಲವು ಸಾಧನಗಳ ಸಹಾಯದಿಂದ ದೊರಕಿಸಿದ ಜ್ಞಾನವು ನಾಳೆ ಬೇರೆ ಹೆಚ್ಚಿನ ಸಾಧನಗಳು ದೊರೆತರೆ ಅದೇ ಅಜ್ಞಾನವಾಗುವದು. ಹೋದ ವರುಷ ಸರಿಯಾದದ್ದು ಇಂದು ಆಗಲೇ ಸುಳ್ಳು ಆಗಿದೆ. ಈ ಶತಮಾನದ ಶೋಧನಗಳು ಹೊಸ ಶತಮಾನದ ಹೊಸ ಶೋಧಗಳಿಂದ ಸುಳ್ಳಾಗಿ ಹೋಗುವವು. ಆದ್ದರಿಂದ ಮನುಷ್ಯಜೀವನವು ದೃಶ್ಯಜಗತ್ತಿನಲ್ಲಿಯ ಎಲ್ಲ ಪದಾರ್ಥಗಳ ಸತ್ಯಜ್ಞಾನವನ್ನು ದೊರಕಿಸಲಿಕ್ಕೆ ಯತ್ನಿಸಲು ಕೂಡ ಸಣ್ಣದಾಗಿದೆ. ಜಗತ್ತಿನಲ್ಲಿಯ ವಿವಿಧತೆಯನ್ನೂ, ಜ್ಞಾನಸಂಪಾದನೆಗೆ ಮೊದಲು ತಿಳಿಯಬೇಕಾದ ವಸ್ತುಗಳ ಅಸಂಖ್ಯತೆಯನ್ನೂ ವಿಚಾರಿಸಿದರೆ, ಲಕ್ಷೋಪಲಕ್ಷ ಜೀವನಗಳು ಸಾಲವು. ಯಾವನೊಬ್ಬ ಮನುಷ್ಯನು ಲಕ್ಷೋಪಲಕ್ಷ ದಿನಗಳ ವರೆಗೆ ಬಾಳಿಯೂ ಆ ದೊಡ್ಡ ಕಾಲದಲ್ಲೆಲ್ಲ ತನ್ನ ಇಂದ್ರಿಯಗಳೆಲ್ಲವನ್ನೂ ಅಂಕೆಯಲ್ಲಿಟ್ಟುಕೊಂಡರೂ ಪ್ರಕೃತಿಯನ್ನಭ್ಯಸಿಸುವದರಲ್ಲಿಯೂ ದೃಶ್ಯಜಗತ್ತಿನ ವಸ್ತುಗಳ ಸೂಕ್ಷ್ಮತಮಭೇದಗಳನ್ನು ತಿಳಿಯುವದಕ್ಕಾಗಿಯೇ ಕಾಲ ಕಳೆದರು. ಆ ಕಾಲ ತೀರುವದರಲ್ಲಿ ಆ ಶೋಧವು ಮುಗಿಯುವದೇ? ನಿಜವಾಗಿಯೂ ಇಲ್ಲ. ಅವನಿಗಿನ್ನು ಹೆಚ್ಚು ಕಾಲವೂ, ಸೂಕ್ಷ್ಮತರಗ್ರಹಣಶಕ್ತಿಯೂ, ತೀಕ್ಷ್ಣತರ ಬುದ್ಧಿಯೂ ಬೇಕಾಗುವವು. ಆ ಮೇಲೆ ಅವನು ಅವಿರತ ಶೋಧನೆಯಲ್ಲಿಯೇ ಕಾಲ ಕಳೆದ ನಂತರ ಸರ್. ಐಝಾಕ್‌ನ್ಯೂಟನ್ನನು ಅಂದಂತೆ "ನಾನು ಜ್ಞಾನೋದಧಿಯ ದಂಡೆಯ ಮೇಲಿನ ಹರಳುಗಳನ್ನು ಮಾತ್ರ ಕಲೆ ಹಾಕಿದ್ದೇನೆ"ಂದು ಅನ್ನಬಹುದು. ಇಂಥ ಬುದ್ಧಿಸಾಗರನಾದ ನ್ಯೂಟನ್ನನು ಕೂಡ ಆ ಜ್ಞಾನೋದಧಿಯ ನೀರದಂಡೆಯನ್ನು ಕೂಡ ಮುಟ್ಟಲಾರದೆ ಹೋದರೆ ಸ್ವಲ್ಪ ವರ್ಷಗಳಲ್ಲಿಯೇ ಆ ಸಮುದ್ರವನ್ನು ನಾವು ಹೇಗೆ ದಾಟಬಲ್ಲೆವು? ಸಾವಿರಾರು ಸಂತತಿಗಳು ಹೋಗಿವೆ. ಇನ್ನೂ ಸಾವಿರಾರು ಹೋಗುವವು. ಆದರೂ ವಿಶ್ವದಲ್ಲಿಯ ದೃಶ್ಯಜಗತ್ತಿನ ವಿಷಯವಾದ ಜ್ಞಾನವು ಅಪೂರ್ಣವಾಗಿಯೇ ಉಳಿಯುವದು. ಒಂದೊಂದು ಪರದೆಗಳನ್ನು ತೆಗೆಯುತ್ತ ಹೋದರೂ ಮತ್ತೆಷ್ಟೋ ಉಳಿಯುವವು. ಇದೆಲ್ಲವನ್ನೂ "ಜ್ಞಾನದ ಶಾಖೆಗಳು ಅಸಂಖ್ಯವಾಗಿವೆ. ಆದರೆ ಕಾಲವು ಸ್ವಲ್ಪ. ಹಾದಿಯ ವಿಘ್ನಗಳು ಬಹಳ. ಆದುದರಿಂದ ಜ್ಞಾನಿಗಳಾದವರು ಉಚ್ಚತಮವಾದದ್ದನ್ನು ತಿಳಿಯಲಿಕ್ಕೆ ಹೆಣಗುತ್ತಾರೆ" ಎಂದು ಹೇಳಿದ ಹಿಂದೂದೇಶದ ಜ್ಞಾನಿಗಳೂ ಅರಿತಿದ್ದರು.

ಉಚ್ಚತಮವಾದ ಜ್ಞಾನವಾವುದು ಎಂಬುದೊಂದು ಪ್ರಶ್ನೆಯು ಇಲ್ಲಿ ಬರುವದು. ಈ ಪ್ರಶ್ನೆಯು ಇತಿಹಾಸದಷ್ಟೇ ಪ್ರಾಚೀನವಾಗಿದೆ. ಇದು ಎಲ್ಲ ನಾಡುಗಳ ಹಾಗೂ ಎಲ್ಲ ಯುಗಗಳ ತತ್ವಜ್ಞಾನಿಗಳನ್ನೂ, ವೈಜ್ಞಾನಿಕರನ್ನೂ, ಪಂಡಿತರನ್ನೂ, ಬೆರಗುಮಾಡಿದೆ. ಕೆಲವರು ಅದಕ್ಕೆ ಉತ್ತರವನ್ನು ದೊರಕಿಸಿದ್ದಾರೆ. ಬೇರೆ ಕೆಲವರು ದೊರಕಿಸಿಲ್ಲ. ಡೆಲ್ಫಿಯಲ್ಲಿಯ ಆಕಾಶವಾಣಿಯನ್ನು ಕೇಳಹೋದಾಗ ಸಾಕ್ರೇಟೀಸನು ಇದೇ ಪ್ರಶ್ನವನ್ನೇ ಎತ್ತಿದನು. 'ಎಲ್ಲ ಜ್ಞಾನಗಳಲ್ಲಿ ಯಾವದು ಹೆಚ್ಚಿನದು?' ಅದಕ್ಕುತ್ತರವಾಗಿ 'ನಿನ್ನನ್ನು ತಿಳಿ' ಎಂದು ಶಬ್ದವಾಯಿತು.

ಒಂದು ಉಪನಿಷತ್ತಿನಲ್ಲಿ ಈ ರೀತಿ ಓದುತ್ತೇವೆ. "ಒಬ್ಬ ವಿಚಾರಶೀಲನು ಎಲ್ಲ ತತ್ವಜ್ಞಾನಗಳನ್ನೂ ಆ ಕಾಲಕ್ಕೆ ಗೊತ್ತಿದ್ದ ಎಲ್ಲ ಶಾಸ್ತ್ರಗಳನ್ನೂ ಕಲಿತು, ಒಬ್ಬ ಸತ್ಯದೃಷ್ಟ್ಯುವಿನ ಬಳಿ ಬಂದು ಅಂದನು— ಸ್ವಾಮಿ, ಪುಸ್ತಕಗಳಿಂದ ಅಥವಾ ದೃಶ್ಯಜಗತ್ತಿನ ಅಧ್ಯಯನದಿಂದ ದೊರಕಿಸುವ ಜ್ಞಾನವು ನನಗೆ ಸಾಕಾಗಿದೆ. ಅದು ನನಗೇನು ತೃಪ್ತಿಯನ್ನೇ ಕೊಡುವದಿಲ್ಲ. ಯಾಕೆಂದರೆ ವಿಜ್ಞಾನವು ಅಂತಿಮ ಸತ್ಯವನ್ನು ತೋರಿಸಲಾರದು. ಉಚ್ಚತಮವಾದದನ್ನು ತಿಳಿಯಬೇಕೆಂದು ನನ್ನ ಹಂಬಲ. ಯಾವುದನ್ನು ತಿಳಿಯುವದರಿಂದ ವಿಶ್ವದ ಸತ್ಯತ್ವವನ್ನು ತಿಳಿಯಬಹುದೋ ಅಂತಹ ಜ್ಞಾನವುಂಟೋ?" ಅದಕ್ಕೆ ಆ ಯೋಗಿಯು "ಹೌದು, ಉಂಟು. ಯಾವದನ್ನರಿಯುವುದರಿಂದ ವಿಶ್ವದೊಳಗಣ ಎಲ್ಲ ಪದಾರ್ಥಗಳ ಸತ್ಯಸ್ವರೂಪವು ತಿಳಿಯುವದೋ ಅದೇ ಹೆಚ್ಚಿನ ಜ್ಞಾನವು. ನಿನ್ನನ್ನು ತಿಳಿದುಕೋ. ನಿನ್ನ ಆತ್ಮಸ್ವರೂಪವನ್ನು ನೀನು ತಿಳಿಯಬಲ್ಲೆಯಾದರೆ ವಿಶ್ವದ ನಿಜರೂಪವು ತಿಳಿಯುವದು. ನಿನ್ನ ಸ್ವರೂಪದಲ್ಲಿಯೇ ಎಲ್ಲ ದೃಶ್ಯಜಗತ್ತಿನ ಅನಂತ ಉಗಮವಾದ ಶಾಶ್ವತಸತ್ಯವನ್ನು ದೊರಕಿಸುವಿ. ಇದನ್ನರಿತರೆ ದೇವರನ್ನೂ, ಅವನ ಸೃಷ್ಟಿಯನ್ನೂ ತಿಳಿಯುವಿ. ನೀರಿನ ಒಂದು ಹನಿಯ ರಸಾಯನಿಕ ಗುಣಗಳನ್ನರಿಯುವದರಿಂದ, ಎಲ್ಲೆಲ್ಲಿಯೂ ಕಾಣುವ ನೀರಿನ ಗುಣಗಳನ್ನು ತಿಳಿಯುವಂತೆ, ನಾವು ಯಾರು, ಏನು, ಎಂಬದರ ಸತ್ಯಜ್ಞಾನವನ್ನು ಮಾಡಿಕೊಂಡರೆ ಅಂತಿಮ ಸತ್ಯದ ಜ್ಞಾನವು ನಮಗಾಗುವದು. ಮನುಷ್ಯನೆಂದರೆ ವಿಶ್ವದ ಒಂದು ಸಣ್ಣ ಪ್ರಮಾಣದ ಪ್ರತಿಕೃತಿ. ಬ್ರಹ್ಮಾಂಡದಲ್ಲಿದ್ದದ್ದೇ ಪಿಂಡಾಂಡದಲ್ಲುಂಟು. ಆದ್ದರಿಂದ ಒಬ್ಬನ ಸ್ವಸ್ವರೂಪ ಜ್ಞಾನವೇ ಎಲ್ಲ ಜ್ಞಾನಗಳಲ್ಲಿ ಹೆಚ್ಚಿನದು. ನಮ್ಮ ನಿಜವಾದ ರೂಪವು ದೈವಿಕವೂ, ಈಶ್ವರನೊಡನೆ ಒಂದಾದದ್ದೂ ಇರುತ್ತದೆ. ಮೊದಮೊದಲು ಇದು ಪೊಳ್ಳು ತರ್ಕವೆಂದು ತೋರಬಹುದು. ಆದರೆ ಅಂತಿಮ ಸತ್ಯವನ್ನು ನಾವು ಹೆಚ್ಚು ಹೆಚ್ಚು ಸಮೀಪಿಸಿದಂತೆ, ಅದು ಬರಿ ಊಹೆಯಲ್ಲ, ನಿಜವಾದ ಸ್ಥಿತಿಯೇ. ನಾವು ಈಗ ಅಜ್ಞಾನ ನಿದ್ರೆಯಲ್ಲಿ ಕನಸು ಕಾಣುತ್ತಿದ್ದು ಈ ಅಥವಾ ಆ ಮನುಷ್ಯನೆಂದು ತಿಳಿದುಕೊಳ್ಳಹತ್ತಿದ್ದೇವೆ- ಎಂದು ನಮಗೆ ಹೊಳೆಯುತ್ತದೆ. ಕನಸಿನಲ್ಲಿಯ ಅನುಭವವು ತರುವಾಯ ಬೆಲೆಹೀನವಾಗಿ ತೋರುವಂತೆ, ಈ ಅಜ್ಞಾನನಿದ್ರೆಯಿಂದ ಎಚ್ಚತ್ತ ಮೇಲೆ ನಾವು ಈ ರೀತಿ ಮಹತ್ವ ಕೊಡುವ ದೃಶ್ಯಜಗತ್ತು ಮಹತ್ವದ್ದಲ್ಲವೆಂದು ತಿಳಿಯುತ್ತದೆ. ಎಲ್ಲ ಶಾಸ್ತ್ರಗಳಲ್ಲಿಯ ವಿಧವಿಧವಾದ ಶೋಧನವು ಈ ಆತ್ಮಜ್ಞಾನವನ್ನೇ ಅವಲಂಬಿಸಿರುತ್ತದೆ; ಮತ್ತು ಈ ಆತ್ಮಜ್ಞಾನವೇ ಬಾಹ್ಯಜಗತ್ತಿನ ತಳಹದಿಯು ಎಂದು ನಮಗೆ ಜ್ಞಾನವಾಗುತ್ತದೆ.

ಆದ್ದರಿಂದ, ತನ್ನ ಅಥವಾ ಆತ್ಮನ ಜ್ಞಾನವೇ ಹೆಚ್ಚಿನದು. ಇದೇ ಪ್ರತಿಯೊಬ್ಬನ ಜೀವನದ ಸಾಧ್ಯವಾಗಿರಬೇಕು. ಇಂದ್ರಿಯ ವಿಷಯಗಳನ್ನು ತಿಳಿಯಲಿಕ್ಕೆ ಯತ್ನಿಸುವ ಮೊದಲು ಈ ಆತ್ಮಜ್ಞಾನವನ್ನು ಸಂಪಾದಿಸುವದೇ ನಮ್ಮ ಆದ್ಯಕರ್ತವ್ಯವಾಗಿದೆಯೆಂದು ತಿಳಿಯಬೇಕು. ಅದನ್ನು ದೊರಕಿಸುವ ಬಗೆ ಯಾವದು? ಪುಸ್ತಕಗಳಿಂದಲೂ ಅಲ್ಲ; ಬಾಹ್ಯ ಜಗತ್ತಿನ ಅಭ್ಯಾಸದಿಂದಲೂ ಅಲ್ಲ; ಆದರೆ ನಮ್ಮ ಸ್ವಭಾವವನ್ನೇ ಅಭ್ಯಸಿಸುವುದರಿಂದ ಇದು ಶಕ್ಯವಾಗುತ್ತದೆ.

❖❖

# ೨

# ಉಪನಿಷತ್ತುಗಳು

ಶಿವಾನುಭವ ೭-೪

"ಉಪನಿಷತ್" ಶಬ್ದದ ಅರ್ಥದ ಸಂಬಂಧವಾಗಿ ಪಂಡಿತರಲ್ಲಿ ಮತಭೇದವಿದೆ. ಉಪ-ನಿ-ಸದ್ ಧಾತುವಿನಿಂದ ಉಪನಿಷತ್ ಶಬ್ದವು ಉಂಟಾಗಿದೆ. ಉಪ-ಸಮೀಪದಲ್ಲಿ, ಸದ್-ಉಪವೇಶನ ಮಾಡುವದು. ಅತ ಏವ "ಉಪನಿಷತ್" ಶಬ್ದದ ನಿರುಕ್ತ ವಿಶೇಷವು, ವಿನೀತಭಾವದಿಂದ ಶಿಷ್ಯನು ಗುರುವಿನ ಸಮೀಪದಲ್ಲಿ ವಾಸಮಾಡುವದು ಎಂದು ಇರುವದು.

ಯಾವ ವಿದ್ಯಾಲಾಭಕ್ಕೋಸುಗ ಶಿಷ್ಯನು ಆಚಾರ್ಯನ ಸಮೀಪಸ್ಥನಾಗುತ್ತಿದ್ದನೋ ಅದೇ ವಿದ್ಯೆಯು ಮುಂದೆ "ಉಪನಿಷತ್" ಶಬ್ದದಿಂದ ಪ್ರತಿಪಾದಿತವಾಗಹತ್ತಿತು. ಪಂಡಿತ ಮ್ಯಾಕ್ಸಮುಲರ್‌ರು ಉಪನಿಷತ್ ಶಬ್ದಕ್ಕೆ ಇದೇ ಅರ್ಥವನ್ನು ಗ್ರಹಣಮಾಡಿರುತ್ತಾರೆ.

ಉಪಸನ್ನ ಶಿಷ್ಯನಿಗೆ ಗುರುವು ಮಾಡುತ್ತಿದ್ದ ಉಪದೇಶವು, ಪ್ರಾಚೀನಕಾಲದಲ್ಲಿ ಗೋಪನೀಯ ರಹಸ್ಯವೆಂದು ಪ್ರಯತ್ನಪೂರ್ವಕವಾಗಿ ರಕ್ಷಿತವಾಗುತ್ತಿತ್ತು. ಬರುಬರುತ್ತ ಈ ರಹಸ್ಯೋಪದೇಶ (ಗುಹ್ಯಾ ಆದೇಶಾಃ )ವು 'ಉಪನಿಷತ್' ಎಂಬ ಹೆಸರಿನಿಂದ ಕರೆಯಲ್ಪಡಹತ್ತಿತು. ಪಾಲ ಡ್ಯೂಸನ್‌ನು, ಇದೇ ಅರ್ಥದಲ್ಲಿ ಉಪನಿಷತ್ ಶಬ್ದವನ್ನು ಗ್ರಹಣಮಾಡಿರುವನು.

ಶಂಕರಾಚಾರ್ಯರು 'ಸದ್' ಧಾತುವು ವಿನಾಶ, ಗತಿ ಮತ್ತು ಅವಸಾದನ ಎಂಬ ಅರ್ಥದಲ್ಲಿ ಪ್ರಯುಕ್ತವಾಗಿರುತ್ತದೆಂದು ವ್ಯಾಖ್ಯೆಯನ್ನು ಮಾಡಿ,'ಉಪನಿಷತ್' ಶಬ್ದಕ್ಕೆ ಬೇರೆ ಅರ್ಥವನ್ನು ಮಾಡಿದ್ದಾರೆ. ಯಾವ ವಿದ್ಯೆಯು ತನ್ನ ಸೇವಕರ ಜನ್ಮ-ಮರಣಾದಿ ದುಃಖವನ್ನು ವಿನಷ್ಟ ಮಾಡುತ್ತದೆಯೋ, ಸಂಸಾರದ ಕಾರಣೀಭೂತವಾದ ಅವಿದ್ಯೆಯನ್ನು ಅವಸಾದನ ಮಾಡಿ ಬ್ರಹ್ಮಸಂಪಾದನೆಯನ್ನು ಮಾಡುತ್ತದೆಯೋ ಅದೇ 'ಉಪನಿಷತ್ತು'.[೧]

ಉಪನಿಷತ್ತು, ಬ್ರಹ್ಮ ಅಥವಾ ಪರಮಾತ್ಮನ ಸಂಬಂಧವಾದ ವಿಷಯವನ್ನು ಪ್ರತಿಪಾದಿಸುವದರಿಂದ ಇದಕ್ಕೆ 'ಬ್ರಹ್ಮವಿದ್ಯೆ'[೨]ಯೆಂದು ಮತ್ತೊಂದು ಹೆಸರು.

---

೧. ಕಠ -ತೈತ್ತಿರೀಯ-ಬೃಹದಾರಣ್ಯಕ-ಮಾಂಡಕ್ಯೋಪನಿಷತ್ತುಗಳ ಭಾಷ್ಯೋಪಕ್ರಮಣಿಕೆ.

೨. ಈ ವಿದ್ಯೆಯು ಎಲ್ಲಕ್ಕೂ ಮೊದಲು ಬ್ರಹ್ಮನಿಂದ ಹೇಳಲ್ಪಟ್ಟಿರುತ್ತದೆಂದು ಬ್ರಹ್ಮವಿದ್ಯಾಪದವಾಚ್ಯವಾಗಿದೆ. [ಮುಂಡಕ ಭಾಷ್ಯ]

ವೇದದಲ್ಲಿ ಸಂಹಿತಾ-ಬ್ರಾಹ್ಮಣ-ಆರಣ್ಯಕ-ಉಪನಿಷತ್ತುಗಳೆಂದು ನಾಲ್ಕು ಭಾಗಗಳುಂಟು. ಉಪನಿಷತ್ತು ವೇದದ ಅಂತ ಅಥವಾ ಶೇಷಭಾಗವು. ಇದಕ್ಕೋಸುಗ ಉಪನಿಷತ್ತಿಗೆ ವೇದಾಂತವೆನ್ನುವರು. ಉಪನಿಷತ್ತಿನಲ್ಲಿ ವೇದದ ಶ್ರೇಷ್ಠಸತ್ಯವು ನಿಹಿತವಾಗಿರುವದರಿಂದಲೂ ಇದಕ್ಕೆ ವೇದಾಂತವೆನ್ನುವರು.

೨

ಮುಕ್ತಿಕೋಪನಿಷತ್ತಿನಲ್ಲಿ ೧೦೮ ಉಪನಿಷತ್ತುಗಳ ಹೆಸರುಗಳು ಕಂಡುಬರುವವು. ಅವುಗಳಲ್ಲಿ ಈಶ, ಕೇನ,ಕಠ,ಪ್ರಶ್ನ, ಮುಂಡಕ, ಮಾಂಡುಕ್ಯ, ಐತರೇಯ, ತೈತ್ತಿರೀಯ, ಛಾಂದೋಗ್ಯ, ಬೃಹದಾರಣ್ಯಕ, ಶ್ವೇತಾಶ್ವತರ, ಕೌಷಿತಕೀ ಎಂಬ ಹನ್ನೆರಡು ಉಪನಿಷತ್ತುಗಳ ಪ್ರಾಚೀನತ್ವ ಮತ್ತು ಪ್ರಾಮಾಣಿಕತ್ವದ ವಿಷಯಗಳಲ್ಲಿ ಎಲ್ಲರೂ ಏಕಮತವುಳ್ಳವರಾಗಿರುವರು. ಮೊದಲಿನ ಹತ್ತು ಉಪನಿಷತ್ತುಗಳ ಮೇಲೆ ಶಂಕರಾಚಾರ್ಯರ ಭಾಷ್ಯವಿದೆ.

ಕುರುಕ್ಷೇತ್ರದಿಂದ ವಾರಣಾಸಿಯ ವರೆಗಿನ ವಿಸ್ತೃತ ಪ್ರದೇಶದಲ್ಲಿ ಉಪನಿಷತ್ತಿನ ರಹಸ್ಯಗಳು ವಿಚಾರ ಮಾಡಲ್ಪಟ್ಟವು. ಪ್ರಾಚೀನತಮ ಉಪನಿಷತ್ತುಗಳು ಕ್ರಿ. ಪೂ. ೧೦೦೦-೩೦೦ ವರ್ಷಗಳಲ್ಲಿ ರಚಿತವಾಗಿರಬಹುದು. ಬುದ್ಧದೇವನು ಉಪನಿಷತ್ತುಗಳ ತತ್ವಗಳನ್ನು ಬಲ್ಲವನಾಗಿದ್ದನು. ಪ್ರಾಚೀನ ಉಪನಿಷತ್ತುಗಳಲ್ಲಿ ಕೆಲವು ಬೌದ್ಧಧರ್ಮದ ಅಭ್ಯುದಯದ ತರುವಾಯ ಕ್ರಿ.ಶ.ಪೂ. ೪೦೦-೩೦೦ ವರ್ಷಗಳಲ್ಲಿ ರಚಿತವಾಗಿರುತ್ತವೆ. ಎಲ್ಲಕ್ಕೂ ಮೊದಲಿನ ಉಪನಿಷತ್ತುಗಳು ಗದ್ಯದಲ್ಲಿ ರಚಿತವಾಗಿರುತ್ತವೆ ಮತ್ತು ಐತರೇಯ, ಕೌಷೀತಕಿ,ತೈತ್ತರೀಯ, ಛಾಂದೋಗ್ಯ, ಬೃಹದಾರಣ್ಯಕ, ಕೇನೋಪನಿಷತ್ತುಗಳ ಗದ್ಯಾಂಶವು ಪೂರ್ವೋಕ್ತವಾದ ಹನ್ನೆರಡು ಉಪನಿಷತ್ತುಗಳಲ್ಲಿ ಪ್ರಾಚೀನತಮವಾಗಿದೆ.

ಉಪನಿಷತ್ ಸಾಹಿತ್ಯರಚನೆಯು ಹದಿನಾಲ್ಕು, ಹದಿನೈದನೆಯ ಶತಮಾನದ ವರೆಗೆ ನಡೆಯಿತು. "ಉಪನಿಷತ್ ಸಮ್ಮತವು ಅಲ್ಲದುದು ಪ್ರಾಮಾಣಿಕತ್ವವಲ್ಲವು" ಎಂದು ಸಾಂಪ್ರದಾಯಿಕ ಮತವಾದದ ಪ್ರವರ್ತಕರು ತಮ್ಮ ಮತದ ಪ್ರಾಮಾಣಿಕತೆಯ ಪ್ರತಿಷ್ಠೆಗೋಸುಗ ತಾವೇ ಗ್ರಂಥರಚನೆಯನ್ನು ಮಾಡಿ ಉಪನಿಷತ್ ಎಂಬ ಹೆಸರಿನಿಂದ ಕರೆಯಹತ್ತಿದರು. ಈ ಎಲ್ಲವುಗಳಿಗೆ ಸಾಂಪ್ರದಾಯಿಕ ಉಪನಿಷತ್ತುಗಳೆಂದು ಹೆಸರು ಕೊಡಲು ಶಕ್ಯವು. ಇವುಗಳ ಪ್ರಮಾಣಿಕತೆಯನ್ನು ಯಾರೂ ಸ್ವೀಕಾರ ಮಾಡುವದಿಲ್ಲ.

ಪ್ರಾಚ್ಯವಿದ್ಯಾವಿಶಾರದನಾದ ವಿಂಟರನಿಟ್‌ಝ ಎಂಬವರು ಉಪನಿಷತ್ ಸಾಹಿತ್ಯವನ್ನು ರಚನಾಕಾಲಾನುಸಾರವಾಗಿ ನಾಲ್ಕು ಭಾಗಗಳಲ್ಲಿ ವಿಭಾಗಿಸಿಸುತ್ತಾರೆ:

ಪ್ರಥಮಯುಗದಲ್ಲಿ ಬೃಹದಾರಣ್ಯಕ, ಛಾಂದೋಗ್ಯ, ತೈತ್ತಿರೀಯ, ಐತರೇಯ, ಕೌಷೀತಕಿ, ಕೇನ. ದ್ವಿತೀಯಯುಗದಲ್ಲಿ ಕಠ, ಈಶ, ಶ್ವೇತಾಶ್ವತರ, ಮುಂಡಕ ಮಹಾನಾರಾಯಣ. ತೃತೀಯಯುಗದಲ್ಲಿ ಪ್ರಶ್ನ, ವೈತ್ರಾಯಣೀ, ಮಾಂಡೂಕ್ಯ. ಚತುರ್ಥಯುಗದಲ್ಲಿ ಉಳಿದ ಉಪನಿಷತ್ತುಗಳು ರಚಿತವಾಗಿರುತ್ತವೆ.

ಪ್ರಚಲಿತ ಉಪನಿಷತ್ತುಗಳಲ್ಲಿ ಐತರೇಯ ಕೌಷೀತಕಿಗಳು ಋಗ್ವೇದದಲ್ಲಿ, ಛಾಂದೋಗ್ಯ ಕೇನಗಳು ಸಾಮವೇದದಲ್ಲಿ, ತೈತ್ತಿರೀಯ ಕಠ ಶ್ವೇತಾಶ್ವರಗಳು ಕೃಷ್ಣಯಜುರ್ವೇದದಲ್ಲಿ, ಈಶ, ಬೃಹದಾರಣ್ಯಕಗಳು ಶುಕ್ಲಯಜುರ್ವೇದದಲ್ಲಿ, ಮುಂಡಕ ಪ್ರಶ್ನ ಮಾಂಡೂಕ್ಯಗಳು ಅಥರ್ವವೇದದಲ್ಲಿ ಅಂತರ್ಭುಕ್ತವಾಗಿವೆ.

೩

ಉಪನಿಷತ್ತಿನಲ್ಲಿ ನಾವು ಆರ್ಯರ ಪ್ರಾಚೀನತಮ ವಿಚಾರ ಪ್ರವಾಹದಲ್ಲಿ ಬೆರೆಯುವೆವು. ಸಂಹಿತಾ ಬ್ರಾಹ್ಮಣ ಆರಣ್ಯಕಗಳಲ್ಲಿ ಸ್ತವ-ಸ್ತುತಿ ಮತ್ತು ಧರ್ಮಾನುಷ್ಠಾನುಗತ ವಿಧಿನಿಷೇಧಗಳು ಯಥೇಷ್ಟವಾಗಿದ್ದರೂ ಅವುಗಳಲ್ಲಿ ದಾರ್ಶನಿಕತೆಯ ಆವ ಪ್ರಮಾಣವೂ ದೊರೆಯುವದಿಲ್ಲ ಮತ್ತು ಉಪನಿಷತ್ತಿಗೆ ಅತ್ಯುತ್ತಮವಾದ ದಾರ್ಶನಿಕ ಗ್ರಂಥವೆಂದು ಗ್ರಹಿಸಿದರೆ ತಪ್ಪುಮಾಡಿದಂತಾಗುವದು. ಯಾಕಂದರೆ ಶೃಂಖಲಾ ಮತ್ತು ಪ್ರಣಾಲೀಬದ್ಧ

ಭಾವದಿಂದ ವಸ್ತುವಿನ್ಯಾಸವು ದರ್ಶನದ ಪ್ರಧಾನ ಲಕ್ಷಣವು. ಆದರೆ ಉಪನಿಷತ್ತಿನಲ್ಲಿ ಇದು ಕಂಡುಬರುವದಿಲ್ಲ. ಗಂಭೀರ ಅಭಿನಿವೇಶ ಸಹಕಾರದೊಡನೆ ಉಪನಿಷತ್ತುಗಳನ್ನು ಅಧ್ಯಯನ ಮಾಡಲು ಇದು ತಿಳಿಯುವದು. ದರ್ಶನದ ವಿಚಾರ ಪ್ರಣಾಲಿಯನ್ನವಲಂಬಿಸಿ, ಸತ್ಯನಿರ್ಣಯವನ್ನು ಮಾಡುವದಕ್ಕಿಂತ ಶಾಂತಿ ಮತ್ತು ಮುಕ್ತಿಲಾಭದ ಐಕಾಂತಿಕ ಪ್ರಯಾಸದಿಂದಲೇ ಉಪನಿಷತ್ತಿನ ಉತ್ಪತ್ತಿಯಾಯಿತು. ಉಪನಿಷತ್ತಿಗೆ ಪೂರ್ಣದರ್ಶನವೆನ್ನದೆ, ಅರ್ಧಕಾವ್ಯ ಅರ್ಧದರ್ಶನವೆಂದರೆ ಅಧಿಕತರ ಸಮೀಚೀನವಾಗುವದು.

ಭಾರತೀಯ ಎಲ್ಲ ದರ್ಶನಗಳ ಮತ್ತು ಧರ್ಮಗಳ ಮೂಲಬೀಜಗಳು ಉಪನಿಷತ್ತಿನಲ್ಲಿ ನಿಹಿತವಾಗಿವೆ. ಪರಸ್ಪರ ವಿರುದ್ಧ ಮತವಾದಿಗಳಾದ ಧರ್ಮಾಚಾರ್ಯರೂ ದಾರ್ಶನಿಕರೂ ಏಕವಾಕ್ಯದಿಂದ ಉಪನಿಷತ್ತಿನ ಪ್ರಾಮಾಣಿಕತೆಯನ್ನು ಒಪ್ಪಿಕೊಳ್ಳುವರು. ತಮ್ಮಿಂದ ಪ್ರಚಾರಿತವಾದ ಮತವಾದದ ಪ್ರಮಾಣವು ಉಪನಿಷತ್ತಿನಲ್ಲಿ ವಿದ್ಯಮಾನವಾಗಿರುತ್ತದೆಂದು ಪ್ರತಿಯೊಬ್ಬರು ಅತ್ಯಂತ ಆಗ್ರಹದೊಡನೆ ಪ್ರತಿಪನ್ನ ಮಾಡಲು ಪ್ರಯತ್ನಮಾಡುತ್ತಾರೆ. ಪಂಡಿತ ಮ್ಯಾಕ್ಸಮುಲರನು ಒಂದು ಸುಂದರ ಉಪಮೆಯ ಸಹಾಯದಿಂದ ಉಪನಿಷತ್ ಸಂಬಂಧೀಯ ಈ ತಥ್ಯವನ್ನು ಪರಸ್ಪುಟ ಮಾಡಿರುತ್ತಾನೆ. ಗಂಗಾ, ಸಿಂಧು, ಬ್ರಹ್ಮಪುತ್ರ ಪ್ರಭೃತಿಗಳು ವಿಭಿನ್ನ ಪಥಗಳಲ್ಲಿ ಪ್ರವಾಹಿತವಾಗಿದ್ದರೂ ಅವೆಲ್ಲವುಗಳ ಉತ್ಪತ್ತಿ ಸ್ಥಲವು ಒಂದೇ ಹಿಮಾಚಲವಿದ್ದಂತೆ, ಭಾರತದ ದಾರ್ಶನಿಕ ವಿಚಾರ ಪ್ರವಾಹಗಳು ಬೇರ ಬೇರೆ ಮಾರ್ಗಗಳಿಂದ ಹರಿದರೂ ಅವೆಲ್ಲವುಗಳ ಉತ್ಪತ್ತಿಯು ಉಪನಿಷತ್ತಿನಿಂದಲೇ ಆಗಿರುತ್ತದೆ. ಬುದ್ಧದೇವನಿಂದ ಪ್ರಚಾರಿತವಾದ ಧರ್ಮದ ಮೇಲೆಯೂ ಉಪನಿಷತ್ತಿನ ಪ್ರಭಾವವು ಪರಿಸ್ಫುಟವಾಗಿದೆ. ಉಚ್ಚಶ್ರೇಣಿಯಲ್ಲಿ ಸೀಮಾಬದ್ಧವಾಗಿದ್ದ ಉಪನಿಷದ್ಧರ್ಮವನ್ನು ಬುದ್ಧದೇವನು ಜನಸಾಮಾನ್ಯರಲ್ಲಿ ಪ್ರಚಾರಮಾಡಿದನು. ಉಪನಿಷತ್ತಿನ ಯಥಾರ್ಥ ಮರ್ಮವು ಅವಗತವಾಗಿರುವದು ಈಗ ನಮಗೆ ಅತ್ಯಂತ ದುರೂಹ ವ್ಯಾಪಾರವಾಗಿದೆ. ನಾವು ಪ್ರಾಚೀನ ಭಾಷ್ಯಕಾರರ ವ್ಯಾಖ್ಯೆಗಳ ಸಹಾಯದಿಂದ ಉಪನಿಷತ್ತಿನ ತಾತ್ಪರ್ಯವನ್ನು ತಿಳಿಯುತ್ತೇವೆ. ಈ ಭಾಷ್ಯಕಾರರು ಒಂದೊಂದು ದಾರ್ಶನಿಕ ಮತವಾದದ ಪೋಷಕತಾಕಲ್ಪದಿಂದ ಉಪನಿಷತ್ತಿನ ವ್ಯಾಖ್ಯೆಯನ್ನು ಮಾಡಿದ್ದಾರೆ ಎಂಬುದನ್ನು ಮನದಲ್ಲಿ ಇಡಬೇಕಾಗುವದು. ಅದ್ವೈತವಾದಿಯಾದ ಶಂಕರಾಚಾರ್ಯರು ಉಪನಿಷತ್ತಿನೊಳಗಿಂದ ಅದ್ವೈತವಾದದ ತಥ್ಯವನ್ನು ಹೊರಗೆಡವಿದ್ದಾರೆ. ಮತ್ತು ಅವರು ಅದ್ವೈತವಾದಾತ್ಮಕ ವ್ಯಾಖ್ಯೆಯನ್ನೇ ಮಾಡಿದ್ದಾರೆ. ದ್ವೈತವಾದಿಗಳಾದ ಮಧ್ವಾಚಾರ್ಯರು ಉಪನಿಷತ್ತುಗಳಿಗೆ ದ್ವೈತವಾದಾತ್ಮಕ ವ್ಯಾಖ್ಯೆಯನ್ನು ಮಾಡಿದ್ದಾರೆ. ಮತ್ತು ವಿಶಿಷ್ಟಾದ್ವೈತವಾದದ ಆಚಾರ್ಯರು ಉಪನಿಷತ್ತಿಗೆ ವಿಶಿಷ್ಟಾದ್ವೈತವಾದದ ಪರಿಪೋಷಕರೂಪದಿಂದ ನೋಡಿದ್ದಾರೆ.[೧]

ತಮ್ಮ ತಮ್ಮ ಮತವಾದದ ಪ್ರಮಾಣಸಂಗ್ರಹಾರ್ಥವಾಗಿ ಇವರೆಲ್ಲರೂ ಉಪನಿಷತ್ತಿನ ದ್ವಾರಸ್ಥರಾಗಿದ್ದಾರೆ. ಇದರಿಂದ ಪ್ರಾಚೀನ ಸಂಪ್ರದಾಯ ಪ್ರವರ್ತಕ ಆಚಾರ್ಯರು ಉಪನಿಷತ್ತಿನ ಮೇಲೆ ಪ್ರಗಾಢ ಶ್ರದ್ಧೆಯುಳ್ಳವರಾಗಿದ್ದರೆಂದು ಇದರಿಂದ ಸುಸ್ಪಷ್ಟ ಪರಿಚಯವು ಆಗುವದು. ಉಪನಿಷತ್ ಪ್ರಮಾಣಬದ್ಧವಾಗದ ವಿಚಾರವನ್ನು ಯಾರೂ ಮನ್ನಿಸುವದಿಲ್ಲವೆಂಬುದನ್ನು ಅವರು ಚೆನ್ನಾಗಿ ಅರಿತಿದ್ದರು. ಇದರಿಂದ ಹಿಂದೂ ಸಮಾಜದ ಮೇಲೆ ಉಪನಿಷತ್ತಿನ ಪ್ರಭಾವವು ಎಷ್ಟಿರುವದೆಂಬುದು ಅನುಮಿತವಾಗುವದು. ಉಪನಿಷತ್ತಿನ ವಿಚಾರಮಾಡಿದ ಪಾಶ್ಚಾತ್ಯ ಪಂಡಿತರು ಸಹ ಉಕ್ತ ಸಾಂಪ್ರದಾಯಿಕ ವ್ಯಾಖ್ಯೆಗಳಲ್ಲಿ ಒಂದಿಲ್ಲೊಂದರ

---

೧. ವಿಶಿಷ್ಟಾದ್ವೈತ ಸಂಪ್ರದಾಯದ ಮುಖ್ಯ ಆಚಾರ್ಯರಾದ ರಾಮಾನುಜರು ಉಪನಿಷತ್ತಿಗೆ ಭಾಷ್ಯೆಯನ್ನು ರಚಿಸಿಲ್ಲ. ಆದರೆ ಅವರ ಶಿಷ್ಯ ಪ್ರಶಿಷ್ಯರು ಕೆಲವು ಉಪನಿಷತ್ತುಗಳಿಗೆ ಭಾಷ್ಯೆ ಅಥವಾ ಟೀಕೆಯನ್ನು ರಚಿಸಿರುತ್ತಾರೆ. ಈ ಎಲ್ಲ ಟೀಕಾಕಾರರಲ್ಲಿ ಕೂರನಾರಾಯಣ ಮತ್ತು ರಂಗರಾಮಾನುಜರ ಹೆಸರುಗಳು ಉಲ್ಲೇಖಯೋಗ್ಯವು.

ಅನುವರ್ತನೆಯನ್ನು ಮಾಡಿದ್ದಾರೆ. ಆದರೆ ಉಪನಿಷತ್ತಿನ ಸತ್ಯವು ಆವ ವಿಶೇಷ ಸಂಪ್ರದಾಯದಿಂದ ಸೀಮಾಬದ್ಧವಾಗದಷ್ಟು ಉದಾರವೂ ಸರಳವೂ ಆಗಿರುವದು. ಸಕಲ ಸಂಪ್ರದಾಯಗಳಿಗೂ ಇವುಗಳೊಳಗಿಂದ ತಮ್ಮ ಮತವಾದದ ಸಮರ್ಥನೆಯು ದೊರೆಯಲು ಶಕ್ಯವಾಗಿರುವದು. ನಾವು ಈಗ ಉಪನಿಷತ್ ಪ್ರಚಾರಿತವಾದ ಆ ಮಹಾ ಉದಾರವೂ ವಿಶ್ವಜನೀನವೂ ಆದ ಸತ್ಯದಲ್ಲಿ ಶಿಕ್ಷಿತರಾಗಬೇಕು. ಎಲ್ಲ ಬಗೆಯ ಸಾಂಪ್ರದಾಯಿಕತೆಯ ಅಂಧ ಸಂಕೀರ್ಣತೆಯನ್ನು ಬಿಟ್ಟು ಬಿಡಬೇಕು.

೪

ಋಷಿಗಳ ಮತದಲ್ಲಿ ಭಗವಂತನೇ ಸಮಸ್ತ ವಿದ್ಯೆಗಳ ಪ್ರವರ್ತಕನು. ಅವನಿಂದಲೇ ಪುರಾಣೀಪ್ರಜ್ಞಾ ಪ್ರಸೂತವಾಗಿರುತ್ತದೆ. ಭಗವಂತನು ಮೊದಲು ಬ್ರಹ್ಮನನ್ನು ಹುಟ್ಟಿಸಿ, ಅವನಿಗೆ ವೇದಗಳನ್ನು ಕೊಟ್ಟನು. ಬ್ರಹ್ಮನು ಸರ್ವವಿದ್ಯೆಗಳ ಆಶ್ರಯವಾದ ಈ ಬ್ರಹ್ಮವಿದ್ಯೆಯನ್ನು ತನ್ನ ಜ್ಯೇಷ್ಠಪುತ್ರನಾದ ಅಥರ್ವನಿಗೆ ಕೊಟ್ಟನು. ಅಥರ್ವನು ಇದನ್ನು ಅಂಗೀರನಿಗೆ ಕೊಟ್ಟನು. ಅಂಗೀರನು ಭರದ್ವಾಜಪುತ್ರ ಸತ್ಯಬಾಹುವಿಗೆ ಮತ್ತು ಸತ್ಯಬಾಹುವು ಅಂಗೀರನಿಗೆ ಕೊಟ್ಟನು.[೪] ಈ ರೀತಿಯಲ್ಲಿ ಶಿಷ್ಯ ಪ್ರಶಿಷ್ಯ ಕ್ರಮದಿಂದ ಬ್ರಹ್ಮವಿದ್ಯೆಯು ಜಗತ್ತಿನಲ್ಲಿ ಪ್ರಚಾರಿತವಾಯಿತು.

ಉಪನಿಷತ್ತುಗಳನ್ನು ವಿಚಾರ ಮಾಡಲು ಈ ಬ್ರಹ್ಮವಿದ್ಯೆಯ ಚರ್ಚೆಯು ಕೇವಲ ಬ್ರಾಹ್ಮಣರಲ್ಲಿಯೇ ಸೀಮಾಬದ್ಧವಾಗಿದ್ದಿಲ್ಲವೆಂದು ಕಂಡುಬರುತ್ತದೆ. ಬ್ರಾಹ್ಮಣರಿಗಿಂತ ಕ್ಷತ್ರಿಯ ರಾಜರ್ಷಿಗಳಲ್ಲಿಯೇ ಬ್ರಹ್ಮವಿದ್ಯೆಯ ವ್ಯಾಖ್ಯಾತರು ಹೆಚ್ಚು. ಗಾರ್ಬೆ, ವಿಂಟರನಿಜ್ ಪ್ರಮುಖ ಪಂಡಿತರ ಮತದಲ್ಲಿ ಔಪನಿಷದಿಕ ಜ್ಞಾನವು ಬ್ರಾಹ್ಮಣರಿಂದಲ್ಲ, ಕ್ಷತ್ರಿಯರಿಂದಲೇ ಪ್ರಕಾಶಿತವಾಯಿತು. ಇದರ ಪ್ರಮಾಣ ಸ್ವರೂಪವಾಗಿ ಗಾರ್ಗ್ಯ ಬಾಲಾಕಿ ಮತ್ತು ಅಜಾತ ಶತ್ರು,[೫] ಶ್ವೇತಕೇತು ಮತ್ತು ಪ್ರವಾಹಣ, ಜೈವಲಿ[೬] ಉಪಾಖ್ಯಾನಗಳ ಉಲ್ಲೇಖ ಮಾಡಿದ್ದಾನೆ. ಆದರೆ ಈ ಎಲ್ಲ ಉಪಾಖ್ಯಾನಗಳನ್ನು ಸೂಕ್ಷ್ಮರೀತಿಯಿಂದ ಪರ್ಯಾಲೋಚನೆ ಮಾಡಲು ಆ ರೀತಿಯ ಅನುಮಾನವು ಸತ್ಯವಲ್ಲವೆಂದು ಕಂಡುಬರುತ್ತದೆ. ಗಾರ್ಗ್ಯ ಬಾಲಾಕಿ ಮತ್ತು ಅಜಾತಶತ್ರುಗಳ ಉಪಾಖ್ಯಾನಗಳ ಕಥೆಯೇ ತಕ್ಕೊಂಡಿದೆ. ಗರ್ವೋದ್ಧತನಾದ ಬಾಲಾಕಿಯು ಕ್ಷತ್ರಿಯ ರಾಜನಾದ ಅಜಾತಶತ್ರುವಿಗೆ ಬ್ರಹ್ಮಸಂಬಂಧದಿಂದ ಉಪದೇಶ ಮಾಡಲು ಹೋಗಿ ಅಸಮರ್ಥನಾಗಿ, ಅವನಿಂದ ಉಪದಿಷ್ಟನಾಗಲು ಇಚ್ಛಿಸುತ್ತಾನೆ. ಇದಕ್ಕೆ ಉತ್ತರವಾಗಿ ಅಜಾತಶತ್ರುವು ಹೇಳಿದನು - "ಪ್ರತಿಲೋಮಂ ಚೈತದ್ ಯದ್ ಬ್ರಾಹ್ಮಣ ಕ್ಷತ್ರಿಯಮುಪೇಯಾದ್ ಬ್ರಹ್ಮಮೇ ವಕ್ಷ್ಯತೀತಿ" — 'ನನಗೆ ಬ್ರಹ್ಮೋಪದೇಶ ಪ್ರದಾನ ಮಾಡತಕ್ಕದ್ದು ಎಂದು ಅನ್ನುವದು, ಬ್ರಾಹ್ಮಣರು ಕ್ಷತ್ರಿಯರ ಹತ್ತಿರ ಉಪಸ್ಥಿತವಾಗುವದು, ಸ್ವಾಭಾವಿಕ ನಿಯಮದ ವಿರುದ್ಧವು'. ಇದರಿಂದ ಕ್ಷತ್ರಿಯರಿಗೆ ಬ್ರಾಹ್ಮಣರಿಂದ ಬ್ರಹ್ಮಜ್ಞಾನ ಸಂಪಾದನೆ ಮಾಡುವದು ಸ್ವಾಭಾವಿಕವೆಂದು ಸಿದ್ಧವಾಗುವದಿಲ್ಲ. ಪ್ರಕೃತ ಪ್ರಸ್ತಾವದಲ್ಲಿ ಉಪನಿಷದಿಕ ಜ್ಞಾನಚರ್ಚೆಯು ಕೇವಲ ಬ್ರಾಹ್ಮಣರಲ್ಲಿಯೇ ಸೀಮಾಬದ್ಧವಾಗಿದ್ದಿಲ್ಲ. ಬ್ರಾಹ್ಮಣ, ಕ್ಷತ್ರಿಯ, ನರ, ನಾರೀ, ನಿರ್ವಿಶೇಷದಿಂದ ಎಲ್ಲರೂ ಇದರ ವಿಚಾರ ಮಾಡುತ್ತಿದ್ದರು. ಬ್ರಾಹ್ಮಣರಲ್ಲಿ ಯಾಜ್ಞವಲ್ಕ್ಯ, ಪಿಪ್ಪಲಾದ, ಅರುಣಿ ಇವರು ಬ್ರಹ್ಮವಿದ್ಯೆಯ ಪ್ರಚಾರಕರು. ಕ್ಷತ್ರಿಯರಲ್ಲಿ ಪ್ರವಾಹಣ, ಜೈವಲಿ, ವೈದೇಹ ಜನಕ, ಚಿತ್ರಗಾರ್ಗ್ಯಾಯನಿ, ಅಜಾತಶತ್ರು, ಸನತ್‌ಕುಮಾರ

---

೪. ಮುಂಡಕ.

೫. ಬೃಹದಾರಣ್ಯಕ.

೬. ಛಾಂದೋಗ್ಯ

ಪ್ರಭೃತಿಗಳು ಔಪನಿಷದಿಕ ಜ್ಞಾನದ ವ್ಯಾಖ್ಯಾತರು. ಬ್ರಾಹ್ಮಣರು ಅಕುಂಠಿತ ಚಿತ್ತದಿಂದ ಸಮಿತ್‌ಹಸ್ತದೊಡನೆ ಇವರ ಹತ್ತಿರ ಹೋಗಿ ಬ್ರಹ್ಮವಿದ್ಯಾ ಸಂಬಂಧದಿಂದ ಉಪದೇಶ ತೆಗೆದುಕೊಂಡಿದ್ದಾರೆ. "ನೀಚಾದಪ್ಯುತ್ತಮಾ ವಿದ್ಯಾ"- ನೀಚನಿಂದಾದರೂ ಉತ್ತಮವಿದ್ಯೆಯನ್ನು ಗ್ರಹಣ ಮಾಡತಕ್ಕದ್ದು. ಅವರು ಈ ನೀತಿಯ ಅನುಸರಣವನ್ನು ಮಾಡಲಿಕ್ಕೆ ಸ್ವಲ್ಪಾದರೂ ಎರಡು ಬಗೆಯುತ್ತಿದ್ದಿಲ್ಲ. ಆಗಿನ ಸಮಾಜದ ಈ ಉದಾರತೆಯು ವರ್ತಮಾನದಲ್ಲಿ ಸರ್ವಥಾ ಅನುಕರಣೀಯ-ವಾಗಿರುವದು.

೫

ಉಪನಿಷತ್ತಿನ ನಾಮಾಂತರವು ರಹಸ್ಯವಿದ್ಯೆಯೆಂದು ಅದೆ. ವಿಶಿಷ್ಟ ಅಧಿಕಾರಿಯ ಹೊರ್ತು ಅನ್ಯ ಯಾರಿಗೂ ಇದು ಉಪದೇಶಿಸಲ್ಪಡುತ್ತಿದ್ದಿಲ್ಲ. ಮುಕ್ತಾಹಾರದ ಬೆಲೆಯನ್ನು ತಿಳಿದವನು ಅದನ್ನು ಆದರದಿಂದ ತನ್ನ ಕೊರಳಿನಲ್ಲಿ ಹಾಕಿಕೊಳ್ಳುವನು. ಮಂಗನ ಕೊರಳಲ್ಲಿ ಮುಕ್ತಾಹಾರವು ನಿರರ್ಥಕವು. ಬ್ರಹ್ಮವಾದಿಗಳಾದ ಋಷಿಗಳು ಶಿಷ್ಯರ ಬ್ರಹ್ಮವಿದ್ಯಾ ಸಂಪಾದನೆಯ ಉಪಯೋಗಿಗಳಾದ ವಿವೇಕ, ವೈರಾಗ್ಯ, ಷಟ್ ಸಂಪತ್ತಿ (ಶಮ,ದಮ, ತಿತಿಕ್ಷೆ, ಉಪರತಿ, ಶ್ರದ್ಧೆ, ಸಮಾಧಾನ) ಮತ್ತು ಮುಮುಕ್ಷುತ್ವಗಳ ಪರೀಕ್ಷೆಯನ್ನು ಮಾಡಿ, ಅವರಿಗೆ ಬ್ರಹ್ಮವಿದ್ಯೆಯ ಉಪದೇಶವನ್ನು ಮಾಡುತ್ತಿದ್ದರು.

"ಈ ಬ್ರಹ್ಮಜ್ಞಾನವನ್ನು ತಂದೆಯು ಹಿರಿಯ ಮಗನಿಗೆ ಅಥವಾ ಉಪಯುಕ್ತ ಶಿಷ್ಯನಿಗೆ ಹೇಳುತ್ತಿದ್ದನೇ ಹೊರತು, ಅನ್ಯ ಯಾರಿಗೂ ಹೇಳುತ್ತಿದ್ದಿಲ್ಲ. ಒಂದು ವೇಳೆ ಅವನು ಈ ಸಸಾಗರ ವಿತ್ತಪೂರ್ಣಪೃಥ್ವಿಯನ್ನು ದಾನಮಾಡುವವನು ಆದರೂ ಅಲ್ಲ. ಅದು ಇದಕ್ಕಿಂತಲೂ ಮಹತ್ವದ್ದು ಆಗಿದೆ".– ಛಾಂದೋಗ್ಯ ೩-೧೧,೫-೬

ಭರದ್ವಾಜಪುತ್ರ ಸುಕೇಶ, ಶಿಬಿಯ ಪುತ್ರ ಸತ್ಯಕಾಮ,ಸೌರ್ಯಾಯಣೀಗಾರ್ಗ್ಯ, ಅಶ್ವಲನ ಪುತ್ರ ಕೌಶಲ್ಯ, ವಿದರ್ಭನ ಪುತ್ರ ಭಾರ್ಗವ, ಕತ್ಯನ ಪುತ್ರ ಕಬಂಧ ಇವರು ಪರಬ್ರಹ್ಮ ಸಂಬಂಧದಿಂದ ಉಪದೇಶವನ್ನು ಪಡೆಯುವದಕ್ಕೋಸುಗ ಭಗವಾನ್ ಪಿಪ್ಪಲಾದರ ಹತ್ತಿರ ಹೋದರು. ಋಷಿಯು ಅವರಿಗೆ ಹೇಳಿದ್ದೇನೆಂದರೇ- ನೀವು ಇಡೀ ಒಂದು ವರ್ಷದ ವರೆಗೆ ತಪಸ್ಸು ಬ್ರಹ್ಮಚರ್ಯ ಮತ್ತು ಶ್ರದ್ಧೆಗಳಿಂದ ಇರತಕ್ಕದ್ದು. ಅನಂತರ ನಿಮ್ಮ ಇಚ್ಛಾನುಸಾರವಾಗಿ ಪ್ರಶ್ನೆಮಾಡತಕ್ಕದ್ದು. ನಿಮಗೆ ತಿಳಿಯದಿದ್ದುದನ್ನು ಕೇಳತಕ್ಕದ್ದು.

ಪ್ರಶ್ನೆ ೧, ೨

ಛಾಂದೋಗ್ಯ ಉಪನಿಷತ್ತಿನಲ್ಲಿ ಹೇಳಿದ್ದೇನೆಂದರೆ, ದೇವತೆಗಳಲ್ಲಿ ಇಂದ್ರ ಮತ್ತು ಅಸುರರಲ್ಲಿ ವಿರೋಚನರು ಬ್ರಹ್ಮತತ್ವವನ್ನು ತಿಳಿಸುವದಕ್ಕೋಸ್ಕರ ಸಮಿತ್‌ಪಾಣಿಗಳಾಗಿ ಪ್ರಜಾಪತಿಯ ಸಮೀಪಕ್ಕೆ ಹೋದರು.ಇವರು ೩೨ ವರ್ಷ ಬ್ರಹ್ಮಚರ್ಯವನ್ನು ಅವಲಂಬನೆ ಮಾಡಿದ ತರುವಾಯ ಪ್ರಜಾಪತಿಯು ಇವರಿಗೆ ದೇಹಾತ್ಮವಾದವನ್ನು ಉಪದೇಶ ಮಾಡಿದನು. ವಿರೋಚನನೂ ಅದರಲ್ಲಿ ಸಂತುಷ್ಟನಾಗಿ ಹಿಂದಿರುಗಿದನು. ಆದರೆ ಇಂದ್ರನು ಇದರಲ್ಲಿ ಸಂತುಷ್ಟನಾಗದೆ ಪುನಃ ಉಚ್ಚತರ ಉಪದೇಶಕ್ಕೆ ಪ್ರಾರ್ಥನೆ ಮಾಡಿದನು. ಪ್ರಜಾಪತಿಯು ಅವನಿಗೆ ಪುನಃ ೩೨ ವರ್ಷ ಬ್ರಹ್ಮಚರ್ಯವ್ರತವನ್ನು ಪಾಲನೆ ಮಾಡಲಿಕ್ಕೆ ಅಪ್ಪಣೆ ಮಾಡಿದನು. ಈ ರೀತಿಯಾಗಿ ಬ್ರಹ್ಮಚರ್ಯಾನುಷ್ಠಾನದ ತರುವಾಯ ಪ್ರಜಾಪತಿಯು ಅವನಿಗೆ ಪುನಃ ಉಪದೇಶ ಮಾಡಿದನು. ಇಂದ್ರನು ಇದರಲ್ಲಿಯೂ ಸಂತುಷ್ಟನಾಗದೆ ಉಚ್ಚತರ ತತ್ವಕ್ಕೋಸುಗ ಉಪದೇಶವನ್ನು ಬೇಡಿದನು. ಪ್ರಜಾಪತಿಯು ಇಂದ್ರನಿಗೆ ಪುನಃ ೩೨ ವರ್ಷ ಬ್ರಹ್ಮಚರ್ಯವ್ರತವನ್ನು ಪಾಲನೆ ಮಾಡಲಿಕ್ಕೆ ಅಪ್ಪಣೆ ಮಾಡಿದನು. ಆದರೆ ಇದರ ತರುವಾಯದಲ್ಲಿ ಅವನು ಇಂದ್ರನಿಗೆ ಬ್ರಹ್ಮತತ್ವದ ಉಪದೇಶವನ್ನು ಮಾಡಲಿಲ್ಲ. ಸುದೀರ್ಘ ೧೫೦ ವರ್ಷ ಬ್ರಹ್ಮಚರ್ಯಾನುಷ್ಠಾನದ ತರುವಾಯ ಪ್ರಜಾಪತಿಯು ಇಂದ್ರನಿಗೆ ಬ್ರಹ್ಮವಿದ್ಯೆಯನ್ನು ಪ್ರದಾನಮಾಡಿದನು.

೬

ಅಧುನಿಕ ಜಗತ್ತಿನಲ್ಲಿ ಉಪನಿಷತ್ ಪ್ರಚಾರದ ಇತಿಹಾಸವನ್ನು ನಾವು ಸಂಕ್ಷೇಪವಾಗಿ ವಿಚಾರ ಮಾಡೋಣ. ಕ್ರಿ.ಶ. ೧೬೪೦ರಲ್ಲಿ ಕಾಶ್ಮೀರದೊಳಗೆ ಇರುವಾಗ ಶಹಾಜಹಾನನ ಜ್ಯೇಷ್ಠಪುತ್ರನಾದ 'ದಾರಾ'ನು ಉಪನಿಷತ್ ಸಾಹಿತ್ಯದ ಪರಿಚಯವನ್ನು ಮಾಡಿಕೊಂಡನು. ಕಾಶಿಯಿಂದ ಪಂಡಿತರನ್ನು ಕರೆತಂದು ಅವರ ಸಹಾಯದಿಂದ ಅವನು ಸರಾಸರಿ ೫೦ ಉಪನಿಷತ್ತುಗಳನ್ನು ಫಾರ್ಸೀ ಭಾಷೆಯಲ್ಲಿ ಅನುವಾದ ಮಾಡಿದನು. ಕ್ರಿ.ಶ.೧೬೫೭ರಲ್ಲಿ ಈ ಅನುವಾದ ಕಾರ್ಯವು ಸಮಾಪ್ತವಾಯಿತು. ಕ್ರಿ.ಶ.೧೭೭೫ರಲ್ಲಿ ಪ್ರಸಿದ್ಧ ಪ್ರವಾಸಿಯೂ, ಜೆಂದ ಅವಸ್ತಾದ ಶೋಧಕನೂ ಆದ ಅಂಕ್ವೆಟಿಲ್ ಡುಪೆರಾನನು ಉಕ್ತ ಅನುವಾದದ ಒಂದು ಖಂಡವನ್ನು ದೊರಕಿಸಿ, ಕ್ರಿ.ಶ.೧೮೦೧ ರಲ್ಲಿ ಲ್ಯಾಟಿನ ಭಾಷೆಯಲ್ಲಿ ಅದರ ಅನುವಾದವನ್ನು ಪ್ರಸಿದ್ಧಮಾಡಿದನು. ಈ ಅನುವಾದಕ್ಕೆ ಆಂಪ್ರೆ ಖಾಟ್ ಎಂಬ ಹೆಸರು. ಅನಂತರ ರಾಜಾರಾಮ ಮೋಹನರಾಯರು, ಡಾ. ರಾಜೇಂದ್ರಲಾಲಮಿತ್ರ ರೋರ ಮತ್ತು ಮ್ಯಾಕ್ಸಮುಲ್ಲರ ಪ್ರಮುಖ ಮನೀಷಿಗಳ ಪ್ರಯತ್ನದಿಂದ ಉಪನಿಷತ್ತು ಅಧುನಿಕ ಜಗತ್ತಿನಲ್ಲಿ ಪ್ರಚಾರಿತವಾಯಿತು. ಸ್ವಾಮೀ ವಿವೇಕಾನಂದ ಮತ್ತು ಅವರ ಸಹಕರ್ಮಿಗಳು ಪ್ರತೀಚ್ಯದೇಶಗಳಲ್ಲಿ ಉಪನಿಷತ್ತಿನ ಧರ್ಮಕ್ಕೆ ವಿಶ್ವಜನೀನ ಧರ್ಮರೂಪದಿಂದ ಪ್ರಚಾರಮಾಡಿ ಬಂದಿರುತ್ತಾರೆ. ವಿಶ್ವಕವಿಯಾದ ರವೀಂದ್ರನಾಥರೂ ದೇಶವಿದೇಶಗಳಲ್ಲಿ ಉಪನಿಷತ್ತಿನ ಶಾಶ್ವತೀ ವಾಣಿಯನ್ನು ಪ್ರಚಾರಮಾಡಿಯೇ ಈ"ಹಿಂಸೆಯ ಉನ್ಮತ್ತ"ಪೃಥ್ವಿಯಲ್ಲಿ ಶಾಂತಿಯನ್ನುಂಟು ಮಾಡುವ ಪ್ರಯತ್ನವನ್ನು ಮಾಡಿರುತ್ತಾರೆ.

ಹತ್ತೊಂಬತ್ತನೆಯ ಶತಮಾನದ ಪ್ರಥಮ ಭಾಗದಲ್ಲಿ ಉಪನಿಷತ್ತಿನ ಒಂದು ಅಸ್ಪಷ್ಟವಾದ ಅನುವಾದವನ್ನು ಓದಿ ವಿಖ್ಯಾತ ಜರ್ಮನ್ ದಾರ್ಶನಿಕನಾದ ಶೋಪೆನಹೋರನು ವಿಸ್ಮಯಾನಂದಗಳಿಂದ ಉಚ್ಛ್ವಾಸಿತನಾಗಿ ಹೇಳಿರುತ್ತಾನೆ: "ಪ್ರತಿಯೊಂದು ವಾಕ್ಯದಿಂದ ಎಂಥ ಗಂಭೀರವಮೌಲಿಕ ಮತ್ತು ಗಾಂಭೀರ್ಯಪೂರ್ಣ ವಿಚಾರರಾಶಿ ಉದ್ಗತವಾಗಿರುತ್ತದೆ! ಇಡೀ ಗ್ರಂಥವು ಎಷ್ಟು ಉಚ್ಚ ಪವಿತ್ರ ಮತ್ತು ಐಕಾಂತಿಕ ಭಾವದಿಂದ ಅನುಪ್ರಾಣಿತವಾಗಿರುತ್ತದೆ. ಸಮಗ್ರಪೃಥ್ವಿಯಲ್ಲಿ ಮೂಲ ಉಪನಿಷತ್ತಿನಂತೆ ಇಷ್ಟು ಫಲೋಪಧಾರಕವೂ ಉಚ್ಚ ಭಾವೋದ್ದೀಪಕವೂ ಆದ ಗ್ರಂಥವು ಎಲ್ಲಿಯೂ ಇಲ್ಲ. ಇದು ನನಗೆ ಜೀವನದಲ್ಲಿ ಶಾಂತಿಯನ್ನು ಕೊಡುವದು"

ಶೋಪನಹೋರನ ತರುವಾಯ ಬಹು ಪಾಶ್ಚತ್ಯಮನೀಷಿಗಳು ಉಪನಿಷತ್ ವಿಚಾರಮಾಡಿ ನಾನಾ ಭಾವದಲ್ಲಿ ಇದರ ಮಹಿಮೆಯನ್ನು ಹೊಗಳಿದ್ದಾರೆ. ಕೆಲಕೆಲವರು ಉಪನಿಷತ್ತಿಗೆ"ಮಾನವ ವಿಚಾರದ ಸರ್ವಶ್ರೇಷ್ಠ ಅವದಾನ"ವೆಂದು ವರ್ಣಿಸಿರುತ್ತಾರೆ.

ನಮ್ಮ ದೇಶದ ಶಾಸ್ತ್ರಕಾರರು ಉಪನಿಷತ್ತಿಗೆ "ಪರಾವಿದ್ಯಾ"ಎಂದೆನ್ನುತ್ತಾರೆ. ವೇದದ ಸಾರಭಾಗವೆಂದು ಇದಕ್ಕೆ"ವೇದಾಂತ"ವೆಂಬ ಹೆಸರಿನಿಂದ ಕರೆಯುತ್ತಾರೆ. ಸಮಸ್ತ ಶಾಸ್ತ್ರಗಳನ್ನು ಬಲ್ಲನಾಗಿದ್ದರು ಸಹ ಉಪನಿಷತ್ತನ್ನು ಓದದ ಉಕ್ತ ಅಧ್ಯೇತೃವು ಶೂದ್ರನೆಂದು ತಿಳಿಯಲ್ಪಡುತ್ತಿದ್ದನು. ಅದು ಅಪಾಂಕ್ತೇಯವೆಂದು ವಿವೇಚಿತವಾಗುತ್ತಿತ್ತು.[೭] ಸಸಾಗರ ವಿತ್ತಪೂರ್ಣಾ ವಸುಂಧರೆಯ ವಿನಿಮಯದಲ್ಲಿಯೂ, ಅನಧಿಕಾರಿಗೆ ಈ "ರಹಸ್ಯ ವಿದ್ಯೆಯ" ಉಪದೇಶವು ಮಾಡಲ್ಪಡುತ್ತಿದ್ದಿಲ್ಲ. ಯಾಕಂದರೆ "ಏತದೇವ ತತೋಭೂಯಃ" ಈ ಬ್ರಹ್ಮವಿಜ್ಞಾನವು ಅದಕ್ಕಿಂತಲೂ ಹೆಚ್ಚಿನದಾಗಿರುವದು.[೮]

೭. ಶನಲು ನಃ ಸಂಹಿತಾ ೩, ೮೨

೮. ಛಾಂದೋಗ್ಯ ೩, ೧೧, ೫-೬

ಉಪನಿಷತ್ ಪ್ರತಿಪಾದಿತ ಬ್ರಹ್ಮತತ್ವವು ಬೇಗನೆ ಭವಿಷ್ಯತ್ತಿನಲ್ಲಿ ಸಮಗ್ರ ಪೃಥ್ವಿಯ ಧರ್ಮವಾಗಿ ನಿಲ್ಲುವದು. ಶೋಪೆನಹೊರ ಮೊದಲಾದ ಬಹು ಮನೀಷಿಗಳು ಈ ಭವಿಷ್ಯತ್ ವಾಣಿಯನ್ನು ನುಡಿದಿರುವರು. ಭಾರತದ ಬ್ರಹ್ಮಜ್ಞಾನವು ಸಮಗ್ರ ಪೃಥ್ವಿಯ ಧರ್ಮವಾಗಿ ನಿಲ್ಲುವ ಉಪಕ್ರಮವನ್ನು ಮಾಡಿರುತ್ತದೆಂದು ಚಕ್ಷುಷ್ಮಾನ್ ವ್ಯಕ್ತಿಗೆ ಕಂಡುಬರುವದು. ಪ್ರಾತಃಸೂರ್ಯನ ಅರುಣಕಿರಣಗಳಿಂದ ಪೂರ್ವದಿಶೆಯು ಅಲೋಕಿತವಾಗಲು ಆರಂಭವಾಗಿರುವದು ನಿಶ್ಚಯ. ಆದರೆ ಯಾವಾಗ ಆ ಸೂರ್ಯನು ಮಧ್ಯಾಹ್ನ ಗಗನದಲ್ಲಿ ಸಮುದಿತವಾಗುವನೋ ಆಗ ಅವನ ದೀಪ್ತಿಯಲ್ಲಿ ಸಮಗ್ರ ಪೃಥ್ವಿಯು ದೀಪ್ತಿಮಯವಾಗಿ ಹೋಗುವದು-ಎಂದು ರವೀಂದ್ರನಾಥನು ಹೇಳುತ್ತಾನೆ.

ಸ್ವಾಮೀ ವಿವೇಕಾನಂದರವರು ವರ್ತಮಾನದ ಭಾರತದ ಜಾತೀಯ ಜೀವನದಲ್ಲಿ ಉಪನಿಷತ್ತಿನ ಕಾರ್ಯಕಾರಿತೆಯನ್ನು ಉಚ್ಚಕಂಠದಿಂದ ಘೋಷಣೆ ಮಾಡಿರುತ್ತಾರೆ. ವಿಗತ ಸಹಸ್ರ ವರ್ಷಗಳಿಂದ ನಮ್ಮ ಜಾತೀಯ ಜೀವನದಲ್ಲಿ ಯಾವ ದೋಷ ದುರ್ಬಲತೆಗಳು ಸಂಚಿವಾಗಿರುವವೋ, ಯಾವುದರಿಂದ ನಾವು ನಿತಾಂತ ನಿರ್ವೀರ್ಯರಾಗಿರುತ್ತೇವೋ, ಏಕಮಾತ್ರ ಉಪನಿಷತ್ತಿನ ಮಹಾವೀರ್ಯಪ್ರದ ಸತ್ಯಸಮೂಹವೇ ಅವುಗಳ ದೂರೀಕರಣದಲ್ಲಿ ಸಮರ್ಥವು. "ಭಾರತೀಯ ಜೀವನದಲ್ಲಿ ವೇದಾಂತದ ಕಾರ್ಯಕಾರಿತಾ"ಎಂಬ ವಕ್ತೃತ್ವದಲ್ಲಿ ಸ್ವಾಮಿಗಳವರು ಹೇಳಿರುವರು:

"ಎಲೈ ಬಂಧುಗಳೇ, ದೇಶವಾಸಿಗಳೇ, ನೀವು ಉಪನಿಷತ್ತುಗಳನ್ನು ಓದಿದಷ್ಟು ನಾನು ನಿಮಗೋಸುಗ ಅಶ್ರುವಿಸರ್ಜನೆಯನ್ನು ಮಾಡುತ್ತೇನೆ. ಉಪನಿಷದುಕ್ತ ತೇಜಸ್ವಿತೆಯೇ ವಿಶೇಷಭಾವದಿಂದ ನಮ್ಮ ಜೀವನದಲ್ಲಿ ಪರಿಣತವಾಗಿ ಮಾಡುವದು ಅವಶ್ಯಕವಾಗಿರುತ್ತದೆ. ನಮಗೆ ಶಕ್ತಿಯನ್ನು ಕೊಡುವವರು ಯಾರು?......ಉಪನಿಷತ್ತುಗಳು ಶಕ್ತಿಯ ಬೃಹತ್ ಆಕರ ಸ್ವರೂಪಗಳು. ಉಪನಿಷತ್ತು ಯಾವ ಶಕ್ತಿಸಂಚಾರದಲ್ಲಿ ಸಮರ್ಥವು; ಅದರಲ್ಲಿ ಅದು ಸಮಗ್ರ ಜಗತ್ತಿಗೆ ಪುನರುಜ್ಜೀವಿತ ಹಾಗು ಶಕ್ತಿ ಮತ್ತು ವೀರ್ಯಕಾರಿಯನ್ನು ಮಾಡಲು ಶಕ್ಯವಾಗಿರುತ್ತದೆ. ಎಲ್ಲ ಜಾತಿಯ ಎಲ್ಲ ಮತಗಳ ಎಲ್ಲ ಸಂಪ್ರದಾಯಗಳ ದುರ್ಬಲ,ದುಃಖೀ,ಪದದಲಿತ ಗಣಕ್ಕೆ ಅದು ಉಚ್ಚಾರದ ಆಹ್ವಾನಮಾಡಿ, ತನ್ನ ಕಾಲ ಮೇಲೆ ಎದ್ದುನಿಂತು ಮುಕ್ತವಾಗಲು ಹೇಳುತ್ತದೆ. ಮುಕ್ತಿ ಅಥವಾ ಸ್ವಾಧೀನತಾ (ದೈಹಿಕ ಸ್ವಾಧೀನತಾ, ಮಾನಸಿಕ ಸ್ವಾಧೀನತಾ, ಆಧ್ಯಾತ್ಮಿಕ ಸ್ವಾಧೀನತಾ) ಇದೇ ಉಪನಿಷತ್ತಿನ ಮೂಲಮಂತ್ರ. ಜಗತ್ತಿನಲ್ಲಿ ಇದೇ ಏಕ ಮಾತ್ರ ಶಾಸ್ತ್ರವು. ಇದರಲ್ಲಿ ಉದ್ಧಾರದ ಕಥೆಯನ್ನು ಹೇಳಿಲ್ಲ. ಮುಕ್ತಿಯ ಕಥೆಯನ್ನು ಹೇಳಿದೆ. ಪ್ರಕೃತ ಬಂಧನದಿಂದ ಮುಕ್ತನಾಗು, ದುರ್ಬಲತೆಯಿಂದ ಮುಕ್ತನಾಗು."

❖❖

೩

# ಬ್ರಹ್ಮಸೂತ್ರಗಳು[೧]

ಶಿವಾನುಭವ ೭-೩

ಬ್ರಹ್ಮಸೂತ್ರವು ವೇದಾಂತ ಪ್ರಸ್ಥಾನತ್ರಯದಲ್ಲಿ ಒಂದಾಗಿರುವದು. ಇದನ್ನು ಬರೆದವರು ಬಾದರಾಯಣವ್ಯಾಸರು. ಇವರು ಉಪನಿಷತ್ತುಗಳನ್ನು[೨] ಅವಲಂಬಿಸಿಯೇ ಈ ಸೂತ್ರಗಳನ್ನು ರಚಿಸಿದರು. ಇದಕ್ಕೆ ವೇದಾಂತದರ್ಶನ, ಬ್ರಹ್ಮಮೀಮಾಂಸೆ, ಉತ್ತರಮೀಮಾಂಸೆ, ವ್ಯಾಸಸೂತ್ರಗಳೆಂದೂ ಹೆಸರುಂಟು.

---

೧. ಅಲ್ಪಾಕ್ಷರಮಸಂದಿಗ್ಧಂ ಸಾರವದ್ವಿಶ್ವತೋಮುಖಮ್।
ಅಸ್ತೋಭಮನವದ್ಯಂ ಚ ಸೂತ್ರಂ ಸೂತ್ರವಿದೋ ವಿದುಃ ॥

೨. ಕೆಳಗೆ ಬರೆದ ಗ್ರಂಥಗಳನ್ನು ಅವಲಂಬಿಸಿ ವೇದಾಂತಸೂತ್ರಗಳು ರಚಿತವಾಗಿರುವವೆಂದು ಪಂಡಿತರ ಮತ: ಉಪನಿಷತ್ತುಗಳು-ಈಶಾವಾಸ್ಯ, ಕೇನ, ಕಠ, ಪ್ರಶ್ನ, ಮುಂಡಕ, ಮಾಂಡುಕ್ಯ, ಐತರೇಯ, ತೈತ್ತಿರೀಯ, ಛಾಂದೋಗ್ಯ, ಬೃಹದಾರಣ್ಯಕ, ಶ್ವೇತಾಶ್ವತರ, ಕೌಷೀತಕೀಬ್ರಾಹ್ಮಣ, ಕೈವಲ್ಯ, ಜಾಬಾಲ.

ಬ್ರಾಹ್ಮಣಗ್ರಂಥ-ಕಾಣ್ವಶಾಖಾ, ಅಗ್ನಿರಹಸ್ಯ,ತಾಂಡಿಶಾಖಾ, ಶಾಟ್ಯಾಯನೀಶಾಖಾ, ಪೈಂಗೀರಹಸ್ಯ.

ಸ್ಮೃತಿಗಳು-ಮನುಸಂಹಿತೆ,ಮಹಾಭಾರತ,ಭಗವದ್ಗೀತೆ.

ಪಾಂಚರಾತ್ರ ಅಥವಾ ಭಾಗವತ ಮತವಾದ.

ದರ್ಶನಗಳು-ಕಪಿಲ,ಪತಂಜಲಿ,ಕಣಾದ,ಗೌತಮ,ಜೈಮಿನಿಗಳಿಂದ ವಿರಚಿತಗಳಾದ ದರ್ಶನಗಳು.

ಬುದ್ಧಪೂರ್ವಯುಗದಲ್ಲಿ ಆಧುನಿಕ, ಚಾರ್ವಾಕ, ಬೌದ್ಧ, ಜೈನ ಮತ್ತು ಮಾಹೇಶ್ವರ ಪ್ರಭೃತಿ, ಮತಾನುರೂಪಮತವಾದ.

ಆದರೆ ಶ್ರೀ ಶಂಕರ ಭಗವತ್ ಪೂಜ್ಯಪಾದರವರು ತಮ್ಮ ಭಾಷ್ಯದಲ್ಲಿ ಉಪರ್ಯುಕ್ತ ಗ್ರಂಥಗಳನ್ನಲ್ಲದೆ ಕೆಳಗೆ ಬರೆದ ಗ್ರಂಥಗಳನ್ನು ಸಹ ಉಲ್ಲೇಖಿಸಿರುವರು.

೧. ಐತರೇಯ ಅರಣ್ಯಕ, ೨.ಐತರೇಯ ಬ್ರಾಹ್ಮಣ, ೩.ಆಪಸ್ತಂಭ ಧರ್ಮಸೂತ್ರ, ೪.ಆರ್ಷೇಯಬ್ರಾಹ್ಮಣ, ೫.ಗೌಡಪಾದಕಾರಿಕಾ, ೬ಮೈತ್ರಾಯಣೀಸಂಹಿತಾ, ೭.ನಿರುಕ್ತ,೮.ಪಾಣಿನಿ,೯ ಋಗ್ವೇದಸಂಹಿತೆ, ೧೦.ಷಡ್‌ವಿಂಶ ಬ್ರಾಹ್ಮಣ, ೧೧. ಶತಪಥಬ್ರಾಹ್ಮಣ, ೧೨.ತೈತ್ತಿರೀಯಅರಣ್ಯಕ, ೧೩.ತೈತ್ತಿರೀಯ ಬ್ರಾಹ್ಮಣ, ೧೪.ತೈತ್ತಿರೀಯಸಂಹಿತಾ, ೧೫.ವಾಜಸನೇಯೀಸಂಹಿತಾ ೧೬.ವಿಷ್ಣುಪುರಾಣ, ೧೭.ವಿಷ್ಣುಧರ್ಮೋತ್ತರ, ೧೮.ಶಿವಪುರಾಣ, ೧೯.ಶಿವಧರ್ಮೋತ್ತರ, ೨೦.ಉಪವರ್ಷವೃತ್ತಿ, ೨೧.ವೃತ್ತಿಕಾರನ ಗ್ರಂಥ (ಈ ಮತ ಖಂಡಿತವಾಗಿದೆ.)

ಶ್ರೀರಾಮಾನುಜಾಚಾರ್ಯರು ಈ ಗ್ರಂಥಗಳನ್ನಲ್ಲದೆ ಕೆಳಗೆ ಬರೆದ ಗ್ರಂಥಗಳನ್ನು ಉದ್ಧೃತಮಾಡಿರುವರು.

೧.ದಕ್ಷಸ್ಮೃತಿ, ೨.ಗರ್ಭೋಪನಿಷತ್ತು, ೩.ಗೌತಮಧರ್ಮಸೂತ್ರ, ೪.ಚುಲಿಕೋಪನಿಷತ್ತು, ೫.ಮಹಾನಾರಯಣೋಪನಿಷತ್ತು, ೬. ಮಹೋಪನಿಷತ್ತು, ೭.ಮೈತ್ರಾಯಣ ಉಪನಿಷತ್ತು, ೮.ಸನತ್‌ಸುಜಾತೀಯ (ಇದರ ಮೇಲೆ ಒಂದು ಶಾಂಕರ ಭಾಷ್ಯವಿರುವದು. ಆದರೆ ಇದು ಶಂಕರಕೃತವೋ ಎಂಬ ಬಗ್ಗೆ ಸಂಶಯವದೆ.) ೯.ಸುಬಾಲೋಪನಿಷತ್ತು, ೧೦ಯಾಜ್ಞವಲ್ಕ್ಯಸ್ಮೃತಿ, ೧೧.ಯಾಮುನಾಚಾರ್ಯ ಮತ್ತು ಶತಕೋಪಾದಿಕೃತ ಗ್ರಂಥಗಳು.

ಬಾದರಾಯಣನಿಂದ ರಚಿತವಾದ ಈ ವೇದಾಂತದರ್ಶನದ ಪೂರ್ವದಲ್ಲಿಯೂ ಸಹ ಇಂತಹ ಜಾತೀಯ ವೇದಾಂತದರ್ಶನದ ಗ್ರಂಥಗಳಿದ್ದವೆಂದು ತಿಳಿಯುತ್ತದೆ. ಈ ವೇದಾಂತದರ್ಶನಕಾರರಲ್ಲಿ ಔಡುಲೋಮಿ,ಕಾಶಕೃತ್ಸ್ನ, ಜೈಮಿನಿ, ಕಾರ್ಷ್ಣಾಜಿನಿ, ಅತ್ರೇಯ ಪ್ರಭೃತಿ ಮುನಿಗಳ ಹೆಸರುಗಳು ದೊರೆತರೂ ಅವರ ಗ್ರಂಥಗಳು ಮಾತ್ರ ಇನ್ನೂ ದೊರೆತಿಲ್ಲ.

ವೇದಾಂತ(ಉಪನಿಷತ್)ಗಳನ್ನು ಅವಲಂಬಿಸಿ ರಚಿತವಾಗಿರುವದರಿಂದ ಇದಕ್ಕೆ ವೇದಾಂತದರ್ಶನವೆಂದೂ ಹೆಸರು. ಇದರಲ್ಲಿ ವೇದಾಂತದ ಚರಮ ತಾತ್ಪರ್ಯವಾದ 'ಬ್ರಹ್ಮ'ದ ವಿಷಯವನ್ನು ಹೇಳಿರುವದರಿಂದ, ಇದಕ್ಕೆ ಬ್ರಹ್ಮಸೂತ್ರವೆಂದು ಹೆಸರು. ಮತ್ತು ಇಂತಹ ಬ್ರಹ್ಮದ ವಿಷಯದಲ್ಲಿ ಯಾವತ್ತು ಸಂಶಯ ಮತ್ತು ವಿಪರ್ಯಯೆಗಳನ್ನು ನಿರಾಕರಣ ಮಾಡಲ್ಪಟ್ಟಿದೆ ಎಂದು ಇದಕ್ಕೆ 'ಬ್ರಹ್ಮಮೀಮಾಂಸಾದರ್ಶನ' ಮತ್ತು ವೇದದ ಉತ್ತರ ಭಾಗದಲ್ಲಿ ಹೇಳಿದ ಜ್ಞಾನ ಮತ್ತು ಉಪಾಸನಾ ವಿಷಯಗಳ ಮೀಮಾಂಸೆ ಮಾಡಿದೆ ಎಂದು 'ಉತ್ತರಮೀಮಾಂಸಾದರ್ಶನ'ವೆಂದು ಹೆಸರುಂಟಾಗಿದೆ. ವ್ಯಾಸಮಹರ್ಷಿಗಳು ಇದನ್ನು ರಚಿಸಿರುವದರಿಂದ ಇದಕ್ಕೆ 'ವ್ಯಾಸಸೂತ್ರ'ಗಳೆಂದೂ ಹೆಸರು. ವೇದಾಂತದರ್ಶನ ಕರ್ತೃವಾದ ಬಾದರಾಯಣ ವ್ಯಾಸನೂ ವೇದವಿಭಾಗ ಕರ್ತೃವಾದ ಕೃಷ್ಣ ದ್ವೈಪಾಯನ ವ್ಯಾಸನೂ ಒಂದೇ ವ್ಯಕ್ತಿಯೆಂದು ಕೆಲವರು ಹೇಳುವರು. ಭಿನ್ನವ್ಯಕ್ತಿಯೆಂದು ಕೆಲವರು ಹೇಳುವರು. ಈ ಮತಭೇದದ ಮೀಮಾಂಸೆಯು ಪ್ರಕೃತ ಪ್ರಬಂಧದ ಉದ್ದೇಶವಲ್ಲವಾದ ಕಾರಣ, ಅದನ್ನು ಪ್ರತ್ಯೇಕ ಪ್ರಬಂಧವಾಗಿ ಮತ್ತೊಮ್ಮೆ ಬರೆಯುವೆವು.

ನಮ್ಮ ಧರ್ಮದ ಕರ್ಮಾಂಶ ನಿರ್ಣಯದ ಸಲುವಾಗಿ ರಚಿತವಾದ ದರ್ಶನಕ್ಕೆ "ಕರ್ಮಮೀಮಾಂಸಾದರ್ಶನ"ವೆಂದು ಹೆಸರು. ಈ ಕರ್ಮದ ವಿಷಯವು ವೇದದ ಪೂರ್ವ ಭಾಗದಲ್ಲಿ ಇರುವದರಿಂದ ಇದಕ್ಕೆ "ಪೂರ್ವಮೀಮಾಂಸಾದರ್ಶನ"ವೆಂದು ಮತ್ತೊಂದು ಹೆಸರು. ಇದನ್ನು ರಚಿಸಿದವನು 'ಜೈಮಿನಿ'ಯು. ಪೂರ್ವಮೀಮಾಂಸೆಯಲ್ಲಿ ಬಾದರಾಯಣ ವ್ಯಾಸರ ಹೆಸರೂ, ಉತ್ತರಮೀಮಾಂಸೆಯಲ್ಲಿ ಜೈಮಿನಿಯ ಹೆಸರೂ, ದೊರೆಯುವದರಿಂದ ಈ ಎರಡು ಗ್ರಂಥಗಳು ಸಮಸಾಮಯಿಕವೆಂದು ತಿಳಿಯುವದು. ಪುರಾಣಗಳಲ್ಲಿ ಜೈಮಿನಿಯು ವ್ಯಾಸನ ಶಿಷ್ಯನೆಂದು ಹೇಳಿದೆ. ಇವರಿಬ್ಬರೂ ಕೂಡಿ ವೇದಾರ್ಥ ಮೀಮಾಂಸಾರೂಪ ಎರಡು ಮೀಮಾಂಸಾದರ್ಶನಗಳನ್ನು* ರಚಿಸಿದ್ದಾರೆಂದು ರಾಮಾನುಜ ಮೊದಲಾದವರು ಒಪ್ಪುವರು. ಇವೆಲ್ಲ ಸಂಗತಿಗಳಿಂದ ಇವರು ಸಮಕಾಲೀನರೆಂದೇ ಸಿದ್ಧ. ಆದರೆ ಶ್ರೀಶಂಕರಾಚಾರ್ಯ ಮೊದಲಾದವರು ಇವರಿಬ್ಬರು ಬೇರೆಬೇರೆಯಾಗಿ ಈ ಶಾಸ್ತ್ರಗಳನ್ನು ರಚಿಸಿದರೆಂದು ಹೇಳುವರು.

---

* ಚತುರ್ದಶ ವಿದ್ಯೆಗಳೊಳಗೆ ಮೀಮಾಂಸೆಯೆಂಬುವದೇ ಮಿಗೆ ವಿಶೇಷವಾಗಿ ಇಪ್ಪತ್ತಧ್ಯಾಯಮೆನಿಸಿ ಕರ್ಮಾರ್ಥ ಪ್ರತಿಪಾದಕತ್ವದಿಂ ದ್ವಿಭಾಗಮಾಗಿಹುದದರೊಳಗೆ ಮೊದಲನೆಯ ಭಾಗವೇ ಜೈಮಿನಿ ಸೂತ್ರ ರೂಪದಿಂ ದ್ವಾದಶಾಧ್ಯಾಯಮೆನಿಸಿ ಕರ್ಮಕರ್ತೃ ಪ್ರತಿಪಾದಕಮಾಗಿ ಲೋಕ ವೇದಾಧಿಕರಣಮೆಂಬುವದು ಮೊದಲಾದ ಸಹಸ್ರಾಧಿಕರಣಾತ್ಮಕ ಶಾಸ್ತ್ರನ್ಯಾಯದಿಂ 'ಪೂರ್ವಮೀಮಾಂಸೆ'ಯೆನ್ನಿಸಿಕೊಂಬುವದು......ಬಳಿಕೆರಡನೆಯ ಭಾಗವೇ ಬ್ರಹ್ಮಾರ್ಥ ಪ್ರತಿಪಾದಕತ್ವದಿಂದುತ್ತರ ಮೀಮಾಂಸೆಯೆನ್ನಿಸಿಕೊಂಡು ವ್ಯಾಸಸೂತ್ರರೂಪದಿಂದೆಂಟಧ್ಯಾಯ ಮಾಗಿಹುದದರೊಳಗೆ ಪೂರ್ವದ ನಾಲ್ಕಧ್ಯಾಯವೇ ದೇವತಾಕಾಂಡ ಮೆನಿಸಿಕೊಂಬುವದರಲ್ಲಿ ಮಂತ್ರವಾದದಂತೆ ದೇವತಾದಿ ಲಕ್ಷಣವೇ ಬಲಭದ್ರರಾಮನಿಂ ಪ್ರತಿಪಾದಿಸಲ್ಪಟ್ಟಿತು. ಬಳಿಕುತ್ತರವಾದ ನಾಲ್ಕಧ್ಯಾಯವೇ ಬ್ರಹ್ಮಕಾಂಡವೆಂದೆನಿಸಿಕೊಂಬುವದು.... (ಶ್ರೀಮನ್ನಿಜಗುಣ ಶಿವಯೋಗಿಗಳ ವಿವೇಕಚಿಂತಾಮಣಿ-ವೇದಾಂತ ಪ್ರಕರಣ)

ಈ ವೇದಾಂತ ದರ್ಶನದಲ್ಲಿ ಯಾವ ಅರ್ಥವು ಲಕ್ಷಿತವಾಗಿರುವದು, ಆವ ಸಿದ್ಧಾಂತಗಳನ್ನು ಅವಲಂಬಿಸಿ ಈ ಸೂತ್ರಗಳು ರಚಿತವಾದವು ಎಂಬ ವಿಷಯವಾಗಿ ವಿಷಮ ಮತಭೇದ ಉಂಟಾಗಿರುವದು.

ಈಗ ಉಪಲಬ್ಧವಿರುವ ವೇದಾಂತಸೂತ್ರದ ಎಲ್ಲ ಭಾಷ್ಯಗಳಲ್ಲಿ ಶಂಕರಾಚಾರ್ಯರಿಂದ ರಚಿತವಾದ 'ಶಾರೀರಕ ಭಾಷ್ಯ'ವೇ ಮೊದಲಿನದು. ಇವರು ಅದ್ವೈತ ಮತದಂತೆ ಭಾಷ್ಯವನ್ನು ಬರೆದಿರುವರು. ಭಾಸ್ಕರಾಚಾರ್ಯರು ದ್ವೈತಾದ್ವೈತ ಮತದಂತೆಯೂ ಮಧ್ವಾಚಾರ್ಯರು ದ್ವೈತಮತದಂತೆಯೂ, ರಾಮಾನುಜರು ವಿಶಿಷ್ಟಾದ್ವೈತ ಮತದಂತೆಯೂ, ಶ್ರೀಕಂಠಶಿವಾಚಾರ್ಯರು ಶಕ್ತಿವಿಷ್ಟಾದ್ವೈತ ಮತದಂತೆಯೂ, ವ್ಯಾಖ್ಯೆಯನ್ನು ಮಾಡಿರುವರು. ಇವಲ್ಲದೆ ಇನ್ನೂ ಹಲವು ವ್ಯಾಖ್ಯೆಗಳು ದೊರೆಯುವವು. ಇದರ ಹೊರತು ಶಾಕ್ತ, ಗಾಣಾಪತ್ಯ, ಸೌರ ಮೊದಲಾದ ಮತಗಳ ವ್ಯಾಖ್ಯೆಗಳು ದೊರೆಯದಿದ್ದರೂ ಅವು ರಚಿತವಾಗಿದ್ದವೆಂದು ಊಹಿಸಲು ಅವಕಾಶವಿದೆ. ವೇದಾಂತದರ್ಶನದ ನಾನಾ ಮತಗಳಲ್ಲಿ ಬಹು ಭಾಷ್ಯೆಗಳು ಇರುವವು. ಮತ್ತು ಈ ಎಲ್ಲ ಭಾಷ್ಯೆಗಳ ವ್ಯಾಖ್ಯೆಗಳಲ್ಲಿ ಪುನಃ ಮತಭೇದ ಬಹುಟೀಕಾ ಟಿಪ್ಪಣೆಗಳೂ ಉಂಟು.*

ವೇದಾಂತದರ್ಶನದಲ್ಲಿಯ ವ್ಯಾಸದೇವರ ಅಭಿಪ್ರಾಯವೇನು? ಅವರು ಇದರಲ್ಲಿ ಯಾವ ತತ್ವವನ್ನು ಉಪದೇಶ ಮಾಡಿರುವರು?ಯಾವ ಮತವು ಉಪನಿಷತ್ ಅಥವಾ ವೇದಾಂತ ಅಭೀಷ್ಟವು? ಎಂಬ ಬಗ್ಗೆ ಈಗ ವಿಷಮ ಮತಭೇದಗಳಿವೆ. ಈ ಮತಭೇದಗಳನ್ನು ವಿಚಾರಮಾಡಲು ಇವು ಬಹು ದುರವಗಾಹವೂ, ಸೂಕ್ಷ್ಮಯುತ್ತಿತರ್ಕದಿಂದ ಪುರಿಪುಷ್ಟಗಳಾಗಿಯೂ ಪರಿಪೂರ್ಣಗಳೂ ಆಗಿರುವವೆಂದು ತಿಳಿಯುವದು. ಅಂದಮೇಲೆ ವೇದಾಂತದರ್ಶನದ ಪ್ರತಿಪಾದ್ಯ ಅಥವಾ ವ್ಯಾಸದೇವರ ಅಭಿಪ್ರಾಯವು ತಿಳಿಯುವದು ಮತ್ತು ನಿರ್ಣಯ ಮಾಡುವದು ಶಕ್ಯವಿಲ್ಲ. ವೇದಾಂತ ದರ್ಶನದಲ್ಲಿಯ ವ್ಯಾಸದೇವರ ಅಭಿಪ್ರಾಯವು ಈಗ ನಿರ್ಣಯವಾಗಲು ಶಕ್ಯವೋ? ಮತ್ತು ಒಂದು ವೇಳೆ ನಿರ್ಣಯವಾಗಲು ಶಕ್ಯವಾದರೆ ಅದರ ಉಪಾಯಗಳಾವವು?ಎಂಬೀ ವಿಷಯದ ಸಂಬಂಧವಾಗಿಯೇ ಈ ಪ್ರಬಂಧದಲ್ಲಿ ವಿಚಾರಿಸಲ್ಪಡುತ್ತದೆ.*

---

*ಭಾರತೀವಿಜಯ,ಸಂವಿದಾನಂದ, ಬ್ರಹ್ಮಘೋಷ, ಶತಾನಂದ, ಬೌಧಾಯನ, ಉದ್ಧತ, ವಿಜಯ, ರುದ್ರಭಟ್ಟ,ವಾಮನ, ಯಾದವ, ಪ್ರಕಾಶ, ಶಂಕರಾಚಾರ್ಯ, ಭರ್ತೃಪ್ರಪಂಚ, ಶಠಕೋಪ, ರಾಮಾನುಜ, ಬ್ರಹ್ಮದತ್ತ, ಭಾಸ್ಕರ, ಪಿಶಾಚ, ವಿಜಯಭಟ್ಟ,ವಿಷ್ಣುಕಾಂತ, ವಾದೀಂದ್ರ, ಮಾಧವದಾಸ, ಪೂರ್ಣಪ್ರಜ್ಞ, ರಾಘವೇಂದ್ರಸ್ವಾಮಿ, ವಲ್ಲಭಾಚಾರ್ಯ, ವಿಜ್ಞಾನಭಿಕ್ಷು, ಶಂಕರಾನಂದ, ಶ್ರೀಕಂಠಶಿವಾಚಾರ್ಯ, ಶ್ರೀಶಂಕರಭಗವತ್‌ಪಾದಶಿಷ್ಯ, ಧರ್ಮಭಟ್ಟ, ವಜ್ರನಾಥಭಟ್ಟ, ಭೈರವ, ನಿಂಬಾರ್ಕ ಇತ್ಯಾದಿ ವ್ಯಾಖ್ಯಾನಕಾರರ ಹೆಸರನ್ನು ಹೇಳುವರು.
(ಮ.ಮ.ವೇ. ಶಾ.ಸ. ವಾಸುದೇವಶಾಸ್ತ್ರಿ ಅಭ್ಯಂಕರರ ಶಾಂಕರಬ್ರಹ್ಮಸೂತ್ರದ ಮರಾಠೀ ಭಾಷಾಂತರ ಪ್ರಸ್ತಾವನೆ.)
ಉಪಲಬ್ಧವಿರುವ ವ್ಯಾಖ್ಯೆಗಳು:

ಶ್ರೀಶಂಕರಾಚಾರ್ಯ, ರಾಮಾನುಜ,ಪೂರ್ಣಪ್ರಜ್ಞ, ವಲ್ಲಭ, ಭಾಸ್ಕರ, ವಿಜ್ಞಾನಭಿಕ್ಷು, ಶ್ರೀಕಂಠಶಿವಾಚಾರ್ಯ ಇವರ ಭಾಷ್ಯಗಳು, ಶಂಕರಾನಂದ ಮತ್ತು ಶಂಕರಭಗವತ್‌ಪಾದ ಶಿಷ್ಯರ ವೃತ್ತಿ, ಧರ್ಮಭಟ್ಟನ ಅದ್ವೈತಾಮೃತ ವರ್ಷಿಣಿ, ರಾಮಾನುಜರ ವೇದಾಂತದೀಪ, ವಜ್ರನಾಥಭಟ್ಟನ ಮರೀಚಿಕಾ, ರಾಘವೇಂದ್ರನ ದೀಪಿಕೆ, ಭೈರವಪಂಡಿತನ ಬ್ರಹ್ಮಸೂತ್ರ ತಾತ್ಪರ್ಯವಿವರಣ, ಸುರೇಶ್ವರಾಚಾರ್ಯರ ಬ್ರಹ್ಮಸೂತ್ರವೃತ್ತಿ, ಶ್ರೀ ಸದಾಶಿವೇಂದ್ರ ಸರಸ್ವತಿವಿರಚಿತ ತತ್ವಪ್ರಕಾಶಿಕಾ ವೃತ್ತಿ, ಶ್ರೀ ಭಾರತೀತೀರ್ಥ ಸ್ವಾಮಿಗಳವರ ವೈಯಾಸಕೀ ನ್ಯಾಯಮಾಲಾ.
* ಈ ಗ್ರಂಥದ ೧೧ನೆಯ ಲೇಖನವನ್ನು ಇದು ಹೋಲುತ್ತದೆ.

೪

# ಯೋಗ

## ಶಿವಾನುಭವ ೪-೨

ಜಗತ್ತಿನ ಎಲ್ಲ ಧಾರ್ಮಿಕ ಗ್ರಂಥಗಳಲ್ಲಿಯೂ ದೈವೀಭಾವನೆಯಿಂದ ಪ್ರೇರಿತವಾದ ಗುರುಗಳ,ಭವಿಷ್ಯದ್ವಾದಿಗಳ, ಸಾಧುಗಳ ಮತ್ತು ಸತ್ಯದೃಷ್ಟ್ಯಗಳ ಜೀವನ ಚರಿತ್ರೆಗಳಲ್ಲಿ ಅನೇಕ ಅದ್ಭುತ ಸಂಗತಿಗಳು ಹಾಗು ಶಕ್ತಿಗಳ ವರ್ಣನೆಗಳು ದೊರೆಯುತ್ತವೆ. ಅವುಗಳಲ್ಲಿ ಕೆಲವು ಭಾಗವು ಅತಿಶಯೋಕ್ತಿಯೆಂದು ಬಿಡಲ್ಪಟ್ಟರೂ ನಿಜಾಂಶವು ಸಹ ಅವುಗಳಲ್ಲಿ ಇರಲೇಬೇಕು. ಪ್ರಾಚೀನಕಾಲದಿಂದ ಪ್ರತಿಯೊಂದು ಯುಗದಲ್ಲಿಯೂ ಪ್ರತಿಯೊಂದು ದೇಶದಲ್ಲಿಯೂ ಎರಡನೆಯವರ ವಿಚಾರಗಳನ್ನು ಅರಿಯುವಂಥ, ಭಾವೀಸಂಗತಿಗಳನ್ನು ತಿಳಿಯುವಂಥ ಎಷ್ಟೋ ಜನರ ಉದಾಹರಣೆಗಳು ನಮ್ಮ ದೃಷ್ಟಿಗೆ ಬೀಳುತ್ತವೆ. ಆದರೆ ಇವರಲ್ಲಿಯ ಬಹು ಜನರು ತಮ್ಮ ವಿಶಿಷ್ಟಶಕ್ತಿಯ ಕಾರಣಗಳನ್ನು ತಿಳಿದಿರಲಿಲ್ಲ. ಆದಕಾರಣ ಅವರು ಅವುಗಳನ್ನು ದೇವರು ಅಥವಾ ಭೂತಗಳು ಇವೇ ಮೊದಲಾದ ಎಷ್ಟೋ ಹೊರಗಿನ ಪ್ರಾಣಿಗಳ ಪ್ರೇರಣೆಯ ಪರಣಾಮವೆಂದು ತಿಳಿಹೇಳುತ್ತಿದ್ದರು.

ಅವರಲ್ಲಿ ಕೆಲವರು ಈ ಹೆಚ್ಚಿನ ಸಂಗತಿಗಳನ್ನು ಹೊರಗೆಡಹುವದಕ್ಕೆ ತಮ್ಮನ್ನೇ ಕಾರಣೀಭೂತರನ್ನಾಗಿ ಮಾಡಿರುವರೆಂದೂ, ತಾವು ಈಶ್ವರನ ಅಥವಾ ಯಾವದೊಂದು ವಿಶಿಷ್ಟ ದೇವತೆಯ ಪ್ರತಿನಿಧಿಯೆಂದು ಪೂಜಿಸಲ್ಪಡತಕ್ಕದ್ದೆಂದೂ ಹೇಳುತ್ತಿದ್ದರು. ಕ್ರಿಸ್ತೀ ಜನರು ಏಸೂಕ್ರಿಸ್ತನನ್ನೂ, ಮಹಮ್ಮದೀಯರು ಮಹಮ್ಮದನನ್ನೂ, ಬೌದ್ಧರು ಬುದ್ಧನನ್ನೂ ಜನ ಸಾಮಾನ್ಯರಿಂದ ಬೇರೆ ಎಂದು ತಿಳಿಯುವಂತೆಯೇ, ಈ ಅಮಾನುಷ ಶಕ್ತಿಯಿಂದೊಡಗೂಡಿದವರೂ ದೈವಿಕ ಅಪವಾದಗಳೆಂದು ಜನರು ತಿಳಿಯುತ್ತಿದ್ದರು. ಎಷ್ಟೋ ಜನರು ಇವರಿಗೆ 'ಮಾಂತ್ರಿಕ'ರೆಂದೂ ಅಥವಾ 'ಜಾದೂಗಾರ'ರೆಂತಲೂ ಅನ್ನುತ್ತಿದ್ದರು.

ಈ ಅಮಾನುಷ ಕೃತಿಗಳ ಸಾಧನೆಗಳು ಮಾತ್ರ ಎಂದೂ ಬರೆಯಲ್ಪಡದೆ ಗುರುವಿನಿಂದ ಶಿಷ್ಯನಿಗೆ ಬಾಯಿಯಿಂಧಲೇ ಹೇಳಲ್ಪಡುತ್ತಿದ್ದವು. ಈ ರೀತಿಯಿಂದ ಅವು ಪರಂಪರಾಗತವಾಗಿ ಗೌಪ್ಯರೀತಿಯಲ್ಲಿಯೇ ಇದ್ದವು. ಆದಕಾರಣದಿಂದಲೇ ಪ್ರಾಚೀನಕಾಲದಲ್ಲಿ ಇಷ್ಟು ಗುಪ್ತ ಸಂಘಗಳು ಸ್ಥಾಪಿತವಾದವು. ಅವುಗಳ ಉದ್ದೇಶವಾದರೂ ಹಲವು ತರದ ಶಿಕ್ಷಣದಿಂದ ಹಲವು ಬಗೆಯ ಶಕ್ತಿಗಳನ್ನು ಬೆಳೆಸುವದಾಗಿತ್ತು. ಇಜಿಪ್ತಿಯನ್ಸ್, ಈಶನ್ಸ್, ನಾಸ್ಟಿಕ್ಸ್, ಮ್ಯಾನಿಬೇನ್ಸ್, ನಿಯೋಪ್ಲೆಟೋನಿಸ್ಟ್ಸ್ ಮತ್ತು ತಮೋಯುಗದ ಕ್ರಿಸ್ತ ಜಾದುಗಾರರು ಗುಪ್ತ ಸಂಘಗಳನ್ನು ಇಟ್ಟಿದ್ದರು. ಅವುಗಳಲ್ಲಿ ಕೆಲವು ಇನ್ನೂ ಇರುವವು. ಉದಾ: ಮೇಸನಿಕ್ ಲಾಜ್, ಈ ಸಂಘದ ಸಭಾಸದರಲ್ಲಿ ಒಬ್ಬನೂ ತಮ್ಮ ಗುಪ್ತಶಿಕ್ಷಣವನ್ನು ಹೊರಗೆಡಹಲಿಲ್ಲ.ಅಥವಾ ತಮ್ಮ ಸಾಧನೆಗಳ ಸಮಂಜಸ ವಿಚಾರಗಳನ್ನೊಳಗೊಂಡ ಯಾವ ಪುಸ್ತಕಗಳನ್ನೂ ಬರೆಯಲಿಲ್ಲ.ಆದುದರಿಂದ ಹೆಚ್ಚಿನ ಶಕ್ತಿಗಳ

ಸಾಧನೆಯಲ್ಲಿ ಹೆಚ್ಚಾಗಿ ಹೆಚ್ಚಳವನ್ನು ಹೊಂದಿದವರು ಅನೇಕರಿದ್ದರೂ ಈ ಅಮಾನುಷ ಕೃತಿಗಳ ನಿಜವಾದ ಅರಿವು ಪಾಶ್ಚಾತ್ಯ ರಾಷ್ಟ್ರಗಳಿಗೆ ಆಗಲಿಲ್ಲ. ಇದಲ್ಲದೆ ಯಾವದೊಂದು ಪುಸ್ತಕರೂಪವಾಗಿಯೂ ಪರಿಣಮಿಸಲಿಲ್ಲ.

ಇದಕ್ಕೆ ವಿರುದ್ಧವಾಗಿ ಪ್ರಾಚೀನ ಹಿಂದುಸ್ತಾನದಲ್ಲಿ ಪಾಶ್ಚಾತ್ಯ ರಾಷ್ಟ್ರಗಳಲ್ಲಿಯಂತೆ (ಮಾಂತ್ರಿಕರೂ, ಜಾದುಗಾರರೂ,ಪಾಶ್ಚಾತ್ಯ ರಾಷ್ಟ್ರಗಳಲ್ಲಿ ರಾಜರಿಂದ ಶಿಕ್ಷಿಸಲ್ಪಡುತ್ತಿದ್ದರು)ಈ ತರಹದ ಕೃತಿಗಳಿಂದ ಜೀವ ಕಳಕೊಳ್ಳುವ ಭಯವಿಲ್ಲದ್ದರಿಂದ ಇಲ್ಲಿಯ ರೀತಿಯು ತೀರ ಬೇರೆ ತರಹದ್ದಾಗಿರುವದು. ಪ್ರತಿಯೊಬ್ಬ ಹಿಂದುವು ತನ್ನ ಧಾರ್ಮಿಕ ಕರ್ತವ್ಯದ ಭಾಗವೆಂದು ತಿಳಿದು, ಅವುಗಳಲ್ಲಿಯ ಕೆಲವನ್ನು ಪ್ರತಿದಿನ ಸಾಧನೆಯಿಂದ ಬೆಳೆಗೊಡುವದು ಅವಶ್ಯವಾಗಿತ್ತು. ಹೆಚ್ಚಿನ ಸತ್ಯಗಳ ಜ್ಞಾನಕ್ಕೋಸುಗ ಎದುರಾಗಿ ನಿಂತು ಹೆಣಗಾಡುವದು ಅವರ ಕರ್ತವ್ಯವಾಗಿತ್ತು. ಓಣಿಗಳಲ್ಲಿಯೂ, ಸಂತೆಪೇಟೆಗಳಲ್ಲಿಯೂ, ರಾಜಸಭೆಗಳಲ್ಲಿಯೂ, ರಣರಂಗದಲ್ಲಿಯೂ ಈ ಬಗೆಯ ಜ್ಞಾನವನ್ನು ಪಡಕೊಂಡ ಎಷ್ಟೋ ಜನರಿದ್ದರು. ಆದರೆ ಅವರೆಲ್ಲರು ತಮ್ಮ ಅನುಭವವನ್ನು ಹೆಚ್ಚಿನ ಎಚ್ಚರಿಕೆಯಿಂದ ವರ್ಗೀಕರಿಸಿ, ಅದರ ಆಧಾರದಿಂದ ಯೋಗಶಾಸ್ತ್ರವನ್ನು ನಿರ್ಮಿಸಿದರು.

ಈ ಪ್ರಕಾರ ಉಳಿದ ಎಲ್ಲ ಶಾಸ್ತ್ರಗಳಂತೆ ಯೋಗಶಾಸ್ತ್ರವಾದರೂ ಅನುಭವದ ತಳಹದಿಯ ಮೇಲೆ ಕಟ್ಟಲ್ಪಟ್ಟದ್ದೆಂಬುವದು ನಮಗೆ ಕಂಡುಬರುತ್ತದೆ.ಅವರು ಉಪಯೋಗಿಸಿದಂಥ ಬಗೆಯಾದರೂ ಪ್ರಕೃತಿಯ ಗುಣಧರ್ಮಗಳನ್ನು ಹುಡುಕುವಾಗ ಆಧುನಿಕ ವೈಜ್ಞಾನಿಕರು ಉಪಯೋಗ ಮಾಡುವಂತಹ ಅಂದರೆ ನಿರೀಕ್ಷಣ ಆಮೇಲೆ ಪ್ರಯೋಗ. ಈ ರೀತಿಯು ಸಂಪೂರ್ಣವಾಗಿ ಹೊಸದೆಂದು ಪಾಶ್ಚಿಮಾತ್ಯರು ಎಣಿಸುತ್ತಾರೆ. ಆದರೆ ನಿಜವಾಗಿ ಬಹುಕಾಲದ ಹಿಂದೆಯೇ ಭರತಖಂಡದ ಋಷಿವರ್ಯರು ಅದನ್ನು ಕಂಡು ಹಿಡಿದದ್ದಲ್ಲದೆ, ಪ್ರಚಾರದಲ್ಲಿ ಸಹ ತಂದರು. ಸೂಕ್ಷ್ಮ ನೀರಿಕ್ಷಣೆ ಮತ್ತು ಸತತ ಪ್ರಯೋಗಗಳಿಂದ ಸೃಷ್ಟಿಯ ಸೂಕ್ಷ್ಮ ಶಕ್ತಿಗಳನ್ನು ಶಾರೀರಕ ಮಾನಸಿಕ ಮತ್ತು ಆತ್ಮಿಕ ನಿಯಮಗಳನ್ನು ಹುಡುಕಿ ತೆಗೆದರು. ಈ ಪ್ರಕಾರ ತಮ್ಮ ಅನುಭವ ಮತ್ತು ನೀರಿಕ್ಷಣೆಗಳಿಂದ ದೊರಕಿಸಿದ ಸತ್ಯಗಳನ್ನು ಅವರು ಗ್ರಂಥರೂಪವಾಗಿ ಬರೆದಿಟ್ಟರು. ಸಮಾಜಕ್ಕೆ ತಿಳಿಹೇಳಿದರು. ಮತ್ತು ಶಿಷ್ಯವೃಂದಕ್ಕೆ ಮನವರಿಕೆ ಮಾಡಿಕೊಟ್ಟರು. ಆತ್ಮನ ಅಥವಾ ಪರಮಾತ್ಮನ ವಿಷಯಕ್ಕೆ ಏನೊಂದು ಊಹಿಸುವ ಪೂರ್ವದಲ್ಲಿ ಅದರ ಅರಿವನ್ನು ಅವರು ಮಾಡಿಕೊಂಡಿರುತ್ತಿದ್ದರು. ಸಾಧಕನಿಗೆ ಏನೊಂದು ಹೇಳುವ ಪೂರ್ವದಲ್ಲಿ ತಾವು ಸ್ವತಃ ಅದನ್ನು ಸಾಧಿಸಿ ನೋಡುತ್ತಿದ್ದರು. ಮತ್ತು ಸಾಧನೆಯಿಂದ ನಿಯಮಿತ ಪರಿಣಾಮಗಳನ್ನು ಕಂಡುಹಿಡಿಯುತ್ತಿದ್ದರು.

ಬಹುಕಾಲದಿಂದ ಭರತಖಂಡದೊಳಗೆ ಸೃಷ್ಟಿಸಾಮ್ರಾಜ್ಯದಲ್ಲಿ ನಡೆಯಿಸಿದ ಶೋಧನೆಯು ಅನೇಕ ಸತ್ಯಾನ್ವೇಷಿಗಳ ಅನಿವಾರ್ಯ ಪ್ರಯತ್ನದಿಂದ ಆರ್ಯಧರ್ಮವೆಂಬ ಸಾಧಾರಣ ಹೆಸರಿನಿಂದ ವರ್ಗೀಕರಿಸಲ್ಪಡುವ ಅನೇಕ ವಿಜ್ಞಾನಶಾಸ್ತ್ರಗಳು, ತತ್ವಜ್ಞಾನ ಗ್ರಂಥಗಳು,ಮನೋವಿಜ್ಞಾನ ಪುಸ್ತಕಗಳೇ ಮೊದಲಾದ ರೂಪಗಳಲ್ಲಿ ಪರಿವರ್ತನೆಯನ್ನು ಹೊಂದಿತು. ಧರ್ಮವೆಂಬುದು ಇವೆಲ್ಲವುಗಳನ್ನು ಒಳಗೊಂಡಿತ್ತು. ಯಾಕೆಂದರೆ ಭರತಖಂಡದೊಳಗೆ ಯಾವ ಕಾಲದಲ್ಲಿಯೂ ಧರ್ಮವು ಭಿನ್ನ ಭಿನ್ನ ಶಾಖೆಗಳಾಗಿ ವಿಭಾಗಿಸಲ್ಪಟ್ಟಿಲ್ಲ. ಅಥವಾ ದಿನದ ವ್ಯವಹಾರದಿಂದ ಬೇರೆಯಾಗಿಲ್ಲ. ಆತ್ಮಿಕ ಸುಧಾರಣೆಗೋಸುಗ ಯಾವನೊಬ್ಬ ವ್ಯಕ್ತಿಯು ದಿನದ ವ್ಯವಹಾರದಲ್ಲಿ ಉಪಯೋಗ ಮಾಡಿಕೊಳ್ಳುವ ನಿಯಮಬದ್ಧ ತತ್ವಗಳೇ 'ಯೋಗ'ವೆಂಬ ಹೆಸರನ್ನು ಹೊಂದಿವೆ.

'ಯೋಗ'ವೆಂಬುದು ಧರ್ಮದ ಅನುಭವಾತ್ಮಕ ಭಾಗವನ್ನು ಸೂಚಿಸುವದೊಂದು ಸಂಸ್ಕೃತಶಬ್ದವು. ಸಂಪೂರ್ಣ ಆರೋಗ್ಯ ಮತ್ತು ನೈತಿಕ ಆತ್ಮಿಕ ಪೂರ್ಣತೆಗಳ ಸಾಧನೆಗಳು, ನಮ್ಮ ನೈತಿಕ ಮತ್ತು ಶಾರೀರಕ ಪ್ರಕೃತಿಯನ್ನವಲಂಬಿಸಿರುತ್ತವೆ. ಈ ಪ್ರಕೃತಿಯ ನಿಯಮಗಳನ್ನು ಅನುಸರಿಸುವಂತೆ ನಮ್ಮನ್ನು ಮುಂದುಮಾಡುವದೇ

ಯೋಗದ ಮೊದಲನೆಯ ಸಂಬಂಧ. ಯೋಗ ಶಬ್ದವು ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಬಹು ತಪ್ಪಾದ ಅರ್ಥದಲ್ಲಿ ಉಪಯೋಗಿಸಲ್ಪಡುತ್ತದೆ. ಎಷ್ಟೋ ಲೇಖಕರು ಇದನ್ನು ಗಾರುಡಿಗತನ, ಸುಷುಪ್ತಿವಿದ್ಯೆ, ಹಿಪ್ನಾಟಿಜಮ್, ಕಪಟತಂತ್ರ ಇವೇ ಮೊದಲಾದ ತೀರ ತಪ್ಪಾದ ಅರ್ಥಗಳಲ್ಲಿ ಉಪಯೋಗಿಸಿದ್ದಾರೆ. ಯೋಗ ಮಾಡುವವನು ಯೋಗಿಯು. ಆದರೆ ಯೋಗವೆಂಬ ಶಬ್ದವನ್ನು ಕೇಳಿದೊಡನೆ ಅವರಿಗೆ ಯಾವನೊಬ್ಬ ಗಾರುಡಿಗನ, ತಂತ್ರಗಾರನ, ಫಕೀರನ, ಅಥವಾ ಜಾದೂ ಸಾಧನೆ ಮಾಡುವವನ ನೆನಪಾಗುತ್ತದೆ. ಈ ತರದ ತಪ್ಪು ತಿಳುವಳಿಕೆಯು ಬಳಕೆಯಲ್ಲಿ ಬರಬೇಕಾದರೆ 'ಥಿಯಾಸಾಫಿಸ್ಟ್' ಸಂಘದವರೇ ಮುಖ್ಯ ಕಾರಣರು. ಆದರೆ ಭಾರತೀಯರ ಧರ್ಮಗ್ರಂಥಗಳನ್ನು, ಉದಾಹರಣಾರ್ಥ ಭಗವದ್ಗೀತೆಯನ್ನು ಅಭ್ಯಾಸ ಮಾಡಿದ ಪ್ರತಿಯೊಬ್ಬನಿಗೆ ಅದರಲ್ಲಿಯ ಪ್ರತಿಯೊಂದು ಅಧ್ಯಾಯವು ಅಂತಿಮಸತ್ಯವನ್ನು ತಿಳಿಸುವದಕ್ಕಾಗಿಯೂ, ಅತ್ಯುಚ್ಚ ಜ್ಞಾನಲಾಭಕ್ಕೋಸುಗವಾಗಿಯೂ ಇರುವದೆಂದು ಹಾಗು ಯೋಗಿಯೆಂದರೆ ಬೇರೆ ಬೇರೆ ಸಾಧನೆಗಳಿಂದ ಧರ್ಮದ ಉಚ್ಚತವು ಆದರ್ಶವನ್ನು ಮುಟ್ಟಿದವನಿರುವನೆಂದು ಹೊಳೆಯದೆ ಇರಲಾರದು. ಭಗವದ್ಗೀತೆಯಂತೆ 'ಆತ್ಮ' ಮತ್ತು 'ಪರಮಾತ್ಮ' ಇವುಗಳ ಐಕ್ಯವೇ ಉಚ್ಚತಮ ಆದರ್ಶವು.

ಹೀಗಿದ್ದರೂ ಹಿಂದೂ ಲೇಖಕರು ಎಷ್ಟೋ ಬೇರೆ ಬೇರೆ ಅರ್ಥಗಳಲ್ಲಿ ಉಪಯೋಗಿಸಿದ್ದಾರೆ: ೧. ಎರಡು ಬಾಹ್ಯ ಪದಾರ್ಥಗಳ ಸಂಯೋಗ, ೨.ಸಾಧಾರಣ ಕಾರ್ಯವನ್ನು ಮಾಡುವಂತಹ ಕಾರಣಗಳ ಒಳಹೊದಿಕೆ,೩.ಯಾವನೊಬ್ಬ ಸೈನಿಕನ ಅಥವಾ ಉದ್ಯೋಗಸ್ತನ ನಿಯಮಿತ ಉಡುಪು,೪.ಯಾವದೊಂದು ಸತ್ಯಾನ್ವೇಷಣೆಗೆ ಅವಶ್ಯವಾದ ಸದಸದ್ವಿವೇಕ ಬುದ್ಧಿ ಮತ್ತು ತರ್ಕಶಕ್ತಿ, ೫.ಯಾವದೊಂದು ವಿಶಿಷ್ಟ ವಿಚಾರವನ್ನೊಯ್ಯುವಂತೆ ಮಾಡುವ ಧ್ವನಿಶಕ್ತಿ, ೬.ಹತ್ತರಿದ್ದುದರ ರಕ್ಷಣೆ, ೭.ಒಂದು ಪದಾರ್ಥವನ್ನು ಇನ್ನೊಂದಾಗಿ ಮಾಡೋಣ,೮.ಒಬ್ಬ ಆತ್ಮನೊಡನೆ ಮತ್ತೊಬ್ಬನ ಸಂಯೋಗ ಅಥವಾ ಆತ್ಮ ಪರಮಾತ್ಮರ ಐಕ್ಯ,೯.ಯಾವದೊಂದು ಪದಾರ್ಥದೆಡೆಗೆ ಹರಿಯುವ ವಿಚಾರ ಪ್ರವಾಹ, ೧೦.ಧ್ಯಾನ ಧಾರಣೆಯಿಂದ ಎಲ್ಲ ಕಾರ್ಯಗಳ ನಿರೋಧ. ಈ ರೀತಿಯಲ್ಲಿ ಒಂದೇ ಶಬ್ದದ ಬೇರ ಬೇರೆ ವ್ಯಾಖ್ಯೆಗಳಲ್ಲಿ ಎಷ್ಟೋ ತರದ ಶಾಸ್ತ್ರಗಳ ಶಾಖೋಪಶಾಖೆಗಳು ಒಳಗೊಂಡಿವೆ. ನಿಜವಾಗಿ ಈ ಶಬ್ದವು ಸೃಷ್ಟಿಯ ಎಲ್ಲ ಭಾಗವನ್ನು ಆಕ್ರಮಿಸಿದೆ. ಈ ಶಬ್ದದ ಅಕ್ಷರಶಃ ಅರ್ಥದ ವಿಚಾರವನ್ನು ಮಾಡಿದರೆ ಇದರ ವ್ಯಾಪಕತೆಯ ಉದ್ದೇಶವು ನಿಮಗೆ ತಿಳಿಯುವದು.

'ಯುಜ್' ಅಂದರೆ ಕೂಡಿಸು ಎಂಬ ಸಂಸ್ಕೃತ ಧಾತುವಿನಿಂದ ಈ ಶಬ್ದವು ಬಂದಿದೆ. ಇಂಗ್ಲಿಷ ಭಾಷೆಯಲ್ಲಿಯ' Yove'ಎಂಬ ಶಬ್ದವಾದರೂ ಇದೇ ಧಾತುವಿನಿಂದ ಬಂದಿದೆ. ಯುಜ್ ಧಾತುವಿನ ಅರ್ಥವು ಒಂದನ್ನು ಮತ್ತೊಂದಕ್ಕೆ ಕೂಡಿಸೋಣವೆಂದು ಆಗುತ್ತದೆ. ಲಕ್ಷ್ಯವಸ್ತುವಿನಂತೆ ಯೋಗಾಭ್ಯಾಸಕ್ಕೆ ಬೇಕಾಗುವ ಶ್ರಮವಾದರೂ ಮಾನಸಿಕ ಅಥವಾ ಶಾರೀರಕ ಇರುವದು. (ಗುರಿಯು ಬೇರೆಯಾದಂತೆ ಅದನ್ನು ಸಾಧಿಸುವ ಬಗೆಯಾದರೂ ಬೇರೆಯಾಗುವದು). ಪೂರ್ಣ ಆರೋಗ್ಯ ಸಾಧನೆಯೇ ನಮ್ಮ ಗುರಿಯಾಗಿದ್ದರೆ ಎಷ್ಟೋ ಸಾಧನೆಗಳಿಂದ ಇದನ್ನು ಸಾಧಿಸುವ ಮಾನಸಿಕ ಮತ್ತು ಶಾರೀರಿಕ ಯತ್ನಗಳಿಗೆ ಯೋಗವೆನ್ನುತ್ತೇವೆ. ಇದರಂತೆಯೇ ಮಾನಸಿಕ ಶಕ್ತಿಗಳ ಬೆಳವಣಿಗೆಯೇ ಉದ್ದೇಶವಿದ್ದರೂ ಅದಕ್ಕೆ ಬೇಕಾಗುವ ಹೆಣಗಾಟಗಳಿಗೆ ಯೋಗವೆನ್ನುತ್ತೇವೆ. ಆತ್ಮಸಂಯಮನ, ಈಶ್ವರನೊಡನೆ ಆತ್ಮನ ಸಂಯೋಗ, ಅಧ್ಯಾತ್ಮಿಕ ಪೂರ್ಣತೆ ಅವುಗಳ ಸಿದ್ಧಗೋಸುಗ ಅವಶ್ಯವಾದ ನೈತಿಕ ಶಿಕ್ಷಣ - ಈ ಅರ್ಥದಲ್ಲಿಯಾದರೂ ಯೋಗ ಶಬ್ದವು ಉಪಯೋಗಿಸಲ್ಪಡುತ್ತದೆ. ಯೋಗಶಾಸ್ತ್ರದ ಭಿನ್ನ ಭಿನ್ನ ತರಹಗಳನ್ನೊಳಗೊಂಡ ಮತ್ತು ಯೋಗಸಾಧನೆಯಿಂದ ಸಾಧ್ಯವಾದ ಅನೇಕ ಆದರ್ಶಗಳಿಂದ ತುಂಬಿದ ಎಷ್ಟೋ ಪುಸ್ತಕಗಳು ರಚಿಸಲ್ಪಟ್ಟಿರುತ್ತವೆ.

ಯೋಗದ ಹಾದಿಯನ್ನು ಹಿಡಿಯಲಿಚ್ಛಿಸುವ ಪ್ರತಿಯೊಬ್ಬನಿಗೆ ತಾಳ್ಮೆ ಮತ್ತು ದೃಢ ಸಂಕಲ್ಪಗಳು ಅತ್ಯವಶ್ಯವಾದವುಗಳು.ತಾಳ್ಮೆ ಇಲ್ಲದವರು ಸತ್ಯಜ್ಞಾನವನ್ನು ಸಾಧಿಸಿಕೊಳ್ಳಲರಿಯರು. ಶೋಧಕ ಬುದ್ಧಿಯಿಂದ ಅಥವಾ ಕ್ಷಣಿಕ ಉತ್ಸಾಹತೆಯಿಂದ ಪ್ರೇರಿತರಾದವರು ಒಳ್ಳೇ ಪರಿಣಾಮಗಳನ್ನು ಕಾಣಲಾರರು. ಈ ತಪ್ಪು ಅವರದೇ. ಅದನ್ನು ಗುರುಗಳ ತಲೆಯ ಮೇಲೆ ಹೊರಿಸಲಾಗದು. ಅದೇ ನಿಯಮಗಳನ್ನು ಒಳ್ಳೇ ತಿಳುವಳಿಕೆಯಿಂದ ಮತ್ತು ಯೋಗ್ಯ ರೀತಿಯಿಂದ ಮನಮುಟ್ಟಿ ಮಾಡಿದರೆ, ಅದರಿಂದ ಅಚ್ಚರಿಗೊಳ್ಳುವ ಪರಿಣಾಮಗಳು ಕಂಡು ಬರುವವು. ಶಾರೀರಿಕ ಮತ್ತು ಮಾನಸಿಕ ಆಚರಣೆಗಳಲ್ಲಿ ಹಾದಿ ತೋರಿಸುವಂಥ ಸಜೀವ ಶಿಕ್ಷಕನ ಶಿಕ್ಷಣವನ್ನು ಅನುಸರಿಸುವ ಪ್ರತಿಯೊಬ್ಬ ವಿದ್ಯಾರ್ಥಿಗೆ ಒಳ್ಳೇ ಪರಿಣಾಮಗಳು ಕಂಡು ಬರುತ್ತವೆ. ಯೋಗಾಭ್ಯಾಸ ಮಾಡಲಿಚ್ಛಿಸುವವರನ್ನು ಮೂರು ಭಾಗಗಳಾಗಿ ವಿಭಾಗಿಸಬಹುದು.

೧. ಹುಟ್ಟು ಯೋಗಿಗಳು: ಹಿಂದಿನ ಜನ್ಮದಲ್ಲಿ ಯೋಗವನ್ನು ಆಚರಿಸಿ,ಈಗ ಜನ್ಮ ತಾಳಿದ ಕೆಲವರು ಬಾಲ್ಯದಿಂದಲೇ ಅಮಾನುಷ ಕೃತಿಗಳನ್ನು ಹೊರಗೆಡಹುತ್ತಾರೆ. ಅವರ ಸ್ವಾಭಾವಿಕ ಒಲವು ಶುದ್ಧ ಆಚರಣೆಯ ಕಡೆಗಿರುತ್ತದೆ. ಯಾಕೆಂದರೆ ಯೋಗ್ಯ ಚರಿತಾರ್ಥ ಮತ್ತು ನಿರ್ದೋಷ ವಿಚಾರಗಳೇ ಅವರಲ್ಲಿ ಹೆಚ್ಚಳವನ್ನು ಪಡೆದಿದ್ದು, ಮನಸ್ಸನ್ನು ಅಂಕೆಯಲ್ಲಿ ಇಟ್ಟುಕೊಂಡಿರುವರು. ವಿಷಯಸುಖಗಳು ಮತ್ತು ಸಾಧಾರಣ ಜನರ ಮನಸ್ಸನ್ನು ಮರುಳುಗೊಳಿಸುವ ವಿಷಯಗಳು ಅವರಲ್ಲಿ ಎಡೆಗೊಂಡಿರುವದಿಲ್ಲ. ಜೀವಿತದ ಎಲ್ಲ ಸುಖ ಸಂಪತ್ತಿನಿಂದ ಸುತ್ತು ಗಟ್ಟಲ್ಪಟ್ಟಿದ್ದರೂ ಅವರು ಗುರುತಿಲ್ಲದ ನಾಡಿನಲ್ಲಿ ಪರಕೀಯರಿದ್ದಂತೆ ಇರುತ್ತಾರೆ. ಇಂಥ ವ್ಯಕ್ತಿಗಳ ಮಾನಸಿಕ ಸ್ಥಿತಿಯನ್ನು ಕಂಡುಹಿಡಿಯುವದು ಕಷ್ಟದ ಮಾತು. ಅವರನ್ನು ವೈದ್ಯರೆಡೆಗೆ ಕರೆತಂದು ಹುಚ್ಚಿನ ಔಷಧೋಪಚಾರಗಳನ್ನು ಮಾಡಿಸಿದರೆ ಏನೂ ಗುಣ ತೋರದೆ, ಅದಕ್ಕೆ ವಿಪರೀತವಾಗಿ ಕೆಡಕು ಪರಿಣಾಮವೇ ಕಂಡು ಬರುವದು. ಆಕರ್ಷಣ ಶಕ್ತಿಯಿಂದ ಅವರು ಒಂದಿಲ್ಲೊಂದು ದಿನ ಯಾವನೊಬ್ಬ ಯೋಗಿಯ ಸಹವಾಸವನ್ನು ಪಡೆಯುವರು. ತಮ್ಮ ಆಂತರಿಕ ಭಾವನೆಯು ಹಂಬಲಿಸುತ್ತಿದ್ದದನ್ನು ಅವನಲ್ಲಿ ಕಂಡು ಹಿಡಿದು, ಸುಖ ಸಮಾಧಾನವನ್ನು ಹೊಂದುವರು.ಆ ಯೋಗಿಯ ಶಿಕ್ಷಣವು ಅವರ ಮನಸ್ಸಿನ ಮೇಲೆ ಅಚ್ಚೊತ್ತಿದಂತೆ ಆಗುತ್ತದೆ.ಆ ಯೋಗಿಯ ಮೇಲ್ವಿಚಾರಣೆಯಿಂದ ತಮ್ಮ ಯೋಗಾಭ್ಯಾಸವನ್ನು ಪ್ರಾರಂಭ ಮಾಡುತ್ತಾರೆ. ಈ ಅಧ್ಯಯನವು ಅವರಿಗ ಸುಲಭವೂ, ಸ್ವಾಭಾವಿಕವೂ ಆಗಿ ತೋರಿ, ಬೇಗನೆ ಅತ್ಯುತ್ತಮ ಸಿದ್ಧಿಗಳನ್ನು ಹೊಂದುವರು. ಈ ಪ್ರಕಾರ ಅವರು ತಮ್ಮ ಪೂರ್ವಜನ್ಮದಲ್ಲಿ ಯೋಗವನ್ನು ಎಲ್ಲಿಗೆ ಬಿಟ್ಟಿದ್ದರೋ ಅಲ್ಲಿಂದಲೇ ಬಾಲ್ಯದಿಂದ ಆರಂಭಮಾಡುತ್ತಾರೆ. ಹಾದಿಯಲ್ಲಿ ತಮಗೆ ಅಡರುವ ಎಡರುಗಳನ್ನು ಎದೆಗೊಟ್ಟು ಕಾದಿ,ಮನಮುಟ್ಟಿ ದುಡಿದು, ತೀವ್ರವಾಗಿ ಮತ್ತು ನಿಯಮಿತವಾಗಿ ಅಧ್ಯಾತ್ಮ ಜೀವನದ ಮೇಲುದಾರಿಯನ್ನು ಮುಟ್ಟುವರು. ಜಗತ್ತಿನಲ್ಲಿಯ ಯಾವ ಶಕ್ತಿಯೂ ಅವರನ್ನು ತಡೆಯದು. ಯಾಕೆಂದರೆ ಜ್ಞಾನಾಭಿಲಾಷೆಯೇ ಅವರಲ್ಲಿ ಅಷ್ಟು ದಟ್ಟವಾಗಿರುವದು.

೨.ಅರ್ಧ ಪ್ರಬುದ್ಧ ಆತ್ಮಗಳು: ಮುಂದಿನ ಅನುಭವದ ಹಂಬಲದಿಂದ ಸತ್ಯ ಮಾರ್ಗದ ಶೋಧನೆಗೊಸುಗ ಇವರು ಎಷ್ಟೋ ಬಗೆಯಾಗಿ ಹೆಣಗಾಡುವರು. ಅವರು ಪ್ರತಿಯೊಂದು ಮೆಟ್ಟಲನ್ನು ಶೋಧಕ ಬುದ್ಧಿಯಿಂದ ನಿರೀಕ್ಷಿಸಿ, ಸತತ ಪ್ರಯೋಗ ಮಾಡುವದರಲ್ಲಿಯೇ ಬಹುಶಕ್ತಿಯನ್ನೂ ಎಷ್ಟೋ ವೇಳೆಯನ್ನೂ ವೆಚ್ಚಮಾಡುತ್ತಾರೆ. ಈ ಪ್ರಕಾರ ಪೂರ್ವದಲ್ಲಿ ಪಡೆದ ಸಂಸ್ಕಾರದಿಂದೊಡಗೂಡಿದ ಇಂಥ ಅರ್ಧ ಪ್ರಬುದ್ಧರು ದೈವಯೋಗದಿಂದ ಯೋಗಿಗಳ ಸಹವಾಸವನ್ನು ಹೊಂದಿದರೆ, ದೃಢನಿಶ್ಚಯ ಮತ್ತು ತಿಳುವಳಿಕೆಗಳಿಂದ ಈ ಜನ್ಮದಲ್ಲಿಯೇ ಸಿದ್ಧಿಯನ್ನು ಪಡೆಯುವರು. ಆದರೆ ಮೊದಲನೆಯ ತರಗತಿಯವರಿಗಿಂತ ಇವರು ಮುಂದುವರಿಯುವದು ಸಾವಕಾಶ.

೩. ಸತ್ಯಶೋಧನೆಯ ಕಾರ್ಯವನ್ನು ಹಾಗು ಯೋಗಚಾರಣೆಯನ್ನು ಈ ಜನ್ಮದಲ್ಲಿಯೇ ಮೊದಲು ಮಾಡುವ ಅಜಾಗ್ರತರು ಈ ವರ್ಗದಲ್ಲಿ ಸೇರುತ್ತಾರೆ.ಅವರು ಬಾಲ್ಯದಿಂದಲೇ ನಿರ್ವಿರೋಧವಾಗಿ, ವಿಷಯವಾಸನೆಯಿಂದ ಜಗ್ಗಲ್ಪಡುತ್ತಾರೆ. ಅವರು ಯೋಗಚಾರಣೆಯನ್ನು ಮಾಡಹತ್ತಿದರೆ ಅದರ ನಿಯಮಗಳನ್ನು ಅನುಸರಿಸುವದು ಕಷ್ಟವಾಗಿ ಎಷ್ಟೋ ಎಡರುಗಳಿಗೀಡಾಗುವರು. ಅವರ ಪರಿಸ್ಥಿತಿಯಾದರೂ ಸಾಧನೆಗೆ ಅನುಕೂಲವಾಗಿರುವದಿಲ್ಲ. ಹೀಗಾಗಿ ಅವರು ಎಷ್ಟು ಹೆಣಗಾಡಿದರೂ ಕೊನೆಗಾಣುವದು ದುಸ್ತರವಾಗಿರುವದು. ಅವರ ದೇಹಸ್ಥಿತಿಯಾದರೂ ಒಳ್ಳೇದಾಗಿರುವದಿಲ್ಲ. ಅವರ ಮನಸ್ಸೂ ಚಂಚಲವಾಗಿರುವದು. ಇವರು ಎಷ್ಟೋ ಆಧಿವ್ಯಾಧಿಗಳಿಂದ ಬಳಲುತ್ತಿರುವರು. ಅವರಲ್ಲಿ ದೃಡಸಂಕಲ್ಪವಿರುವದಿಲ್ಲ. ಇಂದ್ರಿಯ ನಿಗ್ರಹವಂತೂ ಅವರಿಗೆ ಅಸಂಭವೇ. ಹೊಸ ಹೊಸ ಪರಿಸ್ಥಿತಿಗನುಸರಿಸಿ ತಮ್ಮ ಜೀವನಗತಿಯನ್ನಾದರೂ ಹೆಚ್ಚು ಕಡಿಮೆ ಮಾಡಬೇಕಾಗುವದು. ಈ ಎಲ್ಲ ಪ್ರತಿಬಂಧಗಳಿಗೆ ಅವರು ಎದೆಗೊಡಬೇಕಾಗುವದರಿಂದ, ಎಷ್ಟೋ ಕಾಲದ ವರೆಗೆ ಆಚರಣೆ ಮಾಡಿದ ಮೇಲೆ ಸ್ವಲ್ಪ ಪರಿಣಾಮವು ಕಂಡುಬರುತ್ತದೆ. ಆದರೂ ಇಂಥ ಜನರು ಸಾವಕಾಶವಾಗಿ ನಿಯಮಿತವಾದ ಹಠಯೋಗಾಭ್ಯಾಸದಿಂದ ತಮ್ಮ ಇಚ್ಛಾಶಕ್ತಿಯನ್ನು ಬೆಳೆಸಬಲ್ಲವರಾದರೆ, ಪ್ರಾಣಾಯಾಮ ಮಾಡಿ ತಮಗೊದಗುವ ಸಂಕಟಗಳನ್ನು ದೂರ ಮಾಡಿದರೆ ಮತ್ತು ಯೋಗ್ಯ ಗುರುವಿನ ಹೇಳಿಕೆಯಂತೆ ನಡೆದುಕೊಂಡರೆ, ಈ ಜನ್ಮದಲ್ಲಿಯೇ ಅವನು ತನ್ನ ಶಾರೀರಿಕ ಆರೋಗ್ಯವನ್ನು ತನಗೆ ಸರಿದೋರಿದಂತೆ ತಿರುವ ಬಲ್ಲನು. ಮತ್ತು ಅಲ್ಪ ಸ್ವಲ್ಪ ಯೋಗಿಕ ಶಕ್ತಿಯನ್ನು ದೊರಕಿಸ ಬಲ್ಲನು. ಹಠಯೋಗವು ಬಹುತರ ಇಂಥ ಜನರಿಗೇ ಉಪಯೋಗವುಳ್ಳದ್ದಾಗಿರುತ್ತದೆ. ಪ್ರಾಣಾಯಾಮ ಸಾಧನೆಯಿಂದ ಶರೀರವನ್ನು ತಮ್ಮ ಅಂಕೆಯಲ್ಲಿಟ್ಟು ಕೊಳ್ಳಬಲ್ಲರು; ಬರಬರುತ್ತ ರಾಜಯೋಗಾಭ್ಯಾಸಕ್ಕೆ ಯೋಗ್ಯವಾದ ಕ್ಷೇತ್ರವನ್ನುಂಟು ಮಾಡಿಕೊಳ್ಳುವರು. ರಾಜಯೋಗಾಭ್ಯಾಸದಿಂದ ಅವರ ಆತ್ಮನಲ್ಲಿ ಅಡಗಿಕೊಂಡಿದ್ದ ಅನೇಕ ಅದ್ಭುತ ಶಕ್ತಿಗಳು ಬೈಲಿಗೆ ಬರುವವು.

❖❖

೨೫

# ಜ್ಞಾನಯೋಗ

**ಶಿವಾನುಭವ ೩-೧೨**

ಜ್ಞಾನ ಶಬ್ದವು ಸಂಸ್ಕೃತ ಜ್ಞಾ-ತಿಳಿ, ಎಂಬ ಧಾತುವಿನಿಂದ ಬಂದಿದ್ದು, ಇದರರ್ಥವು ತಿಳಿವಳಿಕೆಯೆಂದಾಗುತ್ತದೆ. ಈ ದಾರಿಯು ತನ್ನ ಸಾಧಕನಿಗೋಸುಗ ಮುಂದಿರಿಸಿದ ಗುರಿ ಎಂದರೆ ಸಕಲವಿಶ್ವಕ್ಕೆ ಉಗಮಸ್ಥಾನವಾದ ಅಂತಿಮಸತ್ಯವನ್ನು ತಿಳಿಯುವದು. ಒಂದೇ ಜೀವವು, ಒಂದೇ ಪ್ರಾಣಿಯು, ಒಂದೇ ಸತ್ಯವು ಇರುತ್ತದೆ. ಎಲ್ಲ ಬಗೆಯ ಭೇದಭಾವಗಳಾಗಲಿ ದ್ವಿತ್ವ, ಅನೇಕತ್ವಗಳಾಗಲಿ ಅಸತ್ಯವಾದವುಗಳು.

ಜ್ಞಾನಯೋಗವು ಸಂಪೂರ್ಣವಾಗಿ ಅದ್ವೈತ ತತ್ವಗಳ ಮೇಲೆ ನಿಲ್ಲಿಸಲ್ಪಟ್ಟಿದೆ. ಒಳಹೊರಗಣ ಶಕ್ತಿಗಳೆಲ್ಲವೂ ಯಾವದರಿಂದ ಉಗಮ ಹೊಂದುತ್ತವೆಯೋ ಮತ್ತು ಯಾವದು ಅನಂತ ಬುದ್ಧಿಯ ಮತ್ತು ಶಾಶ್ವತ ಸುಖದ ನೆಲೆಯಾಗಿದೆಯೋ ಅಂತಹದೊಂದು ವಸ್ತುವಿನಲ್ಲಿಯೇ ಎಲ್ಲ ವಿವಿಧ ವಿಶ್ವವನ್ನು ಏಕೀಕರಿಸಿ ತೋರಿಸುವದೇ ಈ ಯೋಗದ ಗುರಿ.

ಜ್ಞಾನಯೋಗಕ್ಕನುಸಾರವಾಗಿ ಪ್ರಕೃತಿ, ಮನಸ್ಸು,ಬುದ್ಧಿ, ಇಂದ್ರಿಯಶಕ್ತಿ, ನಾಮರೂಪಗಳು ಆ ಬ್ರಹ್ಮನವೇ ಬೇರೆ ಬೇರೆ ಆಭಾಸರೂಪಗಳು. ಅವು ನಿಮಗೆ ನಿಜವೆಂದು ತೋರಿದರೂ ಅವು ನಿಜವಾಗಿ ಸಾಪೇಕ್ಷಿಕ ಸತ್ಯಗಳಾಗಿರುತ್ತವೆ. ಸಮುದ್ರದಲ್ಲಿ ತೆರೆಗಳು ಎದ್ದು, ಆಡಿ, ಕೆಲಕಾಲದ ತರುವಾಯ ಇಲ್ಲದಂತಾಗುತ್ತವೆ. ಅದರಂತೆಯೇ ಕರ್ತೃಕಾರಣಗಳೆಂಬ ತೆರೆಗಳು ಈ ಬ್ರಹ್ಮಸಮುದ್ರದಲ್ಲಿ ಹುಟ್ಟಿ, ಕೆಲಹೊತ್ತು ಬಾಳಿ, ಆಮೇಲೆ "ಬ್ರಹ್ಮನಲ್ಲಿಯೇ ಅಡಗುತ್ತವೆ. ಬ್ರಹ್ಮನಿಂದಲೇ ಎಲ್ಲ ಸಜೀವ ನಿರ್ಜೀವ ಪದಾರ್ಥಗಳ ಜನನವಾಗಿ, ಅದರ ಬಲದಿಂದಲೇ ಬಾಳಿ, ಕಡೆಗೆ ಅದರಲ್ಲಿಯೇ ಲೀನವಾಗುತ್ತವೆ. ಅದನ್ನು ಎಲ್ಲರೂ ಅರಿಯತಕ್ಕದ್ದು" ಎಂದು ವೇದಾಂತವು ಸಾರುತ್ತದೆ. ಅದು (ಬ್ರಹ್ಮವು) ದೈವಿಕ ಉಗಮವಾಗಿದ್ದು, ಇದೊಂದು ಅನಂತವಾದ ಚಿತ್ರಪಟದಂತಿರುವದು. ಇದರ ಮೇಲೆ ಮಾಯೆಯು ಜೀವ ಈಶ್ವರರ ಚಿತ್ರಗಳನ್ನು ಚಿತ್ರಿಸಿದೆ.

ಈಶ್ವರ ಮತ್ತು ಜೀವರಲ್ಲಿಯ ಅಭೇದತ್ವವನ್ನರುಹುವದೇ ಜ್ಞಾನಯೋಗದ ಮುಖ್ಯಗುರಿ.ಜೀವವು ಬ್ರಹ್ಮನ ಪ್ರತಿಬಿಂಬ ರೂಪವಾದ್ದರಿಂದ ಅದು ನಿಜವಾಗಿ ದೈವಿಕವಾಗಿದೆ. ಈ ಜೀವನ ನಿಜಸ್ವರೂಪನೇ ಆತ್ಮನು. ಎಲ್ಲ ಪ್ರಾಪಂಚಿಕ ಸುಖದುಃಖಗಳಿಗೆ ಕಾರಣವಾದ ಶಾರೀರಿಕ,ಐಂದ್ರಿಕ ಆಸಕ್ತಿಯಿಂದಲೂ ಸ್ವಾರ್ಥತೆಯ ಸಂಕೋಲೆಯಿಂದಲೂ ಬಿಡುಗಡೆ ಹೊಂದಬೇಕಾದರೆ ಒಂದೇ ಒಂದು ಹಾದಿಯು ಉಂಟು. ಅದು ಬ್ರಹ್ಮ ಮತ್ತು ಆತ್ಮರ ಪೂರ್ಣ ಏಕತ್ವದ ಜ್ಞಾನ. ಬ್ರಹ್ಮ ಆತ್ಮರ ಏಕತ್ವದ ಜ್ಞಾನರೂಪವಾದ ಜ್ಯೋತಿಯು 'ನಾನು ದೇಹ' 'ನಾನು ಇಂದ್ರಿಯಗಳು' 'ನಾನು ಮನಸ್ಸು'ಎಂಬ ಭ್ರಾಂತಿಯನ್ನುಂಟುಮಾಡಿ, ಪರಿಪೂರ್ಣ ಆನಂದ

ನಿವಾಸಸ್ಥಾನದಿಂದ ನಮ್ಮನ್ನು ದೂರಿಡುವ ಅಜ್ಞಾನವನ್ನು ಹೊಡೆದೋಡಿಸುವದು. ಇದಕ್ಕೆ ಅವಿದ್ಯೆಯೆನ್ನುತ್ತಾರೆ. ಎಲ್ಲ ಮಿಥ್ಯಾಜ್ಞಾನ, ಪ್ರಾಪಂಚಿಕ ಆಸಕ್ತಿ ಮೊದಲಾದವುಗಳಿಗೆ ಇದೇ ಕಾರಣೀಭೂತವಾಗಿದೆ. ಈ ಅವಿದ್ಯಾಶಕ್ತಿಯಿಂದ ಮೋಹಿತರಾಗಿ ದೇಹವನ್ನು ಆತ್ಮವೆಂದೂ, ಆತ್ಮವನ್ನು ದೇಹವೆಂದೂ, ಜಡವನ್ನು ಚೈತನ್ಯವೆಂದೂ, ಚೈತನ್ಯವನ್ನು ಜಡವೆಂದೂ ತಪ್ಪು ತಿಳುವಳಿಕೆಯು ನಮಗಾಗುತ್ತದೆ. ಸ್ವಸ್ವರೂಪದ ಅಜ್ಞಾನಮೂಲಕವಾಗಿ ನಾವು ಸಂಪೂರ್ಣವಾಗಿ ಸ್ವಾರ್ಥ ಉದ್ದೇಶ ಸಾಧನೆಗಾಗಿಯೂ, ನಮ್ಮ ಕರ್ಮಫಲ ಪ್ರಾಪ್ತಿಗಾಗಿಯೂ, ಕೆಲಸ ಮಾಡಹತ್ತುತ್ತೇವೆ. 'ಆತ್ಮನು ಅಮರನೂ ಸರ್ವಜ್ಞನೂ ಅನಾದಿಯಿಂದ ಸ್ವತಂತ್ರನೂ ಇರುತ್ತಾನೆ. ಅವಿದ್ಯೆಯ ಪ್ರಭಾವದಿಂದ ಜೀವನು ತಾನು ಹುಟ್ಟು- ಸಾವುಗಳಿಗೆ ಅಧೀನನೆಂದು ತಿಳಿದು, ಸ್ವಾತಂತ್ರ್ಯ, ಜ್ಞಾನ, ಅನಂತಸುಖಗಳ ಉಗಮವು ತನ್ನಲ್ಲಿಯೇ ಉಂಟೆಂಬುದನ್ನು ಮರೆತು, ಸುಖ, ಜ್ಞಾನಗಳ ಸಂಪಾದನೆಗೆ ಹೊರಗೆ ಹುಡುಕಹತ್ತಿ, ಇಂದ್ರಿಯಗಳ ದಾಸನಾಗುತ್ತಾನೆ. ಶರೀರದಿಂದಾಗಲಿ, ಮನಸ್ಸಿನಿಂದಾಗಲಿ ನಾವು ಮಾಡುವದೆಲ್ಲವೂ ಅವಿದ್ಯೆಯ ಪ್ರಭಾವದಿಂದುಂಟಾದ ಸ್ವಸ್ವರೂಪಭ್ರಾಂತಿಯೆಂಬ ನಿದ್ರೆಯಲ್ಲಿಯ ಕನಸಿನಂತಿರುತ್ತದೆ. ಈ ಅಜ್ಞಾನ ನಿದ್ರೆಯಲ್ಲಿಯ ಸ್ವಪ್ನಗಳು ಭಕ್ತಿಯಿಂದಾಗಲಿ, ಧ್ಯಾನದಿಂದಾಗಲಿ ಇಲ್ಲದಂತಾಗಲಾರವು. ಆದರೆ ಆತ್ಮನ ನಿಜಸ್ವರೂಪ ಮತ್ತು ಬ್ರಹ್ಮ ಆತ್ಮರಲ್ಲಿಯ ನಿಜವಾದ ಸಂಬಂಧ ಇವುಗಳ ನಿಜವಾದ ಅರಿವು ಉಂಟಾದಾಗಲೇ ಅಂದರೆ ವಿದ್ಯೆಯಿಂದ ಈ ಅವಿದ್ಯೆಯು ಸಮೂಲ ನಾಶಹೊಂದುವದು - ಎಂಬದು ಜ್ಞಾನಯೋಗದ ಹೇಳಿಕೆ.

ಈ ತರದ ತಿಳುವಳಿಕೆಯು ಸದಾಚರಣೆಯಿಂದಾಗಲಿ, ಪ್ರಾರ್ಥನೆಗಳಿಂದಾಗಲಿ ಬಾರದು. ಆದರೆ ನಿಃಸ್ವಾರ್ಥ ನೀತಿವಂತ ಕರ್ಮಗಳನ್ನು ಮಾಡಿ ಮನಸ್ಸು, ಅಂತಃಕರಣಗಳನ್ನು ಶುದ್ಧೀಕರಿಸಿ, ನಿಜವಾದ ಮತ್ತು ಭೇದರಹಿತನಾದ ಆತ್ಮ ಮತ್ತು ಅಸತ್ಯವಾದ ಹಾಗು ಭೇದಕ್ಕೊಳಗಾಗದ ಪ್ರಕೃತಿಗಳಲ್ಲಿಯ ಭಿನ್ನತೆಯನ್ನು ಕಂಡುಹಿಡಿದಾಗ ಮಾತ್ರ, ಈ ತರದ ತಿಳುವಳಿಕೆಯು ಆತ್ಮನಿಗೆ ಉಂಟಾಗುವದು. ಸ್ವಸ್ವರೂಪ ಜ್ಞಾನ ಸಂಪಾದನೆಗಾಗಿಯೂ, ಎಲ್ಲ ವಿಶ್ವದ ಬುಡಕ್ಕಿರುವ ಸತ್ಯದ ಜ್ಞಾನಲಾಭಕ್ಕಾಗಿಯೂ ಯೋಗ್ಯ ಸತ್ಯಾಸತ್ಯ ವಿವೇಕ ಬುದ್ಧಿಯು ಅವಶ್ಯವೆಂದು ಜ್ಞಾನಯೋಗವು ಹೇಳುತ್ತದೆ. ರಾಜಯೋಗ, ಕರ್ಮಯೋಗ, ಭಕ್ತಿಯೋಗಗಳಿಗಿಂತಲೂ, ಸ್ವಸ್ವರೂಪಜ್ಞಾನದಿಂದ ಹೆಚ್ಚು ಬೇಗನೆ ಆತ್ಮನಿಗೆ ಪರಮಾತ್ಮನ ನಿಜವಾದ ಜ್ಞಾನವಾಗುವದು.

ಆದ ಕಾರಣ, ಪ್ರಪಂಚದ ಕ್ಷಣಭಂಗುರತ್ವವನ್ನು ಕಂಡು ಹಿಡಿದು, ವಿಷಯ ಸುಖಗಳಿಗೆ ತಿಲಾಂಜಲಿಯನ್ನಿತ್ತು, ಬುದ್ಧಿಶಕ್ತಿಯಿಂದ ಒಡಗೂಡಿದಂಥ, ಕರ್ಮ ಭಕ್ತಿಗಳಿಗೆ ಒಲವಿಲ್ಲದಂಥ ನಿಜವಾಗಿಯೂ ಸತ್ಯಾನ್ವೇಷಿಗಳಿಗಾದ ಜ್ಞಾನಯೋಗವು ಅತ್ಯಂತ ಉಪಯೋಗಿಯಾದದ್ದೂ ಯೋಗ್ಯವಾದದ್ದೂ ಇರುತ್ತದೆ. ಪ್ರಾಪಂಚಿಕ ಸುಖ, ಕೀರ್ತಿ, ಸ್ವಾರ್ಥ, ಆಕಾಂಕ್ಷೆಗಳಿಗೆ ಸ್ವಲ್ಪಾದರೂ ಲೆಕ್ಕಿಸದೆ, ತಾವು ಯಾರು? ತಮ್ಮ ಸ್ವರೂಪವೇನು? ಜೀವ, ಜಗತ್ತು, ಈಶ್ವರರಲ್ಲಿಯ ಸಂಬಂಧವೇನು? ಎಂಬದರ ತಿಳಿವಳಿಕೆಯೇ ತಮ್ಮ ಗುರಿಯಾಗಿರುವಂಥ ಎಲ್ಲ ಪ್ರಾಪಂಚಿಕ ಬಂಧನ ಆಸಕ್ತಿಗಳಿಂದ ಮುಕ್ತರಾಗಲಿಕ್ಕೆ ಇಚ್ಛಿಸುವಂಥವರಿಗೋಸುಗವಾಗಿಯೇ ಈ ಯೋಗವಿರುತ್ತದೆ.

ಈ ಜ್ಞಾನಮಾರ್ಗದಿಂದ ಹೋಗಲಾಸಿಸುವವನು, ತತ್ತ್ವಜ್ಞಾನದ ಕಡೆಗೆ ಬಲವುಳ್ಳವನೂ ತೀಕ್ಷ್ಣಬುದ್ಧಿಯುಳ್ಳವನೂ ಪದಾರ್ಥಗಳ ನಿಜಸ್ವರೂಪವನ್ನು ಕಂಡು ಹಿಡಿಯುವದರಲ್ಲಿ ಕುಶಾಗ್ರಬುದ್ಧಿಯುಳ್ಳವನೂ ಆಗಿರತಕ್ಕದ್ದು. ವಿಶ್ವದ ಅಂತಿಮಸತ್ಯವು ಯಾವದೊಂದು ಬದಲಾವಣೆಯನ್ನು ಹೊಂದುವದಿಲ್ಲವೆಂದು ದೃಢಸಂಕಲ್ಪವನ್ನು ಅವನು ಮಾಡಬೇಕು. ಸದಸದ್ವಿವೇಕವೆಂಬ ಕರವಾಲನ್ನು ಕೈಯಲ್ಲಿ ಹಿಡಿದು, ಹೊರಗಣ,ಒಳಗಣ

ಯಾವದೊಂದು ಶಕ್ತಿಗೂ ಬಗ್ಗದೆ, ಆತ್ಮ ಅನಾತ್ಮರಲ್ಲಿಯ ಭೇದವನ್ನರಿಯತಕ್ಕದ್ದು. ಅವನ ಮನಸ್ಸು ಇಚ್ಛೆಗಳಿಂದಾಗಲಿ, ವಿಕಾರಗಳಿಂದಾಗಲಿ,ಅತ್ರಾಸಿತವಾಗಿರಬೇಕು. ಅವನ ಇಂದ್ರಿಯಗಳು ಚೆನ್ನಾಗಿ ಅಂಕೆಯಲ್ಲಿರಬೇಕು. ಅವನ ಶರೀರವು ಬಲವುಳ್ಳದ್ದೂ, ನಿರೋಗಿಯೂ ಎಲ್ಲ ಪರಿಸ್ಥಿತಿ ಸಂಬಂಧವಾದ ಕಷ್ಟ ನಷ್ಟಗಳಿಗೆ ಹಿಂಜರಿಯದಂಥದ್ದೂ ಇರಬೇಕು. ಅವನು ನಿರ್ವಿಕಾರನಾಗಿದ್ದು ತನ್ನ ಜ್ಞಾನಕ್ಕೆ ಅಡ್ಡಿಯನ್ನುಂಟು ಮಾಡುವ ಯಾವದೊಂದನ್ನು ಕೂಡಲೇ ತ್ಯಾಗಮಾಡಲಿಕ್ಕೆ ಸಿದ್ಧನಾಗಿರಬೇಕು. ಅವನು ಜ್ಞಾನಯೋಗಿಗಳಲ್ಲಿ ಪೂರ್ಣ ಶ್ರದ್ಧೆಯುಳ್ಳವರಾಗಿರಬೇಕು. ಮತ್ತು ವೇದಾಂತಶಾಸ್ತ್ರವು ಹೇಳುವ ತತ್ವಗಳಲ್ಲಿಯಾದರೂ ಅವನಿಗೆ ನಂಬಿಗೆ ಇರಬೇಕು.

ಜ್ಞಾನಯೋಗಕ್ಕೆ ಮೊದಲಿಗನಾದವನು ಪೂರ್ಣ ಧ್ಯಾನ ಧಾರಣಾಶಕ್ತಿಗಳಿಂದ ಕೂಡಿದವನಾಗಿರಬೇಕು. ಎಲ್ಲ ಪರಿಸ್ಥಿತಿಕ ವಿಶ್ವಸಂಬಂಧಿ ಆಸಕ್ತಿಗಳಿಂದ ಪೂರ್ಣ ಬಿಡುಗಡೆ ಹೊಂದಲಿಕ್ಕೆ ಬಲವಾದ ಇಚ್ಛಾಯುಕ್ತನಾಗಿರಬೇಕು. ಸ್ವರ್ಗಸುಖವು ಕೂಡ ಒಂದು ಬಂಧನವೇ ಎಂದು ಅವನು ತಿಳಿಯಬೇಕು. ಈ ಎಲ್ಲ ಸದ್ಗುಣಗಳೆಂಬ ಕರವಾಲಗಳನ್ನು ಹಿಡಿದು, ಪ್ರಾಪಂಚಿಕ ಭ್ರಾಂತಿಯನ್ನೆಲ್ಲ ಹೊಡೆದಟ್ಟಿ, ಆತ್ಮ ಪರಮಾತ್ಮರ ಅಭೇದತ್ವವನ್ನು ತನ್ನ ಮಾನಸಿಕ ದೃಷ್ಟಿಯ ಮುಂದಿರಿಸಿ, ಸದಸದ್ವಿವೇಕವೆಂಬ ಸುತ್ತಿಗೆಯಿಂದ ಎಲ್ಲ ನಾಮರೂಪಗಳನ್ನು ಜಡಿದು, ಆಸಕ್ತಿ ಬಂಧನಗಳನ್ನು ಹರಿದು, ಜ್ಞಾನಾರ್ಜನೆಗೋಸುಗ ಜ್ಞಾನಯೋಗಿಯು ಮುಂದೆ ಸಾಗಬೇಕು. ತನ್ನ ಗುರಿಯನ್ನು ಮುಟ್ಟುವ ವರೆಗೆ ಎಲ್ಲಿಯೂ ನಿಲ್ಲಕೂಡದು.ಜ್ಞಾನಯೋಗಿಯು ನಾಮರೂಪಾತ್ಮಕ ಸೃಷ್ಟಿಯೆಂಬ ಅರಣ್ಯವನ್ನು ಸತ್ಯಜ್ಞಾನವೆಂಬ ಬೆಂಕಿಯಿಂದ ಸುಟ್ಟು ಬೂದಿಮಾಡುವನು. ನಾಮರೂಪಗಳೆಲ್ಲವೂ ಮಾಯಾಸೃಷ್ಟಿಯು. ಜ್ಞಾನಯೋಗಾನುಸಾರವಾಗಿ ವಾಹಕ ಶಕ್ತಿಯು ಅಗ್ನಿಯಿಂದ ಅಭಿನ್ನವಿದ್ದಂತೆ ಮಾಯೆಯಾದರೂ ಬ್ರಹ್ಮನಿಂದ ಅಭಿನ್ನವಾಗಿರುತ್ತದೆ. ಬ್ರಹ್ಮಜ್ಞಾನಕ್ಕೋಸುಗ ಹಂಬಲಿಸುವ ಜ್ಞಾನಯೋಗಿಯು ಎಲ್ಲ ನಾಮರೂಪಗಳನ್ನು ಇದು ಅಲ್ಲ, ಇದು ಅಲ್ಲ ಎಂದು ಬಿಟ್ಟು, ಕಟ್ಟಕಡೆಗೆ ನಾಮರೂಪಾತೀತ ಬ್ರಹ್ಮವಸ್ತುವಿನ (ಇಲ್ಲಿ ಜ್ಞಾತೃ,ಜ್ಞೇಯ, ಜ್ಞಾನಗಳೆಲ್ಲವೂ ತಮ್ಮ ವಿಶಿಷ್ಟತೆಯನ್ನು ಬಿಟ್ಟು ಸಚ್ಚಿದಾನಂದ ಸಮುದ್ರದಲ್ಲಿ ಮುಳುಗಿ ಹೋಗುವವು) ಜ್ಞಾನವಾಗುವದು.

ಇದಲ್ಲದೆ ಜ್ಞಾನಯೋಗಿಯಾಗುವವನು ಬ್ರಹ್ಮ ಆತ್ಮರ ಏಕತ್ವದ ನಿಧಿಧ್ಯಾಸವನ್ನು ಮಾಡುತ್ತಿರಬೇಕು ಮತ್ತು ಯಾವಾಗಲೂ 'ನಾನು ಬ್ರಹ್ಮನಿದ್ದೇನೆ' 'ನಾನು ಸಚ್ಚಿದಾನಂದನಿದ್ದೇನೆ' ಮೊದಲಾದ ವಾಕ್ಯಗಳನ್ನು ಪುನ: ಪುನ: ಪಠಿಸುತ್ತಿರಬೇಕು. ಈ ರೀತಿಯಾಗಿ ಬ್ರಹ್ಮಜ್ಯೋತಿಯು ಅವಿದ್ಯೆಯೆಂಬ ಕತ್ತಲೆಯನ್ನು ಅವನ ಆತ್ಮನಿಂದ ತಳ್ಳಿ, ಪ್ರಕಾಶವನ್ನು ಅಲ್ಲಿ ಉಂಟುಮಾಡುವ ವರೆಗೆ ಅವನು ಈ ಏಕತ್ವದ ಶ್ರವಣ,ಮನನ, ನಿಧಿಧ್ಯಾಸಗಳನ್ನು ಮಾಡುತ್ತಿರಬೇಕು.

ಭಕ್ತಯೋಗಿಯಂತೆ ಯಾವನೊಬ್ಬ ತನ್ನಿಂದ ಭಿನ್ನನಾದ ವಿಶಿಷ್ಟ ಈಶ್ವರನನ್ನು ಪೂಜಿಸದೆ, ಜ್ಞಾನಯೋಗಿಯು ಬೇರೆ ಬೇರೆ ಗ್ರಂಥಗಳಲ್ಲಿ ಈಶ್ವನಿಗೆ ಕೊಟ್ಟ ಹೆಸರುಗಳ ನಿಜವಾದ ಮಹತ್ವವನ್ನು ಅರಿಯತಕ್ಕದ್ದು.ಸೃಷ್ಟಿಕರ್ತ, ಸೃಷ್ಟಿನಿಯಮಕ,ಅನಂತ,ಸರ್ವಜ್ಞ, ಸರ್ವಶಕ್ತ,ನಿತ್ಯ,ನಿರ್ವಿಕಾರ,ಸತ್ಯ,ಏಕ, ಇತ್ಯಾದಿ ವಾಙ್ಮನಸ್ಸುಗಳಿಗೆ ಗೋಚರವಾಗದ ನಾಮರೂಪಾತೀತವಾದದ್ದನ್ನು ಅರಿಯಲಿಕ್ಕೆ ಅವನು ಯತ್ನಿಸತಕ್ಕದ್ದು. ಜ್ಞಾನಯೋಗಿಯು ಯಾವನೊಬ್ಬ ವಿಶಿಷ್ಟ ಈಶ್ವರಾರ್ಚನೆಯನ್ನು ಮಾಡುವದಿಲ್ಲ. ಅವನಿಗೆ ಪ್ರಾರ್ಥನೆ ಭಕ್ತಿಗಳೆಲ್ಲವೂ ನಿಷ್ಪ್ರಯೋಜಕ ಮತ್ತು ಅನವಶ್ಯಕವಾದವುಗಳು. ದೈವಿಕ ಸಹಾಯವು ಅವನಿಗೆ ಬೇಕಾಗಿಲ್ಲ. ಯಾಕಂದರೆ ಆತ್ಮನು ಸರ್ವಶಕ್ತನೂ ಸರ್ವಜ್ಞನೂ ಆಗಿರುವನೆಂದು ಅವನಿಗೆ ಗೊತ್ತಿರುತ್ತದೆ.ಮತ್ತು ಒಳಿತು , ಕೆಟ್ಟದು, ಸದ್ಗುಣ, ದುರ್ಗುಣ ಮೊದಲಾದವುಗಳಿಗೆ ಅವನು ಮೀರಿದ್ದು, ಅವನು ಯಾವ ತರದ ನಿಯಮಗಳಿಂದ

ಮರ್ಯಾದಿತನಾಗಿಲ್ಲ ಎಂಬುದರ ಜ್ಞಾನವು ಜ್ಞಾನಯೋಗಿಗೆ ಇರುತ್ತದೆ. ಪರಮಾತ್ಮನಲ್ಲಿಯೂ ತನ್ನಲ್ಲಿಯೂ ಅಭೇದತ್ವವಿದೆಯೆಂದು ಅವನಿಗೆ ತೋರುತ್ತಿರುತ್ತದೆ.ತನ್ನನ್ನು ಶರೀರ ಮನಸ್ಸು ಇಂದ್ರಿಯಗಳು ಬುದ್ಧಿ ಮೊದಲಾದವುಗಳೊಡನೆ ಏಕೀಕರಿಸದೆ, ತಾನು ಹುಟ್ಟು ಸಾವುಗಳಿಲ್ಲದ ಪಾಪರಹಿತನಾದ ನಿರ್ಭೀತನಾದ, ಅವಿನಾಶಿಯಾದ, ನಿರಂತರ ಶಾಂತನಾದ, ಸುಖ ದುಃಖಗಳಿಂದ ನಿರ್ವಿಕಾರಿಯಾದ, ಆತ್ಮನಿದ್ದೇನೆಂದು ಅವನಿಗೆ ಅರಿವು ಉಂಟಾಗುತ್ತದೆ.

ನಿಜವಾದ ಜ್ಞಾನಯೋಗಿಯು ಎಲ್ಲ ಪ್ರಾಪಂಚಿಕ ವಿಷಯಗಳಿಗೂ ಮೀರಿದ್ದು, ಯಾವಾಗಲೂ 'ಅಹಂ ಬ್ರಹ್ಮಾಸ್ಮಿ', 'ಸೋಹಂ', 'ಸೋಹಂ' ಎಂದು ಅವನು ಅನ್ನ ಹತ್ತಿರಬೇಕು. ಅವನು ತನ್ನಲ್ಲಿ,

"ನಾನು ಮನಸ್ಸಲ್ಲ, ಬುದ್ಧಿಯಲ್ಲ, ಅಹಂಕಾರವಲ್ಲ, ಇಂದ್ರಿಯಗಳಲ್ಲ, ಪೃಥ್ವಿಯಲ್ಲ, ಅಪ್ಪು ಅಲ್ಲ, ತೇಜವಲ್ಲ, ವಾಯುವಲ್ಲ,ಆಕಾಶವೂ ಅಲ್ಲ. ಆದರೆ ಸಚ್ಚಿದಾನಂದ ನಿತ್ಯಪರಿಪೂರ್ಣ ಸ್ವರೂಪವೇ ನಾನಿದ್ದೇನೆ. "

'ಶಾರೀರಕ ಕರ್ಮಗಳೂ ನಾನಲ್ಲ, ಶಾರೀರಕ ಭೂತಗಳೂ ನಾನಲ್ಲ, ಕರ್ಮಜ್ಞಾನಗಳ ಭಾವನೆಯೂ ನಾನಲ್ಲ. ಆದರೆ ಸಚ್ಚಿದಾನಂದ ನಿತ್ಯಪರಿಪೂರ್ಣ ರೂಪನೇ ನಾನು.'

"ನನ್ನಲ್ಲಿ ಪ್ರೀತಿಯಿಲ್ಲ, ದ್ವೇಷವಿಲ್ಲ, ಆಶೆಯಿಲ್ಲ, ಮಾಯೆಯಿಲ್ಲ, ಭ್ರಾಂತಿಯಿಲ್ಲ, ಅಹಂಕಾರವಿಲ್ಲ, ಗರ್ವವಿಲ್ಲ, ಮತಭೇದವಿಲ್ಲ, ಬಂಧದ ಬಿಡುಗಡೆ ಇಚ್ಛೆಯೂ ನನಗಿಲ್ಲ, ನಾನು ಸಚ್ಚಿದಾನಂದ ರೂಪನಿದ್ದೇನೆ."

"ನನ್ನಲ್ಲಿ ಸದ್ಗುಣವೂ ಇಲ್ಲ, ದುರ್ಗುಣವೂ ಇಲ್ಲ, ಪಾಪವೂ ಇಲ್ಲ,ನನಗೆ ಸುಖವೂ ಇಲ್ಲ, ದು:ಖವೂ ಇಲ್ಲ. ವಿಧಿನಿಯಮಗಳೂ ನನಗಿಲ್ಲ. ನಾನು ಆಹಾರವೂ ಅಲ್ಲ, ತಿನ್ನುವವನೂ ನಾನಲ್ಲ.ಆದರೆ ಸಚ್ಚಿದಾನಂದ ಪರಿಪೂರ್ಣನಾಗಿದ್ದೇನೆ."

"ನನಗೆ ಮರಣವಿಲ್ಲ, ಮರಣದ ಅಂಜಿಕೆ ಇಲ್ಲ. ಹುಟ್ಟು ಇಲ್ಲ, ಜಾತಿಭೇದವಿಲ್ಲ. ನನಗೆ ತಂದೆ ಇಲ್ಲ, ತಾಯಿ ಇಲ್ಲ. ನಾನು ಮಿತ್ರನಲ್ಲ, ವೈರಿಯಲ್ಲ. ಗುರುವೂ ಅಲ್ಲ, ಶಿಷ್ಯನೂ ಅಲ್ಲ, ಸಚ್ಚಿದಾನಂದರೂಪನೇ ನಾನು."

'ನನಗೆ ಶಂಕೆಯಿಲ್ಲ, ಪ್ರಶ್ನೆಗಳಿಲ್ಲ. ನಾನು ನಿರಾಕಾರನೂ, ಸರ್ವವ್ಯಾಪಿಯೂ, ಸೃಷ್ಟಿಯ ನಿರಂತರ ಯಜಮಾನನೂ, ಇಂದ್ರಿಯಗಳ ಒಡೆಯನೂ ಇದ್ದೇನೆ. ನಾನು ಬದ್ಧನೂ ಅಲ್ಲ, ಮುಕ್ತನೂ ಅಲ್ಲ. ನಾನೂ ಬ್ರಹ್ಮನೂ ಒಂದೇ. ನಾನು ಸರ್ವಾಂತರ್ಯಾಮಿಯು, ನಾನೇ ಎಲ್ಲವೂಗಳ ಅವಿನಶ್ವರ ಈಶ್ವರನು. ನಾನು ಸಚ್ಚಿದಾನಂದ ರೂಪನಿದ್ದೇನೆ. ಅವನೇ ನಾನು' ಎಂದು ನಿರಂತರ ಅನ್ನುತ್ತಿರುತ್ತಾನೆ.

ಈ ರೀತಿಯಾಗಿ ಜ್ಞಾನಯೋಗಿಯು ಪರಿಪೂರ್ಣ, ನಿತ್ಯ, ನಿರ್ವಿಕಾರ ಸತ್ಯವನ್ನು ಇದೇ ಜೀವಿತದಲ್ಲಿ ಕಂಡುಹಿಡಿದು, ತನ್ನ ಮತ್ತು ಅದರ ಏಕತ್ವ ನಿಶ್ಚಯವನ್ನು ಮಾಡಿಕೊಳ್ಳುತ್ತಾನೆ. ಬ್ರಹ್ಮವನ್ನು ತಿಳಿಯುವವನು ಬ್ರಹ್ಮನೇ ಆಗುತ್ತಾನೆಂದು ಜ್ಞಾನಯೋಗಿಯು ಹೇಳುತ್ತಾನೆ. ಯಾಕೆಂದರೆ ಬ್ರಹ್ಮನನ್ನು ಬ್ರಹ್ಮನಿಂದ ಬೇರೊಬ್ಬನಾದವನು ಅರಿಯಲಾರನು. ತನ್ನ ನಿಜವಾದ ಸ್ವರೂಪವೇ ಬ್ರಹ್ಮನೆಂಬುವದನ್ನು ಜ್ಞಾನಯೋಗಿಯು ಎಂದೂ ಮರೆಯುವದಿಲ್ಲ. ಈ ರೀತಿಯಾಗಿ ಉಚ್ಚತಮಜ್ಞಾನಾರ್ಜನೆ ಮಾಡಿಕೊಂಡು, ಯಾವಾಗಲೂ ಶಾರೀರಕ ಮಾನಸಿಕ ಕೃತ್ಯಗಳಿಗೆ ಸಾಕ್ಷಿರೂಪನಾಗಿರುತ್ತಾನೆ. ನಿರಂತರ ಸುಖಿಯೂ ನಿರ್ವಿಕಾರನೂ ಆಗಿದ್ದು, ಮಾನವ ಜಾತಿಗೆ ಪೂರ್ಣ ಬಿಡುಗಡೆಯ ಹಾದಿಯನ್ನು ತೋರುತ್ತ, ಸ್ಥಾನದಿಂದ ಸ್ಥಾನಕ್ಕೆ ತೆರಳುತ್ತಾನೆ. ಪೂರ್ಣ ಜ್ಞಾನಯೋಗಿಯಾದವನು ಬ್ರಹ್ಮನ ಅವತಾರವೆಂಬಂತೆ ಈ ಜಗತ್ತಿನಲ್ಲಿ ವಾಸಿಸುತ್ತಾನೆ.

❖❖

೬

# ಹಠಯೋಗ

ಶಿವಾನುಭವ ೪-೯

ಹಠಯೋಗವು ಹಸಿವೆ, ತೃಷೆ, ನಿದ್ರೆಗಳನ್ನು ಗೆಲ್ಲುವ ಬಗೆ ಹೇಗೆ? ಶೀತೋಷ್ಣಗಳ ಪರಿಣಾಮಗಳನ್ನು ಮೀರುವ ರೀತಿಯಾವದು? ಔಷಧೋಪಚಾರ ಮಾಡದೆ ಸಂಪೂರ್ಣ ಆರೋಗ್ಯವನ್ನು ಪಡೆಯುವ ಮತ್ತು ಬೇನೆ ಬೇಸರಿಕೆಗಳನ್ನು ನೆಟ್ಟಗೆ ಮಾಡಿಕೊಳ್ಳುವ ಹಾದಿಯಾವದು? ಉತ್ಸಾಹಶಕ್ತಿಯ ನಾಶದಿಂದುಂಟಾದ ಶರೀರದ ಅಕಾಲ ನಾಶವನ್ನು ನಿರ್ಬಂಧಿಸುವ ಬಗೆಯಾವುದು?ನೂರುವರ್ಷಗಳಾದರೂ ಒಂದಾದರೂ ನರೆಗೂದಲಿಲ್ಲದೆ ತಾರುಣ್ಯವನ್ನು ಕಾಯ್ದುಕೊಳ್ಳುವ ರೀತಿ ಯಾವದು? ಅನಂತಕಾಲದ ವರೆಗೆ ಇದೇ ಶರೀರದಲ್ಲಿ ಜೀವನವನ್ನು ಮುಂದುವರಿಸುವದು ಯಾವ ಹಾದಿಯಿಂದ? ಇವೆಲ್ಲವುಗಳನ್ನು ತಿಳಿಹೇಳುವ ಯೋಗಶಾಸ್ತ್ರದ ಶಾಖೆಯು. ಅದನ್ನು ಆಚರಿಸುವ ಪ್ರತಿಯೊಬ್ಬನಿಗೆ ಕಾಲಾಂತರದಲ್ಲಿ ಅದ್ಭುತಶಕ್ತಿಗಳ ಸಿದ್ಧಿಯಾಗುವದು.ಈ ಶಕ್ತಿಗಳನ್ನು ನೋಡಿದರೆ ಮನೋವೈಜ್ಞಾನಿಕನಿಗೆ ಅಥವಾ ಪರಮಾಣುವಾದಿಗೆ ಆಶ್ಚರ್ಯವಾಗದೆ ಇರದು.

ಕೆಲವು ವರ್ಷಗಳ ಪೂರ್ವದಲ್ಲಿ ಒಬ್ಬ ಹಠಯೋಗಿಯು ಇಂಗ್ಲಂಡಿಗೆ ತರಲ್ಪಟ್ಟಿದ್ದನು. ಅವನು ಮಧ್ಯಮ ವಯಸ್ಕನಾಗಿದ್ದರೂ ಸುಮಾರು ಹದಿನೆಂಟು ವರ್ಷದ ಹುಡುಗನಂತೆ ಕಾಣುತ್ತಿದ್ದನು. ಅವನ ಶಾರೀರಕ ಸ್ಥಿತಿಯು ಅತ್ಯುತ್ತಮವಾಗಿತ್ತು. ಇದಲ್ಲದೆ ಅವನು ನಿತ್ಯಸಾಧನೆಯಿಂದ ೮೪ ಆಸನಗಳನ್ನು ಸಾಧಿಸಿಕೊಂಡಿದ್ದನು.ಅವನ ಶರೀರದ ಕೀಲುಗಳು ಒಂದಕ್ಕೊಂದು ಕೂಡಿಸಲ್ಪಟ್ಟಿಲ್ಲವೋ ಎಂಬಂತೆ ಎಲ್ಲರಿಗೂ ಆಶ್ಚರ್ಯವಾಗುವ ಹಾಗೆ ಅವನು ತನ್ನ ಶರೀರದ ಅವಯವಗಳನ್ನು ಮಣಿಸುತ್ತಿದ್ದನು. ಅವನ ಎಲವುಗಳಾದರೂ ಸ್ಥಿತಿಸ್ಥಾಪಕ ಗುಣವುಳ್ಳ ಪದಾರ್ಥದಿಂದ ಮಾಡಿದಂತೆ ಇದ್ದವು. ಅವನನ್ನು ನೋಡಿ ಎಷ್ಟೋ ಇಂಗ್ಲೀಷ ವೈದ್ಯರು ಬೆರಗಾದರು.ಅವನು ಹಾಕುವಂಥ ಆಸನಗಳನ್ನು ಜೋಡಿಸಬೇಕೆಂದು ಒಂದು ಅಸ್ಥಿಪಂಜರವನ್ನು ತಂದು ಪ್ರಯೋಗ ಮಾಡಿದರು. ಆದರೆ ಅವರ ಪ್ರಯತ್ನವು ಸಫಲವಾಗಲಿಲ್ಲ. ಕಡೆಗೆ ಅವರು ಅಂಥ ಆಸನದಲ್ಲಿ ಒಮ್ಮೆ ಜೋಡಿಸಲ್ಪಟ್ಟ ಎಲವುಗಳು ಯಾವದೊಂದು ಕಾರ್ಯಕ್ಕೆ ಅಯೋಗ್ಯವಾದವುಗಳೆಂದು ತಿಳಿದುಕೊಂಡರು. ಆದರೆ ಯೋಗಿಯ ಉದಾಹರಣೆಯಿಂದ ಅವರ ತಿಳುವಳಿಕೆಯು ತಪ್ಪೆಂದು ಕಂಡುಬಂದಿತು. ಅವನ ಅವಯವಗಳು ಬಲವುಳ್ಳವುಗಳೂ,ಪ್ರತಿಯೊಂದು ಕೆಲಸದಲ್ಲಿ ಅತಿ ಉಪಯೋಗವುಳ್ಳವುಗಳೂ ಆಗಿದ್ದವು. ಅವನು ಎಷ್ಟೋ ದೊಡ್ಡ ಭಾರಗಳನ್ನು ಎತ್ತುತ್ತಿದ್ದನು ಮತ್ತು ಬಹು ಅನಾಯಾಸವಾಗಿ ತಿರುಗಾಡುತ್ತಿದ್ದನು. ಅವನು ಹೀಗೆ ಮಾಡುತ್ತಿದ್ದ ಅನೇಕ ಪ್ರಯೋಗಗಳನ್ನು ಅಲ್ಲಿಯ ಪಾಶ್ಚಾತ್ಯ ವೈಜ್ಞಾನಿಕರು ನೋಡಿ ಬಹಳ ಬೆರಗುಬಟ್ಟರು. ಹಠಯೋಗದಲ್ಲಿ ಹೇಳಿದ ಬೇರ ಬೇರೆ ಆಸನಗಳ ಮುಖ್ಯ ಉದ್ದೇಶವು ಸಾಧಾರಣ ಮನುಷ್ಯನಿಗೆ ಅಶಕ್ಯವೆಂದು ತೋರುವ ಶರೀರದಲ್ಲಿಯ ಅನೈಚ್ಛಿಕ ಸ್ನಾಯುಗಳ ಸಂಯಮನವಾಗಿರುತ್ತದೆ. ಈ ತರದ ಶಕ್ತಿಯು

ನಮ್ಮೆಲ್ಲರಲ್ಲಿಯೂ ಗುಪ್ತವಾಗಿರುತ್ತದೆ. ಆದರೆ ಅದನ್ನು ನಿಯಮಬದ್ಧ ರೀತಿಯಿಂದ ಬೆಳೆಗೊಡುವ ಬಗೆಯನ್ನು ಮೊದಲು ಹುಡಿಕಿ ತೆಗೆದವರು, ಹಠಯೋಗಿಗಳು.

ಎಲ್ಲ ಹಠಯೋಗಿಗಳು ಬಹು ಸ್ವಲ್ಪ ತಿನ್ನುತ್ತಾರೆ. ಆದರೆ ಅವರು ಎಷ್ಟೋ ದಿವಸಗಳ ವರೆಗೆ, ಕೆಲಕೆಲವು ಸಾರೆ ಎಷ್ಟೋ ತಿಂಗಳುಗಳ ವರೆಗೆ ಏನೂ ತಿನ್ನದೆ ಇರಬಲ್ಲರು. ಅವರು ನಿದ್ರೆಯನ್ನು ಸಹ ಗೆದ್ದಿರುವರು. ೧೨ ವರ್ಷಗಳ ವರೆಗೆ ನಿದ್ರೆಮಾಡದಿದ್ದರೂ ಪೂರ್ಣ ಆರೋಗ್ಯವಂತನಾದ ಹಠಯೋಗಿಯನ್ನು ಅನೇಕರು ನೋಡಿರಬಹುದು. ದಿನಾಲು ಒಂದು ತುಣುಕು ರೊಟ್ಟಿಯನ್ನು ತಿಂದು, ಬಹಳ ಚಳಿಯಲ್ಲಿಯೂ ಕೂಡ ಅರಿವೆಯನ್ನು ಹೊದ್ದಕೊಳ್ಳದೆ, ದಣಿಯುವಿಕೆಯ ಯಾವ ಚಿಹ್ನವನ್ನೂ ತೋರಗೊಡದೆ, ಕೆಲಸಮಾಡುತ್ತಿರುವಂಥ ಮತ್ತೊಬ್ಬ ಹಠಯೋಗಿಯನ್ನು ಸಹ ಲೇಖಕನು ನೋಡಿದ್ದಾನೆ. ೨೪ ತಾಸುಗಳಲ್ಲಿ ೮-೯ ತಾಸು ನಿದ್ದೆ ಮಾಡುವಂಥ ನಿದ್ರಾ ಆಹಾರಾದಿಗಳಿಗೆ ದಾಸಾನುದಾಸರಾದಂಥ ಬಹುಜನರಿಗೆ ಇದು ಅಸಂಭವವೆಂದು ತೋರುವದು. ಹಠಯೋಗಿಗಳನ್ನು ನೋಡಿದರೆ ಅವರಿಗೆ ಚೆನ್ನಾಗಿ ಮನವರಿಕೆಯಾಗುವದು. ಬಿಗಿಯಾಗಿ ಮುಚ್ಚಿದಂಥ ಒಂದು ಪೆಟ್ಟಿಗೆಯಲ್ಲಿ ಹಾಕಿ ಇಂಗ್ಲಿಷ ಅಧಿಕಾರಸ್ಥರ ಕಾವಲಿಟ್ಟು, ನಾಲ್ವತ್ತು ದಿವಸಗಳ ವರೆಗೆ ಹುಗಿದಿಟ್ಟ ಒಬ್ಬ ಹಠಯೋಗಿಯ ಉದಾಹರಣೆಯಾದರೂ ಕಂಡುಬಂದಿದೆ. ಈ ನಾಲ್ವತ್ತು ದಿವಸಗಳಲ್ಲಿ ಅವನು ತಿಂದಿದ್ದಿಲ್ಲ, ಮಲಗಿದ್ದಿಲ್ಲ, ಉಸುರಾಡಿಸಿದ್ದಿಲ್ಲ. ಆದರೂ ಅವನು ಏನೂ ಕೆಟ್ಟ ಪರಿಣಾಮಗಳಿಲ್ಲದೆ ಎಚ್ಚತ್ತು ಮುಂದೆ ಎಷ್ಟೋ ವರ್ಷಗಳ ವರೆಗೆ ಬಾಳಿದನು. ಈ ಪ್ರಕಾರ ಬಹು ಕಾಲದ ವರೆಗೆ ತಿನ್ನದೆ ಇರಬಲ್ಲ, ಮಲಗದಿದ್ದ, ಮತ್ತು ಏನೂ ಕುಡಿಯದೆ ಇದ್ದ, ಯೋಗಿಗಳೇ ಮನಸಿಗೆ ಬಂದರೆ ಅನಾಯಾಸವಾಗಿ ಹತ್ತುಮಂದಿ ತಿನ್ನುವಷ್ಟು ತಿನ್ನಬಲ್ಲರು. ನಿಜವಾಗಿ ಅವರು ಯಾವ ತರದ ಮಾಂಸವನ್ನೂ ಸೇವಿಸುವದಿಲ್ಲ. ತಮ್ಮ ಆಹಾರವನ್ನು ಇಚ್ಛಾನುಸಾರವಾಗಿ ಪಚನಮಾಡಿಕೊಳ್ಳುತ್ತಾರೆ. ಅಂತರಿಂದ್ರಿಯಗಳಲ್ಲಿ ನಡೆದ ವ್ಯಾಪಾರವನ್ನು ಮೂರನೇದೊಂದು ಕಣ್ಣಿನಿಂದ ತಾವು ನೋಡ ಬಲ್ಲೆವೆಂದು ಅವರು (ಹಠಯೋಗಿಗಳು) ಹೇಳುತ್ತಾರೆ.

ಕೆಲವು ಹಠಯೋಗಿಗಳ ದೃಷ್ಟಿಶಕ್ತಿಯು ಬಹು ವಿಲಕ್ಷಣವಾದದ್ದಿರುತ್ತದೆ. ಬಹು ದೂರದಲ್ಲಿದ್ದ ಪದಾರ್ಥಗಳನ್ನು ಸ್ವಚ್ಛವಾಗಿ ಕಾಣಬಲ್ಲರಲ್ಲದೆ, ಕಗ್ಗತ್ತಲೆಯಲ್ಲಿ ಸಹ ಸಣ್ಣ ಸಣ್ಣ ಪದಾರ್ಥಗಳನ್ನು ಅರಸಬಲ್ಲರು. ಕಗ್ಗತ್ತಲೆಯುಳ್ಳ ಕೋಣೆಯಲ್ಲಿ ವಾತಾವರಣದ ಅದೃಶ್ಯ ತೇಜವು ಇರುತ್ತದೆಂಬುವದು ನಮಗೆ ಗೊತ್ತಾದರೆ, ಅದು ಅಷ್ಟು ಮಹತ್ವವೆನ್ನಿಸುವದಿಲ್ಲ. ಬರಿಗಣ್ಣಿಗೆ ಕಾಣದಿದ್ದ ಈ ಪ್ರಕಾಶದ ಉಪಯೋಗವನ್ನು ಮಾಡಿಕೊಳ್ಳಲಿಕ್ಕೆ ಕಲಿತರೆ ಮತ್ತು ದೃಷ್ಟಿಶಕ್ತಿಯನ್ನು ಬೆಳೆಗೊಟ್ಟರೆ ಕಗ್ಗತ್ತಲೆಯಲ್ಲಿ ಸಹ ನೋಡಬಲ್ಲೆವು. ಇದು ಯೋಗಿಗಳಿಗೆ ಚೆನ್ನಾಗಿ ಗೊತ್ತಿರುತ್ತದೆ. ದೂರಿನ ಪದಾರ್ಥಗಳನ್ನು ನೋಡುವದು ಅಷ್ಟು ಕಷ್ಟದ ಮಾತಲ್ಲ. ಯಾಕೆಂದರೆ ಯೋಗಿಗಳಲ್ಲದವರು ಶುಕ್ರನ ಕಲೆಗಳನ್ನು ಬರಿಗಣ್ಣಿನಿಂದ ನೋಡುವದು ಕಂಡುಬಂದಿದೆ.

ಹಠಯೋಗದಲ್ಲಿಯ ನೇತ್ರಸಂಬಂಧವಾದ ಶಾಖೆಗೆ ಸಂಸ್ಕೃತದಲ್ಲಿ 'ತ್ರಾಟಕ' ವೆನ್ನುತ್ತಾರೆ. ಯಾವದೊಂದು ಪದಾರ್ಥದ ಮೇಲೆ ದೃಷ್ಟಿಯಿಟ್ಟು, ಅದೇ ಕಾಲಕ್ಕೆ ವಿಶಿಷ್ಟ ಪ್ರಾಣಾಯಾಮ ಮಾಡುವದರಿಂದ ಕಣ್ಣಿನ ಎಷ್ಟೋ ಬೇನೆಗಳನ್ನು ಕಳೆದು ದೃಷ್ಟಿಶಕ್ತಿಯನ್ನು ಹೆಚ್ಚಿಸುವ ಅನೇಕ ರೀತಿಗಳು ಅದರಲ್ಲಿ ವಿವರಿಸಲ್ಪಟ್ಟಿವೆ. ಹಠಯೋಗದಲ್ಲಿ ನಿಷ್ಣಾತನಾದ ಯೋಗಗುರುವಿನ ಹೇಳಿಕೆಯಂತೆ ನಡೆದುಕೊಂಡರೆ, ಎಷ್ಟೋ ಲಾಭದಾಯಕ ಪರಿಣಾಮಗಳು ಕಂಡುಬರುವವು.

ಈ ಶಾಸ್ತ್ರದಲ್ಲಿ ನಿಪುಣನಾದ ಯೋಗಿಯು ತನ್ನ ನೇತ್ರಶಕ್ತಿಯಿಂದ ಎರಡನೆಯವರನ್ನು ಮರುಳು ಮಾಡಬಲ್ಲನು. 'ಹಿಪ್ನಾಟಿಜಮ್' 'ಮೆಸ್ಮರಿಝುಮ್' ಇವು ತಕ್ಕ ಉದಾಹರಣೆಗಳು. ಯಾವನೊಬ್ಬನ ಕಣ್ಣುಗಳನ್ನು ನೋಡಿ ಅವನ ವಿಚಾರಗಳನ್ನು ಯೋಗಿಗಳು ಹೇಳಬಲ್ಲರು. ಇಲ್ಲಿ ಯೋಗಿಗಳು ಇಂಥ ಶಕ್ತಿಗಳನ್ನು ಹೇಗೆ ದೊರಕಿಸುತ್ತಾರೆಂಬ ಪ್ರಶ್ನವು ಮುಂದೆ ಬರುವದು. ಇವನ್ನು ಅವರು ಹೊರಗಿನಿಂದ ದೊರಕಿಸುವದಿಲ್ಲ. ಈ

ತರದ ಶಕ್ತಿಗಳು ಪ್ರತಿಯೊಬ್ಬನಲ್ಲಿಯೂ ಗುಪ್ತವಾಗಿರುತ್ತವೆ. ಯೋಗಿಗಳು ಅವನ್ನು ಸಾಧನೆಯಿಂದ ಹೊರಗೆಡಹುತ್ತಾರೆ. ಬ್ರಹ್ಮಾಂಡದಲ್ಲಿದ್ದುದೆಲ್ಲವೂ ಪಿಂಡಾಂಡದಲ್ಲಿರಲೇಬೇಕು - ಎಂದು ಅವರು ಅನ್ನುತ್ತಾರೆ.ಅಂದರೆ ಸೂಕ್ಷ್ಮಶಕ್ತಿಗಳೆಲ್ಲ ನಮ್ಮ ಇಂದ್ರಿಯಗಳಲ್ಲಿ ರಹಸ್ಯವಾಗಿರುತ್ತವೆ. ಅವುಗಳ ಸ್ವಭಾವವನ್ನು ನಾವು ಎಚ್ಚರಿಕೆಯಿಂದ ಪರೀಕ್ಷಿಸಿದರೆ, ಜಗತ್ತನ್ನಾಳುವ ಶಕ್ತಿಗಳೆಲ್ಲ ನಮಗೆ ಚೆನ್ನಾಗಿ ವಿದಿತವಾಗುವವು.

ಪ್ರಾಣಾಯಾಮ ಸಾಧನೆಯಿಂದ ಬೇನೆ ಕಳಕೊಳ್ಳುವ ಬಗೆಯನ್ನು, ಹಸಿವೆಯನ್ನು ಮತ್ತು ದಿನಚರ್ಯದ ಚಟಗಳನ್ನು ನಿಯಮಿತವಾಗಿ ಮಾಡುವ ರೀತಿಯನ್ನು ಹಠಯೋಗವು ಕಲಿಸುತ್ತದೆ. ಆದರೆ ಶಾರೀರಕ ಆರೋಗ್ಯವೂ ಆತ್ಮಜ್ಞಾನವೂ ಒಂದೇ ಎಂದು ಹೇಳುವದಿಲ್ಲ. ಅದಕ್ಕೆ ವಿರುದ್ಧವಾಗಿ ನಿರೋಗ ಶರೀರವೇ ಆತ್ಮಜ್ಞಾನದ ಗುರುತಾಗಿದ್ದರೆ, ಪೂರ್ಣ ಆರೋಗ್ಯವನ್ನನುಭವಿಸುವ ಕ್ರೂರಪಶುಗಳು ಸಹ ಆತ್ಮಜ್ಞಾನಿಗಳಾಗಬೇಕಾಗಿತ್ತೆಂದು ಅವರು ಅನ್ನುತ್ತಾರೆ. ಈ ಯೋಗಿಗಳ ಮುಖಭಾವನೆಯೆಂದರೆ ಶಾರೀರಕ ಬಾಧೆಗಳು, ಆತ್ಮಿಕ ಉನ್ನತಿಯ ಮಾರ್ಗದಲ್ಲಿಯ ಎಡರುಗಳೆಂದು, ನಿರೋಗಶರೀರವು ಈ ಜೀವನದಲ್ಲಿ ಅಂತಿಮ ಜ್ಞಾನವನ್ನು ಪಡಕೊಳ್ಳುವದಕ್ಕಾಗಿ ಅತಿ ಸಹಾಯಕಾರಿಯೆಂದು ಇರುತ್ತದೆ. ಆದುದರಿಂದ ಸಂಪೂರ್ಣ ಆರೋಗ್ಯವಿಲ್ಲದವರು ಹಠಯೋಗಾಭ್ಯಾಸವನ್ನು ಆರಂಭಿಸತಕ್ಕದ್ದು.

ಹಠಯೋಗಾಚರಣೆಯನ್ನು ಮಾಡಲಿಚ್ಛಿಸುವವರು ಆಹಾರ ಸಂಬಂಧವಾಗಿ ಬಿಗಿಯಾದ ನಿಯಮಗಳನ್ನನುಸರಿಸಬೇಕಾಗುವದು. ಕಹಿ, ಕಾರ, ಹುಳಿ, ಬಿಸಿಪದಾರ್ಥಗಳನ್ನು ಉದಾ:-ಸಾಸಿವೆ,ಮದ್ಯ,ಮೀನ, ಪ್ರಾಣಿಗಳ ಮಾಂಸ, ಮೊಸರು, ಮಜ್ಜಿಗೆ, ಗಜ್ಜರಿ, ಉಳ್ಳೇಗಡ್ಡಿ,ಬೆಳ್ಳೊಳ್ಳಿ ಮುಂತಾದವುಗಳನ್ನು ತಿನ್ನಕೂಡದು.ಒಮ್ಮೆ ಅಟ್ಟ ಅಡಿಗೆಯು ಆರಿದರೆ ಅದನ್ನು ಪುನ: ಬಿಸಿಮಾಡಿ ಸೇವಿಸಕೂಡದು.ಉಪ್ಪನ್ನಾಗಲೀ, ಪಚನಕ್ರಿಯೆಗೆ ಕಠಿಣವೆನಿಸುವ ಯಾವ ಆಹಾರವನ್ನಾದರೂ ಬಿಟ್ಟುಬಿಡಬೇಕು. ಅಕ್ಕಿ, ಜವೆಗೋದಿ, ಗೋದಿ, ಹಾಲು,ಸಕ್ಕರೆ, ಜೇನುತುಪ್ಪ, ಬೆಣ್ಣೆಗಳು ಹಠಯೋಗಿಗೆ ತಕ್ಕ ಆಹಾರ. ನೂರಾರು ಜನರಿಗೆ ಊಟಕ್ಕೆ ಬಡಿಸುವ ನಂಬರು ಮನೆಗಳಲ್ಲಿ ಆಹಾರವು ಎಲ್ಲರಿಗೂ ಹಿತಕರವಾಗದೆ, ಎಷ್ಟೋ ಜನರಿಗೆ ಕೇಡಾಗುವ ಸಂಭವವಾದರೂ ಬಹಳ ಉಂಟು. ಪೂರ್ಣ ಆರೋಗ್ಯ ಪಡೆಯಲಿಚ್ಛಿಸುವ ಪ್ರತಿಯೊಬ್ಬನು ತನ್ನ ಆಹಾರದ ಬಗ್ಗೆ ಬಹಳ ಎಚ್ಚರಿಕೆಯಿಂದಿರಬೇಕಾಗುವದು. ದೇಹನಿರ್ಮಲತೆ, ಶುದ್ಧಹವೆ ಮತ್ತು ಸ್ವಚ್ಛ ನೀರುಗಳ ವಿಷಯವಾಗಿ, ಎಲ್ಲ ಆರೋಗ್ಯ ಸಂಬಂಧದ ನಿಯಮಗಳನ್ನು ಅವರು ಚನ್ನಾಗಿ ಲಕ್ಷದಲ್ಲಿಟ್ಟು ಆಚರಿಸಬೇಕಾಗುವದು. ಬಹಳ ಗಮ್ಮವೆನಿಸುವ ಮನೆಗಳಲ್ಲಿ ಅವರು ಇರಬಾರದು. ಅವರು ಹೆಂಡ, ಸರಾಯಿ,ಕಾಫಿ ಮುಂತಾದ ಕೃತ್ರಿಮ ಪೇಯಗಳನ್ನು ಸೇವಿಸಕೂಡದು. ಬಹಳ ಕಾಫಿ ಸೇವಿಸುವದರಿಂದಾಗುವ ಕೆಟ್ಟ ಪರಿಣಾಮವು ಅಮೇರಿಕೆಯಲ್ಲಿ ತಲೆದೋರಹತ್ತಿದೆ. ಕಾಫಿಯಿಂದ ಕೆಟ್ಟ ಪರಿಣಾಮಗಳ ಅನುಭವನ್ನು ತೆಗೆದುಕೊಳ್ಳದ ಜನರು ಬಹು ಸ್ವಲ್ಪ.

ಹಠಯೋಗ ಮಾಡಲಿಚ್ಛಿಸುವವನು ಮೊದಲು ಪೂರ್ವ ಶಾರೀರಕ ಸಂಯಮನವುಳ್ಳ ಒಬ್ಬ ಹಠಯೋಗಿಯನ್ನು ಹುಡುಕತಕ್ಕದ್ದು. ಆಮೇಲೆ ಅವನ ಕಟ್ಟಪ್ಪಣೆಗನುಸರಿಸಿ ನಡೆಯುತ್ತ ಹೋಗಬೇಕು. ಅವನು ಒಂದು ಏಕಾಂತ ಸ್ಥಳದಲ್ಲಿರತಕ್ಕದ್ದು. ಅಲ್ಲಿಯ ಹವೆಯಲ್ಲಿ ಹೆಚ್ಚು ಕಡಿಮೆಗಳು ಆಗುತ್ತಿರಬಾರದು. ಅವನು ಕೇವಲ ಶಾಕಾಹಾರಿಯಾಗಿರಬೇಕು. ಶರೀರದಲ್ಲಿ ಕೃತ್ರಿಮ ಪ್ರೇರಣೆಯನ್ನುಂಟು ಮಾಡುವ ಪೇಯವನ್ನು ಅವನು ಸೇವಿಸಕೂಡದು. ಬಹಳ ಆಹಾರವನ್ನು ಸೇವಿಸಬಾರದು. ನೈತಿಕ ನಿಯಮಗಳನ್ನು ಬಿಗಿಯಾಗಿ ಅನುಸರಿಸಬೇಕು. ಮತ್ತು ಪೂರ್ಣಬ್ರಹ್ಮಚಾರಿಯಾಗಿರಬೇಕು. ಇಂದ್ರಿಯಗಳನ್ನು ಬಿಗಿ ಹಿಡಿಯಲಿಕ್ಕೂ, ಶರೀರವನ್ನು ಸ್ವಚ್ಛವಾಗಿಡಲಿಕ್ಕೂ, ಎಲ್ಲ ಪ್ರಾಣಿಗಳಿಗೆ ದಯಾಭಾವನೆಯನ್ನು ತೋರಿಸಿ ತನ್ನ ಮನಃಶುದ್ಧಿ ಮಾಡಿಕೊಳ್ಳಲಿಕ್ಕೂ ಅವನು ಕಲಿಯಬೇಕು.

ಯೋಗದ ಈ ಭಾಗವನ್ನು ಆರಂಭಿಸಲಿಚ್ಛಿಸುವವನು, ದೇಹ ಮತ್ತು ಅವಯವಗಳ ಬೇರೆ ಬೇರೆ ಆಸನಗಳನ್ನು ಕೈವಶ ಮಾಡಿಕೊಳ್ಳಬೇಕು. ಹಠಯೋಗದಲ್ಲಿ ಹೇಳಿದ ಆಸನಗಳು ಒಟ್ಟಿಗೆ ೮೪ ಇರುತ್ತವೆ. ಪ್ರಾಣಾಯಾಮ ಸಾಧನೆಯಿಂದ ಇವುಗಳಲ್ಲಿಯ ಪ್ರತಿಯೊಂದು ಆಸನ ಸಾಧನೆಯಿಂದ ಶರೀರದಲ್ಲಿ ಸುಪ್ತವಾಗಿದ್ದ ಶಕ್ತಿಯು ಬೆಳವಣಿಗೆಯನ್ನು ಹೊಂದುವದು. ಶರೀರದಲ್ಲಿ ಜಡತ್ವವನ್ನುಂಟುಮಾಡುವ ತಮೋಭಾಗವನ್ನು ತೆಗೆದುಹಾಕಿ,ಶೈತ್ಯ, ಕೆಮ್ಮು, ದಮ್ಮು,ಸಂಧಿವಾತ ಮೊದಲಾದ ಅನೇಕ ರೋಗಗಳನ್ನು ಬಿಸುಟುವದು, ಈ ಆಸನದ ಮತ್ತೊಂಧು ಉದ್ದೇಶ. ಇವುಗಳಲ್ಲಿ ಕೆಲವು ಹೊಟ್ಟೆಯ ಮತ್ತು ಯಕೃತ್ತಿನ ಕಾರ್ಯವನ್ನು ಒತ್ತರಿಸುವವು. ಮತ್ತೆ ಕೆಲವು ಉಳಿದ ಇಂದ್ರಿಯಗಳನ್ನು ನಿಯಮಿತವಾಗಿ ಮಾಡುವವು. ಶರೀರದಲ್ಲಿಯ ಕಂಪ,ಅವಯವಗಳಲ್ಲಿಯ ಅವಿಶ್ರಾಂತಿ ಮೊದಲಾದ ಶಾರೀರಕ ನಿಗ್ರಹದಲ್ಲಿಯ ಎಡರುಗಳು ಆಸನಸಾಧನೆಯಿಂದ ನಿವಾರಿಸಲ್ಪಡುವವು.

ಕೆಳಗಿನ ಆಸನ ವರ್ಣನೆಯಿಂದ ವಾಚಕರಿಗೆ ಆಸನದ ವಿಚಾರವು ಸ್ವಲ್ಪಲ್ಲ ಸ್ವಲ್ಪ ಆಗುವದು.

೧. ಎಡದ ಅಡಿಯನ್ನು ಬಲದ ತೊಡೆಯ ಮೇಲೆ, ಬಲದ ಅಡಿಯನ್ನು ಎಡದ ತೊಡೆಯ ಮೇಲಿಟ್ಟು, ಶರೀರ ಕುತ್ತಿಗೆ ತಲೆಗಳನ್ನು ಒಂದೇ ರೇಷೆಯಲ್ಲಿಟ್ಟು, ನೆಲದ ಮೇಲೆ ಕೂಡ್ರು.

೨.ಈ ಆಸನ ಹಾಕಿದ ಮೇಲೆ ಬಲಗಾಲಿನ ಹೆಬ್ಬರಳನ್ನು ಬಲಗೈಯಿಂದ, ಎಡಗಾಲಿನ ಹೆಬ್ಬರಳನ್ನು ಎಡಗೈಯಿಂದ ಹಿಡಿದ ಕೈಗಳು, ಹಿಂಭಾಗದಿಂದ ಬಂದು ಒಂದಕ್ಕೊಂದು ತತ್ತು ಬೀಳಬೇಕು.

೩.ತೊಡೆ ಮತ್ತು ಮೀನಗಂಡಗಳ ನಡುವೆ ಮೇಲಡಿಗಳನ್ನು ಗಟ್ಟಿಯಾಗಿ ಸೇರಿಸಿ, ಸಮನೆಲದ ಮೇಲೆ ನೀಟಾಗಿ ಕುಳಿತುಕೊಳ್ಳು.

೪.ಒಂದನೆಯ ಆಸನವನ್ನು ಹಾಕಿ ತೊಡೆಸಂದಿಯಲ್ಲಿ ಕೈಗಳನ್ನು ಸೇರಿಸಿ, ಕೈಗಳನ್ನು ನೆಲದ ಮೇಲೆ ಗಟ್ಟಿಯಾಗಿ ಊರಿ ಶರೀರವನ್ನು ಆಸನದಿಂದ ಮೇಲಕ್ಕೆತ್ತು.

೫.ನೆಲದ ಮೇಲೆ ಕುಳಿತುಕೊಂಡು ಕಾಲುಗಳನ್ನು ಎದುರಿನಲ್ಲಿ ಚಾಚಿ,ಮೊಣಕಾಲು ಮಣಿಸದೆ ಕೈಗಳಿಂದ ಕಾಲ್ಬೆರಳುಗಳನ್ನು ಹಿಡಿಯಿರಿ.

೬. ಈ ಆಸನವನ್ನು ಹಾಕಿ ಹಣೆಯಿಂದ ಮೊಣಕಾಲು ಮುಟ್ಟಿರಿ.

೭. ಐದನೆಯ ಆಸನದಲ್ಲಿಯಂತೆ ಕಾಲ್ಬೆರಳುಗಳನ್ನು ಹಿಡಿದು, ಒಂದು ತೋಳನ್ನು ಉದ್ದವಾಗಿಟ್ಟು, ಎರಡನೆಯದರಿಂದ ಮತ್ತೊಂದು ಕಾಲಿನ ಹೆಬ್ಬೆರಳನ್ನು ನಿಮ್ಮ ಕಿವಿಯ ಕಡೆಗೆ ಜಗ್ಗಿರಿ.

೮. ನೆಲದ ಮೇಲೆ ಕೈಗಳನ್ನು ಗಟ್ಟಿಯಾಗಿ ಊರಿ, ಮೈಯ ಭಾರವನ್ನು ಮೊಣಕೈ ಮೇಲೆ ಹಾಕಿ, ಶರೀರವನ್ನು ಮೇಲಕ್ಕೆ ಎತ್ತಿರಿ.

ಹಠಯೋಗದಂತೆ ಈ ಆಸನವು ಹೊಟ್ಟೆಯಲ್ಲಿಯ ಎಲ್ಲ ರೋಗಗಳನ್ನು ವಾತ, ಪಿತ್ತ, ಕಫ ಮೊದಲಾದವುಗಳನ್ನು ಹೋಗಲಾಡಿಸುತ್ತದೆ. ಇದರಿಂದ ಪಚನಶಕ್ತಿಯಾದರೂ ಹೆಚ್ಚುತ್ತದೆ.

೯. ನೆಲದ ಮೇಲೆ ಶವದಂತೆ ಮೋರೆ ಮೇಲೆ ಮಾಡಿ ಮಲಗಿಕೊಂಡು, ಶರೀರದ ಉಳಿದ ಭಾಗವನ್ನು ತಲೆಯೊಡನೆ ಸಮಕಕ್ಷಿಯಲ್ಲಿಟ್ಟು ಮಲಗಿಕೊಳ್ಳಿರಿ. ಇದರಿಂದ ಎಲ್ಲ ದಣಿವು ಹೋಗಿ, ವಿಶ್ರಾಂತಿಯೂ ಮನಸ್ಸಮಾಧಾನವೂ ದೊರೆಯುವದು.

ಹಠಯೋಗವನ್ನಭ್ಯಾಸಿಸುವವನು ಈ ಎಲ್ಲ ಆಸನಗಳನ್ನು ಮೊದಲು ಸಾಧಿಸಿಕೊಂಡು, ಪ್ರಾಣಾಯಾಮವನ್ನಾರಂಭಿಸಬೇಕು. ಪ್ರಾಣಾಯಾಮ ಶಾಸ್ತ್ರವನ್ನು ಎಲ್ಲ ಬಗೆಯಿಂದಲೂ ಎಚ್ಚರಿಕೆಯಿಂದ ಅಭ್ಯಾಸಿಸತಕ್ಕದ್ದು. ಪ್ರಾಣನಿಗ್ರಹ ಮಾಡಲಿಕ್ಕೆ ಒಂದನೆಯ ಆಸನವು ಬಹು ಸುಲಭವೂ, ಅತ್ಯುತ್ತಮವೂ ಆಗಿರುವದು. ಇದರಿಂದ ಸಮಾಧಾನವಾದ ರಕ್ತಾಭಿಸರಣವೂ, ಸಾವಕಾಶವಾದ ಶ್ವಾಸೋಚ್ಛ್ವಾಸವೂ

ಅನುಕೂಲಿಸಲ್ಪಡುವವು. ಹೊಸಬನು ತನ್ನ ಮೂಗಿನ ಎರಡು ಸೊಳ್ಳೆಗಳೊಳಗಿಂದ ಶ್ವಾಸೋಚ್ಛ್ವಾಸಗಳಿಗೆ ನಿಯಮಿತ ವೇಳೆಯನ್ನು ಗೊತ್ತುಮಾಡಿ, ಪ್ರಾಣವನ್ನು ತೆಗೆದುಕೊಳ್ಳಬೇಕು. ಆಮೇಲೆ ತನ್ನ ಗುರುವಿನಿಂದ ಪ್ರಾಣವನ್ನು ಹೊರಗಾಗಲಿ ಒಳಗಾಗಲೀ ಹಿಡಿಯಲಿಕ್ಕೆ ಕಲಿಯಬೇಕು. ಕೆಲವು ವಾರಗಳ ವರೆಗೆ ಪ್ರಾಣವನ್ನು ಹೊರಗೆ ಅಥವಾ ಒಳಗೆ ನಿರ್ಬಂಧಿಸುವ ಸಾಧನೆ ಮಾಡಿದ ತರುವಾಯ, ಕೆಲವು ಸೆಕೆಂಡುಗಳ ವರೆಗೆ ಎಡದ ಸೊಳ್ಳೆಯಿಂದ ಉಸುರು ತಕ್ಕೊಂಡು, ಬಲದ ಸೊಳ್ಳೆಯಿಂದ ನಾಲ್ಕು ಸೆಕೆಂಡುಗಳ ವರೆಗೆ ಅದನ್ನು ಬಿಡಬೇಕು. ಆ ಮೇಲೆ ಇದನ್ನು ಬದಲಿಸಿ, ಬಲದಿಂದ ತಕ್ಕೊಂಡು ಎಡದಿಂದ ಬಿಡಬೇಕು. ಹೀಗಾಗುವದರಿಂದ ದೇಹ ಶುದ್ಧಿಯಾಗಿ ಹೆಚ್ಚಿನ ಪ್ರಾಣಾಯಾಮ ಸಾಧನೆಗೆ ಅನುಕೂಲವಾಗುವದು. ಆಮೇಲೆ ಸಾಧಕನು ಎಡದ ಸೊಳ್ಳೆಯಿಂದ ನಾಲ್ಕು ಸೆಕೆಂಡುಗಳ ವರೆಗೆ ಉಸಿರನ್ನು ಒಳಗೆ ತಕ್ಕೊಂಡು ಅದನ್ನು ಅಲ್ಲಿಯೇ ೧೬ ಸೆಕೆಂಡುಗಳ ವರಿಗೆ ನಿರ್ಬಂಧಿಸಿ,೮ ಸೆಕೆಂಡುಗಳಾಗುವ ವರೆಗೆ ಅದನ್ನು ಹೊರಗೆ ಬಿಡಬೇಕು. ಈ ರೀತಿಯಾಗಿ ಮೂರು ತಿಂಗಳುಗಳ ವರೆಗೆ ಸಾಧನೆ ಮಾಡುವದರಿಂದ ಜ್ಞಾನತಂತುಗಳ ಬಲವನ್ನು ಹೆಚ್ಚಿಸಿ, ಅವುಗಳಲ್ಲಿ ಗುಪ್ತವಾಗಿದ್ದ ಬೇನೆಗಳನ್ನು ಹೋಗಲಾಡಿಸುವ ಶಕ್ತಿಯನ್ನು ಹೆಚ್ಚಿಸುವದು.

ಇಂದ್ರಿಯಗಳ ಯಾವದೊಂದು ವ್ಯಥೆಯನ್ನು ಅಥವಾ ಯಾವದೊಂದು ಬೇನೆಯನ್ನು ಹೋಗಲಾಡಿಸಲಿಚ್ಛಿಸುವ ಯೋಗಿಯು ವ್ಯಥಿತ ಇಂದ್ರಿಯಗಳಿಗೆ ಸಂಬಂಧಿಸಿದ ಬೇರೆ ಬೇರೆ ಆಸನಗಳನ್ನು ಹಾಕಿ, ಪ್ರಾಣಾಯಾಮ ಮಾಡತಕ್ಕದ್ದು. ಬೆನ್ನೆಲುವಿನ ಬುಡದಲ್ಲಿ ಗುಪ್ತವಾಗಿದ್ದ ವಾಸಿಗೊಳಿಸುವ ಶಕ್ತಿಯನ್ನು ಅವರು ಪ್ರಬೋಧಿಸಬೇಕು. ಒಳಗಿನ ಇಂದ್ರಿಯಗಳನ್ನು ಸ್ವಚ್ಛಮಾಡಲಿಕ್ಕೆ ಹಲವು ಬಗೆಯ ರೀತಿಗಳು ಹಠಯೋಗದಲ್ಲಿ ವರ್ಣಿಸಲ್ಪಟ್ಟಿವೆ. ಅವುಗಳಲ್ಲಿ ಕೆಲವು ಬಹುಕಾಲದ ತಲೆಬೇನೆಯಿಂದ, ಶೈತ್ಯದಿಂದ, ನೆಗಡಿಯಿಂದ, ಅಜೀರ್ಣದಿಂದ, ನಿದ್ರಾಭಾವದಿಂದ ಪೀಡಿಸಲ್ಪಟ್ಟವರಿಗೆ ಬಹು ಪ್ರಯೋಜನಕಾರಿಗಳಾಗಿವೆ.

ಮೂಗಿನೊಳಗಿಂದ ತಣ್ಣೀರು ಕುಡಿಯುವದರಿಂದ ಬಹುಕಾಲದ ತಲೆಬೇನೆಯು ಕೂಡ ಇಲ್ಲದಂತಾಗುವದು. ಮೂಗು ಮತ್ತು ಬಾಯಿಗಳ ನಡುವಿನ ದ್ವಾರವನ್ನು ಹಠಯೋಗಿಯು ಸೂಕ್ಷ್ಮದಾರದ ಮೆತ್ತನ್ನ ಎಳೆಗಳನ್ನು ಸೇರಿಸ ಅವನು ಬಾಯಿಯೊಳಗೆ ತಂದು ಅವುಗಳಿಂದ ಸ್ವಚ್ಛಮಾಡುತ್ತಾನೆ. ಒಂದು ಸೊಳ್ಳೆಯಿಂದ ದಾರವನ್ನು ಸೇರಿಸಿಕೊಂಡು ಮತ್ತೊಂದರಿಂದ ಅದನ್ನು ಹೊರಗೆ ತೆಗೆಯಬಲ್ಲನು. ಇದರಿಂದ ತಲೆಯು ಸ್ವಚ್ಛವಾಗಿ ದೃಷ್ಟಿಯು ತೀಕ್ಷ್ಣವಾಗುತ್ತದೆ. ತೋಳಿನ ಮೇಲ್ಭಾಗದ ಎಲ್ಲ ಬೇನೆಗಳು ಇದರಿಂದ ನಾಶವಾಗುವವು. ಹಠಯೋಗಿಯು ಆಹಾರ ನಳಿಕೆಯನ್ನು ಸೂಕ್ಷ್ಮವಾದ ಮೂರು ಇಂಚು ಅಗಲ ಅರಿವೆಯನ್ನು ನುಂಗಿ ಸ್ವಚ್ಛಮಾಡುತ್ತಾನೆ. ಇವೆಲ್ಲವುಗಳನ್ನು ಯಾವ ಉಪಕರಣವನ್ನು ಉಪಯೋಗಿಸದೆ ಪ್ರಾಣಾಯಾಮ ಸಹಾಯದಿಂದಲೇ ಮಾಡುತ್ತಾನೆ. ಆಮೇಲೆ ಪ್ರಾಣಾಯಾಮ ಸಹಾಯದಿಂದ ಹೊಟ್ಟೆಯೊಳಗೆ ನೀರನ್ನು ಅಲ್ಲಾಡಿಸಿ ಅದನ್ನು ಅದೇ ದ್ವಾರದಿಂದ ಹೊರಗೆ ಚಲ್ಲಬಲ್ಲನು. ನಿಷ್ಣಾತನಾದ ಯೋಗಿಯು ಎಲ್ಲ ಆಹಾರ ನಳಿಕೆಯಲ್ಲಿ ಗುದದ್ವಾರದಿಂದ ಬಹಳ ನೀರನ್ನು ತೆಗೆದುಕೊಂಡು ಆದೇ ದ್ವಾರದಿಂದ ಅದನ್ನು ಬಿಡುತ್ತಾನೆ. ಆಮೇಲೆ ಹೊಟ್ಟೆಯ ಅಥವಾ ಕರುಳಿನ ಬೇನೆಯು ಇಲ್ಲದಂತಾಗುವದು. ಈ ಸಾಧನೆಗಳು ವಿಶೇಷತಃ ಸ್ಥೂಲ ಶರೀರದವರಿಗೂ, ಕಫವಿದ್ದವರಿಗೂ, ಸಡಿಲು ಮೈಯವರಿಗೂ ಉಪಯೋಗವಾಗುವವು.

ನಿದ್ರಾಭಂಗವನ್ನು ಅವನು ೯ನೆಯ ಆಸನವನ್ನು ತಾಳಿ, ದೀರ್ಘಶ್ವಾಸಗಳನ್ನು ತಕ್ಕೊಂಡು, ಪ್ರತಿಯೊಂದು ಶ್ವಾಸಾನಂತರದಲ್ಲಿ ಅದನ್ನು ಒಳಗೆ ಕೆಲಹೊತ್ತು ನಿಲ್ಲಿಸುವದರಿಂದ ಕಳೆದುಕೊಳ್ಳುವನು.

ಹಠಯೋಗಿಯು ತನ್ನ ನಾಲಗೆಯನ್ನು ನುಂಗಬಲ್ಲನು. ತಿರುವಿದ ನಾಲಗೆಯನ್ನು ನುಂಗಬಲ್ಲವನು. ಮುಪ್ಪನ್ನೂ ಸಾವನ್ನೂ ನೀಗಿ, ನಿದ್ರೆ, ಹಸಿವು, ತೃಷೆಗಳನ್ನು ಜಯಿಸುತ್ತಾನೆಂದು ಹೇಳಿದೆ. ನಿಜವಾದ ಹಠಯೋಗಿಯು

ಬಲವು ಸತ್ಯವಾಗಿಯೇ ಅತುಲವೂ,ನಿಸ್ಸೀಮವೂ ಆದದ್ದು. ಅವನು ತನಗೆ ಸರಿದೋರಿದಂತೆ ಯಾವದೊಂದನ್ನು ಮಾಡಬಲ್ಲನು ಅಥವಾ ಕೆಡಿಸಬಲ್ಲನು.

ಹಠಯೋಗಾಚರಣೆಯಿಂದ ತತ್‌ಕ್ಷಣದಲ್ಲಿಯೇ ಕೈಸೇರುವವಗಳೆಂದರೆ ಸಂಪೂರ್ಣ ಆರೋಗ್ಯ ಮತ್ತು ಆಯುರ್ವರ್ಧನೆ. ಆದರೆ ನಿಜವಾದ ಸತ್ಯಾನ್ವೇಷಿಗೆ ಅವು ಆ ಇಂದ್ರಿಯಾತೀತಸ್ಥಿತಿಗೆ ಮುಟ್ಟುವದಕ್ಕೆ ಸಾಧನ ಮಾತ್ರಗಳಾಗಿರುವದರಿಂದ, ಅವಕ್ಕೆ ಅವನು ಅಷ್ಟು ಬೆಲೆಗೊಡುವದಿಲ್ಲ. ಅವನ ಮತದಂತೆ ಯಾವನೊಬ್ಬನು ನೂರಾರುವರ್ಷ ಬಾಳಿಯೂ ತನ್ನ ನಿಜರೂಪದ ಅರಿವನ್ನು ಮಾಡಕೊಳ್ಳದಿದ್ದರೆ ಓಕವೃಕ್ಷಕ್ಕಿಂತ ಹೆಚ್ಚಿನವನಾಗುವನು. ಯಾಕಂದರೆ ಓಕ ಗಿಡವಾದರೂ ಎಷ್ಟೋ ನೂರು ವರ್ಷಗಳ ವರೆಗೆ ಒಮ್ಮೊಮ್ಮೆ ಬಾಳಬಹುದು. ಆದರೆ ಕಡೆಗೆ ಅದು ಗಿಡವೇ (ಅದಕ್ಕಿಂತ ಹೆಚ್ಚಿನದಾಗಲರಿಯದು). ಆದರೆ ೩೦ ವರ್ಷೇ ಬಾಳಿದರೂ ಆತ್ಮ ಪರಮಾತ್ಮರ ಐಕ್ಯವನ್ನು ತಿಳಿದು ಸಾಯುವವನು, ಸಂಪೂರ್ಣ ನಿರೋಗಿತನ, ಮಾನಸಿಕ ಶಕ್ತಿ, ಬೇನೆಗಳನ್ನು ವಾಸಿಮಾಡುವ ಶಕ್ತಿಗಳೆಲ್ಲವನ್ನು ಸ್ವಾಧೀನ ಪಡಿಸಿಕೊಂಡವನಿಗಿಂತಲೂ ಅನಂತಪಾಲು ಹೆಚ್ಚಿನವನು. ಯಾಕಂದರೆ ಅವನು ನಮ್ಮಲ್ಲಿಯೇ ಅಡ್ಡಾಡುವ ಸಜೀವ ಆಕಾರವಿಶಿಷ್ಟನಾದ ಪರಮಾತ್ಮನೇ ಆಗಿದ್ದು, ಮಾನವಜಾತಿಗೆ ಮುಕ್ತಿಮಾರ್ಗವನ್ನು ತೋರುವನು. ಆದಕಾರಣ ನಿಜವಾದ ಸತ್ಯಾನ್ವೇಷಿಯಾದವನು ರಾಜಯೋಗವು ಸಾಧಿಸುವ ವರೆಗೆ ಮಾತ್ರ ಹಠಯೋಗವನ್ನು ಆಚರಿಸಬೇಕು. ರಾಜಯೋಗದಿಂದಲೇ ಆತ್ಮಜ್ಞಾನವೂ ಪೂರ್ಣಸ್ವಾತಂತ್ರ್ಯವೂ ಲಭಿಸುವವು.

❖❖

೭

# ಕರ್ಮಯೋಗ

ಶಿವಾನುಭವ ೫-೧೧, ೧೨

ಯೋಗವೆಂದರೆ ಕರ್ಮದಲ್ಲಿ ಕೌಶಲ್ಯವೆಂಬುವದೊಂದು ಗೌರವದ ಅರ್ಥವದೆ. ಕೃ-ಮಾಡು ಎಂಬ ಸಂಸ್ಕೃತ ಧಾತುವಿನಿಂದ 'ಕರ್ಮ'ವು ಹುಟ್ಟಿದೆ. ಆದುದರಿಂದ ಕರ್ಮದ ಶಬ್ದಶಃ ಅರ್ಥವು ಕೆಲಸವೆಂದಾಗುವದು. ಅದರಲ್ಲಿ ಮಾನಸಿಕ ಹಾಗು ಶಾರೀರಕ ಕರ್ಮಗಳ ಸಮಾವೇಶವಾಗುವದು. ಯಾವದೊಂದು ರೀತಿಯ 'ಚಲನ ವಲನ'ಇದ್ದಲ್ಲೆಲ್ಲ ಕರ್ಮದ ಅಸ್ತಿತ್ವವಿರುತ್ತದೆ. ಈ ಅರ್ಥದಲ್ಲಿ ಭಕ್ತಿ, ಪ್ರೀತಿ, ಅರ್ಚನೆ, ಧ್ಯಾನ, ಧಾರಣೆ, ಸದಸದ್ವಿವೇಕ, ಬುದ್ಧಿ ಇವೆಲ್ಲವುಗಳೂ ಕರ್ಮಗಳೇ. ಅದರಂತೆ ತಿನ್ನುವದು ಉಣ್ಣುವದು ನಡೆಯುವದು ಮಾತಾಡುವದು ಇವುಗಳಾದರೂ ಕರ್ಮಗಳೇ.

ಪ್ರತಿಯೊಂದು ಕರ್ಮವು ತನ್ನ ಪ್ರತಿಕರ್ಮವನ್ನು ಒಡಗೂಡಿರುತ್ತದೆ. ಕಾರಣವು ಕಾರ್ಯದಿಂದ ಹೇಗೆ ತೀರ ಭಿನ್ನವಾಗಲರಿಯದೋ ಹಾಗೆಯೇ ಕರ್ಮವಾದರೂ ತನ್ನ ಪರಿಣಾಮದಿಂದ ಬೇರೆಯಾಗಲಾರದು. ಆದುದರಿಂದ ಕರ್ಮದ ಮತ್ತೊಂದು ಅರ್ಥವು ಕರ್ಮ ಹಾಗೂ ಅದರ ಪರಣಾಮವೆಂದಾಗುವದು. ಕಾರಣ ಕಾರ್ಯಗಳ ಶೃಂಖಲೆಗೆ ಕರ್ಮವೆನ್ನುತ್ತಾರೆ. ನಮ್ಮ ದೇಹದ ಪ್ರತಿಯೊಂದು ಕೆಲಸವು ಕರ್ಮದ ನಿಯಮಕ್ಕೊಳಪಟ್ಟಿದೆ. ಈ ಸೃಷ್ಟಿಯ ನಿಯಮಕ್ಕನುಸಾರವಾಗಿಯೇ ನಾವು ಅನಾದಿಕಾಲದಿಂದಲೂ ಕರ್ಮಗಳನ್ನು ಮಾಡುತ್ತ, ಅವುಗಳ ದುಷ್ಟ ಅಥವಾ ಶಿಷ್ಟ ಪರಣಾಮಗಳನ್ನು ಅನುಭವಿಸುತ್ತ ಬಂದಿದ್ದೇವೆ.

ಪ್ರತಿಯೊಂದು ಕರ್ಮದ ಪರಣಾಮವು ಮನಸಿನ ಮೇಲೆ ತನ್ನದೊಂದು ಗುರುತನ್ನು ಬಿಡುತ್ತದೆ. ಈ ಗುರುತೇ ಸಂಸ್ಕಾರವು. ಈ ಸಂಸ್ಕಾರವೇ ಅಂತಹ ಮತ್ತೊಂದು ಕರ್ಮದ ಬೀಜವು. ಈ ಅರ್ಥದಲ್ಲಿ ಹೋದ ಕರ್ಮಗಳ ಒಟ್ಟಾರೆಯಾದ ಪರಿಣಾಮ ಅಥವಾ ಭವಿಷ್ಯತ್ ಕರ್ಮಗಳ ಬೀಜರೂಪವೆಂದು ಕರ್ಮದ ಅರ್ಥವಾಗುವದು. ಆದುದರಿಂದ ಯಾವನೊಬ್ಬನು ಪೂರ್ವಜನ್ಮಗಳಲ್ಲಿ ಮಾಡಿದ ಕರ್ಮಗಳ ಸಮವಾಯಿ ಪರಿಣಾಮವೇ ಆ ವ್ಯಕ್ತಿಯ ಸ್ವಭಾವವಾದ ಕಾರಣ, ಅದಕ್ಕೆ ನಾವು ಕರ್ಮವೆನ್ನಬಹುದು. ಅದರಂತೆಯೇ ನಮ್ಮ ಮುಂದಿನ ಜನ್ಮವಾದರೂ ನಮ್ಮ ಮಾನಸಿಕ ಹಾಗು ಶಾರೀರಕ(ಈ ಜನ್ಮದ)ಕರ್ಮಗಳ ಒಟ್ಟು ಪರಿಣಾಮವಿರುತ್ತದೆ. ಆದುದರಿಂದ ಕರ್ಮಯೋಗವೆಂದರೆ ಕರ್ಮವೆಂಬ ಶಬ್ದಕ್ಕಾಗುವ ಮೂರೂ ವಿಚಾರಗಳನ್ನೊಳಗೊಂಡ ಯೋಗದ ಶಾಲೆಯು. ಆತ್ಮನು ಕಾರ್ಯ-ಕಾರಣ ಚಕ್ರದಿಂದ ಹೇಗೆ ಬಿಡುಗಡೆ ಹೊಂದಬಲ್ಲನು? ಬಿಡುಗಡೆ ಹೊಂದಿ ಪೂರ್ಣ ಸ್ವಾತಂತ್ರ್ಯವನ್ನು ಹೇಗೆ ಪಡೆಯ ಬಲ್ಲನು? ಜೀವನದ ಅತ್ಯುಚ್ಚ ಧ್ಯೇಯವನ್ನು ಹೇಗೆ ಕೊನೆಗಾಣಿಸಬಲ್ಲನು? ಮತ್ತು ಸರ್ವಧರ್ಮಗಳ ಕಡೆಯ ಗುರಿಯನ್ನು ಹೇಗೆ ಮುಟ್ಟಬಲ್ಲನು?

ಎಂಬಿವೇ ಮೊದಲಾದವುಗಳ ಸಮಾಲೋಚನೆಯನ್ನು ಕರ್ಮಯೋಗವು ಮಾಡುತ್ತದೆ. ಯಾವದೊಂದು ಮತದಲ್ಲಿ ವಿಶ್ವಾಸವಿಲ್ಲದವರಿಗೂ ಪೂಜಿಸಲು ಮನಸಿಲ್ಲದವರಿಗೂ ವಿಶಿಷ್ಟ ದೇವರನ್ನು ಅರ್ಚಿಸಲೊಲ್ಲದವರಿಗೂ ಇದು ಉತ್ತಮವಾದ ಹಾದಿ.

ನಮ್ಮ ಜೀವನದಲ್ಲಿ ಅಡರುವ ಎಲ್ಲ ಬಗೆಯ ದುಃಖಗಳ ನಿಜವಾದ ಕಾರಣವು ನಮ್ಮ ಕರ್ಮಗಳಲ್ಲಿಯೇ ಇರುತ್ತದೆ ಎಂದು ಕರ್ಮಯೋಗವು ಕಲಿಸುತ್ತದೆ. ನಾವು ಬಿತ್ತಿದ್ದರ ಫಲವನ್ನು ನಾವೇ ಉಣ್ಣುತ್ತೇವೆ. ನಮ್ಮ ದು:ಖಕ್ಕೋಸುಗ ತಾಯಿತಂದೆಗಳನ್ನಾಗಲಿ, ದುಷ್ಟ ಗ್ರಹಗಳನ್ನಾಗಲಿ, ಹಳಿಯುವ ಕಾರಣವಿಲ್ಲ. ಆದರೆ ಅವುಗಳ ಉಗಮಸ್ಥಾನವನ್ನು ಕಂಡುಹಿಡಿಯಲಿಕ್ಕೆ ನಮ್ಮೊಳಗೆ ನಾವೇ ನೋಡಿಕೊಳ್ಳತಕ್ಕದ್ದು. ಯೋಗದ ಈ ಶಾಲೆಯು ಕರ್ಮದ ರಹಸ್ಯವನ್ನು ತಿಳಿಸುತ್ತದೆ. ಅದನ್ನರಿತು ನಾವು ಬಂಧ ಹಾಗೂ ದು:ಖಗಳ ಕಾರಣಗಳನ್ನು ಕಳೆದು ಸ್ವಾತಂತ್ರ್ಯ, ಶಾಂತತೆ, ಸೌಖ್ಯಗಳನ್ನು ಇಲ್ಲಿಯೂ ಮರಣಾನಂತರದಲ್ಲಿಯೂ ಅನುಭವಿಸುವೆವು. ಯಾವದೊಂದು ಉದ್ದೇಶದಿಂದ ಪ್ರೇರಿತವಾದ ಕರ್ಮವು ಆತ್ಮನ ಬಂಧಕ್ಕೆ ಕಾರಣವಾಗುತ್ತದೆ. ಫಲದ ಆಶೆಯಿಲ್ಲದೆ ಕರ್ಮ ಮಾಡುವದೇ ಕರ್ಮದ ರಹಸ್ಯವು. ಈ ಸಿದ್ಧಾಂತವನ್ನೇ ನಮ್ಮ ದಿನದ ಜೀವನಕ್ಕೆ ಸರಿಪಡಿಸಿಕೊಂಡರೆ ನಾವು ಮಾಡುವ ಪ್ರತಿಯೊಂದು ಕೆಲಸವು ಆತ್ಮನ ಬಿಡುಗಡೆಯ ಕೆಲಸದಲ್ಲಿ ಮುಂದುವರಿಯಲಿಕ್ಕೆ ನಮಗೆ ಸಹಾಯವಾಗುವದು. ಸ್ವಲ್ಪ ಫಲಾಶೆ ಇದ್ದರೂ ಸಹ ಅದೇ ಮತ್ತೊಂದು ಕರ್ಮದ ಬೀಜವಾಗುವದು. ಅಲ್ಲದೆ ಪ್ರತಿಯೊಂದು ಕರ್ಮವು ಅಂತಹದೇ ಪ್ರತಿಕರ್ಮವನ್ನು ಹುಟ್ಟಿಸುವದೆಂಬದನ್ನು ಕರ್ಮಯೋಗಿಯು ಮನವರಿಕೆ ಮಾಡಿಕೊಳ್ಳತಕ್ಕದ್ದು. ಕರ್ಮದ ನಿಜವಾದ ರಹಸ್ಯವನ್ನರಿತು ತನ್ನ ಕರ್ತವ್ಯವನ್ನು ಮಾಡುವ ಪ್ರತಿಯೊಬ್ಬ ಮನುಷ್ಯನು ನಿಜವಾಗಿ ನಿಸ್ವಾರ್ಥಿಯಾಗಿ ಸ್ವಸ್ವರೂಪಜ್ಞಾನವನ್ನು ಪಡೆಯುತ್ತಾನೆ. ಅಂದರೆ ಆತ್ಮನು ಹುಟ್ಟುಸಾವುಗಳಿಲ್ಲದವನೆಂದು ಅರಿಯುತ್ತಾನೆ.

ಕರ್ಮಯೋಗಾನುಸಾರವಾಗಿ ನಿಜವಾದ ಆತ್ಮನು ಶಾರೀರಕ ಮಾನಸಿಕ ಆಕಾರಗಳಿಂದ ಮರ್ಯಾದಿತವಾಗಿ ಕರ್ತೃ, ಭೋಕ್ತೃ ರೂಪನಾಗಿ ಪರಿಣಮಿಸಿ, ಅನೇಕ ಉದ್ದೇಶಗಳಿಂದ ಕರ್ಮಮಾಡುತ್ತ ಕೈಗೊಂಡ ಕಾರ್ಯಗಳ ಪರಿಣಾಮದಲ್ಲಿ ಆಸಕ್ತಿಯುಳ್ಳವನಾಗುವನು. ಈ ಪ್ರಕಾರ ಶರೀರವೇ ನಾವೆಂದು ತಿಳಿದು, ಈ ಮರ್ಯಾದಿತವಾದ 'ಅಹಂ' ಇದನ್ನು ಸುಖೋಪಭೋಗಕ್ಕೆ ಅಣಿ ಮಾಡಲು ಯತ್ನಿಸುತ್ತೇವೆ. ಇಂತಹ ಆತ್ಮನ ಅರ್ಧಜ್ಞಾನವು ಅಥವಾ ಆತ್ಮನ ನಿಜಸ್ವರೂಪದ ಅಜ್ಞಾನವು ಸ್ವಾರ್ಥತೆಯ ಮುಖ್ಯ ಕಾರಣವು. ಮುಂದೆ ಈ ಸ್ವಾರ್ಥತೆಯಿಂದಲೇ ಫಲಾಶೆ ಹುಟ್ಟುತ್ತದೆ. ಈ ಫಲಾಶೆಯು ನಮ್ಮನ್ನು ದಾಸ್ಯದಲ್ಲಿಡುತ್ತದೆ. ಕರ್ಮಯೋಗವು ನಮ್ಮ ನಿಜವಾದ ಸ್ವರೂಪಜ್ಞಾನವನ್ನು ಮಾಡಿಕೊಳ್ಳುವ ರೀತಿಯನ್ನು ತೋರಿಸುತ್ತದೆ. ಮತ್ತು ಮರ್ಯಾದಿತವೆಂದು ತಿಳಿದುಕೊಂಡ ಆತ್ಮನ ಸತ್ಯಸೀಮೆಯನ್ನು ನಿದರ್ಶನಕ್ಕೆ ತಂದುಕೊಡುತ್ತದೆ. ಆಮೇಲೆ ನಾವು ಯಾವದೊಂದು ಸ್ವಾರ್ಥವುಳ್ಳ ಉದ್ದೇಶದಿಂದ ಪ್ರೇರಿತರಾಗದೆ ಇಡೀ ಮಾನವವರ್ಗಕ್ಕೋಸುಗ ದುಡಿದರೂ ನಮ್ಮ ದೆಸೆಯಿಂದಲೆ ಕೆಲಸ ಮಾಡುತ್ತೇವೋ ಎನ್ನುವಂತೆ ಆಸ್ಥೆಯಿಂದಲೂ, ಎಚ್ಚರಿಕೆಯಿಂದಲೂ ಮಾಡಹತ್ತುವೆವು. ನಮ್ಮ ಸುಖಸಂಪತ್ತುಗಳಿಗೆ ಮನಸು ಹಾಕದೆ ಎಲ್ಲರ ಹಿತಕ್ಕೋಸುಗ ಹೆಣಗಾಡಹತ್ತುವೆವು.

೧. ನಿಜವಾದ ಕರ್ಮಯೋಗಿಯಾಗಬೇಕೆನ್ನುವವನು ಕರ್ಮದ ನಿಜವಾದ ರಹಸ್ಯವನ್ನು ಅರಿತುಕೊಳ್ಳಬೇಕು. ಮತ್ತು ಶಾರೀರಕ ಮಾನಸಿಕ ಕರ್ಮಗಳೆಲ್ಲವೂ ಆ ಕರ್ತೃವಿನ ಮೇಲೆ ಏನಾದರೊಂದು ಪರಿಣಾಮವನ್ನು ಅವಶ್ಯವಾಗಿ ಮಾಡುವವೆಂಬುದನ್ನು ನೆನಪಿನಲ್ಲಿಡತಕ್ಕದ್ದು. ಈ ತರದ ನಿಯಮಭಂಗವಾದರೆ ಆ ಕರ್ಮಗಳ ಪರಿಣಾಮವಾದರೂ ಕೆಟ್ಟದ್ದಾಗಿ, ಅದರಿಂದ ಅವಿಶ್ರಾಂತಿ, ಸುಖಾಭಾವ, ಆಧಿವ್ಯಾಧಿಗಳುತ್ಪನ್ನವಾಗುವವು.

ಕರ್ಮಯೋಗಿಯಾಗಲಿಚ್ಛಿಸುವವನು ಎರಡನೆಯವರಿಗೆ ಕೇಡುಬಯಸಕೂಡದು. ಯಾಕಂದರೆ ಅದರಿಂದ ಪ್ರಥಮತಃ ಕೇಡುಬಗೆದವನಿಗೇ ಕೇಡಾಗುವದು. ಪ್ರತಿಯೊಂದು ವಿಚಾರದಿಂದ ಮನಸ್ಸೊಂದು ವಿಶಿಷ್ಟಸ್ಥಿತಿಯನ್ನು ತಾಳುವದು ಮತ್ತು ಅದೇ ಸ್ಥಿತಿಯಲ್ಲಿಯ ಮನಸ್ಸುಗಳಿಂದ ಪ್ರೇರಿಸಲ್ಪಡಹತ್ತುವವು. ಆದ್ದರಿಂದ ನಾವು ಕೆಟ್ಟ ವಿಚಾರಗಳನ್ನು ಮನಸ್ಸಿನಲ್ಲಿ ತಂದರೆ ಆದರಿಂದ ನಮಗೆ ಎರಡು ಬಗೆಯ ಕೇಡಾಗುವದು. ಎರಡನೆಯವರ ಮನಸಿನ ಮೇಲೆ ಪರಿಣಾಮವನ್ನುಂಟುಮಾಡುವದಲ್ಲದೆ, ಎಲ್ಲ ದುಷ್ಟವಿಚಾರಗಳುಳ್ಳ ಅಂತಹ ಸ್ಥಿತಿಯಲ್ಲಿಯ ಎರಡನೆಯ ಮನಸ್ಸುಗಳಿಂದ ಪರಿಣಾಮವನ್ನುಂಟುಮಾಡಿಸಿಕೊಳ್ಳುವದು. ನಿಜವಾಗಿ ಭೂತಕಾಲದಲ್ಲಿ ಮಾನಸಿಕ ಜಗತ್ತಿನಲ್ಲಿ ಸಂಗ್ರಹಿತವಾದ ಎಲ್ಲ ದುಷ್ಟವಿಚಾರಗಳ ಪರಿಣಾಮಕ್ಕೆ ನಮ್ಮ ಮನಸ್ಸೀಡಾಗುವದು. ಉತ್ತಮ ವಿಚಾರಗಳನ್ನೇ ಮನಸಿನಲ್ಲಿ ತರುವದರಿಂದ ಉತ್ತಮ ಪರಿಣಾಮಗಳೇ ನಮ್ಮ ಮೇಲಾಗುವವು. ಆದ್ದರಿಂದಲೇ ದುಷ್ಟರಾದವರು ದಿನದಿನಕ್ಕೆ ಹೆಚ್ಚು ಹೆಚ್ಚು ದುಷ್ಟರಾಗುವರು. ಶಿಷ್ಟರಾದವರು ಹೆಚ್ಚು ಹೆಚ್ಚಿಗೆ ಶಿಷ್ಟರಾಗುವರು.

ವಿಶ್ವದಲ್ಲಿ ಒಂದೇ ಒಂದು ಸತ್ಯ ವಸ್ತುವಿದೆ. ಈ ವಸ್ತುವೇ ಸರ್ವಪ್ರಾಣಿಗಳಲ್ಲಿದೆ ಯೆಂದು ಕರ್ಮಯೋಗಿಯು ತಿಳಿದು, ಎಲ್ಲರ ಅಧಿಕಾರಗಳನ್ನು ಒಡಂಬಟ್ಟು ಯಾರನ್ನೂ ಮನಸಿನಿಂದಾಗಲೀ, ಶರೀರದಿಂದಾಗಲೀ ನೋಯಿಸಕೂಡದು. ಇಂತಹ ಯೋಗಿಯು ನಿಜವಾಗಿಯೇ ನಿಃಸ್ವಾರ್ಥನಿರುವನು. ಸಕಲ ಜಗತ್ತಿಗೂ ಮಾನವ ವರ್ಗಕ್ಕೂ ಅವನು ಧನ್ಯಸ್ವರೂಪನಾಗುವನು.

ಕರ್ಮಯೋಗ ಸಾಧನೆ ಮಾಡಲಿಚ್ಛಿಸುವವನು ತನ್ನ ಕರ್ಮಗಳ ಫಲದಲ್ಲಿ ಆಶೆಯನ್ನು ಬಿಟ್ಟುಬಿಡಬೇಕು ಮತ್ತು ತನ್ನ ಕರ್ಮವನ್ನು ಮಾಡುವಾಗ ತಂದೆತಾಯಿಗಳಿಗೂ ಸಮಾಜಕ್ಕೂ ದೇಶಕ್ಕೂ ಎಲ್ಲ ಮಾನವವರ್ಗಕ್ಕೂ ತಾನು ಕೊಡಬೇಕಾದ ಸಾಲವನ್ನು ತೀರಿಸುತ್ತೇನೆಂಬ ವಿಚಾರವನ್ನು ಮನದಲ್ಲಿಟ್ಟು, ಕರ್ಮಕ್ಕಾಗಿಯೇ ಕರ್ಮವನ್ನು ಮಾಡತಕ್ಕದ್ದು. ಒಕ್ಕಲಗಿತ್ತಿಯೋಪಾದಿಯಲ್ಲಿ ಮಕ್ಕಳು ತನ್ನವಲ್ಲವಾದರೂ ತನ್ನ ಕೈಯಲ್ಲಿ ಅವು ಇಡಲ್ಪಟ್ಟಿದ್ದರಿಂದ, ಅನುಭವಸಂಪಾದನೆಗಾಗಿಯೂ ಅವುಗಳ ಗುಪ್ತ ಶಕ್ತಿಭಾವನೆಗಳನ್ನು ಹೊರಗೆಡಹುವದಕ್ಕಾಗಿಯೂ ಅವುಗಳ ಜೋಪಾನವನ್ನು ಅವನು ಮಾಡತಕ್ಕದ್ದು.

ಮತ್ತೆ ಕರ್ಮಯೋಗಿಯಾದವನು ತಾನು ಯಾವ ಕರ್ಮದ ಕರ್ತನಲ್ಲದೆ, ಶಾರೀರಿಕ ಮಾನಸಿಕ ಕರ್ಮಗಳೆಲ್ಲವು ಕೇವಲ ಪ್ರಕೃತಿಶಕ್ತಿಗಳ ಪರಿಣಾಮವಾಗಿವೆಯೆಂದು ತಿಳಿಯುವನು. ಆದ್ದರಿಂದಲೇ ಅವನು ಯಾವದೊಂದು ಕರ್ಮವು ದುಷ್ಟವಾಗಲಿ ಶಿಷ್ಟವಾಗಲಿ ತಾನು(ನಿಜವಾಗಿ) ಮಾಡಿರುವೆನೆಂದೆನ್ನುವದಿಲ್ಲ. ಅವನು ಯಾವಾಗಲೂ ಮನ:ಬುದ್ಧಿ ಇಂದ್ರಿಯಗಳನ್ನು ನಿರಂತರ ಕಾರ್ಯದಲ್ಲಿ ತೊಡಗಿಸಿ, ತಾನು ಎಲ್ಲವುಗಳ (ಶಾರೀರಿಕ ಅಥವಾ ಮಾನಸಿಕ ಕರ್ಮಗಳ) ಜ್ಞಾತೃವೆನ್ನುವಂತೆ ಪ್ರೇಕ್ಷಕನಾಗಿರುವೆನೆಂಬ ವಿಚಾರವನ್ನು ತನ್ನಲ್ಲಿ ಸ್ವೀಕರಿಸಿಕೊಳ್ಳುವನು. ಈ ರೀತಿಯಾಗಿ ಕರ್ಮಶೃಂಖಲೆಯಿಂದವನು ಬಿಡುಗಡೆ ಹೊಂದಿ, ಸಾಧಾರಣ ಜನರನ್ನು ಬದ್ಧರನ್ನಾಗಿ ಮಾಡುವ ಕರ್ಮದ ಪರಿಣಾಮಗಳಲ್ಲಿ ಆಸಕ್ತನಾಗಿರುವನು. ತನ್ನ ಪ್ರತಿದಿವಸ ಜೀವನದಲ್ಲಿಯಾಗುವ ಜಯಾಪಜಯಗಳನ್ನು ಅವನು ಲೆಕ್ಕಿಸುವದಿಲ್ಲ. ತನ್ನ ಕೈಲಾದಷ್ಟು ಮನಮುಟ್ಟಿ ತಾನು ಕೈಕೊಂಡ ಕಾರ್ಯದಲ್ಲಿ ಶಕ್ತಿಯನ್ನೆಲ್ಲ ವೆಚ್ಚ ಮಾಡುವನು. ಇಷ್ಟಾಗಿಯು ಅವನಿಗೆ ಜಯ ದೊರೆಯದಿದ್ದರೆ, ಅವನು ಅದಕ್ಕೋಸುಗ ದು:ಖಪಡುವದಿಲ್ಲ. ಪ್ರಕೃತಿ ಪರಿಸ್ಥಿತಿಯಲ್ಲಿ ತಾನು ಮಾಡತಕ್ಕದನೆಲ್ಲವನ್ನು ಮಾಡಿದ್ದೇನೆಂಬ ವಿಚಾರವನ್ನು ಮನದಲ್ಲಿ ತಂದುಕೊಂಡು, ಮನಸ್ಸಿನಲ್ಲಿ ಶಾಂತತೆ ಸಮಾಧಾನಗಳನ್ನು (ಅಪಜಯವು ಎದುರಿನಲ್ಲಿ ತೋರುತ್ತಿದ್ದರೂ) ಇಟ್ಟುಕೊಳ್ಳುವನು.

ಈ ಜಗತ್ತಿನಲ್ಲಿ ಗುಲಾಮನಂತಿರದೆ ಒಡೆಯನಂತೆ ಆಚರಿಸುವದೇ ಕರ್ಮಯೋಗಿಯ ಗುರಿ. ಸಾಧಾರಣ ಜನರು ಇಚ್ಛೆ ಮನೋವಿಕಾರಗಳ ಯಜಮಾನತ್ವವನ್ನು ಸ್ವೀಕರಿಸಿ ಏನೊಂದು ಸದಸದ್ವಿವೇಕ

ಬುದ್ಧಿಶಕ್ತಿಯನ್ನುಪಯೋಗಿಸದೆ, ಅವುಗಳನ್ನು ಅನುಸರಿಸುತ್ತಾರೆ. ಆದರೆ ಇಚ್ಛೆ ಮನೋವಿಕಾರಗಳನ್ನು ಕರ್ಮಯೋಗಿಯು ಪೂರ್ಣವಾಗಿ ನಿಗ್ರಹಿಸಿ, ಈ ಶಕ್ತಿಗಳನ್ನು ಆತ್ಮನ ಬಿಡುಗಡೆಯ ಹಾದಿಯ ಕಡೆಗೆ (ಇದೇ ಜೀವನ ಅತ್ಯುಚ್ಚ ಗುರಿ) ತಿರುಗಿಸುತ್ತಾನೆ.

ಜೀವನದ ಸರ್ವಕರ್ಮಗಳನ್ನು ಪೂರ್ತಿಗೊಳಿಸುವದಕ್ಕಾಗಿ ಕರ್ಮಯೋಗಿಯು ಪ್ರೀತಿಯ ಆಸನಗಳನ್ನು ತೆಗೆದುಕೊಳ್ಳುತ್ತಾನೆ. ಶಾರೀರಿಕ ಮಾನಸಿಕ ಕರ್ಮಗಳಲ್ಲೆಲ್ಲ ಪ್ರೀತಿಯೇ ಅವನಿಗೆ ಮುಖ್ಯವಾಗಿರುತ್ತದೆ. ಯಾವದೊಂದು ಕರ್ಮವನ್ನು ಅವನು ಮಾಡಿದರೆ ಅದು ಪ್ರೇಮಮೂಲಕವಾಗಿಯೇ. ಪ್ರೇಮದಿಂದ ಮಾಡಿದ ಕರ್ಮವು ಶಾಂತಿ ಸಮಾಧಾನಗಳನ್ನು ತಂದುಕೊಟ್ಟು, ನಿರಂತರ ಬಾಳುವ ಸುಖವನ್ನಿತ್ತ ಆತ್ಮನನ್ನು ಬಂಧಮುಕ್ತನನ್ನಾಗಿ ಮಾಡಬಹುದೆಂಬರಿವು ಅವನಿಗಿರುವದು.

ಏಸೂಕ್ರಿಸ್ತ, ಬುದ್ಧನಂತಹ ಇಡೀ ಜಗತ್ತಿನಲ್ಲಿ ಆಗಿಹೋದ ಆಧ್ಯಾತ್ಮಿಕ ಮುಂದಾಳುಗಳೆಲ್ಲರೂ ಕರ್ಮಯೋಗಿಗಳಾಗಿದ್ದರು. ಅವರು ಪ್ರೀತಿ ಮೂಲಕವಾಗಿಯೇ ಮಾನವ ಜಾತಿಗೆ ಒಳಿತನ್ನುಂಟುಮಾಡಿದರು. ಮತ್ತು ನಿಜವಾದ ಕಾರ್ಯಸಾಧನೆಯಿಂದ ಪೂರ್ಣಸ್ವಾತಂತ್ರ್ಯ ಲಾಭವು ಹೇಗಾಗಬಲ್ಲದೆಂಬುದನ್ನು ತಮ್ಮ ಉದಾಹರಣೆಗಳಿಂದ ತೋರಿಸಿಕೊಟ್ಟರು. ಬುದ್ಧದೇವರು ಯಾವನೊಬ್ಬ ವ್ಯಕ್ತಿ ಈಶ್ವರನನ್ನರ್ಚಿಸಿರೆಂದು ಹೇಳಲಿಲ್ಲ. ಆದರೆ ಭಕ್ತಿಯಿಲ್ಲದವರೂ ಈಶ್ವರನ ಅಸ್ತಿತ್ವವನ್ನೊಡಂಬಡದವರೂ ಕರ್ಮಪಥದಿಂದ ತುಟ್ಟತುದಿಯ ಗುರಿಯನ್ನು ಮಾನವರು ಮುಟ್ಟಬಲ್ಲರೆಂಬುವ ಸತ್ಯಸಿದ್ಧಾಂತವನ್ನು ಅವನು ಸಾರಿ ಸಾರಿ ಬೋಧಿಸಿದನು.

❖❖

೮

# ರಾಜಯೋಗ ಮತ್ತು ಅದರ ಎಂಟು ಅಂಗಗಳು

**ಶಿವಾನುಭವ ೫-೯, ೧೦**

ಮಾನಸಿಕ ಎಡರುಗಳನ್ನು ದೂರಮಾಡಿ, ಪೂರ್ಣ ಸಂಯಮಿತ ನಿರೋಗಿ ಮನವನ್ನು ಪಡೆಯುವದೇ ರಾಜಯೋಗದ ಗೊತ್ತು. ಇಚ್ಛಾ ಮತ್ತು ಧಾರಣಾಶಕ್ತಿಗಳ ಬೆಳವಣಿಗೆಗೆ ಪುಟಕೊಟ್ಟು, ಸರ್ವಧರ್ಮಗಳ ಅಂತಿಮ ಗುರಿಯನ್ನು ಸತ್ಯಶೋಧಕನಿಗೆ ತೋರಗೊಡುವದೇ ಈ ರಾಜಯೋಗದ ಮುಖ್ಯ ಉದ್ದೇಶವು.

ಇಚ್ಛಾ ಮತ್ತು ಧಾರಣಾ ಶಕ್ತಿಗಳು ಇನ್ನಾವ ಶಾರೀರಕ ಬಲಕ್ಕಿಂತಲೂ ಬಹಳ ಹೆಚ್ಚಾದವುಗಳು. ಇದಲ್ಲದೆ ಉಳಿದೆಲ್ಲ ಬಲಸಾಧನೆಗಳಿಗೂ ಕೂಡ ಇವುಗಳ ಅಗತ್ಯವಿರುತ್ತದೆ. ಬಲವಾದ ಧಾರಣಾಶಕ್ತಿಯಿಂದೊಡಗೂಡಿ ಚೆನ್ನಾಗಿ ಬೆಳಿಗೆಗೆ ಹೊಂದಿದ ಇಚ್ಛಾ ಶಕ್ತಿಯಿಂದೊಡನೆ ನಿರ್ಬಂಧಿಸಿದ ಮನಸ್ಸುಳ್ಳವನು ಪ್ರಾಕೃತಿಕ ಶಕ್ತಿಗಳನ್ನು ವಶಪಡಿಸಿಕೊಂಡು, ಬೇಗನೆ ಅತ್ಮಜ್ಞಾನವನ್ನು ಪಡೆಯುವನು. ಇದನ್ನು ಹೇಗೆ ಸಾಧಿಸಿಕೊಳ್ಳಬೇಕೆಂಬುದನ್ನು ತಿಳಿಹೇಳುವದೇ ರಾಜಯೋಗದ ಮುಖ್ಯ ಗುರಿಯಾಗಿದೆ. ಪ್ರಾಚೀನ ಅಥವಾ ಅರ್ವಾಚೀನ ರಾಜಯೋಗಿಗಳ ಸಂಪರ್ಕದಲ್ಲಿ ಬಂದ ಪ್ರತಿಯೊಬ್ಬನು ಇದರ ಅಧ್ಯಯನಕ್ಕೆ ಉತ್ತೇಜನ ಕೊಟ್ಟಿದ್ದಾನೆ. ಇದು ಪಾಯ್‌ಥ್ಯಾಗೋರಸ, ಪ್ಲೇಟೋ, ಪ್ಲೋಟೆನಸ ಪ್ರೋಕಸ ಮೊದಲಾದವರ ಸ್ತುತಿಗೆ ಅರ್ಹವಾಗಿವೆ. ಇಂದಿಗಾದರೂ ರೋಮನ್ ಕ್ಯಾಥಲಿಕ್ ಮತದ ಸನ್ಯಾಸಿ, ಸನ್ಯಾಸಿನಿಗಳು ಕೆಲಮಟ್ಟಿಗೆ ಇದನ್ನಾಚರಿಸುತ್ತಾರೆ. ಸ್ಪಿನೋಝಾ, ಕ್ಯಾಂಟ್, ಶೋಪೆನ್‌ಹೋರ್, ರ್‍ಯಾಲ್ಪವ್ಯಾಲ್ಡೊ,ಇಮರ್ಸನ್ ಈ ಮುಂತಾದವರು ಅದನ್ನು ಹೊಗಳಿದ್ದಾರೆ. ಮಾನವೀ ಆತ್ಮನ ನಿಜವಾದ ಸ್ವಭಾವದ ಗುಟ್ಟನ್ನು ಹೊರಗೆಡವಿ, ಪ್ರತಿಯೊಬ್ಬನಲ್ಲಿಯೂ ಅಡಗಿಕೊಂಡಿದ್ದ ಶಕ್ತಿಗಳನ್ನು ಬೈಲಿಗೆ ತರುವದೇ ಅದರ ಗುರಿಯೆಂದು ಅವರು ಉಗ್ಘಡಿಸಿದ್ದಾರೆ. ಈ ಯೋಗಸಾಧನೆಯಿಂದ ಉಳಿದೆಲ್ಲ ಶಕ್ತಿಗಳ ನಿರ್ಬಂಧವು ಮಾಡಲ್ಪಡಬಲ್ಲದು- ಎಂಬುದು ಈಗಿದ್ದ ಎಷ್ಟೋ ಯೋಗಿಗಳ ಉದಾಹರಣೆಗಳಿಂದ ಸ್ಪಷ್ಟವಾಗುತ್ತದೆ. ಮನಸ್ಸನ್ನಂಕೆಯಲ್ಲಿಟ್ಟಕೊಂಡವನು, ಇಡೀ ವಿಶ್ವದ ಉಳಿದ ಶಕ್ತಿಗಳನ್ನು ಸಹಜವಾಗಿ ನಿರ್ಬಂಧಿಸಬಲ್ಲನೆಂಬುದೇ ರಾಜಯೋಗದ ಮುಖ್ಯ ಆಕಾಂಕ್ಷೆ.

ಮನಸ್ಸು ವಿಶ್ವದಲ್ಲಿಯ ಶಕ್ತಿಗಳಲ್ಲೆಲ್ಲ ಹೆಚ್ಚಿನದಿದ್ದು, ಅದರ ಶಕ್ತಿಯನ್ನು ಯಾವದೊಂದು ಪದಾರ್ಥದ ಮೇಲೆ ಒಟ್ಟುಗೂಡಿಸಲು ಆ ಪದಾರ್ಥದ ನಿಜವಾದ ಅರಿವು ನಮಗಾಗುವದು. ಯಾವದೊಂದು ಉಪಕರಣದ ಸಹಾಯವಿಲ್ಲದೆ ನಮ್ಮಲ್ಲಿ ಮೊದಲೇ ಇರುವ ಮಾನಸಿಕ ಶಕ್ತಿಗಳ ಉಪಯೋಗವನ್ನು ಯೋಗ್ಯರೀತಿಯಿಂದ ಮಾಡಿ, ಯಾವದೊಂದು ಪದಾರ್ಥದ ಮೇಲೆ ಒಟ್ಟುಗೂಡಿಸಿದರೆ, ಅದರ ಸಂಬಂಧವಾದ ಸಂಪೂರ್ಣ ತಿಳಿವು

ನಮಗುಂಟಾಗುವುದು. ಈ ಪದಾರ್ಥವು ಮಾನಸಿಕವಿರಲಿ, ಶಾರೀರಿಕವಿರಲಿ. ಆಧ್ಯಾತ್ಮಿಕವಿರಲಿ, ಯೋಗಿಯ ಮನಸ್ಸು ವಿದ್ಯುತ್ತಿನ ಶೋಧಕ ಜ್ಯೋತಿ (Electric search light)ಯನ್ನು ಹೋಲುವದು. ದೂರದಲ್ಲಿರುವ ಯಾವದೊಂದು ವಸ್ತುವಿನ ಕಡೆಗೆ ಅದು ಸ್ಥೂಲವೇ ಇರಲಿ, ಸೂಕ್ಷ್ಮವೇ ಇರಲಿ, ಒಟ್ಟುಗೂಡಿಸಿ ಮಾನಸಿಕ ಕಿರಣಗಳನ್ನು ಒಗೆದರೆ ಆ ಕಿರಣಗಳಿಂದ ಲಕ್ಷಿತ ವಸ್ತುವು ಪ್ರಕಾಶಿಸಲ್ಪಟ್ಟು, ಅದರ ಸಂಪೂರ್ಣಜ್ಞಾನವು ನಮಗಾಗುವದು. ಸಾಧಾರಣ ಜನರ ಚಿತ್ತವು ಅಷ್ಟು ತೀಕ್ಷ್ಣವಾದದ್ದಿರುವದಿಲ್ಲ. ಯಾಕೆಂದರೆ ಸಾಮಾನ್ಯತರದ ದೀವಿಗೆಗಳಂತೆ ಸಾಮಾನ್ಯಜನರ ಮನಸ್ಸಿನ ಕಿರಣಗಳಾದರೂ ಅತ್ತಿತ್ತ ಹರಡಿರುತ್ತವೆ. ವಿಶ್ವದಲ್ಲಿಯ ಯಾವ ಆಂತರಂಗಿಕ ಪದಾರ್ಥದ ಮೇಲೆಯೂ ಯಾವ ಸತ್ಯದ ಮೇಲೆಯೂ ಮಾನಸಿಕ ಶಕ್ತಿಗಳನ್ನು ಏಕೀಕರಿಸಿದರೂ ಅವುಗಳ ಸಂಪೂರ್ಣವಾದ ನಿಜವಾದ ಜ್ಞಾನವು ನಮಗಾಗುವದು.

ಇವೆಲ್ಲವುಗಳ ಮೇಲಿಂದ ಮನಃಶಕ್ತಿಯು ಇಂದ್ರಿಯ ಶಕ್ತಿಗಿಂತ ಅಥವಾ ಯಾವದೊಂದು ಸಾಧನ ಶಕ್ತಿಗಿಂತ ದೊಡ್ಡದು ಎಂದು ವ್ಯಕ್ತವಾಗುತ್ತದೆ. ಮನಸ್ಸನ್ನು ಅಂತರ್ಮುಖ ಮಾಡಿ, ಮನಸ್ಸನ್ನು ಹೊರಗೆಳೆಯಲು ಪ್ರಯತ್ನಿಸುವ ಮೋಹಕ ದ್ರವ್ಯಗಳನ್ನೆಲ್ಲ ಬದಿಗೊತ್ತಿ, ಮಾನಸಿಕ ಬಲವನ್ನೆಲ್ಲ ಆತ್ಮನ ಕಡೆಗೆ ಗುರುತಿಸಿದರೆ ನಮ್ಮ ನಿಜಸ್ವರೂಪದ ಜ್ಞಾನವು ನಮಗಾಗುವದು. ನಮ್ಮ ಅವಿನಾಶಿಯಾದ ಆತ್ಮನೇ ಎಲ್ಲರಲ್ಲಿಯ ಆತ್ಮನು. ವಿಶ್ವದಲ್ಲಿ ಕಡೆಗೊಂದು ಉಳಿಯುವದೇ ಅದು, ಎಂಬ ಜ್ಞಾನವು ನಮಗಾಗುವದು (ಏನೊಂದುಳಿಯುವದದನೆ ನೀನೆಂದು ತಿಳಿ ಮನುಜ-ಸರ್ಪಭೂಷಣ ಶಿವಯೋಗಿ). ನಮ್ಮ ಅಜ್ಞಾನವಶದಿಂದ ನಮ್ಮಿಂದ ಬೇರೆಯೆಂದು ಪೂಜಿಸುವ ಪರಮಾತ್ಮನು ನಮ್ಮಿಂದ ದೂರಿಲ್ಲ; ನಮ್ಮ ಹೊರಗಿಲ್ಲ. ನಮ್ಮಲ್ಲಿಯೇ ವಾಸವಾಗಿಹ ಸರ್ವಶಕ್ತಿ ಆತ್ಮನೇ ಅವನು. ಎಲ್ಲೆಲ್ಲಿಯೂ ವ್ಯಾಪಿಸಿಕೊಂಡಿದ್ದ ಪರಮಾತ್ಮನು ಒಬ್ಬನೇ. ವಿಶ್ವದಲ್ಲಿಯೇ ಪ್ರತಿಯೊಂದು ಪದಾರ್ಥದ ನಾಮರೂಪದ ಬುಡದಲ್ಲಿರುವ ಸಚ್ಚಿದಾನಂದಮೂರ್ತಿಯೇ ಅವನು. ಈ ಜ್ಞಾನವಾದೊಡನೆಯೇ ಆತ್ಮನಿಗೆ ಅಜ್ಞಾನದಿಂದ ಬಿಡುಗಡೆಯಾಗುವದು.

ಪ್ರತಿಯೊಬ್ಬ ವ್ಯಕ್ತಿಯ ಆಂತರಿಕ ಸ್ವಭಾವಕ್ಕನುಗುಣವಾಗಿಯೇ ಬಾಹ್ಯಜಗತ್ತಿನ ಅಸ್ತಿತ್ವವಿದೆಂದು ರಾಜಯೋಗವು ಹೇಳುತ್ತದೆ. ಹೊರಗಿನ ಜಗತ್ತು ಒಳಗಿನದರ ಪಡಿನೆಳಲು.ನಾವು ದೊರಕಿಸುವಂಥ ಅಥವಾ ಪರಿಗ್ರಹಿಸುವಂಥ ಯಾವದೊಂದು, ನಾವು ಈ ಮೊದಲೇ ಕೊಟ್ಟದ್ದರ ಪ್ರತಿಬಿಂಬ. ಮಾನಸಿಕ ಸೃಷ್ಟಿಯಾದರೋ ಯಾವದೊಂದು ಸಾಧನದಿಂದ ಅಥವಾ ಇಂದ್ರಿಯಗಳಿಂದ ಶೋಧಿಸಲಿಕ್ಕೆ ಸಾಧ್ಯವಾದ ಶಕ್ತಿಗಳ ಪರಿಣಾಮವು. ಇಂದ್ರಿಯ ಸಹಾಯದಿಂದ ಈ ಶಕ್ತಿಗಳ ಜ್ಞಾನ ಪಡೆಯಬೇಕೆಂದು ಎಷ್ಟು ಹೆಣಗಾಡಿದರೂ ಅದೇನು ಸಾಧ್ಯವಲ್ಲ. ರಾಜಯೋಗಿಗೆ ಇದೆಲ್ಲದರ ಚೆನ್ನಾದ ಅರಿವಿದ್ದು, ಈ ಸಾಧನಗಳಿಗೆ ಅವನು ಬೆಲೆಕೊಡುವದಿಲ್ಲ. ಇಂದ್ರಿಯ ಶಕ್ತಿಗಳ ಮೆಲೆ ಅವನು ಕೈಯ್ಯೂರಿ ಕೂಡ್ರುವದಿಲ್ಲ. ಧಾರಣಾಶಕ್ತಿಯಿಂದ ಎಲ್ಲ ಜ್ಞಾನವನ್ನು ಪಡೆಯುವದೇ ಅವನ ಧ್ಯೇಯ. ಇಂಥ ಆದರ್ಶವನ್ನು ಪಡೆಯಲಿಕ್ಕೆ ಬೇಕಾಗುವ ವಿವಿಧ ಪದ್ಧತಿಗಳೇ ರಾಜಯೋಗಶಾಸ್ತ್ರದಲ್ಲಿ ವಿವರಿಸಲ್ಪಟ್ಟಿವೆ. ಅದು ನಿಚ್ಚಳವಾಗಿಯೂ ಪದ್ಧತಿಗನುಸಾರವಾಗಿಯೂ ಧಾರಣೆಯನ್ನು ಹೆಚ್ಚಿಸುವ ರೀತಿಯನ್ನು ಚೊಕ್ಕಟವಾಗಿ ಹೇಳುತ್ತದೆ. ಯಾವದೊಂದನ್ನು ಪರಂಪರಾಗತವಿದ್ದ ಮಾತ್ರಕ್ಕೆ ಅಥವಾ ಸಾಶ್ರಾಧಾರಗಳಿಂದ ಎತ್ತಿ ಹಿಡಿಯಲ್ಪಟ್ಟ ಮಾತ್ರಕ್ಕೆ, ಅದನ್ನು ಗ್ರಹಿಸಬೇಕೆಂದು ರಾಜಯೋಗವು ಸಾಧಕನಿಗೆ ಹೇಳುವದಿಲ್ಲ. ಆದರೆ ಅದು ಕೆಲವು ಸಂಗತಿಗಳನ್ನು ಹೇಳಿ, ಸಾಧಕನಿಂದ ಪ್ರಯೋಗ ಮಾಡಿಸಿ, ಅದರ ಪರಿಣಾಮವನ್ನು ಕಂಡುಹಿಡಿದು ಸ್ವತಃ ಸತ್ಯಸಿದ್ಧಾಂತಗಳನ್ನು ತೆಗೆಯಲಿಕ್ಕೆ ಹಚ್ಚುತ್ತದೆ.

ರಾಜಯೋಗದಲ್ಲಿ ಅತ್ಯದ್ಭುತ ಸಂಗತಿಯಾದರೂ ಅದಾವದೂ ಇಲ್ಲ.ನಮಗೆ ಅದ್ಭುತಗಳೆಂದು ಕಂಡುಬರುವ ಸಂಗತಿಗಳನ್ನು, ಸಂಬಂಧಿಸಿದ ನಿಯಮಗಳನ್ನು ಅದು ಹೇಳುವದಲ್ಲದೆ, ಎಂಥ ಪರಿಸ್ಥಿತಿಯಲ್ಲಿ ಅವು ಸಂಘಟಿಸುತ್ತವೆಂಬದನ್ನು ಸಹ ಹೇಳುತ್ತದೆ. ಯಾವದೊಂದು ಕಾರ್ಯದ ಕಾರಣವು ಗೊತ್ತಾಗುವ ವರೆಗೆ ಮಾತ್ರ ನಮಗೆ ಆ ಕಾರ್ಯವು ಅಚ್ಚರಿಯ ವಿಷಯವಾಗುತ್ತದೆ. ತರ್ಕಶಕ್ತಿ ಮತ್ತು ಬುದ್ಧಿಶಕ್ತಿಗಳ ಬಲದಿಂದ ವಿಶ್ವದಲ್ಲಿಯ ಎಲ್ಲ ಕೂಟಪ್ರಶ್ನೆಗಳನ್ನು ರಾಜಯೋಗವು ಬಿಡಿಸುತ್ತದೆ. ಸರ್ವಧರ್ಮಗಳ ತುಟ್ಟತುದಿಗೆ ಆತ್ಮನನ್ನು ಮುಟ್ಟಿಸುವ ಬಗೆಯನ್ನು ಹೇಳುತ್ತದೆ. ಅದರ ಸಿದ್ಧಾಂತಗಳಾದರೋ ಅತಿ ನೀತಿಪರಗಳೂ ಉದ್ಧಾರಕಗಳೂ ಆಗಿವೆ. ಜೀವನದ ನಿಜವಾದ ಗುಟ್ಟನ್ನು ತಿಳಿಯಲಿಕ್ಕೆ ಅದು ಸಾಧಕನಿಗೆ ಸಹಾಯಮಾಡುವದಲ್ಲದೆ, ಅದನ್ನು ಈಗಲೇ ಪಡೆಯುವ ರೀತಿಯನ್ನು ತಿಳಿಹೇಳುತ್ತದೆ. ನಾವು ಸತ್ತ ತರುವಾಯ ನಮ್ಮ ಸ್ಥಿತಿಯೇನಾಗುತ್ತದೆಂಬದನ್ನು ವಿಚಾರಿಸದೆ ಸದ್ಯದ ಜೀವನದಲ್ಲಿ ಶಕ್ತವಿದ್ದಷ್ಟು ಉಪಯೋಗ ಮಾಡಿಕೊಂಡು, ನಮ್ಮಲ್ಲಿ ಮೊದಲೇ ಗೂಢವಾದ ಶಕ್ತಿಗಳನ್ನು ಬೈಲಿಗೆ ತಂದುಕೊಳ್ಳಬೇಕು- ಎಂದು ರಾಜಯೋಗವು ಸಾರುತ್ತದೆ. ಸದ್ಯದ ಮುಂದುವರಿಕೆಯು ಮುಂದಿನ ಜನ್ಮದ ತಳಹದಿಯೆಂದು ಮೇಲೆ ಮೇಲೆ ನಮ್ಮ ಸ್ಮೃತಿಪಥಕ್ಕೆ ತಂದುಕೊಡುತ್ತದೆ. ನಮ್ಮ ಮರಣಕ್ಕಿಂತ ಮೊದಲೇ ಕೆಲ ಶಕ್ತಿಗಳನ್ನು ಬೆಳೆಸಿದರೆ ಅಥವಾ ದೊರಕಿಸಿದರೆ, ಆ ಶಕ್ತಿಗಳು ನಮ್ಮ ಮರಣಾನಂತರದಲ್ಲಿಯೂ ನಾಶವಾಗದೆ, ನಾವು ಎಲ್ಲಿ ಹೋದರೂ ಅವು ನಮ್ಮಲ್ಲಿ ಉಳಿಯುತ್ತವೆ. ಆದರೆ ಬಾಹ್ಯಪದಾರ್ಥಗಳು ಮಾತ್ರ ಸತ್ತ ತರುವಾಯ ನಮ್ಮೊಡನೆ ಬರಲಾರವು. ಈ ಜನ್ಮದಿಂದ ನಾವು ಒಯ್ಯಬಹುದಾದವುಗಳೆಂದರೆ ನಮ್ಮ ಸ್ವಭಾವ, ನಮ್ಮ ಅನುಭವ ಮತ್ತು ಅದರಿಂದ ದೊರೆತ ಜ್ಞಾನ. ಅವೇ ನಮ್ಮ ನಿಜವಾದ ಸೊತ್ತು. ಈ ಸೊತ್ತನ್ನು ಕೈವಶಮಾಡಿಕೊಳ್ಳುವ ಕೆಲಸದಲ್ಲಿ ಕೈನೀಡುವದೇ ರಾಜಯೋಗದ ಗುರಿ. ಶುದ್ಧನೂ ನಿ:ಸಂಶಯಮನವುಳ್ಳವನೂ ಸರ್ವ ಪದಾರ್ಥಗಳಿಂದ ಅಲಿಪ್ತನೂ ಆದ ರಾಜಯೋಗಿಯ ಸಹಾಯದಿಂದ ಅವನ ಹೇಳಿಕೆಯಂತೆ ನಡೆದು, ರಾಜಯೋಗವನ್ನು ಕರಗತಮಾಡಿಕೊಳ್ಳಬಹುದು.

ರಾಜಯೋಗ ಸಾಧನೆಯು ಎಂಟು ಮೆಟ್ಟಿಲುಗಳಾಗಿ ವಿಭಾಗಿಸಲ್ಪಟ್ಟಿದೆ. ಯಮ ನಿಯಮಗಳು ನಮ್ಮ ನೈತಿಕ ನಿಯಮಗಳನ್ನೆಲ್ಲ ಒಳಗೊಂಡಿರುತ್ತವೆ. ಇವುಗಳನ್ನು ಕಠಿಣವಾಗಿ ಆಚರಿಸುವುದು ಉಳಿದ ಮೆಟ್ಟಿಲುಗಳ ಸಾಧನೆಗೆ ಅತ್ಯಗತ್ಯವಾದದ್ದು. ಈ ಎರಡರಲ್ಲಿಯೇ ಬುದ್ಧದೇವನು ಹೇಳಿದ ಎಲ್ಲ ನೈತಿಕ ನಿಯಮಗಳೂ, ಕ್ರೈಸ್ತನು ಪರ್ವತದ ಮೇಲೆ ಹೇಳಿದ (Sermon on the mount) ಎಲ್ಲ ಸತ್ವಸಿದ್ಧಾಂತಗಳೂ ಒಳಸೇರುತ್ತವೆ. ರಾಜಯೋಗವನ್ನಾರಂಭಿಸುವವನು ಬಹು ಶುದ್ಧವಾದ ಮತ್ತು ನೀತಿಮತ್ತದ ಜೀವನವನ್ನಿಡಬೇಕು. ಇಲ್ಲದಿದ್ದರೆ ಅವನು ಮುಂದುವರಿಯನು. ಅಥವಾ ಕಡೆಯ ಗುರಿಯನ್ನು ನೋಡನು. ಅಥವಾ ಅವನಲ್ಲಿಯೇ ವಾಸವಾಗಿದ್ದ ಪರಮಾತ್ಮನನ್ನು ತಿಳಿಯನು. ಸುದ್ಧಚರಿತ್ರೆ, ಬ್ರಹ್ಮಚರ್ಯ ಮತ್ತು ನೀತಿಮತ್ತತೆಗಳು ರಾಜಯೋಗವೆಂಬ ಮಂದಿರದ ಮೂಲೆಗಲ್ಲುಗಳೆಂಬದನ್ನು ಸಾಧಕನು ಚೆನ್ನಾಗಿ ನೆನಪಿನಲ್ಲಿಡಬೇಕಾಗುವದು. ಅಹಿಂಸಾ,ಸತ್ಯ, ಅಸ್ತೇಯ (ಕಳವುಮಾಡದೆ ಇರೋಣ) ಬ್ರಹ್ಮಚರ್ಯ, ಕ್ಷಮಾ (ತಾಳ್ಮೆ), ಸ್ವಭಾವಸ್ಥಿರತೆ, ಸರ್ವಭೂತಗಳಲ್ಲಿ ದಯಾ, ಸಾಧುತನ, ಆಹಾರದಲ್ಲಿ ಸಾತ್ವಿಕತೆ, ಸ್ವಚ್ಛತೆ ಇವು ಮೊದಲನೇ ಮೆಟ್ಟಲಿಗೆ ಹೊಂದಿದವು. ಅಂದರೆ 'ಯಮ'ಕ್ಕೆ ಸಂಬಂಧಿಸಿದವು. ಮೆಯ್ಯಿಂದಲೂ, ಮನಸ್ಸಿನಿಂದಲೂ, ಮಾತಿನಿಂದಲೂ ಅಹಿಂಸಾವ್ರತವನ್ನು ಪಾಲಿಸಬೇಕು. ಅದರಂತೆಯೇ ಸತ್ಯ ಮತ್ತು ಅಸ್ತೇಯ. ವಿದ್ಯಾರ್ಥಿಯ ಮನಸ್ಸು ಸ್ಥಿರವಾಗತಕ್ಕದ್ದು. ಯಾಕೆಂದರೆ ಆಧ್ಯಾತ್ಮಿಕ ಪೂರ್ಣತೆಯನ್ನು ಪಡೆಯುವ ವರೆಗೆ ಅಡರುವ ಎಡರುಗಳಿಗೆಲ್ಲ ಎದೆಗೊಡಬೇಕಾಗುವದು. ಕ್ಷಣಿಕ ಮನಸ್ತೃಪ್ತಿಗೆಂದು ಅದರ ಅಧ್ಯಯನವನ್ನು ಮಾಡದೆ ತಾಳ್ಮೆ ಮತ್ತು ದೃಢನಿಶ್ಚಯಗಳಿಂದ ಅದರ ಸಾಧನೆ ಮಾಡಹತ್ತಿ, ಅಂತಿಮಗುರಿಯನ್ನು ಮುಟ್ಟುವ ವರೆಗೆ ಹಿಂದುವರಿಯದಿರುವದೇ ಸಾಧಕನ ಹೆಗ್ಗುರುತು.

ಎರಡನೇ ಮೆಟ್ಟಲಿನಲ್ಲಿ ತಪಸ್ಸು, ತಾಳ್ಮೆ, ತೃಪ್ತಿ,ಆಸ್ತಿಕತೆ,ದಾನ ಅಧ್ಯಯನ, ಪರಮಾತ್ಮಾವಲಂಬನೆ ಮೊದಲಾದವು ಸೇರುತ್ತವೆ. ಶರೀರವನ್ನು ಪೂರ್ಣ ನಿರೋಗಿಯಾಗಿಡುವದಕ್ಕೆ ಬೇಕಾಗುವ ಎಲ್ಲ ಸಾಧನೆಯು ಮೂರನೆಯ ಮೆಟ್ಟಲಿನಲ್ಲಿ ಬರುತ್ತವೆ. ಅದಕ್ಕೆ ಆಸನವೆನ್ನುತ್ತಾರೆ.ಆರೋಗ್ಯವಾದರೋ ಸ್ವಸ್ವರೂಪಜ್ಞಾನಕ್ಕೆ ಅತ್ಯವಶ್ಯಕವಾದದ್ದು. ಬೇನೆಯಿಂದ ಬಳಲುತ್ತಿರುವ ಜನರು ತಮ್ಮ ಮನಸ್ಸನ್ನು ಏಕೀಕರಿಸಲು ಶಕ್ತರಾಗರು. ಯಾಕಂದರೆ ಅವರ ಮನಸ್ಸು ವ್ಯಾಧಿತ ಭಾಗಗಳ ಮೇಲೆಯೆ ಏಕಾಗ್ರವಾಗುವದು. ನಿರೋಗಿ ಶರೀರ ಮತ್ತು ಅಂಕೆಯಲ್ಲಿದ್ದ ಮನಸ್ಸುಗಳುಳ್ಳವನು ಬಹುವೇಳೆ ವರೆಗೆ ಅವಯವಗಳಿಗೆ ನೋವಾಗದೆ ಕೂಡ್ರಲಿಕ್ಕೆ ಬರುವಂಥ ಆಸನವೊಂದನ್ನು ಆರಿಸಬೇಕು. ರಾಜಯೋಗ ಸಾಧನೆಯಲ್ಲಿ ಆಸನಗಳ ಮಹತ್ವವು ಹೇಳತಕ್ಕಷ್ಟಿಲ್ಲ. ಕುಳಿತು ಪ್ರಾಣಾಯಾಮ ಸಾಧನೆ ಮಾಡುವಾಗ ಬೆನ್ನಲುಬನ್ನು ಸರಳ ರೇಷೆಯಲ್ಲಿಟ್ಟರೆ ತೀರಿತು.

ಪ್ರಾಣಾಯಾಮವು ನಾಲ್ಕನೇ ಮೆಟ್ಟಲು.ಕೆಲವು ಸಾಧನೆಗಳಿಂದ ಅಸ್ವಸ್ಥತೆ, ಆಲಸ್ಯತನ, ಶಾರೀರಿಕ ದುರ್ಬಲತೆಗಳು ಹೋಗಿ (ಇಲ್ಲದಂತಾಗಿ), ಇಂದ್ರಿಯ ನಿಗ್ರಹ ಮಾಡುವದಕ್ಕೂ ಮನಸ್ಸು ಏಕತಾನವಾಗಿ ಮಾಡಲಿಕ್ಕೂ ಸಹಾಯವಾಗುವದು. ನಿಯಮಿತವಾಗಿಯೇ ಈ ರೀತಿ ಸಾಧನೆ ಮಾಡುವವನಿಗೆ ಕೆಲ ದಿವಸಗಳಲ್ಲಿ ಶರೀರದ ಮೇಲೆಯೂ, ಮನಸ್ಸಿನ ಮೇಲೆಯೂ ಉಚ್ಚವಾದ ಬಲವೂ ಪ್ರಾಪ್ತವಾಗುವದು. ದಣಿವು, ಚಿಂತೆ, ದೇಹದೌರ್ಬಲ್ಯ, ನಿದ್ರಾಭಂಗಗಳಿಂದ ಬಳಲುತ್ತಿರುವವರು ಯೋಗ್ಯ ಪ್ರಾಣಾಯಮದಿಂದ ಅತ್ಯುತ್ತಮ ಪರಿಣಾಮವನ್ನು ಕಾಣಬಲ್ಲರು. ಪ್ರಾಣಾಯಾಮ ಸಾಧನೆಯನ್ನು ಮಾಡಿದವನಿಗೆ ಈ ಪರಿಣಾಮಗಳಾವವೆಂಬುವದು ಹೊಳೆಯುವದು. ಆದರೆ ರಾಜಯೋಗದಲ್ಲಿ ಪ್ರಾಣಾಯಾಮದ ಮುಖ್ಯ ಉಪಯೋಗವೆಂದರೆ ಧಾರಣಾಶಕ್ತಿಯನ್ನು ಬೆಳೆಗೊಡುವದು.

ಮನಸ್ಸನ್ನು ಅಂತರ್ಮುಖವಾಗಿ ಮಾಡುವದು ಐದನೆಯ ಮೆಟ್ಟಲು. ಇದಕ್ಕೆ ಪ್ರತ್ಯಾಹಾರವೆನ್ನುತ್ತಾರೆ. ಬಾಹ್ಯಪದಾರ್ಥಗಳಿಂದ ಮನಸ್ಸನ್ನು ಜಗ್ಗಿ ಹಿಡಿದು. ಅಂತರ ಪದಾರ್ಥದ ಮೇಲಿರಿಸಿ ನಮ್ಮ ಅಂಕೆಯಲ್ಲಿ ತಂದುಕೊಳ್ಳುವದೆ ಈ ಮೆಟ್ಟಲಿನ ಸಾಧ್ಯ. ಇದು ಧಾರಣೆಯ ಪೂರ್ವಸಿದ್ಧತೆ. ಯಾವದೊಂದು ವಿಶಿಷ್ಟ ಪದಾರ್ಥದ ಮೇಲೆ ಮನಸ್ಸನ್ನು ಏಕೀಕರಿಸುವ ಮೊದಲು, ಚೆಲ್ಲಾಪಿಲ್ಲಿಯಾದ ಮಾನಸಿಕ ಶಕ್ತಿಗಳನ್ನು ಒಟ್ಟುಗೂಡಿಸಿ, ಮನಸ್ಸನ್ನು ಹೊರಗೆ ಹೋಗದಂತೆ ಮಾಡುವ ಪದ್ಧತಿಗೆಯೇ ಯೋಗಿಗಳು ಪ್ರತ್ಯಹಾರವೆನ್ನುತ್ತಾರೆ.

ಮುಂದಿನದು ಧಾರಣೆ. ಮೊದಲಿನ ಐದು ಮೆಟ್ಟಲುಗಳನ್ನು ಹತ್ತಿ ಆರನೆಯದಾದ ಧಾರಣೆ ಸಾಧನೆ ಮಾಡುವಾಗ ನಾವು ನೋಡಿ ಬೆಪ್ಪಾಗುವಂತಹ ಪರಿಣಾಮಗಳು ನಮಗೆ ಕಂಡುಬರುವವು. ಆದರೆ ಮೊದಲಿನ ಐದನ್ನು ಸಾಧಿಸದವರಿಗೆ ಇದು ಬಹು ಬಿಗಿ ತೋರುವದು. ಯಾಕೆಂದರೆ ಒಳ್ಳೇ ಪರಿಣಾಮಗಳನ್ನು ಕಾಣಬೇಕಾದರೆ ಯೋಗ್ಯಕ್ಷೇತ್ರವು ಅವಶ್ಯವಾಗಿದೆ.

ಧ್ಯಾನವು ಏಳನೆಯದು. ಇದರಿಂದ ಎಂಟನೆಯ ಮೆಟ್ಟಲಾದ ಸಮಾಧಿಯನ್ನು ಪಡೆಯುವನು. ಈ ಸ್ಥಿತಿಯಲ್ಲಿ ಪ್ರತಿಯೊಬ್ಬನಿಗೆ ಸೂಕ್ಷ್ಮಪದಾರ್ಥ ದರ್ಶನವುಂಟಾಗಿ ಒಳಗಣ್ಣು (ಆಧ್ಯಾತ್ಮಿಕನೇತ್ರವಾದ ಜ್ಞಾನಚಕ್ಷು) ತೆರೆದು, ಸ್ವಸ್ವರೂಪದ ನಿಜವಾದ ಜ್ಞಾನವುಂಟಾಗುವದು. ಈ ಸ್ಥಿತಿಯಲ್ಲಿ ಆತ್ಮನೂ ಪರಮಾತ್ಮನೂ ಒಂದೇ ಎಂಬ ಅರಿವುಂಟಾಗಿ, ಮಾನವೀ ಆತ್ಮನಿಗೆ ಬರಲಿಕ್ಕೆ ಶಕ್ಯವಾದ ಎಲ್ಲ ಪ್ರೇರಣೆಯನ್ನೂ, ಜ್ಞಾನವನ್ನೂ ಪಡೆಯುವನು. ಬ್ರಹ್ಮಜ್ಞಾನವು ಯಾವದೊಂದು ಬಾಹ್ಯಪದಾರ್ಥದಿಂದ ಅಥವಾ ಯಾವನೊಬ್ಬ ದೇವತೆಯ ಅನುಗ್ರಹದಿಂದ ಉಂಟಾಗುವದೆಂದು ಎಷ್ಟೋ ಜನರ ನಂಬಿಗೆಯುಂಟು. ಆದರೆ ಯೋಗಿಗೆ ಮಾತ್ರ "ದೈವಿಕ ಪ್ರೇರಣೆ"ಯೆಂದು ಕರೆಯಲ್ಪಡುವದೆಲ್ಲವೂ ನಮ್ಮಲ್ಲಿಯೇ ಇರುವ ಪರಮಾತ್ಮನ ಆವಿರ್ಭಾವವು. ಆಧ್ಯಾತ್ಮಿಕ

ಸತ್ಯ ತತ್ವಗಳ ನಿಜವಾದ ಜ್ಞಾನವು ರಾಜಯೋಗದ ಎಂಟನೇ ಪಾವಟಿಗೆಯನ್ನು ಹತ್ತಿದವನಿಗೆ ಸಾಧ್ಯವಾಗುತ್ತದೆ ಎಂದು ಗೊತ್ತಾಗುತ್ತದೆ. ಅವಿಶ್ರಾಂತ ಶ್ರಮ, ದೃಢನಿಶ್ಚಯಗಳು ಸಮಾಧಿ ಸಾಧನಕ್ಕೆ ಅತ್ಯಗತ್ಯವಾದವುಗಳು. ಆ ಸಮಾಧಿ ಸ್ಥಿತಿಯಲ್ಲಿ ಹೊಳೆಯುವ ಅರಿಕೆಯು ಬುದ್ಧಯಿಂದಾಗಲೀ, ಬೇರಿನ್ನಾವ ಮಾನಸಿಕ ಶಕ್ತಿಯಿಂದಾಗಲೀ ದೊರೆಯಲಾರದು. ಆದುದರಿಂದಲೇ ಸತ್ಯದ ಮೆಟ್ಟನ್ನು ಮುಟ್ಟಬೇಕಾದರೆ ಉದ್ಗ್ರಂಥಗಳ ಅಥವಾ ಸದ್ಗ್ರಂಥಗಳ ಅಧ್ಯಯನವು ಅಗತ್ಯವಾಗಿರದೆ ಬುದ್ಧಿಯಿಂದಾಗಲೀ, ಇಂದ್ರಿಯಗಳಿಂದಾಗಲೀ ಅದು ಸಾಧ್ಯವಿಲ್ಲ. ಸಮಾಧಿ ಸ್ಥಿತಿಯನ್ನು ಮುಟ್ಟಿದರೆ ಮಾತ್ರ ಅದು ನಮಗೆ ಲಭಿಸುವದು ಎಂದು ಹೇಳುತ್ತಾರೆ. ಸತ್ಯ ಜ್ಞಾನಕ್ಕೋಸುಗ ಹಂಬಲಿಸುವವರೂ, ಅಂತಿಮದಲ್ಲಿ ಏನೊಂದು ಉಳಿಯುವದೆಂಬ ಶೋಧದಲ್ಲಿ ಜಿಜ್ಞಾಸೆಯುಂಟಾದರೆ ಹೆಣಗಾಡುವವರೂ, ಇಂದ್ರಿಯಗಳಿಂದ ಅಥವಾ ಬೇರೆ ಯಾವ ಸಾಧನೆಗಳಿಂದ ದೊರೆತ ಜ್ಞಾನದಿಂದ ತೃಪ್ತರಾಗದವರೂ ಸಮಾಧಿಯನ್ನು ಪಡೆಯಲಿಕ್ಕೆ ಟೊಂಕ ಕಟ್ಟಬೇಕು. ಅದರ ಸಹಾಯದಿಂದಲೇ ಅವರಿಗೆ ಗುರಿಯ ಅರಿವಾಗಿ ಸೌಖ್ಯದ ಇಕ್ಕೆಯನ್ನು ಹೊಂದುತ್ತಾರೆ. ಆದರೆ ಈ ಸ್ಥಿತಿಗೆ ಮುಟ್ಟುವ ಮೊದಲು ಈ ಮೊದಲೇ ಹೇಳಿಟ್ಟ ಮೆಟ್ಟಲುಗಳನ್ನು ಮಾತ್ರ ಶ್ರದ್ಧಾ ಪೂರ್ವಕವಾಗಿ ಅನುಸರಿಸಿ, ದಾರಿಯಲ್ಲೆಲ್ಲ ಹರಡಿರುವ ಎಡರುಗಳನ್ನು ತಾಳ್ಮೆ, ದೃಢ ಸಂಕಲ್ಪಗಳಿಂದ ದೂರಮಾಡಬೇಕು.

ಅಳಲು, ಬೇನೆ, ಮಾನಸಿಕ ಅಸ್ವಸ್ಥತೆ, ಸಂಶಯ, ಸಮಾಧಿ ಸಾಧನಾ ಪ್ರಯತ್ನದಲ್ಲಿ ವಿರಾಮ, ಶರೀರಗುರುತ್ವ, ಪ್ರಾಪಂಚಿಕ ವಿಷಯಗಳ ಬಗ್ಗೆ ಹಂಬಲ,ಅನೈಕಾಗ್ರತೆ,ಒಮ್ಮೆ ದೊರೆತ ಸ್ಥಿತಿಯಿಂದ ಚ್ಯುತರಾಗೋಣ,ಅನಿಯಮಿತ ಶ್ವಾಸೋಚ್ಛ್ವಾಸ ಮೊದಲಾದ ಅನೇಕ ಎಡರುಗಳು ಸಮಾಧಿ ಸಂಪಾದನೆಯ ಮಾರ್ಗದಲ್ಲಿ ತುಂಬಿಹೋಗಿವೆ. ಆದರೆ ಈ ಎಲ್ಲ ಎಡರುಗಳನ್ನು ಅನುಭವಿಕ ಯೋಗಿಯೊಬ್ಬನ ಶಿಷ್ಯತ್ವವನ್ನ ವಹಿಸಿ, ಅವನ ಹೇಳಿಕೆಯಂತೆ ನಡೆದು, ನಿಯಮಿತ ಆಚರಣೆಯಿಂದ ಸುಲಭವಾಗಿ ಹೊಡೆದೋಡಿಸಬಹುದು. ರಾಜಯೋಗದ ಸಾಧನೆಯನ್ನು ಯಾವನೊಬ್ಬನು ತಾನೇ ಮಾಡಹೋದರೆ, ಅದರಿಂದ ಎಷ್ಟೋ ಕೆಡಕುಗಳುಂಟಾಗುವ ಸಂಭವವಿದೆ. ಆದರೆ ಹಾದಿ ತೋರಸಲಿಕ್ಕೊಬ್ಬ ಅನುಭವಿಕ ಗುರುವಿದ್ದರೆ ಸಾಕು. ಅಡರುವ ವಿಘ್ನಗಳೆಲ್ಲವನ್ನೂ ಸುಲಭವಾಗಿ ಜಯಿಸಿ ಯೋಗ್ಯ ಹಾದಿಯನ್ನು ಮುಟ್ಟುವುದು ಅತಿ ಸುಲಭವಾದ ಮಾತು. ಈ ತೆರನಾದ ಸಾಧನೆಗಳಿಂದ ಸಾಧ್ಯವಾಗುವ ಕೆಲ ಕೆಲ ಶಕ್ತಿಗಳು ಅನನುಭವಿಕ ವಿದ್ಯಾರ್ಥಿಯಿಂದ ವ್ಯವಸ್ಥಿತವಾಗಿಟ್ಟುಕೊಳ್ಳದಷ್ಟು ಅದ್ಭುತವಾಗಿರುತ್ತವೆ. ಅವು ಅವನಿಗೆ ಸ್ವಲ್ಪ ಕೇಡನ್ನುಂಟುಮಾಡುವವೆಂದಿಷ್ಟೇ ಅಲ್ಲ. ಒಮ್ಮೊಮ್ಮೆ ಅವನಿಗೆ ಪರಿಣಾಮಗಳನ್ನು ಕಂಡು ಹುಚ್ಚು ಸಹ ಹಿಡಿಯಬಹುದು. ಅನುಭವಿಕ ಶಿಕ್ಷಕನ ಸಹಾಯವಿಲ್ಲದೆ ಸಾಧನೆ ಮಾಡಲೆಳಿಸಿದ ಸಾಧಕರಲ್ಲಿ ಇಂತಹ ಕೆಲವು ಉದಾಹರಣೆಗಳು ನಿಜವಾಗಿಯೇ ಕಣ್ಣಿಗೆ ಗೋಚರವಾಗುತ್ತವೆ.

ಎಲ್ಲ ವಿಘ್ನಗಳ ಪರಿಹಾರವಾದನಂತರ, ರಾಜಯೋಗದ ಕಡೆಯ ಗುರಿಯನ್ನು ನಾನು ಮುಟ್ಟುತ್ತಿದ್ದೇನೆಂಬ ಆತ್ಮವಿಶ್ವಾಸವು ಸಾಧಕನಿಗೆ ಇರತಕ್ಕದ್ದು. ಸಮಾಧಿಪ್ರಾಪ್ತಿಯಾದನಂತರ ಎಲ್ಲ ಸಂಶಯಗಳು ಹೇಳಹೆಸರಿಲ್ಲದಂತಾಗುವವು. ಆತ್ಮನ ಸಂಬಂಧದ ಎಲ್ಲ ತೊಡಕುಗಳು ಬಿಟ್ಟು ಹೋಗುವವು. ಸತ್ಯತ್ವಾನ್ವೇಷಣೆಯ ಕೆಲಸವು ನಿಂತು ಹೋಗುವದು. ಚಿತ್ತವು ಸ್ವಸ್ಥೆಯನ್ನೈದುವದು. ಮತ್ತೆ ಅವಿದ್ಯೆ ಮಾಯೆಗಳ ಸಂಕೋಲೆಗಳಿಂದ ಆತ್ಮ ಬಿಡುಗಡೆ ಹೊಂದುವನು. ಈ ಯೋಗಿಯು ಎಂದಿಗೂ ಪ್ರಾಪಂಚಿಕ ಸುಖಗಳ ಬೆನ್ನುಹತ್ತನು. ಅಥವಾ ವಿಷಯಸುಖಗಳಿಂದ ವಿಭ್ರಾಂತನಾಗಲಾರನು. ವಿಶ್ವವೆಲ್ಲವೂ ಆ ಪರಮಾತ್ಮನ ಆಟದ ಭೂಮಿಯೆಂದೂ ತನ್ನ ಮನಸ್ಸು, ಶರೀರಗಳು ಆ ಸರ್ವಶಕ್ತನ ಸರ್ವತ್ರ ಪ್ರಕಟವಾದ ಇಚ್ಛೆಯ ಕೈಯಲ್ಲಿಯ ಬೊಂಬೆಗಳಂತೆ ಇರುತ್ತವೆಂದೂ

ಸರ್ವದಾ ಅವನಿಗೆ ಭಾವನೆಯುಂಟಾಗುತ್ತಿರುತ್ತದೆ. ಈ ರೀತಿಯಾಗಿ ಆಧ್ಯಾತ್ಮಿಕಶಕ್ತಿ, ತೇಜಗಳನ್ನು ಪಡೆದು ತನ್ನನ್ನು ತಾನೇ ಗೆದ್ದು ಈ ಜೀವನದಲ್ಲಿಯೇ ಎಲ್ಲ ಪ್ರಕೃತಿಗೆ ಒಡೆಯನಾಗುವನು.

ಯಾವನು ತನ್ನ ಮನ ಮತ್ತು ಮೆಯ್‌ಗಳನ್ನು ಚೆನ್ನಾಗಿ ಅಂಕೆಯಲ್ಲಿಟ್ಟು ಕೊಂಡಿರುವನೋ ಯಾವನ ಆತ್ಮವು ಸ್ವಾಸ್ಥ್ಯವನ್ನು ಸವಿಯುತ್ತದೆಯೋ ಯಾವನು ಪ್ರತಿಯೊಂದು ಪದಾರ್ಥದಲ್ಲಿಯೂ ದೈವಿಕ ಭಾವನೆಯುಳ್ಳವನಾಗಿರುತ್ತಾನೆಯೋ, ಯಾವನು ಪ್ರತಿಯೊಂದು ಸಚ್ಚಿದಾನಂದ ಪರಿಪೂರ್ಣತ್ವದ ಅನಂತ ಆಗರದ ಅಂಶವೆಂದು ಬಗೆಯುತ್ತಾನೆಯೋ ಅವನೇ ಈ ಭೂಮಿಯಲ್ಲಿ ನಿಜವಾಗಿ ಸೌಖ್ಯವನ್ನು ಪಡೆದವನು,ಅವನೇ ಈ ಜಗತ್ತನ್ನು ಗೆದ್ದವನು.

❖❖

೯

# ಭಕ್ತಿಯೋಗದಿಂದ ಮೋಕ್ಷಸಾಧನೆ

ಶಿವಾನುಭವ ೩-೧೧

ಸಕಲವಿಶ್ವದ ಕರ್ತನೂ, ಚಾಲಕನೂ ಆದೊಬ್ಬ ಈಶ್ವರನ ವಿಷಯಕ ಪ್ರೀತಿಯಿಂದಲೂ, ಆತನ ಅರ್ಚನೆಯಿಂದಲೂ ಸರ್ವಧರ್ಮಗಳ ಅಂತಿಮ ಧ್ಯೇಯವನ್ನು ಮಾನವನು ಪಡೆಯಬಲ್ಲನೆಂದು ಭಕ್ತಿಯೋಗವು ಹೇಳುತ್ತದೆ. ಯೋಗದ ಉಳಿದ ಶಾಖೆಗಳಿಂದ ನಾವು ಮುಟ್ಟಬಹುದಾದ ಗುರಿಯನ್ನೇ ಇದರಿಂದಲಾದರೂ ಮುಟ್ಟುವೆವು. ಆದರೆ ಇದು ಪ್ರೇಮಮಯ ಭಕ್ತಿಮಯರಾದವರಿಗೆ ಮಾತ್ರ ಯೋಗ್ಯವಾದದ್ದು. ಮನುಷ್ಯರು ತಮ್ಮ ದುರ್ಬಲತೆಗಳನ್ನು ಅರಿತು ಬಹಿಃ ಸಹಾಯವನ್ನಪೇಕ್ಷಿಸುವ ಪರಮಾತ್ಮನಲ್ಲಿ ಆಶ್ರಯವನ್ನು ಬಯಸಿ, ತಮ್ಮ ಜೀವನಕ್ಕೊಳಪಟ್ಟ ಭೌತಿಕ ಅಧ್ಯಾತ್ಮಿಕ ನಿಯಮಗಳ ಅರಿವು ಇಲ್ಲದ್ದರಿಂದುಂಟಾದ ಪಾಪಕೃತ್ಯಗಳನ್ನು ಕ್ಷಮಿಸಲೋಸುಗ ಅವನನ್ನು ಪ್ರಾರ್ಥಿಸುವ ಭಕ್ತರಿಗೋಸುಗ ಈ ಯೋಗವಿರುತ್ತದೆ. ಕ್ರಿಸ್ತಧರ್ಮ, ಯಹುದೀಧರ್ಮ, ಮಹ್ಮದೀಯ ಧರ್ಮ ಮೊದಲಾದ ವ್ಯಕ್ತಿ ಈಶ್ವರನ ಪೂಜೆಯನ್ನು ಬೋಧಿಸುವ ಎಲ್ಲ ದ್ವೈತಧರ್ಮಗಳೂ ತಿಳಿಯದೆ ಅಥವಾ ತಿಳಿದು ಭಕ್ತಿಯೋಗವನ್ನೇ ಹೇಳಿ, ಈ ಹಾದಿಗುಂಟವಾಗಿಯೇ ಅದರ ಅನುಯಾಯಿಗಳನ್ನು ಕರೆದೊಯ್ಯುತ್ತವೆ.

ಭಕ್ತಿಯೋಗದೊಳಗಣ ಯೋಗದ ಅರ್ಥವು ಆತ್ಮ ಪರಮಾತ್ಮರ ಸಮರಸವೆಂದಾಗುತ್ತದೆ. ಆದ್ದರಿಂದ ಭಕ್ತಿಯೋಗವು ಪರಮಾತ್ಮನೊಡನೆ ಆತ್ಮನ ಐಕ್ಯತೆಯನ್ನು ತಂದುಕೊಡುವ ಬಗೆಯನ್ನು ಹೇಳುವದು. ಯಾವ ರೀತಿಯಿಂದ ಮುಂದುವರಿದರೆ ಈ ತರದ ಐಕ್ಯವುಂಟಾಗುವದೆಂಬದನ್ನು ಇದು ತೋರಿಸಿಕೊಡುತ್ತದೆ. ಮಾನವೀ ಹೃದಯದ ಸಾಧಾರಣ ಭಾವನೆಗಳು ಸಹ ಈಶ್ವರನೆಡೆಗೆ ತಿರುಗಿಸಿದ್ದಾದರೆ ಪರಮಾತ್ಮನೊಡನೆ ಆತ್ಮನ ಐಕ್ಯತೆಯು ಹೇಗೆ ಸಂಭವಿಸುವದೆಂಬದನ್ನಾದರೂ ಅದು ತಿಳಿಸುತ್ತದೆ. ಇಚ್ಛೆ, ವಿಕಾರ, ಪ್ರೀತಿ, ದ್ವೇಷ, ಗರ್ವ, ಸಿಟ್ಟು ಮೊದಲಾದವುಗಳು ಹೆಚ್ಚಳವನ್ನು ಹೊಂದುವ ಮೊದಲು ನಿಗ್ರಹಿಸಲ್ಪಡಬೇಕೆಂದು ರಾಜಯೋಗವು ಹೇಳುತ್ತದೆ. ರಾಜಯೋಗಿಯಾಗುವವನು ಮೊದಲು ತನ್ನ ಮನಸ್ಸನ್ನು ಯಾವಾಗಲೂ ತನ್ನ ಅಂಕೆಯಲ್ಲಿಟ್ಟುಕೊಳ್ಳಬೇಕಲ್ಲದೆ, ಎಂಟು ವಿಧವಾದ ಯೋಗದ ಮೆಟ್ಟಲುಗಳನ್ನವನು ಅನಿವಾರ್ಯವಾಗಿ ಮಾಡಲೇಬೇಕಾಗುವದು. ಆದರೆ ಭಕ್ತಿಯೋಗದಲ್ಲಿ ಶಿಷ್ಟವಾಗಲಿ, ದುಷ್ಟವಾಗಲಿ ಆದ ಭಾವನೆಗಳೆಲ್ಲವೂ ಈಶ್ವರನ ಕಡೆಗೆ ತಿರುಗಿಸಲ್ಪಡಬಲ್ಲವೆಂಬದನ್ನು ಕಲಿಯುತ್ತೇವೆ. ಆಮೇಲೆ ಅವು ಆತ್ಮನನ್ನು ಜಗತ್ತಿಗೂ ಪ್ರಾಪಂಚಿಕ ಆಸಕ್ತಿಗೂ ಬದ್ಧನನ್ನಾಗಿ ಮಾಡದೆ, ಪರಮಾತ್ಮಜ್ಞಾನವನ್ನು ಪಡೆಯುವ ಸಾಧನಗಳಾಗುತ್ತವೆ. ಮತ್ತು ಸ್ವಾರ್ಥತೆ,ದುಷ್ಟತೆಗಳಿಂದ ಪೂರ್ಣವಾದ ಬಿಡುಗಡೆಯನ್ನು ನಾವು ಪಡೆಯುವೆವು.

ಭಕ್ತಿಯೋಗವನ್ನಾಚರಿಸುವವನು ಶಕ್ಯವಿದ್ದಷ್ಟು ದೇವರು ತನಗೆ ಅತ್ಯಂತ ನಿಕಟವಾಗಿ ಸಂಬಂಧಿಸಿದ್ದಾನೆಂದು, ಅವನು ವಿಶ್ವದ ಒಡೆಯನಿದ್ದದ್ದಲ್ಲದೆ ತಂದೆ ತಾಯಿ, ಸಹೋದರಿ,ಗೆಳೆಯ ಅಥವಾ ಮಗನಂತೆಯಾದರೂ ಇರುವನೆಂದು ಅವನನ್ನು ಭಕ್ತನು ಭಾವಿಸಬೇಕು.ಐಶ್ವರಿಕ ಪ್ರೀತಿ ಮದಮತ್ತನಾದ ಭಕ್ತನು ಗಂಡಹೆಂಡರ ಭಾವ ಪ್ರೇಮವನ್ನು ಸಹ ತನ್ನಲ್ಲಿ ಮತ್ತು ಈಶ್ವರನಲ್ಲಿ ಬೆಳೆಸಬಹುದು. ಈತರದ ಭಾವವುಳ್ಳ ವಚನಗಳು ವಚನಶಾಸ್ತ್ರದಲ್ಲಿ ಹೇರಳವಾಗಿವೆ. ಭಕ್ತನ ಸಕಲ ಹೃದಯ ಪ್ರವಾಹವು ದಾರಿಯಲ್ಲಿಯ ಯಾವ ಎಡರುಗಳನ್ನು ಲೆಕ್ಕಿಸದೆ ಈಶ್ವರನೆಂಬ ಸಮುದ್ರದ ಕಡೆಗೆ ಭರದಿಂದ ಪ್ರವಹಿಸಹತ್ತಿದಾಗ ಜಗತ್ತಿನಲ್ಲಿಯ ಮತ್ತಿನ್ನಾವದೂ ಅವನನ್ನು ಜಗ್ಗುವದಿಲ್ಲ. ಬೇರಿನ್ನಾವ ವಿಚಾರಗಳೂ ಅವನ ಮನಸ್ಸಿನಲ್ಲಿ ಬರುವದಿಲ್ಲ. ಮತ್ತು ತನ್ನ ಸರ್ವಜ್ಞ ಸರ್ವಾಂತರ್ಯಾಮಿ ಪರಮಾತ್ಮನ ಹೊರತು ಮತ್ತೊಂದು ಅವನ ಕಣ್ಣಿಗೆ ತೋರುವದಿಲ್ಲ. ತನ್ನನ್ನು ಸಂಪೂರ್ಣವಾಗಿ ಪರಮಾತ್ಮನ ಅಡಿಗಳಿಗೊಪ್ಪಿಸಿ, ತನ್ನ ಇಚ್ಛೆಯನ್ನು ಆ ಪರಮಾತ್ಮನ ಇಚ್ಛಾಧೀನವನ್ನಾಗಿ ಮಾಡುವನು. ಅವನು ಕೆಲಸ ಮಾಡಿದರೂ ಫಲಾಶೆಯನ್ನಿಡುವದಿಲ್ಲ. ಶಾರೀರಿಕ, ಮಾನಸಿಕ ಕರ್ಮಗಳೆಲ್ಲವನ್ನೂ ತನ್ನ ಪ್ರಿಯ ಈಶ್ವರನ ಪ್ರಣಯಕ್ಕಾಗಿಯೇ ಮಾಡುತ್ತಾನೆ. ಪ್ರೀತಿಯೇ ಅವನನ್ನು ಕೆಲಸಕ್ಕೆ ನೂಕುವ ಪ್ರೇರಣೆಯು. ಅದರಿಂದ ಸ್ವಾರ್ಥಶೃಂಖಲೆಯನ್ನು ಹರಿದೊಗೆದು, ಕರ್ಮಬಂಧವನ್ನು ಬಿಸುಟಿ ಮುಕ್ತನಾಗುವನು. ಹೀಗೆ ನಿಜವಾದ ಭಕ್ತಿಯೋಗಿಯು ಪರಮಾತ್ಮನಲ್ಲಿಯೇ ಲೀನನಾಗಿದ್ದು 'ನಾನು' 'ನನಗೆ' 'ನನ್ನ' ಎಂಬ ಭಾವಗಳನ್ನು ಮರೆತು 'ನೀನು' 'ನಿನಗೆ' 'ನಿನ್ನ' ಎಂಬ ಭಾವಗಳಿಗೆಡೆಗೊಡುತ್ತಾನೆ.

ಭಕ್ತನು ತನ್ನ ಭಕ್ತಿಗೆ ವಿಷಯನಾದ ಈಶ್ವರನೊಡೆ ತನ್ನ ಸಂಬಂಧವನ್ನು ಮರೆಯುವದಿಲ್ಲ. ಅವನ ಮನಸ್ಸು ಏಕಾಗ್ರವಾಗಿರುತ್ತದಾದ ಕಾರಣ ಅದು ಸಹಜವಾಗಿಯೇ ಧ್ಯಾನಾಸಕ್ತವಾಗುವದು. ನಿಜವಾದ ಭಕ್ತಿಯಿಂದ ಅವಿರಳವಾದ ಧ್ಯಾನವು ಲಾಭವಾಗುತ್ತದೆ. ಆ ಮೇಲೆ ಸಮಾಧಿಯಲ್ಲಿ ಅವನ ಆತ್ಮವು ಲೀನವಾಗುತ್ತದೆ. ಆಗ ಅವನಿಗೆ ಪರಮಾತ್ಮನ ಅರಿವಾಗಿ ಮತ್ತೊಂದು ವಿಚಾರ ಬಾಧೆಗೊಳಗಾಗದೆ ಈಶ್ವರನೊಡನೆ ಸಂಭಾಷಿಸುತ್ತಾನೆ. ಇಂದ್ರಿಯ ಶಕ್ತಿಗಳಿಗೆ ಲಕ್ಷ್ಯಗೊಡದೆ ಐಶ್ವರಿಕ ಸೃಷ್ಟಿಯಲ್ಲಿ ಲೋಲಾಡಹತ್ತುವನು. ಅವನು ದೃಷ್ಟಿ ಹಾಕಿದೆಡೆಯಲ್ಲೆಲ್ಲಿಯೂ ಸರ್ವವ್ಯಾಪಿ ಪರಮಾತ್ಮನ ಅಸ್ತಿತ್ವವನ್ನು ಕಂಡುಕೊಳ್ಳುತ್ತಾನೆ. ತನ್ನ ಜೀವಿತದ ಪ್ರತಿಕ್ಷಣದಲ್ಲಿ ಅನಿವಾರ್ಯ ಸುಖ ಶಾಂತಿ ಲಾಭವನ್ನು ಪಡೆಯುತ್ತಾನೆ. ಆದಕಾರಣದಿಂದಲೇ ಭಕ್ತಿಯೋಗವು ಬಹು ಸುಲಭವಾಗಿದೆಯೆಂದೆಣಿಸಲ್ಪಡುತ್ತದೆ. ಎಷ್ಟೋ ವರ್ಷ ಸಾಧನೆ ಮಾಡಿದ ತರುವಾಯ ರಾಜಯೋಗಿಗೆ ಸಿಗುವಂಥ ಪದವು ಭಕ್ತನಿಂದ ಅತಿಶಯ ಭಕ್ತಿಪ್ರೇಮಗಳಿಂದ ಸ್ವಲ್ಪ ವೇಳೆಯಲ್ಲಿಯೇ ಸಾಧಿಸಲ್ಪಡುತ್ತದೆ. ಕರ್ಮಯೋಗಿಗೆ ಕಠಿಣವೆಂದು ತೋರುವ ಈ ಸ್ಥಾನವು ಭಕ್ತನಿಗೆ ಸರ್ವಕರ್ಮಗಳ ಉಗಮಸ್ಥಾನವಾದ ಸರ್ವಶಕ್ತ ಪರಮಾತ್ಮನಿಗೆ ತನ್ನ ಕರ್ಮದ ಫಲಗಳನ್ನೆಲ್ಲ ಅರ್ಪಣ ಮಾಡುವದರಿಂದ ಸುಲಭ ರೀತಿಯಿಂದ ಸಾಧನೆಯಾಗುತ್ತದೆ.

ಭಕ್ತಿಯೋಗದಲ್ಲಿ ಎರಡು ತರಗತಿಗಳಿರುತ್ತವೆ. ಒಂದನೆಯದು ಗೌಣ ಅಥವಾ ಪ್ರಥಮ ಸಾಧನೆಗಳು, ಎರಡನೆಯದು ಪರಾ ಅಥವಾ ದೇವರ ವಿಷಯಕ ಪ್ರೀತಿ ಮತ್ತು ಭಕ್ತಿಗಳ ಪರಮಸೀಮೆ. ಭಕ್ತಿಯೋಗದಲ್ಲಿ ಮೊದಲಿಗನಾದವನು ಎಲ್ಲ ಪ್ರಾಪಂಚಿಕ ವಿಷಯಗಳಿಂದ ತನ್ನ ಹೃದಯವನ್ನು ಮುಕ್ತಮಾಡಿ ಕ್ಷೇತ್ರವನ್ನು ಸಿದ್ಧಗೊಳಿಸಬೇಕು. ಇದು ಸಂಸಾರಹೇಯಸ್ಥಲವು. ಆಮೇಲೆ ತನ್ನ ಹೃದಯದಲ್ಲಿ ಈಶ್ವರನ ದರ್ಶನ ವಿಷಯಕ ಇಚ್ಛೆಯನ್ನುತ್ಪನ್ನ ಮಾಡಬೇಕು. ಆ ಮೇಲೆ ಈಶ್ವರನ ಜ್ಞಾನಸಂಪಾದನೆಯ ಎಲ್ಲ ಜ್ಞಾನೋದಯಕ್ಕೆ ಮುಟ್ಟುವರು. ಹಾಗೂ ಇದೇ ಜೀವಿತದಲ್ಲಿಯೇ ಪೂರ್ಣತೆಯನ್ನು ಹೊಂದುವ ಬಲವಾದ ಬಯಕೆಯು ಅವನಲ್ಲಿ ನೆಲೆಗೊಳ್ಳಬೇಕು. ಅವನು ಸಂಪೂರ್ಣವಾಗಿ ಮನಮುರಿದು ದುಡಿಯುತ್ತಿರಬೇಕು. ಶುದ್ಧ ಜೀವಿತನಾದಂಥ,

ಯಾವ ಕೊಂಕುಗಳಿಲ್ಲದ ಪ್ರಾಪಂಚಿಕ ಸಂಬಂಧಗಳನ್ನೆಲ್ಲ ಹರಿದು ಹಾಕಿ ಮತ್ತು ಆತ್ಮ ಪರಮಾತ್ಮಗಳ ನಿಜವಾದ ಸಂಬಂಧವನ್ನು ಅರಿತಂಥ ಐಶ್ವರಿಕ ಭಕ್ತನ ಸಹವಾಸವನ್ನು ಅವನು ಹುಡುಕಬೇಕು. ದೈವವಶಾತ್ ನಿಜವಾದ ಭಕ್ತನ ಸಂಘಟನೆಯಾದೊಡೆ, ಅವನು ಭಕ್ತಿಬೀಜವನ್ನು ಸ್ವೀಕರಿಸಿ ಅದನ್ನು ತನ್ನ ಹೃದಯಕ್ಷೇತ್ರದಲ್ಲಿ ಊರಿ, ತನ್ನ ಗುರುವಿನ ಬೋಧನೆಗಳಿಗನುಸಾರವಾಗಿ ನಡೆದು, ಆ ಪೈರನ್ನು ಸಜೀವವಾಗಿಟ್ಟು ಐಶ್ವರಿಕ ಭಕ್ತಿಯೆಂಬ ಫಲವಾಗುವ ವರೆಗೆ ಅದರ ಬೆಳವಣಿಗೆಗಿಂಬುಗೊಡಬೇಕು. ತನ್ನ ಆಧ್ಯಾತ್ಮಿಕ ಚಕ್ಷುವನ್ನು ತೆರೆಯುವಂಥ ಗುರುವಿನ ವಿಷಯದಲ್ಲಿ ಅವನಿಗೆ ಬಹುಮಾನ, ಆದರ, ಪ್ರೀತಿಗಳು ಇರತಕ್ಕದ್ದು. ಆಗ ಅವನು ತನ್ನ ಶಿಷ್ಯನಿಗೆ ತನ್ನ ಆಧ್ಯಾತ್ಮಿಕ ಶಕ್ತಿಗಳನ್ನು ನೀಡುವನು. ಈ ಶಕ್ತಿಗಳು ಕೆಲಸ ಮಾಡಹತ್ತಲು ಅಜ್ಞಾನ ಮಾಯೆಗಳ ಗಾಢನಿದ್ರೆಯಲ್ಲಿದ್ದ ಆತ್ಮನನ್ನು ಪ್ರಬುದ್ಧನನ್ನಾಗಿ ಮಾಡುವವು. ಇದೇ ದೀಕ್ಷೆಯ ತತ್ವವಾಗಿರುವದು.

ಗುರುವಿಗೆ ಶಿಷ್ಯನ ಸ್ವಾಭಾವಿಕ ಒಲವು ಗೊತ್ತಿರುವದರಿಂದ ಅವನು ಶಿಷ್ಯನಿಗೆ ಈಶ್ವರ ಮತ್ತು ಅವನಲ್ಲಿಯ ಸಂಬಂಧವನ್ನು ತಿಳಿಸಿ ಕೊಡುವನು. ಅಂದಿನಿಂದ ಆ ಶಿಷ್ಯನು ಐಶ್ವರಿಕ ಚಿಂತನೆಯನ್ನೂ ಅರ್ಚನೆಯನ್ನೂ ಮಾಡಹತ್ತುವನು. ಇಂತಹ ಸ್ಥಿತಿಯಲ್ಲಿ ಭಕ್ತನ ಮನಸ್ಸು ಈಶ್ವರನಲ್ಲಿ ಏಕಾಗ್ರವಾಗುವದು. ಈ ಕಾಲದಲ್ಲಿ ಅವನು ತನ್ನ ಆದರ್ಶಕ್ಕೆ ಭಂಗ ತರುವಂಥ ಯಾವ ಸಹವಾಸವನ್ನಾಗಲಿ, ಸ್ಥಳಗಳನ್ನಾಗಲಿ, ವಿನೋದಗಳನ್ನಾಗಲಿ ಬಿಟ್ಟುಬಿಡುವನು. ಆದರೆ ಅವನು ಸತ್ಯಾಸತ್ಯದ ಭೇದವನ್ನು ತಿಳಿದು ಶುದ್ಧಚರಿತ್ರನಾಗಿರಬೇಕು. ತನ್ನ ಮನೋವಿಕಾರಗಳನ್ನೆಲ್ಲ ಈಶ್ವರನ ಕಡೆಗೆ ತಿರುಗಿಸಿ ಅವನ್ನೆಲ್ಲ ಜಯಿಸತಕ್ಕದ್ದು. ತನ್ನ ಆದರ್ಶವನ್ನು ತಿಳಿಯದ್ದಕ್ಕಾಗಿ ಅವನು ತನ್ನ ಮೇಲೆಯೇ ಕೋಪಿಷ್ಟನಾಗತಕ್ಕದ್ದು. ಭಕ್ತಿಮಾರ್ಗದಿಂದ ತನ್ನನ್ನು ದೂರಮಾಡಿ ತನ್ನ ಪ್ರೇರಣೆಯಿಂದ ತೊಲಗಿಸುವ ತನ್ನ ಪಾಪ ಪ್ರಕೃತಿಯನ್ನು ದ್ವೇಷಿಸಬೇಕು. ಈ ರೀತಿಯಾಗಿ ತನ್ನ ತಪ್ಪುಗಳನ್ನು ತಿದ್ದಿಕೊಂಡು, ತನ್ನ ಪಾಶವೀವೃತ್ತಿಯನ್ನು ನಿಗ್ರಹಿಸತಕ್ಕದ್ದು.

ಭಕ್ತಿಯೋಗದಲ್ಲಿರುವವನು ಶಾರೀರಿಕ ಮಾನಸಿಕ ಸ್ವಚ್ಛತೆಗಳನ್ನು ಇಟ್ಟುಕೊಳ್ಳತಕ್ಕದ್ದು. ಸತ್ಯವಂತನಾಗಿರಬೇಕು. ಶಾರೀರಿಕವಾಗಿ ಅಥವಾ ಮಾನಸಿಕವಾಗಿ ಯಾವ ಪ್ರಾಣಿಗೂ ಹಿಂಸೆಗೊಡದೆ ನಿಷ್ಪಾಪ ಜೀವನವನ್ನು ಸಾಗಿಸಬೇಕು. ತನ್ನ ಆಹಾರಕ್ಕೋಸುಗ ಯಾವ ಪ್ರಾಣಿಯನ್ನೂ ಅವನು ಕೊಲ್ಲಕೂಡದು.ಅಥವಾ ತನ್ನದಲ್ಲದ ಪದಾರ್ಥದ ವಿಷಯಕ್ಕೆ ಬಯಕೆಯನ್ನು ಹೊಂದಬಾರದು. ಶಾರೀರಿಕ ಬಲವನ್ನು ಇಚ್ಛಿಸುವ ಆರೋಗ್ಯ ವಿಷಯಕ ನಿಯಮಗಳನ್ನು ಮಾನಸಿಕ ರೀತಿಯಿಂದ ಮಾಡುವ ನೈತಿಕ ನಿಯಮಗಳನ್ನು ಅವನು ಪಾಲಿಸಬೇಕು.

ದೇವರು ವಿಶಿಷ್ಟ ಆಕಾರದವನಿದ್ದು ನನ್ನಿಂದ ಭಿನ್ನನಿದ್ದಾನೆ.ವಿಶ್ವಕ್ಕಿಂತ ಬೇರೆಯಾಗಿದ್ದಾನೆ. ಈ ಪ್ರಕಾರ ಎಲ್ಲಿಯ ವರೆಗೆ ಭಕ್ತನಿಗೆ ಅನಿಸಹತ್ತುತ್ತದಯೋ ಅಲ್ಲಿಯ ವರೆಗೆ ಅವನು ದ್ವೈತಭಾವದಿಂದ ಆತನನ್ನು ಪೂಜಿಸುತ್ತಾನೆ. ಆದರೆ ಅವನು ಮುಂದೆ ಮುಂದೆ ಈಶ್ವರನನ್ನು ಸಮೀಪಿಸಿದ ಹಾಗೆಲ್ಲ ಈ ತೆರವಾದ ದ್ವೈತಭಾವವನ್ನು ಕಳೆದು 'ಈಶ್ವರನು ಅಗಮ್ಯನು' ಪ್ರಕೃತಿಯಲ್ಲೆಲ್ಲ ವ್ಯಾಪಿಯೂ, ಆತ್ಮಗಳಿಗೆ ಆತ್ಮನೂ, ಜೀವಿಗಳಿಗೆ ಜೀವನೂ ಇದ್ದು, ತಾನು ಮಾತ್ರ ಅವನ ಕೆಲವಂಶಗಳೆಂದು ತಿಳಿಯಹತ್ತುತ್ತಾನೆ. ಅತ್ಯಂತ ಸೂಕ್ಷ್ಮ ಪದಾರ್ಥಗಳಿಂದ ಮನುಷ್ಯನ ವರೆಗಿನ ಎಲ್ಲಪ್ರಾಣಿಗಳೂ, ಭಾಗವು ಪೂರ್ಣಕ್ಕೆ ಸಂಬಂಧಿಸಿದ ಹಾಗೆ ಈಶ್ವರನಿಗೆ ಸಂಬಂಧಿತವಾಗಿವೆ, ಎಂದು ಅವನು ತಿಳಿಯುತ್ತಾನೆ. ಆದ್ದರಿಂದ ಅವನು ಯಾವದೊಂದು ಪ್ರಾಣಿಯನ್ನು ಹಿಂಸಿಸಲಾರನು ಅಥವಾ ಕೊಲ್ಲಲಾರನು. ಭಾಗವೆಲ್ಲವೂ ಭಾಗಿಗೆ ಸಂಬಂಧಿ ಎಂಬದನ್ನು ಚನ್ನಾಗಿ ಅರಿತು 'ನನ್ನದೆಲ್ಲವೂ ನಿನ್ನದೇ' ಎಂದು ಅವನು ಅನ್ನುತ್ತಾನೆ. ಈ ಕ್ಷಣದಿಂದಲೇ ನಿ:ಸೀಮ ನಿಸ್ವಾರ್ಥತೆಯೂ 'ಈಶ್ವರೇಚ್ಛಾ ಬಲೀಯಸೀ' ಎಂಬ ಭಾವನೆಯೂ ಅವನಲ್ಲಿ ನೆಲೆಗೊಳ್ಳುತ್ತವೆ. ಮತ್ತು ನಿನ್ನ ಇಚ್ಛೆಯಂತಾಗಲಿ ಎಂದು ಅವನು ಹೃನ್ಮಧ್ಯದಿಂದ ಉಸುರಲಿಕ್ಕೆ ಶಕ್ತನಾಗುತ್ತಾನೆ. ತನ್ನ ಆತ್ಮವು ಈಶ್ವರನ ಒಂದು ಭಾಗೆಂಬುದನ್ನು

(Thy will be done - Bible) ಎಂದೂ ಮರೆಯುವದಿಲ್ಲ. ಈ ಕ್ಷಣದಿಂದ ಈ ಸಂಬಂಧದ ಸ್ಮರಣೆಯೇ ಅವನ ಭಕ್ತಿಯು. ಅವನ ಪೂಜೆಯಾದರೂ ಬೇರೊಂದು ರೂಪವನ್ನು ಧರಿಸುವದು. ಶರೀರದಿಂದಾಗಲಿ, ಮನಸಿನಿಂದಾಗಲಿ ಮಾಡಿದ್ದೆಲ್ಲವು ಆ ಪರಮಾತ್ಮನ ಪೂಜೆಯೇ ಆಗುವದು. ಯಾಕಂದರೆ ತನ್ನಲ್ಲಿದ್ದ ಶಕ್ತಿಯೆಲ್ಲವು ಆ ಪರಮಾತ್ಮನದೇ ಎಂದು ಅವನಿಗೆ ಮನವರಿಕೆಯಾಗಿರುತ್ತದೆ. ತಿನ್ನುವದು, ಕುಡಿಯವದು, ನಡೆಯುವದು, ಮಾತಾಡುವದು ಪ್ರತಿದಿನದ ಪ್ರತಿಯೊಂದು ಕೆಲಸವು ಭಕ್ತಿಯ ಕರ್ಮವೆನಿಸುವದು. ಆಮೇಲೆ ಅಂತ:ಕರಣಶುದ್ಧಿಯಾಗಿ ಸ್ವಾರ್ಥತೆಯು ಇಲ್ಲದಂತಾಗುತ್ತದೆ.

ಆಮೇಲೆ ಭಕ್ತನು ಎರಡನೇ ತರಗತಿಯನ್ನು ಮುಟ್ಟಿ, ಭಕ್ತಿವೃಕ್ಷದ ಪ್ರೇಮರೂಪಿ ಫಲಗಳನ್ನು ತಿನ್ನಹತ್ತುತ್ತಾನೆ. ಈಗ ಭಕ್ತನಲ್ಲಿಯೂ ಭಕ್ತಿವಸ್ತುವಿನಲ್ಲಿಯೂ ಈ ವರೆಗೆ ಇದ್ದ ಭಿನ್ನತೆಯು ಇಲ್ಲದಂತಾಗುತ್ತದೆ. ಭಕ್ತನೂ, ಭಕ್ತಿಯೂ, ಭಕ್ತಿವಸ್ತುವೂ ಎಲ್ಲವೂ ಐಶ್ವರಿಕ ಸಾಗರದಲ್ಲಿ ಒಂದುಗೂಡುತ್ತವೆ. ಆಮೇಲೆ ಆ ಭಕ್ತನು ಸರ್ವಜ್ಞತ್ವ ಸರ್ವಶಕ್ತತ್ವ, ಸರ್ವಾಂತರ್ಯಾಮಿತ್ವ, ಮೊದಲಾದ ಗುಣಗಳನ್ನು ಹೊರಗೆಡಹುತ್ತ, ಭಕ್ತಿಯೋಗದ ಉಚ್ಚತಮ ಗುರಿಯಾದ ಮೋಕ್ಷವನ್ನು ಮುಟ್ಟುತ್ತಾನೆ.

❖❖

# ೧೦

# ಲೋಕಗಳ ವಿಚಾರ*

ಶಿವಾನುಭವ ೨೧-೧೧, ೧೨, ೨೨-೧

ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಮ್।
ದೇವೀಂ ಸರಸ್ವತೀಂ ಚೈವ ತತೋ ಜಯಮುದೀರಯೇತ್॥

(ಮಹಾಭಾರತ)

ಸ್ವರ್ಗಲೋಕ ಹಾಗು ಮರ್ತ್ಯಲೋಕಗಳ ಮಾತು ಹಲವರ ಬಾಯಿಯಿಂದ ಹೊರಬೀಳುವದು. ಆದರೆ ಬಹು ಸ್ವಲ್ಪ ಜನರು ಮಾತ್ರ ಈ ವಿಷಯದ ನಿಜತ್ವವನ್ನು ತಿಳಿದಿರುವರು. ಸ್ವರ್ಗವೆಂದರೆ ಮೇಲಕ್ಕೆ ಬೊಟ್ಟು ಮಾಡಿ ತೋರಿಸುವದು ಅಭ್ಯಾಸವಾಗಿ ಬಿಟ್ಟಿದೆ. ನಮ್ಮ ದೇಶದ ಹಲವು ಪಂಡಿತರು ಈ ವಿಷಯದ ನಿಜವಾದ ಸಂಗತಿಯನ್ನು ತಿಳಿದಿಲ್ಲ. ತಿಳಿದುಕೊಳ್ಳಲಿಕ್ಕೆ ಪ್ರಯತ್ನವನ್ನೂ ಮಾಡುವದಿಲ್ಲವೆಂಬುವದು ವಿಷಾದಕರ ಸಂಗತಿಯು. ಅಜ್ಜ-ಮುತ್ತಾತರ ಕಾಲದಿಂದ ಸ್ವರ್ಗವೆಂದರೆ ಶೂನ್ಯ(ಆಕಾಶ)ದಲ್ಲಿ ಎಂದು ತಿಳಿದು ಸಂತುಷ್ಟರಾಗಿದ್ದಾರೆ. ನಮ್ಮ ಸಂಸ್ಕೃತ ಗ್ರಂಥಾದಿಗಳನ್ನು ಓದಲು, ಅವರ ಈ ತಿಳುವಳಿಕೆಯು ಭ್ರಮಾತ್ಮಕವೆಂದು ತಿಳಿದು ಬರುವದು. ವೇದ, ಉಪನಿಷತ್ತು, ಪುರಾಣ, ರಾಮಾಯಣ, ಮಹಾಭಾರತ ಹಾಗು ಜೋತಿಷ್ಯಶಾಸ್ತ್ರ ವಿಷಯಕ ಗ್ರಂಥಗಳನ್ನು ಹಲವರು ಓದಿರುವರು. ಆದರೆ ಈ ಎಲ್ಲ ಗ್ರಂಥಗಳನ್ನು ಮನಸ್ಸುಗೊಟ್ಟು ಓದಲು ಸ್ವರ್ಗ ಸಂಬಂಧದ ವಿಶೇಷ ಜ್ಞಾನವುಂಟಾಗುವದು. ಬೇರೆ ಎಲ್ಲ ಗ್ರಂಥಗಳನ್ನು ಬಿಟ್ಟುಗೊಟ್ಟರೂ ಕೇವಲ ಸಂಸ್ಕೃತ ರಾಮಾಯಣ ಮತ್ತು ಮಹಾಭಾರತಗಳಿಂದಲೇ ಈ ವಿಷಯದ ಹಲವು ನಿಜಸಂಗತಿಗಳು ಗೊತ್ತಾಗುವವು. ರಾಮಾಯಣ-ಮಹಾಭಾರತಗಳು ಹಿಂದುಗಳ ದೈನಿಕ ಪಠನೀಯ ಗ್ರಂಥಗಳು. ಇಂತಹ ಬಳಕೆಯ ಗ್ರಂಥಗಳಲ್ಲಿಯ ವಿಷಯಗಳು ನಮಗೆ ತಿಳಿದಿಲ್ಲವೆಂಬುವದು ದುಃಖದ ಸಂಗತಿಯು.

'ಯುಧಿಷ್ಠಿರ ಮಹಾರಾಜನು ನಾಲ್ವರು ತಮ್ಮಂದಿರು ಹಾಗು ದ್ರೌಪದಿಯೊಡನೆ ಕಾಲುನಡಿಗೆಯಿಂದ ಸ್ವರ್ಗಕ್ಕೆ ಹೋದನು. ದಾರಿಯಲ್ಲಿ (ಮೇರುಪರ್ವತದಲ್ಲಿ)ಯುಧಿಷ್ಠಿರನ ಹೊರತು ಎಲ್ಲರೂ ಸತ್ತರು. ಯುಧಿಷ್ಠಿರ ಮಹಾರಾಜನೊಬ್ಬನೇ ಸಶರೀರದಿಂದ ಸ್ವರ್ಗಕ್ಕೆ ಹೋದನು 'ಎಂಬುದನ್ನು ಕನ್ನಡ ಮಹಾಭಾರತವನ್ನು ಓದಿದವರು ಸಹ ಬಲ್ಲರು. ಸ್ವರ್ಗವು ಒಂದು ವೇಳೆ ಅಂತರಿಕ್ಷದಲ್ಲಿ ಇದ್ದುದಾದರೆ ಅಥವಾ ಪ್ರೇತಗಳ ಆವಾಸಭೂಮಿಯಾಗಿದ್ದರೆ

---

* ಈ ಲೇಖನದ ಪೂರ್ವಾರ್ಧವು 'ಲೋಕಗಳ ವಿಚಾರ' ಶೀರ್ಷಿಕೆಯ ಅಡಿಯಲ್ಲಿ ಶಿವಾನುಭವ ೨೧ - ೭, ೮, ೯ರಲ್ಲಿ ಪ್ರಕಟವಾಗಿರುವುದರಿಂದ ಅದನ್ನು ಕೈಬಿಡಲಾಗಿದೆ.

ಯುಧಿಷ್ಠಿರನು ಕಾಲುನಡಿಗೆಯಿಂದ ಸಶರೀರವಾಗಿ ಸ್ವರ್ಗಕ್ಕೆ ಹೋದುದು ಹೇಗೆ? ಸಂಧ್ಯಾವಂದನೆಯ ಮಂತ್ರಗಳಲ್ಲಿ ಸಪ್ತಸ್ವರ್ಗಗಳ ವಿಷಯವು ಹೇಳಲ್ಪಟ್ಟಿರುವದು. ವೈದಿಕಯುಗದಲ್ಲಿ ಈ ಸಪ್ತಸ್ವರ್ಗಗಳು ನಿಜವಾಗಿಯೇ ಇದ್ದವು. ಯುಗ ಪರಿವರ್ತನದೊಡನೆಯೇ ಈ ಎಲ್ಲ ಸ್ವರ್ಗಗಳ ಹೆಸರುಗಳು ಸಹ ಮಾರ್ಪಾಟಾಗಿ ಹೋದವು, ಈ ಸಪ್ತಸ್ವರ್ಗಗಳು:

೧.ಭೂಲೋಕ-ಭಾರತವರ್ಷ, ವೈದಿಕಯುಗದಲ್ಲಿ ಭಾರತವರ್ಷಕ್ಕೆ ದಕ್ಷಿಣ ಕುರುದೇಶವೆಂದೂ ಅನ್ನುತ್ತಿದ್ದರು. ಪೂರ್ವಕಾಲದಲ್ಲಿ ಈ ಭಾರತವರ್ಷವು ವೇನರಾಜನ ಮಗನಾದ ಪೃಥುವಿನ ನಾಮಾನುಸಾರವಾಗಿ ಹಲವು ಸ್ಥಳಗಳಲ್ಲಿ 'ಪೃಥಿವೀ'ಎಂಬ ಹೆಸರಿನಿಂದ ಕರೆಯಲ್ಪಟ್ಟಿದೆ.

೨. ಭುವರ್ಲೋಕ-ಇದಕ್ಕೆ ಕೇತುಮಾಲವರ್ಷವೆಂದೂ ಹೆಸರು ಇದೆ. ಇದು ಮೊದಲು ದೈತ್ಯರಾಜರ ಹಾಗು ಅನಂತರ ವರುಣನ ಆವಾಸಭೂಮಿಯಾಗಿತ್ತು. ಈ ಕೇತುಮಾಲವರ್ಷವು ಈಗಿನ ಅಫಗಾನಿಸ್ತಾನ ಉತ್ತರಭಾಗ, ಇರಾಣ ಹಾಗು ತುರುಷ್ಕ ಮೊದಲಾದ ಸ್ಥಾನಗಳ ವರೆಗೆ ಹಬ್ಬಿತ್ತು.

೩. ಸ್ವರ್ಲೋಕ-ವೈದಿಕ ಕಿಂಪುರುಷವರ್ಷ, ಹರಿವರ್ಷ ಹಾಗು ಇಲಾವೃತವರ್ಷ. ಈ ಸ್ವರ್ಲೋಕವೇ ಈಗಿನ ತಿಬೇಟ(ವೈದಿಕ ಮಾಶಕದೇಶ, ಚೀನ ತಾರ್ತರಿ ಹಾಗು ಮುಂಗೋಲಿಯಾ(ವೈದಿಕ ಮಂಗದೇಶ), ಈ ಮೂರು ವರ್ಷಗಳು ಕ್ರಮದಿಂದ ಶಿವ,ಯಮ,ಹಾಗು ಇಂದ್ರ ಇವರ ವಾಸಸ್ಥಾನವಾಗಿತ್ತು.

೪.ಜನಃಲೋಕ- ಈಗಿನ ದಕ್ಷಿಣ ಸೈಬೇರಿಯಾ, ವೈದಿಕನಾಮ ಭದ್ರಾಶ್ವವರ್ಷ. ಇದು ಸೂರ್ಯನ ಆವಾಸ ಸ್ಥಳವಾಗಿತ್ತು.

೫.ಮಹರ್ಲೋಕ-ವೈದಿಕ ರಮ್ಯಕ ವರ್ಷ. ಈಗಿನ ಚೀನ, ಮಂಚೂರಿಯಾ ಮೊದಲಾದವುಗಳು. ಅದು ಚಂದ್ರನ ಆವಾಸ ಭೂಮಿಯಾಗಿತ್ತು.

೬.ತಪೋಲೋಕ-ಮಧ್ಯ ಸೈಬೇರಿಯಾ, ವೈದಿಕ ಹಿರಣ್ಮಯ ವರ್ಷ. ಇದೇ ವಿಷ್ಣುವಿನ ವೈಕುಂಠವು.

೭. ಸತ್ಯಲೋಕ-ವೈದಿಕ ನಾಮ, ಉತ್ತರ ಕುರುವರ್ಷ. ಈಗಿನ ಉತ್ತರ ಸೈಬೇರಿಯಾ, ಮೇರುದೇಶ ಹಾಗು ಗ್ರೀನಲ್ಯಾಂಡ. ಇದೇ ಚತುರ್ಮುಖನೆಂಬ ಪ್ರಜಾಪತಿ ಬ್ರಹ್ಮನ ಬ್ರಹ್ಮಲೋಕವು.

**(ಇತಿ ವಾಯುಪುರಾಣ ೩೪ನೆಯ ಅಧ್ಯಾಯ)**

ಈ ಭಾರತವು ನಮ್ಮ ಮಾತೃಭೂಮಿಯು, ಪಿತೃಭೂಮಿಯಲ್ಲವೆಂದು ವೇದಗಳಿಂದ ಗೊತ್ತಾಗುವದು.

"ದ್ಯೌ ನಃ ಪಿತಾ ಜನಿತಾ ನಾಭಿರತ್ರ ಬಂಧನಂ ಮಾತಾ
ಪೃಥಿವೀ ಮಹೀಯಮ್"(ಋಗ್ವೇದ ೧೦, ೧೦, ೪)

"ದ್ಯೌ ಪಿತಾ ಪೃಥಿವೀ ಮಾತಾ ಪಿತರಂಚ ದ್ಯುಲೋಕಮಪಿ" (ಮಹೀಧರ ಭಾಷ್ಯ)

"ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ"

ಅರ್ಥಾತ್ ನಮ್ಮ ಪಿತೃಭೂಮಿಯು ಸ್ವರ್ಗಲೋಕವು ಮತ್ತು ನಮ್ಮ ವಾಸಸ್ಥಾನವು ಭಾರತವರ್ಷವು. ವಸ್ತುತಃ ಭಾರತವರ್ಷವು ಆರ್ಯರ ಉಪನಿವೇಶವಾಗಿತ್ತು. ಭಾರತ ವರ್ಷದಲ್ಲಿಯ ಆರ್ಯರು ಪಿತೃಭೂಮಿಯ ಸಂದರ್ಶನಕ್ಕೋಸುಗ ಪಿತೃಲೋಕಕ್ಕೆ ಅರ್ಥಾತ್ ಸ್ವರ್ಗಲೋಕಕ್ಕೆ ಹೋಗುತ್ತಿದ್ದರು. ಈ ಪಿತೃಲೋಕವು ಪುಣ್ಯಾತ್ಮರ ವಾಸಸ್ಥಾನವಾಗಿತ್ತು. ಹಲವರು ಶೇಷಾಯುಷ್ಯದಲ್ಲಿ ಅಲ್ಲಿಗೆ ಹೋಗಿ ಬ್ರಹ್ಮಚಿಂತನೆಯಲ್ಲಿ ಕಾಲಕಳೆಯುತ್ತಿದ್ದರು. ಕೆಲ ಕೆಲವರು ತಮ್ಮ ಜ್ಞಾತಿ ಕುಟುಂಬಗಳನ್ನು ನೋಡುವದಕ್ಕೋಸುಗ ಅಲ್ಲಿಗೆ ಹೋಗುತ್ತಿದ್ದರು. ಮತ್ತು ಕೆಲ ಕೆಲವರು ಬಹ್ಮ, ಶಿವ ಮೊದಲಾದ ದೇವತೆಗಳನ್ನು ನೋಡಲಿಕ್ಕೂ ಹೋಗುತ್ತಿದ್ದರು. ಮಹಾಭಾರತ(ಆದಿಪರ್ವ ೧೨೦ನೆಯ ಅಧ್ಯಾಯ)ದಲ್ಲಿ ಇದ್ದುದೇನಂದರೆ-ಮಹಾರಾಜ ಪಾಂಡುವು ಪತ್ನಿಯರೊಡನೆ ಹಿಮಾಲಯದ ಅಪರ

ಪೃಷ್ಠದಲ್ಲಿ ಶತಶೃಂಗ ಶೈಲದಲ್ಲಿ ತಪಸ್ಸು ಮಾಡುತ್ತಿರುವಾಗ, ಒಂದು ದಿನ ಅಮಾವಾಸ್ಯಾ ತಿಥಿಯಲ್ಲಿ ಅಲ್ಲಿ ಕೆಲವು ಋಷಿಗಳು ಉತ್ತರದಿಕ್ಕಿಗೆ ಹೋಗುತ್ತಿರುವದನ್ನು ನೋಡಿ ಕೇಳಿದನು-"ನೀವು ಎಲ್ಲಿಗೆ ಹೋಗುವಿರಿ?"ಋಷಿಗಳು ಉತ್ತರ ಕೊಟ್ಟರು-"ಬ್ರಹ್ಮಲೋಕದಲ್ಲಿ ದೇವತೆಗಳ, ಋಷಿಗಳ ಹಾಗು ಪಿತೃಲೋಕವಾಸೀ ಮಹಾತ್ಮರ ಒಂದು ದೊಡ್ಡ ಸಭೆಯಾಗುವದು; ನಾವು ಅಲ್ಲಿ ಪ್ರಜಾಪತಿಯನ್ನು ನೋಡುವದಕ್ಕೋಸುಗ ಹೋಗುವೆವು."

"ಅಮಾವಾಸ್ಯಾಸ್ತು ಸಹಿತಾ ಋಷಯಃ ಸಂಶಿತವ್ರತಾಃ।
ಬ್ರಹ್ಮಾಣಂ ದ್ರಷ್ಟುಕಾಮಾಸ್ತೇ ಸಂಪ್ರತಸ್ಥುರ್ಮಹರ್ಷಯಃ॥
ಸಂಪ್ರಯಾತಾನೃಷೀನ್ ದೃಷ್ಟ್ವಾ ಪಾಂಡುರ್ವಚನಮಬ್ರವೀತ್।
ಭವನ್ತಃ ಕ್ವ ಗಮಿಷ್ಯನ್ತಿ ಬ್ರೂತ ಮೇ ದೇವತಾ ವರಾಃ॥

ಋಷಿ ಉವಾಚ:

ಸಮವಾಯೋ ಮಹಾನದ್ಯ ಬ್ರಹ್ಮಲೋಕೇ ಭವಿಷ್ಯತಿ
ದೇವಾನಾಂ ಚ ಋಷೀಣಾಂ ಚ ಪಿತೃಣಾಂ ಚ ಮಹಾತ್ಮನಾಮ್
ವಯಂ ತತ್ರ ಗಮಿಷ್ಯಾಮೋ ದ್ರಷ್ಟುಕಾಮಾಃ ಪ್ರಜಾಪತಿಮ್॥"

(ಆದಿಪರ್ವ ೧೨೦ನೆಯ ಅಧ್ಯಾಯ)

ಮತ್ತು ಸಭಾಪರ್ವದಲ್ಲಿ ಅರ್ಜುನದಿಗ್ವಿಜಯ ಅಧ್ಯಾಯದಲ್ಲಿ ವರ್ಣಿತವಾದುದು: ಅರ್ಜುನನು ಉತ್ತರದೇಶವನ್ನು ಗೆಲ್ಲಲಿಕ್ಕೆ ಹೋದನು.ಯುಧಿಷ್ಠಿರ ಮಹಾರಾಜನು ರಾಜಸೂಯಯಜ್ಞದ ಆಯೋಜನೆಯನ್ನು ಮಾಡುವನು. ಎಲ್ಲ ದೇಶದ ರಾಜರುಗಳಿಂದ ಕಪ್ಪವನ್ನು ತರಬೇಕಾಗುವದು. ಅರ್ಜುನನು ಹಿಮಾಲಯವನ್ನು ದಾಟಿ, ಮತ್ತು ಉತ್ತರ ದೇಶವನ್ನು ಗೆಲ್ಲಲು ಹೋದನು. ಮೊದಲು ಶ್ವೇತಪರ್ವತವನ್ನು ದಾಟಿ ಕುಬೇರನ ಪುತ್ರನಿಂದ ರಕ್ಷಿತವಾದ ರಾಜ್ಯವನ್ನು ಆಕ್ರಮಣಮಾಡಿ ಅವನಿಂದ ಕಪ್ಪವನ್ನು ತೆಗೆದುಕೊಂಡನು. ಅನಂತರ ಮಾನಸ ಸರೋವರ ತೀರದಲ್ಲಿದ್ದ ಗಂಧರ್ವ ಮತ್ತು ಅಪ್ಸರಾ ಇವರನ್ನು ಸೋಲಿಸಿ, ಹರಿವರ್ಷವನ್ನು ದಾಟಿ ಉತ್ತರ ಕುರುದೇಶದಲ್ಲಿ ಹೋದನು. ಅಲ್ಲಿ ದೇವತೆಗಳು ವಾಸಮಾಡುತ್ತಿದ್ದರು. ಅವರು ಯುದ್ಧಮಾಡದೆಯೇ ಕರವನ್ನು ಕೊಟ್ಟು ಒಡೆತನವನ್ನು ಒಪ್ಪಿಕೊಂಡರು.

"ಸ ಶ್ವೇತಪರ್ವತಂ ವೀರಃ ಸಮತಿಕ್ರಮ್ಯ ವೀರ್ಯವಾನ್।
ದೇಶಂ ಕಿಂಪುರುಷವರ್ಷಂ ದ್ರುಮಪುತ್ರೇಣ ರಕ್ಷಿತಮ್॥
++ ++ ++
ಸರೋ ಮಾನಸಮಾಸಾದ್ಯ ಹಾಟಕಾನಭಿತಃ ಪ್ರಭುಃ।
ಗಂಧರ್ವರಕ್ಷಿತಂ ದೇಶಮಜಯತ್ ಪಾಂಡವಸ್ತತ॥
++ ++ ++ ++
ಉತ್ತರಂ ಹರಿವರ್ಷನ್ತು ಸಮಾಸಾದ್ಯ ಸ ಪಾಂಡವಃ।
ಇಯೇಷ ಜೇತುಂ ತಂ ದೇಶಂ ಪಾಕಶಾಸನನಂದನಃ॥
ತತ ಏನಂ ಮಹಾವೀರ್ಯಂ ಮಹಾಕಾಯಾ ಮಹಾಬಲಾಃ।

++ ++ ++ ++

ಉತ್ತರಾಃ ಕುರವೋ ಹ್ಯೇತೇ ನಾತ್ರ ಯುದ್ಧಂ ಪ್ರವರ್ತತೇ॥

++ ++ ++ ++

ಅನಂತರ ವನಪರ್ವದಲ್ಲಿ ಕಂಡು ಬರುವದೇನಂದರೆ, ಅರ್ಜುನನು ಅಸ್ತ್ರವಿದ್ಯೆಯನ್ನು ಕಲಿಯುವದಕ್ಕೋಸುಗ ವ್ಯಾಸದೇವನ ಸಲಹೆಯಂತೆ ಸ್ವರ್ಗಲೋಕದಲ್ಲಿ ಇಂದ್ರಾಲಯಕ್ಕೆ ಹೋದನು. ಹೋಗುವಾಗ ಮಾರ್ಗದಲ್ಲಿ ಹಿಮಾಲಯದ ಉತ್ತರದಲ್ಲಿ ಶ್ವೇತಪರ್ವತ(ಕೈಲಾಸಪರ್ವತ)ದಲ್ಲಿ ಶಿವನಿಂದ ಪಾಶುಪತ ಅಸ್ತ್ರವನ್ನು ಸಂಪಾದನೆ ಮಾಡಿದನು. ಹಾಗು ವರುಣನಿಂದಲೂ ಹಲವು ದಿವ್ಯಾಸ್ತ್ರಗಳನ್ನು ಸಂಪಾದಿಸಿ, ಅನಂತರ ಇಂದ್ರಾಲಯಕ್ಕೆ ಹೋದನು. ಅರ್ಜುನನು ಕಾಲುನಡಿಗೆಯಿಂದಲೇ ಹೋಗಿದ್ದನು. ಸ್ವರ್ಗಕ್ಕೆ ಹೋಗಬೇಕಾದರೆ ಸ್ವರ್ಗಪುರಿಯ ಹತ್ತಿರದಲ್ಲಿದ್ದ ಎಲ್ಲ ಸ್ಥಳಗಳ ಉಲ್ಲೇಖವು ದೊರೆಯುತ್ತದೆ. ಅವೆಲ್ಲವು ಈಗ ಸಹ ಇರುತ್ತವೆ. ೧-೨ ಸ್ಥಾನಗಳ ಹೆಸರು ಮಾತ್ರ ಪರಿವರ್ತನವಾಗಿರುತ್ತವೆ. ಇದರಿಂದ ದೇವತೆಗಳ ಆವಾಸಭೂಮಿಯಾದ ಸ್ವರ್ಗವು ಭೂಮಿಯ ಮೇಲೆಯೇ ಇದ್ದಿತೆಂದೂ ಆಕಾಶದಲ್ಲಿದ್ದಿಲ್ಲವೆಂದೂ ಗೊತ್ತಾಗುತ್ತದೆ.

ಅನಂತರ ಮಹಾಪ್ರಸ್ಥಾನಿಕ ಪರ್ವದಲ್ಲಿ: ಮಹಾರಾಜ ಯುಧಿಷ್ಠಿರನು ನಾಲ್ವರು ತಮ್ಮಂದಿರು ಹಾಗು ದ್ರೌಪದಿಯೊಡನೆ ಕಾಲುನಡಿಗೆಯಿಂದಲೇ ಸ್ವರ್ಗಕ್ಕೆ ಹೋದನು. ಮೊದಲು ಮಹಾಗಿರಿ ಹಿಮಾಲಯವನ್ನು ದಾಟಿ ವಾಲುಕಾ ಸಮುದ್ರದಲ್ಲಿ ಹೋದರು. ಈ ವಾಲುಕಾ ಸಮುದ್ರವು ಚೀನದೇಶದಲ್ಲಿಯ ಗೋಬೀ ಎಂಬ ಮರುಭೂಮಿಯು. ಅನಂತರ ಮೇರುಪರ್ವತ(ಗೋಬೀ ಮರುಭೂಮಿಯು ಉತ್ತರದಲ್ಲಿದ್ದ ಅಲ್ತಾಯಿಪರ್ವತ, ಉತ್ತರ ಮೇರುವಿನಲ್ಲಿಯ ಸುಮೇರು ಪರ್ವತವಲ್ಲ) ನಯನಗೋಚರವಾಯಿತು. ಈ ಪರ್ವತದಲ್ಲಿಯೇ ಕೆಲಕಾಲದ ನಂತರ ದ್ರೌಪದಿ, ಸಹದೇವ, ನಕುಲ, ಅರ್ಜುನ,ಭೀಮ ಇವರು ಮೃತ್ಯುವಿಗೊಳಗಾದರು. ಕೇವಲ ಯುಧಿಷ್ಠಿರನೊಬ್ಬನೇ ಮೇರುಪರ್ವತವನ್ನು ದಾಟಿ ಮುಂದೆ ಉತ್ತರಕ್ಕೆ ಹೋಗುತ್ತ ಹೋಗುತ್ತ ಬ್ರಹ್ಮಲೋಕಕ್ಕೆ ಹೋದನು. ಸ್ವರ್ಗವು ಭೂಮಿಯಲ್ಲಿ ಇರದೆ ಆಕಾಶದಲ್ಲಿ ಇದ್ದುದಾದರೆ, ಯುಧಿಷ್ಠಿರನು ಬ್ರಹ್ಮಲೋಕಕ್ಕೆ ಹೋದುದು ಹೇಗೆ?ಮತ್ತೊಂದು ಮಾತು-ಈ ಸ್ವರ್ಗಭೂಮಿಯು ಹಿಮಾಲಯದ ಉತ್ತರದಲ್ಲಿಯೇ ಇತ್ತು. ಯಾಕಂದರೆ ಸ್ವರ್ಗಲೋಕಕ್ಕೆ ಹೋದವರೆಲ್ಲರೂ ಹಿಮಾಲಯಪರ್ವತವನ್ನು ದಾಟಿಯೇ ಹೋಗಿರುವರು.

ಯುಧಿಷ್ಠಿರ ಮಹಾರಾಜನು ಬ್ರಹ್ಮಲೋಕದಲ್ಲಿ ಹೋಗಿ, ಗಂಗಾಸ್ನಾನವನ್ನು ಮಾಡಿದನು. ಹಾಗು ಅಲ್ಲಿ ಬ್ರಹ್ಮರ್ಷಿಗಳೊಡನೆ ವಾಸಮಾಡಿದ ತರುವಾಯ, ಶರೀರತ್ಯಾಗವನ್ನು ಮಾಡಿದನೆಂಧು ಹೇಳಿದೆ. ಇದು ಯಾವ ಗಂಗೆಯು?ಹಿಮಾಲಯದಲ್ಲಿಯ ಗೋಮುಖೀ ಎಂಬ ಸ್ಥಾನದಿಂದ ಹೊರಟು ಭಾರತವರ್ಷದ ಮಧ್ಯದಿಂದ ಹರಿದು ಬಂಗಾಲ ಉಪಸಾಗರಕ್ಕೆ ಕೂಡುವ ಗಂಗೆಯನ್ನು ನಾವು ಬಲ್ಲೆವು. ಆದರೆ ಯುಧಿಷ್ಠಿರನು ಯಾವ ಗಂಗೆಯಲ್ಲಿ ಸ್ನಾನ ಮಾಡಿದ್ದನು? ಭಾಸ್ಕರಾಚಾರ್ಯರು ತಮ್ಮ ಸಿದ್ಧಾಂತ ಶಿರೋಮಣಿ ಗ್ರಂಥದ ಭುವನಕೋಶ ಅಧ್ಯಾಯದಲ್ಲಿ ಹೇಳಿದ್ದೇನಂದರೆ-

"ವಿಷ್ಣುಪದೀ ವಿಷ್ಣುಪದಾತ್ ಪತಿತಾಮೇಕಾ ಚತುರ್ದ್ಧಾಸ್ಯಾತ್। ವಿಷ್ಕಂಭಾಚಲ ಮಸ್ತಕಾಸ್ತಸವಃ ಸಂಗತಾ ಗತವಿಯತಾ। ಸೀತಾಖ್ಯಾ ಭದ್ರಾಶ್ವಂ ಸಾಲಕಾನಂದಾಚ ಭಾರತ ವರ್ಷಮ್।ಚಕ್ಷುಶ್ಚ ಕೇತುಮಾಲಂ ಭದ್ರಾಖ್ಯಾಚೋತ್ತರಾನ್ ಕುರೂನ್ ಯಾತಾ"

ಅರ್ಥಾತ್ ಮೇರು ಅಥವಾ ಅಲ್ತಾಯಿಪರ್ವತದ ದಕ್ಷಿಣದಲ್ಲಿ ನಿಷ್ಕಂಭಪರ್ವತದಲ್ಲಿಯ ಸರೋವರದಿಂದ ಗಂಗೆಯು ನಾಲ್ಕು ಭಾಗಗಳಾಗಿ ಹೊರಗೆ ಬರುತ್ತದೆ. ಭದ್ರಾಶ್ವವರ್ಷದಲ್ಲಿ ಅಥವಾ ದಕ್ಷಿಣ ಸೈಬೇರಿಯಾದಲ್ಲಿ ಹರಿಯುವ ಪ್ರವಾಹದ ಹೆಸರು ಸೀತೆ, ಭಾರತವರ್ಷದಲ್ಲಿ ಹರಿಯುವ ಪ್ರವಾಹವು ಅಲಕನಂದಾ,

ಕೇತುಮಾಲಾವರ್ಷದಲ್ಲಿ ಹರಿಯುವ ಪ್ರವಾಹವು ಚಕ್ಷು, ಹಾಗು ಉತ್ತರ ಕುರುದೇಶದಲ್ಲಿ ಹರಿಯುವ ಪ್ರವಾಹವು ಭದ್ರಾ. ಯುಧಿಷ್ಠಿರ ಮಹಾರಾಜನು ಇದೇ ಭದ್ರಾ ಎಂಬ ಗಂಗೆಯಲ್ಲಿ ಸ್ನಾನಮಾಡಿದನು. ಶ್ರೀಮತ್ ಸ್ವಾಮೀ ಯೋಗಾನಂದಸರಸ್ವತಿಗಳವರು ಭದ್ರೆಯ ಈಗಿನ ಹೆಸರು "ಇಸಿಸಿ" ಎಂದು ಹೇಳುವರು. ಈ ನದಿಯು ಈಗ ಉತ್ತರ ಸೈಬೇರಿಯಾದಲ್ಲಿ ಹರಿದು ಉತ್ತರ ಮೇರು ಸಮುದ್ರಕ್ಕೆ ಕೂಡುತ್ತದೆ. ಭದ್ರಾಶ್ವವರ್ಷ ಅಥವಾ ದಕ್ಷಿಣ ಸೈಬೇರಿಯಾದಲ್ಲಿ ಹರಿಯುವ ಪ್ರವಾಹ ಸೀತಾದ ಈಗಿನ ಹೆಸರು "ಆಮೂರ". ಈ ನದಿಯು ಅಲ್ತಾಯಿ(ವೈದಿಕ ಇಲಾಸ್ಥಾಯಿ) ಪರ್ವತದಲ್ಲಿ ಹುಟ್ಟಿ ಓಬಿಟಸ್ಕ ಸಮುದ್ರಕ್ಕೆ ಹೋಗಿ ಕೂಡುತ್ತದೆ. ಕೇತುಮಾಲವರ್ಷದಲ್ಲಿ ಹರಿಯುವ ಪ್ರವಾಹ "ಚಕ್ಷು"ವಿನ ಈಗಿನ ಹೆಸರು ಅಕ್‌ಶಾಸ್. ಚಕ್ಷುವಿನ ಮತ್ತೊಂದು ಹೆಸರು ಅಕ್ಷಿ ಅಥವಾ ಅಕ್‌ಷಿ ಯಿಂದಲೇ ಈ ಅಕ್‌ಶಾಸ್ ಹೆಸರಿನ ರಚನೆಯಾಗಿದೆ. ಈ ಅಕ್‌ಶಾಸ್ ತುರ್ಕೇಸ್ಥಾನ ಹಾಗು ಬೊಖಾರಾ ಪ್ರದೇಶದಿಂದ ಹರಿದು ಆರಲ್ ಸಮುದ್ರಕ್ಕೆ ಕೂಡುತ್ತದೆ. ಆರಲ್‌ಸಮುದ್ರ ಅಥವಾ ಆರಲ್ ಸರೋವರದ ವೈದಿಕ ಹೆಸರು "ಆರಹ್ರದ" (ಕೌಷಿತಕಿ ಬ್ರಾಹ್ಮಣೋಪನಿಷತ್ತು, ೧ನೆಯ ಅಧ್ಯಾಯ). ಭಾರತವರ್ಷದಲ್ಲಿ ಹರಿಯುವ ಅಲಕನಂದೆಯ ಮೂಲಪ್ರವಾಹವು ತಿಬೇಟದೇಶವನ್ನು ದಾಟಿ, ಹಿಮಾಲಯದಲ್ಲಿ ಸೇರಿ ಗೋಮುಖೀ ಎಂಬ ಸ್ಥಾನದಲ್ಲಿ ಪರ್ವತವನ್ನು ಒಡೆದು ಹೊರಬೀಳುವದು. ಹಾಗು ಅಲ್ಲಿಂದ ತಗ್ಗು ಪ್ರದೇಶದಲ್ಲಿ ಹರಿದು ಬಂಗಾಲದ ಉಪಸಾಗರಕ್ಕೆ ಕೂಡುವದು. ಈ ನಾಲ್ಕು ನದಿಗಳು ಒಂದೇ ಸ್ಥಳದಲ್ಲಿ ಹುಟ್ಟಿದ್ದರಿಂದ ಹಾಗು ಇವುಗಳ ನೀರು ಒಳ್ಳೇ ರುಚಿಕರವೂ, ಸ್ವಾಸ್ಥಗೋಸುಗ ಅತ್ಯಂತ ಅನುಕೂಲವೂ ಇದ್ದುದರಿಂದ, ಇವುಗಳು ಒಂದೇ ಹೆಸರಿ(ಗಂಗೆ)ನಿಂದ ಕರೆಯಲ್ಪಟ್ಟಿವೆ. ಕೌಷಿತಕಿ ಬ್ರಾಹ್ಮಣೋಪನಿಷತ್ತಿನಲ್ಲಿ ಭದ್ರಾಗಂಗೆಯ ಹೆಸರು "ಪಿಜರಾ" ಎಂದು ಹೇಳಿದೆ. ಬೇರೆ ಮೂರು ಗಂಗೆಗಳ ಈ ಗುಣ ಸಂಬಂಧದಿಂದ ವಿಶೇಷವಾಗಿ ಏನನ್ನು ಹೇಳಲು ಶಕ್ಯವಾಗದಿದ್ದರೂ, ಭಾರತವರ್ಷದಲ್ಲಿಯ ಗಂಗೆಯು ವಾಸ್ತವಿಕವಾಗಿ "ಪಿಜರಾ" ಎಂಬ ವಿಷಯದಲ್ಲಿ ಯಾವ ಸಂದೇಹವೂ ಇಲ್ಲ. ಸ್ವರ್ಗನದಿ ಗಂಗೆಯು ನಾಲ್ಕು ಭಾಗಗಳಾಗಿ ವಿಭಕ್ತವಾಗಿ, ನಾಲ್ಕು ಬೇರ ಬೇರೆ ದೇಶಗಳೊಳಗಿಂದ ಹರಿದು ಸಮುದ್ರಕ್ಕೆ ಕೂಡುವ ಸಂಗತಿಯು ವಿಷ್ಣುಪುರಾಣದಲ್ಲಿಯೂ ಸ್ಪಷ್ಟವಾಗಿಯೇ ಬರೆದಿರುತ್ತದೆ (೨ ನೆಯ ಖಂಡದ ೨ ನೇ ಅಧ್ಯಾಯ).

ಬ್ರಹ್ಮಲೋಕ, ಇಂದ್ರಲೋಕ, ವರುಣಲೋಕ, ಯಮಲೋಕ ಮೊದಲಾದವುಗಳ ಸ್ಥಾನನಿರ್ಣಯದ ಸಂಬಂಧದಿಂದ ಪುರಾಣಕಾರರು ಏನು ಹೇಳಿರುವರೆಂಬುದನ್ನು ಈಗ ನೋಡೋಣ. ಮಹಾಭಾರತದ ಭೀಷ್ಮಪರ್ವದಲ್ಲಿ ಬರೆದುದು: ಹಿಮಾಲಯದ ಉತ್ತರದಿಕ್ಕಿನಲ್ಲಿಯೇ ಹೇಮಕೂಟಪರ್ವತವು, ಹೇಮಕೂಟದ ಆಚೆಗೆ ಹರಿವರ್ಷವು, (ಹೇಮಕೂಟದ ಮತ್ತೊಂದು ಹೆಸರು ಕೈಲಾಸಪರ್ವತ ಅಥವಾ ಶ್ವೇತಪರ್ವತ) ಹೇಮಕೂಟದೊಡನೆಯೇ ಉತ್ತರಕ್ಕೆ ನಿಷಧ,ನೀಲ ಮತ್ತು ಮಾಲ್ಯವಾನ್ ಪರ್ವತಗಳು. ಮಾಲ್ಯವಾನದ ಆಚೆಯಲ್ಲಿ ಗಂಧಮಾದನ ಪರ್ವತವು. ಮಾಲ್ಯವಾನ್ ಮತ್ತು ಗಂಧಮಾದನ ಪರ್ವತಗಳ ಮಧ್ಯದಲ್ಲಿದ್ದ ಪರ್ವತವೇ ಮೇರುಪರ್ವತವು. ಈ ಮೇರುಪರ್ವತದ ಪೂರ್ವಕ್ಕೆ ಭದ್ರಾಶ್ವವರ್ಷ, ಪಶ್ಚಿಮಕ್ಕೆ ಕೇತುಮಾಲವರ್ಷ ಹಾಗು ಉತ್ತರಕ್ಕೆ ಉತ್ತರಕುರುವರ್ಷ ಮತ್ತು ಈ ಎಲ್ಲ ವರ್ಷ(ದೇಶ)ಗಳಲ್ಲಿ ದೇವತೆ, ಗಂಧರ್ವ,ಅಸುರ, ಕಿನ್ನರ ಹಾಗು ಅಪ್ಸರರು ವಾಸಮಾಡುತ್ತಾರೆ. ಇಲ್ಲಿಯೇ ಬ್ರಹ್ಮ,ಶಿವ, ಇಂದ್ರ ಮೊದಲಾದವರೂ ವಾಸಿಸುವರು.

"ತತ್ರ ದೇವಗಣಾ ರಾಜನ್ ಗಂಧರ್ವಾಸುರರಾಕ್ಷಸಾಃ।
ಅಪ್ಸರಾಗಣಸಂಯುಕ್ತಾಃ ಶೈಲೇ ಕ್ರೀಡನ್ತಿ ಸರ್ವದಾ॥

ತತ್ರ ಬ್ರಹ್ಮಾ ಚ ರುದ್ರಶ್ಚ ಶಕ್ರಶ್ಚಾಪಿ ಸುರೇಶ್ವರಾಃ।
ಸಮೇತ್ಯ ವಿವಿಧೈರ್ಯಜ್ಞೈರ್ಯಜನ್ತೇನೇಕ ದಕ್ಷಿಣೈಃ"॥

-ಭೀಷ್ಮಪರ್ವ-೬ನೆಯ ಅಧ್ಯಾಯ

ಭಾಸ್ಕರಾಚಾರ್ಯನು ತನ್ನ ಸಿದ್ಧಾಂತ ಶಿರೋಮಣಿ ಗ್ರಂಥದಲ್ಲಿ ಹೇಳಿರುವನು-ನಿಷಧ,ನೀಲ, ಗಂಧಮಾದನ ಮತ್ತು ಮಾಲ್ಯವಾನ್ ಪರ್ವತ ಪರಿವೇಷ್ಟಿತವಾದುದು ಇಲಾವೃತ ವರ್ಷವು. ಈ ಇಲಾವೃತ ವರ್ಷದ ಮಧ್ಯದಲ್ಲಿ ಮೇರುಗಿರಿಯು. ಇದೇ ಕನಕರತ್ನಮಯ ತ್ರಿದಶಾಲಯ ಹಾಗು ಬ್ರಹ್ಮನ ಜನ್ಮಭೂಮಿಯು- ಪುರಾಣವಿದರು ಹೀಗೆಯೇ ಹೇಳಿರುವರು.

"ನಿಷಧ ನೀಲ ಸುಗಂಧ ಸುಮಾಲ್ಯಕೈಃ
ಅಲಮಿಲಾವೃತ ಮಾತೃತಮಾವಭೌ।
ಇಹ ಹಿ ಮೇರುಗಿರಿ ಕಿಲ ಮಧ್ಯಗಃ
ಕನಕ ರತ್ನಮಯಸ್ತ್ರಿದಶಾಲಯಃ,
ದ್ರುಹಿಣ ಜನ್ಮಕಾಪದ್ಮಜ ಕರ್ಣಿಕಾ
ಇತಿ ಚ ಪುರಾಣ ವಿದೋಽಮುಮವರ್ಣಯನ್॥"

(ಸಿದ್ಧಾಂತ ಶಿರೋಮಣಿ-ಭುವನಕೋಶಾಧ್ಯಾಯ ೩೦-೩೧)

ಅತ ಏವ ಈ ಇಲಾವೃತ ವರ್ಷದಲ್ಲಿಯ ಮೇರುಪರ್ವತವೇ ತ್ರಿದಶಾಲಯ ಅಥವಾ ದೇವತೆಗಳ ಆವಾಸಭೂಮಿಯಾಗಿತ್ತೆಂದು ಗೊತ್ತಾಗುತ್ತದೆ. ಈ ಇಲಾವೃತ ವರ್ಷದ ಸಂಬಂಧದಿಂದ ವಾಯುಪುರಾಣದಲ್ಲಿ ಕೆಳಗಿನಂತೆ ವರ್ಣನೆಯುಂಟು:

ವೇದ್ಯರ್ದ್ಧಂ ದಕ್ಷಿಣೇ ತ್ರೀಣಿ ವರ್ಷಾಣಿ ತ್ರೀಣಿ ಚೋತ್ತರೇ।
ತಯೋರ್ಮಧ್ಯೇ ತಂ ವಿಜ್ಞೇಯಂ ಮೇರು ಮಧ್ಯಮಿಲಾವೃತಮ್॥
++ ++ ++ ++
ತತ್ರ ದೇವಗಣಾಃ ಸರ್ವೇ ಗಂಧರ್ವೋರಗ ರಾಕ್ಷಸಾಃ।
ಶೈಲರಾಜೇ ಪ್ರದೃಶ್ಯನ್ತೇ ಶುಭಾಶ್ಚಾಪ್ಸರಸಾಂ ಗಣಾಃ॥
ಸ ತು ಮೇರು ಪರಿವೃತೋ ಭುವನೈರ್ಭೂತ ಭಾವನಃ॥

(ವಾಯುಪುರಾಣ, ೩೪ನೆಯ ಅಧ್ಯಾಯ)

ಅರ್ಥಾತ್ ವಾಯುಪುರಾಣವು ಹೇಳುವದೇನಂದರೆ, ವೇದೀ ಅಥವಾ ಇಲಾವೃತ ವರ್ಷದ ದಕ್ಷಿಣದಲ್ಲಿ ಮೂರು ವರ್ಷಗಳು-ಹರಿವರ್ಷ,ಕಿಂಪುರುಷವರ್ಷ ಹಾಗೂ ಭಾರತವರ್ಷ. ಮತ್ತು ಉತ್ತರದಲ್ಲಿ ಮೂರು ವರ್ಷಗಳು-ಭದ್ರಾಶ್ವವರ್ಷ,ಹಿರಣ್ಮಯವರ್ಷ ಹಾಗು ಉತ್ತರ ಕುರುವರ್ಷ. ಸುತರಾಂ ಇಲಾವೃತ ವರ್ಷವು ನಟ್ಟನಡುವೆ ಮತ್ತು ಅಲ್ಲಿಯೂ ಮೇರುಪರ್ವತವು ಇರುವದು.ಈ ಮೇರು ಪರ್ವತದಲ್ಲಿ ದೇವತೆ, ಬ್ರಹ್ಮ, ವಿಷ್ಣು, ಚಂದ್ರ ಮೊದಲಾದವರು, ಗಂಧರ್ವ, ರಾಕ್ಷಸ, ಹಾಗು ಅಪ್ಸರರು ವಾಸಮಾಡುತ್ತಾರೆ. ಹಾಗು ಈ ಸ್ಥಾನವೇ ಪೃಥ್ವಿಯಲ್ಲಿಯ ಎಲ್ಲ ಜೀವಿಗಳ ಉತ್ಪತ್ತಿಸ್ಥಾನವು. ಮೇರುಪರ್ವತವು ಈ ಇಲಾವೃತ ವರ್ಷದಲ್ಲಿ ಇದ್ದುದರಿಂದ ಇದರ ಮತ್ತೊಂದು ಹೆಸರು ಇಲಾಸ್ಥಾಯೀ ಪರ್ವತವೆಂದು. ಈ ಇಲಾಸ್ಥಾಯಿಂದಲೇ ಈಗಿನ 'ಅಲ್ತಾಯಿ' ಹೆಸರು ಹುಟ್ಟಿರುತ್ತದೆ.

ಅಲ್ತಾಯಿ ಪರ್ವತಕ್ಕೆ ಚೀನೀಯ ಹೆಸರು 'ಉಲಿಯಾ ಸುತಾಯಿ' ಎಂದು ಇದೆ. ವಾಯುಪುರಾಣವು ಮತ್ತೂ ಹೇಳುವದು, ಉತ್ತರ ಕುರುದೇಶವು ಉತ್ತರ ಸಮುದ್ರದ ದಕ್ಷಿಣದಲ್ಲಿ ಇರುತ್ತದೆಂದು.

"ಉತ್ತರಸ್ಯ ಸಮುದ್ರಸ್ಯ ಸಮುದ್ರಾನ್ತೇ ಚ ದಕ್ಷಿಣೇ।
ಕುರವಸ್ತತ್ರ ತದ್ವರ್ಷಂ ಪುಣ್ಯಂ ಸಿದ್ಧನಿಷೇವಿತಮ್॥

-೪೫ನೆಯ ಅಧ್ಯಾಯ.

ಈ ಉತ್ತರದೇಶವು ಪುಣ್ಯಭೂಮಿಯು ಹಾಗು ಸಿದ್ಧಪುರುಷರಿಂದ ಅಧ್ಯುಷಿತವು. ಆತ ಏವ ಉತ್ತರ ಕುರುದೇಶವೇ ಈಗಿನ ಉತ್ತರ ಸೈಬೇರಿಯಾ ಅಥವಾ ಮೇರುದೇಶವೆಂದು ಸ್ಪಷ್ಟವಾಗಿ ಕಂಡುಬರುತ್ತದೆ. ಈಗ ಈ ಉತ್ತರ ಕುರುದೇಶದ ಇರುವಿಕೆಯ ಸಂಬಂಧದಿಂದ ಕೆಲವು ಸಂಗತಿಯನ್ನು ತಿಳಿಯುವದು ಅವಶ್ಯಕವು. ರಾಮಾಯಣ ಕಿಷ್ಕಿಂಧಾಕಾಂಡದಲ್ಲಿ ಬರೆದುದೇನಂದರೆ-ಸುಗ್ರೀವನು ಸೀತೆಯನ್ನು ಹುಡುಕುವದಕ್ಕೋಸುಗ ಶತಬಲಮೊದಲಾದ ಕೆಲವು ವಾನರರಿಗೆ ಉತ್ತರಕ್ಕೆ ಕಳಿಸುವಾಗ ಉಪದೇಶಮಾಡಿರುವನು: ಎಲ್ಲಿ ವೈಖಾನಸ (ಈಗಿನ ಬಾಲ್ಕಸ ಸರೋವರ) ಸರೋವರವು ಇರುವದೋ ಆ ಪ್ರದೇಶವನ್ನು ದಾಟಿ ಶೈಲೋದಾ ಎಂಬ ನದಿಯು ಕಂಡುಬರುವದು. ಅದರ ಎರಡೂ ತೀರಗಳಲ್ಲಿ ಕೀಚಕವೆಂಬ ಬಿದುರಿನ ಗಿಡಗಳಿವೆ. ಸಿದ್ಧಪುರುಷರು ಆ ಬಿದುರಿನ ನಾವನ್ನು ಮಾಡಿ ಆ ನದಿಯನ್ನು ದಾಟುತ್ತಿರುವರು. ನೀವು ಸಹ ಅದರಂತೆಯೇ ಆ ನದಿಯನ್ನು ದಾಟತಕ್ಕದ್ದು. ಆ ನದಿಯ ಆಚೆಯ ದಂಡೆಯಲ್ಲಿಯೇ ಅರ್ಥಾತ್ ಉತ್ತರ ಕಡೆಯಲ್ಲಿಯೇ ಆ ಪುಣ್ಯಮಯ ಉತ್ತರ ಕುರುದೇಶವು. ಆ ಉತ್ತರ ಕುರುದೇಶದ ಉತ್ತರ ಭಾಗದಲ್ಲಿ ಉತ್ತರ ಸಮುದ್ರದ ತೀರದಲ್ಲಿ ಸೋಮಗಿರಿಯು ಇರುವದು. ಆ ದೇಶವು ಸೂರ್ಯವಿಹೀನವಾಗಿದ್ದರೂ ಅರ್ಥಾತ್ ಅಲ್ಲಿ ಸೂರ್ಯನು ಅಸ್ತನಾಗಿದ್ದರೂ ಒಂದು ಬಗೆಯ ಬೆಳಕು ಕಂಡುಬರುವದು. (ಇದೇ ಈಗಿನ Aurora Borealis). ಈ ದೇಶದಲ್ಲಿಯೇ ದೇವೇಶ ಬ್ರಹ್ಮನು ಬಹ್ಮರ್ಷಿಗಳಿಂದ ಪರಿವೇಷ್ಟಿತನಾಗಿ ವಾಸಮಾಡುತ್ತಾನೆ. ನೀವು ಈ ದೇಶದ ಉತ್ತರಕ್ಕೆ ಹೋಗಬೇಡಿರಿ. ಯಾಕಂದರೆ ಅಲ್ಲಿ ಸೂರ್ಯನಿಲ್ಲ. ಅಥವಾ ಅಲ್ಲಿ ಯಾವ ಬಗೆಯ ಪ್ರಕಾಶವೂ ಇರುವದಿಲ್ಲ. ಇದು ಸೀಮಾ ವಿಹೀನವು. ಇದರ ಆಚೆಯಲ್ಲಿ ಮತ್ತೇನಿದೆ ಎಂಬುವದು ನನಗೆ ಗೊತ್ತಿಲ್ಲ.

"ಹೇಮಪುಷ್ಕರಸಂಛನ್ನಂ ತತ್ರ ವೈಖಾನಸಂ ಸರಃ।
ತರುಣಾದಿತ್ಯಸಂಕಾಶೈರ್ಹಂಸೈರ್ವಿಚರಿತಂ ಶುಭೈಃ॥
++ ++ ++ ++
ತಂ ತು ದೇಶಮತಿಕ್ರಮ್ಯ ಶೈಲೋದಾ ನಾಮ ನಿಮ್ನಗಾ।
ಉಭಯೋಸ್ತೀರಯೋಸ್ತಸ್ಯಾಃ ಕೀಚಕನಾಮ ವೇಣವಃ॥
ತೇ ನಯನ್ತಿ ಪರಂ ತೀರಂ ಸಿದ್ಧಾನ್ ಪ್ರತ್ಯಾನಯನ್ತಿ ಚ।
ಉತ್ತರಾಃ ಕುರವಸ್ತತ್ರ ಕೃತಪುಣ್ಯ ಪ್ರೀತಿಶ್ರಯಾಃ॥
++ ++ ++ ++
ತಮತಿಕ್ರಮ್ಯ ಶೈಲೇಂದ್ರಮುತ್ತರೇ ಪಯಸಾಂ ನಿಧಿಃ।
ತತ್ರ ಸೋಮಗಿರಿರ್ನಾಮ ಮಧ್ಯೇ ಹೇಮಮಯೋ ಮಹಾನ್॥
ಸ ತು ದೇಶೋ ವಿಸೂರ್ಯೋಽಪಿ ತಸ್ಯಭಾಸಾ ಪ್ರಕಾಶತೇ।

ಸೂರ್ಯಲಕ್ಷ್ಯಾಭಿ ವಿಜ್ಞೇಯಸ್ತಪತೇ ವಿವಸ್ವತಾ||

++ ++ ++ ++

ಬ್ರಹ್ಮಾ ವಸತಿ ದೇವೇಶೋ ಬ್ರಹ್ಮರ್ಷಿಪರಿವಾರಿತಃ|
ನ ಕಥಂ ಚ ನ ಗಂತವ್ಯಂ ಕುರೂಣಾಮುತ್ತರೇಣ ಚ||

++ ++ ++ ++

ಸ ಹಿ-ಸೋಮಗಿರಿರ್ನಾಮ ದೇವಾನಾಮಪಿ ದುರ್ಗಮಃ|
ತಮಾಲೋಕ್ಯ ತತಃ ಕ್ಷಿಪ್ರಮುಪಾವರ್ತಿತುಮರ್ಹಥ||
ಏತಾವದ್ವಾನರೈಃ ಶಕ್ಯಂ ಗನ್ತುಂ ವಾನರ ಪುಂಗಲಾಃ|
ಅಭಾಸ್ಕರಮಮರ್ಯಾದಂ ನ ಜಾನೀಮಸ್ತತಃ ಪರಮ್||

ಉತ್ತರ ಸೈಬೇರಿಯಾದ ಒಂದು ಭಾಗದಲ್ಲಿ ಹಾಗು ಗ್ರೀನಲ್ಯಾಂಡನಲ್ಲಿ ಆರು ತಿಂಗಳು ಸೂರ್ಯೋದಯವಾಗುವದಿಲ್ಲ. ಒಮ್ಮೆ ಉದಯನಾದ ಸೂರ್ಯನು ಆರುತಿಂಗಳು ಅಸ್ತನಾಗುವದಿಲ್ಲ. ಅಲ್ಲಿ ಆರು ತಿಂಗಳ ಕೇವಲ ಚಂದ್ರನ ಬೆಳಕು. ಅಲ್ಲಿ ಸೂರ್ಯಪ್ರಕಾಶ ಆರು ತಿಂಗಳಲ್ಲಿ ಒಂದು ಹಗಲು, ಚಂದ್ರಪ್ರಕಾಶದ ಆರು ತಿಂಗಳಲ್ಲಿ ಒಂದು ರಾತ್ರಿ. ಸುತರಾಂ ಬ್ರಹ್ಮನ ಒಂದು ಹಗಲು, ಹಾಗು ರಾತ್ರಿಯಲ್ಲಿ ನಮ್ಮ ಒಂದು ವರ್ಷವಾಗುವದು.

"ಏತದ್ದೇವಾನಾಮಹಃ ಯತ್ ಸಂವತ್ಸರ"

- ತೈತ್ತರೀಯ ಬ್ರಾಹ್ಮಣ

ಮತ್ತು ಮನುಸ್ಮೃತಿಯಲ್ಲಿ:

"ದೈವೇ ರಾತ್ರ್ಯಹನೀ ವರ್ಷಂ ಪ್ರವಿಭಾಗಸ್ತಯೋಃ ಪುನಃ|
ಅಹಸ್ತತ್ರೋದ್ಗಯನಂ ರಾತ್ರಿಃ ಸ್ಯಾದ್ದಕ್ಷಿಣಾಯನಮ್||

- ೧ನೆಯ ಅಧ್ಯಾಯ ೬೭ನೆಯ ಶ್ಲೋಕ

೧. ಕಲ್ಲೂಕ ಭಾಷ್ಯ:

ದೈವೇ ರಾತ್ರ್ಯಹನೀವರ್ಷಮಿತಿ||
ಮನುಷ್ಯಾಣಾಂ ವರ್ಷಂ ದೇವಾನಾಂ ರಾತ್ರಿದಿನೇ ಭವತಃ|
ತಯೋರಪ್ಯಯಂ ವಿಭಾಗಃ|
ನರಾಣಾಮುದ್ಗಯನಂ ದೇವಾನಾಮಹಃ|
ತತ್ರ ಪ್ರಾಯೇಣ ದೈವಕರ್ಮಾಣಾನುಷ್ಠಾನಂ ದಕ್ಷಿಣಾಯನಂ ತು ರಾತ್ರಿಃ||

ಅರ್ಥಾತ್ ದೇವತೆಗಳ ಒಂದು ರಾತ್ರಿ-ಹಗಲಿನಲ್ಲಿ ಮನುಷ್ಯರ ಒಂದು ವರ್ಷವಾಗುವದು. ಸೂರ್ಯನ ಉತ್ತರಾಯಣದಲ್ಲಿ ದೇವತೆಗಳ ಹಗಲು ಹಾಗು ದಕ್ಷಿಣಾಯನದಲ್ಲಿ ರಾತ್ರಿ. ಆದರೆ ಛಾಂದೋಗ್ಯ ಉಪನಿಷತ್ತಿನಲ್ಲಿ ಬ್ರಹ್ಮಲೋಕದೊಳಗೆ ಸೂರ್ಯಸ್ತವಾಗುವದಿಲ್ಲವೆಂದು ವರ್ಣಿತವಾಗಿದೆ. ಬ್ರಹ್ಮಲೋಕದಲ್ಲಿ ಸೂರ್ಯನು ಯಾವಾಗಲೂ ತೋರುವವನು, ಎಂದು ಒಬ್ಬ ಋಷಿಯು ಪ್ರತಿಜ್ಞಾಪೂರ್ವಕ ಹೇಳಿದ್ದಾನೆ.

'ಅಥ ತತ ಉರ್ಧ್ವ ಉದೇತ್ಯ ನೈವೋದೇತಾ ನಾಸ್ತಮೇ ತೈಕಲ ಏವಮಧ್ಯೇ ಸ್ಥಾತಾ।"

(೩,೧೧,೧ ಮಂತ್ರ)

ತದೇವ ಶ್ಲೋಕಃ ನ ವೈ ತತ್ರ ನ ನಿಮ್ಲೋಚ।
( Setting)ನೋದಿಯಾಮ(nor rising) ಕದಾಚನ
ದೇವಸ್ತೇನಾಹಂ ಸತ್ಯೇನ ಮಾ ವಿರಾಧಿಷಿ ಬ್ರಹ್ಮಣೈತಿ।

(೩,೧೧,೨ ಮಂತ್ರ)

"ನsವಾ ಅಸ್ಮೈ ಉದೇತಿ ನ ನಿಮ್ಲೋಚತಿ ಸಕೃದ್ದಿವಾ ಹೈ
ವಾಸ್ಮೈ ಭವತಿ ಯ ಏತಾಮೇವಂ ಬ್ರಹ್ಮೋಪನಿಷದಂ ವೇದ"

(೩,೧೧,೩ ಮಂತ್ರ)

ಈ ಋಷಿಯು ಉತ್ತರಾಯಣದಲ್ಲಿ ಬ್ರಹ್ಮಲೋಕಕ್ಕೆ ಹೋಗಿ, ಪುನಃ ಉತ್ತರಾಯಣದಲ್ಲಿಯೇ ಅಲ್ಲಿಂದ ತಿರುಗಿ ಬಂದನೆಂಬುವದು ಹೆಚ್ಚು ಸಂಭವನೀಯವು. ಸುತರಾಂ ಆಗ ಅವನು ಕೇವಲ ಹಗಲನ್ನೇ ನೋಡಿ ಬಂದಿದ್ದನು. ಇರದಿದ್ದರೆ ಅವನಿಗಿಂತ ಮೊದಲು ಇದ್ದ ಮನುವು ತನ್ನ ಸ್ಮೃತಿಯಲ್ಲಿ ಉತ್ತರಾಯಣದಲ್ಲಿ ದೇವತೆಗಳ ಹಗಲು ಹಾಗೂ ದಕ್ಷಿಣಾಯನದಲ್ಲಿ ರಾತ್ರಿಯೆಂದು ಏಕೆ ಬರೆಯುತ್ತಿದ್ದನು? ಮತ್ತು ರಾಮಾಯಣವಾದರೂ ಮೊದಲು ಹೇಳಿದಂತೆ ಏಕೆ ಬರೆಯುತ್ತಿತ್ತು? ಆತ ಏನು ಕಂಡು ಬರುವದೇನಂದರೆ-ಬ್ರಹ್ಮಲೋಕವು ಇದೇ ಉತ್ತರ ಸೈಬೇರಿಯಾ ಅಥವಾ ಉತ್ತರ ಸಮುದ್ರ ತೀರದಲ್ಲಿಯ ಉತ್ತರ ಮೇರುದೇಶದಲ್ಲಿಯೇ ಇತ್ತು. ಈ ವಿಷಯದಲ್ಲಿ ಯಾವ ಸಂದೇಹವು ಉಳಿಯಲು ಶಕ್ಯವಿಲ್ಲ. ಇಲಾವೃತ ವರ್ಷದಲ್ಲಿಯೇ ಬ್ರಹ್ಮನು ಜನಿಸಿ, ಅಲ್ಲಿಯೇ ವಾಸಮಾಡುತ್ತಿದ್ದನೆಂದು ಕೆಲ ಕೆಲವರು ಸಿದ್ಧಾಂತ ಶಿರೋಮಣಿ ಹಾಗೂ ಕೆಲವು ಪುರಾಣಗಳ ಆಧಾರದಿಂದ ಜಿಜ್ಞಾಸೆ ಮಾಡಬಹುದು. ಇದಕ್ಕೆ ಉತ್ತರ: ಮೊದಲು ಬ್ರಹ್ಮಲೋಕವು ಇಲಾವೃತವರ್ಷದಲ್ಲಿಯೇ ಇತ್ತು. ಕಶ್ಯಪಪುತ್ರ ಬ್ರಹ್ಮಪ್ರಜಾಪತಿಯು ಮೊದಲು ಈ ಇಲಾವೃತ ವರ್ಷದಲ್ಲಿಯೇ ಇರುತ್ತಿದ್ದನು. ಆಮೇಲೆ ಮಲತಾಯಿಯ ಮಗನಾದ ದಾನವರಾಜನಿಂದ ಕಷ್ಟಕ್ಕೆ ಗುರಿಯಾಗಿ ಎರಡನೇ ಕಡೆಗೆ ಹೊರಟು ಹೋದನು. ಪೂಜ್ಯ ಸ್ವಾಮಿ ಶ್ರೀಯೋಗಾನಂದ ಸರಸ್ವತಿಗಳವರು ಹೇಳುವದೇನಂದರೆ, ಈ ಘಟನೆಯ ತರುವಾಯ ಬ್ರಹ್ಮನು ಪೂರ್ವದ್ವೀಪಕಲ್ಪಕ್ಕೆ ಹೋದನು. ಹಾಗು ಅಲ್ಲಿ ಒಂದು ರಾಜ್ಯವನ್ನು ಸ್ಥಾಪಿಸಿದನು. ಇದರ ಹೆಸರು ಬ್ರಹ್ಮದೇಶವೆಂದಾಯಿತು. ಕೆಲವು ದಿವಸಗಳ ತರುವಾಯ ಚಿಕ್ಕ ಸಹೋದರನಾದ ವಾಮನ ವಿಷ್ಣುವಿನ ಜಾಣತನದಿಂದ ದಾನವರು ರಾಜ್ಯವನ್ನು ಕಳಕೊಳ್ಳಲು, ಬ್ರಹ್ಮನು ಪುನಃ ತನ್ನ ಮೊದಲಿನ ಆವಾಸಕ್ಕೆ ಅರ್ಥಾತ್ ಇಲಾವೃತ ವರ್ಷಕ್ಕೆ ಹೊರಟುಹೋದನು. ಕೆಲಕಾಲದ ತರುವಾಯ ಬ್ರಹ್ಮನು ಚಿಕ್ಕ ಸಹೋದರನಾದ ಇಂದ್ರನಿಗೆ ರಾಜ್ಯವನ್ನು ಒಪ್ಪಿಸಿ ಉತ್ತರ ಕುರುದೇಶದಲ್ಲಿ ಹೋಗಿ, ನೂತನ ರಾಜ್ಯವನ್ನು ಸ್ಥಾಪನೆ ಮಾಡಿದನು ಹಾಗು ಅಲ್ಲಿ ಸ್ಥಿರವಾಗಿ ವಾಸಮಾಡಿದನು. ಇದೇ ತೃತೀಯ ಬ್ರಹ್ಮಲೋಕವು. ರಾಮಾಯಣ, ಮಹಾಭಾರತ, ಛಾಂದೋಗ್ಯ ಉಪನಿಷತ್ತು, ಮನುಸ್ಮೃತಿಗಳಲ್ಲಿ ಈ ಬ್ರಹ್ಮಲೋಕದ ವಿಷಯವಾಗಿಯೇ ಹೇಳಲ್ಪಟ್ಟಿದೆ.

"ಏವಂ ತಸ್ಮೈ ವರಂ ದತ್ವಾ ಸರ್ವಲೋಕಪಿತಾಮಹಃ।
ಇಂದ್ರೇ ತ್ರೈಲೋಕ್ಯಮಾಧಾಯ ಬ್ರಹ್ಮಲೋಕಂ ಗತಃ ಪ್ರಭುಃ।

-ಮಹಾಭಾರತ ಆದಿಪರ್ವ

ಈಗ ಬ್ರಹ್ಮಲೋಕದ ಹೊರತು ಬೇರ ಬೇರೆ ಲೋಕಗಳ ವಿಷಯವು ಸಂಕ್ಷೇಪದಿಂದ ವರ್ಣನೆ ಮಾಡಲ್ಪಡುವದು.

ಹಿಮಾಲಯದ ದಕ್ಷಿಣಕ್ಕೆ ಹಬ್ಬಿದ ಭೂಭಾಗವು ಭಾರತವರ್ಷವು. ಪೂರ್ವಕಾಲದಲ್ಲಿ ಅಲ್ಲಿಯ ವೇನರಾಜನ ಪುತ್ರನಾದ ಪೃಥುವಿನ ನಾಮಾನುಸಾರವಾಗಿ ಅದಕ್ಕೆ ಪೃಥಿವೀ ಎಂಬ ಹೆಸರು ಕೊಡಲ್ಪಟ್ಟಿತ್ತು. ಮಹಾಭಾರತದಲ್ಲಿ ಭಾರತವರ್ಷಕ್ಕೆ ದಕ್ಷಿಣ ಕುರುದೇಶವೆಂದೂ ಹೆಸರು ಇರುವದು. ಆರ್ಯರು ಬರುವ ಮೊದಲು ಇಲ್ಲಿ ಅಸಭ್ಯ ಜಾತಿಗಳು ವಾಸಮಾಡುತ್ತಿದ್ದವು. ಆರ್ಯರಲ್ಲಿ ಮೊದಲು ಮನುವೇ ಭಾರತದಲ್ಲಿ ರಾಜ್ಯವನ್ನು ಸ್ಥಾಪನೆ ಮಾಡಿದನು. ಈ ಮನುವು ವಿವಸ್ವಾನನ ಮಗನು; ಸುತರಾಂ ಬ್ರಹ್ಮ, ವಿಷ್ಣು, ಇಂದ್ರ (ಶಕ್ರ) ಮೊದಲಾದವರ ಸಹೋದರನ ಮಗನು. ಮನುವು ಕಕ್ಕನಾದ ವಿಷ್ಣುವಿನ ಸಹಾಯದಿಂದ ಅಯೋಧ್ಯೆಯಲ್ಲಿ ರಾಜಧಾನಿಯನ್ನು ಸ್ಥಾಪಿಸಿದನು.

"ಅಯೋಧ್ಯಾನಾಮ ನಗರೀ ತತ್ರಾಸೀತ್ ಲೋಕವಿಶ್ರುತಾ।
ಮನುನಾ ಮಾನವೇಂದ್ರೇಣ ಯಾ ಪುರೀ ನಿರ್ಮಿತಾ ಸ್ವಯಮ್॥

-ರಾಮಾಯಣ-ಬಾಲಕಾಂಡ

ಮನುವು ವಿವಸ್ವಾನನ ಮಗನೆಂದೂ, ಸೂರ್ಯವಂಶೀಯನೆಂದೂ ಪ್ರಖ್ಯಾತನಾಗಿರುತ್ತಾನೆ. ಮತ್ತು ಸ್ವರ್ಗದಿಂದ ಬಂದ ದೇವತೆಗಳಿಂದ ಈ ಅಯೋಧ್ಯಾಪುರಿಯು ನಿರ್ಮಿತವಾಗಿತ್ತೆಂದು ವೇದದಲ್ಲಿ ಅದಕ್ಕೆ ದೇವಪುರಿಯೆಂದು ಹೇಳಲ್ಪಟ್ಟಿದೆ.

"ದೇವಾನಾಂ ಪುರಯೋಧ್ಯಾ" - ಅಥರ್ವವೇದ.

ಮಹಾನುಭಾವ ರಾಮಚಂದ್ರನು ಈ ಸೂರ್ಯವಂಶದಲ್ಲಿ ಜನಿಸಿದವನು. ಸೂರ್ಯವಂಶದ ಪತನದ ತರುವಾಯ ಭಾರತವರ್ಷದಲ್ಲಿ ಚಂದ್ರವಂಶೀಯ ರಾಜರು ಪ್ರಬಲರಾದರು. ಅವರು ಸಹ ಪ್ರಬಲ ಪ್ರತಾಪದಿಂದ ಹಲವು ಶತಮಾನಗಳ ವರೆಗೆ ದಿಲ್ಲಿಯ ಹತ್ತಿರ ರಾಜ್ಯತ್ವವನ್ನು ಮಾಡಿದರು. ದುಷ್ಯಂತ, ನಹುಷ, ಯುಧಿಷ್ಠಿರ ಮೊದಲಾದವರು ಈ ಚಂದ್ರವಂಶೀಯರು. ಈಗ ಸಹ ಭರತಖಂಡದ ಹಲವು ರಾಜರು ಈ ಸೂರ್ಯ ಮತ್ತು ಚಂದ್ರವಂಶೀಯರಾಗಿರುವರು.

ಭಾರತವರ್ಷದ ಉತ್ತರದಲ್ಲಿ ಹಿಮಾಲಯ ಪರ್ವತವು.ಈ ಹಿಮಾಲಯದ ಉತ್ತರಾಂಶದಲ್ಲಿ ಕೈಲಾಸಪರ್ವತ ಹಾಗು ಅದರ ಪಾರ್ಶ್ವವರ್ತಿ ಸ್ಥಾನಗಳು ಕಿಂಪುರುಷವರ್ಷವೆಂದು ಹೇಳಲ್ಪಡುತ್ತಿತ್ತು. ಮಹಾಭಾರತದ ಸಭಾಪರ್ವದಲ್ಲಿ ಪರಮಯೋಗೀ ಶಿವನು ಈ ರಾಜ್ಯದ ನಿಜವಾದ ಒಡೆಯನಾಗಿದ್ದನು. ಆದರೆ ಅವನ ಕೋಶಾಧ್ಯಕ್ಷನಾದ ಕುಬೇರನ ಕೈಯಲ್ಲಿಯೇ ರಾಜ್ಯರಕ್ಷಣೆಯ ಭಾರವು ಇರುತ್ತಿತ್ತು. ಈ ಸಭಾಪರ್ವದಲ್ಲಿಯೇ ಅರ್ಜುನ ದಿಗ್ವಿಜಯಾಧ್ಯಾಯದಲ್ಲಿ, ಅರ್ಜುನನು ಉತ್ತರದಿಕ್ಕನ್ನು ಜಯಿಸಲಿಕ್ಕೆ ಹೋಗಿ ಹಿಮಾಲಯಪರ್ವತವನ್ನು ದಾಟಿ ಶ್ವೇತಪರ್ವತಕ್ಕೆ ಹೋದನು. ಕೈಲಾಸಪರ್ವತವು ಯಾವಾಗಲೂ ಹಿಮದಿಂದ ಮುಚ್ಚಲ್ಪಟ್ಟಿದ್ದರಿಂದ ಇದಕ್ಕೆ ಶ್ವೇತಪರ್ವತವೆಂದು ಹೆಸರುಂಟಾಯಿತು. ಅರ್ಜುನನು ಶ್ವೇತಪರ್ವತಕ್ಕೆ ಹೊಂದಿ ಇದ್ದ ಉತ್ತರ ಭೂಪ್ರದೇಶವನ್ನು ದ್ರುಮಪುತ್ರ (ಕುಬೇರನ ಮಗ)ನಿಂದ ಆಳಲ್ಪಡುವ ಕಿಂಪುರುಷಾವಾಸವನ್ನು ಆಕ್ರಮಣಮಾಡಿ ಜಯಿಸಿದನು. ಮತ್ತು ಅವನಿಂದ ಕಪ್ಪವನ್ನು ತೆಗೆದುಕೊಂಡನು. ಕಿಂಪುರುಷ ವರ್ಷವು ಮಾನಸ ಸರೋವರರ ಹಾಗು ಅದಕ್ಕೆ ಹೊಂದಿದ ಭೂಭಾಗದ ವರೆಗೆ ವಿಸ್ತಾರವಾಗಿತ್ತು. ಈ ವಿಷಯವಾಗಿ ರಾಮಾಯಣದಲ್ಲಿ ಸ್ಪಷ್ಟವಾಗಿಯೇ ಬರೆಯಲ್ಪಟ್ಟಿದೆ.

"ಕೈಲಾಸಂ ಪಾಂಡುರಂ ಪ್ರಾಪ್ಯ ಹೃಷ್ಟಾ ಯೂಯಂ ಭವಿಷ್ಯಥ
ತತ್ರ ಪಾಂಡುರಮೇಘಾಭಂ ಜಾಂಬೂನದಪರಿಷ್ಕೃತಮ್।
ಕುಬೇರಭವನಂ ರಮ್ಯಂ ನಿರ್ಮಿತಂ ವಿಶ್ವಕರ್ಮಣಾ।।
ವಿಶಾಲಾ ನಲಿನೀಯತ್ರ ಪ್ರಭೂತಕಮಲೋತ್ಪಲಾ।
ಹಂಸಕಾರಂಡವಾಕೀರ್ಣಾ ಅಪ್ಸರೋಗಣ ಸೇವಿತಾ।।
ತತ್ರ ವೈಶ್ರವಣೋ ರಾಜಾ ಸರ್ವಲೋಕನಮಸ್ಕೃತಃ।
ಧನಧೋ ರಮತೇ ಶ್ರೀಮಾನ್ ಗುಹ್ಯಕೈಃ ಸಹ ಯಕ್ಷರಾಟ್।।"

- ಕಿಷ್ಕಿಂಧಾಕಾಂಡ ೩೪ನೆಯ ಸರ್ಗ

-ಅರ್ಥಾತ್ ಸುಗ್ರೀವನು ಹೇಳುತ್ತಾನೆ-ನೀವು ಶ್ವೇತವರ್ಣದ ಕೈಲಾಸಪರ್ವತವನ್ನು ನೋಡಿ ಹರ್ಷಿತರಾಗಿರಿ. ಅಲ್ಲಿಯೇ ವಿಶ್ವಕರ್ಮ ನಿರ್ಮಿತವಾದ ಸ್ವರ್ಣಾಲಂಕೃತವೂ, ಶುಭ್ರವರ್ಣವೂ, ಮೇಘಸದೃಶವೂ ಆದ ಕುಬೇರನ ಸುರಮ್ಯವಾದ ಭುವನವನ್ನು ನೋಡುವಿರಿ. ಅದರ ಹತ್ತಿರವೇ ಪದ್ಮ ಪರಿಪೂರ್ಣವೂ ವಿಶಾಲವೂ ಆದ ಒಂದು ಸರೋವರವನ್ನು ನೋಡುವಿರಿ. ಆ ಸರೋವರದಲ್ಲಿ ರಾಜಹಂಸಗಳೂ, ಅಪ್ಸರರೂ ಆಟವಾಡುತ್ತಿರುವರು. ಅಲ್ಲಿಯೇ ಯಕ್ಷರಾಜನಾದ ಕುಬೇರನು ಯಕ್ಷರಿಂದ ಪರಿವೃತನಾಗಿರುತ್ತಾನೆ. ಯಾವ ಸರೋವರದ ಸಂಗತಿಯು ಇಲ್ಲಿ ಹೇಳಲ್ಪಟ್ಟಿರುವದೆಂಬದನ್ನು ಎಲ್ಲರೂ ಬಲ್ಲರು. ಕೈಲಾಸಪರ್ವತದ ಉತ್ತರಕ್ಕೆ ಮಾನಸ ಸರೋವರವು ಇರುತ್ತದೆ. ಕವಿ ಕಾಳಿದಾಸ ಮೊದಲಾದವರು ಮಾನಸ ಸರೋವರದ ರಾಜಹಂಸಗಳ ಸಂಗತಿಯನ್ನು ಬರೆದಿರುವರು. ಸುತರಾಂ ಕುಬೇರನ ಪ್ರಾಸಾದದ ಹತ್ತಿರವೆ ಮಾನಸ ಸರೋವರವು ಇತ್ತು. ಮತ್ತು ಕುಬೇರನ ಪ್ರಾಸಾದವು ಈ ಮಾನಸದ ದಕ್ಷಿಣಕ್ಕೆ ಇತ್ತೆಂಬುವದು ಸ್ಪಷ್ಟವಾಗಿಯೇ ತಿಳಿಯುವದು.

ಈ ಕುಬೇರನ ರಾಜ್ಯ(ಕಿಂಪುರುಷವರ್ಷ)ದ ಉತ್ತರಕ್ಕೆ ಯಮ ಹಾಗು ಇಂದ್ರರ ರಾಜ್ಯವಿತ್ತು. ವಿಷ್ಣುಪುರಾಣದಲ್ಲಿ:

"ಮಾನಸೋತ್ತರಶೈಲೇ ತು ಪೂರ್ವತೋ ವಾಸವೀ ಪುರೀ।
ದಕ್ಷಿಣೇನ ಯಮಸ್ಯಾನ್ಯಾ ಪ್ರತಿಚ್ಯಾಂ ವರುಣಸ್ಯ ಚ।।"

ಅರ್ಥಾತ್ ಮಾನಸ ಸರೋವರದ ಉತ್ತದ ಪರ್ವತದಲ್ಲಿ ಹಾಗು ಅದರ ಪೂರ್ವಕ್ಕೆ ವಾಸವೀಪುರಿ ಅಥವಾ ಇಂದ್ರನ ಅರಮನೆ ವೈಜಯನ್ತಿಧಾಮವು, ಹಾಗು ಅದೇ ಪರ್ವತದ ದಕ್ಷಿಣದಲ್ಲಿ(ಅರ್ಥಾತ್ ಮಾನಸ ಸರೋವರದ ಉತ್ತರದಲ್ಲಿ)ಯಮನ ಪಟ್ಟಣವು ಮತ್ತು ಪಶ್ಚಿಮಕ್ಕೆ ವರುಣನ ಆಲಯವು ಇದ್ದವು. ಅತ ಏವ ವಿಷ್ಣುಪುರಾಣದ ಮತದಂತೆ ಇದೇ ಪ್ರತೀಯಮಾನವಾಗುವದು. ಮಾನಸದ ಉತ್ತರದಲ್ಲಿದ್ದ ನಿಷದಪರ್ವತದ ಪೂರ್ವಕ್ಕೆ ಈಗಿನ ಮಂಗೋಲಿಯಾದಲ್ಲಿ ಇಂದ್ರನ ಅರಮನೆ ಇತ್ತು. ಇಂದ್ರನ ಅರಮನೆಯ ದಕ್ಷಿಣಕ್ಕೆ ಅರ್ಥಾತ ನಿಜ ತಿಬೇತ್ ಅಥವಾ ವೈದಿಕ ಮಾಶಕ ದೇಶದಲ್ಲಿ ಯಮಪುರಿಯು ಇತ್ತು. ಇದರ ಪಶ್ಚಿಮಕ್ಕೆ ಆರಲಹೃದ (ವೈದಿಕ "ಆರ" ಹೃದ) ಹಾಗು ಕಾಸ್ಪಿಯನ್ ಸಮುದ್ರದ ಕಡೆಗೆ ವರುಣನ ಪಟ್ಟಣವು ಇತ್ತು.

ಈಗ ಈ ಇಂದ್ರಪುರಿ ಅಥವಾ ವೈಜಯನ್ತಿಧಾಮದ ಸಂಬಂಧವಾಗಿ ಹೇಳುವದು ಆವಶ್ಯಕವಾಗಿದೆ. ಇಂದ್ರನು ಕಸ್ಯಪಮುನಿಯ ಎಲ್ಲಕ್ಕೂ ಚಿಕ್ಕ ಮಗನು. ಸುತರಾಂ ಅವನು ಬ್ರಹ್ಮ, ವಿಷ್ಣು, ವಿವಸ್ವಾನ ಮೊದಲಾದವರ ಚಿಕ್ಕ ಸಹೋದರನು. ಅವನ ರಾಜ್ಯದ ಹೆಸರು ಸ್ವರ್ಲೋಕವೆಂದಿತ್ತು. ವೈದಿಕ ಯುಗದಲ್ಲಿ ಇದು ಇಲಾವೃತವೆಂದು ಕರೆಯಲ್ಪಡುತ್ತಿತ್ತು. ಋಗ್ವೇದದಲ್ಲಿ-"ಇಲಂ ಪತಿರ್ಮಘವಾ" ಅರ್ಥಾತ್ ಮಘವಾ (ಇಂದ್ರನ ಒಂದು ಹೆಸರು)ಇಲ ಅಥವಾ ಇಲಾಭೂಮಿಯ ರಾಜನು. ಈ ಇಲಾವೃತ ವರ್ಷದ ಮತ್ತೊಂದು ಹೆಸರು ಮಂಗದೇಶ. ಇದರಿಂದಲೇ

ಈಗಿನ ಮಂಗೋಲಿಯಾ ನಾಮದ ಉತ್ಪತ್ತಿಯಾಗಿದೆ. ವೈದಿಕ ಯುಗದಲ್ಲಿ ಮಂಗೋಲಿಯಾ ಬ್ರಾಹ್ಮಣರಿಗೆ ಪ್ರಧಾನಸ್ಥಾನವಿತ್ತು. ಮಹಾಭಾರತದಲ್ಲಿ-

"ಮಂಗಾ ಬ್ರಾಹ್ಮಣ ಭೂಮಿಷ್ಠಾಃ।"

- ಭೀಷ್ಮಪರ್ವ ೧೧ನೆಯ ಅಧ್ಯಾಯ

ಈ ಮಂಗೋಲಿಯಾ ಅಥವಾ ಇಲಾವೃತವರ್ಷದಲ್ಲಿ ಯಕ್ಷ, ಗಂಧರ್ವ, ಅಪ್ಸರರು ವಾಸಮಾಡುತ್ತಾರೆಂದು ಸಿದ್ಧಾಂತ ಶಿರೋಮಣಿಯ ಆಧಾರದಿಂದ ಮೊದಲೇ ಹೇಳಿದೆ. ಇಂದ್ರನ ಸಭೆಯಲ್ಲಿ ದಿವ್ಯಸುಂದರಿಯರಾದ ಅಪ್ಸರೆಯರು ಯಾವಾಗಲೂ ನೃತ್ಯ, ಗೀತ, ವಾದ್ಯವಾದನಗಳಲ್ಲಿ ನಿರತರಾಗುತ್ತಿದ್ದರು. ವೈದಿಕಯುಗದಲ್ಲಿ ಮುನಿ-ಋಷಿಗಳು ಹಾಗು ಕ್ಷತ್ರಿಯರಾಜರು ಇಂದ್ರಪುರಿಯಲ್ಲಿ ಬರುಹೋಗುವದನ್ನು ಮಾಡುತ್ತಿದ್ದರು. ಭರದ್ವಾಜ ಮಹರ್ಷಿಯು ಆಯುರ್ವೇದವನ್ನು ಕಲಿಯುವದಕ್ಕೋಸುಗ ಮುನಿಗಳಿಂದ ಪ್ರೇರಿತನಾಗಿ, ಇಂದ್ರಪುರಿಗೆ ಹೋಗಿದ್ದನು, ಎಂದು ಚರಕಸಂಹಿತೆಯಲ್ಲಿ ಬರೆಯಲ್ಪಟ್ಟಿದೆ. ಭಾರತ ವರ್ಷದಿಂದ ಹಲವು ವ್ಯಾಪಾರಿಗಳು ವಿಶೇಷ ಲಾಭದ ಆಶೆಯಿಂದ ವ್ಯಾಪಾರದ ಸರಕುಗಳನ್ನು ತೆಗೆದುಕೊಂಡು ಇಂದ್ರಾಲಯ ಮೊದಲಾದವುಗಳಲ್ಲಿ ವ್ಯಾಪಾರಮಾಡಲು ಹೋಗುತ್ತಿದ್ದರು. ಅಥರ್ವವೇದದಲ್ಲಿ, ಒಬ್ಬ ಭಾರತೀಯ ವ್ಯಾಪಾರಿಯು ತನ್ನ ಮಾರಾಟದ ಸರಕುಗಳನ್ನು ಮಾಶಕ ಹಾಗು ಇಲಾವೃತ ವರ್ಷಗಳಲ್ಲಿ ನಿರಾಪದದಿಂದ ತಕ್ಕೊಂಡು ಹೋಗಲು ಇಂದ್ರನ ಸಹಾಯವನ್ನು ಬೇಡಿಕೊಂಡಿದ್ದಾನೆ. "ಎಲೈ ಇಂದ್ರನೇ ನೀನು ಮಹಾನ್ ವ್ಯಕ್ತಿಯು. ನೀನು ದಾರಿಯಲ್ಲಿಯ ಎಲ್ಲ ವೈರಿಗಳ ಹಾಗು ಹಿಂಸ್ರ ಜಂತುಗಳ ಕೈಯಿಂದ ರಕ್ಷಣೆಮಾಡಿ ನಮ್ಮ ವಾಣಿಜ್ಯಕ್ಕೆ ಅನುಕೂಲವನ್ನು ಮಾಡಿಕೊಡು."

"ಇಂದ್ರಮಹಂ ವಣಿಜಂ ಚೋದಯಾಮಿ।ಸೂದನಂ ಅರಾತಿಂ ಪರಿಪಂಥಿನಂ ಮೃಗಮ್। ಸ ಈಶಾನೋ ಧನದಾ ಅಸ್ತು ಮಹ್ಯಮ್।" -ಅಥರ್ವವೇದ.

ದಶರಥಮಹಾರಾಜನು ದೇವಾಸುರಯುದ್ಧದಲ್ಲಿ ಇಂದ್ರನಿಗೆ ಸಹಾಯವನ್ನು ಮಾಡುವದಕ್ಕೋಸುಗ ಸ್ವರ್ಗಕ್ಕೆ ಹೋಗಿದ್ದನೆಂದು ರಾಮಾಯಣದಲ್ಲಿ ಹೇಳಿದೆ. ಅರ್ಜುನನು ವ್ಯಾಸಮುನಿಯ ಸಲಹೆಯಂತೆ ದಿವ್ಯಾಸ್ತ್ರಗಳನ್ನು ಕಲಿಯುವದಕ್ಕೋಸುಗ ಇಂದ್ರಾಲಯಕ್ಕೆ ಹೋಗಿದ್ದನು, ಹಾಗೂ ಅಲ್ಲಿ ಐದು ವರ್ಷಗಳ ಕಾಲ ವಾಸಮಾಡಿ, ಅನೇಕ ದಿವ್ಯಾಸ್ತ್ರಗಳನ್ನು ಕಲಿತು ಭಾರತಕ್ಕೆ ತಿರುಗಿಬಂದನು, ಎಂದು ಮಹಾಭಾರತದಲ್ಲಿ ಹೇಳಿದೆ. ಇಂದ್ರನಿಗೆ ದೇವರಾಜನೆಂದು ಹೆಸರು ಇತ್ತು. ಇವನು ಕ್ಷಮತ್ವದಲ್ಲಿ ಹಾಗು ವಿದ್ವತ್ತೆಯಲ್ಲಿ ಬೇರೆಯವರಿಗಿಂತ ಶ್ರೇಷ್ಠನಿದ್ದನೆಂದೇ ಸ್ವರ್ಗಭೂಮಿಯ ರಾಜನಾಗಿದ್ದನು. 'ಇಂದ್ರ' ಎಂಬುವದು ವ್ಯಕ್ತಿವಿಶೇಷದ ಹೆಸರು ಅಲ್ಲ. ಇದು ಒಂದು ಉಪಾಧಿಯು. ಎಲ್ಲರಿಗಿಂತ ಶ್ರೇಷ್ಠನಾದ ವ್ಯಕ್ತಿಗೆ ಈ ಉಪಾಧಿಯು ಕೊಡಲ್ಪಡುತ್ತಿತ್ತು. ಪುರಾಣಗಳಲ್ಲಿ ಇಂದ್ರನು ದೇವಸೇನಾಪತಿಯಾಗಿದ್ದನು. ಮೊದಲು ಇಂದ್ರನ ಹೆಸರು'ಶಕ್ರ'ನೆಂದು ಇತ್ತು.'ಇಂದ್ರ' ಇದು ಒಂದು ಉಪಾಧಿ ವಿಶೇಷವೆಂದು ಚಂದ್ರವಂಶೀಯ ನಹುಷರಾಜನ ಇಂದ್ರತ್ವ ಪ್ರಾಪ್ತಿಯ ಘಟನೆಯಿಂದಲೇ ಕಂಡು ಬರುವದು. ಸಗರ ಚಕ್ರವರ್ತಿಯೂ ಅಶ್ವಮೇಧ ಯಜ್ಞಗಳನ್ನು ಮಾಡಿ ಇಂದ್ರನಾಗುವ ಪ್ರಯತ್ನವನ್ನು ಮಾಡಿದ್ದನು. ಸರ್ವಶ್ರೇಷ್ಠ ರಾಜನೇ ಅಶ್ವಮೇಧ ಯಜ್ಞವನ್ನು ಮಾಡಲು ಸಮರ್ಥನು. ಅಂತೇ ಸರ್ವಶ್ರೇಷ್ಠನೇ ಇಂದ್ರನಾಗುತ್ತಿದ್ದನು.

ಇನ್ನು ಮುಂದೆ ಯಮಪುರಿಯ ಮಾತು: ಯಮನು ಕಸ್ಯಪಮುನಿಯ ಪೌತ್ರನು ಹಾಗು ವಿವಸ್ವಾನನ ಮಗನು. ವಿವಸ್ವಾನ ಅಥವಾ ಸೂರ್ಯನಿಗೆ ಯಮ,ಶನಿ, ಮನುಗಳೆಂಬ ಮೂವರು ಮಕ್ಕಳ ಹೆಸರು ದೊರೆಯುವದು.

ಯಮನು ಮನುವಿನ ಮಲತಾಯಿಯ ಮಗನು. ಅಂದಮೇಲೆ ಮನುಷ್ಯನು. ಮಾಶಕದೇಶ ಅಥವಾ ಈಗಿನ ತಿಬೇಟದೇಶವೇ ಯಮನ ರಾಜ್ಯವೆಂದು ಮೊದಲೇ ಹೇಳಿದ್ದೇವೆ. ದೇವತೆಗಳ ಮಲತಾಯಿ ಮಕ್ಕಳಾದ ಅಸುರರು ಮೊದಲು ಅಲ್ಲಿ ವಾಸಮಾಡುತ್ತಿದ್ದರು. ಕೆಲಕಾಲದ ಮೇಲೆ ಅಸುರರು ದೇವತೆಗಳಿಗೆ ಸೋತು ತಮ್ಮ ರಾಜ್ಯವನ್ನು ಬಿಟ್ಟು ಬೇರೆ ಕಡೆಗೆ ಹೊರಟು ಹೋದರೆಂಬುವದು ವೇದದಿಂದ ತಿಳಿಯುತ್ತದೆ. ಆ ಕಾಲದಲ್ಲಿ ಈ ಪ್ರದೇಶವು ವಿಶೇಷವಾದ ಬಡವಾನಲದಿಂದ ಕೂಡಿಕೊಂಡಿತ್ತು. ಇದು ಬಹಳ ವಿಸ್ತಾರವಾದ ಜವುಳು ಭೂಮಿಯಾಗಿದ್ದು ಅತ್ಯಂತ ಅಸ್ವಾಸ್ಥ್ಯಕರವಿತ್ತು. ಇದಕ್ಕೋಸುಗ ಇದಕ್ಕೆ 'ನರಕ'ವೆಂದು ಹೆಸರು ಕೊಡಲ್ಪಟ್ಟಿತ್ತು. ಭಾಸ್ಕರಾಚಾರ್ಯರ

"ವಸನ್ತಿ ಮೇರೌ ಸುರಸಿದ್ಧಸಂಘಾ ಔರ್ವೇಚ
ಸರ್ವೇ ನರಕಾ ಸ ದೈತ್ಯಾಃ"

-ಸಿದ್ಧಾಂತ ಶಿರೋಮಣಿ-ಭುವನಕೋಶಾಧ್ಯಾಯ.

ಔರ್ವ ಅರ್ಥದಲ್ಲಿ ಬಡಬಾನಲ ಕೂಡಿದ ಸ್ಥಾನವನ್ನೇ ತಿಳಿಸುತ್ತದೆ. ಈ ನರಕ ದೇಶವು ಮಾನಸ ಸರೋವರದ ಉತ್ತರ ತೀರದಿಂದಲೇ ಆರಂಭವಾಗಿತ್ತು. ಈಗ ಸಹ ಮಾನಸದ ಉತ್ತರತೀರವು ಅತ್ಯಂತ ಅನಾರೋಗ್ಯಕರವಾಗಿರುವದು. ಪ್ರವಾಸಿಗಳು ಈಗ ಸಹ ಪ್ರಾಣಭಯದಿಂದ ಮಾನಸದ ಉತ್ತರ ತೀರದಲ್ಲಿ ಹೋಗುವದಿಲ್ಲ. ತಿಬೇಟಿಯರು ಸಹ ಅಲ್ಲಿ ವಾಸಮಾಡಲು ಸಮರ್ಥರೆಂಬುದನ್ನು ಕೇಳಿಲ್ಲ.

ರಾಜ್ಯಶಾಸನಕ್ಕೋಸುಗ ಯಮನು ಈ ನರಕ ಪ್ರದೇಶದಲ್ಲಿ ಒಂದು ಪಟ್ಟಣವನ್ನು ಕಟ್ಟಿಸಿದನು. ಅದರ ಹೆಸರು ಸಂಯಮನೀಪುರವು. ಇದೇ ನರಕದ ರಾಜಧಾನಿಯು. ಮಾನಸದ ಉತ್ತರಕ್ಕೆ ಸಂಯಮನೀಪುರದಲ್ಲಿ ವೈವಸ್ವತ ಯಮನು ವಾಸಮಾಡುತ್ತಾನೆಂದು ವಾಯು ಪುರಾಣದಲ್ಲಿ ಹೇಳಿದೆ.

"ದಕ್ಷಿಣೇನ ಪುನರ್ಮೇರೋರ್ಮಾನಸಸ್ಯೈವ ಮೂರ್ಧನಿ।
ವೈವಸ್ವತೋ ನಿವಸತಿ ಯಮಃ ಸಂಯಮನೀಪುರೇ।।"

-ವಾಯುಪುರಾಣ ೪೬ನೆಯ ಅಧ್ಯಾಯ.

"ಯತ್ರ ರಾಜಾ ವೈವಸ್ವತೋ ಯತ್ರ ಅವರೋಧನಂ ದಿವಃ" ಎಂದು ಋಗ್ವೇದವು ಹೇಳುತ್ತದೆ. ಅತ ಏವ ಯಮನು ತನ್ನ ವಾಸಸ್ಥಾನದ ಹತ್ತಿರ ಒಂದು ಅವರೋಧವನ್ನು ನಿರ್ಮಾಣ ಮಾಡಿಸಿದ್ದನು. ದುಷ್ಟರನ್ನು ಶಿಕ್ಷಿಸುವದರ ಸಲುವಾಗಿಯೇ ಈ ಕಾರಾಗೃಹವು ನಿರ್ಮಿತವಾಗಿತ್ತು ಎಂದು ಋಗ್ವೇದದ ಮತವು. ವೇದದಲ್ಲಿ ಕಂಡುಬರುವದೇನಂದರೆ, ಯಮನು ಬಹಳ ದೊಡ್ಡ ಅಪರಾಧದ ಅಪರಾಧಿಗಳಿಗೆ ಪ್ರಾಣದಂಡದ ಆಜ್ಞೆಯನ್ನು ಕೊಡುತ್ತಿದ್ದನು. ಅವನು ಅತ್ಯಂತ ನ್ಯಾಯವಂತನಿದ್ದನು. ಅನ್ಯಾಯ ಅಥವಾ ಅಧರ್ಮದ ಪಕ್ಷಪಾತಿಯು ಎಂದೂ ಇದ್ದಿಲ್ಲ. ಇದಕ್ಕೋಸುಗವೇ ಅವನು ಧರ್ಮಾವತಾರ ಅಥವಾ ಧರ್ಮನೆಂದೂ ಕರೆಯಲ್ಪಡುತ್ತಾನೆ. ವೈವಸ್ವತ ಯಮನು ಗುರುತರ ಅಪರಾಧಿಗಳಿಗೆ ಪ್ರಾಣದಂಡದ ಆಜ್ಞೆಯನ್ನು ಕೊಡುತ್ತಿದ್ದನೆಂದು ವೇದದಲ್ಲಿ ಕೆಲ ಕೆಲವು ಸ್ಥಳಗಳಲ್ಲಿ"ಮೃತ್ಯು'ಎಂಬ ಹೆಸರಿನಿಂದಲೂ ಕರೆಯಲ್ಪಡುತ್ತಾನೆ. ಸ್ವರ್ಗರಾಜ್ಯದ ಎಲ್ಲ ಜನರ ವಿಚಾರವೂ ಅವನ ತತ್ವಾವಧಾನದಲ್ಲಿಯೇ ಆಗುತ್ತಿತ್ತೆಂಬುವದು ಹೆಚ್ಚು ಸಂಭವನೀಯವು. ಅವನು ಚರರು (ಈಗಿನ ಪೋಲೀಸ, ಸಿ. ಆಯ್.ಡಿ. ಮೊದಲಾದವರು) ಅಪರಾಧಿಗಳ ಶೋಧವನ್ನು ಮಾಡಿ, ಅವರನ್ನು ಹಿಡಿದು ಯಮನ ಹತ್ತರ ತಕ್ಕೊಂಡು ಬರುತ್ತಿದ್ದರು. ಅದೇ ಸ್ವರ್ಗದ ವರಿಷ್ಠಕೋರ್ಟ (High-Court). ಅವನೇ ಮುಖ್ಯ ನ್ಯಾಯಾಧೀಶ (Chief Justice)ನಿದ್ದನು. ಯಮನೇ ಮೃತ್ಯುವಿನ ಕರ್ತನೆಂದೂ, ಅವನು

ಈಗ ಸಹ ಬದುಕಿರುವನೆಂದೂ ಪಂಡಿತರು, ಪಾಮರರು ಮೊದಲಾದವರು ನಂಬುವರು. ಇದು ಅತ್ಯಂತ ದುಃಖದ ವಿಷಯವೆಂಬಲ್ಲಿ ಸಂದೇಹವಿಲ್ಲ. ವೇದ ಪುರಾಣಾದಿಗಳನ್ನು ಓದಲು ಈ ತಿಳುವಳಿಕೆಯು ಉಳಿಯುವದಿಲ್ಲವೆಂಬದನ್ನು ಹೇಳಲಿಕ್ಕೇ ಬೇಡ. ಯಮನ ಸಂಬಂಧದ ಈ ತಪ್ಪು ತಿಳುವಳಿಕೆಯು ಬಹುಕಾಲದಿಂದ ನಡೆದುಬಂದಿದೆ. ವೈದಿಕಯುಗದ ಶೇಷಭಾಗದಲ್ಲಿ ಜನರು ಕ್ರಮೇಣ ವೇದವಿದ್ಯಾವಿಹೀನರಾಗಲು, ಅಂದಿನಿಂದಲೇ ಜನಸಾಧಾರಣರ ಮನಸ್ಸಿನಲ್ಲಿ ಕ್ರಮಕ್ರಮದಿಂದ ಈ ವಿಶ್ವಾಸವು ಹುಟ್ಟಹತ್ತಿತು. ಯಮನೇ ಮೃತ್ಯುವಿನ ಕರ್ತನೆಂದೂ ಅರ್ಥಾತ್ ಅವನೇ ಸಮಸ್ತ ಮನುಷ್ಯ ಮತ್ತು ಪ್ರಾಣಿಗಳಿಗೆ ಮರಣವನ್ನು ತರುವವನು ಎಂದೂ ಜನರ ತಿಳುವಳಿಕೆಯಾಯಿತು. ವಾಸ್ತವಿಕವಾಗಿ ಈ ಯಮನು ಪ್ರಾಣಿಗಳ ಮೃತ್ಯುವಿನ ಕರ್ತನು ಅಲ್ಲ, ಹಾಗು ಮಾನವನ ಮರಣೋತ್ತರ ಸ್ಥಿತಿಯು ಅವನಿಗೆ ಗೊತ್ತಿದ್ದಿಲ್ಲ. ಈ ವಿಷಯವು ಯಜುರ್ವೇದೀಯ ಕಠೋಪನಿಷತ್ತಿನಲ್ಲಿ "ಯಮ-ನಚಿಕೇತಾ ಸಂವಾದ"ದಲ್ಲಿ ವಿಶದಭಾವದಿಂದ ವರ್ಣಿತವಾಗಿರುತ್ತದೆ. ನಚಿಕೇತನು ಈ ಯಮನ ಅರಮನೆಗೆ ಹೋಗಿ ಮೂರು ರಾತ್ರಿ ವಾಸಮಾಡಿದ್ದನು. ಆಗ ಯಮನು ಅರಮನೆಯಲ್ಲಿ ಇದ್ದಿಲ್ಲ. ಅನಂತರ ಯಮನು ಅರಮನೆಗೆ ಬಂದು ನಚಿಕೇತನಿಗೆ ನಮಸ್ಕರಿಸಿ-"ನೀವು ದೊಡ್ಡವರು, ನಮ್ಮ ಮನೆಗೆ ಬಂದು ಮೂರು ರಾತ್ರಿ ಅಭುಕ್ತರಾಗಿರುವಿರಿ, ಅದಕ್ಕೋಸುಗ ನಮ್ಮಿಂದ ಮೂರು ವರಗಳನ್ನು ತಕ್ಕೊಳ್ಳಿರಿ"ಎಂದು ಹೇಳುವನು. ಆಗ ನಚಿಕೇತನು ಮೂರನೆಯ ವರವನ್ನು ಬೇಡಿ ಕುಳಿತನು. -"ಭಗವಾನ್, ಕೆಲವರು ಪ್ರೇತವು ಮಾನವರಿಗೆ ಅಗೋಚರವೆಂದೂ, ಕೆಲವರು ಪ್ರೇತವು ಜೀವವೆಂದೂ, ಹಲವರು ಪ್ರೇತವೆಂಬುವದು ಇಲ್ಲವೆಂದೂ ಹೇಳುವರು.ತಾವು ಅನುಗ್ರಹಮಾಡಿ ನನಗೆ ಪ್ರೇತವಿದ್ಯೆಯನ್ನು ಕಲಿಸತಕ್ಕದ್ದು. ಇದೇ ನನ್ನ ಪ್ರಾರ್ಥನೀಯ ತೃತೀಯ ವರವು" ಈ ಪ್ರಶ್ನಕ್ಕೆ ಉತ್ತರವಾಗಿ ಯಮನು- "ಪೂರ್ವಕಾಲದಲ್ಲಿ ದೇವತೆಗಳೂ (ಅರ್ಥಾತ್ ಬ್ರಹ್ಮ, ವಿಷ್ಣು, ಇಂದ್ರ, ಶಿವ ಮೊದಲಾದವರು) ಪ್ರೇತಪದಾರ್ಥವನ್ನು ತಿಳಿಯಲು ಶಕ್ತರಾಗಲಿಲ್ಲ. ಮುಂದಿನ ಕಾಲದಲ್ಲಿಯೂ ಈ ಪ್ರೇತವಿದ್ಯೆಯು ಅವರಿಗೆ ಸುಜ್ಞೇಯವಾಗುವದಿಲ್ಲ. ನಾನು ಎಷ್ಟರವನು! ಇದು ಅತ್ಯಂತ ಬಿಗಿಯಾದ ಪ್ರಶ್ನವು. ನಚಿಕೇತಾ ನೀನು ಬೇರೆ ವರವನ್ನು ಬೇಡು."

ನಚಿಕೇತ ಉವಾಚ :

"ಯೋಯಂ ಪ್ರೇತೇ ವಿಚಿಕಿತ್ಸಾ ಮನುಷ್ಯೇಽಸ್ತೀತ್ಯೇಕೇ ನಾಯಮಸ್ತೀತಿ ಚೈಕೇ,
ಏತಾ ವಿದ್ಯಾಮನುಶಿಷ್ಟಸ್ತ್ವಯಾಹಂ ವರಾಣಾಮೇಷ ವರಸ್ತೃತೀಯಹಃ||

-ಕಠೋಪನಿಷತ್ ೨೦ನೆಯ ಮಂತ್ರ

ಯಮ ಉವಾಚ :

ದೇವೈರತ್ರಾಪಿ ವಿಚಿಕಿತ್ಸಿತಂ ಪುರಾ, ನಹಿ ಸಂಜ್ಞೇಯ ಮನುರೇಷ ಧರ್ಮಃ ಅನ್ಯಂ ವರಂ ನಚಿಕೇತೋ ವೃಣೀಷ್ವ... ಇತ್ಯಾದಿ

-ಕಠೋಪನಿಷತ್ ೨೧ನೆಯ ಮಂತ್ರ

ಮನುಷ್ಯನು ಸತ್ತು ಯಮನ ಮನೆಗೆ ಹೋಗುತ್ತಾನೆ, ಎಂಬುವದು ಸಂಪೂರ್ಣವಾಗಿ ಅಸತ್ಯವಾಗಿರುವದೆಂದು ಈ ಘಟನೆಯಿಂದ ತಿಳಿಯುವದು. ಒಂದು ವೇಳೆ ಮನುಷ್ಯನು ಸತ್ತು ಯಮನ ಮನೆಗೆ ಹೋಗುತ್ತಿದ್ದರೆ ಪ್ರೇತಗಳ ಸಂಗತಿಯನ್ನು ಯಮನು ನಿಶ್ಚಯವಾಗಿ ತಿಳಿದಿರುತ್ತಿದ್ದನು ಮತ್ತು ಈ ಮಾತು ಸತ್ಯವಾಗಿದ್ದರೆ ಬ್ರಹ್ಮ, ವಿಷ್ಣು, ಶಿವ ಮೊದಲಾದ ದೇವತೆಗಳಿಗೂ ಪ್ರೇತಗಳ ಅವಸ್ಥೆಯ ಸಂಬಂಧದಿಂದ ತಿಳುವಳಿಕೆಯು ಇರುತ್ತಿತ್ತು. ಯಮನಿಗೂ ನಚಿಕೇತನನ ಪ್ರಶ್ನೆಗೆ ಉತ್ತರ ಕೊಡಲಿಕ್ಕೆ ಕಷ್ಟವಾಗುತ್ತಿದ್ದಿಲ್ಲ.ಪ್ರೇತಗಳು ನಮ್ಮ ಪಟ್ಟಣದ ನರಕ ಭೂಮಿಯಲ್ಲಿ ಇರುತ್ತವೆಂದು ಸ್ಪಷ್ಟವಾಗಿ ಹೇಳುತ್ತಿದ್ದನು. ಆದರೆ ಯಮನು ಮನುಷ್ಯರ

ಮೃತ್ಯುವಿನ ಕರ್ತನಲ್ಲ. ಯಮನು ಅಪರಾಧಿಗಳಿಗೆ ಪ್ರಾಣದಂಡದ ಆಜ್ಞೆಯನ್ನು ಕೊಡುತ್ತಿದ್ದನೆಂದು" ಯಮನೇ ಮೃತ್ಯುವಿನ ಕರ್ತನು"ಎಂದು ಜನರು ಹೇಳಿರುವರು. ಜನರು ಪಿತೃಭೂಮಿ ಇಲಾವೃತ ವರ್ಷದಿಂದ ಭಾರತದಲ್ಲಿ ಬಂದು ಉಪನಿವೇಶ ಸ್ಥಾಪನೆ ಮಾಡಿದರೆಂದೂ, ಮೃತ್ಯುದಂಡದ ಆಜ್ಞಾಕಾರಿಯಾದ ಯಮನು ಅವರ ವಂಶದವನೇ ಒಬ್ಬ ಮನುಷ್ಯನೆಂದೂ ಅವರೂ ಮರಣಾಧೀನನೆಂದೂ ಜನರು ಮರೆತರು. ಇಂಥವನು ಜನರ ಮೃತ್ಯುವಿನ ಕರ್ತನು ಆಗುವದು ಹೇಗೆ? ಫಲತಃ ಜನರು ಮರವೆಯಿಂದಲೇ ಈ ಅವಾಸ್ತವ ಕಲ್ಪನೆಯ ಸೃಷ್ಟಿಯನ್ನು ಮಾಡಿರುತ್ತಾರೆ. ವೇದದಲ್ಲಿ ಪಿತೃಲೋಕವಾಸಿಗಳಾದ ದೇವತೆಗಳು ಯಮನನ್ನು ರಾಜನನ್ನಾಗಿ ಮಾಡಿದರೆಂದು ಹೇಳಿದೆ: "ತಸ್ಮಾತ್ ಯಮಃ ಪಿತೃಣಾಂ ರಾಜಾ" ಈಕಾರಣದಿಂದ ಯಮನು ಪಿತೃಲೋಕದ ರಾಜನಾದನು. ಈ ಪಿತೃಲೋಕವು ಪ್ರೇತಲೋಕವು ಎಂದೂ ಅಲ್ಲ. ಮಹರ್ಷಿ ದೇವಲನು: " ನ ಪ್ರೇತಾಃ ಪಿತರಃ ಸ್ಮೃತಾಃ" ಅರ್ಥಾತ್ ಪ್ರೇತಗಣವು ಎಂದೂ ಪಿತೃಪದ ವಾಚ್ಯವಾಗಲು ಶಕ್ಯವಿಲ್ಲ. ಅತ ಏವ ಯಮನೂ ಪ್ರೇತಲೋಕದ ರಾಜನಾಗಲು ಶಕ್ಯವಿಲ್ಲ. ಯಮನು ವೈದಿಕ ಮಾಶಕದೇಶದ ನರಕ ಭೂಮಿಯಲ್ಲಿಯೇ ರಾಜ್ಯವಾಳುತ್ತಿದ್ದನು.

ಈ ಯಮಪುರಿಯ ಅವಸ್ಥೆಯ ಸಂಬಂಧದಿಂದ ಮಹಾಭಾರತ ಸಭಾಪರ್ವದಲ್ಲಿ ಬರೆದುದು: "ಆ ಸ್ಥಾನವು ನಾತಿ ಶೀತೋಷ್ಣಮಯ, ಮತ್ತು ಯಮನು ಅದರ ಸಂಯಮನೀಪುರಿಯಲ್ಲಿ ರಾಜರ್ಷಿ ಮತ್ತು ಬ್ರಹ್ಮರ್ಷಿಗಳಿಂದ ಪರಿವೇಷ್ಟಿತನಾಗಿ ವಾಸ ಮಾಡುತ್ತಾನೆ. ಅಲ್ಲಿ ಹಲವು ಬಗೆಯ ಸುಖಾದ್ಯಗಳು ದೊರೆಯುವವು. ಅಲ್ಲಿ ಗಂಧರ್ವ, ಕಿನ್ನರ, ಅಪ್ಸರರು ಗೀತ ವಾದ್ಯಾದಿಗಳಿಂದ ಸುಖದಲ್ಲಿ ಕಾಲಕಳೆಯುತ್ತಾರೆ, ಹಾಗು ಬಹುತರ ಸಾಧು, ಸನ್ಯಾಸಿ ಮತ್ತು ಪುಣ್ಯವಂತರು ಧರ್ಮಾವತಾರನಾದ ಯಮನನ್ನು ನೋಡಲಿಕ್ಕೆ ಹೋಗುವರು." ಈ ವರ್ಣನೆಯಲ್ಲಿ ಶ್ರಾದ್ಧದ ಮಂತ್ರ"ಯಮದ್ವಾರೇ ಮಹಾಘೋರೇ ತಪ್ತಾ ವೈತರಣೀ ನದೀ" ಇದರ ಉಲ್ಲೇಖವಿಲ್ಲೆಂಬುವದು ಆಶ್ಚರ್ಯಕರವು. ಯಾಕೆ ಇಲ್ಲವೆಂಬದನ್ನು ವಿಚಾರವಂತರಾದ ವಾಚಕರು ತಿಳಿಯಬಲ್ಲರು.

**ಈಗ ವರುಣ ಲೋಕದ ವಿಚಾರ:**

ವಾಸವೀಪುರಿಯ ಪಶ್ಚಿಮಕ್ಕೆ ವರುಣನ ಪಟ್ಟಣವು ಇತ್ತೆಂದು ಮೊದಲೇ ಹೇಳಿದ್ದೇವೆ. ವೇದ, ಪುರಾಣ ಹಾಗು ಮಹಾಭಾರತಾದಿಗಳಲ್ಲಿ ಮೇರುಪರ್ವತದ ಪಶ್ಚಿಮಕ್ಕೆ ಕೇತುಮಾಲವರ್ಷವೆಂದು ಬರೆದಿದೆ. ಸುತರಾಂ ಈ ಕೇತುಮಾಲವರ್ಷವೇ ವರುಣನ ರಾಜ್ಯವು. ಈಗಿನ ಅಫಗಾನಿಸ್ತಾನ, ಇರಾಣ ಹಾಗು ತುರ್ಕೀಸ್ತಾನ ಮೊದಲಾದವುಗಳು ಈ ಕೇತುಮಾಲವರ್ಷದ ಅಂತರ್ಭುಕ್ತವಾಗಿದ್ದವು. ಶಾಸ್ತ್ರ ಪುರಾಣಾದಿಗಳಲ್ಲಿ ವರುಣನು ಜಲಾಧಿಪನೆಂದು ಬರೆದುದನ್ನು ಎಲ್ಲರೂ ಬಲ್ಲರು.'ಜಲಾಧಿಪ'ನೆಂದರೆ ನಾವು ಸಾಧಾರಣವಾಗಿ ಜಲದ ಅಧಿಪತಿ ಅರ್ಥಾತ್ ನದ, ನದೀ ಹಾಗು ಸಮುದ್ರಾದಿಗಳ ಕರ್ತನೆಂದು ತಿಳಿಯುವೆವು. ವಾಸ್ತವಿಕವಾಗಿ ವರುಣನ ರಾಜ್ಯವು ಜಲಮಯವಾಗಿತ್ತು. ವೈದಿಕ ಯುಗದಲ್ಲಿ ಅವನ ರಾಜ್ಯವು ದ್ವೀಪಮಯವಿತ್ತೆಂದು ಗೊತ್ತಾಗುತ್ತದೆ. ಈಗಿನ ಅಫಗಾನಿಸ್ತಾನದ ವೈದಿಕ ಹೆಸರು ಅಪ್ ಅಥವಾ ಜಲಬಹುಲತಾಹೇತು-ಅಪಗಸ್ಥಾನವಿತ್ತು- ಈಗ ಸಹ ಚಿಕ್ಕ ಚಿಕ್ಕ ಪರ್ವತ ಪ್ರವಾಹಗಳಿಂದ ತುಂಬಿಕೊಂಡಿದೆ. ವರುಣನ ರಾಜ್ಯದ ಪಶ್ಚಿಮಕ್ಕೆ ಮಹಾಸಮುದ್ರವಿತ್ತೆಂದು ಋಗ್ವೇದದಿಂದ ತಿಳಿಯುವದು. ಈ ಸಮುದ್ರವೇ ಎತ್ತರವಾಗಿ ಕಡೆಗೆ ಕಾಸ್ಪಿಯನ್ ಸರೋವರದಲ್ಲಿ ಪರಿಣಮಿಸಿತು. ಭಾಸ್ಕರಾಚಾರ್ಯರ ಸಿದ್ಧಾಂತ ಶಿರೋಮಣೀ ಗ್ರಂಥದಲ್ಲಿ- ಸ್ವರ್ಣದೀ ಗಂಗೆಯು ನಾಲ್ಕು ಭಾಗಗಳಲ್ಲಿ ವಿಭಕ್ತವಾಗಿ ನಾಲ್ಕು ಕಡೆಗೆ ಹೋಗಿರುತ್ತದೆ. ಕೇತುಮಾಲವರ್ಷದಲ್ಲಿ ಹೋದ ಶಾಖೆಯ ಹೆಸರು ಚಕ್ಷು. ಚಕ್ಷುವಿನ ಮತ್ತೊಂದು ಹೆಸರು ಅಕ್ಷಿ, ಅಥವಾ ಅಕ್‌ಷಿಯಿಂದಲೇ ಈಗಿನ ಅಕ್‌ಶಾಸ್ ಆಗಿರುತ್ತದೆ. ಈ ಅಕ್‌ಶಾಸ್ ನದಿಯು ಈಗ ಬೋಖಾರಾ ಹಾಗು ತುರ್ಕಿಸ್ಥಾನಗಳೊಳಗಿಂದ ಹರಿದು ಅರಲಹ್ರದ(ವೈದಿಕ ಅರಹ್ರದ)ಕ್ಕೆ ಕೂಡುತ್ತದೆ. ವರುಣನ

ರಾಜ್ಯವು ಕೇತುಮಾಲವರ್ಷದಲ್ಲಿ ಇತ್ತೆಂದು ತಿಳಿಯುತ್ತದೆ. ಆದರೆ ಮಹಾಭಾರತದ ಸಭಾಪರ್ವತದಲ್ಲಿ ನಕುಲ ದಿಗ್ವಿಜಯಾಧ್ಯಾಯದಲ್ಲಿ-ನಕುಲನು ಪಶ್ಚಿಮದಿಕ್ಕನ್ನು ಜಯಿಸಲಿಕ್ಕೆ ಹೋಗಿ, ಸಿಂಧು, ಗಾಂಧಾರ(ಈಗಿನ ಕಂದಾಹಾರ)ಮೊದಲಾದ ಹಲವು ದೇಶಗಳನ್ನು ಗೆದ್ದನು. ಅನಂತರ ಮತ್ತು ಪಶ್ಚಿಮದಿಕ್ಕಿಗೆ ಹೋಗಿ, ಹೂಣ, ಶಕ, ಕಿರಾತ, ಪಹ್ಲವ, ಯವನ ಮೊದಲಾದ ದುರ್ಧರ್ಷ ಜಾತಿಗಳನ್ನು ಸೋಲಿಸಿ, ಅವರಿಂದ ಕಪ್ಪವನ್ನು ತೆಗೆದುಕೊಂಡನು. ಈ ಎಲ್ಲ ದೇಶಗಳೂ ವರುಣ ಪಾಲಿತದೇಶಗಳೆಂದು ಹೇಳಲ್ಪಟ್ಟಿದೆ:

"ಏವಂ ವಿಜಿತ್ಯ ನಕುಲೋ ದಿಶಂ ವರುಣಪಾಲಿತಾಮ್"

-ಮಹಾಭಾರತ ಸಭಾಪರ್ವ.

ವರುಣನ ರಾಜ್ಯವು ಎಲ್ಲಿ ಇತ್ತೆಂಬುವದು ಸ್ಪಷ್ಟವಾಗಿಯೇ ಕಂಡುಬರುವದು. ಹೂಣ, ಶಕ ಮೊದಲಾದ ಜಾತಿಗಳ ವಾಸಭೂಮಿಯು ತುರ್ಕಿಸ್ಥಾನಲ್ಲಿಯೇ ಇತ್ತೆಂಬುವದು ಮಹಾಭಾರತದ ಇತಿಹಾಸವನ್ನು ಓದುವವರು ಬಲ್ಲರು. ಯಾಕಂದರೆ ಈ ಎರಡು ಜಾತಿಯವರು ಪ್ರಾಯಃ ೨೧೦೦ ವರ್ಷಗಳ ಪೂರ್ವದಲ್ಲಿಯೇ ಎಲ್ಲ ಮಧ್ಯ ಏಶಿಯಾ ಹಾಗು ಭಾರತದ ಹಲವು ಭಾಗಗಳಲ್ಲಿಯೂ ಇದ್ದರು. ಶಕಶ್ರೇಷ್ಠ ಮಹಾರಾಜ ಕನಿಷ್ಕನ ಹೆಸರನ್ನು ಈಗ ಸಹ ಇತಿಹಾಸ ಪಾಠಕರು ಬಲ್ಲರು. ಮತ್ತು ಪಾರಸ್ಯ ದೇಶೀಯ ಪಹ್ಲವ ವಂಶೀಯ ರೇಜಾಖಾಂ ಈಗ ಪಾರಸ್ಯ ದೇಶದ ಸಿಂಹಾಸನದಲ್ಲಿ ಆಸೀನನಾಗಿದ್ದನು. ವರುಣನ ಪ್ರಜೆಗಳು ದೈತ್ಯ, ಅಪ್ಸರಾ, ಗಂಧರ್ವ ಮೊದಲಾದವರು ಇದ್ದರೆಂದು ಮಹಾಭಾರತದಿಂದ ಕಂಡುಬರುತ್ತದೆ. ಅರ್ಜುನನು ಈ ವರುಣನಿಂದ ಎಷ್ಟೋ ದಿವ್ಯಾಸ್ತ್ರಗಳನ್ನು ಕಲಿತಿದ್ದನು. ಶ್ರೀಕೃಷ್ಣನು ಸಹ ತನ್ನ ಸುದರ್ಶನಚಕ್ರವೆಂಬ ಅವ್ಯರ್ಥ ಅಸ್ತ್ರವನ್ನು ಈ ವರುಣನಿಂದಲೇ ಸಂಪಾದನೆ ಮಾಡಿದ್ದನು.

**ಈಗ ವಿಷ್ಣುಲೋಕ ವಿಚಾರ:**

ವಿಷ್ಣುಲೋಕದ ಮತ್ತೊಂದು ಹೆಸರು ಹಿರಣ್ಮಯವರ್ಷವೆಂದು. ಇದಕ್ಕೆ ಕೆಲ ಕೆಲವು ಸ್ಥಳಗಳಲ್ಲಿ ತಪೋಲೋಕವೆಂದೂ ಹೇಳಲ್ಪಟ್ಟಿದೆ. ವಿಷ್ಣುವು ಕಸ್ಯಪಮುನಿಯ ಪುತ್ರನು, ಅದಿತಿಯ ಗರ್ಭಸಂಭೂತನು. ಅವನು ಗಿಡ್ಡನಿದ್ದನೆಂದೂ ವಾಮನವಿಷ್ಣುವೆಂದೂ ಕರೆಯಲ್ಪಟ್ಟಿದ್ದಾನೆ. ಹಿರಣ್ಮಯವರ್ಷವು ಈಗಿನ ಮಧ್ಯ ಸೈಬೇರಿಯಾವು, ಬ್ರಹ್ಮಲೋಕಕ್ಕೆ ಹೋಗಬೇಕಾದರೆ ಎಲ್ಲರೂ ವಿಷ್ಣುಲೋಕವನ್ನು ದಾಟಿ ಹೋಗಬೇಕಾಗುತ್ತಿತ್ತು. ಸುತರಾಂ ವಿಷ್ಣುಲೋಕವು ಬ್ರಹ್ಮಲೋಕಕ್ಕೆ ಪ್ರವೇಶದ ದ್ವಾರಸ್ವರೂಪವಾಗಿತ್ತು. ಅಂತೇ ವಿಷ್ಣುವು ವೇದದಲ್ಲಿ ದ್ವಾರಪಾಲನೆಂಬ ಹೆಸರಿನಿಂದ ಕರೆಯಲ್ಪಡುತ್ತಾನೆ.

"ವಿಷ್ಣುರ್ವೈ ದೇವಾನಾಂ ದ್ವಾರಪಾಃ ಸ ಏಷ ಅಸ್ಮೈ ಏತ ದ್ವಾರಂ ವಿವೃಣೋತಿ"

-ಐತರೇಯ ಬ್ರಾಹ್ಮಣ.

ವಾಮನ ವಿಷ್ಣುವಿನ ಹಿರಣ್ಮಯವರ್ಷವು ಮಧ್ಯ ಸೈಬೇರಿಯಾದಲ್ಲಿದ್ದರೂ, ಇದು ಮಧ್ಯಸೈಬೇರಿಯದ ಪಶ್ಚಿಮಭಾಗದಲ್ಲಿತ್ತು, ವಿಷ್ಣುವಿನ ರಾಜಧಾನಿಯ ಹೆಸರು ವೈಕುಂಠಪುರಿಯೆಂದು ಇತ್ತು. ಈ ವಾಮನ ವಿಷ್ಣುವು ಮೂರು ಸಾರೆ ಭಾರತಕ್ಕೆ ಬಂದಿದ್ದನು.

"ಇದಂ ವಿಷ್ಣುರ್ವಿಚಕ್ರಮೇ ತ್ರೇಧಾ ಸಿದಧೇಪದಮ್" -ಯಜುರ್ವೇದ.

ಶ್ರೀಮತ್ ಸ್ವಾಮೀ ಯೋಗಾನಂದ ಸರಸ್ವತಿಗಳವರು ವಿಷ್ಣುವು ಭಾರತಕ್ಕೆ ಮೂರು ಸಾರೆ ಬಂದ ಕಾರಣವನ್ನು ಕೆಳಗಿನಂತೆ ಹೇಳುವರು -

೧. ದಾನವರು ಇವನನ್ನು ಸ್ವರ್ಗರಾಜ್ಯದಿಂದ ಓಡಿಸಿರುವದು.

೨. ಅಸುರ ಬಲಿಯನ್ನು ಶಿಕ್ಷಿಸುವ ಉದ್ದೇಶದಿಂದ.

೩. ಸಹೋದರನ ಮಗನಾದ ಮನುವಿಗೆ ಅಯೋಧ್ಯೆಯ ಸಿಂಹಾಸನದಲ್ಲಿ ಕೂಡ್ರಿಸುವದರ ಸಲುವಾಗಿ.

ವಾಮನವಿಷ್ಣುವು ಛದ್ಮವೇಷದಿಂದ ಬಲಿಯ ರಾಜಧಾನಿಗೆ ಹೋಗಿ,ಅವನನ್ನು ಛಲದಿಂದಲೂ, ಕೌಶಲದಿಂದಲೂ ಸೋಲಿಸಿ ರಾಜ್ಯದಿಂದ ಹೊರದೂಡಿದನು. ಬಲಿಯು ಪಾತಾಲಪುರಿಗೆ(ದಕ್ಷಿಣ ಅಮೇರಿಕೆಯಲ್ಲಿ-ಭೂಮಿಯ ಅಭ್ಯಂತರದಲ್ಲಿ ಅಲ್ಲ)ಹೋಗಿ ಆಶ್ರಯ ಮಾಡಿದನು. ಹಾಗು ಅಲ್ಲಿ "ಬಲಿಭಿಯಾ"ಎಂಬ ಸ್ಥಾನದಲ್ಲಿ ರಾಜಧಾನಿಯನ್ನು ಸ್ಥಾಪಿಸಿದನು. ಈ ವಿಷ್ಣುವಿನ ಭಾರತಾಗಮನದ ಸಂಬಂಧದಿಂದ ಪದ್ಮಪುರಾಣಕಾರನು ಬರೆದುದು:

"ಸ್ವರ್ಲೋಕೇ ವಸತಿರ್ವಿಷ್ಣೋರ್ವೈಕುಂಠೇಽಸ್ಯ ಮಹಾತ್ಮನಃ।
ಸ ಕಥಂ ಮಾನುಷೇ ಲೋಕೇ ಪದನ್ಯಾಸಂ ಚಕಾರ ಹ॥"

-ಪದ್ಮಪುರಾಣ

ವಿಷ್ಣುವು ವೈಕುಂಠಪುರಿಯನ್ನು ಬಿಟ್ಟು ಮೂರುಸಾರೆ ಭಾರತ ವರ್ಷದಲ್ಲಿ ಏಕೆ ಬಂದಿದ್ದನೆಂಬದನ್ನು ಮೊದಲೇ ಹೇಳಿದ್ದೇವೆ. ವಿಷ್ಣುಲೋಕದ ಸಂಬಂಧದಿಂದ ಭೀಷ್ಮಪರ್ವದಲ್ಲಿ ವಿಸ್ತೃತವಾದ ವಿವರಣೆಯು ಕಂಡುಬರುವದು. ವಿಸ್ತಾರಭಯದಿಂದ ಅದರ ಉಲ್ಲೇಖವನ್ನು ಮಾಡಲಿಲ್ಲ.

**ಆದಿತ್ಯಲೋಕದ ವಿಚಾರ:**

ವಿಷ್ಣುಲೋಕದ ಸ್ವಲ್ಪ ಪೂರ್ವಕ್ಕೆ ವಿಷ್ಣುವಿನ ಸಹೋದರನಾದ ವಿವಸ್ವಾನನ ರಾಜ್ಯವಿತ್ತು. ಈ ರಾಜ್ಯದ ಹೆಸರು ಭದ್ರಾಶ್ವವರ್ಷವೆಂದು. ಭದ್ರಾಶ್ವವರ್ಷವು ಮೇರುಪರ್ವತದ ವಾಯವ್ಯಕ್ಕೆ ಇತ್ತೆಂದು ಮಹಾಭಾರತದಿಂದ ತಿಳಿಯುವದು.

"ಮೇರೋಃ ಪಾರ್ಶ್ವಮಹಂ ಪೂರ್ವಂ ವಕ್ಷ್ಯಾಮ್ಯಥ ಯಥಾಯಥಮ್।
ತಸ್ಯ ಮೂರ್ಧಾಭಿಷೇಕಶ್ಚ ಭದ್ರಾಶ್ವಸ್ಯ ವಿಶ್ವಾಂ ಪತೇ।
ಭದ್ರಶಾಲವನಂ ಯತ್ರ ಕಾಲಾಮ್ರಶ್ಚ ಮಹಾದ್ರುಮಃ।
ಕಾಲಾಮ್ರಸ್ತು ಮಹಾರಾಜ ನಿತ್ಯಪುಷ್ಪಫಲಃ ಶುಭಃ।
ದ್ರುಮಶ್ಚ ಯೋಜನೋತ್ ಸೇಧಃ ಸಿದ್ಧಚಾರಣ ಸೇವಿತಃ।
ತತ್ರ ತೇ ಪುರುಷಾಃ ಶ್ವೇತಾಸ್ತೇಜೋಯುಕ್ತಾ ಮಹಾಬಲಾಃ।
ಸ್ತ್ರಿಯಃ ಕುಮುದ ವರ್ಣಾಶ್ಚ ಸುಂದರ್ಯಃ ಪ್ರಿಯದರ್ಶನಾಃ॥"

-ಭೀಷ್ಮಪರ್ವ ೭ನೆಯ ಅಧ್ಯಾಯ.

ಅಲ್ಲಿ ಭದ್ರವೆಂಬ ಶಾಲವನವಿರುತ್ತದೆ. ಹಾಗು ಕಾಲಾಮ್ರವೆಂಬ ಮಹಾದ್ರುಮವಿದೆ. ಆ ಕಾಲಾಮ್ರ ಗಿಡದಲ್ಲಿ ಯಾವಾಗಲೂ ಹೂ ಕಾಯಿಗಳು ದೊರೆಯುವವು. ಮತ್ತು ಅಲ್ಲಿ ಸಿದ್ಧಪುರುಷರು ವಾಸಮಾಡುವರು. ಅಲ್ಲಿಯ ಪುರುಷರು ಶ್ವೇತವರ್ಣದವರು. ತೇಜಃಪೂರ್ಣರು. ಮಹಾವೀರ್ಯವಂತರು, ಮತ್ತು ಸ್ತ್ರೀಯರು ಕುಮುದವರ್ಣಿಗಳೂ ಅತ್ಯಂತ ಸುಂದರಿಯರೂ ಇರುವರು. ಈ ಭದ್ರಾಶ್ವವರ್ಷದ ವೈದಿಕ ಹೆಸರು ಅಹಃ ಹಾಗು ರಾತ್ರಿ ಜನಪದವೆಂದಿತ್ತು. 'ಅಹಃ' ಹಾಗು 'ರಾತ್ರಿ' ಇವು ಎರಡು ದ್ವೀಪಗಳು. ಒಂದು ದ್ವೀಪವು ಹಗಲಿನಲ್ಲಿ

ಇನ್ನೊಂದು ರಾತ್ರಿಯಲ್ಲಿ ಸಮುದ್ರದಿಂದ ತೆಲುತ್ತಿದ್ದದರಿಂದ, ಇವುಗಳಿಗೆ ಕ್ರಮವಾಗಿ 'ಅಹಃ' 'ರಾತ್ರಿ' ಎಂದು ಇಡಲ್ಪಟ್ಟಿತ್ತು.

ಸುರಜ್ಯೇಷ್ಠನಾದ ಬ್ರಹ್ಮನು ತನ್ನ ಸಹೋದರನಾದ ಸೂರ್ಯನಿಗೆ "ಅಹಃ" ಹಾಗು "ರಾತ್ರಿ" ಜನಪದದಲ್ಲಿ ಹಾಗೂ ಕಕ್ಕನಾದ ಚಂದ್ರನಿಗೆ 'ಸಂವತ್ಸರ' ಎಂಬ ಜಾನಪದದಲ್ಲಿ ಪ್ರತಿಷ್ಠೆ ಮಾಡಿದನು ಎಂದು ಋಗ್ವೇದವು ಹೇಳುವುದು.

"ಸಮುದ್ರಾತ್ ಅರ್ಣವಾತ್ ಅಧಿಸಂವತ್ಸರೋಽಜಾಯತ, ಅಹೋರಾತ್ರಾಣಿ"

-ಋಗ್ವೇದ

ಸೂರ್ಯನು ತನ್ನ ರಾಜ್ಯವನ್ನು ನೋಡುವದಕ್ಕೋಸುಗ ಪ್ರತಿ ತಿಂಗಳಲ್ಲಿ ಅಲ್ಲಿಗೆ ಹೋಗುತ್ತಿದ್ದನು.

ತತ್ರಾದಿತ್ಯಸ್ಯ ದೇವಸ್ಯ ದೀಪ್ತಾಯತನಂ ಮಹತ್ ।
ಮಾಸೇ ಮಾಸೇ ಅವತರತಿ ತತ್ರ ಸೂರ್ಯಪ್ರಜಾಪತಿಃ ॥

-ವಾಯು ಪುರಾಣ

ಈ ಪ್ರಜಾಪತಿಸೂರ್ಯನನ್ನು ನಾವು ಆಕಾಶಸ್ಥ ಜಡಸೂರ್ಯನೆಂದು ತಿಳಿದಿರುವದು ಬಹು ಭ್ರಮಾತ್ಮಕವೆಂಬದನ್ನು ಹೇಳಲೇಬೇಡ. ಆಕಾಶದಲ್ಲಿಯ ಜಡಸೂರ್ಯನು ಕಶ್ಯಪಮುನಿಯ ಪುತ್ರರೂಪದಿಂದ ಅದಿತಿಯ ಗರ್ಭದಿಂದ ಹುಟ್ಟಿದುದು ಹೇಗೆ? ಈ ಸೂರ್ಯನು ಮನುಷ್ಯನಿದ್ದನು. ಇವನ ವಂಶದವರೇ ಭರತಖಂಡದ ಸೂರ್ಯವಂಶದವರು. ಅವರ ವಂಶದ ಔರಸದಲ್ಲಿ ಕುಂತಿಯ ಪುತ್ರ ಕರ್ಣನ ಜನ್ಮವಾಯಿತು.ವೈದಿಕ ಯುಗದಲ್ಲಿ ಹಲವರು ಬ್ರಹ್ಮಚರ್ಯಾದಿ ವ್ರತಪಾಲನಪೂರ್ವಕ ಆತ್ಮಜ್ಞಾನವನ್ನು ಸಂಪಾದನೆ ಮಾಡುವದಕ್ಕೋಸುಗ ಆದಿತ್ಯಲೋಕಕ್ಕೆ ಹೋಗಿ, ಅವನನ್ನು ಭಜಿಸುತ್ತಿದ್ದರೆಂದು ಪ್ರಶ್ನೋಪನಿಷತ್ತಿನಲ್ಲಿ ಬರೆದಿರುತ್ತದೆ.

"ಅಥೋತ್ತರೇಣ ತಪಸಾ ಬ್ರಹ್ಮಚರ್ಯೇಣ ಶ್ರದ್ಧಯಾ
ವಿದ್ಯಯಾ ಆತ್ಮಾನಮನ್ವಿಷ್ಯ ಆದಿತ್ಯಂ ಅಭಿಜಯನ್ತೇ"

-ಪ್ರಶ್ನೋಪನಿಷತ್ ೧೦ನೆಯ ಮಂತ್ರ

ನಮ್ಮ ದೇಶದಲ್ಲಿ ಸಂಸ್ಕೃತವನ್ನು ಕಲಿಯುವದಕ್ಕೋಸುಗ ಕಾಶೀ, ಹರಿದ್ವಾರ, ಕುಂಭಕೋಣಮ್ ಮೊದಲಾದ ಸ್ಥಳಗಳಿಗೆ ಹೋಗುವಂತೆ ಆ ಕಾಲದಲ್ಲಿಯೂ ಹಲವರು ಬ್ರಹ್ಮವಿದ್ಯೆ(ಆತ್ಮವಿದ್ಯೆ)ಯನ್ನು ಸಂಪಾದನೆ ಮಾಡುವದಕ್ಕೋಸುಗ ದೇವಲೋಕದಲ್ಲಿಯ ಮಹಾಪಂಡಿತನಾದ ಆದಿತ್ಯ(ಸೂರ್ಯ)ನ ಹತ್ತಿರ ಹೋಗುತ್ತಿದ್ದರು. ಈ ಸೂರ್ಯದೇವನೇ ಸಾಮವೇದವನ್ನು ಸಮಾಹರ ಮಾಡುತ್ತಾನೆ: "ಸೂರ್ಯಾತ್ ಸಾಮವೇದಃ।". ಬ್ರಹ್ಮಲೋಕದಲ್ಲಿ ಆವುದೋ ಹಿಮಪ್ರಲಯ(ಸಂಪ್ಲವ)ವು ಆರಂಭವಾಗಲು ಅಲ್ಲಿಯ ಪ್ರಜೆಗಳು ಆತ್ಮರಕ್ಷಣೆಗೋಸುಗ ಹತ್ತಿರದಲ್ಲಿದ್ದ ಸೂರ್ಯಲೋಕದಲ್ಲಿ ಪ್ರವೇಶ ಮಾಡುತ್ತಿದ್ದರು ಎಂದು ಮಹಾಭಾರತದ ಭೀಷ್ಮಪರ್ವದಲ್ಲಿ ಬರೆದಿರುವದು:

"ಬ್ರಹ್ಮಲೋಕಚ್ಯುತಾಃ ಸರ್ವೇ ಸರ್ವೇಷು ಸಾಧವಃ

+++ +++ +++

ರಕ್ಷಣಾರ್ಥಂತು ಭೂತಾನಾಂ ಪ್ರವಿಶನ್ತೇ ದಿವಾಕರಮ್"

-ಭೀಷ್ಮಪರ್ವ ೭ನೆಯ ಅಧ್ಯಾಯ.

ಈ ಆದಿತ್ಯಲೋಕವು ಒಂದು ವೇಳೆ ಆಕಾಶದಲ್ಲಿಯ ಅಗ್ನಿಮಯ ಪದಾರ್ಥವಾದ ಜಡಸೂರ್ಯನಾಗಿದ್ದರೆ ಇದೆಲ್ಲವೂ ಸಂಭವವಾಗುತ್ತಿತ್ತೋ? ಆಕಾಶದ ಜಡಸೂರ್ಯನಿಗೆ ಆದಿತ್ಯ ಮತ್ತು ಕಾಸ್ಯಪೇಯ ಎಂಬ ಎರಡು ಹೆಸರುಗಳು ಇದ್ದುದು ಕಂಡುಬರುತ್ತದೆ. ಈ ಎರಡು ಹೆಸರುಗಳು ವಿಸ್ಮೃತಿಯಿಂದಲೇ ಇಡಲ್ಪಟ್ಟಿವೆ ಎಂಬಲ್ಲಿ ಸಂದೇಹವಿಲ್ಲ. ವೈದಿಕಯುಗದ ಕೊನೆಯ ಭಾಗದಲ್ಲಿ ನಮ್ಮ ದೇಶೀಯ ಪಂಡಿತರು ಪಿತೃಲೋಕಕ್ಕೆ ಹೋಗುವದನ್ನು ಪ್ರಾಯಶಃ ಬಿಟ್ಟುಕೊಟ್ಟರು. ಕ್ರಮೇಣ ಅವರ ವಂಶದವರು ಇದನ್ನೆಲ್ಲ ಮರೆತುಬಿಟ್ಟರು. ತಮ್ಮ ವಂಶದ ವೇದೋಕ್ತ ಸೂರ್ಯನೇ ಈ ಆಕಾಶದಲ್ಲಿಯ ಜಡಸೂರ್ಯನೆಂದು ತಿಳಿದುಕೊಂಡರು. ಅಂತೇ"ಆದಿತ್ಯ"ಹಾಗು"ಕಾಸ್ಯಪೇಯ"ಈ ಎರಡು ಹೆಸರುಗಳು ಸೂರ್ಯನಿಗೆ ಜೋಡಿಸಲ್ಪಟ್ಟವು.ಯೋಗಾನಂದ ಸರಸ್ವತಿಗಳವರು-ಕಾಸ್ಯಪೇಯ ಅಂದರೆ ಭಗವಂತನ ಪುತ್ರ. ಪೃಥ್ವಿಯಲ್ಲಿದ್ದ ನಾವೆಲ್ಲರೂ ಭಗವಂತನ ಪುತ್ರರು. ಅಂತೇ ಸೂರ್ಯನು ಸಹ 'ಕಸ್ಯಪಸ್ಯ ಅಪತ್ಯಂ ಮಮಾನ್ ಕಾಸ್ಯಪೇಯ' ಆದನು- ಎಂದು ಹೇಳುವರು. ಇದು ವಸ್ತುತಃ ಪಕ್ಷದಲ್ಲಿ ಅಭಿಧಾನಗತ ವ್ಯಾಖ್ಯೆಮಾತ್ರ. ದೇಶದಲ್ಲಿಯ ಸಾಮಾನ್ಯ ಜನರ ಹಾಗು ಹಲವು ಪಂಡಿತರ ನಂಬುಗೆಯು ಏನೆಂದರೆ-ಆಕಾಶದಲ್ಲಿಯ ಜಡಸೂರ್ಯನೇ ನಮ್ಮ ಪಿತೃಪುರುಷನಾದ ಸೂರ್ಯನು. ಕಸ್ಯಪನ ಪುತ್ರನೂ, ಅದಿತಿಯ ಗರ್ಭಸಂಜಾತನೂ, ರಾವಣನಿಂದ ವಿಜಿತನಾದವನೂ, ಕರ್ಣನ ಪಿತನೂ ಇವನೇ ಎಂದು ಹೇಳುವರು. ಇದು ಅತ್ಯಂತ ಶೋಚನೀಯ ಸಂಗತಿಯು.

**ಚಂದ್ರಲೋಕ:**

ಈ ಸೂರ್ಯಲೋಕದ ದಕ್ಷಿಣಪಾರ್ಶ್ವದಲ್ಲಿಯೇ ಚಂದ್ರಲೋಕವು ಅಥವಾ ವೈದಿಕ ಮಹರ್ಲೋಕವು ಇತ್ತು. ಮಹಾಭಾರತದಲ್ಲಿ ಚಂದ್ರಲೋಕಕ್ಕೆ ರಮ್ಯಕವರ್ಷವೆಂಬ ಹೆಸರು ಇದೆ. ಈ ರಮ್ಯಕ ವರ್ಷವು ಈಗಿನ ಮಂಚೂರಿಯಾ ಹಾಗೂ ನಿಜಚೀನದ ಬಹುಭಾಗವನ್ನು ವ್ಯಾಪಿಸಿತ್ತು. ಪೂರ್ವದಲ್ಲಿ ಈ ರಮ್ಯಕವರ್ಷವು ದ್ವೀಪವಾಗಿದ್ದದರಿಂದ ಇದಕ್ಕೆ ಚಂದ್ರದ್ವೀಪ ಅಥವಾ ಚಂದ್ರಮಂಡಲವೆಂದು ಹೇಳಲ್ಪಟ್ಟಿದೆ. ಚಂದ್ರನು ಅತ್ರಿಮಹರ್ಷಿಯ ಪುತ್ರನು. ಅತ್ರಿಮಹರ್ಷಿಯು ಕಸ್ಯಪಮುನಿಯ ಕಕ್ಕನೆಂದು ಕಂಡುಬರುತ್ತದೆ. ಚಂದ್ರನು ಬ್ರಹ್ಮವಿಷ್ಣು ಮೊದಲಾದವರ ಕಕ್ಕನು. (ಚಂದ್ರನು ಕಸ್ಯಪ ಮುನಿಗಿಂತ ಚಿಕ್ಕವನಿದ್ದನು). ತೈತ್ತರೀಯ ಉಪನಿಷತ್ತಿನಲ್ಲಿ "ಮಹಷತಿ ಚಂದ್ರಮಾ"ಅರ್ಥಾತ್ ಚಂದ್ರನು ಮಹರ್ಲೋಕದ ಅಧಿಪತಿ ಇದ್ದನು. ಪ್ರಶ್ನೋಪನಿಷತ್ತಿನಲ್ಲಿ ರಮ್ಯಕವರ್ಷದ ಹೆಸರು"ಸಂವತ್ಸರ"ಜನಪದವೆಂದಿದೆ. ಈ ಸಂವತ್ಸರ ಜನಪದವು ಎರಡು ಭಾಗಗಳಲ್ಲಿ ವಿಭಕ್ತವಾಗಿತ್ತು, ಉತ್ತರ ಸಂವತ್ಸರ ಹಾಗು ದಕ್ಷಿಣ ಸಂವತ್ಸರ ಎಂದು.

"ಸಂವತ್ಸರೋ ವೈ ಪ್ರಜಾಪತಿಃ। ತಸ್ಯ ಅಯನೇ ದಕ್ಷಿಣಂ ಚ ಉತ್ತರಂ ಚ॥"

-ಪ್ರಶ್ನೋಪನಿಷತ್-೯ನೆಯ ಮಂತ್ರ.

ಹಲವರು ಈ ಸಂವತ್ಸರಕ್ಕೆ ವರ್ಷ ಅರ್ಥಾತ್ ಹನ್ನೆರಡು ತಿಂಗಳು ಎಂಬ ಅರ್ಥದಲ್ಲಿ ವ್ಯಾಖ್ಯೆಯನ್ನು ಮಾಡಿದ್ದಾರೆ. ಇದು ತಪ್ಪು ತಿಳುವಳಿಕೆಯೆಂದು ತೈತ್ತರೀಯ ಬ್ರಾಹ್ಮಣ ಹಾಗು ಋಗ್ವೇದದಿಂದ ತಿಳಿದು ಬರುವದು.

"ಸಂವತ್ಸರ ಖಲು ವೈ ದೇವಾನಾಂ ಪೂಃ"

-ತೈತ್ತರೀಯ ಬ್ರಾಹ್ಮಣ

ಅರ್ಥಾತ್ ಸಂವತ್ಸರವು ದೇವತೆಗಳ ಪುರೀ ಅಥವಾ ವಾಸಸ್ಥಳವು. ಒಂದು ವೇಳೆ ಸಂವತ್ಸರವು ಜನಪದವಾಗದೆ ಕಾಲ ಅಥವಾ ಸಮಯವು ಆದುದಾದರೆ ಅದು ದೇವತೆಗಳ ಪುರಿಯು ಆಗುವದು ಹೇಗೆ? ಋಗ್ವೇದದಲ್ಲಿ:

"ಸಮುದ್ರಾತ್ ಅರ್ಣವಾತ್ ಅಧಿಸಂವತ್ಸರೋಽಜಾಯತ"

-ಋಗ್ವೇದ-೧೦ನೇ ಮಂಡಲ ೧೯೦ ಸೂತ್ರ.

ಅರ್ಥಾತ್ ಸಮುದ್ರದಿಂದ ಸಂವತ್ಸರವು ತೇಲಿತು. ಈ ಸಂವತ್ಸರ ಅರ್ಥದಲ್ಲಿ ಸಂವತ್ಸರ ಎಂಬ ಜನಪದವು ಕಾಲವು ಎಂದೂ ಆಗಲಾರದು. ಯಾಕಂದರೆ ಸಮುದ್ರದಿಂದ ಕಾಲದ ಉತ್ಪತ್ತಿಯು ಆಗುವದಿಲ್ಲ. ವರಂ ಚ ಸಮುದ್ರದಿಂದ ದ್ವೀಪ ಮೊದಲಾದ ಭೂಭಾಗಗಳೇ ಉತ್ಪತ್ತಿಯಾಗುವವು. ಸ್ವಾಮಿ ಯೋಗಾನಂದರೂ ಹೀಗೆಯೇ ಹೇಳುವರು. ಈ ಚಂದ್ರಮಂಡಲ ಅಥವಾ ಚಂದ್ರದ್ವೀಪ(ಚಂದ್ರನ ಆವಾಸಸ್ಥಳ)ದ ಸಂಬಂಧದಿಂದ ವಾಯು ಪುರಾಣದಲ್ಲಿ ಹೇಳಿರುವದು-

"ಉತ್ತರ ಕುರೂಣಾಂ ಪಾರ್ಶ್ವೇ ಜ್ಞೇಯಸ್ತು ದಕ್ಷಿಣೇ
ಸಮುದ್ರ-ಊರ್ಮಿಮಾಲಾಢ್ಯೋ ನಾನಾರತ್ನ ವಿಭೂಷಿತಃ
ಪಂಚಯೋಜನ ಸಾಹಸ್ರಂ ಅತಿಕ್ರಮ್ಯ ಸುರಾಲಯಮ್
ಚಂದ್ರದ್ವೀಪ ಇತಿ ಖ್ಯಾತಶ್ಚಂದ್ರಮಂಡಲ ಸಂಜ್ಞಿತಃ॥"

-ವಾಯುಪುರಾಣ

ಅರ್ಥಾತ್ ಉತ್ತರ ಕುರುದೇಶದ ದಕ್ಷಿಣಕ್ಕೆ (ಈಗಿನ ಮಂಚೂರಿಯಾದಲ್ಲಿ ಹಾಗು ಪೂರ್ವ ಚೀನದೇಶದಲ್ಲಿ) ಸುರಾಲಯ ಅಥವಾ ಇಂದ್ರಪುರಿಯಿಂದ ೫ ಸಾವಿರ ಯೋಜನ ದೂರದಲ್ಲಿ ಸಮುದ್ರ ದಂಡೆಯಲ್ಲಿ ನಾನಾರತ್ನ ಪರಿಪೂರ್ಣವಾದ ಚಂದ್ರಮಂಡಲವು ಇರುವದು. ಇದೇ ಚಂದ್ರದ್ವೀಪವೆಂದೂ ಕರೆಯಲ್ಪಡುವದು.

ಆತ ಏವ ವಾಯುಪುರಾಣವು ಋಗ್ವೇದದ ಮತವನ್ನೇ ಸಮರ್ಥನೆ ಮಾಡುತ್ತದೆ. ಚಂದ್ರಮಂಡಲವು ಸಮುದ್ರದಿಂದ ದ್ವೀಪಾಕಾರದಲ್ಲಿಯೇ ತೇಲಿತು.(ಋಗ್ವೇದದಲ್ಲಿ ಸಂವತ್ಸರವೆಂದು ಹೇಳಲ್ಪಟ್ಟಿದ್ದು.) ಮುಂದೆ ಅದು ಎತ್ತರವಾಗುತ್ತ ಭೂಭಾಗದೊಡನೆ ಕೂಡಿಹೋಯಿತು. ಈ ಚಂದ್ರಮಂಡಲವು ಅತ್ಯಂತ ಬೆಳೆಯುಳ್ಳ ಭೂಮಿಯಾಗಿತ್ತು. ಅಲ್ಲಿ ಸೋಮರಸವೆಂಬ ಮದ್ಯವು ತಯಾರಾಗುತ್ತಿತ್ತು. ಆದುದರಿಂದ ಚಂದ್ರನಿಗೆ "ಓಷಧಿನಾಥ" ಹಾಗು "ಸುಧಾಕರ" ಎಂಬ ಹೆಸರು ಉಂಟಾದವು. ಚಂದ್ರನಲ್ಲಿಯ ಪ್ರಜೆಗಳು ಬ್ರಾಹ್ಮಣರು.

"ಸೋಮೋ ಬ್ರಾಹ್ಮಣಾನಾಂ ರಾಜಾ ಅಸೀತ್"

-ಯಜುರ್ವೇದ

ಒಂದು ವೇಳೆ ಈ ಚಂದ್ರನು ಆಕಾಶದಲ್ಲಿಯ ಚಂದ್ರನಾಗಿದ್ದರೆ ಇದೆಲ್ಲವು ಸಂಭವವಾಗುತ್ತಿತ್ತೋ? ಮತ್ತು ಅವನ ರಾಜ್ಯವು ಉತ್ತರಕುರುದೇಶದ ದಕ್ಷಿಣದಲ್ಲಿ-ಸಮುದ್ರತೀರದಲ್ಲಿ- ಈಗಿನ ಮಂಚೂರಿಯಾಹಾಗಿ ಪೂರ್ವಚೀನದೇಶದಲ್ಲಿ ಎಂದು ಸಿದ್ಧವಾಗುತ್ತಿತ್ತೋ? ಮತ್ಸ್ಯ ಪುರಾಣದಲ್ಲಿ

"ಸೋಮಃ ಪಿತೃಣಾಮಧಿಪತಿಃ ಕಥಂ ಶಾಸ್ತ್ರವಿಶಾರದಃ।
ತದ್ವಂಶ್ಯಾ ಯೇ ಚ ರಾಜಾನೋ ಬಭೂವುಃ ಕೀರ್ತಿವರ್ಧನಾಃ॥

ಪಿತೃಲೋಕದ ಅಧಿಪತಿಯಾದ ಸೋಮ(ಚಂದ್ರ)ನು ಶಾಸ್ತ್ರವಿಶಾರದನಿದ್ದನು. ಅವನ ವಂಶದ ಅರಸರು ಒಳ್ಳೇ ಕೀರ್ತಿವಂತರಾಗಿದ್ದರು. ಹಸ್ತಿನಾಪುರದ ಅರಸರು ಚಂದ್ರವಂಶೀಯರು. ಅವರು ಹೀಗೆ ವಿಖ್ಯಾತರಾಗಿದ್ದರೆಂಬದನ್ನು ಎಲ್ಲರೂ ಬಲ್ಲರು. ಇವರಲ್ಲಿ ಸುಪ್ರಸಿದ್ಧರಾದ ದುಷ್ಯಂತ, ನಹುಷ, ಯುಧಿಷ್ಠರ ಮೊದಲಾದ ಚಕ್ರವರ್ತಿಗಳ ಹೆಸರನ್ನು ಅರಿಯದವರು ಯಾರು?

ಈಗ ಹೇಳಿದ ಚಂದ್ರನು ಒಂದು ವೇಳೆ ಆಕಾಶದಲ್ಲಿಯ ಜಡವಾದ ಚಂದ್ರನಾಗಿದ್ದರೆ. ಅವನ ವಂಶದವರು ಇಷ್ಟು ಕಾಲದ ವರೆಗೆ ಭಾರತವರ್ಷದಲ್ಲಿ ರಾಜ್ಯತ್ವವನ್ನು ಹೇಗೆ ಮಾಡಿದರು? ಎಂಬ ಪ್ರಶ್ನವು ಉಂಟಾಗುವದು. ಈ ಎಲ್ಲ ಭ್ರಾಂತಿಯ ಮೂಲದಲ್ಲಿ ವಿಸ್ಮೃತಿಯು ಇರುತ್ತದೆ. ಜನರು ಕ್ರಮೇಣ ವೇದವಿದ್ಯಾವಿಹೀನರಾಗಿ ನಿಜವಾದ ದೇವತೆಗಳನ್ನು ಮರೆತು, ತನ್ನಾಮವಿಶಿಷ್ಟ ಆಕಾಶದಲ್ಲಿಯ ಜಡಪದಾರ್ಥಗಳನ್ನು ಪೂಜಿಸಹತ್ತಿದರು. ಏಕನಾಮ ವಿಶಿಷ್ಟವಾದೊಡನೆಯೇ ಅವು ಏಕಪದಾರ್ಥವಾಗಿ ಹೋದವು. ಇದಕ್ಕೆ ಬೇರೆ ಕಾರಣವೇ ಇಲ್ಲ. ಈಗ ಸಹ ಹಲವರ ಹೆಸುರ ಶಿವ,ವಿಷ್ಣು, ಇಂದ್ರ, ಚಂದ್ರ ಮೊದಲಾದವುಗಳು ಇಡಲ್ಪಡುವವು. ಆದರೆ ಅವರೂ ಆಯಾ ನಾಮವಿಶಿಷ್ಟ ದೇವತೆಗಳಂತೆ ಪೂಜ್ಯರಾಗುವರೋ?ಜನರು ಅಜ್ಞಾನದಿಂದ ನಿಜವಾದ ಚಂದ್ರನನ್ನು ಮರೆತು, ಆಕಾಶದಲ್ಲಿಯ ಜಡಚಂದ್ರನನ್ನೇ ಪೂಜಿಸಹತ್ತಿರುವರು. ಇದಕ್ಕಿಂತಲೂ ಶೋಚನೀಯ ಸ್ಥಿತಿಯು ಮತ್ತಾವುದು?

ಛಾಂದೋಗ್ಯ ಉಪನಿಷತ್ತಿನ ೩ನೆಯ ಅಧ್ಯಾಯ ೬,೭,೮,೯,೧೦ನೆಯ ಖಂಡಗಳಲ್ಲಿ ಯಾವ ೫ ಅಮೃತ ಭೂಮಿಯ ಕಥೆಯು ವರ್ಣಿತವಾಗಿರುವದೋ, ಈ ೫ ಅಮೃತ ಭೂಮಿಗಳೇ ಸ್ವರ್ಗದ ೫ ಅಂಶಗಳು. ಅಮೃತ ಭೂಮಿಯೆಂದರೆ ಪರಮ ಸ್ವಾಸ್ಥ್ಯಕರ ಸ್ಥಾನ (Sanotorium)ವು. ಛಾಂದೋಗ್ಯ ಉಪನಿಷತ್ತು ಸಹ, ಅಮೃತಭೂಮಿ ಅರ್ಥದಲ್ಲಿ ಇದನ್ನೇ ಹೇಳುವದು. ಮೊದಲು ಅಮೃತಭೂಮಿಯಲ್ಲಿ ಪೂರ್ವದಲ್ಲಿ ಅಗ್ನಿದೇವನು ವಾಸಮಾಡುತ್ತಿದ್ದನು. ಮುಂದೆ ಇವನು ಅಮೃತಭೂಮಿಯನ್ನು ಅಥವಾ ಕಿಂಪುರುಷವರ್ಷವನ್ನು ಬಿಟ್ಟುಕೊಟ್ಟು ಬೇರೆ ಕಡೆಗೆ ಹೋಗಿ ವಾಸಮಾಡಿದನು. ಯೋಗೀಶ್ವರನಾದ ಶಿವನು ಮತ್ತು ಧನಾಧಿಪತಿ ಕುಬೇರನು ಅಗ್ನಿ ಪರಿತ್ಯಕ್ತವಾದ ಕಿಂಪುರುಷವರ್ಷದಲ್ಲಿ ವಾಸಮಾಡಿದರು. ಧನಾಧಿಪತಿ ಕುಬೇರನ ವಾಸಸ್ಥಾನವು ಮಾನಸಸರೋವರದ ದಕ್ಷಿಣ ತೀರದಲ್ಲಿ. ಈಗ ತಿಬೇಟಿಯರು ಇದಕ್ಕೆ 'ಗ್ಯಾಲಪೋನರಜಿಂಗಿ ಫೋಪರಾಂ' ಎನ್ನುತ್ತಾರೆ. ಜಪಾನೀ ಪರಿವ್ರಾಜಕನಾದ "ಕಾವುಯಾಶುಚಿ"ಯು ತನ್ನ ಗ್ರಂಥ Three years in Tibet (ತಿಬೇಟದಲ್ಲಿ ಮೂರು ವರ್ಷಗಳು) ಇದರಲ್ಲಿ ಬರೆದುದು:

" On ascending the hill(Dolmala) one sees to the right a snowy range of the northern parts of mount kailas, named is Tibitian" "Gylpo Norjingi phohrang' which means the residance of the king Kuvera the God of wealth"

೫ನೆಯ ಅಮೃತಭೂಮಿ ಅಥವಾ ಉತ್ತರ ಕುರುದೇಶದಲ್ಲಿ ಸುರಶ್ರೇಷ್ಠನಾದ ಚತುರ್ಮುಖ ಅಥವಾ ಚತುರ್ವೇದವಿದ್ ಬ್ರಹ್ಮನು ವಾಸಮಾಡುತ್ತಿದ್ದನು. ಅತ ಏವ ವೇದದಲ್ಲಿ: "ಶ್ರುಣ್ವಸ್ತು ವಿಶ್ವೇ ಅಮೃತಸ್ಯ ಪುತ್ರಾಃ" ಎಲ್ಯೆ ಅಮೃತಲೋಕವಾಸಿಗಳಾದ ದೇವತೆಗಳೇ ನೀವು ಕೇಳಿರಿ ಎಂದು ಇರುವದು. ಆದರೆ ದುಃಖದ ವಿಷಯವೇನೆಂದರೆ ಹಲವು ಪಂಡಿತರು ಇದಕ್ಕೆ ಹಲವು ಬಗೆಯ ಕೂಟ ಅರ್ಥಗಳನ್ನು ಹೇಳುತ್ತಾರೆ. ಪೂರ್ವಾಪರವನ್ನು ಕೂಡಿಸದೆ ಹಾಗು ಹಲವು ಗ್ರಂಥಗಳೊಡನೆ ಸಂಬಂಧವನ್ನು ಇಡದೆ, ಅಭಿಧಾನಗತ ಅಥವಾ ದಾರ್ಶನಿಕ ವ್ಯಾಖ್ಯೆಯನು ಮಾಡಿದರೆ, ಆದರಿಂದ ಪಾಂಡಿತ್ಯ ಪ್ರಕಟವಾಗುವದೆಂಬುವದು ತಪ್ಪು ತಿಳುವಳಿಕೆಯು.

ಮತ್ತು ಕೌಷಿತಕೀ ಬ್ರಹ್ಮಣೋಪನಿಷತ್ತಿನಲ್ಲಿಯೂ ಇದೇ ಮಾತು ವಿಶದಭಾವದಿಂದ ವರ್ಣಿತವಾಗಿರುತ್ತದೆ.

"ಸ ಏತಂ ದೇವಯಾನಂ ಪಂಥಾನಮಾಪದ್ಯಾಗ್ನಿ ಲೋಕಮಾಗಚ್ಛಸಿ, ಸ ವಾಯುಲೋಕಂ, ಸ ವರುಣಲೋಕಂ, ಸ ಆದಿತ್ಯಲೋಕಂ,ಸ ಇಂದ್ರಲೋಕಂ, ಸ ಪ್ರಜಾಪತಿಲೋಕಂ, ಸ ಬ್ರಹ್ಮಲೋಕಂ, ತಸ್ಯಾಹವಾ ಏತಸ್ಯ ಬ್ರಹ್ಮಲೋಕಸ್ಯಾರೋಹ್ರದೋ ಮುಹೂರ್ತಾ ಯೇಷ್ಠಿಹಾಪಿಜರಾನದೀ ಲ್ಯೋವೃಕ್ಷಃ ಸಾಲಜ್ಯಂ" ಇತ್ಯಾದಿ

- ೧ನೆಯ ಅಧ್ಯಾಯ ೩ನೆಯ ಮಂತ್ರ.

ಅರ್ಥಾತ್ ಗಾರ್ಗ್ಯಪುತ್ರನಾದ ಚಿತ್ರನು ತದೀಯ ಪುರೋಹಿತ ಆರುಣಿ ಹಾಗು ಶ್ವೇತುಗಳಿಗೆ ಸ್ವರ್ಗಲೋಕದ ವಿಷಯವನ್ನು ವರ್ಣಿಸಿ ಹೇಳುತ್ತಾನೆ: ದೇವಯಾನ ಪಥದಿಂದ ಹೋಗುತ್ತ ಹೋಗುತ್ತ ಮೊದಲು ಅಗ್ನಿಲೋಕ, ಅನಂತರ ವಾಯುಲೋಕ, ವರುಣಲೋಕ, ಆದಿತ್ಯಲೋಕ,ಇಂದ್ರಲೋಕ,ಪ್ರಜಾಪತಿಲೋಕ ಹಾಗು ಬ್ರಹ್ಮಲೋಕದಲ್ಲಿ ಹೋಗಬೇಕಾಗುತ್ತದೆ. ಮಾರ್ಗದಲ್ಲಿ ಅರಹ್ರದ(ಈಗಿನ ಆರಲ ಸರೋವರ), ವಿಜರಾನದೀ (ಬ್ರಹ್ಮಲೋಕದಲ್ಲಿ ಅಥವಾ ಉತ್ತರ ಕುರುದೇಶದಲ್ಲಿ ಹರಿಯುವ ಭದ್ರಾ ಎಂಬ ಗಂಗೆ), ಇಲ್ಯವೃಕ್ಷ (ಇಲಾವೃತ ಅಥವಾ ಇಲಾಭೂಮಿಯಲ್ಲಿ ಹುಟ್ಟುವ ಒಂದು ಬಗೆಯ ದೊಡ್ಡಮರ) ಹಾಗು ಸಾಲವೃಕ್ಷ (ಇದರ ನಾರಿನಿಂದ ಬಿಲ್ಲಿನ'ಜ್ಯಾ'ವನ್ನು ಮಾಡುತ್ತಿದ್ದರು)ಇವುಗಳನ್ನು ದಾಟಿ ಹೋಗಬೇಕಾಗುತ್ತದೆ.

ಆತ ಏವ ಕಂಡು ಬರುವದೇನಂದರೆ-ವೇದಪುರಾಣ ಉಪನಿಷತ್ತು ಮೊದಲಾದವುಗಳಲ್ಲಿ ವರ್ಣಿತವಾದ ಬ್ರಹ್ಮಲೋಕ, ವಿಷ್ಣುಲೋಕ, ಇಂದ್ರಲೋಕ,ಯಮಲೋಕ ಮೊದಲಾದವುಗಳು ಭೂಮಿಯಲ್ಲಿಯೇ ಇದ್ದವು. ಎಂದೂ ಆಕಾಶದಲ್ಲಿ(ಶೂನ್ಯದಲ್ಲಿ)ಇದ್ದಿಲ್ಲ. ನಾವು ಅಜ್ಞಾನದಿಂದ ಆಕಾಶದ ಕಡೆಗೆ ಬೊಟ್ಟುಮಾಡಿ ತೋರಿಸುತ್ತೇವೆ.

ವೈದಿಕ ಯುಗದಲ್ಲಿ ಭಾರತವರ್ಷದಿಂದ ಪಿತೃಲೋಕಕ್ಕೆ, ಹಾಗು ಪಿತೃಲೋಕದಿಂದ ಭಾರತವರ್ಷಕ್ಕೆ ಬರುವದಕ್ಕೋಸುಗ ಬೇರ ಬೇರೆ ಮಾರ್ಗಗಳು ಬೇರೆ ಬೇರೆ ವ್ಯಕ್ತಿಗಳಿಂದ ನಿರ್ಮಿಸಲ್ಪಟ್ಟಿದ್ದವು. ಈಗ ಆ ವಿಷಯದ ವಿಚಾರವನ್ನು ಸ್ವಲ್ಪ ಮಾಡುವದು ಅವಶ್ಯಕವು. ವಾಯುಪುರಾಣದಲ್ಲಿ ಪಿತೃಪುರುಷ ದೇವತೆಗಳ ಎರಡು ಮಾರ್ಗಗಳು ದಕ್ಷಿಣ ಹಾಗು ಉತ್ತರದಲ್ಲಿ ದೀರ್ಘವಾಗಿ ಇದ್ದವು. ಈ ಎರಡು ಮಾರ್ಗಗಳೇ ದೇವಯಾನಪಥ ಹಾಗು ಪಿತೃಯಾನಪಥ. ದೇವಯಾನಪಥವು ಭಾರತವರ್ಷದಿಂದ ಉತ್ತರಕ್ಕೆ ಉತ್ತರ ಕುರುವರ್ಷದ ವರೆಗೆ ಹೋಗಿರುತ್ತದೆ ಹಾಗು ಪಿತೃಯಾನಪಥವು ಪಿತೃಲೋಕದಿಂದ ಭಾರತವರ್ಷದ ವರೆಗೆ ಬಂದಿರುತ್ತದೆ. ಶ್ರೀ ಶಂಕರಾಚಾರ್ಯರು ಛಾಂದೋಗ್ಯ ಉಪನಿಷತ್ತಿನ ತಮ್ಮ ಭಾಷ್ಯದಲ್ಲಿ ಈ ದೇವಯಾನ ಪಥದ ಸಂಬಂಧವಾಗಿ ಹೇಳಿದ್ದಾರೆ.

"ಏಷ ದೇವಯಾನಃ ಪಂಥಾ ಸತ್ಯಲೋಕಾವಸಾನೋ ನಾಂದ್ಯಾತ್ ಬಹಿಃ" ಅರ್ಥಾತ್ ಈ ದೇವಯಾನ ಪಥವು ಸತ್ಯಲೋಕ ಅಥವಾ ಬ್ರಹ್ಮಲೋಕದ ವರೆಗೆ ಹೋಗಿದೆ ಹಾಗು ಅಲ್ಲಿಯೇ ಇದರ ಕೊನೆಯು, ಎಂದೂ ಅಂಡದ-ಪೃಥ್ವಿಯ ಹೊರಗೆ ಆಕಾಶ(ಶೂನ್ಯ)ದಲ್ಲಿ ಹೋಗಿದ್ದಿಲ್ಲ. ಈ ದೇವಯಾನ ಹಾಗು ಪಿತೃಯಾನ ಮಾರ್ಗಗಳ ಹೊರತು ಬೇರೆ ಎರಡು ಮಾರ್ಗಗಳ ಹೆಸರು ದೊರೆಯುವವು. ಈ ಎರಡು ಮಾರ್ಗಗಳ ಹೆಸರು ಧೂಮಯಾನ ಹಾಗು ರಾತ್ರಿಯಾನ ಪಥ. ಆದರೂ ಸಾಮಾನ್ಯವಾಗಿ ಈ ನಾಲ್ಕು ಮಾರ್ಗಗಳಿಗೇ "ದೇವಯಾನಪಥ" ಎಂದು ಅನ್ನಲ್ಪಡುತ್ತಿತ್ತು. ಈ ದೇವಯಾನವು ಮೊದಲು ಹೇಳಿದ ವಿಶೇಷ ದೇವಯಾನ ಪಥದ ಹೆಸರು ಅಲ್ಲ.ಎಲ್ಲವೂ ದೇವಲೋಕದಲ್ಲಿ ಹೋಗುವ ಪಥಗಳೆಂದು ಸಾಮಾನ್ಯವಾಗಿ 'ದೇವಯಾನ ಪಥ'ಗಳೆಂದು ಹೇಳಲ್ಪಡುತ್ತಿದ್ದವು. ವಾಯು ಪುರಾಣದಲ್ಲಿ:

"ಚತ್ವಾರ ಏತೇ ಪಂಥಾನೋ ದೇವಯಾನಾ ವಿನಿರ್ಮಿತಾಃ"

ವೇದಪಾಠದಿಂದ ತಿಳಿಯುವದು-ಸೂರ್ಯದೇವನಿಂದ ನಿರ್ಮಿತವಾದ ಯಾವ ಮಾರ್ಗಗಳು ಅಂತರಿಕ್ಷ(ಅಫಗಾನಿಸ್ಥಾನ)ದಿಂದ ಸ್ವರ್ಗಕ್ಕೆ ಹೋಗಿರುತ್ತವೆಯೋ ಅವೆಲ್ಲವುಗಳು ಒಳ್ಳೇ ಪರಿಷ್ಕಾರವೂ, ಸುಗಮವೂ ಆಗಿರುವವು.

"ಯೇ ತೇ ಪಂಥಾಃ ಸರಿತಃ ಪೂರ್ವಾಸೋ ಅನರೇಣ, ಸುಕೃತಾ ಅನ್ತಮೀಕ್ಷೋ।
ತೇಭಿ ನೋ ಹದ್ಯಾ ಪಥಿಭಿಃ ಪುರಸ್ತಾತ್ ಪ್ರತೀಚೇ ಆತ್ಮಗಾತ್ ಅಧಿಹರ್ಮೇಭ್ಯಃ

- ಋಗ್ವೇದ

ಋಗ್ವೇದಪಾಠದಿಂದ ಇನ್ನೂ ತಿಳಿಯುವದೇನಂದರೆ, ವಿವಸ್ವಾನನು ತನ್ನ ಪುತ್ರ ಮನುವಿನ ಭಾರತಾಗಮನ ಕಾಲದಲ್ಲಿ ಅವನಿಗೆ ಒಂದು ಶ್ವೇತ ಅಶ್ವವನ್ನು ಕೊಟ್ಟಿದ್ದನು. ವೇದ ಮತ್ತು ಪುರಾಣಗಳಲ್ಲಿ ಹೇಳಿದ ಯಾವ ನಾಲ್ಕು ಮಾರ್ಗಗಳಿರುವವೋ ಅವುಗಳಲ್ಲಿ ಎರಡು ಸೀಮಾಂತ ಪ್ರದೇಶದ ಖೈಬರ ಹಾಗು ಬೋಲಲನ ಪಾಶಗಳಿಂದ ಅಫಗಾನಿಸ್ತಾನ (ವೈದಿಕ ಅನ್ತರೀಕ್ಷಲೋಕ)ದೊಳಗಿಂದ ಸ್ವರ್ಗರಾಜ್ಯ ಬ್ರಹ್ಮಲೋಕದಲ್ಲಿ ಹೋಗಿರುತ್ತದೆ. ವಶಿಷ್ಠ ಅಗಸ್ತ್ಯ ಮೊದಲಾದ ಮಹರ್ಷಿಗಳು ಈ ಮಾರ್ಗದಿಂದಲೇ ಭಾರತದಲ್ಲಿ ಬಂದಿದ್ದರು. ಮತ್ತೊಂದು ಮಾರ್ಗವು ಬದರಿಕಾಶ್ರಮದ ಮೇಲಿಂದ ಹಿಮಾಲಯ ಪರ್ವತವನ್ನು ದಾಟಿ ತಿಬೇಟ ದೇಶದೊಳಗಿಂದ ಹೋಗಿರುತ್ತದೆ. ಯುಧಿಷ್ಠರ ಮಹಾರಾಜನು ಇದೇ ಮಾರ್ಗದಿಂದಲೇ ಸ್ವರ್ಗಕ್ಕೆ ಹೋಗಿದ್ದನು. ವಾಮನ ವಿಷ್ಣುವು ಸಹ ಅಸುರರಾಜನಾದ ಬಲಿಯನ್ನು ದಮನ ಮಾಡಲಿಕ್ಕೆ ಈ ಮಾರ್ಗದಿಂದಲೇ ಭಾರತವರ್ಷಕ್ಕೆ ಬಂದಿದ್ದನು. ಮತ್ತೊಂದು ಮಾರ್ಗವು ಕಂಡು ಬರುವದು-"ಕಾಲಿಂಪೋಂ"ದಿಂದ ಸಿಕ್ಕಿಮ ಹಾಗು ಭೂತಾನ ರಾಜ್ಯಗಳ ಸೀಮಾಂತರದಿಂದ ತಿಬೇಟ ದೇಶದೊಳಗಿಂದ ಹೋಗಿರುವದು. ಇದೇ ನಾಲ್ಕನೆಯ ಮಾರ್ಗವೆಂಬುದು ಹೆಚ್ಚು ಸಂಭವನೀಯವು.

ಲಂಕಾಧಿಪತಿಯಾದ ರಾವಣನ ಸಂಬಂಧದಿಂದ ನಮ್ಮ ದೇಶದಲ್ಲಿ ಒಂದು ಪ್ರವಾದವು ಪ್ರಚಲಿತವಾಗಿರುವದು. ಅವನು ಎಲ್ಲರೂ ಸ್ವರ್ಗಲೋಕಕ್ಕೆ ಸುಲಭವಾಗಿ ಹೋಗಲು ಅನುಕೂಲವಾಗುವಂತೆ ಒಂದು ನಿಚ್ಚಣಿಕೆಯ ಮಾರ್ಗವನ್ನು ಮಾಡಬೇಕೆಂದು ಮಾಡಿದ್ದನು. ಆದರೆ ದೀರ್ಘಸೂತ್ರಿಕಾ ದೋಷದಿಂದಲೋ ಏನೋ ಅವನ ಈ ಇಚ್ಛೆಯು ಕಾರ್ಯದಲ್ಲಿ ಪರಿಣಮಿಸಲಿಲ್ಲ.

ಈ ಎಲ್ಲ ಮಾರ್ಗಗಳು ಸ್ವರ್ಗದ ಭೌಮತ್ವದ ಪರಿಪೋಷಕವಾಗಿದ್ದರೂ ಸಹ, ವಿಸ್ಮೃತಿ ದೋಷದಿಂದ ಎಲ್ಲವೂ ನಷ್ಟವಾಗಿ ಹೋಗಿವೆ. ಈಗ ಪಿತೃಯಾಗವೆಂದರೆ ಸಾಮಾನ್ಯ ಜನರು ಪ್ರೇತಯಾನವೆಂದು ತಿಳಿದಿರುವರು. ಈ ಎಲ್ಲ ದೇವಯಾನ ಪಿತೃಯಾನಗಳಿಂದ ಪ್ರೇತಗಳು ಸ್ವರ್ಗಕ್ಕೆ ಹೋಗಿ ಬರುವುದನ್ನು ಮಾಡುತ್ತವೆಂದು ಹಲವರು ತಿಳಿದಿರುವರು. ಒಂದು ವೇಳೆ ಈ ಎಲ್ಲ ಮಾರ್ಗಗಳು ಕ್ಷೇತ್ರಗಳಿಗೋಸುಗ ನಿರ್ಮಿತವಾಗಿದ್ದರೆ ಇವುಗಳಿಗೆ ಕ್ಷೇತ್ರಯಾನಗಳೆಂದೇ ಹೆಸರು ಇರುತ್ತಿತ್ತು. ದೇವಯಾನ, ಪಿತೃಯಾನ, ಧೂಮಯಾನ, ರಾತ್ರಿಯಾನಗಳೆಂದು ಕಷ್ಟಪಟ್ಟು ಅನ್ನಬೇಕಾಗುತ್ತಿದ್ದಿಲ್ಲ. ಸಹಜ ಪ್ರೇತಯಾನವೆಂದು ಅಂದು ಬಿಟ್ಟರೆ ಎಲ್ಲ ಪ್ರವಾಹವು ತಪ್ಪಿಹೋಗುತ್ತಿತ್ತು ಹಾಗು ಈ ಮಾರ್ಗಗಳಿಂದ ಬರಲಿಕ್ಕೆ ಮನುವಿಗೆ ಶ್ವೇತವರ್ಣ ಅಶ್ವದ ಅವಶ್ಯಕತೆ ಇದ್ದಿಲ್ಲ. ಅಥವಾ ಯುಧಿಷ್ಠರಾದಿಗಳು ಜೀವದೆಸೆಯಲ್ಲಿ ಸ್ವರ್ಗಕ್ಕೆ ಹೋಗುವ ಸಲುವಾಗಿ ಕಾಲುನಡಿಗೆಯಿಂದ ಇಷ್ಟೆಲ್ಲ ಮಾಡಬೇಕಾಗಿದ್ದಿಲ್ಲ. ಇದು ಕೇವಲ ವರ್ತಮಾನ ಸಮಯದ ದೋಷವಲ್ಲ, ವೈದಿಕಯುಗದ ಶೇಷಕಾಲದಿಂದಲೇ ಭಾರತದ ಸಾಮಾನ್ಯಜನರು, ಇಷ್ಟೇ ಅಲ್ಲ ಪಂಡಿತರು ಸಹ ಈ ಎಲ್ಲ ಮಾರ್ಗಗಳ ವಿಷಯವನ್ನು ಮರೆಯಹತ್ತಿದರು. ಇದರ ಹಲವು ಉದಾಹರಣೆಗಳನ್ನು ನಾವು ಉಪನಿಷತುಗಳಲ್ಲಿ ನೋಡುವೆವು (ಛಾಂದೋಗ್ಯ ಉಪನಿಷತ್ತಿನ "ಶ್ವೇತಕೇತು ಪ್ರವಹಣ ಸಂವಾದ"ಹಾಗು ಕೌಷೀತಕೀ ಬ್ರಹ್ಮಣೋಪನಿಷತ್ತಿನ ೧ನೆಯ ಅಧ್ಯಾಯದ ೧ನೆಯ ೨ನೆಯ ಮಂತ್ರಗಳು).

ಈಗ ದೇವತಾವಿಷಯಕ ವಿಚಾರವನ್ನು ಆರಂಭಮಾಡುವೆವು. ಈ ದೇವತೆಗಳು ಯಾರು? ಎಂಬೀ ವಿಷಯವನ್ನು ತಿಳಿಯುವದು ಹೆಚ್ಚು ಅಗತ್ಯವಾಗಿರುವದು. ಇರದಿದ್ದರೆ ಅವರ ಸಂಬಂಧದ ಜ್ಞಾನವು ಅಪೂರ್ಣವಾಗಿ ಉಳಿಯುವದು.

ಈ ಭಾರತವು ಆರ್ಯರ ಪಿತೃಭೂಮಿಯಲ್ಲವೆಂದು ವೇದದಿಂದ ಗೊತ್ತಾಗುವದೆಂದು ಮೊದಲೇ ಹೇಳಿದ್ದೇವೆ. ಅವರ ಆದಿಮ ವಾಸಸ್ಥಾನವು ಇಲಾವೃತ ವರ್ಷವು. ಅವರಲ್ಲಿ ಕೆಲಕೆಲವರು ಭಾರತವರ್ಷದಲ್ಲಿ

ಬಂದು ಉಪನಿವೇಶಗಳನ್ನು ಸ್ಥಾಪನೆ ಮಾಡಿದ್ದರು. ಅತ ಏವ ಕಂಡು ಬರುವದೇನಂದರೆ, ಇಲಾವೃತವರ್ಷದಲ್ಲಿಯ ದೇವತೆಗಳು ಹಾಗು ಭಾರತಕ್ಕೆ ಬಂದ ಆರ್ಯರು ಏಕವಂಶ ಸಂಭೂತರು ಹಾಗು ಏಕಸ್ಥಾನವಾಸಿಗಳು. ಆದರೆ ಇಲಾವೃತವರ್ಷದಲ್ಲಿದ್ದ ಹಾಗು ತತ್ ಪಾರ್ಶ್ವವರ್ತೀ ಉಪನಿವಿಷ್ಟ ಆರ್ಯರು 'ದೇವತೆ' ಎಂಬ ಹೆಸರನ್ನು ಹೇಗೆ ಪಡೆದರು? ವೈದಿಕಯುಗದಲ್ಲಿ ಮನುಷ್ಯನು ವಿದ್ವಾನನಾಗಲು 'ದೇವತೆ' ಎಂಬ ಹೆಸರನ್ನು ಪಡೆಯುತ್ತಿದ್ದನು. ಮತ್ತು ಮೂರ್ಖನೂ, ಅವಿದ್ವಾನನೂ ಆಗಲು'ಅಸುರ'ನೆಂಬ ಹೆಸರನ್ನು ಪಡೆಯುತ್ತಿದ್ದನು- "ವಿದ್ವಾಂಸೋ ಹಿ ದೇವಾಃ I ತದ್ ವಿಪರೀತಾ ಅವಿದ್ವಾಂಸೋ ಹಿ ಅಸುರಾಃ"

- ಶತಪಥ ಬ್ರಾಹ್ಮಣ

ಮತ್ತೂ ಕಂಡುಬರುವದೇನಂದರೆ "ಏತೇ ದೇವಾಃ ಪ್ರತ್ಯಕ್ಷಂ ಯತ್ ಬ್ರಾಹ್ಮಣಾಃ" ಅರ್ಥಾತ್ ಈ ದೇವತೆಗಳೇ ಬ್ರಾಹ್ಮಣರು. ವೈದಿಕ ಯುಗದಲ್ಲಿ ವೇದವಿತ್ತರು ಮಾತ್ರ ದೇವತೆ ಎಂಬ ಹೆಸರನ್ನು ಪಡೆಯುತ್ತಿದ್ದರು ಮತ್ತು ಈ ದೇವತೆಗಳೆಲ್ಲರೂ ಬ್ರಾಹ್ಮಣರು. ಆರ್ಯ ಬ್ರಾಹ್ಮಣರ ಆದಿಮ ವಾಸಸ್ಥಾನವಾದ ಇಲಾವೃತವರ್ಷದಲ್ಲಿ ವೇದವಿದ್ಯೆಯು ವಿಶೇಷವಾಗಿ ಚರ್ಚಿತವಾಗುತ್ತಿತ್ತು. ಅವರು (ಆರ್ಯಬ್ರಾಹ್ಮಣರು) ಜ್ಞಾನ, ವಿದ್ವತ್ತೆ, ಪರಾಕ್ರಮಗಳಲ್ಲಿ ಉಳಿದವರಿಗಿಂತ ಶ್ರೇಷ್ಠರಿದ್ದರೆಂದು 'ದೇವತೆ' ಎಂಬ ಹೆಸರನ್ನು ಪಡೆದಿದ್ದರು. ಭಾರತಾಗತ ಆರ್ಯರು ವೇದವಿದ್ಯೆಯ ಚರ್ಚೆಯನ್ನು ಮಾಡುತ್ತಿದ್ದಿಲ್ಲವೋ? ಅವರು ದೇವತೆ ಎಂಬ ಹೆಸರನ್ನು ಏಕೆ ಪಡೆಯಲಿಲ್ಲ? ಎಂಬ ಪ್ರಶ್ನೆಗಳು ಉದ್ಭವಿಸುವವು. ಇದಕ್ಕೆ ಉತ್ತರವೆಂದರೆ-ಸಮಾನಜ್ಞಾನೀ ಹಾಗು ಸಮಾನ ಅವಸ್ಥಾಸಂಪನ್ನರಾಗಿದ್ದರು ಸಹ, ಪಿತೃಭೂಮಿಯಲ್ಲಿ ಯಾರು ಸ್ಥಾಯೀಭಾವದಿಂದ ವಾಸಮಾಡುವರೋ ಅವರು ಸಾಧಾರಣವಾಗಿ ಪಿತೃಭೂಮಿಯಿಂದ ಹೊರಬಿದ್ದು, ಬೇರೆಡೆಯಲ್ಲಿ ಉಪನಿವಿಷ್ಟರಾದ ಸ್ವಜನರಿಂದ ಹೆಚ್ಚು ಸನ್ಮಾನವನ್ನು ಹೊಂದುತ್ತಾರೆ. ಇಂತಹ ಘಟನೆಗಳನ್ನು ನಾವು ಸಮಾಜದಲ್ಲಿ ಯಾವಾಗಲೂ ನೋಡುತ್ತೇವೆ. ಭಾರತದಲ್ಲಿ ಉಪನಿವಿಷ್ಠರಾದ ಬ್ರಾಹ್ಮಣದೇವತೆಗಳ ಸಮಯದಲ್ಲಿಯೂ ಇದರಂತೆಯೇ ವ್ಯವಹಾರವು ಘಟಿಸಿತ್ತು. ಅವರು ಇಲಾವೃತವರ್ಷ ಹಾಗು ತತ್ ಪಾರ್ಶ್ವವರ್ತೀ ಸ್ಥಾನಗಳ ಬ್ರಾಹ್ಮಣ ದೇವತೆಗಳಂತೆ ವಿದ್ವತ್ತೆಯಲ್ಲಿ ಸಮಾನ ಪಾರದರ್ಶಿಗಳಿದ್ದರು ಸಹ, ಪಿತೃಭೂಮಿಯಿಂದ ಚ್ಯುತರೆಂದು, ಪಿತೃಭೂಮಿಯಲ್ಲಿಯ ಜ್ಞಾತಿಗಳಂತೆ ಸಮಾಜದಲ್ಲಿ ಸನ್ಮಾನವನ್ನು ಪಡೆಯಲು ಸಮರ್ಥರಾಗಲಿಲ್ಲ. ಇನ್ನೂ ಕೆಲವು ಕಾರಣಗಳ ಮೂಲಕ ಅವರ ಸನ್ಮಾನದ ಲಾಘವವು ಘಟಿಸಿರುವದು ಹೆಚ್ಚು ಸಂಭವವು. ಭಾರತಾಗತ ದೇವತೆಗಳ ಸಂಖ್ಯಾಧಿಕ್ಯವಿರದ ಕಾರಣ, ಅವರು ಭಾರತದಲ್ಲಿಯ ಆದಿಮ ನಿವಾಸಿಗಳ ಕೆಲಕೆಲವು ಗುಂಪುಗಳೊಡನೆ ಕೂಡಿಕೊಳ್ಳಲು ಸಂಭವವಾಯಿತು ಹಾಗು ಅದೇ ಕಾರಣದಿಂದ ಅವರ ಆಚಾರ, ವ್ಯವಹಾರಗಳಲ್ಲಿ ಕೆಲವು ಅನಾರ್ಯ ಭಾವಗಳೂ ಪ್ರವೇಶಮಾಡಿದವು. ಅದಕ್ಕೋಸುಗವೇ ಅವರು ಲೋಕಸಮಾಜದಲ್ಲಿ ಕೆಲಮಟ್ಟಿಗೆ ಕಡಿಮೆ ತರಗತಿಯವರಾದರು.

ಮತ್ತು ಇಲಾವೃತವರ್ಷ ಹಾಗು ತತ್‌ಪಾರ್ಶ್ವವರ್ತೀ ರಾಜ್ಯಗಳು ಶೀತಪ್ರಧಾನ ದೇಶಗಳಿದ್ದುದರಿಂದ ಅಲ್ಲಿಯ ಜನರು ಸಾಮಾನ್ಯವಾಗಿ ನೋಡಲು ಒಳ್ಳೇ ಸುಂದರರೂ, ಬಲಿಷ್ಠಕಾಯರೂ ಆಗಿದ್ದರು. ಪಕ್ಷಾಂತರದಲ್ಲಿ ಭಾರತಾಗತ ಆರ್ಯದೇವತೆಗಳು ಹೆಚ್ಚು ಉಷ್ಣತೆಯುಳ್ಳ ದೇಶದಲ್ಲಿ ಇದ್ದುದರಿಂದ ಕಪ್ಪುಬಣ್ಣದವರೂ,ಕೃಶಕಾಯರೂ ಆದರು. ಅವರ ವಂಶದವರು ಸಹ ಪಿತಾ ಪಿತಾಮಹರಂತೆಯೇ ಆದರು. ಅವರು ಸಮಾಜದಲ್ಲಿ ಪಿತೃಭೂಮಿಯಲ್ಲಿಯ ಬ್ರಾಹ್ಮಣರಂತೆ ಸಮ್ಮಾನ ಲಾಭವನ್ನು ಹೊಂದಲಿಲ್ಲ. ಸುತರಾಂ ಪಿತೃಭೂಮಿಯಲ್ಲಿಯ ಬ್ರಾಹ್ಮಣರು ದೇವತೆಗಳೇ ಆಗಿಹೋದರು, ಹಾಗು ಭಾರತಾಗತ ದೇವತೆಗಳು ತಮ್ಮ ದೇವತ್ವದಿಂದ ವಂಚಿತರಾದರು.

ಮತ್ತೊಂದು ಮಾತು, ಮಹಾಭಾರತ, ರಾಮಾಯಣ ಪುರಾಣಾದಿಗಳನ್ನು ಓದಲು ಕಂಡುಬರುವದು: ದೇವತೆಗಳೆಲ್ಲರೂ ವಿಮಾನ ಸಂಚಾರಿಗಳು, ವಿಮಾನಗಳಿಂದಲೇ ಈ ದೇಶಕ್ಕೆ ಬಂದು, ಸಂಚರಿಸಿ ಹೋಗುತ್ತಿದ್ದರು. ಆದರೆ ಭಾರತಕ್ಕೆ ಬಂದ ಬ್ರಾಹ್ಮಣ ದೇವತೆಗಳು ವಿಮಾನವಿದ್ಯೆಯಲ್ಲಿ ಪಾರದರ್ಶಿಗಳಿದ್ದಿಲ್ಲ. ಅಂತೇ ಅವರು ತಮಗಿಂತ ಹಿಮಾಲಯದ ಆಚೆಯಲ್ಲಿದ್ದ ಬ್ರಾಹ್ಮಣರಿಗೆ ಬಹಳ ಶ್ರೇಷ್ಠರೆಂದು ತಿಳಿಯುತ್ತಿದ್ದರು. ಹಾಗು 'ದೇವತಾ' ಎಂಬ ಹೆಸರನ್ನು ಕೊಟ್ಟಿದ್ದರು. ರಾವಣನ "ಪುಷ್ಪಕರಥ" ಎಂಬ ಹೆಸರಿನ ವಿಮಾನವಿತ್ತು. ಇದು ಇವನ ಸ್ವಂತವಲ್ಲ. ಕುಬೇರನಿಂದ ಬಲುಮೆಯಿಂದ ತೆಗೆದುಕೊಂಡಿದ್ದನು. ಮುಂದೆ ಇದು ರಾವಣನ ಮರಣಕ್ಕೆ ಕಾರಣನಾದ ರಾಮನ ಕೈಸೇರಿತು.

ಇಲಾವೃತವರ್ಷ ಹಾಗು ತತ್‌ಪಾರ್ಶ್ವವರ್ತಿಯಾದ ಎಲ್ಲ ರಾಜ್ಯಗಳೂ ಬ್ರಾಹ್ಮಣ ಪ್ರಧಾನವಿದ್ದವು (ಮಂಗಾಃ ಬ್ರಾಹ್ಮಣ ಭೂಮಿಷ್ಠ್ಯಾಃ -ಮಹಾಭಾರತ. ಸೋಮೇ ಬ್ರಾಹ್ಮಣಾನಾಂ ರಾಜಾ ಆಸೀತ್ -ಯಜುರ್ವೇದ. ಬ್ರಹ್ಮಾ ವಸತಿ ದೇವೇಶೋ ಬ್ರಹ್ಮರ್ಷಿ ಪರಿವಾರಿತಃ -ರಾಮಾಯಣ). ಸುತರಾಂ ಆ ಎಲ್ಲ ಸ್ಥಾನಗಳಲ್ಲಿ ಭಾರತವರ್ಷಕ್ಕಿಂತ ವೇದವಿದ್ಯೆಯ ಚರ್ಚೆಯೂ, ಬ್ರಹ್ಮಚರ್ಚೆಯೂ ಬಹಳ ಹೆಚ್ಚು ನಡೆಯುತ್ತಿತ್ತು. ಪಿತೃಭೂಮಿಯ ಬ್ರಾಹ್ಮಣರು ಬಹಳ ಮುಂದುವರಿದವರಿದ್ದರು. ಅವರು ಸಂಘಬದ್ಧರಿದ್ದುದರಿಂದ ಅವರ ಬಲವೂ ಅಸೀಮವಾಗಿತ್ತು. ಅವರು ಭಾರತದ ಜನರು ಅರಿಯದ ಎಷ್ಟೋ ಅಸ್ತ್ರಗಳ ಪ್ರಯೋಗಗಳನ್ನು ಬಲ್ಲವರಾಗಿದ್ದರು. ದಿವ್ಯಾಸ್ತ್ರಗಳನ್ನು ಕಲಿಯಬೇಕಾದರೆ ಸ್ವರ್ಗಕ್ಕೆ ಹೋಗಿಯೇ ಕಲಿಯಬೇಕಾಗುತ್ತಿತ್ತು.

ಕಾಲಕ್ರಮದಿಂದ ಭಾರತದಲ್ಲಿ ಉಪನಿವಿಷ್ಟರಾದ ಆರ್ಯರು ಹಾಗು ಅವರ ವಂಶದವರು ದೇವಲೋಕವು ತಮ್ಮ ಪಿತೃಭೂಮಿಯೆಂಬುದನ್ನು ಯಾವಾಗ ಮರೆಯ ಹತ್ತಿದರೋ, ಆಗ ಅವರು ದೇವತೆಗಳು ತಮ್ಮಿಂದ ಭಿನ್ನರೂ ಬಹಳ ಶ್ರೇಷ್ಠರೂ ಎಂದು ತಿಳಿಯಹತ್ತಿದರು. ಅನಂತರ ವಿಸ್ಮೃತಿಯೂ, ಅಜ್ಞಾನವೂ ಹೆಚ್ಚಿದಂತೆ ಹಲವು ಬಗೆಯ ಅವಾಂತರ ಕಲ್ಪನೆಗಳ ಸೃಷ್ಟಿಯಾಯಿತು. ವೇದವಿದ್ಯಾವಿಹೀನರಾದ ಜನರು ಈ ಎಲ್ಲ ಸ್ವರ್ಗಗಳು ಆಕಾಶಸ್ಥವೆಂದೂ, ಭೂಮಿಯವು ಅಲ್ಲವೆಂದೂ ತಿಳಿಯಹತ್ತಿದರು. ಇಲ್ಲಿಯ ವರೆಗೆ ಈ ದೇಶದ ಸಾಮಾನ್ಯ ಜನರ-ಇಷ್ಟೇ ಅಲ್ಲ ಹಲವು ಪಂಡಿತರ ವಿಚಾರದಲ್ಲಿಯೂ ಇದೇ ಬದ್ಧಮೂಲವಾಗಿದೆ. ಆದರೆ ದೇಶದ ಜನರಿಗೆ ಹೆಚ್ಚಾಗಿ ದೋಷ ಕೊಡುವದಿಲ್ಲ. ಇದು ಕಾಲದ ನಿಯಮವು. ನಮ್ಮ ದೇಶದ ಹಲವು ಪಂಡಿತರು ಈ ವಿಷಯದ ನಿಜವಾದ ಶೋಧವನ್ನು ಮಾಡಿಲ್ಲ; ಮಾಡಲಿಕ್ಕೆ ಪ್ರಯತ್ನವನ್ನೂ ಮಾಡುವದಿಲ್ಲ. ಅವರಲ್ಲಿ ಕೆಲವರು 'ಸ್ವರ್ಗಗಳು ಶೂನ್ಯ'ವೆಂದು, ಅಜ್ಞಜನರಂತೆ ನಂಬಿಗೆಯನ್ನು ಇಡುವರು. ಮತ್ತು ಕೆಲಕೆಲವರು, ಯುರೋಪೀಯ ಪಂಡಿತರು ಹಾಗು ಅವರ ಶಿಷ್ಯತ್ವವನ್ನು ವಹಿಸಿದ ನಮ್ಮ ದೇಶದ ಆಂಗ್ಲಭಾಷಾ ಶಿಕ್ಷಿತರು ಅನ್ನುವಂತೆ "ಇದೆಲ್ಲ ಸುಳ್ಳು, ಇದು ಕವಿಯ ಕಲ್ಪನಾ ಮಾತ್ರ" ಎಂದು ಗಂಭೀರತೆಯಿಂದ ತಲೆಯಲ್ಲಾಡಿಸಿ ಮಾತಾಡುವರು.

ಆದರೆ ಸ್ವರ್ಗವು ಶೂನ್ಯದಲ್ಲಿ ಅಥವಾ ಮೇಲ್ಗಡೆಯಲ್ಲಿ ಇರುವುದೆಂಬ ತಿಳುವಳಿಕೆಯು ಜನರಲ್ಲಿ ಬದ್ಧಮೂಲವಾಗಲಿಕ್ಕೆ ಕಾರಣವುಂಟು. ಇಲಾವೃತವರ್ಷ, ಕಿಂಪುರುಷವರ್ಷ ಮೊದಲಾದವುಗಳೆಲ್ಲವೂ ಗುಡ್ಡಗಾಡ ಪ್ರದೇಶಗಳು. ಆದುದರಿಂದಲೇ ಭಾರತದ ಸಮತಲ ಭೂಮಿಗಿಂತ ಹೆಚ್ಚು ಎತ್ತರದಲ್ಲಿರುತ್ತವೆ ಮತ್ತು ದೇವತೆಗಳು ಭಾರತವರ್ಷದಲ್ಲಿ ಬರುವಾಗ ವಿಮಾನದಲ್ಲಿ ಕುಳಿತು ಬರುತ್ತಿದ್ದರು. ಇದನ್ನೇ ಜನರು ಶೂನ್ಯಸ್ವರ್ಗದಿಂದ ಬರುತ್ತಿದ್ದರೆಂದು ತಿಳಿಯಹತ್ತಿದರು. ಕೆಲವರು ಸ್ವರ್ಗವು ಉತ್ತರಕ್ಕೆ ಇರುವದೆಂದು ಹೇಳಿದರೂ ನಿಶ್ಚಿತ ಸ್ಥಾನವನ್ನು ಹೇಳಲಿಕ್ಕೆ ಸಮರ್ಥರಾಗಿಲ್ಲ. ಇದಕ್ಕೆ ಕಾರಣವೇನಂದರೆ, ಸ್ವರ್ಗಲೋಕಗಳು ಭಾರತದ ಉತ್ತರದಲ್ಲಿ ಹಿಮಾಲಯದ ಆಚೆಗೆ ಇದ್ದುದೇ ಸರಿ.

ಸಾಮಾನ್ಯ ಜನರು ಅಜ್ಞರು, ವೇದವಿದ್ಯಾವಿಹೀನರು. ಒಂದು ವೇಳೆ ಇವರು ಸ್ವರ್ಗಭೂಮಿಯು 'ಶೂನ್ಯ'ದಲ್ಲಿ ಅವಸ್ಥಿತವೆಂದು ಅನ್ನಲಿ, ಪಂಡಿತರು ಸ್ವರ್ಗದ ಸಂಗತಿಯನ್ನು ಮರೆತುಬಿಟ್ಟುದು ಹೇಗೆ? ಎಂಬ ಪ್ರಶ್ನೆವುಂಟಾಗುವದು. ಇದಕ್ಕೆ ಉತ್ತರವೇನಂದರೆ-ದೇವತೆಗಳ ಕ್ಷಮತ್ವದ ನಾಶದೊಡನೆ ಸ್ವರ್ಗಕ್ಕೆ ಹೋಗುವ ಮಾರ್ಗಗಳು ಕ್ರಮೇಣ ವಿಪತ್‌ಸಂಕುಲವಾಗಹತ್ತಿದವು. ಪಿತೃಯಾನ, ದೇವಯಾನ, ಧೂಮಯಾನ ಮೊದಲಾದ ಮಾರ್ಗಗಳ ಎರಡೂ ಪಾರ್ಶ್ವಗಳಲ್ಲಿ ಅಸಭ್ಯರಾದ ಶಕ, ಹೂಣ, ಕಿರಾತ ಮೊದಲಾದ ದುರ್ಧರ್ಷ ಜಾತಿಗಳು ವಾಸಮಾಡಹತ್ತಿದವು. ದೇವತೆಗಳು ದುರ್ಬಲರಾಗುತ್ತ ನಡೆಯಲು, ಆ ಎಲ್ಲ ಜಾತಿಗಳೂ ತಲೆಯೆತ್ತಹತ್ತಿದವು. ಹಾಗೂ ಮಾರ್ಗಗಳಲ್ಲಿಯ ಜನರನ್ನು ಆಕ್ರಮಿಸಿ ಅವರ ಸರ್ವಸ್ವವನ್ನು ಸುಲಿಗೆ ಮಾಡಹತ್ತಿದರು; ಅಲ್ಲದೆ ಕೆಲಕೆಲವರ ಪ್ರಾಣವನ್ನು ಸಹ ತೆಗೆದುಕೊಳ್ಳಹತ್ತಿದರು. ಪ್ರಾಣಭಯದಿಂದ ಜನರು ಸ್ವರ್ಗಲೋಕಕ್ಕೆ ಹೋಗುವದನ್ನು ಕಡಿಮೆ ಮಾಡಿದರು, ಬರುಬರುತ್ತ ಇದು ನಿಂತೇಹೋಯಿತು. ಪಂಡಿತರೇನು ಮೂರ್ಖರೇನು? ಎಲ್ಲರೂ ದೇವಲೋಕದ ಸಂಗತಿಯನ್ನು ಮರೆತುಬಿಟ್ಟರು. ದೇವತೆಗಳ ಕ್ಷಮತೆಯು ಮಹಾಭಾರತೀಯ ಯುದ್ಧದ ಕಾಲದಿಂದಲೇ ಆರಂಭವಾಗಿ, ಮುಂದೆ ಕೆಲವು ಶತಮಾನಗಳಲ್ಲಿಯೇ ಅದು ನಷ್ಟವಾಗಿ ಹೋಯಿತು.

ಈ ಎಲ್ಲ ದೇವತೆಗಳು ಈಗ ಎಲ್ಲಿ ಇರುವರು? ಅಥವಾ ಎಲ್ಲಿಗೆ ಹೋದರು? ಅವರು ವಾಸಿಸಿದ ದೇಶಗಳು ಈಗ ಇರುವವೇ? ಎಂಬೀ ಪ್ರಶ್ನೆಗಳುದ್ಭವಿಸುವವು.

ಇದಕ್ಕೆ ಉತ್ತರವೇನಂದರೆ- ಮಹಾಭಾರತೀಯ ಕಾಲದಿಂದಲೇ ದೇವತೆಗಳು ಯುದ್ಧ ವಿದ್ಯೆಯಲ್ಲಿ ದುರ್ಲಕ್ಷವನ್ನು ಮಾಡಲು ಆರಂಭಿಸಿದರು. ಮಹಾಭಾರತ ಸಭಾಪರ್ವದಲ್ಲಿ -ಅರ್ಜುನನು ಉತ್ತರ ದಿಕ್ಕನ್ನು ಜಯಿಸಲು ಹೊರಟು, ಹಿಮಾಲಯ ಪ್ರದೇಶದಲ್ಲಿ ಹಲವು ದುರ್ಧರ್ಷ ಜಾತಿಗಳೊಡನೆ ಯುದ್ಧಮಾಡಿ, ದೇವಪುರಿಯನ್ನು ಜಯಿಸಲು ಹೋದನು. ಆದರೆ ಅಲ್ಲಿ ಹೋದ ಮಾತ್ರದಿಂದಲೇ ಅಲ್ಲಿಯ ಸೌಮ್ಯಮೂರ್ತಿಗಳಾದ ದೇವತೆಗಳು "ಇದೇ ದೇವಭೂಮಿ, ಯುದ್ಧವಿಗ್ರಹಾದಿಗಳಿಲ್ಲ. ನೀನು ಯುದ್ಧ ಮಾಡದೆಯೇ ಕಪ್ಪವನ್ನು ತೆಗೆದುಕೊಂಡು ಹೋಗು" ಎಂದು ಹೇಳಿದರು. ಇದರಿಂದ ದೇವತೆಗಳು ಯುದ್ಧವಿದ್ಯೆಯನ್ನು ಮರೆತು ಬಿಟ್ಟಿದ್ದರೆಂದೂ ಜ್ಞಾನಚರ್ಚೆಯಲ್ಲಿ ಆತ್ಮನಿಯೋಗ ಮಾಡಿದ್ದರೆಂದೂ ತಿಳಿಯುವದು. ಪಕ್ಷಾಂತರದಲ್ಲಿ ನಿರ್ಜಿತರಾದ ಅನಾರ್ಯಜಾತಿಗಳು ಈ ಸುಯೋಗದಲ್ಲಿ ಒಳ್ಳೇ ಪ್ರಬಲರಾಗಿ, ಎಲ್ಲ ದೇವರಾಜ್ಯವನ್ನು ವಶಪಡಿಸಿಕೊಂಡರು. ಈ ಯುದ್ಧದಲ್ಲಿ ಹಲವು ದೇವತೆಗಳು ಪ್ರಾಣಗಳನ್ನು ಕಳಕೊಂಡಿರುವದು ಹೆಚ್ಚು ಸಂಭವನೀಯವು. ಉಳಿದವರೆಲ್ಲರು ನಿರ್ಜೀವರಾಗಿ ಕೆಲವು ದಿವಸಗಳ ತರುವಾಯ ಅನಾರ್ಯರೊಡನೆ ಬೆರೆತು ಹೋದರು; ಮುಂದೆ ಬೇಗನೆ ಅವರ ಆಕೃತಿ ಪ್ರಕೃತಿಗಳು ಪರಿವರ್ತನವಾಗಿ ಹೋದವು. ಮಹಾಭಾರತದಲ್ಲಿ ಕಂಡುಬರುವದೇನಂದರೆ- 'ಸಿಂಧು ನದಿಯ ಪಶ್ಚಿಮ ತೀರದಲ್ಲಿ ಅನೇಕ ಶಕ ಯವನ ಮ್ಲೇಂಚ್ಛಜಾತಿಗಳೂ, ಪಶ್ಚಿಮದಲ್ಲಿ ಗಾಂಧಾರ (ಕಂದಾಹಾರ)ಕ್ಕೆ ಹೊಂದಿದ ಪ್ರದೇಶಗಳಲ್ಲಿ ಕಿರಾತ, ಪಹ್ಲವ, ಹೂಣ ಮೊದಲಾದ ಜಾತಿಗಳೂ ವಾಸಮಾಡುತ್ತಿದ್ದವು. ಮತ್ತು ತಿಬೇತ (ಮಾಶಕ) ದೇಶದ ಪೂರ್ವಭಾಗದಲ್ಲಿ ಚೀನಾ ಜನರು ವಾಸಮಾಡುತ್ತಿದ್ದರು. ಈ ಚೀನಾಜನರೂ ಯುದ್ಧವಿದ್ಯೆಯಲ್ಲಿ ಒಳ್ಳೇ ಪಾರದರ್ಶಿಗಳಿದ್ದರು. ಅವರ ರಾಜ್ಯವು ಮಹಾಭಾರತೀಯ ಯುಗದಲ್ಲಿ ಆಸಾಮದಲ್ಲಿಯ ಪ್ರಾಗ್‌ಜ್ಯೋತಿಷಪುರದ ವರೆಗೆ ಹಬ್ಬಿಗೊಂಡಿತ್ತು.

ಭಾರತದ ಇತಿಹಾಸದಿಂದ ಕಂಡುಬರುವದೇನೆಂದರೆ -ಕ್ರಿ.ಪೂ. ಕೆಲವು ಶತಮಾನ (ಅರ್ಥಾತ್ ಮಹಾಭಾರತ ಯುದ್ಧದ ಕೆಲವು ಶತಮಾನಗಳ ನಂತರ)ಗಳಿಂದಲೇ ಶಕ, ಹೂಣ ಮೊದಲಾದ ಜಾತಿಗಳು ಒಳ್ಳೇ ಪ್ರಬಲವಾದವು ಹಾಗು ಇಡಿಯ ಮಧ್ಯ ಏಸಿಯಾ ಪ್ರದೇಶವನ್ನು ಆಕ್ರಮಿಸಿದವು. ಅವು ಭಾರತವರ್ಷದ ಕೆಲವು ಭಾಗವನ್ನು ಸಹ ವಶಪಡಿಸಿಕೊಂಡಿದ್ದವು. ಅಪರ ಪಕ್ಷದಲ್ಲಿ ಚೀನಾಗಣವೂ ಒಳ್ಳೇ ಪ್ರಬಲವಾಯಿತು.

ಈ ಎಲ್ಲ ಅಸಭ್ಯಜಾತಿಗಳ ಮೂಲಕವೇ ದೇವಭೂಮಿಯು ಕಲುಷಿತವೂ, ದೇವಸಭ್ಯತೆಯು ಧ್ವಂಸೀಕೃತವೂ ಆಯಿತೆಂಬುವದು ಹೆಚ್ಚು ಸಂಭವನೀಯವು. ನಿರ್ಜಿತರಾದ ಬ್ರಾಹ್ಮಣ ದೇವತೆಗಳು ಅನನ್ಯೋಪಾಯರಾಗಿ ಈ ಅಸಭ್ಯರೊಡನೆ ಕೂಡಿಹೋದರು. ಒಡನೆಯೇ ಮಧ್ಯ ಏಸಿಯಾ ಹಾಗೂ ಉತ್ತರ ಏಸಿಯಾಗಳ ಆರ್ಯ ಸುಧಾರಣೆಯು ಲೋಪವಾಗಿಬಿಟ್ಟಿತು. ಅಂತರ್ಜಾತಿಕ ವಿವಾಹಾದಿಗಳಿಂದ ದೇವತೆಗಳ ರೂಪದ ಪರಿವರ್ತನವು ಒಂದೆರಡು ತಲೆಗಳಲ್ಲಿಯೇ ಆಗಿಹೋಯಿತು. ಮತ್ತು ಮೊದಲಿನ ಸಭ್ಯತೆಯನ್ನು ಸಹ ಮರೆತುಬಿಟ್ಟರು. ಈಗ ಮಧ್ಯ ಏಸಿಯಾ ಹಾಗೂ ಉತ್ತರ ಏಸಿಯಾಗಳಲ್ಲಿ ಚಪ್ಪಟ ಮೂಗಿನ ಹೊರತು, ಉನ್ನತ ನಾಸಿಕದವರು ಕಂಡುಬರುವದಿಲ್ಲ. ಇದೇ ದೇವತೆಗಳ ಶೇಷಪರಿಣತಿಯು. ಆ ದೇವಲೋಕವು ಈಗ ಸಹ ಇರುವದು; ಆದರೆ ಆ ಎಲ್ಲ ಸ್ಥಾನಗಳಲ್ಲಿ ದೇವತೆಗಳು ಮಾತ್ರ ಇಲ್ಲ. ಅಂತೇ ಹಲವು ಅಜ್ಞರು-'ಕಲಿಯುಗದಲ್ಲಿ ದೇವತೆಗಳು ಅಂತರ್ಧಾನವಾಗಿದ್ದಾರೆ' ಎಂದು ಹೇಳುವರು. ಇದು ಯಾವ ಬಗೆಯ ಅಂತರ್ಧಾನವೆಂಬುದನ್ನು ಈಗ ಎಲ್ಲರೂ ತಿಳಿಯುವರು.

ಮಹಾಭಾರತೀಯ ಯುಗದ ತರುವಾಯ ಕೆಲವು ಶತಮಾನಗಳಲ್ಲಿಯೇ ಮಧ್ಯ ಏಸಿಯಾ ಹಾಗು ಉತ್ತರ ಏಸಿಯಾಗಳಿಂದ ದೇವಸಭ್ಯತೆಯು ಲೋಪಹೊಂದಿತೆಂಬುದನ್ನು ಮೊದಲೇ ಹೇಳಿದ್ದೇವೆ. ಪಾಲೀಭಾಷೆಯಲ್ಲಿ ಬರೆಯಲ್ಪಟ್ಟ ಗ್ರಂಥಗಳಲ್ಲಿ ಎಲ್ಲಕ್ಕೂ ಹೆಚ್ಚು ಪುರಾತನವಾದವುಗಳು ಕ್ರಿ.ಪೂ. ೪ ಅಥವಾ ೩ನೆಯ ಶತಮಾನದಲ್ಲಿ ಬರೆಯಲ್ಪಟ್ಟವೆಯೆಂದು ನಿಶ್ಚಿತವಾಗಿರುತ್ತದೆ. ಆ ಎಲ್ಲ ಗ್ರಂಥಗಳಲ್ಲಿ ಭಗವಾನ್ ಬುದ್ಧನಿಂದ ಇಂದ್ರ, ವರುಣ, ಬ್ರಹ್ಮ ಮೊದಲಾದ ದೇವತೆಗಳು ಮೋಕ್ಷ ಸಂಬಂಧದಿಂದ ಉಪದೇಶವನ್ನು ಪಡೆಯುತ್ತಿದ್ದರು ಎಂದು ಹೇಳಿದೆ. ಕ್ರಿ. ಪೂ. ೪ನೆಯ ಶತಮಾನದಲ್ಲಿ (ಕ್ರಿ.ಪೂ. ೩೨೭ ವರ್ಷದಲ್ಲಿ) ಗ್ರೀಕ ವೀರನಾದ ಆಲೆಗ್ಝಾಂಡರನು ಮಧ್ಯ ಏಸಿಯಾವನ್ನು ಜಯಿಸಿದನು. ಆಗಿನ ರಿಕಾರ್ಡುಗಳು ಈಗ ದೊರೆತಿವೆ. ಅವುಗಳಲ್ಲಿ ಇಂದ್ರ-ವರುಣ ಮೊದಲಾದ ದೇವತೆಗಳ ಉಲ್ಲೇಖವಿಲ್ಲ. ಒಂದು ವೇಳೆ ಅಲ್ಲಿಯ ವರೆಗೆ ದೇವತೆಗಳು ಇದ್ದುದಾದರೆ ನಿಶ್ಚಯವಾಗಿಯೇ ಕೇತುಮಾಲವರ್ಷದ ರಾಜನಾದ ವರುಣನೊಡನೆ ಅಲೇಕ್ಝಾಂಡರನ ಯುದ್ಧವಾಗುತ್ತಿತ್ತು. ಪಾಲೀಭಾಷೆಯಲ್ಲಿ ಬರೆದ ಗ್ರಂಥಗಳ ಸಂಗತಿಯನ್ನು ನಂಬುವದಾದರೆ, ದೇವತೆಗಳ ಅವನತಿ ಅಥವಾ ಕ್ಷಮತೆಯ ಏಕಕಾಲೀನ ಹ್ರಾಸವು ೫ನೆಯ ಶತಮಾನದಲ್ಲಿಯೇ ಸಂಘಟಿತವಾಗಿತ್ತು ಎಂಬುವದೇ ಹೆಚ್ಚು ಸಂಭವನೀಯವು. ಈ ಆರ್ಯದೇವತೆಗಳು ಯುದ್ಧದ ಉಪದೇಶದಿಂದ ಅನುಪ್ರಾಣಿತರಾಗಿ ವೈದಿಕ ಯಾಗಯಜ್ಞಾದಿಗಳನ್ನು ಬಿಟ್ಟುಗೊಟ್ಟು, ಬೌದ್ಧಧರ್ಮಾವಲಂಬಿಗಳಾಗಿದ್ದರು. ಭಾರತವರ್ಷದಿಂದ ಬೌದ್ಧ ಶ್ರಮಣರನ್ನು ಕರೆದುಕೊಂಡು ಹೋಗುವದಕ್ಕೋಸುಗ ಕ್ರಿ.ಪೂ. ಕೆಲವು ಶತಮಾನಗಳಿಂದಲೇ ತಿಬೇಟ ಹಾಗು ಚೀನದೇಶೀಯ ರಾಜರು ಭಾರತಕ್ಕೆ ತದ್ದೇಶೀಯ ಪುರೋಹಿತರನ್ನು ಕಳಿಸುತ್ತಿದ್ದರು. ಇದರ ಪ್ರಮಾಣಗಳು ಇತಿಹಾಸದಲ್ಲಿ ಯಥೇಷ್ಟವಾಗಿ ದೊರೆಯುವವು. ಯುದ್ಧದ ಆವಿರ್ಭಾವದ ಅಥವಾ ತಿರೋಧಾನದ ಕೆಲವು ಶತಮಾನಗಳಲ್ಲಿಯೇ ಸಂಭವತಃ ದೇವಭೂಮಿಯಲ್ಲಿ ಬೌದ್ಧಧರ್ಮವು ಸಾರ್ವಜನೀನ ಧರ್ಮವೆಂದು ಗೃಹೀತವಾಯಿತು. ಆದರೆ ಪರವರ್ತಿಕಾಲದ ಅಸಭ್ಯಜಾತಿಯ ಕಬಲದಿಂದ ಅಲ್ಲಿಯ ವೇದ-ಉಪನಿಷದಾದಿಗಳು ರಕ್ಷಣೆಯನ್ನು ಹೊಂದಲಿಲ್ಲ. ಅಸಭ್ಯಜಾತಿಗಳ ಇಂತಹ ಆಚರಣೆಯು ಇತಿಹಾಸದಲ್ಲಿ ಯಥೇಷ್ಟವಾಗಿ ಕಂಡುಬರುತ್ತವೆ. ಅಲೇಕ್ಜಾಂಡ್ರಿಯಾದ ವಿಖ್ಯಾತ ಲಾಯಬ್ರರಿಯೂ, ತಕ್ಷಶಿಲಾ-ನಾಲಂದಾಗಳ ವಿಶ್ವವಿಖ್ಯಾತ ವಿಶ್ವವಿದ್ಯಾಲಯಗಳೂ, ಪುಸ್ತಕಾಲಯಗಳೂ ಅಸಭ್ಯಜಾತಿಗಳಿಂದ ನಾಶಮಾಡಲ್ಪಟ್ಟವು. ಈ ಕಾರಣದಿಂದಲೇ ಮಧ್ಯ ಏಸಿಯಾದಲ್ಲಿ ಹಾಗು ಉತ್ತರ ಏಸಿಯಾದಲ್ಲಿ (ಮೇರು ದೇಶಗಳಲ್ಲಿ) ಪ್ರಾಚೀನ ಸಂಸ್ಕೃತಸಾಹಿತ್ಯದ ಯಾವದೂ ನಿದರ್ಶನವು ದೊರೆಯುವದಿಲ್ಲ. ಸಾಮವೇದದ ಸೂತ್ರಕಾರನಾದ ಮಾಶಕಾಚಾರ್ಯನು ಮಾಶಕ

ಅಥವಾ ತಿಬೇತ ದೇಶೀಯನು. ಲಾಟ್ಯಾಯನ ದ್ರಾಹ್ಯಾಯಣ ಮೊದಲಾದವರು ಉತ್ತರದೇಶೀಯ ಅರ್ಥಾತ್ ಹಿಮಾಲಯದ ಉತ್ತರದ ಜನರು. ಇಂದ್ರ, ವರುಣ, ಸೂರ್ಯ, ಯಮ ಮೊದಲಾದ ದೇವತೆಗಳು ಮಂತ್ರದ್ರಷ್ಟೃಗಳೆಂದು ಋಗ್ವೇದದ ಹಲವು ಸ್ಥಳಗಳಲ್ಲಿ ಕಂಡುಬರುವದು. ಇವರೂ ಋಗ್ವೇದದ ಪ್ರಣಯನ ಕಾರ್ಯದಲ್ಲಿ ಸಹಾಯಮಾಡಿದ್ದರೆಂಬುದನ್ನು ಹೇಳುವದೇ ಬೇಡ. "ಸೂರ್ಯಾತ್ ಸಾಮವೇದಃ" ಸೂರ್ಯದೇವನು ಸಾಮವೇದವನ್ನು ಪ್ರಣಯನ ಮಾಡಿದನೆ? ಆದರೆ ಋಗ್ವೇದದಂತೆ ಸಾಮವೇದದಲ್ಲಿಯೂ ಹಲವು ಋಷಿಗಳ ಹೆಸರುಗಳು ಕಂಡುಭ್ಬರುತ್ತವೆ. ಸುತರಾಂ ಪೂರ್ವೋಕ್ತ ವಚನಗಳಿಂದ ಕಂಡುಬರುವದೇನಂದರೆ-ಸೂರ್ಯದೇವನು ಸಾಮವೇದದ ಪ್ರಣಯನ ಆರಂಭಮಾಡಿದನು. ಮತ್ತು ಚಂದ್ರದೇವನು "ಚಾಂದ್ರವ್ಯಾಕರಣ" ಎಂಬ ಹೆಸರಿನ ಒಂದು ವ್ಯಾಕರಣವನ್ನು ಪ್ರಣಯನ ಮಾಡಿದನು ಅತಏವ ಕಂಡುಬರುವದೇನಂದರೆ- ನಿಶ್ಚಯವಾಗಿಯೇ ದೀರ್ಘಕಾಲದ ಅತ್ಯಾಚಾರದ ಫಲದಿಂದ ಮಧ್ಯ ಏಸಿಯಾ ಹಾಗು ಉತ್ತರ ಏಸಿಯಾಗಳಿಂದ ಆರ್ಯಸಭ್ಯತೆಯ ನಿದರ್ಶನಗಳು ಲೋಪಹೊಂದಿರುತ್ತವೆ (ಭವಿಷ್ಯತ್ತಿನಲ್ಲಿ ಪ್ರತ್ನತತ್ತ್ವವಿದರ ಸಂಶೋಧನೆಯಿಂದ ಈ ವಿಷಯವಾಗಿ ಹಲವು ತಥ್ಯಗಳು ಹೊರಬೀಳಲು ಶಕ್ಯವಿರುವದು. ಈಗ ಮಧ್ಯ ಏಸಿಯಾದಲ್ಲಿ ಪ್ರತ್ನ ತಾತ್ವಿಕರು ಸಂಸ್ಕೃತ ಸಾಹಿತ್ಯದ ಹಲವು ನಮೂನೆಗಳನ್ನು ಆವಿಷ್ಕಾರ ಮಾಡಿದ್ದಾರೆ.) ಭಾರತೀಯ ಹಿಂದುಗಳಲ್ಲಿ ಶಿವಪೂಜೆಯ ಪದ್ಧತಿಯು ಹಲವು ದಿನಗಳಿಂದ ಪ್ರಚಲಿತವಿದ್ದು, ಶಿವನ ಅರಮನೆಯು ಎಲ್ಲಿ ಇತ್ತು ಎಂಬದನ್ನು ಹಲವರು ಬಲ್ಲರು. ತಿಬೇಟಿಯರು ಶಿವನ ಹಾಗು ಕುಬೇರನ ಅರಮನೆಗಳ ಸಂಗತಿಯನ್ನು ಈಗ ಸಹ ಹೇಳುತ್ತಾರೆ. ಅವರು ಕೈಲಾಸಪರ್ವತದ ಉತ್ತರಾಂಶ ಹಾಗು ಮಾನಸ ಸರೋವರದ ದಕ್ಷಿಣಾಂಶಕ್ಕೆ "ಗ್ಯಾಲಪೋ ನರಜಿಂಗಿ ಫೋಪ್‌ರಾಂ" ಅಥವಾ ಕುಬೇರನ ಆವಾಸ ಭೂಮಿಯೆಂದು ಕರೆಯುತ್ತಾರೆ. ಆದರೆ ಚೀನಿಗಳು ಹೀಗೆ ಹೇಳುವದಿಲ್ಲ. ಯಾಕಂದರೆ ತಿಬೇತಿಯರೂ, ಚೀನೀಯರೂ ಏಕವಂಶೀಯರಲ್ಲ. ಚೀನಿಗಳು ಮಂಗೋಲಿಯ ಅಥವಾ ಇಂಡೋ-ಏರಿಯಾನ್ ಅಥವಾ ಆರ್ಯಜಾತಿಯ ಅಂತರ್ಭುಕ್ತರಲ್ಲ. ಪಕ್ಷಾಂತರದಲ್ಲಿ ತಿಬೇತಿಯರು ಮಂಗೋಲಿಯ ಅಥವಾ ಇಂಡೋ-ಏರಿಯಾನ್ ಅಥವಾ ಆರ್ಯಜಾತಿಯ ವಂಶಧರರು. ಅವರು ಭಿನ್ನ ಧರ್ಮಾವಲಂಬಿಗಳಾಗಿದ್ದರು ಸಹ ಪಿತೃಪುರುಷರ ವಿಶ್ವಾಸ ಹಾಗು ಆಚಾರ ಮರೆಯಲಿಕ್ಕೆ ಸಮರ್ಥರಾಗಲಿಲ್ಲ. ದೇಹದ ಪರಿಮಾಪು ಹಾಗು ಮುಖದ ಲಕ್ಷಣ ಮೊದಲಾದವುಗಳನ್ನು ನೋಡಲು ಕಂಡುಬರುವದು. ತಿಬೇತಿಯರಲ್ಲಿ ಹಾಗು ತಾಕ್‌ಲಾಮಾಗಾನ್ ವಾಸಿಗಳಾದ ತುರ್ಕಿಗಳಲ್ಲಿ ಬಹಳ ಮಟ್ಟಿಗೆ ಆರ್ಯಭಾವವು ಇರುತ್ತದೆ. ಪಕ್ಷಾಂತರದಲ್ಲಿ ಪೂರ್ವದಿಕ್ಕಿನಲ್ಲಿಯ ನಿವಾಸಿಗಳಾದ ಚೀನಿಗಳೊಡನೆ ಇವರ ಪ್ರಭೇದವು ವಿಪುಲವಾಗಿರುವದು. ಒಂದು ವೇಳೆ ಈ ಎರಡು ಜಾತಿಗಳಿಗೂ ಸಾಮಾನ್ಯವಾಗಿ 'ಮಂಗೋಲಿಯಾ' ಎಂದು ಹೇಳಿದರೆ ದೇಹದ ಹಾಗು ಮುಂಡದ ಆಕೃತಿ-ಪ್ರಕೃತಿಗಳನ್ನು ನೋಡಿ ಚೀನಿಗಳಿಗೆ ಮಂಗೋಲಿಯ ಅನ್ನುವದು ಎಷ್ಟು ಸರಿ ಎಂಬ ವಿಷಯದಲ್ಲಿ ಹೆಚ್ಚು ಸಂದೇಹವಿರುತ್ತದೆ. (See Journal of the Royal Anthropological Institute 1912, p.p. 467-468)

ಸುತಾರಾಂ ಮಹಾಭಾರತದಲ್ಲಿ ಇರುವ "ಮಂಗಾಃ ಬ್ರಾಹ್ಮಣ ಭೂಯಿಷ್ಠಾಃ ಸ್ವಕರ್ಮನಿರತಾ ನೃಪ" ಎಂಬ ಸಂಗತಿಯನ್ನು ಹಾರಿಸಿ ಬಿಟ್ಟರೆ ನಡೆಯುವದಿಲ್ಲ. ಮಹಾಭಾರತಕ್ಕೆ ಹಾಗು ವೇದ-ಉಪನಿಷತ್ತು ಪುರಾಣಾದಿಗಳ ಪ್ರಮಾಣಗಳಿಗೆ ಹಲವರು ಪುಸ್ತಕದ ಪ್ರಮಾಣಗಳೆಂದು ಹಾಸ್ಯಮಾಡಿ ಒಗೆದು ಬಿಟ್ಟರೂ ಬಿಡಬಹುದು. ಇಂಥವರಿಗೆ ದುಃಖದ ಸಂಗತಿಯೆಂದರೆ-ಪ್ರಸಿದ್ಧ ನೃತತ್ತ್ವವಿದರಾದ Joyeeಸಾಹೇಬರು Royal Anthropological Instituteದ Journalದಲ್ಲಿ ಈ ಮಾತನ್ನು ಸ್ಪಷ್ಟವಾಗಿ ಬರೆದು, ಪ್ರಕಾರಾಂತರದಲ್ಲಿ ಶಾಸ್ತ್ರಾದಿಗಳ ಪ್ರಮಾಣಗಳನ್ನೇ ಸಮರ್ಥನೆ ಮಾಡಿದ್ದಾರೆ. ಶೂನ್ಯವನ್ನು ಲಕ್ಷಿಸಿ, ಈ ಶಾಸ್ತ್ರಾದಿಗಳಲ್ಲಿ ಭುವನವಿನ್ಯಾಸ ಅಧ್ಯಾಯ ಬರೆಯಲ್ಪಟ್ಟಿಲ್ಲ ಎಂಬುದನ್ನು ಹೇಳುವದೇ ಬೇಡ. ಶಾಸ್ತ್ರಾದಿಗಳನ್ನು ಓದಲು

ಸ್ಪಷ್ಟವಾಗಿ ಕಂಡುಬರುವದೇನಂದರೆ-ಲೇಖಕರು ನಿಜವಾಗಿಯೇ ಪೃಥ್ವಿಯನ್ನು ಸಂಚರಿಸಿದ್ದರು, ಅಥವಾ ಭೂಗೋಲ-ಇತಿಹಾಸಗಳಲ್ಲಿ ಬಹಳವಾಗಿ ಶೋಧಿಸಿದ್ದರು. ಮತ್ತೊಂದು ಮಾತು, ಚೀನ ದೇಶೀಯರು ಮಂಗೋಲಿಯ ಅಥವಾ ಆರ್ಯದೇವತೆಗಳ ವಂಶೀಯರಲ್ಲವೆಂಬ ಮಾತು ಮಹಾಭಾರತದಲ್ಲಿ ಸ್ಪಷ್ಟವಾಗಿಯೇ ಬರೆಯಲ್ಪಟ್ಟಿದೆ. ಈಗ ಚೀನೀಯರು ಎಲ್ಲ ಚೀನದೇಶ, ಮಂಗೋಲಿಯ ಹಾಗು ತುರ್ಕಸ್ತಾನ ಮೊದಲಾದವುಗಳಲ್ಲಿ ಹಬ್ಬಿದ್ದಾರೆ. ಮಹಾಭಾರತೀಯ ಯುಗದಲ್ಲಿ ಮಾತ್ರ ಅವರು ಹೀಗೆ ಹಬ್ಬುಗೊಂಡಿದ್ದಿಲ್ಲ. ಆ ಕಾಲದಲ್ಲಿ ಅವರು ಪೂರ್ವ ಚೀನದಲ್ಲಿಯೇ ಸೀಮಾಬದ್ಧರಾಗಿದ್ದರು. ಅವರ ವಾಸಸ್ಥಾನವು ಸಾಂಟಾಂ, ಸಾರಿಹಾಣ, ಇಂಡೋಚೀನ ಹಾಗು ಆಸಾಮದ ಕೆಲಭಾಗದ ವರೆಗೆ ಇತ್ತು. ಆ ಕಾಲದಲ್ಲಿ ಪ್ರಾಗ್‌ಜ್ಯೋತಿಷಪುರ (ಈಗಿನ ಕಾಮರೂಪ) ಚೀನಾ ಹಾಗು ಕಿರಾತರ ರಾಜ್ಯಗಳಿಂದ ಪರಿವೇಷ್ಟಿತವಿತ್ತು. "ಸ ಕಿರಾತೈಶ್ಚ ಚೀನೈಶ್ಚ ವೃತಃ ಪ್ರಾಗ್ ಜ್ಯೋತಿಷೋಽಭವತ್‌। ಅನ್ಯೈಶ್ಚ ಬಹುಭಿರ್ಯೋಧೈಃ ಸಾಗರಾ ನೃಪವಾಸಿಭಿಃ॥ -ಸಭಾಪರ್ವ ೨೬ನೆಯ ಅಧ್ಯಾಯ.

Chinese chronicle ಅರ್ಥಾತ್ ಚೀನದೇಶೀಯ ರಾಜಾಮಾಲಾ ನೋಡಿದರೂ, ಚೀನಿಗಳ ರಾಜ್ಯವು 'ಸಾಂಟಾಂ' ಹಾಗು ಅದರ ಹತ್ತರದಲ್ಲಿ ಇದ್ದ ಕೆಲವು ಸ್ಥಾನಗಳ ವರೆಗೆ ಸೀಮಾಬದ್ಧವಾಗಿತ್ತೆಂಬುದು ಸ್ಪಷ್ಟವಾಗಿಯೇ ಪ್ರತೀಯಮಾನವಾಗುವದು.

ಚೀನೀಯರಿಗೆ ಮಂಗೋಲಿಯ ಜಾತಿ ಅನ್ನುವದು ಶುದ್ಧವಾದ ತಪ್ಪು. ಈಗ ನಾವು ಮಂಗೋಲಿಯ ಸಭ್ಯತೆಯೆಂದು ಯಾವದನ್ನು ತಿಳಿಯುವೆವೋ ಅದು ಚೈನಿಕ ಸಭ್ಯತೆಯು ಸ್ವಲ್ಪಾದರೂ ಅಲ್ಲ. ನಿಜವಾದ ಮಂಗೋಲಿಯ ಸಭ್ಯತೆ ಮತ್ತು ಆರ್ಯಸಭ್ಯತೆ ಒಂದೇ. ಚೈನಿಕ ಸಭ್ಯತೆಯೊಡನೆ ಅಥವಾ ಆಸುರಿಕ (ವೈದಿಕ ಭಾಷೆಯಲ್ಲಿ) ಸಭ್ಯತೆಯೊಡನೆ ಮಂಗೋಲಿಯ ಅಥವಾ ಆರ್ಯಸಭ್ಯತೆಯ ಯಾವದೂ ಸಂಪರ್ಕವಿಲ್ಲ. ಈ ಸಂಬಂಧದಿಂದ ಋಗ್ವೇದವು ಹೇಳುತ್ತದೆ-ಭೀಮದ ನಾಮಕ ಒಬ್ಬ ಋಷಿಯು ಇಂದ್ರನ ಸ್ತವ ಮಾಡುವ ಸಮಯದಲ್ಲಿ ಹೇಳುತ್ತಾನೆ "ಹೇ ಇಂದ್ರ, ಅಸುರರು ನಮಗೆ ಚೆನ್ನಾಗಿ ತಿಳಿದಿಲ್ಲ. ಅವರು ವೇದವಿಹಿತ ಕರ್ಮಪದ್ಧತಿ ಒಪ್ಪುವದಿಲ್ಲ ಹಾಗು ಮಾನವಜಾತಿಯ ಧರ್ಮವನ್ನೂ ಪಾಲನೆ ಮಾಡುವದಿಲ್ಲ. ನೀನು ಅವರನ್ನು ವಧಿಸು." ಋಗ್ವೇದ -೧೦ನೆಯ ಮಂಡಲ ೨ನೇ ಅನುವಾಕ ೬ನೇ ಸೂತ್ರ.

ಮಧ್ಯ ಏಸಿಯಾದಿಂದ ಕಾಲಕ್ರಮದಲ್ಲಿ (ವೈದಿಕ ಯುಗದಲ್ಲಿಯೇ) ಆರ್ಯರು ನಾಲ್ಕೂ ಕಡೆಗೆ ಹಬ್ಬಲಿಕ್ಕೆ ಪ್ರಾರಂಭ ಮಾಡಿದರು. ಒಂದು ಗುಂಪು ಪಶ್ಚಿಮಕ್ಕೆ ಅರ್ಥಾತ್ ಏಸಿಯಾ ಮಾಯನರ, ಆರ್ಮೇನಿಯಾ (ಆರ್ಮಾನಿದೇಶ), ಬೆಬಿಲೋನಿಯಾ ಮೊದಲಾದ ಸ್ಥಾನಗಳಲ್ಲಿ ಹೋದರು. ಹಾಗು ಮತ್ತೊಂದು ಗುಂಪು ಗ್ರೀಸ, ಇತಾಲಿ ಮೊದಲಾದ ದೇಶಗಳಿಗೆ ಹೋಗಿ ಆಶ್ರಯ ಮಾಡಿದರು. ಪ್ರತ್ನತಾತ್ವಿಕರು ಹಾಗು ನೃತತ್ವವಿದರು ಏತದ್ದೇಶಗಳ ಜನರ ಆಕೃತಿ ಪ್ರಕೃತಿಗಳಲ್ಲಿ ಬಹುಮಟ್ಟಿಗೆ ಆರ್ಯಭಾವದ ಪ್ರಮಾಣವನ್ನು ಹೊಂದಿದ್ದಾರೆ. ಇಷ್ಟೇ ಅಲ್ಲ, ಅವರ ಆಚಾರ, ವ್ಯವಹಾರ ಹಾಗು ಶಿಕ್ಷಣ ಸಭ್ಯತೆಗಳಲ್ಲಿಯೂ ಆರ್ಯಭಾವದ ಎಷ್ಟೋ ಸಾದೃಶ್ಯವು ಕಂಡುಬರುತ್ತದೆ. ಜೆರೂಸಲೇಮ, ಪಾಲಿಸ್ತಾಯಿನ ಮೊದಲಾದ ಸ್ಥಾನಗಳ ಅಧಿವಾಸಿಗಳಾದ ಯಹೂದಿಗಳು ಪೂರ್ವದಿಕ್ಕಿನಿಂದ ಹೋಗಿದ್ದರು ಎಂಬ ಪ್ರಮಾಣವು ಬಾಯಿಬಲಿನಲ್ಲಿ ಕಂಡು ಬರುತ್ತದೆ.

"And the whole earth was of one language, and of one speech, and it came to pass, as they journeyed from the east, they found a plain in the land of Shinnar, and they dwelt there."

-Gyenesis chap XI

ಬಾಯಿಬಲ್ಲದ ಮಾತನ್ನು ಒಪ್ಪಿದರೆ, ಎಲ್ಲ ಪೃಥ್ವಿಯ ಒಂದು ಭಾಷೆಗೆ ಸಂಸ್ಕೃತ ಭಾಷೆಯೆಂದೂ, ಪೃಥ್ವಿಗೆ ಇಲಾವೃತವರ್ಷ (ಸೃಷ್ಟಿಯ ಪ್ರಥಮಾವಸ್ಥೆಯಲ್ಲಿ)ವೆಂದೂ ಗೊತ್ತಾಗುವದು. ಪೃಥ್ವಿಯಲ್ಲಿಯ ಎಲ್ಲ

ಜೀವಿಗಳ ಉತ್ಪತ್ತಿ ಸ್ಥಾನವು ಇಲಾವೃತ ವರ್ಷ ಅಥವಾ ಇಲಾ (-"ಭುವನೈರ್ಭೂತ ಭಾವನಾಃ") ಎಂದು ಪುರಾಣಾದಿಗಳಲ್ಲಿ ಹೇಳಿದೆ ಮತ್ತು ಬಾಯಿಬಲದಲ್ಲಿ Paradise ಅಥವಾ ಸ್ವರ್ಗದ ಯಾವ ವರ್ಣನೆಯು ಇರುವದೋ, ಅದರೊಡನೆ ಇಲಾವೃತ ವರ್ಷದಲ್ಲಿಯ ನಾಲ್ಕು ನದಿಗಳಿಂದ ಕೂಡಿದ ಹಾಗು ಪರ್ವತದ ಮೇಲೆ ಸಮಭೂಮಿಯಲ್ಲಿ ಇದ್ದ ತ್ರಿದಶಾಲಯ ಅಥವಾ ದೇವನಗರದ ಒಳ್ಳೇ ಹೊಂದಿಕೆಯಾಗುತ್ತದೆ. ಈ ನಾಲ್ಕು ನದಿಗಳು ಸ್ವರ್ಣದೀ ಗಂಗೆಯ ನಾಲ್ಕು ಪ್ರವಾಹಗಳೆಂದು ಮೊದಲೇ ವಿಶದಭಾವದಿಂದ ವರ್ಣಿತವಾಗಿರುತ್ತದೆ. ಬಾಯಬಲ್‌ದ ಸಭ್ಯತೆ ಅಥವಾ ಯಹುದಿಗಳ ಸಭ್ಯತೆಯು, ಋಗ್ವೇದದ ಸಭ್ಯತೆಯ ತರುವಾಯದಲ್ಲಿಯದೆಂದು ಅನೇಕ ಪ್ರಮಾಣಗಳಿರುತ್ತವೆ. (See. Historical quarterly 1929-30, Age of Rig Veda) ಮತ್ತು ಯಹುದಿಗಳು ಮಂಗೋಲಿಯಾದಿಂದಲೇ ಏಸಿಯಾ ಮಾಯಿನಗರಕ್ಕೆ ಹೋಗಿದ್ದರು, ಎಂಬುವದೂ ಬಾಯಬಲದ ಕಥೆಗಳಲ್ಲಿಯೇ ಕಂಡುಬರುತ್ತದೆ. ಯಹುದಿಗಳಿಗೆ ಅರಬರು ಹಿಬ್ರು (Hebrew) ಅನ್ನುತ್ತಿದ್ದರು. ಈ Hebrew ಶಬ್ದವು ಆರಬೀಧಾತು Eber (ಏಬಾರ)ದಿಂದ ಬಂದಿರುತ್ತದೆ. Eber ಅಥವಾ ಏಬಾರ ಅರ್ಥಕ್ಕೆ ನದೀ ದಾಟುವದು (to cross, or to be across a river) ಎಂದು ತಿಳಿಸುತ್ತದೆ.

ಸಿರಿಯಾ ಹಾಗು ಮೆಸೊಪಟೇಮಿಯಾದಲ್ಲಿ ಕ್ರಿ.ಪೂ. ೧೫ನೆಯ ಹಾಗು ೧೬ನೆಯ ಶತಮಾನದಲ್ಲಿ ಕೆಲವು ಉಪನಿವೇಶಗಳಿದ್ದವು. ಅಲ್ಲಿಯ ಜನರು ಆರ್ಯಭಾಷೆಯಲ್ಲಿ ಅರ್ಥಾತ್ ಸಂಸ್ಕೃತಭಾಷೆಯಲ್ಲಿ ಮಾತುಕತೆಗಳನ್ನು ಆಡುತ್ತಿದ್ದರು ಹಾಗು ಆರ್ಯಪೂಜಿತ ದೇವತೆಗಳನ್ನು ಪೂಜಿಸುತ್ತಿದ್ದರು. ಮಿಶರದೇಶದ 'ಟೆಲ್ ಏಲ್ ಅಮರ್ಯ್ ನಾ' ಎಂಬ ಸ್ಥಾನದಲ್ಲಿ ಕೆಲವು "ಕಿಉನಿ ಫರ್ಮಟೇಬಲೇಟ" ದೊರೆತಿರುತ್ತವೆ. ಇವುಗಳಲ್ಲಿ ಕೆಲವು ವೈದಿಕ ಹೆಸರು ದೊರೆಯುವವು.

"There are strong evidences to show that in the 15th & the 16th centuries B.C. in Syria & upper Mesopotamia there was several colonies of men of Aryan speech, some of whom worshipped Vedic Gods.

In the Cuneiform tablets discovered at Tell-el Amarna in Upper Egypt containing letters from the tributary kings of western Asia to Egyption Pharaohs, we find such Aryan names of chieftains, Antamanya Bawarzana Or perhaps Mayarzaus."

(See pp 29-30 Indo-Aryan Races & The Journal of Royal Asiatic Society 1911-944)

ಬಾಬಿಲೋನಿಯಾದ ಸಮೀಪದ "ಮಿತಾನಿ" ರಾಜರ ಧರ್ಮವು ಯಾವದು ಎಂಬುವದು ಗೊತ್ತಾಗಿದೆ. ಒಂದು "ಕಿವುನಿಫರ್ಮ" ಲೇಖದ ನಮೂನೆಯ ಆವಿಷ್ಕಾರವು ಆಗಿದೆ. ಇದರಲ್ಲಿ ಒಂದು ಸಂಧಿಯ ವಿಷಯವು ಇರುವದು. ಮಿತಾನಿ ರಾಜರ ಸಂಧಿ ಪತ್ರದಲ್ಲಿ ಹಲವು ವೈದಿಕ ದೇವತೆಗಳ ಹೆಸರು (ಮಿತ್ರ, ವರುಣ, ಇಂದ್ರ ಪ್ರಭೃತಿ)ಗಳು ದೊರೆಯುತ್ತವೆ.

"Another great discovery, Cuneiform writing from Baghazkuci, has revealed the religion of the kings of Mitanni. one of these writings embody a treaty between the Mitanni king Mattinaza & the Hittite king Subbi luliuma wherein the deities of the two countries are invoked by the Mitanni king occur the well-known Vedic names Mitra, Varuna, Indra & others". Indo-Aryan Races p. 31

ಅತ ಏವ-ಈ ಎಲ್ಲ ದೇಶಗಳಲ್ಲಿ ಆರ್ಯಸಭ್ಯತೆಯು ಪ್ರಕಾಶಿತವಾಗಿತ್ತು. ಹಾಗು ಆರ್ಯರ ಉಪನಿವೇಶವೂ ಇತ್ತು. ಈ ಎಲ್ಲ ದೇಶಗಳು ವರುಣನ ರಾಜ್ಯವಾದ ಕೇತು-ಮಾಲವರ್ಷದ ಅಂತರ್ಗತವಾಗಿದ್ದವೆಂಬುದನ್ನು ಹೇಳುವದೇ ಬೇಡ.

ಆರ್ಯರ ಮತ್ತೊಂದು ಶಾಖೆಯು ಗ್ರೀಸ ದೇಶದಲ್ಲಿಯೂ ಹೋಗಿತ್ತು. ಗ್ರೀಕರ ಹಾಗು ಆರ್ಯರ ಆಕೃತಿ-ಪ್ರಕೃತಿ, ಆಚಾರ-ವ್ಯವಹಾರ, ಭಾಷೆ ಇತ್ಯಾದಿಗಳಲ್ಲಿ ವಿಶೇಷವಾದ ಸಾದೃಶ್ಯವಿರುತ್ತದೆ. ಆರ್ಯರಂತೆ ಗ್ರೀಕರೂ ಅನೇಕ ದೇವ-ದೇವಿಗಳಲ್ಲಿ ನಂಬಿಗೆಯನ್ನಿಟ್ಟಿದ್ದರು. ಗ್ರೀಕರ ಸ್ವರ್ಗದ ಹೆಸರು 'Elysium'. ಇದೇ "ಇಲಿಸಿಯಾಮ" ವೈದಿಕ "ಇಲಾ" ಅಥವಾ "ಇಲಾಯಿಸ್ಥಾಯೀ"ಯಿಂದಲೇ ರೂಪಾಂತರವಾಗಿರುವದೆಂಬಲ್ಲಿ ಸಂದೇಹವಿಲ್ಲ. ಗ್ರೀಕರ ಮತದಲ್ಲಿ ಅವರ ದೇವತೆಗಳು ಅಲಿಂಪಿಯಾ ಎಂಬ ಪರ್ವತದಲ್ಲಿ ವಾಸಮಾಡುತ್ತಾರೆ. ಮತ್ತು ಮಧ್ಯ ಏಸಿಯಾದಲ್ಲಿಯ ಆರ್ಯ ದೇವತೆಗಳು (ಬ್ರಹ್ಮ, ವಿಷ್ಣು, ಇಂದ್ರ ಪ್ರಭೃತಿ) ಇಲಾಸ್ಥಾಯೀ ಅಥವಾ ಅಲ್ತಾಯಿ ಎಂಬ ಪರ್ವತದ ಚೀನದೇಶಿಯ ಹೆಸರು "ಉಲಿಯಾ ಸುತಾಇ" ಎಂದು ಇರುವದು. ಗ್ರೀಕರು ಯುದ್ಧದ ಪೂರ್ವಕ್ಷಣದಲ್ಲಿ ಹಾಗು ಯಾತ್ರೆಯ ಪೂರ್ವಕ್ಷಣದಲ್ಲಿ ದೇವತೆಗಳಿಗೆ ಹಲವು ಬಗೆಯ ಪದಾರ್ಥಗಳನ್ನು ಅರ್ಪಣ ಮಾಡುತ್ತಿದ್ದರು. ವೈದಿಕ ಯುಗದಲ್ಲಿ ಆರ್ಯರು ಸಹ ಹೀಗೆಯೇ ಮಾಡುತ್ತಿದ್ದರು. ಈ ವಿಷಯದಲ್ಲಿ ಬಹಳೇ ಬಹಳ ಪ್ರಮಾಣಗಳು ಶಾಸ್ತ್ರ, ಪುರಾಣಾದಿಗಳಲ್ಲಿ ಇರುತ್ತವೆ. ಕಾಲಕ್ರಮದಿಂದ ಗ್ರೀಕರು ಶುದ್ಧ ಆರ್ಯ-ಸಭ್ಯತೆ ಹಾಗು ಆಚಾರ-ವ್ಯವಹಾರಗಳನ್ನು ಮರೆತರು ಸಹ ಅವರ ಪಿತೃಭೂಮಿಯ ನಾಮಕರಣದೊಡನೆ ಆರ್ಯರ ಪಿತೃಭೂಮಿಯ ನಾಮಕರಣವು ಕೂಡಿಕೊಂಡೇ ಇರುವದು.

ಭಾರತೀಯ ಆರ್ಯರ ಹಾಗೂ ಮಧ್ಯ ಏಸಿಯಾದಲ್ಲಿಯ ಬೇರೆ ಬೇರೆ ಆರ್ಯರ ಪಿತೃಭೂಮಿಯು "ದೌಃ ಪಿತಾ" ಅಂದರೆ ಸ್ವರ್ಗಲೋಕ-ಇಲಾವೃತವರ್ಷ-ಮಂಗೋಲಿಯ. ಗ್ರೀಕರು "Zeus Pater" ಜಿಉಸ್ ಪಾಟೆರ ಅನ್ನುತ್ತಿದ್ದರು. ಆದರೆ ಭಾರತೀಯ ಆರ್ಯರು ಕಾಲಕ್ರಮದಿಂದ 'ದೌಃ ಪಿತಾ' ಇದರ ನಿಜವಾದ ಅರ್ಥವನ್ನು ಮರೆತು ಸ್ವರ್ಗಕ್ಕೇ ಪಿತಾ ಅರ್ಥಾತ್ ಜನ್ಮದಾತಾ, (-ಪಿತೃಭೂಮಿ ಎಂದು ಪಿತಾ ಅಲ್ಲ) ಅನ್ನಲಿಕ್ಕೆ ಆರಂಭಮಾಡಿದರು. ಅದರಂತೆಯೇ 'Zeus Pater' ಇದರ ನಿಜವಾದ ಅರ್ಥವನ್ನು ಮರೆತು Zeus ಎಂಬ ದೇವತೆಗಳೇ ಜನ್ಮದಾತಾ ಪಿತಾ-ಎಂದು ತಿಳಿಯಲು ಆರಂಭಮಾಡಿದರು. ವಿಚಾರ ಮಾಡಿದರೆ ಗ್ರೀಕಭಾಷೆಯೂ ಸಂಸ್ಕೃತಭಾಷೆಯೂ ವಿಶೇಷವಾಗಿ ಸಾಮ್ಯವುಳ್ಳವುಗಳಾಗಿರುವವು. ಮೇಲೆ ಹೇಳಿದ ಪಿತೃಭೂಮಿಯ ನಾಮಕರಣದಿಂದ ಗ್ರೀಕರು ಮಂಗೋಲಿಯಾದಿಂದಲೇ ಹೋಗಿದ್ದರೆಂದು ಸ್ಪಷ್ಟವಾಗಿಯೇ ಕಂಡುಬರುವದು.

ಉಪಸಂಹಾರದಲ್ಲಿ ಆವಶ್ಯಕವಾಗಿ ಹೇಳುವದೇನಂದರೆ, ಈಗಿನ ಹಲವು ಪಂಡಿತರು ಭೂತತ್ವವಿದರ ಉದಾಹರಣ ಬಿಟ್ಟು ಬೇರೆ ವಿಶ್ವಾಸವಿಡಲು ಇಚ್ಛಿಸುವದಿಲ್ಲ. ಅವರಿಗೆ ಪ್ರತ್ಯಕ್ಷ ಪ್ರಮಾಣ ದೊರೆಯದಿದ್ದರೆ ಕೇವಲ ಪುಸ್ತಕ ಪ್ರಮಾಣವನ್ನು ನಂಬಲು ಒಪ್ಪುವದಿಲ್ಲ. ಹೊತ್ತಿಗೆಯಲ್ಲಿ ಹಾಗು ಪುರಾಣಾದಿಗಳಲ್ಲಿ ಯಾವ ಸ್ಥಾನದಲ್ಲಿ ಯಾವ ಜಾತಿಯ ವಾಸಸ್ಥಾನದ ಸಂಗತಿಯು ಬರೆದಿರುತ್ತದೆಯೋ ಇದರ ಹೊರಗಡೆ ಪ್ರತ್ನತಾತ್ವಿಕರು ಅಥವಾ ನೃತತ್ವವಿದರು ಹೋಗಲು ಅಥವಾ ಹೊತ್ತಿಗೆಯ ಸಂಗತಿಗೆ ಮಿಥ್ಯಾಪ್ರಮಾಣ ಮಾಡಲು ಶಕ್ತರಲ್ಲವೆಂಬುವದು ಆಶ್ಚರ್ಯಕರವು. ಈ ಸಂಬಂಧವಾಗಿ ಸಾಕಷ್ಟು ಉದಾಹರಣೆಗಳನ್ನು ಮೊದಲೇ ಕೊಟ್ಟಿದ್ದೇವೆ. ಪಾತಾಲ ಅಥವಾ ಅಮೇರಿಕೆಯ ಮಾತನ್ನು ಹೇಳಲು ನಮ್ಮ ದೇಶದ ಹಲವು ಪಂಡಿತರೂ ಮೂಗು ಮುರಿಯುತ್ತಾರೆ. ನಮ್ಮ ಶಾಸ್ತ್ರಗಳಲ್ಲಿ ಬರೆಯಲ್ಪಟ್ಟ ಅಮೇರಿಕೆ ಅಥವಾ ಪಾತಾಲ ಭೂಮಿಯಲ್ಲಿ ಏಸಿಯಾದ ಸಭ್ಯತೆಯ ಮಾದರಿಗಳು ದೊರೆಯುತ್ತವೆ. ಮೆಕ್ಸಿಕೋ ನಗರದ ೧೭ ಮೈಲು ಉತ್ತರದಲ್ಲಿ 'ಸನ್ ಜುಯಾನ್-ಟಉಟ ಹಾಯ್‌ಕಾನ್' ಎಂಬ ಸ್ಥಳದಲ್ಲಿ ನೆಲದೊಳಗೆ ಒಂದು 'ಆಜಟೆಕ್' ಪಿರಾಮಿಡ ದೊರೆತಿರುತ್ತದೆ. ಅದು

ಬಹು ಮನೋಹರವಾಗಿರುತ್ತದೆ. ಒಳಗೆ ಕಲ್ಲಿನಲ್ಲಿ ಅಕ್ಷರಗಳು ಕೆತ್ತಲ್ಪಟ್ಟಿವೆ. ಚೀನದ ಸರಕಾರೀ ಅಧಿಕಾರಿಯಾದ 'ಕಂಸಿಯಾ ಕುಯಾಂ' ಎಂಬವರು ಈ ಲಿಪಿಯ ಪಾಠೋದ್ಧಾರ ಮಾಡಿದ್ದಾರೆ. ಕಲ್ಲನ್ನು ಕೆತ್ತಿ ಶಿಲ್ಪಿಯು ಸೂರ್ಯ, ಚಂದ್ರ, ನಗರ ಈ ಮೂರು ಮಾತುಗಳನ್ನು ಪರಿಷ್ಕಾರವಾಗಿ ಚೀನೀ ಅಕ್ಷರಗಳಲ್ಲಿ ಸ್ಪಷ್ಟಮಾಡಿ ಬರೆದಿದ್ದಾನೆ. ಕ್ಯಾಲಿಫೋರ್ನಿಯಾದ ಪ್ರೊಫೆಸರ ಜಾನ್ ಫ್ರಾಯರರು ಕ್ರಿ.ಪೂ. ೫ನೆಯ ಶತಮಾನದಲ್ಲಿ ಚೀನದೇಶದ ಬೌದ್ಧ ಶ್ರಮಣರು ನಿರ್ವಾಣಮುಕ್ತಿಯ ಧರ್ಮಪ್ರಚಾರ ಮಾಡುವದಕ್ಕೋಸುಗ ಅಮೇರಿಕೆಗೆ ಹೋಗಿದ್ದರು ಎಂದು ಹೇಳುವರು. ಮೇಲೆ ಹೇಳಿದ ಮೂರು ಶಬ್ದಗಳು ಸಂಸ್ಕೃತ ಭಾಷೆಯವು. ಮಧ್ಯ ಏಸಿಯಾದಲ್ಲಿಯ ಆರ್ಯರ ಸುಧಾರಣೆಯ ಛಾಪು ಚೀನಿಗಳ ಮನಸಿನೊಳಗಿಂದ ಅಲ್ಲಿಯ ವರೆಗೆ ಹೋಗಿದ್ದಿಲ್ಲವೆಂದು ತಿಳಿಯುತ್ತದೆ (ನಾರಾಯಣ ಪತ್ರಿಕಾ-೧೯೨೭ ಸಾಲಿನ ಶ್ರಾವಣ ಸಂಖ್ಯೆ ನೋಡಿರಿ ಹಾಗು ಅದೇ ವರ್ಷದ Illustrated London News) ಮತ್ತು ಈ ಆವಿಷ್ಕಾರದಿಂದ ನಮ್ಮ ಪೌರಾಣಿಕ ಯುಗದಲ್ಲಿ ಅಮೇರಿಕಾ ಯಾತಾಯಾತದ ಸಂಗತಿಯೂ ಚನ್ನಾಗಿ ಪ್ರಮಾಣಿತವಾಗುತ್ತದೆ. ವೇದ, ಪುರಾಣ, ಉಪನಿಷದಾದಿಗಳಲ್ಲಿ ಬರೆಯಲ್ಪಟ್ಟ ಬೇರೆ ಬೇರೆ ಸ್ಥಾನಗಳ ವಿಷಯವು ಆಧುನಿಕ ಆವಿಷ್ಕಾರದೊಡನೆ ಕೂಡುವದೆಂದ ಮೇಲೆ ಮಧ್ಯಏಸಿಯಾದ ಸಂಬಂಧದ ಎಲ್ಲ ಸಂಗತಿಗಳೂ ಸತ್ಯವಾಗಿರುವದು ಹೆಚ್ಚು ಸಂಭವನೀಯವು. ಯಾಕಂದರೆ ಸಂಸ್ಕೃತಭಾಷೆಯಲ್ಲಿ ಬರೆದ ಗ್ರಂಥಾದಿಗಳಿಂದ ಆರಂಭಮಾಡಿ ಪಾಲಿ ತಿಬೇತಿ ಮೊದಲಾದ ಭಾಷೆಗಳಲ್ಲಿ ಒಂದೇ ಮಾತಿನ ಸಮರ್ಥನೆ ಮಾಡಲ್ಪಟ್ಟಿರುವದು ಕಂಡುಬರುತ್ತದೆ. ಭವಿಷ್ಯತ್ ಕಾಲದಲ್ಲಿ ಈ ವಿಷಯವಾಗಿ ವಿಶೇಷವಾದ ಆವಿಷ್ಕಾರವಾಗಲು ಶಕ್ಯವಿರುವದು.

ಈ ಪ್ರಬಂಧದಲ್ಲಿ ಎಲ್ಲ ದೇವತೆಗಳ ವಿಷಯವು ಬರೆಯಲ್ಪಟ್ಟಿದೆ. ಜನರ ಮನಸಿನಲ್ಲಿ ಅವರ ಆಯುಷ್ಕಾಲದ ಸಂಬಂಧದಿಂದ ಸಮಸ್ಯೆಯು ಉಂಟಾಗಲು ಶಕ್ಯವಿರುವದು. ದೇವತೆಗಳು ನಮ್ಮ ಪೂರ್ವಪುರುಷರು, ಸುತಾರಾಂ ಮಾನುಷರು ಇದ್ದರು. ಅವರೂ ನಮ್ಮಂತೆಯೇ ಸಾಯುತ್ತಿದ್ದರು, ಎಂಬಲ್ಲಿ ಆಶ್ಚರ್ಯವೇನು? ಆದರೆ ಅವರು ಶೀತಪ್ರಧಾನ ದೇಶದ ಜನರು, ಮತ್ತು ಬ್ರಹ್ಮಚರ್ಯಾದಿ ಹಲವು ಬಗೆಯ ನಿಯಮಗಳನ್ನು ಪಾಲಿಸುತ್ತಿದ್ದರು. ಅಂತೇ ನಮಗಿಂತ ಸ್ವಲ್ಪ ಹೆಚ್ಚು ಕಾಲ ಬದುಕುತ್ತಿದ್ದರು. ಅವರೆಲ್ಲರೂ ಬ್ರಹ್ಮವಿದರು. ಜೀವನ-ಮೃತ್ಯುಗಳ ರಹಸ್ಯವನ್ನು ಚನ್ನಾಗಿ ಅರಿತಿದ್ದರು. ಮೃತ್ಯುವು ಕೇವಲ ಪರಿವರ್ತನವೆಂದೂ, ಈ ಸಂಸಾರವೂ ಜೀವಿತವೂ ಮಿಥ್ಯೆಯೆಂದೂ, ಕೇವಲ ಬ್ರಹ್ಮವು ಒಂದೇ ಸತ್ಯವು ಎಂಬುದನ್ನು ಅವರು ತಿಳಿದಿದ್ದರು. ಅಂತೇ ಅವರು ಬ್ರಹ್ಮ ನಾಮ-ರೂಪ ಅಮೃತಪಾನ ಮಾಡಿ 'ಅಮರ' ಎಂಬ ಹೆಸರನ್ನು ಪಡೆದಿದ್ದರು. ಅವರ ಶರೀರವು ಎಂದೂ ಮೃತಿಯನ್ನು ಹೊಂದಿತ್ತಿದ್ದಿಲ್ಲ. ಆದ್ದರಿಂದ 'ಅಮರ' ಎಂಬ ಹೆಸರನ್ನು ಪಡೆದಿದ್ದರೆಂಬುವದು ಸುಳ್ಳು. ಯಾಕಂದರೆ ಯೋಗೋಪನಿಷತ್ತಿನಲ್ಲಿ ಸಾಯಲಾರದವರು ಹಿಂದೆ ಇದ್ದಿಲ್ಲ, ಮುಂದೆಯೂ ಉಂಟಾಗುವದಿಲ್ಲ. ಈ ಇಂದ್ರ, ಬ್ರಹ್ಮ, ವರುಣ, ಕುಬೇರ ಮೊದಲಾದವರು ಯಥಾ ಕಾಲದಲ್ಲಿ ದೇಹತ್ಯಾಗ ಮಾಡಿದರು.

"ಅಮ್ಲಜೋ ಮಹಿಷಶ್ಚೈವ ಕಂಸೋ ಬಾಣಾಸುರಸ್ತಥಾ।
ಇಂದ್ರಶ್ಚ ವರುಣಶ್ಚೈವ ಕುಬೇರಶ್ಚ ತಥೈವ ಚ॥
ಯಕ್ಷಾಶ್ಚೈವಾಥ ಗಂಧರ್ವಾಃ ಸರ್ವೇ ಚ ಯಮಕಿಂಕರಾಃ।
ದೈತ್ಯಾಶ್ಚ ದಾನವಾಶ್ಚೈವ ಸರ್ವೇ ಮೃತ್ಯುಪಥಂ ಗತಾಃ॥
ಸುಗ್ರೀವಶ್ಚ ಮಹಾತೇಜಾಸ್ತಥಾ ವಾಲಿರ್ಮಹಾ ಬಲಃ।

ಮಹಾಬಲೋ ಮಹಾತೇಜಾ ಹನುಮಾಂಶ್ಚ ತಥೈವ ಚ||

x x x x

ಬ್ರಹ್ಮಾದಿಸ್ತಂಭಪರ್ಯನ್ತಾಃ ಸರ್ವೇ ಲೋಕಾಶ್ಚರಾಚರಾಃ|
ತ್ರೈಲೋಕ್ಯೇ ತಂ ನ ಪಶ್ಯಾಮಿ ಯೋ ಭವೇದಜರಾಮರಃ||"

-ಯೋಗೋಪನಿಷತ್

ಇಂದ್ರ, ವರುಣ, ಕುಬೇರ, ದೈತ್ಯ, ದಾನವ, ಯಕ್ಷ, ಕಿಂಕರಗಣ, ಹನುಮಾನ್ (ಇವನಿಗೆ ನಾವು ಅಮರನೆನ್ನುತ್ತೇವೆ) ಇಷ್ಟೇ ಅಲ್ಲ ಬ್ರಹ್ಮಾದಿ ದೇವತೆಗಳು ಸಹ ಮೃತ್ಯುಪಥದ ಪಥಿಕರಾಗಿದ್ದಾರೆ. ಈ ಪೃಥ್ವಿಯಲ್ಲಿ ಅಜರ ಹಾಗೂ ಅಮರರು ಯಾರೂ ಇಲ್ಲ.

ರಾಮಾಯಣದಲ್ಲಿ ಸುಗ್ರೀವನು ರಾಮಚಂದ್ರನ ಬಾಣ ಬಿಡುವ ಅದ್ಭುತ ಶಕ್ತಿಯನ್ನು ನೋಡಿ- "ತಾವು ಸಮರದಲ್ಲಿ ಇಂದ್ರ ಮೊದಲಾದ ಎಲ್ಲ ದೇವತೆಗಳನ್ನು ವಧಿಸಲು ಸಮರ್ಥರು ಎಂದ ಮೇಲೆ ವಾಲಿ ಯಾವದರ ಧೂಳು" ಎಂದು ಅಂದಿರುವನು.

"ಸೇಂದ್ರಾನಪಿ ಸುರಾನ್ ಸರ್ವಾಂಸ್ತ್ವಂ ಬಾಣೈಃ ಪುರುಷರ್ಷಭ|
ಸಮರ್ಥಃ ಸಮರೇ ಹನ್ತುಂ ಕಿಂ ಪುನರ್ವಾಲಿನಂ ಪ್ರಭೋ||"

-ಕಿಷ್ಕಿಂಧಾಕಾಂಡ ೧೨ನೆಯ ಸರ್ಗ

ಇದರಿಂದ ದೇವತೆಗಳೂ ಸಾಯುತ್ತಿದ್ದರೆಂದು ಕಂಡುಬರುವದಿಲ್ಲವೋ? ಋಗ್ವೇದದಲ್ಲಿ ಅಥವಾ ಅನಂತರದ ರಾಮಾಯಣ ಮಹಾಭಾರತಾದಿ ಗ್ರಂಥಗಳಲ್ಲಿ ಬ್ರಹ್ಮ, ವಿಷ್ಣು, ಶಿವ, ಇಂದ್ರ, ವರುಣ ಮೊದಲಾದವರ ಕಥೆಯ ಉಲ್ಲೇಖವು ಇರುತ್ತದೆ. ಅವರು ಒಬ್ಬರೇ ಪುರುಷರಲ್ಲ ಎಂಬದನ್ನು ಹೇಳುವದೇ ಬೇಡ. ಮೊದಲು ಬ್ರಹ್ಮಾದಿ ದೇವತೆಗಳ ತರುವಾಯದಿಂದಲೇ ಈ ಬ್ರಹ್ಮ, ವಿಷ್ಣು, ಶಿವ ಪ್ರಭೃತಿ ಉಪಾಧಿ ವಿಶೇಷವಾಗಿ ಬಿಟ್ಟವು. ಹೀಗಾಗಲು ಯಥೇಷ್ಟ ಕಾರಣವಿದೆ. ಮೊದಲು ಪ್ರಥಮ ಬ್ರಹ್ಮಾದಿ ದೇವತೆಗಳು ಇಲಾವೃತವರ್ಷದಲ್ಲಿ ಇರುವಾಗ ಅಲ್ಲಿ ಆಗುವ ಯಜ್ಞಗಳಲ್ಲಿ ಬ್ರಹ್ಮ, ವಿಷ್ಣು, ಶಿವ, ಇಂದ್ರ ಪ್ರಭೃತಿಗಳು ಹೋತೃಗಳಾಗಿ ಕಾರ್ಯಮಾಡುತ್ತಿದ್ದರು. ತಮ್ಮ ತಮ್ಮ ಯೋಗ್ಯತೆ ಮತ್ತು ಉಪಯುಕ್ತತೆಗೆ ಅನುಸಾರವಾಗಿಯೇ ಹೋತೃಗಳು ಕಾರ್ಯದ ಭಾರವನ್ನು ವಹಿಸುತ್ತಿದ್ದರು. ಮೊದಲನೆಯ ಬ್ರಹ್ಮನು (ಇವನು ಕಶ್ಯಪ ಋಷಿಯ ಮಗ) ಚತುರ್ವೇದವಿದನಿದ್ದನು; ಅದಕ್ಕೋಸುಗ ಅವನ ಹೆಸರು ಚತುರ್ಮುಖ ಅಥವಾ ಚತುರಾನನ ಎಂದು ಇತ್ತು. ನಾಲ್ಕು ಕಡೆಗೆ ನಾಲ್ಕು ಮುಖಗಳಿದ್ದವೆಂದಲ್ಲ. ವೇದವೆಂದರೆ ಜ್ಞಾನ. ಬ್ರಹ್ಮನು ಒಳ್ಳೇ ಜ್ಞಾನಿಯಾಗಿದ್ದನು. ನಾಲ್ಕೂ ಕಡೆಗೆ ಒಳ್ಳೇ ಬುದ್ಧಿಯು ಆಡುತ್ತಿತ್ತು. ಅಂತೇ ಅವನು ಚತುರಾನನ ಅಥವಾ ಚತುರ್ಮುಖನೆಂದು ಹೇಳಲ್ಪಡುತ್ತಿದ್ದನು. ಈ ಪ್ರಥಮ ಬ್ರಹ್ಮನ ಮರಣದ ತರುವಾಯ, ಯಾವನು ಎಲ್ಲಕ್ಕೂ ಹೆಚ್ಚು ಜ್ಞಾನಿಯೆಂದು ವಿವೇಚಿತನಾಗುತ್ತಿದ್ದನೋ ಅವನಿಗೇ ಈ 'ಚತುರ್ಮುಖ' ಎಂಬ ಹೆಸರು ಕೊಡಲ್ಪಡುತ್ತಿತ್ತು ಹಾಗು ಅವನೇ ಯಜ್ಞದಲ್ಲಿ ಬ್ರಹ್ಮಹೋತೃವಿನ ಕಾರ್ಯವನ್ನು ಮಾಡುತ್ತಿದ್ದನು. ವಿಷ್ಣುವು ತಪೋಲೋಕದ ರಾಜನು; ಅವನೇ ಹೋತೃವಿನ ಕಾರ್ಯವನ್ನು ಮಾಡುತ್ತಿದ್ದನು. ಹೀಗೆ ಯೋಗ್ಯತೆಗನುಸಾರವಾಗಿ ಇಂದ್ರ, ವರುಣ, ಶಿವ, ಸೂರ್ಯ, ಚಂದ್ರ ಮೊದಲಾದ ಹೆಸರುಗಳು ಪುರುಷಪರಂಪರೆಯಲ್ಲಿ ನಡೆದು ಬಂದವು. ಈ ಯುಕ್ತಿಯ ಸತ್ಯತೆಗೋಸುಗ ನಾವು ಭಾರತವರ್ಷೀಯ ಯಜ್ಞದ ಪದ್ಧತಿಯನ್ನು ಹೇಳುತ್ತೇವೆ.

ಈಗ ಸಹ ನಮ್ಮ ದೇಶದಲ್ಲಿ ಯಾವದೊಂದು ಯಜ್ಞವನ್ನು ಮಾಡಬೇಕಾದರೆ, ಅದರಲ್ಲಿ ಬ್ರಹ್ಮ, ವಿಷ್ಣು, ಇಂದ್ರ, ವರುಣ ಮೊದಲಾದ ಹೋತಾರರ ಆವಶ್ಯಕತೆ ಇರುವದು. ಈ ಬ್ರಹ್ಮ, ವಿಷ್ಣು, ಇಂದ್ರ ಪ್ರಭೃತಿ ಹೋತಾರರ ಕಾರ್ಯವನ್ನು ನಾವು ಸ್ವತಃ ಮಾಡುತ್ತೇವೆಂದು ಹೇಳುವದೇ ಬೇಡ. ಇದರಿಂದ ಪೂರ್ವದಲ್ಲಿ ಸ್ವರ್ಗದೊಳಗೆ ಯಜ್ಞಮಾಡುವ ಎಂತಹ ಪದ್ಧತಿ ಇತ್ತು ಎಂಬುವದು ಗೊತ್ತಾಗುತ್ತದೆ.

❖❖

# ಜಯಕರ್ನಾಟಕ

೧೧

# ಬ್ರಹ್ಮಸೂತ್ರಗಳು*

**ಜಯಕರ್ನಾಟಕ ೫-೬**

ವ್ಯಾಸಮಹರ್ಷಿಗಳು ಯಾವ ಯಾವ ಗ್ರಂಥಗಳನ್ನವಲಂಬಿಸಿ ಬ್ರಹ್ಮಸೂತ್ರ (ವೇದಾಂತ ಮೀಮಾಂಸಾಸೂತ್ರ)ಗಳನ್ನು ರಚಿಸಿದರೆಂಬುದು ಕೆಳಗೆ ಬರೆಯಲ್ಪಟ್ಟಿದೆ.

೧. ಈಶಾವಾಸ್ಯ, ಕೇನ, ಕಠ, ಪ್ರಶ್ನ, ಮುಂಡಕ, ಮಾಂಡುಕ್ಯ, ಐತರೇಯ, ತೈತ್ತಿರೀಯ, ಛಾಂದೋಗ್ಯ, ಬೃಹದಾರಣ್ಯಕ, ಶ್ವೇತಾಶ್ವತರ, ಕೌಷೀತಕೀ ಬ್ರಾಹ್ಮಣ, ಕೈವಲ್ಯ, ಜಾಬಾಲಗಳೆಂಬೀ ಉಪನಿಷತ್ತುಗಳು.

೨. ಕಾಣ್ವಶಾಖಾ, ಅಗ್ನಿರಹಸ್ಯ, ತಾಂಡಿಶಾಖಾ, ಶಾಟ್ಯಾಯನೀಶಾಖಾ, ಪೈಂಗೀರಹಸ್ಯಗಳೆಂಬೀ ಬ್ರಾಹ್ಮಣಗಳು.

೩.ಮನುಸಂಹಿತೆ,ಮಹಾಭಾರತ ಹಾಗು ತದಂತರ್ಗತ ಭಗವದ್ಗೀತೆಗಳೆಂಬೀ ಸ್ಮೃತಿಗಳು.

೪.ಪಾಂಚರಾತ್ರ ಅಥವಾ ಭಾಗವತ ಮತವಾದ.

೫.ಕಪಿಲ,ಪತಂಜಲಿ,ಕಣಾಜ,ಗೌತಮ,ಜೈಮಿನಿಗಳಿಂದ ವಿರಿಚಿತವಾದ ದರ್ಶನ ಶಾಸ್ತ್ರಗಳು.

೬.ಚಾರ್ವಾಕ,ಬೌದ್ಧ,ಜೈನ,ಮಾಹೇಶ್ವರ ಮೊದಲಾದ ಮತಾನುರೂಪ ಮತವಾದಗಳು.

ಶ್ರೀ ಶಂಕರಾಚಾರ್ಯರು ಸ್ವೀಯ ಮತಪ್ರತಿಷ್ಠಾಪನೆಗೋಸುಗ ಮೇಲೆ ಬರೆದ ಗ್ರಂಥಗಳನ್ನಲ್ಲದೆ ಕೆಳಗೆ ಬರೆದ ಗ್ರಂಥಗಳನ್ನು ಸಹ ಅವಲಂಬನೆ ಮಾಡಿರುವರು.

೧.ಐತರೇಯ ಆರಣ್ಯಕ, ೨. ಐತರೇಯ ಬ್ರಾಹ್ಮಣ, ೩,ಆಪಸ್ತಂಬ ಧರ್ಮಸೂತ್ರ, ೪.ಆರ್ಷೇಯ ಬ್ರಾಹ್ಮಣ, ೫.ಗೌಡ ಪಾದಕಾರಕೆ (ವ್ಯಾಸಪರವರ್ತಿ), ೬.ಮೈತ್ರಾಯಣೀಯ ಸಂಹಿತೆ, ೭.ನಿರುಕ್ತ (ವ್ಯಾಸಪರವರ್ತಿ), ೮.ಪಾಣಿನಿ (ವ್ಯಾಸಪರವರ್ತಿ), ೯.ಋಗ್ವೇದ ಸಂಹಿತೆ,
೧೦.ಷಡವಿಂಶ ಬ್ರಾಹ್ಮಣ, ೧೧.ಶತಪಥ ಬ್ರಾಹ್ಮಣ, ೧೨.ತೈತ್ತಿರೀಯ ಅರಣ್ಯಕ, ೧೩.ತೈತ್ತಿರೀಯ ಬ್ರಾಹ್ಮಣ, ೧೪.ತೈತ್ತಿರೀಯ ಸಂಹಿತೆ, ೧೫.ವಿಷ್ಣುಪುರಾಣ (ವ್ಯಾಸಪರವರ್ತಿ), ೧೬.ವಾಜಸೇನೀಯ ಸಂಹಿತೆ, ೧೭.ವಿಷ್ಣುಧರ್ಮೋತ್ತರ, ೧೮.ಶಿವಪುರಾಣ, ೧೯.ಶಿವಧರ್ಮೋತ್ತರ, ೨೦.ಉಪವರ್ಷವೃತ್ತಿ, ೨೧.ವೃತ್ತಿಕಾರರ ಗ್ರಂಥ (ಈ ಮತವು ಖಂಡಿತವಾಗಿದೆ.).

ಶ್ರೀ ರಾಮಾನುಜಾಚಾರ್ಯರು ಈ ಎಲ್ಲ ಗ್ರಂಥಗಳನ್ನಲ್ಲದೆ ಬೇರೆ ಕೆಲವು ಗ್ರಂಥಗಳನ್ನು ಉದ್ಧರಿಸಿರುತ್ತಾರೆ. ಅವು:-

---

* ಈ ಗ್ರಂಥದ ೩ನೆಯ ಲೇಖನವನ್ನು ಇದು ಹೋಲುತ್ತದೆ

೧.ದಕ್ಷಸ್ಮೃತಿ, ೨.ಗರ್ಭೋಪನಿಷತ್, ೩.ಗೌತಮಧರ್ಮಸೂತ್ರ, ೪.ಚುಲಿಕೋಪನಿಷತ್, ೫.ಮಹಾನಾರಾಯಣೋಪನಿಷತ್ ೬.ಮಹೋಪನಿಷತ್, ೭.ಮೈತ್ರಾಯಣುಪನಿಷತ್, ೮.ಸನತ್ ಸುಜಾತೀಯ (ಇದರ ಮೇಲೆ ಒಂದು ಶಾಂಕರ ಭಾಷ್ಯವಿರುವದು. ಆದರೆ ಇದು ಶಂಕರ ಕೃತವು ಅಹುದೋ ಅಲ್ಲವೋ ಎಂಬುದು ಸ್ಪಷ್ಟವಾಗಿಲ್ಲ), ೯.ಸುಬಾಲೋಪನಿಷತ್, ೧೦.ಯಾಜ್ಞವಲ್ಕ್ಯ ಸ್ಮೃತಿ, ೧೧.ಯಾಮುನಾಚಾರ್ಯ ಹಾಗು ಶಠಕೋಪಾದಿಕೃತ ಗ್ರಂಥಗಳು (ಶಂಕರ ಪರವರ್ತಿ).

## ಬ್ರಹ್ಮಸೂತ್ರದ ವ್ಯಾಖ್ಯಾನಕಾರರು

೧.ಭಾರತೀಯ ವಿಜಯ, ೨.ಸಂವಿದಾನಂದ, ೩. ಬ್ರಹ್ಮಘೋಷ, ೪.ಶತಾನಂದ, ೫.ಬೌಧಾಯನ,೬ .ಉದ್ಧತ, ೭.ವಿಜಯ, ೮.ರುದ್ರಭಟ್ಟ, ೯.ವಾಮನ, ೧೦.ಯಾದವಪ್ರಕಾಶ, ೧೧.ಶಂಕರಾಚಾರ್ಯ ೧೨.ಭರ್ತೃಪ್ರಪಂಚ, ೧೩.ಶಠಕೋಪ, ೧೪. ರಾಮಾನುಜ, ೧೫.ಬ್ರಹ್ಮದತ್ತ ೧೬. ಭಾಸ್ಕರ,೧೭.ಪಿಶಾಚ, ೧೮.ವಿಜಯಭಟ್ಟ, ೧೯.ವಿಷ್ಣುಕಾಂತ, ೨೦.ವಾದೀಂದ್ರ, ೨೧.ಮಾಧವದಾಸ, ೨೨.ಪೂರ್ಣಪ್ರಜ್ಞ, ೨೩.ರಾಘವೇಂದ್ರಸ್ವಾಮಿ, ೨೪.ವಲ್ಲಭಾಚಾರ್ಯ, ೨೫.ವಿಜ್ಞಾನಭಿಕ್ಷು, ೨೬.ಶಂಕರಾನಂದ, ೨೭ಶ್ರೀಕಂಠಶಿವಾಚಾರ್ಯ, ೨೮.ಶ್ರೀಶಂಕರ ಭಗವತ್‌ಪಾದಶಿಷ್ಯ, ೨೯.ಧರ್ಮಭಟ್ಟ, ೩೦.ವಜ್ರನಾಥಭಟ್ಟ, ೩೧. ಭೈರವ, ೩೨.ಅಪ್ಪಯ್ಯದೀಕ್ಷಿತ, ೩೩.ವಾಚಸ್ಪತಿಮಿಶ್ರ, ೩೪. ಸುರೇಶ್ವರಾಚಾರ್ಯ, ೩೫.ಸದಾಶಿವೇಂದ್ರಸರಸ್ವತೀ ಇತ್ಯಾದಿ.

* * * *

## ಉಪಲಬ್ಧವಿರುವ ವ್ಯಾಖ್ಯಾನಗಳು

ಶ್ರೀ ಶಂಕರಾಚಾರ್ಯ, ರಾಮಾನುಜಾಚಾರ್ಯ, ಪೂರ್ಣಪ್ರಜ್ಞಾಚಾರ್ಯ, ವಲ್ಲಭಾಚಾರ್ಯ, ಭಾಸ್ಕರ,ವಿಜ್ಞಾನಭಿಕ್ಷು, ಶ್ರೀಕಂಠಶಿವಾಚಾರ್ಯ ಇವರ ಭಾಷ್ಯಗಳು.

ಶಂಕರಾನಂದ ಹಾಗು ಶಂಕರ ಭಗವತ್ಪಾದಶಿಷ್ಯ ಇವರ ವೃತ್ತಿಗಳು, ಧರ್ಮಭಟ್ಟನ ಅದ್ವೈತಾಮೃತವರ್ಷಿಣೀ,ರಾಮಾನುಜನ ವೇದಾಂತದೀಪ, ವೃಜನಾಥಭಟ್ಟನ ಮರೀಚಿಕೆ, ರಾಘವೇಂದ್ರನ ದೀಪಕೆ, ಭೈರವಪಂಡಿತನ ಬ್ರಹ್ಮಸೂತ್ರ ತಾತ್ಪರ್ಯನಿರ್ಣಯ, ಸುರೇಶ್ವರಾಚಾರ್ಯರ ಬ್ರಹ್ಮಸೂತ್ರ ವೃತ್ತಿ, ಸದಾಶಿವೇಂದ್ರಸರಸ್ವತಿಯವರ ತತ್ವ ಪ್ರಕಾಶಿಕಾ ವೃತ್ತಿ,ವೈಯಾಸಿಕ ನ್ಯಾಯಮಾಲಾ ಇವುಗಳು.

❖❖

## ೧೨

# ರುದ್ರನ ವೈದಿಕ ಸ್ವರೂಪ*

ಜಯಕರ್ನಾಟಕ ೨೯-೪

ಶಿವನ ಮಹತ್ತಿನ ಉದಯವಾಗುವ ಇತಿಹಾಸವು ಒಳ್ಳೇ ಮನೋಹರವಾಗಿದೆ. ಪೌರಾಣಿಕ ಕಾಲದಲ್ಲಿ ಮತ್ತು ಈಗ ರುದ್ರನಿಗೆ ಎಷ್ಟು ಮಹತ್ವವು ಹಾಗು ಪ್ರಾಧಾನ್ಯತೆಯು ಪ್ರಾಪ್ತವಾಗಿದೆಯೋ, ಅಷ್ಟು ವೈದಿಕ ಕಾಲದಲ್ಲಿ ಇದ್ದಿಲ್ಲ. ಈಗ ವಿಷ್ಣುವಿನೊಡನೆ ಶಿವನು ಸಹ ನಮ್ಮ ಹಿಂದೂಗಳ ಪ್ರಧಾನ ದೇವತೆಯಾಗಿದ್ದಾನೆ. ಆದರೆ ಈ ಪ್ರಧಾನತೆಯ ಪರಂಪರಾಗತ ವಿಕಾಸವು ಕ್ರಮೇಣ ಹಲವು ಶತಮಾನಗಳಲ್ಲಿ ಉಂಟಾದದ್ದಿರುತ್ತದೆ. ಋಗ್ವೇದ, ಯಜುರ್ವೇದ, ಅಥರ್ವವೇದ, ಶತಪಥ ಬ್ರಾಹ್ಮಣ ಮೊದಲಾದ ಗ್ರಂಥಗಳ ಅಧ್ಯಯನವನ್ನು ಮಾಡುವುದರಿಂದ ರುದ್ರನ ಸಂಬಂಧದ ಹಲವು ತಿಳಿಯಬೇಕಾದ ಸಂಗತಿಗಳ ಶೋಧವಾಗಲು ಸಾಧ್ಯವಾಗುತ್ತದೆ. ಋಗ್ವೇದದಲ್ಲಿ ಕೇವಲ ಮೂರು ಸೂಕ್ತಗಳು (೧ನೆಯ ಮಂಡಲದ ೧೧೪ನೆಯ ಸೂಕ್ತ ೨ನೆಯ ಮಂಡಲದ ೨೨ನೆಯ ಸೂಕ್ತ, ೭ನೆಯ ಮಂಡಲದ ೧೧೪ನೆಯ ಸೂಕ್ತ, ೨ನೆಯ ಮಂಡಲದ ೩೩ನೆಯ ಸೂಕ್ತ, ೭ನೆಯ ಮಂಡಲದ ೪೬ನೆಯ ಸೂಕ್ತ) ರುದ್ರದೇವತೆಯ ವಿಷಯದಲ್ಲಿ ಉಪಲಬ್ಧವಿರುತ್ತವೆ. ಇವುಗಳ ಹೊರತು ಅನ್ಯ ದೇವತೆಗಳೊಡನೆ ಇವನ ಹೆಸರು, ಸುಮಾರು ೫೦ ಸಾರೆ ಬರುತ್ತದೆ. ಋಗ್ವೇದದಲ್ಲಿ ರುದ್ರಸ್ಥಾನವು ಅಗ್ನಿ, ವರುಣ, ಇಂದ್ರ ಮೊದಲಾದ ದೇವತೆಗಳಿಗಿಂತ ಬಹಳ ಕಡಿಮೆ ಮಹತ್ವದ್ದಿರುತ್ತದೆ. ಆದರೆ ಯಜುರ್ವೇದದಲ್ಲಿ ಹಾಗು ಅಥರ್ವವೇದದಲ್ಲಿ ರುದ್ರನ ಸ್ಥಾನವು ಬಹಳ ಮಹತ್ವದಿಂದ ಕೂಡಿದ್ದಾಗಿದೆ. ಯುಜರ್ವೇದದ ಒಂದು ಪೂರ್ಣ ಅಧ್ಯಾಯವೇ ಇವನ ಸ್ತುತಿಯಲ್ಲಿ ಪ್ರಯುಕ್ತವಾಗಿದೆ. ಈ ರುದ್ರಾಧ್ಯಾಯವು ಯಜುರ್ವೇದದ ಹಲವು ಸಂಹಿತೆಗಳಲ್ಲಿ ಹೆಚ್ಚು ಕಡಿಮೆ ಅಂತರದೊಡನೆ ಉಪಲಬ್ಧವಾಗುತ್ತದೆ. ತೈತ್ತಿರೀಯ ಸಂಹಿತೆಯ ನಾಲ್ಕನೆಯ ಕಾಂಡದ ಐದನೆಯ ಮತ್ತು ಏಳನೆಯ ಪ್ರಪಾಠಕ ಹಾಗೂ ಶುಕ್ಲಯಜುರ್ವೇದೀಯ ಸಂಹಿತೆಯ ೧೬ನೆಯ ಅಧ್ಯಾಯವು 'ರುದ್ರಾಧ್ಯಾಯ' ಎಂಬ ಹೆಸರಿನಿಂದ ಪ್ರಸಿದ್ಧವಿರುತ್ತದೆ. ಅಥರ್ವವೇದದ ೧೧ನೆಯ ಕಾಂಡದ ಎರಡನೆಯ ಸೂಕ್ತದಲ್ಲಿ ರುದ್ರದೇವನ ಸ್ತುತಿಯು ಮಾಡಲ್ಪಟ್ಟಿದೆ.

---

* ಕಾಶಿಯ ಹಿಂದೂ ವಿಶ್ವವಿದ್ಯಾಲಯದ ಸಂಸ್ಕೃತ ಮತ್ತು ಪಾಲೀ ಭಾಷೆಗಳ ಪ್ರೊಫೆಸರರಾದ ಶ್ರೀ ಬಲದೇವ ಉಪಾಧ್ಯಾಯ ಎಮ್.ಎ. ಸಾಹಿತ್ಯಾಚಾರ್ಯ, ಇವರ "ಧರ್ಮ ಔರ ದರ್ಶನ" ಎಂಬ ಹಿಂದೀ ಗ್ರಂಥದಿಂದ ಅನುವಾದಿಸಲ್ಪಟ್ಟಿದೆ.

ಋಗ್ವೇದದಲ್ಲಿ ರುದ್ರನ ಸ್ವರೂಪವು ಈ ಬಗೆಯಾಗಿ ವರ್ಣಿತವಾಗಿದೆ. ರುದ್ರನಿಗೆ ಹಸ್ತ ಹಾಗೂ ಬಾಹುಗಳು ಇರುತ್ತವೆ (ಋ. ೨।೩೩।೭.). ಅವನ ಶರೀರವು ಅತ್ಯಂತ ಬಲಿಷ್ಠವಿರುತ್ತದೆ. ಅವನ ಕೆಳದುಟಿಯು ಬಹಳ ಸುಂದರವಿರುತ್ತದೆ (ಸುಶಿಪ್ರಃ). ಅವನ ತಲೆಯ ಮೇಲೆ ಕೂದಲುಗಳ ಒಂದು 'ಜಟಾಜೂಟ'ವಿರುತ್ತದೆ. ಈ ಕಾರಣದಿಂದ ಅವನು 'ಕಪರ್ದಿ' ಎಂದು ಕರೆಯಲ್ಪಡುತ್ತಾನೆ (ಋ. ೧।೧೪।೧). ಅವನ ಬಣ್ಣವು ಬೂದ (ಬಭ್ರು) ಹಾಗೂ ಆಕೃತಿಯು ದೇದೀಪ್ಯಮಾನವಿರುತ್ತದೆ. ಅವನು ಹಲವು ರೂಪಗಳನ್ನು ಧರಿಸುವವನು ಇರುತ್ತಾನೆ (ಪುರು ರೂಪಾಃ) ಮತ್ತು ಅವನ ಸ್ಥಿರ ಶರೀರವು ಹೊಳೆಯುವ ಬಂಗಾರದ ಆಭರಣಗಳಿಂದ ವಿಭೂಷಿತವಾಗಿರುತ್ತದೆ. ಅವನು ರಥದ ಮೇಲೆ ಆರೂಢನಾಗುತ್ತಾನೆ. ಯಜುರ್ವೇದದ ರುದ್ರಾಧ್ಯಾಯದಲ್ಲಿ ಹಾಗೂ ಅಥರ್ವದ ರುದ್ರಸೂಕ್ತದಲ್ಲಿ ಅವನ ಸ್ವರೂಪದ ಬಗ್ಗೆ ಇದಕ್ಕಿಂತ ಬಹಳ ಹೆಚ್ಚು ಸುಸ್ಪಷ್ಟ ವರ್ಣನೆಗಳು ಉಪಲಬ್ಧವಾಗುತ್ತವೆ. ರುದ್ರನ ಮುಖ, ಚಕ್ಷು, ತ್ವಕ್, ಅಂಗ, ಉದರ, ಜಿಹ್ವೆ, ದಂತಗಳ ಉಲ್ಲೇಖವು ಮಾಡಲ್ಪಟ್ಟಿದೆ (ಅಥರ್ವ ೧೧ ಕಾಂಡ, ೨ ಸೂಕ್ತ, ೫-೬ ಮಂತ್ರ). ಅವನಿಗೆ ಸಾವಿರ ಕಣ್ಣುಗಳಿವೆ (ಸಹಸ್ರಾಕ್ಷಃ), ಅವನ ಕುತ್ತಿಗೆಯ ಬಣ್ಣವು 'ನೀಲಿ' ಇರುತ್ತದೆ (ನೀಲಗ್ರೀವಃ). ಆದರೆ ಅವನ ಕಂಠವು ಉಜ್ವ ಬಣ್ಣದ್ದು ಇರುತ್ತದೆ (ಶಿತಿಕಂಠಃ).[೧] ಅವನ ತಲೆಯ ಮೇಲಿನ ಜಟಾಜೂಟದ ವರ್ಣನೆಯೂ ಇರುತ್ತದೆ. ಮತ್ತು ಅವನು ಮುಂಡಿತ ಕೇಶ (ವ್ಯುಪ್ತಕೇಶ, ಶಂ. ಯು ೧೬।೨೯)ನು ಎಂದೂ ಹೇಳಿದೆ. ಅವನ ಕೇಶ ಕೆಂಪು ಬಣ್ಣ ಅಥವಾ ನೀಲ ಬಣ್ಣದವು ಇರುತ್ತವೆ (ಹರಿ ಕೇಶಃ). ಅವನು ತಲೆಯ ಮೇಲೆ ರುಮಾಲನ್ನು ಧರಿಸುವವನು ಇರುತ್ತಾನೆ (ಉಷ್ಣೀಷೀ ಯಜು. ೧೬/೨೨). ಅವನ ಶರೀರದ ಬಣ್ಣವು 'ಕಪಿಲ'ವಿರುತ್ತದೆ (ಬಮ್ಲುಶಃ ೧೬/೧೮).

ರುದ್ರಾಧ್ಯಾಯಕ್ಕನುಸಾರವಾಗಿ ರುದ್ರನು ಒಬ್ಬ ಬಲವಂತನಾದ ಸುಸಜ್ಜಿತ ಯೋಧನ ರೂಪದಲ್ಲಿ ನಮಗೆ ಕಂಡುಬರುತ್ತಾನೆ. ಅವನ ಕೈಯಲ್ಲಿ ಧನಸ್ಸು ಹಾಗೂ ಬಾಣಗಳು ಇರುತ್ತವೆ. ಅವನ ಧನಸ್ಸಿನ ಹೆಸರು 'ಪಿನಾಕ' ಇರುವುದು (ಶು. ಯ. ೧೬/೫೧). - ಅವನ ಧನಸ್ಸು ಬಂಗಾರದಿಂದ ಮಾಡಲ್ಪಟ್ಟು, ಸಾವಿರಾರು ಮನುಷ್ಯರನ್ನು ಕೊಲ್ಲುವ, ನೂರಾರು ಬಾಣಗಳಿಂದ ಸುಶೋಭಿತವೂ ಹಾಗೂ ನವಿಲುಗರಿಗಳಿಂದ ವಿಭೂಷಿತವೂ ಎಂದು ಹೇಳಿದೆ (ಧನುರ್ಬಿಭರ್ಷಿ ಹರಿತಂ ಹಿರಣ್ಯಯಂ ಸಹಸಘ್ನಿ ಶತವಧಂ ಶಿಖಂಡಿ ನಮ್ ಅ. ೧/೨/೧೨). ಬಾಣಗಳನ್ನು ಇಡುವದಕ್ಕೋಸುಗ ಬತ್ತಳಿಗೆ (ಇಷುಧಿ)ಯನ್ನು ಧಾರಣಮಾಡುತ್ತಾನೆ. ಇವು ಸಂಖ್ಯೆಯಲ್ಲಿ ನೂರು ಇರುತ್ತವೆ. ಅವನ ಕೈಯಲ್ಲಿ ಕತ್ತಿಯೂ ಹೊಳೆಯುತ್ತಿರುತ್ತದೆ (ನಿಷಙ್ಗೀ). ಹಾಗೂ ಈ ಕತ್ತಿಯನ್ನು ಇಡುವುದಕ್ಕೋಸುಗ ಅವನ ಹತ್ತಿರ ಒರೆ (ನಿಷಙ್ಗಧಿ)ಯು ಇರುತ್ತದೆ. ಅವನು ವಜ್ರವನ್ನೂ ಧಾರಣ ಮಾಡುತ್ತಾನೆ. ವಜ್ರವು ಸೃಕ ಎಂದು ಹೇಳಲ್ಪಟ್ಟಿದೆ (ಶು. ಯ. ೧೬/೨೧). ಶರೀರದ ರಕ್ಷಣೆಗೋಸುಗ ಅವನು ಅನೇಕ ಸಾಧನಗಳನ್ನು ಧರಿಸಿರುತ್ತಾನೆ. ತಲೆಯ ರಕ್ಷಣೆಗಾಗಿ ಅವನು ಶಿರಸ್ತ್ರಾಣವನ್ನು ಧಾರಣ ಮಾಡಿರುತ್ತಾನೆ (ಬಿಲ್ಮಿ ಶು.ಯ. ೧೬/೨೫). ಮತ್ತು ದೇಹದ ರಕ್ಷಣೆಗೋಸುಗ ಕವಚ, ಹಾಗೂ ವರ್ಮಗಳನ್ನು ಧರಿಸಿರುತ್ತಾನೆ. ಮಹೀಧರನ ಟೀಕಾನುಸಾರವಾಗಿ 'ವರ್ಮ'ವು ಕವಚದಿಂದ ಬೇರೆಯಾಗಿರುತ್ತದೆ.* ಕವಚ'ವು ಅರಿವೆಗಳಿಂದ ಹೊಲಿದ 'ಅಂಗಿಯ' ನಮೂನೆಯ ಒಂದು ಉಡುಪು. ವರ್ಮವು ಸಂಪೂರ್ಣವಾಗಿ ಕಬ್ಬಿಣದಿಂದ ಮಾಡಿದ

---

೧. ನಮೋ ನೀಲ ಗ್ರೀವಾಯ ಚ ಶಿತಿಕಂಠಾಯ ಚ - (ಶು.ಯ. ೧೩।೨೮)

* ಪಟಸ್ಯೂತಂ ಕರ್ಪಾಸ ಗರ್ಭಂ ದೇಹರಕ್ಷಕಂ ಕವಚಮ್ ।
ಲೋಹಮಯ ಶರೀರ ರಕ್ಷಕಂ ವರ್ಮ।
(ಶು. ಯ. ೧೬/೩೫ ಮೇಲಿನ ಮಹೀಧರ ಭಾಷ್ಯ)

'ಚಿಲಕತ್ತು', ಕವಚದ ಮೇಲೆ 'ವರ್ಮ'ವು ಧರಿಸಲ್ಪಡುತ್ತಿತ್ತು (ಕೃತ್ತಿಂ ವಸಾನಃ -ಶು.ಯ. ೧೬/೫೧). ಇದರಿಂದ ಸ್ಪಷ್ಟವಾಗಿ ತಿಳಿದು ಬರುವುದೇನೆಂದರೆ - ರಥವನ್ನು ಹತ್ತಿ ಧನುರ್ಬಾಣಗಳಿಂದ ಸುಸಜ್ಜಿತನಾದ ಯೋಧನು ರಣಾಂಗಣದಲ್ಲಿ ಶತ್ರುಗಳ ಸಂಹಾರಕ್ಕೋಸುಗ ಹೋಗುವಂತೆ, ರುದ್ರನು ತಲೆಯ ಮೇಲೆ ಬಲ್ಮ, ಹಾಗು ದೇಹದ ಮೇಲೆ ಕವಚ ಮತ್ತು ವರ್ಮಗಳನ್ನು ಧರಿಸಿ, ರಥದ ಮೇಲೆ ಆಸವನ್ನು ಹಾಕಿ, ಧನುಸ್ಸಿನಲ್ಲಿ ಬಾಣವನ್ನು ಏರಿಸಿ, ತನ್ನ ಭಕ್ತರ ವೈರಿಗಳನ್ನು ಹೊಡೆಯುವದಕ್ಕೋಸುಗ ಬೈಲಿನಲ್ಲಿ ಇಳಿಯುತ್ತಾನೆ. ಅವನು ಬಿಲ್ಲಿನಲ್ಲಿ ಬಾಣಗಳನ್ನು ಯಾವಾಗಲೂ ಏರಿಸುತ್ತಿರುತ್ತಾನೆ. ಆದುದರಿಂದ ಅವನ ಹೆಸರು 'ಆತತಾಯಿ' ಎಂದು ಇರುತ್ತದೆ. ಇವನ ಅಸ್ತ್ರ-ಶಸ್ತ್ರಗಳು ಬಹಳ ಭಯಾನಕವಿರುವದರಿಂದ ಋಷಿಗಳು ಇವುಗಳಿಂದ ರಕ್ಷಣೆ ಹೊಂದಲಿಕ್ಕೆ ಯಾವಾಗಲೂ ಪ್ರಾರ್ಥನೆಯನ್ನು ಮಾಡುತ್ತಿರುತ್ತಾರೆ.

'ವಿಜ್ಯಂ ಧನುಃ ಕಪರ್ದಿನೋ ವಿಶಲ್ಯೋ ಬಾಣವಾನ್ ಉತ ।
ಅನೇಶನ್ನ ಸ್ಯ ಯಾ ಇಷವ ಆಭುರಸ್ಯ ನಿಷಂಗಧಿಃ ॥

ಶು.ಯ. ೧೬/೧೦

ರುದ್ರನ ಶರೀರವು ಅತ್ಯಂತ ಬಲಶಾಲಿಯಾಗಿರುವುದು. ಋಗ್ವೇದದಲ್ಲಿ ಅವನು ಕ್ರೂರನೆಂದು ಹೇಳಲ್ಪಟ್ಟಿದೆ. ಅವನು ಸ್ವರ್ಗಲೋಕದ ರಕ್ತವರ್ಣದ (ಅರುಷ) ವರಾಹನು ಇರುತ್ತಾನೆ (ಋ. ೧/೧೧೪/೫). ಅವನು ಎಲ್ಲಕ್ಕೂ ಶ್ರೇಷ್ಠ ವೃಷಭನಿರುತ್ತಾನೆ: ಅವನ ತಾರುಣ್ಯವು ಸದಾ ಸ್ಥಿರವಾಗಿ ಇರುತ್ತದೆ; ಅವನು ಶೂರರ ಅಧಿಪತಿಯಾಗಿದ್ದಾನೆ ಮತ್ತು ತನ್ನ ಸಾಮರ್ಥ್ಯದಿಂದ ಅವನು ಪರ್ವತಗಳಲ್ಲಿ ಬತ್ತಿರುವ ನದಿಗಳಲ್ಲಿ ನೀರಿನ ಪ್ರವಾಹವನ್ನು ಉತ್ಪನ್ನ ಮಾಡುತ್ತಾನೆ. ತನ್ನನ್ನು ಗೌರವಿಸದ ಮನುಷ್ಯರನ್ನು ಅವನು ನಿಶ್ಚಯವಾಗಿ ತನ್ನ ಬಾಣಗಳಿಂದ ತುಂಡುತುಂಡಾಗಿ ಮಾಡಿಬಿಡುತ್ತಾನೆ. ಆದರೆ ತನ್ನ ಉಪಾಸಕ ಮಾನವರ ಬಗೆಗೆ ಅತ್ಯಂತ ಉಪಕಾರಿಯಾಗಿದ್ದಾನೆ. ಆದುದರಿಂದ ಅವನು 'ಶಿವ' ಎಂಬ ಹೆಸರಿನಿಂದ ಕರೆಯಲ್ಪಡುತ್ತಾನೆ. ಅವನ ಸಂಬಂಧಿಗಳ ಪರಿಚಯವು ಮಂತ್ರಗಳ ಅಧ್ಯಯನದಿಂದ ತಿಳಿಯುತ್ತದೆ. ರುದ್ರನು ಮರುತರ ಪಿತನು ಇರುವನು (ಋ ೧/೧೧೪/೬). ಈ ಕಾರಣದಿಂದಲೇ ಅನೇಕ ಮಂತ್ರಗಳಲ್ಲಿ ಮರುತರ ಹಾಗೂ ರುದ್ರನ ಸ್ತುತಿಯು ಕೂಡಿಯೇ ಮಾಡಲ್ಪಟ್ಟಿದ್ದು ಕಂಡುಬರುತ್ತದೆ. ಮರುತರಿಗೆ 'ರುದ್ರಿಯರು' ಎಂಬ ಸಂಜ್ಞೆ ಬರುವುದಕ್ಕೆ ಇದೇ ರಹಸ್ಯವಿರುತ್ತದೆ. ರುದ್ರನಿಗೆ ಮರುತರ ತಂದೆಯಾಗುವ ವಿಷಯದಲ್ಲಿ ಷಡ್ಗುರು ಶಿಷ್ಯನು 'ಸರ್ವಾನುಕ್ರಮಣೀಯ ವೇದಾರ್ಥ ದೀಪಿಕೆ'ಯಲ್ಲಿ ಮನೋರಂಜಕ ಆಖ್ಯಾನವನ್ನು ಮಾಡಿರುತ್ತಾನೆ. ಇದೇ ಪ್ರಸಂಗವನ್ನು ತೆಗೆದುಕೊಂಡು 'ದ್ವಾದ್ವಿವೇದ'ನಿಂದ ನೀತಿಮಂಜರಿಯಲ್ಲಿ ಈ ಉಪದೇಶದ ಪದ್ಯವು ಉಂಟಾಗಿದೆ.

'ದೃಷ್ಟ್ವಾ ಪರವ್ಯಥಾಂ ಸನ್ತ ಉಪಕುರ್ವನ್ತಿ ಲೀಲಯಾ ।
ದಿತೇರ್ಗರ್ಭವ್ಯಥಾಂ ಹತ್ವಾ ರುದ್ರೋಽಭೂನ್ಮರುತಾಂ ಪಿತಾ ॥

ಪ್ರಾಚೀನ ಗ್ರಂಥಗಳಲ್ಲಿ ರುದ್ರನಿಗೋಸುಗ 'ತ್ರ್ಯಂಬಕ' ಶಬ್ದದ ವ್ಯವಹಾರವು ಬಹಳವಾಗಿ ದೊರೆಯುತ್ತದೆ. ಈ 'ತ್ರ್ಯಂಬಕ' ಶಬ್ದದ ಪ್ರಯೋಗವು ಋಗ್ವೇದದ ಕೇವಲ ಒಂದೇ ಮಂತ್ರದಲ್ಲಿ ಮಾಡಲ್ಪಟ್ಟಿದೆ. ಇದು ಶುಕ್ಲ ಯಜುರ್ವೇದ (ಅ. ೩.೬೦ ಮಂ)ದಲ್ಲಿಯೂ ಉದ್ಧೃತವಾದದ್ದು ದೊರೆಯುತ್ತದೆ. ರುದ್ರನ ಸ್ತುತಿಪರವಾದ ಈ ಮಂತ್ರವು ಅತ್ಯಂತ ಪ್ರಸಿದ್ಧವಿರುತ್ತದೆ :

ತ್ರ್ಯಂಬಕಂ ಯಜಾಮಹೇ ಸುಗಂಧಿಂ ಪುಷ್ಟಿವರ್ಧನಮ್ ।
ಉರ್ವಾರುಕಮಿವ ಬಂಧನಾನ್ಮೃತ್ಯೋರ್ಮುಕ್ಷೀಯ ಮಾಽಮೃತಾತ್ ॥

-ಋಮಂ. ೭/೫೩/೧೪

'ತ್ರ್ಯಂಬಕ' ಶಬ್ದದ ಅರ್ಥವನ್ನು ಎಲ್ಲ ಭಾಷ್ಯಕಾರರು 'ಮೂರು ಕಣ್ಣುಳ್ಳ' ಎಂದು ಮಾಡಿದ್ದಾರೆ. ಆದರೆ ಪಾಶ್ಚಾತ್ಯ ವಿದ್ವಾಂಸರಿಗೆ ಈ ಅರ್ಥದಲ್ಲಿ ಆಸ್ಥೆಯು ಇರುವದಿಲ್ಲ. ಅವರು ಇಲ್ಲಿ 'ಅಂಬಕ' ಶಬ್ದಕ್ಕೆ ಜನನೀ ವಾಚಕವೆಂದು ಬಗೆದು, ರುದ್ರನಿಗೆ ಮೂವರು ತಾಯಂದಿರುಳ್ಳವ ಎಂದು ಹೇಳುತ್ತಾರೆ. ಆದರೆ ರುದ್ರನಿಗೆ ಮೂವರು ಮಾತೆಯರು ಯಾರು ಇದ್ದರು? ಎಂಬುವದು ಸ್ಪಷ್ಟವಾಗಿ ಪ್ರತೀತವಾಗುವುದಿಲ್ಲ. ವೈದಿಕ ಕಾಲದ ಅನಂತರ ರುದ್ರನ ಪತ್ನಿಯೆಂದು ಹೇಳುವ 'ಅಂಬಿಕಾ' ಶಬ್ದದ ಪ್ರಥಮ ಪ್ರಯೋಗವು 'ವಾಜಸನೇಯ ಸಂಹಿತೆ' (೩/೫೭)ಯಲ್ಲಿ ಬರುತ್ತದೆ. ಇದು ಅವನ ಪತ್ನಿಯ ಹೆಸರು ಆಗದೆ, ಭಗಿನಿಯ ಹೆಸರು ಎಂದಿಷ್ಟೇ ಹೇಳಲ್ಪಟ್ಟಿದೆ- 'ಏಷ ತೇ ರುದ್ರ ಭಾಗಃ ಸಹ ಸ್ವಸ್ರಾऽಮ್ಬಿಕಯಾ' ತಂಜು ಷಷ್ಟ ಸ್ವಾಹೈ ತೇ ರುದ್ರ ಭಾಗ ಆಖುಸ್ತೇ ಪಶುಃ। (ಶು.ಯ. ೩/೫೭). ಇವನ ಪತ್ನಿಯ ಬೇರೆ ಹೆಸರುಗಳು ವೈದಿಕ ಗ್ರಂಥಗಳಲ್ಲಿ ದೊರೆಯುತ್ತವೆ. 'ಪಾರ್ವತಿ' ಶಬ್ದವು ತೈತ್ತಿರೀಯ ಅರಣ್ಯಕದಲ್ಲಿ ಮತ್ತು 'ಉಮಾ' 'ಹೈಮವತಿ' ಶಬ್ದಗಳು ಕೇನೋಪನಿಷತ್ತಿನಲ್ಲಿ ಪ್ರಯುಕ್ತವಾಗಿವೆ.

ಈ ಪ್ರಕಾರ ಋಗ್ವೇದೀಯ ದೇವತೆಗಳ ಗುಂಪಿನಲ್ಲಿ ರುದ್ರನ ಸ್ಥಾನವು ಅತ್ಯಂತ ಅಲಕ್ಷಿತವಾದಂತೆ ತೋರುತ್ತದೆ. ಆದರೆ ಅನ್ಯಸಂಹಿತೆಗಳಲ್ಲಿ ಅವನ ಮಹತ್ವವು ಬೆಳೆಯುತ್ತ ಬಂದುದು ಕಂಡುಬರುತ್ತದೆ. ರುದ್ರಾಧ್ಯಾಯದಲ್ಲಿ ರುದ್ರನಿಗೋಸುಗ ಭವ, ಶರ್ವ, ಪಶುಪತಿ, ಉಗ್ರ, ಭೀಮ ಶಬ್ದಗಳ ಪ್ರಯೋಗಗಳು ದೊರೆಯುವದಿಲ್ಲ. ಇದಲ್ಲದೆ ಪ್ರತಿಯೊಂದು ಸ್ಥಿತಿಯಲ್ಲಿ ವರ್ತಮಾನ ಪ್ರಾಣಿಗಳ ಮೇಲೆ ಇವನ ಅಧಿಕಾರವು ಸದಾ ಸಿದ್ಧವಾಗಿರುತ್ತದೆ. ಸ್ವರ್ಲೋಕದಲ್ಲಿ, ಅಂತರಿಕ್ಷದಲ್ಲಿ ಭೂಮಿಯ ಮೇಲೆ ಅಥವಾ ಭೂಮಿಯ ಕೆಳಗೆ ಭಗವಾನ್ ರುದ್ರನ ಅಧಿಪತ್ಯವಿಲ್ಲದ ಯಾವ ಸ್ಥಾನವೂ ಇರುವುದಿಲ್ಲ. ಈ ಎಲ್ಲ ವಿಶ್ವವು ಸಾವಿರಾರು ದೇವತೆಗಳ ಅಧಿಕಾರದಿಂದ ತುಂಬಿರುತ್ತದೆ. ರುದ್ರನು ಜಗತ್ತಿನ ಎಲ್ಲ ಪದಾರ್ಥಗಳ ಸ್ವಾಮಿಯಾಗಿರುತ್ತಾನೆ. ಅವನು ಅನ್ನಗಳ, ಹೊಲಗಳ, ವನಗಳ ಅಧಿಪತಿಯಾಗಿರುತ್ತಾನೆ. ಇದಲ್ಲದೆ ಕಳ್ಳ, ಕೊಳ್ಳೆಗಾರ, ವಂಚಕ ಮೊದಲಾದ ನೀಚ ಜೀವಿಗಳಿಗೂ ಸಹ ಅವನು ಸ್ವಾಮಿಯಾಗಿರುತ್ತಾನೆ. ಅಥರ್ವವೇದದಲ್ಲಿ ರುದ್ರನ ಹೆಸರುಗಳಲ್ಲಿ ಭವ, ಶರ್ವ, ಪಶುಪತಿ ಮತ್ತು ಭೂತಪತಿ ಎಂಬವೂ ಹೇಳಲ್ಪಟ್ಟಿವೆ (೧೧/೨/೧). 'ಪಶುಪತಿ' ಎಂದರೆ ಕೇವಲ ಆಕಳು ಮೊದಲಾದ ಪಶುಗಳ ಮೇಲೆ ಅಧಿಕಾರವುಳ್ಳವೆಂದು ಮಾತ್ರವಲ್ಲ; 'ಪಶು' ಶಬ್ದದ ಅರ್ಥಕ್ಕೆ ಒಳಪಟ್ಟು ಮನುಷ್ಯರನ್ನೂ ತೆಗೆದುಕೊಳ್ಳಬೇಕೆಂಬ ಅಭಿಪ್ರಾಯವು ಅಥರ್ವವೇದಕ್ಕೆ ಸಮ್ಮತವದೆ:

ತವೇ ಮೇ ಪಂಚ ಪಶವೋ ವಿಭಕ್ತಾ,
ಗಾವೋ ಅಶ್ವಾಃ ಪುರುಷಾ ಅಜಾವಯಃ

(ಅ. ೧೧/೨/೯)

ಹೀಗೆ 'ಪಶು', ಶಬ್ದದ ತಾಂತ್ರಿಕ ಅರ್ಥವು ನಮಗೆ ಮೊಟ್ಟಮೊದಲು ಅಥರ್ವವೇದದ ಮೇಲಿನ ಮಂತ್ರದಲ್ಲಿ ಹೊಳೆಯುವದು. ಸಮಗ್ರ ಭುವನದ ನಿವಾಸವಾಗಿರುವ ಅನೇಕ ವಸ್ತುಗಳನ್ನು ಧಾರಣಮಾಡಿರುವ ಬ್ರಹ್ಮಾಂಡರೂಪವಾದ ಕೋಶವೇ ರುದ್ರನ ವಸ್ತುವಾಗಿರುವದು. ರುದ್ರನ ನಿವಾಸವು ಕೇವಲ ಅಗ್ನಿ, ಜಲ, ಔಷಧಿ, ವನಸ್ಪತಿ ಇವುಗಳಲ್ಲಿಯಷ್ಟೇ ಅಲ್ಲ, ಅವನಿಂದಲೇ ಸಮಸ್ತ ಭುವನವು ರಚಿಸಲ್ಪಟ್ಟು ಅದರಲ್ಲಿ ಇವುಗಳನ್ನೆಲ್ಲ ತುಂಬಿದ್ದಾನೆಯೆನ್ನಬೇಕು.

ಯೋ ಅಗ್ನೌ ರುದ್ರೋ ಯ ಅಪ್‌ಸ್ವನ್ತ,
ರ್ಯ ಔಷಧೀರ್ವೋರುಧ ಆವಿವೇಶ।
ಯ ಇಮಾ ವಿಶ್ವಾ ಭುವನಾನಿ ಚಾಕ್ ಲ್ಪಪೇ,
ತಸ್ಮೈ ರುದ್ರಾಯ ನಮೋ ಅಸ್ತ್ವಗ್ನಯೇ॥

ಅಥರ್ವ ೭/೮೩.

ಈ ಸುಂದರವಾದ ಮಂತ್ರವು ರುದ್ರನ ಮಹಿಮೆಯನ್ನು ಸ್ಪಷ್ಟ ಶಬ್ದಗಳಲ್ಲಿ ಪ್ರಕಟಿಸುತ್ತದೆ. ಇದಂತೂ 'ಯಜುಸ್' ಮತ್ತು 'ಅಥರ್ವ' ಸಂಹಿತೆಗಳ ಮಾತಾಯಿತು. ಇನ್ನು 'ಬ್ರಾಹ್ಮಣ'ಗಳ ಕಾಲದಲ್ಲಿಯಂತೂ ರುದ್ರನ ಮಹತ್ವವು ಇನ್ನೂ ಬೆಳೆಯುತ್ತಲೇ ಬಂದಿದೆ. ಐತರೀಯ ಬ್ರಾಹ್ಮಣದ ಒಂದೆರಡು ಉಲ್ಲೇಖಗಳಿಂದ ರುದ್ರನ ಘನತೆಯ ಬಗ್ಗೆ ಸಾಕಷ್ಟು ಸೂಚನೆಯನ್ನು ಕಾಣಬಹುದು. ೩/೩/೩೩ ರಲ್ಲಿ ಪ್ರಜಾಪತಿಯ ಮತ್ತು ಅವನ ಕನ್ಯೆಯ ಸಂಬಂಧದ ಪ್ರಸಂಗವನ್ನು ತೆಗೆದುಕೊಂಡು ರುದ್ರನ ಉತ್ಪತ್ತಿಯ ವಿವೇಚನೆಯನ್ನು ಮಾಡುವಾಗ ಕೇವಲ ಗೌರವದ-ದೃಷ್ಟಿಯಿಂದ ಮಾತ್ರ ಇವನ ನಾಮ ನಿರ್ದೇಶ ಮಾಡದೆ, 'ಏಷ ದೇವೋऽ ಭವತ್' ಎಂದು ಹೇಳಿ, ಸಮ್ಮಾನನೀಯ ಶಬ್ದವೇ ಉಪಯೋಗಿಸಲ್ಪಟ್ಟಿದೆ. ಋಗ್ವೇದದ ಒಂದು ವಿನಿಯೋಗ ವಾಕ್ಯದಲ್ಲಿಯೂ ರುದ್ರನ ಹೆಸರು ಉಪಯೋಗಿಸಲ್ಪಟ್ಟಿದ್ದರೂ ಐತರೀಯ ಬ್ರಾಹ್ಮಣರು ಈ ವ್ಯವಸ್ಥೆಯಲ್ಲಿ ಈ ಹೆಸರನ್ನು ಗೌರವದ ದೃಷ್ಟಿಯಿಂದ ಬಿಟ್ಟು ಕೊಡುವುದಾಗಿರುವದು.

ಉಪನಿಷತ್ತುಗಳಲ್ಲಿ ರುದ್ರನ ಪ್ರಧಾನತೆಯ ಪರಿಚಯವು ನಮಗೆ ಚೆನ್ನಾಗಿ ದೊರೆಯುತ್ತದೆ. ಛಾಂದೋಗ್ಯ (೩/೭/೪), ಬೃಹದಾರಣ್ಯಕ (೩/೯/೪), ಮೈತ್ರಿ (೬/೫), ಮಹಾನಾರಾಯಣ (೧೩/೨) , ನೃಸಿಂಹತಾಪನೀ (೧/೨), ಶ್ವೇತಾಶ್ವತರ (೩/೨-೪)ಮೊದಲಾದ ಪ್ರಾಚೀನ ಉಪನಿಷತ್ತುಗಳಲ್ಲಿ ರುದ್ರನ ವೈಭವ ಹಾಗೂ ಪ್ರಭಾವದ ವರ್ಣನೆ ಉಪಲಬ್ಧವಾಗುತ್ತದೆ. ಶ್ವೇತಾಶ್ವತರದಲ್ಲಿ ರುದ್ರನ ಏಕತೆ, ಜಗನ್ನಿರ್ಮಾಣದಲ್ಲಿ ನಿರಪೇಕ್ಷತೆ, ವಿಶ್ವದ ಅಧಿಪತ್ಯ, ಮಹರ್ಷಿತ್ವ ಹಾಗೂ ದೇವತೆಗಳ ಉತ್ಪಾದಕ ಮತ್ತು ಐಶ್ವರ್ಯ ಸಂಪನ್ನ ಮಾಡುವ ಸಿದ್ಧಾಂತಗಳ ಪ್ರತಿಪಾದನ - ಇವು ಸ್ಪಷ್ಟ ಭಾಷೆಯಲ್ಲಿ ಮಾಡಲ್ಪಟ್ಟಿವೆ.

ಏಕೋ ರುದ್ರೋ ನ ದ್ವಿತೀಯಾಯತಸ್ಥುಃ ;' (೩/೨).

'ಯೋ ದೇವಾನಾಂ ಪ್ರಭುವಶ್ಚೋದ್ಭವಶ್ಚ;

ವಿಶ್ವಾಧಿಪೋ ರುದ್ರೋ ಮಹರ್ಷಿಃ।

ಹಿರಣ್ಯಗರ್ಭಂ ಜನಯಾಮಾಸ ಪೂರ್ವಂ'

ಸ ನೋ ಬುದ್ಧ್ಯಾ ಶುಭಯಾ ಸಂಯುನಕ್ತ' (೩/೪)

ಆದಿ ಶ್ವೇತಾಶ್ವತರ ಶ್ರುತಿಯ ಪ್ರಸಿದ್ಧ ಮಂತ್ರ ಈ ವಿಷಯದಲ್ಲಿ ಪ್ರಮಾಣರೂಪದಿಂದ ಉದ್ಧೃತ ಮಾಡಲ್ಪಡಲು ಶಕ್ಯವಿದೆ. ಅವಾಂತರ ಕಾಲೀನ ಉಪನಿಷತ್ತುಗಳಲ್ಲಿ ಅನೇಕ ಉಪನಿಷತ್ತುಗಳ ವಿಷಯವು ರುದ್ರ ಶಿವನ ಪ್ರಭುತೆ, ಮಹನೀಯತೆ, ಅದ್ವಿತೀಯತೆ ತೋರಿಸುವುದಾಗಿರುತ್ತದೆ. ಆದುದರಿಂದ ಅಥರ್ವಶಿರ, ಕಠರುದ್ರ, ರುದ್ರಹೃದಯ, ಪಾಶುಪತಬ್ರಹ್ಮ ಮೊದಲಾದ ಶಿವಪರವಾದ ಉಪನಿಷತ್ತುಗಳ ನಾಮೋಲ್ಲೇಖ ಮಾತ್ರದಿಂದ ನಮಗೆ ಇಲ್ಲಿ ಸಂತೋಷಪಡಬೇಕಾಗುತ್ತದೆ.

ಈಗ ವಿಚಾರಣೀಯ ಪ್ರಶ್ನೆ ಇದು ಇರುವದು: ಯಾವ ರುದ್ರನಿಗೆ ಋಗ್ವೇದ ಹಾಗೂ ಪ್ರಾಚೀನ ಸಂಹಿತೆಗಳು 'ಉಗ್ರ' ಹೆಸರಿನಿಂದ ಕೂಗುತ್ತವೆಯೋ, ಆ ರುದ್ರನ ಪ್ರಾಕೃತಿಕ ಆಧಾರ ಏನು ಇತ್ತು? ಪ್ರಕೃತಿಯ ಯಾವ ವ್ಯಕ್ತ ಹಾಗೂ ದೃಶ್ಯ ಪದಾರ್ಥದ ನಿರೀಕ್ಷಣೆ ಮಾಡಿ ಅದಕ್ಕೆ 'ರುದ್ರ' ಸಂಜ್ಞೆ ಕೊಡಲ್ಪಟ್ಟಿದೆ. 'ರುದ್ರ' ಶಬ್ದದ ವ್ಯುತ್ಪತ್ತಿಯಿಂದ ಈ ಸಮಸ್ಯೆಯ ತೀರ್ಮಾನವಾಗುವ, ಸ್ವಲ್ಪ ಸಹ ಸೂಚನೆ ದೊರೆಯುವದಿಲ್ಲ. ಪ್ರಾಚೀನ ವೈದಿಕ ಗ್ರಂಥಗಳಲ್ಲಿ ಸರ್ವತ್ರ 'ರುದ್ರನ' ವ್ಯುತ್ಪತ್ತಿಯು, 'ರುದ್' (ಅಳುವದು) ಧಾತುವಿನಿಂದ ನಿಷ್ಪನ್ನವೆಂದು ಹೇಳಲ್ಪಟ್ಟಿದೆ. ಶತಪಥ ಬ್ರಾಹ್ಮಣ (೬/೧/೩-೮)ದಲ್ಲಿ ರುದ್ರನ ಉತ್ಪತ್ತಿಯ ಬಗ್ಗೆ ಮನೋಹರವಾದ ಕತೆಯಿದೆ. ಪ್ರಜಾಪತಿಯು ಯಾವಾಗ ಸೃಷ್ಟಿಮಾಡುವುದನ್ನು ಆರಂಭಮಾಡಿದನೊ ಆಗ ಒಬ್ಬ ಕುಂಬಾರನ ಜನ್ಮವಾಯಿತು.

ಇವನು ಹುಟ್ಟುತ್ತಲೇ ತನ್ನ ನಾಮಕರಣಕ್ಕೋಸುಗ ಅಳಹತ್ತಿದನು. ನಾಮಕರಣವು ಮುಂದೆ ಮಾಡಲ್ಪಡತಕ್ಕದ್ದು ಅವಶ್ಯ, ಆದರೆ ಜನ್ಮದ ಸಮಯದಲ್ಲಿಯೇ ರೋದನ ಕ್ರಿಯೆಯೊಡನೆ ಸಂಬಂಧವಾಗುವ ಕಾರಣ, ಆ ಕುಮಾರನ ಹೆಸರು 'ರುದ್ರ' ಎಂದು ಇಡಲ್ಪಟ್ಟಿತು (ಯದರೋದಿತ್ ತಸ್ಮಾತ್ ರುದ್ರಃ). ಬಹದಾರಣ್ಯಕ (೩/೯/೪)ದಲ್ಲಿ ಇದೇ ಪ್ರಕಾರ ಹತ್ತು ಇಂದ್ರಿಯಗಳು ಹಾಗೂ ಮನಸ್ಸು ಏಕಾದಶ ರುದ್ರನ ರೂಪದಲ್ಲಿ ಗ್ರಹಣಮಾಡಲ್ಪಟ್ಟಿವೆ. ಇವುಗಳಿಗೆ 'ರುದ್ರ* ಅನ್ನುವ ತಾತ್ಪರ್ಯವು ಹೀಗೆ: ಇವು ಶರೀರವನ್ನು ಬಿಟ್ಟು ಹೊರಗೆ ಹೋಗಲು ಮೃತನ ಸಂಬಂಧಿಕರನ್ನು ಅಳಿಸುತ್ತವೆ (ತೇ ಯದಾಸ್ಮಾಚ್ಛ ರೀರಾನ್ಮರ್ತ್ಯಾದುತ್ಕ್ರಾಮನ್ತಿ ಅಥರೋದಯನ್ತಿ ।ತದ್ ಯದ್ ರೋದಯನ್ತಿ ತಸ್ಮಾದ್ರುದ್ರಾ ಇತಿ). ವೇದಗಳ ಅಭ್ಯಾಸಿಗಳಾದ ಪಾಶ್ಚಾತ್ಯ ವಿದ್ವಾಂಸರು ರುದ್ರನ ಪ್ರಾಕೃತಿಕ ಆಧಾರವನ್ನು ಹುಡುಕಿ ತೆಗೆಯುವ ವಿಶೇಷ ಪರಿಶ್ರಮವನ್ನು ಮಾಡಿದ್ದಾರೆ. (ಈ ಎಲ್ಲ ಮತಗಳ ಸಲುವಾಗಿ ಡಾ. ಏ.ಬೀ. ಕೀಥರ 'ರಿಲಿಜನ್ ಎಂಡ ಫಿಲಾಸಫಿ ಆಫ್ ವೇದ, ಪೃ. ೧೪೬-೭ ನೋಡಿರಿ). ಡಾ. ವೇಬರ್‌ನು ರುದ್ರನಿಗೆ ಬಿರುಗಾಳಿಯ ದೇವತೆ ಎಂದು ತಿಳಿಯುತ್ತಾನೆ. ಡಾ. ಹಿಲೇ ಬ್ರಾಂಟನ ಸಮ್ಮತಿಯಲ್ಲಿ ಇವನು ಗ್ರೀಷ್ಮ ಕಾಲದ ದೇವತೆ ಇರುತ್ತಾನೆ ಹಾಗೂ ಯಾವುದೋ ವಿಶಿಷ್ಟ ನಕ್ಷತ್ರದೊಡನೆ ಇವನ ಸಂಬಂಧವಿರುತ್ತದೆ. ಡಾ. ಆದೇರನ ವಿಚಾರದಲ್ಲಿ ಮೃತಾತ್ಮರ ಸಂಬಂಧವುಳ್ಳ ಪ್ರಧಾನ ವ್ಯಕ್ತಿಗೆ ದೇವತ್ವದ ರೂಪವನ್ನು ಕೊಟ್ಟು 'ರುದ್ರ' ಎಂದು ತಿಳಿಯಲ್ಪಟ್ಟಿದೆ. ಯಾಕೆಂದರೆ ಇಂತಹ ವರ್ಣನೆಗಳು ಅನೇಕ ಸ್ಥಳಗಳಲ್ಲಿ ದೊರೆಯುತ್ತವೆ. ಮೃತರ ಆತ್ಮಗಳು ಬಿರುಗಾಳಿಯೊಡನೆ ಹಾರಿ ಮೇಲೆ ಹೋಗುತ್ತವೆ. ಡಾ. ಓಲ್ಡೆನ್ ಬರ್ಗರು ಈ ಮತದಲ್ಲಿ ಆಸ್ಥೆಯನ್ನು ತೋರಿಸುತ್ತ ರುದ್ರನ ಸಂಬಂಧವನ್ನು ಪರ್ವತ ಹಾಗೂ ಅರಣ್ಯದೊಡನೆ ಸಿದ್ಧಮಾಡುವದು ಶ್ರೇಯಸ್ಕರವೆಂದು ಬಗೆಯುತ್ತಾನೆ. ರುದ್ರನ ಸಂಬಂಧವು ಪರ್ವತದೊಡನೆ ಅವಶ್ಯವಾಗಿದೆ. ಅವನ ಪತ್ನಿ ಉಮೆಯೂ 'ಹೈಮವತಿ' ಅನ್ನಲ್ಪಡುತ್ತಾಳೆ. ಆದುದರಿಂದ ಈ ಮತಕ್ಕೋಸುಗವೂ ಕೆಲವು ಆಧಾರಗಳಿವೆ. ಆದರೆ ಈ ಹೇಳಿಕೆಗಳಲ್ಲಿ ಕಲ್ಪನೆಯು ವಿಶೇಷ ಉಪಯೋಗ ಮಾಡಲ್ಪಟ್ಟಿದೆ. ರುದ್ರನ ಪೂರ್ವವರ್ಣಿತ ಸ್ವರೂಪದ ಪೂರ್ಣ ಸಾಮಂಜಸ್ಯವು ಈ ಕಥನಗಳಿಂದ ಎಷ್ಟೂ ಕೂಡುವುದಿಲ್ಲ. ಈ ವಿಷಯದಲ್ಲಿ ಪ್ರಾಚೀನ ಗ್ರಂಥಗಳಲ್ಲಿ ಉಪಲಬ್ಧವಿರುವ ಸಾಮಗ್ರಿಯು ರುದ್ರನ ಮೂಲ ವಿಚಾರದ ಸತ್ಯತೆಯ ಮೇಲೆ ಪ್ರಕಾಶವನ್ನು ಕೆಡಹುತ್ತದೆ.

ವಸ್ತುತಃ ರುದ್ರನು ಅಗ್ನಿಯ ಪ್ರತೀಕನು. ಅಗ್ನಿಯ ದೃಶ್ಯ ಮತ್ತು ಭೌತಿಕ ಆಧಾರದ ಮೇಲೆ ರುದ್ರನ ಕಲ್ಪನೆಯು ನಿಲ್ಲಿಸಲ್ಪಟ್ಟಿದೆ. ಅಗ್ನಿಯ ಜ್ವಾಲೆಗಳು ಮೇಲೆ ಏಳುತ್ತವೆ. ಆದುದರಿಂದ ರುದ್ರನ ಊರ್ಧ್ವಲಿಂಗದ ಕಲ್ಪನೆಯು ಉಂಟಾಯಿತು. ಅಗ್ನಿಯು ವೇದಿಯ ಮೇಲೆ ಉರಿಯುತ್ತದೆ.

ಈ ಕಾರಣದಿಂದ ಶಿವನು ಜಲಧಾರಿಯ ನಡುವೆ ಇಡಲ್ಪಡುತ್ತಾನೆ. ಅಗ್ನಿಯಲ್ಲಿ ಘೃತದ ಆಹುತಿಯು ಕೊಡಲ್ಪಡುತ್ತದೆ. ಇದಕ್ಕೋಸುಗ ಶಿವನು ಜಲದಿಂದ ಅಭಿಷೇಕ ಹೊಂದುತ್ತಾನೆ. ಶಿವಭಕ್ತರ ಸಲುವಾಗಿ ಭಸ್ಮಧಾರಣ ಮಾಡುವ ಪದ್ಧತಿಯ ಸ್ವಾರಸ್ಯವೂ ಈ ಸಿದ್ಧಾಂತವನ್ನು ಒಪ್ಪುವುದರಿಂದ ಪೂರ್ಣವಾಗುತ್ತದೆ. ಈ ಸಿದ್ಧಾಂತಕ್ಕೆ ಪೋಷಕವಾದ ವೈದಿಕ ಪ್ರಮಾಣಗಳ ಮೇಲೆ ಈಗ ಲಕ್ಷ್ಯಕೊಡತಕ್ಕದ್ದು. ಋಗ್ವೇದ (೨/೧೬) ವು 'ತ್ವಮಗ್ನೇ ರುದ್ರೋ' ಎಂದು ಈ ಏಕೀಕರಣದ ಸಂಕೇತ ಮಾತ್ರ ಮಾಡಿದೆ. ಅಥರ್ವ (೭/೮೩) 'ತನ್ಮೈ ರುದ್ರಾಯ ನಮೋ ಅಸತ್ವಗ್ನಯೋ' ಮಂತ್ರದಲ್ಲಿ ಇದರ ಕಡೆಗೇ ಇಂಗಿತ ಮಾಡುತ್ತದೆ. ಶತಪಥ (೩/೧/೩) ಬ್ರಾಹ್ಮಣದ ಪ್ರಮಾಣವು ವಿಶೇಷ ಸ್ಪಷ್ಟವಿರುತ್ತದೆ. 'ಅಗ್ನಿರ್ವೈ ರುದ್ರಃ' ಅತ್ಯಂತ ಸ್ಪಷ್ಟ ಭಾಷೆಯಲ್ಲಿ ಎರಡರ ಏಕತ್ವದ ಪ್ರತಿಪಾದನ

---

* ರುದ್ರನ ಅನ್ಯ ಉತ್ಪತ್ತಿಗಳ ಸಲುವಾಗಿ ಋ. ೧ ।೧೧೪ /೧ ದ ಸಾಯುಜ್ಯಭಾಷ್ಯ ನೋಡಿರಿ.

ಮಾಡಿರುತ್ತದೆ. ರುದ್ರನ ಎಂಟು ಮೂರ್ತಿಗಳ ಎಂಟು ಭೌತಿಕ ಪದಾರ್ಥಗಳು ಪ್ರತಿನಿಧಿ ಇರುತ್ತವೆ. 'ರುದ್ರ'ನು ಅಗ್ನಿ ಇರುತ್ತಾನೆ. 'ಶರ್ವ' ಜಲರೂಪನು; 'ಪಶುಪತಿ' ಔಷಧಿ ರೂಪನು ಇರುತ್ತಾನೆ. 'ಉಗ್ರ' ವಾಯುಃ, 'ಅಶನಿ' ವಿದ್ಯುತ್, 'ಭವ' ಪರ್ಜನ್ಯಃ, ಮಹಾನ್-ದೇವ (ಮಹಾದೇವ) ಚಂದ್ರಮಾ; 'ಈಶಾನ' ಆದಿತ್ಯನು ಇರುತ್ತಾನೆ. ಶತಪಥದಿಂದ ಗೊತ್ತಾಗುವುದೇನೆಂದರೆ ರುದ್ರನಿಗೆ ಪ್ರಾಚ್ಯ (ಪೂರ್ವದಿಕ್ಕಿನ ನಿವಾಸಿ)ರು 'ಶರ್ವ' ನಾಮದಿಂದ ಹಾಗೂ ಬಾಹೀಕ (ಪಶ್ಚಿಮದ ನಿವಾಸಿ)ರು 'ಭವ' ಹೆಸರಿನಿಂದ ಕರೆಯುತ್ತಿದ್ದರು. ಆದರೆ ಆ ಎಲ್ಲವು ವಸ್ತುತಃ ಅಗ್ನಿಯ ಹೆಸರುಗಳೇ ಇರುತ್ತವೆ :

"ಅಗ್ನಿರ್ವೈ ಸ ದೇವಃ । ತಸ್ಯೈತಾನಿ ನಾಮಾನಿ
ಶರ್ವ ಇತಿ ಯಥಾ ಪ್ರಾಚ್ಯ ಆಚಕ್ಷತೇ ।
ಭವ ಇತಿ ಯಥಾ ಬಾಹೀಕಾಃ, ಪಶೂನಾಂ
ಪತೀ ರುದ್ರೋವಗ್ನಿರಿತಿ ತಾನ್ಯಸ್ಯಾ, ಶಾನ್ತಾ
ನ್ಯೇವೇತರಾಣಿ ನಾಮಾನಿ, ಅಗ್ನಿರಿತ್ಯೇವ ಶಾಂತತಮಮ್ ।

- ಶತಪಥ ೧/೭/೩/೮

ಶುಕ್ಲಯಜುರ್ವೇದ (೩೯/೮) ದಲ್ಲಿ, ಅಗ್ನಿ, ಅಶನಿ, ಪಶುಪತಿ, ಭವ, ಶರ್ವ, ಈಶಾನ, ಮಹಾದೇವ, ಉಗ್ರ ಈ ಎಲ್ಲವು ಒಬ್ಬ ದೇವತೆಯ ಬೇರೆ ಬೇರೆ ಹೆಸರು ಎಂದು ಹೇಳಲ್ಪಟ್ಟಿದೆ. ಶತಪಥದ ವ್ಯಾಖ್ಯೆಯ ಅನುಸಾರವಾಗಿ 'ಅಶನಿ'ಯ ಅರ್ಥವು ವಿದ್ಯುತ್. ಈ ಪ್ರಕಾರ ಯಜುರ್ವೇದದ ಪ್ರಮಾಣದಿಂದ ಸ್ಪಷ್ಟವಿರುವದು. ಪೃಥ್ವೀತಲದ ಮೇಲೆ ಯಾವ ರುದ್ರದೇವತೆಯು ಅಗ್ನಿರೂಪದಿಂದ ನಿವಾಸಮಾಡುವನೋ, ಅವನೇ ಆಕಾಶದಲ್ಲಿ ಕಪ್ಪುಮೋಡಗಳ ಮಧ್ಯದಿಂದ ಹೊಳೆಯುವ ವಿದ್ಯುತ್ತಿನ ರೂಪದಲ್ಲಿ ಪ್ರಕಟವಾಗುತ್ತಾನೆ. ಆದುದರಿಂದ ರುದ್ರನಿಗೆ ವಿದ್ಯುತ್ತಿನ ಅಧಿಷ್ಠಾತೃ ದೇವ ಎಂದು ತಿಳಿಯುವದು ನಿತಾಂತ ಉಚಿತವೆಂದು ಪ್ರತೀತವಾಗುತ್ತದೆ. ಅಥರ್ವವೇದದ ಒಂದು ಸ್ಥಾನದಲ್ಲಿ (೧೧/೨/೧೭) ರುದ್ರನಿಗೆ ಸಂಸಾರವನ್ನು ನುಂಗುವದಕ್ಕೋಸುಗ ಹೊಳೆಯುವ ನಾಲಗೆಯ ವರ್ಣನೆಯು ದೊರೆಯುತ್ತದೆ. 'ಜಿಹ್ವೆಯಾ ಈಯಮಾನಮ್', ಶಬ್ದಗಳಿಂದ ಕಪ್ಪು ಮೋಡಗಳ ಮಧ್ಯದಲ್ಲಿ ಮಿಂಚುವ ಕ್ಷಣ ಕ್ಷಣದಲ್ಲಿ ಹೊಳೆಯುವ ವಿದ್ಯುಚ್ಛಕ್ತಿಯ ಕಡೆ ಸ್ಪಷ್ಟ ಸಂಕೇತವಿರುತ್ತದೆಂದು ನಾನು ತಿಳಿಯುವೆನು. ಇದನ್ನೇ ಪುಷ್ಟೀಕರಿಸುವ ಅಥರ್ವವೇದೀಯ ಪ್ರಾರ್ಥನೆ ಇರುವದು. ಎಲೈ ರುದ್ರನೇ ದಿವ್ಯಾಗ್ನಿಯಿಂದ ನಮಗೆ ಸಂಸಕ್ತ ಮಾಡಬೇಡ. ಈ ತೋರುವ ಸಿಡಿಲನ್ನು ನನ್ನ ತಲೆಯ ಮೇಲೆ ಬೀಳಿಸದೆ ಎಲ್ಲಿಯೋ ಬೇರೆ ಕಡೆಗೆ ಬೀಳಿಸು :

ಮಾ ನಃ ಸಂ ಸ್ರಾಃ ದಿವ್ಯೇನಾಗ್ನಿ ನಾ,
ಅನ್ಯತ್ರಾಸ್ಮದ ವಿದ್ಯುತಂ ಪಾತಯೈ ತಾಮ್ ।

-೧೧/೨/೨೬

ಈ ವಿವೇಚನೆಯ ಸಹಾಯದಿಂದ ನಾವು ರುದ್ರನ 'ಶಿವತ್ವ'ವನ್ನು ಚೆನ್ನಾಗಿ ಪರಿಚಯ ಮಾಡಿಕೊಳ್ಳುತ್ತೇವೆ. ಅವನು ಭಯಾನಕ ಪಶುವಿನಂತೆ ಉಗ್ರ ಹಾಗೂ ಭಯದ ಸ್ವರೂಪವಾಗಿರುತ್ತಾನೆ. ಆದರೂ ಅವನು ತನ್ನ ಭಕ್ತರನ್ನು ವಿಪತ್ತುಗಳಿಂದ ಸಂರಕ್ಷಿಸುತ್ತಾನೆ ಹಾಗೂ ಅವರಿಗೆ ಕಲ್ಯಾಣವನ್ನುಂಟುಮಾಡುತ್ತಾನೆ. ರೋಗ ನಿವಾರಣೆ ಮಾಡುವ ಅವನ ಶಕ್ತಿಯ ಉಲ್ಲೇಖವು ಅನೇಕ ಸಾರೆ ಬರುತ್ತದೆ. ಅವನ ಹತ್ತಿರ ಸಾವಿರಾರು ಔಷಧಗಳು ಇರುತ್ತವೆ. ಇವುಗಳಿಂದ ಅವನು ಜ್ವರ (ತಕ್ಮನ್) ಹಾಗೂ ವಿಷದ ನಿವಾರಣೆ ಮಾಡುತ್ತಾನೆ. ವೈದ್ಯರಲ್ಲಿ ಅವನು ಎಲ್ಲರಿಗಿಂತ ಶ್ರೇಷ್ಠ ವೈದ್ಯನಾಗಿದ್ದಾನೆ (ಭೀಷಕ್ ತಮಂ ತಾ ಭಿಷಜಾಂ ಶೃಣೋಮಿ-ಋ ೨/

೩೩/೪). ಈ ಪ್ರಸಂಗದಲ್ಲಿ ರುದ್ರನ ಎರಡು ವಿಶಿಷ್ಟ ವಿಶೇಷಣಗಳು ಜಲಾಶ (ಶೈತ್ಯವನ್ನುಂಟು ಮಾಡುವ) ಹಾಗೂ ಜಲಾಷ ಭೇಷಜ (ಶೈತ್ಯ ಔಷಧಗಳನ್ನು ಇಡುವ) ಉಪಲಬ್ಧವಿರುತ್ತವೆ.

'ಕ್ವ ಸ್ಯ ತೇ ರುದ್ರ ಮೃಲಯಾಕು-
ರ್ಹಸ್ತೋ ಯೋ ಅಸ್ತಿ ಭೇಷಜೋ ಜಲಾಷಃ ।

ಋ ೨/೩೩/೭

ವಸ್ತುತಃ ಅಗ್ನಿಗೆ 'ಘೋರಾತನು' ಮತ್ತು 'ಅಘೋರಾತನು' ಎಂಬ ಎರಡು ರೂಪಗಳುಂಟು. ಅವನು ತನ್ನ ಭಯಂಕರ ಘೋರರೂಪದಿಂದ ಸಂಸಾರವನ್ನು ಸಂಹಾರ ಮಾಡುವುದರಲ್ಲಿ ಸಮರ್ಥನಾಗಿದ್ದಾನೆ. ಆದರೆ ಅಘೋರ ರೂಪದಲ್ಲಿ ಅವನೇ ಸಂಸಾರದ ಪಾಲನೆಯಲ್ಲಿ ಶಕ್ತಿಯುಳ್ಳವನಾಗಿದ್ದಾನೆ. ಒಂದು ವೇಳೆ ಅಗ್ನಿಯ ನಿವಾಸವು ಈ ಮಹೀತಲದ ಮೇಲೆ ಇರದಿದ್ದರೆ, ಒಂದುಕ್ಷಣವಾದರೂ ಪ್ರಾಣಿಗಳಲ್ಲಿ ಪ್ರಾಣದ ಸಂಚಾರವಾಗಲು ಶಕ್ಯವಾಗುತ್ತಿತ್ತೇ? ವಿದ್ಯುತ್ತಿನಲ್ಲಿ ಸಂಹಾರಕಾರಿಣೀ ಶಕ್ತಿಯ ನಿವಾಸವು ಅವಶ್ಯವಿರುತ್ತದೆ. ಆದರೆ ಅದೇ ವಿದ್ಯುತ್ತು ಭೂತಲದ ಮೇಲೆ ಪ್ರಭೂತ ಜನವೃಷ್ಟಿಗೂ ಕಾರಣವನ್ನುಂಟು ಮಾಡುತ್ತದೆ ಮತ್ತು ಜೀವಿಗಳ ಜೀವಿತವಿರುವಲ್ಲಿ ಮುಖ್ಯ ಹೇತುವಿನ ರೂಪವನ್ನು ಧಾರಣ ಮಾಡುತ್ತದೆ. ಸೂಕ್ಷ್ಮ ದೃಷ್ಟಿಯಿಂದ ವಿಚಾರ ಮಾಡಿದ ಮೇಲೆ ಪ್ರಲಯದಲ್ಲಿಯೂ ಸೃಷ್ಟಿಯ ಬೀಜ ಸಹಿತವಿರುತ್ತವೆ. ಸಂಹಾರದಲ್ಲಿ ಸಹ ಉತ್ಪತ್ತಿಯ ನಿದಾನವು ಅಂತರ್ಹಿತವಿರುತ್ತದೆ. ಮಹಾಕವಿ ಕಾಲಿದಾಸನಿಗೆ ಅಗ್ನಿಯ ಸಂಹಾರಕಾರಣೀ ಶಕ್ತಿಯಲ್ಲಿಯೂ ಉಪಾದೇಯತೆಯು ಕಂಡುಬರುತ್ತದೆ.

'ಕೃಷ್ಯಾಂ ದಹನ್ನಪಿ ಖಲು ಕ್ಷಿತಿ ವಿಂಧನೇದ್ಧೋ ।
ಬೀಜಪ್ರರೋಹ ಜನನೀಂ ಜ್ವಲನಃ ಕರೋತಿ ॥

-ರಘು . ೯/೮೦

ಆದುದರಿಂದ ಉಗ್ರರೂಪದಿಂದ ಯಾವ ದೇವನು 'ರುದ್ರ'ನಾಗಿರುತ್ತಾನೆ, ಅವನೇ ಜಗತ್ತಿನ ಮಂಗಲವನ್ನುಂಟುಮಾಡುವ ಕಾರಣ 'ಶಿವ 'ನಾಗಿದ್ದಾನೆ. ಯಾವನು ರುದ್ರನೋ ಅವನೇ ಶಿವನು. ರುದ್ರ ಮತ್ತು ಶಿವನ ಅಭಿನ್ನತೆಯ ಅವಾಂತರ ವೈದಿಕ ಗ್ರಂಥಗಳಲ್ಲಿ ಸುಸ್ಪಷ್ಟ ಶಬ್ದಗಳಲ್ಲಿ ಪ್ರತಿಪಾದಿತವಾಗಿದೆ. ಆದರೆ ಈ ಭಿನ್ನತೆಯ ಪ್ರಥಮ ಸೂಚನೆಯು ಋಗ್ವೇದದಲ್ಲಿಯೇ ಉಪಲಬ್ಧವಾಗುತ್ತದೆ (೨/೩೩/೭). ಋಗ್ವೇದೀಯ ಋಷಿ 'ಗೃತ್ಸಮದ' ನೊಡನೆ ರುದ್ರದೇವನನ್ನು ನಾವು ಸಹ ಪ್ರಾರ್ಥನೆ ಮಾಡುತ್ತೇವೆ. ರುದ್ರನ ಬಾಣಗಳು ನಮ್ಮನ್ನು ಸ್ಪರ್ಶ ಮಾಡದೆ ದೂರದಿಂದಲೇ ತೊಲಗಲಿ ಹಾಗೂ ನಮ್ಮ ಮಗ ಮತ್ತು ಬಂಧು ಬಾಂಧವರ ಮೇಲೆ ಆದಾನ ಶೀಲನ ದಯೆಯು ಸತತ ಉಂಟಾಗಲಿ ಎಂಬ ಮಾತುಗಳನ್ನು ಲಕ್ಷಿಸಬೇಕು.

'ಪರಿಣೋ ಹೇತೀ ರುದ್ರಸ್ಯ ವೃಜ್ಯಾಃ
ಪರಿ ತ್ವೇಷಸ್ಯ ದುರ್ಮತಿರ್ಮಹೀ ಗಾತ್ ।
ಅವಸ್ಥಿರಾ ಮಘವದ್‌ಭ್ಯಸ್ತನುಷ್ವ
ಮೀಢ್ವಸ್ತೋಕಾಯ ತನಯಾಯ ಮೃಳ ॥

(ಋ ೨/೩೩/೧೪)

❖❖

೧೩

# ಬೌದ್ಧರು ಹಿಂದುಗಳಲ್ಲವೊ?

ಜಯಕರ್ನಾಟಕ ೨-೧೧

ಹೋದ ವರುಷದ ಅಗಷ್ಟಮಾಸದಲ್ಲಿ ಕಾಶಿಯೊಳಗೆ ಜಾತಿಯ ಸಂಘಟನೆಗೋಸುಗ ಹಿಂದೂ ಮಹಾಸಭೆಯ ಅಧಿವೇಶನವು ನೆರವೇರಿಸಲ್ಪಟ್ಟಿತು. ಅದರಲ್ಲಿ ಶೀಖ, ಜೈನ, ಆರ್ಯಸಮಾಜ ಮತ್ತು ಅನೇಕ ಅನ್ಯಸಾಂಪ್ರದಾಯಿಗಳ ಜನರಂತೆ, ನಮ್ಮ ಬೌದ್ಧ ಬಂಧುಗಳು ಕೂಡ ಸಮ್ಮಿಲಿತರಾಗುವ ಕೃಪೆಯನ್ನು ಮಾಡಿದ್ದರು. ಈ ಸಂಗತಿಯು ಕೆಲವು ವಿಧರ್ಮಿಗಳಿಗೆ-ವಿಶೇಷವಾಗಿ ನಮ್ಮ ಮುಸಲ್ಮಾನ ಬಂಧುಗಳಿಗೆ ಸರಿದೋರಲಿಲ್ಲ. ಕೆಲಕೆಲವು ಮುಸಲ್ಮಾನರು, ಹಿಂದೂ ಜನರು ಮುಸಲ್ಮಾನರ ವಿರುದ್ಧವಾಗಿ ತಮ್ಮ ಬಲವನ್ನು ಹೆಚ್ಚಿಸುವದಕ್ಕೋಸುಗ, ಅಹಿಂದುಗಳಾದ ಬೌದ್ಧಮತಾವಲಂಬಿಗಳಿಗೆ ತಮ್ಮೊಡನೆ ತೆಗೆದುಕೊಂಡಿರುತ್ತಾರೆ - ಎಂದು ಅಂದರು.

ವಿಧರ್ಮಿಗಳ ಈ ಆಕ್ಷೇಪವು ಸರ್ವಥಾ ಅಪ್ರಾಮಾಣಿಕವಾಗಿದೆ. ಬೌದ್ಧಜನರು ವಾಸ್ತವಿಕವಾಗಿ ಹಿಂದುಗಳೇ ಇರುತ್ತಾರೆ. ಹಿಂದೂಧರ್ಮದಲ್ಲಿ ಎರಡು ಮುಖ್ಯ ವಿಶೇಷತ್ವಗಳು ಇರುತ್ತವೆ (೧) ವರ್ಣವ್ಯವಸ್ಥೆ (೨) ಅವಾಗಮನ. ಹಿಂದೂಧರ್ಮದ ಈ ಎರಡು ವಿಶೇಷತ್ವಗಳು ಬೌದ್ಧರ ಧರ್ಮಗ್ರಂಥಗಳಲ್ಲಿಯೂ ಸರಿಯಾಗಿ ಗ್ರಹಿಸಲ್ಪಟ್ಟಿರುತ್ತವೆ. ಕೆಳಗೆ ಬರೆದ ಉದಾಹರಣೆ ಗಳಿಂದ ಅದು ಚನ್ನಾಗಿ ಸ್ಪಷ್ಟವಾಗುವದು-

೧. ಮಹಾವಗ್ಗದಲ್ಲಿ ಬರೆಯಲ್ಪಟ್ಟಿದ್ದೇನಂದರೆ- ಶ್ರೀ ಬುದ್ಧ ಭಗವಂತನು ಮಾರನನ್ನು ಜಯಿಸಿದ ಕೆಲವು ದಿವಸಗಳ ತರುವಾಯ ಅಜಪಾಲ-ವಟವೃಕ್ಷದ ಕೆಳಗೆ ಕುಳಿತಿದ್ದನು. ಆಗ ಒಬ್ಬಾನೊಬ್ಬ ಬ್ರಾಹ್ಮಣನು ಒಂದು ಪ್ರಶ್ನಮಾಡಿದನು- "ಗೌತುಮಾ! ಬ್ರಾಹ್ಮಣನೆಂದು ಯಾವನಿಗೆ ಅನ್ನುತ್ತಾರೆ? ಮತ್ತು ಯಾವ ಗುಣಗಳಿಂದ ಮನುಷ್ಯನಿಗೆ ಬ್ರಾಹ್ಮಣತ್ವವು ಬರುತ್ತದೆ?" ಇವನು ಬ್ರಾಹ್ಮಣಜಾತಿಯ ಅತ್ಯಂತ ಅಭಿಮಾನಿಯಾಗಿದ್ದನು. ಬ್ರಾಹ್ಮಣರ ಹೊರತು ಅನ್ಯವರ್ಣೀಯ ಮನುಷ್ಯರನ್ನು ಮುಟ್ಟಿಸಿಕೊಳ್ಳದೆ, ಅವರೊಡನೆ ಸ್ಪಷ್ಟವಾಗಿ ಮಾತಾಡದೆ 'ಹುಂ, ಹುಂ' ಮಾಡುತ್ತ ಸಂಚರಿಸುತ್ತಿರುವದರಿಂದ ಇವನ ಹೆಸರು 'ಹುಂ ಹುಂ ಕ' ನೆಂದು ಬಿದ್ದಿತ್ತು. ಬುದ್ಧ ಭಗವಂತನು ಉತ್ತರ ಕೊಟ್ಟಿದ್ದೇನಂದರೆ-

"यो ब्राह्मणो वा कितपाप धम्यो
निहंहुँको निक्कसावो यततो;

धम्मेन सो (ब्राह्मणो) ब्रह्मवादं वदेय्य
यस्सु स्सदा नत्यि कुहिं च लोकेति।"

ಯಾವನಿಂದ ಪಾಪಧರ್ಮವು ಮಾಡಲ್ಪಡುವದಿಲ್ಲವೋ, 'ಹೂಂ ಹೂಂ' ಮಾಡದೆಯೂ ಕಾಷಾಯರಹಿತ ಯತಾತ್ಮನಾಗಿಯೂ, ವೇದಾಂತಿಯಾಗಿಯೂ ಇರುವನೋ, ಯಾವನು ಬ್ರಹ್ಮಚರ್ಯವನ್ನು ಪಾಲನಮಾಡಿರುವನೋ, ಯಾವನಿಗೆ ಜನರು ವಿಚಲಿತವಾಗಿ ಮಾಡುವದಿಲ್ಲವೋ, ಅವನೇ ಬ್ರಾಹ್ಮಣನು. ಅವನೇ ಬ್ರಹ್ಮಚರ್ಯದ ಉಪದೇಶ ಮಾಡಲಿಕ್ಕೆ ಸಮರ್ಥನು.

ಒಂದು ವೇಳೆ ಬುದ್ಧ ಭಗವಂತನು ವರ್ಣವಿಭಾಗವನ್ನು ಮನ್ನಿಸದವನಾಗಿದ್ದರೆ, ಇಷ್ಟು ವ್ಯಾಖ್ಯೆಯನ್ನು ಮಾಡುವದರ ಬದಲು ಈಶ್ವರನ ಸೃಷ್ಟಿಯಲ್ಲಿ ಎಲ್ಲ ಮನುಷ್ಯರು ಸರಿಯಾದ ಯೋಗ್ಯತೆಯುಳ್ಳವರಿರುತ್ತಾರೆ. ಬ್ರಾಹ್ಮಣ, ಕ್ಷತ್ರಿಯ ಇತ್ಯಾದಿ ಬೇಧಗಳಿಲ್ಲವೆಂದೋ, ಇಂತಹ ಮತ್ತಾವುದೋ ಒಂದು ಉತ್ತರವನ್ನು ಕೊಡುತ್ತಿದ್ದನು.

೨. ಬುದ್ಧ ಭಗವಂತನು ತನ್ನ ಪೂರ್ವಜನ್ಮಗಳ ಯಾವ ಕಥೆಗಳನ್ನು ಹೇಳಿರುವನೋ ಅವೆಲ್ಲವುಗಳು 'ಜಾತಕ' ನಾಮದಿಂದ ವಿಖ್ಯಾತವಾಗಿವೆ. ಪಾಲೀಭಾಷೆಯ 'ಜಾತಕ' ಗ್ರಂಥದಲ್ಲಿ ಇಂತಹ ಕಥೆಗಳು ಪ್ರಾಯಃ ೫೦೦ ಕ್ಕಿಂತ ಹೆಚ್ಚು ಸಂಗ್ರಹಿಸಲ್ಪಟ್ಟಿವೆ. ಮತ್ತು ಈ ಗ್ರಂಥದ ಭೂಮಿಕೆಯಲ್ಲಿ ಸ್ವಯಂ ಬುದ್ಧ ಭಗವಂತನ ಮುಖಾರವಿಂದದಿಂದ ಹೇಳಲ್ಪಟ್ಟಿದ್ದೇನಂದರೆ-ಬುದ್ಧನು ಸದಾ ಭಾರತವರ್ಷದಲ್ಲಿಯೇ ಜನ್ಮತಾಳುತ್ತಾನೆ. ಭಾರತವರ್ಷದಲ್ಲಿಯೂ ಮಧ್ಯದೇಶ (ಆಧುನಿಕ ಸಂಯುಕ್ತಪ್ರಾಂತ)ದಲ್ಲಿ, ಅಲ್ಲಿಯೂ ಕೂಡ ಕ್ಷತ್ರಿಯ ಅಥವಾ ಬ್ರಾಹ್ಮಣರಲ್ಲಿಯೇ ಜನ್ಮತಾಳುತ್ತಾನೆ. ವೈಶ್ಯಶೂದ್ರರಲ್ಲಿ ಎಂದೂ ಜನ್ಮತಾಳುವದಿಲ್ಲ. ನಾಲ್ಕು ವರ್ಣಗಳು ಸಮಾನ ಭಾವದಿಂದ ಒಂದೇ ವಿರಾಟ್ ಸಮುದಾಯದ ನಾಲ್ಕು ಅನ್ಯೋನ್ಯಾಶ್ರಿತ ಅಂಗಗಳಿರುತ್ತವೆ ಮತ್ತು ತಮ್ಮ ತಮ್ಮ ಮಹತ್ವವನ್ನು ಕಾಯ್ದುಕೊಳ್ಳುತ್ತವೆ. ಆದರೂ ಬಾಹುಬಲ, ಶಸ್ತ್ರಗಳಿಂದ ದೇಶರಕ್ಷಣೆ ಮಾಡುವದೂ, ಮತ್ತಿಷ್ಕಶಕ್ತಿ-ಶಾಸ್ತ್ರಗಳಿಂದ ಧರ್ಮದ ಪರಿತ್ರಾಣ ಮಾಡುವದೂ ಮುಖ್ಯತಃ ಕ್ಷತ್ರಿಯ ಮತ್ತು ಬ್ರಾಹ್ಮಣ ಈ ಎರಡು ವರ್ಣಗಳ ಜನ್ಮಸಿದ್ಧ ಕಾರ್ಯವಾಗಿರುತ್ತವೆ. ಉಳಿದ ಎರಡು ವರ್ಣಗಳು ಈ ಕಾರ್ಯದಲ್ಲಿ ಅವರ ಅನುವರ್ತಿಯಾಗಿಯೂ, ಸಹಕಾರಿಯಾಗಿಯೂ ಇರುವವು. ಇದರಿಂದ ಶ್ರೀ ಬುದ್ಧ ಭಗವಂತನು ವರ್ಣವ್ಯವಸ್ಥೆಯ ಹೊರತು 'ಅವಾಗಮನ'ವನ್ನು ಕೂಡ ಮನ್ನಿಸುತ್ತಿದ್ದನೆಂದು ಸಿದ್ಧವಾಗುತ್ತದೆ.

ನಮ್ಮ ಮುಸಲ್ಮಾನ ಬಂಧುಗಳಿಗೆ ಉಪಯುಕ್ತ ಪ್ರಮಾಣಗಳು ಇರದಿದ್ದರು ಕೂಡ ಬೌದ್ಧರು ಹಿಂದುಗಳಲ್ಲವೆಂದು ಸಿದ್ಧ ಮಾಡಲು ಶಕ್ಯವಲ್ಲ. ಯಾಕಂದರೆ ಅದೇ ಮುಸಲ್ಮಾನರು ನೂರಾರು ವರ್ಷಗಳಿಂದ ಬೌದ್ಧರಿಗೆ ಹಿಂದುಗಳೆಂದೇ ತಿಳಿಯುತ್ತ ಬಂದಿರುತ್ತಾರೆ. ಉದಾ-ಮೊಗಲ್ ಸಾಮ್ರಾಟ್ ಅಕಬರನ ಕೃಪಾಪಾತ್ರನೂ, ಅಮಾತ್ಯನೂ, ಸುವಿಖ್ಯಾತ ಮುಸಲ್ಮಾನ ವಿದ್ವಾಂಸನೂ ಆ ಅಬುಲ್‌ಫಜಲನು ಸ್ವರಚಿತ 'ಆ ಈನ್ ಅಕಬರೀ' ಎಂಬ ಗ್ರಂಥದಲ್ಲಿ ಹಿಂದುಗಳ ಒಂಬತ್ತು ಮುಖ್ಯ ಸಂಪ್ರದಾಯಗಳನ್ನು ಎಣಿಸಿದ್ದಾನೆ. ಅವುಗಳಲ್ಲಿ ಬೌದ್ಧ ಸಂಪ್ರದಾಯವು ಕೂಡ ಸಮ್ಮಿಲಿತವಾಗಿದೆ. ಅವು ಯಾವವೆಂದರೆ:-

೧. ನೈಯಾಯಿಕ, ೨. ವೈಶೇಷಿಕ, ೩. ವೇದಾಂತಿ, ೪. ಮೀಮಾಂಸಕ, ೫. ಸಾಂಖ್ಯ, ೬. ಪಾತಂಜಲ, ೭. ಜೈನ, ೮. ಬೌದ್ಧ, ೯. ನಾಸ್ತಿಕ (ಚಾರ್ವಾಕ). ಇದರೊಡನೆಯೇ ಅವನು ಉತ್ತಮ ತಿಳುವಳಿಕೆಯುಳ್ಳವರೊಡನೆ ಬುದ್ಧ ಭಗವಂತನ ಜೀವನಚರಿತ್ರೆಯನ್ನೂ ಅವನ ಸಂಪ್ರದಾಯದ ಸಿದ್ಧಾಂತಗಳ ಸಂಕ್ಷಿಪ್ತ ಉಲ್ಲೇಖನವನ್ನೂ ಮಾಡಿದ್ದಾನೆ. ಇದಲ್ಲದೆ ಈ ಸಂಪ್ರದಾಯದ ಸಾಧುಗಳಿಗೆ ಅರಬರೂ, ಇರಾಣಿಯರೂ ಬಖ್ಶಿ (ಭಿಕ್ಷು)ಗಳೆಂದೂ,

ತಿಬೇಟಿಯರು ಲಾಮಾ ಎಂದೂ ಅನ್ನುತ್ತಿದ್ದರು. ಪೇಗೂ (ಬರ್ಮಾ), ಧನಾಸರಿ (ತೇನಾರಸರೀಮ) ಮೊದಲಾದವುಗಳಲ್ಲಿಯ ಸಂಗತಿಯು ಗೊತ್ತಾಗಿಲ್ಲವೆಂದು ಬರೆದಿರುತ್ತಾನೆ. ಇವನು ಈ ಸಂಪ್ರದಾಯದ ಕೆಲವು ವೃದ್ಧಪುರುಷರನ್ನು ಪ್ರತ್ಯಕ್ಷ ಭೆಟ್ಟಿಯಾಗಿದ್ದನು.

ಆಧುನಿಕ ಭೂಗೋಲ ಮೊದಲಾದ ಪಠ್ಯಪುಸ್ತಕಗಳಲ್ಲಿಯೂ, ಮನುಷ್ಯಗಣನೆಯ ರಿಪೋರ್ಟುಗಳಲ್ಲಿಯೂ, ಗ್ಯಾಜೇಟಿಯರ ಮೊದಲಾದವುಗಳಲ್ಲಿಯೂ ಬೌದ್ಧ, ಜೈನ, ಶೀಖ, ಆರ್ಯಸಮಾಜ ಬ್ರಹ್ಮಸಮಾಜಗಳಿಗೆ ಹಿಂದುಗಳಿಂದ ಬೇರೆ ಎಣಿಸುವ ಪದ್ಧತಿಯಿಂದ ಹಿಂದೂ ಸಂಪ್ರದಾಯದ ಬಹಳ ಅಹಿತವಾಗಿದೆ. ಈ ಪದ್ಧತಿಯಿಂದ ಒಮ್ಮೊಮ್ಮೆ ಜನರಿಗೆ ಮುಸಲ್ಮಾನ ಬಂಧುಗಳಿಗೆ ಆದಂಥ ಭ್ರಮೆಯೇ ಆಗುವದು.

❖❖

೧೪

# ಬೌದ್ಧಧರ್ಮದಲ್ಲಿ ಸೃಷ್ಟಿಯ ಉತ್ಪತ್ತಿ[೧]

**ಜಯಕರ್ನಾಟಕ ೩-೫,೬**

ಪೃಥ್ವಿಯ ಎಲ್ಲ ದೇಶಗಳಲ್ಲಿಯೂ, ಪೃಥ್ವಿಯ ಉತ್ಪತ್ತಿಯು ಯಾವ ರೀತಿಯಿಂದ ಆಯಿತು? ಮನುಷ್ಯನು ಯಾವ ರೀತಿಯಿಂದ ಜನ್ಮವೆತ್ತಿದನು? ಎಂಬ ಈ ಎರಡು ಮಾತುಗಳನ್ನು ತೆಗೆದುಕೊಂಡು ಎಷ್ಟೋ ವಾದಾನುವಾದಗಳು ಆಗಿರುವವು.

ಬುದ್ಧದೇವನಿಗೆ ಸೃಷ್ಟಿಯ ಕಥೆಯನ್ನು ವಿಚಾರಿಸಲಾಗಿ ಅವನು "ಅದನ್ನು ವಿಚಾರಮಾಡಿ ನಿಮಗೆ ಪ್ರಯೋಜನವೇನು?" ಎಂದು ಅನ್ನುತ್ತಿದ್ದನು. ಹಾಗೆಯೇ "ಮನುಷ್ಯನು ಎಲ್ಲಿಂದ ಬಂದನು?" ಎಂಬುದನ್ನು ಕೂಡ ಅವನು ಎಲ್ಲಿಯೂ ಸ್ಪಷ್ಟವಾಗಿ ಹೇಳಿಲ್ಲ.

ಮಹಾಸಾಂಘಿಕರು ಮನುಷ್ಯನ ಉತ್ಪತ್ತಿ ಸಂಬಂಧದಿಂದ ಹೇಳಿರುವದೇನಂದರೆ-ಅನಾದಿಕಾಲದಿಂದಲೇ 'ಸಂವರ್ತ (ಪ್ರಲಯ) ಮತ್ತು ವಿವರ್ತ (ಸೃಷ್ಟಿ)ಗಳು ನಡೆದಿರುತ್ತವೆ. ಪ್ರಲಯವಾಗಲಾಗಿ, ಸಮಸ್ತ ಸತ್ವ (ಜೀವ)ಗಳು, 'ಆಭಾಸ್ವರ'ವೆಂಬುವದೊಂದು ಸ್ವರ್ಗದಲ್ಲಿ ಉತ್ಪನ್ನವಾಗುತ್ತವೆ. ಪುನಃ ಸೃಷ್ಟಿಯಾಗಲು, ಜನರಿಗೆ ಇರಲಿಕ್ಕೆ ಸ್ಥಾನವಾಗುವದು. ಕೆಲವು ಸತ್ವಗಳು 'ಆಭಾಸ್ವರ' ದಿಂದ ಇಳಿದು, ಪೃಥ್ವಿಯಲ್ಲಿ ಉತ್ಪನ್ನವಾಗುವವು. ಆಗ ಅವುಗಳು 'ಸ್ವಯಂಪ್ರಭು, ಅಂತರಿಕ್ಷಚರ, ಮನೋಮಯ, ಪ್ರೀತಿ ಭಕ್ಷ, ಸುಖಸ್ಥಾಯಿ ಕಾಮಚರಗಳು ಆಗುತ್ತವೆ. ಅವರ ಶರೀರಪ್ರಭೆಯಿಂದ ದಿಗಂತಗಳು ಆಲೋಕಿತವಾಗುತ್ತವೆ. ಚಂದ್ರ ಸೂರ್ಯರ ಪ್ರಯೋಜನ ಉಳಿಯುವದಿಲ್ಲ; ನಕ್ಷತ್ರ-ತಾರೆಗಳ ಉಪಯೋಗವಿಲ್ಲ; ಆಕಾಶದ ಅವಶ್ಯಕತೆಯಿಲ್ಲ; ಹಗಲು ಇರುವದಿಲ್ಲ, ರಾತ್ರಿ ಇರುವದಿಲ್ಲ, ಪಕ್ಷಗಳಿರುವದಿಲ್ಲ, ಋತುಗಳಿರುವದಿಲ್ಲ, ಅಯನಗಳಿರುವದಿಲ್ಲ, ವರ್ಷಗಳಿರುವದಿಲ್ಲ. ಅವರು ಯಾವಾಗ ಎಲ್ಲಿ ಹೋಗಲು ಇಚ್ಛಿಸುವರೋ ಆಗ ಅಂತರಿಕ್ಷದಿಂದ ಹೋಗುವರು. ಪ್ರೀತಿಯೇ ಅವರ ಆಹಾರವು. ಸುಖ ನಿವಾಸಸ್ಥಾನವು. ಅವರು ಸುಖನಿವಾಸದಲ್ಲಿದ್ದು ಪ್ರೀತಿಭಕ್ಷಣ ಮಾಡಿ, ಜೀವನಯಾತ್ರೆಯನ್ನು ನಿರ್ವಹಿಸುತ್ತಾರೆ. ಅವರು ಮಾಡುವದೆಲ್ಲವೂ ಧರ್ಮವೇ.

ಅನಂತರ ಪೃಥ್ವಿಯು ಉದಯವಾಯಿತು-ಒಂದಾನೊಂದು ಕೆರೆಯು ಜಲದಿಂದ ಪರಿಪೂರ್ಣವಾಯಿತು. ಆ ನೀರಿನ ಬಣ್ಣವೇನು? ಆಸ್ವಾದವೇನು? ಮಧು-ಕ್ಷೀರ-ಘೃತಗಳಿಂದ ಮಿಷ್ಟವಾದುದು. ಯಾವದೋ ಜೀವಿಯು

೧. ವಂಗಭಾಷೆಯ 'ಪ್ರಭಾಸಿ' ಮಾಸ ಪತ್ರಿಕೆಯಲ್ಲಿ ಪ್ರಸಿದ್ಧಮಾಡಲ್ಪಟ್ಟ ಮಹಾಮಹೋಪಾಧ್ಯಾಯ ಪಂಡಿತ ಹರಪ್ರಸಾದಶಾಸ್ತ್ರೀ ಇವರ 'ಬೌದ್ಧಧರ್ಮೇ ಮಾನುಷ ಓ ರಾಜಾ' ಎಂಬ ಲೇಖನದಿಂದ ಬರೆಯಲ್ಪಟ್ಟಿದೆ.

ಒಂದಾನೊಂದು ಲೋಭದಿಂದ ಅಂಗುಲಿಯ ತುದಿಯನ್ನು ಎದ್ದಿ ನೆಕ್ಕಿತು, ಚನ್ನಾಗಿ ತೋರಿತು. ಮತ್ತೆ ನೆಕ್ಕಿತು. ಕ್ರಮದಿಂದ ಭಕ್ಷಣ ಮಾಡಲಿಕ್ಕೆ ಪ್ರಾರಂಭಿಸಿತು. ಅದನ್ನು ಕಂಡು ಐದು ಜನರು ಭಕ್ಷಣ ಮಾಡಹತ್ತಿದರು. ಕೆಲಕೆಲವರು ಹೊಟ್ಟೆ ತುಂಬ ಭಕ್ಷಿಸಿದರು. ಇಷ್ಟುದಿನ ಜೀವಿಗಳು ಲಘುಶರೀರಿಗಳಾಗಿದ್ದವು; ತಿನ್ನುತ್ತ ತಿನ್ನುತ್ತ ಅವುಗಳ ಶರೀರಗಳು ಬೃಹದಾಕಾರವಾಗಿಯೂ, ಶಕ್ತಿಸಂಪನ್ನವಾಗಿಯೂ, ಕಠಿಣವಾಗಿಯೂ ಪರಿಣಮಿಸಿದವು. ಅವರ ಗುಣಗಳು ಕ್ರಮದಿಂದ ಲೋಪವಾದವು. ಶರೀರದ್ಯೋತಿಯು ಅಡಗಿತು. ಕೇವಲ ಪ್ರೀತಿ ಭಕ್ಷಣದಿಂದಲೇ ನಿರ್ವಾಹ ಸಾಗಲಿಲ್ಲ. ಆಕಾಶ ಗಮನದಲ್ಲಿ ಅಸಮರ್ಥವಾದವು. ಚಂದ್ರ ಸೂರ್ಯರ ಅವಶ್ಯಕತೆಯುಂಟಾಯಿತು. ನಕ್ಷತ್ರ-ದಿನ-ರಾತ್ರಿ-ಮಾಸ-ಸಂವತ್ಸರಗಳೂ ಬೇಕಾದವು.

ಪೃಥ್ವಿಯ ರಸವನ್ನು ಸೇವಿಸುತ್ತ ಸೇವಿಸುತ್ತ ಅವರ ವರ್ಣವೂ ಬದಲಿಸಿತು. ಈ ಪ್ರಕಾರ ಎಷ್ಟೋ ದಿನಗಳು ಹೋದವು. ಅಧಿಕಾಹಾರಿಗಳ ವರ್ಣವು ಕೆಟ್ಟುಹೋಯಿತು. ಅಲ್ಪಾಹಾರಿಗಳ ವರ್ಣವು ಚನ್ನಾಗಿ ಉಳಿಯಿತು. ಉತ್ತಮ ವರ್ಣಗಳು, ನೀಚವರ್ಣಗಳನ್ನು ತಿರಸ್ಕರಿಸಹತ್ತಿದರು. 'ನಾನು ಶ್ರೇಷ್ಠ' 'ನೀನು ಕನಿಷ್ಠ' ಎಂಬ ಅಭಿಮಾನದ ಪ್ರಾದುರ್ಭಾವವಾಯಿತು. ಮೊದಲಿನ ಧರ್ಮಪ್ರಭಾವವು ವಿನಷ್ಟವಾಯಿತು. ಪೃಥ್ವಿಯ ಆ ರಸವೂ ಲುಪ್ತವಾಯಿತು. ಆಗ ಅವರು ತಿನ್ನುವದಾದರು ಏನು? ಪೃಥ್ವಿಯ ಎಲ್ಲೆಡೆಯಲ್ಲೂ 'ಭೂಪಟಪಟಿ' ಎದ್ದಿತು-ನಾಲ್ಕೂಕಡೆಗೆ ಬಣ್ಣದ ಛತ್ತರಿಗೆಯು ಒಡೆದು ಎದ್ದಿತು. ವಿಚಿತ್ರವರ್ಣವೂ, ಮನೋಹರ ಗಂಧವೂ, ಅನುಪಮ ಆಸ್ವಾದವೂ ಉಳ್ಳ ಪೃಥ್ವಿಯ ರಸವು ಅಂತರ್ಧಾನವಾಗಲು, ಜೀವಿಗಳು ಹಾಯ್ ರಸ! ಹಾಯ್ ರಸ!! ಎಂದು ದುಃಖದಿಂದ ಚಡಪಡಿಸಹತ್ತಿದವು.

ಕ್ರಮದಿಂದ ಅವರು 'ಭೂಪಟಪಟಿ' ತಿನ್ನಹತ್ತಿದರು. 'ಭೂಪಟಪಟಿ'ಯಂತೆಯೇ ಅವರ ವರ್ಣವಾಯಿತು. ಈ ರೀತಿಯಿಂದ ಕೆಲವು ಕಾಲ ಸಂದು ಹೋದವು. ಅಧಿಕಾಹಾರಿಗಳ ವರ್ಣವು ಕೆಟ್ಟಿತು, ಅಲ್ಪಾಹಾರಿಗಳ ವರ್ಣವು ಚನ್ನಾಗಿ ಉಳಿಯಿತು. ಉತ್ತಮವರ್ಣಗಳು ನೀಚವರ್ಣಗಳಿಗೆ ತಿರಸ್ಕರಿಸಹತ್ತಿದರು. 'ನಾನು ಶ್ರೇಷ್ಠ' 'ನೀನುಕನಿಷ್ಠ' ಎಂಬ ಅಭಿಮಾನವು ವೃದ್ಧಿಂಗತವಾಯಿತು. 'ಭೂಪಟಪಟಿ' ಯು ಲೋಪವಾಯಿತು. ಅದರ ಸ್ಥಳದಲ್ಲಿ ವನ-ಲತೆಗಳು ಪ್ರಾದುರ್ಭವಿಸಿದವು. ಜನರು ಅವುಗಳನ್ನೇ ಭಕ್ಷಿಸಹತ್ತಿದರು. ಅವರ ವರ್ಣವೂ ವನಲತೆಗಳಂತೆ ಆಗಿಹೋಯಿತು. ಕ್ರಮದಿಂದ ವನಲತೆಯ ಕಾಲದಲ್ಲಿಯೂ, ಮಾನ-ಅಭಿಮಾನಗಳು ಬಂದು ಕೂಡಿದವು. ವನಲತೆಗಳೂ ಲುಪ್ತವಾದವು. ಈ ಸಾರೆ 'ಭತ್ತ' ಉತ್ಪನ್ನವಾಯಿತು. ಈ ಭತ್ತಕ್ಕೆ ಕಣವಿಲ್ಲ, ತುಷವಿಲ್ಲ. ಅತಿ ಸುಗಂಧಯುಕ್ತವಾದುದು. ಸಂಧ್ಯಾಸಮಯದಲ್ಲಿ ಭತ್ತವನ್ನು ತೆಗೆದುಕೊಳ್ಳಲು ಪ್ರಾತಃಕಾಲದಲ್ಲಿ ಪುನಃ ಅಂಕುರ ಪ್ರಾದುರ್ಭವಿಸುವವು. ಪ್ರಾತಃಕಾಲದಲ್ಲಿ ತೆಗೆಯಲು ಸಂಧ್ಯಾಕಾಲದಲ್ಲಿ ಅಂಕುರ ಪ್ರಾದುರ್ಭವಿಸುವವು. ಕೇವಲ ಅಂಕುರಿತವಾಗುವವು, ಇಷ್ಟೇ ಅಲ್ಲ, ಭತ್ತವು ಭತ್ತವಾಗಿ ಮನೆಗೆ ಬರುತ್ತಿತ್ತು. ಹನ್ನೆರಡು ಗಂಟೆಗೆ 'ಪಕ್ಕಾ' ಭತ್ತವು ದೊರೆಯುತ್ತಿತ್ತು. ಈ ಭತ್ತವನ್ನು ತಿಂದು ಜನರು ಕೆಲವು ಕಾಲ ಇದ್ದರು. ಮೊದಮೊದಲು ಎಲ್ಲರೂ ಪ್ರಾತಃಕಾಲ-ಸಂಧ್ಯಾಕಾಲಗಳಲ್ಲಿ ಭತ್ತವನ್ನು ಝಾಡಿಸಿಕೊಂಡು ತರುತ್ತಿದ್ದರು. ಪ್ರಾತಃಕಾಲ ಸಾಯಂಕಾಲಗಳಲ್ಲಿ ತಿನ್ನುತ್ತಿದ್ದರು. ಸಂಗ್ರಹದ ಹೆಸರನ್ನೇ ಎತ್ತಿದ್ದಿಲ್ಲ. ಆದರೆ ಮುಂದೆ ಕ್ರಮದಿಂದ ಒಬ್ಬಿಬ್ಬರು-ದಿನಕ್ಕೆ ಎರಡು ಸಾರೆ ಭತ್ತವನ್ನು ಯಾಕೆ ತೆಗೆಯಬೇಕು? ಒಂದೇ ಸರ್ತಿಗೆ ಎರಡೂ ವೇಳೆಯ ಭತ್ತವನ್ನು ಸಂಗ್ರಹಿಸಿದರಾಯಿತು? ಎಂದು ಅದರಂತೆ ಮಾಡಹತ್ತಿದರು. ಅವರನ್ನು ನೋಡಿ ಬಹು ಜನರು ಅವರಂತೆಯೇ ಮಾಡಹತ್ತಿದರು. ಸಂಚಯದ ಪ್ರಮಾಣವು ಬೆಳೆಯಹತ್ತಿತು. ಬರಬರುತ್ತ ಎರಡು ವೇಳೆಯ ಬದಲು, ಎರಡು ದಿವಸ ಎರಡು ಸಪ್ತಾಹಗಳ ಸಂಚಯವಾಗಹತ್ತಿತು. ಕ್ರಮದಿಂದ ಭತ್ತದ ಕಣ-ತುಷಗಳು ಬೆಳೆಯಹತ್ತಿದವು. ಮತ್ತು ಪ್ರಾತಃ

ಕಾಲದಲ್ಲಿ ತೆಗೆದುಕೊಂಡ ಭತ್ತವು ಸಂಜೆಗೆ ಅಂಕುರಿಸದಾಯಿತು. ಸಾಯಂಕಾಲದಲ್ಲಿ ತೆಗೆದುಕೊಂಡ ಭತ್ತವು ಪ್ರಾತಃಕಾಲದಲ್ಲಿ ಅಂಕುರಿಸದಾಯಿತು.

ಅನ್ನರಸದೊಡನೆ ಮತ್ತೊಂದು ಉತ್ಪಾತವು ಬಂದೊದಗಿತು. ಕೆಲವು ಜೀವಿಗಳ ಶರೀರದಲ್ಲಿ ಪುರುಷಚಿಹ್ನವೂ, ಕೆಲವು ಜೀವಿಗಳ ಶರೀರದಲ್ಲಿ ಸ್ತ್ರೀಚಿಹ್ನವೂ ತೋರಹತ್ತಿದವು. ಅವರು ಪರಸ್ಪರರು ಅನುರಾಗ ತೋರಿಸಹತ್ತಿದರು. ಏಕದೃಷ್ಟಿಯಿಂದ ಪರಸ್ಪರರ ಮುಖದ ಕಡೆಗೆ ನೋಡಹತ್ತಿದರು. ಕ್ರಮದಿಂದ ದೋಷೋತ್ಪತ್ತಿಯಾಯಿತು. ದೋಷೋತ್ಪನ್ನವಾಗಲಾಗಿ, ಜನರು ಹೆಂಟೆ-ಕಲ್ಲು-ಬಡಿಗೆಗಳಿಂದ ಹೊಡೆದಾಡಹತ್ತಿದರು. ಶರೀರವು ಧೂಲಿಯಿಂದಾವೃತವಾಯಿತು. ದೇಶದಲ್ಲಿ ಅಧರ್ಮವು ಉಪಸ್ಥಿತವಾಗಲಾಗಿ ಗದ್ದಲವೆದ್ದಿತು. ಇದೇನು? ಒಂದು ಜೀವವು ಮತ್ತೊಂದು ಜೀವಕ್ಕೆ ದೋಷೋತ್ಪನ್ನ ಮಾಡಿಕೊಡುತ್ತದೆ-ಇದೆಂತಹ ದೊಡ್ಡ ಅನ್ಯಾಯ. ಇದು ಧರ್ಮವಿರುದ್ಧವೂ, ನಿಯಮವಿರುದ್ಧವೂ ಆಗಿದೆ. ಕಾಲಕ್ರಮದಿಂದ ಈ ದೋಷವು ಸಹಿಸಲ್ಪಟ್ಟಿತು. ಜನರು ಮನದಲ್ಲಿ ಇದು ಧರ್ಮಸಮ್ಮತವೂ ಸಮಾಜಸಮ್ಮತವೂ, ಸಹಸಮ್ಮತವೂ ಎಂದು ತಿಳುಕೊಂಡರು. ಜನರು ಮೊದಲು ಭಯದಿಂದ ಒಂದೆರಡು ದಿನ ಮಾತ್ರ ಕೂಡಿ ಇರುತ್ತಿದ್ದರು. ಈಗ ಪಕ್ಷ-ಮಾಸ-ಸಂವತ್ಸರ ಪರ್ಯಂತ ಒತ್ತಟ್ಟಿಗೆ ವಾಸಮಾಡಹತ್ತಿದರು. ಗೃಹಕರ್ಮಗಳೆಲ್ಲವನ್ನೂ ಸ್ತ್ರೀಯರು ಮಾಡಹತ್ತಿದರು. ಕ್ರಮದಿಂದ ಅಧರ್ಮದ ಮಾತು ಮುಳಿಗಿ ಹೋಯಿತು.

ಕಣ-ತುಷಗಳಿಂದೊಡಗೂಡಿದ ಭತ್ತವು ಕೂಡ ಹೊಲ ಮಾಡದಿದ್ದರೆ ಬರದಂತಾಯಿತು. ಕೆಲವು ದುಷ್ಟಜನರು ಅನ್ಯಾಯದಿಂದ ಸಂಚಯ ಮಾಡಹತ್ತಿ, ಅನ್ಯಜನಾರ್ಜಿತ ಕ್ಷೇತ್ರದಲ್ಲಿಯ ಭತ್ತವನ್ನು ಹಾಳುಮಾಡಲು ಪ್ರಾರಂಭಿಸಿದ್ದರಿಂದ ಕ್ಷೇತ್ರ ವಿಭಾಗ ಮಾಡಬೇಕಾಯಿತು. ಕ್ಷೇತ್ರಗಳು ಸೀಮಾಬದ್ಧಿತವಾದವು. ಈ ಪ್ರಕಾರ ಕೆಲವು ದಿವಸ ನಡೆಯಿತು.

ಒಬ್ಬನು ಕುಳಿತು ವಿಚಾರ ಮಾಡಹತ್ತಿದನು-ನಮ್ಮ ಈ ಕ್ಷೇತ್ರದಲ್ಲಿ ಭತ್ತವು ಕಡಿಮೆ ಬೆಳೆದರೆ ನಾವು ನಿರ್ವಾಹವನ್ನು ಹ್ಯಾಗೆ ಸಾಗಿಸಬೇಕು? ಎರಡನೆಯವರ ಭತ್ತವನ್ನು ಬಲಾತ್ಕಾರದಿಂದ ಕಸುಗೊಂಡರೆ ತೀರಿತು, ಎಂದು ಅವನು ತನ್ನ ಭತ್ತವನ್ನು ಸಂಚಯಮಾಡಿ ಅನ್ಯಕ್ಷೇತ್ರದಲ್ಲಿಯ ಭತ್ತವನ್ನು ತೆಗೆದುಕೊಂಡು ಬಂದನು. ಮೂರನೆಯವನೊಬ್ಬನು ಇದನ್ನು ಕಂಡು - "ನೀನು ಏನುಮಾಡಿದೆ? ಅನ್ಯರ ಭತ್ತವನ್ನು ಅವರಿಗೆ ಹೇಳದೆ ತೆಗೆದುಕೊಂಡು ಬಂದೆಯಾ?" ಎಂದನು. ಪುನಃ ಅವನು ಪರರ ಭತ್ತವನ್ನು ಅವರಿಗೆ ಹೇಳದೆ ತಂದನು. ತೃತೀಯ ವ್ಯಕ್ತಿಯು ಪುನಃ ನೋಡಿ-ನೀನು ಮತ್ತೆ ಈ ಕೆಲಸ ಮಾಡಿದಿಯಾ? ಅವನು 'ಮತ್ತೆ ಹೀಗೆ ಮಾಡುವದಿಲ್ಲ' ಎಂದನು. ಕೆಲವು ದಿವಸಗಳ ತರುವಾಯ ಅವನು ಮತ್ತೆ ಪರರ ಭತ್ತವನ್ನು ತಂದನು. ತೃತೀಯ ವ್ಯಕ್ತಿಯು ಈ ಸಾರೆ ಸುಮ್ಮನೆ ಕೂಡ್ರಲಿಲ್ಲ. ಭತ್ತದ ಚೋರನಿಗೆ ಚನ್ನಾಗಿ ಬಡತ ಹಾಕಿದನು. ಆಗ ಆ ಚೋರನು ಕೈಯೆತ್ತಿ ಚೀತ್ಕಾರ ಮಾಡುತ್ತ, ಅಯ್ಯೋ! ಅಣ್ಣಾಗಳಿರಾ ನನ್ನನ್ನು ಹೊಡೆಯುತ್ತಾನೆ! ಅಯ್ಯೋ! ಅಣ್ಣಾಗಳಿರಾ ನನ್ನನ್ನು ಹೊಡೆಯುತ್ತಾನೆ! ಎಂಥ ಅನ್ಯಾಯ! ಎಂಥ ಅನ್ಯಾಯ! ಎಂದು ಕೂಗಹತ್ತಿದನು. ಈ ರೀತಿಯಾಗಿ ಭೂಮಿಯಲ್ಲಿ ಚೋರತ್ವ, ಮಿಥ್ಯಾಭಾಷಿತ್ವ, ಅಶಾಂತಿಯ ಪ್ರಾದುರ್ಭಾವಗಳು ಉಂಟಾದವು.

ಆಗ ಎಲ್ಲರೂ ಕೂಡಿ ಪರಾಮರ್ಶಿಸಹತ್ತಿದರು. ಬುದ್ಧಿವಂತನೂ, ಬಲವಂತನೂ, ಎಲ್ಲರ ಮನವನ್ನೇಕೀಕರಿಸುವವನೂ ಆದ ಒಬ್ಬ ವ್ಯಕ್ತಿಯನ್ನು ನಮ್ಮ ಕ್ಷೇತ್ರರಕ್ಷಣೆಗೋಸುಗ ನಿಯೋಜಿಸೋಣ; ಅವನಿಗೆ ನಾವೆಲ್ಲರೂ ಬೆಳೆಯ ಅಂಶವನ್ನು ಕೊಡೋಣ; ಅವನು ಅಪರಾಧಿಗಳಿಗೆ ದಂಡನೆಯನ್ನೂ ಒಳ್ಳೆಯವರಿಗೆ ರಕ್ಷಣೆಯನ್ನೂ ಮಾಡಬೇಕು. ನಮ್ಮ ಭಾಗಗಳಂತೆ ನಮಗೆ ಬೆಳೆಯನ್ನು ಕೊಡತಕ್ಕದ್ದು ಎಂದು ಅವರು ಒಬ್ಬನನ್ನು

ನಿಯಮಿಸಿಕೊಂಡರು. ಅವನಿಗೆ ಅವರು ತಮ್ಮ ಬೆಳೆಯ ಆರನೆಯ ಭಾಗವನ್ನು ಕೊಡಲೊಪ್ಪಿದರು. ಎಲ್ಲಾ ಸಮ್ಮತಿಯಿಂದ ಅವನು ರಾಜನಾದನು. ಇದಕ್ಕೋಸುಗ ಅವನ ಹೆಸರು 'ಮಹಾಸಮ್ಮತ'ನೆಂದು ಆಯಿತು.

ಪಲಿತ್ರಿ ಪೀಟಿಕೆಯಲ್ಲಿಯೂ ಈ ಪ್ರಕಾರದ ಒಂದು ಚಿಕ್ಕ ಕಥೆಯು ಇರುತ್ತದೆ. 'ಅಗ್ನಿಸುತ್ತ' ಅರ್ಥಾತ್ ಅಗ್ರಣ್ಯಸೂತ್ರ. ಅರ್ಥಾತ್ ಎಲ್ಲರ ಮೊದಲು- ಕಥೆಯ ಸಂಬಂಧದ ಉಪದೇಶ. ಥೇರಾವಾದಿಗಳು ಸ್ವಯಂಬುದ್ಧದೇವನ ಮುಖದಿಂದ ಹೊರಡಿಸಿರುತ್ತಾರೆ. ಬುದ್ಧದೇವನಿಗೆ ವರಿಷ್ಟ-ಭಾರದ್ವಾರನೆಂಬನೊಬ್ಬ ಶಿಷ್ಯನಿದ್ದನು. ಅವನು ಭಿಕ್ಷುವಾಗಿದ್ದರೂ ತಾನು ಬ್ರಾಹ್ಮಣಕುಲಸಂಜಾತನೆಂಬ ಗರ್ವದಿಂದ ಇದ್ದನು. ಅದಕ್ಕೋಸುಗ ಬುದ್ಧದೇವನು ಅವನಿಗೆ ಈ ಚಿಕ್ಕ ಕಥೆಯನ್ನು ಹೇಳಿದನು. ಬ್ರಾಹ್ಮಣನು ಅಗ್ರಣ್ಯನಲ್ಲ, ಭಿಕ್ಷುವೇ ಅಗ್ರಣ್ಯನೆಂದು ಈ ಕಥೆಯಲ್ಲಿ ಪ್ರತಿಪಾದಿಸಿದನು.

ರಾಜನು ಈಶ್ವರಾಂಶನು ಎಂಬ ಮತವು ಬಹು ದೇಶಗಳಲ್ಲಿ ಬಳಿಕೆಯಲ್ಲಿದೆ. ರಾಜನು ಪ್ರಜೆಗಳ ಸೇವಕನು, ಇದನ್ನು ಹೇಳಲಿಕ್ಕೆ ಬಹುತೇಕ ಜನರು ಸಾಹಸ ಮಾಡುವದಿಲ್ಲ. ಆದರೆ ಬೌದ್ಧರಲ್ಲಿ ಈ ಮತವು ಬಹುಕಾಲದಿಂದ ನಡೆದುಬಂದಿರುತ್ತದೆ. ಕ್ರಿ.ಶ. ೫ನೆಯ ಶತಕದಲ್ಲಿದ್ದ ಚಂದ್ರಕೀರ್ತಿಯು "ನೀನು ಮಾತ್ರ ದೇಶದ ಜನರ ದಾಸನು. ಬೆಳೆಯ ಆರನೆಯ ಭಾಗವನ್ನು ತೆಗೆದುಕೊಂಡು ಉಪಜೀವಿಸುವ ನಿನಗೆ ಗರ್ವವು ಯಾಕೆ?" ಎಂದು ಹೇಳಿರುವನು.

❖❖

೧೫

# ಬೌದ್ಧ ಸಾಹಿತ್ಯ[೧]

**ಜಯಕರ್ನಾಟಕ ೪-೬,೮**

ಭಾರತವರ್ಷವು ಧರ್ಮಕ್ಷೇತ್ರವು. ಹಿಂದೂಧರ್ಮ, ಬೌದ್ಧಧರ್ಮ ಮತ್ತು ಜೈನಧರ್ಮಗಳೆಂಬಿವು ಅದರ ಮಹಾನ್ ಪ್ರಾಚೀನ ಧರ್ಮತ್ರಯಿಯು. ಸಮಯಾನುಸಾರವಾಗಿ ಪ್ರತಿಯೊಂದರಲ್ಲಿ ಅನೇಕ ಶಾಖಾ-ಪ್ರಶಾಖೆಗಳುಂಟಾಗಿ ಸದ್ಯದಲ್ಲಿ ಅವುಗಳ ಸ್ವರೂಪವು ವಿಸ್ತೃತವೂ ಕೆಲವಂಶದಲ್ಲಿ ವಿಕೃತವೂ ಆಗಿದೆ. ಉದಾ:- ಹಿಂದುಧರ್ಮದಲ್ಲಿ ವೈಷ್ಣವ, ಶೈವ, ಶಾಕ್ತ ಮೊದಲಾದ ಅನೇಕ ಸಂಪ್ರದಾಯಗಳೂ ಮತಮತಾಂತರಗಳೂ, ಜೈನಧರ್ಮದಲ್ಲಿ ಶ್ವೇತಾಂಬರ ಸ್ಥಾನಕವಾಸಿ ದುಂಡಿಯಾ ಮೊದಲಾದ ವಿಭಾಗಗಳೂ ಉಂಟಾದಂತೆ, ಬೌದ್ಧ ಧರ್ಮದಲ್ಲಿ ಸಹ ಮಹಾಯಾನ-ಹೀನಯಾನಗಳೆಂಬ ಎರಡು ಭಾಗಗಳಾಗಿವೆ. ಮಾಧ್ಯಮಿಕ, ಸಾತ್ರಾಂತಿಕ, ಯೋಗಾಚಾರ, ವೈಭಾಷಿಕಗಳೆಂಬಿವು ಬೌದ್ಧ ತತ್ವಜ್ಞಾನದ ಶಾಖೆಗಳು. ಇದಲ್ಲದೆ ಬೌದ್ಧಧರ್ಮವು ಭರತಖಂಡದ ಹೊರಗೆ ಸಹ ಬಹು ವಿಸ್ತೃತವಾಗಿರುವದು. ತಿಬೇಟ, ನೇಪಾಳ, ಚೀನ, ಜಪಾನ, ಸಿಯಾಮು, ಬರ್ಮಾ, ಸಿಲೋನ ಮೊದಲಾದ ಸ್ಥಳಗಳಲ್ಲಿಯೂ ಅದು ತನ್ನ ಭಿನ್ನಭಿನ್ನ ರೂಪಗಳ ಅಸ್ತಿತ್ವವನ್ನು ಇಟ್ಟಿದೆ. ಇವೆಲ್ಲವುಗಳು ಬೌದ್ಧಧರ್ಮದ ಅಂಕುರಗಳೇ.

ಮಹಾತ್ಮಾ ಗೌತಮಬುದ್ಧನ ಜನ್ಮವು ಕ್ರಿ.ಶ. ಪೂರ್ವದಲ್ಲಿ ೭ ಅಥವಾ ೮ನೆಯ ಶತಕದಲ್ಲಿ ಆಯಿತೆಂದು ನಿಶ್ಚಿತವಾಗಿದೆ. ಇದರಿಂದ ಬೌದ್ಧಧರ್ಮವು ಹಿಂದೂಧರ್ಮದ ಸಮಕಕ್ಷವಾಗಿದ್ದರೂ ಸರಾಸರಿ ಎರಡೂವರೆ ಸಾವಿರವರ್ಷಗಳಿಗಿಂತ ಮೊದಲಿನದೆಂದು ನಿರ್ವಿವಾದವಾಗಿ ಹೇಳಬಹುದು. ಸ್ವಯಂಬುದ್ಧ ಭಗವಂತ, ಮಹೀಂದ್ರ, ಬುದ್ಧಘೋಷರೇ ಮೊದಲಾದ ಅನೇಕ ತಪಸ್ವಿಗಳ ಹಾಗು ಅಶೋಕ, ಕನಿಷ್ಕರೇ ಮೊದಲಾದ ಎಷ್ಟೋ ರಾಜರುಗಳ ಸತತ ಪ್ರಯತ್ನದಿಂದ ಬೌದ್ಧಧರ್ಮದ ಪ್ರಚಾರವು ಬಹು ವಿಸ್ತೃತವಾಯಿತು. ಅದರ ಇತಿಹಾಸವು ಇಡಿಯ ಮಾನವಜಾತಿಯ ೧/೩ ಭಾಗದ ಗತಕಾಲದ ಎರಡೂವರೆಸಾವಿರ ವರ್ಷಗಳ ಇತಿಹಾಸವೆಂದು ಹೇಳಲು ಅತ್ಯುಕ್ತಿಯಾಗಲಿಕ್ಕಿಲ್ಲವೆಂದು ತೋರುತ್ತದೆ. ಆದರೆ ಈ ಭರತಖಂಡದಲ್ಲಿ ಜನಿಸಿದ ಬೌದ್ಧಧರ್ಮವು ಈಗ ಇಲ್ಲಿಂದ ಸಮೂಲ ಲುಪ್ತವಾಗಿ ಹೋಗಿರುವದೆಂಬುದು ಅತ್ಯಾಶ್ಚರ್ಯದ ಸಂಗತಿಯು.

---

೧. ಇದು ಹಿಂದಿಭಾಷೆಯ 'ಮಾಧುರಿ' ಪತ್ರಿಕೆಯ ೫ನೇ ಅಕ್ಟೋಬರ ೧೯೨೪ನೇ ಸಂಚಿಕೆಯಲ್ಲಿಯ ಪ್ರವಾಸಿಲಾಲ ವರ್ಮಾ ಎಂಬವರ 'ಬೌದ್ಧಸಾಹಿತ್ಯ'ವೆಂಬ ಲೇಖನದ ಅನುವಾದವು.

ಹಿಂಸಾತ್ಮಕ ಕರ್ಮಕಾಂಡದ ಪದ್ಧತಿಯು ಬಹು ವಿಸ್ತಾರವಾಗಿಯೂ, ತೊಡಕಿನದಾಗಿಯೂ ಯಾವಾಗ ಉಂಟಾಯಿತೋ ಆಗ ಬೌದ್ಧಧರ್ಮವು ಉತ್ಪನ್ನವಾಗುವ ಅವಶ್ಯಕತೆಯು ತೋರಿತು. ಅದು ವೈದಿಕ ಕರ್ಮಕಾಂಡಕ್ಕೇ ಅಲ್ಲ* ಈಶ್ವರನನ್ನು ಕೂಡ ನಿಷೇಧಮಾಡಿತು ಮತ್ತು ಕೇವಲ ಸದಾಚಾರ (ಶೀಲ)ದಿಂದಲೇ ನಿರ್ವಾಣ (ಮೋಕ್ಷ), ಅಥವಾ ಅರ್ಹತ ಅವಸ್ಥೆ (ವೇದಾಂತದ ತುರೀಯಾವಸ್ಥೆ)ಯು ಪ್ರಾಪ್ತವಾಗುತ್ತದೆಂಬದನ್ನು ಸಮಾಜಕ್ಕೆ ತಿಳಿಸಿಕೊಟ್ಟಿತು. ಬೌದ್ಧಧರ್ಮಕ್ಕೆ ನಾಸ್ತಿಕ, ನಿರೀಶ್ವರವಾದಿ, ಶೂನ್ಯವಾದಿ ಇತ್ಯಾದಿ ವಿಶೇಷಣಗಳನ್ನು ಕೊಟ್ಟಿದ್ದು ಈ ಕಾರಣದಿಂದಲೇ. ಜಗತ್ತು ಜನ್ಮ-ಜರಾ-ಮರಣ ಇತ್ಯಾದಿಗಳಿಂದ ಪರಿಪೂರ್ಣವಾಗಿ ದುಃಖಮಯವಾಗಿರುವದೆಂಬುದೂ, ಕರ್ಮದ ಅಚಲಸಿದ್ಧಾಂತವೂ ಬೌದ್ಧಧರ್ಮಕ್ಕೆ ಸ್ತಂಭಸ್ವರೂಪಗಳಾಗಿವೆ. ಇದರಿಂದ ಬೌದ್ಧಧರ್ಮಕ್ಕೆ ಬಹುಜನರು ನಿರಾಶಾವಾದಿಯೆಂದೂ ಅನ್ನುತ್ತಾರೆ: ಇರಲಿ. ಈಗ ನಾವು ಬೌದ್ಧಸಾಹಿತ್ಯದ ಅವಲೋಕನವನ್ನು ಮಾಡುವದಿರುವದರಿಂದ ಈ ವಿಷಯವನ್ನು ಇಲ್ಲೇ ಬಿಟ್ಟುಗೊಡುತ್ತೇವೆ.

ಬೌದ್ಧಧರ್ಮದ ಪ್ರಚಾರವು ಕ್ರಮಶಃ ಬಹು ವಿಸ್ತೃತವಾಗಿ ಹಬ್ಬಿತೆಂಬುದನ್ನು ಮೇಲೆ ಹೇಳಿದ್ದೇವೆ. ಅಂದಮೇಲೆ ಅದರ ಸಾಹಿತ್ಯವು ಕೂಡ ಬಹು ವಿಶಾಲವಾಗಿತ್ತೆಂಬಲ್ಲಿ ಯಾವ ಆಶ್ಚರ್ಯವೂ ಇಲ್ಲ. ಗೌತಮಬುದ್ಧನು ಯಾವ ಭಾಷೆಯಲ್ಲಿ ಉಪದೇಶವನ್ನು ಮಾಡಿದನೆಂಬುದರ ಮೇಲೆ ಪಂಡಿತ ಮಂಡಲಿಯಲ್ಲಿ ಮತಭೇದವಿದೆ. ಆದರೂ ಸಾಧಾರಣತಃ ಪಾಲೀಭಾಷೆಯು ಆ ಕಾಲದ ಮಗಧದೇಶದ ದೇಶಭಾಷೆಯಾಗಿತ್ತು; ಈ ಭಾಷೆಯನ್ನೇ ಬುದ್ಧನು ಉಪಯೋಗಿಸಿರಬಹುದೆಂದು ತಿಳಿಯುತ್ತದೆ. ಯಾಕಂದರೆ ಗೌತಮಬುದ್ಧನು ಮೊದಲು ಅಧಿಕಾಂಶ ಧರ್ಮಪ್ರಚಾರವನ್ನು ಮಗಧದೇಶದಲ್ಲಿಯೇ ಮಾಡಿದನು. ಹಾಗು ಬ್ರಾಹ್ಮಣಧರ್ಮದಂತೆ ಬೌದ್ಧಧರ್ಮದಲ್ಲಿ ಅಧಿಕಾರಿ-ಅನಧಿಕಾರಿಗಳ ಪ್ರಶ್ನವಿದ್ದಿಲ್ಲ. ಇದರಿಂದ ಬ್ರಾಹ್ಮಣರಿಂದ ಶೂದ್ರರ ವರೆಗೆ ಸ್ತ್ರೀಪುರುಷರೆಲ್ಲರಿಗೂ ಯಾವ ಭಾಷೆಯು ಸಮಾನ ಭಾವದಿಂದ ತಿಳಿಯುತ್ತದೆಯೋ ಆ ಭಾಷೆಯನ್ನೇ ಅವನು ಉಪಯೋಗಿಸಿರಬಹುದೆಂಬುದು ಸಹಜವಾಗಿದೆ. ಯಾವ ದೇಶಗಳಲ್ಲಿ ಬೌದ್ಧಧರ್ಮವು ವಿಸ್ತಾರವಾಗಿದೆಯೋ ಆಯಾ ದೇಶಭಾಷೆಗಳಲ್ಲಿ ಈ ಸಮಯದಲ್ಲಿ ಬೌದ್ಧಧರ್ಮದ ಸಾಹಿತ್ಯವು ಹ್ಯಾಗೆ ಮತ್ತು ಎಷ್ಟು ವಿದ್ಯಮಾನವಾಗಿರುತ್ತದೆಂಬುದನ್ನು ನೋಡುವದೇ ಈ ಲೇಖದ ಆಶಯವು. ವಸ್ತುತಃ ಇಲ್ಲಿಯ ವರೆಗೆ ಪ್ರಸಿದ್ಧವಾದ ಬೌದ್ಧ ಸಾಹಿತ್ಯದ ಬಹು ಭಾಗವು, ಸಂಸ್ಕೃತ ಮತ್ತು ಪಾಲೀ ಭಾಷೆಗಳಲ್ಲಿ ಇರುತ್ತದೆ.

**ಸಂಸ್ಕೃತ ಭಾಷೆಯಲ್ಲಿಯ ಬೌದ್ಧಸಾಹಿತ್ಯ:**

ಈ ಸಾಹಿತ್ಯ ಸಮೂಹದಲ್ಲಿ ಮೊದಲು 'ಲಲಿತವಿಸ್ತರ'ದ ಹೆಸರು ಬರುವದು. ಇದು ಮಹಾಪುರಾಣವೆಂದು ಹೇಳಲ್ಪಡುವದು.

ಗೌತಮನು ಮೊದಲು ಬೌದ್ಧವೃಕ್ಷದ ಕೆಳಗೆ ಕುಳಿತು ಬುದ್ಧತ್ವವನ್ನು ಹೊಂದಿ ಯಾವ ಜಗದುದ್ಧಾರಕ್ಕಾಗಿ ತನ್ನ ಉಪದೇಶವನ್ನು ಪ್ರಾರಂಭಮಾಡಿದನೋ ಅಲ್ಲಿಯವರೆಗಿನ ಬುದ್ಧಚರಿತ್ರೆಯ ವೃತ್ತಾಂತವು ಈ ಗ್ರಂಥದಲ್ಲಿ ಕೊಡಲ್ಪಟ್ಟಿರುತ್ತದೆ. ಇದರ ಬಹುಭಾಗವು ಗದ್ಯದಲ್ಲಿಯೂ, ಉಳಿದ ಭಾಗವು ಪದ್ಯದಲ್ಲಿಯೂ ಇರುವದು. ಇದರಲ್ಲಿ ೨೭ ಪರಿವರ್ತ (ಅಧ್ಯಾಯ)ಗಳಿವೆ. ಇದರ ಭಾಷೆಗೆ ಶುದ್ಧಸಂಸ್ಕೃತವೆಂದು ಅನ್ನಲಿಕ್ಕೆ ಬರುವಂತಿಲ್ಲ; ಬಹು ಜನ ಪಂಡಿತರು ಈ ಭಾಷೆಗೆ 'ಗಾಥಾ ಸಂಸ್ಕೃತ'ವೆಂದು ಅನ್ನುವರು. ಈ ಗ್ರಂಥದಲ್ಲಿ ಬುದ್ಧನ ಚರಿತ್ರೆಯು ಆಲಂಕಾರಿಕ ರೀತಿಯಿಂದ ಚಮತ್ಕಾರ ಪೂರ್ಣವಾಗಿ ಚಿತ್ರಿತವಾಗಿದೆ. ಇದಕ್ಕೆ ಐತಿಹಾಸಿಕ ದೃಷ್ಟಿಯಿಂದ ಯಾವ ಮೂಲ್ಯವುಂಟಾಗುವದೆಂಬುದು ವಿಚಾರಣೀಯವಾಗಿದೆ. ಈ ಗ್ರಂಥದ ಲೇಖಕರ ಹಾಗೂ

---

* तुलना – "निन्दसि यज्ञविधेरहह श्रुतिजातम्"

ಸಮಯದ ವಿಷಯದಲ್ಲಿ ಇಲ್ಲಿಯ ವರೆಗೆ ನಿಶ್ಚಿತ ಪ್ರಮಾಣಗಳು ದೊರೆತಿಲ್ಲ; ಆದರೂ ಇದರ ರಚನೆಯು ಕ್ರಿ.ಶ. ದ ಪ್ರಾರಂಭದಲ್ಲಿ ಒಬ್ಬ ಅಥವಾ ಹಲವರಿಂದ ಉಂಟಾಗಿರಬಹುದೆಂದು ಹೇಳಬಹುದು. ಚೀನೀ, ತಿಬೇಟ ಮೊದಲಾದ ಭಾಷೆಗಳಲ್ಲಿ ಈ ಗ್ರಂಥದ ಅನೇಕ ಅನುವಾದಗಳು ದೃಷ್ಟಿಗೆ ಬೀಳುವವು. ಇದರ ಒಂದು ಆವೃತ್ತಿಯನ್ನು ಸ್ವರ್ಗೀಯ ಡಾ. ರಾಜೇಂದ್ರಲಾಲ ಮಿಶ್ರರವರು ಕಲಕತ್ತೆಯ 'ಏಸಿಯಾಟಿಕ್ ಸೊಸಾಯಿಟಿ'ಯಿಂದ ಪ್ರಸಿದ್ಧಪಡಿಸಿದ್ದರು. ಅದರಂತೆಯೇ ಡಾ. ಲೈಫ್‌ಮೈನ್‌ರವರು ಇದರ ಒಂದು ಆವೃತ್ತಿಯನ್ನು ಜರ್ಮನಿಯಿಂದ ಪ್ರಸಿದ್ಧಪಡಿಸಿದರು.

ಎರಡನೆಯ ಗ್ರಂಥವು 'ಬುದ್ಧಚರಿತೆ'ಯು. ಈ ಗ್ರಂಥದ ಲೇಖಕನು ಅಶ್ವಘೋಷನೆಂಬ ಒಬ್ಬ ಬೌದ್ಧಕವಿಯು. 'ಅಶ್ವಘೋಷ' ಎಂಬ ಹೆಸರಿನ ಬಹುಜನ ಆಚಾರ್ಯರು ಆಗಿದ್ದಾರೆ. ಆದರೆ ಈ ಕಾವ್ಯಗ್ರಂಥದ ಲೇಖಕನಾದ 'ಅಶ್ವಘೋಷನು ಕ್ರಿ.ಶ. ದ ೧ನೆಯ ಶತಮಾನದಲ್ಲಿ ಇದ್ದನು. ಅವನು ಕಾಶ್ಮೀರದ ರಾಜ್ಯದ ಕನಿಷ್ಕನ ಸಮಕಾಲೀನನೂ, ಉಪದೇಶಕನೂ ಆಗಿದ್ದನು.[೧] ಈ ಕಾವ್ಯಗ್ರಂಥವು ಬಹು ಪ್ರಾಸಾದಿಕ ಕವಿತೆಯಲ್ಲಿ ಕಾಳಿದಾಸನ ಸುಲಭಶೈಲಿಯಲ್ಲಿ ಬರೆಯಲ್ಪಟ್ಟಿದೆ. ರಘುವಂಶ ಹಾಗು ಕುಮಾರ ಸಂಭವಗಳ ಎಷ್ಟೋ ಶ್ಲೋಕಗಳೊಡನೆ ಬುದ್ಧಚರಿತೆಯ ಶಬ್ದಸಾಮ್ಯವೂ, ಭಾವಸಾಮ್ಯವೂ ಸ್ಪಷ್ಟವಾಗಿ ಕಂಡುಬರುತ್ತದೆ. ಇದರ ತುಲನಾತ್ಮಕ ವಿಚಾರವನ್ನು ಮಹಾರಾಷ್ಟ್ರದ ಪ್ರಸಿದ್ಧ ವಿದ್ವಾಂಸರಾದ ಶ್ರೀಯುತ ನಂದಗೀರಕರವರು ತಮ್ಮ ರಘುವಂಶದ ಪ್ರಸ್ತಾವನೆಯಲ್ಲಿ ಒಳ್ಳೇ ರೀತಿಯಿಂದ ಮಾಡಿರುವದು. ಈ ಗ್ರಂಥದಲ್ಲಿ ಬುದ್ಧನ ಜೀವನವು ಕಾವ್ಯದೃಷ್ಟಿಯಿಂದ ಅತ್ಯುತ್ತಮವಾಗಿಯೂ, ರೋಚಕವಾಗಿಯೂ ಬರೆಯಲ್ಪಟ್ಟಿದೆ. ಇದರ ಹೊರತು ಅಶ್ವಘೋಷನಿಂದ ಸೌಂದರನಂದ ಸೂತ್ರಾಲಂಕಾರ, ಶ್ರದ್ಧೋತ್ಪಾದ, ಶಾರೀಪುತ್ರ ಪ್ರಕರಣ, ಅಭಿಧರ್ಮ ವಿಭಾಗ, ಗಂಡೀಸ್ತೋತ್ರ ಮೊದಲಾದ ಗ್ರಂಥಗಳ ರಚನೆಯು ಆಗಿರಬಹುದೆಂದು ಗೊತ್ತಾಗುವದು.[೨] ಬುದ್ಧಚರಿತೆಯ ಒಂದು ಉತ್ತಮ ಆವೃತ್ತಿಯನ್ನು ಸ್ವರ್ಗೀಯ ಪ್ರೊಫೆಸರ್ ಕಾವೆಲರವರು ಪ್ರಸಿದ್ಧ ಮಾಡಿದ್ದಾರೆ.

ಈಗ ಅವದಾನ ಸಾಹಿತ್ಯವನ್ನು ಅವಲೋಕಿಸೋಣ-ಅವದಾನವೆಂದರೆ ಉದಾತ್ತ ಕಾರ್ಯ; ಪರಾಕ್ರಮ. ಈ ವಿಶಾಲ ಸಾಹಿತ್ಯದಲ್ಲಿ ಬುದ್ಧನ ಈ ಜನ್ಮದ ಹಾಗು ಪೂರ್ವಜನ್ಮಗಳ ಸಂಬಂಧದ ಸಂಗತಿಗಳು ಬರೆಯಲ್ಪಟ್ಟಿವೆ. ಎಷ್ಟೋ ಸಂಗತಿಗಳು ಬಹು ಆನಂದದಾಯಕವಾಗಿಯೂ, ಅದ್ಭುತವಾಗಿಯೂ ಇರುವವು.

ಇದರಲ್ಲಿ ಅವದಾನಶತಕ, ದಿವ್ಯಾವದಾನ, ರೂಪವತೀ ಅವದಾನ, ಕಲ್ಪದ್ರುಮ ಅವದಾನ. ದ್ವಾವಿಂಶತ್ಯವದಾನ, ಭದ್ರಕಲಾವದಾನ, ವಿಚಿತ್ರಕರ್ಣಿಕಾವದಾನ, ಸುಗಮಧಾವದಾನ, ಅವದಾನ ಕಲ್ಪಲತಾ, ವೃತವಂದಮಾಲಾ, ಜಾತಕಮಾಲಾ (ಬೋಧಿಸತ್ತ್ವಾವದಾನ) ಮೊದಲಾದ ಗ್ರಂಥಗಳಿವೆ. ಇವುಗಳಲ್ಲಿಯ ಎಷ್ಟೋ ಗ್ರಂಥಗಳು ಇಲ್ಲಿಯ ವರೆಗೂ ಪ್ರಸಿದ್ಧವಾಗಿಲ್ಲ. ಜಾತಕಮಾಲೆಯ ಲೇಖಕನು 'ಆರ್ಯಶೂರ್ಯ'ನು. ಈ ಗ್ರಂಥವು 'ಹಾರವರ್ಡ ಓರಿಯಂಟಲ್ ಸಿರೀಜ'ದಲ್ಲಿ ಎಚ್‌ಕರ್ನ ಸಾಹೇಬರವರಿಂದ ಪ್ರಸಿದ್ಧ ಮಾಡಲ್ಪಟ್ಟಿದೆ.

ಅವದಾನ-ಕಲ್ಪಲತೆಯ ಕೆಲಭಾಗವನ್ನು ರಾಯಬಹಾದ್ದೂರ ಶರಶ್ಚಂದ್ರ ಹಾಗೂ ಪಂಡಿತ ಹರಿಮೋಹನ ವಿದ್ಯಾಭೂಷಣರವರು 'ಬಂಗಾಲ ಏಸಿಯಾಟಿಕ್ ಸೊಸಾಯಿಟಿ'ಯಿಂದ ಪ್ರಸಿದ್ಧಪಡಿಸಿರುವರು.

---

೧. Secred Books of the East Vol XL Introduction P.L

೨. A Literary History of Sanskrit Buddhism by G.K. Narayanan Chap 5.

ಮಹಾಯಾನ ಬೌದ್ಧ ಪಂಥದ ಸ್ತಂಭಸ್ವರೂಪವಾದ 'ಮಹಾಯಾನ ಸೂತ್ರ'ದಲ್ಲಿ ಹಾಗೂ 'ನವಧರ್ಮ' ನಾಮದಿಂದ ಪ್ರಸಿದ್ಧವಾದ ವೈಪುಲ್ಯಸೂತ್ರದಲ್ಲಿ 'ಅಷ್ಟಸಾಹಸ್ರಿಕಾ-ಪ್ರಜ್ಞಾಪಾರಿಮಿತಾ, ಸದ್ಧರ್ಮಪುಂಡರೀಕ, ಲಲಿತ ವಿಸ್ತರ, ಲಂಕಾವತಾರ, ಸುವರ್ಗ ಪ್ರಭಾಸ, ಗಂಡವ್ಯೂಹ, ಗತ-ಗುಹ್ಯಕ, ಸಮಾಧಿರಾಜ, ದಶಭೂಮಿಶ್ವರಗಳೆಂಬ ಒಂಬತ್ತು ಗ್ರಂಥಗಳಿವೆ. ಇವುಗಳಲ್ಲಿ ಲಲಿತವಿಸ್ತರದ ವಿಷಯಾಗಿ ಮೇಲೆ ಚರ್ಚಿಸಲ್ಪಟ್ಟಿದೆ. 'ಸದ್ಧರ್ಮಪುಂಡರೀಕ'ವು ಸೆಂಟ ಪೀಟರ್ಸಬರ್ಗದಲ್ಲಿ ಸನ್ ೧೯೦೮ನೆಯ ಇಸವಿಯಲ್ಲಿ 'ವೀಕ್‌ಲಿ ಓಥೇಕಾ ಬದ್ಧಿಕಾ' ಎಂಬ ಗ್ರಂಥಮಾಲೆಯಲ್ಲಿ ಪ್ರಸಿದ್ಧಮಾಡಲ್ಪಟ್ಟಿತು. ಇದರ ಇಂಗ್ರೇಜಿ ಅನುವಾದವನ್ನು ಕರ್ನಸಾಹೇಬರವರು ಸೆಕಂಡ್ ಬುಕ್ಸ್ ಗ್ರಂಥಮಾಲೆಯಲ್ಲಿ ಪ್ರಕಟಿಸಿದ್ದಾರೆ. ಮಹಾಯಾನ ಪಂಥದಲ್ಲಿ ಅವಲೋಕಿತೇಶ್ವರ, ಅಮಿತಾಭ, ಮಂಜುಶ್ರೀ ಮೊದಲಾದ ಭಿನ್ನಭಿನ್ನ ರೂಪಗಳ ಕಲ್ಪನೆಯು ಮಾಡಲ್ಪಟ್ಟಿದೆ. ಮತ್ತು ಅವುಗಳ ವರ್ಣನೆ ಹಾಗು ಗುಣಕೀರ್ತನೆಗೋಸುಗ, ಕರಂಡವ್ಯೂಹ, ಸುಖಾವತೀವ್ಯೂಹ, ಗಂಡವ್ಯೂಹ ಮೊದಲಾದ ಪುಸ್ತಕಗಳ ರಚನೆಯಾಗಿದೆ. ಲಂಕಾವತಾರದಲ್ಲಿ ಶಾಕ್ಯಮುನಿ ಬುದ್ಧನೊಡನೆ ಲಂಕಾಧಿಪತಿಯಾದ ರಾವಣನ ಭೆಟ್ಟಿಯ ವರ್ಣನೆಯು ಇರುವದು! ರಾವಣನು ಬುದ್ಧನಿಗೆ ಧರ್ಮ ಸಂಬಂಧದ ಎಷ್ಟೋ ಪ್ರಶ್ನೆಗಳನ್ನು ವಿಚಾರಿಸುತ್ತಾನೆ. ಮತ್ತು ಬುದ್ಧನು ಅವುಗಳಿಗೆ ಉತ್ತರಕೊಡುತ್ತಾನೆ. ಆ ಉತ್ತರಗಳು ಬೌದ್ಧಧರ್ಮದ ಯೋಗಾಚಾರ ಶಾಖೆಯ ಸಿದ್ಧಾಂತಗಳೊಡನೆ ಕೂಡುತ್ತವೆ. ಇದರಲ್ಲಿ ಸಾಂಖ್ಯ-ವೈಶೇಷಿಕ-ಪಾಶುಪತ ಮೊದಲಾದ ಮತಗಳ ವಿವೇಚನೆಯು ಮಾಡಲ್ಪಟ್ಟಿರುವದು ಮತ್ತು ಒಂದು ಭವಿಷ್ಯವಾಣಿಯು ಇರುವದು:- "ನನ್ನ ನಿರ್ವಾಣದ ನೂರು ವರ್ಷಗಳ ತರುವಾಯ ವ್ಯಾಸನು ಜನಿಸಿ, ಮಹಾಭಾರತವನ್ನು ರಚಿಸುವನು. ಅನಂತರ ಪಾಂಡವ ಕೌರವ, ನಂದ, ಮೌರ್ಯ, ಗುಪ್ತ, ಮ್ಲೇಚ್ಛವಂಶಗಳ ರಾಜರು ಉತ್ಪನ್ನರಾಗುವರು. ಇತ್ಯಾದಿ."

ಮಾಧ್ಯಮಿಕ ಶಾಖೆಯಲ್ಲಿ 'ನಾಗಾರ್ಜುನ'ನೆಂಬವನೊಬ್ಬ ಘನವಿದ್ವಾಂಸನು ಕ್ರಿ.ಶ. ೨ನೆಯ ಅಥವಾ ೩ನೆಯ ಶತಮಾನದಲ್ಲಿ ದಕ್ಷಿಣ ಭಾರತದಲ್ಲಿ ಆಗಿಹೋದನು. ಅವನು ಮಾಧ್ಯಮಿಕ ಶಾಖೆಯ ಸಿದ್ಧಾಂತಾನುಸಾರವಾಗಿ ಮಾಧ್ಯಮಿಕಕಾರಿಕಾ, ಧರ್ಮಸಂಗ್ರಹ ಮೊದಲಾದ ಗ್ರಂಥಗಳನ್ನು ಬರೆದಿರುವನು. ಬೌದ್ಧಧರ್ಮದ "ಸಂಸ್ಕೃತ ಸಾಹಿತ್ಯ"ದಲ್ಲಿ ಮೇಲೆ ಬರೆದ ಮುಖ್ಯ-ಮುಖ್ಯ ಗ್ರಂಥಗಳ ಸಮಾವೇಶವಾಗಿದೆ.

**ಪಾಲೀಭಾಷೆಯ ಬೌದ್ಧ ಸಾಹಿತ್ಯ:**

ಪಾಲೀಭಾಷೆಯ ಬೌದ್ಧಗ್ರಂಥಗಳು ಅತಿ ಪ್ರಾಚೀನವೆಂದು ಸರ್ವಸಮ್ಮತವಾಗಿದೆ. ಇದರಲ್ಲಿ ತಿಪಿಟಿಕ (ತ್ರಿಪಿಟಕ) ಸಂಗ್ರಹವು ಬಹು ಮಹತ್ವವಾದುದು. 'ತಿಪಿಟಕ' ಎಂದರೆ ಒಂದು ಪುಸ್ತಕದ ಹೆಸರು ಅಲ್ಲ. ಅದರಲ್ಲಿ ಅನೇಕ ಪುಸ್ತಕಗಳು ಸಮಾವೇಶವಾಗಿವೆ. ಸನಾತನ ಧರ್ಮಿಗಳಿಗೆ ವೇದವೂ, ಜೈನರಿಗೆ ಆಗಮವೂ ಪ್ರಮಾಣಗ್ರಂಥಗಳಾಗಿರುವಂತೆ ಹೀನಾಯಾನಪಂಥದ ಬೌದ್ಧರಿಗೆ 'ತಿಪಿಟಕ'ವು ಪ್ರಾಮಾಣಿಕವಾಗಿದೆ. ತಿಪಿಟಕವು ಮಹಾಭಾರತದ ಮೂರುಪಟ್ಟು ಆಗಬಹುದು. ಇದರಲ್ಲಿ ಸಂಗ್ರಹಿತವಾದ ಅಂಶಗಳು ಎಂದು? ಎಲ್ಲಿ? ಮತ್ತು ಯಾರಿಂದ? ರಚಿಸಲ್ಪಟ್ಟವೆಂಬ ಪ್ರಶ್ನೆಗಳಿಗೆ ಉತ್ತರ ಹೇಳುವದು ಕಠಿಣವದೆ. ಎಷ್ಟೋ ಜನ ಪಂಡಿತರು, ಇದರ ರಚನೆಯು ಪಾಟಲೀಪುತ್ರದಲ್ಲಿ ಆಯಿತೆನ್ನುವರು. ಅನಂತರ ಅಶೋಕ ಮಹಾರಾಜನ ಪುತ್ರನಾದ ಮಹೀಂದ್ರನು ಧರ್ಮಪ್ರಚಾರಕ್ಕೋಸುಗ ಸಿಲೋನಕ್ಕೆ ಹೋಗುವಾಗ ತನ್ನೊಡನೆ ಇದನ್ನು ತಕ್ಕೊಂಡು ಹೋಗಿದ್ದನು.*

---

* ಬುದ್ಧಘೋಷನು ತಿಪಿಟಕದ ದೀಘನಿಕಾಯ ಗ್ರಂಥ'ದ ಅಟ್ಟಕಥಾ(ಟೀಕಾ)ದ ಪಾಲೀಭಾಷೆಯಲ್ಲಿ ಅನುವಾದ ಮಾಡುವ ಸಮಯದಲ್ಲಿ ಬರೆದಿರುವರು.

ತ್ರಿಪೀಟಕಗಳಲ್ಲಿ ರಾಜಗೃಹ ಮತ್ತು ವೈಶಾಲೀ ಸಭೆಗಳ ವರ್ಣನೆಯು ಇರುವದು. ಅನಂತರ ಪಾಟಲೀಪುತ್ರದಲ್ಲಿ ಆದ ಸಭೆಯ ಉಲ್ಲೇಖವಿರುವದಿಲ್ಲ. ಬುದ್ಧಗ್ರಂಥದಲ್ಲಿ ಹೀಗೆ ಹೇಳಿದೆ :

"सिंहलदीपं पन आमथाथवसिना महामहिंदेन;
ठपिता सीहलभासाय दीपवासिन म त्थाय ।
अपनेत्वाततोहं सहिलभासं मनोरम भास;
तन्तिन यानुच्छविकं आरोपेता विगतदोसं ।

ಅರ್ಥಾತ್-ಈ ಅಷ್ಟಕಥೆಯನ್ನು ಮಹಾಮಹಿಂದ್ರನು ಸಿಂಹಲದ್ವೀಪಕ್ಕೆ ಒಯ್ದು, ಆ ದ್ವೀಪನಿವಾಸಿಗಳ ಹಿತಾರ್ಥವಾಗಿ ಅದನ್ನು ಸಿಂಹಲೀಭಾಷೆಯಲ್ಲಿ ಬರೆದನು. ಆ ಸಿಂಹಲೀ ಭಾಷೆಯಿಂದ ನಾನು, ಮನೋರಮವೂ, ಶಾಸ್ತ್ರಾನುಕೂಲವೂ, ನಿರ್ದೋಷವೂ ಆದ ಪಾಲೀಭಾಷೆಯಲ್ಲಿ ಅದರ ಅನುವಾದವನ್ನು ಮಾಡುತ್ತೇನೆ.

ಇದರಿಂದ ಇದರ ರಚನೆಯು ಈ ಎರಡು ಸಭೆಗಳ ಮಧ್ಯಕಾಲದಲ್ಲಿ ಆಗಿರಬಹುದೆಂದು ತೋರುತ್ತದೆ. ತ್ರಿಪಿಟಕದ ಕೆಲವು ಭಾಗವು ನಿಃಸಂಶಯವಾಗಿ ಪ್ರಾಚೀನವಾಗಿದೆ. ಉಳಿದ ಭಾಗವು ಅರ್ವಾಚೀನವೆಂದು ತೋರುತ್ತದೆ. ಬಹುಜನ ಪಂಡಿತರ ಮತವಾದರೂ ಹೀಗೆಯೇ ಇರುತ್ತದೆ. ಈ ಗ್ರಂಥದ ಅನುವಾದವು ಸಿಂಹಲೀ, ಬ್ರಹ್ಮೀಜ, ಚೀನೀ, ಜಪಾನೀ ಮೊದಲಾದ ಭಾಷೆಗಳಲ್ಲಿ ಆಗಿದೆ. ಇದರಲ್ಲಿ ಮೂರು ಪಿಟಕ (ಭಾಗಸಮೂಹ)ಗಳಿದ್ದುದರಿಂದಲೇ ಈ ಹೆಸರು ಬಂದಿದೆ. ೧. ಸುತ್ತಪಿಟಕ, ೨. ವಿನಯ ಪಿಟಕ, ೩. ಅಭಿಧಮ್ಮ ಪಿಟಕಗಳೆಂಬವೆ ಮೂರು ಪಿಟಕಗಳು. ಮೊದಲು ಸುತ್ತಪಿಟಕ, ವಿನಯಪಿಟಕಗಳೆಂಬ ಎರಡು ಪಿಟಕ (ದ್ವಿಪಿಟಕ)ಗಳು ಮಾತ್ರ ಇದ್ದವೆಂದು ಕೆಲವರ ಅಭಿಪ್ರಾಯವದೆ. **

**೧. ಸುತ್ತಪಿಟಕ**-ಇದರಲ್ಲಿ ಗೌತಮಬುದ್ಧನ ಉಪದೇಶಗಳ ಸಂಗ್ರಹವು ಮಾಡಲ್ಪಟ್ಟಿದೆ. ಇದು ೫ ನಿಕಾಯ ಅಥವಾ ವಿಭಾಗಗಳಾಗಿ ವಿಭಕ್ತವಾಗಿದೆ. ಅವು ಯಾವವೆಂದರೆ-೧. ದೀಘನಿಕಾಯ (ದೀರ್ಘನಿಕಾಯ), ೨. ಮಜ್ಝಿಮನಿಕಾಯ (ಮಧ್ಯಮನಿಕಾಯ), ೩. ಸಂಯುತ್ತನಿಕಾಯ (ಸಂಯುಕ್ತ ನಿಕಾಯ), ೪. ಅಂಗುತ್ತರ ನಿಕಾಯ, ೫. ಖುದ್ದಕನಿಕಾಯ (ಕ್ಷುದ್ರನಿಕಾಯ). ಈ ಐದು ವಿಭಾಗಗಳಲ್ಲಿ ಬುದ್ಧ ಭಗವಂತನು ತನ್ನ ಶಿಷ್ಯರಿಗೆ ಮಾಡಿದ ಉಪದೇಶ, ಅವರ ಪಾರಸ್ಪರಿಕ ಸಂವಾದ, ಧರ್ಮ ಹಾಗೂ ತತ್ವಜ್ಞಾನಗಳ ವಿಷಯದಲ್ಲಿ ಅವನ ಶಿಷ್ಯರು ಪುನಃ ಪುನಃ ಮಾಡಿದ ಪ್ರಶ್ನ ಮತ್ತು ಅವುಗಳ ಉತ್ತರಗಳ ಸಂಗ್ರಹವು ಮಾಡಲ್ಪಟ್ಟಿದೆ. ಈ ಎಲ್ಲ (೧೮೩) ಸಂವಾದಗಳು ಬಹು ಗಹನವಾಗಿವೆ. ಇವುಗಳ ಒಂದೊಂದು ಸೂತ್ರವು ಒಂದೊಂದು ವ್ಯಾಖ್ಯಾನದ ವಿಷಯವಾಗುವದು. ದೀರ್ಘ ನಿಕಾಯದಲ್ಲಿ ದೀರ್ಘ ಅರ್ಥಾತ್ ಬಹು ದೊಡ್ಡ ಸಂವಾದಗಳಿವೆ. ಮಜ್ಝಿಮನಿಕಾಯದಲ್ಲಿ ಮಧ್ಯಮ ಆಕಾರದ ಸಂವಾದಗಳಿವೆ. ಸಂಯುಕ್ತನಿಕಾಯದಲ್ಲಿ ಒಂದೇ ವಿಷಯದ ಮೇಲೆ ಬೇರೆ ಬೇರೆ ಶಿಷ್ಯರೊಡನೆ ಮಾಡಲ್ಪಟ್ಟ ಸಂವಾದಗಳ ಸಂಗ್ರಹವಿರುವದು. ಅಂಗುತ್ತರ ನಿಕಾಯದಲ್ಲಿ ಬೌದ್ಧಧರ್ಮದ ಮಾನಸಶಾಸ್ತ್ರದ ಹಾಗೂ ನೀತಿಶಾಸ್ತ್ರದ ಸೂತ್ರಗಳ ಸಂವಾದವು ಬೇರೆ ಮಾಡಲ್ಪಟ್ಟಿದೆ. ಅಂಗುತ್ತರ ನಿಕಾಯವು ಎಲ್ಲ ನಿಕಾಯಗಳಲ್ಲಿ ದೊಡ್ಡದಿದೆ. ಖುದ್ದಕ ನಿಕಾಯದಲ್ಲಿ ಸಣ್ಣ-ಪುಟ್ಟ ಸಂವಾದಗಳ

---

** Oldenbergs Vinay Pitakam Vol: PX तथा तुलना – तानि पदव्यंजनाति साधुकं ठग्ग हेता सुत्ते ओतरेतव्वानिविनय मंदस्सेनव्वानि (नहापीरिनब्बनसुत)

ಸಮಾವೇಶವಾಗಿದೆ. ಇದರಲ್ಲಿ ೧೫ ಅಂತರ್ವಿಭಾಗಗಳು ಮಾಡಲ್ಪಟ್ಟಿವೆ. ಅವು ಯಾವವೆಂದರೆ-೧. ಖುದ್ದಕ ಪಾಠ, ೨. ಧಮ್ಮಪದ, ೩. ಉದಾನ, ೪. ಇತಿವುತ್ತಕ, ೫. ಸುತ್ತನಿಪಾತ, ೬. ವಿಮಾನ ವತ್ಥು ೭. ಪೇತವತ್ಥು, ೮. ಥೇರಗಾಥಾ, ೯. ಥೇರೀಗಾಥಾ, ೧೦. ಜಾತಕ ೧೧. ನಿದ್ದೇಶ, ೧೨. ಪಟಸಂಭಿದಾಮಗ್ಗ ೧೩. ಅವದಾನ, ೧೪. ಬುದ್ಧವಂಸ, ೧೫. ಚರಿಯಾಪಿಟಕ.

**ಖುದ್ದಕಪಾಠ -** ಈ ಚಿಕ್ಕಪುಸ್ತಕವು ಧರ್ಮದಲ್ಲಿ ಹೊಸದಾಗಿ ಸೇರಿದ ಜನರ ಸಲುವಾಗಿ ಇರುವದು. ಇದರಲ್ಲಿ ಮನುಷ್ಯ ದೇಹರಚನೆ, ಅಸ್ಥಿ, ಮಜ್ಜೆ, ಸ್ನಾಯು ಮೊದಲಾದ ೩೪ ವಿಷಯಗಳ ಮೇಲೆ, ಅಲ್ಪ-ಸ್ವಲ್ಪ ಚರ್ಚೆಯು ಮಾಡಲ್ಪಟ್ಟಿದೆ. ಪ್ರಾರಂಭದಲ್ಲಿ ಕೆಳಗೆ ಬರೆದ ದೀಕ್ಷಾಮಂತ್ರವು ಕೊಡಲ್ಪಟ್ಟಿದೆ.

"बुद्धं सरणं गच्छामि।"
"धम्मं सरणं गच्छामि।"
"संघं सरणं गच्छामि।"

***ದಮ್ಮಪದ -** ಈ ಗ್ರಂಥದಲ್ಲಿ ಧಾರ್ಮಿಕ, ಹಾಗು ನೈತಿಕ ವಿಷಯಗಳ ಮೇಲೆ ಪರಸ್ಪರ ಸಂಬಂಧವಿಲ್ಲದ ೪೨೩ ಶ್ಲೋಕಗಳ ಸಂಗ್ರಹವು ಮಾಡಲ್ಪಟ್ಟಿದೆ. ಈ ಎಲ್ಲ ಶ್ಲೋಕಗಳು ಬೌದ್ಧ ಧರ್ಮಾನುಸಾರವಾದ ನೀತಿ ಹಾಗು ಸಂಯಮದ ವಿಷಯವಾಗಿ ಇರುವವು. ಇವು ೨೬ ವಿಷಯ (ವಗ್ಗ)ಗಳಲ್ಲಿ ವಿಭಾಗಿಸಲ್ಪಟ್ಟಿರುವವು. ಪ್ರತಿಯೊಂದು ವಿಷಯದಲ್ಲಿ ಹತ್ತರಿಂದ ಇಪ್ಪತ್ತರ ವರೆಗೆ ಶ್ಲೋಕಗಳಿವೆ. ಇವುಗಳಲ್ಲಿಯ ಎಷ್ಟೋ ಶ್ಲೋಕಗಳು ಮಹಾಭಾರತ, ಮನುಸ್ಮೃತಿ ಮೊದಲಾದ ಗ್ರಂಥಗಳಲ್ಲಿ ದೃಷ್ಟಿಗೆ ಬೀಳುವವು. ಈ ಗ್ರಂಥಕ್ಕೆ ಒಂದು ಪ್ರಾಚೀನ ಟೀಕೆಯುಂಟು. ಇದರಲ್ಲಿ ಪ್ರತಿಯೊಂದು ಶ್ಲೋಕಕ್ಕೋಸುಗ ಒಂದೊಂದು ಘಟನೆಯು ಬರೆಯಲ್ಪಟ್ಟಿರುವದು. ಇಂತಹ ಶ್ಲೋಕಗಳನ್ನು ಯಾರು? ಎಂದು? ಮತ್ತು ಯಾವ ರೀತಿಯಿಂದ ಮಾಡಿದರು? ಎಂಬದನ್ನು ತೋರಿಸಲಿಕ್ಕೆ ಯತ್ನವು ಮಾಡಲ್ಪಟ್ಟಿದೆ. ಈ ಎಲ್ಲ ಘಟನೆಗಳು ಸರಳವಾದ ಪಾಲೀ ಭಾಷೆಯಲ್ಲಿ ಬಹು ರಮ್ಯವಾಗಿ ಬರೆಯಲ್ಪಟ್ಟಿದೆ. ಪ್ರಾಚೀನ ಕಾಲದಲ್ಲಿ ನಾಲಂದ, ವಿಕ್ರಮಶಿಲಾ ಮೊದಲಾದ ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನ ಮಾಡುವ ವಿದ್ಯಾರ್ಥಿವೃಂದವೂ, ಗಿರಿಕಂದರಗಳಲ್ಲಿಯೂ, ವಿಹಾರಗಳಲ್ಲಿಯೂ, ವಾಸಿಸುವ ಬೌದ್ಧ ಬಿಕ್ಷು-ಭಿಕ್ಷುಣಿಗಳೂ, ಸಾಂಸಾರಿಕರೂ ವಿರಕ್ತರೂ ಒಂದೇ ರೀತಿಯಿಂದ ಭಕ್ತಿಪೂರ್ವಕವಾಗಿ ಈ ಗ್ರಂಥವನ್ನು ಪಠಿಸುತ್ತಿದ್ದರು.

**ಉದಾನ -** ಸ್ವಯಂ ಬುದ್ಧ ಭಗವಂತನು ಯಾವದೊಂದು ದೃಶ್ಯವನ್ನು ಅಥವಾ ಯಾವದೊಂದು ಅದ್ಭುತ ವಸ್ತುವನ್ನು ನೋಡಿ ಒಮ್ಮಿಂದೊಮ್ಮೆ ಉಲ್ಹಸಿತನಾಗುತ್ತಿದ್ದನು. ಆ ಸಮಯದಲ್ಲಿ ಅವನ ಮುಖದಿಂದ ಒಂದಿಲ್ಲೊಂದು ಸರಸ ಹಾಗು ಕಾವ್ಯಮಯ ಶಬ್ದವು ಹೊರಬೀಳುತ್ತಿತ್ತು. ಇಂತಹ ವಚನಗಳಲ್ಲಿ ಬಹು ಆಶ್ಚರ್ಯಕರವಾದ ಧಾರ್ಮಿಕ ಭಾವವು ತೋರುತ್ತಿತ್ತು. ಅವನ ಶಿಷ್ಯರು ಆ ವಚನಗಳನ್ನು ಬರೆಯುತ್ತಿದ್ದರು. ಉದಾನದಲ್ಲಿ ಇಂತಹ ೮೨ ವಚನಗಳ ಸಂಗ್ರಹವು ಮಾಡಲ್ಪಟ್ಟಿದೆ.

**ಇತಿವುತ್ತಕ -** ಈ ಪುಸ್ತಕದಲ್ಲಿ ಸಹ ಬುದ್ಧನ ೧೨೦ ವಚನಗಳಿವೆ. ಇದರ ಪ್ರತಿಯೊಂದು ವಚನದ ಮೊದಲು "ಇತಿವುತ್ತಂ ಭಗವತಾ" ಅರ್ಥಾತ್ ಭಗವಂತನು ಹೇಳಿದನೆಂದು ಬರೆಯಲ್ಪಟ್ಟಿರುವದರಿಂದ ಇದಕ್ಕೆ "ಇತಿವುತ್ತಕ"ವೆಂದು ಹೆಸರು ಬಂದಿರುವದು. ಪ್ರೊಫೆಸರ್ ರೀಜ ಡೇವಿಡ್‌ಸನರವರು ಈ ಗ್ರಂಥವು ಕ್ರಿ.ಶ. ಪೂರ್ವದಲ್ಲಿ ೪೦೦ ವರ್ಷಗಳ ಮೊದಲಿನದೆಂದು ಹೇಳುವರು.*

---

* ಇಲ್ಲಿಂದ ಮುಂದಿನ ಪಠ್ಯ ಜಯಕರ್ನಾಟಕ ೪-೮ರಲ್ಲಿ ಪ್ರಕಟವಾಗಿದೆ.

**ಸುತ್ತನಿಪಾತ** - ಈ ಪುಸ್ತಕದಲ್ಲಿ ೭೦ ಛಂದೋಬದ್ಧ ಸೂತ್ರಗಳುಂಟು. ಅವು ೫ ವಿಭಾಗಗಳಾಗಿವೆ. ಮೊದಲಿನ ನಾಲ್ಕು ವಿಭಾಗಗಳಲ್ಲಿ ಚಿಕ್ಕ ಚಿಕ್ಕ ೫೪/೫೪ ಪದ್ಯಗಳಿವೆ. ಮತ್ತು ೫ನೇದು ಒಂದು ವಿಸ್ತೃತಕಾವ್ಯವು.

**ವಿಮಾನವತ್ಥು ಮತ್ತು ಪೇತವತ್ಥು** - ಇವುಗಳಲ್ಲಿ ಗರುಡ ಪುರಾಣದಂತೆ ಸ್ವರ್ಗ-ನರಕಗಳ ಹಾಗು ಪ್ರೇತ ಸಂಬಂಧದ ಸಂಗತಿಗಳು ಇರುವವು.

**ಥೇರಗಾಥಾ ಹಾಗು ಥೇರೀಗಾಥಾ** - ಥೇರ ಅರ್ಥಾತ್ ಸ್ಥವಿರ ಅಥವಾ ವೃದ್ಧಪುರುಷ ಮತ್ತು ಥೇರೀ ಅರ್ಥಾತ್ ಸ್ಥವಿರಾ-ವೃದ್ಧಸ್ತ್ರೀ. ಬೌದ್ಧಧರ್ಮದ ದೀಕ್ಷೆಯನ್ನು ತೆಗೆದುಕೊಂಡ ಸಾಧು-ಸಾಧ್ವಿನಿಯರಿಗೆ ಥೇರ ಅಥವಾ ಥೇರೀ ಎಂದು ಅನ್ನುತ್ತಿದ್ದರು. ಪ್ರಥಮ ಗ್ರಂಥದಲ್ಲಿ ಗೌತುಮ ಬುದ್ಧನ ಸಮಯದ ೨೬೪ ಪ್ರಮುಖ ಥೇರೋಗಳ ಹಾಗು ದ್ವಿತೀಯ ಗ್ರಂಥದಲ್ಲಿ ತತ್ಕಾಲೀನ ೭೩ ಥೇರೀ ಜನರ ಧಾರ್ಮಿಕ ಕವನ (ಕಾವ್ಯ)ಗಳಿವೆ. ಇವುಗಳ ಕೆಳಗೆ ಕೊಟ್ಟ ಟೀಕೆಯಲ್ಲಿ ಇವುಗಳ ಲೇಖಕರ ಜೀವನ ಕಥೆಯು ಕೊಡಲ್ಪಟ್ಟಿರುತ್ತದೆ. ಈ ಕಾವ್ಯಗಳಿಂದ ಬುದ್ಧಕಾಲೀನ ಸ್ತ್ರೀ-ಪುರುಷರ ದಿನಚರ್ಯವು ಚನ್ನಾಗಿ ದಿಗ್‌ದರ್ಶನವಾಗುವದು. ಆ ಸಮಯದ ಸ್ತ್ರೀಯರು ಎಷ್ಟು ಸ್ವತಂತ್ರತೆಯನ್ನು ಹೊಂದಿದ್ದರು; ಮತ್ತು ಅದನ್ನು ಅವರು ಹ್ಯಾಗೆ ಸದುಪಯೋಗ ಮಾಡಿಕೊಂಡರು ಎಂಬುದು ಅದರಲ್ಲಿ (ಥೇರೀಗಾಥಾದಲ್ಲಿ) ಸ್ಪಷ್ಟವಾಗಿ ಕಂಡುಬರುವದು. ಅಧಿಕಾಂಶ ಥೇರಿಗಳು ಧಾರ್ಮಿಕ ಹಾಗೂ ನೈತಿಕ ಶಿಕ್ಷಣದಲ್ಲಿ ಎಷ್ಟು ಮುಂದಾಗಿದ್ದರೋ, ಅಷ್ಟೇ ಮಾನಸಿಕ ಶಿಕ್ಷಣದಲ್ಲಿಯೂ ಮುಂದಾಗಿದ್ದರು. ಅವುಗಳ ಅಧಿಕಾಂಶ ಕಾವ್ಯವು ಉಚ್ಚಕೋಟಿಯ ಹಾಗು ಉನ್ನತ ಭಾವನೆಗಳ ಪರಿದರ್ಶಕವಾಗಿರುವದು. ಉದಾಹರಣಾರ್ಥವಾಗಿ ಇಲ್ಲಿ ಒಂದು ಕಥೆಯನ್ನು ಬರೆಯುತ್ತೇವೆ-

"ರಾಜಗೃಹದ ಅರಸನಾದ ಬಿಂಬಸಾರನ ಆಶ್ರಿತನಾದ ಒಬ್ಬ ವ್ಯಕ್ತಿಗೆ "ಸೋಮಾ" ಎಂಬ ಮಗಳಿದ್ದಳು. ಅವಳು ಬೌದ್ಧಧರ್ಮದ ಉಪದೇಶವನ್ನು ಕೇಳಿ, ಆ ಧರ್ಮದ ದೀಕ್ಷೆಯನ್ನು ಹೊಂದಿದಳು. ಅವಳು ತನ್ನ ವಿದ್ವತ್ತೆಯಿಂದಲೂ ಸದಾಚಾರದಿಂದಲೂ, ಸ್ವಲ್ಪಕಾಲದಲ್ಲಿಯೇ ಅರ್ಹತ್ ಪದವನ್ನು ಪಡೆದಳು. ಒಂದು ದಿನ ಅವಳು ಶ್ರಾವಸ್ತಿಯಲ್ಲಿ ಅಂಧವೆಂಬ ಉದ್ಯಾನದೊಳಗೆ ಒಂದು ವೃಕ್ಷದ ಕೆಳಗೆ ಕುಳಿತಿದ್ದಳು. ಆಗ ಮಾರ (ಕಾಮದೇವ)ನು ಅವಳ ಹತ್ತರ ಬಂದು ಅಂದದ್ದೇನಂದರೆ-

"यंतं इसीहि पत्तब्बं ठानं दुरमि संभवम्
न तं दूंगुलि पंञाय सक्कापप्पोनु मित्थिया॥"

ಅರ್ಥಾತ್-ಪುರುಷರಿಗೆ ಸಹ ದುರ್ಲಭವಾದ ಉಚ್ಚ ಪದವು ಎರಡು ಅಂಗುಲಿಗಳಿಂದ ಪರೀಕ್ಷಿಸುವದು ಯಾರ ನಿತ್ಯಕರ್ತವ್ಯವೋ ಅಂತಹ ಸ್ತ್ರೀಯರಿಗೆ ಪ್ರಾಪ್ತವಾಗುವದು ಹೇಗೆ?

ಇಲ್ಲಿ "ಎರಡು ಅಂಗುಲಗಳಿಂದ ಪರೀಕ್ಷಿಸುವದು" ಎಂಬುದರ ಭಾವಾರ್ಥವನ್ನು ಟೀಕಾಕಾರನು ಈ ರೀತಿಯಾಗಿ ಹೇಳಿರುವನು-ಸ್ತ್ರೀಯರು ಅಕ್ಕಿಯನ್ನು ಬೇಯಿಸುವ ಕೆಲಸವನ್ನು ೭ನೆಯ ವರ್ಷದಿಂದಲೇ ಪ್ರಾರಂಭಿಸುವರು. ಈ ದೀರ್ಘಕಾಲದ ಅಭ್ಯಾಸದಿಂದ ಸಹ ಅವರಿಗೆ ಅಕ್ಕಿಯು ಬೆಂದಿರುವದೋ? ಇಲ್ಲವೋ? ಎಂಬುವದು ತಿಳಿಯುವದಿಲ್ಲ. ಯಾಕಂದರೆ, ಎರಡು ಅಂಗುಲಿಗಳಿಂದ ಅವುಗಳನ್ನು ಹಿಚಕಿ ನೋಡಬೇಕಾಗುತ್ತದೆ. ಆದ್ದರಿಂದ ಇಂಥ ಮೂಢ ಸ್ತ್ರೀಜಾತಿಯ ಹೃದಯದಲ್ಲಿ ಧರ್ಮದ ಗೂಢತತ್ವಗಳು ನೆಲೆಗೊಳ್ಳುವದು ಅಶಕ್ಯವು.

ಈ ಶ್ಲೋಕವನ್ನು ಕೇಳಿ "ಸೋಮಾ" ಉತ್ತರಕೊಟ್ಟಿದ್ದೇನಂದರೆ-

---

* Buddhism Americans Lectures P. 71

"इत्यिभावोनो किंकयिराचेतहिसुसमहिते
जाणहि बत्तमानहि सम्मा बम्मं विपस्सतो

सव्वत्य विहतानन्दि तमोक्खन्धोपदालितो,
एवं जानाहि पापिम नि हती त्वमसि अन्तका"

ಅರ್ಥಾತ್-ನನ್ನ ಚಿತ್ತವು ಸ್ಥಿರವಾಗಲು ಅರ್ಹತಮಾರ್ಗದ ಜ್ಞಾನವನ್ನು ಪ್ರಾಪ್ತಿಮಾಡಿಕೊಂಡ ನನಗೆ ಸತ್ಯಧರ್ಮದ ಸಾಕ್ಷಾತ್ಕಾರವಾಯಿತು. ಆಮೇಲೆ ಸ್ತ್ರೀ ಸ್ವಭಾವವು ಏನು ಮಾಡುವದು? ಅತ ಏವ ಎಲೋ ಪಾಪಿಯಾದ ಮಾರನೇ, ಅಜ್ಞಾನವೆಂಬ ಅಂಧಕಾರವು ನಾಶವಾಗಲು ಸರ್ವಬಂಧನಗಳು ಬಿಡುಗಡೆ ಹೊಂದುವವೆಂದು ನೀನು ತಿಳಿದುಕೋ. ಇದಲ್ಲದೆ ನಿನ್ನ ಯುಕ್ತಿಯು ನಿಷ್ಫಲವಾಯಿತು. ಈ ರೀತಿಯ ಎಷ್ಟೋ ಆನಂದದಾಯಕ ಸಂಗತಿಗಳು ಇದರಲ್ಲಿ ಕೊಡಲ್ಪಟ್ಟಿವೆ.

**ಜಾತಕ ಕಥೆ -** ಜಾತಕ ಅಥವಾ ಜನ್ಮಸಂಬಂಧವಾದ ಈ ಗ್ರಂಥದಲ್ಲಿ ಗೌತಮಬುದ್ಧನ ಪೂರ್ವಜನ್ಮಗಳ ಸಂಬಂಧವನ್ನು ಕಾಯುವ ಸಂಗತಿಗಳ ಸಂಗ್ರಹವು ಮಾಡಲ್ಪಟ್ಟಿದೆ. ಈ ಕಥೆಗಳನ್ನು ಅವನು ತನ್ನ ಶಿಷ್ಯರಿಗೆ ಪ್ರಸಂಗಾನುಸಾರವಾಗಿ ಹೇಳಿರುವನೆಂದು ಕಂಡು ಬರುವದು.

ಈ ಕಥೆಗಳು ಬುದ್ಧನ ಸಮಯದಲ್ಲಿಯೂ, ಅವನ ಪಶ್ಚಾತ್ ಕಾಲದಲ್ಲಿಯೂ ಬಹು ಪ್ರಚಾರವಾಗಿದ್ದವು. ಸಾಂಚಿ, ಅಮರಾವತಿ ಮೊದಲಾದ ಸ್ಥಳಗಳಲ್ಲಿ ಆ ಕಥೆಗಳ ನಿದರ್ಶನದ ಚಿತ್ರಗಳು ದೊರೆಯುತ್ತವೆ. ಚೀನದ ಪ್ರಸಿದ್ಧ ಯಾತ್ರಿಕನಾದ "ಫಾಹಿಯಾನ"ನು ಇಂತಹ ೫೦೦ ಚಿತ್ರಗಳನ್ನು ನೋಡಿದ್ದನು. 'ಹು-ಎನ್-ಸಂಗ'ನು ಸಹ ತನ್ನ "ಭಾರತೀಯ ಪ್ರವಾಸ ವರ್ಣನೆ"ಯಲ್ಲಿ ಜಾತಕಕಥೆಗಳನ್ನು ೨-೩ ಸ್ಥಳಗಳಲ್ಲಿ ಉಲ್ಲೇಖಿಸಿರುವನು. ಇದರಿಂದ ಈ ಕಥೆಗಳು ಬಹು ಲೋಕಪ್ರಿಯವಾದವುಗಳೂ, ಸರಾಸರಿ ಎರಡು, ಎರಡೂವರೆ ಸಾವಿರವರ್ಷಗಳ ಮೊದಲಿನವೂ ಎಂದು ಗೊತ್ತಾಗುವದು.

ಈ ಕಥೆಗಳು ಬುದ್ಧನ ಪೂರ್ವಜನ್ಮಗಳ ಸಂಬಂಧವಾಗಿ ಇದ್ದರೂ, ಇವುಗಳಿಂದ ಅತ್ಯುತ್ತಮ ಧಾರ್ಮಿಕ ಹಾಗು ನೈತಿಕ ಗ್ರಂಥಗಳ ಆವಶ್ಯಕತೆಯು ಪೂರ್ತಿಯಾಗುವದು. ಧರ್ಮ ಮತ್ತು ನೀತಿಸಿದ್ಧಾಂತಗಳನ್ನು ಸೂತ್ರರೂಪದಿಂದ ಜನರ ಎದುರಿಗೆ ಇಡುವದಕ್ಕಿಂತ, ಕಥೆ-ಉಪಕಥೆಗಳ ರೂಪದಿಂದ ಇಡುವದು ಶ್ರೇಯಸ್ಕರವು. ಯಾಕಂದರೆ, ಈ ರೀತಿಯಿಂದ ಆ ಸಿದ್ಧಾಂತಗಳ ಪ್ರಭಾವವು ಬಹು ಪ್ರಬಲವಾಗಿ ಜನರನ್ನು ತನ್ನೆಡೆಗೆ ಆಕರ್ಷಿಸಿಕೊಳ್ಳುವದು. ಹಿತೋಪದೇಶ, ಪಂಚತಂತ್ರ, ಇಸೋಪನೀತಿ ಮೊದಲಾದ ಗ್ರಂಥಗಳು ಇದೇ ರೀತಿಯಲ್ಲಿ ರಚಿಸಲ್ಪಟ್ಟಿವೆ. ಅವುಗಳಲ್ಲಿ ಸಹ ಜಾತಕಕಥೆಗಳ ಛಾಯೆಯು ಕಂಡುಬರುತ್ತದೆ. 'ಚಾಸರ' 'ಹಿರೋಡೋಟಸ್' ಮೊದಲಾದ ಪಾಶ್ಚಾತ್ಯ ಗ್ರಂಥಕಾರರ ಗ್ರಂಥಗಳಲ್ಲಿ ಸಹ ಎಷ್ಟೋ ಜಾತಕ ಕಥೆಗಳು ಯಥಾಸ್ಥಿತವಾಗಿ ಉದ್ಧೃತವಾದದ್ದು ಕಂಡುಬರುತ್ತದೆ. ರಾಮಾಯಣ-ಮಹಾಭಾರತಗಳ ಎಷ್ಟೋ ಕಥೆಗಳು ಜಾತಕ ಕಥೆಗಳೊಡನೆ ಮಿಲಿತವಾಗುತ್ತವೆ. ಉದಾ-ದಶರಥಜಾತಕ ಕತ್ಥಹಾರಿಜಾತಕ ಮೊದಲಾದವು. ಜಾತಕ ಕಥೆಗಳು ೫೦೦ಕ್ಕಿಂತ ಹೆಚ್ಚಾಗಿವೆ.

**ನಿದ್ದೇಶ (ನಿರ್ದೇಶ) -** ಇದು ಸುತ್ತನಿಪಾತ ಗ್ರಂಥದ ಉತ್ತರಾರ್ಧದ ಟೀಕಾಮಾತ್ರವಾಗಿದೆ. ಇದರ ಲೇಖಕನು, ಸಾರೀಪುತ್ತನೆಂಬ ಬುದ್ಧನ ಪಟ್ಟಶಿಷ್ಯನೆಂದು ಗೊತ್ತಾಗಿದೆ.

**ಪಟಿಸಂಭಿದಾಮಗ್ಗ (ಪ್ರತಿಸಂಬೋಧಮಾರ್ಗ) -** ಇದರಲ್ಲಿ ಬೌದ್ಧ ಅರ್ಹತರ ದಿವ್ಯ ದೃಷ್ಟಿಯ ವಿಷಯವಾಗಿ ಬರೆಯಲ್ಪಟ್ಟಿದೆ.

**ಅವದಾನ -** ಇದರಲ್ಲಿ ಅರ್ಹತರ ಚರಿತ್ರೆಯು ಕೊಡಲ್ಪಟ್ಟಿರುವದು.

**ಬುದ್ಧವಂಸ -** ಇದರಲ್ಲಿ ಗೌತಮಬುದ್ಧ ಮತ್ತು ಇವನಿಗಿಂತ ಪೂರ್ವದಲ್ಲಿ ಆದ ೨೪ ಬುದ್ಧರ ಚರಿತ್ರೆಯು ಕೊಡಲ್ಪಟ್ಟಿದೆ.

**೧ ಚರಿಯಾಪಿಟಕ -** ಇದರಲ್ಲಿ ಗೌತಮಬುದ್ಧನ ೩೪ ಪೂರ್ವಜನ್ಮಗಳ ವರ್ಣನೆಯು ಕೊಡಲ್ಪಟ್ಟಿರುತ್ತದೆ. ಈ ಗ್ರಂಥವು ಅಪೂರ್ಣವಿರುವದು.

**೨ ವಿನಯಪಿಟಕ :** ಈ ಗ್ರಂಥಸಮೂಹದಲ್ಲಿ ಭಿಕ್ಷುಗಳು ಪಾಲಿಸಲು ಯೋಗ್ಯವಾದ ನಿಯಮಗಳ ಸಂಗ್ರಹವು ಮಾಡಲ್ಪಟ್ಟಿದೆ. ಇದರಲ್ಲಿ ಈ ೫ ಗ್ರಂಥಗಳು ಸಮಾವಿಷ್ಟವಾಗಿವೆ-೧. ಪಾರಾಜಿಕ, ೨. ಪಾಚಿತಿಯಾದಿ (ಈ ಎರಡು ಗ್ರಂಥಗಳು ಕೂಡಿ 'ಸುತ್ತವಿಭಂಗ'ವೆಂಬ ಭಾಗವಾಗಿದೆ. ಇದರಲ್ಲಿ ಪ್ರಾಯಶ್ಚಿತ್ತದ ನಿಯಮಗಳುಂಟು.)೩. ಮಹಾವಗ್ಗ ೪. ಚುಲ್ಲವಗ್ಗ (ಕ್ಷುದ್ರವರ್ಗ) (ಈ ಎರಡು ಗ್ರಂಥಗಳು ಕೂಡಿ ಸ್ಕಂಧಕವೆಂಬ ವಿಭಾಗವಾಗಿದೆ.) ೫. ಪರಿವಾರ ಪಾದ (ಪರಿಶಿಷ್ಟ). ಇವುಗಳ ತರುವಾಯ 'ಭಿಕ್ಷು-ಭಿಕ್ಖುಣೀ ಪಾತಿಮೋಕ್ಖ' (ಭಿಕ್ಷು ಭಿಕ್ಷುಣೀ ಪ್ರತಿಮೋಕ್ಷ)ವೆಂಬ ಗ್ರಂಥದಲ್ಲಿ ಬೌದ್ಧ ಸಾಧು-ಸಾಧ್ವಿಯರ ದೋಷವರ್ಣನೆಯೂ, ಅವುಗಳ ಪ್ರಾಯಶ್ಚಿತ್ತದ ವಿಷಯವೂ ಬರೆಯಲ್ಪಟ್ಟಿದೆ. ಆದರೂ 'ಸುತ್ತವಿಭಂಗ'ವೇ ಈ ವಿಷಯದಲ್ಲಿ ಹೆಚ್ಚು ಪ್ರಾಮಾಣಿಕವೆಂದು ತಿಳಿಯಲ್ಪಡುವದು.

**೩. ಅಭಿಧಮ್ಮಪಿಟಕ:** ಈ ಗ್ರಂಥಸಮೂಹದಲ್ಲಿ ಬೌದ್ಧತತ್ವಜ್ಞಾನದ ವಿವೇಚನೆಯುಂಟು. ಇದರ ಅಂತರ್ಗತವಾಗಿ ೭ ಚಿಕ್ಕ ಚಿಕ್ಕ ಪುಸ್ತಕಗಳಿರುವವು. ಅವು ಯಾವವೆಂದರೆ :-೧. ಧಮ್ಮಸಂಗಣಿ, ೨. ವಿಭಂಗ, ೩. ಧಾತುಕಥಾ, ೪. ಪುಗ್ಗಲ ಪಜ್ಞತಿ ೫. ಕಥಾವತ್ಥು ೬.ಯಮಕ, ೭. ಪಠ್ಠಾನ. ಬೌದ್ಧಗ್ರಂಥಗಳಲ್ಲೆಲ್ಲ ಈ ಗ್ರಂಥಗಳು. ಕಠಿಣವಾದವುಗಳೂ, ನೀರಸವಾದವುಗಳು ಆಗಿರುವವು.

ಇವುಗಳ ಹೊರತು ಪಾಲೀ ಭಾಷೆಯಲ್ಲಿ ಎಷ್ಟೋ ಚಿಕ್ಕ ಪುಟ್ಟ ಗ್ರಂಥಗಳಿವೆ. ಇವುಗಳಲ್ಲಿ ಮುಖ್ಯವಾದವುಗಳನ್ನು ಕೆಳಗೆ ಬರೆಯುತ್ತೇವೆ:

**ಮಹಾಪರಿ ನಿಬ್ಬಾನಸುತ್ತ (ಮಹಾಪರಿ ನಿರ್ವಾಸೂತ್ರ) -** ಇದರಲ್ಲಿ ಗೌತಮಬುದ್ಧನ ಕಡೆಯ ಮೂರು ತಿಂಗಳಿನ ದಿನಚರ್ಯವು ಕೊಡಲ್ಪಟ್ಟಿದೆ. ಇದರಿಂದ ಬೌದ್ಧಧರ್ಮದ ಮುಖ್ಯ ತತ್ವ, ತತ್ಕಾಲೀನ ಆಚಾರ ವಿಚಾರ, ಸಮಾಜ ನೀತಿ, ರಾಜಕೀಯ ಸ್ಥಿತಿ ಮೊದಲಾದವುಗಳ ಜ್ಞಾನ ಪ್ರಾಪ್ತಿಯಾಗುತ್ತದೆ.

**ಮಿಲಿಂದಪಣ್ಹಜ್ಝೋ (ಮಿಲಿಂದ ಪ್ರಶ್ನ) -** ಈ ಗ್ರಂಥದಲ್ಲಿ ಬಾಕ್ಟ್ರಿಯಾದ ರಾಜನಾದ ಮಿಲಿಂದ (menander) ಮತ್ತು ಬೌದ್ಧಸನ್ಯಾಸಿಯಾದ ನಾಗಸೇನರ ಧರ್ಮವಿಷಯಕ ಸಂವಾದವಿರುವದು. ಈ ಸಂವಾದವು ಜ್ಞಾನದಾಯಕವೂ, ಆನಂದದಾಯಕವೂ ಆಗಿರುವದು. ಈ ಗ್ರಂಥವು ಕ್ರಿ.ಶ. ಪೂರ್ವದಲ್ಲಿ ೨೦೦ ವರ್ಷಗಳ ಮೊದಲು ರಚಿತವಾಗಿರಬಹುದೆಂದು ಪಂಡಿತರ ಮತವದೆ.

**ದೀಪವಂಸ ಮತ್ತು ಮಹಾವಂಸ -** ಸಿಂಹಲದ್ವೀಪದ ಈ ಎರಡು ಪ್ರಸಿದ್ಧ ಗ್ರಂಥಗಳು ಕ್ರಿ.ಶ. ೪ನೆಯ ಅಥವಾ ೫ನೆಯ ಶತಕದಲ್ಲಿ ಬರೆಯಲ್ಪಟ್ಟಿರಬಹುದು. ಇವುಗಳಲ್ಲಿ ಸಿಲೋನದ ಇತಿಹಾಸವದೆ. 'ಮಹಾವಂಸ'ವೆಂಬ ಗ್ರಂಥವನ್ನು 'ಮಹಾನಾಮ' ಎಂಬ ಸಿಂಹಲೀ ಪಂಡಿತನು ಬರೆದಿರುವನು. ಇದರಲ್ಲಿ ೧೦೦ ಅಧ್ಯಾಯಗಳುಂಟು. ಇದರ ೩೭ನೆಯ ಅಧ್ಯಾಯದಲ್ಲಿ 'ಬುದ್ಧಘೋಷ'ನ ಚರಿತ್ರವದೆ. ಈ ಬುದ್ಧಘೋಷನಿಂದ

ಬರೆಯಲ್ಪಟ್ಟ 'ವಿಸುದ್ಧಿಮಗ್ಗ'ಎಂಬ ಗ್ರಂಥವು, ಸಾಹಿತ್ಯದರ್ಶನ, ವಿಜ್ಞಾನ, ಇತಿಹಾಸ ಮೊದಲಾದವುಗಳ ಅಪೂರ್ವ ಭಂಡಾರವಾಗಿದೆ. "ಮಹಾನಾಮ" ಪಂಡಿತನು ಬುದ್ಧಘೋಷನು ಸಮಕಾಲೀನನಿದ್ದುದರಿಂದ ಅವನಿಂದ ಬರೆಯಲ್ಪಟ್ಟ ಬುದ್ಧಘೋಷನ ಚರಿತ್ರೆಯು ವಿಶ್ವಸನೀಯವೆಂದು ತಿಳಿಯಲ್ಪಡುವದು.

ಲಲಿತವಿಸ್ತರ, ಬುದ್ಧಚರಿತ, ಸದ್ಧರ್ಮಪುಂಡರೀಕ ಮೊದಲಾದ ಎಷ್ಟೋ ಗ್ರಂಥಗಳು ಚೀನೀ, ತಿಬೇಟೀ ಭಾಷೆಗಳಿಗೆ ಭಾಷಾಂತರಿಸಲ್ಪಟ್ಟಿವೆ.

**ಅನ್ಯಭಾಷೆಗಳಲ್ಲಿರು ಬೌದ್ಧಸಾಹಿತ್ಯ:**

ಮೇಲೆ ಬರೆದ ಗ್ರಂಥಗಳ ಆಧಾರದ ಮೇಲೆ ಚೀನೀ, ತಿಬೇಟೀ ಭಾಷೆಗಳಲ್ಲಿ ನವೀನ ಗ್ರಂಥಗಳು ರಚಿತವಾಗಿವೆ. ಇಂತಹ ಒಂದು ಗ್ರಂಥವನ್ನು "ರತ್ನಧರ್ಮರಾಜ"ನೆಂಬ ಬೌದ್ಧ ಭಿಕ್ಷುವು ತಿಬ್ಬತೀ ಭಾಷೆಯಲ್ಲಿ ಬರೆದಿರುವನು.ಈ ರೀತಿಯಿಂದ ಬರೆದ ಬೇರೆ ಎಷ್ಟೋ ಗ್ರಂಥಗಳಿರುವವು. ಕ್ಯಾಂಗ-ರ ಎಂಬ ತಿಬ್ಬತೀ ಗ್ರಂಥಸಂಗ್ರಹದಲ್ಲಿ "ಗ-ಭೇದರೋಲ್ಪ" ಎಂಬ ಬೌದ್ಧ ಗ್ರಂಥವದೆ. ಅದು ಇಂದಿಗೂ ಅಪ್ರಕಾಶಿತವಾಗಿರುವದು. ಪ್ರೊಫೆಸರ್ ರೀಜ ಡೇವಿಡ್‌ಸನ್‌ರವರು ಸಂಸ್ಕೃತದ ಮಹಾಭಿನಿಷ್ಕ್ರಮಣಸೂತ್ರ ಎಂಬ ಗ್ರಂಥದ ಚೀನೀ ಅನುವಾದವು ಕ್ರಿ.ಶ. ೭ನೆಯ ಶತಕದಲ್ಲಿ ಆಗಿರುವದೆಂದು ಹೇಳುವರು. ಇದರ ಹೊರತು ಲಲಿತವಿಸ್ತರದ ನಾಲ್ಕು ಅನುವಾದಗಳು ಚೀನೀ ಭಾಷೆಯಲ್ಲಿ ಆಗಿವೆ. ಅಂತಿಮ ಅನುವಾದವು "ಹಾನ" ವಂಶದ ರಾಜನ ಆಶ್ರಯದಲ್ಲಿ ಕ್ರಿ.ಶ. ೩ನೆಯ ಶತಮಾನದಲ್ಲಿ ಆಗಿರುವದು. ಅಶ್ವಘೋಷನ ಬುದ್ಧಚರಿತದ ಚೀನೀ ಅನುವಾದವನ್ನು "ಧರ್ಮರಕ್ಷಕ"ನೆಂಬ ಬೌದ್ಧಪಂಡಿತನು ಕ್ರಿ.ಶ.೫ನೆಯ ಶತಮಾನದಲ್ಲಿ ಮಾಡಿದನು. ಇದೇ ಸಮಯದಲ್ಲಿ "ಲಂಕಾವತಾರ ಸೂತ್ರ"ದ ಚೀನೀ ಅನುವಾದವನ್ನು 'ಸುಂಗ' ವಂಶೀಯ ರಾಜನ ಆಶ್ರಯದಲ್ಲಿ ಗುಣಭದ್ರನೆಂಬ ಪಂಡಿತನು ಮಾಡಿದನು. ಮಹಾಪರಿನಿಬ್ಬಾನ ಸುತ್ತ, ಜಾತಕನಿದಾನ, ಮಹಾವಂಸ ಮೊದಲಾದ ಗ್ರಂಥಗಳ ಅನುವಾದಗಳು ಸಹ ಚೀನೀಭಾಷೆಯಲ್ಲಿ ಆಗಿವೆ. 'ವಜ್ರಚ್ಛೇದಿಕಾ' ಎಂಬ ಗ್ರಂಥವು ಜಪಾನೀ ಬೌದ್ಧರಿಗೆ ಪರಮಪೂಜ್ಯಗ್ರಂಥವಾಗಿದೆ. ಬರ್ಮಾದಲ್ಲಿ 'ಮಲ್ಲಂಗವತ್ತು' ಎಂಬ ಗ್ರಂಥವು ಬಹು ಪ್ರಸಿದ್ಧವಾಗಿದೆ. ಇದು ನಿಜವಾಗಿ ಒಂದು ಪಾಲೀಗ್ರಂಥದ ಅನುವಾದವು. ಇದರಲ್ಲಿ ವರ್ಣಿತವಾದ ಬುದ್ಧಚರಿತ್ರವು ಜಾತಕಕಥೆಗಳಲ್ಲಿ ವರ್ಣಿತವಾದ ಚರಿತ್ರದೊಡನೆ ಹೋಲುವದು. ಇವುಗಳ ಹೊರತು ಎಷ್ಟೋ ಸಂಸ್ಕೃತ ಹಾಗು ಪಾಲೀಭಾಷೆಗಳ ಗ್ರಂಥಗಳ ಅನುವಾದಗಳು ಆಗಿವೆ.

❖❖

# ಅಪ್ರಕಟಿತ ಸಾಹಿತ್ಯ

## ೧೬

# ಶಿವಲಿಂಗ ರಹಸ್ಯ

**ಬ್ರಹ್ಮಲಿಂಗ :**

ನಿರ್ಗುಣ-ನಿರಾಕಾರ-ಅನಂತ-ದುರ್ಜ್ಞೇಯ-ಅಲಕ್ಷ್ಯ-ಪರಬ್ರಹ್ಮವು ಯಾವುದರ ಸಹಾಯದಿಂದ ಉಪಾಸಕರಿಗೆ, ಜ್ಞೇಯ, ಲಕ್ಷ್ಯ, ಪ್ರತ್ಯಕ್ಷೀಭೂತ ಆಗುವದೋ ಅದಕ್ಕೆ ಬ್ರಹ್ಮಲಿಂಗರೂಪದಿಂದ ಪರಿಗೃಹೀತವಾಗಿರುತ್ತದೆ. ಲಿಂಗತೇ, ಲಕ್ಷ್ಯತೇ, ನಿರ್ದಿಶ್ಯತೇ ಅನೇನ ಇತಿ ಲಿಂಗಮ್ - ಎಂದು ವಚನವಿದೆ. ಮತ್ತು, ಲಿಂಗತೇ ಸಾಮ್ಯತೇ ಜ್ಞಾಯತೇ ಅನೇನ ಇತಿ ವೈಯಾಕರಣೀ ವ್ಯುತ್ಪತ್ತಿಃ. ಲಿಂಗ ಮತ್ತು ಪ್ರತೀಕ ಏಕಾರ್ಥ ಬೋಧಕ. ಕ್ಷೀಣದೃಷ್ಟಿ ವ್ಯಕ್ತಿಯು ಕನ್ನಡಕದ ಸಹಾಯದಿಂದ ಅಸ್ಪಷ್ಟ ವರ್ಣಮಾಲೆಯನ್ನು ಓದಲು ಸಮರ್ಥನಾಗುವನು. ಅಜ್ಞಾನ ತಿಮಿರಾಂಧವ್ಯಕ್ತಿಯೂ ಲಿಂಗ ಅರ್ಥಾತ್ ಪ್ರತೀಕ ಮಾಧ್ಯಮದಿಂದ ಅತೀಂದ್ರಿಯ ಪರಬ್ರಹ್ಮದ ರಹಸ್ಯವನ್ನು ತಿಳಿಯಲು ಸಮರ್ಥನು.

**ವಿಷ್ಣುಲಿಂಗ ಮತ್ತು ಶಿವಲಿಂಗ :**

ಶಾಸ್ತ್ರದಲ್ಲಿ ಮುಖ್ಯವಾಗಿ ಎರಡು ಲಿಂಗಗಳು: ವಿಷ್ಣುಲಿಂಗ ಮತ್ತು ಶಿವಲಿಂಗ ಎಂದು ಹೆಸರನ್ನು ಪಡೆದಿರುತ್ತವೆ. ವಿಷ್ಣುಲಿಂಗವು ಶಾಲಗ್ರಾಮ ಶಿಲಾ ಹೆಸರಿನಿಂದ ಹೆಚ್ಚು ಪರಿಚಿತವು. ಬ್ರಹ್ಮನ ಯಾವ ಲಿಂಗದ ಅಸ್ತಿತ್ವವು ಇರುವುದೆಂಬುವದು ನಮಗೆ ಗೊತ್ತಿಲ್ಲ.

ವಾಚಕರು ಇಷ್ಟರಲ್ಲಿ ನೀರಸ ಶಾಸ್ತ್ರವಾಕ್ಯಗಳನ್ನು ಕೇಳಿ ಬೇಸರಗೊಂಡಿರುವರು. ಅಂತೇ ಅವರ ಮನೋರಂಜನೆಗೋಸುಗ ಈಗ ಲಿಂಗಘಟಿತ ಕೆಲವು ಸರಸ ರಹಸ್ಯಮಯ ಪ್ರಸಂಗಗಳ ವರ್ಣನೆಯನ್ನು ಮಾಡುವೆವು.

**ಅಮರನಾಥ-ತೀರ್ಥ:**

ಭೂ-ಸ್ವರ್ಗ ಕಾಶ್ಮೀರದ ಮನೋರಮ ಪ್ರಾಕೃತಿಕ ಪರಿವೇಶದಲ್ಲಿ, ಅತಿ ದುರ್ಗಮ ಪರ್ವತ ಪ್ರದೇಶದಲ್ಲಿ ಅಮರನಾಥ ತೀರ್ಥವು. ಅಲ್ಲಿಗೆ ಹೋಗಿ ಬರುವ ಮಾರ್ಗವು ಅತ್ಯಂತ ವಿಷದ ಸಂಕುಲವು. ಪ್ರತಿವರ್ಷ ಈ ಮಾರ್ಗದಲ್ಲಿ ಹಲವು ಯಾತ್ರಿಗಳು ಪ್ರಾಣವನ್ನು ಕಳೆದುಕೊಳ್ಳುವರು. ಆದರೂ ಇದರ ಬಹುವಿಶ್ರುತ, ಅದ್ಭುತ ತತ್ತ್ವದ ಕತೆಯನ್ನು ಕೇಳಿ ಅದನ್ನು ಪ್ರತ್ಯಕ್ಷ ಕಂಡು ಕೃತಾರ್ಥರಾಗಲು ಅಗಣಿತ ನರ-ನಾರಿಯರು ಅಲ್ಲಿಗೆ ಹೋಗುವರು.

**ತುಷಾರಲಿಂಗ, ಸ್ವಯಂಭುಲಿಂಗ, ಪೌನಃಪುನಿಕಲಿಂಗ :**

ಅಲ್ಲಿ ಒಂದೇ ಲಿಂಗಗುಹೆಯಲ್ಲಿ ಶಿವನ ಜ್ಯೋತಿರ್ಮಯ ತುಷಾರಮೂರ್ತಿ, ಅದರ ಪೂರ್ವಕ್ಕೆ ಗಣೇಶಮೂರ್ತಿ ಮತ್ತು ಪಶ್ಚಿಮದಲ್ಲಿ ಪಾರ್ವತಿಯ ಯಂತ್ರಮೂರ್ತಿ. ಈ ಮೂರ್ತಿಗಳ ಬರ್ಫವು ಕರಗಿ-ಕರಗಿ ಅಮಾವಾಸ್ಯೆಯಲ್ಲಿ ಶೇಷವಾಗಿ ಹೋಗುತ್ತದೆ, ಆಗ ಎಲ್ಲವೂ ನಿರಾಕಾರವು. ಶುಕ್ಲ ಪ್ರತಿಪದ ತಿಥಿಯಿಂದ ಪ್ರತಿದಿನ ಅಲ್ಪ ಸ್ವಲ್ಪ ಬರ್ಫವು ಕೂಡಿ ಮೂರ್ತಿಗಳು ಪುನಃ ತಯಾರಾಗುತ್ತವೆ. ಮತ್ತು ಪೌರ್ಣಿಮೆಯಲ್ಲಿ ಪೂರ್ಣಚಂದ್ರನಂತೆ ಇವುಗಳು ಪೂರ್ಣ ಆಕಾರವನ್ನು ಗ್ರಹಣ ಮಾಡುವವು. ಕೃಷ್ಣಪ್ರತಿಪದ ತಿಥಿಯಿಂದ ಸ್ವಲ್ಪ-ಸ್ವಲ್ಪ ಬರ್ಫವು ಕರಗಿ ಕ್ಷೀಯಮಾನ ಚಂದ್ರನಂತೆ ಮೂರ್ತಿಗಳು ಕ್ಷಯಿಸುತ್ತಾ ಹೋಗುವವು. ಕಡೆಗೆ ಅಮವಾಸ್ಯೆಯಲ್ಲಿ ಅದೃಶ್ಯವಾಗಿ ಹೋಗುವದು. ಈ ರೀತಿಯಿಂದ ಪ್ರತಿಮಾಸದ ಪೂರ್ಣಿಮೆಯ ಪೂರ್ಣ ಆವಿರ್ಭಾವ ಮತ್ತು ಅಮಾವಾಸ್ಯೆಯಲ್ಲಿ ಪೂರ್ಣ ತಿರೋಭಾವವಾಗುವದು. ಈ ಲೀಲಾವಿಲಾಸವು ಚಿರಕಾಲದಿಂದ ನಡೆದಿರುತ್ತದೆ. ಸ್ವಯಂ ರಚಿತವಾಗುವದೆಂದು ಈ ಲಿಂಗಮೂರ್ತಿ ಸ್ವಯಂಭುಲಿಂಗದ ಪರ್ಯಾಯಭುಕ್ತವು. ನಿತ್ಯ ಮತ್ತು ನಿಯತ ಪರಿವರ್ತನಶೀಲವೆಂದು ಇದಕ್ಕೆ ಪೌನಃಪುನಿಕಲಿಂಗ (recurring) ಅನ್ನುತ್ತಾರೆ. ಇದು ಪೃಥ್ವಿಯಲ್ಲಿಯ ಒಂದು ಅತ್ಯಾಶ್ಚರ್ಯ ದೃಶ್ಯವು. ವಿಜ್ಞಾನದಲ್ಲಿ ಇದರ ವ್ಯಾಖ್ಯೆಯು ದೊರೆಯುವದಿಲ್ಲ. ಈ ಲಿಂಗವು ನಿತ್ಯವು ಸ್ವಯಂಭು ಮತ್ತು ಪೌನಃಪುನಿಕವು.

**ಸ್ವಾಮಿ-ವಿವೇಕಾನಂದ:**

ಈ ತುಷಾರಲಿಂಗ ಸ್ಪರ್ಶದಿಂದ ವಿಶ್ವ-ವಿಶ್ರುತ ಆಚಾರ್ಯ ವಿವೇಕಾನಂದರು ಅತ್ಯಂತ ವಿಹ್ವಲರೂ ಪ್ರಾಯಃ ಸಂಜ್ಞಾಶೂನ್ಯರೂ ಆಗಿದ್ದರು; ಆ ಕ್ಷಣದಲ್ಲಿಯೇ ಅವರನ್ನು ಹೊರಗೆ ತಂದು ಡಾಕ್ಟರರಿಂದ ಪರೀಕ್ಷೆಯ ವ್ಯವಸ್ಥೆಯು ಮಾಡಲ್ಪಟ್ಟಿತು. ಇಲ್ಲಿಯೇ ಅವರು ಅಮರನಾಥಲಿಂಗದಿಂದ ಸ್ವೇಚ್ಛಾಮೃತ್ಯುವನ್ನು ಪಡೆದಿದ್ದರು. ಅನಂತರ ಅದಕ್ಕನುಸಾರವಾಗಿ ಅವರು ಪಂಚಾಂಗವನ್ನು ನೋಡಿ ೧೯೦೨, ವರ್ಷದ ೨ನೆಯ ಜುಲೈಯಲ್ಲಿ ದೇಹರಕ್ಷಾ ಮಾಡುವ ಸಂಕಲ್ಪವನ್ನು ಮಾಡಿದರು ಮತ್ತು ಕಾರ್ಯತಃ ಅದೇ ಸಂಭವಿಸಿತು.

**ವಿಷ್ಣುಲಿಂಗ ಶಾಲಗ್ರಾಮ:**

ಈಗ ವಿಷ್ಣುಲಿಂಗ ಶಾಲಗ್ರಾಮದ ಅದ್ಭುತ ಸೃಷ್ಟಿರಹಸ್ಯವನ್ನು ವರ್ಣಿಸುವೆವು. ಅಂಗಹೀನ, ವಿಕೃತ, ಕ್ಷತಯುಕ್ತ, ಪ್ರತೀಕ-ವಿಗ್ರಹ-ಪ್ರತಿಮಾದಿಗಳ ಪೂಜೆಯಾಗುವದಿಲ್ಲ. ಇವುಗಳು ಪರಿತ್ಯಕ್ತವೂ ಜಲದಲ್ಲಿ ವಿಸರ್ಜಿತವೂ ಆಗುವದೆಂದು ಎಲ್ಲರೂ ಬಲ್ಲರು. ಆದರೆ ಇದಕ್ಕೆ ವಿರುದ್ಧವಾಗಿ 'ಶಾಲಗ್ರಾಮ'ದ, ರೀತಿ ಇರುವದು.

**ಅದ್ಭುತ ಕರ್ಮಿಯಾದ ವಜ್ರಕೀಟವು:**

ವಜ್ರಕೀಟವೆಂಬ ಒಂದು ಬಗೆಯ ತೀಕ್ಷ್ಣ ದಂಷ್ಟ್ರ (ಹದನವಾದ ದವಡೆಹಲ್ಲು), ದೀರ್ಘಜಿಹ್ವೆ (ಉದ್ದನಾಲಗೆ)ಯ ಭೀಷಣವಾದ ಹಿಂಸ್ರ ಹುಳವಿರುವದು. ವಜ್ರಕೀಟವು ತನ್ನ ಹಲ್ಲುಗಳಿಂದ ಬಹು ಬಿರುಸಾದ ಕಲ್ಲನ್ನು ಕಡಿದು ಅದರಲ್ಲಿಯ ಕೆಲ ಭಾಗವನ್ನು ತಿನ್ನುವದು ಮತ್ತು ಅಲ್ಲಿ ಕೆದರಿ ರಚನೆ ಮಾಡುವದು. ಅದರ ಹೊರಮೈಯನ್ನು ಕೆದರಿ ಅಲ್ಲಿ ಅಸಂಖ್ಯೆ ಚಿಕ್ಕ ಮತ್ತು ರೇಖಾಚಿಹ್ನಗಳನ್ನು ಮಾಡುವದು. ಈ ಕೀಟ ದಂಷ್ಟ್ರ ಉಚ್ಛಿಷ್ಟ, ಕ್ಷತಯುಕ್ತ ಛಿದ್ರಮಯವಾದ ಶಿಲಾಪಿಂಡವೇ 'ಶಾಲಗ್ರಾಮ' ಹೆಸರಿನಿಂದ ಜಗತ್ ವಿಖ್ಯಾತವಾಗಿದೆ. ತುಚ್ಛ-ಕ್ಷುದ್ರ ಶಿಲಾಪಿಂಡವನ್ನು ಎಲ್ಲರೂ ಉಪೇಕ್ಷಿಸುವರು. ಲೀಲಾಮಯ ವಿಷ್ಣುವಿನ ಲೀಲಾವಿಲಾಸವನ್ನು ಯಾರು ಬಲ್ಲರು. ಈ ಕ್ಷಾತ-ವಿಕ್ಷತ, ವಿಕೃತ, ಉಚ್ಛಿಷ್ಟ ಶಿಲಾಪಿಂಡಕ್ಕೆ ಮಹಾಮಾನ್ಯ ಶಾಲಿಗ್ರಾಮದ ಮರ್ಯಾದೆಯನ್ನು ಕೊಟ್ಟು, ಅವನು ಅದರಲ್ಲಿ ಸತತ ವಿರಾಜಮಾನನಾಗಿರುತ್ತಾನೆ. ದ್ವಾಪರಯುಗದ

ನರಲೀಲೆಯಲ್ಲಿ ಕೃಷ್ಣರೂಪದಿಂದ ಅವನು ಕಂಸನ ಕುತ್ಸಿತ-ದರ್ಶನಾ ಪರಿಚಾರಿಕೆ ಕುಬ್ಜಳನ್ನು ಮಹಿಷೀರೂಪದಿಂದ ಗ್ರಹಣ ಮಾಡಿದ್ದನು. ಅವನು ಉತ್ಪೀಡಿತ ಮತ್ತು ಉಪೇಕ್ಷಿತರ ಭಗವಂತನು.

**ಆಕಾಶಲಿಂಗ:**

ಹೃಷಿಕೇಶನು ವಿಷ್ಣುಲಿಂಗದ ಅಪೂರ್ವ ಸೃಷ್ಟಿರಹಸ್ಯವನ್ನು ವಿವರಿಸಿದನು. ಸ್ಕಂದ ಪುರಾಣವು "ಆಕಾಶಂ ಲಿಂಗಮಿತ್ಯಾಹುಃ ಪೃಥಿವೀ ತಸ್ಯ ಪೀಠಿಕಾ " ಎಂದು ಹೇಳಿದೆ. ಆಕಾಶಕ್ಕೆ ಲಿಂಗವೆಂದೂ ಹೆಸರು. ಪೃಥ್ವಿಯು ಈ ಆಕಾಶಲಿಂಗದ ಪೀಠಿಕಾ ಅಂದರೆ ಆಸನವು. ಶಿವನು ಅಸೀಮನು ಮತ್ತು ನಿರಾಕಾರನು. ಅವನ ಲಿಂಗ ಅಥವಾ ಪ್ರತೀಕವು ಅದೇ ಆಕಾಶವು. ಇದೇ "ಯಸ್ಯಾಂ ಯೋಗ್ಯೇನ ಯುಜ್ಯತೇ".

ಮತ್ತು ಬಹು ಕ್ಷುದ್ರಪ್ರತೀಕಗಳು ಅಸೀಮದ ಸಸೀಮ ರೂಪವೆಂದು ಸಮಾದೃತವಾಗಿವೆ. ಉದಾ-ಶಾಲಗ್ರಾಮ ಮತ್ತು ಬಾಣಲಿಂಗಗಳು. ಎರಡೂ ಕ್ಷುದ್ರ ಶಿಲಾಪಿಂಡಗಳು ಮತ್ತು ಯಥಾಕ್ರಮದಿಂದ ಗಂಡಕೀ ಮತ್ತು ನರ್ಮದಾ ನದೀಗರ್ಭದಿಂದ ಸಂಗ್ರಹೀತವಾಗುವವು.

ವಿಷ್ಣುವು ಸಾಕಾರನು ಮತ್ತು ಅವನ ಹಲವು ವಿಗ್ರಹ-ಪ್ರತಿಮಾ-ಪ್ರತಿಮೂರ್ತಿ ಪ್ರಭೃತಿ ನಿರ್ಮಿತವಾಗಿರುತ್ತವೆ. ಸುತರಾಂ ಅವನನ್ನು ಉಪಲಬ್ಧಿ ಮಾಡಲಿಕ್ಕೆ ಲಿಂಗ ಅಥವಾ ಪ್ರತೀಕ ಗಳಿಗೆ ಅಷ್ಟು ಪ್ರಯೋಜನವಾಗುವದಿಲ್ಲ. ಅಂತೇ ವಿಷ್ಣುಲಿಂಗದ ಸಂಖ್ಯೆಯು ಅತ್ಯಲ್ಪ. ಶಿವನು ಅದೃಶ್ಯ ನಿರಾಕಾರನು; ಅದೃಶ್ಯ ನಿರಾಕಾರದಲ್ಲಿ ದೃಶ್ಯ ಪ್ರತಿಮೂರ್ತಿ ಆಗಲು ಶಕ್ಯವಾಗುವದಿಲ್ಲ. ಸೂತ ವಿರಾಟ ಭಾರತದಲ್ಲಿ ಎಲ್ಲಿಯೂ ಶಿವನ ವಿಗ್ರಹ ಪ್ರತಿಮಾ-ಪ್ರತಿಮೂರ್ತಿಗಳು ಕಂಡುಬರುವದಿಲ್ಲ. ನಿರಾಧಾರಣ ಪ್ರತಿಮೂರ್ತಿ, ಫೋಟೋ (Photo) ಇತ್ಯಾದಿ ಇರುತ್ತವೆ. ಅಂತೆಯೇ ಅಲಕ್ಷ್ಯ ನಿರಾಕಾರ ಶಿವನಿಗೆ ಲಿಂಗ ಅಥವಾ ಪ್ರತಿಮಾ ಮಾಧ್ಯಮದಲ್ಲಿ ಪೂಜೆ ಮಾಡಬೇಕಾಗುತ್ತದೆ. ಯಾಕೆಂದರೆ ಶಿವನ ಪೂಜೆ ಏಕಮಾತ್ರ ಲಿಂಗದ ಮಾಧ್ಯಮದಿಂದಲೇ ಕರಣೀಯವು. ಅದೇ ಕಾರಣದಿಂದ ವಿಭಿನ್ನರುಚಿ, ವಿಭಿನ್ನಪ್ರಕೃತಿ, ವಿಭಿನ್ನಪಂಥೀ ಉಪಾಸಕರ ಅನುಕೂಲತೆಗೋಸುಗ ಶಿವನ ಬಹುಸಂಖ್ಯಾಕ ಲಿಂಗಗಳ ವಿಧಾನವು ಶಾಸ್ತ್ರದಲ್ಲಿ ಇರುತ್ತದೆ. ಯಾರಿಗೆ ಹೇಗೆ ಪ್ರಯೋಜನವೋ ಅವರು ಅದೇ ರೂಪ ಲಿಂಗವನ್ನು ನಿರ್ವಾಚನ ಮಾಡಲು ಶಕ್ತರು. ಇದರಲ್ಲಿ ಯಾವ ಬಾಧೆ ನಿಷೇಧ ಇರುವದಿಲ್ಲ.

**ಪೀಠಿಕಾ, ಪೀಠ, ಪಿಡಿ:**

ಪದಾರ್ಥ ಮಾತ್ರಕ್ಕೂ ಆಧಾರ ಅಥವಾ ಆಸನವು ಪ್ರಯೋಜನವು. ಆಕಾಶಲಿಂಗದ ಆಸನರೂಪದಲ್ಲಿ ಪೃಥಿವಿಯು ನಿರ್ವಾಚಿತವಾಗಿರುತ್ತದೆ. ಸ್ಕಂದಪುರಾಣವು 'ಪೃಥಿವೀ ತಸ್ಯ ಪೀಠಿಕಾ' ಎಂದು ಹೇಳಿದೆ. ಪೀಠಿಕಾ ಮತ್ತು ಪೀಠ ಶಬ್ದದ ಅಪಭ್ರಂಶವು ಪಿಡೀ (ಆಸನ). ಶಿವನ ಅಪರಲಿಂಗ ದೇವತಾತ್ಮಾ ಹಿಮಾಲಯ, ಅದರ ಆಸನವೂ ಪೃಥಿವಿಯು.

**ಮಲಗುವದು, ಕೂಡ್ರುವದು ಸಮಾನ :**

ಶಾಲಗ್ರಾಮ ಶಿಲೆಯ ಮಲಗುವದು, ಕೂಡ್ರುವದು, ಸಮಾನ. ಹಂಸದ ತತ್ತಿಯಂತೆ ಗೋಲಾಕಾರ ಬಾಣಲಿಂಗಕ್ಕೂ ಅದೇ ಒಂದೇ ಅವಸ್ಥೆ. ಇವುಗಳಿಗೆ ಭೂಮಿ ಆಸನವಲ್ಲ, ಬೇರೆ ವ್ಯವಸ್ಥೆಯು ಇರುತ್ತದೆ.

**ಪಾತಾಲ ಬಗೆದ ಶಿವ:**

ಸ್ವಯಂಭುಲಿಂಗ ಅಂದರೆ ಪಾತಾಲವನ್ನು ಬಗೆದು ಬಂದ ಶಿವ. ಭೂ-ಗರ್ಭದಿಂದ ಸ್ವಯಂ ಉತ್ಥಿತ ಮತ್ತು ಭೂ-ಪೃಷ್ಠದಲ್ಲಿ ಅವಸ್ಥಿತವು; ಸುತರಾಂ ಇವುಗಳಿಗೂ ಪೃಥಿವಿಯೇ ಆಸನವು.

ಬಡಿಗೆಯಂತೆ ಎದ್ದ ಪಾಷಾಣ ಶಿವಲಿಂಗವನ್ನು ಭೂಮಿಯ ಮೇಲೆ ಇಟ್ಟರೆ ಅಲ್ಲಾಡಲು ಅಥವಾ ಬಿದ್ದು ಒಡೆದು ಹೋಗಲು ಶಕ್ಯವು. ಈ ಆಶಂಕೆಯಲ್ಲಿ ಅದರ ಭಾರ-ಸಾಮ್ಯ ರಕ್ಷಣೆಗೋಸುಗ ಒಂದು ಅಭಿನವ ಉಪಾಯವು ಅವಲಂಬಿತವಾಗಿರುತ್ತದೆ.

**ಗೌರೀಪಟ್ಟ:**

ಪ್ರಶಸ್ತ ಸಮತಲ ಹಲಚಿ ಕಲ್ಲಿನ ಕೇಂದ್ರಬಿಂದುವಿನಲ್ಲಿ ಕೆದರಿ ತೂತುಮಾಡಿ, ಆ ತಗ್ಗಿನ ಸ್ಥಾನವನ್ನು ಶಿಷ್ಟಾಂಗದ ಮೇಲೆ ಇಟ್ಟು ಆ ಕಲ್ಲನ್ನು ಒತ್ತಲು ಅದು ಲಿಂಗಾಕಾರವಾಗಿ ವೇಷ್ಟನ ಪೂರ್ವ ಕ್ರಮಶಃ ಕೆಳಗೆ ಇಳಿದು ಬರುವದು. ಅದು ಲಿಂಗದ ನಟ್ಟನಡುವೆ ಇಳಿದು ಬರಲು ಅದಕ್ಕೆ ಸ್ಥಿರಮಾಡಿ, ಪ್ರಾಚೀನ ಕಾಲಾವಧಿ ವ್ಯವಹೃತ ಒಂದು ಬಗೆಯಲ್ಲಿ ದೇಶೀಯ ರಾಸಾಯನಿಕ ಸಮ್ಮಿಶ್ರಣದ (Cement) ಸಹಾಯದಿಂದ ಆ ಮಧ್ಯಸ್ಥಲದಲ್ಲಿ ಲಿಂಗದೊಡನೆ ಕಲ್ಲನ್ನು ಸ್ಥಾಯಿಭಾವದಿಂದ ದೃಢ ಸಂಬದ್ಧ ಮಾಡಬೇಕಾಗುತ್ತಿತ್ತು. ಇದರ ಫಲದಿಂದ ಲಿಂಗದ ಕೆಳಗಿನ ಅರ್ಧ ಕಲ್ಲಿನ ಕೆಳಗೆ ಹಾಗು ಮೇಲಿನ ಅರ್ಧ ಕಲ್ಲಿನ ಮೇಲೆ ಅಚಲವಾಗಿ ಸ್ಥಾಯೀಭಾವದಲ್ಲಿ ಅವಸ್ಥಾನ ಮಾಡತಕ್ಕದ್ದು. ಇದಕ್ಕೇ "ಅಚಲ ಪ್ರತಿಷ್ಠಾ" ಅನ್ನುತ್ತಾರೆ. ಈ ಕಲ್ಲಿಗೆ ಗೌರೀಪಟ್ಟ, ಗೌರೀಪೀಠ ಅಥವಾ ಗೌರೀಪಾಟ ಹೆಸರಿನಿಂದ ಕರೆಯುತ್ತಾರೆ.

ಇದರ ಹೊರತು, ಈ ಕಲ್ಲಿನ ಮತ್ತೊಂದು ಸಾರ್ಥಕತೆಯು ಇರುವದು. ಲಿಂಗದ ಮೇಲೆ ಸಿಂಚಿತ ಜಲವು ಕೆಳಗೆ ಸಂಗ್ರಹಿತವಾಗಿ ಈ ಕಲ್ಲಿನಲ್ಲಿ ಬೀಳುವದು. ಹಾಗು ಕಲ್ಲಿನದೇ ಅಂಶ ಒಂದು ಸಣ್ಣ ಹರಿಯಿಂದ ಹೊರಗೆ ಹೋಗುವದು. ಇರದಿದ್ದರೆ ಲಿಂಗದ ಮೇಲೆ ಹಾಕಿದ ನೀರು, ಹೂ ಬಿಲ್ವಪತ್ರೆ ಇತ್ಯಾದಿ ಕೆಳಗೆ ಮಣ್ಣಿನಲ್ಲಿ ನಾಲ್ಕು ಕಡೆಗೆ ಹರಡಿ ಕೆಸರನ್ನೂ ಹೊಲಸನ್ನೂ ಮಾಡುವದು ಮತ್ತೆ ಅಲ್ಲಿಗೆ ಬಂದ ನರ-ನಾರಿಯರ ಕಾಲುಗಳಿಗೆ ಹತ್ತುತ್ತಿತ್ತು.

ಎಷ್ಟೋ ಪಾಷಾಣ ಶಿವಲಿಂಗಗಳು ಒಳ್ಳೇ ಎತ್ತರವಾಗಿ ಇರುತ್ತವೆ. ಆ ಕ್ಷೇತ್ರದಲ್ಲಿ ಕಲ್ಲು ಲಿಂಗದ ನಟ್ಟ ನಡುವೆ ಇರದೆ ಲಿಂಗದ ಕೆಳಗೆ ನೆಲಮಟ್ಟ ಇದ್ದರೆ ಲಿಂಗಶೀರ್ಷ ಮತ್ತು ಕಲ್ಲಿನ ನಡುವೆ ವ್ಯವಧಾನವು ಮತ್ತು ದೂರತ್ವವು ಬಹಳ ಆಗುತ್ತಿತ್ತು. ಆಗ ಸಹ ಜಲವು ಕಲ್ಲಿನಲ್ಲಿಯೇ ಬೀಳುವದು ನಿಜ. ಆದರೆ ಪರಿಸ್ಥಿತಿ ಅಧಿಕತರ ಹೊಲಸು ಆಗುತ್ತಿತ್ತು. ಇಷ್ಟು ಮೇಲಿನಿಂದ ಬಿದ್ದು ಕೆಳಗೆ ಕಲ್ಲಿನಲ್ಲಿ ತಡೆದು ಜಲವು ಅತಿ ವೇಗದಿಂದ ನಾಲ್ಕೂ ಕಡೆಗೆ ಚಿಮ್ಮಿ (ಸಿಡಿದು) ನರನಾರಿಯರ ಬಟ್ಟೆಬರಿಗಳೂ ಶರೀರವೂ ತೋಯುತ್ತಿತ್ತು. ಈ ಅನಿಷ್ಟ ನಿವಾರಣೆಗೋಸುಗವೇ ಕಲ್ಲನ್ನು ಲಿಂಗದ ನಡುವೆ ರಕ್ಷಿತವಾಗುವದು.

**ಪಾನಿ-ಹಾಟ:**

ಜಲ ಅಂದರೆ ಪಾನಿ(ನೀರು) ಶಬ್ದದ ವ್ಯವಹಾರವಿರುತ್ತದೆ. ಈ ಕಲ್ಲಿನ ಅಂದರೆ ಗೌರಿಪಟ್ಟದ ಮೇಲಿನಿಂದ ನೀರು ಹರಿದು ಹೋಗುವದು ಎಂದು ಇದರ ಮತ್ತೊಂದು ಹೆಸರು 'ಪಾನಿಹಾಟ'. ಈ ಪಾನಿಹಾಟವೇ ಅಪಭ್ರಂಶವಾಗಿ ಪಾಣಿನೇಟ, ಪಿನೇಟ ಮತ್ತು ಪೇನೇಟ.

**ಅಷ್ಟಬಂಧನ:**

ಈ ರಾಸಾಯನಿಕ ಸಮ್ಮಿಶ್ರಣ (Cement)ದಿಂದ ಲಿಂಗಕ್ಕೆ ಗೌರೀಪಟ್ಟ ಗಟ್ಟಿಯಾಗಿ ಕೂಡ್ರಿಸಿರುತ್ತದೆ. ಇದಕ್ಕೆ 'ಅಷ್ಟಬಂಧನ'ವೆನ್ನುತ್ತಾರೆ. ಇದರ ತಯಾರಿಯ ಉಪಕರಣಗಳನ್ನು 'ಕಾಶಿ'ಯ ಕೆಲವು ಮನೆತನದ ಮಿಸ್ತ್ರಿಯವರು ಮಾತ್ರ ಬಲ್ಲರು. ಅದನ್ನು ಅವರು ಯಾರಿಗೂ ತಿಳಿಸಿಕೊಡುವದಿಲ್ಲ. ಇದು ಅವರ ವ್ಯವಸಾಯದ ಸುಪ್ತಸಂಗತಿ -Trade secret.

ಗೌರೀಪಟ್ಟವು ಪಾರ್ಥಿವ ಶಿವಲಿಂಗಕ್ಕೂ ನಡುವಿನ ಸ್ಥಾನದಲ್ಲಿ ಇರುತ್ತದೆ. ಗೌರೀಪಟ್ಟ ಮತ್ತು ಪಾರ್ಥಿವ ಶಿವಲಿಂಗ ಎರಡೂ ಮೃತ್ತಿಕಾ ನಿರ್ಮಿತವು.

ಬಾಣಲಿಂಗದ ಗೌರೀಪಟ್ಟವು ಧಾತು ನಿರ್ಮಿತವು. ಇದರ ಮೇಲೆ ಕೂಡ್ರಿಸಿ ಬಾಣಲಿಂಗಕ್ಕೆ ಮಾಧ್ಯಮದಲ್ಲಿ ಪೂಜೆ ಆಗುವದು. ಅದು ಕೇವಲ ಪೂಜಾಕಾಲದಲ್ಲಿ ವ್ಯವಹೃತವಾಗುವದು; ಪೂಜೆಯ ಕೊನೆಯಲ್ಲಿ ಅದನ್ನು ಬಾಣಲಿಂಗದಿಂದ ತೆಗೆದು ಎರಡನೆಯ ಕಡೆಗೆ ರಕ್ಷಿತವಾಗಿ ಇಡುವರು.

ಸ್ವಯಂಭುಲಿಂಗದ ಪೀಠವು ಪೃಥಿವಿಯು. ಇದು ಎಲ್ಲೆಡೆಯಲ್ಲಿಯೂ ಲಿಂಗದ ಕೆಳಗೆ ಅವಸ್ಥಿತವು. ಶಿವಲಿಂಗವು ಮುಖ್ಯವಾಗಿ ಪ್ರಕೃತಿಜಾತ ಮತ್ತು ಮನುಷ್ಯಕೃತ ಎಂದು ಎರಡು ಸ್ಥಲ ವಿಭಾಗದಲ್ಲಿ ವಿಭಕ್ತವಾಗಿದೆ.

ಮನುಷ್ಯಕೃತ ಶಿವಲಿಂಗವೂ ಪಾರ್ಥಿವ ಶಿವಲಿಂಗ ಮತ್ತು ದಂಡವತ್ ದಂಡಾಯಮಾನ ಪ್ರತಿಷ್ಠಿತ ಶಿವಲಿಂಗ ಎಂದು ಎರಡು ಭಾಗದಲ್ಲಿ ವಿಭಕ್ತವಾಗಿದೆ.

**ಪಾರ್ಥಿವ ಶಿವಲಿಂಗ:**

ಪಾರ್ಥಿವ ಶಿವಲಿಂಗವು ಒಂದು ಅಥವಾ ಎರಡು ತೊಲೆ ಮಣ್ಣಿನಿಂದ ರಚಿತವು. ಇದು ಕ್ಷುದ್ರ ಚರ (moveable), ಅನಿತ್ಯ (ಅಸ್ಥಾಯೀ); ಮಾತ್ರ ಒಂದೇ ದಿನವೇ ಇದರ ಪೂಜೆ. ಇದು ಮನೆಯಲ್ಲಿ ರಕ್ಷಣೀಯವಲ್ಲ. ಪೂಜೆಯ ನಂತರ ಇದನ್ನು ನೀರಲ್ಲಿ ಅಥವಾ ಬಿಲ್ವವೃಕ್ಷ ಮೂಲದಲ್ಲಿ ವಿಸರ್ಜನವಾಗುವದು.

**ಪ್ರತಿಷ್ಠಿತ ಶಿವಲಿಂಗ:**

ಪ್ರತಿಷ್ಠಿತ ಶಿವಲಿಂಗವು ಸಾಮಾನ್ಯವಾಗಿ ಕಲ್ಲಿನಿಂದ ರಚಿತವು. ಇದು ತುಲನೆಯಿಂದ ದೊಡ್ಡದು. ಈ ಜಾತೀಯ ಶಿವಲಿಂಗಕ್ಕೆ "ಅಷ್ಟಬಂಧನ" ಸಿಮೆಂಟಿನಿಂದ ಗೌರೀಪಟ್ಟ ದೃಢಸಂಬದ್ಧ ಮಾಡಲ್ಪಡುತ್ತದೆ. ಅಂತೆಯೇ ಅದಕ್ಕೆ "ಪ್ರತಿಷ್ಠಿತ" ಶಿವಲಿಂಗವೆನ್ನುತ್ತಾರೆ. ಇದು ನಿತ್ಯ (ಸ್ಥಾಯಿ) ಮತ್ತು ಸ್ಥಾವರ (immoveable). ಇದಕ್ಕೆ ನಿತ್ಯಪೂಜೆ ಆಗುವದು. ಸುತರಾಂ ಇದಕ್ಕೆ ವಿಸರ್ಜನವಿಲ್ಲ. ಬೇರೆ ಬೇರೆಯ ಪದಾರ್ಥಗಳಿಂದಲೂ ಇದರ ನಿರ್ಮಾಣದ ವ್ಯವಸ್ಥೆಯು ಇದ್ದರೂ ಅವೆಲ್ಲವೂ ಅಪ್ರಚಲಿತವು.

ಈಗ ಪುನಃ ಪ್ರಕೃತಿ ಜಾತ ಸ್ವಯಂಭುಲಿಂಗದ ವಿಷಯವನ್ನು ಬರೆಯುವೆವು. ಶಿವನ ಆಕಾಶಲಿಂಗವು 'ಸ್ವಯಂಭೂ' ಎಂಬ ಬಗ್ಗೆ ಸಂದೇಹವಿಲ್ಲ. ಇದು ನಿತ್ಯವು-ಸ್ಥಾವರವು-ಅನಂತವು.

ವಿಷ್ಣುಲಿಂಗ ಶಾಲಗ್ರಾಮವು 'ವಜ್ರಕೀಟ' ಹೆಸರಿನ ಹುಳದ ದಂತಾಘಾತದಿಂದ ಕ್ಷತ-ವಿಕ್ಷತವೆಂದು, ಇದು ಪೂರ್ಣ ಪ್ರಕೃತಿಜಾತ ಸ್ವಯಂಭು ಆಗಲಿಕ್ಕೆ ಶಕ್ಯವಿಲ್ಲ. ಆದರೆ ಇದು ಮನುಷ್ಯಕೃತವಲ್ಲ. ಪ್ರಕೃತಿಯ ಸ್ವಭಾವದಲ್ಲಿಯೇ ವಜ್ರಕೀಟ ವಿಷದಂತದಿಂದ ಕಡಿದು ತುಚ್ಛ ಶಿಲಾಪಿಂಡಕ್ಕೆ ಜಗತ್ಪೂಜ್ಯ ಮಹಾಮಾನ್ಯ ಶಾಲಗ್ರಾಮದ ಪರ್ಯಾಯದಿಂದ ಉನ್ನೀತ ಮಾಡಿರುತ್ತದೆ. ಸುತರಾಂ ಇದಕ್ಕೆ ಪ್ರಕೃತಿಜಾತವೆಂದರೆ ಮಹಾಭಾರತವು ಅಶುದ್ಧವಾಗುವುದಿಲ್ಲವೆಂದು ತಿಳಿಯುವದು.

ದೇವತಾತ್ಮಾ ಹಿಮಾಲಯವು ಶಿವನ ಅನ್ಯತಮ ವಿರಾಟ ಬಹಿಃಪ್ರಕಾಶವು. ಇದು ಪ್ರಕೃತಿ ಜಾತ ಸ್ವಯಂಭು ನಿತ್ಯ-ಸ್ಥಾವರ-ಉನ್ನತ ಶೀರ್ಷವು.

ಓಡಿಸ್ಸಾದ ಪ್ರಸಿದ್ಧ ಭುವನೇಶ್ವರಲಿಂಗವು ಮತ್ತು ಉತ್ತರ ಪ್ರದೇಶದ ವಿಖ್ಯಾತ ಕೇದಾರನಾಥಲಿಂಗವು ಪ್ರಕೃತಿಜಾತ ಸ್ವಯಂಭು, ನಿತ್ಯ ಮತ್ತು ಸ್ಥಾವರ.

ನೈಸರ್ಗಿಕ ಸೌಂದರ್ಯದ ಅಪೂರ್ವ ವಿಕಾಸಪೂರ್ವ ವರ್ಣಿತ ಅಮರನಾಥ ಲಿಂಗ, ಪ್ರಕೃತಿ ಜಾತ-ಸ್ವಯಂಭು ಮತ್ತು ಜ್ಯೋತಿರ್ಮಯವು. ಪ್ರತಿ ಮುಹೂರ್ತದಲ್ಲಿ ಪರಿವರ್ತನಶೀಲ, ಆದರೆ ಒಂದೇ ಸ್ಥಾನದಲ್ಲಿ ನಿಯತ. ಅವಸ್ಥಿತ ಮತ್ತು ಪೌನಃ ಪುನಕ (recurring) ವೆಂದು ಇದು ಸ್ಥಾವರ ಮತ್ತು ನಿತ್ಯವು.

**ಬಾಣಲಿಂಗ:**

ಈಗ ಮತ್ತೊಂದು ಲಿಂಗದ ಸಂಗತಿಯನ್ನು ಹೇಳುವೆವು. ಇದು ಪ್ರಕೃತಿಜಾತ ಸ್ವಯಂಭೂ ಚರ ಮತ್ತು ನಿತ್ಯ, ಹಂಸದ ತತ್ತಿಯಂತೆ ಗೋಲಾಕಾರ, ಅಂಗುಷ್ಠ ಪ್ರಮಾಣ ಚಿಕ್ಕ, ಸಂಖ್ಯೆಯಲ್ಲಿ ಗಣನಾತೀತ ವೈಚಿತ್ರಮಯ, ಸಮಪ್ರಮಾಣ ಕಲ್ಲಿಗಿಂತ ಇದರ ಭಾರವು ಹೆಚ್ಚು. ಇದರ ಹಲವು ಜಾತಿ, ವರ್ಣ, ನಾಮ, ಗುಣ ಮತ್ತು ಕ್ರಿಯೆ. ಗಂಡಕೀ ನದೀ ಗರ್ಭದಲ್ಲಿ ಪ್ರಾಪ್ತವಿಷ್ಟ ಲಿಂಗ. ಶಾಲಗ್ರಾಮದಂತೆ ಇವುಗಳು ಸಹ ನರ್ಮದಾ ನದೀ ಗರ್ಭದಿಂದ ಸಂಗ್ರಹಿತವಾಗುವವು.

ಅಸುರ ರಾಜನಾದ ಬಾಣನಿಗೆ ಶಿವನು ಈ ಲಿಂಗಕ್ಕೆ ಬಾಣರಾಜನ ಹೆಸರಿನಿಂದ ಖ್ಯಾತವಾಗುವದೆಂದು ವರವನ್ನು ಕೊಟ್ಟಿದ್ದನು. ಅಂತೇ ಇದರ ಹೆಸರು ಬಾಣಾಖ್ಯ, ಬಾಣಲಿಂಗ, ಬಾಣೇಶ್ವರ ಎಂದು ಆಗಿದೆ. ಇದರಲ್ಲಿ ಮುಖ್ಯವಾಗಿ ೧೧ ಪ್ರಕಾರ ಇರುವವು.

**ಬಾಣಲಿಂಗದ ಪರೀಕ್ಷೆ:**

ಯಾವ ಶಿಲಾಪಿಂಡವು ನಿಜವಾದ ಬಾಣಲಿಂಗವು? ಯಾವ ಬಾಣಲಿಂಗವು ಗೃಹಸ್ಥರಿಗೆ ಪೂಜ್ಯವು? ಯಾವದು ಉದಾಸಿಗಳಿಗೆ ಪೂಜ್ಯವು? ಅದರ ಪರೀಕ್ಷೆಗೋಸುಗ ಎರಡು ವಿಸ್ಮಯಕರ ಪ್ರಕ್ರಿಯೆಗಳುಂಟು.

**ಪ್ರಥಮ ಪರೀಕ್ಷಾ:** ಸಮಾನ ಭಾರದ 'ಬಿಸಿಲ-ಅಕ್ಕಿ'ಯಲ್ಲಿ ಶಿಲಾಪಿಂಡವನ್ನು ಇಡತಕ್ಕದ್ದು. ಮರುದಿನ ಆ ಅಕ್ಕಿ ಮತ್ತು ಶಿಲಾಪಿಂಡ ಎರಡನ್ನು ತಕ್ಕಡಿಯ ಭಿನ್ನ ಭಿನ್ನ ಪರಡಿಗಳಲ್ಲಿ ಇಟ್ಟು ತೂಗಬೇಕು. ಆಗ ಎರಡರ ಭಾರವು ಸಮಾನವಾದರೆ ಅದು ಬಾಣಲಿಂಗವಲ್ಲವೆಂದು ತಿಳಿಯಬೇಕು. ಒಂದು ವೇಳೆ ಅಕ್ಕಿಯ ಭಾರವು ಹೆಚ್ಚಿದರೆ ಉಕ್ತಶಿಲಾಪಿಂಡವನ್ನು ಗೃಹಸ್ಥರಿಗೆ ಪೂಜ್ಯವಾದ ಬಾಣಲಿಂಗವೆಂದು ತಿಳಿಯತಕ್ಕದ್ದು. ಯಾಕೆಂದರೆ ಗೃಹಸ್ಥರಿಗೆ ಅಕ್ಕಿಯೇ ಅವಶ್ಯ ಬೇಕಾಗಿರುವದು. ಅಕ್ಕಿಯ ಭಾರವು ಕಡಿಮೆಯಾದರೆ ಆ ಶಿಲಾಪಿಂಡಕ್ಕೆ ಉದಾಸಿ (ಸನ್ಯಾಸಿ)ಗಳ ಪೂಜ್ಯ ಬಾಣಲಿಂಗವೆಂದು ತಿಳಿಯಬೇಕು. ಯಾಕಂದರೆ ಉದಾಸಿಗಳಿಗೆ ಅಕ್ಕಿಯ ಆವಶ್ಯಕತೆ ಕಡಿಮೆ; ಅವರು ಭಿಕ್ಷಾನ್ನದಿಂದ ದಿನಗಳೆಯುವರು. ಮೋಕ್ಷಾಪೇಕ್ಷಿಗಳೆಂದು ಅವರ ಉಪಾಸ್ಯ ಬಾಣಲಿಂಗದ ಭಾರವು ಹೆಚ್ಚು ಬೇಕು, ಇದು ಕತೆಯು ಅಲ್ಲ. ಪ್ರತ್ಯಕ್ಷ ಪ್ರಮಾಣಸಿದ್ಧವು.

**ದ್ವಿತೀಯ ಪರೀಕ್ಷಾ:** ತಾಮ್ರದ ತಗಡಿನ ಮೇಲೆ ಬಾಣಲಿಂಗವನ್ನು ಇಟ್ಟು, ಅದರ ಮೇಲ್ಭಾಗದಲ್ಲಿ ಮತ್ತೊಂದು ತಾಮ್ರದ ತಗಡನ್ನು ಇಟ್ಟು, ಅದರ ಮೇಲೆ ಅಂಗೈಯನ್ನು ಇಟ್ಟು ಒತ್ತಬೇಕು (ಭಾರಹಾಕಬೇಕು). ಆಗ ಆ ಬಾಣಲಿಂಗವು ಬಲಗಡೆಗೆ ತಿರುಗಲು ಅದು ಗೃಹಸ್ಥರಿಗೆ ಪೂಜಾಯೋಗ್ಯವೆಂದು, ಎಡಗಡೆಗೆ ತಿರುಗಲು ಅದು ಉದಾಸಿಯರ ಪೂಜಾಯೋಗ್ಯವೆಂದು ತಿಳಿಯಬೇಕು.

**ಬಾಣಲಿಂಗದ ವಿಕಲ್ಪ:**

ಬಾಣಲಿಂಗವು ದುಷ್ಪ್ರಾಪ್ಯವೆಂದು, ಬಹುಜನರು ಸಹಜ ಲಭ್ಯ ವೈಶಿಷ್ಟ್ಯಹೀನ ಸಾಮಾನ್ಯ ಕಲ್ಲಿನ ಗೋಲಾಕಾರ 'ಗೋಲಿಗೆ' ಬಾಣಲಿಂಗದ ವಿಕಲ್ಪರೂಪದಿಂದ ಗ್ರಹಣ ಮಾಡುತ್ತಾರೆ ಮತ್ತು ಹಲವು ಸ್ಥಾನಗಳಲ್ಲಿ ವೃಕ್ಷ-ಮೂಲಾದಿಗಳಲ್ಲಿ ಸ್ಥಾಪಿಸುತ್ತಾರೆ. ಸಂಭವವಾದರೆ ಅದರ ಪಾರ್ಶ್ವದಲ್ಲಿ ಒಂದು ತ್ರಿಶೂಲವನ್ನು ನೆಡುತ್ತಾರೆ. ತ್ರಿಶೂಲವೂ ಶಿವನ ಮತ್ತೊಂದು ಪ್ರತೀಕವು.

ಕೆಲ ಕೆಲವು ಬಾಣಲಿಂಗಗಳಿಂದ ರಾತ್ರಿಯಲ್ಲಿ ಜ್ಯೋತಿಯು ನಿರ್ಗತವಾಗುತ್ತದೆ.

**ರತ್ನ:**

ಅನ್ಯತಮ ಶಿವಲಿಂಗ ಹಿಮಾಲಯದ ಶೃಂಗ(ಶಿಖರ)ಕ್ಕೂ ಲಿಂಗವೆಂದು ಹೇಳಿದೆ. ಗಿರಿಶೃಂಗದ ಶಿವಮಂದಿರ ಹಾಗೂ ಸ್ಮಶಾನಮಂದಿರದ ಮೇಲೆ ಗಗನಚುಂಬಿಯಾದ ಉಚ್ಚಶಿಖರವನ್ನು ಕಟ್ಟುವರು. ಮಂದಿರ

ಶೀರ್ಷದ ಶಿಖರಕ್ಕೆ ರತ್ನವೆನ್ನುತ್ತಾರೆ. ಹೀಗೆ ಪಂಚರತ್ನ, ನವರತ್ನ, ಇಪ್ಪತ್ತೊಂದು ರತ್ನ ಹಾಗೂ ಅದಕ್ಕೂ ಹೆಚ್ಚು ರತ್ನವಿಶಿಷ್ಟ ಅಸಂಖ್ಯ ಶಿವಮಂದಿರಗಳು ದೇಶದಲ್ಲಿ ಹಬ್ಬುಗೊಂಡಿರುತ್ತವೆ.

**ಊರ್ಧ್ವಮುಖ ಶಿವ:**

ಅನ್ಯತಮ ಶಿವಲಿಂಗ ತ್ರಿಶೂಲವೂ ಊರ್ಧ್ವಮುಖೀ ಮತ್ತೊಂದು ಶಿವಲಿಂಗವು ಸೂರ್ಯನಿಗಿಂತ ಊರ್ಧ್ವದಲ್ಲಿ ಇರುತ್ತದೆ. ಅಗ್ನಿ, ಜ್ಯೋತಿಃ, ಬೆಳಕು ಇವುಗಳೂ ಊರ್ಧ್ವಮುಖೀ ಶಿವಲಿಂಗಗಳು. ಅಗ್ನಿಹೋತ್ರೀ (ಸಾಗ್ನಿಕ)ಉಪಾಸಕರು ಹಗಲು-ರಾತ್ರಿ ಮನೆಯಲ್ಲಿ ಊರ್ಧ್ವಮುಖೀ ಅಗ್ನಿಯನ್ನು ರಕ್ಷಣೆ ಮಾಡುತ್ತಾರೆ.

ಶಿವನು ಸ್ವಯಂ ಊರ್ಧ್ವಲಿಂಗ, ಊರ್ಧ್ವನೇತ್ರ, ಊರ್ಧ್ವದೃಷ್ಟಿ, ಊರ್ಧ್ವಗ, ಊರ್ಧ್ವರೇತನು. ಪಿತೃಪುರುಷರ ಊರ್ಧ್ವಲೋಕ (ಶಿವಲೋಕ) ಕಾಮನೆಯಲ್ಲಿಯೇ ಎಲ್ಲರೂ ಶಿವಲಿಂಗ ಸ್ಥಾಪಿಸುತ್ತಾರೆ. ಅಂತೇ ಶಿವಲಿಂಗ ಮಾತ್ರವೂ ಊರ್ಧ್ವಮುಖಿಗಳು.

**ಸುಪ್ತಚೈತನ್ಯ, ಜಾಗ್ರತ ಚೈತನ್ಯ:**

ಶಿವನು ಸ್ವಯಂ ಚೈತನ್ಯಸ್ವರೂಪನು. ಚೈತನ್ಯವು ಚಿರಕಾಲವೂ ಊರ್ಧ್ವಗ ಮತ್ತು ಊರ್ಧ್ವಮುಖನು. ಭೂಮಿಯಲ್ಲಿ ಬೀಜ ಬಿತ್ತಲ್ಪಡುವದು. ಆಕಾಲದಲ್ಲಿ ಅದರಲ್ಲಿ ಚೈತನ್ಯವು ನಿಷ್ಕ್ರಿಯ, ನಿಶ್ಚೇಷ್ಟ ಇರುತ್ತದೆ; ಆದರೆ ಬಿತ್ತಿದ ತರುವಾಯ ಅದರಲ್ಲಿ ಅಲ್ಪ-ಅಲ್ಪವಾಗಿ ಚೈತನ್ಯವು ಜಾಗ್ರತವಾಗುವದು. ಚೈತನ್ಯಸಂಚಾರದ ಫಲದಿಂದ ಅಂಕುರದ ಸಂಭಾವನಾ ಆಗುವದು ಹಾಗೂ ಸ್ಪಷ್ಟ ಅಂಕುರವು ಅದೇ ಬೀಜ ಮತ್ತು ಮಣ್ಣನ್ನು ಭೇದಮಾಡಿ, ಭೂಮಿಯ ಮೇಲೆ ಹೊರಗೆ ಬರುವದು. ಇದಕ್ಕೆ ಅಂಕುರೋದ್ಗಮವೆನ್ನುವರು. ಇದು ಮೊದಲು ಜುಡುಪದಲ್ಲಿ ಪರಿಣತವಾಗಿರುವದು, ಅನಂತರ ಬೃಹತ್ ಸು-ಉಚ್ಚ ವೃಕ್ಷಾಕಾರದಲ್ಲಿ ಅದು ಅತಿ ಊರ್ಧ್ವದಲ್ಲಿ ಆಕಾಶವನ್ನು ಚುಂಬನ ಮಾಡುವದು. ಚೈತನ್ಯದ ಧರ್ಮವೇ ಇದು.

**ಅಲ್ಪ ಚೈತನ್ಯ, ಅರ್ಧಚೈತನ್ಯ, ಪೂರ್ಣಚೈತನ್ಯ :**

ಸರೀಸೃಪ, ಶಂಬುಕ, ಕೃಮಿ, ಕೆಂಚೋ ಇತ್ಯಾದಿ ಅಲ್ಪಚೈತನ್ಯ ಹೀನಪ್ರಾಣಿ ಮಣ್ಣಿನಲ್ಲಿ ಹೊಟ್ಟೆ ತುಂಬಿಸಿಕೊಂಡು ನಡೆಯುತ್ತವೆ; ಒಂದು ಉನ್ನತ ಅರ್ಧಚೈತನ್ಯ ಗವಾದಿ ಪಶುಗಳು ಹೊಟ್ಟೆ ತುಂಬಿಸಿಕೊಂಡು ನಡೆಯುವದಿಲ್ಲ. ಆದರೆ ಮಣ್ಣಿನ ಸಮಾಂತರಾಲಭಾವದಲ್ಲಿ ನಡೆಯುವವು. ಸರಳ ನಿಲ್ಲಲಿಕ್ಕೆ ತಲೆಯನ್ನು ಎತ್ತಲು ಸಮರ್ಥವಾಗುವದಿಲ್ಲ. ಸಮುನ್ನತ ಚೇತನಾಶೀಲ ಮನುಷ್ಯನೇ ನಿಂತು ತಲೆಯೆತ್ತಿ ನಡೆಯುವನು. ಉಚ್ಚವೆಂದರೆ ಉನ್ನತ. ಉನ್ನತವೆಂದರೆ ಉಚ್ಚ. ಉನ್ನತ ಶೀರ್ಷ ಚೇತನಾಶೀಲ ಮನುಷ್ಯನು ಚೈತನ್ಯಸ್ವರೂಪ ಶಿವನಿಗೆ ಯಾವಾಗಲೂ ಮೇಲೆಯೇ ನೋಡ ಬಯಸುವನು ಮತ್ತು ಪಡೆಯುವನು.

ಚೈತನ್ಯದ ತಾರತಮ್ಯ ಭೇದದಿಂದ ಪ್ರಾಣಿಗಳ ಜೀವನಯಾತ್ರೆಯ ಪದ್ಧತಿಯೂ ಬೇರೆಯಾಗಿದೆ. ಅಲ್ಪ ಚೈತನ್ಯಹೀನ ಪ್ರಾಣಿ ಮಲಮೂತ್ರ, ಕೀವು, ಶ್ಲೇದಾದಿ ಭಕ್ಷಣಮಾಡಿ, ಅರ್ಧಚೈತನ್ಯ ಗವಾದಿ ಪಶು ತೃಣಭೋಜೀ, ಕೆಲವು ಪ್ರಾಣಿ ಎರಡನೇ ಪ್ರಾಣಿಯನ್ನು ವಧಿಸಿ ಭಕ್ಷಣ ಮಾಡುತ್ತವೆ. ಚೇತನಾಶೀಲ ಮಾನವರು ಸುಸ್ವಾದು ಅನ್ನವ್ಯಂಜನ, ರಸಾಲ-ಕ್ಷೀರ-ದಧಿ-ಘೃತ-ಮಧು-ಸುಮಿಷ್ಟಪಾಯಸ-ಪಿಷ್ಟಕ-ಶರ್ಕರಾದಿ ಭೋಜನ ಮಾಡುವರು.

**ಜ್ಞಾನಾಗ್ನಿ:**

ಶಿವನು ಜ್ಞಾನಸ್ವರೂಪನು. ಜ್ಞಾನವು ಅಗ್ನಿಸ್ವರೂಪವು. ಜ್ಞಾನಾಗ್ನಿಯು ಅಜ್ಞಾನಾಂಧಕಾರವನ್ನು ದೂರಮಾಡುವದು. ಜ್ಞಾನ ಮತ್ತು ಅಗ್ನಿ ಎರಡೂ ಅಶುಚಿಯನ್ನು ಶುಚಿ ಹಾಗೂ ಅಶುದ್ಧವನ್ನು ಶುದ್ಧಮಾಡುತ್ತವೆ.

ಸುತರಾಂ ಅಗ್ನಿ ಹಾಗೂ ಅದರ ಸಮಗೋತ್ರೀಯ ಮತ್ತು ಸಮಧರ್ಮಿ ಸೂರ್ಯ, ಆಲೋಕ, ಆಲೋಕ ಸ್ತಂಭ, ಜ್ಯೋತಿಃ, ಸ್ವಯಂಜ್ಯೋತಿಃ, ಪರಮಜ್ಯೋತಿಃ, ಅಖಂಡಜ್ಯೋತಿಃ, ಅನಿರ್ವಾಣ ದೀಪಶಿಖಾ ಇತ್ಯಾದಿ ಶಿವನ ಲಿಂಗ ಅಥವಾ ಪ್ರತೀಕ ರೂಪದಲ್ಲಿ ಪೂಜಿತವಾಗುತ್ತವೆ.

ಇವುಗಳೆಲ್ಲವೂ ಊರ್ಧ್ವಮುಖಗಳು. ಅಗ್ನಿ ಇತ್ಯಾದಿಗಳ ಧರ್ಮವೇ ಅದು. ದೀಪವನ್ನು ಕೆಳಮುಖಮಾಡಿ ಹಿಡಿ, ಅದು ಭಕ್-ಭಕ್ ಮಾಡಿ ಉರಿದು ಊರ್ಧ್ವಾಭಿಮುಖದಿಂದ ಧಾವಿಸುವದು. ದೀವಟಿಗೆಯನ್ನು ಕೆಳಮುಖಮಾಡಿ ಹಿಡಿ, ಅಗ್ನಿಕಣಗಳು ಆಕಾಶದಲ್ಲಿ ಏಳುವವು. ಅಂತೆಯೇ ಅವುಗಳು ಶಿವನ ಪ್ರತೀಕ. ಮಂಗಲಘಟ ಮತ್ತು ತತ್ ಸಂಲಗ್ನ ಕದಲೀವೃಕ್ಷ ಎರಡೂ ಊರ್ಧ್ವಮುಖ.

**ಅಧೋರ್ಧ್ವ:**

ಅಧಃ, ನಿಮ್ನ, ನೀಚ ಶಬ್ದಗಳು ಅಮಂಗಲ ಸೂಚಿತವಾಗುವವು. ಇವುಗಳ ಅರ್ಥವೇ ಅವನತಿ, ಅಧೋಗತಿ ಮತ್ತು ಅಧಃಪಾತ. ಅಧೋಲೋಕವೆಂದರೆ ನರಕ, ಜಾಹಾನ್ನಮ, ಪಾತಾಲ, ರಸಾತಲ. ಅಂತೇ ಯಾವತ್ತೂ ಶಿವಲಿಂಗಗಳೂ ಅದರ ವಿಪರೀತ ಮತ್ತು ಊರ್ಧ್ವಾಭಿಮುಖಗಳು. ಚಿಕ್ಕ ಶಿವಲಿಂಗಗಳು ದೀಪಶಿಖೆಯ ಆಕಾರದಲ್ಲಿ ಹಾಗೂ ದೊಡ್ಡವುಗಳು ಆಲೋಕ-ಸ್ತಂಭದ ಆಕಾರದಲ್ಲಿ ನಿರ್ಮಾಣದ ವಿಧಾನವಿರುತ್ತದೆ.

ಜ್ಯೋತಿರ್ಲಿಂಗ, ಅನಾದಿಲಿಂಗ, ಆದಿಲಿಂಗ, ಊರ್ಧ್ವಲಿಂಗ, ಬಾಣಲಿಂಗ ಇತ್ಯಾದಿ ನಾನಾಪ್ರಕಾರ ಶಿವಲಿಂಗಗಳು ಇರುತ್ತವೆ. ಸ್ಥಾನಾಭಾವದಿಂದ ಅವುಗಳ ಹೆಸರುಗಳನ್ನು ಹೇಳಲಿಲ್ಲ.

**ಲಿಂಗಾರ್ಥ:**

ಈ ಪ್ರಬಂಧದ ಪ್ರಾರಂಭದಲ್ಲಿ ಲಿಂಗಶಬ್ದದ ವೈಯಾಕರಣೀ ವ್ಯುತ್ಪತ್ತಿಯ ಸಂಗತಿಯನ್ನು ಹೇಳಿರುತ್ತೇವೆ. ಈಗ ಅದರ ಉಳಿದುದನ್ನು ಹೇಳುವೆವು:

ವ್ಯಾಕರಣದಲ್ಲಿ ವಾಚಕ, ಬೋಧಕ, ಸೂಚಕ, ದ್ಯೋತಕ, ಜ್ಞಾಪಕ ಇತ್ಯಾದಿ ಅರ್ಥದಲ್ಲಿ ಲಿಂಗಶಬ್ದದ ಪ್ರಯೋಗವು ಕಂಡುಬರುವದು. ಹ್ಯಾಗಂದರೆ ಪುಲ್ಲಿಂಗ ಶಬ್ದಕ್ಕೆ ಪುಂಸ್ತ್ವ-ವಾಚಕ, ಸ್ತ್ರೀಲಿಂಗ ಶಬ್ದಕ್ಕೆ ಸ್ತ್ರೀತ್ವಬೋಧಕ, ಕ್ಲೀಬಲಿಂಗ ಶಬ್ದಕ್ಕೆ ಕ್ಲೀಬತ್ವ ಸೂಚಕ.

ಶೈವಸಾಹಿತ್ಯದಲ್ಲಿ ಪ್ರತೀಕ, ಸ್ವರೂಪ, ನಾಮ, ಆಖ್ಯಾ ಇತ್ಯಾದಿ ಅರ್ಥದಲ್ಲಿ ಲಿಂಗ ಶಬ್ದವು ವ್ಯವಹೃತವಾಗಿದೆ. ಯಥಾ-ಶಿವಲಿಂಗ ಅಂದರೆ ಶಿವವಾಚಕ, ಶಿವಪ್ರತೀಕ, ಶಿವಸ್ವರೂಪ, ಶಿವನಾಮಕ ಇತ್ಯಾದಿ. ಬಾಣಲಿಂಗದ ಧ್ಯಾನದಲ್ಲಿ ಅದಕ್ಕೆ ಬಾಣಾಖ್ಯವೆಂದು (ಬಾಣವು ಯಾವುದರ ಆಖ್ಯಾ) ಹೇಳಿರುತ್ತದೆ. ಬಾಣಲಿಂಗವೆಂದರೆ ಬಾಣ ಯಾವುದರ ಲಿಂಗ (ನಾಮ).

ಕೋಶದಲ್ಲಿ Symbol, token, emblem ಹಾಗೂ ಪೂರ್ವೋಕ್ತ ಎಲ್ಲ ಅರ್ಥಗಳು ದೊರೆಯುತ್ತವೆ. ಹೆಚ್ಚು ಅಂದರೆ ಕೋಶದಲ್ಲಿ ಲಿಂಗದ ಮತ್ತೊಂದು ಅರ್ಥವು ಪುಂಜನನೇಂದ್ರಿಯವು. ವ್ಯಾಕರಣದಲ್ಲಿ ಈ ಅರ್ಥವನ್ನು ಹಿಡಿದಿರುವದಿಲ್ಲ. ಒಂದು ವೇಳೆ ಆದರೆ ಸ್ತ್ರೀಲಿಂಗದ ಅರ್ಥ ಏಳಲು ಸ್ತ್ರೀಯ ಪುಂಜನನೇಂದ್ರಿಯ ಹಾಗೂ ಇದು ಕಾಕದಂತೆ ಅಥವಾ ಶಶಶೃಂಗದಂತೆ ಹಾಸ್ಯಕರವಾಗುತ್ತಿತ್ತು.

ಶಾಸ್ತ್ರದಲ್ಲಿ ಪ್ರತೀಕ ಉಪಾಸನಾ ಅರ್ಥದಲ್ಲಿ ಲಿಂಗ ಉಪಾಸನದ ವ್ಯವಹಾರವಾಗುವದು.

ದರ್ಶನ ಶಾಸ್ತ್ರದಲ್ಲಿ ಸೂಕ್ಷ್ಮ ಅರ್ಥದಲ್ಲಿ ಲಿಂಗದ ಪ್ರಯೋಗವಾಗುವದು. ಯಥಾ-ಲಿಂಗದೇಹ, ಲಿಂಗ-ಶರೀರ ಅರ್ಥಾತ್ ಮರಣದ ನಂತರ ಪ್ರಾಪ್ತ ಸೂಕ್ಷ್ಮದೇಹ, ಸೂಕ್ಷ್ಮ ಶರೀರ.

ನ್ಯಾಯಶಾಸ್ತ್ರದಲ್ಲಿ ಇದರ ಅರ್ಥಾಂತರವು ಕಂಡುಬರುವದು. ಯಥಾ-ಲಿಂಗಪರಾಮರ್ಶದಿಂದ.

ಲಯಸ್ಥಾನ ಅರ್ಥದಲ್ಲಿಯೂ ಲಿಂಗಶಬ್ದದ ವ್ಯವಹಾರವಿರುತ್ತದೆ. ಯಥಾ "ಲಯಂ ಗಚ್ಛತಿ ಅಸ್ಮಿನ್ ಇತಿ ಲಿಂಗಮ್" (ಸಾಂಖ್ಯದರ್ಶನ) ಅಥವಾ "ಲಯನಾಲ್ಲಿಂಗಮುಚ್ಯತೇ" (ಸ್ಕಂದ ಪುರಾಣ). , ಉಭಯ ವಚನಗಳ ಅರ್ಥವು ಒಂದೇ. ಜಗತ್ ಅರ್ಥಾತ್ ಸಕಲವೂ ಇದರಲ್ಲಿ ಲಯವಾಗುವದು. ಸುತರಾಂ ಇದರ ಹೆಸರು ಲಿಂಗ. "ಲಿಂಗಪೂಜಾ-ತತ್ವ"ದಿಂದ ಇದರ ಸರಳ ವ್ಯಾಖ್ಯೆಯನ್ನು ಕೆಳಗೆ ಉದ್ಧೃತ ಮಾಡುತ್ತೇವೆ.

"ನಹೇ ತಾಹಾಲಿಂಗ, ಯಾಹಾ ಸಾಧಾರಣೇ ಕಯ।
ಲಯ ತತ್ವ ಲಿಂಗ ನಾಮೇ ಅಭಿಹಿತ ಹಯ॥
ಸಾಗರೇ ಬುದ್ಬುದ ಸಮ ಯತ ಭೂತ-ಚಯ।
ಲೀನ ಹಯ ಬಲಿ ತಾರ ಲಿಂಗ ಆಖ್ಯಾಹಯ॥"

**ಲಯ ಅಥವಾ ಸಂಹಾರ:**

ಎಲ್ಲವೂ ಇಲ್ಲಿ ಲೀನವಾಗುವದು. ಶಿವನು ಸೃಷ್ಟಿಯ ಸಂಹಾರ ಮಾಡುವನು. ಅವನು ಸಂಹಾರ ಕರ್ತನು. ಆದರೆ ಈ ಸಂಹಾರವು ತೋಪು-ಬಂದೂಕಗಳ ಯುದ್ಧಮಾಡಿ ವಧ ಅಥವಾ ನಿಧನವಲ್ಲ. ಅಭಿಧಾನದಲ್ಲಿ ಇದರ ಮತ್ತೊಂದು ಅರ್ಥ ಸಂಕೋಚನ ಅಥವಾ ಏಕೀಕರಣ (Contraction or unification and not absolute extinction.)

**ಏಕತ್ವ ಅಥವಾ ಬಹುತ್ವ:**

ಜಾಗತಿಕ ವ್ಯಾಪಾರದಲ್ಲಿ ಸತ್ಯಸ್ವರೂಪ ಸೂರ್ಯ, ಮಿಥ್ಯಾರೂಪೀ ರಾಹುವಿನಿಂದ ಸಾಮಯಿಕ ಆಚ್ಛನ್ನನಾಗುವನು. ಆಧ್ಯಾತ್ಮಿಕ ಕ್ಷೇತ್ರದಲ್ಲಿಯೂ ಸತ್ಯಸ್ವರೂಪ "ಏಕತ್ವ" (Unity or oneness) ಮಿಥ್ಯಾರೂಪೀ "ಬಹುತ್ವ" (plurality or multiplicity or variety)ದಿಂದ ಸಾಮಯಿಕ ಆಚ್ಛನ್ನವಾಗುವದು. ಜ್ಞಾನೀಶ್ವರ ಶಿವನು ಜ್ಞಾನಾಂಜನ ಶಲಾಕಾದಿಂದ "ಬಹುತ್ವ"ದ ಈ ಮಿಥ್ಯಾ ಆಚ್ಛಾದನಕ್ಕೆ ಸಂಕೋಚನ, ಸಂಹರಣ, ಪ್ರತ್ಯಾಕರ್ಷಣ ಪೂರ್ವಕ ಸಂಹಾರಮಾಡುವನು. ಹಾಗೂ ಸತ್ಯಸ್ವರೂಪ "ಏಕತ್ವ"ಕ್ಕೆ ಪುನಃ ಪ್ರಕಾಶಿತ ಮಾಡುವನು. "ಲಿಂಗ-ಪೂಜಾ-ತತ್ವ"ದಲ್ಲಿ ಇದರ ಸುಂದರ ವ್ಯಾಖ್ಯೆಯು ಇರುತ್ತದೆ. ಯಥಾ-

"ಏಕೇರ ಸ್ವರೂಪ ಹಯ ಅನಂತ ನಿರ್ಗುಣ।
ಕೇಮನೇ ಜಾನಿಬೇ ಸಾಸ್ತ ಮಾನವ ಸಗುಣ॥
ಸೂಕ್ಷ್ಮ ಹತೇ ಸೂಕ್ಷ್ಮತಮೇ ಸ್ಥಿತ ಸೇ ಏಕತ್ವೇ।
ಸ್ಥೂಲ ಹತೇ ಸ್ಥೂಲತಮೇ ವಿಭೇದ ಬಹುತ್ವ॥
ಬಹುತ್ವೇರ ರಾಹು ಪಾಶೇ ಬದ್ಧ ಜೀವಯತ।
ತಾಹೇ ಭಯ ಭ್ರಾಂತಿ ಆದಿ ಹಯ ಉಪಜಾತ॥
ಬಹುತ್ವ ಭೇದಿಯಾ ಯೇ-ಇ ಲಭಯೇ ಏಕತ್ವ।
ಶೋಕ ದುಃಖ ಮುಕ್ತ ಸೇ-ಇ ಸದಾನಂದ ಚಿತ್ತ॥
ಬಲಿಛೇ ವೇದಾಂತ-ವೇದ, ತುಮಿ ಸೇ-ಇ ಏಕ।
"ತತ್ತ್ವಮಸಿ" ಮಹಾವಾಕ್ಯ ಬಿಚಾರಿಯಾ ದೇಖ॥"

**ಪುನಶ್ಚ:**

"ಗುಣಾತೀತ ಭೂಮಾ ವಿಭೂ ಬ್ರಹ್ಮ ಸನಾತನ।
ಅಂಶ-ಅಂಶಿ ಭಾವ ತಾಹೇ ನಹೇ ಸಂಭಾವನ॥
ಜಲಮಧ್ಯೇ ಘಟ ಯಥಾ ಕೈತೀ ನಿಮಜ್ಜನ ।
ಏಕ ಘಟ ದ್ವಿಧಾಕಾರೇ ಹಯ ದರಶನ॥
ತೇಮನಿ ಮಾಯಾರ ಯೋಗೇ ದ್ವಿಧಾ ಭೇದ ಹಯ।
ಸ್ವರೂಪೇತೇ ಏಕತತ್ತ್ವ ಜಾನಿಬೇ ನಿಶ್ಚಯ॥"

**ಸಸೀಮ ಮತ್ತು ಅಸೀಮ:**

ಪುನರಪಿ ಸಸೀಮದಲ್ಲಿ ಅಸೀಮದ ಉದ್ದೀಪನ ಸಂಪರ್ಕದಿಂದ "ಲಿಂಗ-ಪೂಜಾ-ತತ್ತ್ವ" ದಿಂದ ಮತ್ತು ಕೆಲವನ್ನು ಉಧೃತ ಮಾಡುತ್ತೇವೆ.

"ಸಸೀಮ ಯೇ ಕ್ಷುದ್ರ ಚಿಹ್ನ ಕರಿ ಆಲಂಬನ ।
ಅಸೀಮ ಬ್ರಹ್ಮ ಸದ್ಭಾವ ಹಬೇ ಉದ್ದೀಪನ॥
ಹೃದಯೇ ಬಿರಾಜೇ ಬ್ರಹ್ಮ ಅಂಗುಷ್ಠೀರ ಪ್ರಾಯ।
ಯಾಹಾರ ಮಹಿಮಾ ಯತ ವೇದ ಶಾಸ್ತ್ರೇ ಗಾಯ॥
ಅಂಗುಷ್ಠ ಪ್ರಮಾಣ ಲಿಂಗ ಸೇ ಹೇತು ಗಡಿಬೇ ।
.................................................
ತಾಣಲಿಂಗ ಪೂಜಾ ಹಯ ಮಹಾನ ಗಭೀರ।
ಕ್ಷುದ್ರಾಕಾರೇ ಬಿರಾಜಿತ ವಿರಾಟ ಶರೀರ॥"

ಮೂಲ ವಿಷಯದಿಂದ ಕೆಲ ದೂರದಲ್ಲಿ ಸರಿದು ಬಂದಿರುವೆವು, ಈಗ ಯಥಾ ಸ್ಥಾನದಲ್ಲಿ ತಿರುಗುತ್ತೇವೆ.

**ಸ್ಮಶಾನ:**

ಸಂಹಾರ ತತ್ತ್ವ ಅರ್ಥಾತ್ ಏಕತ್ವದಲ್ಲಿ ಬಹುತ್ವದ ಲಯ ಅತ್ಯಂತ ದುರ್ಬೋಧ್ಯ ಹಾಗೂ ಇಲ್ಲಿ ಅದು ವಿಶ್ಲೇಷಣದ ಅತ್ಯಂತ ಸ್ಥಾನಾಭಾವವು. ವಿಕಲ್ಪರೂಪದಿಂದ ಇದರ ಸ್ಥೂಲ ಬಹಿಃಪ್ರಕಾಶ ಸ್ಮಶಾನದಲ್ಲಿ ಆಗುವದು. ಸುತರಾಂ ಸ್ಮಶಾನದಲ್ಲಿ ಸಂಹಾರಕರ್ತಾ ಶಿವನ ಅಧಿಷ್ಠಾನವು. ಶಿವನು ಸ್ಮಶಾನೇಶ್ವರ, ಸ್ಮಶಾನಭಸ್ಮ, ಶಿವ ಅಂಗದ ವಿಭೂತಿ; ಸ್ಮಶಾನ ಮಂದಿರದಲ್ಲಿ ಶಿವಲಿಂಗದ ಪ್ರತಿಷ್ಠೆ, ಸ್ಮಶಾನದಲ್ಲಿ ಅನ್ಯದೇವತೆಗಳ ಪ್ರತಿಷ್ಠೆ ಅಥವಾ ಅಧಿಕಾರವಿಲ್ಲ.

**ಲಯ ಅಥವಾ ಮಿಲನ:**

ಇಲ್ಲಿ ಯಾವ ಲಯದ ಸಂಗತಿಯನ್ನು ಹೇಳಿದೆವು, ಜಾಗತಿಕ ವ್ಯಾಪಾರದಲ್ಲಿ, ಆಧ್ಯಾತ್ಮಿಕ ಕ್ಷೇತ್ರದಲ್ಲಿ ಎಲ್ಲಿಯೂ ಈ ಲಯದಿಂದ ಬಿಂದುಮಾತ್ರವೂ ಭೀಷಣತೆ ಇಲ್ಲ. ಲಯವೆಂದರೆ ಮಿಲನ. ಸಮಜಾತೀಯ ಬೃಹತ್ ಕ್ಷುದ್ರ ಅಥವಾ ಸಮಾನ ಎರಡು ಸತ್ತೆಗಳ ಮಿಲನ ಲಯವೆನ್ನುತ್ತಾರೆ; ಇದು ಆನಂದಮಯ ಕೂಡಿ ಇರುವಿಕೆ ಯಥಾ ಜಲದಲ್ಲಿ ಬುದ್ಬುದದ ಲಯ, ಸಾಗರದಲ್ಲಿ ನದಿಯ ಲಯ. ಅಥವಾ ಮಿಲನ ಹೀಗೆ

ಅಖಂಡದಲ್ಲಿ ಖಂಡದ ಮುಖ್ಯದಲ್ಲಿ ಗೌಣದ, ಅಸಾಮಾನ್ಯದಲ್ಲಿ ಸಾಮಾನ್ಯದ, ಸಮಷ್ಟಿಯಲ್ಲಿ ವ್ಯಷ್ಟಿಯ, ಅನಂತದಲ್ಲಿ ಸಾಂತದ, ವಿರಾಟದಲ್ಲಿ ಅಣುವಿನ, ಅಸೀಮದಲ್ಲಿ ಸಸೀಮದ ಲಯ. ಪುನಃ ಪರಮಾತ್ಮನಲ್ಲಿ ಜೀವಾತ್ಮನ, ನಿರಾಕಾರದಲ್ಲಿ ಸಾಕಾರದ, ನಿರ್ಗುಣದಲ್ಲಿ ಸಗುಣದ ಮತ್ತು ನಿರ್ವಿಕಲ್ಪದಲ್ಲಿ ಸವಿಕಲ್ಪದ ಲಯವು. ಈ ಮಿಲನ ಸಾಧಾರಣ ಮಿಲನವಲ್ಲ. ಇದು ಮಹಾಮಿಲನ -ಮಹಾಸಮನ್ವಯ. ಆದರೆ ನಾವು ಇದರಿಂದ ಭಯ ಹೊಂದುವೆವು. ಇದರ ಕಾರಣ ನಾವು ಮಾಯಾಬದ್ಧ ಜೀವವೆಂದು ರಜ್ಜುವಿನಲ್ಲಿ ಸರ್ಪಭ್ರಮ ಮಾಡುವೆವು.

**ಯೋನಿ:**

ಈ ಮೊದಲು ಲಿಂಗಶಬ್ದದ ವ್ಯುತ್ಪತ್ತಿ ಸಂಪರ್ಕದಲ್ಲಿ ಯಥಾ ಸಂಕ್ಷೇಪದಿಂದ ಆಲೋಚನೆಯನ್ನು ಮಾಡಿರುತ್ತೇವೆ. ಈಗ ಯೋನಿ ಶಬ್ದಾರ್ಥ ಸಂಪರ್ಕದಿಂದ ಸ್ವಲ್ಪ ಆಲೋಚನೆಯನ್ನು ಮಾಡುವೆವು. ಯಾಕೆಂದರೆ ಅನಂತರದಲ್ಲಿಯೇ ಈ ಪ್ರಸಂಗದ ಪ್ರಯೋಜನವಾಗುವುದು.

**ಕುಂಡಲಿನೀ ಶಕ್ತಿ:**

ತಂತ್ರಮತದಲ್ಲಿ ಯೋನಿಯೆಂದರೆ ಕುಂಡಲಿನೀಶಕ್ತಿ. ಸಾಧನಕ್ಷೇತ್ರದಲ್ಲಿ ತಂತ್ರ ಮತ್ತು ಯೋಗಶಾಸ್ತ್ರಗಳು ಈ ಕುಂಡಲಿನೀ ಶಕ್ತಿಯ ಅನುಶೀಲನದ ಮೇಲೆ ಅಪರಿಸೀಮ ಗುರುತ್ವವನ್ನು ಆರೋಪ ಮಾಡಿರುತ್ತವೆ.

**ಅಪರಂಪರ ಅರ್ಥ:**

ಅಪರಂಪರ ಅರ್ಥ-ಪ್ರಮಾಣ, ಜಾತಿ, ಸೂತ್ರ, ಉತ್ಸ, ಸೃಷ್ಟಿ, ಸ್ರಷ್ಟಾ, ರಚನಾ, ರಚಯಿತಾ, ಉತ್ಪಾದನ, ಉತ್ಪಾದಕ, ಉತ್ಪತ್ತಿಸ್ಥಾನ, ಭಗ, ಇತ್ಯಾದಿ. ಯೋನಿ ಶಬ್ದದ ಸಂಯೋಗದಿಂದ ಘಟಿತ ಕೆಲವು ಪದಗಳ ಅರ್ಥವನ್ನು ಕೆಳಗೆ ಕೊಟ್ಟಿದೆ. ಯಥಾ ಜಗದ್‌ಯೋನಿ-ವಿಷ್ಣು, ಪದ್ಮಯೋನಿ-ಬ್ರಹ್ಮ, ಶಾಸ್ತ್ರಯೋನಿ-ಏಕಮತದಿಂದ ಶಾಸ್ತ್ರ ಸ್ರಷ್ಟಾ, ಅಪರಮತದಲ್ಲಿ ಶಾಸ್ತ್ರಪ್ರಮಾಣ, ದೇವಯೋನಿ-ಉಪದೇವತೆ, ಪ್ರೇತಯೋನಿ-ಯಕ್ಷ-ರಾಕ್ಷಸ ಗಂಧರ್ವಪ್ರಭೃತಿ, ತಿರ್ಯಗ್‌ಯೋನಿ-ಪಕ್ಷಿ ಪ್ರಭೃತಿ, ಬ್ರಹ್ಮಯೋನಿ-ಗಯಾದ ಹತ್ತರದಲ್ಲಿಯ ಗುಡ್ಡ ಮತ್ತು ದೇವಾಲಯ.

**ಮತಾಂತರ:**

ಶಿವಲಿಂಗದ ಸಂಕ್ಷಿಪ್ತ ಪರಿಚಯವು ಕೊಡಲ್ಪಟ್ಟಿದೆ. ಸುತರಾಂ ಇಲ್ಲಿಯೇ ಈ ಆಲೋಚನೆಯ ಪರಿಸಮಾಪ್ತಿ ಆಗಲು ಶಕ್ಯವಿತ್ತು. ಆದರೆ ಭಿನ್ನಮತಾವಲಂಬಿಗಳು ಶಿವಲಿಂಗಕ್ಕೆ ಶಿವನ ಶಿಶ್ನ ಹಾಗೂ ಶಿವಲಿಂಗವೇಷ್ಟಿತ ಗೌರೀಪಟ್ಟ ದಾಕ್ಷಾಯಣೀ ಸತಿಯ 'ಭಗ'ವೆಂದು ಹೇಳುವರು. ನಾವು ಅವರ ಈ ಧಾರಣಾ ಸಮರ್ಥನ ಮಾಡಲು ಶಕ್ಯವಿಲ್ಲ.

**ಶ್ರೇಣೀ-ಭೇದದಿಂದ ವಿಮೂಢತಾ:**

ಮೊದಲು ಆಕಾಶಲಿಂಗದ ವಿಷಯವನ್ನು ಹೇಳಿರುತ್ತೇವೆ. ಆಕಾಶಲಿಂಗವಂತೂ ಎಂದೂ ಶಿಶ್ನವಲ್ಲ. ಹುಚ್ಚುತನದಿಂದಲೂ ಆಕಾಶಕ್ಕೆ ಎಂದೂ ಶಿಶ್ನ ಅನ್ನತಕ್ಕದ್ದಲ್ಲ. ಅಮರನಾಥಲಿಂಗ, ಕೇದಾರನಾಥಲಿಂಗ, ಭುವನೇಶ್ವರಲಿಂಗ, ಗೋಲಾಕಾರ ಅಂಗುಷ್ಠ ಪರಿಮಾಣದ ಬಾಣಲಿಂಗ, ಅಗ್ನಿ, ಅನಿರ್ವಾಣದೀಪ ಹಿಮಾಲಯ ಇತ್ಯಾದಿಗಳಿಗೆ ಕಣ್ಣಿದ್ದ ಯಾವ ವ್ಯಕ್ತಿಯು ಶಿಶ್ನವೆನ್ನುವನು? ಆದರೂ ಭಿನ್ನಮತಾವಲಂಬಿಗಳು ಆಕಾಶಲಿಂಗ, ಬಾಣಲಿಂಗ, ಭುವನೇಶ್ವರಲಿಂಗ, ಕೇದಾರನಾಥಲಿಂಗಾದಿ 'ಶಿಶ್ನ' ಅಲ್ಲವೆಂದು ಹೇಳುವರು. ದಂಡವತ್ ದಂಡಾಯಮಾನ ಪಾಷಾಣಲಿಂಗವೇ ಶಿಶ್ನವೆಂದು ಹೇಳುವರು. ಶಿವಲಿಂಗದ ಈ ಎರಡು ಪ್ರಕಾರ ಶ್ರೇಣೀಭೇದ

ಅವರು ಯಾವ ಶಾಸ್ತ್ರದಲ್ಲಿ ದೊರಕಿಸಿರುತ್ತಾರೆ? ಆಕಾಶಲಿಂಗ, ಬಾಣಲಿಂಗಾದಿ ಒಂದು ವೇಳೆ ಶಿಶ್ನವಲ್ಲ. ಆದರೆ ದಂಡವತ್ ದಂಡಾಯಮಾನ ಶಿವಲಿಂಗವು ಯಾವ ಅಪರಾಧದಿಂದ 'ಶಿಶ್ನ'ವಾಗುವದು? ಅವರ ವಿಚಾರದ ಅಳತೆಗೋಲು ಯಾವುದು?

**ಮೃತ್ತಿಕಾ ಆಸನ, ಕಾಷ್ಠಾಸನ, ಪಾಷಾಣ ಆಸನ, ಧಾತುಮಯ ಆಸನ :**

ಪೀಠಿಕಾ ಮತ್ತು ಪೀಠಶಬ್ದದ ಅಪಭ್ರಂಶ ಪಿಡಿ (ಆಸನ). ಆಕಾಶಲಿಂಗದ ಆಸನವು ಪೃಥಿವಿಯು. ಸರಳ ಮಾತಿನಲ್ಲಿ ಮೃತ್ತಿಕಾ ಪಾರ್ಥಿವ ಶಿವಲಿಂಗದ ಆಸನವೂ ಮೃತ್ತಿಕೆ. ಆಕಾಶಲಿಂಗ ಮತ್ತು ಪಾರ್ಥಿವಲಿಂಗ ಇವೆರಡೂ ಹಗುರ. ಸುತರಾಂ ಇವೆರಡರ ಆಸನವೂ ಮೃತ್ತಿಕೆ. ಆದರೆ ದಂಡವತ್ ದಂಡಾಯಮಾನ ಪಾಷಾಣ ಲಿಂಗದ ಆಸನವು ಪಾಷಾಣವು. ಯಾಕೆಂದರೆ ಗುರುಭಾರ ಪಾಷಾಣಲಿಂಗ ಚಿರಸ್ಥಾಯಿ; ಆದರೆ ಮೃತ್ತಿಕಾ ಆಸನ ಕ್ಷಣಭಂಗುರ ಮತ್ತು ಕ್ಷಣಸ್ಥಾಯಿ. ಕಟ್ಟಿಗೆಯ ಆಸನವೂ ಸ್ಥಾಯಿ ಅಲ್ಲ. ಮತ್ತು ಶಿವಲಿಂಗದ ಮೇಲೆ ವರ್ಷಿತ ಜಲಧಾರೆಯಲ್ಲಿ ಮಣ್ಣಿನ ಆಸನವು ಸಹಜವಾಗಿಯೇ ಕರಗಿಹೋಗುತ್ತದೆ. ಕಟ್ಟಿಗೆಯ ಆಸನವೂ ಜಲದಲ್ಲಿ ತೊಯ್ದು ನಷ್ಟವಾಗುವದು. ಪ್ರತಿಮಾ ಹಗುರು ಹಾಗೂ ಪ್ರತಿಮೆಯಲ್ಲಿ ಜಲವು ಹೋಗುವದಿಲ್ಲ. ಸುತರಾಂ ಅದಕ್ಕೋಸುಗ ಕಟ್ಟಿಗೆಯೆ ಆಸನವು ನಿರ್ದಿಷ್ಟವಾಗಿರುತ್ತದೆ. ಸಣ್ಣ ಪ್ರತಿಮೆ ಕಟ್ಟಿಗೆಯ ಪಿಡಿ ಅಥವಾ ಜಲ ಚೌಕಿಯ ಮೇಲೆ ಹಾಗು ದೊಡ್ಡ ಪ್ರತಿಮಾ ದೊಡ್ಡ ಚೌಕಿಯ ಮೇಲೆ ನಿರ್ಮಿತವೂ ಪ್ರತಿಷ್ಠಿತವೂ ಆಗುವದು.

ಆಸನವು ತುಚ್ಛವಲ್ಲ, ಅದಕ್ಕೂ ಮರ್ಯಾದೆ ಇರುತ್ತದೆ. ವಿವಾಹಾದಿ ಸಾಮಾಜಿಕ ಉತ್ಸವದಲ್ಲಿ ಮತ್ತು ಪೂಜಾ ಪ್ರಭೃತಿ ಧರ್ಮೀಯ ಅನುಷ್ಠಾನದಲ್ಲಿ ಎಲ್ಲ ಚಿತ್ರಿತ ಆಸನವು ಮಾಂಗಲಿಕ ಉಪಚಾರ ರೂಪದಿಂದ ಗಣ್ಯವಾಗುವದು. ಇದು ಅನುಷ್ಠಾನದ ಅಪರಿಹಾರ್ಯ ಅಂಗವು ಮತ್ತು ವಿಗ್ರಹ ಪ್ರತಿಮಾದಿಯ ಅಭಾವದಿಂದ ಆಸನದ ಮೇಲೆಯೇ ಉಪಾಸ್ಯ ದೇವತೆಗೆ ಆವಾಹನ ಮತ್ತು ಪೂಜಾ ಮಾಡಲ್ಪಡುವದು. ಈ ಆಸನವೇ ಆಕಾಶಲಿಂಗದ ಮೃತ್ತಿಕಾಸನವು. ಪ್ರತಿಮೆಯ ಕಾಷ್ಠಾಸನವು, ದಂಡವತ್ ಪಾಷಾಣಲಿಂಗದ 'ಪಾಷಾಣ ಆಸನ'ವು. ಬಾಣಲಿಂಗಕ್ಕೆ ಧಾತುಮಯ ಆಸನವು. ವಿಭಿನ್ನ ಅವಸ್ಥಾನುಸಾರದಿಂದ ವಿಭಿನ್ನ ವ್ಯವಸ್ಥೆಯು ಇರುತ್ತದೆ. ಈ ಆಸನಕ್ಕೆ ಪಾದಪೀಠ (Foot stall or Plat form) ಅನ್ನಲ್ಪಡುತ್ತದೆ.

ಗೌರೀಪಟ್ಟದ ಈ ವ್ಯಾಖ್ಯೆ ಶಾಸ್ತ್ರ ಮತ್ತು ಕೋಶ ಸಮ್ಮತ ಹಾಗೂ ಅಭಿಜ್ಞ ಪುರೋಹಿತರ ಅನುಮೋದಿತವು.

**ಪ್ರತ್ಯಕ್ಷ ದರ್ಶನ ಮತ್ತು ಪ್ರತ್ಯಕ್ಷ ಸ್ಪರ್ಶನ:**

ಆದರೂ ಯಾರು ಶಿವಲಿಂಗಕ್ಕೆ ಮತ್ತು ಗೌರೀಪಟ್ಟಕ್ಕೆ ಯಥಾಕ್ರಮದಿಂದ ಶಿಶ್ನ ಮತ್ತು ಭಗ ಎಂದು ಹೇಳಲು ಬಯಸುವರೋ ನಾವು ಸವಿನಯದಿಂದ ಅವರಿಗೆ ವಸ್ತುತಂತ್ರವಾದಿ ಆಗಲು ಪ್ರಾರ್ಥಿಸುವೆವು. ದೃಶ್ಯ ಮತ್ತು ಸ್ಪೃಶ್ಯ ಪದಾರ್ಥದ ಪ್ರಕೃತಿ ವಿಚಾರಕ್ಕೆ ಎಲ್ಲಕ್ಕೂ ಮೊದಲು ಅದರ ಪ್ರತ್ಯಕ್ಷ ದರ್ಶನ ಮತ್ತು ಪ್ರತ್ಯಕ್ಷ ಸ್ಪರ್ಶನ ಪ್ರಯೋಜನವು. ಎಲ್ಲೆಡೆಯಲ್ಲಿಯೂ ಈ ಶಿವಲಿಂಗ ಮತ್ತು ಇದರ ಗೌರೀಪೀಠ ಇರುವವು ಹಾಗೂ ಅವುಗಳ ದರ್ಶನ ಸ್ಪರ್ಶನಗಳಿಗೆ ಯಾವ ಅಡ್ಡಿ ನಿಷೇಧಗಳಿಲ್ಲ. ಇದರಿಂದ ಅನಾಯಾಸವಾಗಿ ಸರ್ವ ಸಂಶಯಗಳ ನಿರಸನವು ಸುನಿಶ್ಚಿತವು.

**ಶಿಶ್ನ:**

ಶಿಶ್ನದಲ್ಲಿ ಒಂದು ಮುಂಡ ಮತ್ತು ಒಂದು ಮೂತ್ರರಂಧ್ರ (Urethra) ಇರುತ್ತವೆ. ಶಿವಲಿಂಗದಲ್ಲಿ ಅವು ಇಲ್ಲ. ಆದರೆ ಶಿಶ್ನವು ಯಾವಾಗಲೂ ಅಧೋಮುಖವು. ಆದರೆ ಶಿವಲಿಂಗ ಯಾವಾಗಲೂ ಊರ್ಧ್ವಮುಖವು.

**ಭಗ:**

ಭಗವು ಕತ್ತಿಯ ಒರೆಯಂತೆ ಬದ್ಧಮುಖ. ಸಂಕೀರ್ಣ ಮತ್ತು ಗಂಭೀರವು. ಆದರೆ ಶಿವಲಿಂಗದ ಗೌರೀಪೀಠವು ಪ್ರಶಸ್ತ, ಹಲಚಿ, ಅಗಭೀರ ಮತ್ತು ತೆರೆದದ್ದು. ಆದರೆ ನೀರು ಹೋಗುವ ಸಲುವಾಗಿ ಗೌರೀಪೀಠದಲ್ಲಿ ಒಂದು ಹರಿಯು ಇರುವದು. ಭಗದ ಲಕ್ಷಣವಂತೂ ಇದು ಎಂದೂ ಅಲ್ಲ. ಸುತರಾಂ ಶಿವಲಿಂಗಕ್ಕೆ ಮತ್ತು ಗೌರೀಪೀಠಕ್ಕೆ ಯಥಾಕ್ರಮದಿಂದ ಶಿಶ್ನ ಮತ್ತು ಭಗ ಅನ್ನುವದು ಸಮೀಚೀನವಲ್ಲ. ನೊಣದಲ್ಲಿ ಹಸ್ತಿ ಭ್ರಮ ಅಥವಾ ಹಸ್ತಿಗೆ ನೊಣದ ಭ್ರಮ ನಮ್ಮ ಸುಸ್ತಮಸ್ತಿಷ್ಕದ ಮತ್ತು ಸುಸ್ತಚಿತ್ತದ ಪರಿಚಾಯಕವಲ್ಲ.

**೫೧ ಪೀಠ:**

ಶಿವನ ಯಾವ ಪ್ರತಿಮೆ ಅಥವಾ ಪ್ರತಿಮೂರ್ತಿ ರಚಿತವಾಗಿಲ್ಲ. ದಾಕ್ಷಾಯಣೀ ಸತಿಯ ಪ್ರತಿಮೆಯೂ ಇರುವದಿಲ್ಲ. ಸತೀದೇಹದ ೫೧ ಅಂಗಗಳು ೫೧ ಸ್ಥಾನಗಳಲ್ಲಿ ಬಿದ್ದುದರಿಂದ ಒಂದೇ ಸ್ಥಾನದಲ್ಲಿ ಅಖಂಡ ಸಮಗ್ರ ಸತೀ ದೇಹದ ಅಸ್ತಿತ್ವವು ಇರುವದಿಲ್ಲ. ಸುತರಾಂ ಈ ದುರೂಹ, ಜಟಿಲ ಪರಿಸ್ಥಿತಿಯಲ್ಲಿ ಭಾಗ ಬಿದ್ದುದರಿಂದಲೇ ೫೧ ಸ್ಥಾನಗಳಲ್ಲಿ ೫೧ ಅಂಗಗಳ ಮಾಧ್ಯಮದಲ್ಲಿ ಭಿನ್ನಪೂಜೆಯ ವ್ಯವಸ್ಥೆ ಪ್ರವರ್ತನ ಮಾಡಬೇಕಾಯಿತು. ಒಂದೊಂದು ಸ್ಥಾನದಲ್ಲಿ ಒಂದೊಂದು ಹೆಸರಿನಿಂದ ದೇವಿಯ ಪೃಥಕ ಪೂಜೆಯಾಗುವದು ನಿಜ. ಆದರೆ ಪ್ರತಿಯೊಂದು ಸ್ಥಾನದಲ್ಲಿಯೂ ಅದರ (ಆಕೆಯ) ಅಖಂಡ ಸತ್ತೆಯದೇ ಪೂಜೆಯಾಗುವದು. ಇದು ಸಾಧಾರಣ ರೀತಿಯು ಅಲ್ಲ. ಅವಸ್ಥಾ ವಿಪರ್ಯಾಯ ಹೇತು, ಇದು ಸ್ವಭಾವದ ವ್ಯತಿಕ್ರಮ ಮಾತ್ರ.

ಸತಿಯ ಪೂಜೆಯು ಈ ೫೧ ಪೀಠಗಳಲ್ಲಿ ನಿಬದ್ಧ; ಬೇರೆ ಎಲ್ಲಿಯೂ ಆಕೆಯ ಪೂಜೆಯು ಇಲ್ಲ. ಧರ್ಮಗ್ರಂಥಾದಿಗಳಲ್ಲಿ ಸಹ ಆಕೆಯ ಧ್ಯಾನ, ಮಂತ್ರ, ಸ್ತವ, ಸ್ತುತಿ, ವಂದನಾಗೀತೆ ಇತ್ಯಾದಿ ಕಂಡುಬರುವದಿಲ್ಲ. ಉಪಾಸಕರು ಪೂಜೆಗೋಸುಗ ಏಕಮಾತ್ರ ಯೋನಿಯ ಮಾಧ್ಯಮಕ್ಕೇ ನಿರ್ವಚನ ಮಾಡಿಲ್ಲ. ಅವರು ೫೧ ಸ್ಥಾನಗಳಲ್ಲಿ, ೫೧ ಅಂಗಗಳ ಮಾಧ್ಯಮದಲ್ಲಿಯೇ ದೇವಿಯ ಪೂಜೆಯನ್ನು ಮಾಡುವರು. ಒಂದೇ ಕಾಮರೂಪ ಕಾಮಾಖ್ಯಾತದಲ್ಲಿಯೇ ಯೋನಿಯ ಮಾಧ್ಯಮದಲ್ಲಿ ದೇವಿಯ ಪೂಜೆ ಆಗುವದು; ಬೇರೆ ಎಲ್ಲಿಯೂ ಇಲ್ಲ.

**ಕಾಮರೂಪ ಕಾಮಾಖ್ಯಾ:**

ಈಗ ಕಾಮರೂಪ ಕಾಮಾಖ್ಯಾದ ಒಂದು ಅತಿ ಸಂಕ್ಷಿಪ್ತ ವರ್ಣನೆಯನ್ನು ಕೊಡುತ್ತೇವೆ. ಕಾಮಾಖ್ಯಾಪೀಠವು ಪ್ರಕೃತಿಜತೆ ಸ್ವಯಂಭೂ ಭೂಗರ್ಭದಿಂದ ಸ್ವಾಭಾವಿಕ ಭಾವದಿಂದ ಉತ್ಥಿತವು. ಪರ್ವತದ ವಿಶೇಷ ಒಂದು ಅಂಶವು ಯೋನಿ ಆಕೃತಿ ಸದೃಶವು. ಇದರ ಸಮ್ಮುಖಭಾಗವು ಜನಸಾಧಾರಣರಿಗೆ ಗೋಚರಿತ. ಈ ಭಾಗದಿಂದ ಅವಿರತ ಜಲಧಾರಾ ಪ್ರವಾಹಿತವಾಗುತ್ತದೆ. ಯಾತ್ರಿಗಳು ಆ ಜಲ-ಸ್ಪರ್ಶಪೂರ್ವಕ ಮಂತ್ರೋಚ್ಚಾರಣ ಮಾಡುತ್ತಾರೆ. ಅಪರ ಭಾಗ ರಕ್ತಪಾಷಾಣಮಯವು; ಇದು ಗಂಬುಜ-ಆಕೃತಿ (ಧಾತುನಿರ್ಮಿತ) ಕಠಿಣ ಪಾತ್ರದಿಂದ ಆವೃತವು. ಅದರ ಮೇಲೆ ರಕ್ತವರ್ಣವಸ್ತ್ರದ ಆಚ್ಛಾದನವು, ಇದಕ್ಕೇ ಯೋನಿಪೀಠವೆನ್ನುತ್ತಾರೆ. ಇದಕ್ಕೆ ದರ್ಶನ-ಸ್ಪರ್ಶನಗಳೂ ನಿಷಿದ್ಧ. ಇಡಿಯ ಪೃಥ್ವಿಯಲ್ಲಿ ಇದು ಒಂದೇ ಯೋನಿಪೀಠ. ೫೧ ಪೀಠಗಳಲ್ಲಿ ಇದು ಮಹಾಪೀಠವು. ಆದರೂ ಇಲ್ಲಿ ಯಾವ ಲಿಂಗವೂ ಇಲ್ಲ. ಈ ಪೀಠದ ಪರಿಚಾಲಕ ಪಾಂಡಾಗಳು ಇಲ್ಲಿ ಲಿಂಗಸ್ಥಾಪನೆಗೆ ಯಾವ ಪ್ರಯೋಜನೀಯತೆ ಎಂದು ತಿಳಿದಿಲ್ಲ. ಕಾಮರೂಪ ಕಾಮಾಖ್ಯ ಹೊರತು ಎಲ್ಲೆಡೆಯಲ್ಲಿಯೂ ಲಿಂಗಗಳು ಇರುವವು. ಸುತರಾಂ ಲಿಂಗ ಬಿಟ್ಟು ಯೋನಿ ಇಲ್ಲ. ಅಥವಾ ಯೋನಿ ಬಿಟ್ಟು ಲಿಂಗವಿಲ್ಲ. ಈ ಬಗೆಯ ಧಾರಣೆಯು ಅಸತ್ಯ, ಅದ್ಭುತ ಮತ್ತು ಉದ್ಭಟವು.

**ಎಲ್ಲಿ ಯೋನಿ ಇರುತ್ತದೆ ಅಲ್ಲಿ ಲಿಂಗವಿಲ್ಲ:**

ಈಗ ತಿಳಿಯುವದು, ನಾವು ನಿರ್ವಿವಾದದಿಂದ ಹೇಳಬಲ್ಲೆವು. ಎಲ್ಲಿ ಯೋನಿ ಇರುತ್ತದೆ. ಅಲ್ಲಿ ಲಿಂಗವಿಲ್ಲ; ಎಲ್ಲಿ ಲಿಂಗವಿರುತ್ತದೆ ಅಲ್ಲಿ ಯೋನಿ ಇಲ್ಲ.

**ಎಲ್ಲಿ ಲಿಂಗವಿರುತ್ತದೆ, ಅಲ್ಲಿ ಯೋನಿ ಇಲ್ಲ:**

ಕಾಮರೂಪ ಕಾಮಾಖ್ಯದಲ್ಲಿ ಯೋನಿಯ ಮೇಲೆ ಲಿಂಗದ ಅವಿದ್ಯಮಾನತೆಯ ವ್ಯಾಖ್ಯೆಯನ್ನು ಎರಡನೇ ಯಾವದರಿಂದ ಶಕ್ಯವು?

ಕಾಮರೂಪ ಕಾಮಾಖ್ಯದ ಪಂಡಾಗಳ ಸುಖ್ಯಾತಿಯು ಸರ್ವತ್ರ. ಕಠಿಣ ಧಾತು ಪಾತ್ರದ ದುರ್ಭೇದ್ಯ ಹೊದಿಕೆ ಮತ್ತು ವಸ್ತ್ರಾಚ್ಛಾದನದಿಂದ ಯೋನಿಪೀಠಕ್ಕೆ ಸಂಪೂರ್ಣವಾಗಿ ಜನರ ಕಣ್ಣಿಗೆ ಕಾಣದಂತೆ ಮಾಡಿ, ಅವರು ಸುರುಚಿ, ಭದ್ರತಾ ಮತ್ತು ಶಾಲೀನತೆಯ ಪರಿಚಯವನ್ನು ಮಾಡಿಕೊಟ್ಟಿದ್ದಾರೆ. ಶಿವಲಿಂಗ ಮತ್ತು ತತ್‌ಸಂಲಗ್ನ ಗೌರೀಪೀಠ ಒಂದು ವೇಳೆ ಶಿಶ್ನ ಮತ್ತು ಭಗ ಆಗಿದ್ದರೆ, ಸೇವಾಯತರು ಅದಕ್ಕೂ ಅನುರೂಪ ಭಾವದಿಂದ ಕಠಿಣ ಧಾತು ಪಾತ್ರದ ದುರ್ಭೇದ್ಯ ಹೊದಿಕೆ ಮತ್ತು ಆಚ್ಛಾದನದಿಂದ ಮುಚ್ಚಿ ಇಡುತ್ತಿದ್ದರು. ಸಮಾನ ಕ್ಷೇತ್ರದಲ್ಲಿ ಸಮಾನ ವ್ಯವಸ್ಥೆ ಆಗುವದೇ ಸ್ವಾಭಾವಿಕವು. ಆದರೆ ಶಿವಲಿಂಗ ಮತ್ತು ಗೌರೀಪೀಠದಲ್ಲಿ ಯಾವ ಹೊದಿಕೆಯೂ ಇಲ್ಲ. ಅನಾವೃತ ಮತ್ತು ತೆರೆದದ್ದು ಇರುತ್ತದೆ.

**ಲಜ್ಜಾಸ್ಥಾನ:**

ಸುಸಭ್ಯ ಸಮಾಜದಲ್ಲಿ ಲಜ್ಜಾಸ್ಥಾನವು ಅನಾವೃತ ಇಡುವದು ಅಪರಾಧ ಮತ್ತು ರಾಜದ್ವಾರದಲ್ಲಿ ದಂಡನೀಯ. ದೇವತೆಗಳಲ್ಲಿಯೂ ಇದು ನಿಷಿದ್ಧ. ಪ್ರಾಚೀನ ಧರ್ಮಶಾಸ್ತ್ರಗಳಲ್ಲಿ ಅಥವಾ ಆಧುನಿಕ ಸಾಹಿತ್ಯದಲ್ಲಿ ಇತಿಹಾಸಗಳಲ್ಲಿ ಈ ಬಗೆಯ ಅಮಾನುಷೋಚಿತ ಪದ್ಧತಿಯ ಯಾವ ಅಸ್ತಿತ್ವವು ಕಂಡುಬಂದಿಲ್ಲ. ಹಾಗಾಗಿ ಭಿನ್ನ ಮತಾವಲಂಬಿಗಳು ಇದನ್ನು ಎಲ್ಲಿಂದ ತಂದರು?

**ಗೌರೀಪೀಠ ಅಲ್ಲ, ಸತೀಪೀಠ:**

ಗೌರೀಪೀಠ ಒಂದುವೇಳೆ ಸತಿಯ ಯೋನಿ, ಅದರ ಹೆಸರು ಸತೀಪೀಠ ಆಗಲಿಲ್ಲವೇಕೆ? ಅದರ ಮೇಲೆ ಸತಿಯ ಪೂಜಾ ಆಗದೆ "ಏತೇ ಗಂಧ ಪುಷ್ಪೇ ನಮಃ ಗೌರ್ಯೈ ನಮಃ" ಎಂದು ಗೌರಿಯ ಪೂಜೆ ಆಗುವದು ಏಕೆ? ಶಿವಪೂಜಾ ಕಾಲೀನ ಅವಶ್ಯಕರಣೀಯ ಪಂಚದೇವತೆಗಳ ಪೂಜೆಯಲ್ಲಿ ಸತಿಯ ಪೂಜೆ ಆಗದೆ "ಏಷಃ ಗಂಧಃ ನಮಃ ದುರ್ಗಾಯೈ ನಮಃ" ಈ ಮಂತ್ರದಲ್ಲಿ ದುರ್ಗೆಯ ಪೂಜೆಯಾಗುವದು ಏಕೆ?

ಲಿಂಗ ಮತ್ತು ಯೋನಿಯ ವಿವಿಧ ಅರ್ಥ ಪೂರ್ವದಲ್ಲಿಯೇ ಉಕ್ತವಾಗಿರುತ್ತದೆ. ಸಹೃದಯ ಪಾಠಕವರ್ಗ ಅನುಗ್ರಹ ಪೂರ್ವಕ ಅದನ್ನು ಅವಧಾನ ಮಾಡತಕ್ಕದ್ದು, ಮೀಮಾಂಸದ ಪಥವು ಸುಗಮವಾಗುವದು.

**ಕಾಮಾಖ್ಯಾದ ಯೋನಿಪೀಠ ಮತ್ತು ಕಾಶಿಯ ವಿಶ್ವನಾಥ:**

ಕಾಮಾಖ್ಯಾದಲ್ಲಿ ಯೋನಿಪೀಠದಲ್ಲಿ ಲಿಂಗವಿಲ್ಲ. ಕಾಶೀ ಧಾಮದಲ್ಲಿ ವಿಶ್ವನಾಥ ಲಿಂಗದಲ್ಲಿ ಗೌರೀಪೀಠವಿಲ್ಲ. ಇದು ಲಕ್ಷಣೀಯವು.

ಶಾಸ್ತ್ರಮತದಲ್ಲಿ ಅಂಗಹೀನ, ಕ್ಷತಯುಕ್ತ, ಖಂಡಿತ ಇತ್ಯಾದಿಗಳ ಪೂಜೆಯು ನಿಷಿದ್ಧವು ಮತ್ತು ಅಶುದ್ಧವು. ಶಿವದೇಹದಿಂದ ಹಾಗೆ ಹೇಳಿದ ಖಂಡಿತ ಜನನೇಂದ್ರಿಯ ಲಿಂಗವಂತೂ ಅದೇ ನಿಜ. ಸುತರಾಂ ಅದರ ಪೂಜೆ ಆಗಲು ಶಕ್ಯವಿಲ್ಲ. ಶಿವನ ಯಾವ ಅಂಗವೂ ಖಂಡಿತ (amputated) ಆಗಿಲ್ಲ. ಶಿವನು

ನಿತ್ಯನು, ಅಖಂಡನು. ಸುತರಾಂ ಎಲ್ಲಿಂದ ಖಂಡ ಬರುವದು? ಒಂದು ವೇಳೆ ಖಂಡವೇ ಬರದಿದ್ದರೆ ಅಸ್ತಿತ್ವಹೀನ ಖಂಡದ ಪೂಜೆಯು ಸಂಭವವಲ್ಲ; ಇಂತಹ ಹುಚ್ಚರು ಯಾರು ಇರುತ್ತಾರೆ, ಅಖಂಡದ ಪೂಜೆಯಲ್ಲಿ ಯಾರ ಬಯಕೆಯು ಕೊನೆಗೊಳ್ಳಲಿಲ್ಲ-ಅದೇ ಅಖಂಡವನ್ನು ಬಿಟ್ಟು ಅಸ್ತಿತ್ವಹೀನ ಖಂಡದ ಪೂಜಾ ಮಾಡುತ್ತಾರೆ, ಕಾಯಾ ಬಿಟ್ಟು ಛಾಯಾ ಹಿಡಿಯಲಿಕ್ಕೆ ಬಯಸುವರು. ಬಂಗಾರವನ್ನು ಒಗೆದು ತುಚ್ಛವಾದ ಕಾಜಿನ ಚೂರನ್ನು ತಲೆಯಲ್ಲಿ ಇಟ್ಟು ನೃತ್ಯ ಮಾಡುವನು.

ಏಕಮಾತ್ರ ಅಖಂಡದ್ದೇ ಸತ್ತೆಯು ಇರುತ್ತದೆ. ಮಾನವನು ಸತ್ತಾದ ಪೂಜೆಯನ್ನೇ ಮಾಡುವನು. ಸುತರಾಂ ಅವನು ಸತ್ತಾಹೀನ ಖಂಡದ ಪೂಜೆ ಮಾಡುವದೇಕೆ?

**ನವದ್ವಾರ:**

ಮಾನವ ದೇಹದ ನವದ್ವಾರಗಳಲ್ಲಿ ಮಲದ್ವಾರ ಮತ್ತು ಮೂತ್ರದ್ವಾರಗಳು ಅತ್ಯಂತ ಅಶುಚಿ. ಸುತರಾಂ ಯಾವ ಸುಸ್ಥಚಿತ್ತವ್ಯಕ್ತಿ ಎಂದೂ ಅವುಗಳ ಪೂಜೆಯನ್ನು ಮಾಡಲು ಶಕ್ಯವಿಲ್ಲ.

**ಸಾದೃಶ್ಯಹೀನ:**

ಶಿವಲಿಂಗಕ್ಕೆ ಹಲವು ಆಕಾರಗಳಿವೆ. ಇವುಗಳಲ್ಲಿ ಯಾವದರೊಡನೆಯೂ ಶಿಶ್ನದ ಸಾದೃಶ್ಯವಿಲ್ಲ. ಗೌರೀಪೀಠಕ್ಕೂ ಹಲವು ಆಕಾರಗಳಿವೆ ಎಂದು ಈ ಮೊದಲೇ ಹೇಳಿದೆ. ಇವುಗಳಲ್ಲಿ ಯಾವದರೊಡನೆಯೂ ಭಗದ ಸಾದೃಶ್ಯವಿಲ್ಲ.

ಯಾರು ಎಂದಾದರೂ ತನ್ನ ಕಣ್ಣಿನಿಂದ ಜನನೇಂದ್ರಿಯ ಪೂಜೆ ನೋಡಿರುವರೋ? ಅಥವಾ ತನ್ನ ಕಿವಿಯಿಂದ ಆ ಪೂಜೆಯ ಮಂತ್ರತಂತ್ರಗಳನ್ನು ಕೇಳಿರುವರೇನು?

ಸ್ಥೂಲ ಅರ್ಥದಲ್ಲಿ ಜನನೇಂದ್ರಿಯ ರೂಪದಿಂದ ಯೋನಿ ಮತ್ತು ಲಿಂಗದ ಅಸಂಗಲಿಪ್ಸಾ ಅತಿ ಪ್ರಬಲ, ಪರಸ್ಪರ ಆಕರ್ಷಣವು ಅದಮ್ಯ, ಎರಡೂ ಎದುರು ಬದಿರು ದೃಢ ಆಲಿಂಗನಾ ಬದ್ಧ, ಈ ಅರ್ಥದಲ್ಲಿ ಲಿಂಗವು ಯಾವಾಗಲೂ ಅಧೋಮುಖೀ ಅಧೋ ಗಾಮಿ, ಯೋನಿ ಅನುರಾಗೀ, ಯೋನಿ ಅನುಗಾಮೀ, ಯೋನಿ ಸುಖೀ ಮತ್ತು ಯೋನಿ ಭೋಗಿಯು.

ಆದರೆ ಗೌರೀಪೀಠ ವೇಷ್ಟಿತ ಶಿವಲಿಂಗದಲ್ಲಿ ನಾವು ಸಂಪೂರ್ಣ ವಿಪರೀತ ದೃಶ್ಯವನ್ನು ನೋಡುವೆವು. ಇಲ್ಲಿ ಅಸಂಗ-ಲಿಪ್ಸಾ ಮತ್ತು ಆಕರ್ಷಣದ ಏಕಾಂತ ಅಭಾವ, ಪ್ರತ್ಯಾಕರ್ಷಣವು ಅತಿವೇಗದಿಂದ, ಭೋಗದಲ್ಲಿ ಸಂಪೂರ್ಣ ಅರುಚಿ. ಗೌರೀಪೀಠ ವೇಷ್ಟಿತವಾಗಿದ್ದರೂ ಶಿವಲಿಂಗ ಸ್ಪರ್ಶ-ಬೋಧ-ರಹಿತ, ವಿರಕ್ತ, ವಿಮುಖ ಊರ್ಧ್ವಗ, ಊರ್ಧ್ವದೃಷ್ಟಿ, ನಿರ್ವಿಕಾರ ಸಮಾಧಿ-ಮಗ್ನ. ಈ ಅಲೋಕ ಸಾಮಾನ್ಯ ಮಹಾನ್ ದೃಶ್ಯ ಮದನ ಭಸ್ಮಕಾರೀ ಕಾಮಗಂಧಹೀನ, ಊರ್ಧ್ವರೇತಾಃ ಜ್ಞಾನೀಶ್ವರ, ತ್ಯಾಗೀಶ್ವರ, ಯೋಗೀಶ್ವರ ಶಿವ ಚರಿತ್ರವೇ ಯೋಗ್ಯವು.

ಏಕಮಾತ್ರ ಸತಿ ದೇಹವೇ ೫೧ ಅಂಶಗಳಲ್ಲಿ ವಿಭಕ್ತವಾಗಿತ್ತು, ಶಿವನು ಸಮಾನ ಅಖಂಡನು ಮತ್ತು ನಿರಂಶನು.

ಯಾವ ಧ್ಯಾನ, ಮಂತ್ರ, ಸ್ತವ, ಸ್ತುತಿಗಳಲ್ಲಿ ಲಿಂಗ ಶಬ್ದದ ಉಲ್ಲೇಖವಿಲ್ಲ. ಶಿಶ್ನ ಶಬ್ದದ ಉಲ್ಲೇಖವಂತು ದೂರಿನ ಮಾತು.

ಶಾಲಗ್ರಾಮವು ಸ್ವಯಂ ವಿಷ್ಣುವಿನ ಪ್ರತೀಕವು. ಅದರ ದೇಹದ ಅಥವಾ ಯಾವ ಅಂಗದ ಅಲ್ಲ. ಶಿವಲಿಂಗವೂ ಸ್ವಯಂ ಶಿವನ ಪ್ರತೀಕ, ದೇಹ ಅಥವಾ ಅಂಗದ್ದು ಅಲ್ಲ.

**ಸೃಷ್ಟಿಶಕ್ತಿಯ ಪ್ರತೀಕ?:**

ಬಂಧುಗಳು ಮತ್ತೂ ಹೇಳುವರು. ಶಿವಲಿಂಗವು ಶಿವನ ಸೃಷ್ಟಿಶಕ್ತಿಯ ಪ್ರತೀಕ (A Symbol for the creative energy of Siva), ಶಿವಶಾಸ್ತ್ರೋಕ್ತ ವಿಷಯವು. ಶಾಸ್ತ್ರವು ಹೇಳುವದು, ಶಿವನ ಸೃಷ್ಟಿಯನ್ನು ಮಾಡುವದಿಲ್ಲ. ಬ್ರಹ್ಮನು ಸೃಷ್ಟಿಯನ್ನು, ವಿಷ್ಣುವು ಪಾಲನೆಯನ್ನು ಮಾಡುವರು. ಶಿವನು ಸೃಷ್ಟಿಯ ಸಂಹಾರವನ್ನು ಮಾಡವನು. ಈ ನೂತನ ಸಂಗತಿಯನ್ನು ಬಂಧುಗಳು ಎಲ್ಲಿಂದ ಯತ್ನಪೂರ್ವಕವಾಗಿ ಸಂಗ್ರಹ ಮಾಡಿದರು? ಈ ಸಂಪರ್ಕದಿಂದ ಪೂರ್ವದಲ್ಲಿಯೂ ಸಹ ಬರೆಯಲಾಗಿದೆ. ಸುತರಾಂ ಹೆಚ್ಚಿಗೆ ಬರೆಯುವದು ಪ್ರಯೋಜನವಿಲ್ಲ.

ಮಸ್ತಕ ಮತ್ತು ಚರಣ ಪರಸ್ಪರ ವಿಪರೀತ ಅಭಿಮುಖಿಗಳು. ಅವುಗಳ ವೃತ್ತಿಗಳೂ ಸಂಪೂರ್ಣ ಭಿನ್ನ. ಸುತರಾಂ ಈ ಎರಡಕ್ಕೆ ಒಂದು ಮಾಡಲಿಕ್ಕೆ ಹೋದ ಮನುಷ್ಯನು ಮಾನಸಿಕನಲ್ಲ. ಆ ಪ್ರಕಾರ ಜನನೇಂದ್ರಿಯಕ್ಕೆ ಶಿವನ ಪ್ರತೀಕ ರೂಪದಿಂದ ಸಿದ್ಧಮಾಡಲಿಕ್ಕೆ ಹೋಗುವದು ಬಹಳೇ ಮರ್ಯಾದಾಹೀನ, ಅಸಂಬದ್ಧವು. ಜನನೇಂದ್ರಿಯದಲ್ಲಿ ಕಾಮದ ಪೂರ್ಣ ಅಧಿಷ್ಠಾನ, ಇದು ಕಾಮನೆಯ ಉದ್ದೀಪಕ. ಅದರ ಸ್ಥಾನವು ಪ್ರಮೋದ ಭವನದಲ್ಲಿ, ಸಂಸಾರದಲ್ಲಿ ಎಷ್ಟು ಅನಾಸೃಷ್ಟಿ, ಅದರ ಅಧಿಕಾಂಶದ ಉತ್ಪತ್ತಿ ಈ ಕಾಮದಿಂದ. ದೊಡ್ಡ ವೈರಿಗಳಲ್ಲಿ ಮುಖ್ಯವೈರಿ ಕಾಮ. ಅಂತೆ ಸರ್ವಮಂಗಲಾಲಯ ಶಿವನು. ಕಾಮ+ಅರಿ, ಮದನ+ಭಸ್ಮಕಾರಿ, ಸ್ಮಶಾನವಾಸಿ, ಕಾಮಿನಿ ಕಾಂಚನ ತ್ಯಾಗಿ, ನೈಷ್ಟಿಕ ಬ್ರಹ್ಮಚಾರಿ. ತಾಪ ಮತ್ತು ಶೈತ್ಯದ ಕೂಡುವಿಕೆ ಆಗುವದಿಲ್ಲ. ಅದರಂತೆ ಒಂದೇ ಬಂಧನಿಯಲ್ಲಿ ಶಿವ ಮತ್ತು ಕಾಮವಾಗಿ ಜನನೇಂದ್ರಿಯದ ಸಹ ಅಸ್ತಿತ್ವ ಒಮ್ಮೇಲೆ ಅಸಂಭವು. ಪ್ರತೀಕವು ಬ್ರಹ್ಮಭಾವದ ಉದ್ದೀಪಕವಾಗುವದು. ಜನನೇಂದ್ರಿಯವು ಅದನ್ನೇ ಶಾಸ್ತ್ರದಲ್ಲಿಯೂ ಇದಕ್ಕೆ ನರಕದ ದ್ವಾರವೆಂದು ಹೇಳಿದೆ. ಶಿವ ಲಯ ಸ್ಥಾನ, ಜನನೇಂದ್ರಿಯವು ಸೃಷ್ಟಿ ಸ್ಥಾನ, ಒಮ್ಮೆಯೇ ವಿಪರೀತ ಜನನೇಂದ್ರಿಯಕ್ಕೆ ಶಿವನ ಪ್ರತೀಕ ಮಾಡಿದರೆ, ಶಿವನಿಗೆ ಒಮ್ಮೇಲೆ ವಿಪರೀತ ಕೊಡಬೇಕಾಗುವದು.

**ಶಿವರಾತ್ರಿ ಮತ್ತು ಚೈತ್ರದ ಶಿವನ ಉತ್ಸವ:**

ಶಿವೋಪಾಸಕರ ಪ್ರಧಾನ ಲಕ್ಷ್ಯವು ಕಾಮದ ಉತ್ಪಾದನ. ಶೈವ ಸನ್ಯಾಸಿಗಳು ಕಾಮಿನಿ ಕಾಂಚನ ತ್ಯಾಗಿಗಳು. ಗೃಹಿ ಭಕ್ತರು ಸಂಸಾರದಲ್ಲಿದ್ದರೂ ಆ ಒಂದೇ ಆದರ್ಶವನ್ನು ಸನ್ಮುಖದಲ್ಲಿಟ್ಟು ಯಥಾಶಕ್ತಿ ನಿಷ್ಕಲುಷ ಜೀವನ ಯಾಪನ ಅಭ್ಯಾಸ ಮಾಡುವರು. ಶಿವರಾತ್ರಿ ಉಪಲಕ್ಷದಿಂದ ಎಲ್ಲರೂ ಮೂರು ದಿವಸ ಕಠೋರ ಕೃಚ್ಛ್ರ-ಸಾಧನ ಮತ್ತು ಬ್ರಹ್ಮಚರ್ಯ ಪಾಲನೆ ಮಾಡುತ್ತಾರೆ. ಚೈತ್ರಮಾಸದಲ್ಲಿ ಹಲವು ಮನೆಗಳಲ್ಲಿ ಶಿವನ ಪೂಜೆಗೆ ಸನ್ಯಾಸಿಗಳು ಸಿದ್ಧವಾಗಿ ಪೂರ್ಣ ಒಂದು ತಿಂಗಳು ಅವಿಶ್ರಾಂತ ಬ್ರಹ್ಮಚರ್ಯ ಅಭ್ಯಾಸ ಮಾಡುತ್ತಾರೆ. ಶೈವಸಮಾಜದ ಹೊರಗೆ, ಒಳಗೆ, ಆಚಾರದಲ್ಲಿ ಅನುಷ್ಠಾನದಲ್ಲಿ ಎಲ್ಲಿಯೂ ಭೋಗಕ್ಕೆ ಸ್ಥಾನವಿಲ್ಲ. ಎಲ್ಲೆಡೆಯಲ್ಲಿಯೂ ತ್ಯಾಗದ ಪ್ರಾಧಾನ್ಯ.

ಇಂಗ್ರೇಜಿಯಲ್ಲಿ ಒಂದು ಕಥೆ ಇರುತ್ತದೆ. 'God made man after His own image.' ಈಶ್ವರನು ತನ್ನಂತೆ ಅಂದರೆ ತನ್ನ ಪ್ರಕೃತಿಯ ಅನುರೂಪ ಶುದ್ಧ ಪ್ರಕೃತಿ ಸಂಪನ್ನ ಮಾನವಸೃಷ್ಟಿಯನ್ನು ಮಾಡಿದ್ದನು. ಕಾಲಕ್ರಮದಿಂದ ಪ್ರಾಯ ಎಲ್ಲ ಮಾನವರೂ ಈಶ್ವರದತ್ತ ಪವಿತ್ರ ಪ್ರಕೃತಿಯನ್ನು ಕಳಕೊಂಡರು. ಅವರ ಮೊದಲಿನ ಮನೋವೃತ್ತಿಯೂ ರೂಪಾಂತರವನ್ನು ಹೊಂದಿತು. ಕೇವಲ ಅದೇ ಅಲ್ಲ, ಅವರು ತಮ್ಮಂತೆ ಅಂದರೆ ತಮ್ಮ ನೂತನ ಪರಿವರ್ತಿತ ನಷ್ಟ ಪ್ರಕೃತಿ ಅನುಸಾರವಾಗಿ ತಮ್ಮ ಈಶ್ವರನನ್ನು ನೂತನ ರೂಪದಲ್ಲಿ-ಪರಿವರ್ತಿತ ವಿಕೃತ ಆಕಾರದಲ್ಲಿ ಲೋಕಸಮಾಜದಲ್ಲಿ ಪ್ರಚಾರ ಮಾಡಿದರು. ಇದಕ್ಕೆ 'man makes God after him' ಎಂದು ಅನ್ನುತ್ತಾರೆ.

**ಶಿವನನ್ನು ಮಾಡಹೋಗಿ ವಾನರ ಮಾಡಿದರು:**

ಬಂಗಾಲದಲ್ಲಿ ಕತೆ ಇರುತ್ತದೆ: ಮಾನವನು ಶಿವನನ್ನು ರಚಿಸಲು ಮಂಗವಾಯಿತು. ಮಾನವನು ಒಂದುವೇಳೆ ಶಿವನನ್ನು ದೇವತೆಯ ಆಸನದಿಂದ ಇಳಿಸಿ ಮಾನವರೂಪದಲ್ಲಿ ರಚಿಸಿದ್ದರೆ ಮನಸಿಗೆ ಪ್ರಬೋಧ ಕೊಡಲು ಶಕ್ತವಾಗುತ್ತಿತ್ತು. ಆದರೆ ಮಾನವನು ತನ್ನ ಈಶ್ವರನಿಗೆ ಮತ್ತೂ ಕೆಳಗೆ ಇಳಿಸಿದ್ದಾನೆ. ಒಮ್ಮೆಲೇ ವಾನರ ಮಾಡಿ ಒಗೆದಿರುತ್ತಾನೆ. ಇದು ಎಲ್ಲ ದೇವ ದೇವೀ ಸಂಪರ್ಕದಲ್ಲಿಯೂ ಪ್ರಯೋಜ್ಯವು. ಪುರಾತನ ಕಾವ್ಯ ಗ್ರಂಥಾದಿಗಳಲ್ಲಿ ಮತ್ತು ವ್ರತ ಕಥಾದಿಗಳಲ್ಲಿ ಇದರ ಹಲವು ಪ್ರಮಾಣಗಳು ದೊರೆಯುತ್ತವೆ. ಅಲ್ಲಿ ತಾವು ನೋಡತಕ್ಕದ್ದು: ದೇವತೆಗಳು ಅಪರಾಪರ ದೇವತೆಗಳ ಭಕ್ತರುಗಳಿಂದ ಪೂಜಾ ಆದಾಯ ಕರಣದ ಪ್ರಬಲ ಆಗ್ರಹದಿಂದ, ಅವರ ಮೇಲೆ ಅಮಾನುಷ್ಯೋಚಿತ ಅತ್ಯಾಚಾರಗಳನ್ನು ಮಾಡುತ್ತಾರೆ. ಅದು ಇಷ್ಟು ಚರಮದಲ್ಲಿ ಏಳುತ್ತದೆ-ಮಾನುಷ ಸ್ವಪ್ನದಲ್ಲಿಯೂ ಅದನ್ನು ಕಲ್ಪಿಸಲು ಶಕ್ಯವಿಲ್ಲ. ಇದರ ಒಂದು ದೃಷ್ಟಾಂತ ಬೇಹುಲಾ- ಲಖಿಂದರರ ಕತೆಯಲ್ಲಿ ನೋಡತಕ್ಕದ್ದು.

ದೇವತೆಗಳು ನಿಪೀಡನ ಕೊಡುತ್ತಿದ್ದರೆಂದಲ್ಲ. ಮನುಷ್ಯ ದೇಹಧಾರಣ ಮಾಡಿಯೂ ಯಾರು ಪಶು-ಪ್ರಕೃತಿ, ಅವರೂ ತಮ್ಮ ತಮ್ಮ ಪಶು-ಪ್ರಕೃತಿ ಅನುಯಾಯೀ ದೇವತೆಗಳಿಗೂ ಲೋಭೀ, ಪರಶ್ರೀಕಾತರ, ಕ್ಷಮತಾಪ್ರಿಯ, ಹಿಂಸ್ರ ಹಾಗೂ ನಿಷ್ಠುರ ರೂಪದಿಂದ ಕಲ್ಪನಾ ಮತ್ತು ಪ್ರಚಾರ ಮಾಡುತ್ತಾರೆ. ಇವರ ಆಚ್ಛಾದನದಿಂದ ಬಿದ್ದು ದೇವತೆಗಳ ನಿಷ್ಕಲುಷ ಪವಿತ್ರ ಶುಭಂಕರ ರೂಪವು ಮುಚ್ಚಿ ಹೋಗುತ್ತದೆ. ಇದೇ "ದೇವತಾ ರಚಿಸಲಿಕ್ಕೆ ಹೋಗಿ ವಾನರ ರಚಿಸಿದರು."

ನಾವು ಆದಿ, ಅ-ಸಂಗ ಅವಿಮಿಶ್ರ ಶಿವನ ಆಲೋಚನೆಯನ್ನು ಮಾಡುತ್ತೇವೆ. ಪರಿವರ್ತಿಯುಗದ ಜನರು ಒಂದು ವೇಳೆ ತಮ್ಮ ತಮ್ಮ ಅಭಿರುಚಿ ಅನುಯಾಯಿ ಶಿವ ಸಂಪರ್ಕದಿಂದ ಹಲವು ಕತೆಗಳನ್ನು ರಚಿಸಿರುತ್ತಾರೆ. ತತ್ ಸಂಪರ್ಕದಿಂದ ಆಲೋಚನಾ ನಮ್ಮ ಅಭಿಪ್ರಾಯವಲ್ಲ.

**ವಿವಿಧ ಆಕಾರ ಮತ್ತು ವಿವಿಧ ಅವಸ್ಥಾನ:**

ಇದರ ಮೊದಲು, ನಾನಾ ಆಕಾರಗಳ ಶಿವಲಿಂಗ ಗೌರೀಪೀಠಗಳಿರುತ್ತವೆಂದು ಹೇಳಿರುತ್ತೇವೆ. ಶಿವಲಿಂಗ ಅಂಗುಷ್ಠ ಪರಿಮಾಣದಂತೆ ಕ್ಷುದ್ರ; ಪುನಃ ಆಕಾಶದಂತೆ ವಿರಾಟ ಮತ್ತು ಅಸೀಮ. ಹಂಸದ ತತ್ತಿಯಂತೆ ಗೋಲಾಕಾರ ಪುನಃ ದಂಡವತ್ ದಂಡಾಯಮಾನ. ಗೌರೀಪೀಠವು ಸಹ ಡಬ್ಬಿಯಂತೆ ಕ್ಷುದ್ರ ಮತ್ತು ಪೃಥ್ವಿಯಂತೆ ಬೃಹತ್. ಇವುಗಳ ಅವಸ್ಥಾನದಲ್ಲಿಯೂ ಬಹಳ ಪ್ರಭೇದವಿರುತ್ತದೆ. ಆ ಸಂಬಂಧದಿಂದ ಈ ಮೊದಲು ಕಿಂಚಿತ್ ಆಲೋಚನೆಯನ್ನು ಮಾಡಿರುತ್ತೇವೆ.

ಲಿಂಗಭೇದದಿಂದ ಗೌರೀಪೀಠದ ಅವಸ್ಥಾನ ದ್ವಿವಿಧ. ಆಕಾಶಾದಿ ಸ್ವಯಂಭು ಶಿವಲಿಂಗದ ಕ್ಷೇತ್ರದಲ್ಲಿ ಗೌರೀಪೀಠದ ಅವಸ್ಥಾನ ಶಿವಲಿಂಗದ ಕೆಳಭಾಗದಲ್ಲಿ ದಂಡವತ್ ದಂಡಾಯಮಾನ ಶಿವಲಿಂಗ. ಗೌರೀಪೀಠದ ಅವಸ್ಥಾನವು ಶಿವಲಿಂಗದ ಕಟಿದೇಶದಲ್ಲಿ ಕಟಿಬಂಧದಂತೆ, 'Like a belt round the waist'.

ಭಿನ್ನ ಮತಾವಲಂಬಿಗಳು ಈ ಲಿಂಗ ಮತ್ತು ಪೀಠಕ್ಕೂ ಯಥಾಕ್ರಮದಿಂದ ಶಿಶ್ನ ಮತ್ತು ಭಗ ಅನ್ನಲು ಬಯಸುವರು; ಮತ್ತು ಪ್ರತ್ಯಕ್ಷದರ್ಶನ-ಪ್ರತ್ಯಕ್ಷ ಸ್ಪರ್ಶನ-ಪ್ರತ್ಯಕ್ಷ ಪರೀಕ್ಷಾದಿಂದ ಸುಸ್ಪಷ್ಟ ಪ್ರಮಾಣಿತವಾಗಿರುತ್ತದೆ. ಅವುಗಳ ಆಕಾರದಲ್ಲಿ ಮತ್ತು ಅವಸ್ಥಾನದಲ್ಲಿ ಬಿಂದು ಮಾತ್ರ ಕೂಡುವಿಕೆ ಇಲ್ಲ. ಇವುಗಳು ಕ್ವಚಿತ್ ಒಂದು ಅಲ್ಲ.

ಆದರೂ ನಾರೀದೇಹದಲ್ಲಿ ಎಂದೂ ಏಕಾಧಿಕ ಭಗ ಇರುವದಿಲ್ಲ. ಸತೀ ದೇಹದ ಈ ಅಂಗವು ಕಾಮಾಖ್ಯಾದಲ್ಲಿ ಪತಿತವಾಗಿತ್ತು ಹಾಗೂ ಇದು ಏಕಮಾತ್ರ ಕಾಮಾಖ್ಯಾದಲ್ಲಿಯೇ ನಿಬದ್ಧ ಮತ್ತು ಪೂಜಿತ. ಕಾಮಾಖ್ಯಾದ ಹೊರಗೆ ಎಲ್ಲಿಯೂ ಸತಿಯ ಯೋನಿ ಇಲ್ಲ ಮತ್ತು ಯೋನಿಯು ಪೂಜೆ ಇಲ್ಲ.

**ಯೋನಿ ಮತ್ತು ಲಿಂಗದ ಸಹ ಅವಸ್ಥಾನ ಭೂಯಾ :**

ಕಾಮಾಖ್ಯಾದಲ್ಲಿ ಯೋನಿ ಇರುತ್ತದೆ, ಲಿಂಗವಿಲ್ಲ. ಕಾಮಾಖ್ಯಾದ ಹೊರಗೆ ಹಲವು ಸ್ಥಾನಗಳಲ್ಲಿ ಹಲವು ಆಕಾರದ ಅಸಂಖ್ಯ ಶಿವಲಿಂಗಗಳು ಇರುತ್ತವೆ. ಆದರೆ ಯೋನಿ ಒಂದೂ ಇಲ್ಲ.

**ಹೊಲಸನ್ನು ಮಾತ್ರ-ನೋಡುವವರು:**

ನಮ್ಮ ಇಂತಹ ಮಾರಾತ್ಮಕ ತಪ್ಪು ಆಗುವದು ಏಕೆ? ಸತ್ಯ ಮಾತು ಹೇಳಲು ಏನು, ನಾವು ದೊಡ್ಡ ಹೊಲಸನ್ನು ಮಾತ್ರ ನೋಡುವೆವು ಮತ್ತು ಪಲ್ಲವಗ್ರಾಹೀ ಹಾಗೂ ಪರರ ಮುಖದಿಂದ ಎಂಜಲನ್ನು ತಿನ್ನುವೆವು.

**ಮಿಸ್ ಮೇಯೋ:**

ಭಾರತದ ನಿಂದೆಯಲ್ಲಿ ಪಂಚಮುಖಿ ಮಿಸ್ ಮೆಯೋಳ (miss mayo), ಸಗೋತ್ರೀಯ ಇಂಗ್ಲೀಷ-ಅಮೇರಿಕನ್ ಲೇಖಕರು ಮತ್ತು ಕ್ರಿಸ್ತಿಯನ್ ಪಾದರಿಗಳು ಭಾರತದ ವಿರುದ್ಧವಾಗಿ ಮಿಥ್ಯಾ ಅಪವಾದದ ಅಸತ್ಯ ಸಂಗತಿಯ ಸೃಷ್ಟಿ ಮತ್ತು ಪ್ರಚಾರ ಮಾಡುತ್ತಾರೆ. ನಾವು ಯಥಾ ಸಮಯದಲ್ಲಿ ಯಥಾಯಥ ಭಾವದಿಂದ ಅದರ ವಿರುದ್ಧ ಉತ್ತರ ಕೊಡಲಿಲ್ಲ. ಸುತರಾಂ ಕಾಲಕ್ರಮದಿಂದ ಅಸತ್ಯವೇ ಸತ್ಯವಾಗಿ ಹೋಯಿತು.

ಯಥಾಯಥ ಭಾವದಿಂದ ಉತ್ತರ ಕೊಟ್ಟಿದ್ದರೆ ಪ್ರಾಚೀನ ಆಚಾರ ಅನುಷ್ಠಾನ ಸಂಪರ್ಕದಲ್ಲಿ ಗಂಭೀರ ಜ್ಞಾನ ಇರುವದು ಆವಶ್ಯಕವು. ಅದು ನಮಗೆ ಇಲ್ಲ. ದ್ವಿತೀಯತಃ ದೇಶದ ಪುರಾತನ ಸಂಸ್ಕೃತಿಯ ಧಾರಕ ಮತ್ತು ವಾಹಕ ಪ್ರಾಚೀನ ಗ್ರಂಥಗಳ ಸಹಾಯದಿಂದ ಶ್ರಮಸಾಧ್ಯ ಶೋಧನೆ ಮಾಡುವದು ಆವಶ್ಯಕವು. ಅದನ್ನು ನಾವು ಮಾಡುವದಿಲ್ಲ. ಸುತರಾಂ ದೇಶದ ಪ್ರಾಚೀನ ಐತಿಹ್ಯದೊಡನೆ ನಮ್ಮ ಘನಿಷ್ಠ ಪರಿಚಯವು ಇರುವದಿಲ್ಲವೆಂದು ವಿದೇಶಿಯರ ಅಸತ್ಯ ದೋಷಾರೋಪದ ಯೋಗ್ಯ ಉತ್ತರ ಕೊಡುವ ಪುಂಜಿಪಾಟಾ ನಮಗೆ ಇಲ್ಲ. ಅಂತೇ ನಾವು ನಿರುತ್ತರ ಇರುತ್ತೇವೆ ಅಥವಾ ತಪ್ಪು ಉತ್ತರ ಕೊಡುವೆವು. ನಾಚಿಕೆಯ ಮಾತು.

**ಪ್ರಾಚೀನ ಗ್ರಂಥಾದಿ ದುಷ್ಪ್ರಾಪ್ಯ:**

ಮತ್ತು ನಮ್ಮ ಮನೆಯಲ್ಲಿ ಪ್ರಾಚೀನ ಸಂಸ್ಕೃತ ಗ್ರಂಥಗಳಂತೂ ದೂರಿನ ಮಾತು. ಅರ್ಧಪುರಾತನ ಬಂಗಾಲೀ ಪುಸ್ತಕ-ಪತ್ರಗಳನ್ನೂ ಇಟ್ಟಿಲ್ಲ. ಸುತರಾಂ ಇವುಗಳು ಈಗ ದುಷ್ಪ್ರಾಪ್ಯವು. ಪಾಠಕ ಹಾಗೂ ಕ್ರೇತಾಗಳ ಅಭಾವದಿಂದ ಇವುಗಳ ಪುನರ್ಮುದ್ರಣವಾಗುವದಿಲ್ಲ. ರಾಷ್ಟ್ರ ಹಾಗೂ ಸಮಾಜವೂ ಪುರಾತನ ಪುಸ್ತಕ ಸಂಗ್ರಹ ಹಾಗೂ ರಕ್ಷಣೆಯ ವ್ಯವಹಾರದಲ್ಲಿ ಸಂಪೂರ್ಣ ಉದಾಸೀನ.

ಶಿವಲಿಂಗ, ಗೌರೀಪೀಠ ಮತ್ತು ಯೋನಿಪೀಠ ಸಂಪರ್ಕದಿಂದ ಇತಿವಾಚಕ ಮತ್ತು ನೇತಿವಾಚಕ ಬಹು ವಿಷಯಗಳನ್ನು ಸಂಕ್ಷೇಪದಿಂದ ಮಾಡಿದ್ದೇನೆ. ಸುವಿಜ್ಞ ಪಾಠಕರು ಅವೆಲ್ಲವುಗಳನ್ನು ವಿಶ್ಲೇಷಣಪೂರ್ವಕ ಗಂಭೀರ ಭಾವದಿಂದ ಆಲೋಚನೆಯನ್ನು ಮಾಡಲು ಸುಫಲ ಫಲಿಸಲು ಶಕ್ಯವು.

❖❖

## ೧೭
# ಶ್ರೀಕಂಠನ ವಿಶಿಷ್ಟ ಶಿವಾದ್ವೈತವಾದ

ಭಾರತದ ದರ್ಶನಶಾಸ್ತ್ರವು ಎಲ್ಲ ಬಗೆಯಿಂದಲೂ ಜಗತ್ತಿನಲ್ಲಿ ಅತುಲನೀಯ ಎಂಬುದನ್ನು ನಾವು ಗೌರವದೊಡನೆ ಘೋಷಣೆ ಮಾಡಬಲ್ಲೆವು. ಈ ದರ್ಶನಶಾಸ್ತ್ರದಲ್ಲಿ ಮತ್ತೆ ವೇದಾಂತದರ್ಶನವೇ ತಾರಾಗಣದಲ್ಲಿ 'ಏಕಶ್ಚಂದ್ರಃ' ರೂಪದಿಂದ ದೇದೀಪ್ಯಮಾನವು -ಎಂಬುದು ಅವಶ್ಯ ಸ್ವೀಕಾರ್ಯವು. ಪರಮಾತ್ಮನೊಡನೆ ಏಕಾತ್ಮವಾಗುವ ಜೀವಾತ್ಮನ ಯಾವ ಶಾಶ್ವತ ಅಭಿಲಾಷೆ-ಆದರದೇ ಪ್ರಪೂರ್ತಿ ಕಂಡುಬರುವದು, ವೇದಾಂತದ 'ತತ್ತ್ವಮಸಿ' ಪ್ರಮುಖ ಮಹಾವಾಕ್ಯಗಳಿಂದ. ಅದಕ್ಕೋಸುಗವೇ ವೇದಾಂತಕ್ಕೆ ಭಾರತದ ಆತ್ಮದ ಮೂರ್ತ ಪ್ರತೀಕರೂಪದಿಂದ ಗ್ರಹಣಮಾಡಿದರೆ ನಡೆಯುತ್ತದೆ. ವೇದಾಂತದ ಜನಪ್ರಿಯತೆ ಹಾಗು ಸರ್ವಜನೀನ ಪ್ರಭಾವದ ಮೂಲಕಾರಣವೂ ಇದೇ. ಅನ್ಯ ಯಾವ ದರ್ಶನದ ಇಂತಹ ಅಸಂಖ್ಯ ಭಾಷ್ಯ ಟೀಕಾ ವ್ಯಾಖ್ಯಾ ಪ್ರಭೃತಿ ವಿರಚಿತವಾಗಿಲ್ಲ. ಹಾಗೂ ಅನ್ಯ ಯಾವ ದಾರ್ಶನಿಕ ಸಿದ್ಧಾಂತಗಳಿಂದ ಇಷ್ಟು ಅಧಿಕ ಸಂಖ್ಯಾಕ ಸಾಧಕ ಸಂಪ್ರದಾಯ ಉದ್ಭೂತವಾಗಿಲ್ಲ. ಶಂಕರನ ಕೇವಲಾದ್ವೈತವಾದ, ರಾಮಾನುಜನ ವಿಶಿಷ್ಟಾದ್ವೈತವಾದ, ನಿಂಬಾರ್ಕನ ಸ್ವಾಭಾವಿಕ ದ್ವೈತವಾದ, ಮಧ್ವನ ದ್ವೈತವಾದ ಹಾಗು ವಲ್ಲಭನ ಶುದ್ಧಾದ್ವೈತವಾದ - ಈ ಪ್ರಖ್ಯಾತ ಪಂಚ ವೇದಾಂತಸಂಪ್ರದಾಯಗಳಲ್ಲಿ ಶೇಷೋಕ್ತ ನಾಲ್ಕು ವೈಷ್ಣವ ಸಂಪ್ರದಾಯ. ವಿಷ್ಣುಸ್ವಾಮಿಯ ಶುದ್ಧಾದ್ವೈತವಾದ ಮತ್ತು ಪರವರ್ತಿ ಬಲದೇವ ವಿದ್ಯಾಭೂಷಣ ಪ್ರಭೃತಿ ಪ್ರಪಂಚಿತ 'ಅಚಿಂತ್ಯ ಭೇದಾಭೇದ'ವಾದುವೂ ವೈಷ್ಣವ ವೇದಾಂತ ಸಂಪ್ರದಾಯ. ಆದರೆ ವೇದಾಂತದ ಶೈವ ಸಂಪ್ರದಾಯ ಸಂಬಂಧದಿಂದ ಹಾಗೆ ಹೆಚ್ಚಿಗೆ ಏನೂ ತಿಳಿಯುವದಿಲ್ಲ. ಪ್ರಕೃತ ಪಕ್ಷದಲ್ಲಿ ವೇದಾಂತದ ಒಂದೆರಡು ಮಾತ್ರ ಶೈವಸಂಪ್ರದಾಯಗಳ ವಿಷಯವನ್ನೇ ನಾವು ಸ್ವಲ್ಪ ತಿಳಿದಿರುವೆವು. ಅವುಗಳಲ್ಲಿ ಅಧಿಕತರ ಪ್ರಖ್ಯಾತ ಶ್ರೀಕಂಠ ಶೈವಾಚಾರ್ಯರ 'ವಿಶಿಷ್ಟ ಶಿವಾದ್ವೈತವಾದ.'

ಶ್ರೀಕಂಠ ವಿರಚಿತ ಒಂದೇ ಗ್ರಂಥವನ್ನು ನಾವು ಬಲ್ಲೆವು. ಅದು ಸುವಿಖ್ಯಾತ 'ಬ್ರಹ್ಮಸೂತ್ರಭಾಷ್ಯ'ವು. ಈ ಭಾಷ್ಯದಲ್ಲಿ ಸುನಿಪುಣಭಾವದಿಂದ ಅವನು ಶೈವ ಮತಾನುಯಾಯೀ ವೇದಾಂತ ವ್ಯಾಖ್ಯೆಯನ್ನು ಮಾಡಿದ್ದಾನೆ. ಈ ಅಮೂಲ್ಯ ಗ್ರಂಥವು ಈಗ ದುಷ್ಪ್ರಾಪ್ಯವಾದುದು ದುಃಖದ ವಿಷಯವು. ಸುಪ್ರಸಿದ್ಧ ದಾರ್ಶನಿಕ ಮತ್ತು ಆಲಂಕಾರಿಕ ಅಪ್ಪಯ ದೀಕ್ಷಿತ ಹದಿನಾರನೇ ಅಥವಾ ಹದಿನೇಳನೇ ಶತಮಾನದಲ್ಲಿ ಈ ಭಾಷ್ಯದ ಮೇಲೆ ಶಿವಾರ್ಕ ಮಣಿದೀಪಿಕಾ ಎಂಬ ಒಂದು ಪಾಂಡಿತ್ಯಪೂರ್ಣ ಟೀಕೆಯನ್ನು ಬರೆದಿರುತ್ತಾರೆ. ಈ ಶೈವವೇದಾಂತ ಭಾಷ್ಯವು ಶೈವರಿಗೆ ಪರಮ ಆದರದ ವಸ್ತುವು. ಶ್ರೀಕಂಠನು ಸ್ವಯಂ ಇದರ ಗುಣವರ್ಣನೆ ಮಾಡಿ ಹೇಳಿದ್ದಾನೆ.

'ಶ್ರೀಮತಾಂ ವ್ಯಾಸ-ಸೂತ್ರಾಣಾಂ ಶ್ರೀಕಂಠೀಯಃ ಪ್ರಕಾಶತೇ।'
ಮಧುರೋ ಭಾಷ್ಯಸಂದರ್ಭೋ ಮಹಾರ್ಥೋ ನಾತಿವಿಸ್ತರಃ

ಸರ್ವವೇದಾಂತಸಾರಸ್ಯ ಸೌರಭಾಸ್ವಾದ ಮೋದಿನಾಮ್
ಆರ್ಯಾಣಾಂ ಶಿವನಿಷ್ಠಾನಾಂ ಭಾಷ್ಯಮೇತನ್ಮಹಾನಿಧಿಃ (೬-೭)

ಶ್ರೀಕಂಠನ ಜೀವನೀ ಮತ್ತು ಆವಿರ್ಭಾವ ಕಾಲಸಂಬಂಧದಿಂದ ಪ್ರಾಯಃ ಸ್ವಲ್ಪಾದರೂ ಸರಿಯಾಗಿ ತಿಳಿಯುವದಿಲ್ಲ. ಅವನ ಭಾಷ್ಯದ ಪ್ರಾರಂಭದಲ್ಲಿ ಅವನು ತನ್ನ ಗುರು ಶ್ವೇತಾಚಾರ್ಯನಿಗೆ ಈ ಬಗೆಯಾಗಿ ಪ್ರಣತಿ ನಿವೇದನ ಮಾಡಿರುತ್ತಾನೆ.

'ನಮಃ ಶ್ವೇತಾಭಿಧಾನಾಯ ನಾನಾಗಮವಿಧಾಯಿನೇ।
ಕೈವಲ್ಯಕಲ್ಪತರವೇ ಕಲ್ಯಾಣಗುರವೇ ನಮಃ॥ (೪)

ಶ್ರೀಕಂಠನ ಆವಿರ್ಭಾವ ಸಮಯವನ್ನು ಸರಿಯಾಗಿ ನಿರೂಪಣ ಮಾಡಲು ಸಂಭವವು ಆಗದಿದ್ದರೂ ಅವನು ಶಂಕರಾಚಾರ್ಯರ ಅನಂತರದಲ್ಲಿ ಇದ್ದನೆಂಬಲ್ಲಿ ನಿಃಸಂದೇಹವು. ತನ್ನ ಭಾಷ್ಯದ ಪ್ರಾರಂಭದಲ್ಲಿ ಅವನು ಆ ಭಾಷ್ಯರಚನೆಯ ಕಾರಣವನ್ನು ನಿರ್ದೇಶಮಾಡಿ ಹೇಳಿರುತ್ತಾನೆ:

'ವ್ಯಾಸ ಸೂತ್ರಮಿದಂ ನೇತ್ರಂ ವಿದುಷಾಂ ಬ್ರಹ್ಮದರ್ಶನೇ
ಪೂರ್ವಾಚಾರ್ಯೈಃ ಕಲುಷಿತಾ ಶ್ರೀಕಂಠೇನ ಪ್ರಸಾದ್ಯತೇ ॥ (೫)

ಇಲ್ಲಿ 'ಪೂರ್ವಾಚಾರ್ಯ', ಶಬ್ದದ ಅರ್ಥ 'ಶಂಕರಾಚಾರ್ಯ' ಎಂಬುವದು ನಿಃಸಂದೇಹವು. ಅಪ್ಪಯ್ಯ ದೀಕ್ಷಿತನು ತನ್ನ 'ಶಿವಾರ್ಕಮಣಿ ದೀಪಿಕೆ'ಯಲ್ಲಿ ಈ ಅರ್ಥವನ್ನೇ ಗ್ರಹಣ ಮಾಡಿದ್ದಾನೆ. ಇದರ ಹೊರತು ಶ್ರೀಕಂಠಭಾಷ್ಯದ ಹಲವು ಸ್ಥಳಗಳಲ್ಲಿಯೂ ಶಂಕರಮತ ಅಥವಾ ಅದ್ವೈತವಾದದ ಉಲ್ಲೇಖ ಮತ್ತು ಖಂಡನವಿರುತ್ತದೆ. ಯಥಾ ೨-೩-೧೯, ೨-೩-೪೨, ೨-೩-೪೯ ಪ್ರಮುಖ ಸೂತ್ರಗಳಲ್ಲಿ ಅದ್ವೈತ ಮತಾನುಯಾಯಿ ಉಪಾಧಿವಾದ ಮೊದಲಾದವುಗಳ ಖಂಡನಪ್ರಯತ್ನವು ಕಂಡುಬರುವದು.

**ಬ್ರಹ್ಮ:**

ಸಾಂಪ್ರದಾಯಿಕ ಮತಾನುಸಾರವಾಗಿ ಶ್ರೀಕಂಠನು ಸರ್ವೋಚ್ಚ ತತ್ತ್ವ ಅಥವಾ ಬ್ರಹ್ಮಕ್ಕೆ ಶಿವರೂಪದಿಂದ ಗ್ರಹಣ ಮಾಡಿರುತ್ತಾನೆ. ಬ್ರಹ್ಮ ಅಥವಾ ಶಿವ, ಭವ, ಶರ್ವ, ಪಶುಪತಿ, ಮಹಾದೇವ, ಶಂಭು, ರುದ್ರ, ನೀಲಕಂಠ, ತ್ರಿಲೋಚನ, ಉಮಾಪತಿ ಪ್ರಭೃತಿ ಅಸಂಖ್ಯ ನಾಮಗಳು ಅಭಿಹಿತವಾಗಿವೆ. ಆದರೆ ಇವುಗಳು ಕೇವಲ ಮಾತ್ರ ಅರ್ಥಹೀನ ನಾಮಗಳಲ್ಲ. ಮತ್ತು ಪ್ರತಿಯೊಂದರ ಮಾಧ್ಯಮದಲ್ಲಿಯೂ ನಾವು ಶಿವರೂಪಿ ಪರಬ್ರಹ್ಮದ ಅನಂತ ಸ್ವರೂಪ, ಗುಣ ಮತ್ತು ಶಕ್ತಿಯ ಆಭಾಸವನ್ನು ಪಡೆಯುವೆವು. ೧-೧-೨ ಸೂತ್ರದಲ್ಲಿ ಶ್ರೀಕಂಠನು ಶಿವನ ಎಂಟು ಮುಖ್ಯನಾಮಗಳ ಉಲ್ಲೇಖಪೂರ್ವಕ ಅವುಗಳ ಅರ್ಥವ್ಯಾಖ್ಯಾ ಮಾಡಿರುತ್ತಾನೆ. 'ಭವ-ಶರ್ವೇಶಾನ-ಪಶುಪತಿ-ರುದ್ರೋಗ್ರ-ಭೀಮ-ಮಹಾದೇವಾಭಿದಾನಾಷ್ಟಕ ಸ್ಯಾಧಿಕರಣಂ ವಾಚ್ಯಂ ಪರಂ ಬ್ರಹ್ಮ (೧-೧-೨).

ಸರ್ವತ್ರ ಸದಾ ಭವತೀತಿ ಭವ ಶಬ್ದ ವಾಚ್ಯಂ ಬ್ರಹ್ಮ, ಶಾರ್ವ ಶಬ್ದೇನ ಸಕಲ ಸಂಹರ್ತೃ ಬ್ರಹ್ಮ ಪ್ರತಿಪಾದ್ಯತೇ। ನಿರುಪಾಧಿಕ ಪರಮೈಶ್ವರ್ಯ ವಿಶಿಷ್ಟತ್ವಾತ್ ಈಶಾನ ಶಬ್ದವಾಚ್ಯಂ ಬ್ರಹ್ಮ-ಈಶ್ವರಸ್ಯೇಶಿತ ವ್ಯಾಪೇ ಕ್ಷತಯಾ ಪಶುಪತಿ ಶಬ್ದವಾಚ್ಯಂ ಬ್ರಹ್ಮ. ಪರತೇಜಾಭಿರನಭಿ ಭವಸೀಯತ್ವಾತ್ ಉಗ್ರ-ಶಬ್ದವಾಚ್ಯತ್ವಂ ಬ್ರಹ್ಮ ನಿಯಾಮಕತ್ವೇನ ನಿಖಿಲ ಚೇತನ ಭಯಹೇತು ತಯಾ ಭೀಮ-ಶಬ್ದಾಭಿಧೇಯಂ ಬ್ರಹ್ಮ. ಮಹತ್ವೇನ ದೀಪ್ಯಾ ಮಾನತಯಾ ಮಹಾದೇವ ಇತ್ಯುಚ್ಯತೇ ಶಿವಃ।

ಅರ್ಥಾತ್ ಸರ್ವತ್ರ ಸರ್ವದಾ ವಿರಾಜಮಾನನೆಂದು 'ಭವ', ಸರ್ವವಸ್ತುಗಳ ಸಂಹಾರ ಕರ್ತಾನೆಂದು ಅವನು 'ಶರ್ವ'; ಅಂತಹೀನ ಪರಮೈಶ್ವರ್ಯ ವಿಶಿಷ್ಟ ಎಂದು ಅವನು 'ಈಶಾನ', ಸರ್ವಜೀವರ ಶಾಸಕನೆಂದು ಅವನು 'ಪಶುಪತಿ; ಸಂಸಾರಕ್ಲೇಶ ದೂರ ಮಾಡುತ್ತಾನೆಂದು ಅವನು 'ರುದ್ರ'ನು;ಅಪರ ಕರ್ತೃಕ ಅನಭಿಭವನೀಯ ಎಂದು ಅವನು 'ಉಗ್ರ; ಸಕಲ ಜೀವದ ನಿಯಾಮಕರೂಪದಿಂದ ಭೀತಿ-ಉತ್ಪಾದಕ ಎಂದು ಅವನು 'ಭೀಮ' ಹಾಗು ಮಹಾನ್ ಮತ್ತು ದೀಪ್ತಿಮಾನ್ ಎಂದು ಅವನು 'ಮಹಾದೇವ'. ಹೀಗೆ ಎಂಟು ಮುಖ್ಯಗುಣ ಹಾಗು ಅನ್ಯೋನ್ಯ ಅಸಂಖ್ಯ ಗುಣವಿಶಿಷ್ಟ ಪರಬ್ರಹ್ಮ ಪರಮ ವಿಶುದ್ಧ ಮತ್ತು ಮಂಗಲ ಭಾಜನರೂಪದಿಂದ 'ಶಿವ' ಪದ ವಾಚ್ಯ.

ಪರಮಬ್ರಹ್ಮ ಶಿವನೇ ವಿಶ್ವಬ್ರಹ್ಮಾಂಡದ ಆದಿ ಮತ್ತು ಮೂಲಕಾರಣ. ಸಾಂಖ್ಯಂ ಸಮ್ಮತ ಪ್ರಕೃತಿ (೧-೧-೧೨) ಜೀವ (೧-೧-೧೬) ಜೀವಸಮಷ್ಟಿರೂಪ ಹಿರಣ್ಯಗರ್ಭ (೧-೧-೧೭) ಅಥವಾ ಅನ್ಯ ಯಾವ ವಸ್ತು ಅಲ್ಲ. ಶಿವನು ಜಗತ್ತಿನ ಅಭಿನ್ನ ನಿಮಿತ್ತ ಮತ್ತು ಉಪಾದಾನ ಕಾರಣ. ಸಾಧಾರಣತಾ ನಿಮಿತ್ತ ಮತ್ತು ಉಪಾದಾನಕಾರಣ ಪರಸ್ಪರ ಭಿನ್ನ ಹಾಗು ಒಂದು ಅನ್ಯದರ ಬಹಿರ್ಭೂತ ಇರುತ್ತದೆ. ಹೇಗೆ ಮೃಣ್ಮಯ ಘಟದ ಉಪಾದಾನ ಕಾರಣ ಮೃತ್‌ಪಿಂಡ ಹಾಗೂ ನಿಮಿತ್ತ ಕಾರಣ ಯಂತ್ರಾದಿ ಸಮನ್ವಿತ ಕುಂಭಕಾರ ಒಂದು ಮತ್ತೊಂದರಿಂದ ಭಿನ್ನ ಮತ್ತು ಒಂದು ಎರಡನೆಯದರ ಬಹಿಃಸ್ಥಿತ. ಆದರೆ ಸರ್ವವ್ಯಾಪಿ, ಸರ್ವಶಕ್ತಿಮಾನ್ ಪರಮಬ್ರಹ್ಮದ ಬಾಹಿರದಲ್ಲಿ ಮತ್ತು ಅದರಿಂದ ಭಿನ್ನ ಅಪರ ಸ್ವಲ್ಪಾದರೂ ಇಲ್ಲ. ಅದಕ್ಕೋಸುಗ ಅವನು ತಾನೇ ತನ್ನ ಸ್ವರೂಪಕ್ಕೆ ಜಗದ್ರೂಪದಿಂದ ಪರಿಣತ ಮಾಡುತ್ತಾನೆ. ಈ ರೀತಿಯಾಗಿ ಅವನೇ ಜಗತ್ತಿನ ಏಕಮಾತ್ರ ನಿಮಿತ್ತ ಮತ್ತು ಉಪಾದಾನ ಉಭಯ ಕಾರಣ. (೧-೧-೨) ಸೂತ್ರವಾಖ್ಯೆಗಳು.

'ನಿರಸ್ತ-ಸಮಸ್ತ-ಸಂಸಾರ ಕಲಂಕತಯಾ ನಿಖಿಲ ಮಂಗಲಾಧಾರತಯಾ ಶಿವತತ್ತ್ವಂ ಯದವಗಮ್ಯತೇ ತದುಕ್ತ ಸ್ವಭಾವತಯಾ ಸಕಲ ಜಗಜನ್ಮಾದಿ ಕಾರಣಂ ಭವತಿ. ತತ್ರ ತಾದೃಶ-ಮಹಿಮ್ನಿ ಜಗದುಭಯ ಕಾರಣತ್ವ ಸಂಭವಾತ್'.

ಪರಮಬ್ರಹ್ಮ ಶಿವನು ತನ್ನ ಮಾಯಾ ಅಥವಾ ಇಚ್ಛಾಶಕ್ತಿಯ ಮಾಧ್ಯಮದಿಂದ ಜಗತ್ತಿನ ಉಪಾದಾನ ಕಾರಣ ಆಗುವನು ಅಥವಾ ಜಗತ್ ಸೃಷ್ಟಿಯನ್ನು ಮಾಡುವನು. ೧-೨-೯ ಸೂತ್ರದಲ್ಲಿ ಶ್ರೀಕಂಠನು ಜಗತ್‌ಸೃಷ್ಟಿ ಪ್ರಕ್ರಿಯಾವನ್ನು ಸಂಕ್ಷೇಪದಿಂದ ಈ ಬಗೆಯಾಗಿ ವರ್ಣಿಸುತ್ತಾನೆ. 'ಅಸಂಕುಚಿತ ವಿಶ್ವಃ ಪರಮೇಶ್ವರೋ ಹಿ ಸಿಸೃಕ್ಷುಃ ಬಹುಪ್ರಪಂಚ ಭವನಾಯಾತ್ಮನೋ ಮಾಯಾ ಲಕ್ಷಣಾಮಿಚ್ಛಾರೂಪಾಂ ಶಕ್ತಿಮಾಶ್ರಯತಿ। ತಪಸ್ ಸ್ವರೂಪಿಕಯಾ ಜ್ಞಾನಾತ್ಮಿಕಯಾ ಶಕ್ತ್ಯಾ ಸಕಲಜೀವ ಕರ್ಮಾನುಗುಣ ತತ್ತಚ್ಛರೀರ ಸಾಮಗ್ರೀ ಮಾಲೋಚಯತಿ। ಆಲೋಚ್ಯ ಚ... ಕ್ರಿಯಾ ಶಕ್ತ್ಯಾ ಇಚ್ಛಾಶಕ್ತಿ ಭೂತೌ ನಿಖಿಲ ಜಗಚ್ಚಿತ್ರ ಮುನ್ಮೂಲಯತಿ। ಸಕಲ ಕಾರ್ಯಜಾತ ಮನುಪ್ರವಿಶ್ಯ ಶಕ್ತಿತ್ರಯಸಂಭಂದೇಹ ತ್ರಿಗುಣ ಭಿನ್ನಮೂರ್ತಿತ್ರಯಾದಿ ಪ್ರಪಂಚರೂಪೇ ಭವತಿ ॥

ಅರ್ಥಾತ್ ಸೃಷ್ಟಿಕಾಲದಲ್ಲಿ ಪರಮೇಶ್ವರನು ಮಾಯಾರೂಪ ಇಚ್ಛಾಶಕ್ತಿಯ ಸಹಾಯದಿಂದ ಜಗತ್‌ಸೃಷ್ಟಿಯಲ್ಲಿ ಇಚ್ಛುಕನಾದನು. ಅನಂತರದಲ್ಲಿ ಅವನು ತಪೋರೂಪ ಜ್ಞಾನಶಕ್ತಿಯ ಸಹಾಯದಿಂದ ಜೀವಗಣದ ಕರ್ಮ ಹಾಗೂ ತದನುಸಾರವಾಗಿ ನೂತನ ಸೃಷ್ಟಿಯಲ್ಲಿ ಅದರ ಅವಸ್ಥಾ ವಿಷಯದಲ್ಲಿ ವಿಚಾರಮಾಡಿದನು. ಕಡೆಯಲ್ಲಿ ಪೂರ್ವೋಕ್ತ ಇಚ್ಛಾ ಮತ್ತು ಜ್ಞಾನ ಅನುಯಾಯೀ ಕ್ರಿಯಾಶಕ್ತಿಯ ಸಹಾಯದಿಂದ ಜಗತ್‌ಸೃಷ್ಟಿ ಮಾಡಿದನು. ಈ ರೀತಿಯಾಗಿ ಪರಬ್ರಹ್ಮ ಶಿವನ ಇಚ್ಛಾ, ಜ್ಞಾನ, ಕ್ರಿಯಾ ಈ ಮೂರು ಶಕ್ತಿಗಳ ಸಮನ್ವಯದಿಂದಲೇ ವಿಶ್ವಸೃಷ್ಟಿಯು ಆಯಿತು.

ಈ ಉಪಾದಾನ ರೂಪೀ ಶಿವನೇ ವಿಷ್ಣುವು ಅಥವಾ ನಾರಾಯಣನು (೧-೨-೩). ಈ ಬಗೆಯಾಗಿ ವಿಷ್ಣುವು ಶಿವಾಶ್ರಯೀ ಆದರೂ ಶಿವನಿಂದ ಅಭಿನ್ನನು. 'ಯ ತೋ ವಿಷ್ಣುಶಿವಯೋರುಪಾದಾನ-ನಿಮಿತ್ತಯೋರವಸ್ಥಾಭೇದ ಮಾತರೇಣ ಸ್ವರೂಪ ಭೇದೋ ನಾಸ್ತಿ (೧-೩-೧೨). ಪುರರಾಯ ಜೀವ ಸಮಷ್ಟಿ ಹಿರಣ್ಯಗರ್ಭ ವಿಷ್ಣುವಿನ ಆಶ್ರಯಿ ಮತ್ತು ವಿಷ್ಣು ಅವನ ಉಪಾದಾನ(೪-೩-೧೪).

ಪರಬ್ರಹ್ಮಶಿವನು ನಿರ್ಗುಣನಲ್ಲ, ಸಗುಣ. ಒಂದು ಪಕ್ಷದಲ್ಲಿ ಅವನು ಅಸಂಖ್ಯ ಕಲ್ಯಾಣ ಗುಣಗಳ ಆಕರ, ಅಪರ ಪಕ್ಷದಲ್ಲಿ ಅವನು ಸಮಸ್ತ ಹೇಯಗುಣ ವರ್ಜಿತ. 'ನಿರಸ್ತ-ಸಮಸ್ತೋಪಪ್ಲವ-ಕಲಂಕ ನಿರತಿಶಯ ಜ್ಞಾನಾನಂದಾದಿ-ಶಕ್ತಿ ಮಹಿಮಾತಿಶಯ ವತ್ವಂ ಬ್ರಹ್ಮತ್ವಮ್ ' (೧-೧-೧)

ಈ ಎಲ್ಲ ಗುಣಗಳಲ್ಲಿ ಕೆಳಗೆ ಬರೆದ ಆರು ಗುಣಗಳು ವಿಶೇಷ ಭಾವದಿಂದ ಬ್ರಹ್ಮದ ಸ್ವರೂಪದ್ಯೋತಕ.

'ಸರ್ವಜ್ಞತ್ವಂ, ನಿತ್ಯತೃಪ್ತತ್ವಮ್, ಅನಾದಿಬೋಧತ್ವಮ್, ಸ್ವತಂತ್ರತ್ವಮ್, ಅಲುಪ್ತಶಕ್ತಿಮತ್ವಮ್, ಅನಂತಶಕ್ತಿಮತ್ವಮ್ (೧-೧-೨). ಪರಮಬ್ರಹ್ಮದ ಜ್ಞಾನ ಇಂದ್ರಿಯಾದಿ ಕಾರಣ ನಿರಪೇಕ್ಷ, ನಿತ್ಯ, ನಿಷ್ಕಲಂಕ ಹಾಗು ನಿಖಿಲ ವಸ್ತು ವ್ಯಾಪೀ-ಅದಕ್ಕೋಸುಗ ಅವನು 'ಸರ್ವಜ್ಞ'ನು. ಪರಬ್ರಹ್ಮ ಸಮಸ್ತ ದೋಷ ಕಲಂಕ ಶೂನ್ಯ ಹಾಗೂ ನಿರತಿಶಯ ಆನಂದ ಪರಿಪೂರ್ಣ ಸತ್ತಾ, ಅದಕ್ಕೋಸುಗ ಅವನು 'ನಿತ್ಯತೃಪ್ತ'ನು. ಪರಬ್ರಹ್ಮದ ಜ್ಞಾನವು ಸ್ವತಃ ಸಿದ್ಧ ಪೂರ್ಣತಮ ಮತ್ತು ಸೀಮಾರಹಿತ. ಅದಕ್ಕೋಸುಗ ಅವನು 'ಅನಾದಿಬೋಧ'. ಪರಬ್ರಹ್ಮದ ಶಾಸಕ-ಪಾಲಕ, ಅನ್ಯ ಯಾರೂ ಇಲ್ಲ. ಅವನೇ ಎಲ್ಲರ ಶಾಸಕ ಮತ್ತು ಪಾಲಕ, ಅವನಿಗೆ ಆಶ್ರಯ ಬೇರೆ ಯಾರೂ ಇಲ್ಲ. ಅವನೇ ಸಕಲರ ಆಶ್ರಯ ಮತ್ತು ಧಾರಕ, ಅದಕ್ಕೋಸುಗ ಅವನು 'ಸ್ವತಂತ್ರ'ನು. ಪರಬ್ರಹ್ಮದ ಅಸಂಖ್ಯ ಶಕ್ತಿ ಸ್ವಾಭಾವಿಕ-ಸ್ವಭಾವಜಾತ ಮತ್ತು ನಿತ್ಯ, ಅದ್ವೈತ ಮತಾನುಯಾಯೀ ಉಪಾಧಿಜಾತ ಮತ್ತು ಅನಿತ್ಯವಲ್ಲ. ಅದಕ್ಕೋಸುಗ ಅವನು 'ಅಲುಪ್ತ ಶಕ್ತಿ'. ಪರಬ್ರಹ್ಮ ಅಸಂಖ್ಯ ಶಕ್ತಿವಿಶಿಷ್ಟ, ಅದಕ್ಕೋಸುಗ ಅವನು 'ಅನಂತಶಕ್ತಿಯು'.

ಬ್ರಹ್ಮದ ಗುಣಾವಲೀ ಭೀಷಣ ಮತ್ತು ಮಧುರ ಎರಡು ಬಗೆ. ಒತ್ತಟ್ಟಿಗೆ ಅವನು 'ಭೀಷಣಂ ಭೀಷಣಾನಾಮ್'- ಅನಂತ ಅಸೀಮ ಶಕ್ತಿವಿಶಿಷ್ಟ ಶಾಶಕರೂಪದಿಂದ ಭಯ ಜನಕ. 'ಕಲ್ಯಾಣಮೂರ್ತಿರಪಿ ಪರಮೇಶ್ವರಃ ಶಾಶಕತಯಾ ಭಯ ದರ್ಶನೋ ಭವತಿ (೧೩-೪೦). ಆದರೆ ಅನ್ಯ ಕಡೆಗೆ ಅವನು ಆನಂದ ಸ್ವರೂಪ ಹಾಗೂ ಜೀವಗಳ ಆನಂದದಾಯಿಕ. 'ಬ್ರಹ್ಮಾನಂದ ನಿರತಿಶಯ-ಶಿರಸ್ಕತ್ವೇನಾಭಾಸ್ಯತೇ। ತಸ್ಮಾದಾನಂದಮಯೋ ಪರಮೇಶ್ವರ ಏವ' (೧-೧-೧೩) 'ಸ್ವಯಂ ಪ್ರಚುರಾನಂದೋ ಪರಾನ್ ಆನಂದಯತಿ।' (೧-೧-೧೫) ಪರಮಾನಂದ ಸ್ವರೂಪ ಪರಮಾತ್ಮ. ಈ ರೀತಿ ಜೀವಗಳಿಗೆ ಭೀತಿಪ್ರದ ಕಠೋರ ಶಾಶಕನೇ ಕೇವಲ ಅಲ್ಲ. ನಿಕಟತಮ ಆನಂದೋಚ್ಛಲ, ಆನಂದಪ್ರದ ಸಖಾ. ಅವನು ಸಕಲಜೀವಗಳ ಅನುಗ್ರಾಹಕ ಬಂಧು ಹಾಗೂ ಅವನ ಪ್ರಸಾದದಿಂದಲೇ ಜೀವಗಳು ಮುಕ್ತಿಲಾಭದಲ್ಲಿ ಸಮರ್ಥವಾಗುವವು.

ಚಿತ್ ಮತ್ತು ಅಚಿತ್ ಪರಬ್ರಹ್ಮದ ಶಕ್ತಿಸ್ವರೂಪ. ಪ್ರಲಯಕಾಲದಲ್ಲಿ ಚಿತ್ ಮತ್ತು ಅಚಿತ್ ಪ್ರಚ್ಛನ್ನಭಾವದಿಂದ ಬ್ರಹ್ಮದಲ್ಲಿ ವಿಲೀನವಾಗಿರುತ್ತವೆ. ಸೃಷ್ಟಿಕಾಲದಲ್ಲಿ ವ್ಯಕ್ತರೂಪದಿಂದ ಜೀವ ಮತ್ತು ಜಗತ್ತಿನಲ್ಲಿ ಪರಿಣತವಾಗುವವು.

'ನಾಮ-ರೂಪ-ವಿಭಾಗಾನರ್ಹ ಸೂಕ್ಷ್ಮ ಚಿದಚಿತ್-ಪ್ರಪಂಚ-ಶಕ್ತಿವಿಶಿಷ್ಟ ತಯಾ ಶಿವಃ ಕೇವಲ ಇತ್ಯುಚ್ಯತೇ। ಸ ಪುನಃ ಸರ್ಗಕಾಲೇ ಸ್ವಸಂಕಲ್ಪ ಮಾತ್ರೇಣ ಸ್ವಸ್ಮಾತ್ ಸಕಲಂ ಚಿದ ಚಿದರ್ಥ ಜಾತಂ ಸೃಜತಿ ಪ್ರಕಾಶಯತಿ' (೧-೨-೯).

ಚಿತ್‌ಶಕ್ತಿಯು ಇಚ್ಛಾ-ಜ್ಞಾನ-ಕ್ರಿಯಾ ಈ ತ್ರಿಶಕ್ತಿಗಳ ಸಮಾಹಾರವು (೧-೨-೯) ಹಾಗು ಅಚಿತ್‌ಶಕ್ತಿಯು ಕ್ಷಿತಿ, ಅಪ್, ತೇಜ, ಮರುತ್ ಮತ್ತು ವ್ಯೋಮ- ಈ ಪಂಚಮಹಾ ಭೂತಗಳ ಸಮಾಹಾರವು. ಬ್ರಹ್ಮ, ಜನಾರ್ದನ, ರುದ್ರ, ಈಶ್ವರ ಮತ್ತು ಸದಾಶಿವ ಯಥಾಕ್ರಮದಿಂದ ಈ ಪಂಚ ಮಹಾಭೂತಗಳ ಅಧಿಷ್ಠಾತೃ ದೇವತಾ.

ಮೇಲೆ ಹೇಳಿದ ಅಷ್ಟರೂಪ ವಿಶಿಷ್ಟ ಚಿತ್ ಮತ್ತು ಅಚಿತ್ ಪರಮಬ್ರಹ್ಮದ ಶರೀರ ಸ್ಥಾನೀಯ. 'ಸರ್ವಚಿದಚಿತ್ ಪ್ರಪಂಚ ವಿಶಿಷ್ಟಂ ಬ್ರಹ್ಮ ಸರ್ವಪದ ವಾಚ್ಯಮ್' (೧-೨-೯).

ಎರಡನೇ ಕಡೆಯಿಂದ ಹೇಳ ಹೋಗಲು ಚಿತ್, ಅಚಿತ್-ಬ್ರಹ್ಮದ ವಿಶೇಷಣ ಅಥವಾ ಗುಣ ದೇಹವು ಹೇಗೆ ಆತ್ಮನಿಗೆ-ನೀಲತ್ವ, ಹೇಗೆ ನೀಲೋತ್ಪಲಕ್ಕೆ ವಿಶೇಷಣ ರೂಪದಿಂದ ವಿಶಿಷ್ಟ ಮಾಡುತ್ತದೆ, ಚಿತ್ ಮತ್ತು ಅಚಿತ್ ಹಾಗೆಯೇ ಬ್ರಹ್ಮಕ್ಕೆ ಗುಣ ಅಥವಾ ವಿಶೇಷಣರೂಪದಿಂದ ವಿಶಿಷ್ಟ ಮಾಡುತ್ತದೆ.

ಚಿದ-ಚಿದ್ ವಿಶಿಷ್ಟ ಬ್ರಹ್ಮದ ದ್ವಿವಿಧ ರೂಪ ಅಥವಾ ಅವಸ್ಥಾ-ಕಾರಣ ಅಥವಾ ಅವ್ಯಕ್ತರೂಪ ಹಾಗೂ ಕಾರ್ಯ ಅಥವಾ ವ್ಯಕ್ತರೂಪ. ಕಾರಣಾವಸ್ಥೆಯಲ್ಲಿ ಬ್ರಹ್ಮದ ಚಿದಚಿತ್ ಪ್ರಮುಖ ಗುಣ ಮತ್ತು ಶಕ್ತಿಗಳೇ ಸೂಕ್ಷ್ಮಭಾವದಿಂದ ಬ್ರಹ್ಮದಲ್ಲಿಯೇ ಆಗಿರುತ್ತವೆ. ಕಾರ್ಯಾವಸ್ಥೆಯಲ್ಲಿ ಆ ಎಲ್ಲ ಗುಣ ಮತ್ತು ಶಕ್ತಿ ವಿಚಿತ್ರ ನಾಮರೂಪ ವಿಶಿಷ್ಟ ವಸ್ತು ಜಾತದಲ್ಲಿ ಪ್ರಕಟಿತ ಆಗುವದು. ಈ ರೀತಿಯಾಗಿ ಪರಮೇಶ್ವರ ಏಕಾಧಾರದಲ್ಲಿ ಸ್ರಷ್ಟಾ, ಕಾರಣ ಮತ್ತು ಸೃಷ್ಟಕಾರ್ಯ ಎರಡೂ-ಜಗತ್-ಪ್ರಪಂಚ-ಬ್ರಹ್ಮಾತ್ಮಕ, ಬ್ರಹ್ಮ ಸತ್ತಾಮಯ.

ಬ್ರಹ್ಮಜ್ಞಾನ ಸ್ವರೂಪ ಮತ್ತು ಜ್ಞಾತಾ ಅಥವಾ ಸರ್ವಜ್ಞ ಎರಡೂ, ಅರ್ಥಾತ್ ಜ್ಞಾನ ಯುಗಪತ್ ಸ್ವರೂಪ ಮತ್ತು ಗುಣ ಶ್ರುತಿಯಲ್ಲಿ ಅದಕ್ಕೆ 'ಸತ್ಯಂ ಜ್ಞಾನಮನಂತಂ ಬ್ರಹ್ಮ' ಎಂದು ವರ್ಣನೆ ಮಾಡಿದ್ದರೂ ಅದರ ಜ್ಞಾತೃತ್ವ ಅಥವಾ ಸರ್ವಜ್ಞತ್ವ ಅದರಲ್ಲಿ ನಿಷಿದ್ಧವಾಗಿಲ್ಲ. 'ಯಥಾ ಸ್ವರ್ಣರೂಪಂ ಕಿರೀಟಮಿತ್ಯೇ ತತ್, ಸ್ವರ್ಣರೂಪತಾ ಮಾತ್ರ ಕಥನ ಪರಮ್, ನ ತತ್ ಖಚಿತ ರತ್ನಾದಿ ನಿಷೇಧ ಪರಂ ತದ್ವದಿತಿ' (೩-೨-೧೬).

ಒಂದು ರಾಜಮುಕುಟವನ್ನು 'ಸ್ವರ್ಣಸ್ವರೂಪ'ವೆಂದು ಉಲ್ಲೇಖ ಮಾಡಲು ಅದರ ಸ್ವರ್ಣರೂಪತೆಯೇ ಸೂಚಿತವಾಗುವದು, ಆದರೆ ಸ್ವರ್ಣದ ಮೇಲೆ ಖಚಿತ ಬೇರೆ ಬೇರೆ-ರತ್ನಗಳ ಅಭಾವ ಅಥವಾ ಪಿಲುಪ್ತಿ ಘೋಷಿತವಾಗುವದಿಲ್ಲ. ಒಂದೇ ಭಾವದಿಂದ ಸತ್ಯ ಮತ್ತು ಜ್ಞಾನ ಸ್ವರೂಪ ಬ್ರಹ್ಮದ ಜ್ಞಾತೃತ್ವ ಅಥವಾ ಸರ್ವಜ್ಞತ್ವ ಸ್ವ ವಿರೋಧಿಯಲ್ಲ. ಬ್ರಹ್ಮಭೋಕ್ತಾ ಅವಶ್ಯ ಜೀವದಂತೆ ಕರ್ಮಫಲ ಭೋಕ್ತಾ ಅಲ್ಲ. ಆದರೆ ತನ್ನ ಅನಂತ ಸ್ವರೂಪಾನಂದದ ನಿತ್ಯಾಸ್ವಾದೀ (೧-೧-೨).

ಪರಿಶೇಷದಲ್ಲಿ ಬ್ರಹ್ಮಕರ್ತಾ. ಅವನ ಕೃತ್ಯಪಂಚಕ ಅಥವಾ ಐದು ಕಾರ್ಯಗಳು ಇವೇ: ಜನ್ಮ, ಸ್ಥಿತಿ, ಪ್ರಲಯ, ಅನುಗ್ರಹ ಮತ್ತು ತಿರೋಭಾವ. ಮೊದಲೇ ಹೇಳಿರುವದು-ಅವನೇ ವಿಶ್ವ ಚರಾಚರದ ಅಭಿನ್ನ ನಿಮಿತ್ತ ಮತ್ತು ಉಪಾದಾನ ಕಾರಣ-ಜಗತ್ತಿನ ಜನ್ಮ, ಸ್ಥಿತಿ ಮತ್ತು ಪ್ರಳಯ ಅವನದೇ ಕಾರ್ಯವು. ಮೇಲೆ ಜೀವದ ಬಂಧ ಮತ್ತು ಮೋಕ್ಷಕ್ಕೂ ವ್ಯವಸ್ಥಾಪಕ ಏಕಮಾತ್ರ ಅವನೇ (೧-೧-೨).

ಪರಮಬ್ರಹ್ಮ ಶಿವ ಅಪಾರ್ಥಿವ ದಿವ್ಯದೇಹಧಾರೀ. 'ಶರೀರ ಸಂಬಂಧಾದಸ್ಮದಾದಿವದೀಶ್ವರಸ್ಯ ನ ಸಂಸಾರ ದೋಷಾಪತ್ತಿಃ ಶ್ರುತಿರೇವ ಭಗವತೀಹ್ಯಸ್ಯ ಶರೀರ-ಸಂಬಂಧಂ ಸರ್ವಪಾಪರಾಹಿತ್ಯಂ ಚ ಪ್ರತಿಪಾದಯತಿ' (೧-೧-೨೧).

'ಸುಖ-ದುಃಖ-ಭೋಗ-ಹೇತುಭ್ಯೋ ಜೀವ-ಶರೀರೇಭ್ಯೋ ಬ್ರಹ್ಮರೂಪಸ್ಯಾಸ್ತಿ ಹಿ ವೈಶೇಷ್ಯಮ್, ಇಚ್ಛಾ-ಗೃಹೀತತ್ವಾದಸ್ಯ ಕರ್ಮಮೂಲತ್ವಾಚ್ಚ।...... ಅತ ಏವಾ ಪ್ರಾಕೃತಾನಿ ಪಾಪ-ಜರಾ-ಮರಣ-ಶೋಕಾದಿ

ರಹಿತಾನಿ ಸ್ವೇಚ್ಛಾ ಸಂಪಾದಿತಾನಿ ಲೀಲಾ ಮಂಗಲ ರೂಪಾಣಿ ಪರಮೇಶ್ವರಸ್ಯ ಸ್ಥಿರಾಣಿ ನಿತ್ಯಾನಿ ವಿಜ್ಞಾಯಂತೇ (೧-೨-೪) ಅರ್ಥಾತ್ ಪರಬ್ರಹ್ಮ ಶರೀರ-ವಿಶಿಷ್ಟ ಆದರೂ ಜೀವಗಳಂತೆ ಕರ್ಮಫಲ ಭೋಕ್ತಾ ಮತ್ತು ಪಾಪ-ಪುಣ್ಯ ಭಾಗೀ ಅಲ್ಲ. ಕಾರಣ ಅವನ ದೇಹ ಸ್ವೇಚ್ಛಾ ಪ್ರಸೂತ, ಸಕಾಮ ಕರ್ಮದ ಫಲವು ಅಲ್ಲ. ಅದಕ್ಕೋಸುಗ ದೇಹಧಾರಿಯಾದರೂ ಅವನು ಸರ್ವಪಾಪ ರಹಿತ; ವಸ್ತುತಃ ಪಾಪ-ಜರಾ-ಮರಣ-ಶೋಕಾದಿ ರಹಿತ, ಲೀಲಾಮಂಗಲ. ಅವನ ದಿವ್ಯ ಅಪ್ರಾಕೃತ ರೂಪ ನಿತ್ಯ ಮತ್ತು ಸ್ಥಿರ-ಜೀವದಂತೆ ಅವನು ಮರಣಶೀಲ ಪರಿವರ್ತನಶೀಲ ಅಲ್ಲ.

ಈ ಭಾವದಿಂದ ಶ್ರೀಕಂಠನು ವೇದಾಂತದ ಮೂಲತತ್ವ 'ಬ್ರಹ್ಮ', ಸಂಬಂಧದಿಂದ ಸುಂದರ ಪ್ರಪಂಚ ಮಾಡಿರುತ್ತಾನೆ.

ಅವನು 'ಜೀವಜಗತ್' ಸಂಬಂಧದಿಂದ ಏನು ಹೇಳಿರುತ್ತಾನೆ. ಆ ವಿಷಯದಲ್ಲಿ ಸ್ವಲ್ಪ ಆಲೋಚನಾ ಮಾಡಲ್ಪಡುವದು.

❖❖

೧೮

# ಶ್ರೀಪತಿಯ ವಿಶೇಷಾದ್ವೈತವಾದ

ದಶ-ವೇದಾಂತ ಸಂಪ್ರದಾಯದ ಅಂತರ್ಭುಕ್ತ "ವಿಶೇಷಾದ್ವೈತವಾದ" ಪ್ರವರ್ತಕ ಶ್ರೀಪತಿಯ ಜೀವನೀ ಮತ್ತು ವಂಶಪರಿಚಯ ಸಂಬಂಧದಿಂದ ವಿಶೇಷ ಏನೂ ತಿಳಿಯುವದಿಲ್ಲ. ಸಂಭವತಃ ಅವನು ತೆಲಗುಭಾಷಾ ಭಾಷೀ. ಕೃಷ್ಣಾ-ಗೋದಾವರೀ ದಡದಲ್ಲಿಯ ಆರಾಧ್ಯ-ಬ್ರಾಹ್ಮಣನಿದ್ದನು. ಅವನು ತನಗೆ ಶ್ರೀಪತಿ ಪಂಡಿತಾಚಾರ್ಯ ಅಥವಾ 'ಶ್ರೀಪತಿ ಪಂಡಿತ-ಭಗವತ್‌ಪಾದಾಚಾರ್ಯ ಹೆಸರಿನಿಂದ ಅಭಿಹಿತ ಮಾಡಲ್ಪಡುತ್ತಾನೆ. ಅವನ 'ಬ್ರಹ್ಮಸೂತ್ರ ಭಾಷ್ಯ'ದ ಪ್ರತಿಯೊಂದು ಪಾದದ ಕೊನೆಯಲ್ಲಿ ಅದನ್ನು ಬಿಟ್ಟು ಅವನು ತನ್ನ ನಾಮದೊಡನೆ ಕೆಲವು ವಿಶೇಷಣಗಳನ್ನು ವ್ಯವಹಾರ ಮಾಡಿದ್ದಾನೆ-ಹೇಗೆ ತನ್ನ ಬ್ರಹ್ಮಸೂತ್ರಭಾಷ್ಯದ ಪ್ರತಿಯೊಂದು ಅಧ್ಯಾಯದ ಪ್ರತಿಯೊಂದು ಪಾದದ ಕಡೆಯಲ್ಲಿ ತನ್ನ ಹೆಸರಿನ ಮೊದಲು 'ಯತಿವ್ರಜ ಪರಿವೃಢ', ಈ ಮಾತನ್ನು ದ್ವಿತೀಯ ಹಾಗು ಪ್ರಥಮ ಅಧ್ಯಾಯದ ಪ್ರಥಮ ಪಾದದ ಕಡೆಯಲ್ಲಿ 'ನಿರಾಭಾರ-ವೀರಶೈವ' ಎಂದು ತನ್ನ ವರ್ಣನೆ ಮಾಡಿದ್ದಾನೆ. ಇದರಿಂದ ಅವನು ಒಬ್ಬ ಪರಿವ್ರಾಜಕ ಸನ್ಯಾಸಿ ಇದ್ದನು ಎಂದು ತಿಳಿಯುವದು. ಅವನ ವೀರಶೈವಮತವೂ ಸರ್ವತ್ರ ಪ್ರಕಟಿತವು. ಸಾಮಾನ್ಯ ಮತ್ತು ಮಿಶ್ರಶೈವರು ಶಿವ ಮತ್ತು ವಿಷ್ಣು ಇಬ್ಬರದೂ ಉಪಾಸಕರು. ಆದರೆ ಶುದ್ಧ ಮತ್ತು ವೀರಶೈವರು ಶರೀರದಲ್ಲಿ, ತಲೆಯಲ್ಲಿ ಅಥವಾ ಕೊರಳಲ್ಲಿ ಲಿಂಗಚಿಹ್ನ ಧಾರಣೆಮಾಡುತ್ತಾರೆ.

ಶ್ರೀಪತಿಯ ಸಮಯ ಸಂಬಂಧದಿಂದಲೂ ನಿಶ್ಚಿತವಾಗಿ ಏನೂ ತಿಳಿಯುವದಿಲ್ಲ. ಆದರೆ ಅವನು ಯಾವ ಎಲ್ಲ ದಾರ್ಶನಿಕರ ಮತವಾದ ತನ್ನ ಭಾಷ್ಯದಲ್ಲಿ ಖಂಡನ ಮಾಡಿರುವನೋ ಅದರಲ್ಲಿ ಭೇದವಾದೀ ವೈದಾಂತಿಕ ಮಧ್ವನು ಒಬ್ಬನು. ಮಧ್ವನು ಕ್ರಿಸ್ತೀಯ ದ್ವಾದಶ ಶತಮಾನದಲ್ಲಿ ಇದ್ದನು. ಅದರಿಂದ ಶ್ರೀಪತಿಯು ಆ ಕಾಲದ ಅನಂತರ ಇದ್ದನೆಂದು ಹೇಳಬೇಕಾಗುವದು.

ಶ್ರೀಪತಿಯ ಪ್ರಖ್ಯಾತತಮ ಗ್ರಂಥವು 'ಬ್ರಹ್ಮಸೂತ್ರಭಾಷ್ಯ'ವು. ಈ ಭಾಷ್ಯಕ್ಕೆ 'ಶ್ರೀಕರಭಾಷ್ಯ'ವೆನ್ನುವರು. ಶ್ರೀಪತಿಯು ತನ್ನ ಬ್ರಹ್ಮಸೂತ್ರಭಾಷ್ಯದ ಪ್ರತಿಯೊಂದು ಅಧ್ಯಾಯದ ಪ್ರತಿಯೊಂದು ಪಾದದ ಕೊನೆಯಲ್ಲಿ ಹೀಗೆ ಹೇಳಿದ್ದಾನೆ: "ಇತಿ ಶ್ರೀಮದ್ ಯತಿವ್ರಜ-ಪರಿವೃಢ-ಶ್ರೀಪತಿ-ಪಂಡಿತ ಭಗವತ್‌ಪಾದಾಚಾರ್ಯ-ಭೇದ-ಭೇದಾತ್ಮಕ-ವಿಶೇಷಾದ್ವೈತ ಸಿದ್ಧಾಂತ-ವ್ಯವಸ್ಥಾಪಕ-ವೈಯಾಸಿಕ ಬ್ರಹ್ಮ ಮೀಮಾಂಸಾ-ಸೂತ್ರಾರ್ಥ-ಪ್ರಕಾಶಕೇ ಶ್ರೀಕರ ಭಾಷ್ಯೇ" ಇತ್ಯಾದಿ. 'ಶ್ರೀಕರ, ಶಬ್ದದ ಅರ್ಥ'ಶಿವಕರ' ಅಥವಾ ಶಿವ. ಗ್ರಂಥದ ಪ್ರಾರಂಭದಲ್ಲಿಯೂ ಶ್ರೀಪತಿಯು ತನ್ನ ಭಾಷ್ಯಕ್ಕೆ 'ಶಿವಂಕರ', ಎಂದೂ ಉಲ್ಲೇಖ ಮಾಡಿ ಹೇಳುತ್ತಾನೆ. "ಅಗಸ್ತ್ಯಮುನಿಚಂದ್ರೇಣ ಕೃತ ವೈಯಾಸಿಕಾಂ ಶುಭಾಮ್ ಸೂತ್ರ ವೃತ್ತಿಂ ಸಮಾಲೋಚ್ಯ ಕೃತಂ ಭಾಷ್ಯಂ ಶಿವಂ ಕರಮ್ (೧೬).

ಅದಕ್ಕೋಸುಗ, ಶಿವನ ಪರಬ್ರಹ್ಮತ್ವ ಪ್ರಚಾರಕಾರೀ ಈ ಭಾಷ್ಯಕ್ಕೆ ಶ್ರೀಪತಿಯು ಶಿವನ ನಾಮದಿಂದಲೆ ನಾಮಕರಣ ಮಾಡಿದ್ದಾನೆ. ಅದು ನಿಃಸಂದೇಹವು. ವೀರಶೈವ-ಮತವಾದದ ಎರಡು ಪ್ರಧಾನಸ್ತಂಭ ಅಷ್ಟಾವರಣ ಮತ್ತು ಷಟ್‌ಸ್ಥಲತತ್ತ್ವ. ಶ್ರೀಪತಿಯು ತನಗೆ ವೀರಶೈವ, ಎಂದು ವರ್ಣನೆ ಮಾಡಿರುತ್ತಾನೆ ಎಂದು ಅಲ್ಲ, ಆದರೆ ಅದರೊಡನೆಯೇ ವಿಶೇಷ ಮಾಡಿ ಷಟ್‌ಸ್ಥಲವಾದವನ್ನೂ ಮೇಲಿಂದ ಮೇಲೆ ಉಲ್ಲೇಖ ಮಾಡಿರುತ್ತಾನೆ. ಅವನ ಭಾಷ್ಯದಲ್ಲಿ ಹಾಗೂ ಈಶ್ವರ ಮತ್ತು ಜೀವದ ಸಂಬಂಧ ನಿರೂಪಣದ ಸಮಯದಲ್ಲಿ ಈ ತತ್ವದ ಸಹಾಯ ಗ್ರಹಣ ಮಾಡಿರುತ್ತಾನೆ. ಅದಕ್ಕೋಸುಗ ಶ್ರೀಕರಭಾಷ್ಯ, ವೀರಶೈವ ಸಂಪ್ರದಾಯದ ಪ್ರಾಮಾಣಿಕ ವೇದಾಂತ ಭಾಷ್ಯವೆಂಬೀ ವಿಷಯದಲ್ಲಿ ಸಂದೇಹಕ್ಕೆ ಅವಕಾಶವಿಲ್ಲ.

ಶ್ರೀಕರ ರಚಿತ ಬೇರೆ ಯಾವ ಗ್ರಂಥದ ವಿಷಯವೂ ತಿಳಿಯುವದಿಲ್ಲ. ಆದರೆ ಜನಶ್ರುತಿ ಅನುಸಾರವಾಗಿ ಪಂಡಿತಪ್ರವರ ಶ್ರೀಕಂಠ ದಶೋಪನಿಷದ್ ಭಾಷ್ಯ, ಗೀತಾಭಾಷ್ಯ ಪ್ರಭೃತಿಗಳನ್ನು ರಚಿಸಿದ್ದನು.

ಸಾಧಾರಣತಃ, 'ಶ್ರೀಕರಭಾಷ್ಯವು' ಸಹಜ, ಸರಳ, ಪ್ರಾಂಜಲ-ಮಧುರವಿದ್ದರೂ ಅಲ್ಲಲ್ಲಿ ಅದರ ರಚನಾ ಕಾಠಿಣ್ಯದೋಷ ದುಷ್ಟ ಮತ್ತು ದುರ್ಬೋಧವಾಗಿ ಬಿಟ್ಟಿದೆ. ಗ್ರಂಥದ ಪ್ರತಿ ಪಾನಿನಲ್ಲಿ ಗ್ರಂಥಕಾರನ ಅಗಾಧ ಪಾಂಡಿತ್ಯ, ತೀಕ್ಷ್ಣಬುದ್ಧಿ, ನ್ಯಾಯಾನುಗ ತರ್ಕಪ್ರಣಾಲೀ ಮತ್ತು ವಿಚಾರಶಕ್ತಿಯ ಪರಿಚಯ ದೊರೆಯುತ್ತದೆ. ಅವನು ತನ್ನ ಭಾಷ್ಯದಲ್ಲಿ ವೇದ, ಉಪನಿಷದ್, ಪುರಾಣ, ಇತಿಹಾಸ ಪ್ರಮುಖಗಳಿಂದ ಅಸಂಖ್ಯ ವಾಕ್ಯಗಳನ್ನು ಉದ್ಧೃತ ಮಾಡಿರುತ್ತಾನೆ ಹಾಗೂ ಬಹು ಮನೀಷಿಗಳ ಹೆಸರುಗಳನ್ನು ಉಲ್ಲೇಖಿಸಿ ಅವರ ಮತವಾದವನ್ನು ಗ್ರಹಣ ಅಥವಾ ಖಂಡನ ಮಾಡಿರುತ್ತಾನೆ. ಇದರಿಂದ ಅವನ ಅಪೂರ್ವ ವಿದ್ವತ್ತೆಯ ಕೆಲ ಪರಿಚಯ ದೊರೆಯುತ್ತದೆ.

ಶ್ರೀಕರಭಾಷ್ಯದ, ಪ್ರಾರಂಭಿಕ ಶ್ಲೋಕಗಳಲ್ಲಿ ಶ್ರೀಪತಿ ಈ ಭಾಷ್ಯರಚನೆಯ ಮೂಲ ಉದ್ದೇಶ ವಿವೃತ್ತ ಮಾಡಿ ಹೇಳಿರುತ್ತಾನೆ.

"ವೇದಾಗಮ-ತತ್ತ್ವಜ್ಞ ಶೈವಾನಾಂ ಮೋಕ್ಷಕಾಂಕ್ಷಿಣಾಮ್।
ವೈದಿಕಾನಾಂ ವಿಶುದ್ಧಾನಾಮೇತದ್ ಭಾಷ್ಯಂ ಹಿ ಕಲ್ಪಕಮ್॥
ಶ್ರುತ್ಯೈಕ್ಯದೇಶಪ್ರಾಮಾಣ್ಯಂ ದ್ವೈತಾದ್ವೈತಮತಾದಿಷು ।
ದ್ವೈತಾದ್ವೈತ ಮತೇ ಶುದ್ಧೇ ವಿಶೇಷಾದ್ವೈತ ಸಂಜ್ಞಿಕೇ॥
ವೀರಶೈವಕಸಿದ್ಧಾಂತೇ ಸರ್ವಶ್ರುತಿಸಮನ್ವಯಃ।" ಇತ್ಯಾದಿ(೧೩-೧೪)

ಅರ್ಥಾತ್ ವೇದಜ್ಞ, ಮೋಕ್ಷಕಾಮೀ, ವಿಶುದ್ಧ ವೈದಿಕ ಶೈವರಿಗೋಸುಗ ಈ ಭಾಷ್ಯವು ರಚಿತವಾಗಿರುತ್ತದೆ. ದ್ವೈತಾದ್ವೈತ ಮತವೇ ಪ್ರಾಮಾಣಿಕ, ಪುನರಾಯ, ಸಮಸ್ತ ದ್ವೈತಾ-ದ್ವೈತ ಮತಗಳಲ್ಲಿ ಏಕಮಾತ್ರ ವಿಶೇಷಾದ್ವೈತ ಮತವೇ ಶುದ್ಧ ಅಥವಾ ಯುಕ್ತಿಸಂಗತವು. ಏಕಮಾತ್ರ ವೀರಶೈವ-ಸಿದ್ಧಾಂತವೇ ಸರ್ವಶಾಸ್ತ್ರ ಸಮ್ಮತವು.

ಈ ಪ್ರಾರಂಭಿಕ ಶ್ಲೋಕಗಳಲ್ಲಿ ಶ್ರೀಪತಿಯು ತನ್ನ ಭಾಷ್ಯಕ್ಕೆ 'ಭವಹರವಮ್' 'ದುರ್ವಾದಿಗರ್ವಾಪಹಮ್', 'ಸರ್ವಾನರ್ಥ-ವಿನಾಶಕಮ್', 'ಬುಧನುತಮ್', 'ತತ್ತ್ವಬೋಧಾಕರಮ್, 'ಅಶೇಷೋಪನಿಷತ್ ಸಾರಮ್', 'ವಿಶೇಷಾದ್ವೈತ ಮಂಡನಮ್', 'ಶಿವಜ್ಞಾನಪ್ರದಮ್' ಪ್ರಮುಖ ನಾನಾರೂಪ ವಿಶೇಷಣಗಳಿಂದ ವಿಭೂಷಿತ ಮಾಡಿರುತ್ತಾನೆ.

ಶ್ರೀಪತಿಯ ಪ್ರಗಾಢ ನ್ಯಾಯಜ್ಞಾನದ ಕೆಲ ಪರಿಚಯವು ದೊರೆಯುತ್ತದೆ. ಮತ್ತೊಂದು ಪದಾರ್ಥವು ಇರುತ್ತದೆ. ಅದು ಏನಂದರೆ ಶ್ರೀಕರಭಾಷ್ಯದಲ್ಲಿ ಅವನು 'ಬೀಜಾಂಕುರನ್ಯಾಯ', 'ಅರುಂಧತೀನ್ಯಾಯ', 'ಅಂಧಪರಂಪರಾನ್ಯಾಯ', 'ಗೋಬಲೀವರ್ದನ್ಯಾಯ' ಪ್ರಮುಖ ೬೯ ನ್ಯಾಯಗಳ ಉಲ್ಲೇಖವನ್ನು ಮಾಡಿರುತ್ತಾನೆ. ಈ ಕ್ಷೇತ್ರದಲ್ಲಿ ಸ್ವಯಂ ಶಂಕರನೂ ೨೫ ಮಾತ್ರ ಹೇಳಿರುತ್ತಾನೆ.

ಶ್ರೀಪತಿಯ ಮತದಲ್ಲಿ ಪರಮಶಿವನೇ ಬ್ರಹ್ಮ. ಬ್ರಹ್ಮಸೂತ್ರದ ಪ್ರಖ್ಯಾತ ಚತುಃಸೂತ್ರಿಯಲ್ಲಿ ಅವನು ಈ ವಿಷಯದಲ್ಲಿ ವಿಶದ ಆಲೋಚನೆಯನ್ನು ಮಾಡಿರುತ್ತಾನೆ. ವಿಶೇಷ ಮಾಡಿ ೧-೧-೧ ಸೂತ್ರದಲ್ಲಿ 'ಶಿವಸ್ಯ ಪರಬ್ರಹ್ಮ ಕಥನಮ್' ಇದನ್ನು ಹೇಳಿ ಆರಂಭಿಸಿ ಅವನು ನಾನಾಭಾವದಿಂದ ಪೂರ್ವ ಪಕ್ಷಾದಿ ಖಂಡನ ಮಾಡಿ ಪ್ರಮಾಣಮಾಡಲಿಕ್ಕೆ ಪ್ರಯಾಸಿ ಆಗಿರುತ್ತಾನೆ. ಏಕಮಾತ್ರ ಶಿವನೇ ಪರಬ್ರಹ್ಮ ಪದವಾಚ್ಯವಾಗಲು ಶಕ್ಯವು.

ಬ್ರಹ್ಮ ಅಥವಾ ಶಿವನು, ಸಗುಣ ಮತ್ತು ಸವಿಶೇಷ, ನಿರ್ಗುಣ ಅಥವಾ ನಿರ್ವಿಶೇಷನಲ್ಲ. ಈ ಪ್ರಸಂಗದಲ್ಲಿ ಶ್ರೀಪತಿಯ ಅದ್ವೈತ ವೇದಾಂತ ಸಮ್ಮತ ನಿರ್ವಿಶೇಷವಾದ ಮತ್ತು ನಿರ್ಗುಣವಾದದ ವಿಸ್ತೃತ ಸಮಾಲೋಚನಾ ಮಾಡಿ, ಖಂಡನದ ಪ್ರಯತ್ನ ಮಾಡಿರುತ್ತಾನೆ. ಬ್ರಹ್ಮ ಅನಂತ ಕಲ್ಯಾಣಗುಣಮಂಡಿತ ಮತ್ತು ಸಮಸ್ತ ಹೇಯಗುಣ ವರ್ಜಿತ. ಪರಬ್ರಹ್ಮ ಶಿವನ ರೂಪಗಳು ಎರಡು:ಭೀಷಣ ಮತ್ತು ಮಧುರ. ಘೋರ ಮತ್ತು ಅಘೋರ. ಪ್ರಥಮರೂಪದಲ್ಲಿ ಅವನು 'ರುದ್ರನು ದ್ವಿತೀಯ ರೂಪದಲ್ಲಿ 'ಸೋಮನು'.

ಶ್ರುತಿಯಲ್ಲಿ ಕೆಲಕೆಲವು ಸ್ಥಾನಗಳಲ್ಲಿ ಬ್ರಹ್ಮನಿಗೇ ನಿರ್ಗುಣ ಎಂದು ವರ್ಣನೆ ಮಾಡಲ್ಪಟ್ಟಿದೆ. ಆದರೆ ಆ ಎಲ್ಲ ಕ್ಷೇತ್ರಗಳಲ್ಲಿ ಬ್ರಹ್ಮದ ಅಮೂರ್ತರೂಪದ ಕತೆಯೇ ಕೇವಲ ಹೇಳಲ್ಪಟ್ಟಿದೆ. ವಸ್ತುತಃ ಬ್ರಹ್ಮದ ಎರಡು ಅವಸ್ಥೆ ಅಥವಾ ರೂಪಗಳು: ಅಮೂರ್ತ ಮತ್ತು ಮೂರ್ತ. ಸೃಷ್ಟಿಯ ಪೂರ್ವದಲ್ಲಿ ಬ್ರಹ್ಮವು ಅಮೂರ್ತ ರೂಪದಲ್ಲಿಯೇ ಇರುತ್ತದೆ. ಈ ಅವಸ್ಥೆಯಲ್ಲಿಯೇ ಅವನಿಗೆ ಏಕಮೇವಾ ದ್ವಿತೀಯಮ್ (ಛಾಂದೋಗ್ಯ೬-೨-೧), ಕೇವಲೋ ನಿರ್ಗುಣೋ (ಶ್ವೇತಾಶ್ವೇತರ ೬-೧೧) ಪ್ರಭೃತಿ ಎಂದು ವರ್ಣಿಸಲ್ಪಟ್ಟಿದೆ. ಈ ಅಪರಿಣಿತ ಅನಭಿವ್ಯಕ್ತ ಅವಸ್ಥೆಯಲ್ಲಿ ಬ್ರಹ್ಮ, ಸಮಗ್ರ ಜೀವ ಜಗತ್, ಸಮಸ್ತ ನಾನಾತ್ವ, ಸಮಸ್ತ ಗುಣ ಮತ್ತು ಶಕ್ತಿಗೆ ಸಂಹತರೂಪದಲ್ಲಿ ತನ್ನ ಸತ್ತೆಯಲ್ಲಿ ಧಾರಣಮಾಡಿ ಇಡುತ್ತದೆ; ಅನಂತರದ ಸೃಷ್ಟಿಕಾಲದಲ್ಲಿ ಅದು ಎಲ್ಲ ವಿಕಸಿತ ಮಾಡುತ್ತಾನೆ, ಇದು ಅವನ ಮೂರ್ತರೂಪವು. ಅದಕ್ಕೋಸುಗ 'ನಿರ್ಗುಣ' ಶಬ್ದದ ಅರ್ಥ 'ಗುಣವಿಹೀನ' ಅಲ್ಲ. ಅದರ ಪ್ರಕೃತ ಅರ್ಥ ಮೂರು: (೧) ಮೊದಲು ಕೇವಲ ಬ್ರಹ್ಮವೇ ಅಮೂರ್ತರೂಪದಿಂದ ಇತ್ತು. ಅದಕ್ಕೋಸುಗ ಆ ಸಮಯದಲ್ಲಿ ಅದಕ್ಕೆ ಜಗತ್ ಕರ್ತೃತ್ವಾದಿ ಗುಣಶಕ್ತಿ ಪ್ರಕಟಿತ ಇದ್ದಿಲ್ಲ. (೨) ಬ್ರಹ್ಮ ಸತ್ವ-ರಜಃ-ತಮಃ ಪ್ರಮುಖ ಪ್ರಾಕೃತಿಕ ತ್ರಿಗುಣ ವಿಹೀನ- 'ಗುಣಶಬ್ದ ಪ್ರಯೋಗಾಭಾವೇನ ಸತ್ವಾದಿ ಗುಣತ್ರಯಾಭಾವ ಪರತ್ವಾತ್ (೧-೧-೧). (೩) ಬ್ರಹ್ಮ ಸಮಸ್ತ ಹೇಯಗುಣವರ್ಜಿತ. ಅದಕ್ಕೋಸುಗ ಯಾವ ಅವಸ್ಥೆಯಲ್ಲಿಯೂ ಬ್ರಹ್ಮದ ನಿರ್ಗುಣತ್ವವಾಗುವದಿಲ್ಲ. 'ಬ್ರಹ್ಮಧರ್ಮಾಣಾಮ್ ಅನಿಷಿದ್ಧತ್ವಾತ್'। ಪ್ರಕೃತ ಕಲ್ಪದಲ್ಲಿ ಅಮೂರ್ತ, ಮೂರ್ತ ಉಭಯ ರೂಪದಲ್ಲಿಯೂ ಬ್ರಹ್ಮ ಸಗುಣ ಮತ್ತು ಸವಿಶೇಷವು. ಮೂರ್ತ, ಅವಸ್ಥೆಯಲ್ಲಿಯಂತೂ ಈ ಸಂಬಂಧದಿಂದ ಸಂದೇಹದ ಯಾವ ಅವಕಾಶ ಇಲ್ಲ. ಅಮೂರ್ತ, ಅವಸ್ಥೆಯಲ್ಲಿ ಸಂಭವನೀಯ ಅನವಧಾನ ವ್ಯಕ್ತಿಗೆ ಬ್ರಹ್ಮ ನಿರ್ಗುಣ ಮತ್ತು ನಿರ್ವಿಶೇಷ ಎಂದು ತಿಳಿಯಲು ಶಕ್ಯವು. ಆದರೆ ಅದೇ ಸಮಯದಲ್ಲಿಯೂ ಅವನು ಸರ್ವಗುಣ ಶಕ್ತಿ ವಿಮಂಡಿತ ರೂಪದಲ್ಲಿಯೇ ಇರುತ್ತಾನೆ. ಹೇಗೆ ಚುಂಬಕದ ಲೋಹಾಕರ್ಷಣ ಶಕ್ತಿ ಅಗ್ನಿಯ ದಾಹಿಕಾಶಕ್ತಿ ನಿತ್ಯ ಈಶ್ವರನ ಗುಣ ಮತ್ತು ಶಕ್ತಿಯೂ ಸರಿಯಾಗಿ ಅದೇ.

ಒಂದು ವೇಳೆ ಆಪತ್ತಿ ಉತ್ಥಾಪಿತ ಆಗುವದು. ಏಕೆಂದರೆ ಸರ್ವಾಧಿಷ್ಠಾನ, ಸರ್ವವ್ಯಾಪಕ ಪರಮೇಶ್ವರ ಯಾವ ರೀತಿಯಿಂದ ಮೂರ್ತ ಮತ್ತು ಅಮೂರ್ತರೂಪದಿಂದ ಅವಸ್ಥಾನ ಮಾಡಲು ಶಕ್ಯವಿರುತ್ತಾನೆ. ಅದರ ಉತ್ತರ ಇದು - ಪ್ರಕೃತಿ ಹೇಗೆ ಮಹತ್ (ಅನಭಿವ್ಯಕ್ತ) ಮತ್ತು ಜಗತ್ (ಅಭಿವ್ಯಕ್ತ) ಉಭಯ ರೂಪದಲ್ಲಿಯೂ ಇರುತ್ತದೆ. ಸರಿಯಾಗಿ ಹಾಗೆ ಸರ್ವಶಕ್ತಿಮಾನ್ ಬ್ರಹ್ಮ ಮತ್ತು ವಾಯು ಪ್ರಮುಖ ಮೂರ್ತ ಮತ್ತು ದೃಶ್ಯ ರೂಪದಿಂದ ಪುನಃ ಸರ್ವವ್ಯಾಪಿ ಅಮೂರ್ತ ಮತ್ತು ಅದೃಶ್ಯ ರೂಪದಿಂದಲೂ ಸ್ಥಿತಿ ಮಾಡಲಿಕ್ಕೆ ಶಕ್ತನು.

ಬ್ರಹ್ಮವೇ ಜಗತ್ತಿನ ಏಕಮಾತ್ರ ನಿಮಿತ್ತ ಮತ್ತು ಉಪಾದಾನ ಕಾರಣ. ೧-೧-೨ ಸೂತ್ರದಲ್ಲಿ ಶ್ರೀಪತಿ ಸಮಸ್ತ ಪೂರ್ವಪಕ್ಷ ಖಂಡನಮಾಡಿ, ಪ್ರಮಾಣಿತ ಮಾಡಿರುತ್ತಾನೆ. ಜಗತ್ತಿನ ಜನ್ಮಾದಿ ಏಕಮಾತ್ರ ಪರಬ್ರಹ್ಮದ್ವೇಕಾರ್ಯ, ಅನ್ಯ ಯಾವದೂ ಅಲ್ಲ. ಇಲ್ಲಿ ಶ್ರೀಪತಿಯು ಒಂದು ನೂತನ ಉಪಮೇಯ ಕೊಟ್ಟಿರುತ್ತಾನೆ: 'ಕುಸೂಲ ಧಾನ್ಯವತ್' (೧-೧-೨) ಒಂದು ಧಾನ್ಯದಲ್ಲಿ ಅಸಂಖ್ಯಾ ಧಾನ್ಯಗಳು ಮೊದಲಿನಿಂದಲೆ ಸಂಚಿತವಾಗಿರುತ್ತವೆ. ಅನಂತರದಲ್ಲಿ ಕೇವಲ ಕಾಲಕಾಲಕ್ಕೆ ತಿರುಗಿ ಹೊರಗೆ ಒಗೆಯಲ್ಪಡುತ್ತವೆ. ಅದರಂತೆ ಬ್ರಹ್ಮದಲ್ಲಿ ಶಾಶ್ವತ ಕಾಲ ಅಸಂಖ್ಯಾ ಜೀವಲೀನವಾಗಿರುತ್ತವೆ. ಸೃಷ್ಟಿಕಾಲದಲ್ಲಿ ಕಾರಣ ರೂಪದಿಂದ ಬ್ರಹ್ಮವು ಪ್ರಕಾಶಿತ ಮಾಡುತ್ತದೆ. 'ಜನ್ಮಾದಿ', ಶಬ್ದದ ಅರ್ಥ, ಸೃಷ್ಟಿ, ಸ್ಥಿತಿ, ಲಯ, ತಿರೋಧಾನ (ಬಂಧ) ಮತ್ತು ಅನುಗ್ರಹ (ಮುಕ್ತಿ).

'ಸಿದ್ಧಾಂತಸ್ತು-ಸರ್ವಾಧಿಷ್ಠಾನ-ಸಚ್ಚಿದಾನಂದ-ಷಟ್‌ಸ್ಥಲ ಪರಶಿವ- ಬ್ರಹ್ಮಣ ಏವ ಜಗಜ್ಜನ್ಮಾದಿ ಕಾರಣತ್ವಂ ಯುಕ್ತಾಮ್' (೧-೧-೨). ಈ ರೀತಿಯಿಂದ ಬ್ರಹ್ಮದ ಕೃತ್ಯಪಂಚಕ ಅಥವಾ ಐದು ಕಾರ್ಯ ಜಗತ್ತಿನ ಸೃಷ್ಟಿ, ಪಾಲನ ಮತ್ತು ಧ್ವಂಸ ಹಾಗು ಕರ್ಮಾನುಸಾರವಾಗಿ ಜೀವಗಳ ಬಂಧ ಮತ್ತು ಮುಕ್ತಿಸಾಧನ. ಅದಕ್ಕೋಸುಗ ಬ್ರಹ್ಮವು ಸಕ್ರೀಯ, ಅದ್ವೈತವೇದಾಂತ ಮತಾನುಯಾಯಿ ನಿಷ್ಕ್ರಿಯವಲ್ಲ.

ಪ್ರಳಯಕಾಲದಲ್ಲಿ ಸೃಷ್ಟಿಯ ಪೂರ್ವದಲ್ಲಿ ಜೀವ ಜಗತ್ ಬ್ರಹ್ಮದ್ದೇ ಚಿತ್ ಮತ್ತು ಅಚಿತ್ ಶಕ್ತಿರೂಪದಿಂದ ಬ್ರಹ್ಮದಲ್ಲಿಯೇ ವಿಲೀನವಾಗಿರುತ್ತವೆ. ಸೃಷ್ಟಿಕಾಲದಲ್ಲಿ ಸ್ಥೂಲಜಗತ್-ಪ್ರಪಂಚವೂ ಜೀವರೂಪದಿಂದ ಪರಿಣತವಾಗುತ್ತದೆ. ಅದಕ್ಕೋಸುಗ ಜೀವ ಜಗತ್ತು ಬ್ರಹ್ಮದಂತೆಯೇ ನಿತ್ಯ ಹಾಗೂ ಸೃಷ್ಟಿಯ ಅರ್ಥ, ಈಶ್ವರನ ಅನಭಿವ್ಯಕ್ತಿ ಸ್ವರೂಪದ ಅಭಿವ್ಯಕ್ತಿಯೇ ಮಾತ್ರ. ತಂತು ಊರ್ಣನಾಭಿಯ ಪರಿಣತವಾದರೂ ಹೇಗೆ ಸ್ವಯಂ ಅಪರಿಣತವೇ ಇರುತ್ತದೆ, ಹಾಗೆ ಜೀವ ಜಗತ್ತು ಬ್ರಹ್ಮದ ಪರಿಣಾಮವಾದರೂ ಸ್ವಯಂ ಬ್ರಹ್ಮ ಅಪರಿಣತವೇ ಮತ್ತು ಅಪರಿವರ್ತಿತವೇ ಇರುತ್ತದೆ.

ಈ ಭಾವದಿಂದ ಶ್ರೀಪತಿಯು ಬೇರೆ-ಬೇರೆ ಏಕೇಶ್ವರವಾದಿ ವೈದಾಂತಿಕರ ಪ್ರಣಾಲಿ ಅನುಸಾರವೇ ಈಶ್ವರನ ಸ್ವರೂಪ ಮತ್ತು ಗುಣಾವಲಿ ವಿವೃತ ಮಾಡಿರುತ್ತಾನೆ. ಬ್ರಹ್ಮಸರ್ವಜ್ಞ, ಸರ್ವಶಕ್ತಿ, ಸರ್ವವ್ಯಾಪಿ, ಸ್ವತಂತ್ರ ಜಗಲ್ಲೀನವಾಗಿದ್ದರೂ ಜಗದ್ ಬಹಿರ್ಭೂತ ಸರ್ವಾಂತರ್ಯಾಮಿ, ಸರ್ವಾತ್ಮಕ, ಸಚ್ಚಿದಾನಂದ ಸ್ವರೂಪ, ಪರಮ ಕರುಣಾಮಯ ಇತ್ಯಾದಿ.

೧-೧-೨ ಸೂತ್ರದ ಕೊನೆಯಲ್ಲಿ ಅವನು ಹೇಳಿದ್ದಾನೆ. 'ಸರ್ವಜ್ಞತ್ವಾದಿ ಧರ್ಮಾಣಾಂ ಶಿವಶ್ಚೈವ ಸಂಭವಾತ್'

ಇಲ್ಲಿ ಕೇವಲ ಸಾಂಪ್ರದಾಯಿಕ ಅಥವಾ ವೀರಶೈವ ಮತಾನುಸಾರವಾಗಿ ಅವನು ಬ್ರಹ್ಮ ಅಥವಾ ಶಿವನಿಗೆ, 'ಷಟ್‌ಸ್ಥಲ' ಈ ವಿಶೇಷಣದಿಂದ ಮೇಲಿಂದ ಮೇಲೆ ವಿಭೂಷಿತ ಮಾಡಿರುತ್ತಾನೆ. ಹೇಗೆ ನಾವು ನೋಡುತ್ತೇವೆ, ೧-೧-೨ ಸೂತ್ರ ಭಾಷ್ಯದಲ್ಲಿ ಅವನು 'ಷಟ್‌ಸ್ಥಲ-ಪರಮಶಿವನಿಗೆ, ಜನ್ಮಾದಿ ಕರ್ತಾ' ಎಂದು ಅಭಿಹಿತ ಮಾಡಿರುತ್ತಾನೆ. ಬೇರೆ ಬೇರೆ ಸ್ಥಳಗಳಲ್ಲಿಯೂ ಅವನು 'ಷಟ್‌ಸ್ಥಲ ಶಿವನ' ಉಲ್ಲೇಖ ಮಾಡಿರುತ್ತಾನೆ.

ಷಟ್‌ಸ್ಥಲವಾದವು ವೀರಶೈವ ಸಂಪ್ರದಾಯದ ಒಂದು ಪ್ರಧಾನ ತತ್ವವೆಂದು ಮೊದಲೇ ಹೇಳಿದೆ. ವೀರಶೈವಮತದಲ್ಲಿ ಬ್ರಹ್ಮ ಅಥವಾ ಪರಮಶಿವನ ಅಪರನಾಮ 'ಸ್ಥಲ'. ಕಾರಣ, ಶಿವ 'ಸ್ಥ' ಅಥವಾ ವಿಶ್ವ ಬ್ರಹ್ಮಾಂಡದ ಸೃಷ್ಟಿ ಮತ್ತು ಸ್ಥಿತಿಯ ಕಾರಣ; ಹಾಗು 'ಲ' ಅಥವಾ ಅದರ ಲಯದ್ದೂ ಕಾರಣ. ಶಿವನೇ ಜೀವದ ಏಕಮಾತ್ರ ಆಶ್ರಯಸ್ಥಲ ಅಥವಾ ಮೋಕ್ಷಸ್ಥಲ. ಅದಕ್ಕೋಸುಗವೇ ಅವನ ನಾಮ ಸ್ಥಲ. ಅಂತರ್ನಿಹಿತ ಶಕ್ತಿಯೆಂದು ಈ ಸ್ಥಲ, ಲಿಂಗಸ್ಥಲ ಅಥವಾ ಉಪಾಸ್ಯ ಶಿವನು, ಹಾಗು ಅಂಗಸ್ಥಲ ಅಥವಾ ಉಪಾಸಕ ಜೀವದಲ್ಲಿ ವಿಭಕ್ತವಾಗುತ್ತಾನೆ. ಪುನಃ ಲಿಂಗಸ್ಥಲ ಮೂರು ಭಾಗದಲ್ಲಿ ವಿಭಕ್ತವಾಗುತ್ತದೆ-ಭಾವಲಿಂಗ, ಪ್ರಾಣಲಿಂಗ ಮತ್ತು ಇಷ್ಟಲಿಂಗ. ಮೊದಲನೆಯದು ಶಿವನ ನಿಷ್ಕಲ, ನಿರಂಶ, ದೇಶ ಕಾಲಾತೀತ, ಚಕ್ಷು ಮತ್ತು ಮನಸಿನಿಂದ ಅಪ್ರಾಪ್ಯ ಸತ್‌ರೂಪ. ಎರಡನೇದು ಅವನ ಸಾಂಶ, ಸೂಕ್ಷ್ಮ, ಮನಸಿನಿಂದ ಪ್ರಾಪ್ಯ ಚಿದ್ರೂಪ. ಮೂರನೇದು ಅವನ ಸಾಂಶ, ಸ್ಥೂಲ, ಚಕ್ಷುವಿನಿಂದ ದೃಶ್ಯ ಆನಂದರೂಪ. ಮೊದಲನೇದು ಅವನ ಮಹತ್ತಮ ಕೇವಲ ರೂಪ, ಎರಡನೇದು ಸೂಕ್ಷ್ಮರೂಪ, ಮೂರನೇದು ಸ್ಥೂಲರೂಪ. ಪ್ರಯೋಗ, ಮಂತ್ರ ಮತ್ತು ಕರ್ಮಸಮನ್ವಿತ ಈ ಮೂರು ವಿಭಾಗದ ಹೆಸರೇ ಕಲಾ (ಚಿತ್-ಕಲಾ), ನಾದ, ಬಿಂದು. ಪ್ರತಿಯೊಂದರ ಎರಡು ವಿಭಾಗ, ಯಥಾ ಕ್ರಮದಲ್ಲಿ: ಮಹಾಲಿಂಗ, ಮತ್ತು ಪ್ರಸಾದಲಿಂಗ; ಚರಲಿಂಗ ಮತ್ತು ಶಿವಲಿಂಗ; ಗುರುಲಿಂಗ ಮತ್ತು ಆಚಾರಲಿಂಗ. ಆರು ಶಕ್ತಿ ಸಮನ್ವಿತ್ ಈ ಆರು ಲಿಂಗ 'ಷಟ್‌ಸ್ಥಲ'ವಾಯಿತು. ಅಥವಾ ಶಿವನ ಆರು ರೂಪ:

(೧) ಮಹಾಲಿಂಗ-ಇದು ಶಿವನ ಚಿತ್‌ಶಕ್ತಿ-ಸಮನ್ವಿತ, ನಿತ್ಯ, ಜನ್ಮಮರಣರಹಿತ, ಪೂರ್ಣತಮ, ಮಹತ್ತಮ, ಒಂದು ಮತ್ತು ಅದ್ವಿತೀಯ ರೂಪ, ಅಥವಾ ಚೈತನ್ಯರೂಪ. ಶ್ರದ್ಧಾ ಮತ್ತು ಭಕ್ತಿ ಅಥವಾ ಈಶ್ವರಪ್ರೇಮದಿಂದಲೇ ಈ ರೂಪ ಲಾಭವಾಗುವದು. (೨) ಪ್ರಸಾದಲಿಂಗ-ಇದು ಶಿವನ ಪರಾಶಕ್ತಿ ಸಮನ್ವಿತೆ, ಸಾದಾಖ್ಯರೂಪ. ಇದು ಬುದ್ಧಿಗಮ್ಯ. (೩) ಚರಲಿಂಗ-ಇದು ಶಿವನ ಆದಿಶಕ್ತಿ ಸಮನ್ವಿತ, ಮನೋಗಮ್ಯ, ಪುರುಷರೂಪ. (೪) ಶಿವಲಿಂಗ-ಇದು ಶಿವನ ಇಚ್ಛಾಶಕ್ತಿ ಸಮನ್ವಿತ ಅಹಂಕಾರ ರೂಪ. (೫) ಗುರುಲಿಂಗ- ಇದು ಶಿವನ ಜ್ಞಾನಶಕ್ತಿ ಸಮನ್ವಿತರೂಪ. (೬) ಆಚಾರಲಿಂಗ-ಇದು ಶಿವನ ಕ್ರಿಯಾಶಕ್ತಿ ಸಮನ್ವಿತರೂಪ.

ಪ್ರಥಮರೂಪದಲ್ಲಿ ಶಿವ ಅಥವಾ ಬ್ರಹ್ಮ ಜಗತ್ ಪ್ರಪಂಚ-ಬಹಿರ್ಭೂತ, ಶುದ್ಧಚಿತ್. ದ್ವಿತೀಯರೂಪದಲ್ಲಿ ಅವನು ಜಗತ್ ಸೃಷ್ಟಾ. ತೃತೀಯರೂಪದಲ್ಲಿ ಜಡಪ್ರಧಾನ ಭಿನ್ನ. ಚತುರ್ಥರೂಪದಲ್ಲಿ ಅವನು ಅಪಾರ್ಥಿವ ದೇಹಧಾರೀ. ಪಂಚಮರೂಪದಲ್ಲಿ ಅವನು ಜೀವದ ಜ್ಞಾನಗುರು. ಷಷ್ಟರೂಪದಲ್ಲಿ ಅವನು ಜೀವದ ಮುಕ್ತಿದಾತಾ.

ಸಾಧಾರಣ ಭಾವದಿಂದ ಈ ಷಟ್‌ಸ್ಥಲವಾದ ಗ್ರಹಣಮಾಡಿ ಶ್ರೀಪತಿ ತನ್ನ ಭಾಷ್ಯದಲ್ಲಿ ಸಾಧನತತ್ವದ ಕಡೆಯಿಂದಲೂ 'ಷಟ್‌ಸ್ಥಲ' ತತ್ವ ಪ್ರಪಂಚಿತ ಮಾಡಿದ್ದಾನೆ. ಶ್ರವಣ, ಮನನ, ಜ್ಞಾನ, ನಿಧಿ, ಧ್ಯಾನ ಹಾಗು ಆಸನ ಈ ಷಷ್ಟ ಸಾಧನಾನುಸಾರದಿಂದ ಆತ್ಮಲಿಂಗ, ಭಾವಲಿಂಗ, ಜ್ಯೋತಿರ್ಲಿಂಗ, ಪ್ರಾಣಲಿಂಗ, ಉಪಾಸನಾಲಿಂಗ ಮತ್ತು ಧ್ಯಾನಲಿಂಗದ ಕಥಾ ಯಥಾಕ್ರಮದಿಂದ ಹೇಳಿದ್ದೇನೆ.

❖❖

೧೯

# ನಾಥಪಂಥ

ಪ್ರಾಯಃ ಸಹಸ್ರಾಧಿಕ ವರ್ಷಗಳ ಪೂರ್ವದಲ್ಲಿ ನಾಥಸಂಪ್ರದಾಯವೆಂಬ ಹೆಸರಿನ ಯೋಗಿಗಳ ಖ್ಯಾತಿಯು ಭಾರತವ್ಯಾಪಿಯಾಗಿತ್ತು. ಈ ಯೋಗಿಗಳ ಗತಿವಿಧಿಯು ಆ ಸಮುದ್ರ ಹಿಮಾಚಲವಿದ್ದುದರಿಂದ ಅವರ ಕೀರ್ತಿಯು ಮತ್ತು ಕತೆಯು ಭಾರತದ ವಿಭಿನ್ನ ಪ್ರದೇಶಗಳಲ್ಲಿ ಈಗ ಸಹ ಇರುವದು. ಈ ಯೋಗೀಸಂಪ್ರದಾಯದಲ್ಲಿ ದೀಕ್ಷಾಂತದಲ್ಲಿ 'ನಾಥ' ಪದವಿಯನ್ನು ಜೋಡಿಸುವ ರೀತಿಯು ಇತ್ತು. ಉದಾ: ಶ್ರೀ ಮತ್ಸ್ಯೇಂದ್ರನಾಥ, ಶ್ರೀ ಗೋರಕ್ಷನಾಥ, ಶ್ರೀ ಜಾಲಂಧರನಾಥ ಇತ್ಯಾದಿ. ಅಂತೆಯೇ ಸಾಮಾನ್ಯರಲ್ಲಿ ಇವರು 'ನಾಥಯೋಗಿ' ಎಂಬ ಹೆಸರಿನಿಂದ ಪ್ರಸಿದ್ಧರಿದ್ದರು. ನಾಥ ಅಂದರೆ ಪ್ರಭು, ಯೋಗಿನಿಯರಿಗೆ 'ನಾಥನೀ' ಅನ್ನುತ್ತಿದ್ದರು. ನಾಥಯೋಗಿಗಳು ಬ್ರಹ್ಮಚಾರಿಗಳಿರುತ್ತಿದ್ದರು. ನಾಥನಿಯರು ಹೆಚ್ಚಾಗಿ ವಿಧವೆಯರು ಇರುತ್ತಿದ್ದರು. ಕ್ರಿ.ಶ. ೧೯೦೧ನೆಯ ಜನಗಣತಿಯಂತೆ ಭಾರತದಲ್ಲಿ ೪೫೪೬೩ ನಾಥಯೋಗಿಗಳ ಸಂಖ್ಯೆಯು ಕಂಡುಬರುವದು. ಅನಂತರ ಬೇರೆ ರೀತಿಯಿಂದ ಇವರ ಸಂಖ್ಯೆಯನ್ನು ನಿರ್ಣಯ ಮಾಡಲಿಲ್ಲ.

ಈ ಯೋಗಿಗಳಿಗೆ ಅಲೌಕಿಕ ಸಾಮರ್ಥ್ಯವಿತ್ತು. ಅಂತೆಯೇ ಇವರಿಗೆ 'ಸಿದ್ಧ'ರೆಂದೂ ಅನ್ನುತ್ತಿದ್ದರು. ಅರ್ಥಾತ್ ಇವರು ಯೋಗಮಾರ್ಗದಲ್ಲಿ ಸಿದ್ಧರಾಗಿದ್ದರು. ಇವರು ಪ್ರಚಾರ ಮಾಡಿದ ಧರ್ಮಕ್ಕೆ ಆಧುನಿಕ ಯುಗದಲ್ಲಿ 'ನಾಥಪಂಥ'ವೆಂದು ಪಂಡಿತ ಹರಪ್ರಸಾದ ಶಾಸ್ತ್ರಿಗಳು ಹೆಸರು ಕೊಟ್ಟಿರುವರು. ಬಂಗಾಲದೇಶದೊಡನೆ ನಾಥಯೋಗಿಗಳ ಘನಿಷ್ಠ ಸಂಬಂಧವಿದ್ದುದರಿಂದ ನಾಥಯೋಗಿಗಳ ಹಲವು ಪುಸ್ತಕಗಳು ಬಂಗಾಳೀ ಭಾಷೆಯಲ್ಲಿ ರಚಿತವಾದವು. ಸುದೂರ ನೇಪಾಳದಲ್ಲಿಯೂ ಶ್ರೀ ಮತ್ಸ್ಯೇಂದ್ರನಾಥನಿಂದ ರಚಿತವಾದ ಬಂಗಾಳಿ ಪದಗಳು ದೊರೆಯುತ್ತವೆ. ಅವನು ಪೂರ್ವಭಾರತದ ಸಮುದ್ರದಂಡೆಯ ಸಂದ್ವೀಪ ಅಥವಾ ಚಂದ್ರದ್ವೀಪದಲ್ಲಿ ಜನ್ಮಗ್ರಹಣ ಮಾಡಿದನು. ಮತಾಂತರದಲ್ಲಿ ಅವನು 'ವರಣಾ' (ವಂಗದೇಶ)ದಲ್ಲಿ ಜನಿಸಿದನು. ಆದರೆ ಅವನು ಬಂಗಾಲಿಯು ಎಂಬ ವಿಷಯದಲ್ಲಿ ಯಾವ ಮತಭೇದವೂ ಇರುವದಿಲ್ಲ.

ಗೋರಕ್ಷನಾಥನ ಜನ್ಮಸಂಬಂಧವಾಗಿ ಯಾವ ಗ್ರಂಥದಲ್ಲಿಯೂ ಉಲ್ಲೇಖವಿಲ್ಲ. ಯೋಗಿಗಳು ಅವನಿಗೆ 'ಈಶ್ವರ-ಸಂತಾನ'ವೆನ್ನುತ್ತಾರೆ. ಬಂಗಾಳೀಭಾಷೆಯಲ್ಲಿ ಗೋರಕ್ಷರಚಿತ ಪದಗಳು ದೊರೆಯುವದಿಲ್ಲ. ಅವರ ಗ್ರಂಥಾದಿಗಳು ಹೆಚ್ಚಾಗಿ ಹಿಂದೀ, ರಾಜಸ್ಥಾನೀ ಮೊದಲಾದ ಮಿಶ್ರಿತ ಭಾಷೆಗಳಲ್ಲಿ ದೊರೆಯುವವು. ಇವನ ರಚನಾವಲಿಯು ಹಿಂದೀ ಸಾಹಿತ್ಯದ ಮೂಲ ಬುಗ್ಗೆಯ ಸ್ವರೂಪವು ಎಂದು ಹೇಳಲ್ಪಡುತ್ತದೆ. ಅತಏವ ಗೋರಕ್ಷನು ಬಂಗಾಳಿಯಲ್ಲವೆಂದೇ ತಿಳಿಯುವದು. ಮತ್ಸೇಂದ್ರ ಮತ್ತು ಗೋರಕ್ಷರ ರಚನೆಯೆಂದು ಪ್ರಚಲಿತವಿದ್ದ

ಸಂಸ್ಕೃತ ಗ್ರಂಥಾದಿಗಳು ಇರುವವು. ಮತ್ಸ್ಯೇಂದ್ರರಚಿತ ಕೆಲವು ಸಂಸ್ಕೃತ ಗ್ರಂಥಗಳನ್ನು ಡಾ. ಪ್ರಬೋಧಚಂದ್ರ ಬಾಗಚಿಯವರು ನೇಪಾಳದಿಂದ ತಂದಿರುವರು. ನೇಪಾಳದಿಂದ ಬಂಗಾಲೀ ಪದಗಳನ್ನು ಸಂಗ್ರಹಮಾಡಿ ಪಂ. ಹರಪ್ರಸಾದ ಶಾಸ್ತ್ರಿಗಳವರು ಕೀರ್ತಿಶಾಲಿಗಳಾದರು. ಅವನ್ನು ಅವರು ಸಾವಿರ ವರ್ಷಗಳ ಪ್ರಾಚೀನ ಬಂಗಾಲೀಭಾಷೆಯಲ್ಲಿ 'ಬೌದ್ಧಗಾನ ಓ ದೋಹಾ', ಎಂಬ ಹೆಸರಿನಿಂದ ಮುದ್ರಿಸಿ ಪ್ರಚಾರಮಾಡಿರುವರು. ಬಂಗಾಲದ ಬೌದ್ಧ ಮತ್ತು ಶೈವತಾಂತ್ರಿಕ ಸಿದ್ಧರು ಅಪ್ರಭ್ರಂಶದಲ್ಲಿ ಸಾಧನ ಸಂಬಂಧದ ಯಾವ ಪದಗಳನ್ನು ರಚಿಸುತ್ತಿದ್ದರೋ, ಅವು 'ದೋಹಾ' ಎಂಬ ಹೆಸರಿನಿಂದ ಪರಿಚಿತವು. ಭಾಷಾತತ್ವವಿದರಾದ ಸುನೀತಿಕುಮಾರ ಚಟರ್ಜೋಪಾಧ್ಯಾಯರು ಈ ದೋಹಾಗಳಿಗೆ ಬಂಗಾಲೀ ಸಾಹಿತ್ಯದ ಪ್ರಾಚೀನತಮ ರೂಪವೆಂದು ಸಿದ್ಧಮಾಡಿರುತ್ತಾರೆ. ನಾಥಯೋಗಿಗಳ ಮಹಾತ್ಮ್ಯ ಸೂಚಕ ಅಲೌಕಿಕ ಕತೆಗಳು ಜನರ ಬಾಯಿಯಿಂದ ಹಾಡಲ್ಪಟ್ಟು 'ಗಾಥಾ' ರೂಪದಿಂದ ಸರ್ವತ್ರ ಪ್ರಚಾರಿತವಾದವು. ಬಂಗಾಳದೇಶದ ಮೇಲೆಯೂ ಅವುಗಳ ಪ್ರಭಾವವು ಅಲ್ಪಸ್ವಲ್ಪವಾಗಿಲ್ಲ. ವಂಗಭಾಷೆಯಲ್ಲಿ ರಚಿತವಾದ 'ಗೋರಕ್ಷವಿಜಯ', 'ಗೋಪೀಚಂದ್ರೇರಗೀತ', 'ಮಯನಾಮತೀರಗಾನ' ಮೊದಲಾದವುಗಳು ಈಗ ಸಹ ಅದರ ಸಾಕ್ಷ್ಯವನ್ನು ಕೊಡುತ್ತವೆ.

ನಾಥಯೋಗಿಗಳಲ್ಲಿ ಮತ್ಸ್ಯೇಂದ್ರನಾಥ ಮತ್ತು ಗೋರಖನಾಥರು ಮುಖ್ಯರು. ಅವರು ಐತಿಹಾಸಿಕ ವ್ಯಕ್ತಿಗಳೆಂಬಲ್ಲಿ ಯಾವ ಸಂದೇಹವೂ ಇಲ್ಲ. ಶ್ರೀ ಮತ್ಸ್ಯೇಂದ್ರನಾಥನು ನಾಥಪಂಥದ ಆದಿಪ್ರವರ್ತಕನು ಮತ್ತು ಗೋರಕ್ಷನಾಥನು ಅವನ ಶಿಷ್ಯನಾಗಿದ್ದರು ಸಹ ಗುರುವಿಗಿಂತ ಹೆಚ್ಚು ಪ್ರಸಿದ್ಧನಿದ್ದನು. ಮತ್ಸ್ಯೇಂದ್ರನಾಥನ ಮತ್ತೊಬ್ಬ ಶಿಷ್ಯನ ಹೆಸರು 'ಗಾಭುರ ಸಿದ್ಧ' ಅಥವಾ ಚೌರಂಗಿನಾಥನೆಂದು. ಗೋರಕ್ಷನಾಥನ ಶಿಷ್ಯರಲ್ಲಿ ರಾಣಿ ಮಯನಾಮತಿ ಮತ್ತು ಜಾಲಂಧರನಾಥರು ಮುಖ್ಯರು. ಭರ್ತೃಹರಿ ಮೊದಲಾದವರೂ ಗೋರಕ್ಷನ ಶಿಷ್ಯರಾಗಿದ್ದರು. ಜಾಲಂಧರನಾಥ (ಹಾಡಿಪಾ) ವಂಗೀಯ ರಾಜನಾದ ಗೋಪೀಚಂದ್ರನ ಗುರುವಾಗಿದ್ದರು. ಇಬ್ಬರೂ ಐತಿಹಾಸಿಕ ವ್ಯಕ್ತಿಗಳು. ಭರ್ತೃಹರಿಯು ಉಜ್ಜಯನಿಯ ರಾಜನು. ಅವನ ಐತಿಹಾಸಿಕತೆಯು ಇರುತ್ತದೆ. ಅದರ ಹೊರತು ವಂಗದೇಶದಲ್ಲಿ ಹಲವು ಶತಮಾನಗಳಿಂದ ಯೋಗಿಗಳ ವಿಭಿನ್ನ 'ಗಾಥಾ'ಗಳಿಂದ ವಂಶಾನುಕ್ರಮವಾಗಿ ಯಾವ ಪ್ರವಾಹವು ನಡೆದು ಬಂದಿರುವದೋ ಅದರಿಂದಲೂ ಗೋರಕ್ಷನಾಥನು ಮತ್ಸ್ಯೇಂದ್ರನ ಶಿಷ್ಯ ಮತ್ತು ಮಯನಾಮತಿಯ ಗುರುವಾಗಿದ್ದನೆಂದು, ಹಾಗು ಹಾಡಿಪಾನು ಗೋರಕ್ಷನಾಥನ ಶಿಷ್ಯನು ಹಾಗು ರಾಜಾಗೋಪೀಚಂದ್ರನ ಗುರುವು ಮತ್ತು ಮಯನಾಮತಿಯ ಗುರುಬಂಧುವಾಗಿದ್ದನೆಂದು ಗೊತ್ತಾಗುವದು.

**ನಾಥಸಂಪ್ರದಾಯದ ಉದ್ಭವ:**

ಭಾರತೀಯ ನೀತಿ ಅನುಯಾಯಿಗಳಾದ ನಾಥಪಂಥದ ಉಪದೇಶಕರ ಅಯೋನಿಜ ಉದ್ಭವದ ಕಲ್ಪನೆಯು ಮಾಡಲ್ಪಟ್ಟಿದೆ. ಉದಾ: ಮತ್ಸ್ಯೇಂದ್ರನು ಮತ್ಸ್ಯದಿಂದ ಹುಟ್ಟಿದನು. ಗೋರಕ್ಷನಾಥನ ಜನ್ಮವು ಗೋಮಯದಿಂದ, ಮತಾಂತರದಲ್ಲಿ ಮಹಾದೇವನ ಜಡೆಯಿಂದ ಇತ್ಯಾದಿ ಆಗಮ ಸಂಹಿತೆಯಲ್ಲಿ ಉಲ್ಲೇಖಿತವಾಗಿರುತ್ತದೆ. ಈಶ್ವರನಿಂದ ಏಕಾದಶ ರುದ್ರರು ಮತ್ತು ತದೀಯ ಪತ್ನಿಯ ಉದ್ಭವವಾಗಿರುತ್ತದೆ. ಅವರ ವಂಶದಲ್ಲಿ ಆದಿನಾಥ, ಮೀನನಾಥ, ಗೋರಕ್ಷನಾಥ ಮೊದಲಾದ ಮಹಾತ್ಮರು ಜನ್ಮಗ್ರಹಣ ಮಾಡಿದರು. ಈ ಯೋಗಿಗಳು ರುದ್ರಕುಲಜಾತರೆಂದು, ಇವರು ಅನಾದಿ ಅಥವಾ ಶಿವಗೋತ್ರ ಮತ್ತು ಶಿವ ಅಥವಾ ನಾಥರಿಂದ ಉತ್ಪನ್ನರೆಂದು ಎಲ್ಲರೂ ಹೆಸರಿನ ಕೊನೆಯಲ್ಲಿ 'ನಾಥ' ಉಪಾಧಿಯನ್ನು ಹೊಂದಿಸುವ ಅಧಿಕಾರಿಗಳು. ಚಂದ್ರಾದಿತ್ಯ ಪರಮಾಗಮದಲ್ಲಿ ಸೂರ್ಯವಂಶೀಯ ಸುಧನ್ವಾರಾಜನ ಕನ್ಯೆಯಾದ ಸೂರ್ಯವತಿಯು ತಪಸ್ಸಿನ ಬಲದಿಂದ ಮಹಾದೇವನಿಂದ ಯಾವ ಪುತ್ರನನ್ನು ಪಡೆದಳೋ ಅವನ ಹೆಸರು 'ಯೋಗನಾಥ'ನೆಂದು. ಮೀನನಾಥ ಮೊದಲಾದವರು ಈ ಯೋಗನಾಥನ ಪುತ್ರರಾದುದರಿಂದ 'ಯೋಗೀ'ಎಂದು ಹೆಸರಾಗಿರುವರು. ಶಿವನಂತೆ ಕಿವಿಗಳಲ್ಲಿ

ತೂತು ಮಾಡಿ ದೀಕ್ಷಾಂತದಲ್ಲಿ ಕುಂಡಲ ಧಾರಣವು ಈ ಯೋಗಿಗಳ ವೈಶಿಷ್ಟ್ಯವು. ಅಂತೆಯೇ ಇವರು 'ಕಾನಫಾಟಾ' ಹೆಸರಿನಿಂದ ಪರಿಚಿತರು.

'ಹಠಯೋಗ ಪ್ರದೀಪಿಕಾ' ಎಂಬ ಹಠಯೋಗದ ಪ್ರಾಚೀನಗ್ರಂಥದಲ್ಲಿ ಯಾವ ಸಿದ್ಧಪುರುಷರ ಹೆಸರುಗಳು ಇರುವವೋ ಅವುಗಳಲ್ಲಿ-

"ಶ್ರೀ ಆದಿನಾಥ ಮತ್ಸ್ಯೇಂದ್ರ ಶಾಬರಾನಂದ ಭೈರವಾಃ
ಚೌರಂಗಿ ಮೀನ-ಗೋರಕ್ಷ-ವಿರೂಪಾಕ್ಷ ವಿಶೀಶಯಾಃ॥"

ಮೊದಲಾದ ಯೋಗಿಗಳ ಹೆಸರುಗಳು ದೊರೆಯುವವು. ಈ ಎಲ್ಲ ಯೋಗಿಗಳು ಹಠಯೋಗಮಾರ್ಗದಲ್ಲಿ ಅದ್ಭುತವಾದ ಯೋಗ್ಯತೆಯನ್ನು ಸಂಪಾದಿಸಿದ್ದರು. ಹಠಯೋಗ ಪ್ರಭಾವದಿಂದ ಕಾಯಜಯೀ, ಅರ್ಥಾತ್ ಮೃತ್ಯುಂಜಯಿಗಳಾಗಿ ಈಗ ಸಹ ಲೋಕದಿಂದ ಲೋಕಾಂತರದಲ್ಲಿ ಸಂಚರಿಸುತ್ತಾರೆ. ಹಠಯೋಗಿಗಳ ಗ್ರಂಥಗಳಲ್ಲಿ ಈ ಬಗೆಯಾಗಿ ವೃತ್ತಾಂತವಿರುತ್ತದೆ. ಶ್ರೀ ಆದಿನಾಥ ಅಥವಾ ಶಿವನು ಹಠಯೋಗದ ಆದಿ ಉಪದೇಷ್ಟನು. ಶಿವನಿಂದಲೇ ನಾಥಧರ್ಮವು ಜಗತ್ತಿನಲ್ಲಿ ಪ್ರಚಾರವಾಯಿತೆಂದು ನಾಥಪಂಥಿಗಳ ವಿಶ್ವಾಸವು. ಕಾಲವಶದಿಂದ ಇದು ಲುಪ್ತವಾಗುವ ಉಪಕ್ರಮವಾಗಲು ಮತ್ಸ್ಯೇಂದ್ರನು ಇದನ್ನು ಪುನಃ ಪ್ರಚಾರಮಾಡಿದನು. ಹಾಗು ಗೋರಕ್ಷನಾಥನು ಇದನ್ನು ಪುನಃ ಪ್ರತಿಷ್ಠೆಮಾಡಿದನು.

**ಕಿಂ ವದನ್ತಿ:**

ವಂಗದೇಶದಲ್ಲಿಯ ಪ್ರವಾದವು ಹೀಗೆ: ಪಾರ್ವತಿಯ ಪ್ರಾರ್ಥನೆಯಂತೆ ಶಿವನು ಸಮುದ್ರ ದಂಡೆಯ ಮೇಲೆ ಆಕೆಗೆ ಯೋಗತತ್ತ್ವದ ರಹಸ್ಯವನ್ನು ಹೇಳುತ್ತಿದ್ದನು. ಆದರೆ ನಿದ್ರಿತಳಾದ ದೇವಿಗೆ ಆ ತತ್ತ್ವವನ್ನು ಕೇಳಲು ಶಕ್ಯವಾಗಲಿಲ್ಲ. ಸಮುದ್ರಜಲದಲ್ಲಿ ಮತ್ಸ್ಯಗರ್ಭದಲ್ಲಿಯ ಒಬ್ಬ ಬಾಲಕನು ಆ ತತ್ತ್ವವನ್ನು ಕೇಳಿ, ಮಹಾಜ್ಞಾನದ ಅಧಿಕಾರಿಯಾದನು. ಆಗ ನಿರುಪಾಯನಾಗಿ ದೇವಾಧಿದೇವನು ಮತ್ಸ್ಯಗರ್ಭದಿಂದ ಆ ಬಾಲಕನನ್ನು ಉದ್ಧಾರಮಾಡಿ, ಮತ್ಸ್ಯೇಂದ್ರನಾಥನೆಂಬ ಹೆಸರಿನಿಂದ ಅವನಿಗೆ ದೀಕ್ಷೆಯನ್ನು ಕೊಟ್ಟು, ಆ ಯೋಗತತ್ತ್ವವನ್ನು ಜನರಲ್ಲಿ ಪ್ರಚಾರಮಾಡಲಿಕ್ಕೆ ಅಪ್ಪಣೆಯನ್ನು ಕೊಟ್ಟನು. ಅಂದಿನಿಂದ ಮತ್ಸ್ಯೇಂದ್ರನಾಥನು ಕಾಮರೂಪದ ಮನೆ-ಮನೆಗಳಲ್ಲಿ ಪ್ರಚಾರ ಮಾಡಹತ್ತಿದನು. ಮತ್ಸ್ಯೇಂದ್ರರಚಿತ 'ಕೌಲಜ್ಞಾನ ನಿರ್ಣಯ' ಗ್ರಂಥದಲ್ಲಿ ಈ ಬಗೆಯಾಗಿ ವಿವರಣೆಯು ದೊರೆಯುತ್ತದೆ. ಶ್ರೀ ಮತ್ಸ್ಯೇಂದ್ರನ ಶಿಷ್ಯನು ಯೋಗಿಶ್ರೇಷ್ಠನಾದ ಗೋರಕ್ಷನಾಥನು. ಇವನ ಸಂಬಂಧದ ಪ್ರವಾದವು ಹೀಗೆ: ಪುತ್ರಕಾಮಿಯಾದ ಯಾವಳೋ ರಮಣಿಯು ಮಹಾದೇವನ ವರದಿಂದ ಕಿಂಚಿತ್ ಭಕ್ಷವನ್ನು ಪಡೆದು, ಅದರಲ್ಲಿ ಅವಿಶ್ವಾಸ ಮಾಡಿ, ಅದನ್ನು ಗೋಮಯದಲ್ಲಿ ಹೂಳಿದಳು. ಹನ್ನೆರಡು ವರುಷಗಳ ಕೊನೆಗೆ ಮಹಾದೇವನು ಪುತ್ರ ಅನುಸಂಧಾನಕ್ಕೆ ಬರಲು, ಗೋಮಯದಲ್ಲಿ ಅವನಿಗೆ ದೊರಕಿದನು. ಆಗ ಮಹಾದೇವನು ಅವನಿಗೆ ಗೋರಕ್ಷನೆಂಬ ಹೆಸರನ್ನಿಟ್ಟು, ಮತ್ಸ್ಯೇಂದ್ರನ ಶಿಷ್ಯನನ್ನು ಮಾಡಿದನು. ಈ ಗೋರಕ್ಷನ ಹೆಸರಿನಿಂದ 'ಗೋರಕ್ಷಪುರ ' (ಗೋರಖಪುರ) ಎಂಬ ಹೆಸರಿನ ಸ್ಥಾನದ ಪ್ರಸಿದ್ಧಿಯು. ನೇಪಾಳದ ನಾಣ್ಯಗಳಲ್ಲಿ ಗೋರಕ್ಷನ ಹೆಸರು ದೊರೆಯುತ್ತವೆ. ಅಲ್ಲಿ ಅವನಿಗೆ ಪಶುಪತಿನಾಥನಂತೆ ಸಮ್ಮಾನವಿರುತ್ತದೆ.

ಶ್ರೀ ಗೋರಕ್ಷನಾಥನ ಶಿಷ್ಯಳಾದ ರಾಣಿ ಮಯನಾಮತಿಯು ವಂಗೀಯ ರಾಜನಾದ ಗೋಪೀಚಂದ್ರನ ಮಹಾತಪಸ್ವಿನಿಯಾದ ಮಾತೆಯು. 'ಕುಮಿಲ್ಲಾ'ದಲ್ಲಿ ಮಯನಾಮತಿಯ ಗುಡ್ಡವು ಈಗ ಸಹ ಇರುವದು. ಗೋರಕ್ಷನಾಥ ಅಥವಾ ಗೋರ್ಖನಾಥನು ಸಿದ್ಧಿಯ ಬಲದಿಂದ ಆಕಾಶದಲ್ಲಿ ಸಂಚಾರಮಾಡುವಾಗ ಒಬ್ಬ ಸತಿಕನ್ಯೆಯನ್ನು ಪಡೆದನು. ಈ ಕನ್ಯೆಯ ಹೆಸರು 'ಶಿಶುಮತಿ'. ಗೋರ್ಖನಾಥನು ಅವಳಿಗೆ ದೀಕ್ಷೆಯನ್ನು ಕೊಟ್ಟು

'ಮಯನಾಮತಿ' ಎಂಬ ಹೆಸರನ್ನು ಕೊಟ್ಟನು. ಈ ಕನ್ಯೆಯೇ ಅನಂತರ ಮೇಹೇರ ಕುಲದ ರಾಣೀ ಮಯನಾಮತಿ ಎಂಬ ಹೆಸರಿನಿಂದ ತನ್ನ ಅಲೌಕಿಕ ಯೋಗಬಲಕ್ಕೋಸುಗ ಪ್ರಸಿದ್ಧಳಾದಳು. ಬಹುರೂಪಗಳನ್ನು ಧರಿಸುತ್ತಿದ್ದಳು.

ಗೋರ್ಖವಿಜಯ ಗ್ರಂಥದಲ್ಲಿ ಮತ್ಸ್ಯೇಂದ್ರನ ಮತ್ತೊಬ್ಬ ಶಿಷ್ಯನ ಹೆಸರು ದೊರೆಯುವದು. ಅವನು 'ಗಾಭುರಸಿದ್ಧ' ಅರ್ಥಾತ್ ಯುವಕ ಸಿದ್ಧನೆಂಬ ಹೆಸರಿನಿಂದ ಪ್ರಸಿದ್ಧನು. ಅವನಿಗೆ ಗುರುಕೊಟ್ಟ ಹೆಸರು ಚೌರಂಗಿನಾಥನೆಂದು ಪ್ರವಾದವಿರುತ್ತದೆ. ಇವನ ತಂದೆಯು ವಂಗದೇಶದ ಪಾಲರಾಜರಲ್ಲಿ ಅನ್ಯತಮ ರಾಜನು. ಮಲತಾಯಿಯ ಅಸಂತೋಷದ ಕಾರಣಕ್ಕೋಸುಗ ರಾಜಪುತ್ರನು ಅವಳ ಆದೇಶದಿಂದ ಕೈಕಾಲುಗಳನ್ನು ಕಡಿಸಿಕೊಂಡು, ಪಟ್ಟಣದ ಹೊರಗೆ ಒಗೆಯಲ್ಪಟ್ಟನು. ಇಂತಹ ವಿಪನ್ನಾವಸ್ಥೆಯಲ್ಲಿ ಮತ್ಸ್ಯೇಂದ್ರನಿಂದ ಅವನು ಉದ್ಧಾರನಾಗಿ ನಾಥಯೋಗಿಯಾದನು ಹಾಗು ಎರಡು ಹಸ್ತ, ಎರಡು ಪಾದ ಹೀನತೆಯ ಸ್ಮಾರಕ ಸ್ವರೂಪವಾಗಿ 'ಚೌರಂಗಿನಾಥ'ನೆಂಬ ಹೆಸರಿನಿಂದ ಪರಿಚಿತನಾದನು. ಕಲಕತ್ತೆಯ 'ಚೌರಂಗಿ ಸ್ಟ್ರೀಟ' ಚೌರಂಗಿನಾಥನ ಹೆಸರಿನಿಂದಲೇ ಇರುವದು. ಮತ್ತು ಕಾಲೀಘಾಟದ 'ಕಾಲಿ' ಗೋರಖನಾಥನಿಂದ ಪ್ರತಿಷ್ಠಿತವಾಯಿತು. ಕಿಂ ವದಂತಿ ರೂಪದಿಂದ ಇದು ನಡೆದು ಬಂದಿರುತ್ತದೆ.

ನೇಪಾಳದಲ್ಲಿ ದೊರೆತ ಗೋಪಿಂದಚಂದ್ರನ ಸನ್ಯಾಸ ನಾಟಕದಲ್ಲಿ ಜಾಲಂಧರನ ಯಾವ ವೃತ್ತಾಂತವಿರುವದೋ ಅದರಿಂದ ತಿಳಿಯುವದು: ಅವನು 'ಜಾಲಂಧರಿ ನೃಪತಿ' ಹೆಸರಿನಿಂದ ಪ್ರಸಿದ್ಧನಿದ್ದನು. ಹಾಗು ಏಳುನೂರು ರಾಣಿಯರ ಮಾಯಾಮೋಹವನ್ನು ಕತ್ತರಿಸಿ ಅವನು ಸನ್ಯಾಸವನ್ನು ಗ್ರಹಣಮಾಡಿದನು. ಪುಸ್ತಕವು ಹದಿನೇಳನೆಯ ಶತಾಬ್ದಿಯದು. ಕೆಂಬ್ರಿಜ್ಜ ವಿಶ್ವವಿದ್ಯಾಲಯದಲ್ಲಿ ಇದು ಸುರಕ್ಷಿತವಾಗಿದೆ. ಅಗ್ನಿದೇವತೆಯ ವರದಿಂದ ಹಸ್ತಿನಾಪುರದ ಅಪುತ್ರಿಕ ರಾಜನಿಗೆ ಪುತ್ರರೂಪದಿಂದ ಜಾಲಂಧರನು ಜನ್ಮಗ್ರಹಣ ಮಾಡಿದನು- ಎಂಬೀ ವೃತ್ತಾಂತವೂ ಇರುವದು. ಜೋಧಪುರದ ಮಾನಸಿಂಹರಾಜನ ಮೇಲೆ ಜಾಲಂಧರನು ಕೃಪೆಯನ್ನು ಮಾಡಿದನು ಹಾಗೂ ಉಜ್ಜಯಿನಿಯ ರಾಜನಾದ ಭರ್ತೃಹರಿಯೂ ಜಾಲಂಧರನ ಶಿಷ್ಯನಾಗಿ ರಾಜ್ಯವನ್ನು ತ್ಯಾಗಮಾಡಿದನು. ಸಿದ್ಧಸಾಹಿತ್ಯದಲ್ಲಿ ಭರ್ತೃಹರಿಗೆ 'ವಿಚಾರನಾಥ'ನೆಂದು ಹೆಸರಿದೆ. ಈ ಭರ್ತೃಹರಿಯ ಭಗಿನಿಯಾದ ಮಯನಾಮತಿಯೇ ವಂಗೀಯ ಗೋಪೀಚಂದ್ರನ ತಾಯಿಯು ಹಾಗೂ ಜಾಲಂಧರನಾಥ, ಗೋಪೀಚಂದ್ರರ ಗುರುವು. ವಂಗೀಯ ಕಾವ್ಯದಲ್ಲಿ ಜಾಲಂಧರನಾಥನು 'ಹಾಡಿಪಾ' ಎಂಬ ಹೆಸರಿನಿಂದ ಪ್ರಸಿದ್ಧನು.

ಗೋರಕ್ಷನು ಕೆಲವು ಬಾಲಕರ ಪ್ರಾರ್ಥನೆಯಿಂದ ಮಣ್ಣಿನ ಮೂರ್ತಿಯಲ್ಲಿ ಪ್ರಾಣಸಂಚಾರ ಮಾಡಲು 'ಗಹನೀನಾಥ'ನ ಜನ್ಮವಾಯಿತು. ವಾಲುಕಾರಾಶಿಯಲ್ಲಿ ಜನ್ಮಗ್ರಹಣ ಮಾಡಿ ಮತ್ಸ್ಯೇಂದ್ರನಿಂದ ದೀಕ್ಷಿತನಾಗಿ 'ಚರ್ಪಟನಾಥ'ನು ಪ್ರಸಿದ್ಧನಾದನು ಇತ್ಯಾದಿ. ನಾಥಯೋಗಿಗಳ ಸಂಬಂಧದಿಂದ ಹಲವು ಕಿಂವದಂತಿಗಳಿರುತ್ತವೆ.

ವಂಗಸಾಹಿತ್ಯದಲ್ಲಿ ಸಿದ್ಧರ ಜನ್ಮವೃತ್ತಾಂತವು ಈ ಬಗೆಯಾಗಿ ದೊರೆಯುತ್ತದೆ: ಅನಾದಿಯ ಶರೀರದಿಂದ ಶಿವಯೋಗೀ ರೂಪಧರಿಸಿ ಹುಟ್ಟಿದನು, ನಾಭಿಯಲ್ಲಿ ಮೀನನಾಥನು ಹಾಡ(ಎಲುವು)ದಿಂದ ಹಾಡಿಪಾನು, ಕರ್ಣದಿಂದ 'ಕಾನಫಾ', ಜಟಾಭೇದ ಮಾಡಿ ಗೋರ್ಖನಾಥನು ಹೊರಗೆ ಬಂದರು. ಗಾಭುರಸಿದ್ಧನು ಅತಿ ಖರತರ ಆದನು. ಕೊನೆಗೆ ಜಗನ್ಮಾತಾ ರೂಪದಿಂದ ಗೌರಿಯು ಜನ್ಮಗ್ರಹಣ ಮಾಡಿದಳು. ಪೂರ್ವದ 'ಹಾಡಿಪಾ', ದಕ್ಷಿಣದಲ್ಲಿ ಕಾನಿಫಾ, ಪಶ್ಚಿಮದಲ್ಲಿ ಗೋರ್ಖ ಮತ್ತು ಉತ್ತರದಲ್ಲಿ ಮೀನಾಈ ಅಥವಾ ಮೀನನಾಥನು ಗಮನಮಾಡಿದರು. ಗೋರಕ್ಷ ವಿಜಯಗ್ರಂಥದಲ್ಲಿಯ ವರ್ಣನೆಯು ಹೀಗೆ.

**ಶ್ರೀ ಮತ್ಸ್ಯೇಂದ್ರನಾಥ ಮತ್ತು ಗೋರಕ್ಷನಾಥರ ಧರ್ಮಮತ:**

ಬೌದ್ಧರ 'ಲಳ' ಸಿದ್ಧರ ತಾಲಿಕೆ ಮತ್ತು ವಂಶವೃಕ್ಷವು ದೊರೆಯುತ್ತದೆ. ಅದರಲ್ಲಿ ಶಬರ, ವಿರೂಪಾಕ್ಷ, ಭೈರವಾದಿ ಹಠಯೋಗಿಗಳ ಹೆಸರು ಇರುವವು ಮತ್ತು ಮೀನನಾಥ, ಗೋರಖನಾಥ ಮೊದಲಾದ ನಾಥಸಿದ್ಧರ ಹೆಸರುಗಳು ಸಹ ಇರುತ್ತವೆ.

ಸಾಧಾರಣವಾಗಿ ನಾಥಸಿದ್ಧರು 'ನವನಾಥ' ಹೆಸರಿನಿಂದ ಪ್ರಸಿದ್ಧರು. ಈ ನವನಾಥರ ಹೆಸರಿನ ತಾಲಿಕೆಯಲ್ಲಿ ಮತಭೇದವಿದ್ದರು ಸಹ ಆದಿನಾಥ, ಮತ್ಸ್ಯೇಂದ್ರನಾಥ ಮತ್ತು ಗೋರಕ್ಷನಾಥರ ಹೆಸರು ಸಾಧಾರಣವಾಗಿವೆ. ಮೀನನಾಥ ಮತ್ಸ್ಯೇಂದ್ರನಾಥರ ಪಿತಾ-ಪುತ್ರ ಸಂಬಂಧ ಅಥವಾ ಇಬ್ಬರೂ ಒಬ್ಬ ಮತ್ತು ಅಭಿನ್ನ ವ್ಯಕ್ತಿಯು ಎಂಬೀ ವಿಷಯದಲ್ಲಿಯೂ ಮತಭಿನ್ನತೆಯು ಇರುತ್ತದೆ. ನಾವು ಅವರನ್ನು ಒಬ್ಬ ವ್ಯಕ್ತಿಯೆಂದೇ ಸಿದ್ಧಾಂತ ಮಾಡಿದ್ದೇವೆ. ಪಂ. ಹರಪ್ರಸಾದ ಶಾಸ್ತ್ರಿಗಳು ಸಂಗ್ರಹಿಸಿದ ಬಂಗಾಲೀ ಪದಗಳನ್ನು ರಚಿಸಿದವನಾದ 'ಲುಇಪಾದ'ನೇ ನಮ್ಮ ಮೀನನಾಥ ಅಥವಾ ಮತ್ಸ್ಯೇಂದ್ರನು. ಬೌದ್ಧಯುಗದ ಸಿದ್ಧ ಮತ್ತು ಸಾಹಿತ್ಯದೊಡನೆ ನಾಥರ ಹೆಸರುಗಳನ್ನು ಕೂಡಿಸಿ ಓದಿ, ಹಲವರು ಭ್ರಾಂತಿವಶತಃ ಅವರಿಗೆ ಬೌದ್ಧಯೋಗಿಯೆಂದು ಹೇಳುತ್ತಾರೆ. ಆದರೆ ನಾಥರು ಬೌದ್ಧರಲ್ಲ, ಶೈವರು. ಪ್ರಥಮತಃ ಅವರು ಶಿವ, ಗೋರಕ್ಷಮಂತ್ರವನ್ನು ಜಪ ಮಾಡುತ್ತಾರೆ. ಹಾಗು ಶಿವನಂತೆ ಕಿವಿಗಳಲ್ಲಿ ಕುಂಡಲಗಳನ್ನು ಧಾರಣಮಾಡುತ್ತಾರೆ. ಅವರ ತೀರ್ಥಾದಿಗಳೂ ಶೈವತೀರ್ಥ. ಭೈರವ-ಕಾಲಿ ಮೊದಲಾದವರ ಉಪಾಸಕರು. ಮತ್ಸ್ಯೇಂದ್ರನು ಶೈವಯೋಗಿಯ ವೇಷದಿಂದಲೇ ನೇಪಾಳದಲ್ಲಿ ಶೈವಧರ್ಮವನ್ನು ಪ್ರಚಾರಮಾಡಲು ಹೋದನು. ಹಾಗು ಅವನಿಂದ ರಚಿತವಾದ 'ಕೌಲಜ್ಞಾನ ನಿರ್ಣಯ'ವೆಂಬ ಪುಸ್ತಕದಲ್ಲಿ ಬೌದ್ಧಧರ್ಮದ ಉಲ್ಲೇಖ ಸಹ ಇಲ್ಲ. ಅನಂತರದ ಕಾಲದ ಪುಸ್ತಕಗಳಲ್ಲಿಯೂ ಬೌದ್ಧಧರ್ಮದ ಯಾವ ಸಂಗತಿಯೂ ದೊರೆಯುವದಿಲ್ಲ. ಶಿವ ಮತ್ತು ಶಕ್ತಿಯ ವಿಷಯವು ದೊರೆಯುತ್ತದೆ. ಅತ ಏವ ನಾಥಗೆ ಬೌದ್ಧರೆಂದು ಹೇಳುವದು ಸಮೀಚೀನವಲ್ಲ. ಸರ್ವೋಪರಿ ಮತ್ಸ್ಯೇಂದ್ರನು ಕೈವರ್ತನಾಗಿ ಮತ್ಸ್ಯಹತ್ಯೆಯಲ್ಲಿ ಬಾಧ್ಯನಿದ್ದನು. ಬೌದ್ಧ ಮತ್ತು ಜೈನಧರ್ಮಗಳಲ್ಲಿ ಜೀವಹತ್ಯೆಯು ನಿಷಿದ್ಧವೆಂದು ಹೇಳಲ್ಪಟ್ಟಿದೆ. ಗೋರಕ್ಷನಾಥನು ಮೊದಲು ಬೌದ್ಧನಿದ್ದು ಅನಂತರ ಅದನ್ನು ತ್ಯಾಗಮಾಡಲು ನೇಪಾಳಿ ಬೌದ್ಧರು ಅವನ ಮೇಲೆ ಅಸಂತುಷ್ಟರು. ಅಂತೆಯೇ ನೇಪಾಳಿ ಬೌದ್ಧರು ಮತ್ಸ್ಯೇಂದ್ರನ ರಥಯಾತ್ರೆಯನ್ನು ಮಹಾಸಮಾರೋಹದಿಂದ ಮಾಡಿದರು ಸಹ ಗೋರಕ್ಷನಾಥನಿಗೆ ಉಚ್ಚಸ್ಥಾನವನ್ನು ಕೊಡುವದಿಲ್ಲ. ಈ ವಿಷಯದಲ್ಲಿ ವಕ್ತವ್ಯ-ಗೋರಕ್ಷನಾಥ ರಚಿತ 'ಕಾಯಾಬೋಧ' ಗ್ರಂಥದ ಒಂದು ವಚನದಲ್ಲಿ ಅವನನ್ನು ಪಶ್ವಾರಂಭಕ ಅಥವಾ ಪಶುಹತ್ಯಾಕಾರಿಯೆಂದು ಹೇಳಿರುವದು. ಆ ಕ್ಷೇತ್ರದಲ್ಲಿ ಅವರ ಪಕ್ಷದಲ್ಲಿಯೂ 'ಬೌದ್ಧ' ಆಗುವದು ಸಂಭವವಲ್ಲ. ನೇಪಾಳದ ನಾಣ್ಯಗಳಲ್ಲಿ ಅವನ ಹೆಸರು ಅಂಕಿತ ಇರುವದು ಮತ್ತು ಪಶುಪತಿನಾಥನಂತೆ ಸಮ್ಮಾನ ಹೊಂದುವದು ಅಶ್ರದ್ಧೆಯ ನಿದರ್ಶನವಲ್ಲ. ಪಶುಪತಿನಾಥನು ನೇಪಾಳಿ ಹಿಂದುಗಳ ದೇವತೆಯು. ಮತ್ಸ್ಯೇಂದ್ರನು ಶೈವಯೋಗಿ ಇದ್ದರು ಸಹ ನೇಪಾಳೀ ಬೌದ್ಧರಲ್ಲಿ ಚತುರ್ಥಬೋಧಿಸತ್ವ ಅವಲೋಕಿತೇಶ್ವರ ಅವತಾರ ರೂಪದಿಂದ ಉಪಾಸ್ಯವಾದುದು ಹೇಗೆ? ಇದು ವಿಸ್ಮಯದ ವಿಷಯವು. ಅವಲೋಕಿತೇಶ್ವರನ ಬೀಜಮಂತ್ರವನ್ನು ಬೌದ್ಧರು ಈಗ ಸಹ ಉಚ್ಚಾರಣ ಮಾಡುತ್ತಾರೆ. ಕ್ರಿಸ್ತೀಯ ಧರ್ಮದ ಆದಿಯುಗದಲ್ಲಿ ಪರಮತಪಸ್ವಿ ಮತ್ತು ಐಂದ್ರಜಾಲಿಕ ಅವಲೋಕಿತೇಶ್ವರನ ಅಥವಾ ಲೋಕೇಶ್ವರನ ಮತವಾದವು ಪ್ರಚಲಿತವಿತ್ತು. ನೇಪಾಳದಲ್ಲಿ ಮತ್ಸ್ಯೇಂದ್ರನ ಶೈವವಿಗ್ರಹಗಳೂ ಇರುತ್ತವೆ. ಆ ಸ್ಥಳದಲ್ಲಿ ಹದಿನೇಳನೆಯ ಶತಮಾನದ ಒಂದು ಶಿಲಾಲೇಖದಲ್ಲಿ: 'ಯೋಗಿಶ್ರೇಷ್ಠರು ಅವನಿಗೆ ಮತ್ಸ್ಯೇಂದ್ರನಾಥನೆಂದು ಅನ್ನುತ್ತಾರೆ. ಬೌದ್ಧರು ಅವನಿಗೆ ಲೋಕೇಶ್ವರ ಅನ್ನುತ್ತಾರೆ. ಇವನು ಸ್ವರೂಪತಃ ಬ್ರಹ್ಮನು. ಆ ಪುರುಷನಿಗೆ ಜಯವಾಗಲಿ'.

ನಾಥಯೋಗಿಗಳಲ್ಲಿ ಜಾತಿಭೇದವಿರದಿದ್ದರೂ ಶ್ರೇಣಿಭೇದ ಮತ್ತು ಮತಭೇದಗಳಿಲ್ಲವೆಂದು ಹೇಳಿದರೆ ನಡೆಯುವದಿಲ್ಲ. ಇವರಲ್ಲಿ ಮುಖ್ಯವಾಗಿ ಹನ್ನೆರಡು ಶಾಖೆಗಳಿರುತ್ತವೆ. ಅವುಗಳು ದ್ವಾದಶಪಂಥ ಎಂಬ ಹೆಸರಿನಿಂದ ಪರಿಚಿತವು. ಈ ದ್ವಾದಶ ಪಂಥಿಗಳೂ 'ಕಾನಫಾಟಾ' ಸಂಪ್ರದಾಯ ಎಂಬ ಹೆಸರಿನಿಂದ ಖ್ಯಾತವಾಗಿರುತ್ತವೆ. ಹರಿದ್ವಾರದಲ್ಲಿ 'ಭೇಕ-ಬಾರಹ-ಪಂಥ' ಎಂಬ ಹೆಸರಿನಿಂದ ಇವುಗಳ ಕಾರ್ಯನಿರ್ವಾಹಕ

ಸಂಗತಿಯು ಇರುತ್ತದೆ. ದ್ವಾದಶವರ್ಷದ ಕೊನೆಯಲ್ಲಿ ಕುಂಭಮೇಲಂದಲ್ಲಿ ವಿಭಿನ್ನ ಶ್ರೇಣಿಗಳಿಂದ ಇವರ ದ್ವಾದಶ ಸಭ್ಯರು ನಿರ್ವಾಚಿತರಾಗುವರು. ಅವರು ಮಠ ಪರಿದರ್ಶನ, ಮೋಹಂತ ನಿರ್ವಾಚಿ ಮೊದಲಾದ ಕಾರ್ಯಗಳನ್ನು ಮಾಡುತ್ತಾರೆ. ಭಾರತ ಸರಕಾರವೂ ಈ ದ್ವಾದಶ ಯೋಗಿಗಳ ಅನುಮೋದನದ ಹೊರತು ಮೋಹಂತ ನಿರ್ವಾಚನ ಮೊದಲಾದ ಯೋಗಿ ಸಂಬಂಧೀಯ ವಿವಾದದಲ್ಲಿ ಕೈಹಾಕುವದಿಲ್ಲ.

ಈಗ ಮತ್ಸ್ಯೇಂದ್ರ ಮೊದಲಾದವರ ಧರ್ಮ ಮತವು ಯಾವದು? ಎಂಬೀ ವಿಷಯದ ಬಗೆಗೆ ಸ್ವಲ್ಪ ಆಲೋಚನೆಯನ್ನು ಮಾಡೋಣ.

ನಾಥಸಿದ್ಧರು ಯೋಗಸಾಧನೆಯನ್ನು ಮಾಡುತ್ತಿದ್ದರೆಂದು ಇವರ ಮಾರ್ಗಕ್ಕೆ ಯೋಗಮಾರ್ಗ, ಅವಧೂತಮಾರ್ಗ, ಸಿದ್ಧಮಾರ್ಗವೆಂದು ಹೆಸರು ಇರುತ್ತವೆ. ಆದರೂ ಮತ್ಸ್ಯೇಂದ್ರನಾಥನು ಹಠಯೋಗದ ಆದಿ ಪ್ರಚಾರಕರ್ತನು ಮತ್ತು ಶಿವನು ಇದರ ಆದಿವಕ್ತಾರನು ಎಂಬ ಪ್ರವಾದವಿರುತ್ತದೆ. ಹಠಯೋಗದ ಗ್ರಂಥಗಳಲ್ಲಿ 'ಮತ್ಸ್ಯೇಂದ್ರಾಸನಮ್', 'ಗೋರಕ್ಷಾಸನಮ್' ಮೊದಲಾದವುಗಳು ಇರುವದರಿಂದ ಈ ಪ್ರವಾದದ ಮೂಲದಲ್ಲಿ ಕಿಂಚಿತ್ ಸತ್ಯವು ನಿಹಿತವಾಗಿರುವದು ವಿಚಿತ್ರವಲ್ಲ. ಡಾ. ಪ್ರಬೋಧಚಂದ್ರ ಬಾಗಚಿಯವರು ಈ ಮತವನ್ನು ಪೋಷಣ ಮಾಡುತ್ತಾರೆ. ಗೋರಕ್ಷರಚಿತವೆಂದು ಪ್ರಸಿದ್ಧವಾದ 'ಗೋರಕ್ಷಬೋಧ' ಗ್ರಂಥದ ಕೆಲವು ಶ್ಲೋಕಗಳಿಂದ ನಾಥಯೋಗಿಗಳ ಹಠಯೋಗ ಸಾಧನೆಯ ಇಂಗಿತವು ತಿಳಿಯುವದು. ಶಬ್ದ ಅಥವಾ ನಾದದಿಂದ ಮಾತ್ರ ಚೈತನ್ಯವು, ಸಾಧನಾ ತಂತ್ರದ್ದೇ ಕತೆಯು. ಅಂತೇ ಗೋರಕ್ಷನಾಥನ ನಾದಾನುಸಂಧಾನವು ಈ ಶ್ರೇಣಿಯದು ಇದ್ದರೂ ಉಪನಿಷತ್ತುಗಳಲ್ಲಿಯೂ ಶಬ್ದಯೋಗದ ವಿಷಯವು ದೊರೆಯುತ್ತದೆ. ಅತ ಏವ ಡಾ. ಮೋಹನಸಿಂಗರು ಗೋರಕ್ಷನಾಥಾದಿಗಳಿಗೆ ಹಠಯೋಗಿಗಳೆಂದು ಒಪ್ಪುವದಿಲ್ಲ. ವಾಸ್ತವಿಕ ಪಕ್ಷದಲ್ಲಿ ಮತ್ಸ್ಯೇಂದ್ರ ಮತ್ತು ಲುಈಪಾದ ಯೋಗಿಗೆ ಅಭಿನ್ನವೆಂದು ಸಿದ್ಧಾಂತ ಮಾಡಿದರೆ ನಾಥಯೋಗಿಗಳಿಗೆ 'ಹಠಯೋಗಿ' ಎಂದು ಅನ್ನಲು ಬರುವದಿಲ್ಲ. ಯಾಕಂದರೆ ಲುಈಪಾದ ಮೊದಲಾದ ಸಿದ್ಧರು ಸಹಜಪಥದ ಸಾಧಕರಿದ್ದರು. ಕಷ್ಟಸಾಧ್ಯ ಆಸನಾದಿಗಳಿಂದ ಕುಂಡಲಿನಿಯ ಪ್ರಬೋಧನವು ಅವರಲ್ಲಿ ಪ್ರಚಲಿತವಿದ್ದಿಲ್ಲ. 'ಧ್ಯಾನ ಸಂಬಂಧ'ದಿಂದಲೂ ಮತಭೇದವಿರುತ್ತದೆ. ಡಾ. ಮೋಹನ ಸಿಂಗರ ಮತದಲ್ಲಿ ಗೋರಕ್ಷನಾಥನ ಯೋಗವು ಮುಂದಿನ ಕಾಲದ ಉಪನಿಷತ್ತುಗಳ ಸಂಗತಿಯನ್ನೂ ಸ್ಮರಣ ಮಾಡಿಸಬೇಕಾಗುವದು. ಜಾಯಸಿಕೃತ 'ಪದುಮಾವತ್' ಕಾವ್ಯದಲ್ಲಿ ಗೋರಕ್ಷನ ಶ್ರುತಯೋಗ ಕಥೆ ಇರುತ್ತದೆ. ಗೋರಕ್ಷಬೋಧ ಮೊದಲಾದ ಗ್ರಂಥಗಳು ಅದಕ್ಕೂ ಮೊದಲಿನವುಗಳು. ನಾಥಸಂಪ್ರದಾಯದಲ್ಲಿ ಪ್ರಚಲಿತ ಮತ್ತು ನಾಥಯೋಗಿಗಳ ಅನುಮೋದಿತವಾದ 'ಶಿವಸಂಹಿತೆ', 'ಘೇರಾಸಂಹಿತೆ' ಗ್ರಂಥಾದಿಗಳಲ್ಲಿ 'ಮತ್ಸ್ಯೇಂದ್ರಾಸನ', 'ಜಾಲಂಧರ ಬಂಧ', 'ಕುಂಡಲಿನಿ ತತ್ತ್ವ', 'ಶೂನ್ಯವಾದ' ಮೊದಲಾದ ಹಾಗು ವಜ್ರೋಲಿ, ಅಮರೋಲಿ ಮುದ್ರಾದಿಗಳ ವರ್ಣನೆಯು ಇರುತ್ತದೆ. ಈ ಎಲ್ಲ ಸಾಧನಗಳು ಹಠಯೋಗದ ಅಂಗವಿಶೇಷಗಳು. ಮತ್ತು ನಾಥಸಂಪ್ರದಾಯದ ಅಮನಸ್ಕ, ಯೋಗಬೀಜಮ್ ಮೊದಲಾದ ಗ್ರಂಥಗಳಿಂದ ನಾಥಯೋಗಿಗಳ ಸಾಧನೆಯ ಯಾವ ಪರಿಚಯವು ದೊರೆಯುವದೋ, ಅದರಲ್ಲಿ ದ್ವೈತಾದ್ವೈತ ವಿಲಕ್ಷಣ ಸಮತತ್ವರೂಪ ನಾಥಸ್ವರೂಪಕ್ಕೆ ಜ್ಞಾನಯುಕ್ತಯೋಗದಿಂದ ಸಂಪಾದಿಸಲಿಕ್ಕೆ ಉಪದೇಶವನ್ನು ಮಾಡಿರುವವು. ಯೋಗಾಗ್ನಿಯಿಂದ ಸಪ್ತಧಾತುಮಯ ಪಾರ್ಥಿವದೇಹವನ್ನು ಜಯಿಸಿ ಅಜರ, ಅಮರವಾಗುವ ವಿಷಯವು ಇರುತ್ತದೆ. ಪ್ರಾಣಾಪಾನಗಳ ಸಂಯೋಗದಲ್ಲಿಯೇ ಯೋಗಾಗ್ನಿಯಿಂದ ಪಾರ್ಥಿವದೇಹವು ದಗ್ಧ ಮಾಡಲ್ಪಡುತ್ತದೆ. ಪ್ರಾಣಾಪಾನದ ಯೋಗಕಥೆಯು ಹಠಯೋಗದ್ದೇ ಪ್ರತಿಪಾದ್ಯ ವಿಷಯ. ಕಾರಣ

'ಹಕಾರಃ ಕೀರ್ತಿತಃ ಸೂರ್ಯಷ್ಠಕಾರಶ್ಚಂದ್ರ ಉಚ್ಯತೇ।
ಸೂರ್ಯಚಂದ್ರಮಸೋರ್ಯೋನ್ಯ ಹಠಯೋಗೋ ನಿಗದ್ಯತೇ ॥

ಇದೇ ಹಠಯೋಗದ ಸಂಜ್ಞೆ, ಇದರ ಒಂದು ಪ್ರಾಣ, ಮತ್ತೊಂದು ಅಪಾನ, ಒಂದು ರೇಚಕ ಮತ್ತೊಂದು ಪೂರಕ. ನಾಥಯೋಗಿಗಳ 'ಸಿದ್ಧಸಿದ್ಧಾಂತ ಪದ್ಧತಿ' ಎಂಬ ಗ್ರಂಥದಲ್ಲಿಯೂ ಹಠಯೋಗಸಂಜ್ಞೆ, ವಜ್ರೋಲಿಮುದ್ರಾ, ಖೇಚರಿಮುದ್ರಾ, ಕುಂಡಲಿನೀ ಸಾಧನ ಮೊದಲಾದವುಗಳ ಹೆಸರು ದೊರೆಯುವವು. ಪ್ರಾಣಾಯಾಮಾದಿಗಳ ಪೂರ್ಣ ವಿವರಣೆಯೂ ಇದರಲ್ಲಿ ಇರುತ್ತದೆ. ಗೋರಕ್ಷನು ಹೇಳಿದ್ದಾನೆ

'ಜೀವತಿ ಹಿ ಉಲಟಿ ಮರಣ'

ಈ ಉಲ್ಟಾ ಸಾಧನವೇ ನಾಥಯೋಗಿಗಳ ವೈಶಿಷ್ಟ್ಯವು. ಈ ಸಾಧನೆಯ ನಾಮಾಂತರವು ಕಾಯಾಸಾಧನ. ಗೋರಕ್ಷವಿಜಯ ಗ್ರಂಥದಲ್ಲಿಯೂ ದೊರೆಯುವದು: 'ಕಾಯಾ ಸಾಧ, ಕಾಯಾ ಸಾಧ, ಮಾದತಿಹೇನ ಬೋಲೆ'.

ಈ ಉಲ್ಟಾ ಮಾರ್ಗದಿಂದ ಶರೀರಸ್ಥ ರಸಾದಿಗಳಿಗೆ ನೀತ (ಪದ್ಧತಿ) ಮಾಡಲಾಗಿ ಸಾಧಕನಿಗೆ ಮೃತ್ಯುಂಜಯ ಅವಶ್ಯಂಭಾವಿ. ಇದರಿಂದ ನಾಥಯೋಗಿಗಳ ಪೂರ್ಣ ಸಂಯಮದ್ದೇ ಪರಿಚಯವು ದೊರೆಯುವದು. ಅತಏವ ಅವರ ಸಾಧನಮಾರ್ಗದಲ್ಲಿ 'ಶಕ್ತಿ'ಗೆ ಯಾವ ಸ್ಥಾನವಿಲ್ಲ. ಇದು ನಿಶ್ಚಿತವು.

ಹೇಳಲ್ಪಟ್ಟಿದೆ - ಸಂತಕವಿ ದಾದು ಒಂದು ಸಮಯದಲ್ಲಿ ನಾಥಯೋಗಿಯಾಗಿದ್ದನು. ಆಗ ಅವನ ಹೆಸರು 'ಕುಂಭಾರೀಪಾಬ'. ಸಿದ್ಧಸಾಹಿತ್ಯದಲ್ಲಿ ವಂಗೀಯ ರಾಜಾ ಗೋಪೀಚಂದ್ರನ ಹೆಸರು 'ಶೃಂಗಾರಿ ಪಾಬ'. ಈ ಪಾಬ ಶಬ್ದದಿಂದ ಬೌದ್ಧ 'ಪಾ' ಸಿದ್ಧರೊಡನೆ ನಾಥಯೋಗಿಗಳ ಸಂಬಂಧವಿತ್ತು ಎಂದು ತಿಳುವಳಿಕೆಯಾಗುವದು ಸ್ವಾಭಾವಿಕವು. ಆದರೆ 'ಪಾ' ಶಬ್ದವು 'ಫಾ' ಶಬ್ದದ ರೂಪಾಂತರವೋ? ತ್ರಿಪುರಾದ ರಾಜರ ಆದಿಪುರುಷರ ಉಪಾಧಿಯು 'ಫಾ' ಎಂದು ಕಂಡುಬರುವದು. ಮಹಾರಾಜ ತ್ರಿಪುರೇಶ್ವರನು 'ಶಿವ-ಅಂಶ' ಸಂಭೂತನೆಂದು ಇತಿಹಾಸದಲ್ಲಿ ವರ್ಣಿತವಾಗಿರುತ್ತದೆ. ತ್ರಿಪುರಾದ ರಾಜರೂ ಪೂರ್ವದಲ್ಲಿ ಶೈವರಿದ್ದರು. ಗೋಪೀಚಂದ್ರನ ರಾಜಧಾನಿಯು ತ್ರಿಪುರಾರಾಜ್ಯದ ಅಂತರ್ಗತವಾದ 'ಪಾಟಿಕಾ' ನಗರವಾಗಿತ್ತು. ಈಗ ತ್ರಿಪುರಾ ಜಿಲ್ಹೆಯಲ್ಲಿ 'ಪಾಟಿಕಾರಾ' ಎಂಬ ಹೆಸರಿನ ಪರಗಣೆಯೇ ಇರುತ್ತದೆ. ತ್ರಿಪುರಾದ ಭಾಷೆಯಲ್ಲಿ 'ಫಾ' ಅಂದರೆ ಪಿತಾ. ಗೋಪೀಚಂದ್ರನ ಗುರುವಿನ ಹೆಸರು 'ಹಾಡಿಫಾ' ಅಥವಾ 'ಹಾಡಿಪಾ' ಎಂದು. ಇವನು ಆ ರಾಜ್ಯದಲ್ಲಿ ನೀಚಕರ್ಮವನ್ನು ಮಾಡುತ್ತಾನೆ. ಆದರೆ ಯೋಗಸಿದ್ಧಿ ಬಲದಿಂದ ಚಂದ್ರ ಸೂರ್ಯರಿಗೆ ಕರ್ಣದ ಕುಂಡಲಗಳನ್ನು ಮಾಡಿದ್ದನು. ಅರ್ಥಾತ್ ಪ್ರಾಣ ಮತ್ತು ಅಪಾನಗಳಿಗೆ ಅವನು ಸಂಪೂರ್ಣ ಜಯಿಸಿದ್ದನು. ನಾಥಯೋಗಿಗಳಲ್ಲಿ 'ಕಾನಫಾ' ಅಥವಾ 'ಕಾಣಿಪಾ' ಅನ್ಯತಮನು ಅತಏವ 'ಫಾ' ಉಪಾಧಿಯಿಂದ 'ಪಾ' ಅಥವಾ 'ಪಾಬ' ಆಗುವದು ಸಂಭವವೋ, ಅಸಂಭವವೋ ಎಂಬುವದು ಅನುಸಂಧಾನದ ವಿಷಯವು. ಮತಾಂತರದಲ್ಲಿ 'ಪಾ' ಶಬ್ದವು ತಿಬ್ಬತಿಯು, ಇದರ ಅರ್ಥವು ಅಧಿಕಾರಿಯೆಂದು. ಈ 'ಪಾ' ಪಂಥಿಗಳು ಶೈವರೆಂದು ಹೇಳಲ್ಪಟ್ಟಿದೆ. ಜಾಲಂಧರನು ನಾಥವನ್ನು ಬಿಟ್ಟುಗೊಟ್ಟು 'ಪಾ' ಪಂಥವನ್ನು ಪ್ರವರ್ತನ ಮಾಡಿದನು. 'ಕಾಣಿಪಾ' ಗೋಪೀಚಂದ ಮೊದಲಾದವರು ಈ ಪಂಥದವರು. 'ಚಟ್ಟಗ್ರಾಮ' 'ಕುಮಿಲ್ಲಾ'ಗಳಲ್ಲಿ ಚಂದ್ರನಾಥ, ಆದಿನಾಥ ಮತ್ತು ಮಯನಾಮತೀಯರ ಹೆಸರಿನಿಂದ ಗುಡ್ಡ ಮತ್ತು ಮಂದಿರಗಳಿವೆ. ಈ ಎಲ್ಲ ಮಂದಿರಗಳಲ್ಲಿ ನಾಥ ಪೂಜಾರಿಗಳಿರುವರು. ಇವರಿಂದ ನಾಥ ಸಂಪ್ರದಾಯದೊಡನೆ ಗೋಪೀಚಂದ್ರನ ವಂಶದ ಸಂಬಂಧದ ಪರಿಚಯವು ಆಗುವದು.

**ಶ್ರೀ ಮತ್ಸ್ಯೇಂದ್ರನಾಥ:**

ಶ್ರೀ ಮತ್ಸ್ಯೇಂದ್ರನಾಥನು 'ಬರಣಾ' ವಂಗದೇಶದಲ್ಲಿ ಜನ್ಮಗ್ರಹಣ ಮಾಡಿದನು ಮತ್ತು ಕಾಮರೂಪದಲ್ಲಿ ತನ್ನ ಶಾಸ್ತ್ರವನ್ನು ಪ್ರಚಾರ ಮಾಡಿದನು. ಈ ರೀತಿಯ ವೃತ್ತಾಂತವು ಮತ್ಸ್ಯೇಂದ್ರ ರಚಿತ ಕೌಲಜ್ಞಾನನಿರ್ಣಯವೆಂಬ ಪುಸ್ತಕದಲ್ಲಿ ದೊರೆಯುತ್ತದೆ. ತಿಬ್ಬತೀ ಮತದಲ್ಲಿ 'ಲುಈಪಾದ'ನು

ಆದಿಸಿದ್ಧರೂಪದಿಂದ ಪರಿಚಿತನಾದನು. ಹಾಗು ಬಂಗಾಲಿಯಲ್ಲಿ ಚರ್ಯಾ ಮತ್ತು ಗ್ರಂಥಾದಿಗಳನ್ನು ರಚನೆಮಾಡಿದನು. ಶಾಸ್ತ್ರಿ ಮಹಾಶಯರು 'ಲುಈಪಾದ' ಮೊದಲಾದವರ ಪದಗಳನ್ನು ಸಂಗ್ರಹಿಸಿ 'ಬೌದ್ಧಗಾನ ಓ ದೋಹಾ' ಎಂಬ ಹೆಸರಿನಿಂದ ಪ್ರಚಾರಿತ ಮಾಡಿ, ಸಿದ್ಧರು ಎಲ್ಲರೂ ಬೌದ್ಧರು ಎಂಬೀ ಭ್ರಾಂತ ತಿಳುವಳಿಕೆಯಾಗುವದು ಸಂಭವವು. ಮತ್ಸ್ಯೇಂದ್ರ ಅರ್ಥದಲ್ಲಿ ಮತ್ಸರಾಜಾ ತಿಬ್ಬತೀ ಭಾಷೆಯಲ್ಲಿ 'ಲುಈ' ಎಂದರೆ ಮತ್ಸ್ಯೋದರ. ಭಾರತೀಯ ಮತದಲ್ಲಿಯೂ ಮತ್ಸ್ಯೇಂದ್ರನು ಮತ್ಸ್ಯೋದರದಿಂದ ಉದ್ಧಾರವಾದವನು. ತಿಬ್ಬತೀ ಚಿತ್ರದಲ್ಲಿ ಮತ್ಸ್ಯೇಂದ್ರಗೆ ಮತ್ಸ್ಯಪರಿವೃತನಾಗಿ ಮತ್ಸ್ಯ ಅಸ್ತ್ರ ಆಹಾರದಲ್ಲಿ ರತವಾದುದು ಕಂಡುಬರುತ್ತದೆ. ಶಾಸ್ತ್ರೀ ಮಹಾಶಯರು ತಮ್ಮ 'ಬೇಣೇರ-ಮೇಯೇ' ಗ್ರಂಥದಲ್ಲಿ ರಾಜನ ಗುರು 'ಲುಈಪಾ'ನ ಸುಂದರ ಚಿತ್ರವನ್ನು ಬರೆದಿದ್ದಾನೆ. ಮತ್ಸ್ಯಾವತಾರ ವಂದನಾ ಹೆಸರಿನಿಂದ ಮೂಲದಲ್ಲಿ ಪ್ರಾಚೀನ ಬಂಗಾಲಿಯಲ್ಲಿ ರಚಿತವಾದ ಒಂದು ಸ್ತೋತ್ರವು ಮಹಾರಾಷ್ಟ್ರದಲ್ಲಿ ದೊರೆಯುತ್ತದೆ. ಈ ಸ್ತೋತ್ರವು ಉಪರೋಕ್ತ ದೋಹಾಗಳ ಸಮಸಾಮಯಿಕವು. ಬೌದ್ಧ ಮತ್ತು ಶೈವ ತಾಂತ್ರಿಕ ಸಿದ್ಧಾಚಾರ್ಯರು ಅಪಭ್ರಂಶದಲ್ಲಿ ಸಾಧನ ಸಂಬಂಧೀಯ ಯಾವ ರಹಸ್ಯಮಯ ಪದಗಳನ್ನು ರಚಿಸಿದ್ದನೋ ಅವುಗಳ ಹೆಸರೇ 'ದೋಹಾ'. ಈ ಪದಕರ್ತೃಗಳೇ ಸರ್ವಪ್ರಥಮ ಸಾಧಾರಣರ ಬೋಧಗಮ್ಯಭಾಷೆಯಲ್ಲಿ ಪದರಚನೆ ಮಾಡಿದರು. ಈ ಬಗೆಯಾಗಿಯೇ ಸಾವಿರ ವರ್ಷಗಳ ಪೂರ್ವದಲ್ಲಿ ಬಂಗಾಳಿ ಸಾಹಿತ್ಯದ ಭಿತ್ತಿ ಸ್ಥಾಪಿತವಾಯಿತು.

ಗೋರಕ್ಷನಾಥ ರಚಿತ ಗ್ರಂಥ ಮತ್ತು ಪದ್ಯಾದಿಗಳಲ್ಲಿ ಅಪಭ್ರಂಶ ಮಿಶ್ರಿತ ಒಂದು ವಿಶೇಷ ಭಾಷೆಯು ಕಂಡುಬರುವದು. ಹಿಂದೀ-ಮಹಾರಾಷ್ಟ್ರೀ, ರಾಜಸ್ಥಾನೀ ಮಿಶ್ರಿತವಾಗಿ ಯಾವ ಅಪೂರ್ವ ಭಾಷೆಯ ಸೃಷ್ಟಿಯಾಗಿರುತ್ತದೆಯೋ ಅದು ಆ ಕಾಲದ ರಹಸ್ಯವಾದಿಗಳಲ್ಲಿ ಪ್ರಚಲಿತವಿತ್ತು.

ಕಬೀರ, ನಾನಕಾದಿಗಳ ಭಾಷೆಗಳೊಡನೆ ಇದರ ಮೇಳವಿರುತ್ತದೆ. ಡಾ. ಮೋಹನಸಿಂಗರು ಗೋರಕ್ಷನಾಥನಿಗೆ ಪೂರ್ವವಂಗದ ಅಧಿವಾಸಿಯೆಂದು ಪ್ರತಿಪನ್ನ ಮಾಡಲು ಬಯಸಿದರೂ ಬಂಗಾಲಿಭಾಷೆಯಲ್ಲಿ ಅವನ ಯಾವ ಪದ ಅಥವಾ ಪುಸ್ತಕಗಳು ದೊರೆತಿಲ್ಲ. ಈ ಮಾತನ್ನು ಒಪ್ಪಲಿಕ್ಕೇ ಬೇಕಾಗುವದು. ಅತಏವ ಅವನು ಬಂಗಾಲಿ ಇದ್ದನೋ ಅಥವಾ ಇಲ್ಲವೋ ಎಂಬೀ ವಿಷಯದಲ್ಲಿ ಯಥೇಷ್ಟ ಸಂದೇಹವಿರುತ್ತದೆ.

**ಗೋಪೀಚಂದ್ರ ಮತ್ತು ಮಯನಾಮತೀಯರ ಕಥೆ:**

ವಂಗದೇಶದ ರಾಜನಾದ ಗೋಪೀಚಂದ್ರ ಸನ್ಯಾಸ ಗ್ರಹಣದ ಕರುಣಕಥೆಯು ಕೇವಲ ವಂಗದೇಶದಲ್ಲಿಯೇ ಅಲ್ಲ, 'ಸಮಗ್ರ ಭಾರತದಲ್ಲಿ ಪ್ರಚಲಿತವಿರುತ್ತದೆ. ಸಿಹರಕೀ ಗೋಪಿಚಾಂದ' 'ಪದುಮಾವತ್' 'ಗೋಪಿಚಂದ್ರ ರಾಜಾಕೆಖೇಲ', 'ಗೋಪಿಚಾಂದ ನಾಟಕ' ಮೊದಲಾದ ಕಾವ್ಯಗಳು ಬಂಗಾಲದೇಶದ ಹೊರಗೆ ಸಹ ರಚಿತವಾಗಿರುತ್ತವೆ. ಗೋಪೀಚಂದ್ರನ ತಾಯಿ ಮಯನಾವತಿಯು ತನ್ನ ಗುರು ಗೋರಖನಾಥನ ಕೃಪೆಯಿಂದ ಮಹಾಜ್ಞಾನದ ಅಧಿಕಾರಿಣಿಯಾದಳು. ಆ ಜ್ಞಾನದ ಬಲದಿಂದ ತನ್ನ ಮಗನ ಅಲ್ಪಾಯುವನ್ನು ಕಂಡು ಅವನಿಗೆ ಹಾಡಿಪಾನ ಶಿಷ್ಯತ್ವವನ್ನು ಗ್ರಹಣ ಮಾಡಿಸಿ, ಸನ್ಯಾಸವನ್ನು ತೆಗೆದುಕೊಳ್ಳುವ ಸಂಧಿಯನ್ನು ಉಂಟುಮಾಡಿದಳು. ಹಾಡಿಪಾನಿಂದ ಮಹಾಜ್ಞಾನವನ್ನು ಪಡೆಯಲು ದೀರ್ಘ ಜೀವಿಯಾಗುವನು. ಇರದಿದ್ದರೆ ಹತ್ತೊಂಬತ್ತು ವರ್ಷದ ವಯಸ್ಸಿನಲ್ಲಿ ಅವನಿಗೆ ನಿಶ್ಚಿತವಾಗಿ ಮೃತ್ಯುವು ಒದಗುವದು. ಈ ಸಂಗತಿಯನ್ನು ಮಯನಾಮತಿಯು ಯೋಗಬಲದಿಂದ ತಿಳಿಯಲು ಶಕ್ತಳಾದಳು. ಆದರೆ ಏಕಮಾತ್ರ ಪುತ್ರನ ಮೇಲೆ ಸನ್ಯಾಸ ಗ್ರಹಣದ ನಿಷ್ಠುರ ನಿರ್ದೇಶ ವಿಶೇಷತಃ ಅವನ ರಾಜ್ಯದ ಸಾಮಾನ್ಯವ್ಯಕ್ತಿಯ ಶಿಷ್ಯತ್ವ ಗ್ರಹಣ, ಜನ ಸಾಧಾರಣದಲ್ಲಿ ಯಾವ

ಚಾಂಚಲ್ಯವನ್ನು ಉಂಟು ಮಾಡಿತೋ ಅದರ ಫಲದಿಂದ ಚೈತನ್ಯದೇವನಂತೆ ಕರುಣವಾಗಿ, ಈ ಕತೆಯು ಸಮಗ್ರಭಾರತದಲ್ಲಿ ಪ್ರಚಾರಿತವಾಯಿತು. ಅದರೊಡನೆ ಗೋಪೀಚಂದ್ರನ ಇಬ್ಬರು ಮಹಿಷಿಯರು ಅದುನಾ, ಪದುನಾ ಇವರ ವಿಲಾಪಕತೆಯು ಗೀತಿಕಾ-ರಚನೆಯ ವಿಷಯ ವಸ್ತು ಆಯಿತು. ಈಗ ಸಹ ತರುಣ ರಾಜಪುತ್ರನ ಗೃಹತ್ಯಾಗದ ಮರ್ಮಸ್ಪರ್ಶಿ ಕತೆಯನ್ನು ರಂಗಪುರ ಜಿಲ್ಹೆಯ ಯೋಗಿಗಳು ಭಿಕ್ಷೆಗೋಸುಗ ಹೊರಬಿದ್ದರೆ 'ಗುಪೀಯ' ಯಂತ್ರದ ಸಹಾಯದಿಂದ ಹಾಡುವರು.

ಮುಂಬಯಿ ಭಾಗದ ಯೋಗಿಗಳು ಪ್ರಾಯಃ ನಿರಕ್ಷರರು. ಸಂಪೂರ್ಣಗಾಥಾ ಆವೃತ್ತಿ ಮಾಡಬಲ್ಲರು. ಇಂತಹ ಯೋಗಿಗಳು ಈಗ ದುರ್ಲಭವು. ಈ ಯೋಗಿಗಳು ಶಿವಗೋತ್ರೀಯರು. ಪ್ರವಾದವು ಹೀಗೆ ಇರುವದು: ಹಾಡಿಪಾನು ದೇವಿಯ ಅಭಿಶಾಪದಿಂದ ಶೂದ್ರನಾಗಿ ಜನ್ಮಗ್ರಹಣ ಮಾಡಿ ಗೋಪೀಚಂದ್ರನ ರಾಜ್ಯದಲ್ಲಿ ಎಲುವಿನ ಕೆಲಸ ಮಾಡುತ್ತಿದ್ದರು ಸಹ, ಯೋಗಮಾರ್ಗದಲ್ಲಿ ಮಹಾಸಿದ್ಧನಾಗಿದ್ದನು. ಉಡ್ಡಿಯಾನದಲ್ಲಿ ಇದ್ದು ಅವನು ಯೋಗಧರ್ಮಶಿಕ್ಷಣ ಪಡೆದನು. ಈ ಉಡ್ಡಿಯಾನದ ಅವಸ್ಥಿತಿ ಸಂಬಂಧದಿಂದ ಮತಭೇದವಿರುವದು.

ಗೀತಕಾವ್ಯದಲ್ಲಿ ಹೀಗೆ ಇರುವದು: ಹಾಡಿಪಾನಿಗೆ ರಾಜನ ತೋಟದ ಎಳೆಯ ಟೆಂಗಿನಕಾಯಿಯನ್ನು ತಿನ್ನುವ ಇಚ್ಛೆಯಾಗಲು ಅದೇ ಕ್ಷಣದಲ್ಲಿ -

'ಏಕ ಹುಂಕಾರ ಸಿದ್ಧಾತ್ರ ದಿಲೇಕ ಏಡಿಯಾ
ಉನಶತ ನಾರಿಕೇಲ ಪಡೆ ಜೀವನ ಶೋಂಡಿಯಾ ॥
ಶಾಶ ನಾರಿಕೇಲ ಖಾಯಿಯಾ ಗಾಛೇಲಾ ಗಾ ಏ ಮಾಲಾ ।

ಹಾಡಿಪಾನು ತನ್ನ ಅದ್ಭುತಶಕ್ತಿ ಬಲದಿಂದ ಒಂದು ಹುಂಕಾರದಿಂದ ಗಿಡದ ಫಲಗಳನ್ನು ಇಳಿಸಿ, ಅವುಗಳ ತಿರುಳನ್ನು ತಿಂದು, ಉಳಿದ ಪದಾರ್ಥಗಳನ್ನು ಹುಂಕಾರದಿಂದ ಮತ್ತೆ ಗಿಡಕ್ಕೆ ಹೊಂದಿಸಿದನು. ಆಹಾರದ ತರುವಾಯ ನಿದ್ದೆಗೋಸುಗ ಗಂಗಾದೇವಿಯು ಅವನಿಗೆ ಮಂಚವನ್ನು ಕೊಟ್ಟಳು. ಇಷ್ಟೇ ಅಲ್ಲ, ಸತ್ತವರು ಹಾಡಿಪಾನಿಂದ ಪೆಟ್ಟು ತಿಂದು ಜೀವಿತರಾದರು. ಆದರೂ ಇಂತಹ ಗುರುವಿನ ಶಿಷ್ಯನಾಗಲು ಗೋಪೀಚಂದ್ರನು ಸಹಜವಾಗಿ ಸಮ್ಮತವಾಗಲಿಲ್ಲ. ತಾಯಿಯೊಡನೆ ಹಾಡಿಪಾನ ಯಾವುದೋ ಕಾರಸ್ಥಾನವಿರುವದೆಂದು ಸಂದೇಹಗೊಂಡು ಮಾತೆಯನ್ನು ಅಗ್ನಿಪರೀಕ್ಷಾ, ಜಲಪರೀಕ್ಷಾ, ವಿಷಪಾನಪರೀಕ್ಷಾ, ಕೂದಲಿನ ಪೂಲಿನ ಮೇಲೆ ಮೊಣಕಾಲೂರಿ ದಾಟುವ ಪರೀಕ್ಷೆ, ಇವುಗಳಿಗೆ ಗುರಿ ಮಾಡಲು ಆಕೆಯು ಗುರು ಗೋರಖನಾಥನ ಕೃಪೆಯಿಂದ ಎಲ್ಲ ಪರೀಕ್ಷೆಗಳಲ್ಲಿ ಉತ್ತೀರ್ಣಳಾದಳು. ಆಗ ಮಗನು ಏಕಾಂತ ಅನಿಚ್ಛಾ ಸತ್ವದಲ್ಲಿ ರಾಜವೇಷವನ್ನು ಪರಿತ್ಯಾಗಮಾಡಿ ಯೋಗಿಯ ಶೂನ್ಯಕಂಥಾ, ಶೂನ್ಯಜೋಳಿಗೆಗಳನ್ನು ಹೆಗಲಲ್ಲಿ ಧರಿಸಿ, ದೇಶಾಂತರಿಯಾದನು. ಅರ್ಥಾತ್ ಬ್ರಹ್ಮಜ್ಞಾನವನ್ನು ಎಲ್ಲವೂ ಶೂನ್ಯವೆಂದು ಗೊತ್ತಾಗುವದು ಸೂಚಿತವಾಗುತ್ತದೆ. ದಾರಿಯಲ್ಲಿ ಹೋಗುತ್ತ ಹೋಗುತ್ತ ಹಾಡಿಪಾನು ಮದ್ಯದ ಗಂಧದಿಂದ ಆಕೃಷ್ಟನಾಗಿ ಶಿಷ್ಯನನ್ನು ಒಬ್ಬ ನಟಿಯ ಹತ್ತರ ಅಡವು ಇಟ್ಟು, ಮದ್ಯದ ಸಲುವಾಗಿ ಒಂಬತ್ತು ಮುಷ್ಟಿ ಕವಡಿಯನ್ನು ತೆಗೆದುಕೊಂಡನು. ಇತ್ತ ಕಡೆಗೆ ಗೋಪೀಚಂದ್ರನು ಹನ್ನೆರಡು ವರ್ಷಗಳ ವರೆಗೆ ವಿಶೇಷ ಲಾಂಛನಾಭೋಗವನ್ನು ಮಾಡಹತ್ತಿದನು. ಆದರೂ ನಟಿಯೊಡನೆ ಆಮೋದದಲ್ಲಿ ರತವಾಗಲು ಒಪ್ಪಿಕೊಳ್ಳಲಿಲ್ಲ. ನಟಿಗೆ ಹೇಳಿದನು-

'ಗುರು ಕಹಿಬೆ ಆಮಾಕೇ ಭಂಡತಪಸ್ವಿ ।
ತತ್ತ್ವಜ್ಞಾನಿ ಗುರು ಆಮಾರನಾಮ ಜಲಂಧರ।
ತಬೇ ಜ್ಞಾನ ನಾಹೀ ದಿಬ ನಾಹಬ ಅಮರ॥

ಕಡೆಗೆ ಶುಕಪಕ್ಷಿಯಿಂದ ತಾಯಿಗೆ ಕಷ್ಟದ ಸಂಗತಿಯನ್ನು ಕಳಿಸಿದನು. ಮಯನಾಮತಿಯು ಹಾಡಿಪಾನಿಗೆ ಮಗನ ಸಂಧಾನಕ್ಕೆ ಕಳಿಸಲು, ಅವನು ನಟಿಗೆ ಒಂಬತ್ತು ಮುಷ್ಟಿ ಕವಡಿಯನ್ನು ಕೊಟ್ಟು, ಶಿಷ್ಯನನ್ನು ಮುಕ್ತ ಮಾಡಿದನು. ಮತ್ತು ಸಿಟ್ಟಾಗಿ ನಟಿಗೆ ಶಾಪಕೊಟ್ಟನು.

'ಬಾದೂರ ಹಇಯಾ ರಹ ಭುವನ ಭಿತರ।'

ಗೋಪೀಚಂದ್ರನು ಸ್ವದೇಶಕ್ಕೆ ಮರಳಿ ಬಂದು ರಾಣಿಯರನ್ನು ಕೂಡಿಕೊಂಡನು.

ಮತ್ಸ್ಯೇಂದ್ರನ ಕತೆಯಲ್ಲಿ ಅವನು ಯಾವಾಗ ಕದಳೀರಾಜ್ಯದಲ್ಲಿ ಹದಿನಾರು ನೂರು ರಾಣಿಯರ ಮೋಹಪಾಶದಿಂದ ಗೋರಕ್ಷನಿಂದ ಉದ್ಧಾರವಾದನೋ ಆಗ ಸಹ ಗೋರಕ್ಷನಾಥನ ಅಭಿಶಾಪದಿಂದ ಆ ಕದಳೀ ದೇಶದ ಹದಿನಾರು ನೂರು ರಾಣಿಯರು

'ಬಾದೂರ ಹಇಯಾ ಸಬ ಕದಲೀ ಗೇಲ ಉಡಿ'

ಮತ್ತು ಗೋರಕ್ಷನಾಥನೊಡನೆ ಮತ್ಸ್ಯೇಂದ್ರನು ಸ್ವದೇಶಕ್ಕೆ ಮರಳಿ ಬಂದು, ಯೋಗ ಸಾಧನೆಯಲ್ಲಿ ತೊಡಗಿದನು.

**ಪೂರ್ವಭಾರತದಲ್ಲಿ ಕೀರ್ತಿ ಮತ್ತು ಕತೆ :**

ಒಮ್ಮೆ ಈ ಪ್ರಬಲ ಪರಾಕ್ರಾಂತ ಯೋಗೀಜಾತಿಯು ವಂಗದೇಶದಲ್ಲಿ ಮತ್ತು ಪೂರ್ವಭಾರತದಲ್ಲಿ ಪ್ರಭುತ್ವವನ್ನು ಮಾಡಿತು. ಇವರು ರಾಜರ ಗುರುಗಳಾಗಿದ್ದರು. ಸನ್ಯಾಸಿಗಳಾದರು ಸಹ ಧರ್ಮಯುದ್ಧಾದಿಗಳಲ್ಲಿ ತೊಡಗುತ್ತಿದ್ದರು ಮತ್ತು ದರ್ಶನದ ಗ್ರಂಥ ಮತ್ತು ಪದ್ಯಾದಿಗಳನ್ನು ರಚಿಸುತ್ತಿದ್ದರು. ರಂಗಪುರ, ಮೈಮನಸಿಂಗ, ಬಾಧರಗಂಜ, ನೌಖಾಲಿ, ತ್ರಿಪುರಾ, ಡಾಕಾ ಮೊದಲಾದ ಪ್ರದೇಶಗಳಲ್ಲಿ ಲಕ್ಷಾಧಿಕ ಯೋಗಿಗಳು ವಾಸವಿದ್ದರೂ ಅವರ ಪೂರ್ವಗೌರವವು ಅಕ್ಷುಣ್ಣವಾಗಿಲ್ಲ. ಬಡತನದ ಮೂಲಕ ಉಚ್ಚ ಶಿಕ್ಷಣದಲ್ಲಿ ವಂಚಿತವಿದ್ದರೂ ಅವರಲ್ಲಿ ಮೂರು ಸಾವಿರಕ್ಕಿಂತ ಹೆಚ್ಚು ಜನರು ವಿಶ್ವವಿದ್ಯಾಲಯದ ಉಪಾಧಿ ಧಾರಿಗಳಿದ್ದಾರೆ. ಹೊಟ್ಟೆ ಬಟ್ಟೆಗಳ ಸಲುವಾಗಿ ಇವರು ಈಗ ನೂಲುವದು, ಮಣಿಗಾರ ಸುಣಗಾರ ಮೊದಲಾದ ವ್ಯವಸಾಯಗಳನ್ನು ಅವಲಂಬನ ಮಾಡುತ್ತಿರುವರು. ಈಗ ಈ ಎಲ್ಲ ಯೋಗಿಗಳ ಉಪಾಸ್ಯದೇವತೆಯು ಧರ್ಮಠಾಕೂರ, ಗೋರಕ್ಷನಾಥ ಮೊದಲಾದವರು ಇವರಿಗೆ ಸ್ಮರಣೀಯ ಮಹಾಪುರುಷರು ಮಾತ್ರ. ಈ ಧರ್ಮಠಾಕೂರರ ಯಾವ ಪ್ರತಿಮೆಯೂ ಇಲ್ಲ. ಇವರ ಪೂಜೆಯಲ್ಲಿ 'ಹಂಸ' ಪಾರಾವತಾದಿಗಳು ಉತ್ಸರ್ಗ ಮಾಡಲ್ಪಡುತ್ತವೆ. ಆದರೆ ಕೊಲ್ಲಲ್ಪಡುವದಿಲ್ಲ. ಯೋಗಿಗಳ ಸ್ವಜಾತೀಯ ಪುರೋಹಿತ ಧರ್ಮದ ಪೂಜೆಯನ್ನು ಮಾಡುತ್ತಾರೆ. ಧರ್ಮಠಾಕೂರರ ನಾಮಾಂತರವು ನಿರಂಜನ ಅರ್ಥಾತ್ ನಿರ್ಮಲ. ಈ ಧರ್ಮಪೂಜೆಯು ಹಿಂದೂ ಧರ್ಮದೊಡನೆ ಬೌದ್ಧಧರ್ಮದ ಶೂನ್ಯವಾದದ ಮಿಶ್ರಣದಿಂದ ಉತ್ಪನ್ನವು. ಮುಂದಿನ ಕಾಲದಲ್ಲಿ ಇದರಲ್ಲಿ ನಾಥಪಂಥದವರು ಕೆಲವರು ಕೂಡಿಕೊಂಡರು. ಇದು ಲೌಕಿಕ ಧರ್ಮರೂಪದಿಂದ ಇರುತ್ತದೆ. ನಾಥಧರ್ಮದಂತೆ ವಿಸ್ತಾರವನ್ನು ಪಡೆಯಲಿಲ್ಲ. ಪಾಲರಾಜರ ಸಮಯದಿಂದಲೇ ವಂಗದೇಶದಲ್ಲಿ ಈ ಧರ್ಮಪೂಜೆಯ ಪ್ರಚಲನವಾಯಿತು. ಇದರ ಪ್ರವರ್ತಕನು 'ರಾಮಾಣ' ಪಂಡಿತನು. ಇವನು ಜಾತಿಯಿಂದ ಬ್ರಾಹ್ಮಣನು. ಬಲ್ಲಾಳ ಚರಿತೆಯಲ್ಲಿ ಯೋಗಿಗಳ ಪುರೋಹಿತರಿಗೆ 'ರುದ್ರಜಬ್ರಾಹ್ಮಣ' ಎಂದು ಹೇಳಿದೆ. ಆದರೆ 'ರಾಮಾಣ' ಜಾತಿ, ವರ್ಣವಿರೋಧಿ ಧರ್ಮಪೂಜೆಯಲ್ಲಿ ನಿರತರಿದ್ದರೆಂದು ಸಮಾಜದಿಂದ ಚ್ಯುತರಾದರು. 'ರಾಮಾಣ' ಸಂಭವತ ಹತ್ತನೆಯ ಶತಮಾನದ ಜನವು. ನಾಥಯೋಗಿ ಚೌರಂಗಿನಾಥನ ತಂದೆಯು ಸಂಭವತ ವಂಗೀಯ ಪಾಲರಾಜರಲ್ಲಿ 'ದೇವಪಾಲ' ಎಂಬ ಹೆಸರಿನಿಂದ ಪರಿಚಿತನು. ಇವನ ಭಗಿನಿ 'ಮಯನಾ' ರಾಮಾಣ ಪಂಡಿತನಿಗೆ ಉತ್ಸಾಹಿತ ಮಾಡುತ್ತಿದ್ದಳು ಎಂದು ಪ್ರಚಲಿತವಿರುತ್ತದೆ. ಆದರೂ ಕಂಡು ಬರುವದು : ಬೌದ್ಧಧರ್ಮದ ಪ್ರಭಾವವು ಕ್ರಮೇಣ ಲುಪ್ತವಾದರೂ

ಸಹ ಈಗಲೂ ವಂಗದೇಶದಲ್ಲಿ ನಾಥ ಉಪಾಧಿಕಾರಿ ಯೋಗಿ ಜಾತಿಯು, ತನ್ನ ಸ್ವತಂತ್ರ ಅಸ್ತಿತ್ವವನ್ನು ರಕ್ಷಣೆ ಮಾಡುತ್ತಿರುವುದು ನಾಥ ಧರ್ಮದ ಜೀವನೀಶಕ್ತಿಗೆ ಇದೇ ಎಲ್ಲಕ್ಕೂ ಉತ್ತಮ ಪ್ರಮಾಣವು.

**ಪಶ್ಚಿಮ ಭಾರತದಲ್ಲಿ ವಿಸ್ತಾರ :**

ಪೂರ್ವ ಭಾರತದ ಹೊರತು ಪಶ್ಚಿಮ ಭಾರತದಲ್ಲಿಯೂ ನಾಥಧರ್ಮದ ಯಥೇಷ್ಟ ವಿಸ್ತಾರ ಮತ್ತು ಪ್ರತಿಪತ್ತಿಯಾಗಿತ್ತು. ಮಹಾರಾಷ್ಟ್ರದ ಸುವಿಖ್ಯಾತ ಗೀತಾಭಾಷ್ಯ ರಚಯಿತೃ ಶ್ರೀ ಜ್ಞಾನೇಶ್ವರ ಮಹಾರಾಜನು ನಾಥಸಂಪ್ರದಾಯದವನು. ಮಹಾರಾಷ್ಟ್ರದಲ್ಲಿ ಅವನೂ ಅವನ ಅಣ್ಣನಾದ ನಿವೃತ್ತಿನಾಥನೂ ನಾಥಧರ್ಮವನ್ನು ಪ್ರಚಾರಮಾಡಿದರು. ಕ್ರಿ.ಶ.೧೨೭೫ರಲ್ಲಿ ಜ್ಞಾನದೇವನ ಜನ್ಮವಾಯಿತು. ಅನಂತರ ಇವನ ಹೆಸರು ಜ್ಞಾನೇಶ್ವರನೆಂದಾಯಿತು. ಇವನಿಂದ ರಚಿತವಾದ ಸುಲಲಿತ ಗೀತಾಭಾಷ್ಯವು 'ಜ್ಞಾನೇಶ್ವರಿ' ಎಂಬ ಹೆಸರಿನಿಂದ ಪ್ರಸಿದ್ಧವಾಯಿತು. ಆದರೆ ಇಪ್ಪತ್ತೊಂದನೆಯ ವರ್ಷ ವಯಸ್ಸಿನಲ್ಲಿ ಇವನು ಜೀವಂತ ಸಮಾಧಿಯನ್ನು ಗ್ರಹಣ ಮಾಡಿದನೆಂದು ಹೇಳಲ್ಪಟ್ಟಿದೆ. ಇವನ ಇಚ್ಛೆಯಂತೆ ಇವನ ತಂದೆ ಮತ್ತು ಅಣ್ಣನು ಇವರಿಗೆ ಸಮಾಧಿಸ್ಥ ಮಾಡಿದರು. ಇವನ ತಂದೆಯು ಸನ್ಯಾಸ ಗ್ರಹಣದ ತರುವಾಯ ಗುರುವಿನ ಅಪ್ಪಣೆಯಿಂದ ಪುನಃ ಗಾರ್ಹಸ್ಥ್ಯ ಧರ್ಮವನ್ನು ಅವಲಂಬನೆ ಮಾಡಲು, ನಿವೃತ್ತಿನಾಥಾದಿಗಳ ಜನನವಾಯಿತು. ಇವರೆಲ್ಲರು ಸಪರಿವಾರ ಸಮಾಜದಿಂದ ಚ್ಯುತರಾದರು. ಆದರೆ ಮುಂದೆ ಜ್ಞಾನದೇವನ ಅದ್ಭುತ ಯೋಗಬಲ ಮತ್ತು ಜ್ಞಾನಭಾಂಡಾರಕ್ಕೆ ಎಲ್ಲರೂ ತಲೆಬಗ್ಗಿಸಬೇಕಾಯಿತು. ಜ್ಞಾನದೇವನಿಂದ ರಚಿತವಾದ 'ಜ್ಞಾನೇಶ್ವರಿ' ಎಂಬ ಗೀತಾಭಾಷ್ಯದಲ್ಲಿ, ಭಾಷೆಯ ನೈಪುಣ್ಯ, ಭಾವದ ಗಾಂಭೀರ್ಯ, ಅಲಂಕಾರ, ಚಾತುರ್ಯ ಮತ್ತು ದಾರ್ಶನಿಕ ಅಂತರ್ದೃಷ್ಟಿಯು ಕಂಡುಬರುತ್ತದೆ. ಅದು ಮಹಾರಾಷ್ಟ್ರ ಸಾಹಿತ್ಯದಲ್ಲಿ ಒಂದು ಯುಗಪ್ರವರ್ತನದ ದೃಷ್ಟಾಂತ ಸ್ವರೂಪವು.

ಭಾರತದ ಪಶ್ಚಿಮಭಾಗದಲ್ಲಿ ಕರಾಚಿಯ ಅನತಿ ದೂರದಲ್ಲಿ 'ಹಿಂಲಾಜ', ಕೋಟೇಶ್ವರ ಮೊದಲಾದ ಸ್ಥಾನಗಳಲ್ಲಿ ಪ್ರಸಿದ್ಧ ಮಠಾಧಿಗಳಿರುವವು. ಈ ಎಲ್ಲ ತೀರ್ಥಭ್ರಮಣವು ಶೇಷವಾಗಲು ಅದರ ಸ್ಮಾರಕ ಚಿಹ್ನರೂಪದಿಂದ ಅಲ್ಲಿ ದಕ್ಷಿಣಬಾಹುವಿನಲ್ಲಿ ಯೋನಿಲಿಂಗವನ್ನು ಅಂಕಿತ ಮಾಡುವ ಪದ್ಧತಿಯು ಇರುತ್ತದೆ. ಕಚ್ಛ ಪ್ರದೇಶದ 'ಧೀನೋದರ ಮಠ'ವೂ ಪ್ರಸಿದ್ಧವು. ಹೇಳಲ್ಪಟ್ಟಿದೆ: ನಾಥಯೋಗಿ ಧರ್ಮನಾಥನು ತನ್ನ ಪಾಪಕ್ಷಯಿಕ್ಕೋಸುಗ ಹನ್ನೆರಡು ವರ್ಷ ಈ ಸ್ಥಾನದಲ್ಲಿ ಮಸ್ತಕೋಪರಿಯಾಗಿ ತನ್ನ ಅಸೀಮ ಧೈರ್ಯದ ಪರೀಕ್ಷೆಯನ್ನು ಕೊಟ್ಟನು.'ಧೀನೋದರ' ಅಂದರೆ ಸಹಿಷ್ಣುತೆಯ ಧಾರಕವು. ಧರ್ಮನಾಥನು ಕ್ರಿ.ಶ. ೧೩೮೨ರಲ್ಲಿ ಪೇಶಾವರದಿಂದ ಕಚ್ಛಕ್ಕೆ ಬಂದು ಈ ಮಠವನ್ನು ಸ್ಥಾಪನೆಮಾಡಿದನು. ಮುಂಬಯಿ ಪ್ರಾಂತದಲ್ಲಿ ಸಾತಪುಡಾ ಮೊದಲಾದ ಸ್ಥಾನಗಳಲ್ಲಿ 'ಗೋರಕ್ಷಗಡ' ಮತ್ತು 'ಮಚ್ಛೇಂದರಗಡ' ಎಂಬ ಎರಡು ದುರ್ಗಗಳು ಇರುತ್ತವೆ. ಗೋರಕ್ಷಾದಿಗಳ ಹೆಸರಿನಿಂದ ಮಂದಿರ, ವಿಷ್ಣ ಪ್ರಸ್ರವಣಾದಿಗಳಿಗೂ ಅಭಾವವಿಲ್ಲ.

**ಬಾಬಾ ಗಂಭೀರನಾಥ :**

ಉತ್ತರ ಭಾರತದ ಪಂಜಾಬದಲ್ಲಿ 'ಟಿಲಾ' ಎಂಬ ಸ್ಥಾನದಲ್ಲಿ ಗೋರಕ್ಷನಾಥೀಯರ ಸರ್ವಶ್ರೇಷ್ಠಮಠವಿರುತ್ತದೆ. ಇದು ಝೀಲಮದಿಂದ ೨೫ ಮೈಲು ದೂರದಲ್ಲಿರುವದು. ಇದು 'ಗೋರಕ್ಷಟಿಲಾ' ಎಂಬ ಹೆಸರಿನಿಂದ ಪ್ರಸಿದ್ಧವು. ಇದರ ಎತ್ತರವು ೩೨೪೨ ಫೂಟು. ಇದರ ಪರ್ವತಗಾತ್ರವು ಅಮಸೃಣ ಮತ್ತು ದುರಾರೋಹವು. ಈ ಸ್ಥಾನದಿಂದ ದೃಷ್ಟ ಹಿಮಾಲಯ ದೃಶ್ಯವು ಅತೀವ ಮಹಾನ್. ಗೋರಕ್ಷನಾಥನು ಈ ಟಿಲಾದಲ್ಲಿ ದೇಹರಕ್ಷಾ ಮಾಡಿದನೆಂದು ಪ್ರವಾದವಿರುತ್ತದೆ. ವಾಲ್ಮೀಕಿಕನ್ಯೆಯ ವಿವಾಹವರ್ಣನೆಯಲ್ಲಿ ಈ ಟಿಲಾದ ಉಲ್ಲೇಖವು ಕಂಡುಬರುತ್ತದೆ. ಅತ ಏವ ಈ ಟಿಲಾಗೋರಕ್ಷ ಪೂರ್ವಯುಗದ್ದು ಮತ್ತು ಬಹು ಪ್ರಾಚೀನತೀರ್ಥ ವಿಶೇಷವು. ಸಾಮ್ರಾಟ್ ಅಕಬರನು ಇದರ ಖರ್ಚಿನ ಸಲುವಾಗಿ ಕೆಲವು ಹಳ್ಳಿಗಳನ್ನು ಅರ್ಪಣೆ

ಮಾಡಿದ್ದಾನೆ. ಕಾಶ್ಮೀರ, ನೇಪಾಳ, ಸಿಕಿಮ್ ನೇಪಾಳದ ಅನತಿ ದೂರದಲ್ಲಿ ತುಲಸೀಪುರ, ನೈನಿತಾಲ, ಆಲಮೋರಾ, ಹರಿದ್ವಾರ ಮೊದಲಾದ ಸ್ಥಾನಗಳಲ್ಲಿ ಗೋರಕ್ಷನಾಥ ಮತ್ತು ಮತ್ಸ್ಯೇಂದ್ರನಾಥರಿಂದ ಯುಕ್ತವಾದ ಹಲವು ಸ್ಥಾನ, ಮಠ ಮಂದಿರ ಮೊದಲಾದವುಗಳು ಇರುತ್ತವೆ. ಯುಕ್ತಪ್ರದೇಶದ 'ಚುನಾರ'ದಲ್ಲಿ ಭರ್ತೃಹರಿಯ ದುರ್ಗವಿರುತ್ತದೆ. ರಾಜಾ ಭರ್ತೃಹರಿಯು ಸಿಂಹಾಸನವನ್ನು ತ್ಯಾಗಮಾಡಿ ಗೋರಕ್ಷನಾಥನ ಶಿಷ್ಯತ್ವವನ್ನು ಗ್ರಹಣಮಾಡಿದನು. ಗೋರಕ್ಷಪುರದ ಗೋರಕ್ಷಮಂದಿರದಲ್ಲಿ ಸುಸಜ್ಜಿತ ಗಾದಿಯ ಮೇಲೆ ಗೋರಕ್ಷ ಚರಣ (ಖಡಾವು) ರಕ್ಷಿತವಾಗಿರುತ್ತವೆ ಮತ್ತು ಅವುಗಳ ನಿತ್ಯ ಪೂಜೆಯ ವ್ಯವಸ್ಥೆಯು ಇರುತ್ತದೆ. ಗೋರಕ್ಷನಿಂದ ಪ್ರಜ್ವಲಿತವಾದ ಒಂದು ಪ್ರದೀಪವು ಈಗ ಸಹ ಮಂದಿರದಲ್ಲಿ ಉರಿಯುತ್ತದೆ. ಈ ಸ್ಥಾನದ ಮಠವು ಸ್ವಯಂ ಗೋರಕ್ಷನಿಂದ ಪ್ರತಿಷ್ಠಿತವಾಯಿತೆಂದು ಪ್ರಸಿದ್ಧಿ ಇರುತ್ತದೆ. ಬಾಲಕ-ಬಾಲಿಕೆಯರ ನಷ್ಟ ಸ್ವಾಸ್ಥ್ಯದ ಪುನರುದ್ಧಾರದ ಸಲುವಾಗಿ ಇಲ್ಲಿಯ ಮೋಹಂತರ ಪೂಜೆಯು ವಿಶೇಷ ಫಲಪ್ರದವಾಗುವದೆಂದು ಸಾಮಾನ್ಯರ ವಿಶ್ವಾಸವು. ಶ್ರೀ ಗೋರಕ್ಷನಾಥನ ಆಧ್ಯಾತ್ಮಿಕ ಶಿಷ್ಯ ಗಂಭೀರನಾಥನ ಬಹು ವಿಶಿಷ್ಟ ಬಂಗಾಲಿ ಶಿಷ್ಯರು ಈ ಸ್ಥಾನದಲ್ಲಿ ಸಂಗಮರವರಿ ಕಲ್ಲಿನ ಮೂರ್ತಿಯನ್ನು ಸ್ಥಾಪಿಸಿರುತ್ತಾರೆ. ಮಂದಿರವು ಬಿಳೇಕಲ್ಲಿನಿಂದ ನಿರ್ಮಿತವು. ಹಾಗು ಚಿಕ್ಕದಾದರೂ ವೈಶಿಷ್ಟ್ಯಪೂರ್ಣವು. ಗಂಭೀರನಾಥನು ಸುಪುರುಷನಿದ್ದಂತೆ, ಅವನ ಚರಿತ್ರ ಬಲವೂ ಅದರಂತೆಯೇ ಅಸಾಧಾರಣವಿತ್ತು. ದಾನಶೀಲತೆಯ ಸಲುವಾಗಿಯೂ ಅವನು ಪ್ರಸಿದ್ಧನಿದ್ದನು. ಮಹಾತ್ಮಾ ವಿಜಯಕೃಷ್ಣ ಗೋಸ್ವಾಮಿಯು ತನ್ನ ಆಶಾವತಿಯ ಉಪಾಖ್ಯಾನದಲ್ಲಿ ಬಾಬಾಜಿಯ ಹೆಸರನ್ನು ಕೊಡದಿದ್ದರೂ ಅವನ ಗುಣವನ್ನು ಹೊಗಳಿರುತ್ತಾನೆ. ಗೋರಕ್ಷಪುರದ ಮಠಾಧ್ಯಕ್ಷರೂಪದಿಂದ ಇವನು ಜನಸಾಧಾರಣರ ಭಕ್ತಿ, ಅರ್ಘ್ಯ ಪಡೆದಿದ್ದಾನೆ. ಶಾಂತಿನಾಥ ಮತ್ತು ನಿವೃತ್ತಿನಾಥರೆಂಬ ಅವನ ಬಂಗಾಲಿ ಶಿಷ್ಯ ಮತ್ತು ಸನ್ಯಾಸಿದ್ವಯರು ಈಗ ಸಹ ಗೋರಕ್ಷಪುರದಲ್ಲಿ ಇರುವರು.

ಕಾಶಿಯಲ್ಲಿ ಗೋರಕ್ಷಟಿಲಾ ಎಂಬ ಸ್ಥಾನವು ಶೋಚನೀಯ ಸ್ಥಿತಿಯಲ್ಲಿ ಇರುವದು. ಟಿಲಾದ ಮೂರ್ತಿ ಪುಸ್ತಕಗಳು ಎಲ್ಲವೂ ಅಪಹೃತವಾಗಿ ನಗ್ನಮೂರ್ತಿ, ಕಲ್ಲಿನ ಮಂದಿರಗಳು ಈಗ ಸಹ ಹೇಗೋ ನಿಂತಿರುತ್ತವೆ. ಪೂಜಾರಿಯು ಮೂಕನೂ, ಕಿವುಡನೂ ಆದ ನೇಪಾಳಿಯು.

ಪೇಶಾವರ, ಲಾಹೋರ, ಅಮೃತಸರ, ಅಂಬಾಲಾ, ರೋಟಾಸ, ಕಿರಾನಾ ಮೊದಲಾದ ಸ್ಥಾನಗಳೂ ಯೋಗಿಗಳ ಪ್ರಭಾವ ಮುಕ್ತವಲ್ಲ. ಕಾಠೇವಾಡ, ರಾಜಪುತಾನಾ ನಾಥಯೋಗಿಗಳ ವಾಸಸ್ಥಾನರೂಪದಿಂದ ಈಗ ಸಹ ಪ್ರಸಿದ್ಧವು.

ಹೇಳಲ್ಪಟ್ಟಿದೆ : ಕಾಠೇವಾಡದ ಗುಡ್ಡವು ಗೋರಕ್ಷನ ಪ್ರಿಯ ಆವಾಸ ಸ್ಥಳವಾಗಿತ್ತು. ಓಡಿಸಾ ಪ್ರದೇಶದ ಪುರಿಯಲ್ಲಿ 'ಕಾನಫಾಟಾ'ಗಳ ಸತ್‌ನಾಥಿ ಎಂಬ ಸಂಪ್ರದಾಯದ ಮಠ ಮತ್ತು ಮಂದಿರಗಳು ಇರುತ್ತವೆ. ಅಹಮ್ಮದಾಬಾದದ ಉತ್ತರದಲ್ಲಿ ಗೋರಕ್ಷನಾಥನ ಹೆಸರಿನಿಂದ ಪರ್ವತ ಶ್ರೇಣಿಯು ಇರುತ್ತದೆ.

ವಂಗದೇಶದಲ್ಲಿ 'ಡಮಡಮ್'ದ ಹತ್ತಿರ 'ಗೋರಕ್ಷ-ಬಾಂಶಲಿ' ಹೆಸರಿನ ಗೋರಕ್ಷ ಕ್ಷೇತ್ರದ ಹೆಸರನ್ನು ಹಲವರು ತಿಳಿದಿರುವರು. ಈಗಿನ ಮಂದಿರದಲ್ಲಿ ಗೋರಕ್ಷನಾಥ, ಮತ್ಸ್ಯೇಂದ್ರನಾಥ ಮತ್ತು ದತ್ತಾತ್ರೇಯರ ಮೂರ್ತಿಗಳು ಇರುತ್ತವೆ. ಗೋರಕ್ಷನ ಪೂರ್ವದಲ್ಲಿ ಕಪಿಲಮುನಿಯು ಈ ಸ್ಥಾನದಲ್ಲಿ ಸಾಧನೆಯನ್ನು ಮಾಡಿದನೆಂದು ಪ್ರವಾದವಿದ್ದು, ಕಪಿಲ ಮುನಿಗಳದೂ ಚಿಕ್ಕ ಬಿಳೇಕಲ್ಲಿನ ಮೂರ್ತಿಯು ಇಲ್ಲಿ ಇರುತ್ತದೆ. ಶಿವ, ಭೈರವ, ಹನುಮಂತ, ಕಾಲಿ, ಮನಸಾ ಮೊದಲಾದ ಮೂರ್ತಿಗಳಿರುವವು. ಮೇದಿನಿಪುರದ ಸಿದ್ಧಕುಂಡದಲ್ಲಿ ಮತ್ತು ಹುಗಳಿ ಜಿಲ್ಹೆಯ 'ಪಾಂಡಯಾ'ದ ಸಮೀಪದಲ್ಲಿದ್ದ ಮಹಾನಾದವೆಂಬ ಗ್ರಾಮದಲ್ಲಿ ಮಹಾದೇವ - ಜಟೇಶ್ವರನ ಮಂದಿರವಿರುತ್ತದೆ. ಇವು ಸಹ ಗೋರಕ್ಷಕ್ಷೇತ್ರಗಳು. ಈಗ ನಾಥಸಂಪ್ರದಾಯದ ಕೆಲವು ಉತ್ಸಾಹೀ

ತರುಣರು ಈ ಸ್ಥಾನಗಳನ್ನು ವಶಪಡಿಸಿಕೊಂಡು ಗೋರಕ್ಷಮಂದಿರ ಪ್ರತಿಷ್ಠೆಯ ಪ್ರಯತ್ನದಲ್ಲಿ ಇರುತ್ತಾರೆ. "ಬೇಲಗಾಛಿಯಾ"ದಲ್ಲಿ ಯೋಗಾಚಾರ್ಯ ಗೋರಕ್ಷ ಪರಿಷತ್ ಹೆಸರಿನಿಂದ ಇವರ ಒಂದು ಪ್ರತಿಷ್ಠಾನವಿರುತ್ತದೆ.

**ಆಚಾರ-ಸಂಸ್ಕಾರಾದಿ ಮತ್ತು ವೇಷಭೂಷಾ:**

ನಾಥಯೋಗಿಗಳು ಕರ್ಣದ ಉಪಾಸ್ಥಿಯನ್ನು ಭೇದಿಸಿ, ಧಾತು ಅಥವಾ ಗಂಡಕದ ಕೋಡಿನಿಂದ ನಿರ್ಮಿತವಾದ ಕುಂಡಲಗಳನ್ನು ಧರಿಸಿ ಬೇರೆ ಯೋಗಿಗಳಿಂದ ತಮ್ಮ ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳುತ್ತಾರೆ. ಕರ್ಣಭೇದದಿಂದ ಯೋಗಜ ಸಿದ್ಧಿ ಲಭಿಸುವದು ಮತ್ತು ಪರಮಾತ್ಮ ದರ್ಶನವಾಗುವದು.ಕುಂಡಲದ ಮತ್ತೊಂದು ಹೆಸರು 'ದರ್ಶನೀ'. ಕಾನಫಾಟಾಯೋಗಿಗಳು ಕರ್ಣದ ಕೋಮಲವಾದ ನಿಮ್ನ ಭಾಗವನ್ನು ಛೇದನ ಮಾಡುತ್ತಾರೆ. ಹಾಗು ಇವರು ಗೋರಕ್ಷನಾಥನಿಗೆ ನಾಥಪಂಥದ ಪ್ರತಿಷ್ಠಿತಾರೂಪದಿಂದ ಸ್ವೀಕಾರ ಮಾಡುವದಿಲ್ಲ. ಗೋರಕ್ಷನಾಥಿಗಳಿಗೆ ಗೋರಕ್ಷನೇ ಪ್ರತಿಷ್ಠಾತೃವು ಮತ್ತು ಉಪಾಸ್ಯ ರೂಪದಿಂದ ಸಮ್ಮಾನಿತನು. ಉತ್ಸವಾದಿಗಳಲ್ಲಿ 'ಕಾನಫಾಟಾ' ಯೋಗಿಗಳಿಂದ ಗೋರಕ್ಷನಾಥಿಗಳ ಸ್ಥಾನವು ಉಚ್ಚತರವು.

ಕುಂಡಲಗಳ ಹೊರತು ಕೈಗಳಲ್ಲಿ ಹಿತ್ತಾಳಿ ಮೊದಲಾದವುಗಳ ಕಡಗಗಳು, ಕೊರಳಲ್ಲಿ 'ಹಿಂಲಾಜ' ಮತ್ತು 'ಆಶಾಪುರೀ' ಹೆಸರಿನ ಮಾಲೆ ಹಾಗು ರುದ್ರಾಕ್ಷಿಯ ಮಾಲೆ ಧರಿಸುವ ರೀತಿಯು ಇರುತ್ತದೆ. ಇದರ ಹೊರತು ಕೊರಳಲ್ಲಿ 'ಸೇಲಿ' ಎಂಬ ಉಣ್ಣೆಯ ಉಪವೀತದಲ್ಲಿ 'ಶಿಂನಾದ' ಹೆಸರಿನ ಎರಡು-ಮೂರು ಅಂಗುಲಿ ಪರಿಮಾಣದ ಕೃಷ್ಣವರ್ಣದ ಶಿಂಗದ ಕೊಳಲು ಧಾರಣ ರೀತಿ ಇರುತ್ತದೆ. ಈ ಶಿಂನಾದ ಪವಿತ್ರೀ ಹೆಸರಿನ ವಲಯಾಕಾರ ದ್ರವ್ಯದಿಂದ ಲಂಬಿತವಾಗುತ್ತದೆ. ಈ 'ಶಿಂನಾದ' ಮತ್ತು ಪವಿತ್ರೀ ಜಗತ್‌ಕಾರಣದ ಪ್ರತೀಕರೂಪದಿಂದ ಯೋಗಿಗಳು ಧಾರಣಮಾಡುತ್ತಾರೆ.

ಕಾವಿ ಅಥವಾ ಬಿಳೇ ವಸ್ತ್ರಧಾರಣ, ಜಟಾಧಾರಣ ಅಥವಾ ಮುಂಡಿತ ಮಸ್ತಕರಾಗಿ ಹಾಗು ಹಣೆಯಲ್ಲಿ ತ್ರಿಪುಂಡ್ರಧಾರಣಗಳು ನಾಥಯೋಗಿಗಳಲ್ಲಿ ಪ್ರಚಲಿತವು. ಸಾಧನದ ಸಲುವಾಗಿ ಧುನಿ ಮತ್ತು ಗದ್ದುದ ಭಾರ ಹಿಡಿಯುವದಕ್ಕಾಗಿ ಆಚಲ ಹೆಸರನಿಂದ ಖಂಬಯಷ್ಟಿಯು ವ್ಯವಹೃತವಾಗುವದು.

ದಂಡ ಮತ್ತು ಶಿಖಾಧಾರಣವು ಇವರಲ್ಲಿ ಪ್ರಚಲಿತವಿರುವದು. ಪಾಂಡವರು ಮೃತ ಆತ್ಮೀಯರ ಪಿಂಡದಾನ ಸಮಯದಲ್ಲಿ ಗಂಡಕದ ಚರ್ಮದಿಂದ ನಿರ್ಮಿತವಾದ ಪಾತ್ರದಿಂದ ಜಲದಾನ ಮಾಡಿದರು. ಅಂತೇ ಗಂಡಕದ ಚರ್ಮಕ್ಕೆ ಇವರು ಪವಿತ್ರವೆಂದು ತಿಳಿಯುವರು. ಈ ಚರ್ಮದಿಂದ ನಿರ್ಮಿತವಾದ ಕುಂಡಲಗಳು ಅಪಹೃತವಾಗಲು ಅದು ಯೋಗಿಗಳ ಪಕ್ಷದಲ್ಲಿ ಮುಖಪ್ರದರ್ಶನವು ನಿಷಿದ್ಧವು. ಇಷ್ಟೇ ಅಲ್ಲ ಅವನಿಗೆ ಜೀವಂತಸಮಾಧಿ ಮಾಡುವ ರೀತಿಯು ಪ್ರಚಲಿತವಿತ್ತು. ದರ್ಶನವು ಯಾವದೇ ಬಗೆಯಿಂದ ಸ್ಪಷ್ಟವಾಗಿ ಹೋಗಲು, ಎರಡನೆಯವರೊಡನೆ ವಾಕ್ಯಾಲಾಪವನ್ನು ಬಂದು ಇಡುವ ನಿರ್ದೇಶವಿರುತ್ತದೆ.

ಯೋಗಿಗಳಲ್ಲಿ ಜಾತಿಭೇದವಿಲ್ಲ. ಆದರೆ ಶ್ರೇಣಿಭೇದವಿರುತ್ತದೆ. ಖಾದ್ಯಾ-ಖಾದ್ಯ ಸಂಬಂಧದಲ್ಲಿಯೂ ಮತಭೇದವಿರುತ್ತದೆ. ಮಾಂಸಾಹಾರ ನಿಷಿದ್ಧವಾಗದಿದ್ದರೂ ಮತ್ಸ್ಯದಿಂದ ಮತ್ಸ್ಯೇಂದ್ರನಾಥನು ಹುಟ್ಟಿದನೆಂದು ಮತ್ಸ್ಯದ ಆಹಾರವು ನಿಷಿದ್ಧ. ಶ್ವಾಸ-ಪ್ರಶ್ವಾಸಗಳ ಸಂಖ್ಯಾದಿಯಿಂದ ಶುಭಾಶುಭ ಫಲನಿರ್ಣಯ, ಕವಚ ಮತ್ತು ಔಷಧಾದಿ ವಿತರಣವು ಇವರಲ್ಲಿ ಕಂಡುಬರುವದು. ಶಿವರಾತ್ರಿಯಲ್ಲಿ ಮತ್ತು ನಾಗಪಂಚಮಿಯಲ್ಲಿ ಯೋಗಿಗಳ ವಿಶೇಷ ಉತ್ಸವಗಳಾಗುತ್ತವೆ. ಅನ್ನವಿತರಣವು ನಾಥಪಂಥಿಗಳ ಗೌರವದ ವಿಷಯವು. ನಾಥಯೋಗಿಗಳ ಇಷ್ಟಮಂತ್ರವು 'ಶಿವಗೋರಕ್ಷ'. ಇವರ ದೀಕ್ಷಾಕಾಲವು ಪೌಷ್ಯದಿಂದ ಚೈತ್ರಮಾಸದ ವರೆಗೆ ಪ್ರಶಸ್ತವು. ಯೋಗಿಯ ಮರಣವಾಗಲು ಅವನನ್ನು ಸಮಾಧಿಸ್ಥ ಮಾಡುವರು. ಅದಕ್ಕೆ ಮೊದಲು ಹಿಂದುತ್ವದ

ವೈಶಿಷ್ಟ್ಯ ಸ್ವರೂಪ ಮುಖಾಗ್ನಿ ಮಾಡುವ ರೂಢಿಯು ಇರುತ್ತದೆ. ಮುಸಲಮಾನರೂ ಯೋಗಿಗಳ ಹತ್ತರ ದೀಕ್ಷಾಗ್ರಹಣ ಮಾಡುತ್ತಿದ್ದರು. ಏಕತ್ರವಾಗಿ ಆಹಾರಾದಿಗಳನ್ನು ಮಾಡದಿದ್ದರೂ ನಾಗಪಂಚಮಿಯ ದಿನ ಹಿಂದೂ-ಮುಸಲ್ಮಾನ ಯೋಗಿಗಳು ಏಕತ್ರದಲ್ಲಿ 'ಗೂಗಾ' ಗೀತವನ್ನು ಹಾಡಿ ಭಿಕ್ಷೆಯನ್ನು ಬೇಡುತ್ತಾರೆ. 'ಗೂಗಾ' ವಾಸುಕಿಯ ಜಾಮಾತನು. ಶಿವರಾತ್ರಿಯಲ್ಲಿ ಗೋರಕ್ಷಗೀತವು ಹಾಡಲ್ಪಡುತ್ತದೆ. ನೇಪಾಳದಲ್ಲಿ ಮತ್ಸ್ಯೇಂದ್ರನ ರಥಯಾತ್ರೆಯು ನಮ್ಮ ದೇಶದ ಜಗನ್ನಾಥನ ರಥಯಾತ್ರೆಯಂತೆ ಮಹಾ ಸಮಾರೋಹದಿಂದ ವೈಶಾಖಮಾಸದಲ್ಲಿ ಅನುಷ್ಠಿತವಾಗುತ್ತದೆ. ರಾಜ್ಯಚ್ಯುತನಾದ ನೇಪಾಳ ರಾಜನಾದ ಶ್ರೀ ವಸಂತದೇವಜಿಯು ಮತ್ಸ್ಯೇಂದ್ರನ ಆಶೀರ್ವಾದದಿಂದ ತನ್ನ ರಾಜ್ಯವನ್ನು ಪುನಃ ಸಂಪಾದನೆ
ಮಾಡಲು ಪ್ರತಿ ವೈಶಾಖಮಾಸದಲ್ಲಿ 'ಭೋಗಮತಿ' ನದೀ ತೀರದಲ್ಲಿ ಅವನ ಉತ್ಸವದ ವ್ಯವಸ್ಥೆಯನ್ನು ಮಾಡುತ್ತಾರೆ. ನಾಥಯೋಗಿಗಳು ಪರಸ್ಪರರಿಗೆ 'ಆದೇಶ' ಶಬ್ದದಿಂದ ಅಭಿವಾದನ ಮಾಡುತ್ತಾರೆ. ಇದು 'ಆಧೀಶ' ಶಬ್ದದ ಅಶುದ್ಧರೂಪವು. ಇದರ ಅರ್ಥವು 'ನೀನು ಬ್ರಹ್ಮಸ್ವರೂಪನು. ಅನುಜ್ಞಾ ಸೂಚಕ 'ಆದೇಶ' ಶಬ್ದದೊಡನೆ ಇದರ ಕೂಡುವಿಕೆಯು ಇಲ್ಲ.

**ಸಿದ್ಧಾಂತ ಮತ್ತು ಸಾಧನೆ**

ಶ್ರೀ ಮತ್ಸ್ಯೇಂದ್ರನಾಥನು ಅವಲೋಕಿತೇಶ್ವರನ ಅವತಾರ ರೂಪದಲ್ಲಿ ನೇಪಾಳದಲ್ಲಿ ಈಗ ಸಹ ಪೂಜೆಯನ್ನು ಪಡೆಯುತ್ತಾನೆಂದು, ನಾಥಯೋಗಿಗಳಿಗೆ ಬೌದ್ಧರೆಂದು ಕೆಲಕೆಲವರು ಮತಾಮತವನ್ನು ಪ್ರಕಾಶ ಪಡಿಸಿದ್ದಾರೆ. ಪ್ರವಾದವಿರುವುದು-ಗೋರಕ್ಷನು ಬೌದ್ಧನು. ಅವನ ಮೊದಲಿನ ಹೆಸರು 'ರಮಣವಜ್ರ' ಅಥವಾ 'ಅನಂಗವಜ್ರ' ಎಂದು ಇತ್ತು. ಸ್ವಧರ್ಮವನ್ನು ತ್ಯಾಗಮಾಡಲು ನೇಪಾಳಿ ಬೌದ್ಧರು ಅವನ ಮೇಲೆ ಅಸಂತುಷ್ಟರಾದರು. ಆದರೂ ಶೈವ ಪಂಥೀ ಮತ್ಸ್ಯೇಂದ್ರನು ನೇಪಾಳದ ಪ್ರಧಾನ ದೇವತಾರೂಪದಿಂದ ಪೂಜಿಸಲ್ಪಡುವದು ನಿಜವಾಗಿ ಆಶ್ಚರ್ಯಕರವು. ನೇಪಾಳದಲ್ಲಿ ಶೈವಯೋಗಿಯ ವೇಷದಿಂದ ಅವನು ಶೈವಧರ್ಮವನ್ನೇ ಪ್ರಚಾರ ಮಾಡಿದನು. ಅವನ ಮಂತ್ರ ಮತ್ತು ತೀರ್ಥಾದಿಗಳೂ ಶೈವ. ಶೈವಯೋಗಿಗಳೇ ಮೊದಲು ಸಹಜಬೋಧ್ಯ ಸಂಸ್ಕೃತ ಮತ್ತು ಬಂಗಾಲಿ ಭಾಷೆಗಳಲ್ಲಿ ಪದರಚನೆಯನ್ನು ಮಾಡಿದರು ಎಂಬುದು ನಿಸ್ಸಂದೇಹವು. ಅತಏವ ಮತ್ಸ್ಯೇಂದ್ರನು ಯಾವ ಕ್ರಮದಿಂದಲೂ ಬೌದ್ಧನಾಗಲು ಶಕ್ಯವಿಲ್ಲ. ಆದರೆ ಪೂರ್ವವರ್ತಿ ಧರ್ಮಗಳ ಕೆಲ ಪ್ರಭಾವವು ಪರವರ್ತಿ ಧರ್ಮ ಸಂಪ್ರದಾಯಗಳ ಮೇಲೆ ವಿಸ್ತಾರಿತವಾಗುವುದು ವಿಚಿತ್ರವಲ್ಲ. ನಾಥಯೋಗಿಗಳ ಆಚಾರ-ಅನುಷ್ಠಾನಗಳು ಮಿಶ್ರಿತವಾದುದರಿಂದ ಈ ಭ್ರಾಂತ ತಿಳುವಳಿಕೆ ಮತ್ತೂ ಪ್ರಚಲಿತವಾಗಿರುತ್ತದೆ. ಯಥಾ -ಬೌದ್ಧರಂತೆ ಜಾತಿ ಭೇದ ಇಲ್ಲದಿರುವುದು, ಮಸ್ತಕ ಮುಂಡನ ಮಾಡುವುದು, ಭೋಟಿಯಾ ಗ್ರಂಥದಲ್ಲಿ ಬೌದ್ಧ ಸಿದ್ಧಾಚಾರ್ಯರ ತಾಲಿಕೆಯಲ್ಲಿ ಮತ್ತು ವಂಶವೃಕ್ಷದಲ್ಲಿ ನಾಥಸಿದ್ಧರ ಹೆಸರುಗಳು ಇರುವುದು ಇತ್ಯಾದಿ. ಬೌದ್ಧರ ಪ್ರಜ್ಞಾ ಮತ್ತು ಉಪಾಯಗಳು ನಾಥರ ಶಿವ ಮತ್ತು ಶಕ್ತಿ ಸಂಬಂಧದಿಂದ ಒಂದೇ ಬಗೆಯ ತಿಳುವಳಿಕೆ ಕಂಡುಬರುತ್ತದೆ. ಬೌದ್ಧರ ಕರುಣಾ ಮತ್ತು ಶೂನ್ಯತೆಯ ಮಿಲನದಲ್ಲಿ 'ಮಹಾಸುಖ' ಅನುಭೂತವಾಗುವದು. ನಾಥರ ಶಿವ ಮತ್ತು ಶಕ್ತಿಯ ಮಿಲನದಲ್ಲಿ ಸಾಮರಸ್ಯದ ಉದಯವಾಗುವದು. ಬೌದ್ಧರ ಸಹಜಿಯಾ ರಹಸ್ಯವಾದದೊಡನೆ ಹಿಂದೂತಂತ್ರದ ಅಪೂರ್ವ ಮಿಲನವು ನಾಥಪಂಥದಲ್ಲಿ ಕಂಡುಬರುವದು. ಬೌದ್ಧ ಸಹಜಿಯಾ ಸಾಧನೆಯಲ್ಲಿ ಮೇಲಿಂದ ಮೇಲೆ 'ಚಂದ್ರ-ಸೂರ್ಯ'ರ ಉಲ್ಲೇಖವು ಕಂಡುಬರುತ್ತದೆ. ನಮ್ಮ ನಾಥಸಿದ್ಧ ಹಾಡಿಪಾನೂ ಚಂದ್ರ-ಸೂರ್ಯರನ್ನು ಕುಂಡಲರೂಪದಿಂದ ಧಾರಣಮಾಡುತ್ತಿದ್ದನು. ಚಂದ್ರಸೂರ್ಯರ ಮಿಲನದಿಂದ 'ಆನಂದಾನುಭೂತಿ' ವರ್ಣನೆಯು ಉದ್ದೇಶವಾದರೂ ಬೌದ್ಧ ಸಹಜಿಯಾರ ಸಾಂಧ್ಯ ಅರ್ಥಾತ್ ಅಭಿಸಂಧಿತ ಭಾಷೆಯಿಂದ ಆ ಸಾಧನವನ್ನು ಗುಪ್ತವಾಗಿಯೇ ಇಟ್ಟಿರುತ್ತಾರೆ.

ಬೌದ್ಧತಂತ್ರಗಳಲ್ಲಿ ದಶಸಿದ್ಧಿ, ಅಷ್ಟಾದಶಸಿದ್ಧಿ ಮೊದಲಾದ ನಾನಾ ಪ್ರಕಾರದ ಸಿದ್ಧಿಗಳ ಮಾತು ಇರುತ್ತದೆ. ಗೋರಕ್ಷನ 'ವಾಯುಮಾರ್ಗ'ದಲ್ಲಿ ಗಮನವೂ ಒಂದು ವಿಶೇಷ ಸಿದ್ಧಿಯು. ಗೋಪೀಚಂದ್ರನ ಗಾನದಲ್ಲಿ ದೊರೆಯುವದು :

"ಹೇನಕಾಲೇ ಪೂರ್ವೇತ ಗೋರ್ಖ ಪಶ್ಚಿಮೇತೆ ಯಾ ಏ।
ಬಾರ ಬಚ್ಛರ ಧರಿ ಗೋರ್ಖಶೂನ್ಯೇತೇ ಭ್ರಮ ಏ॥

ಗೋರಕ್ಷವಿಜಯ ಗ್ರಂಥದಲ್ಲಿ :

'ಏ ಬಲಿಯಾ ಜತಿನಾಥ ಆಸನ ಕರಿಲ।
ಲಂಗ ಮೋಹಾಲಂಗ ದುಇ ಸಂಹತಿ ಲಇಲ॥
ಆಸನ ಕರಿಯಾ ನಾಥ ಶೂನ್ಯೇ ಕೈಲ ಭರ।
ಸಾಚನ ಉಡ ಏ ಜೇನ ಗಗನ ಉಪರ॥
ಆಡೇ ಆಡೇ ಚಾಹೇನಾಥ ಶೂನ್ಯೇ ಭರಕಾರಿ ।

ಗೋರಕ್ಷನಾಥನು ಶೂನ್ಯದಲ್ಲಿ ಭಾರಕೊಟ್ಟು ಸಾಚನ ಅರ್ಥಾತ್ ಬಾಜಪಕ್ಷಿಯಂತೆ ದೇಶದಿಂದ ದೇಶಾಂತರಕ್ಕೆ ಗಮನಮಾಡಹತ್ತಿದನು. ಇದೇ ಅವನ ವಿಭೂತಿ ಅಥವಾ ಸಿದ್ಧಿ.

ಬೌದ್ಧ ಸಹಜಿಯಾರಾ ಉತ್ತರ ಸಾಧಿಕಾ ತೆಗೆದುಕೊಂಡು ಸಾಧನೆ ಮಾಡುತ್ತಿದ್ದರು. ನಾಥಮಾರ್ಗದಲ್ಲಿ ವಜ್ರೋಲಿ, ಸಹಜೋಲಿ ಮೊದಲಾದ ಮುದ್ರಾಗಳ ಸಾಧನೆ ಇದ್ದರೂ ಶಕ್ತಿ ತೆಗೆದುಕೊಂಡು ಸಾಧನದ ಯಾವ ಇಷ್ಟ ಇಂಗಿತ ಪಡೆಯಲಿಲ್ಲ. ಕದಳೀರಾಜ್ಯದಲ್ಲಿ ಮತ್ಸ್ಯೇಂದ್ರನ ಪತನವು ಸುವಿದಿತವಾಗಿದ್ದರೂ ಗೋರಕ್ಷನಾಥನಿಗೆ ಮಹಾದೇವಿಯೂ ಅವನ ಚಲನೆಯಲ್ಲಿ ಮುಗ್ಧ ಮಾಡಲು ಶಕ್ಯವಾಗಲಿಲ್ಲ. ಪಕ್ಷಾಂತರದಲ್ಲಿ ಗೋರಕ್ಷನಾಥನು ತನ್ನ ಸ್ತ್ರೀಯಳಿಗೆ ಮಾತೃಸಂಬೋಧನೆ ಮಾಡುತ್ತಾನೆಂಬುದನ್ನೂ ನೋಡುವೆವು. ವಿವಾಹ ರಾತ್ರಿಯಲ್ಲಿ ತನ್ನ ಜ್ಞಾನಬಲದಿಂದ ಅವನು

"ಛಯ ಮಾಸೇರ ಶಿಶು ಹಇಲ ಮಂದಿರ ಭಿತರ ॥
ದುಗ್ಧ ಖಾಇ ಬಾರ ಚಾಹೇ ಕಾಂದೇ ಓಯಾ ಓಯಾ ।
ತಾ ದೇಖಿಯಾ ರಾಜ-ಕೈನ್ಯಾಹಇಲ ಆಚಾ ಭೂಯಾ ॥

ಗೋರಕ್ಷನಾಥನ ಅತುಲನೀಯ ಸಂಯಮದಿಂದ ಭೂಷಿತವಾದ ಚರಿತ್ರವೇ ಸಂಭವತಃ ಗುರು ಮತ್ಸ್ಯೇಂದ್ರನಿಗಿಂತ ಶಿಷ್ಯನ ಅಧಿಕ ಪ್ರಭಾವಕ್ಕೆ ಕಾರಣವು. ಆದರೂ ಮತ್ಸ್ಯೇಂದ್ರನು ಪ್ರಿಯ ಶಿಷ್ಯನಿಗೆ ತ್ಯಾಗ-ಭೋಗಗಳ ರಹಸ್ಯದ ಶಿಕ್ಷಣವನ್ನು ಕೊಡುವದಕ್ಕೋಸುಗ ಸ್ವೇಚ್ಛೆಯಿಂದ ಈ ಪತನದ ಅಭಿನಯವನ್ನು ಮಾಡಿ, ಶಿಷ್ಯನನ್ನು ವಿಭ್ರಾಂತನನ್ನಾಗಿ ಮಾಡುತ್ತಾನೆ. ಹೀಗೆ ಮತಾ-ಮತಗಳು ಪ್ರಚಲಿತವಿರುತ್ತವೆ. ನಾಥ ಯೋಗಿಗಳ ಆದರ್ಶವು 'ತ್ಯಾಗ ಮತ್ತು ಭೋಗ'ದ ಸಾಮಂಜಸ್ಯವು. ನಾಥಲಕ್ಷಣವು ಹೀಗೆ ವರ್ಣಿತವಾಗಿರುತ್ತದೆ:

'ಏಕ ಹಸ್ತೇ ಧೃತ ತ್ಯಾಗೋ ಭೋಗೈಶ್ಚೈಕ ಕರೇ ಸ್ವಯಂ ।
ಅಲಿಪ್ತಸ್ತ್ಯಾಗ ಭೋಗಾಭ್ಯಾಮ್॥

ಅರ್ಥಾತ್- ಯಾವನ ಒಂದು ಹಸ್ತದಲ್ಲಿ ತ್ಯಾಗವು ಮತ್ತೊಂದು ಹಸ್ತದಲ್ಲಿ ಭೋಗವು ಧೃತ; ಮತ್ತು ಭೋಗ ಹಾಗು ತ್ಯಾಗದಿಂದ ಯಾವನು ಅಲಿಪ್ತನೋ ಅವನೇ ನಾಥ ಸ್ವರೂಪನು.

ಮಹಾಸಿದ್ಧರು ಗಾರ್ಹಸ್ಥ್ಯಧರ್ಮವನ್ನು ಪಾಲನೆಮಾಡಲಿಲ್ಲ. ಅವರು ಅವಧೂತರು, ಜ್ಞಾನವೇ ಅವರ ದಂಡವು, ತನ್ಮಯತಾ ಯೋಗರೂಪ ಸೂತ್ರವೇ ಅವರ ಉಪವೀತವು. ಪರಮಾತ್ಮನಲ್ಲಿ ಸ್ಥಿತಿಯೇ ಅವರ ಸಂಧ್ಯೆಯು. ಇವರ ಪರಮಾತ್ಮನು ದ್ವೈತಾದ್ವೈತದ ಸಗುಣ, ನಿರ್ಗುಣದ ಅತೀತನು. ಅವನು ವಿಶ್ವೋತ್ತೀರ್ಣ ಮತ್ತು ನಾಥಸ್ವರೂಪನು. ತನ್ನೊಡನೆ ಈ ಪರಮಾತ್ಮನ ಏಕತ್ವದ ಉಪಲಬ್ಧಿಯೇ ನಾಥಪಂಥದ ಆದರ್ಶವು. ಶಾಸ್ತ್ರಪಾಠದಿಂದ ಕೇವಲ ಜ್ಞಾನಾರ್ಜನ ಅಥವಾ ಅನುಪಯುಕ್ತ ಬಹು ಶಿಷ್ಯಗ್ರಹಣವು ನಾಥಗುರುವಿನ ಆದರ್ಶವಲ್ಲ. ಮಹಾಜ್ಞಾನ ಅರ್ಥಾತ್ ಯೋಗಯುಕ್ತ ಜ್ಞಾನವನ್ನು ಸಂಪಾದಿಸಿ ಕಾಯಾ ಸಾಧನದಿಂದ ಅಜರ-ಅಮರತ್ವ ಪ್ರಾಪ್ತಿ ನಾಥರ ಪ್ರೇಯವು.

ಗೋರಕ್ಷ ರಚಿತವಾದ 'ಅಮರೌಘ ಶಾಸನ'ದಲ್ಲಿ ಮೋಕ್ಷಸಂಬಂಧದ ಆವ ಆದರ್ಶವು ಇರುವದೋ ಅದೂ ಸಿದ್ಧಯೋಗಿಗಳ ವೈಶಿಷ್ಟ್ಯವು. ಗೋರಕ್ಷನು ಹೇಳುತ್ತಾನೆ-ಶಬ್ದಬ್ರಹ್ಮದ ಪಾರದರ್ಶಿತೆಯಿಂದ ಪರಬ್ರಹ್ಮದ ಜ್ಞಾನವಾಗುವದು. ಅತ ಏವ 'ಸರ್ವಂ ಪರಿತ್ಯಜ್ಯ ಶಬ್ದಬ್ರಹ್ಮ ಸದಾಭ್ಯಾಸೇತ್', ವಾಯುವನ್ನು ಆಶ್ರಯ ಮಾಡಿಯೇ ಈ ಶಬ್ದಹೀನ ನಾದದ ಉತ್ಪತ್ತಿಯಾಗುವದು. ಶಬ್ದಚೈತನ್ಯದಿಂದ ದೇಹದಲ್ಲಿಯ ಸುಪ್ತಕುಂಡಲಿನಿಯು ಜಾಗ್ರತವಾಗಿ, ಷಟ್‌ಚಕ್ರಗಳನ್ನು ಭೇದಿಸಿ ಮಸ್ತಕದಲ್ಲಿಯ ಸಹಸ್ರಾರಚಕ್ರದಲ್ಲಿ ಶಿವಸ್ಥಾನದಲ್ಲಿ ಮಿಲಿತವಾಗಲು, ಯೋಗಿಗೆ ಯಾವ ದೈಹಿಕ ನಿಶ್ಚಲ ಪ್ರಾಪ್ತಿಯಾಗುವದು ಮತ್ತು ಯಾವ ಮಿಲನಾನಂದ ಅನುಭವವಾಗುತ್ತದೆ, ನಾಥಮತದಲ್ಲಿ ಅದೇ ಮಹಾಸುಖವು. ಈ ಅನಿರ್ವಚನೀಯ ಅವಸ್ಥಾ ಲಾಭದಲ್ಲಿಯೇ ಸಾಧಕನು ಉನ್ಮುಖನಾಗಿರುತ್ತಾನೆ. ಅನಂತರದಲ್ಲಿ ಅದೇ ಆತ್ಮ ಸಾಕ್ಷಾತ್ ಲಾಭ ಮೂಲಕ ದೇಹಕ್ಕೆ ಯೋಗಿಯು ಅಜರ-ಅಮರ ಮಾಡಿ ಇಡುವದಕ್ಕೋಸುಗ 'ಖೇಚರೀ ಮುದ್ರೆ'ಯ ಸಾಧನ ಮಾಡುತ್ತಾನೆ. ಇದರ ಫಲದಿಂದ ಯೋಗಿಯ ಸರ್ವಪ್ರಕಾರ ವೃತ್ತಿಗಳ ನಿರೋಧವಾಗುವದು. ಹಾಗು ಮರಣ ಭಯವಿರುವದಿಲ್ಲ. ಖೇಚರೀ ಮುದ್ರೆಯ ಸಾಧನ ಫಲದಿಂದ ಜ್ಞಾನಪೂರ್ವಕ ಚಂದ್ರಾಮೃತವನ್ನು ಗ್ರಹಣಮಾಡಿ ಯೋಗಿಯು ಕಾಲಜಯೀ ಆಗುವನು. ಆದರೆ ಸಾಂಸಾರಿಕ ಅಜ್ಞಾನಿ ಮಾನವನು ಈ ಅಮೃತವನ್ನು ಗ್ರಹಣಮಾಡದೆ ನಷ್ಟಮಾಡಿ ಬಿಡುತ್ತಾನೆ.

ನಾಥಪಂಥದ ಗ್ರಂಥದಲ್ಲಿ ಇರುತ್ತದೆ: 'ಅಜರಾಮರ ಪಿಂಡೋ ಯೋ ಜೀವನ್ಮುಕ್ತಃಸ ಏವಹಿ.' ಅರ್ಥಾತ್ ಯಾರ ಪಿಂಡ ಅಥವಾ ದೇಹವು ಅಜರವು, ಅಮರವು ಅವನೇ ಜೀವನ್ಮುಕ್ತನು. ಜೀವನ್ಮುಕ್ತ ಯೋಗಿಯೆಂದರೆ ಪಾರ್ಥಿವ ದೇಹಪಾತದ ಮೊದಲೇ ಯಾರಿಗೆ ಮುಕ್ತಿಯಾಗಿರುತ್ತದೆ, ಇಂತಹ ಯೋಗಿಯು. ಅವನು ಜೀವಿತನಾಗಿದ್ದು ಮುಕ್ತನು ಅರ್ಥಾತ್ ಕರ್ಮಫಲದಿಂದ ಅಬದ್ಧನಲ್ಲ. ಪಾರ್ಥಿವ ಮತ್ತು ಅನಂತರದಲ್ಲಿ ಸೂಕ್ಷ್ಮದೇಹದ ನಾಶದ ತರುವಾಯ ಯಾವ ಮುಕ್ತಿ ಲಾಭವಾಗುವದೋ ಅದು ವಿದೇಹಮುಕ್ತಿಯೆಂಬ ಹೆಸರಿನಿಂದ ಪರಿಚಿತವು. ಜೀವನ್ಮುಕ್ತ ಯೋಗಿಯ ಪ್ರಾರಬ್ಧಕರ್ಮದ ಫಲದಿಂದಲೇ ಸ್ಥೂಲದೇಹವು ಇರುತ್ತದೆ. ಅವನು ಬಯಸಿದಷ್ಟು ದಿವಸ ಶರೀರಧಾರಣ ಮಾಡಿದರು ಸಹ ಪದ್ಮಪತ್ರ ಜಲದಂತೆ ನಿರಾಸಕ್ತನಾಗಿ ಸಂಸಾರದಲ್ಲಿ ಇರುತ್ತಾನೆ. ದೇಹ ಶುದ್ಧವಾದರೂ ಜೀವನ್ಮುಕ್ತನಾಗುವನು. ಜೀವನ್ಮುಕ್ತ ಯೋಗಿಯು ಒತ್ತಟ್ಟಿಗೆ ವಿಶ್ವದೊಡನೆ ಯುಕ್ತನಾದರೂ ವಿಶ್ವಾತೀತದೊಡನೆ ಸಂಯುಕ್ತನು. ಈ ಬಗೆಯಾಗಿ ಅವನು ವಿದೇಹಮುಕ್ತಿಯ ಪ್ರತೀಕ್ಷೆಯಲ್ಲಿ ಇರುತ್ತಾನೆ. ಜೀವನ್ಮುಕ್ತಿಯ ನಿಮಿತ್ತ ಶಾಸ್ತ್ರಜ್ಞಾನ ಪ್ರತಿಬಂಧಕ ಸ್ವರೂಪ ಯೋಗಾಭ್ಯಾಸದಿಂದ ಶಿವ ಮತ್ತು ಶಕ್ತಿಯ ಅವಿಮಿಶ್ರ ಸತ್ತೆಯ ಅನುಭವವೇ ಈ ಪ್ರಕಾರ ಮೋಕ್ಷಲಾಭದ ಉಪಾಯವು. ಜೀವ ಮತ್ತು ಶಿವನ

ಅಭಿನ್ನತ್ವವೇ ಜೀವದ ಆದಿ ಅವಸ್ಥೆ. ಸಂಸಾರಚಕ್ರದಲ್ಲಿ ಅಬದ್ಧವಾಗಿ ಮಾನವನು ಆ ಸಂಗತಿಯನ್ನು ಮರೆತುಬಿಡುತ್ತಾನೆ. ಅಂತೇ ಸಂಸಾರಿ ಮಾನವನ ಪಕ್ಷದಲ್ಲಿ ಸದ್ಗುರುವಿನ ಪ್ರಯೋಜನೀಯತೆಯು ಇರುತ್ತದೆ.

**ಗುರು ತತ್ತ್ವ:**

ನಾಥಪಂಥದ ಮತದಲ್ಲಿ ಸದ್ಗುರುವೇ ಆ ದ್ವೈತಾದ್ವೈತ ವಿಲಕ್ಷಣ ಪರಮಪದದ ಪ್ರಾಪ್ತಿಯ ಉಪಾಯವನ್ನು ಹೇಳಿಕೊಡಲು ಸಮರ್ಥನು. 'ತೇನ ಸಂದರ್ಶಿತೇನ ಮಾರ್ಗೇ ಪ್ರಾಪ್ಯತೇ ಪರಮಪದಮ್'. ದಾದು ಹೇಳುತ್ತಾನೆ- 'ದಾದು ಏಸಾ ಗುರು ಮಿಲ್ಯಾ ಜೀವಬ್ರಹ್ಮಕರಿಲೇ ಇ।

ಸದ್ಗುರುವು ಪಕ್ಷಪಾತ ವಿನಿರ್ಮುಕ್ತನು. ವರ್ಣಾಶ್ರಮಾತೀತನು. ಗುಣಾಭಿಮಾನ ರಹಿತನು. ಮತ್ತು ಸಕಲಗುರುಗಳ ಗುರುವು. ಅವನ ವಚನಗಳಲ್ಲಿ ವೇದ, ಹೆಜ್ಜೆ ಹೆಜ್ಜೆಯಲ್ಲಿ ತೀರ್ಥ. ಅವನು ಮೌನವ್ಯಾಖ್ಯಾನದಿಂದಲೇ ಶಿಷ್ಯನಿಗೆ ಉಪದೇಶವನ್ನು ಮಾಡುತ್ತಾನೆ. ಶಿಷ್ಯಗ್ರಹಣದ ಮೊದಲೇ ಗುರುವು ಅವನ ಯೋಗ್ಯತೆಯನ್ನು ವಿಚಾರ ಮಾಡಿಕೊಳ್ಳುತ್ತಾನೆ. ಶಿಷ್ಯನ ಪಕ್ಷದಲ್ಲಿಯೂ ಏಕಮಾತ್ರ ಗುರುಕೃಪೆಯಲ್ಲಿಯೇ ಸಿದ್ಧಿಲಾಭವು ಸಂಭವವು. 'ಸಿದ್ಧಿರ್ಗುರುವಾಕ್ಯೇನ ಲಭ್ಯತೇ'.

ನಾಥಯೋಗಿಗಳು ಶಿವಸದೃಶವಾಗುವ ಸಲುವಾಗಿ ಯಾವ ಸಾಧನೆ ಮಾಡುತ್ತಾರೆ, ಅದು ಸಹಜಾವಸ್ಥಾಲಾಭವೆಂದು ವರ್ಣಿತವಾಗಿರುತ್ತದೆ. ಅಂತೇ ಇವರು ಹೇಳುತ್ತಾರೆ-

'ದುರ್ಲಭಾ ಸಹಜಾವಸ್ಥಾ ಸದ್ಗುರೋಃ ಕರುಣಾಂ ವಿನಾ।'

ಈ ಬಗೆಯಾಗಿ ಅವರು ಹೆಜ್ಜೆಜ್ಜಿಗೆ ಸದ್ಗುರುವಿನ ಆಶ್ರಯವನ್ನು ಗ್ರಹಣಮಾಡಲಿಕ್ಕೆ ಉಪದೇಶಮಾಡಿದ್ದಾರೆ. ಅವನು ಈ ಭವಸಮುದ್ರವನ್ನು ದಾಟುವ ಏಕಮಾತ್ರ ಚುಕ್ಕಾಣಿಯಾಗುವನು. ಸದ್ಗುರುವು ಶಿವ-ಶಕ್ತಿಗಳ ಪಾರ್ಥಕ್ಯವನ್ನು ಪರಿಹಾರಮಾಡಿ ಆ ತತ್ವಾತೀತ-ಅವರ್ಣನೀಯ 'ಯಾ ದೃಶ ಏವ ತಾ ದೃಶ ಏವ' ನಾಥಸ್ವರೂಪದಲ್ಲಿ ಆತ್ಮಸಮರ್ಪಣೆಯ ಹೊರತು ಅನ್ಯಗತಿ 'ನಾಥಪಂಥ'ದಲ್ಲಿ ಇಲ್ಲ. ಸದ್ಗುರುವೇ ಆ ನಾಥ ಸ್ವರೂಪವನ್ನು ತಿಳಿಸಿಕೊಡಲು ಸಮರ್ಥನು.

**ಪಿಂಡ ತತ್ವ ಮತ್ತು ದೇಹತತ್ತ್ವ:**

ನಾಥರು ಹೇಳುತ್ತಾರೆ- ಹಲವು ಸ್ಥೂಲ ಮತ್ತು ಸೂಕ್ಷ್ಮ ಆವರಣಗಳಿಂದ ಜೀವನು ಆವೃತನಾಗಿ ಆ ಪರಮಸತ್ಯ, ಪರಮಪದದಿಂದ ವಿಚ್ಛಿನ್ನವಾಗಿರುತ್ತಾನೆ. ಈ ಎಲ್ಲ ಆವರಣ ಶಕ್ತಿಗಳು ನಾನಾ ರೂಪಗಳು ಈ ಜೀವನಲ್ಲಿ ಮತ್ತು ಶಿವನಲ್ಲಿ ಭೇದದ ಕಾರಣ ಸ್ವರೂಪ. ಜೀವನು ಸ್ವಪ್ರಯತ್ನದಿಂದ ಆ ಎಲ್ಲ ಶಕ್ತಿಗಳ ಪರಿಶುದ್ಧಿ ಮತ್ತು ಆವರಣಗಳನ್ನು ಅಪಸಾರಣ ಮಾಡಿ, ಸ್ವಸ್ವರೂಪದಲ್ಲಿ ಪ್ರತಿಷ್ಠಿತವಾಗಲು ಶಕ್ಯವು. ಈ ಬಗೆಯಾಗಿ ಜೀವನು ಮುಕ್ತಿಯನ್ನು ಪಡೆಯುವನು. ಈ ಮುಕ್ತಿಯು ಸಾಧನದಿಂದ ಸಾಧ್ಯವು. ಅಂತೇ ನಾಥರು ಜೀವನ ಸ್ವರೂಪವೇನು? ಎಲ್ಲಿಂದ ಜೀವನ ಉತ್ಪತ್ತಿಯಾಯಿತು? ಈ ಎಲ್ಲ ಸಂಗತಿಗಳ ಆಲೋಚನಾ ಪ್ರಸಂಗದಲ್ಲಿ ಆ ವಿಶ್ವೋತ್ತೀರ್ಣ ಪರಮ ಸಾಮ್ಯಾವಸ್ಥೆಯಿಂದ ಯಾವ ಗರ್ಭಪಿಂಡದಲ್ಲಿ ಭ್ರೂಣರೂಪದಿಂದ ಜೀವವು ಸ್ಥೂಲರೂಪದಲ್ಲಿ ಆವಿರ್ಭಾವವಾಗುವದು ಅಲ್ಲಿಯ ವರೆಗೆ ಷಟ್‌ಪಿಂಡದ ಆವಿರ್ಭಾವದ ಕಲ್ಪನೆಯನ್ನು ಮಾಡಿರುತ್ತಾರೆ. ಇದೇ ಪಿಂಡತತ್ತ್ವ ವಿಚಾರವು. ಪಿಂಡವೆಂದರೆ ಸೃಷ್ಟಪದಾರ್ಥವು. ಜೀವದೇಹವು ಈ ಕಾರಣದಿಂದ 'ಪಿಂಡ' ಎಂಬ ಹೆಸರಿನಿಂದ ಅಭಿಹಿತವಾಗುತ್ತದೆ. ಈ ಬಗೆಯಾಗಿ ನಿರಾಕಾರದಿಂದ ಸಾಕಾರ, ಸೂಕ್ಷ್ಮದಿಂದ ಸ್ಥೂಲ ಬ್ರಹ್ಮಾಂಡದ ಉತ್ಪತ್ತಿ ವರ್ಣನೆಯು ಮಾಡಲ್ಪಟ್ಟಿರುತ್ತದೆ. ಆದರೆ ಬ್ರಹ್ಮಾಂಡವು ಸರ್ವಾಕಾರ ರೂಪದಲ್ಲಿ ಸ್ಫುರಿತವಾದರೂ ಪರಮಶಿವನು ನಿತ್ಯಕಾಲ ತನ್ನ ಪೂರ್ಣರೂಪದಲ್ಲಿಯೇ ಅವಶಿಷ್ಟವಾಗಿರುತ್ತಾನೆ.

ಮತ್ತು ನಾಥರು ಹೇಳುತ್ತಾರೆ- ಪಿಂಡ ಅಥವಾ ದೇಹದೊಡನೆ ಬ್ರಹ್ಮಾಂಡದ ಸಂಬಂಧವನ್ನು ತಿಳಿಯುವದು ಕರ್ತವ್ಯವು. ಯಾಕೆಂದರೆ ಯಾವದು ಬ್ರಹ್ಮಾಂಡದಲ್ಲಿ ಇರುವದೋ ಅದು ಈ ದೇಹಭಾಂಡದಲ್ಲಿ ಅರ್ಥಾತ್ ಈ ಕ್ಷುದ್ರ ದೇಹರೂಪ ಭಾಂಡೆಯಲ್ಲಿ ಸ್ವಲ್ಪ ಸ್ವಲ್ಪ ಇರುವದು. ಅದು ಬ್ರಹ್ಮಾಂಡದ್ದೇ ಪ್ರತೀಕವು. ಅದಕ್ಕಿಂತ ಹೆಚ್ಚು ಈ ದೇಹದಲ್ಲಿ ಏನೂ ಇಲ್ಲ. ಬ್ರಹ್ಮಾಂಡದಲ್ಲಿ ಯಾವ ಶಕ್ತಿ ಇರುವದೋ ಮಾನವದೇಹದಲ್ಲಿ ಅದೇ ಕುಂಡಲಿನಿ ರೂಪದಿಂದ ವಿರಾಜಿತವು. ಈ ಶಕ್ತಿಯ ವಿಕಾಸದ ಸಲುವಾಗಿಯೇ ಜೀವನಿಗೆ ಯೋಗಸಾಧನದ ಆವಶ್ಯಕತೆ ಇರುವದು. ಈ ಶಕ್ತಿಯಿಂದಲೇ ಮಾನವನು ಪರಮಪದದ ಸಂಧಾನವನ್ನು ಪಡೆಯುವನು. ಬ್ರಹ್ಮಾಂಡದ ವಿಭಿನ್ನ ಸ್ತರಗಳೊಡನೆ ಮಾನವ ದೇಹಾಶ್ರಿತ ವಿಭಿನ್ನ ಚಕ್ರಗಳ ಸಂಬಂಧವು ನಿರ್ಣೀತವಾಗಿರುತ್ತದೆ. ಇವುಗಳಲ್ಲಿ ಶೇಷಚಕ್ರವು ಸಹಸ್ರದಲ ಮಂಡಲದಲ್ಲಿ ಯೋಗದಿಂದ ಪ್ರತಿಷ್ಠಿತವಾಗಲು ಸಮರ್ಥನಾದರೆ ಸಾಧಕನಿಗೆ ಶತ್ರು-ಮಿತ್ರ, ಪಿಷ್ಟಾ - ಚಂದನಗಳಲ್ಲಿ ಭೇದಾಭೇದ ಉಳಿಯುವದಿಲ್ಲ. ಆಗ ಅವನು ಸ್ವಯಂಪೂರ್ಣ ಸ್ವರೂಪ 'ಕುಲಾಚಾರಿ' ಆಗುವನೆಂದು 'ಕೌಲ' ಹೆಸರಿನಿಂದ ಅಭಿಹಿತವಾಗುವನು. ಈ ಅವಸ್ಥೆಯಲ್ಲಿ ಬುದ್ಧಿಕೃತ ಕರ್ಮಗಳು ಲುಪ್ತವಾಗಿ ಹೋಗುವವು. ಹಾಗು ಯೋಗೀಕುಲದ ಅರ್ಥಾತ್ ಬ್ರಹ್ಮಶಕ್ತಿಯ ಆಟದ ಗೊಂಬೆಯಾಗಿ ವಿಚರಣ ಮಾಡುತ್ತಾನೆ. ಶ್ರೀ ಮತ್ಸ್ಯೇಂದ್ರನಾಥನು ತನ್ನ ಪುಸ್ತಕದಲ್ಲಿ ತನ್ನನ್ನು 'ಕೌಲ' ಎಂದು ಹೇಳಿಕೊಂಡಿದ್ದಾನೆ.

ನಾಥರು ದೇಹದಲ್ಲಿಯ ಚಕ್ರದ ಧ್ಯಾನದಿಂದ ಪಿಂಡ ಮತ್ತು ಬ್ರಹ್ಮಾಂಡದ ಹಾಗೂ ಸ್ಥೂಲ ಮತ್ತು ಸೂಕ್ಷ್ಮದ ಸಂಬಂಧವನ್ನು ಸ್ಥಾಪನೆಮಾಡುತ್ತಿದ್ದರು ಎಂಬಲ್ಲಿ ಸಂಶಯವಿಲ್ಲ. ಈ ಯುಗದಲ್ಲಿ ಈ ಎಲ್ಲ ಸಂಗತಿಗಳು ಅಸ್ವಾಭಾವಿಕವೆಂದು ಮನದಲ್ಲಾದರೂ, ಪ್ರಾಚೀನ ಕಾಲದಲ್ಲಿ ಸಂತ ಸಂಪ್ರದಾಯದಲ್ಲಿ - ಈಗಿನ ಪಾಶ್ಚಾತ್ಯ ದೇಶಗಳ ರಹಸ್ಯವಾದಿಗಳಲ್ಲಿಯೂ - ಪಿಂಡದಲ್ಲಿ ಬ್ರಹ್ಮಾಂಡದ ಕಲ್ಪನೆ ಪ್ರಚಲಿತವಿತ್ತು.

**ಶಿವ-ಶಕ್ತಿ ಮತ್ತು ಜೀವಕಲ್ಪನೆ:**

ಶಿವನೇ ಜೀವ, ಜೀವನೇ ಶಿವನು. ಇದು ಪ್ರಚಲಿತ ಸಂಗತಿಯು. ಮೊದಲೇ ಹೇಳಲ್ಪಟ್ಟಿದೆ: ಪಿಂಡಗಳು ಸ್ಪಷ್ಟ ಪದಾರ್ಥಗಳು. ಅತಏವ ಸೃಷ್ಟಿಯಲ್ಲಿ ಕ್ರಿಯೆಯು ಇರುತ್ತದೆಂದು ಒಪ್ಪಲೇಬೇಕಾಗುತ್ತದೆ ಮತ್ತು ಕಾರ್ಯವಿದ್ದರೆ ಅದರ ಕಾರಣವು ಇರುವದು, ಸೃಷ್ಟಿರೂಪಾಶಕ್ತಿಯ ಕಾರಣವು ಅನಂತಶಕ್ತಿಮಾನ ಶಿವನು ಆಗಿರುವನು. ಈ ಶಿವ ಮತ್ತು ಶಕ್ತಿ ಚಂದ್ರ ಹಾಗೂ ಚಂದ್ರಿಕೆಯಂತೆ ಒಂದು ಹಾಗೂ ಅಭಿನ್ನವು. ಶಕ್ತಿಯ ಪ್ರಸಾರದಿಂದಲೇ ಸೃಷ್ಟಿ, ಸಂಕೋಚನದಿಂದ ಸಂಹಾರವು. ನಾಥಪಂಥದ ಪಿಂಡ ಮತ್ತು ಬ್ರಹ್ಮಾಂಡದ ಸಂಯೋಗದಿಂದ ಜೀವನು ಯಾವ ಶಿವತ್ವಲಾಭದ ಪ್ರಯಾಸ ಮಾಡುತ್ತಾನೆ? ಅದು ಯಾವ ರೀತಿಯಿಂದ ಸಂಭವ? ಸಂಕ್ಷೇಪವಾಗಿ ಹೇಳಲು ಹೋದರೆ, ನಾಥರೂಪಿಣೀಶಕ್ತಿಯು ಮಾನವನ ಮೂಲಾಧಾರದಲ್ಲಿ ಜಡತೆಯನ್ನು ಹೊಂದಿ ಸುಪ್ತವಾಗಿರುತ್ತದೆ. ಅದರ ಜಡತ್ವವನ್ನು ತೊಲಗಿಸಿ ಶರೀರದಲ್ಲಿಯ ಮಧ್ಯನಾಡಿ ಸುಷುಮ್ನೆಯ ಪಥದಲ್ಲಿ ಚಾಲಿತ ಮಾಡಬೇಕಾಗುವದು. ಆಗ ಆ ಪಥದಲ್ಲಿಯೇ ಮನವು ಶೂನ್ಯದಲ್ಲಿ ಒಯ್ಯಲ್ಪಡುವದು. ಹಾಗೂ ಶಿವತ್ವವು ಪ್ರಾಪ್ತಿಯಾಗುವದು. ಈ ಶೂನ್ಯದ ಧಾರಣೆಯು ಬೌದ್ಧಧರ್ಮದಿಂದ ಪ್ರವೇಶ ಮಾಡಿರುತ್ತದೆ. ಕೆಲ ಕೆಲವರು ಹೀಗೆ ಅನುಮಾನ ಮಾಡಿದರೂ ಅದು ಅಯಥಾರ್ಥವು. ಯಾಕೆಂದರೆ ಋಗ್ವೇದದ ಯುಗದಿಂದ ಆರಂಭಮಾಡಿ ವಿಭಿನ್ನ ಯುಗಗಳಲ್ಲಿ ವಿಭಿನ್ನ ಧರ್ಮಗಳಲ್ಲಿ ಒಂದಿಲ್ಲೊಂದು ಪ್ರಕಾರ ಶೂನ್ಯದ ಉಲ್ಲೇಖವು ಕಂಡುಬರುವದು. ವಿಸ್ತರಿತ ವಿವರಣವು ಈ ಸ್ಥಲದಲ್ಲಿ ಅಪ್ರಾಸಂಗಿಕವು. ಆದರೆ ನಾಥಪಂಥದ ಶ್ವಾಸ-ಪ್ರಶ್ವಾಸಗಳ ನಿಯಂತ್ರಣದಿಂದ ಸುಷುಮ್ನಾ-ದ್ವಾರ ಮುಕ್ತವಾಗಿ ಹೋದರೆ ಯೋಗಿಯು ಶೂನ್ಯಮಯ ಅವಸ್ಥೆಯನ್ನು ಪಡೆಯುವನು. ಆಗ ತತ್ವಗಳು ಅವನಿಗೆ ತೋರುವವು. ವಿಶುದ್ಧ ಶೂನ್ಯವೇ 'ನಿರ್ವಾಣ'ಪದವು. ಇದು ವಾಸನಾ-ಕಾಮನಾಹೀನ, ಕರ್ಮಾಶಯಹೀನ

ತತ್ವಾತೀತ ಅವಸ್ಥೆಯು. ಪಾರಮಾರ್ಥಿಕ ಅವಸ್ಥೆಯೇ 'ಶೂನ್ಯ' ಹೆಸರಿನಿಂದ ಪರಿಚಿತವು. ಶಿವ ಮತ್ತು ಶಕ್ತಿಯ ಪಾರ್ಥಕ್ಯ ಪರಿಹಾರ ಮಾಡಲು ಶಕ್ತವಾದರೆ ಸಾಧಕನು ಈ ಅವಸ್ಥೆಯಲ್ಲಿ ಮುಟ್ಟಲು ಸಮರ್ಥನಾಗುವನು.

ಶಿವಸ್ಯಾಭ್ಯಂತರೇ ಶಕ್ತಿಃ ಶಕ್ತೇರಭ್ಯಂತರೇ ಶಿವಃ ।
ಅಂತರಂ ನೈವ ಪಶ್ಯಾಮಿ ಚಂದ್ರಚಂದ್ರಿಕಯೋರಿವ॥

ಏಕಮಾತ್ರ ಶಕ್ತಿಯ ಸಹಾಯದಿಂದಲೇ ಈ ಪಾರಮಾರ್ಥಿಕ ತತ್ವಾತೀತ ಅವಸ್ಥೆಗೆ ಮುಟ್ಟಲು ಸಂಭವವು.

ಶಬ್ದಯೋಗ ಅಥವಾ ವಾಕ್‌ಯೋಗವು ಈ ಸಾಧನದ ಏಕಮಾತ್ರ ಸಹಾಯವು. ಉಪನಿಷದಾದಿಗಳಲ್ಲಿ ಯಾವ ಏಕಾಕ್ಷರ ನಾಮಸ್ಮರಣದಿಂದ ಬ್ರಹ್ಮಲಾಭವಾಗುವದೆಂದು ಹೇಳಲ್ಪಟ್ಟಿದೆ; ಪ್ರಾಕ್ತನ ನಾಥಪಂಥದಲ್ಲಿಯೂ ಅದರ ವಿಶೇಷ ಸಾಧನವಿತ್ತು. ಪ್ರಾಚೀನ ಆಗಮಶಾಸ್ತ್ರಗಳಲ್ಲಿ ಈ ಏಕಾಕ್ಷರ 'ಓಂ'ಕಾರ ಸಾಧನಕ್ಕೆ ವಾಕ್‌ಯೋಗವೆನ್ನುತ್ತಿದ್ದರು. ಆಧುನಿಕ ಜಗತ್ತಿನಲ್ಲಿ ಶಬ್ದ ವಿಜ್ಞಾನದ ಉತ್ಕರ್ಷಸಾಧಿತವಾಗಿದ್ದರು ಶಬ್ದಬ್ರಹ್ಮದ ತಾತ್ಪರ್ಯವು ಕ್ರಮೇಣ ಅಜ್ಞಾತವಾಗಿಬಿಟ್ಟಿದೆ. ಈ ವಿಶೇಷ ಸಾಧನವೇ ನಾಥಮಾರ್ಗದಲ್ಲಿ ನಾದ-ಬಿಂದು ಸಾಧನದ ಪ್ರಕ್ರಿಯಾರೂಪದಲ್ಲಿ ವರ್ಣಿತವಾಗಿರುತ್ತದೆ. ಇದರಿಂದಲೇ ಶಿವತ್ವ ಪ್ರಾಪ್ತಿಯಾಗುವದು. ನಾದ ಮತ್ತು ಬಿಂದು ವಸ್ತುತಃ ಒಂದೇ ಪದಾರ್ಥವು. ವ್ಯಕ್ತಾವಸ್ಥೆಯಲ್ಲಿ ಯಾವದು ನಾದವೋ ಅದೇ ಅವ್ಯಕ್ತಾವಸ್ಥೆಯಲ್ಲಿ ಬಿಂದುವು. ಪರಬ್ರಹ್ಮದಲ್ಲಿ ಮತ್ತು ಶಬ್ದಬ್ರಹ್ಮದಲ್ಲಿ ಯಾವ ಭೇದವೂ ಇಲ್ಲ. ಪರಮೇಶ್ವರನ ಪ್ರಥಮ ವಿಕಾಸವು ನಾದವು. ಮತ್ತು ಬಿಂದುವಿನಲ್ಲಿ ಅದೇ ಕಾರಣದಿಂದ ಸಾಧಕನ ಪರಮಪದ ಸಾಕ್ಷಾತ್ ಕಾಲದಲ್ಲಿ ಶುದ್ಧಜ್ಯೋತಿ ಮತ್ತು ನಾದಧ್ವನಿಯ ಉಪಲಬ್ಧಿಯಾಗುವದು. ಶಬ್ದಬ್ರಹ್ಮಜ್ಞಾನವೇ ಶ್ರುತವಿದ್ಯಾ. ಆದರೂ ತಪಸ್ಯಾವ್ಯತೀತ ಅದು ಅಧಿಗತವಾಗುವದಿಲ್ಲ. ಗೋಪೀಚಂದ್ರನ ಮಾತೆಯೂ ತನ್ನ ತಪಸ್ಸಿನ ಬಲದಿಂದ ಗೋರ್ಖನಾಥನಿಂದ ಪ್ರಾಪ್ತ ಮಂತ್ರ ಸಾಧನಮಾಡಿ ಮಹಾಜ್ಞಾನದ ಅಧಿಕಾರಿಣಿಯಾದಳು. ಮರಣೋನ್ಮುಖಸ್ವಾಮಿಗೆ ಜೀವನದಾನ ಮಾಡುವ ಸಲುವಾಗಿ ಅವಳು ಹೇಳಿದಳು.

'ಕಿ ಮ ಜ್ಞಾನ ಕಹಿ ದಿಮು ಆದಾಇ ಅಕ್ಷರ।
ಪೃಥಿವಿ ಟಲಿತಿ ನಾಇಬೇ ಜಮ ಘುರ॥

ಆದರೆ ಸ್ತ್ರೀಯಳಿಂದ ಮಂತ್ರವನ್ನು ಸ್ವೀಕರಿಸಲು ರಾಜನು ಒಪ್ಪಲಿಲ್ಲ. ಯಾಕಂದರೆ ಇದು ಅಶಾಸ್ತ್ರೀಯವು. ಫಲದಿಂದ ಯಮದೂತರು ರಾಜನನ್ನು ಒಯ್ದರು. ನಮ್ಮ ವಿಚಾರದಂತೆ ಈ ಎರಡೂವರೆ ಅಕ್ಷರಜ್ಞಾನವು ಓಂಕಾರ ಸಾಧನದ ಇಂಗಿತವು.

**ಉಲ್ಟಾಸಾಧನ ಮತ್ತು ಕಾಯಾಸಾಧನ:**

ಶಬ್ದಯೋಗ ಸಹಾಯದಿಂದ ಅಧೋಮುಖಿಯಾದ ಶಕ್ತಿಯನ್ನು ಯೋಗಿಯು ಊರ್ಧ್ವಮುಖಿಯನ್ನಾಗಿ ಮಾಡುವನು. ಈ ಸಾಧನವೇ 'ಉಲ್ಟಾಸಾಧನ' ಹೆಸರಿನಿಂದ ಪರಿಚಿತವು. ಯಾಕೆಂದರೆ ಸಂಸಾರೀಜನರು ಈ ಮಾರ್ಗದಲ್ಲಿ ಗಮನಮಾಡುವದಿಲ್ಲ. ಇದು ಉಲ್ಟಾಮಾರ್ಗವು. ಮೊದಲು ಹೇಳಲ್ಪಟ್ಟಿದೆ, 'ಕಾಯಾ-ಸಾಧನ'ದಿಂದ ಯೋಗಿಯು ಅಜರ-ಅಮರವಾಗಲು ಪ್ರಯಾಸ ಮಾಡುತ್ತಾನೆ. ಈ ಕಾಯಾಸಾಧನ ಅರ್ಥದಲ್ಲಿ ದೇಹದಿಂದ ಸಾಧನ ಹಾಗೂ ಈ ಸಾಧನದ ಪಕ್ಷದಲ್ಲಿ ಉಲ್ಟಾಸಾಧನ ಅಪರಿಹಾರ್ಯವು. ಗೋರಕ್ಷನಾಥಾದಿ ಮಹಾಯೋಗಿಗಳು ಈ ಸಾಧನ ಬಲದಿಂದಲೇ ಪಿಂಡಸ್ಥೈರ್ಯ ಪಡೆದರು. ತದುಪರಿ ಅವರು ಅವಧೂತರಿದ್ದರು. ಅರ್ಥಾತ್ ಚತುರಾಶ್ರಮದ ಅತೀತರು. ಇವರು ಪಂಚಮಾಶ್ರಮಿಗಳು, ಸರ್ವಾವಸ್ಥಾ ವಿನಿರ್ಮುಕ್ತರು. ಅತಏವ ನಾಥಮತದಲ್ಲಿ ಇವರೇ ಯಥಾರ್ಥಮತದಿಂದ ಶಿವನನ್ನು ತಿಳಿಯುವ ಅಧಿಕಾರಿ ಅಥವಾ ಅವಧೂತರು.

**ವಂಗಸಾಹಿತ್ಯದಲ್ಲಿ ಪ್ರಭಾವ:**

ನಾಥಸಂಪ್ರದಾಯದ ಹಲವು ಪುಸ್ತಕಗಳು ದೊರೆತಿರುತ್ತವೆ. ಅವುಗಳಲ್ಲಿ ಯೋಗಬೀಜ, ಅಮನಸ್ಕ, ಗೋರಕ್ಷಸಿದ್ಧಾಂತಸಂಗ್ರಹ, ಸಿದ್ಧಸಿದ್ಧಾಂತ ಪದ್ಧತಿ, ವಿವೇಕ ಮಾರ್ತಂಡ ಮೊದಲಾದವು. ಅವರ ದರ್ಶನ ಮತ್ತು ಸಾಧನ ತಿಳಿಯಲಿಕ್ಕೆ ಉಪಯುಕ್ತವಾದ ಗ್ರಂಥಾದಿಗಳು ಸಂಸ್ಕೃತದಲ್ಲಿ ರಚಿತ. ಗೋರಕ್ಷಬೋಧ, ಗೋರಕ್ಷನಾಥಜೀಕಾ ಪದ, ಗೋರಕ್ಷಗೋಷ್ಠಿ, ಆತ್ಮಬೋಧ, ಗೋರಕ್ಷ ಉಪನಿಷತ್ ಮೊದಲಾದವುಗಳು ಹಿಂದಿಯಲ್ಲಿ ರಚಿತ್ತವು. ಜೋಧಪುರದ ರಾಜರಾದ ಮಾನಸಿಂಗರು ಗೋರಕ್ಷ ರಚಿತ ಗ್ರಂಥಾದಿಗಳನ್ನು ಸಂಗ್ರಹಿಸಿರುವರು. ಗೋರಕ್ಷನ ಹೆಸರಿನಿಂದ ಇಪ್ಪತ್ತೇಳು ಗ್ರಂಥಗಳು ಪ್ರಚಲಿತವಿರುತ್ತವೆ. ಹರಿದ್ವಾರ, ಮದ್ರಾಸ, ಕಾಶಿ ಮೊದಲಾದ ಸ್ಥಾನಗಳಲ್ಲಿ ನಾಥಸಿದ್ಧರಿಂದ ರಚಿತವಾದ ಹಲವು ಪದಗಳು ಮತ್ತು ಪುಸ್ತಕಗಳು ಈಗ ಸಹ ಸಿಗುತ್ತವೆ. ಅನುಸಂಧಾನ ಮಾಡಿ ಕೆಲವು ಪದ ಮತ್ತು ಪುಸ್ತಕಗಳನ್ನು ನಾವು ಸಂಪಾದಿಸಿರುವೆವು.

ಈಗ ವಂಗಭಾಷೆಯಲ್ಲಿ ರಚಿತವಾದ ಮೀನನಾಥ, ಗೋರಕ್ಷನಾಥ, ಮಯನಾಮತಿ ಮತ್ತು ಗೋಪೀಚಂದ್ರರ ಸಂಬಂಧದಿಂದ ಪುಸ್ತಕಗಳ ಆಲೋಚನೆಯನ್ನು ಮಾಡೋಣ. ವಂಗಭಾಷೆಯಲ್ಲಿ ರಚಿತವಾದ ಪುಸ್ತಕಗಳು ಬಹುಪ್ರಾಚೀನವಲ್ಲ. ಅಧಿಕಾಂಶಗಳು ಹದಿನೆಂಟನೆಯ ಶತಮಾನದಲ್ಲಿ ರಚಿತವು. ವಂಗೀಯ ಸಾಹಿತ್ಯಪರಿಷತ್ತಿನಿಂದ ಪ್ರಕಟವಾದ 'ಗೋರಕ್ಷವಿಜಯ', ಕಲಕತ್ತಾ ವಿಶ್ವವಿದ್ಯಾಲಯದಿಂದ ಪ್ರಕಾಶಿತ 'ಗೋಪೀಚಂದ್ರರ ಪಾಂಚಾಲಿ' ಗೋಪೀಚಂದ್ರನ ಸನ್ಯಾಸ, ಡಾಕಾ-ಸಾಹಿತ್ಯಪರಿಷತ್ತಿನಿಂದ ಪ್ರಕಾಶಿತವಾದ 'ಗೋಪೀ ಚಂದ್ರೇರಗೀತ' ಮತ್ತು ಮಯನಾಮತೀಯ ಗಾನ, ಗ್ರಿಯರಸನ್ನರಿಂದ ರಂಗಪುರ ಮೂಲಕ ಸಂಗ್ರಹೀತ 'ಮಾಣಿಕ ಚಂದ್ರೇರ ಗಾನ' ಪ್ರಭೃತಿಗಳ ಕತೆಯು ಸುಧೀಸಮಾಜಕ್ಕೆ ಅಜ್ಞಾತವಲ್ಲ. ಸುದೂರ ನೇಪಾಳದಲ್ಲಿಯೂ 'ಗೋಪೀಚಂದ್ರನ ಸನ್ಯಾಸ' ವಿಷಯಕ ಬಂಗಾಲೀ ನಾಟಕವು ದೊರೆತಿರುತ್ತದೆ. ಈ ಪುಸ್ತಕವು ಕೆಂಬ್ರಿಜ್ಜ ವಿಶ್ವವಿದ್ಯಾಲಯದಲ್ಲಿ ಪ್ರಯತ್ನಪೂರ್ವಕವಾಗಿ ರಕ್ಷಿತವಾಗಿರುತ್ತದೆ. ವಂಗದೇಶದಲ್ಲಿ, ವಿಶೇಷವಾಗಿ ಪೂರ್ವಪ್ರದೇಶದಲ್ಲಿ ಈಗ ಸಹ ನಾಥಯೋಗಿಗಳ ಪ್ರಭಾವವು ಕ್ಷುಣ್ಣವಾಗಿಲ್ಲ. ಗೋಪೀಯಂತ್ರದ ಸಹಾಯದಿಂದ 'ನಾಥ-ಗೀತಿಕಾ' ಹಾಡುವದು ಈಗ ಸಹ ಪ್ರಚಲಿತವಿರುತ್ತದೆ. ಗೋರಕ್ಷನ ಯೋಗಪ್ರಭಾವದಿಂದಲೇ ಇದು ಸಂಭವವಾಗಿರುತ್ತದೆ. ಈಗ ವಂಗಸಾಹಿತ್ಯದಲ್ಲಿ ಗೋರಕ್ಷನ ಯೋಗಪರಿಚಯ ಸಂಬಂಧವಾಗಿ ಸಂಕ್ಷೇಪದಿಂದ ಆಲೋಚನೆಯನ್ನು ಮಾಡೋಣ.

ಗೋರಕ್ಷವಿಜಯ ಗ್ರಂಥದಲ್ಲಿ ದೇವಿಯು ಮಹಾದೇವನಿಗೆ ಪ್ರಶ್ನೆ ಮಾಡುತ್ತಾಳೆ. ನಾನು ಎಷ್ಟು ಸಾರೆ ಜನ್ಮಿಸುವೆನೋ ಅಷ್ಟುಸಾರೆ ಸಾಯುವೆನು. ನೀನು ಅಮರನು. ಇದರ ಕಾರಣವೇನು? ದೇವಿಯ ಪ್ರಶ್ನಕ್ಕೆ ಶಿವನು ಆಕೆಗೆ ಕ್ಷೀರಸಮುದ್ರದ ದಂಡೆಯಲ್ಲಿ ಅಜರ, ಅಮರ ಆಗುವ ಪರಮತತ್ವವನ್ನು ತಿಳಿಸಿದನು. ಆದರೆ ಆ ಮಹಾಜ್ಞಾನದ ಲಾಭವನ್ನು ಮತ್ಸ್ಯೇಂದ್ರನು ಪಡೆದನು. ಈ ಮಹಾಜ್ಞಾನದಿಂದಲೇ ಮರಣಶೀಲ ದೇಹದ ಪರಿವರ್ತನವು ಸಾಧಿತವಾಯಿತು. ಈ ಸಾಧನವೇ ಕಾಯಾಸಾಧನವು. ಇದರ ಫಲದಿಂದಲೇ ಯೋಗಿಯ ಶುದ್ಧ ಅಥವಾ ಪಕ್ವದೇಹವು ಲಭ್ಯವಾಗುವದು. ಅದೇ 'ಶಿವತನು' ನಾಮದಿಂದ ಖ್ಯಾತವು. ಪಕ್ವದೇಹದಲ್ಲಿ ಜರಾ ಮರಣ ಮೊದಲಾದ ವಿಕಾರಗಳಿರುವದಿಲ್ಲ. ಅಪಕ್ವ ದೇಹದಲ್ಲಿ ಇರುತ್ತವೆ. ಅದೇ ಸಂಸಾರಿ ಮಾನವರ ದೇಹವು.

ಈ ಗ್ರಂಥಗಳ ಬೇರೆ ಬೇರೆ ಸ್ಥಾನಗಳಲ್ಲಿ ಗೋರಕ್ಷನು ಗುರುವಿಗೆ ಹೇಳುತ್ತಾನೆ-ಕಾಯಾಸಾಧ ಮತ್ತು ಅನ್ಯತ್ರ ಗುರುವಿಗೆ 'ಉಲ್ಟಿಯಾ' ಯೋಗವನ್ನವಲಂಬಿಸು ಎಂದು ಹೇಳುತ್ತಾನೆ. ಇದೇ ಉಲಟಾ ಸಾಧನದ ಇಂಗಿತವು. ಈ ಯೋಗಫಲದಿಂದ 'ಮಹಾರಸವು' ಊರ್ಧ್ವದಲ್ಲಿ ನೀತವಾಗಲು ಆಯುರ್ವೃದ್ಧಿಯಾಗುವದು. ಈ ಕಾಯಾಸಾಧನದ 'ಬಂಕನಾಲ ಅಥವಾ ಶಂಖಿನಿನಾಡಿ' ಸಹಾಯವು ಎಂದು ಹೇಳುತ್ತಾನೆ.

ಸರುಯಾ ಸಂಖಿನೀ ಸಹ ಏಕಾ ಭೇದಿ ಕಾಲ।
ಜಿಂಕಾನಾಲೇ ನಾಥಗುರು ನಾಕರಿಓ ಹೇಲಾ ॥

ಇತ್ಯಾದಿ ಷಟ್‌ಚಕ್ರಸಾಧನದ ಸಂಗತಿಯೂ ಇದರಲ್ಲಿ ಇರುತ್ತದೆ. ಶರೀರದ ವಿಭಿನ್ನನಾಡಿ, ಅಜಪಾಜಪ ಮೊದಲಾದವುಗಳ ಉಲ್ಲೇಖವಿರುತ್ತದೆ. ಇದರ ಅನುರೂಪ ಸಂಗತಿಯು ನಾಥ ಹಿಂದೀಸಾಹಿತ್ಯದಲ್ಲಿ ಪ್ರಚುರವಿರುತ್ತದೆ.

ಗೋಪೀಚಂದ್ರನ ಸನ್ಯಾಸದಲ್ಲಿ ಅಜಪಾಜಪದ ಮಹಾತ್ಮ್ಯವು ವರ್ಣಿತಾಗಿರುತ್ತದೆ. ಅಜಪಾ ಅಂದರೆ ಯಾವದು ಸ್ವಾಭಾವಿಕ ಶ್ವಾಸ ಪ್ರಶ್ವಾಸದಿಂದ ಸಾಧ್ಯವು, ಇದೇ ಹಂಸ ಅಥವಾ ಸೋಽಹಂ ಮಂತ್ರ, ಈ ಸಾಧನದಿಂದ ಅಮರವಾಗಿ ಹೋಗುವದು. ಯೋಗಸಾಧನದಲ್ಲಿ ಮಹಾರಸವನ್ನು ರಕ್ಷಣೆ ಮಾಡುವದು ಆವಶ್ಯಕ ಕರ್ತವ್ಯವು. ಅಂತೇ ಮಯನಾಮತಿಯು ಮಗನಿಗೆ ಅದೇ ಸಹಸ್ರಕೋಟಾ ರತ್ನಮಯ ಮಹಾರಸವನ್ನು ರಕ್ಷಣೆ ಮಾಡಲಿಕ್ಕೆ ಹೇಳಿದ್ದಾಳೆ.

ಗೋಪೀಚಂದ್ರನ ಪಾಂಚಾಲಿಯಲ್ಲಿ ತಾಯಿಯಲ್ಲಿ ಸಂದಿಗ್ಧ ಮನದ ಮಗನ ಅದ್ಭುತ ಪರೀಕ್ಷೆಗಳೆಲ್ಲವುಗಳ ಕತೆ ಮತ್ತು ತಾಯಿ-ಮಗನ ತತ್ವಾಲೋಚನೆಯು ಇರುತ್ತದೆ. ಮಗನು ತಾಯಿಗೆ ಕೇಳುತ್ತಾನೆ-

'ಕೋನ ಬಿರಿಖೇರ ಬೋಂಟಾ ಆಮಿ ಮಾ
ಕೋನ ಬಿರಿಖೇರ ಫಲ।

ಮಾತೆಯು ಉತ್ತರವಾಗಿ ಹೇಳುತ್ತಾಳೆ-

'ಮನ ಬಿರಿಖೇರ ಬೋಟಾ ತುಇ ತನ್ ಬಿರಿಖೇರ ಫಲ
ಗಾಛೇರ ನಾಮ ಮನುಹರ, ಫಲೇರನಾಮ ರಸಿಯಾ।
ಗಾಛೇರ ಫಲ ಗಾಛೇ ಥಾಕೇ ಬೋಟಾ ಪಡೇ ಖಸಿಯಾ ॥
ಕಾಟಿಲೆ ಬಾಚೇ ಗಾಛ ನಾ ಕಾಟಿಲೇ ಮರೇ ।
ದುಇ ಬಿರಿಖೇರ ಏಕಟಿ ಫಲ ಜಾನನಿ ಸೇ ಧರೇ ॥

ಅನಂತರ ಅದೇ ಶರೀರದಲ್ಲಿ ಗಂಗಾ, ವಾರಾಣಸಿ ಪ್ರಭೃತಿಗಳ ಅವಸ್ಥಾ ವರ್ಣನೆ ಇತ್ಯಾದಿ, ಪೂರ್ವದಲ್ಲಿ ಉಲ್ಲಿಖಿತ ಪಿಂಡತತ್ತ್ವದ ಆಲೋಚನೆಯೇ ಇರುತ್ತದೆ. ರಸಗ್ರಾಹಿಯೇ ಆ ರಸವನ್ನು ಆಸ್ವಾದನೆ ಮಾಡುತ್ತಾನೆ. ಸೃಷ್ಟಿ ಮತ್ತು ಸಂಹಾರ ಹಾಗೂ ಪಿಂಡ ಉತ್ಪತ್ತಿ ವಿಚಾರ ಕತೆಯೂ ಗೋರಕ್ಷವಿಜಯ ಮತ್ತು ಶೂನ್ಯಪುರಾಣ ನಾಮದಿಂದ ಧರ್ಮಪೂಜೆಯ ಪದ್ಧತಿಯಲ್ಲಿ ಆಲೋಚಿತವಾಗುತ್ತದೆ. ಪ್ರಭುವಿನ ತುರೀಯ ಅವಸ್ಥೆಯಿಂದ ಅಥವಾ ವಿಶ್ವಾತೀತ ಅವಸ್ಥೆಯಿಂದ ಶಕ್ತಿಸಹಾಯದಲ್ಲಿ ವಿಶ್ವದ ಉದ್ಭವವೇ ಇದರ ಆಲೋಚ್ಯ ವಿಷಯವು. ನಾಥರ ಸಂಸ್ಕೃತ ಗ್ರಂಥಾದಿಗಳಲ್ಲಿಯೂ ಇದರ ವಿವರಣೆಯು ಇರುತ್ತದೆ.

'ಆದ್ಯ ಆಛೇಸ್ತಿ ಅನಾದ್ಯ ಆ ಛತಿಯಾ' ಇದು ಶಿವಸ್ಯಾಭ್ಯಂತರೇ ಶಕ್ತಿ, ಶಕ್ತೇರಭ್ಯಂತರೇ ಶಿವಃ- ಇದರದೇ ಅನುರೂಪ ಸಂಗತಿ.

**ಬೇರೆ ಬೇರೆ ಸಂಪ್ರದಾಯಗಳೊಡನೆ ತುಲನೆ:**

ನಾಥಪಂಥದ ವೈಶಿಷ್ಟ್ಯವು ಅವರ 'ನಾಥಕಲ್ಪನೆ'. ಇದರಲ್ಲಿ ದ್ವೈತ ಅಥವಾ ಅದ್ವೈತದ ವಿಕಲ್ಪವಿಲ್ಲ. ನಾಥರು ಸಗುಣ ಸಕ್ರಿಯ ವಿಚಿತ್ರ ಬ್ರಹ್ಮಾಂಡರೂಪೀ ಶಿವ ಹಾಗೂ ನಿರ್ಗುಣ ಸಕ್ರಿಯ ಶಿವ ಎರಡನ್ನೂ ಒಪ್ಪುತ್ತಾರೆ. ನಾಥಮತದಲ್ಲಿ ಈ ವಿಶ್ವಶಕ್ತಿಯ ವಿಲಾಸ ಮಾತ್ರ. ವೃಕ್ಷದಲ್ಲಿ ಬೀಜ ಮತ್ತು ಬೀಜದಲ್ಲಿ ವೃಕ್ಷದಂತೆ ಶಕ್ತಿಯು ಶಿವನಲ್ಲಿಯೇ ಲೀನವು. ಅಂತೇ ಅದ್ವೈತದ ಉಪಲಬ್ಧಿ ಮಾಡಬೇಕಾದರೆ ಮೊದಲು

ದ್ವೈತದ ಉಪಲಬ್ಧಿ ಕರ್ತವ್ಯವು. ವಿವೇಚನೆಯನ್ನು ಮಾಡಿ ನಾಥರು ಶಿವ ಮತ್ತು ಶಕ್ತಿಯ ಸಾಧನೆಯನ್ನು ಮಾಡುತ್ತಾರೆ. ಅನಂತರ ಇವುಗಳ ಸಾಮರಸ್ಯ ಅಥವಾ ಏಕತಾ ಸಾಧನದಲ್ಲಿ ಯಾವ ಪರಮಶಿವನ ಉಪಲಬ್ಧಿಯಾಗುವದೋ ಅದೇ ಅದ್ವೈತ ಅವಸ್ಥೆಯು. ಆದರೆ ನಾಥ ಸ್ವರೂಪವು ದ್ವೈತಾದ್ವೈತ ವಿವರ್ಜಿತವು ಮತ್ತು ಎಲ್ಲ ದ್ವಂದ್ವಾತೀತ ಅವಸ್ಥಾವಿಶೇಷವು. ವರ್ಣನಾತೀತವೆಂದು ನಾಥರು ಅದರ ಉಲ್ಲೇಖ ಮಾತ್ರ ಮಾಡಿ ಶಾಂತರಾಗಿರುತ್ತಾರೆ. ನಾಥಪಂಥಿಗಳಿಗೆ ಶೈವ-ತಾಂತ್ರಿಕ ಎಂದು ಹೇಳಲ್ಪಟ್ಟಿದೆ. ಎಂಟನೆಯ ಶತಮಾನದಿಂದ 'ಮಾಲತೀಮಾಧವ', 'ಪ್ರಬೋಧಚಂದ್ರೋದಯ' ಮೊದಲಾದ ಕಾವ್ಯಗಳಲ್ಲಿ ಯಾವ ಕಾಪಾಲಿಕರ ಸಾಧನದ ವರ್ಣನೆಯು ಕಂಡುಬರುವದೋ ಅದರಿಂದ ತಂತ್ರದ ಪ್ರಚಲನ ಸಂಬಂಧದಿಂದ ಸಂದೇಹಕ್ಕೆ ಅವಕಾಶವಿರುವದಿಲ್ಲ. ನಾಥಸಿದ್ಧರಲ್ಲಿ ತಂತ್ರದ ಸಾಧನವು ಪ್ರವೇಶ ಮಾಡಿದರೂ ಅವರಲ್ಲಿ ಯೋಗಸಾಧನವೇ ಪ್ರಧಾನವಾಗಿರುತ್ತದೆ. ಗೋರಕ್ಷನಾಥನ ಶೂನ್ಯಪಥದಲ್ಲಿ ಗಮನಾದಿ ವಿಭೂತಿ, ಮಯನಾಮತಿಯ ಗೋದಾ ಯಮುನಿಗೆ ಮಂತ್ರದಿಂದ ಬಡಿಯುವದು, ಹಾಡಿಪಾನ ಹುಂಕಾರ ಬಲದಿಂದ ವೃಕ್ಷದ ಫಲಗಳು ಬೀಳುವದು ಮೊದಲಾದವುಗಳು ತಂತ್ರಸಾಧನದಿಂದ ವಿಭೂತಿಲಾಭದ ಇಂಗಿತವು. ಷಟ್‌ಚಕ್ರ ಸಾಧನದಿಂದ ದೇವಿಯ ಆರಾಧನೆ ಹಾಗೂ ಪಿಂಡ ಬ್ರಹ್ಮಾಂಡದ ಏಕತ್ವಾನುಭೂತಿ ಸಾಧನವೂ ತಾಂತ್ರಿಕ ಸಾಧನವು. ನಾಥಪಂಥದಲ್ಲಿ ತತ್ಸಹಯೋಗ ಸಾಧನವೂ ಇತ್ತು. ವಸ್ತುತಃ ನಾಥವು ತಂತ್ರ ಮತ್ತು ಯೋಗದ ಸಮ್ಮಿಶ್ರಣವೆಂದು ಹೇಳಲು ಶಕ್ಯವು. ನಾಥಯೋಗಿಗಳು ಪ್ರಧಾನತಃ ಶೈವರು. ಅಂತೇ ಇವರು ಶೈವ ತಾಂತ್ರಿಕ ಹೆಸರಿನಿಂದ ಪರಿಚಿತರು. ಮತ್ತು ಯೋಗಿಶ್ರೇಷ್ಠ ಶಿವನು ಪಶುಪತಿಯೆಂದು ಯೋಗಿಗಳಿಗೆ 'ಪಾಶುಪತ ಶೈವ' ಹೆಸರಿನಿಂದಲೂ ಪ್ರಸಿದ್ಧಿ ಇರುತ್ತದೆ. ನಾಥರು ಶಿವ ಅಥವಾ ಆದಿನಾಥನ ಉಪಾಸಕರು. ಪಾಶುಪತರು ಪಶುಪತಿಯ ಉಪಾಸಕರು. ಇವನೇ ಪಶುಪತಿ ಶಿವನು. ನಾಥರು ಮೂಲತಃ ಶೈವರು, ಭಾಸರ್ವಜ್ಞ ರಚಿತ 'ಗಣಕಾರಿಕಾ' ಗ್ರಂಥದಲ್ಲಿ ಪಾಶುಪತಶೈವರ ದರ್ಶನವು ವ್ಯಾಖ್ಯಾತವಾಗಿರುತ್ತದೆ. ತತ್ಪೂರ್ವದಲ್ಲಿ ಮಹಾಭಾರತದಲ್ಲಿಯೂ ಪಾಶುಪತರ ಉಲ್ಲೇಖವು ದೊರೆಯುತ್ತದೆ. ಗಣಕಾರಿಕೆಯ ಸಾರತತ್ವ ಚರ್ಯಾವಿಧಿಯಿಂದ ತತ್ವಜ್ಞಾನ ಲಾಭವು. ಯೋಗಯುಕ್ತ ಶಾಸ್ತ್ರಜ್ಞಾನದಿಂದ ಶಿವಸಾಮೀಪ್ಯದಿಂದ ಎಲ್ಲ ಕ್ರಿಯೆಗಳ ಶಾಂತಿಮುಕ್ತಿಯ ಪ್ರಥಮ ಉಪಾಯ ಪ್ರಸಾದ. ಈ ನಾಥದರ್ಶನ ಮತ್ತು ಕಾಶ್ಮೀರ ಶೈವಾದ್ವೈತ ಮತದಲ್ಲಿ ಶಕ್ತಿಪಾತ ಅರ್ಥಾತ್ ಗುರುಕೃಪಾ ಅಥವಾ ಭಗವತ್‌ಕೃಪಾ. ಮತ್ಸ್ಯೇಂದ್ರನು ಅದ್ವೈತ ತಾಂತ್ರಿಕ ಸಂಪ್ರದಾಯದೊಡನೆ ಯುಕ್ತನಾಗಿದ್ದನು. ತಂತ್ರಾಲೋಕಭಾಷ್ಯದಲ್ಲಿ ಅದರ ಪ್ರಮಾಣವಿರುತ್ತದೆ ಮತ್ತು ಮತ್ಸ್ಯೇಂದ್ರ ರಚಿತ 'ಕೌಲಜ್ಞಾನ ನಿರ್ಣಯ' ಪುಸ್ತಕದಲ್ಲಿ ಅವನು ತನಗೆ ಕೌಲಾಂತರ್ಗತ ಯೋಗಿನೀ ಕೌಲನೆಂದು ಪರಿಚಯ ಮಾಡಿಕೊಂಡಿದ್ದಾನೆ. ಈ ಪುಸ್ತಕವು ಹನ್ನೊಂದನೆಯ ಶತಮಾನದಲ್ಲಿ ರಚಿತವು. ಇದರಲ್ಲಿ ವಿಶಿಷ್ಟ ಕೌಲಸಂಪ್ರದಾಯ ಮತ್ತು ಅವನ ಗುರುವಿನ ಉಲ್ಲೇಖವಿರುತ್ತದೆ. ಮತ್ಸ್ಯೇಂದ್ರ ರಚಿತ 'ಅಕುಲ-ವೀರ-ತಂತ್ರ' ಪುಸ್ತಕದಲ್ಲಿ ಕೌಲದ ಸಹಜ ಮತ್ತು ಕೃತಕ ಶ್ರೇಣಿಯ ಭೇದವು ವರ್ಣಿತವಾಗಿರುತ್ತದೆ. ಸಹಜರು ಆರಾಧ್ಯದೇವತೆಯೊಡನೆ ಏಕಾತ್ಮವಾಗುವ ಸಾಧನೆ ಮಾಡುತ್ತಿದ್ದರು. ಈ ಸಾಧನವು ನಾಥರಲ್ಲಿಯೂ ಪ್ರಚಲಿತವಿತ್ತು. ಭೇದಾಭೇದ ಜ್ಞಾನದೂರ ಕುಲಾಚಾರದ ಪ್ರಾಥಮಿಕ ಶಿಕ್ಷಣವು ವರ್ತಮಾನದಲ್ಲಿ ವೀರಾಚಾರದಲ್ಲಿ ಪರಿಣತವಾಗಿರುತ್ತದೆ. ಆದರೆ ತಾಂತ್ರಿಕ ಸಾಧಕರಲ್ಲಿ ಯಾವ ಪಶು, ವೀರ ಮತ್ತು ದಿವ್ಯ ಭೇದಗಳಿರುತ್ತವೆ. ಇವುಗಳಲ್ಲಿ ಕಠಿಣತಮ ಸಾಧನವು 'ದಿವ್ಯ'. ಇದು ನಿವೃತ್ತಿಯ ಪಥದಲ್ಲಿ ಪಂಚಮಕಾರ ತೆಗೆದುಕೊಂಡು ಸಾಧನವು, ಇದೇ ತ್ಯಾಗ ಮತ್ತು ಭೋಗದ ಸಾಮಂಜಸ್ಯವು. ಅಂತೇ ಈ ದಿವ್ಯ ಸಾಧಕನೇ 'ಕೌಲ' ಹೆಸರಿನಿಂದ ಪರಿಚಿತನು. ಕೌಲದ ಪಕ್ಷದಲ್ಲಿ ಒಳ್ಳೇದು ಅಥವಾ ಕೆಟ್ಟದು ಇಲ್ಲ. ಪಾಪ ಅಥವಾ ಪುಣ್ಯವಿಲ್ಲ. ವಿಷದಿಂದ ವಿಷಕ್ಷಯದಂತೆ ಕೌಲಪಕ್ಷದಲ್ಲಿ ಈ ಪಥವು ಜಾರಿಕೆಯದು ಮತ್ತು ದುರ್ಗಮವು. ಅದೇ ಪಥವನ್ನು ಅವಲಂಬಿಸಿ ಶಿವತ್ವ

ಪ್ರಾಪ್ತಿಯ ಲಕ್ಷ್ಯವು. ಇದೇ ಕೌಲನೀತಿ. ಶಿವ ಮತ್ತು ಶಕ್ತಿ ಅಥವಾ ಕುಲ ಮತ್ತು ಅಕುಲದ ಸಾಮರಸ್ಯಕ್ಕೆ 'ಕೌಲ'ವೆನ್ನುವರು. ಕುಲಾರ್ಣವ ತಂತ್ರದಲ್ಲಿ 'ಕೌಲಾತ್ ಪರತರ' ಇಲ್ಲವೆಂದು ಇರುವದು. ಕೌಲಾಚಾರಿಯು ಪೂರ್ಣಜ್ಞಾನದ ಅಧಿಕಾರಿ ಮತ್ತು ಪೂರ್ಣ ಅದ್ವೈತಜ್ಞಾನಿಯು. ಚಂದನ ಮತ್ತು ಪಂಕ, ಶತ್ರು ಮತ್ತು ಮಿತ್ರರು ಅವನಿಗೆ ಸಮಾನರು. ನಾಥಸಿದ್ಧರದೂ ಇದೇ ಲಕ್ಷ್ಯವು. ಕಾರಣ ನಾಥಮಾರ್ಗದ ಆದರ್ಶವು ಅವಧೂತವು. ಅವನು ಸಕಲ ದ್ವಂದ್ವಾತೀತನು. ಸುಖ ಮತ್ತು ದುಃಖ, ತ್ಯಾಗ ಮತ್ತು ಭೋಗ ಎಲ್ಲವನ್ನೂ ಅವನು ಸಮಭಾವದಲ್ಲಿ ಗ್ರಹಿಸಲು ಸಮರ್ಥನು. ಕೌಲ ಅಥವಾ ಅವಧೂತನು ಸರ್ವಾವಸ್ಥಾ ವಿನಿರ್ಮುಕ್ತನು. ಅಂತೇ ಅವನ ಪಕ್ಷದಲ್ಲಿ ಯಾವ ನಿಯಮ ಅಥವಾ ಬಂಧನವಿಲ್ಲ. ಅವಧೂತನು ಆದರ್ಶವಾದಿ ನಾಥ ಗುರುವು. ಅವನೇ ಕೌಲನು.

ಮಧ್ಯಯುಗದ ರಹಸ್ಯವಾದೀ ಸಂತ ಮತ್ತು ಸೂಫೀ ಸಾಧಕರ ಸಾಧನೆಯಲ್ಲಿ ಪ್ರೇಮದ ಸಾಧನೆಯು ಇದ್ದರೂ ನಾಥಮಾರ್ಗದ ಅನುಯಾಯಿ ಯೋಗದ ಸಾಧನೆಯನ್ನೂ ನೋಡುವನು. ಸಂತರಲ್ಲಿ ನಾಥಶ್ರೇಣಿ ನಾಥಗುರು ಗೋರಕ್ಷನ ಪೂಜೆಯನ್ನು ಮಾಡುತ್ತಾರೆ. ಕಬೀರ, ದಾದು, ಮಾಂದಲಂದವರು ಮೇಲಿಂದ ಮೇಲೆ ಶ್ರದ್ಧಾ ಸಹಕಾರದಿಂದ ಗೋರಕ್ಷನ ಉಲ್ಲೇಖವನ್ನು ಮಾಡಿರುತ್ತಾರೆ. ಕಬೀರಾದಿಗಳು ಯಾವ 'ಸೂರತ' ಶಬ್ದಯೋಗದ ಸಂಗತಿಯನ್ನು ಹೇಳುತ್ತಾರೆ. ಅದು ನಾದ ಅಥವಾ ಶಬ್ದಯೋಗದ್ದೇ ಸಾಧನವು. ಈ ನಾದವೇ ಸೂರತ ಅರ್ಥಾತ್ ಸ್ರೋತದ ಧಾರೆಯಂತೆ ಅವಿರಾಮ ಗತಿಯಿಂದ ನಡೆದಿರುತ್ತದೆ. ನಾಥಮಾರ್ಗದಲ್ಲಿಯೂ ಇದರ ವಿಶೇಷ ಸಾಧನೆಯು ಇರುತ್ತದೆ. ನಾಥರು ಇದಕ್ಕೆ 'ಅಜಪಾಜಪ' ಅನ್ನುತ್ತಾರೆ. ನಾದಾನು ಸಂಧಾನಕ್ಕೇ ಸಂತರು 'ಅನಹದನಾದ' ಅನ್ನುತ್ತಾರೆ. ಶಹಾಜಾನನ ಮಗನಾದ 'ದಾರಾ' ತನ್ನ ಗ್ರಂಥದಲ್ಲಿ ಆ ಅನಾಹತನಾದದಿಂದ ಮಿಲನ ಸಾಧನದ ಸುಂದರ ವ್ಯಾಖ್ಯೆಯನ್ನು ಮಾಡಿರುತ್ತಾನೆ. ಈ ನಾದವೇ ಪರಮಸತ್ಯವನ್ನು ಉಪಲಬ್ಧಿ ಮಾಡಿಸುವದು. ಸೂಫಿ ಸಾಧಕನಾದ 'ಮನಸೂರ ಹಾಲಾಜ'ನು ಈ ಉಪಲಬ್ಧಿ ಮಾಡಿಯೇ 'ಅನಲಹಕ್' ಅಥವಾ 'ಸೋಽಹಮ್' ಉಚ್ಚಾರಣ ಮಾಡುವ ಫಲದಿಂದ ಮೃತ್ಯುವನ್ನು ಆರಿಸಲು ಸಮರ್ಥನಾದನು.

ನಾಥಮಾರ್ಗದಲ್ಲಿ ಪ್ರಣವ ಸಾಧನೆಗೆ ವಿಶಿಷ್ಟ ಸ್ಥಾನವಿರುವಂತೆ, ಸಂತರಲ್ಲಿ ಅದೇ ನಾಮ ಅಥವಾ ಸತ್ಯನಾಮ ಸಾಧನೆಗೂ ಅದರಂತೆಯೇ ಪ್ರಶಸ್ತಿಯು ಇರುತ್ತದೆ. ಮಂತ್ರದಿಂದ ಅವಿರಾಮ ಶಬ್ದಧಾರೆಯಿಂದ ಸ್ನಾತರಾಗಿ ಸಂತರು ಯಾವಲೋಕದಲ್ಲಿ ಪದಾರ್ಪಣೆ ಮಾಡುತ್ತಾರೋ ಅದರ ಹೆಸರು 'ವಿಗಮ ದೇಶ' ಅಥವಾ ಸುಖ ದುಃಖಾತೀತ ದೇಶ. ಅದೇ ಅವಸ್ಥೆಯನ್ನು ಮುಟ್ಟಿ ಕಬೀರನು ಹೇಳುತ್ತಾನೆ.

'ಮೇರಾ ಮುಝ್‌ಮೇ ಕುಛನೇಹೀ'
ಜೋ ಕುಛಹೈ ಸೋ ತೇರಾ।
ತೇರಾ ತುಝುಕೋ ಸಾಂಪತೇ ಕ್ಯಾಲಾಗೇ ಮೇರಾ ॥

ನಾಥರು ಮಂತ್ರಚೈತನ್ಯ ಅರ್ಥಾತ್ ಮಂತ್ರಧಾರೆಯ ಸಹಾಯದಿಂದ ಯಾವ ಲೋಕದಲ್ಲಿ ಮುಟ್ಟುತ್ತಾರೋ ಅದು 'ಅಮನಸ್ಕ' ಅಥವಾ ಮನೋಹೀನ ಅವಸ್ಥೆಯು. ಅಂತೇ ಆ ಅವಸ್ಥೆಯ ನಾಮಾಂತರವು 'ಉನ್ಮನಿ' ಆ ದಶಾಪ್ರಾಪ್ತಿಯು ಸ್ಥಾಯೀ ಆಗುವದು. ಸಂತರು ಇದಕ್ಕೆ 'ಬಿನ-ಮನ-ಸಾ' ಅವಸ್ಥೆ ಅನ್ನುತ್ತಾರೆ.

ಸಂಪೂರ್ಣವಾಗಿ ಆತ್ಮನಿವೇದನ ಮಾಡಿದ ಇದು ಲಭ್ಯವಾಗುವದು. ನಾಥರಂತೆ ಸಂತರು ಸುರುವಿಗೇ ಏಕಮಾತ್ರ ಪಥಪ್ರದರ್ಶಕನೆನ್ನುತ್ತಾರೆ.

ಮಂತ್ರಸಾಧನವೇ ತಂತ್ರದ ಮುಖ್ಯೋದ್ದೇಶವು. ಮಂತ್ರಸಹಾಯದಿಂದ ಸುಪ್ತಕುಂಡಲಿಯ ಜಾಗರಣ ನಾಥಸಾಧನದ ವೈಶಿಷ್ಟ್ಯವು. ಸಂತಗುರುಗಳೂ 'ಸುಮಿರಣ' ಅಥವಾ 'ಮಂತ್ರಸ್ಮರಣ'ದಿಂದ ದೇಹದಲ್ಲಿಯ ಶಕ್ತಿಯನ್ನು ಜಾಗರಿತ ಮಾಡಿದರೆ ನಾಥಯೋಗಿಗಳು ಹಠಯೋಗದ ಸಹಾಯದಿಂದ ಪ್ರಬುದ್ಧ ಮಾಡುತ್ತಾರೆ. ಇದೇ ನಾಥ

ಮತ್ತು ಸಂತ ಸಾಧಕರಲ್ಲಿ ಪ್ರಭೇದವು. ಇಬ್ಬರ ಉದ್ದೇಶವೂ ಪಿಂಡ ಮತ್ತು ಬ್ರಹ್ಮಾಂಡದಲ್ಲಿ ಯೋಗಸ್ಥಾಪನೆಯು. ಆದರೆ ಇದರ ಪದ್ಧತಿಯು ಭಿನ್ನವು. ಆದರೂ ಸಂತ ಸಾಧನೆಯಲ್ಲಿ ನಾಥಸಾಧನಾ ಮಾರ್ಗದ ಜೀವನ ಮುಕ್ತಿ, ತ್ರಿಕುಟಿ, ಸಹಸ್ರದಲಕಮಲ, ಚಕ್ರ, ಅಜಪಾಸಾಧನ ಮೊದಲಾದವುಗಳ ಉಲ್ಲೇಖವನ್ನು ಪಡೆಯುತ್ತೇವೆ. ಭಾರತೀಯ ಸೂಫೀಗಳಲ್ಲಿಯೂ ಕುಂಡಲಿನಿ ಸಹಸ್ರಾರ ಮೊದಲಾದವುಗಳ ಚರ್ಚೆಯು ಇತ್ತು.

ಕಬೀರನ ಬೀಜಕ ಗ್ರಂಥದ ಕೆಲವು ಶಬ್ದಗಳನ್ನು ನೋಡಿ ಅವನ ಸಾಧನ ಸಂಬಂಧದಿಂದ ಯಾವ ಧಾರಣಾ ಆಗುವದ್ದೋ ಅದು ಕೆಳಗಿನಂತೆ:

'ಯಾವ ಯೋಗಿಯು ತನ್ನ ನಗರೀ ಬ್ರಹ್ಮಾಂಡ' ಯೋಗಿಗಳ ಜ್ಞಾನ ಉಲ್ಟಾಜ್ಞಾನ' ಇದರಿಂದ ಯೋಗೀಮತದಲ್ಲಿ ಶರೀರವೇ ಪ್ರಧಾನ ಹಾಗೂ ಪವನಕ್ಕೆ ಉಲಟಾ ಒಯ್ಯಲು ಮಾಡುವದೇ ಯೋಗಿಯ ಜ್ಞಾನವು ಇದು ಹೇಳಲ್ಪಟ್ಟಿದೆ.

ಮತ್ತೊಂದು ಪದದಲ್ಲಿ ಕಬೀರನು ಹೇಳುತ್ತಾನೆ. 'ಜನ್ಮವಾಗಲು ಮೃತ್ಯುವಾಗುವದು' ಆದರೆ ಗೋರಖನು ಇಂತಹ ಯೋಗಸಾಧನೆ ಮಾಡಿದ್ದಾನೆ- ಮರಣದಲ್ಲಿಯೂ ಅವನ ದೇಹವು ನಾಶವಾಗುವದಿಲ್ಲ. ಮಾಂಸವು ಕೊಳೆತು ಮಣ್ಣಿನೊಡನೆ ವಿಲೀನವಾದರೂ ಅವನಿಗೆ ನೂತನ ದೇಹವು ಲಾಭವಾಗುವದು.

ಕಬೀರನ ಬೇರೆ ಬೇರೆ 'ಸಾಖಿ'ಗಳಲ್ಲಿಯೂ 'ಉಲ್ಟಾ-ಸಾಧನ', 'ಉನ್ಮನೀ ಅವಸ್ಥಾ' ಪ್ರಾಪ್ತಿ ದಶಮಿ ದ್ವಾರದಿಂದ ಪ್ರವಿಷ್ಟವಾಗುವದು ಇತ್ಯಾದಿಗಳ ಬಹು ನಿದರ್ಶನ ಪಡೆಯುತ್ತೇವೆ. ವಿಸ್ತಾರಿತ ಆಲೋಚನೆಯು ಇಲ್ಲಿ ಸಂಭವವಿಲ್ಲ.

ನಾಥಪಂಥದಲ್ಲಿ ಬೌದ್ಧ ಸಹಜಿಯಾರ ರಹಸ್ಯವಾದವು ಅಲ್ಪಸ್ವಲ್ಪ ಪ್ರವೇಶ ಮಾಡಿದೆ. ಬೌದ್ಧಧರ್ಮದ ಪತನದ ಯುಗದಲ್ಲಿ ನಾಥಪಂಥದ ಅಭ್ಯುದಯವು. ನಾಥಪಂಥದಲ್ಲಿ ಯಾವದು ನಾದ-ಬಿಂದುಗಳ ಮಿಲನವೋ, ಬೌದ್ಧ ಸಹಜಿಯಾರ ಅದೇ ಪ್ರಜ್ಞಾ ಮತ್ತು ಉಪಾಯದ ಮಿಲನವು.

ಚಂದ್ರ ಮತ್ತು ಸೂರ್ಯರ ಉಲ್ಲೇಖವು ನಾಥ ಮತ್ತು ಬೌದ್ಧ ಉಭಯ ಸಾಹಿತ್ಯಗಳಲ್ಲಿಯೂ ದೊರೆಯುತ್ತದೆ. ಹಿಂದೂತಂತ್ರದ ಶಿವ ಮತ್ತು ಶಕ್ತಿ ಬೌದ್ಧ, ಸಹಜಿಯರ ಶೂನ್ಯತಾ ಮತ್ತು ಕರುಣಾ ಇವುಗಳ ಮಿಲನದಿಂದ ಯಾವ ಮಹಾಸುಖವು ಲಭಿಸುವದೋ ಅದೇ ಬೌದ್ಧಮತದಲ್ಲಿ ಏವಂಕಾರ, ಬೌದ್ಧಮತದಲ್ಲಿ ಶೂನ್ಯದಲ್ಲಿ ಕರುಣಾ ಇರುತ್ತದೆ. ಅಂತೇ ಜೀವ ಉದ್ಧಾರಾರ್ಥದಲ್ಲಿ ಸೃಷ್ಟಿಯಾಯಿತು. ಬೌದ್ಧರು ಶೂನ್ಯದಿಂದ ಸೃಷ್ಟಿಯ ಉದ್ಭವಾಯಿತೆಂದು ಹೇಳುವರು. ಈ ಶೂನ್ಯ 'ಪ್ರಜ್ಞಾಪಾರಮಿತಾ' ಅರ್ಥಾತ್ ಸಮಾಧಿ ಜಾತ ಪ್ರಜ್ಞಾ ಸಹಜಿಯೂ ಬೌದ್ಧರ 'ಶೂನ್ಯಸಮಾಧಿ'ಅಥವಾ ಸಹಜಾವಸ್ಥಾ ಲಾಭ ನಾಥಮಾರ್ಗದ 'ಸಮರಸ', ಸಾಧನೆಯೊಡನೆ ತುಲನೀಯವು. ಈ ಅವಸ್ಥೆಯೇ ತತ್ತ್ವಾತೀತ ಅವಸ್ಥೆಯು. ನಾಥಪಂಥದಲ್ಲಿ ಬೌದ್ಧ ಸಹಜಿಯಾವಾದದಲ್ಲಿ ಮತ್ತು ಜೈನಧರ್ಮದಲ್ಲಿ 'ಶೂನ್ಯ' ಸಾಧನೆಯ ಕತೆಯು ಇರುತ್ತದೆ. ನಾಥಪಂಥದ 'ವಜ್ರೋಲಿ' 'ಸಹಜೋಲಿ' ಪ್ರಭೃತಿ ಮುದ್ರಾಗಳ ಹೆಸರು ಬೌದ್ಧ ವಜ್ರಯಾನ, 'ಸಹಜಾ'ನಕ್ಕೆ ಸ್ಮರಣಮಾಡಿಸಿ ಕೊಡುವದು. ಇವುಗಳಲ್ಲಿ ಯೋಗಾಯೋಗ ಇರುವದು ವಿಚಿತ್ರವಲ್ಲ. ಆದರೂ ಈ ಕಾರಣದಿಂದ ನಾಥರಿಗೆ ಬೌದ್ಧರೆಂದು ಹೇಳಿದರೆ ನಡೆಯುವದಿಲ್ಲ. ಪರಿಶೇಷದಲ್ಲಿ ವಕ್ತವ್ಯವೇನೆಂದರೆ ನಾಥಪಂಥದೊಡನೆ ತಂತ್ರ, ಕೌಲ, ಸಂತ, ಬೌದ್ಧ, ಪ್ರಭೃತಿ ಸಂಪ್ರದಾಯಗಳ ಅಲ್ಪಾಧಿಕ ಸಂಬಂಧವಿದ್ದರೂ ಶೈವ ಸಂಪ್ರದಾಯದೊಡನೆ ಸಂಬಂಧವು ಎಲ್ಲಕ್ಕೂ ಹೆಚ್ಚು. ವೈದಿಕ ಕಾಲದಿಂದ ಶಿವ ಅಥವಾ ರುದ್ರನ ಪೂಜೆಯು ಪ್ರಚಲಿತವಿರುತ್ತದೆ. ಶೈವರಲ್ಲಿ ಶೈವ, ಪಾಶುಪತ, ಕಾಲದಮನ ಮತ್ತು ಕಾಪಾಲಿಕ ಎಂದು ನಾಲ್ಕು ವಿಭಾಗ. ಅವುಗಳಲ್ಲಿ ಕಾಶ್ಮೀರ ಶೈವರ ತ್ರಿಕದರ್ಶನ ಮತ್ತು ದಾಕ್ಷಿಣಾತ್ಯರ ಶೈವಸಂತರ ಶೈವಸಿದ್ಧಾಂತ ಮತಾದಿಗಳ ಗ್ರಂಥಗಳು ಈಗ ಸಹ ದುರ್ಲಭವಲ್ಲ. ಇವರ

ದರ್ಶನದೊಡನೆ ನಾಥದರ್ಶನದ ಕೂಡುವಿಕೆಯು ಇರುವದು. ಕಾರಣ ನಾಥರೂ ಶೈವರಿದ್ದರು. ತ್ರಿಕದರ್ಶನದ ನಾಮಾಂತರವು ಸ್ಪಂದವಾದವು. ಇದು ಕಾಶ್ಮೀರ ಶೈವಾದ್ವೈತ ಹೆಸರಿನಿಂದ ಖ್ಯಾತವು. ಪಶು, ಪಾಶ ಮತ್ತು ಪತಿ ಇವು ಮೂರು ತತ್ವಗಳು ತ್ರಿಕದರ್ಶನದ ಮೂಲವು. ಶೈವಸಿದ್ಧಾಂತ ಮತದಲ್ಲಿ ಶಿವ, ಶಕ್ತಿ ಮತ್ತು ಬಿಂದು ರತ್ನತ್ರಯ. ಇವೇ ಸಮಗ್ರ ಜಗತ್ತಿನ ಮೂಲಸ್ವರೂಪವು. ಶಿವ ಕರ್ತಾ, ಶಕ್ತಿ ಕರಣ, ಬಿಂದು ಉಪಾದಾನ. ತ್ರಿಕವಾದದಲ್ಲಿ ಶಿವನ ಸ್ಪಂದದಿಂದಲೇ ಪ್ರಪಂಚದ ಉತ್ಪತ್ತಿ ವರ್ಣಿತವಾಗಿರುತ್ತದೆ. ಶಿವನೇ ಜೀವನಾಗುತ್ತಾನೆ. ಇದೇ ಈ ವಾದದ ಮೂಲ ಪ್ರತಿಪಾದ್ಯ ವಿಷಯ. ನಾಥಮಾರ್ಗದೊಡನೆ ಇದು ತುಲನೀಯವು.

ತ್ರಿಕಮತದಲ್ಲಿ ಶಿವನೇ ಆಟದ ಉತ್ಸುಕತೆಯಿಂದ ಜಗತ್ ಸೃಷ್ಟಿಯನ್ನು ಮಾಡಿರುತ್ತಾನೆ. ಶೈವಸಿದ್ಧಾಂತ ಮತದ ರತ್ನತ್ರಯದೊಡನೆ ನಾಥದರ್ಶನದ ಕೂಡುವಿಕೆಯು ಇರುತ್ತದೆ. ಪರಶಿವ ಮತ್ತು ಪರಾಶಕ್ತಿಯ ಮಿಲನದಿಂದ ಯಾವ ಜಗತ್ ಸೃಷ್ಟಿಯಾಯಿತು ಅದೇ ಬಿಂದುರೂಪದಿಂದ ಖ್ಯಾತವು. ಬಿಂದುವಿನಿಂದ ಆದಿಶಬ್ದ ಅಥವಾ 'ನಾದ'ದ ಉತ್ಪತ್ತಿಯಾಗುವದು. ಅದರಿಂದಲೇ ಸೃಷ್ಟಿಯ ಆರಂಭವು. ಗೋರಕ್ಷ ಸಿದ್ಧಾಂತಸಂಗ್ರಹದಲ್ಲಿ ಇರುತ್ತದೆ:

> 'ಬಿಂದುಃ ಶಿವೋ ರಜಃ ಶಕ್ತಿ ಬಿಂದು ಬಿಂದು ರಜೋ ರವಿಃ|
> ಉಭಯೋಃ ಸಂಗಮಾದೇವ ಪ್ರಾಪ್ಯತೇ ಪರಮಂ ಪದಮ್ ||

ಈ ಶಿವ ಶಕ್ತಿಗಳ ಸಾಮರಸ್ಯದಿಂದ ಪರಮಪದ ಪ್ರಾಪ್ತಿ ನಾಥಪಂಥದ ಆದರ್ಶವು. ಈ ಪರಮಪದ ಅರ್ಥದಲ್ಲಿ ಶ್ರೇಷ್ಠಪದ. ಇದು ಸರ್ವತತ್ವಗಳ ಊರ್ಧ್ವದಲ್ಲಿ. ಅಂತೇ ಇದು 'ಅನಾಮಾ' ಅಥವಾ 'ನಿರ್ನಾಮ' ಹೆಸರಿನಿಂದಲೂ ಖ್ಯಾತವು. ಈ ಪರಮಪದದಲ್ಲಿ ಅವಸ್ಥಾನದಲ್ಲಿ ಜೀವನ್ಮುಕ್ತಿಯಾಗುವದು. ನಾಥರ ಅಭೀಪ್ಸತಮ ಗತಿಯು ಇದೇ.

**ಉಪಸಂಹಾರ:**

ನಾಥಸಂಪ್ರದಾಯದ ಉದ್ಭವ, ಅದರ ಐತಿಹಾಸಿಕತೆ ಹಾಗೂ ನಾಥಯೋಗಿಗಳ ಸಿದ್ಧಾಂತ ಮತ್ತು ಸಾಧನೆಗಳ ಸಂಬಂಧವಾಗಿ ಕಿಂಚಿತ್ ಆಲೋಚನೆಯು ಮಾಡಲ್ಪಟ್ಟಿತು. ಈಗ ಅತಿ ಸಂಕ್ಷೇಪದಿಂದ ಅವರ ಕಾಲನಿರ್ಣಯ ಮತ್ತು ವೈಶಿಷ್ಟ್ಯಸಂಬಂಧದಿಂದ ಪುನರಾಲೋಚನೆಯನ್ನು ಮಾಡಿ, ವಕ್ತವ್ಯವನ್ನು ಮುಗಿಸುವೆವು.

ವಿಭಿನ್ನ ಐತಿಹಾಸಿಕರು ನಾಥಯೋಗಿಗಳ ಕ್ರಿ.ಶ.ಏಳನೆಯ, ಎಂಟನೆಯ ಶತಮಾನದಿಂದ ಆರಂಭಮಾಡಿ, ಕ್ರಿ.ಶ. ಹದಿನಾರನೆಯ ಶತಮಾನದ ಮಧ್ಯದಲ್ಲಿ ವಿಭಿನ್ನಯುಗದ ಎಂದು ಸಿದ್ಧಾಂತಮಾಡಿದ್ದಾರೆ. ಪಂಡಿತ ಮಂಡಳಿ ಅಕಾರಣದಿಂದ ಈ ಎಲ್ಲ ಸಿದ್ಧಾಂತಗಳಲ್ಲಿ ಮುಟ್ಟಿಲ್ಲ. ಆದರೂ ಅಧಿಕಾಂಶರ ಮತಾಮತಗಳನ್ನು ಖಂಡನಮಾಡಿ, ಯಾವ ಕಾರಣಗಳಿಂದ ನಾವು ಶ್ರೀಮತ್ಸ್ಯೇಂದ್ರನಿಗೆ ಹತ್ತನೆಯ ಶತಮಾನದ ಮತ್ತು ಗೋರಕ್ಷನಾಥನಿಗೆ ಹನ್ನೊಂದನೆಯ ಶತಮಾನದ ಯೋಗಿಯೆಂದು ಸ್ಥಿರಪಡಿಸಿದ್ದೇವೆ. ಅದು ಹೀಗೆ-

೧) ಪಂ. ಹರಪ್ರಸಾದ ಶಾಸ್ತ್ರಿಗಳು ನೇಪಾಳದಲ್ಲಿ 'ಲುಇಪಾದ'ನಿಂದ ರಚಿತವಾದ ಬಂಗಾಲಿ ದೋಹಾಗಳನ್ನು ಆವಿಷ್ಕಾರ ಮಾಡಿದರು ಹಾಗೂ ಡಾ. ಬಾಗಚಿಯವರು ಮತ್ಸ್ಯೇಂದ್ರನಾಥ ರಚಿತವಾದ 'ಕೌಲಜ್ಞಾನ ನಿರ್ಣಯ' ಮೊದಲಾದ ಸಂಸ್ಕೃತ ಪುಸ್ತಕಗಳನ್ನು ಆವಿಷ್ಕಾರ ಮಾಡಿದರು. ಕೌಲಜ್ಞಾನ ನಿರ್ಣಯವು ಹನ್ನೊಂದನೆಯ ಶತಮಾನದಲ್ಲಿ ರಚಿತವು. ಲಿಪಿತತ್ವದಿಂದ 'ಬಾಗಚಿ'ಯವರು ಇದನ್ನು ಸ್ಥಿರ ಮಾಡಿದ್ದಾರೆ. ಲುಇಪಾದನ ದೋಹಾಗಳೂ ಹತ್ತನೆಯ ಶತಮಾನದ ಪೂರ್ವವರ್ತಿಯಲ್ಲ. ಲುಇಪಾದ ಮತ್ತು ಮತ್ಸ್ಯೇಂದ್ರನಾಥರು ಅಭಿನ್ನರು. ಬಂಗಾಲಿಯಾದ ಮತ್ಸ್ಯೇಂದ್ರನೇ ನೇಪಾಳದಲ್ಲಿ ನಾಮಾಂತರದಿಂದ 'ಲುಇಪಾದ'

ಎಂದು ಅಭಿಹಿತನಾಗಿದ್ದಾನೆ. ಅವನ ಮತ್ತೊಂದು ಹೆಸರು ಮೀನನಾಥ ಎಂದಿರುವದು. ಅತಏವ ಮತ್ಸ್ಯೇಂದ್ರನಿಗೆ ಹತ್ತನೆಯ ಶತಮಾನದ ಯೋಗಿಯೆಂದರೆ ಅನ್ಯಾಯವಾಗುವದಿಲ್ಲ. ಸುತರಾಂ ಗೋರಕ್ಷನಾಥನು ಪರವರ್ತಿ ಕಾಲದವನು.

೨) ಮಹಾರಾಷ್ಟ್ರದ ಸುವಿಖ್ಯಾತ ಕವಿ ಮತ್ತು ರಹಸ್ಯವಾದೀ ಜ್ಞಾನೇಶ್ವರ ಕಾಲ ಸಂಬಂಧದಿಂದ ಐತಿಹಾಸಿಕರು ಸ್ಥಿರ ಸಿದ್ಧಾಂತದಲ್ಲಿ ಮುಟ್ಟಿದ್ದಾರೆ. ಇವರು ಜನ್ಮ ಕ್ರಿ.ಶ. ೧೨೭೫ರಲ್ಲಿ ಮತ್ತು ಮರಣ ೧೨೯೬ರಲ್ಲಿ ಮಾತ್ರ. ೨೧ ವರ್ಷದ ವಯಸ್ಸಿನಲ್ಲಿ ಅವರು ಸ್ವೇಚ್ಛೆಯಿಂದ ಜೀವಂತ ಸಮಾಧಿಯನ್ನು ಗ್ರಹಣಮಾಡಿದರು. ಈ ಸಂಗತಿಯು ಅವರ ಜೀವನವೃತ್ತಾಂತದಲ್ಲಿ ಉಲ್ಲಿಖಿತವಾಗಿರುತ್ತದೆ. ಅವರ ತಂದೆ ಮತ್ತು ಅಣ್ಣ ಅವರಿಗೆ ಸಮಾಧಿಸ್ಥ ಮಾಡಿದರು. ಅವರಿಂದ ರಚಿತವಾದ 'ಜ್ಞಾನೇಶ್ವರಿ' ಎಂಬ ಗೀತಾಭಾಷ್ಯವು ಪ್ರಸಿದ್ಧಿಯನ್ನು ಪಡೆಯಿತು. ಭಾಂಡಾರಕರ ಮತ್ತು ಚಟ್ಟೋಪಾಧ್ಯಾಯ ಮಹಾಶಯದ್ವಯರು ಇದು ೧೨೯೦ ಕ್ರಿ.ಶ. ದಲ್ಲಿ ರಚಿತವೆಂದು ಸಿದ್ಧಾಂತ ಮಾಡಿದ್ದಾರೆ. ಜ್ಞಾನೇಶ್ವರನು ನಾಥಯೋಗಿಯು. ಗೋರಕ್ಷನಾಥನು ಅವನ ಪರಮಗುರುವಾಗಿದ್ದನು. ಜ್ಞಾನೇಶ್ವರನ ಪೂರ್ವಪುರುಷರೊಡನೆ ಗೋರಕ್ಷನಾಥನ ಯೋಗಾಯೋಗ ವೃತ್ತಾಂತವು ಮಹಾರಾಷ್ಟ್ರದಲ್ಲಿ ಸುವಿದಿತವು. ನಾಥಯೋಗಿಗಳು ದೀರ್ಘಜೀವಿಯಾಗಿರುತ್ತಿದ್ದರು ಹಾಗೂ ಭಾರತದ ಎಲ್ಲೆಡೆಯಲ್ಲಿಯೂ ಗಮನಾಗಮನ ಮಾಡುತ್ತಿದ್ದರು. ಅತಏವ ಗೋರಕ್ಷನಾಥನು ಪಶ್ಚಿಮ ಭಾರತದಲ್ಲಿ ಹೋಗುವದು ವಿಚಿತ್ರವಲ್ಲ. ವಂಗ ಗೀತಿಕೆಯಿಂದ 'ಅಬಂಗಾಲಿ' ಗೋರಖನಾಥನ ವಂಗದ ಸರ್ವತ್ರ ಸಂಚಾರದ ಕತೆಯು ನಂಬಲು ಯೋಗ್ಯವಾಯಿತು. ಅವನ ಪಶ್ಚಿಮ ಭಾರತದ ಗಮನದ ಕತೆಯು ಅವಿಶ್ವಾಸ್ಯ ಆಗುವದು ಹೇಗೆ? ಗೋರಕ್ಷನಾಥನಿಗೆ 'ಅಬಂಗಾಲಿ' ಎಂದು ಹೇಳಿದ್ದೇವೆ. ಯಾಕೆಂದರೆ ಅವನಿಂದ ರಚಿತವಾದ ಬಂಗಾಲಿ ಪದಗಳು ಅಥವಾ ಪುಸ್ತಕಗಳು ದೊರೆಯುವದಿಲ್ಲ. ಅವನ ರಚನೆಯ ಭಾಷೆಯು ರಾಜಸ್ಥಾನೀ ಪ್ರಭೃತಿ ಮಿಶ್ರಿತ ಹಿಂದೀ ಹಾಗೂ ಉತ್ತರ ಭಾರತದಲ್ಲಿಯೇ ಗೋರಕ್ಷನ ಹೆಸರಿನೊಡನೆ ಯುಕ್ತವಾದ ಸ್ಥಾನಾದಿಗಳು ಹೆಚ್ಚಾಗಿ ಕಂಡುಬರುತ್ತವೆ. ಅವನ ಪ್ರಧಾನ ಶಿಷ್ಯಳಾದ ಮಯನಾಮತಿಯು ಉಜ್ಜಯಿನಿಯ ರಾಜಕನ್ಯೆಯು. ಬೇರೆ ಬೇರೆ ಶಿಷ್ಯರು ಭರ್ತೃಹರಿ, ಜಾಲಂಧರ ಪ್ರಭೃತಿಗಳೂ ವಂಗದೇಶದವರಲ್ಲ. ಜ್ಞಾನೇಶ್ವರನ ಗುರು ನಿವೃತ್ತಿನಾಥನು ಅವನ ಅಣ್ಣನು ಹಾಗು ಜ್ಞಾನೇಶ್ವರನಿಗಿಂತ ಎರಡು ವರ್ಷ ಮಾತ್ರ ಹಿರಿಯನು. ಆದರೆ ನಿವೃತ್ತಿನಾಥನ ಮತ್ತು ಅವನ ಪರಮಗುರು ಗೋರಕ್ಷನಾಥನ ಕಾಲದಲ್ಲಿ ದೀರ್ಘ ವ್ಯವಧಾನದ ಸಂಬಂಧವನ್ನು ಹಿಡಿದು ಗೋರಕ್ಷನಾಥನ ಆವಿರ್ಭಾವ ಕಾಲವು ಅನುಮಾನಿಕ. ೧೧೭೫ ಕ್ರಿ.ಶ. ದಲ್ಲಿ ಅಥವಾ ಹನ್ನೊಂದನೆಯ ಶತಮಾನವೆಂದು ಹೇಳಲು ಶಕ್ಯವು. ಆ ಕ್ಷೇತ್ರದಲ್ಲಿ ಮತ್ಸ್ಯೇಂದ್ರನ ಕಾಲವು ಹತ್ತನೆಯ ಶತಮಾನ ಮತ್ತು ಕೌಲಜ್ಞಾನ ನಿರ್ಣಯದ ರಚನೆಯ ಕಾಲ ಹನ್ನೊಂದನೆಯ ಶತಮಾನದೊಡನೆ ಸಾಮಂಜಸ್ಯವಿರುತ್ತದೆ.

೩) ಅಭಿನವಗುಪ್ತ ರಚಿತ ತಂತ್ರಾಲೋಕವು ಒಂದು ಸುವಿಖ್ಯಾತ ತಂತ್ರದ ಗ್ರಂಥವು. ಇದು ಹನ್ನೊಂದನೆಯ ಶತಮಾನದ ಪ್ರಥಮದಲ್ಲಿ ರಚಿತವಾಗಿರುತ್ತದೆ. ಈ ಗ್ರಂಥದಲ್ಲಿ ಮಚ್ಛೇಂದ್ರ ವಿಭುವಿಗೆ ನಮಸ್ಕಾರ ಹೇಳಿದ್ದಾನೆ. ಅತಏವ ತಂತ್ರಾಲೋಕ ರಚನೆಯಪ್ರಾಯಃ ಒಂದು ನೂರು ವರ್ಷ ಪೂರ್ವದಲ್ಲಿ ಸಿದ್ಧಯೋಗೀರೂಪದಲ್ಲಿ ಮತ್ಸ್ಯೇಂದ್ರನು ನಮಸ್ಕಾರವನ್ನು ಪಡೆದಿದ್ದಾನೆಂದು ಗ್ರಹಿಸಿದರೆ ಮತ್ಸ್ಯೇಂದ್ರನ ಕಾಲವು ಹತ್ತನೆಯ ಶತಮಾನವೆಂದು ಹೇಳಬೇಕಾಗುವದು. ಇದರಲ್ಲಿಯೂ ಗೋರಕ್ಷನ ಉಲ್ಲೇಖವಿಲ್ಲ.

ಅಭಿನವಗುಪ್ತನ ಪ್ರ-ಪರಮಗುರು 'ಶಿವದೃಷ್ಟಿ' ರಚಯಿತ್ರ ಸೋಮಾನಂದನು ಪರಂಪರಾಕ್ರಮದಿಂದ ಮತ್ಸ್ಯೇಂದ್ರನೊಡನೆ ಯುಕ್ತನಿದ್ದನು. ಸೋಮಾನಂದನು ಅದ್ವೈತ ತಾಂತ್ರಿಕ ಸಂಪ್ರದಾಯದವನಿದ್ದನು. ಮತ್ಸ್ಯೇಂದ್ರನು ಕಾಮರೂಪದಲ್ಲಿ ಈ ಸಂಪ್ರದಾಯದ 'ಅರ್ಧತ್ರ್ಯಂಬಕ' ಹೆಸರಿನಿಂದ ಚತುರ್ಥಶಾಖೆಯ

ಪ್ರತಿಷ್ಠಾತೃವು. ತಂತ್ರಾಲೋಕ ಭಾಷ್ಯದಲ್ಲಿ ಇದರ ಉಲ್ಲೇಖವಿರುತ್ತದೆ. ಮತ್ಸ್ಯೇಂದ್ರನ ಕಾಮರೂಪದೊಡನೆ ಯೋಗಾಯೋಗ ಕತೆ ವಂಗ ಗೀತಿಕೆಯಲ್ಲಿ ಸುಪ್ರಚಲಿತ. 'ಕೌಲಜ್ಞಾನ ನಿರ್ಣಯ'ದಲ್ಲಿ ಕಾಮರೂಪದಲ್ಲಿ 'ಇದಂ ಶಾಸ್ತ್ರಂ ಯೋಗಿನೀನಾಂ ಗೃಹೇ ಗೃಹೇ', ಹೀಗೆ ವೃತ್ತಾಂತವಿರುತ್ತದೆ. ಪ್ರಸಂಗ ಕ್ರಮದಿಂದ ಉಲ್ಲೇಖ ಮಾಡಲಿಕ್ಕೆ ಶಕ್ಯವು, ಕೌಲಜ್ಞಾನದಲ್ಲಿ ಬೌದ್ಧಧರ್ಮದ ಯಾವ ಸಂಗತಿಯೂ ಇಲ್ಲ. ಅತಏವ ಇದು ಸಂಪೂರ್ಣ ರೂಪದಿಂದ ಶೈವ ತಾಂತ್ರಿಕಯೋಗಿ ರಚಿತ ಗ್ರಂಥವು.

೪) 'ಗೋರಕ್ಷ ಬೋಧ' ಗ್ರಂಥವು ನಾಥಸಂಪ್ರದಾಯದಲ್ಲಿ ಸುಪ್ರಚಲಿತವು. ಸಿಂಗ ಮತ್ತು ಗ್ರಿಯರಸನ್‌ರ ಮತದಿಂದ ಇದು ಹನ್ನೊಂದನೆಯ ಶತಮಾನದಲ್ಲಿ ರಚಿತವು. ತತ್ ಪರಿವರ್ತಿ ಕಾಲದಲ್ಲಿ 'ಗೋರಕ್ಷ ಬೋಧ'ಗ್ರಂಥವು ಜನಪ್ರಿಯವಾಗಿತ್ತು. ಅದರಲ್ಲಿ ಭಾವದ ಆದಾನ-ಪ್ರದಾನದಲ್ಲಿ ನಾಥಪಂಥದೊಡನೆ ಸಂತಸಂಪ್ರದಾಯದ ಸಾಧನತತ್ವಗಳು ಕೂಡಿ ಹೋಗಿದ್ದವು. ಈ ಬಗೆಯಾಗಿ ಪ್ರಕೃತ ನಾಥಮತದ ಅಧಿಕಾಂಶವು ಲೋಪಹೊಂದಿರುತ್ತದೆ. ಪರಾವರ್ತಿಕಾಲದ 'ಗೋರಕ್ಷಗೋಷ್ಠಿ' 'ಗೋರಕ್ಷ ಉಪನಿಷತ್' ಪ್ರಭೃತಿ ಗ್ರಂಥಗಳಿಂದ ಗೋರಕ್ಷ ಕಾಲನಿರ್ಣಯವು ಸಂಭವವಲ್ಲ. ಅವನ ಜನ್ಮಾದಿ ಸಂಬಂಧದಿಂದಲೂ ನಿರ್ಭರ ಯೋಗ್ಯವಾದ ಯಾವ ಪ್ರಮಾಣವೂ ದೊರೆಯುವದಿಲ್ಲ. ಅಂತೇ ಪ್ರಚಲಿತ ಮತ್ತು ನಿರ್ಭರಯೋಗ್ಯ ಮೂರು ಗ್ರಂಥಗಳು 'ಕೌಲಜ್ಞಾನ ನಿರ್ಣಯ' 'ತಂತ್ರಾಲೋಕ' ಮತ್ತು 'ಜ್ಞಾನೇಶ್ವರಿ'ಯ ಸಮನ್ವಯ ಸಾಧನಮಾಡಿ, ಮತ್ಸ್ಯೇಂದ್ರನಾಥನಿಗೆ ಹತ್ತನೆಯ ಶತಮಾನದ ಮತ್ತು ಗೋರಕ್ಷನಾಥನಿಗೆ ಹನ್ನೊಂದನೆಯ ಶತಮಾನದ ಯೋಗಿಯೆಂದು ಸ್ಥಿರ ಮಾಡಿದ್ದೇವೆ.

ಯೋಗಿಗಳ ಆದಿವಾಸಸ್ಥಾನದ ಸಂಬಂಧದಿಂದ ಮತಭೇದವಿದ್ದರು ಸಹ, ಮತ್ಸ್ಯೇಂದ್ರನು ಪೂರ್ವದೇಶದ ಮನುಷ್ಯನಿದ್ದನು ಎಂಬುದು ಅವಿಸಂವಾದಿತವು. ಕಾಮರೂಪದ ಪ್ರಧಾನ ನದಿ ಬ್ರಹ್ಮಪುತ್ರವು ಲೋಹಿತ ನಾಮದಿಂದ ಪರಿಚಿತವು. ಈ ದೇಶದ ಅಧಿವಾಸಿ ರೂಪದಿಂದ ಮತ್ಸ್ಯೇಂದ್ರನಿಗೆ 'ಲೋಹಿತಪಾ' ಮತ್ತು ಕ್ರಮೇಣ 'ಲುಇಪಾ' ಆಗುವದು ವಿಚಿತ್ರವಲ್ಲ. ಅತಏವ ಪೂರ್ವದೇಶಕ್ಕೆ ಕಾಮರೂಪವೆಂದು ಅನುಮಾನ ಮಾಡಲು ಶಕ್ಯವು.

ಗೋಪೀಚಂದ್ರನ ಜನ್ಮವು ಗೌಡ ವಂಗದೇಶದಲ್ಲಿ. ಈ ಗೌಡ ಪ್ರಾಚೀನ ಶ್ರೀಹಟ್ಟ. ಅದು ಉತ್ತರ ವಂಗದ ರಾಜಧಾನಿ. ಪ್ರಾಚೀನ ಗೌಡವಲ್ಲ. ಗೋಪೀಚಂದ್ರ 'ಕಾಮಲಾಕ' ಪ್ರಭೃತಿ ಸ್ಥಾನಗಳಲ್ಲಿ ಗಮನಮಾಡಿದನು. ಈ ಕಾಮಲಾಕವು ವರ್ತಮಾನ 'ಕುಮಿಲ್ಲಾ'. ಗೋರಕ್ಷನಾಥನ ಜನ್ಮಸ್ಥಾನವು ಅದ್ಯಾಪಿ ರಹಸ್ಯಾವೃತವು. ಸಿಂಗರು ಅವನನ್ನು ಪೂರ್ವವಂಗದ ಅಧಿವಾಸಿಯೆಂದು ಉಲ್ಲೇಖ ಮಾಡಿದ್ದಾರೆ.

ಜಾಲಂಧರಿನಾಥ, ಭರ್ತೃಹರಿನಾಥ, ಪ್ರಭೃತಿ ಯೋಗಿಗಳು ಭಾರತದ ಉತ್ತರ ತುದಿಯ ಅಧಿವಾಸಿಗಳಾಗಿದ್ದರು. ಧರ್ಮನಾಥನ ಪ್ರಾಯಶ್ಚಿತ್ತದ ಸಲುವಾಗಿ ಭಾರತದ ಪಶ್ಚಿಮದಲ್ಲಿ ಕಚ್ಛಪ್ರದೇಶದ 'ಧಿನೋಧರಮಠ'ವು ಪ್ರಸಿದ್ಧವಿದ್ದರೂ ಅವನು ವಾಯವ್ಯಭಾರತ ಪೇಶಾವರದವನಿದ್ದನು. ದೀನೋಧರ ಮಠವು ೧೩೮೨ ಕ್ರಿ.ಶ.ದಲ್ಲಿ ಅಧಿಷ್ಠಿತವಾಯಿತು. ಗೋರಕ್ಷಪುರ ಹಾಗೂ ನೇಪಾಳದ ಗೋರಕ್ಷ ಗುಹಾ ಮತ್ತು ತಥಾಕಾರ ಅಧಿವಾಸಿ 'ಗೋರ್ಖಾ' ಜಾತಿಯೊಡನೆ ಗೋರಕ್ಷನಾಥನ ಹೆಸರು ಯುಕ್ತವಾಗಿರುತ್ತದೆ. ನೇಪಾಳದ ರಾಜಧಾನಿಯಾದ 'ಕಾಟಮಾಂಡು' ವಿನಲ್ಲಿ ಕ್ರಿ.ಶ. ೧೬೦೦ರಲ್ಲಿ ಗೋರಕ್ಷ ಮಂದಿರವು ಸ್ಥಾಪಿತವಾಯಿತು. ಈ ಸ್ಥಾನದಲ್ಲಿ ಮತ್ಸ್ಯೇಂದ್ರನ ಮಂದಿರವೂ ಇರುತ್ತದೆ. ಕಾಟಮಾಂಡು ಅಥವಾ ಪಾಟಾನದ ಮೂರು ಮೈಲು ದೂರದಲ್ಲಿ ಬಾಗಮತಿಯಲ್ಲಿ ಮತ್ಸ್ಯೇಂದ್ರನ ಮತ್ತೊಂದು ಮಂದಿರವಿರುತ್ತದೆ. ಪ್ರತಿವರ್ಷ ಪಾಟಾನದಿಂದ ಬಾಗಮತಿ ವರೆಗೆ ಮಹಾ ಸಮಾರೋಹದಿಂದ ಮತ್ಸ್ಯೇಂದ್ರನ ರಥಯಾತ್ರಾ ಪ್ರಭೃತಿ ಆಗುತ್ತವೆ. ಬಾಗಮತಿಯಲ್ಲಿ ಆರು ತಿಂಗಳ ಕಾಲ ಮೂರ್ತಿಯನ್ನು ಇಟ್ಟು ಪುನಃ 'ಪಾಟಾನ'ಕ್ಕೆ ಒಯ್ಯುತ್ತಾರೆ. ಇದು ವೈಶಾಖೀ ಅನುಷ್ಠಾನ ಹೆಸರನಿಂದ ಪ್ರಸಿದ್ಧವು,

ಕಲ್ಕತ್ತೆಯ ಹತ್ತಿರ 'ಡಮ ಡಮ' ದಲ್ಲಿ 'ಗೋರಕ್ಷ ಬಾಂಶಲೀ' ಹೆಸರಿನ ಸ್ಥಾನವು ಗೋರಕ್ಷ ಕ್ಷೇತ್ರ ರೂಪದಿಂದ ಪರಿಚಿತವು. ಹುಗಳಿಯ ಹತ್ತಿರ ತ್ರಿವೇಣಿಯ 'ಮಹಾನಾದ'ಗ್ರಾಮದಲ್ಲಿ 'ಜಟೇಶ್ವರ ಮಂದಿರ' ಮತ್ತು 'ವಶಿಷ್ಠ ಗಂಗಾ' ನಾಮದಿಂದ ಜಲಾಶಯವಿರುತ್ತದೆ. ಇದು ಗೋರಕ್ಷಕ್ಷೇತ್ರವು. ಈ ಉಭಯ ಸ್ಥಾನಗಳಲ್ಲಿ ಈಗ ಸಹ ನಾಥಯೋಗಿಗಳು ವಾಸಮಾಡುತ್ತಾರೆ. ಗೋರಕ್ಷ ಬಾಂಶಲೀಯ ಹತ್ತಿರದಲ್ಲಿದ್ದ 'ಘಾಟ್ ಗಾಥಿ' ಗ್ರಾಮದಲ್ಲಿ ನಾಥ ಸಂಪ್ರದಾಯದ ಒಬ್ಬ ಸಾಧಕ ಚಿಕಿತ್ಸಕನು ವಾಸಮಾಡುತ್ತಾನೆ. ಅವನು ಆಶ್ಚರ್ಯಕರ ಫಲಪ್ರದ ಔಷಧಕ್ಕ ಯಥೇಷ್ಟ ಖ್ಯಾತಿಯು ಇರುತ್ತದೆ.

ಈಗ ನಾಥಯೋಗಿಗಳ 'ಸಿದ್ಧಾಂತ ಮತ್ತು ಸಾಧನಾ' ಸಂಬಂಧದಿಂದ ಕೆಲವು ವೈಶಿಷ್ಟ್ಯಗಳ ಆಲೋಚನೆಯನ್ನು ಮಾಡೋಣ. ಮೋಕ್ಷಲಾಭವೇ ಎಲ್ಲ ಸಾಧನೆಗಳ ಮೂಲತತ್ತ್ವವು. ಮಾನವನು ಜನ್ಮ-ಮರಣಜ ಚಕ್ರದಿಂದ ಅವ್ಯಾಹತಿ ಲಾಭದ ಸಲುವಾಗಿ ಸನ್ಯಾಸ ಗ್ರಹಣಮಾಡಿ ಧರ್ಮಸಾಧನೆಯ ಪಕ್ಷಪಾತಿಯಾದರೆ ನಾಥಪಂಥದಲ್ಲಿ ಮೋಕ್ಷಲಾಭ ಆವಶ್ಯಕ ಬೋಧವಾದರೂ, ಇದು ನಾಥರ ಲಕ್ಷ್ಯವಲ್ಲ. ಸಿದ್ಧಿ ಅಥವಾ ವಿಭೂತಿಯನ್ನು ಸಂಪಾದಿಸಿ ಈ ಮರಣಶೀಲದೇಹಕ್ಕೇ ಸಾಧನದಿಂದ ಮೃತ್ಯುಹೀನ ಮಾಡಿ ಜೀವನ್ಮುಕ್ತಿಲಾಭವೇ ಆದರ್ಶವು. ಅಂತೇ ಈ ದೇಹಕ್ಕೆ ಮುಕ್ತಿಲಾಭದ ಅಡ್ಡಿ ಇಲ್ಲ. ಸಹಾಯಕ ಸ್ವರೂಪವೇ ಅವರು ತಿಳಿದಿದ್ದರು. ದೇಹಪಾತದಿಂದ ಯಾವ ಮುಕ್ತಿ ಲಾಭವಾಗುವದು ಅದಕ್ಕೆ ನಾಥರು ಯಥಾರ್ಥಮುಕ್ತಿ ಅನ್ನುವದಿಲ್ಲ. ಯಾಕಂದರೆ ಆ ಮುಕ್ತಿ ದೇಹಪಾತರೂಪ ಪ್ರತಿಬಂಧಕದಿಂದ ಭಾದಿತವು. ನಾಥರು ಅನ್ನುತ್ತಾರೆ-ಯಾವ ದೇಹದಿಂದ ಪರಮಪದ ಅರ್ಥಾತ್ ಶ್ರೇಷ್ಠಪದದ ಪ್ರಾಪ್ತಿಯಾಗಿರುತ್ತದೆ ಅದಕ್ಕೆ ಅಜರ, ಅಮರ ಮಾಡುವದು ಕರ್ತವ್ಯವು. ಯಾಕಂದರೆ ಮೃತ್ಯುವಿನ ತರುವಾಯ ಏನು ಘಟಿಸುವದು? ಅದರ ನಿಶ್ಚಯತೆ ಏನು? ಜೀವನ್ಮುಕ್ತಯೋಗಿಯ ಪ್ರಾಣವು ಬಹಿರ್ಗತವಾಗುವದಿಲ್ಲವೆಂದು ಹಾಗು ದೇಹತ್ಯಾಗವು ಅವರ ಸ್ವೇಚ್ಛಾಧೀನವೆಂದು ಅವರು ಕಾಲಜಯಿ ಆಗಿ ಯಥೇಚ್ಛ ವಿಚಾರಣ ಮಾಡಲು ಶಕ್ತರು.

ಯಾವ ಜೀವನ್ಮುಕ್ತ ಯೋಗಿಯು ಕಾಲಜಯಿ, ಅವನ 'ದೇಹಸಿದ್ಧಿ'ಯು ಪೂರ್ಣವಾಗಿದೆಯೆಂದು ತಿಳಿಯಬೇಕಾಗುವದು. ಈ ದೇಹಸಿದ್ಧಿಯ ನಾಮಾಂತರ 'ಕಾಯಾಸಿದ್ಧಿ'. ನಾಥರು ಇದರ ಯಥಾರ್ಥ ಮೌಲ್ಯವನ್ನು ತಿಳಿಯುತ್ತಿದ್ದರು. ಅದೇ ಕಾರಣದಿಂದ ಈ ದೇಹಕ್ಕೇ ಆತ್ಮಸ್ವರೂಪವೆಂದು ತಿಳಿದು, ಜೀವನ್ಮುಕ್ತಿಯ ಸಾಧನೆಯನ್ನು ಮಾಡುತ್ತಿದ್ದರು. ಯಾವ ಪದ್ಧತಿಯಿಂದ ಕಾಯಾಸಾಧನ ಮಾಡಬೇಕಾಗಿತ್ತು ಅದರ ಹೆಸರು 'ಉಲ್ಟಾ ಸಾಧನ'. ಗೋರಕ್ಷವಿಜಯಂ, ಗೋರಕ್ಷ ಬೋಧ, ಪ್ರಭೃತಿ ಗ್ರಂಥಗಳಲ್ಲಿ ಈ ಸಾಧನತತ್ವವು ಇರುತ್ತದೆ.

ಅವಿದ್ಯಾ ಅಥವಾ ಅಜ್ಞಾನವು ಮನುಷ್ಯನ ತತ್ವಜ್ಞಾನದ ಬಾಧಕವು. ಅಂತೇ ಅವಿದ್ಯಾ ದೂರ ಮಾಡಿ ತತ್ವಜ್ಞಾನ ಸಂಪಾದಿಸಿ ಅದರಿಂದ ಮನೋನಾಶ, ಮತ್ತು ವಾಸನಾಕ್ಷಯ ಮಾಡುವದು ನಾಥರ ಲಕ್ಷ್ಯವಾಗಿತ್ತು. ಈ ತತ್ತ್ವಜ್ಞಾನದ ಹೆಸರು ಮಹಾಜ್ಞಾನ ಅರ್ಥಾತ್ ಯೋಗಯುಕ್ತಜ್ಞಾನ. ಇದರ ಸಂಪಾದನೆಯಿಂದ ಅಜರ ಮತ್ತು ಅಮರವಾಗುವದು. ಪ್ರಾಣಾಯಾಮ, ಆಸನ, ಮುದ್ರಾದಿ ಸಾಧನಗಳು ಇದರ ಅಂಗವಿಶೇಷಗಳು. ಆಸನಗಳಲ್ಲಿ ಸಿದ್ಧಾಸನ ಮತ್ತು ಪದ್ಮಾಸನಗಳು ಪ್ರಶಸ್ತವು ಹಾಗು ಮುದ್ರಾದಿಗಳಲ್ಲಿ 'ಖೇಚರಿಮುದ್ರಾ' ಪ್ರಧಾನವು. ಕುಂಡಲಿನಿಯ ಜಾಗರಣದಿಂದ ಸಹಸ್ರಾರದಲ್ಲಿದ್ದ ಅಮೃತ ಆಸ್ವಾದನದಲ್ಲಿ 'ಖೇಚರಿಮುದ್ರಾ' ಯೋಗಿಗೆ ಸಹಾಯಕವು. ಚಿತ್ತವು 'ಮಸ್ತಕ' (ತಲೆಬುರುಡೆ)ದಲ್ಲಿ ಭ್ರಮಣ ಮಾಡುತ್ತದೆ ಮತ್ತು ಜಿಹ್ವಾ 'ಖ' ಮುದ್ರಾ ಪರ್ಯಂತ ಪ್ರಸಾರಿತವಾಗುವದೆಂದು ಈ ಮುದ್ರೆಯ ಹೆಸರು 'ಖೇಚರೀ'. ಜಿಹ್ವೆಯನ್ನು 'ತಿರುಗಿಸಿ' ಕಂಠಕೂಪದಲ್ಲಿ ಪ್ರಸಾರಿತ ಮಾಡಿ ಈ ಮುದ್ರೆಯ ಸಾಧನೆ ಮಾಡಬೇಕಾಗುವದು. ಆಗ ಅಮೃತದ ಆಸ್ವಾದನೆಯಿಂದ ಯೋಗಿಗೆ ಕ್ಷುಧಾತೃಷ್ಣಾದಿ ತಿಳುವಳಿಕೆ ಉಳಿಯುವದಿಲ್ಲ. ಶಿವ ಮತ್ತು ಶಕ್ತಿಗಳ ಮಿಲನ ಸಾಧನದಿಂದ ಈ ಮುದ್ರಾ

ಅಪರಿಹಾರ್ಯವು. ಈ ಮಿಲನದ ಫಲದಿಂದ ಯಾವ ಮಹಾಜ್ಞಾನದ ಅಧಿಕಾರಿ ಆಗಬೇಕಾಗುತ್ತದೆಯೋ ಬೌದ್ಧ ಸಹಜಿಯಾ ಸಾಹಿತ್ಯದಲ್ಲಿ ಅದಕ್ಕೇ ಮಹಾಮುದ್ರಾ, ಸಾಕ್ಷಾತ್ಕಾರವೆನ್ನುತ್ತಾರೆ. ಶೈವರ ಶಿವ ಮತ್ತು ಶಕ್ತಿಗಳು, ಬೌದ್ಧ ಸಹಜಿಯಾರ 'ಶೂನ್ಯತಾ' ಮತ್ತು ಕರುಣಾ ಶೈವರ ಶಿವ-ಶಕ್ತಿಗಳ ಮಿಲನರೂಪ ಮಹಾಸುಖಕ್ಕೆ ಬೌದ್ಧ ಸಹಜಿಯಾ 'ಏವಂಕಾರ' ರೂಪದಿಂದ ವರ್ಣನೆ ಮಾಡಿರುತ್ತದೆ. ತಿಳಿಯುವ ಅನುಕೂಲತೆಯ ಸಲುವಾಗಿ ಇಷ್ಟು ಮಾತ್ರ ತುಲನಾಮೂಲಕ ಆಲೋಚನೆಯು ಮಾಡಲ್ಪಟ್ಟಿತು.

ಸಾಧನೆಯಿಂದ ಯಾವ ದೇಹವು ಪರಿಶುದ್ಧವಾಗಿ ಮಹಾಜ್ಞಾನ ಧಾರಣಕ್ಕೆ ಯೋಗ್ಯವಾಗಿರುತ್ತದೆ, ನಾಥರು ಅದಕ್ಕೆ ಪಕ್ವದೇಹವೆನ್ನುತ್ತಾರೆ. ಇಂತಹ ದೇಹದಲ್ಲಿಯೇ ಶಿವ-ಶಕ್ತಿಗಳ ಮಿಲನವಾಗುವದು.

ನಾಥಪಂಥದಲ್ಲಿ ದೇಹಸ್ಥ ಶಕ್ತಿಯನ್ನು ಜಾಗರಿತಮಾಡಿ ಊರ್ಧ್ವಮುಖಿಯಾಗಿ ಮಾಡುವ ಸಾಧನಕ್ಕೆ ಉಲ್ಟಾಸಾಧನವೆನ್ನುತ್ತಾರೆ. ಉಲ್ಟಾಸಾಧನವೆಂದರೆ ಬಹಿರ್ಮುಖಿಯಾದ ಮನವನ್ನು ಅಂತರ್ಮುಖಿಯಾಗಿ ಮಾಡುವದು. ಈ ಸಾಧನದ ನಿಮಿತ್ತ ಶರೀರಸ್ಥ ವಿಭಿನ್ನನಾಡಿ ವಿಶೇಷತ ಬಂಕನಾಲ ಅಥವಾ ಶಂಖಿನಿನಾಡಿಯ ಅವಸ್ಥಾನ ತಿಳಿಯುವದು ಕರ್ತವ್ಯವು. ವೇದಾಂತದ ವಿವೇಕ ವೈರಾಗ್ಯ ಸಾಧನ, ಸಾಂಖ್ಯರ ಷೋಡಶ ವಿಕಾರ ಜಯ. ಪಾತಂಜಲಿಯ ಯೋಗಸಾಧನಗಳೆಲ್ಲವೂ ಚಿತ್ತವೃತ್ತಿಯ ನಿರೋಧದಿಂದ ಮನವನ್ನು ಅಂತರ್ಮುಖಿಯನ್ನಾಗಿ ಮಾಡುವ ನಿರ್ದೇಶ ಈ ಬಗೆಯಾಗಿ 'ಉಲಟಾ' ಸಾಧನಕ್ಕೆ ಬೌದ್ಧ ಸಹಜಿಯಾರ 'ಪರಾವೃತ್ತಿಯ ಪಥ' ಅನ್ನುತ್ತಾರೆ. ಅರ್ಥಾತ್ ಮೃತ್ಯುವಿನ ಪಥದಲ್ಲಿ ಮುಂದಾಗದೆ ಸಂಪೂರ್ಣ ದಿಕ್‌ಪರಿವರ್ತನ ಮಾಡಿ, ಉಲ್ಟಾಪಥದಲ್ಲಿ ಅಗ್ರಸರವಾಗುವ ಸಾಧನವು ಗಡಿಯಾರದ ಮುಳ್ಳನ್ನು ಅದರ ಸ್ವಾಭಾವಿಕ ಗತಿಪಥದಿಂದ ಒಮ್ಮೆ ತಿರುವು ಮಾಡಿದಂತೆ ಉದಾಹರಣ ಕೊಡಲಿಕ್ಕೆ ಶಕ್ಯವು. ಬಂಗಾಲದ 'ಆವುರ, ಬಾವುಲ' ವೈಷ್ಣವಕವಿಗಳು ಉಲ್ಟಾಪಥದಲ್ಲಿ ನೌಕೆಯನ್ನು ಸಾಗಿಸುವ ಕತೆಯನ್ನು ಹೇಳಿದ್ದಾರೆ. ಗೋರಕ್ಷವಿಜಯ ಗ್ರಂಥದಲ್ಲಿಯೂ ಇರುತ್ತದೆ:

'ಬ್ರಹ್ಮನಾತೀ ಉಜಾನೇ ಸುಥಿಬೇ ಸುನಿಶ್ಚಿತ'।

ಸಂತ ಮತ್ತು ಸುಫೀ ಸಾಧಕರು ಸಾಂಕೇತಿಕ ಭಾಷೆಯಲ್ಲಿ 'ಉಲ್ಟಾಸಾಧನ'ದ ನಿರ್ದೇಶ ಮಾಡಿದ್ದಾರೆ. ಈ ವಿಶೇಷಭಾಷೆಯ ಹೆಸರು ಸಹ ಉಲ್ಟಾವಾಣಿ. ದೋಹಾರಚಯಿತಾ ಸಿದ್ಧಾಚಾರ್ಯರು ಸಾಂಧ್ಯಭಾಷಾ ಅರ್ಥಾತ್ ಅಭಿಸಂಧಿತಭಾಷಾ ವ್ಯವಹಾರ ಮಾಡುತ್ತಿದ್ದರು. 'ಮರಮೀಸಾಧಕರು' ಮಾತ್ರ ಆ ಎಲ್ಲ ಭಾಷೆಗಳ ಗೂಢಾರ್ಥವನ್ನು ತಿಳಿಯುತ್ತಿದ್ದರು. 'ಗೋಲಕ ಧಾಂಧಾ' ಶಬ್ದವು ಗೋರಕ್ಷಧಂದಿಂ ಇದರಿಂದ ಉತ್ಪತ್ತಿಯೆಂದು ಕೆಲ ಕೆಲವರು ತಿಳಿಯುವರು.

ನಾಥಯೋಗಿಗಳ ಉಲ್ಟಾಸಾಧನದ ವಿಶೇಷತ್ವವು ಇದೇ. ಅವರು ಹಠಯೋಗದ ಸಹಾಯದಿಂದ ಶಕ್ತಿಯನ್ನು ಸುಷುಮ್ನಾನಾಡಿಯ ಪಥದಲ್ಲಿ ಷಟ್‌ಚಕ್ರಭೇದಮಾಡಿ ಮಸ್ತಕದಲ್ಲಿ ಒಯ್ದು, ಶಿವ ಸಾಮೀಪ್ಯವನ್ನು ಹೊಂದುತ್ತಿದ್ದರು. ಈ ವಿಶೇಷ ಸಾಧನದ ಹೆಸರು 'ಕುಂಡಲಿನೀ ಸಾಧನ'ವೆಂದು. ಮಾನವ ಮಾತ್ರರ ದೇಹದಲ್ಲಿ ಶಕ್ತಿರೂಪಾ ಕುಂಡಲಿನೀ ಸುಪ್ತವಾಗಿ ವಿರಾಜಮಾಡುತ್ತದೆ. ತಾಂತ್ರಿಕ ಸಾಧಕ ಈ ನಿದ್ರಾಭಂಗದ ಸಾಧನಾ ಮಾಡುತ್ತಾನೆ. ಷಟ್‌ಚಕ್ರ ಭೇದಮಾಡಿ ಶಕ್ತಿ ಮಸ್ತಕದಲ್ಲಿದ್ದ ಸಹಸ್ರಾರದಲ್ಲಿ ಶಿವಸ್ಥಾನದಲ್ಲಿ ಮುಟ್ಟಲು ದೇಹದಲ್ಲಿ ಯಾವ ಅನಿರ್ವಚನೀಯ ಸುಖವು ಅನುಭೂತವಾಗುತ್ತದೆಯೋ ಅದೇ ಮಹಾಸುಖವು. ಇದೇ ಶಿವ-ಶಕ್ತಿಗಳ ಸಮನ್ವಯ, ಸಾಧನ ರೂಪ 'ಸಾಮರಸ್ಯ' ಅಥವಾ ಸಾಮರಸೀಕರಣ. ಈ ಅವಸ್ಥೆಯಲ್ಲಿ ಆತ್ಮವು ವಿಶ್ವವನ್ನು ಅತಿಕ್ರಮಿಸಿ, ತನ್ನ ನಿರ್ವಿಕಲ್ಪ ಪದದಲ್ಲಿ ಸ್ಥಿತಿಯನ್ನು ಹೊಂದುವದು. ಆಗ ಸ್ವೀಯ ಪೂರ್ಣತ್ವ ಉಪಲಬ್ಧಿಯ ಫಲದಿಂದ ಸಾಧಕನು 'ಶಿವೋಽಹಮ್' ಅನ್ನಲು ಸಮರ್ಥನಾಗುವನು.

ಯೋಗಿಗಳು ಹೇಳುವರು-ಸಂಕಲ್ಪ ವಿಕಲ್ಪಗಳೇ ಸಕಲ ಚಾಂಚಲ್ಯಕ್ಕೆ ಮೂಲವು ಮತ್ತು ಮನದ ಚಾಂಚಲ್ಯವು ದೂರವಾಗಲು ಯಾವ ಅವಸ್ಥೆಯ ಉದ್ಭವವಾಗುವದು ಅದಕ್ಕೇ ನಾಥರು 'ನಿರುತ್ಥಾನದಶಾ'

ಅನ್ನುವರು. ಅರ್ಥಾತ್ ಚಾಂಚಲ್ಯದ ಉತ್ಥಾನ ರಹಿತ ಅವಸ್ಥೆ. ಈ ನೈರುಧ್ಯವೇ ಸಾಮರಸ್ಯ ಅಥವಾ ಪರಮಪದದಲ್ಲಿ ಸ್ಥಿತಿಲಾಭದ ಉಪಾಯವು. ಈ ಸ್ಥಿತಿಲಾಭವೇ ನಾಥರ ಆದರ್ಶವು. ಈ ಅವಸ್ಥೆ ಸರ್ವಾನಂದಮಯ ನಿಶ್ಚಲ ಅವಸ್ಥೆ. ಈ ಪರಮಪದದಲ್ಲಿ ಅವಸ್ಥಾನವೇ ಜೀವನ ಅಭೀಷ್ಟತಮ ಗತಿಯು. ಗೀತೆಯಲ್ಲಿಯೂ ಇರುತ್ತದೆ-

'ಯದ್ ಗತ್ವಾ ನ ನಿವರ್ತಂತೇ ತದ್ಧಾಮ ಪರಮಂ ಮಮ'।

ಈ ಪ್ರಕಾರ ನಿರುತ್ಥಾನ ದಶೆಯಲ್ಲಿ ಯಾವ ನಾಮ ಮತ್ತು ರೂಪ ಹೀನ ಭಾವದ ಪ್ರಕಾಶವಾಗುವದೋ ಅದೇ ದ್ವೈತಾದ್ವೈತಹೀನ ನಾಥಸ್ವರೂಪ ಅವಸ್ಥೆಯು. ಈ ನಾಥ ಸ್ವರೂಪವು ತ್ಯಾಗ ಅಥವಾ ಭೋಗದಿಂದ ಆಲಿಪ್ತವು. ಅಂತೇ ನಾಥರು ಹೇಳುತ್ತಾರೆ - ಮುಕ್ತಿಯು ಭೋಗದಲ್ಲಿಯೂ ಇಲ್ಲ. ತ್ಯಾಗದಲ್ಲಿಯೂ ಇಲ್ಲ. ತ್ಯಾಗ ಮತ್ತು ಭೋಗದ ಸಮನ್ವಯ ಸಾಧನವೇ ನಾಥರ ವೈಶಿಷ್ಟ್ಯವು. ಅವಧೂತರು ಈ ತ್ಯಾಗ ಮತ್ತು ಭೋಗದ ಸಮನ್ವಯ ಸಾಧನದ ರಹಸ್ಯ ಅಥವಾ ತತ್ವಗಳನ್ನು ತಿಳಿದವರೆಂದು ನಾಥರು ಏಕಮಾತ್ರ ಅವಧೂತ ರೂಪೀ ಗುರುವಿಗೇ ಸದ್ಗುರು ಎಂದು ಅನ್ನುತ್ತಾರೆ. ಈ ಸದ್ಗುರುವಿನ 'ಶಕ್ತಿಪಾತ' ಅರ್ಥಾತ್ ಕೃಪಾದೃಷ್ಟಿಯಿಂದ ಜೀವಮಾತ್ರ ಸಿದ್ಧಿಲಾಭದಲ್ಲಿ ಸಮರ್ಥರು. "ಸಿದ್ಧಿರ್ಗುರು ವಾಕ್ಯೇನ ಲಭ್ಯತೇ" ಇದರಲ್ಲಿ ನಾಥರು ವಿಶ್ವಾಸವನ್ನು ಇಡುತ್ತಾರೆ.

ನಾಥಮತದಲ್ಲಿ ಶಿವ ಮತ್ತು ಶಕ್ತಿ ಅಭಿನ್ನ ಅರ್ಥಾತ್ ಎಲ್ಲದರ ಮೂಲದಲ್ಲಿ ಯಾವ ಚಿತ್‌ರೂಪ ಪರಮೇಶ್ವರನು ಇರುತ್ತಾನೆ, ಅವನೊಡನೆ ಚಿತ್‌ಶಕ್ತಿ ಸದಾ ಯುಕ್ತವಾಗಿರುತ್ತದೆ. ಆ ಶಕ್ತಿಯ ಕ್ರಿಯಾಶೀಲ ಅವಸ್ಥೆಯಲ್ಲಿ ವ್ಯಕ್ತ ಜಗತ್ತಿನ ಉದ್ಭವವಾಯಿತು. ನಿಷ್ಕ್ರಿಯ ಅವಸ್ಥೆಯಲ್ಲಿ ಜಗತ್ತಿನ ಲಯವಾಗುವದು. ಅಂತೇ ಶಕ್ತಿಹೀನ ಶಿವ ಅಥವಾ ಶಿವಹೀನ ಶಕ್ತಿಯು ನಾಥರ ಕಲ್ಪನೆಗೆ ಅತೀತವು. ತಂತ್ರದ ಚಿತ್‌ಶಕ್ತಿಯುಕ್ತ ಚೈತನ್ಯಮಯ ಶಿವ ಮತ್ತು ವೇದಾಂತದ ಜಡ ಶಕ್ತಿಯುಕ್ತ ಅಥವಾ ಮಾಯಾಯುಕ್ತ ಬ್ರಹ್ಮ ಒಂದು ಅಲ್ಲ. ಸಾಧನೆಯಿಂದ ಮಾಯಾ ದೂರ ಮಾಡಲ್ಪಡುವದು. ಚಿತ್‌ಶಕ್ತಿಗೆ ದೂರ ಮಾಡಲ್ಪಡುವದಿಲ್ಲ. ಇದೇ ಪ್ರಭೇದವು. ನಾಥಪಂಥವು ಅದ್ವೈತವಾದ ಮತ್ತು ಶಕ್ತಿಯ ಪ್ರಸರ ಮತ್ತು ಸಂಕೋಚಭಾವಕ್ಕೆ ಆಶ್ರಯ ಮಾಡಿ, ಬ್ರಹ್ಮಾಂಡದ ಸೃಷ್ಟಿ ಮತ್ತು ಸಂಹಾರಕ್ಕೆ ಬ್ರಹ್ಮದ ಮಾಯಾರೂಪದಿಂದ ಅಲ್ಲ. ಶಿವನ ಕಲ್ಪನಾ ಅಥವಾ ಆಭಾಸ ರೂಪದಿಂದ ಗಣನಾ ಮಾಡುತ್ತಾರೆ. ಈ ಸೃಷ್ಟಿ ತತ್ತ್ವವು ಅನೇಕಾಂಶದಲ್ಲಿ ಸಾಂಖ್ಯರ ಅನುರೂಪವಾಗಿದ್ದರೂ ತ್ರಿಕ ಅಥವಾ ಶಿವ-ಶಕ್ತಿ ಮತ್ತು ಜೀವರೂಪೀ ಅಣು ಸಂಬಂಧದಲ್ಲಿಯೂ ಅವರು ವಿಚಾರ ಮಾಡಿರುತ್ತಾರೆ. ಜೀವನೇ ಶಿವ, ಶಿವನೇ ಜೀವ. ಶರೀರಾಭಿಮಾನದ ನಿಮಿತ್ತ ಜೀವವು ಸ್ವದೇಹದಲ್ಲಿ ಶಿವಭಾವವನ್ನು ಉಪಲಬ್ಧಿ ಮಾಡಲಿಕ್ಕೆ ಅಕ್ಷಮವು,. ಸಾಧನೆಯಿಂದ ಶರೀರಾಭಿಮಾನವು ದೂರವಾಗಲು ಪಾಶಯುಕ್ತ ಜೀವನು ಶಿವತ್ವವನ್ನು ಪಡೆಯುತ್ತಾನೆ. ನಾಥರು ದೇಹದಲ್ಲಿ ವಿಭಿನ್ನ ದೇವ-ದೇವಿಯರ ಅವಸ್ಥಾನವನ್ನು ಕಲ್ಪನೆ ಮಾಡಿದ್ದಾರೆ. ಬ್ರಹ್ಮಾಂಡದಲ್ಲಿ ಯಾವದು ಇರುವದೋ, ಅದು ದೇಹಭಾಂಡದಲ್ಲಿ ಇರುವದು. ನಾಥರು ಇದನ್ನು ಉಪಲಬ್ಧಿ ಮಾಡಿಕೊಂಡಿದ್ದರು. ಮಧ್ಯಯುಗದ ಬೇರೆ ಬೇರೆ ಸಾಧಕ ಸಂಪ್ರದಾಯಗಳೂ ಈ ರಹಸ್ಯವನ್ನು ತಿಳಿದಿದ್ದವು.

ದೇಹದಲ್ಲಿಯೇ ದೇಹಾತೀತನ ಸಂಧಾನವು ದೊರೆಯುವದು. ಅಂತೇ ಅವರ ಪಕ್ಷದಲ್ಲಿ ಸಾಧನವು ಕಠಿಣವಾಗಿಲ್ಲ. ಈ ದೇಹಾತೀತ ಅವಸ್ಥೆಯಲ್ಲಿ ಉಪನೀತವಾಗಲು ಸಾಧಕನಿಗೆ ಯಾವ ಅವಸ್ಥೆಯು ಒದಗುವದೋ ಅದಕ್ಕೆ ನಾಥರು 'ಅಮನಸ್ಕ' ಅಥವಾ 'ಉನ್ಮನೀ ಅವಸ್ಥೆ' ಎಂದು ಅನ್ನುತ್ತಾರೆ. ಸಂತ ಕವಿಗಳು ಅದಕ್ಕೇ 'ಬಿನ-ಮನ-ಸಾ' ಅವಸ್ಥೆಯೆನ್ನುತ್ತಾರೆ. ಅರ್ಥಾತ್ ಇದು ಮನೋಹೀನ ಅವಸ್ಥಾ ವಿಶೇಷವು.

ಈ ಉನ್ಮನೀ ಅವಸ್ಥಾ ಪ್ರಾಪ್ತಿಯು ನಾದದ ಸಹಾಯದಿಂದಲೇ ಸಂಭವವಾಗುವದು. ಗೋರಕ್ಷ ರಚಿತವಾದ 'ಅಮರೌಘಶಾಸನ'ದಲ್ಲಿ ಮೋಕ್ಷ ಸಂಬಂಧದಿಂದ ಯಾವ ಆದರ್ಶವಿರುತ್ತದೆ, ಅದೇ ನಾಥರ ವೈಶಿಷ್ಟ್ಯವು. ಅದು "ಸರ್ವಂ ಪರಿತ್ಯಜ್ಯ ಶಬ್ದ ಬ್ರಹ್ಮ ಸದಾಭ್ಯಸ್ಯೇತ್". ಇದರ ಸಾಧನೆಯು ವಾಯುವನ್ನು ಆಶ್ರಯ ಮಾಡಿ ಈ ನಾದವು ಏಳುವದು. ಆದರೆ ಇದು ಶಬ್ದಹೀನವು. ದೇಹದಲ್ಲಿ ಇದು ಅನಾಹತ ನಾದರೂಪದಿಂದ ಯಾವಾಗಲೂ ಧ್ವನಿತವಾಗುತ್ತದೆ. ಅಂತೇ ಇದರ ನಾಮಾಂತರವು 'ಅಜಪಾಜಪವು' . ಸಂತಕವಿಯ ಭಾಷೆಯಲ್ಲಿ ಇದು 'ಅನಹದ್‌ನಾದ'. ಪ್ರವಾಹದಂತೆ ಇದು ನಿರಂತರ ಹರಿಯುತ್ತಿರುತ್ತದೆ. ಅಜ್ಞಾನಿ ಮಾನವನು ಆ ಸಂಬಂಧದಿಂದ ಸಂಪೂರ್ಣ ಅಚೇತನನು. ಪ್ರಾಚೀನ ಯುಗದಿಂದಲೇ ಚಿತ್ತವೃತ್ತಿಯನ್ನು ಈ ಶಬ್ದದಲ್ಲಿ ಅಥವಾ ಮಂತ್ರದಲ್ಲಿ ಲಯಮಾಡುವ ಉಪದೇಶವಿರುತ್ತದೆ. ಇದಕ್ಕೆ 'ಮಂತ್ರ-ಚೈತನ್ಯ' ಅನ್ನುತ್ತಾರೆ. ಯೋಗ ಮತ್ತು ಉಪನಿಷದಾದಿಗಳಲ್ಲಿ ಮಂತ್ರ ಸಹಾಯದಿಂದ ಅಸಂಪ್ರಜ್ಞಾತ ಸಮಾಧಿಯಲ್ಲಿ ಲೀನವಾಗುವ ಸಂಗತಿಯು ಇರುತ್ತದೆ. ನಾಥಮಾರ್ಗದಲ್ಲಿ 'ಓಂ' ಮಹಾಮಂತ್ರದಿಂದ ಸರ್ವೋಚ್ಚ ಸಮಾಧಿಯಲ್ಲಿ ನೀತವಾಗುವ ಸಾಧನವಿರುತ್ತದೆ. ಯೋಗಸಾಧನದ ಪಥದಲ್ಲಿ ನಾದದ ವಿಭಿನ್ನಸ್ತರದ ಸ್ಪಷ್ಟ ಅನುಭೂತಿಯಾಗುವದು. ನಾಥ ಪಂಥದಲ್ಲಿ ಆ ಸ್ತರಗಳಿಗೆ 'ಶೂನ್ಯ' ಹೆಸರು ಕೊಡಲ್ಪಟ್ಟಿದೆ. ಈ ಸ್ತರಕ್ಕೆ ಅವಕಾಶ ಅನ್ನಲ್ಪಡುತ್ತದೆ. ಬೌದ್ಧ ಸಹಜಿಯಾ, ಪಾತಂಜಲಯೋಗ, ಕಾಶ್ಮೀರ ಶೈವಾಗಮ ಪ್ರಭೃತಿ ಸಂಪ್ರದಾಯಗಳಲ್ಲಿ ಈ ಸ್ತರದ ಅಥವಾ ಶೂನ್ಯದ ವರ್ಣನೆಯು ಇರುತ್ತದೆ. ಆದರೆ ಶೂನ್ಯದ ಸಂಖ್ಯೆ ಸಂಬಂಧದಿಂದ ಮತಭೇದವಿರುತ್ತದೆ. ವಿಸ್ತಾರಿತ ಆಲೋಚನೆಯು ಇಲ್ಲಿ ಅಪ್ರಾಸಂಗಿಕವು. ನಾಥರ ಪಂಚವ್ಯೋಮ ಸಾಧನೆಯು ಪ್ರಕಾರಾಂತರದಲ್ಲಿ ಶೂನ್ಯದ್ದೇ ಸಾಧನೆಯು. ಆಕಾಶದಿಂದ ಆಕಾಶಾಂತರದಲ್ಲಿ ಗಮನ ಅರ್ಥದಲ್ಲಿಯೇ ಶೂನ್ಯದಿಂದ ಶೂನ್ಯಾಂತರದಲ್ಲಿ ಗಮನದ ಸಾಧನೆ. ಈ ಊರ್ಧ್ವಯಾತ್ರಾ ಪಥದಲ್ಲಿ ಚಿತ್ತಚಾಂಚಲ್ಯದ ಅತ್ಯಂತ ನಿವೃತ್ತಿ, ಸಮ್ಯಕ್ ಚಿತ್ತವಿಶ್ರಾಂತಿ ಮತ್ತು ತಾನು ತನ್ನಲ್ಲಿಯೇ ನಿಮಗ್ನತೆಯೇ ನಾಥರ ಲಕ್ಷ್ಯವು. ನಿರುತ್ಥಾನ ದಶಾ ಪ್ರಾಪ್ತಿಯಲ್ಲಿಯೇ 'ಪರಮಪದ' ಅಥವಾ ನಾಥ ಸ್ವರೂಪದಲ್ಲಿ ಅವಸ್ಥಿತಿಯಾಗುವದು. ಅದರ ಊರ್ಧ್ವದಲ್ಲಿ ಗತಿಯು ಇಲ್ಲ. ಶಿವ-ಶಕ್ತಿರೂಪ ಪ್ರಕಾಶ ಮತ್ತು ವಿಮರ್ಶೆಯ ನಿತ್ಯಸಂಬಂಧ ಚೈತನ್ಯರೂಪದಿಂದ ಸಾಧಕನ ಅನುಭೂತಿಯಲ್ಲಿ ಪ್ರಕಾಶಿತವಾಗುವದು. ಚೈತನ್ಯವಾಗಿದ್ದರೂ ಅವುಗಳ ಸಾಮ್ಯಾವಸ್ಥೆಯಲ್ಲಿ ಅದು ಅವ್ಯಕ್ತವಿರುತ್ತದೆ. ಈ ಅವಸ್ಥೆಯೇ ಪರಮ ಪದವು. ಇದರೊಡನೆ ಸಾಧಕನ ಸ್ವಪಿಂಡದ ಸಾಮರಸ್ಯವೇ ಪಿಂಡಸಿದ್ಧಿಯು. ಈ ಅವಸ್ಥೆಯಲ್ಲಿ ಸಾಧಕನಿಗೆ ತನ್ನ ಪಿಂಡದ ಸಮ್ಯಕ್‌ಜ್ಞಾನ ಲಾಭವಾಗುವದು. ತನ್ನ ಪಿಂಡಜ್ಞಾನದೊಡನೆ ಪರಮ ಪದದ ಅಭೇದತ್ವವು ಪ್ರತಿಷ್ಠಿತವಾಗಲು ಬೇರೆ ಯಾವ ಲಾಭವೂ ಅಧಿಕವೆಂದು ಮನದಲ್ಲಿ ಆಗುವದಿಲ್ಲ. ಗೀತೆಯಲ್ಲಿಯೂ ಇದರ ಸಮರ್ಥನೆಯು ಕಂಡುಬರುತ್ತದೆ. ಶ್ರುತಿಯು ಹೇಳುತ್ತದೆ-

'ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ'।

ಆ ಬ್ರಹ್ಮವನ್ನು ಪ್ರಕಾಶ ಮಾಡಲು ಅಕ್ಷಮವಾಗಿ, ನಾಮಗಳು ಅದರಿಂದ ಪ್ರತಿ ನಿವೃತ್ತವಾಗುವವು. ನಾಥಸಿದ್ಧಯೋಗಿಗಳೂ ಪರಮಪದಕ್ಕೆ ಹೆಸರು ಕೊಡಲು ಅಸಮರ್ಥರಾಗಿ ಅದಕ್ಕೆ 'ನಿರ್ನಾಮ' ಅಥವಾ 'ಅನಾಮಾ' ಹೆಸರಿನಿಂದ ಅಭಿಹಿತ ಮಾಡಿದ್ದಾರೆ ಹಾಗು ದೀಪದಿಂದ ಸೂರ್ಯನನ್ನು ತೋರಿಸುವ ಪ್ರಯತ್ನದಂತೆ, ಆ ಅನಾಮದ ಸ್ವರೂಪ ವ್ಯಾಖ್ಯೆಯಲ್ಲಿ ಅಸಮರ್ಥರಾಗಿ ಹೇಳಿರುತ್ತಾರೆ. ನಾಥ ಸ್ವರೂಪವು 'ಯಾ ದೃಶ ಏವ ತಾ ದೃಶ ಏವ' ಅವಸ್ಥೆ, ಇದೇ ನಾಥರ ಶೇಷ ಕತೆಯು.

❖❖

## ೨೦

# ನಾಥ ಸಂಪ್ರದಾಯ

ಸಿದ್ಧರು ಅಲೌಕಿಕ ಶಕ್ತಿಶಾಲಿಗಳಾಗಿದ್ದರು ಸಹ ನಿರೀಶ್ವರ ಅಥವಾ ಶೂನ್ಯಾವಾದಿ ಬೌದ್ಧರಿದ್ದ ಕಾರಣ, ಜನರು ಪ್ರಾಯಃ ಇವರಿಗೆ ಮರುಳಾಗಲಿಲ್ಲ. ಯಾಕೆಂದರೆ ಸುಪ್ರಸಿದ್ಧ 'ಬಂಗಾಲಿ(ಅಥವಾ ಕಾಮರೂಪ ಅಥವಾ ಆಸಾಮ)ಯ ಜಾದುವಿಗೆ ಜನರು ಅಂಜುತ್ತಿದ್ದರು. ಮತ್ತು ಜೀವನ ತತ್ತ್ವಾನ್ವೇಷಣೆಯ ಸಂಬಂಧದಲ್ಲಿ ಸಹ ಈ ಶಾಕ್ತ (ಕಬೀರನ 'ಸಾಕ್ಷತ್, ಅಥವಾ 'ಸಾಕಟ)ರ ಮೇಲೆ ಅವಿಶ್ವಾಸವುಂಟಾಗಹತ್ತಿತ್ತು. ಇದರ ಹೊರತು ಈ ಸಿದ್ಧರ ಮದ್ಯ, ಮಾಂಸ ಹಾಗು ಸ್ತ್ರೀ ಸಂಬಂಧದ ಆಚಾರಗಳ ಬಗ್ಗೆ ತಿರಸ್ಕಾರ ಉಂಟಾಗಹತ್ತಿತ್ತು. ಕೆಲವರ ಅಭಿಪ್ರಾಯವು -ಮದ್ಯದ ಸೇವನೆ ಧ್ಯಾನದ ಏಕಾಗ್ರತೆ ಉಂಟು ಮಾಡುತ್ತದೆ, ಮಾಂಸ ಭಕ್ಷಣವು ಶರೀರವನ್ನು ಪುಷ್ಟ ಮಾಡುವದಕ್ಕೋಸುಗ ಇರುವದು ಮತ್ತು ಸ್ತ್ರೀಯ ಸಹಾಯತೆಯು ಬಿಂದು (ವೀರ್ಯ)ವಿನ ಅಕ್ಷುಣ್ಣತೆಯನ್ನು ದೃಢ ಮಾಡುವದಕ್ಕೋಸುಗ XXX ತರಲ್ಪಟ್ಟಿದೆ. ಆದರೆ ಈ XXX ಸರ್ವಸಾಧಾರಣರಿಗೆ ಸರಿತೋರಲಿಲ್ಲ, ಯಾಕಂದರೆ ತಾಮಸಿಕ ಭೋಜನದಿಂದ ತಾಮಸಿಕ ಮನೋವೃತ್ತಿಗಳನ್ನುಂಟು ಮಾಡುವದು ಹಾಗು ಚಿತ್ತದ ಕ್ಷೋಭ ಮತ್ತು ಚಾಂಚಲ್ಯವೇ ನಿಶ್ಚಿತ ಪರಿಣಾಮ ಪ್ರತೀತವಾಗುತ್ತಿತ್ತು. ಸ್ತ್ರೀಯ ಸಾಮೀಪ್ಯವೇ (ಬೇಕಾದಂಥ ಸದ್ಭಾವನೆಯಿಂದ) ಇದ್ದರೂ ಸಹ ಗರ್ಹ್ಯ ಹಾಗು ಕಚ್ಚಾ ಸಾಧಕರಿಗೋಸುಗ ಆಪತ್ತಿ ಪೂರ್ಣ ತಿಳಿಯಲ್ಪಡುತ್ತಿತ್ತು. ಇವೇ ಕಾರಣಗಳಿಂದ ಪ್ರಚಲಿತ ಪದ್ಧತಿಯ ವಿರುದ್ಧ ಕೆಲವು ವಿಚಾರವಂತ ಯೋಗಿಗಳು ನಾಥಸಂಪ್ರದಾಯದ ಸೃಷ್ಟಿಯನ್ನು ಮಾಡಿದರು. ಈ ಪರಿಮಾರ್ಜಿತ ವಿಚಾರವಂತರ ನೇತೃವಾದ ನಾಥಸಂಪ್ರದಾಯದ ಪ್ರಥಮರತ್ನ ಗೋರಕ್ಷನಾಥನಿದ್ದನು. 'ಗೋರಕ್ಷಸಿದ್ಧಾಂತ ಸಂಗ್ರಹ'ವೆಂಬ ಗ್ರಂಥದಲ್ಲಿ ನಿರ್ದಿಷ್ಟ 'ಚತುರಶೀತಿ ಸಿದ್ಧಾಃ' ವಾಕ್ಯದಿಂದ ಹಾಗು ಗುರುಪರಂಪರೆಯ ಹೆಸರುಗಳಿಂದ ನಾಥಸಂಪ್ರದಾಯದ ಉಪಯುಕ್ತವಾದ ಪ್ರಕಾರದಿಂದಲೇ ಉತ್ಪತ್ತಿ ಸಿದ್ಧವಾಗುತ್ತದೆ. ಮತ್ತು 'ಯೋಗಿ ಸಂಪ್ರದಾಯಾವಿಷ್ಕೃತಿ' ಎಂಬ ಸಂಕಲಿತ ಗ್ರಂಥವನ್ನು ನೋಡುವದರಿಂದ ಈ ಮತದ ಹೆಚ್ಚು ಪುಷ್ಟಿಯಾಗಿದೆ. ಈ ಗ್ರಂಥದ ೪೮ನೆಯ ಅಧ್ಯಾಯದಲ್ಲಿ ಬರೆದಿರುವದು - ಗೋರಕ್ಷನಾಥನು ಸಂಚಾರ ಮಾಡುತ್ತಾ ಜ್ವಾಲಾಜಿಗೆ ಹೋಗಲು, ಅಲ್ಲಿ ಅವನಿಗೆ ಭಗವತಿಯು ಪ್ರಚಲಿತ ಶಾಕ್ತವಿಧಿಯ ಅನುಸಾರವಾಗಿ ಮದ್ಯಮಾಂಸಾದಿ ಪ್ರಸಾದರೂಪದಲ್ಲಿ ಕೊಡಲು ಬಯಸಿದಳು. ಪರಿಮಾರ್ಜಿತ ವಿಚಾರವಂತ ಯೋಗಿರಾಜನು ಸವಿನಯ ಅದನ್ನು ಅಸ್ವೀಕೃತ ಮಾಡಿದನು, ಹಾಗು ಭಗವತಿಯಿಂದ ಸಾತ್ವಿಕ ಭೋಜನದ ಪ್ರತಿಜ್ಞೆ ಮಾಡಿಸಿದನು. ಈ ಪ್ರಸಂಗ ಕಪೋಲಕಲ್ಪಿತವೆಂದು ತಿಳಿಯುವದಿಲ್ಲ. ಯಾಕೆಂದರೆ ಜ್ವಾಲಾಜಿಯ ಮಂದಿರದಿಂದ ಒಂದು ಫರ್ಲಾಂಗದ ಮೇಲೆಯೇ ಗುಡ್ಡದ ಮೇಲೆ ಅರ್ಜುನ ನಾಗಾ(ಮಹಾಯಾನೀಯ ಮತದ ನಾಗಾರ್ಜುನ)ನ ಸ್ಥಾನ ಇರುವದು. ಈ ಮಾತಿನ ಸೂಚಕವಿರುತ್ತದೆ-ಜ್ವಾಲಾಜಿಯೂ ವಜ್ರಯಾನ ಮತದ

ಒಂದು ಕೇಂದ್ರವಾಗಿತ್ತು. ಆದುದರಿಂದ ಅಲ್ಲಿ ಮದ್ಯಮಾಂಸಾದಿಗಳ ಪ್ರಚಾರ ಆಗುವದು ಅಸಂಭವ ಮಾತು ಅಲ್ಲ. ದೇವಿಯ ಮಂದಿರದಲ್ಲಿಯೇ 'ಗೋರಖಡಿಬ್ಬಿ' ಎಂಬ ಸ್ಥಾನವಿರುವದು ಹಾಗು ಅಲ್ಲಿಯ ಖಿಚಡಿಯ ಪಾತ್ರೆಯ ಕಥೆ ಉಪಮೆಯ ವೃತ್ತಾಂತಕ್ಕೆ ಸತ್ಯವಾಗಲು ಸಿದ್ಧವಾಗಿದೆ.

ಗೋರಕ್ಷನಾಥನ ಈ ಪರಿಮಾರ್ಜಿತ ವಿಶುದ್ಧ ಸಾತ್ವಿಕ ಹಠಯೋಗದ ಪ್ರಚಾರವನ್ನು ಇಡಿಯ ಭಾರತವರ್ಷದಲ್ಲಿ ಮಾಡಿದನು. ಗೋರಖಪುರ, ಗಿರನಾರ ಹಾಗು ನೇಪಾಳವಂತೂ ಅವನ ಮುಖ್ಯ ಕೇಂದ್ರವಾಗಿ ಹೋಗಿತ್ತು ಮತ್ತು ಜ್ವಾಲಾಜಿಯ ವಿಷಯದಲ್ಲಿ ಮೇಲೆಯೇ ಬರೆದಿದೆ. ನೇಪಾಳದ ಗೂರ್ಖರು ಈ ಗುರು ಗೋರಕ್ಷನಾಥನ ಪರಿಶ್ರಮದಿಂದ ಹಿಂದುಗಳಾಗಿಯೇ ಉಳಿದರು ಮತ್ತು ಅನೀಶ್ವರವಾದಿ ಬೌದ್ಧಧರ್ಮದ ಅನುಯಾಯಿಯಾಗಲು ರಕ್ಷಿತವಾದರು. ಈ ನಾಲ್ಕು ಮುಖ್ಯಸ್ಥಾನಗಳ ಸ್ಥಿತಿ ಈ ಸಂಗತಿಯ ಪ್ರತ್ಯಕ್ಷ ಪ್ರಮಾಣವಿರುವದು- ಈ ಸಾತ್ವಿಕ ಯೋಗಪದ್ಧತಿಯ ಆದರ ಭಾರತವರ್ಷದ ಪ್ರತಿಯೊಂದು ವಿಭಾಗದಲ್ಲಿಯಾಯಿತು.

ಗೋರಕ್ಷನಾಥನ ನಾಥಪಂಥವು ಈಶ್ವರವಾದಿಯು ಮತ್ತು ಆದಿನಾಥ ಭಗವಾನ್ ಶಂಕರನು ಇದರ ಮೂಲ ಉಗಮವು ಎಂದು ಒಪ್ಪಲ್ಪಟ್ಟಿದೆ. ಈ ಪ್ರಕಾರವಾಗಿ ಆಳ ಸಿದ್ಧರ ಶಾಕ್ತ ಉಪಾಸನಾಕ್ರಮವು ಶಾಸ್ತ್ರ ಮತಾನುಯಾಯಿ ಶೈವಸಂಪ್ರದಾಯದಲ್ಲಿ ಪರಿಣತವಾಗಿ ಹೋಯಿತು. ನಾಥಸಂಪ್ರದಾಯದಲ್ಲಿ ಮದ್ಯ-ಮಾಂಸಗಳಿಗೆ ಕಠೋರ ನಿಷೇಧವಿರುತ್ತದೆ ಮತ್ತು ಸ್ತ್ರೀಯ ಸಂಗವು ಎಲ್ಲ ಪ್ರಕಾರದಿಂದ ವರ್ಜ್ಯವಿರುತ್ತದೆ. ಈ ಮತದಲ್ಲಿ ಶುದ್ಧ ಹಠ ಹಾಗು ರಾಜಯೋಗಗಳ ಸಾಧನೆಗಳೇ ಅನುಶಾಸಿತವಾಗಿರುತ್ತವೆ. ಯೋಗಾಸನ, ನಾಡೀಜ್ಞಾನ, ಷಟ್‌ಚಕ್ರನಿರೂಪಣ ಹಾಗು ಪ್ರಾಣಾಯಾಮಗಳಿಂದ ಸಮಾಧಿಯ ಪ್ರಾಪ್ತಿ- ಈ ಯೋಗದ ಮುಖ್ಯ ಅಂಗವಿರುತ್ತದೆ. ಯಥಾರ್ಥದಲ್ಲಿ ಈ ಸಂಪ್ರದಾಯದಲ್ಲಿ ಶಾರೀರಿಕ ಪುಷ್ಟಿ ಹಾಗು ಪಂಚಮಹಾಭೂತಗಳ ಮೇಲೆ ವಿಜಯ, ಈ ವಿಷಯಗಳ ಮೇಲೆ ವಿಶೇಷವಾಗಿ ಲಕ್ಷ್ಯ ಕೊಡಲ್ಪಟ್ಟಿದೆ ಮತ್ತು ಇವುಗಳ ಸಿದ್ಧಿಗೋಸುಗ ರಸವಿದ್ಯೆ (Alchemy) ಗೆ ಸಹ ಈ ಮತದಲ್ಲಿ ಒಂದು ಮುಖ್ಯಸ್ಥಾನವಿರುತ್ತದೆ. ಬೌದ್ಧ ನಾಗಾರ್ಜುನನ ರಸಶಾಸ್ತ್ರ ಸಂಬಂಧದಿಂದ ಚಮತ್ಕಾರಗಳ ವಿಷಯದಲ್ಲಿ ಅನ್ಯತ್ರ ಬರೆಯಲ್ಪಟ್ಟಿದೆ. ನಾಗಾರ್ಜುನನ ಪ್ರಭಾವವು ನಾಥ ಪಂಥದ ಮೇಲೆ ವಿಶಿಷ್ಟರೂಪದಿಂದ ಬಿದ್ದಿತ್ತು. ಉಪರ್ಯುಕ್ತ ಭೂತಜಯ ಇತ್ಯಾದಿಯ ಉದ್ದೇಶ. ಯೋಗಸಾಧನೆಯಿಂದ ಅದ್ವೈತ ಜ್ಞಾನದ ಪ್ರಾಪ್ತಿಯೇ ಇರುತ್ತದೆ. 'ಗೋರಕ್ಷ ಪದ್ಧತಿ' ಎಂಬ ಸುಪ್ರಸಿದ್ಧ ಯೋಗಗ್ರಂಥವು ಇದೇ ಮತದ ಒಂದು ಗ್ರಂಥವಿರುತ್ತದೆ. ಈ ಸಂಪ್ರದಾಯದ ಗ್ರಂಥಗಳನ್ನು ನೋಡುವದರಿಂದ ಈ ಸಂಗತಿ ಪುನಃ ಸಿದ್ಧವಾಗುವದು. ಯೋಗಶಾಸ್ತ್ರದಂಥ ವಿಷಯ ಒಮ್ಮೆ ತಿಳಿದು ಕೂಟ ಶಬ್ದಗಳಲ್ಲಿ ಪ್ರಕಾಶಿತ ಮಾಡಲ್ಪಡುವದು ಮತ್ತು ಇದರ ಪರಿಣಾಮವು ಹೀಗೆ ಆಗುತ್ತದೆ. ಗುರುವಿನ ಹೊರತು ನಿರೀಕ್ಷಣದ ಅಭ್ಯಾಸ ಮಾಡುವ ಅಪರಿಚಿತ ಸಾಧಕನು ಒಮ್ಮೊಮ್ಮೆ ಅರ್ಥವನ್ನು ಅನರ್ಥಮಾಡಿ ಪತಿತವಾಗುತ್ತಾನೆ. ಉದಾಹರಣಾರ್ಥ ಕುಂಡಲಿನಿಗೆ ಅಲ್ಲಲ್ಲಿ ಬಾಲರಂಡಿ (ಬಾಲವಿಧವಾ) ಎಂದು ಹೇಳಿದೆ ಮತ್ತು ಖೇಚರಿಮುದ್ರೆಯ ಸಾಧನೆಯಲ್ಲಿ ಜಿಹ್ವೆಯನ್ನು ಕಾಪಾಲಛಿದ್ರದಲ್ಲಿ ಪ್ರವಿಷ್ಟ ಮಾಡುವದಕ್ಕೋಸುಗ ಗೋಮಾಂಸ ಭಕ್ಷಣ ಶಬ್ದದ ಪ್ರಯೋಗಮಾಡಲ್ಪಟ್ಟಿದೆ.

ನಾಥಸಂಪ್ರದಾಯದಲ್ಲಿ ನವನಾಥರು ಮುಖ್ಯ ಎಂದು ಹೇಳಿದೆ. ಇವರು-ಗೋರಕ್ಷನಾಥ, ಜ್ವಾಲೇಂದ್ರನಾಥ, ಕಾರಿಣನಾಥ, ಗಹಿನೀನಾಥ, ಚಾರ್ಪಟನಾಥ, ರೇವಣನಾಥ, ನಾಗನಾಥ, ಭರ್ತೃನಾಥ, ಗೋಪೀಚಂದ್ರನಾಥ. ಇವರಲ್ಲಿ ಅಂತಿಮ ಗೋಪೀಚಂದ್ರನಾಥನ ವಿಷಯ ವಿಶೇಷ ಪ್ರಚಲಿತವಿರುತ್ತದೆ (ವಾಚಕರು ಅವನ ಪರಿಚಿತರೇ ಆಗುವರು). ಗೋರಕ್ಷನಾಥನು ತನ್ನ ಗುರುವಾದ ಮತ್ಸ್ಯೇಂದ್ರನಾಥನನ್ನು ಸ್ತ್ರೀರಾಜ್ಯದ ಜಂಜಾಲದಿಂದ ಬೇರ್ಪಡಿಸುವ ಕಥೆಯು 'ಮಾಯಾ ಮಛೀಂದ್ರ' ಹೆಸರಿನಿಂದ ಈಗ Telkie ಯಲ್ಲಿ

ತೋರಿಸಲ್ಪಡುತ್ತದೆ. ನನ್ನ ಅನುಮಾನವಿರುತ್ತದೆ- ಈ ಕತೆಯ ಗೂಢ ಉದ್ದೇಶವು ಹಾಗು ಅರ್ಥ ೮೪ ಸಿದ್ಧರ ತಾಂತ್ರಿಕ ವಜ್ರಯಾನದ ಸಾತ್ವಿಕ ನಾಥಪಂಥದಲ್ಲಿ ಪರಿಣತವಾಗುವದಿರುತ್ತದೆ. ಮಹಾರಾಷ್ಟ್ರದೇಶದ ಸುಪ್ರಸಿದ್ಧ ಭಕ್ತ ಹಾಗು ಧಾರ್ಮಿಕ ನೇತೃವಾದ ಶ್ರೀ ಜ್ಞಾನೇಶ್ವರ ಮಹಾರಾಜರು ಗಹಿನೀನಾಥನ ಶಾಖೆಯ ಅನುಯಾಯಿಯಾಗಿದ್ದರು. ಈ ಶಾಖೆಯ ಯೋಗಿಗಳು ಇಲ್ಲಿಯ ವರೆಗೆ ಗ್ವಾಲ್ಹೇರದಲ್ಲಿ ವಿದ್ಯಮಾನವಿರುತ್ತಾರೆ. ನನ್ನ ತಿಳುವಳಿಕೆಯಲ್ಲಿ ನಾಥಸಂಪ್ರದಾಯದ ಉದಯವು ಇ.ಸ. ೧೦೦೦ ಸುಮಾರು ಆಗಿರಬಹುದು.

ನಾಥಸಂಪ್ರದಾಯದ ಯೋಗಿಗಳು 'ಅಲಕ್ಷ' (ಅಲಖ) ಶಬ್ದದಿಂದ ತಮ್ಮ ಇಷ್ಟದೇವನ ಧ್ಯಾನಮಾಡುತ್ತಾರೆ ಮತ್ತು ಇದೇ ಶಬ್ದದಿಂದ ಭಿಕ್ಷೆ ಬೇಡುತ್ತಾರೆ. ಅವರ ಶಿಷ್ಯರು 'ಆದೀಶ' (ಆದೇಶ) ಶಬ್ದದಿಂದ ಗುರುವಿಗೆ ಸಂಬೋಧನ 'ಅಲಕ್ಷ'ಕ್ಕೆ ಉತ್ತರ ಕೊಡುತ್ತಾರೆ. ಈ ಎರಡೂ ಮಂತ್ರಗಳ ಅರ್ಥ ಆ ಪ್ರಣವರೂಪೀ ಪರಮಪುರುಷನೊಡನೆ ಇರುತ್ತದೆ. ಯಾವುದರ ವರ್ಣನ ವೇದ ಉಪನಿಷತ್ತುಗಳಲ್ಲಿ ಮೇಲಿಂದ ಮೇಲೆ ಬರುತ್ತದೆ. ಕಬೀರ ಸಾಹೇಬ ಹಾಗೂ ನಾನಕ XX ಸಹ XX ಅಲಕ್ಷ್ಯ ಪುರುಷನ ಧ್ಯಾನಮಾಡುತ್ತಿದ್ದರು. XXX ನಾನಕದೇವನ ಮುಖ್ಯಮಂತ್ರ ಈ ಭಾವವನ್ನು ಪೂರ್ಣರೂಪದಿಂದ ಸ್ಪಷ್ಟಮಾಡುತ್ತದೆ. ಗುರುಮಹಾರಾಜ ಹೇಳುತ್ತಾರೆ.

'ಏಕ ಓಂ ಸತ್ತನಾಮ ಕರ್ತಾಪುರುಖ।
ನಿರ್ಭವ ನಿರ್ಭಯ ನಿರಂಕಾರ॥
ಅಕಾಲ ಮೂರತಿ ಆದಿ ಸತ್ತ, ಜುಗಾದಿ ಸತ್ತ
ಹೈ ಭೀ ಸತ್ತ, ನಾನಕ ಹೋಸೀ ಭೀ ಸತ್ತ ॥

ನಾಥ ಸಂಪ್ರದಾಯದ ಮಹಾತ್ಮಾ 'ಕನಫಟೆ' ಯೋಗಿಗಳು ಸಹ ಹೇಳಲ್ಪಡುತ್ತಾರೆ. ಅವರ ಕಿವಿಯಲ್ಲಿ ದೊಡ್ಡ ದೊಡ್ಡ ಕೊಂಬಿನ ಕುಂಡಲಗಳು ಇರುತ್ತವೆ. ಇವುಗಳ ತಾತ್ಪರ್ಯವು ಅತ್ಯಂತ ಗೂಢವಿರುತ್ತದೆ. ಕಿವಿಗಳನ್ನು ಛೇದನ ಮಾಡುವದರಿಂದ ಸಾಧಾರಣವಾಗಿ ಅಂತ್ರವೃದ್ಧಿ ಹಾಗು ಅಂಡವೃದ್ಧಿ ರೋಗ ಆಗುವದಿಲ್ಲ (ಸುಶ್ರುತ ಸಂಹಿತಾ ಚಿಕಿತ್ಸಾ ಸ್ಥಾನ ಅಧ್ಯಾಯ ೧೯ XXX ಶ್ರೀ ವೆಂಕಟೇಶ್ವರ ಪ್ರೆಸ್, ಮುಂಬಯಿ) ಮತ್ತು ಕೆಲವು ಸಾಧಕರ ಅಭಿಪ್ರಾಯವಿರುವದು- ಈ ಪ್ರಕ್ರಿಯೆಯಿಂದ ಯೋಗಸಾಧನೆಯಲ್ಲಿ ಸಹ ಸಹಾಯತೆಯು ದೊರೆಯುತ್ತದೆ. ಈ ಯೋಗಿಗಳ ಕೊರಳಲ್ಲಿ ಕರಿಯ ಉಣ್ಣೆ ಒಂದು XXXX ದಾರವಿರುತ್ತದೆ. ಇದಕ್ಕೆ ಸೇಲಿ ಅನ್ನುತ್ತಾರೆ. ಈ ಸೇಲಿಯಲ್ಲಿ ಕೊಂಬಿನ ಒಂದು ಚಿಕ್ಕ ಸೀಟಿಯು ಕಟ್ಟಲ್ಪಟ್ಟಿರುತ್ತದೆ. ಇದಕ್ಕೆ ನಾದ (ಶೃಂಗೀನಾದ) ಅನ್ನುತ್ತಾರೆ, ಇದು ನಾದಾನು ಸಂಧಾನ ಅಥವಾ ಪ್ರಣವಾಭ್ಯಾಸದ ದ್ಯೋತಕವಿರುತ್ತದೆ. ಕೈಯಲ್ಲಿ ಟೆಂಗಿನ ಭಿಕ್ಷಾಪಾತ್ರೆ ಇರುತ್ತದೆ.

ಸಂಯುಕ್ತಪ್ರಾಂತದ ಅನೇಕ ವಿಭಾಗಗಳಲ್ಲಿ ಮಹಾಶಿವರಾತ್ರಿಯ ಎರಡನೆಯ ದಿನ (ಇದಕ್ಕೆ ಅಲ್ಲಲ್ಲಿ ಬಮ್ ಭೋಲೆ ಅನ್ನುತ್ತಾರೆ) ಕನಫಟೆ ಯೋಗಿರಾಜನಿಗೆ ಬೇಳೆ, ಅನ್ನ, ರೊಟ್ಟಿ ಹಾಗು ಎಣ್ಣೆಯ ಹುಳಿ ವಡೆಯ ಊಟ ಮಾಡಿಸಲ್ಪಡುತ್ತದೆ. ಇದು ಗುರು ಗೋರಕ್ಷನಾಥನನ್ನು ಆವಾಹನ ಮಾಡಲ್ಪಡುತ್ತದೆ. ಮತ್ತು ಈ ಹುಳಿ-ಎಣ್ಣೆಯ ವಡಿಗಳ ನಿರ್ದೇಶ ಈ ಯೋಗಿರಾಜನ ಅನನ್ಯ ಗುರುಭಕ್ತಿಯ ಸುಪ್ರಸಿದ್ಧ ಕಥೆಯೊಡನೆ ಸಂಬಂಧವಿಡುತ್ತದೆ. ಇದರಿಂದ ಇವರು ತಮ್ಮ ಗುರು ಮತ್ಸ್ಯೇಂದ್ರನಾಥನ ತುಷ್ಟಿಗೋಸುಗ ಒಂದು ವಡಿಯ ಸಲುವಾಗಿ ತನ್ನ ಒಂದು ಕಣ್ಣನ್ನು ತೆಗೆದು ಕೊಟ್ಟಿದ್ದರು. (ಶ್ರೀ ಜ್ಞಾನೇಶ್ವರ ಚರಿತ್ರ ಪು. ೭೩-೭೪ ಗೀತಾ ಪ್ರೆಸ್ಸು)

ಎಷ್ಟೋ ಸಿದ್ಧನಾಥರು ಜೀವಿತ ಸಮಾಧಿಯನ್ನು ತೆಗೆದುಕೊಂಡಿದ್ದಾರೆ. ಶ್ರೀ ಜ್ಞಾನೇಶ್ವರ ಮಹಾರಾಜರು ಅವರಲ್ಲಿ ಒಬ್ಬರು. ಅನ್ಯಥಾ ದೇಹತ್ಯಾಗದ ಅನಂತರ ಯೋಗಿಯು ಉತ್ತರಾಭಿಮುಖವಾಗಿ ಪದ್ಮಾಸನದಲ್ಲಿ ಕುಳ್ಳಿರಿಸಿ ಹೂಳುತ್ತಾರೆ ಮತ್ತು ಮೇಲೆ ಸಮಾಧಿಯನ್ನು ರಚಿಸುತ್ತಾರೆ.

ದೇಶ ಕಾಲಗಳ ಅನುಸಾರವಾಗಿ ಈ ಸಂಪ್ರದಾಯದಲ್ಲಿಯೂ ನ್ಯೂನ್ಯತೆಗಳು ಪ್ರವೇಶವಾಗಹತ್ತಿದವು. (ಉದಾ: ಅಲ್ಲಲ್ಲಿ ಸೈದ್ಧಾಂತಿಕ ಬ್ರಹ್ಮಚಾರಿ ಇದ್ದರೂ ಸಹ ಕೆಲವು ಯೋಗಿಗಳು ಗೃಹಸ್ಥರಾಗಿದ್ದಾರೆ.) ಆದರೆ ಈಗ ಸಹ ಒಳ್ಳೆ -ಒಳ್ಳೆ ಹಾಗು ಸಿದ್ಧಯೋಗಿಗಳು ವಿದ್ಯಾಮಾನರಾಗಿದ್ದಾರೆ. ಅವರ ದರ್ಶನ ಭಾಗ್ಯದಿಂದ ಆಗುತ್ತದೆ.

❖❖

## ೨೧
# ನಾಥಯೋಗ

ಗಂಭೀರನಾಥಯೋಗೀಂದ್ರಂ ನತ್ವಾ ಗುರುಂ ಶಿವಂ ಹರಿಮ್।
ನಾಥಯೋಗಂ ಪ್ರವಕ್ಷಾಮಿ ನಾದಾನುಭವ ಸಾಧಕಮ್ ॥೧॥

ಮನೋನಾಥೋ ಭವೇನ್ನಾದೋ ನಾದನಾಥೋ ಲಯಃ ಸ್ಮೃತಃ ।
ಲಯಸ್ಯ ನಾಥ ಆತ್ಮಾಸ್ಯಾದಾತ್ಮಜ್ಯೋತಿಃ ಸ್ವಯಂ ಪ್ರಭಮ್ ॥೨॥

ನಿಶ್ಚೇಷ್ಟೋ ನಿರ್ವಿಕಾರಶ್ಚ ಲಯೋ ಜೀವತಿ ಯೋಗಿನಾಮ್।
ಉಚ್ಛಿನ್ನಃ ಸರ್ವ ಸಂಕಲ್ಪೋ ನಿಃಶೇಷಾಶೇಷ ಚೇಷ್ಟಿತಮ್ ॥೩॥

ಸ್ವಾವಗಮ್ಯ ಲಯಃ ಕೋಽಪಿ ಯೋಮನೋವಾಗ್ಗೋಚರಃ।
ಪುಂಖಾನುಪುಂಖ ವಿಷಯೇ ಕ್ಷಣತತ್ತ್ವಶೋಽಪಿ।
ಬ್ರಹ್ಮಾವಲೋಕನಧಿಯಂ ನಜಹಂತಿ ಯೋಗೀ।
ಸಂಗೀತ ತಾಲಲಯವಾದ್ಯವಶಂ ಗತೋಽಪಿ।
ಮೌಲಿಸ್ಥಕುಂಭಪರಿರಕ್ಷಣಧೀರ್ನಟೀವ ॥೪॥

ಸರ್ವ ಚಿಂತಾಂ ಪರಿತ್ಯಜ್ಯ ಸಾವಧಾನೇನ ಚೇತಸಾ॥
ನಾದ ಏವಾನುಸಂಧೇಯಃ ಯೋಗ ಸಾಮ್ರಾಜ್ಯಮಿಚ್ಛತಾ ॥೫॥

ವರಾಹೋಪನಿಷತ್ ಅ.೨ ಶ್ಲೋ ೮೧/೮೩

ಪೂಜ್ಯಪಾದ ಯೋಗಿರಾಜ ಗುರು ಗಂಭೀರನಾಥರನ್ನು ಹಾಗು ನಾಥಯೋಗದ ಪ್ರವರ್ತಕ ಶಿವಾವತಾರ ಶ್ರೀ ಗುರು ಗೋರಖನಾಥರನ್ನು ಮತ್ತು ಜಗತ್ ಪಾಲನಕರ್ತನಾದ ಭಗವಾನ್ ಹರಿಯನ್ನು ನಮಸ್ಕರಿಸಿ ನಾದಶ್ರವಣದ ಸಾಧಕವಾದ ನಾಥಯೋಗದ ವರ್ಣನೆಯನ್ನು ಮಾಡುತ್ತೇನೆ. ನಾದವೇ ಮನಸಿನ ಪ್ರಭುವು, ನಾದದ ಪ್ರಭುವೇ ಲಯವು. ಹಾಗು ಲಯದ ನಾಥನು ಆತ್ಮನು. ಆತ್ಮನು ಚಿರಸ್ಥಾಯಿ-ಚೇತನ ಸ್ವಯಂಪ್ರಕಾಶ ಮತ್ತು ಜಗತ್ತಿನ ಹೊರಗೆ-ಒಳಗೆ ಸರ್ವತ್ರ ಪರಿಪೂರ್ಣವಾಗಿದ್ದಾನೆ. ಸರ್ವಸಂಕಲ್ಪಗಳನ್ನು ನಾಶಮಾಡಿ ಯೋಗಿಗಳ

---

ಋಷಿಕೇಶ ಕ್ಷೇತ್ರದ ಸ್ವಾಮಿ ಶಿವಾನಂದಜಿಯವರು ಪ್ರಜ್ಞಾನಾಥ'ಕೃತ 'ನಾಥ'ಯೋಗ' ಕೃತಿಯನ್ನು ಕುರಿತು ಹಿಂದಿಯಲ್ಲಿ ಬರೆದಿರುವ (೩೦.೧.೧೯೫೪) ಗ್ರಂಥದ ಕನ್ನಡಾನುವಾದವಿದು.

ಲಯವು ಜೀವಿತ ಇರುತ್ತದೆ. ಆ ಕಾಲದಲ್ಲಿ ಯಾವ ಕ್ರಿಯೆಯೂ ಚಲನ ವಲನವೂ ಇರುವದಿಲ್ಲ. ಮನ-ವಾಣಿಗಳಿಗೆ ಅವಿಷಯವು. ಲಯವನ್ನು ಅನುಭವದಿಂದ ಪುನಃಯೋಗಿಯ ಮನಸು, ಆ ಲಯಾನುಭವದಿಂದ, ಹೇಗೆ ಸುಶಿಕ್ಷಿತ ಗಾಯಿಕೆಯು ತಾಳ-ಸ್ವರ-ವಾದ್ಯಗಳೊಡನೆ ಸಂಬಂಧವಿಟ್ಟು ನರ್ತಿಸುತ್ತಿದ್ದರು ಸಹ ತನ್ನ ತಲೆಯ ಮೇಲಿನ ಕೊಡವನ್ನು ಬೀಳಗೊಡುವದಿಲ್ಲ. ಅದೇ ಬಗೆಯಾಗಿ ಕರ್ಮಕರ್ತನಾಗಿದ್ದರೂ (ಯೋಗಿಯು) ಆತ್ಮದೃಷ್ಟಿಯಿಂದ ವಿಸ್ಮೃತನಾಗುವದಿಲ್ಲ.

ಎಲ್ಲ ಸಂಕಲ್ಪಗಳನ್ನು ಬಿಟ್ಟುಗೊಟ್ಟು ಯೋಗಿಯು ನಾದಾನುಸಂಧಾನವನ್ನು ಮಾಡತಕ್ಕದ್ದು. ಆಗ ಸಹ ಯೋಗಸಾಮ್ರಾಜ್ಯದಲ್ಲಿ ಅಧಿಕಾರವಿರುತ್ತದೆ.

ವಾರಾಹೋಪನಿಷತ್ ಅ. ೨, ಶ್ಲೋ. ೮೧/೯೭ ಇಲ್ಲಿ, ಯೋಗದರ್ಶನದಲ್ಲಿ ಹೇಳಿದ ಎಂಟು ಅಂಗಗಳ ವರ್ಣನೆಯನ್ನು ಸಂಕ್ಷೇಪಿಸಿ ಅವುಗಳೊಡನೆ ನಾಥಯೋಗಕ್ಕೆ ಎಲ್ಲೆಲ್ಲಿ ಸಂಬಂಧವಿರುತ್ತದೆಯೋ ಅವುಗಳನ್ನು ಮುಂದೆ ಹೇಳುವ ಬಗೆಯಾಗಿ ಉಲ್ಲೇಖಿಸುತ್ತೇವೆ.

ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣಾ, ಧ್ಯಾನ ಮತ್ತು ಸಮಾಧಿಗಳಿಗೆ ಅಷ್ಟಾಂಗಯೋಗವೆನ್ನುತ್ತಾರೆ. ಯೋಗದರ್ಶನ ಪ್ರಣೇತನಾದ ಮಹರ್ಷಿ ಪತಂಜಲಿಗಳು ಯೋಗದರ್ಶನ ಶಾಸ್ತ್ರದಲ್ಲಿ ಸಮಾಧಿಯನ್ನೇ ಮೊದಲು ವರ್ಣಿಸಿರುತ್ತಾರೆ.

ನಮ್ಮ ಅಭಿಪ್ರಾಯದಂತೆ ಸಮಾಧಿಗೆ ಕೊನೆಯಲ್ಲಿ ವರ್ಣನೆ ಮಾಡಬೇಕಾಗಿತ್ತು. ಯಾಕಂದರೆ ಅದು ಯೋಗದ 'ಫಲ' ರೂಪವಾಗಿರುತ್ತದೆ. ಆದುದರಿಂದ ನಾವು ಮೊದಲು ಯಮ-ನಿಯಮಾದಿಗಳನ್ನು ಉಲ್ಲೇಖಿಸುತ್ತೇವೆ. ಕೆಲಕೆಲವರ ಮತದಲ್ಲಿಯಂತು ಯಮಾದಿ ಯೋಗಾಂಗಳೇ ಇಲ್ಲ. ಆದರೆ ಇವು ಯೋಗದ ಸಹಚಾರಿಗಳಾಗಿವೆ. ನಮ್ಮ ಮತದಲ್ಲಿಯಂತು ಒಂದು ವೇಳೆ ಯಮಾದಿಗಳು ಇರದಿದ್ದರೆ ಯೋಗಸಿದ್ಧಿಗಳು ಎಂದೂ ಪ್ರಾಪ್ತವಾಗುವದಿಲ್ಲ. ಅತಏವ ಅವುಗಳು ಯೋಗಚರ್ಯೆಯ ಸಹಕಾರಿಯಾಗಿವೆ. ಯಾರು ಯಮಾದಿಗಳಿಗೆ ಒಪ್ಪುವದಿಲ್ಲ, ಅವರ ಮತದಲ್ಲಿ ಯೋಗದ ಆರು ಅಂಗಗಳು-ಆಸನ, ಪ್ರಾಣಯಾಮ, ಪ್ರತ್ಯಾಹಾರ ಇವು ಮೂರು ಗೌಣ ಮತ್ತು ಧ್ಯಾನ, ಧಾರಣ, ಸಮಾಧಿ ಇವು ಮೂರು ಮುಖ್ಯವಾಗಿವೆ. ನಮ್ಮ ಸ್ಥಿರ ಸಿದ್ಧಾಂತವೇನಂದರೆ ಜ್ಞಾನಿಯೇ ಆಗಲಿ, ಅಥವಾ ಯೋಗಿಯೇ ಆಗಲಿ ಎಷ್ಟೋ ಪ್ರಯತ್ನ ಮಾಡಿದ ನಂತರದಲ್ಲಿಯೂ ಯಮಾದಿಗಳ ಹೊರತು ಯೋಗಿಯ ಯೋಗ, ಜ್ಞಾನಿಗೆ ಜ್ಞಾನವು ಪ್ರಾಪ್ತವಾಗುವದಿಲ್ಲ.[೧]

### ಯಮ

ಅಹಿಂಸಾ ಸತ್ಯಮಸ್ತೇಯಂ ಬ್ರಹ್ಮಚರ್ಯಂ ದಯಾರ್ಜವಂ।
ಕ್ಷಮಾಧೃತಿರ್ಮಿತಾಹಾರಃ ಶೌಚಂ ಚೈವ ಯಮಾ ದಶ॥

ಅಹಿಂಸಾ-ಸತ್ಯ-ಅಚೋರಿ-ಬ್ರಹ್ಮಚರ್ಯ- ದಯಾ-ಸರಳತೆ-ಕ್ಷಮಾ-ಧೈರ್ಯ- ಮಿತಾಹಾರ ಮತ್ತು ಶೌಚ ಇವು ಹತ್ತು ಯಮಾಂಗಗಳು.

---

೧. ಯಮದಶಗುಣವಿಲ್ಲದವನಿಗೆ ನಿಜಮುಕ್ತಿ।
ಸಮನಿಸದಬಲೆ ಕೇಳಿದು ಸತ್ಯ ॥

-ನಿಜಗುಣ ಶಿವಯೋಗಿ, ಪರಮಾನುಭವ ಬೋಧೆ (೫-೬)

೧. ಅಹಿಂಸಾ:[1]ವೇದದಲ್ಲಿ ವಿಶೇಷ ಯಜ್ಞವಿಷಯಕ ಪಶುಹನನಾದಿಕ ವಿಧಾನಗಳಿವೆ. ಇವುಗಳ ಹೊರತು ಮನ-ವಾಣಿ-ಶರೀರಗಳಿಂದ ಯಾವ ಜೀವಕ್ಕಾದರೂ ಕಷ್ಟ ಕೊಡುವದು ಹಿಂಸೆಯು.

ಹಿಂಸಾ, ಶೌಚ, ದಂತಧಾವನ, ಚಲನಾದಿಗಳಿಂದ ಉಂಟಾಗುವ ಪಾಪವು ಸಾಮಾನ್ಯವಿರುತ್ತದೆ. ಆದುದರಿಂದ ಇವುಗಳನ್ನು ಬಿಡುವದು ಅಸಂಭವವು.

ಉಕ್ತ ಯಮಾದಿಗಳ ಅಭ್ಯಾಸದಿಂದ ಯೋಗಿಗಳಿಗೆ ಉತ್ತಮಸ್ಥಿತಿಯು ಪ್ರಾಪ್ತವಾಗುವದು. ಅವರ ನಿಕಟವರ್ತಿಗಳಾದ ಪಶುಪಕ್ಷಿಗಳು ಸಹ ತಮ್ಮ ಸ್ವಾಭಾವಿಕ ವೈರತ್ವವನ್ನು ಬಿಡುತ್ತವೆ. ಮುಂಗುಲಿ-ಸರ್ಪಗಳೂ, ಚಿಗರೆ-ಹುಲಿಗಳು, ನವಿಲು-ಹಾವುಗಳೂ ಪ್ರೇಮದಿಂದ ಆಟವಾಡುತ್ತಿರುವವು. ಗೃಹಸ್ಥರೂ ಶಾಸ್ತ್ರಾನುಸಾರವಾಗಿ ಯಜ್ಞಾದಿಗಳಲ್ಲಿ ಪಶುವಧೆಯನ್ನು ಮಾಡಿದರೂ ನಿರ್ದೋಷವೆಂದು ತಿಳಿಯಲ್ಪಡುತ್ತದೆ. ಆದರೆ ಸನ್ಯಾಸಿಗಳು ದಂತ-ಧಾವನಕ್ಕೋಸುಗ ಗಿಡದ ಟೊಂಗೆಯನ್ನು ಕಡಿದರೂ ಹಿಂಸೆಯಾಗುವದು. ಗೃಹಸ್ಥರು ಪಂಚಯಜ್ಞಗಳಿಂದ ಸಣ್ಣಪುಟ್ಟ ಪಾಪಗಳಿಂದ ಬಿಡುಗಡೆ ಹೊಂದುತ್ತಾರೆ. ಸನ್ಯಾಸಿಗಳಿಗೋಸುಗ ಪಂಚಯಜ್ಞ ವಿಧಾನ ಇರದಕಾರಣ ಹಿಂಸಾ (ಪಾಪ) ಆಗುವದು.

ಆತ್ಮನಿಗೆ ಯಾವ ಹಿಂಸೆಯನ್ನು ಮಾಡಲು ಶಕ್ಯವಿಲ್ಲವೆಂದು ನಿಶ್ಚಿತ ತಿಳಿದರೂ ಅದು ದೊಡ್ಡ 'ಅಹಿಂಸೆ'ಯು. ತಾನು ಸ್ವಂತಹಿಂಸೆಯನ್ನು ಮಾಡಿದರೆ ಅಥವಾ ಅನ್ಯರಿಂದ ಮಾಡಿಸಿದರೂ ಅದು ಹಿಂಸೆ(ಪಾಪ)ಯಾಗುತ್ತದೆ. ಹಿಂಸೆಯನ್ನು ಸ್ವಂತ ಮಾಡುವದು, ಅನ್ಯರಿಂದ ಮಾಡಿಸುವದು ಹಾಗು ಮಾಡುವದಕ್ಕೆ ಅನುಮೋದನವನ್ನು ಕೊಡುವದು, ಇವೆಲ್ಲವುಗಳಿಂದಲೂ ಹಿಂಸೆಯ ಸಂಬಂಧದ ಪಾಪವು ಪ್ರಾಪ್ತವಾಗುತ್ತದೆ. ಕಾಮ-ಕ್ರೋಧ-ಲೋಭಾದಿಗಳಿಂದ ಮಾಡಲ್ಪಡುವ ಹಿಂಸೆಯು ಇದರಿಂದ ಭಿನ್ನವಿರುತ್ತದೆ. ಇವುಗಳಲ್ಲಿಯೂ ಮೃದು-ಮಧ್ಯ ಮತ್ತು ತೀವ್ರ ಭೇದದಿಂದ ಹಿಂಸೆಗಳಿರುತ್ತವೆ. ಅಜ್ಞಾನ ಮತ್ತು ಪುನರ್ಜನ್ಮದ ಕಾರಣವಿದ್ದುದರಿಂದ ಎಲ್ಲ ಬಗೆಯ ಹಿಂಸೆಗಳು ತ್ಯಾಜ್ಯವಿರುತ್ತವೆ.

**ಸತ್ಯ:**[2]ಯಾವ ವಸ್ತುವನ್ನು ಯಾವ ಇಂದ್ರಿಯದಿಂದ ಯಾವ ಬಗೆಯಾಗಿ ಅನುಭವ ಮಾಡಿಕೊಂಡು, ಯಥಾರ್ಥರೂಪದಿಂದ ಅದನ್ನು ನಾಲಗೆಯಿಂದ ಉಚ್ಚಾರ ಮಾಡುವದು ಸತ್ಯವು. ಮನದಲ್ಲಿ ಒಂದು ವಿಚಾರ ಮತ್ತು ಮಾತಿನಲ್ಲಿ ಮತ್ತೊಂದು ಉಚ್ಚಾರಣೆ ಮಾಡಿದರೆ ಅದು ಸತ್ಯವಲ್ಲ. ಸತ್ಯಕಥನಕ್ಕೋಸುಗ ಮನ ಮತ್ತು

---

೧. 'ತನು ಮನೋ ವಚನ ಕರ್ಮನಿಕಾಯದಿಂದೊರ್ಮೆ।
ಜನರಿಗೆ ನೋವನಡರಿಸದೆ ।
ವಿನಯದಿಂದಿರಲದು ತಾನೆಯಹಿಂಸೆಯೆಂ।
ದೆನಿಪುದು ನೂಪುರಾಂಚಿತ ಪಾದೇ ॥೧॥

ನಿಜಗುಣಶಿವಯೋಗಿ, ಪರಮಾನುಭವಬೋಧೆ (೫-೨)

೩. ಇದು ಪರಮಾರ್ಥವಿಂತಿದು ಧರ್ಮವಿದು ಸೇವ್ಯ।
ವಿದು ಪರಹಿತವಿದು ಸಮುಚಿತ॥
ಇದು ನೀತಿ ಮತವೆನಲಖಿಳಾತ್ಮರೊಳು ನುಡಿ।
ವುದು ಸತ್ಯವೆನಿಪುದಂಗನೆ ಕೇಳು ॥೨॥

ಶ್ರೀನಿಜಗುಣಶಿವಯೋಗಿ, ಪರಮಾನುಭವಬೋಧೆ ೫/೨೮

ಶರೀರ ಎರಡರಲ್ಲಿಯೂ ಸರಳತೆ ಇರಬೇಕಾಗುತ್ತದೆ. ರಾಜನಿಗೆ ಅಶ್ವಮೇಧಯಜ್ಞದಿಂದ ಯಾವ ಫಲವು ದೊರೆಯುವದೋ, ಅದೇ ಫಲವು ಸತ್ಯವಕ್ತವಾದ ಸಾಮಾನ್ಯಮಾನವನಿಗೂ ದೊರೆಯಲು ಶಕ್ಯವು. ಮನುಷ್ಯನಿಗೆ ಸತ್ಯದಲ್ಲಿ ನಿಷ್ಠೆ ಇದ್ದುದರಿಂದ ಅವನ ಪ್ರತಿಯೊಂದು ವಾಣಿಯು ಸತ್ಯವಾಗುತ್ತದೆ. ಹೇಗೆ ಸತ್ಯನಿಷ್ಠ ಮನುಷ್ಯನು "ನೀನು ಧಾರ್ಮಿಕನಾಗು" ಎಂದು ಬೇರೆಯವನಿಗೆ ಹೇಳಲು ಅವನು ಧರ್ಮ ಮಾಡದಿದ್ದರೂ ಧಾರ್ಮಿಕನಾಗುತ್ತಾನೆ. ಸ್ವರ್ಗಪ್ರಾಪ್ತಿಯೇ ಎಲ್ಲ ಸತ್‌ಕರ್ಮಗಳ ಸೀಮೆಯಾಗಿರುತ್ತದೆ. ಯಾವನೋ ಸತ್ಯವಾದಿಯ ಆಶೀರ್ವಾದದಿಂದ, ಯಾವನಿಗೋ ಸ್ವರ್ಗ ಪ್ರಾಪ್ತಿಯು ಆಗಿಹೋಗುತ್ತದೆ. ಮನ-ವಾಣಿ ಹಾಗು ಕರ್ಮಗಳಿಂದ ಒಂದಾಗಿ ಇರುವದು ಸತ್ಯವು. ಬ್ರಹ್ಮವೊಂದನ್ನು ಬಿಟ್ಟರೆ ಬೇರೆ ಏನೂ ಇಲ್ಲ. ಇಂತಹ ಅನುಭವದಿಂದ ಜ್ಞಾನವಾಗುವದು ಸರ್ವೋತ್ತಮ ಸತ್ಯವು.

**೩. ಅಸ್ತೇಯ:**[೪]ಮನ-ವಾಣಿ ಹಾಗು ಶರೀರಗಳಿಂದ ಅನ್ಯರ ಯಾವ ವಸ್ತುವನ್ನು ಕದಿಯದಿರುವದಕ್ಕೆ ಅಚೋರಿ(ಅಸ್ತೇಯ) ಎನ್ನುತ್ತಾರೆ. ಅಸ್ತೇಯದಲ್ಲಿ ಯಾವನ ನಿಷ್ಠೆಯು ಇರುವದೋ ಅವನಿಗೆ ಅನಿಚ್ಛೆ ಇದ್ದರೂ ಸರ್ವರತ್ನಾದಿಗಳು ಪ್ರಾಪ್ತವಾಗುವವು.

ಅನ್ಯರ ವಸ್ತುವನ್ನು ಅವನಿಗೆ ತಿಳಿಸದೆ ಅಥವಾ ಯಾಚನೆಯಿಂದ ತೆಗೆದುಕೊಂಡರೂ ಅದು ಕಳವಿನಲ್ಲಿಯೇ ಗಣನೆ. ಅತಏವ ಯೋಗಿಯು ಬೇರೆಯವರ ಒಡೆತನದ ವಸ್ತುವನ್ನು ಅವರಿಗೆ ಹೇಳದೆ ತೆಗೆದುಕೊಂಡರೆ ಕಳವಿನ ಅಭಿಯೋಗವು ಹತ್ತುವದು. ಯಾವನೋ ಮನುಷ್ಯನ, ಯಾವನಿಗೋ ದಾನಕೊಟ್ಟ ವಸ್ತುವನ್ನು ಸ್ವಯಂ ಉಪಯೋಗದಲ್ಲಿ ತೆಗೆದುಕೊಳ್ಳುವದೂ 'ಚೋರಿ' ಆಗಿರುತ್ತದೆ. ಸಂಸಾರದ ಯಾವದೋ ವಸ್ತುವನ್ನು ತನ್ನದೆಂದು ತಿಳಿಯುವದು ಸಹ ಎಲ್ಲಕ್ಕೂ ಹೆಚ್ಚಿನ 'ಚೋರಿ'ಯಾಗಿದೆ.

**೪. ಬ್ರಹ್ಮಚರ್ಯ :**[೫] ಮನ-ವಾಣಿ-ಶರೀರಗಳಿಂದ ಸ್ತ್ರೀಸಂಬಂಧದ ವಿಚಾರಗಳನ್ನು ಬಿಟ್ಟುಕೊಡುವದಕ್ಕೆ ಬ್ರಹ್ಮಚರ್ಯವೆನ್ನುವರು. ಗೃಹಸ್ಥಾಶ್ರಮಿಯ ಸ್ವವಿವಾಹಿತ ಸ್ತ್ರೀಯಳಿಂದ ಪುತ್ರೋತ್ಪನ್ನ ಮಾಡುವದು ಸಹ ಬ್ರಹ್ಮಚರ್ಯವು. ತನ್ನ ಇಂದ್ರಿಯವೃತ್ತಿ ಚರಿತಾರ್ಥ ಮಾಡುವದಕ್ಕೋಸುಗವೇ ಸ್ತ್ರೀ ಇಲ್ಲ. ಆದರೆ ಧರ್ಮ-ಕರ್ಮಾದಿಗಳಲ್ಲಿ ಸಹಾಯಕ್ಕೋಸುಗವೂ ಇರುತ್ತಾಳೆ. ಇದಕ್ಕೋಸುಗ ಅವಳು ಸಹಧರ್ಮಿಣಿ ಎಂದು ಅನ್ನಲ್ಪಡುತ್ತಾಳೆ. ಮನ ಮತ್ತು ಇಂದ್ರಿಯಗಳ ಪ್ರವೃತ್ತಿಗಳಿಗೆ ಪರಮಾತ್ಮನ ಕಡೆಗೆ ಹಚ್ಚುವದಕ್ಕೂ ಮುಖ್ಯ

---

೪. ತನಗೆನಿತಾಪತ್ತು ಜನಿಸಿದೊಡೇನಲ್ಲಿ।
ತನುಮನವಚನದೊಳನ್ಯರ ॥
ಧನದಾಸೆದೋರದಿರಲು ತಾನದಸ್ತೇಯ।
ವೆನಿಪುದು ಗುಣಮಣಿಭೂಷಣೆ ॥

೫. ಭುವನದೊಳುಳ್ಳ ಸ್ತ್ರೀನಿವಹದೊಳೆಂತು ಸಂ।
ಗವನೊಲ್ಲದಿರುತಿರಲದು ತಾನೆ ॥
ಯುವತಿ ನೀನರಿ ಬ್ರಹ್ಮಚರಿಯವೆನಿಪುದು ಸಾ।
ಧ್ಯವೆ ನೋಡು ಸಾಮಾನ್ಯ ಜನಕಿದು ॥೪॥
ಋತುಮತಿಯಾದ ಕಾಲವನು ಮೀರದೆ ನಿಜ।
ಸತಿಯೊಳು ರತಿ ಸುಖವಡೆವುದು ॥
ನುತ ಬ್ರಹ್ಮಚರಿಯವೆನಿಪುದೆಂದು ತಿಳಿ ನೀನು।
ಶ್ರುತಿಮತವಿದು ಸಾರಹೃದಯಳೆ ॥೫॥

ನಿಜಗುಣ ಶಿವಯೋಗಿ - ಪರಮಾನುಭವ ಬೋಧೆ

ಬ್ರಹ್ಮಚರ್ಯವೆನ್ನುತ್ತಾರೆ. ಬ್ರಹ್ಮಚರ್ಯದಲ್ಲಿ ನಿಷ್ಠೆಯುಂಟಾಗಲು ಎಂದೂ, ಸ್ವಪ್ನದಲ್ಲಿ ಸಹ ಸ್ತ್ರೀವಿಷಯಕ ವಿಚಾರವು ಉಂಟಾಗುವದಿಲ್ಲ. ಇಂತಹ ಯೋಗಿಗಳು ಕೈಯ ಬಡಿತದಿಂದ ಬೇಕಾದಂಥ ಸಮರ್ಥನನ್ನು ಕೆಡುಹಲು ಸಮರ್ಥರು. ಸಂಪೂರ್ಣ ಜ್ಞಾನ-ಕರ್ಮಗಳ ಮೂಲವು ವೀರ್ಯವು. ಅತಏವ ಪ್ರಯತ್ನಪೂರ್ವಕ ವೀರ್ಯವನ್ನು ರಕ್ಷಿಸತಕ್ಕದ್ದು.

**೫. ದಯಾ :**[೬] ಸಹಾನುಭೂತಿಗೇ ದಯಾ ಅನ್ನುತ್ತಾರೆ, ಅಪರಾಧಿಯ ಅಪರಾಧವನ್ನು ಕ್ಷಮಿಸಿ ಅವನಿಗೆ ದಂಡವನ್ನು ಕೊಡದಿರುವದು. ಆದರೆ ಕೃಪೆಮಾಡುವದೂ 'ದಯ'ವು. ದಯವೇ ಧರ್ಮದ ಮೂಲವು. ದಯದ ಪ್ರಭಾವದಿಂದಲೇ ಶಿಬಿರಾಜನಿಗೆ ಸ್ವರ್ಗವು ಪ್ರಾಪ್ತಿಯಾಗಿರುತ್ತದೆ.

**೬. ಆರ್ಜವ :**[೭] ಶತ್ರು-ಮಿತ್ರ-ಸ್ತ್ರೀ-ಪುತ್ರಾದಿಗಳೊಡನೆ ಸಮಾನ ವ್ಯವಹಾರ ಮಾಡುವದಕ್ಕೆ ಆರ್ಜವ (ಸರಳತೆ) ಅನ್ನುತ್ತಾರೆ.

**೭. ಕ್ಷಮಾ :**[೮] ಸಾಮರ್ಥ್ಯವಿದ್ದರು ಸಹ ಶತ್ರುಗಳ ಕೆಟ್ಟ ನಡತೆಯ ಮೇಲೆ ಮನ-ವಾಕ್ಯ-ಕರ್ಮಗಳಿಂದ ಉದ್ವೇಗ ಮಾಡದಿರುವದಕ್ಕೆ 'ಕ್ಷಮಾ' ಅನ್ನುತ್ತಾರೆ. ಪ್ರತೀಕಾರ ಮಾಡುವ ಶಕ್ತಿ ಇದ್ದರು ಸಹ ಯಾವನು ಪ್ರತೀಕಾರ ಮಾಡುವದಿಲ್ಲವೋ ಅವನೇ 'ಕ್ಷಮಾ'ವಾನನು.

**೮. ಧೃತಿ :**[೯] ವೇದಾಂತ ಜ್ಞಾನದಿಂದಲೇ ಮುಕ್ತಿಯಾಗುತ್ತದೆಂಬ ದೃಢವಿಶ್ವಾಸವೇ ಧೃತಿಯು. "ನಾನು ಬ್ರಹ್ಮವಾಗಿದ್ದೇನೆ" -ಈ ನಿಷ್ಠೆಯಿಂದ ಸ್ವಲ್ಪಾದರೂ ವಿಚಲಿತ ಆಗದಿರುವದಕ್ಕೆ 'ಧೃತಿ' ಎಂದು ಹೆಸರು.

---

೬. ಪಗೆ ಕೆಳೆ ಸತಿಸುತಾದಿಗಳಲ್ಲಿ ಕ್ಲೇಶಂಗ।
ಳೊಗೆಯೆ ರಕ್ಷಿಪೆನೆಂಬೀ ಮತಿ ತನ್ನ ॥
ಬಗೆಯೊಳುದಿಸಲು ದಯೆಯೆಂದು ತಿಳಿ ನೀನು।
ನಗೆಮೊಗದರಸಿ ಸಂತಸದಿಂದ ॥೮॥

ನಿಜಗುಣ ಶಿವಯೋಗಿ ಪರಮಾನುಭವಬೋಧೆ

೭. ಸಕಲ ನಿವೃತ್ತಿಗಳೊಳು ಪ್ರವೃತ್ತಿಗಳೊಳು।
ಸಕಲ ಧರ್ಮಾಧರ್ಮದೆಡೆಯೊಳು॥
ಸಕಲ ವಿಷಯದೊಳು ಸಮಬುದ್ಧಿಯದು ತನ।
ಗಕಲಂಕವೆಸುವಾರ್ಜವವಕ್ಕು ॥೯೫॥

ಪರಮಾನುಭವಬೋಧೆ ೫-೨

೮. ಸ್ತುತಿ ನಿಂದ್ಯಗಳೊಳು ಸಂತಸವಿಲ್ಲ ನೋವಿಲ್ಲ।
ವತಿಶಯಮೆನೆ ತನಗೆನಿಸುವ ॥
ಸ್ಥಿತಿಯನೆ ಕ್ಷಮೆಯೆಂದು ತಿಳಿವುದು ನೀನತಿ ।
ಹಿತವಿದು ಸಕಲ ಸಜ್ಜನರಿಗೆ ॥೭॥

ಪರಮಾನುಭವಬೋಧೆ ೫-೨

೯. ಧನಧಾನ್ಯ ಸುತಮಿತ್ರ ವನಿತಾದಿ ಹಾನಿಯೊ।
ಳಿನಿತರಾಗ ಮನದೊಳಗೆ ತನ್ನ ॥
ಮನಕೆ ವಿಕೃತಿದೋರದಿರಲದೆ ಧೃತಿಯೆಂದು।
ವನಿತೆ ನೀನವಧರಿಸೊಲವಿಂದೆ ॥೭॥

ಪರಮಾನುಭವ ಬೋಧೆ ೫-೨

೯. **ಮಿತಾಹಾರ :**[೧೦] ಯೋಗಶಾಸ್ತ್ರಾನುಸಾರವಾಗಿ ಹೊಟ್ಟೆಯ ಒಂದು ಭಾಗವನ್ನು ಅನ್ನದಿಂದ, ಎರಡು ಭಾಗಗಳನ್ನು ನೀರಿನಿಂದ ಮತ್ತು ಒಂದು ಭಾಗವನ್ನು ವಾಯುವು ಬರುಹೋಗುವದಕ್ಕೆ ಖಾಲಿ ಇಡತಕ್ಕದ್ದು. ಇದೇ ಮಿತಾಹಾರವು.

೧೦. **ಶೌಚ:** ಮಣ್ಣು-ನೀರು ಮೊದಲಾದವುಗಳಿಂದ ಶರೀರವನ್ನು ಸ್ವಚ್ಛ ಮಾಡುವದಕ್ಕೆ ಬಹಿಃಶೌಚವೆನ್ನುತ್ತಾರೆ. ವಿಚಾರದಿಂದ ಮನವನ್ನು ಜಳ-ಜಳ ಹಾಗು ನಿಃಸಂದೇಹ ಮಾಡುವದಕ್ಕೆ ಅಂತಃಶೌಚವೆನ್ನುತ್ತಾರೆ. ತನ್ನನ್ನು ಯಾವಾಗಲೂ ಪರಿಶುದ್ಧನೆಂದು ತಿಳಿಯುವದೂ ಶೌಚವು. ಸಾವಿರಾರು ಸಾರೆ ಸ್ವಚ್ಛ ಮಾಡಿದರು ಸಹ ಅದರ ಹೊಲಸು ಹೋಗದಂತಹ ವಸ್ತುವು ಶರೀರವು. ಎಷ್ಟು ಪ್ರಯತ್ನಮಾಡಿದರೂ ಈ ಶರೀರವು ನಿರ್ಮಲ ಮತ್ತು ಪವಿತ್ರವಾಗುವದಿಲ್ಲ.

ಆತ್ಮನು ಶರೀರದಲ್ಲಿದ್ದರು ಸಹ ಅವನು ಸದಾ ನಿರ್ಮಲವಾಗಿರುತ್ತಾನೆ ಮತ್ತು ಪವಿತ್ರವಾಗಿರುತ್ತಾನೆ. ಬೇರೆ ಯಾರಿಂದಲೂ ಇವನ ಶುದ್ಧಿಯಿಲ್ಲ. ಅತಏವ ಯಾವ ಯೋಗದ ಶರೀರ ಮತ್ತು ಆತ್ಮನ ವಿಷಯ ಮನೋವೃತ್ತಿ ನಿಶ್ಚಿತವಾಗಿವೆ, ಅವನು ನಿಷ್ಕೇವಲ ಜ್ಞಾನದಿಂದಲೇ ಸರ್ವಶ್ರೇಷ್ಠ ಪವಿತ್ರತೆಯ ಪ್ರಾಪ್ತಿಯನ್ನು ಮಾಡಿಕೊಳ್ಳುತ್ತಾನೆ. ಶೌಚದ ಮೇಲೆ ವಿಶೇಷ ಲಕ್ಷವನ್ನು ಕೊಟ್ಟು ಯೋಗಿಗೆ ಶುಚಿವಾಯುಗ್ರಸ್ತ ಆಗತಕ್ಕದ್ದಲ್ಲ. ಸಾಮರ್ಥ್ಯವಿರುತ್ತಿದ್ದರೂ ಶೌಚವಿಷಯಕ ಉದಾಸೀನವಾಗತಕ್ಕದ್ದಲ್ಲ.

## ನಿಯಮ

ತಪಃ ಸಂತೋಷಮಾಸ್ತಿಕ್ಯಂ ಧ್ಯಾನಮೀಶ್ವರಪೂಜನಮ್।
ಸಿದ್ಧಾಂತಶ್ರವಣಂ ಚೈವ ಹ್ರೀರ್ಮತಿಶ್ಚ ಜಪೋ ವ್ರತಮ್॥
ಏತೇ ಚ ನಿಯಮಾಃ ಪ್ರೋಕ್ತಾಸ್ತಾನ್ವಕ್ಷ್ಯಾಮಿ ಕ್ರಮಾಚ್ಛೃಣು॥

ತಪ-ಸಂತೋಷ-ಆಸ್ತಿಕ್ಯ-ಧ್ಯಾನ-ಈಶ್ವರ ಪೂಜನ-ಸಿದ್ಧಾಂತ ಶ್ರವಣ, ಹ್ರೀ (ಲಜ್ಜಾ)- ಮತಿ-ವ್ರತ-ಜಪ. ಈ ಹತ್ತು ನಿಯಮಗಳು. ಕ್ರಮದಿಂದ ಲಕ್ಷಣಗಳನ್ನು ಹೇಳುತ್ತೇವೆ.

೧. **ತಪ**[೧೧] **:** ಶಾಸ್ತ್ರೋಕ್ತ ವಿಧಿಯಿಂದ ಚಾಂದ್ರಾಯಣಾದಿ ವ್ರತಗಳಿಂದ ಶರೀರವನ್ನು ಕ್ಷೀಣ ಮಾಡುವದಕ್ಕೋಸುಗ ಯಾವ ಅಭ್ಯಾಸವು ಮಾಡಲ್ಪಡುವದೋ ಅದಕ್ಕೆ ತಪವೆನ್ನುವರು. ತಪದಿಂದ ಶರೀರ ಮತ್ತು ಮನಸಿನ ಮಲಿನವು ನಷ್ಟವಾಗುತ್ತದೆ. ಪಾಪ ಮತ್ತು ತಾಮಸಿಕ ಗುಣಗಳೂ ನಷ್ಟವಾಗುತ್ತವೆ. ಅಣಿಮಾದಿಕ ಸಿದ್ಧಿಗಳೂ ಪ್ರಾಪ್ತವಾಗುತ್ತವೆ. ತಪವು ಶಾರೀರಿಕ, ವಾಚಿಕ ಮತ್ತು ಮಾನಸಿಕವೆಂದು ಮೂರು ಬಗೆಯಾಗಿದೆ. ಶರೀರದಿಂದ

---

೧೦. ಉದರಾರ್ಧವನ್ನದಿಂದರ್ಧ ಮುದಕದೊ।
ಳ್ಪುದಿದಿರಲುಂಬ ಸದ್ವಿಧಿಯದು।
ಸುದತಿ ಕೇಳೆಲೆ ಮಿತಾಹಾರಮೆನಿಸುಗುಮಿಂ।
ತಿದು ಯೋಗವೃತ್ತಿಯೊಳಗೆ ಮುಖ್ಯ ॥೧೦॥

ಪರಮಾನುಭವ ಬೋಧೆ ೫-೨

೧೧. ಉಪವಾಸ ಕೃಛ್ರ ಚಾಂದ್ರಾಯಣಾದಿಗಳಿಂದ।
ವಪರಿಮಿತ ಕ್ಲೇಶದೊಳು ತನ್ನ ॥
ವಪುರಿಂದ್ರಿಯಂಗಳನುರೆ ನಿರೋಧಿಸಲದು ।
ತಪವೆಂಬ ನಿಯಮವೆಂದೆನಿಪುದು ॥೨॥

ಅನಿಷ್ಟಕರ್ಮಗಳನ್ನು ಮಾಡದೆ ಅದನ್ನು ತಪಿಸುವದಕ್ಕೆ ಶಾರೀರಿಕ; ವಾಣಿಯಿಂದ ಅಸತ್ಯವಚನ ಅನ್ನದೆ ಮಿತ-ಭಾಷಣಾದಿಗಳಿಗೆ ವಾಚಿಕ ; ಹಾಗು ಮನದಲ್ಲಿ ದುಷ್ಟಕಲ್ಪನೆಗಳನ್ನು ತರದೆ ಅದನ್ನು ಯಥಾರ್ಥ ಮಾರ್ಗದಲ್ಲಿ ಹಚ್ಚುವದಕ್ಕೆ ಮಾನಸಿಕ ತಪವೆನ್ನುತ್ತಾರೆ. ಆಗ ಸಹ ಮನ-ವಾಣಿ-ಶರೀರಗಳ ಪಾಪವೂ ನಷ್ಟವಾಗುತ್ತದೆ.

**೨. ಸಂತೋಷ :** [೧೨]ಪ್ರಾರಬ್ಧಕರ್ಮಾನುಸಾರವಾಗಿ ದೊರೆತುದರಲ್ಲಿಯೇ ತೃಪ್ತವಾಗಿರುವದಕ್ಕೆ ಸಂತೋಷವೆನ್ನುತ್ತಾರೆ. ಬ್ರಹ್ಮಲೋಕದ ಭೋಗದಲ್ಲಿಯೂ ಕಾಮನಾ ಮಾಡದೆ ಎಂತಹ ಅವಸ್ಥೆಯಲ್ಲಿಯೂ ವಿಚಲಿತವಾಗದಿರುವದೇ ಸಂತೋಷವು.

**೩. ಆಸ್ತಿಕ್ಯ:** [೧೩]ಶ್ರುತಿ-ಸ್ಮೃತಿ ಹಾಗು ಪುರಾಣೋಕ್ತಿಗಳಲ್ಲಿ ವಿಶ್ವಾಸವಿಡುವದು ಆಸ್ತಿಕ್ಯವು. ಶಾಸ್ತ್ರ ಹಾಗು ಗುರುವಾಕ್ಯಗಳಲ್ಲಿ ಶ್ರದ್ಧಾಪೂರ್ವಕ ವಿಶ್ವಾಸವು 'ಆಸ್ತಿಕ್ಯವು'

**೪. ದಾನ ಅಥವಾ ಧ್ಯಾನ :** [೧೪]ಪಾಠಾಂತರ ವಾಕ್ಯ 'ದಾನಮೀಶ್ವರ ಪೂಜನಮ್'. ಇಲ್ಲಿ ಪಾಠಾಂತರವಾಗಲು ಶಕ್ಯವಿರುತ್ತದೆ. ಒಂದು ವೇಳೆ ಧ್ಯಾನದ ಉಲ್ಲೇಖವು ಅಷ್ಟಾಂಗಯೋಗದ ವಿಷಯದಲ್ಲಿ ಎಣಿಸಲ್ಪಟ್ಟಿದೆ. ಆದರೂ ನಿಯಮಾನುಸಾರವಾಗಿ ನಿತ್ಯ ಅಭ್ಯಾಸದಿಂದ ಧ್ಯಾನ ಮಾಡುವದೂ ಅತ್ಯಾವಶ್ಯಕವಿರುತ್ತದೆ. ಯಾಕೆಂದರೆ ಯೋಗವಿಷಯಕ ಧ್ಯಾನದಿಂದ ಪರಮಾತ್ಮಪ್ರಾಪ್ತಿಯ ಸಿದ್ಧಿಯು ಆಗಲೇ ಆಗುವದು. ದಾನದ ಪಾಠದಲ್ಲಿಯಂತು ದ್ರವ್ಯವನ್ನು ಸದ್ವಿಷಯದಲ್ಲಿ ಅಥವಾ ಸತ್ಪಾತ್ರದಲ್ಲಿ ಶುದ್ಧ ದೇಶ ಮತ್ತು ಕಾಲದಲ್ಲಿ ವ್ಯಯಮಾಡುವದೇ ದಾನವು.

ನ್ಯಾಯದಿಂದ, ನಿಷ್ಕಪಟದಿಂದ ಗಳಿಸಿದ ದ್ರವ್ಯವನ್ನು ಒಳ್ಳೆಯ ವ್ಯವಸ್ಥೆಯಿಂದ ವಿತರಣ ಮಾಡಿದರೆ ಅದಕ್ಕೆ ದಾನವೆನ್ನುತ್ತಾರೆ. ಅನ್ಯಥಾ ಇಲ್ಲ. ಸಾತ್ವಿಕ-ರಾಜಸ-ತಾಮಸ ಭೇದದಿಂದಲೂ ದಾನವು ಮೂರು ವಿಧವಿರುತ್ತದೆ. ಯಾವುದು ಕರ್ತವ್ಯ ವಿಧಿಯಿಂದ ದೇಶ ಕಾಲಾನುಸಾರವಾಗಿ ಸತ್ಪಾತ್ರಕ್ಕೆ ಕೊಡಲ್ಪಟ್ಟರೆ ಅದು ಸಾತ್ವಿಕವು. ಹೆಸರಿಗೆ ಕೀರ್ತಿಗೋಸುಗ ಕೊಟ್ಟುದು ರಾಜಸವು ಮತ್ತು ಕಾಮ-ಕ್ರೋಧಗಳಿಂದ ಕೊಟ್ಟುದಕ್ಕೆ

---

೧೨. ದೊರಕಿದ ಲಾಭವೆನಿತು ತನಗನಿತನೆ ।
ಪರಿಣಮಿಸುವ ಬುದ್ಧಿ ಘಟಿಸಲು ॥
ಹರುಷ ಲಕ್ಷಣಮಾದ ಪರಮಸಂತೋಷವೆಂ ।
ಬರು ಮುನಿವರರದನೆಲೆ ನೀರೆ ॥೫॥

ಪರಮಾನುಭವಬೋಧೆ ೫/೩

೧೩. ಇದು ಧರ್ಮವಿದಧರ್ಮವಿದು ಕಾರ್ಯವಿದಕಾರ್ಯ।
ವಿದು ನಿಜವೆಂದಾಗಮೋಕ್ತದಿ॥
ಪದಪಿಂದೆ ತಿಳಿದು ನಂಬಿರಲದಾಸ್ತಿಕ್ಯವೆಂ।
ಬುದು ಕೇಳು ಕಂಜದಳಾಂಬಕಿ ॥೪॥

ಪರಮಾನುಭವಬೋಧೆ ೫/೩

೧೪. ಧನಧಾನ್ಯವಸ್ತ್ರವಾಹನ ವನಿತಾದಿಗ।
ಳನು ನೀತಿಯುಡುಗದೆ ಸತ್ಪಾತ್ರ॥
ಜನಕನುರಾಗದಿಂದೀವುದೆ ದಾನವೆಂ।
ದೆನಿಪುದು ಮಿಸುನಿವಣ್ಣದ ಗಾತ್ರೆ ॥೫॥

ಪರಮಾನುಭವಬೋಧೆ-೫/೩

ತಾಮಸದಾನವೆನ್ನುತ್ತಾರೆ. ಪ್ರಮಾದ ಜನಿತ ಪಾಪವನ್ನು ಉಪಯುಕ್ತ ದಾನದಿಂದ ನಷ್ಟಮಾಡಲಿಕ್ಕೆ ಶಕ್ಯವಿರುತ್ತದೆ. ತ್ರಿವಿಧದಾನಗಳಲ್ಲಿ ದ್ರವ್ಯದಾನವು ನಿಕೃಷ್ಟವು. ವಿದ್ಯಾದಾನವು ಮಧ್ಯಮವು ಮತ್ತು ಅಭಯದಾನವು ಶ್ರೇಷ್ಠವು.

೫. **ಈಶ್ವರ ಪೂಜನ:** [೧೫]ಮನಸಿನಿಂದ ರಾಗ-ದ್ವೇಷಗಳನ್ನು ತ್ಯಾಗಮಾಡಿ, ವಾಣಿಯಿಂದ ಮಿಥ್ಯೆವನ್ನು ತ್ಯಾಗಮಾಡಿ, ಕರ್ಮದಿಂದ ಹಿಂಸೆಯನ್ನು ತ್ಯಾಗಮಾಡಿ ಯಾವ ಕಾರ್ಯವನ್ನು ಮಾಡಿದರೂ ಅದಕ್ಕೆ 'ಈಶ್ವರ-ಪೂಜನ'ವೆನ್ನುತ್ತಾರೆ.

ಮಂತ್ರ ಜಪ ಹಾಗೂ ಅವುಗಳ ಚಿಂತನದ ಫಲವನ್ನು ಈಶ್ವರಾರ್ಪಣ ಮಾಡುವದೇ ಈಶ್ವರ ಪ್ರಣಿಧಾನವು. ಇದರಿಂದ ಯೋಗಿಯ ವಿಘ್ನಗಳು ದೂರವಾಗುತ್ತವೆ.

ಓಂಕಾರವೇ ಭಗವಂತನ ನಾಮವು. ಇದನ್ನು ಜಪಿಸುವದರಿಂದ, ಗಾಯತ್ರಿಯ ಅರ್ಥದ ಸ್ವರೂಪ ಸ್ಮರಣೆಯನ್ನು ಮಾಡುವದರಿಂದ ಯೋಗಾಭ್ಯಾಸದಲ್ಲಿ ಇದರಿಂದ ವಿಘ್ನಗಳುಂಟಾಗುವದಿಲ್ಲ. ಜಪಾದಿ ಕ್ರಿಯಾಯೋಗವನ್ನು ಮಾಡದೆ ಇರುವದರಿಂದ ಯೋಗದಲ್ಲಿ ಕೃತಾರ್ಥತೆಯನ್ನು ಪಡೆಯುವದಿಲ್ಲ. ದುಃಖ, ಕರ್ಮವಿಪಾಕ; ಆಶಯ ಇವುಗಳು ಯಾವದನ್ನು ಮುಟ್ಟಲು ಶಕ್ಯವಿಲ್ಲವೋ ಅದಕ್ಕೆ 'ಭಗವಾನ್' ಅನ್ನುತ್ತಾರೆ. ಆ ದುಃಖಾದಿಗಳೂ ಈ ಭಗವಂತನ ಆಧೀನವಿರುತ್ತವೆ ಮತ್ತು ಅವನು ದುಃಖಾದಿಗಳಿಂದ ಆಚೆಗೆ ಇರುತ್ತಾನೆ. ಅವನಿಗೆ ಚಿರಸ್ಥಾಯಿ ಜ್ಞಾನವಿರುತ್ತದೆ. ಅಂದರೆ ಅವನು ಉತ್ಪತ್ತಿ-ವಿನಾಶಶೀಲನಲ್ಲ. ಮಾಯೆಯು ಅವನನ್ನು ಮೋಹಿಸಲಾರದು. ಅವನು ಮಾಯಾಧೀಶನಿರುವದರಿಂದ ಅದು ಅವನ ಅಧೀನವಿರುತ್ತದೆ.

---

೧೫. ಶಿವನೆ ತಾನೆಂದು ಮಾನಸದೊಳು ಪೂಜಿಸ।
ದವನಿಗೆ ಭವಬಂಧವಳಿವುದೆ ।।ಪ।।
ತನು-ವಚೋ-ಮಾನಸವಿನಿತರಿಂದೀಶ್ವರಾ।
ರ್ಚನೆ ಮೂರು ತೆರನಲ್ಲಿ ಕ್ರಮದಿಂದ।।
ವನಿತೆ ಕನಿಷ್ಠ ಮಧ್ಯೋತ್ತಮವೆನಿಸಿ ಭ।
ಜನೆ ನುತಿ ಚಿಂತನೆವಿಡಿದಿರ್ಕು ।।೧।।

ತನುವಿನಿಂದವೆ ಸಿರಿ ವಚನದಿಂದವೆ ಸಗ್ಗ।
ದನುಭೂತಿ ಮಗುಳೆ ಮಾನಸದಿಂದ।।
ಘನಮುಕ್ತಿ ತನಗಹುದಾಗಿ ಪೂಜಾಫಲ।
ವೆನಿಸುಗುಮಿಂತು ಮೂದೆರನೆಂದು ।।೨।।

ಅದರಿಂದೆ ಮೋಕ್ಷಾರ್ಥಿ ಹೃದಯದೋಳೀಶ್ವರ।
ಪದವನರಿದು ಸಲೆ ಜಾನಿಸಿ ।।
ಪದಪಿಂದೆ ಭಜಿಸಿ ಕೈವಲ್ಯವನೈದಬೇ।
ಹುದು ಕೇಳು ಕಾಂತೆ ನಿಶ್ಚಯವಿದು ।।೩।।

ಪಳುಕಿನ-ಮಿಂಚಿನ-ಬೆಳದಿಂಗಳಿನ ತಾರೆ।
ಗಳ ರನ್ನವೆಳಗಿನಂತಭವನ।।
ತಿಳಿದು ಸೋಹಂಭಾವವಳವಟ್ಟು ಮೋಕ್ಷಾರ್ಥಿ।
ಗಳು ದೇಹರದೊಳು ಜಾನಿಸುವದು ।।೪।।

ಬಿಂದು ನಾದ ವ್ಯೋಮ ಮಂತ್ರ ಭುವನ ಮೂರ್ತಿ।
ಯೆಂದಾರು ತೆರದಿಂದಲಭವನ।।
ಕುಂದದೆ ನೆನೆದರ್ಚಿಪುದು ನಿಜಹೃದಯಾರ
ವಿಂದದೊಳ್ಪಲ ಭೇದಯುತರೊಲ್ಪು ।।೫।।

ಭಗವಂತನ ಹೊರತು ಯೋಗಿಗೆ ಎರಡನೆಯ ಸಹಾಯವಿಲ್ಲ. ಮಾಯಾ ಹಾಗೂ ಅದರ ಕಾರ್ಯಗಳನ್ನು ಬಿಟ್ಟುಗೊಟ್ಟು ಈಶ್ವರನನ್ನು ಶರಣು ಹೋಗದಿದ್ದರೆ ಯೋಗಿಗೆ ಮಾಯೆಯಿಂದ ಮುಕ್ತಿಯಾಗುವದಿಲ್ಲ. ಅವನು ವಿಪತ್ತಿನಲ್ಲಿ ಬೀಳುವನು. ಮಾಯಾಧೀಶನ ಶರಣಾಗತಿಯಿಂದಲೇ ಯೋಗಿಯು ಮಾಯಾಜಾಲವನ್ನು ದಾಟಲು ಶಕ್ತನು.

**೬. ಸಿದ್ಧಾಂತ ಶ್ರವಣ:** [೧೬] "ವೇದಾಂತದ ಸಿದ್ಧಾಂತವನ್ನು ಗುರುಮುಖದಿಂದ ಕೇಳುವದು."-ವೇದಾಂತದಲ್ಲಿ ಕೆಲವು ಸ್ವರೂಪಲಕ್ಷ್ಣಣವುಳ್ಳ ವಾಕ್ಯಗಳು ದೊರೆಯುತ್ತವೆ. ಉದಾ:- "ಸತ್ಯಂ ಜ್ಞಾನಮನಂತಂ ಬ್ರಹ್ಮ". ಇದು ಬ್ರಹ್ಮದ ಸ್ವತಂತ್ರ ಲಕ್ಷಣವಿರುತ್ತದೆ. ಮತ್ತು ವಾಚ್ಯಂತರ ಲಕ್ಷಣವಿರುತ್ತದೆ.

ಜಗತ್ತಿನ ಕಾರಣವು ಬ್ರಹ್ಮವಿರುತ್ತದೆ. ಇದು ತಟಸ್ಥ ಲಕ್ಷಣವಾಯಿತು. ಅಂದರೆ ಗೌಣಲಕ್ಷಣವಿರುತ್ತದೆ. ಈ ವಾಕ್ಯಗಳನ್ನು ಗುರು ಮತ್ತು ಶಾಸ್ತ್ರಗಳಿಂದ ತಿಳಿಯತಕ್ಕದ್ದು. ಈ ಬಗೆಯಾಗಿ ವಾಕ್ಯಗಳನ್ನು ಕೇಳುವದಕ್ಕೆ ಸಿದ್ಧಾಂತ ಶ್ರವಣವೆನ್ನುತ್ತಾರೆ.

**೭. ಹ್ರೀ:** [೧೭] ಯಾವ ಕರ್ಮವು ಶಾಸ್ತ್ರದಿಂದ ಹಾಗು ಲೋಕ ಸಮಾಜದಿಂದ ನಿಂದಿತವಾಗಿರುತ್ತದೆ. ಅಂತಹ ಕರ್ಮವನ್ನು ಮಾಡುವದಕ್ಕೆ ನಾಚುವದು, ಇದಕ್ಕೆ 'ಹ್ರೀ' ಅನ್ನುವರು.

**೮. ಮತಿ :** [೧೮] ಶಾಸ್ತ್ರ ವಚನಗಳಲ್ಲಿ ಶ್ರದ್ಧಾ ಮತ್ತು ವಿಶ್ವಾಸವೇ ಮತಿಯು.

**೯. ಜಪ :** [೧೯] ಶ್ರೀ ಗುರುಕೃಪೆಯಿಂದ ಪ್ರಾಪ್ತ ಭಗವಂತನ ನಾಮ ಅಥವಾ ಮಂತ್ರ, ಶಾಸ್ತ್ರ ವಿಧಿಯಿಂದ ಅಭ್ಯಾಸಮಾಡುವದಕ್ಕೆ ಜಪವೆನ್ನುವರು. ಪಾಠ ಅಥವಾ ಜಪ, ಇತಿಹಾಸ-ಪುರಾಣಾದಿಗಳಿಂದ ಕೇಳಿ, ಪುನಃ ಪುನಃ

---

೧೬. ಪವಣತೆ ಮೀಗೆ ವೇದಶಿರವನು ತನ್ನನು।
ಭವಕೆ ಬರ್ಪಂತೆ ತಿಳಿವುದನು ॥
ವಿವಿಧ ತಾಪಸಮುಖ್ಯರೊಲವಿಂದೆ ಸಿದ್ಧಾಂತ।
ಶ್ರವಣವೆಂಬುದು ನಿಜವಿದು ತಾನು ॥೧॥ –ಪರಮಾನುಭವ ಬೋಧೆ ೫/೬

೧೭. ವೇದ ಲೌಕಿಕ ಮಾರ್ಗದೊಳು ನಿಂದಿಸಲು ಯೋಗ್ಯ।
ವಾದ ನಿಷೇಧ ವರ್ತನವನು॥
ಆದರಿಸದೆ ಬಿಡುವದು ತಾನೆ ಲಜ್ಜೆಯೆಂ।
ದೋದಿ ಪೇಳುವರು ಸದ್ಗುರುಗಳು ॥೨॥ –ಪರಮಾನುಭವ ಬೋಧೆ ೫/೬

೧೮. ತನಗೆ ಕೇಳಧ್ಯಾತ್ಮದೊಳಗೆ ವಿಹಿತವೆನಿ।
ತನಿತುವನರಿದು ಸುಸ್ಥಿರಮಾಗಿ ॥
ಮನದೊಳು ನಂಬಿರಲದು ತಾನೆ ಮತಿಯೆಂದು।
ವಿನುತಿಸುವರು ವೇದವಿದರೊಲ್ದು ॥೩॥

೧೯. ಮಾನಿನಿ ವಾಚಕೋಪಾಂಶುಮಾನಸವೆಂದು ।
ತಾನಿಂತು ತ್ರಿವಿಧವಾ ಜಪವಿಧಿ ॥
ಸಾನುರಾಗದೊಳರಿ ನೀನೊಂದು ಸಾವಿರ ।
ವಾನಂತ ಫಲವದಕನುಗತಿ ॥೪॥
ಇದಿರಿಂಗೆ ಕೇಳಬರ್ಪುದು ವಾಚಕವೆನಿಕ್ಕು।
ಮಿದಿರಿಂಗೆ ಕೇಳಬಾರದೆ ತನ್ನ ।
ರದನಚ್ಛದಂಗಳಲುಗೆ ಮಾಳ್ಪ ಜಪವಿಧಿ।
ಯದು ತಾನುಪಾಂಶುವೆಂದೆನಿಪುದು ॥೫॥ →

ಸ್ಮರಣ ಮಾಡುವದಕ್ಕೆ ಜಪವೆನ್ನುತ್ತಾರೆ. ವಾಚಿಕ-ಉಪಾಂಶು ಮತ್ತು ಮಾನಸಿಕ ಭೇದದಿಂದ ಜಪವು ತ್ರಿವಿಧವಾಗಿದೆ. ಉಚ್ಚಸ್ವರದಿಂದ ವಾಚಿಕ ಓಷ್ಟ-ಜಿಹ್ವಾ-ಚಾಲನದಿಂದ ಉಪಾಂಶು ಮತ್ತು ಮನಸಿನಲ್ಲಿಯೇ ಜಪಮಾಡುವದು ಮಾನಸಿಕವು. ವಾಚಕ-ಉಪಾಂಶು ಮತ್ತು ಮಾನಸಿಕಗಳ ಫಲವು ಉತ್ತರೋತ್ತರ ಹೆಚ್ಚಾಗುತ್ತದೆ. ನೀಚನ ಶ್ರವಣದಿಂದ ನಿಷ್ಫಲವಾಗುತ್ತದೆ.

೧೦. **ವ್ರತ :** ಶಾಸ್ತ್ರೋಕ್ತ ವಿಧಿಯಿಂದ ಮನಸು ಹಾಗು ಶರೀರ ಶುದ್ಧಿಗೋಸುಗ ಉಪವಾಸ (ಭೋಜನಾದಿ ಮಾಡದಿರುವದು)ವೇ ವ್ರತವು. ಉಪವಾಸ ಅಥವಾ ಪ್ರಾಯಶ್ಚಿತ್ತದಿಂದ ಇಚ್ಛಾಕೃತ ಪಾಪದ ಪ್ರಾಯಶ್ಚಿತ್ತವಾಗುತ್ತದೆ.

**ಆಸನ**

'ಸ್ವಸ್ತಿಕಂ ಗೋಮುಖಂ ಪದ್ಮಂ ವೀರ ಸಿಂಹಾಸನಂ ತಥಾ ।
ಭದ್ರಂ ಮುಕ್ತಾಸನಂ ಚೈವ ಮಯೂರಾಸನಮೇವ ಚ ॥೧॥

ಸುಖಾಸನಂ ಸಮಾಖ್ಯಾತಂ ನವಮಂ ಪರಿಕೀರ್ತಿತಮ್॥
ಪಶ್ಚಿಮೋತ್ತಾನಮಾಖ್ಯಾತಂ ಸರ್ವರೋಗಹರಂ ಪರಮ್ ॥೨॥

ಸ್ವಸ್ತಿಕ, ಗೋಮುಖ, ಪದ್ಮ, ವೀರ, ಸಿಂಹಾಸನ, ಭದ್ರ ಮುಕ್ತಾಸನ, ಮಯೂರಾಸನ, ಸುಖಾಸನ, ಪಶ್ಚಿಮೋತ್ತಾನಾಸನ, ಈ ಆಸನಗಳು ಸರ್ವರೋಗ ನಾಶಕವಿರುತ್ತವೆ.

೧. **ಸ್ವಸ್ತಿಕಾಸನ :** [೨೦] ತೊಡೆ ಮತ್ತು ಮೀನಗಂಡಗಳ ನಡುವಿನ ಮೊಣಕಾಲ ಸಂದಿಗಳಲ್ಲಿ ಸೇರಿಸಿ (ಬಲಗಾಲನ್ನು ಎಡಕ್ಕೆ, ಎಡಗಾಲನ್ನು ಬಲಕ್ಕೆ) ಅವುಗಳನ್ನು ಅಂಗಾತಾಗಿ ಇಟ್ಟು ಸಾವಧಾನದಿಂದ ಕುಳಿತುಕೊಳ್ಳುವದು ಸ್ವಸ್ತಿಕಾಸನವು.

೨. **ಗೋಮುಖಾಸನ :** ಎರಡೂ ಕಾಲುಗಳನ್ನು ಮೊಣಕಾಲುಗಳನ್ನು ಎರಡೂ ಪಾರ್ಶ್ವದ ನೆಲದ ಮೇಲೆ ಇಟ್ಟು, ಬಲದ ಮೊಣಕಾಲನ್ನು ಪಾರ್ಶ್ವದಲ್ಲಿ ಮತ್ತು ಎಡತೊಡೆಯನ್ನು ಬಲಪಾರ್ಶ್ವದಲ್ಲಿ, ಶರೀರವನ್ನು ಸರಳವಾಗಿಡುವದು; ಇದಕ್ಕೆ ಗೋಮುಖಾಸನವೆನ್ನುತ್ತಾರೆ. ಯಾಕಂದರೆ ಇದರಿಂದ ಶರೀರದ ಕೆಳಭಾಗವು 'ಗೋಮುಖಾ'ಕೃತಿಯಾಗುತ್ತದೆ.

---

→ ಎನಿತು ಮಂತ್ರದ ಪದವನಿತನೆ ತನ್ನಯ।
ಮನದಲ್ಲುಚ್ಚರಿಸುವದು ತಾನೆ ॥
ವನಿತೆ ಕೇಳ್ ಮಾನಸ ಜಪವೆನಿಪುದು ಶಾಸ್ತ್ರ
ದನುಮತವಿದು ಮುಮುಕ್ಷುಗೆ ಬೇಕು ॥೬॥

ಪರಮಾನುಭವ ಬೋಧೆ ೫/೬

೨೦. ತೊಡೆ ಕಿರುದೊಡೆಗಳ ನಡುವೆರಡಂಘ್ರಿಗ।
ಳಡಗಿರ್ದು ಸಸಿನಮಾದೊಡಲಿಂದ॥
ಬಿಡದೆ ಕುಳ್ಳಿರೆ ಸ್ವಸ್ತಿಕಾಸನವಹುದೆಂದು।
ಮಡದಿ ನೀನಿದನೆ ನಿಶ್ಚಯಿಪುದು ॥೩॥

ಪರಮಾನುಭವ ಬೋಧೆ ೫/೭

೩. ಪದ್ಮಾಸನ : [೨೧] ಎಡತೊಡೆಯ ಮೇಲೆ ಬಲಪಾದ ಮತ್ತು ಬಲತೊಡೆಯ ಮೇಲೆ ಎಡಪಾದವನ್ನು ಇಡಬೇಕು. ಹಾಗು ಟೊಂಕದ ಹಿಂದಿನಿಂದ ಎಡಗಾಲ ಹೆಬ್ಬೊಟ್ಟು ಮತ್ತು ಎಡಗೈಯಿಂದ ಬಲಗಾಲಿನ ಹೆಬ್ಬೊಟ್ಟನ್ನು ಹಿಡಿದು ಗದ್ದವನ್ನು ಎದೆಗೆ ಸ್ಪರ್ಶಮಾಡಿ ಮೂಗಿನ ತುದಿಯ ಮೇಲೆ ದೃಷ್ಟಿಯನ್ನು ಇಡತಕ್ಕದ್ದು. ಇದು ಸಮಸ್ತ ರೋಗನಾಶಕವಾದ ಪದ್ಮಾಸನವು.

೪. ವೀರಾಸನ : ಒಂದು ಪಾದದ ತೊಡೆ ಮೊಣಕಾಲು ಭೂಮಿಯ ಮೇಲೆ ಇರಿಸಿ, ಎರಡನೆಯ ಕಾಲಿನ ತೊಡೆ, ಮೊಣಕಾಲನ್ನು ಎರಡನೇ ಕಾಲಿನ ಮೇಲೆ ಇಟ್ಟರೆ ವೀರಾಸನವಾಗುತ್ತದೆ.

೫. ಸಿಂಹಾಸನ : ಗುದಾ ಮತ್ತು ಗುಹ್ಯಗಳ ನಡುವೆ ಶಿಲಾಯಿಯಂತೆ ಒಂದು ಸ್ಥಾನವಿರುತ್ತದೆ. ಇದಕ್ಕೆ 'ಶಿವನೀ' ಅನ್ನುತ್ತಾರೆ. ಬಲಪಾದದ ಹಿಮ್ಮಡವನ್ನು ಶಿವನಿಯ ಎಡಭಾಗದಲ್ಲಿ ಮತ್ತು ಎಡಪಾದದ ಹಿಮ್ಮಡವನ್ನು ಬಲಗಡೆಯ ಕಡೆಗೆ ಶಿವನಿಯ ಕಡೆಗೆ ಇಟ್ಟು, ಬೆರಳುಗಳನ್ನು ಎರಡೂ ಕೈಗಳನ್ನು ಮೊಣಕಾಲ ಮೇಲೆ ಇಟ್ಟು, ಬಾಯಿಯನ್ನು ತೆರೆದು ನಾಲಗೆಯನ್ನು ಹೊರಗೆ ಉದ್ದು ಮಾಡಿ, ಮೂಗಿನ ತುದಿಯ ಮೇಲೆ ದೃಷ್ಟಿಯನ್ನು ಇಟ್ಟು ಕೂಡ್ರತಕ್ಕದ್ದು, ಇದೇ ಸಿಂಹಾಸನವು.

೬. ಭದ್ರಾಸನ : ಎರಡೂ ಹಿಮ್ಮಡಗಳಿಂದ 'ಶಿವನಿ'ಯ ಎರಡೂ ಪಾರ್ಶ್ವಗಳನ್ನು ಜೋರಿನಿಂದ ಒತ್ತಿ, ಶರೀರದ ಎರಡೂ ಪಾರ್ಶ್ವಗಳಲ್ಲಿ ಅಂಗೈಗಳನ್ನು ಇಟ್ಟು, ಅವುಗಳ ಬಲದಿಂದ ಶರೀರವನ್ನು ಎಬ್ಬಿಸಿ, ಎರಡೂ ಕೈಗಳಿಂದ ಪಾದಗಳನ್ನು ಹಿಡಿದು ಸ್ಥಿರವಾಗುವದು, ಭದ್ರಾಸನವು. ಈ ಆಸನದಿಂದ ವಿಷವು ಸಹ ಪಚನವಾಗುವದು.

೭. ಮುಕ್ತಾಸನ[೨೨] : ಇದಕ್ಕೆ ಸಿದ್ಧಾಸನವೆಂದೂ ಅನ್ನುತ್ತಾರೆ. ಗುದಾ ಮತ್ತು ಗುಹ್ಯದ ಮಧ್ಯಭಾಗ ಇದಕ್ಕೆ ಯೋನಿಸ್ಥಾನವೆಂದೂ ಅನ್ನುತ್ತಾರೆ. ಆ ಸ್ಥಾನವನ್ನು ಎಡಚರಣದ ಹಿಮ್ಮಡದಿಂದ ಒತ್ತಿ ಬಲಚರಣದ ಹಿಮ್ಮಡವನ್ನು ಲಿಂಗದ ಮೇಲೆ ಒತ್ತತಕ್ಕದ್ದು ಹಾಗು ಗದ್ದವನ್ನು ಎದೆಯ ಮೇಲೆ ಹಚ್ಚತಕ್ಕದ್ದು. ಸ್ಥಿರತಾಪೂರ್ವಕ ಅಚಲದೃಷ್ಟಿಯಿಂದ ಭ್ರುಕುಟಿಯ ಮಧ್ಯಭಾಗವನ್ನು ನೋಡತಕ್ಕದ್ದು. ಇದು ಮೋಕ್ಷದ್ವಾರವನ್ನು ತೆರೆಯುವ ಸಿದ್ಧಾಸನ ಅಥವಾ ಮುಕ್ತಾಸನವು.

೮. ಮಯೂರಾಸನ : ಎರಡೂ ಕೈಗಳ ಅಂಗೈಗಳನ್ನು ನೆಲದ ಮೇಲೆ ಇಟ್ಟು ಮತ್ತು ಎರಡೂ ಮೊಣಕೈಗಳನ್ನು ನಾಭಿಯ ಮೇಲೆ ಕೂಡ್ರಿಸಿ, ಅದರ ಬಲದ ಮೇಲೆ ದಂಡದಂತೆ ಸಂಪೂರ್ಣ ಶರೀರದ ಭಾರವನ್ನು ಇಟ್ಟು ಸ್ಥಿರವಾಗಿರತಕ್ಕದ್ದು. ಇದಕ್ಕೆ 'ಮಯೂರಾಸನ'ವೆನ್ನುತ್ತಾರೆ. ನವಿಲು ಸಹ ಇದೇ ಆಸನ ಬಲದಿಂದ ಸರ್ಪವನ್ನು

---

೨೧. ತೊಡೆಗಳೆರಡರ ಮೇಲಡರಿ ಮಡಂಗಳು।
ಬಿಡದೆ ಕೂಡಿರಲೆಡಬಲನಾಗಿ ॥
ಕಡು ನೇರಿತ್ತಾದೊಡಲಿಂದೆ ಕುಳ್ಳಿರಲದೆ ।
ಮಡದಿ ಪದ್ಮಾಸನವೆನಿಪುದು ॥೪॥

೨೨. ಎಡದ ಹಿಮ್ಮಡಗಿನಾಧಾರದೆಡೆಯನೊತ್ತು ।
ತ್ತೊಡನೆ ದಕ್ಷಿಣದ ಹಿಮ್ಮಡವನು ॥
ಮಡಗಿ ಮೇಹನದ ಮೇಲ್ಗಡೆಯೊಳುರುಜವೆನಿ।
ಪೊಡಲಿಂದೆಮಿರೆ ಸಿದ್ಧಾಸನವದು ॥೨॥

ಪರಮಾನುಭವ ಬೋಧೆ ೫/೭

ಪಚಿಸಿಕೊಳ್ಳುತ್ತದೆ. ಈ ಆಸನವು ಅಜೀರ್ಣವನ್ನು ಪಚನಮಾಡುತ್ತದೆ. ದಿನಾಲು ಶೌಚದ ತರುವಾಯ ಈ ಆಸನವನ್ನು ಹಾಕತಕ್ಕದ್ದು. ಇದರಿಂದ ಶರೀರವು ನಿರೋಗಿಯಾಗುತ್ತದೆ. ಶರೀರವನ್ನು ನಿರೋಗಿಯಾಗಿ ಮಾಡುವ ಹಠಯೋಗಕ್ಕಿಂತಲೂ ಇದು ಶ್ರೇಷ್ಠ ಆಸನವಿರುವದು.

**೯. ಸುಖಾಸನ**[೨೩] : ಮೇಲೆ ಹೇಳಿದ ಆಸನಗಳಲ್ಲಿ ಅಭ್ಯಾಸವಾಗದ್ದರಿಂದ ಅವುಗಳನ್ನು ಮಾಡಲು ಶಕ್ಯವಾಗುವದಿಲ್ಲ. ಆದರೆ ಯಾವ ಬಗೆಯಿಂದಾದರೂ ಸುಖಪೂರ್ವಕ ಕೂಡ್ರಲಿಕ್ಕೆ ಶಕ್ಯವಾಗುವದೋ ಶರೀರದ ಸುಖ ಹಾಗೂ ಸ್ಥಿರತೆಯು ಆಗುವದೋ ಅಥವಾ ಕೂಡ್ರಲು ಶಕ್ಯತೆ ಇರುತ್ತದೆ, ಅದು ಸುಖಾಸನವು. ಅಸಮರ್ಥ ಹಾಗು ಅಸಭ್ಯಸ್ತರಿಗೋಸುಗ ಈ ಆಸನವಿರುತ್ತದೆ.

**೧೦. ಪಶ್ಚಿಮೋತ್ತಾನಾಸನ** : ನೆಲದ ಮೇಲೆ ಕುಳಿತು ಎರಡೂ ಕಾಲುಗಳನ್ನು ಸರಳವಾಗಿ ನೆಲದ ಮೇಲೆ ಪಸರಿಸಿ, ಎರಡೂ ಕೈಗಳ ಬೆರಳುಗಳಿಂದ ಎರಡೂ ಪಾದಗಳ ಅಂಗುಷ್ಠಗಳನ್ನು ಹಿಡಕೊಂಡು, ಮೂಗನ್ನು ಎರಡೂ ಎರಡೂ ಮೊಣಕಾಲುಗಳ ನಡುವೆ ಹಚ್ಚಿದರೆ 'ಪಶ್ಚಿಮೋತ್ತಾನಾಸನ'ವಾಗುತ್ತದೆ. ಈ ಆಸನದಿಂದ ಶರೀರದ ಜಡತ್ವವು ನಷ್ಟವಾಗುತ್ತದೆ. ಹಸಿವೆಯು ಬೆಳೆಯುತ್ತದೆ. ಮತ್ತು ಪ್ರಾಣವಾಯುವು ಸುಷುಮ್ನೆಯ ಒಳಗೆ ಸೇರುತ್ತದೆ.

ಶರೀರವು ಕೃಶವಾಗಿ ಕುಂಡಲಿನೀ ಶಕ್ತಿಯೇ ಜಾಗ್ರತವಾಗುತ್ತದೆ. ಊಟದ ಮೊದಲು ಬರೀ ಹೊಟ್ಟೆಯಿಂದ ಈ ಆಸನವನ್ನು ಹಾಕತಕ್ಕದ್ದು. ಯೋಗಮಾರ್ಗದಲ್ಲಿ ಇವೆಲ್ಲ ಆಸನಗಳನ್ನು ಮಾಡಲಿಕ್ಕೇ ಬೇಕು ಎಂಬ ನಿಯಮವಿಲ್ಲ. ದಿನಾಲು ಪ್ರತಿ ೨-೪ ಮಿನಿಟು ಸುಖಪೂರ್ವಕ ಕುಳಿತ ಮೇಲೆ, ಪುನಃ ಕುಳಿತು ನಿತ್ಯ ಬೆಳೆಸತಕ್ಕದ್ದು. ಈ ಪ್ರಕಾರ ಬೆಳೆಸುತ್ತಾ ಬೆಳೆಸುತ್ತಾ ೨॥ ತಾಸು ಏಕಾಸನದ ಮೇಲೆ ಕೂಡ್ರುವ ಅಭ್ಯಾಸವಾಗಬೇಕು ಮತ್ತು ಯಾವ ಬಗೆಯಿಂದಲೂ ಶರೀರಕ್ಕೆ ಕಷ್ಟವಾಗದಿದ್ದರೆ ಆಸನವು ಸಿದ್ಧವಾಯಿತೆಂದು ತಿಳಿಯಬೇಕು. ಇದೇ ಆಸನಸಿದ್ಧಿಯು.

ಆಸನಸಿದ್ಧಿಯಾದ ಮೇಲೆ ಮೂರು ಲೋಕಗಳನ್ನು ಗೆಲ್ಲುವ ಶಕ್ತಿಯುಂಟಾಗುತ್ತದೆ. ಆಸನಸಿದ್ಧಿಯ ತರುವಾಯ ಯೋಗಿಯು ಪ್ರಾಣಾಯಾಮಕ್ಕೆ ತೊಡಗಬೇಕು. ಆಸನ ಸಿದ್ಧಿಗೋಸುಗ 'ಅನಂತ'ನ ಧ್ಯಾನವನ್ನು ಮಾಡತಕ್ಕದ್ದು. ತನ್ನನ್ನೇ ಅನಂತನೆಂದು ತಿಳಿಯತಕ್ಕದ್ದು. ಇದರಿಂದ ಆಸನವು ಬೇಗನೆ ಸಿದ್ಧಿಯಾಗುತ್ತದೆ. ಆಸನಾಭ್ಯಾಸಿಯು ದೀರ್ಘಕಾಲ ಯಾತ್ರಾ ಹಾಗು ಪರಿಶ್ರಮ ಜನಕ ದೀರ್ಘ ಪಥಭ್ರಮಣವನ್ನು ಮಾಡತಕ್ಕದ್ದಲ್ಲ.

ಆಸನ ಸಿದ್ಧಯೋಗಿಯು ಶೀತೋಷ್ಣ-ಸುಖ-ದುಃಖ ಮತ್ತು ಮಾನಾಪಮಾನ ಸರ್ವದ್ವಂದ್ವಗಳನ್ನು ಸಹಿಸಲು ಸಮರ್ಥನಾಗುವನು.

## ನಾಡೀ ವಿಜ್ಞಾನ

ನಾಭಿಯ ಕೆಳಗೆ ಮತ್ತು ಕೇವಲ ಲಿಂಗದ ಮೇಲ್ಭಾಗದಲ್ಲಿ ತತ್ತಿಯಂತೆ ಎಲ್ಲ ನಾಡಿಗಳ ಉತ್ಪತ್ತಿ ಸ್ಥಾನವಿರುವದು. ಇದಕ್ಕೆ 'ಮೂಲ-ಕಂದ'ವೆನ್ನುವರು. ಇದರಿಂದಲೇ ೭೨ ಸಾವಿರ ನಾಡಿಗಳ ಉತ್ಪತ್ತಿಯಾಗಿರುತ್ತದೆ. ಮತ್ತು ಆ ನಾಡಿಗಳು ಹೇಳಿದ ಸ್ಥಾನದಿಂದ ಮೇಲೆ-ಕೆಳಗೆ ತಿರ್ಯಗ್ಗತಿಯಿಂದ ಶರೀರದಲ್ಲಿ ಹಬ್ಬಿರುತ್ತವೆ. ಅವುಗಳಲ್ಲಿ ೭೨ ನಾಡಿಗಳು ಮುಖ್ಯವಾಗಿರುತ್ತವೆ. ಇವುಗಳಲ್ಲಿಯೂ ಪ್ರಾಣವಾಯು ಸಂಚಾರಕ ಇಡಾ-ಪಿಂಗಲಾ-ಸುಷುಮ್ನಾದಿಕ

---

೨೩. ತನಗಾವ ತೆರದಿಂದೆ ಜನಿಪುದು ಧೈರ್ಯವಂ।
ತನುವಾಗಿ ಕುಳ್ಳಿರ್ದು ಚಲಿಸದೆ ॥
ಮನವಸುಗಳನು ನಿರೋಧಿಸಲದು ಸುಖಾ।
ಸನವೆಂದು ತಿಳಿವುದು ನಳಿನಾಕ್ಷಿ ॥೬॥

ಹತ್ತು ನಾಡಿಗಳು ಮುಖ್ಯವಾಗಿವೆ. ಅವುಗಳಲ್ಲಿಯೂ ಸರ್ವಶ್ರೇಷ್ಠವಾದ ಸುಷುಮ್ನೆಯು ಇರುತ್ತದೆ. ಯಾಕಂದರೆ ಇದರಿಂದ ಪ್ರಾಣವು ಹೊರಬೀಳುವದರಿಂದ ಬ್ರಹ್ಮಲೋಕದ ಗತಿಯು ಆಗುತ್ತದೆ. ಕೊನೆಗೆ ಕ್ರಮಮುಕ್ತಿಯಿಂದ ಅಮೃತರೂಪ ಮೋಕ್ಷವನ್ನು ಜೀವನು ಪಡೆಯುತ್ತಾನೆ. ಯಾವನಿಗೆ ಅನ್ಯ ನಾಡಿಗಳಿಂದ ಪ್ರಾಣವು ಹೊರಡುತ್ತದೆಯೋ ಅವನು ಸ್ವರ್ಗಾದಿಲೋಕಗಳನ್ನು ಪಡೆಯುತ್ತಾನೆ. 'ಇಡಾ' ಹೆಸರಿನ ಚಂದ್ರನಾಡಿಯು ಮತ್ತು 'ಪಿಂಗಲಾ' ಹೆಸರಿನ ಸೂರ್ಯನಾಡಿಯು ಹೇಳಿದ ಮೂಲಕಂದದಿಂದ ಹೊರಟು (ಪ್ರಕಟವಾಗಿ) ಮೂಗಿನ ಕ್ರಮದಿಂದ ಎಡ ಹಾಗು ಬಲ ದ್ವಾರಗಳಿಂದ ಹರಿಯುತ್ತವೆ. ಈ ಎರಡೂ ನಾಡಿಗಳ ಮಧ್ಯದಲ್ಲಿ 'ಸುಷುಮ್ನಾ' ಎಂಬ ಬ್ರಹ್ಮನಾಡಿಯು ಇರುತ್ತದೆ. ಅದು ಸಹ ಮೂಲಕಂದದಿಂದ ಹೊರಟು ಮೂಲಾಧಾರಾದಿ ಚಕ್ರಗಳೊಳಗಿಂದ ಮೇರುದಂಡದೊಳಗಿಂದ ತಾಲುಮಾರ್ಗದಿಂದ ಬ್ರಹ್ಮರಂಧ್ರದ ವರೆಗೆ ಹರಿಯುತ್ತದೆ.

ಇದೇ ಮೂಲಕಂದದಿಂದ 'ಸರಸ್ವತಿ' ಎಂಬ ನಾಡಿಯು ಹೊರಟು ಮುಖದ್ವಾರದ ವರೆಗೆ ಹರಿಯುತ್ತದೆ. 'ಪೂಷಾ' ಮತ್ತು 'ಅಲಂಬುಷಾ' ಎಂಬ ನಾಡಿಗಳು ಮೂಲಕಂದದಿಂದ ಹೊರಟು, ಎಡ ಮತ್ತು ಬಲಕರ್ಣಗಳ ವರೆಗೆ ಹರಿಯುತ್ತವೆ. 'ಗಾಂಧಾರಿ' ಮತ್ತು'ಹಸ್ತಿ ಜಿಹ್ವಾ' ಎಂಬ ಎರಡು ನಾಡಿಗಳು ಉಕ್ತ ಕಂದದಿಂದ ಹೊರಟು ಎಡ ಮತ್ತು ಬಲ ನೇತ್ರಗಳ ವರೆಗೆ ಹರಿಯುತ್ತವೆ. 'ಸುಷುಮ್ನಾ'- ಈ ನಾಡಿಯು ಬೆನ್ನಿನ ಮಧ್ಯಭಾಗದಲ್ಲಿದ್ದ ಮೇರುದಂಡದಿಂದ ಬಹಳ ಸೂಕ್ಷ್ಮ ಹಾಗು ಮಂದವಾಗಿ ಮೂಲಕಂದದಿಂದ ಹೊರಟು, ಬ್ರಹ್ಮರಂಧ್ರದ ವರೆಗೆ ಹೋಗಿರುತ್ತದೆ. ನಾಭಿಯಿಂದ ಎರಡು ಅಂಗುಲ ಕೆಳಗೆ ಕಂದದ ಹತ್ತರ 'ಅ' ಮಡಿಕೆಯಾಗಿ ಕಂದವನ್ನು ಸುತ್ತುತ್ತ 'ಕುಂಡಲಿನೀ' ಬ್ರಹ್ಮರಂಧ್ರದ ದ್ವಾರವನ್ನು ಮುಚ್ಚಿ ಸುಷುಪ್ತವಾಗಿರುತ್ತದೆ. ಇದನ್ನು ಎಚ್ಚರಿಸದ ಹೊರತು ಜ್ಞಾನಪ್ರಾಪ್ತಿಗೆ ಯಾವ ಉಪಾಯವೂ ಇರುವದಿಲ್ಲ. ಸಿದ್ಧ ಗುರುವು ಮಾತ್ರ ಶಿಷ್ಯನ ಕಿವಿಯಲ್ಲಿ ಮಂತ್ರ ಅಥವಾ ಶಕ್ತಿ ವಾಯುವಿನ ಸಂಚಾರದಿಂದ ಆ ಕುಂಡಲಿನಿಯನ್ನು ಎಚ್ಚರಿಸಲು ಸಮರ್ಥನು. ಆದರೆ ಒಂದು ವೇಳೆ ಯೋಗಿಗೆ ಪ್ರಬಲವಾದ ವಿಷಯ ವಾಸನೆ ಇದ್ದುದಾದರೆ ಅದು ಪುನಃ ಸುಷುಪ್ತವಾಗುತ್ತದೆ. ಅತಏವ ಯೋಗಾಭ್ಯಾಸಿಯು ಅದನ್ನು ದಿನಾಲು ಎಚ್ಚರಿಸಿ ಯೋಗಾಭ್ಯಾಸವನ್ನು ಮಾಡತಕ್ಕದ್ದು. ಕೆಲವರು ತಮ್ಮ ಪುರುಷಾರ್ಥದಿಂದಲೂ, ಕುಂಡಲಿನಿಯನ್ನು ಎಚ್ಚರಿಸುತ್ತಾರೆ. ಪ್ರಾಣಾಯಾಮ ಜಪ ಧ್ಯಾನ ಮತ್ತು ಸರ್ವತ್ರ ಬ್ರಹ್ಮದರ್ಶನ - ಇವುಗಳು ಈ ಕುಂಡಲಿನಿಯನ್ನು ಎಚ್ಚರಿಸುವ ಉಪಾಯಗಳು. ಅಭ್ಯಾಸಿಯಾದ ಯೋಗಿಯು ತನ್ನ ಪುರುಷಾರ್ಥದಿಂದ '೧೨' ಅಂಗುಲ ಉದ್ದ ಮತ್ತು '೪' ಅಂಗುಲ ಅಗಲವಾದ ಒಂದು ತೆಳುವಾದ ಮೆತ್ತಗಿನ ಅರಿವೆಯನ್ನು ತೆಗೆದುಕೊಂಡು ಎರಡೂ ಕೈಗಳಿಂದ ನಾಭಿಯನ್ನು ಆ ವಸ್ತ್ರದಿಂದ ಬಲ-ಎಡಕ್ರಮದಿಂದ '೧೦' ಮಿನಿಟುಗಳ ವರೆಗೆ ಅಲ್ಲಾಡಿಸತಕ್ಕದ್ದು. ಹೊಟ್ಟೆಯಲ್ಲಿ ನೋವು ಆಗುವದರಿಂದ ಅಲ್ಲಾಡಿಸುವದನ್ನು ಬಿಡಬೇಕು. ಇದರಿಂದ ಕುಂಡಲಿನಿಯು ಸಹಜವಾಗಿಯೇ ಜಾಗೃತವಾಗುತ್ತದೆ. ಆಗ ಅದು ಕಂದದ ಮಾರ್ಗವನ್ನು ಬಿಟ್ಟುಗೊಟ್ಟು ಹೃದಯದಲ್ಲಿ ಹೋಗಿ ಮಲಗುತ್ತದೆ. ಪ್ರಧಾನ ನಾಡಿಗಳಲ್ಲಿ ದಶಪ್ರಾಣವಾಯುಗಳು ಸುತ್ತಾಡುತ್ತವೆ. ಯಾಕಂದರೆ ಪ್ರಾಣ, ಅಪಾನ, ವ್ಯಾನ, ಸಮಾನ, ಉದಾನ, ಈ ಪಂಚ ಪ್ರಾಣಗಳು ಮತ್ತು ನಾಗ, ಕೂರ್ಮ, ಕೃಕರ, ದೇವದತ್ತ ಮತ್ತು ಧನಂಜಯ ಈ ಐದು 'ಉಪಪ್ರಾಣ'ಹೆಸರಿನಿಂದ ವಿಖ್ಯಾತವಿರುತ್ತವೆ[೨೪].

---

೨೪. ನಾಗ-ಕೂರ್ಮನು ಕೃಕರನು ದೇವದತ್ತನಂ।
ತಾಗಳುಮಾ ಧನಂಜಯನೆಂಬ ।
ಭಾಗೆವಡೆದು ವಾಯು ವಾಗಾದ್ರಿಯಾದಿ ಚೇ।
ಷ್ಟಾ ಗುಣಂಗಳವಾತ್ಮಗಿಲ್ಲಾಗಿ ॥೨॥ →

ಮುಖ, ನಾಸಿಕ, ನಾಭಿ ಮತ್ತು ಹೃದಯ ಇವು ಪ್ರಾಣದ ಸ್ಥಾನಗಳು. ಹೊಟ್ಟೆ-ಟೊಂಕ-ನಾಭಿ ಮತ್ತು ತೊಡೆಗಳು ವ್ಯಾನವಾಯುವಿನ ಸ್ಥಾನಗಳು. ಅದು ಚಕ್ಷುವಿನಲ್ಲಿ ಸಹ ಇರುವದು. ಕಿವಿಗಳಲ್ಲಿಯೂ ವ್ಯಾನವಾಯುವಿನ ನಿವಾಸವಿರುವದು. ಕೈ, ಕಾಲು ಮತ್ತು ಕಂಠದಲ್ಲಿ ಉದಾನವಾಯುವು ಇರುತ್ತದೆ. ಸಮಾನವಾಯುವು ಸಂಪೂರ್ಣ ಶರೀರದಲ್ಲಿ ಇರುತ್ತದೆ. ಅನ್ನವನ್ನು ಪಚಿಸುತ್ತದೆ.

ಪ್ರಾಣವಾಯುವು ಶ್ವಾಸ-ಪ್ರಶ್ವಾಸಗಳನ್ನು ತೆಗೆದುಕೊಳ್ಳುತ್ತದೆ. ಅಪಾನವಾಯುವು ಮಲ-ಮೂತ್ರಗಳನ್ನು ಬಿಡುತ್ತದೆ. ಸಂಪೂರ್ಣ ಶರೀರದಲ್ಲಿ ಅನ್ನದ ರಸ ಮತ್ತು ರಕ್ತದ ಸಂಚಾರವನ್ನು ಮಾಡಿಸುವದು, ಸಮಾನವಾಯುವಿನ ಕ್ರಿಯೆಯು. 'ಡೇಗುವದು', ಉದಾನದ ಕ್ರಿಯೆಯು. ಶರೀರದಲ್ಲಿ ಕಷ್ಟದ ಅನುಭವ ಮಾಡಿಸುವದು ವ್ಯಾನವಾಯುವಿನ ಕೆಲಸವು.

ಧನಂಜಯವು ಮೃತದೇಹದಲ್ಲಿ ಇರುತ್ತದೆ. ಕೂರ್ಮವು ಉನ್ಮೇಷ-ನಿಮೇಷಗಳನ್ನು ಮಾಡಿಸುತ್ತದೆ. ಕೃಕರದಿಂದ ಹಸಿವೆ-ನೀರಡಿಕೆಗಳಾಗುತ್ತವೆ. ನಾಗದಿಂದ ನಿದ್ರೆ ಮತ್ತು ದೇವದತ್ತದಿಂದ ಆಕಳಿಕೆ ಮೊದಲಾದ ಕ್ರಿಯೆಗಳಾಗುತ್ತವೆ.

ಸುಷುಮ್ನದ ದೇವತೆಯು ಶಿವನು, ಇಡಾಕ್ಕೆ ಹರಿಯು, ಹಾಗು ಪಿಂಗಲಾಕ್ಕೆ ಇಂದ್ರ ಮತ್ತು ಸರಸ್ವತಿಗೆ ವಿರಾಟ, ಪೂಷಾಕ್ಕೆ ವರುಣ, ಯಶಸ್ವಿನಿಗೆ ಸೂರ್ಯ, ಹಾಗೆಯೇ ಗಾಂಧಾರಿಗೆ ಚಂದ್ರಮಾ ಮತ್ತು ವರುಣಕ್ಕೆ ಹಸ್ತಿ, ಜಿಹ್ವಾ ಇವುಗಳಿಗೆ ಸಹ ದೇವತೆಗಳು ಹೇಳಲ್ಪಟ್ಟಿವೆ.

## ಪ್ರಾಣಾಯಾಮ

ವರ್ಣತ್ರಯಾತ್ಮಕಾಃ ಪ್ರೋಕ್ತಾ ರೇಚಕ ಪೂರಕ-ಕುಂಭಕಾಃ।
ಸ ಏಷಃ ಪ್ರಣವಃ ಪ್ರೋಕ್ತಃ ಪ್ರಾಣಾಯಾಮಸ್ತು ತನ್ಮಯಃ ॥೧॥

ಇಡಯಾ ವಾಯುಮಾಕೃಷ್ಯ ಪೂರಯಿತ್ವೋದರೇ ಸ್ಥಿತಮ್।
ಶನೈಃ ಷೋಡಶಭಿರ್ಮಾತ್ರೈರಕಾರಂ ತತ್ರ ಚಿಂತಯೇತ್ ॥೨॥

ಪೂರಿತಂ ಧಾರಯೇತ್ ಪಶ್ಚಾಚ್ಚತು ಃ ಷಷ್ಟಯಾತು ಮಾತ್ರಯಾ।
ಉಕಾರ ಮೂರ್ತಿರತ್ರಾಪಿ ಭಾವಯೇತ್ಪ್ರಣವಂ ಜಪನ್ ॥೩॥

ಪೂರಿತಂ ರೇಚಯೇತ್ಪಶ್ಚಾನ್ ಮಕಾರೇಣಾನಲಂ ಶನೈಃ।
ಯೋಗೀ ಪಿಂಗಲಯಾ ತತ್ರದ್ವಾತ್ರಿಂ ತನ್ಮಾತ್ರಯಾಕ್ರಮಾತ್ ॥೪॥

ಯೋಗಶಾಸ್ತ್ರದಲ್ಲಿ ಪ್ರಾಣವಾಯುವನ್ನು ಧಾರಣ ಮಾಡುವದಕ್ಕೆ ಕುಂಭಕ; ಮೂಗಿನಿಂದ ಸಾವಕಾಶವಾಗಿ ವಾಯುವನ್ನು ತುಂಬುವದಕ್ಕೆ ಪೂರಕ ಮತ್ತು ಪೂರಿತ ವಾಯುವನ್ನು ಕುಂಭಕದ ತರುವಾಯ ಸಾವಕಾಶವಾಗಿ ಬಿಡುವದಕ್ಕೆ ರೇಚಕವೆನ್ನುತ್ತಾರೆ. ಕಣ್ಣುಮುಚ್ಚಿ ಕಣ್ಣು ತೆರೆಯುವ ಸಮಯದಲ್ಲಿ ಎಷ್ಟು ವೇಳೆಯು ಹತ್ತುವದೋ ಅದಕ್ಕೆ ಮಾತ್ರೆಯೆನ್ನುತ್ತಾರೆ.

---

→ ವೈರಂಭಿ ಮುಖ್ಯ ಪ್ರಭಂಜನಂತರ್ಯಾಮಿ ।
ಯಾರ್ಕೈ ಮಹಾಪ್ರಾಣವೆನಿಪ್ಪೆದು॥
ಮಾರುತಂಗಳೆ ಮನಸಾದಿ ವಿಕಾ।
ರಾನುಕಾರಿಗಳಾತ್ಮನಲ್ಲಂಗನೆ ॥೪॥

ಪ್ರಾಣಾಯಾಮವನ್ನು ಮಾಡುವ ಸಮಯದಲ್ಲಿ ಮೂಗಿನ ಬಲಭಾಗದ ಛಿದ್ರವನ್ನು ಅಂಗುಷ್ಠದಿಂದ ಒತ್ತಿ ಎಡಛಿದ್ರದಿಂದ ಶ್ವಾಸದ '೧೬' ಮಾತ್ರೆಗಳಿಂದ ವಾಯುವನ್ನು ಹೊಟ್ಟೆಯಲ್ಲಿ ತುಂಬತಕ್ಕದ್ದು. '೬೪' ಮಾತ್ರೆಗಳಿಂದ ಹೊಟ್ಟೆಯಲ್ಲಿ ಶ್ವಾಸವನ್ನು ತಡೆದು '೩೨' ಮಾತ್ರೆಗಳಿಂದ ರೇಚಕವನ್ನು ಮಾಡತಕ್ಕದ್ದು. ಶ್ವಾಸವನ್ನು ಸಾವಕಾಶವಾಗಿ ಬಲಮೂಗಿನ ಹೊರಳಿಯಿಂದ ಹೊರಗೆ ಬಿಡತಕ್ಕದ್ದು. '೧೬' ಮಾತ್ರೆಯಲ್ಲಿ ಪೂರಕ 'ಅ'ಕಾರದ ಚಿಂತನ, '೬೪' ಮಾತ್ರೆಯಲ್ಲಿ 'ಉ' ಕಾರದ ಚಿಂತನ, ಕುಂಭಕ ಮತ್ತು '೩೨' ಮಾತ್ರೆಯಲ್ಲಿ ರೇಚಕ 'ಮ' ಕಾರದ ಚಿಂತನ ಮಾಡತಕ್ಕದ್ದು. ಪೂರಕದಲ್ಲಿ '೮' ಪ್ರಣವ, ಕುಂಭಕದಲ್ಲಿ '೩೨' ಪ್ರಣವ ಮತ್ತು ರೇಚಕದಲ್ಲಿ '೧೬' ಪ್ರಣವ ಜಪಿಸತಕ್ಕದ್ದು. ದಿನಾಲು ಈ ಪ್ರಕಾರ ಮಾಡುವದರಿಂದ ಒಂದು ವಾರದಲ್ಲಿ '೨-೪' ಪ್ರಣವ ಬೆಳೆಯಿಸತಕ್ಕದ್ದು. ಯೋಗಾಭ್ಯಾಸಿಯು 'ಇಡಾ'ದಿಂದ ವಾಯುವನ್ನು ಗ್ರಹಣ ಮಾಡತಕ್ಕದ್ದು ಮತ್ತು ಪಿಂಗಲಾದಿಂದ ಬಿಡತಕ್ಕದ್ದು. ಪುನಃ ಪಿಂಗಲಾದಿಂದ ವಾಯುವನ್ನು ಪಾನಮಾಡಿ ಉಕ್ತ ಪ್ರಕಾರದಿಂದ ಕುಂಭಕದ ತರುವಾಯ 'ಇಡಾ'ದಿಂದ ರೇಚಕ ಮಾಡತಕ್ಕದ್ದು. ಈ ಬಗೆಯಾಗಿ ಪ್ರಾಣಾಯಾಮದ ಅಭ್ಯಾಸ ಮಾಡುವದರಿಂದ ಆರು ತಿಂಗಳಲ್ಲಿ ಯೋಗಿಯು ಪ್ರಾಣವನ್ನು ಗೆಲ್ಲುತ್ತಾನೆ.

ಯಾವ ಪ್ರಾಣಾಯಾಮದಿಂದ ಬೆವರು ಹೊರಡುವದೋ ಅದು ನಿಕೃಷ್ಟ. ಯಾವದರಿಂದ ಕಂಪನ ಉಂಟಾಗುತ್ತದೆಯೋ ಅದು ಮಧ್ಯಮ. ಮತ್ತು ಯಾವುದರಿಂದ ಶರೀರವು ಭೂಮಿಯಿಂದ ಏಳುವದೋ ಅದು ಉತ್ತಮ ಪ್ರಾಣಾಯಾಮವು. ಯೋಗಿಗೆ ಎಲ್ಲಿಯ ವರೆಗೆ ಉತ್ತಮ ಪ್ರಾಣಾಯಾಮದಲ್ಲಿ ನಿಷ್ಠೆಯುಂಟಾಗುವದಿಲ್ಲವೋ ಅಲ್ಲಿಯ ವರೆಗೆ ಮೊದಲನೆಯ, ಎರಡನೆಯ ಪ್ರಾಣಯಾಮ ಮಾಡಿ, ಅಭ್ಯಾಸವನ್ನು ಬೆಳಿಸುತ್ತಾ ಹೋಗಬೇಕು. ಪ್ರಾಣಾಯಾಮದಿಂದ ಹೃದಯವು ಶುದ್ಧವಾಗುತ್ತದೆ. ಮತ್ತು ಒಳಗೆ ಆತ್ಮಜ್ಯೋತಿಯ ಪ್ರಕಾಶವಾಗುತ್ತದೆ. ಪ್ರಾಣದೊಡನೆ ಮನ ಮತ್ತು ಮನವು ಆತ್ಮದೊಡನೆ ಕೂಡಿ ಹೋಗುತ್ತದೆ. ಕೇವಲ ಕುಂಭಕ ಮಾಡುವದರಿಂದಲೂ ಜರಾವಸ್ಥಾದಿಗಳು ಎಂದೋ ದೂರವಾಗಿ ಹೋಗುತ್ತವೆ. ಹಾಗು ಜ್ಞಾನದ ಪ್ರಕಾಶವೂ ಆಗುತ್ತದೆ. ಪ್ರಾತಃಕಾಲ ಮತ್ತು ಮಧ್ಯಾಹ್ನದಲ್ಲಿ ಹಾಗೆ ಸಾಯಂಕಾಲ ಮತ್ತು ಅರ್ಧರಾತ್ರಿಯಲ್ಲಿ ಯೋಗಿಯು ಪ್ರಾಣವಾಯುವನ್ನು ತಡೆದು, ನಾಕ-ನಾಭಿ ಹಾಗು ಪಾದಾಂಗುಷ್ಠದಲ್ಲಿ ಮಾಡಿದರೆ ನೂರುವರ್ಷಗಳ ವರೆಗೆ ನಿರೋಗಿಯಾಗಿ ಬದುಕುತ್ತಾನೆ. ಪಾದಾಂಗುಷ್ಠದಲ್ಲಿ ಪ್ರಾಣವಾಯುವನ್ನು ಧಾರಣ ಮಾಡುವದರಿಂದ ಶರೀರವು ಹಗುರಾಗಿ ಹವೆಯಲ್ಲಿ ಹಾರಾಡಹತ್ತುತ್ತದೆ. ವಾಯುವನ್ನು ಪೂರಕ ಮಾಡಿ ಜಿಹ್ವೆಯನ್ನು ಸಂಪುಟಿತ ಮಾಡುತ್ತಾ ಕುಂಭಕ ಮಾಡುವದರಿಂದ ಶರೀರದ ಜಡತ್ವ ಹಾಗು ದಣಿವು ಮೊದಲಾದ ಜಲನ ಶಾಂತವಾಗಿ ಹೋಗುತ್ತವೆ ಮತ್ತು ಶರೀರವೂ ನಿರೋಗವಾಗುತ್ತದೆ.

ವಾಯುವನ್ನು ನಾಲಗೆಯಿಂದ ಹೀರಿ, ನಾಲಗೆಯನ್ನು ಉಲಟಾ ಎರಡು ಸಾರೆ ಮಾಡಿ ಅದನ್ನು ಮೂಲದ.ವರೆಗೆ ತೆಗೆದುಕೊಂಡು ಮಸ್ತಕದಿಂದ ಒಸರುವ ಅಮೃತದ ಪಾನ ಮಾಡುವದರಿಂದ ಯೋಗಿಯು ಸರ್ವ ಪ್ರಕಾರ ಆನಂದವನ್ನು ಪಡೆಯುತ್ತಾನೆ. ವಾಯುವನ್ನು ಭ್ರೂಮಧ್ಯದಲ್ಲಿ ಧಾರಣ ಮಾಡುವದರಿಂದ ರೋಗಮುಕ್ತನಾಗುತ್ತಾನೆ. ದಿನಾಲು ವಾಯುವನ್ನು ನಾಲಗೆಯಿಂದ ಪಾನಮಾಡಿ ನಾಭಿಯಲ್ಲಿ ಧಾರಣ ಮಾಡಿದರೆ, ವಾತ, ಪಿತ್ತ, ಕಫ ಜನಿತ ರೋಗಗಳು ಶಾಂತವಾಗುತ್ತವೆ.

ಮೂಗಿನ ಎರಡೂ ಹೊರಳೆಗಳಿಂದ ವಾಯುವನ್ನು ಹೀರಿ ಭ್ರೂಮಧ್ಯದಲ್ಲಿ ಧಾರಣ ಮಾಡುವದರಿಂದ ಚಕ್ಷುರೋಗ ಹಾಗು ಕರ್ಣದಲ್ಲಿ ಧಾರಣ ಮಾಡುವದರಿಂದ ಕರ್ಣರೋಗ ಮತ್ತು ಶಿರದಲ್ಲಿಯ ಧಾರಣದಿಂದ ಶಿರೋರೋಗವು ತೊಲಗುತ್ತವೆ.

**ನಾದಾಭ್ಯಾಸ:**

ಪ್ರಾಣವಾಯುವನ್ನು ಮತ್ತು ಅಪಾನವಾಯುವನ್ನು ಒಳಗಡೆಗೆ ಮೇಲೆ ಜಗ್ಗುವದು, ಅದರಂತೆ ಸಂಪೂರ್ಣ ಜ್ಞಾನೇಂದ್ರಿಯಗಳನ್ನು ಅವುಗಳ ಪ್ರವೃತ್ತಿ ಸಹವಾಗಿ ಒಳಗೆ ಜಗ್ಗುವದು, ಏವಂ ಬಂದ ಮಾಡತಕ್ಕದ್ದು, ಎರಡೂ ಕರ್ಣಛಿದ್ರಗಳನ್ನು ಎರಡೂ ಕೈಗಳ ಹೆಬ್ಬೆರಳಿನಿಂದ ಬಂದು ಮಾಡಿ, ಹಾಗು ತರ್ಜನಿಗಳಿಂದ ಕಣ್ಣುಗಳನ್ನು ಹಾಗು ಎರಡೂ ಮಧ್ಯಮೆಗಳಿಂದ ಮೂಗಿನ ಎರಡೂ ಹೊರಳೆಗಳನ್ನು ಬಂದು ಮಾಡತಕ್ಕದ್ದು ಮತ್ತು ಅನಾಮಿಕಾ ಹಾಗು ಕನಿಷ್ಠೆಗಳಿಂದ ಮುಖವನ್ನು ಮುಚ್ಚತಕ್ಕದ್ದು, ಶ್ವಾಸವನ್ನು ತಡೆದು ಬ್ರಹ್ಮರಂಧ್ರದಲ್ಲಿ ವಾಯುವನ್ನು ಧಾರಣ ಮಾಡತಕ್ಕದ್ದು - ಹೀಗೆ ಮಾಡುವದರಿಂದ ಬ್ರಹ್ಮರಂಧ್ರದಲ್ಲಿ ವಾಯುವು ಪ್ರವೇಶ ಮಾಡುತ್ತದೆ.

ವಾಯುವು ಬ್ರಹ್ಮರಂಧ್ರದಲ್ಲಿ ಪ್ರವೇಶ ಮಾಡುತ್ತಲೇ ನಾದಾ (ಶಬ್ದ)ನುಭವ ಆಗುತ್ತದೆ. ನಾದದ ಶಬ್ದವು ಮೊದಲು ಶಂಖದಂತೆ, ಮಧ್ಯದಲ್ಲಿ ಮೇಘ ಶಬ್ದದಂತೆ, ಕೊನೆಗೆ ನೀರಿನ ಪ್ರವಾಹದ ಶಬ್ದದಂತೆ ಕೇಳುತ್ತದೆ. ವಾಯುವು ಮಸ್ತಿಷ್ಕದಲ್ಲಿ ಸೇರಿದಾಗ ಜ್ಯೋತಿಯ ದರ್ಶನವಾಗುತ್ತದೆ. ಇದೇ ಆತ್ಮಸಾಕ್ಷಾತ್ಕಾರವು. ಆತ್ಮವನ್ನು ತಿಳಿಯುವದೇ ಜ್ಞಾನಲಾಭವು.

ಆತ್ಮಜ್ಞಾನದಿಂದಲೇ ಸಂಸಾರದಿಂದ ಮುಕ್ತಿಯಾಗುತ್ತದೆ. ಮುಕ್ತಾಸನದಲ್ಲಿ ಕುಳಿತು ಯೋಗಿಯು ಮೊಣಕಾಲ ಕೆಳಗೆ ಶಿವನ ಧ್ಯಾನವನ್ನು ಮಾಡತಕ್ಕದ್ದು. ಆಧಾರಚಕ್ರದಲ್ಲಿ ಗಣೇಶನ ಹಾಗು ಮಣಿಪೂರದಲ್ಲಿ ಸರಸ್ವತಿಯ ಧ್ಯಾನವನ್ನು ಮಾಡತಕ್ಕದ್ದು. ಪ್ರಣವದ ಜಪವನ್ನು ಮಾಡುತ್ತ ಲಿಂಗಮೂಲದಿಂದ ವಾಯುವನ್ನು ಜಗ್ಗಿ ಮೂಲಾಧಾರ ಚಕ್ರದಲ್ಲಿ ತಡೆಯತಕ್ಕದ್ದು, ಹೀಗೆ ಮಾಡುವದರಿಂದ ಪ್ರಾಣವಾಯುವು ಕುಂಡಲಿನಿಯಲ್ಲಿ ಪ್ರವೇಶಮಾಡಿ ಒಳಗಿನ ಅಗ್ನಿಯೊಡನೆ ಆ ವಾಯುವು ಸುಷುಮ್ನೆಯಲ್ಲಿ ಪ್ರವೇಶ ಮಾಡುವದು. ಈ ಉಪಾಯವು ವಾಯುವನ್ನು ವಶಮಾಡುವದಿರುತ್ತದೆ. ಈ ವಿಧಿಯಿಂದ ಬೆವರು ಸುರಿಯುವದು. ಹಾಗು ಕಂಪ ಏವಂ ಆಸನೋತ್ಥಾನವಾಗುತ್ತದೆ. ಈ ಪ್ರಕ್ರಿಯೆಯಿಂದ ಗುದಾರೋಗಶಾಂತ ಹಾಗು ಪಾಪವೂ ನಷ್ಟವಾಗಿ ಹೋಗುತ್ತದೆ. ಮತ್ತು ಹೃದಯ ಶುದ್ಧವಾಗಿ ಹೋಗುತ್ತದೆ. ಇಂದ್ರಿಯ ಸಂಬಂಧಿ ಸುಖವೂ ತುಚ್ಛವಾಗಿ ಹೋಗುತ್ತದೆ. ವೈರಾಗ್ಯ ಪ್ರಾಪ್ತಿಯೂ ಇಂತಹ ಸ್ಥಿತಿಯಲ್ಲಿ ಆಗುತ್ತದೆ. ಇದರಿಂದ ಜ್ಞಾನ ಪ್ರಾಪ್ತಿಯಾಗುತ್ತದೆ.

ಯಾವ ಯೋಗಾಭ್ಯಾಸಿಯು ಜ್ಞಾನದ ಸ್ವರೂಪ-ಸದಾಶಿವತತ್ವವನ್ನು ಪ್ರಾಪ್ತ ಮಾಡಿಕೊಂಡಿದ್ದಾನೆ, ಅವನು ಸಂಸಾರದ ಸರ್ವಕರ್ಮಗಳನ್ನು ಬಿಟ್ಟು ಪರಮಾತ್ಮನ ಕಡೆಗೆ ಓಡುತ್ತಾನೆ, ಇವನಿಂದ ರಾಗದ್ವೇಷಗಳು ಬಿಟ್ಟುಹೋಗುತ್ತವೆ. ರಾಗದ್ವೇಷಗಳ ಅಭಾವದಲ್ಲಿಯೇ ಸಂಸಾರದಲ್ಲಿ ಅನಾಸಕ್ತಿಯಾಗುತ್ತದೆ. ಇದರಿಂದ ಪಾಪ-ಪುಣ್ಯಗಳ ಫಲದ ಭೋಗವಾಸನೆಯು ಇರುವದಿಲ್ಲ. ಆಗಲೇ ಜನನ-ಮರಣ ಚಕ್ರವು ಬಿಡುತ್ತದೆ. ಸಗರ್ಭ ಮತ್ತು ಆಗರ್ಭ ಭೇದದಿಂದ ಕುಂಭಕವು ಎರಡು ಪ್ರಕಾರವಿರುತ್ತದೆ. ಎಲ್ಲಿಯ ವರೆಗೆ ಸಗರ್ಭದಲ್ಲಿ ನಿಷ್ಠೆ ಇರುವದಿಲ್ಲ ಅಲ್ಲಿಯ ವರೆಗೆ ಅಗರ್ಭದ ಕಡೆಗೆ ಓಡುವದಿಲ್ಲ. ಸಗರ್ಭದಲ್ಲಿ ನಿಷ್ಠೆಯುಂಟಾದ ಅನಂತರ ಅಗರ್ಭದಲ್ಲಿ ನಿಷ್ಠೆಯನ್ನುಂಟು ಮಾಡತಕ್ಕದ್ದು. ರೇಚಕ ಪೂರಕಗಳನ್ನು ಬಿಟ್ಟು ಸುಗಮತೆಯಿಂದ ವಾಯುವನ್ನು ಧಾರಣ ಮಾಡುವದಕ್ಕೆ, ಕೇವಲ ಕುಂಭಕ ಅಥವಾ ಧ್ಯಾನಸಹಿತ ಮಂತ್ರ ಜಪಕ್ಕೆ ಸಗರ್ಭ ಕುಂಭಕ ಅನ್ನುತ್ತಾರೆ. ಪ್ರಾಣಾಯಾಮದಿಂದ ಯಾವಾಗ ನಾಡಿಗಳು ಶುದ್ಧವಾಗಿ ಹೋಗುವವೋ ಆಗ ಅನಾಯಾಸವಾಗಿಯೇ ಕೇವಲ ಕುಂಭಕ ಆಗುವುದು. ಒಳಗೆ ಸುಖಾನುಭವ ಮತ್ತು ಶರೀರದ ಸುಸ್ಥಿರತೆ ಆಗುವುದು. ಏವಂ ನಾದದ ಅಭಿವ್ಯಕ್ತವಾಗುವುದು, ಕೇವಲ ಕುಂಬಕದ್ದೇ ಲಕ್ಷಣ.

ಮುದ್ರಾ : ಯಾವ ಉಪಾಯದಿಂದ ಪ್ರಾಣವು ಹೊರಗೆ ಹೋಗುವ ಛಿದ್ರಗಳನ್ನು ಬಂದು ಮಾಡುವದಿರುವದೋ ಅದಕ್ಕೆ ಪ್ರಾಣಾಯಾಮ 'ಮುದ್ರಾ' ಅನ್ನುತ್ತಾರೆ. ಯೋಗಶಾಸ್ತ್ರದಲ್ಲಿ ಅನೇಕ ಬಗೆಯ

ಮುದ್ರೆಗಳ ಉಲ್ಲೇಖವಿರುತ್ತದೆ. ಅವುಗಳಲ್ಲಿ ಮೂಲಬಂಧ, ಉಡ್ಡಿಯಾನ ಮತ್ತು ಜಾಲಂಧರ ಮುದ್ರಾಗಳ ಆವಶ್ಯಕತೆಯು ವಿಶೇಷವಾಗಿರುತ್ತದೆ.

**೧. ಮೂಲಬಂಧ:** ಯಾವ ಪ್ರಕಾರದಿಂದ ಗುದದ್ವಾರವನ್ನು ತಡೆದು ಸುಸ್ಥಿರತೆಯಿಂದ ಕೂಡ್ರಲ್ಪಡುತ್ತದೆಯೋ ಅದೇ ಮೂಲಬಂಧ ಮುದ್ರೆಯು. ಅರ್ಶರೋಗವನ್ನು ದೂರ ಮಾಡುವದಕ್ಕೆ ಇದು ಉತ್ತಮ ಸಾಧನವು. ಕುಂಭಕದ ತರುವಾಯ ಮತ್ತು ರೇಚಕದ ಮೊದಲು ಈ ಮೂಲಬಂಧ ಮುದ್ರೆಯನ್ನು ಮಾಡತಕ್ಕದ್ದು. ಇದರಲ್ಲಿ ಗುದಾ ಸಂಕುಚಿತ ಮಾಡತಕ್ಕದ್ದು.*

**೨. ಉಡ್ಡಿಯಾನ ಬಂಧ:** ಕೆಳಹೊಟ್ಟೆಯ ಎಲ್ಲ ನಾಡಿಗಳನ್ನು ಜಗ್ಗಿ ನಾಭಿ ಸಹಿತ ಹಿಂಭಾಗದಲ್ಲಿ ಒಯ್ದು ಮೇರುದಂಡದೊಡನೆ ಕೂಡಿಸತಕ್ಕದ್ದು. ಮೇರುದಂಡದೊಡನೆ ಸಂಯೋಗ ಮಾಡುವದರಿಂದ ನಾಭಿಯ ಕೆಳಗೆ ಸುಷುಮ್ನಾ ನಾಡಿಯಲ್ಲಿ ಪ್ರಾಣವಾಯುವಿನ ಪ್ರವೇಶವು ಆಕಾಲದಲ್ಲಿ ಆಗುತ್ತದೆ ಮತ್ತು ಉಳಿದ ಹೃದಯ ಹಾಗು ಲಿಂಗದ ಛಿದ್ರಗಳು ಬಂದ ಆಗಿಹೋಗುತ್ತವೆ. ಅತಏವ ಈ ಪ್ರಕ್ರಿಯೆಯು ಉಡ್ಡಿಯಾನ (ಉಡ್ಯಾಣ) ಹೆಸರಿನಿಂದ ಪ್ರಸಿದ್ಧವಿದೆ.

**೩. ಜಾಲಂಧರ ಮುದ್ರಾ:** ಘಾಂಟಿ ಮತ್ತು ಕುತ್ತಿಗೆಯನ್ನು ಸಂಕುಚಿತ ಮಾಡಿ ಒಳಗಡೆಗೆ ಜಗ್ಗಿ ಗದ್ದವನ್ನು ಹೃದಯಕ್ಕೆ ಜೋರಿನಿಂದ ಹಚ್ಚತಕ್ಕದ್ದು, ಮಧ್ಯದಲ್ಲಿ ಪಶ್ಚಿಮೋತ್ತಾನ ಮಾಡುವದು. ಇದರಿಂದ ಕಂಠದ ಛಿದ್ರವು ಬಂದ ಆಗಿ ಹೋಗುತ್ತದೆ. ಇದಕ್ಕೋಸುಗ ಇದು ಜಾಲಂಧರ ಮುದ್ರಾ ಅನ್ನಲ್ಪಡುತ್ತದೆ. ಪೂರಕದ ಕೊನೆಯಲ್ಲಿ ಮತ್ತು ಕುಂಭಕದ ಮೊದಲು ಈ ಮುದ್ರೆಯನ್ನು ಮಾಡತಕ್ಕದ್ದು.**

**೪. ಮಹಾಮುದ್ರಾ:** ಕುಳಿತು ಬಲಗಾಲನ್ನು ನೆಲದ ಮೇಲೆ ಸರಳವಾಗಿ ಚಾಚಿ ಎರಡೂ ಕೈಗಳ ಬೆರಳುಗಳಿಂದ ಆ ಪ್ರಸಾರಿತ ಕಾಲಿನ ಅಂಗುಷ್ಠವನ್ನು ಹಿಡಿದು ಮೂಗನ್ನು ಅದೇ ಕಾಲಿನ ಮೊಣಕಾಲ ಮೇಲೆ ಹಚ್ಚತಕ್ಕದ್ದು. ಪುನಃ ಇದೇ ಪ್ರಕಾರ ಎಡಗಾಲನ್ನು ನೆಲದ ಮೇಲೆ ಉದ್ದ ಸರಳವಾಗಿ ಪ್ರಸಾರಮಾಡಿ ಮೂಗನ್ನು ಮೊಣಕಾಲ ಮೇಲೆ ಹಚ್ಚತಕ್ಕದ್ದು. ಬೆರಳುಗಳಿಂದ ಎಡಗಾಲಿನ ಬೆರಳುಗಳನ್ನು ಅಥವಾ ಕಾಲಿನ ಹೆಬ್ಬೆರಳನ್ನು ಹಿಡಿದು ಮೂಗನ್ನು ಮೊಣಕಾಲ ಮೇಲೆ ಹಚ್ಚತಕ್ಕದ್ದು. ಇದು 'ಮಹಾಮುದ್ರಾ' ನಾಮದಿಂದ ವಿಖ್ಯಾತವಿರುತ್ತದೆ. ಇದರ ಪ್ರಯೋಗದಿಂದ ಕುಷ್ಠಾದಿ ಅಸಾಧ್ಯ ರೋಗಗಳೂ ಶಾಂತವಾಗಿ ಹೋಗುತ್ತವೆ.'

---

* ಯಾವುದಾನೊಂದು ಬಿಂದುವು ಆಕುಂಚನದಿಂ ವಾಯುವಂ ತಡೆವುದರಿಂದ ಅಪಾನವಾಯುವೆಂಬ ಸೂರ್ಯನು ಹೃದಯಸ್ಥಾನದ ಪ್ರಾಣವಾಯುವೆಂಬ ಚಂದ್ರನೊಡನೆ ಕೂಡಿ 'ಊರ್ಧ್ವ'ವಾದ ಸುಷುಮ್ನಾ ಸ್ಥಾನವನ್ನೈದಿಸಲ್ಪಟ್ಟುದನಾಗಿ ಮಾಡಿ ಯೋಗಸಿದ್ಧಿಯನೀಯುತ್ತಿದ್ದೀತು, ಆ ಬಂಧವೇ 'ಮೂಲಬಂಧ'ಮಕ್ಕುಂ.

ಮತ್ತಾವುದಾನೊಂದು ಬಂಧವು ನಾಭಿಯಧೋಭಾಗವನೂರ್ಧ್ವಭಾವನು ಬಲಾತ್ಕಾರದಿಂ ಬಂಧನಂಗೈಯುತ್ತಿದ್ದೀತು ಆ ಬಂಧವೇ 'ಉದ್ಯಾಣ ಬಂಧಮಕ್ಕುಂ।

- ನಿಜಗುಣಯೋಗಿ-ಪರಮಾರ್ಥ ಪ್ರಕಾಶಿಕೆ

** ಮತ್ತಾವುದಾನೊಂದು ಬಂಧವು ಕಂಠವನು ಸಂಕೋಚಿಸಿ ಹೃದಯ ಸ್ಥಾನದಲ್ಲಿ ಚುಬುಕವಂ ದೃಢಮಾಗಿ ಸ್ಥಾಪಿಸಿರುವದೇ 'ಜಾಲಂಧರಬಂಧ'ಮಕ್ಕುಂ. ಇದೇ ಊರ್ಧ್ವಭಾಗದ ಚಂದ್ರಾಮೃತ ಸ್ರವಿಸುವದಕ್ಕೆ ಕಾರಣಮೆನಿಸುತಿರ್ಕುಂ।

- ನಿಜಗುಣಯೋಗಿ ಪರಮಾರ್ಥಪ್ರಕಾಶಿಕೆ

೫. ಶಾಂಭವೀಮುದ್ರಾ : ಒಳಗಿನ ಜ್ಯೋತಿಯ ಮೇಲೆ ಧ್ಯಾನವನ್ನು ಮಾಡುತ್ತ ಹೊರಗಿನ ಪದಾರ್ಥಗಳನ್ನು ಮರೆಯುವದು ಶಾಂಭವೀ ಮುದ್ರೆಯು. ಇದರಲ್ಲಿ ಕಣ್ಣುಗಳು ತೆರೆದಿರುವವು. ಹಾಗು ದೃಷ್ಟಿ ಮೇಲೆ ಉನ್ಮೇಷ ಮತ್ತು ನಿಮೇಷ ಆಗುವದಿಲ್ಲ. ಇದೇ ಶಾಂಭವಿ ಮುದ್ರೆಯ ಅಭ್ಯಾಸವು. ಇದಕ್ಕೆ 'ಸಿದ್ಧಮುದ್ರಾ' ಅನ್ನುತ್ತಾರೆ.

## ಪ್ರತ್ಯಾಹಾರ

ಇಂದ್ರಿಯಾಣಾಂ ವಿಚರತಾಂ ವಿಷಯೇಷು ಸ್ವಭಾವತಃ।
ಬಲಾದಾಹರಣಂ ತೇಷಾಂ ಪ್ರತ್ಯಾಹಾರೋ ನಿಗದ್ಯತೇ ॥೧॥

"ಸ್ವಾಭಾವಿಕ ಇಂದ್ರಿಯ ವೃತ್ತಿಗಳು ಬಹಿರ್ಮುಖವಾಗಿ ವಿಷಯಗಳ ಕಡೆಗೆ ಓಡುತ್ತವೆ. ಆ ಇಂದ್ರಿಯಗಳ ವಿಷಯಾಭಿಮುಖ ವೃತ್ತಿಗಳನ್ನು ಬಲಾತ್ಕಾರದಿಂದ ಯಾವದಾದರೂ ವಿಶೇಷದ ಕಡೆಗೆ ಅವುಗಳನ್ನು ಹಚ್ಚುವದೇ ಪ್ರತ್ಯಾಹಾರವು."

ಯಾವುದನ್ನಾದರೂ ನೋಡುವದು, ಕೇಳುವದು, ಸ್ಪರ್ಶಮಾಡುವದು, ಮೂಸಿಸುವದು ಮತ್ತು ಆಸ್ವಾದನ ಮಾಡುವದು ಉಂಟಾದರೆ ಎಲ್ಲವೂ ಬ್ರಹ್ಮವೆಂದು ಚಿಂತನೆ ಮಾಡತಕ್ಕದ್ದು, ಯಾವುದಾದರೂ ಒಳ್ಳೇ, ಕೆಟ್ಟ ಕರ್ಮಗಳು ಸ್ವಾಭಾವಿಕವಾಗಿ ಬಂದರೆ ಅವುಗಳನ್ನು ಈಶ್ವರಾರ್ಪಣ ಮಾಡುವದೂ ಪ್ರತ್ಯಾಹಾರವು. ದೈನಿಕ ಉಪಾಸನೆಯು ಸಹ ಕರ್ತವ್ಯವೆಂದು ತಿಳಿದು ಮಾಡಿದರೂ ಪ್ರತ್ಯಾಹಾರವೇ.

ಅಭ್ಯಾಸಿಯು ಪ್ರಾಣವಾಯುವನ್ನು ಜಗ್ಗಿ ಹಲ್ಲಿನ ಕೆಳಗೆ, ಕುತ್ತಿಗೆಯಲ್ಲಿ, ಹೃದಯ, ನಾಭಿ ಕುಂಡಲಿನಿ, ಮೂಲಾಧಾರ, ಟೊಂಕ, ತೊಡೆ, ಗುಲ್ಪ ಅಂಗುಷ್ಠದಲ್ಲಿ ಕ್ರಮಶಃ ಹಚ್ಚತಕ್ಕದ್ದು. ಇದರಿಂದಲೂ ಪಾಪವು ನಷ್ಟವಾಗುತ್ತದೆ. ಕೆಲ ಕೆಲವರು ವಿರುದ್ಧ ರೀತಿಯಿಂದ ಪ್ರತ್ಯಾಹಾರವನ್ನು ಮಾಡುತ್ತಾರೆ. ಸ್ವಸ್ತಿಕಾಸನದಲ್ಲಿ ಕುಳಿತು ಮೂಗಿನ ಎರಡೂ ಛಿದ್ರಗಳಿಂದ ವಾಯುವನ್ನು ಜಗ್ಗಿಕೊಳ್ಳುವದು, ಅನಂತರ ಆ ಪ್ರಾಣವಾಯುವನ್ನು ಕಾಲಲ್ಲಿ, ಮೂಲಾಧಾರ, ನಾಭೀಗರ್ಭ ಹಾಗು ಹೃದಯ, ಕುತ್ತಿಗೆಗಳ ಕೆಳಗೆ, ಏವಂ ಭ್ರೂಮಧ್ಯದಲ್ಲಿ ಮತ್ತು ಬ್ರಹ್ಮರಂಧ್ರದಲ್ಲಿ ಕ್ರಮಶಃ ಧಾರಣ ಮಾಡತಕ್ಕದ್ದು. ಕಡೆಗೆ ಆ ಪ್ರಾಣವಾಯುವನ್ನು ಚಿಂತಾಶೂನ್ಯ ಶುದ್ಧ-ಪರಮಾತ್ಮನಲ್ಲಿ ಧಾರಣ ಮಾಡತಕ್ಕದ್ದು. ಈ ಪ್ರತ್ಯಾಹಾರದಿಂದ ಸಂಪೂರ್ಣ ಇಂದ್ರಿಯಗಳು ವಶೀಭೂತವಾಗುತ್ತವೆ. ಅತಏವ ಪ್ರತ್ಯಾಹಾರದಿಂದ ಯಾವಾಗ ಮನವು ಸಮಾಧಿಯಲ್ಲಿ ನಿಮಗ್ನವಾಗುತ್ತದೆಯೋ ಆಗ ಅತ್ತ-ಇತ್ತ ತಿರುಗಾಡಲು ಶಕ್ಯವಾಗುವದಿಲ್ಲ.

## ಧಾರಣಾ

'ಬ್ರಹ್ಮಾದಿ ಕಾರ್ಯರೂಪಾಣಿ ಸ್ವೇ-ಸ್ವೇ ಸಂಹೃತ್ಯ ಕಾರಣೇ।
ಸಾಕ್ಷಿಣಂ ಬುದ್ಧಿನೃತ್ಯಸ್ಯ ಧಾರಯೇತ್ ಬುದ್ಧಿಮಾನ್ ನರಃ ॥೧॥

"ಬ್ರಹ್ಮನಿಂದ ಹಿಡಿದು ಸಂಪೂರ್ಣ ಕಾರ್ಯರೂಪವು ತನ್ನ-ತನ್ನ ಕಾರಣದಲ್ಲಿ ನೃತ್ಯಕಾರಿ ಬುದ್ಧಿಯೊಡನೆ ಸಾಕ್ಷಿರೂಪ ಕಾರಣ ಆತ್ಮನಲ್ಲಿ ಲೀನವಾಗುತ್ತವೆ. ಅತಏವ ಬುದ್ಧಿಮಾನ್ ಯೋಗಿಯು ಬುದ್ಧಿಸಹಿತ ಮನೋವೃತ್ತಿಯನ್ನು ಬುದ್ಧಿಗ್ರಾಹಕ ಆತ್ಮನಲ್ಲಿ ಹಚ್ಚತಕ್ಕದ್ದು.

೧. ಕಾಲಿನ ಅಂಗುಷ್ಠದಿಂದ ತೊಡೆಯ ವರೆಗೆ ಪೃಥ್ವಿಯ ಸ್ಥಾನವು. ಇದರ ಆಕಾರವು ಚತುಷ್ಕೋಣವು. ಹಳದಿಯ ಬಣ್ಣ 'ಲ' ಚಿಹ್ನವು. ಪೃಥ್ವಿಯ ಸ್ಥಾನ ಗುದದ್ವಾರದಲ್ಲಿ ಚತುರ್ಮುಖಬ್ರಹ್ಮ ಕಾಲಾ ಬೀಜ ಸಹಿತ ಎರಡು ಗಂಟೆ ಕಾಲ ಧ್ಯಾನವನ್ನು ಮಾಡಿದರೆ ಪೃಥ್ವೀ ತತ್ವದಿಂದ ಆ ಯೋಗಿಯ ಮೃತ್ಯು ಆಗಲು ಶಕ್ಯವಿಲ್ಲ.

೨. ತೊಡೆಯಿಂದ ನಾಭಿಯ ವರೆಗೆ ಜಲದ ಸ್ಥಾನವು. ಅರ್ಧ-ಚಂದ್ರಾಕಾರ ಕುಂದಪುಷ್ಪದಂತೆ ಬಿಳುಪು ಮತ್ತು ಬೀಜದ ಚಿಹ್ನವುಳ್ಳ ವಾಯುವನ್ನು ಇದರಲ್ಲಿ ಬಂದ ಮಾಡಿ, ಚತುರ್ಭುಜ ಕಿರೀಟ-ಕುಂಡಲಧಾರಿ ವಿಷ್ಣುವಿಗೆ 'ವಂ' ಬೀಜಸಹಿತ ಎರಡು ಗಂಟೆಗಳ ವರೆಗೆ ಧ್ಯಾನವನ್ನು ಮಾಡಿದರೆ, ಯೋಗಿಗೆ ಜಲತತ್ವದಿಂದ ಮೃತ್ಯುವು ಒದಗುವದಿಲ್ಲ. ಇದರೊಡನೆಯೇ ಜನ್ಮ-ಮೃತ್ಯುಕಾರಿ ಪಾಪವೂ ನಷ್ಟವಾಗುವದು.
೩. ನಾಭಿಯಿಂದ ಹೃದಯದ ವರೆಗೆ ಅಗ್ನಿಯ ಸ್ಥಾನವು. ಅಗ್ನಿಯ ರೂಪವು ತ್ರಿಕೋಣಾಕಾರವು. ರಕ್ತವರ್ಣ ರೇಫ್ ಚಿಹ್ನವುಳ್ಳದ್ದು. ಈ ಸ್ಥಾನದಲ್ಲಿ ವಾಯುವನ್ನು ಧಾರಣಮಾಡಿ ಯೋಗಿಯು '೫' ಗಳಿಗೆ ಉದಿತವಾಗುತ್ತಿರುವ ಸೂರ್ಯನಂತೆ ತೇಜೋರೂಪ ರುದ್ರನನ್ನು ರೇಫಸಹಿತ ಧ್ಯಾನ ಮಾಡಿದರೆ ಅಗ್ನಿತತ್ತ್ವದಿಂದ ಅವನ ಮೃತ್ಯುವು ಆಗಲು ಶಕ್ಯವಿಲ್ಲ.
೪. ಹೃದಯದಿಂದ ಭ್ರೂಮಧ್ಯದ ವರೆಗೆ ವಾಯುವಿನ ಸ್ಥಾನವು. ಷಟ್‌ಕೋಣ ಆಕಾರವುಳ್ಳ ಕೃಷ್ಣವರ್ಣ 'ಯಂ' ಬೀಜವುಳ್ಳ ವಾಯುವು ಇರುತ್ತದೆ. ಸಾಧಕನು ಆ ಸ್ಥಾನದಲ್ಲಿ ಸರ್ವಜ್ಞ, ಸರ್ವವ್ಯಾಪಿ ಭಗವಂತನನ್ನು 'ಯಂ' ಬೀಜದೊಡನೆ ಧ್ಯಾನಮಾಡಿದರೆ ವಾಯುವಿನಿಂದ ಅವನಿಗೆ ಮೃತ್ಯುವು ಆಗುವದಿಲ್ಲ. ಆದರೆ ಅವನು ವಾಯುವಿನಲ್ಲಿ ಸಹ ಹಾರಾಡಲು ಶಕ್ತನು.
೫. 'ಭ್ರೂ'ದಿಂದ ಬ್ರಹ್ಮರಂಧ್ರದ ವರೆಗೆ ಆಕಾಶದ ಸ್ಥಾನವಿರುತ್ತದೆ. ಇದರ ಆಕಾರವು ಗೋಲ, ಧೂಮ್ರವರ್ಣವು. 'ಹಂ'ಬೀಜ 'ಹ'ಕಾರ ಚಿಹ್ನವುಳ್ಳದ್ದು ಇರುತ್ತದೆ. ಬ್ರಹ್ಮರಂಧ್ರದಲ್ಲಿ ವಾಯುವನ್ನು ಬಂದ ಮಾಡಿ ಬಿಂದು ರೂಪ ಮಹಾದೇವನನ್ನು ಧ್ಯಾನಿಸತಕ್ಕದ್ದು. ಇದರಿಂದ ಆಕಾಶಗಮನದ ಶಕ್ತಿಯುಂಟಾಗುತ್ತದೆ. ಬೇಕಾದಲ್ಲಿ ಯೋಗಿಯು ಸುಖಪೂರ್ವಕ ಇರಲು ಸಮರ್ಥನು. ಪೃಥ್ವೀತತ್ತ್ವದ ಧಾರಣಾದಿಂದ ಸಕಲ ಚರಾಚರವಸ್ತುಗಳ ಸ್ತಂಭನ, ಜಲತತ್ತ್ವ ಧಾರಣದಿಂದ ಎಲ್ಲ ವಸ್ತುಗಳ ದ್ರವಣ (ದ್ರವೀಭೂತವಾಗುವದು), ಅಗ್ನಿ ತತ್ತ್ವಧಾರಣದಿಂದ ದಾಹಕತೆ, ವಾಯುತತ್ತ್ವಧಾರಣದಿಂದ ಸಂಚಾರ ಮಾಡುವದು ಮತ್ತು ಆಕಾಶತತ್ತ್ವದ ಧಾರಣದಿಂದ ಶೋಷಣ ಸಾಮರ್ಥ್ಯವುಂಟಾಗುತ್ತದೆ.

## ಧ್ಯಾನ

'ಋತಂ ಸತ್ಯಂ ಪರಂ ಬ್ರಹ್ಮ ಸರ್ವಸಂಸಾರ ಕಾರಣಮ್।
ಸೋಹಮಿತ್ಯಾದರೇಣೈವ ಧ್ಯಾಯೇದ್ಯೋಗೀ ಪರಮೇಶ್ವರಮ್ ॥೧॥

ಅಥವಾ ಸತ್ಯಮೀಶಾನಂ ಜ್ಞಾನಾನಂದ ಸ್ವರೂಪಕರ್ಮ।
ನಿರ್ಗುಣಂ ಶಬ್ದವೇದ್ಯಂಚ ಧ್ಯಾಯೇದ್ ಬ್ರಹ್ಮ ವಿನಿಷ್ಕ್ರಿಯಮ್ ॥೨॥

ಧ್ಯಾನಂ ನಿರ್ವಿಷಯಂ ಚಿತ್ತಂ ಕವಿಭಿಃ ಪರಿಕೀರ್ತಿತಮ್॥

ಧ್ಯಾನವು ಸಗುಣ, ನಿರ್ಗುಣವೆಂದು ಎರಡು ಬಗೆಯಾಗಿರುವದು. ಸಗುಣಧ್ಯಾನವು, ಧ್ಯಾತಾ, ಧ್ಯಾನ, ಧ್ಯೇಯಗಳೆಂಬ ತ್ರಿಪುಟಿಗಳಿಂದ ಕೂಡಿದೆ. ನಿರ್ಗುಣ ಧ್ಯಾನದಲ್ಲಿ ಧ್ಯೇಯವಸ್ತುವಿನೊಡನೆ ಎಲ್ಲದರ ಅಭೇದವಾಗುತ್ತದೆ.

ಅಭ್ಯಾಸ ಕರ್ತನಿಗೆ ಮೊದಲು ತನ್ನ ಅಭೀಷ್ಟಮೂರ್ತಿಯ ಧ್ಯಾನವನ್ನು ಮಾಡತಕ್ಕದ್ದು. ಮೂರ್ತಿಧ್ಯಾನದಿಂದ ಯಾವಾಗ ಮನವು ಸ್ಥಿರವಾಗಿ ಹೋಗುವದೋ ಆಗ ಮೂರ್ತಿಯ ಹೊರತು ಧ್ಯಾನಮಾಡುವ

ಪ್ರಯತ್ನವನ್ನು ಮಾಡುವದು ಯೋಗ್ಯವು. ಮೊದಲು ಶೂನ್ಯ ಆಕಾಶದಂತೆ ಅಮೂರ್ತದ ಯಾವ ಧ್ಯಾನವನ್ನು ಮಾಡಲು ಶಕ್ಯವಿಲ್ಲ. ಅವಿಚ್ಛಿನ್ನ ಮನೋವೃತ್ತಿಯ ಪ್ರವಾಹ ಚತುರ್ಭುಜಾದಿ ಮೂರ್ತಿಗಳ ಮೇಲೆ ಧ್ಯಾನವು ಹೇಳಲ್ಪಟ್ಟಿದೆ. ಧ್ಯಾನ ಸಮಯದಲ್ಲಿ ಧ್ಯೇಯ ಮೂರ್ತಿಯ ಹೊರತು ಎರಡನೆಯ ಪದಾರ್ಥದ ಮೇಲೆ ಚಿತ್ತಿನ ಪ್ರವಾಹವು ಆಗತಕ್ಕದ್ದಲ್ಲ.

ಎಲ್ಲರಿಗೂ ಒಂದೇ ಬಗೆಯ ಧ್ಯೇಯವಿರುವದಿಲ್ಲ. ಆದರೆ ಭಿನ್ನ-ಭಿನ್ನ ರುಚಿಯ ಅನುಸಾರವಾಗಿ ಧ್ಯಾನವಿರುತ್ತವೆ. ಯಾವನು ಮೊದಲಿನ ಜನ್ಮದಲ್ಲಿ ಯಾವ ಮೂರ್ತಿಯ ಧ್ಯಾನವನ್ನು ಮಾಡಿರುವನೋ ಅವನ ಧ್ಯಾನವು ಸಂಸ್ಕಾರವಶದಿಂದ ವರ್ತಮಾನ ಜನ್ಮದಲ್ಲಿಯೂ ಆಗುತ್ತದೆ. ಉಪದೇಶಕನಿಗೆ ಉಪದೇಶದ ಮೂರ್ತಿ ವಿಷಯಕ ಪ್ರೇಮವನ್ನು ಕೇಳಿಯೇ ಅದರ ಉಪಾಯ ಧ್ಯಾನ ಸಹಿತ ಉಪದೇಶ ಮಾಡುವದೇ ಪರಮ ಆವಶ್ಯಕವಿರುವದು. ಯಾಕಂದರೆ ಕೆಲವು ಪೂರ್ವಜನ್ಮದ ಪ್ರಯತ್ನ ಮತ್ತು ಕೆಲವು ವರ್ತಮಾನ ಜನ್ಮದ ಅಭ್ಯಾಸದಿಂದ ಧ್ಯಾತಾನ ಧ್ಯೇಯದೊಡನೆ ತಾದಾತ್ಮ್ಯವುಂಟಾಗಿ ಹೋಗುವದು. ಜಪಮಾಡುತ್ತ ಧ್ಯೇಯ ಮೂರ್ತಿಯನ್ನು ಪಾದದಿಂದ ಶಿರದ ವರೆಗೆ ಧ್ಯಾನ ಮಾಡತಕ್ಕದ್ದು.

ಮೊದಲು ಧ್ಯೇಯ ದೇವತೆಯನ್ನು ಪಾದದ ನಖಗಳಿಂದ ಹಿಡಿದು ಪಾದ, ತೊಡೆ, ವಸ್ತ್ರ, ಟೊಂಕ, ಹೃದಯ, ಹಸ್ತ, ಹಸ್ತಾಭರಣ ಹಾಗೂ ಕಂಠಾಭರಣ, ಮುಖ, ನೇತ್ರ, ಕರ್ಣ, ಶಿರ, ಶಿರೋಭೂಷಣ, ಕಿರೀಟ ಮುಕುಟಾದಿಗಳನ್ನು ಕ್ರಮಶಃ ಪ್ರತಿಯೊಂದರ ಧ್ಯಾನವನ್ನು ಬೇರೆಬೇರೆಯಾಗಿ ಮಾಡತಕ್ಕದ್ದು. ಈ ಪ್ರಕಾರ ಧ್ಯಾನ ಮಾಡಿ ಅಭ್ಯಾಸಿಯು ಧ್ಯೇಯದ ಮುಖದ ಮೇಲೆ ದೃಷ್ಟಿಯನ್ನು ಬೀರುತ್ತ ಈ ಭಾವನೆಯನ್ನು ಮಾಡತಕ್ಕದ್ದು. 'ನಾನು ನನ್ನ ಆರಾಧ್ಯದ ಮುಖಾಮೃತವನ್ನು ಪಾನಮಾಡುತ್ತಿರುವೆನು. ಪುನಃ ವ್ಯತಿಕ್ರಮದಿಂದ ಕಾಲುಗಳ ಉಗುರುಗಳ ವರೆಗೆ ದೃಷ್ಟಿಯನ್ನು ತಿರುಗಿಸತಕ್ಕದ್ದು. ಧ್ಯಾನಮಾಡುವಾಗ ಒಂದು ವೇಳೆ ಮನವು ಚಂಚಲವಾದರೆ ಧ್ಯಾನವನ್ನು ಬಿಟ್ಟು ಪ್ರಾಣದ ಶ್ವಾಸ -ಪ್ರಶ್ವಾಸ ಕ್ರಿಯೆಯಲ್ಲಿಯೇ ಮನವನ್ನು ಸ್ಥಿರಮಾಡತಕ್ಕದ್ದು ಮತ್ತು ಶ್ವಾಸವನ್ನು ತೆಗೆದುಕೊಳ್ಳುವಾಗ "ಸೋ" ಹಾಗೂ ಪ್ರಶ್ವಾಸ ಬಿಡುವಾಗ "ಹಂ" ದ ಜಪವನ್ನು ಮಾಡತಕ್ಕದ್ದು. ಯಾಕಂದರೆ ಸ್ವಭಾವದಿಂದಲೇ ಜೀವನು ಶ್ವಾಸ -ಪ್ರಶ್ವಾಸಗಳಲ್ಲಿ ನಿರಂತರ ಜಪಿಸುತ್ತಿರುತ್ತಾನೆ. ಇಂತಹ ಚಿಂತನವನ್ನು ಮಾಡುತ್ತಿರಬೇಕು.

ಈ ಪ್ರಕ್ರಿಯೆಯಿಂದ ಐದು ಮಿನಿಟುಗಳಲ್ಲಿ ಮನವು ಸ್ಥಿರವಾಗುವುದು. ಮನಸಿನ ಸ್ಥಿರತೆಯಲ್ಲಿ ಪುನಃ ಧ್ಯಾನಮಾಡುವದು ಲಾಭಕಾರಿಯಾಗಿರುತ್ತದೆ. ಈ ವಿಧಿಯಿಂದ ದ್ವಿವಿಧ ಸಂಪ್ರಜ್ಞಾತ ಹಾಗೂ ಅಸಂಪ್ರಜ್ಞಾತ ಸಮಾಧಿಯುಂಟಾಗುತ್ತದೆ.

ಅಭ್ಯಾಸ ಕರ್ತನಿಗೆ ಎಲ್ಲಿಯ ವರೆಗೆ ಧ್ಯಾತಾ, ಧ್ಯಾನ, ಧ್ಯೇಯಗಳ ಜ್ಞಾನವಿರುವದೋ, ಅಲ್ಲಿಯ ವರೆಗೆ ಧ್ಯೇಯದ ಧ್ಯಾನವನ್ನು ಧ್ಯಾತಾನು ಮಾಡತಕ್ಕದ್ದು. ಯಾವಾಗ ಧ್ಯಾತಾ -ಧ್ಯಾನಗಳು ಧ್ಯೇಯದೊಡನೆ ಜಲಸಂಯುಕ್ತ ಶರ್ಕರೆಯಂತೆ ಏಕತ್ವ ವುಂಟಾಗುತ್ತದೆ. ಆಗಳೇ ಸಮಾಧಿಯಾಗುತ್ತದೆ.

ಧ್ಯಾನ ಮತ್ತು ಸಮಾಧಿಯಲ್ಲಿ ಕೇವಲ ಇಷ್ಟು ಅಂತರವಿರುವುದು-ಧ್ಯಾನಾವಸ್ಥೆಯಲ್ಲಿ ಧ್ಯಾತಾನ ಸಮೀಪದಲ್ಲಿ ಯಾವುದಾದರೂ ಭೋಗ್ಯ ವಿಷಯವು ಬಂದರೆ ಧ್ಯಾನವು ಕಟ್ಟಾಗಿ ಹೋಗುತ್ತದೆ. ಸಮಾಧಿಸ್ಥಿತಿಯು ಪ್ರಾಪ್ತವಾದಾಗ ವಿಷಯ ಸಂಬಂಧವಾದರೂ ಸಹ ಸಮಾಧಿಯು ಭಂಗವಾಗುವುದಿಲ್ಲ.

ಯಾವಾಗ ಧ್ಯಾನ-ಧಾರಣ-ಸಮಾಧಿ ಇವು ಮೂರು ಒಂದೇ ವಸ್ತುವನ್ನು ಅವಲಂಬಿಸಿರುವವೋ ಆಗ ಅದೇ 'ಸಂಯಮ'ವೆಂದು ಹೇಳಲ್ಪಡುತ್ತದೆ.

## ಸಮಾಧಿ

ಹಿಂದೆ ಹೇಳಿದ ಸಂಪ್ರಜ್ಞಾತ ಮತ್ತು ಅಸಂಪ್ರಜ್ಞಾತ ಸಮಾಧಿಗಳಿಗೆ ಸವಿಕಲ್ಪ ಮತ್ತು ನಿರ್ವಿಕಲ್ಪ ಸಮಾಧಿ ಎನ್ನುತ್ತಾರೆ. ಸವಿಕಲ್ಪದಲ್ಲಿ ಸಾಕಾರ ಮತ್ತು ನಿರ್ವಿಕಲ್ಪದಲ್ಲಿ ನಿರಾಕಾರ ಸ್ಥಿತಿಯು ಇರುತ್ತದೆ. ಸವಿಕಲ್ಪವು ಶಬ್ದವಿದ್ದ ಮತ್ತು ದೃಶ್ಯವಿದ್ದ ಎಂದು ಎರಡು ಬಗೆಯಾಗಿದೆ. ಮನೋವೃತ್ತಿಗಳು ಬದಲಿಸುತ್ತ ಇರುತ್ತವೆ. ನಾನು ಕೇವಲ ಸಾಕ್ಷಿಮಾತ್ರನಾಗಿದ್ದೇನೆ. ಈ ಬಗೆಯಾಗಿ ಉದಾಸೀನ ಭಾವದಿಂದ ಬಾಜಾರದ ವಸ್ತುಗಳಂತೆ 'ದೃಶ್ಯವಿದ್ದ' ಸಮಾಧಿ ಎಂದು ಹೇಳಿದೆ.ಹೇಗೆ ಪಥಿಕನು ಹಾದಿಯ ಪಾರ್ಶ್ವದಲ್ಲಿ ಉದಾಸೀನ ಭಾವದಿಂದ ಮಮತ್ವ ಬುದ್ಧಿಯ ಹೊರತು ಪದಾರ್ಥಗಳನ್ನು ನೋಡುತ್ತಿರುತ್ತಾನೆ, ಹೀಗೆಯೇ ಯೋಗಿಯೂ ಸಹ ತನ್ನ ಮನೋವೃತ್ತಿಗಳನ್ನು ಅಪರಿಚಿತ ಪದಾರ್ಥಗಳಂತೆ ನೋಡುತ್ತಿರುತ್ತಾನೆ. ಹೇಗೆ ಜಾದೂಗಾರನು ಮತ್ತೊಬ್ಬ ಜಾದೂಗಾರನನ್ನು ಚಕಿತಗೊಳಿಸಲು ಶಕ್ಯವಿಲ್ಲವೋ ಅದೇ ಪ್ರಕಾರ ಯಾವ ಯೋಗಿಯ ಮನಸ್ಸಿನ ವೃತ್ತಿಗಳ ಮೇಲೆ ವಿಶ್ವಾಸವಿಲ್ಲ; ಅವನು ಅವುಗಳಲ್ಲಿ ಭ್ರಾಂತಿಷ್ಟನಾಗುವುದಿಲ್ಲ. ಇದು ಸವಿಕಲ್ಪ ಸಮಾಧಿಯು. ಯಾಕೆಂದರೆ ಇಲ್ಲಿ ಧ್ಯಾತಾ, ಧ್ಯಾನ, ಧ್ಯೇಯ ಮೂರೂ ಇರುತ್ತವೆ.

ನಾನು ಆಸಕ್ತಿಗಳಿಂದ ಸಂಪೂರ್ಣ ಮುಕ್ತನು. ಚಿರಸ್ಥಾಯೀ, ಸ್ವಪ್ರಕಾಶ, ಆನಂದಸ್ವರೂಪನು. ನಾನು ದ್ವೈತ ಭಾವದಿಂದ ಭಿನ್ನವಾಗಿರುತ್ತೇನೆ. ಈ ಪ್ರಕಾರ ಎಲ್ಲ ದೃಶ್ಯಗಳನ್ನು ಬಿಟ್ಟು ಆತ್ಮಸತ್ತೆಯ ಜ್ಞಾನವನ್ನು ಇಡುವ ಯಾವ ಸಮಾಧಿಯು ಇರುವುದೋ ಅದು 'ಶಬ್ಧವಿದ್ಧ' ಸಮಾಧಿಯೆಂದು ಹೇಳಲ್ಪಟ್ಟಿದೆ. ಇದರಲ್ಲಿ ಧ್ಯಾನ ಮತ್ತು ಧ್ಯೇಯಗಳು ಇರುವುದಿಲ್ಲ. ಕೇವಲ ಧ್ಯಾತಾನ ಭಾನವಿರುತ್ತದೆ. ಇದು ಮೊದಲನೆಯ ಸಮಾಧಿಯ ಫಲರೂಪವು. ಇದು ಶಬ್ಧಾನುವಿದ್ಧ ಸಮಾಧಿಯೇ. ಪ್ರಣವ ಅಥವಾ 'ಸೋಽಹಮ್(ಮಂತ್ರ)'ದೊಡನೆ ಆಗುವುದರಿಂದ 'ನಾಥಯೋಗ' ಎಂದು ಅನ್ನಲ್ಪಡುತ್ತದೆ. ನಾದಯೋಗದ ಹೆಸರೇ ನಾಥಯೋಗ. ಇದೇ ನಾದವನ್ನು ಕೇಳುವ ಉಪಾಯವು. ಬಾಬಾ ಗೋರಖನಾಥನೇ ಈ ನಾದಯೋಗದ ಪ್ರವರ್ತಕರು. ಅವನ ಸಂಪ್ರದಾಯದಲ್ಲಿ ಕುಂಡಲ, ಶೇಲೀ, ವಂಶೀ ಧರಿಸುತ್ತಾರೆ. ಇದು ಅವರ ನಾಧಾನುಸಂಧಾನದ ಚಿಹ್ನವು. 'ಸಮಾಧಿ ೮ ಬಗೆಯಾಗಿದೆ.

೧. ಭ್ರಾಮರಿ (ನಾದಾನುಸಂಧಾನ)

೨. ಶಾಂಭವೀ (ಮನೋವೃತ್ತಿ ಅಂತರ್ಮುಖವಾದರೆ ದೃಷ್ಟಿಯು ಬಹಿರ್ಮುಖಿಯಾಗಿರುತ್ತದೆ.)

೩. ಖೇಚರಿ (ಇದರಲ್ಲಿ ನಾಲಗೆಯನ್ನು ತಿರುವಿ ತಾಲುವಿನ ಛಿದ್ರದ ಹತ್ತಿರ ಇರಿಸಿ ಮಸ್ತಷ್ಕದಿಂದ ಸೋರುತ್ತಿರುವ ಅಮೃತವನ್ನು ಕುಡಿಯುವುದು)

೪. ಯೋನಿಮುದ್ರಾ - ಇದರಲ್ಲಿ ಲಿಂಗದಿಂದ (ವಜ್ರೋಲಿ ಕ್ರಿಯೆಯಿಂದ)ಸ್ತ್ರೀರಜವನ್ನು ಶರೀರದಲ್ಲಿ ಜಗ್ಗಿ ವೀರ್ಯವನ್ನು ಪಾತ ಮಾಡದೇ ಆನಂದಿಸುವುದು.

೫. ಭಕ್ತಿಯೋಗ - ಇದರಲ್ಲಿ ಭಗವಂತನ ನಾಮ ಗುಣ ಸ್ಮರಣ ಮಾಡುತ್ತ ತನ್ಮಯವಾಗಿ ಅಷ್ಟಸಾತ್ವಿಕ ವಿಕಾರಗಳನ್ನು ಪ್ರಕಟಮಾಡುತ್ತ ಸಮಾಧಿಸ್ಥನಾಗುವುದು.

೬. ಮನೋಮೂರ್ಛಾ - ಈ ಅವಸ್ಥೆಯಲ್ಲಿ ಮನವು ಕಲ್ಪನಾರಹಿತವಾಗಿ ಮೂರ್ಛಿತದಂತೆ ಇರುತ್ತದೆ.

೭. ವಾಸನಾಕ್ಷಯ -ಇದರಲ್ಲಿ ವಾಸನೆಗಳನ್ನು ಬಿಟ್ಟುಕೊಡುವುದರಿಂದಲೇ ಸಮಾಧಿಯಾಗುತ್ತದೆ.

೮. ಚೈತನ್ಯಸಮಾಧಿ- ಈ ಸಮಾಧಿಯಲ್ಲಿ ಕಣ್ಣುಗಳು ಮುಚ್ಚಿರುವದಿಲ್ಲ. ಆದರೆ ಸ್ವತಃ ಮನಸ್ಸು ಮತ್ತು ಇಂದ್ರಿಯಗಳ ನಿರೋಧವಾಗುವದರಿಂದ ಸುಷುಪ್ತಿಯಂತಹ ಸ್ಥಿತಿಯು ಆಗುತ್ತದೆ.

ಕೇವಲ ಧ್ಯೇಯವು ಯಾವಾಗ ಅವಶಿಷ್ಟವಾಗುತ್ತದೆ, ಆಗ ಧ್ಯಾನವು ಸಮಾಧಿಯಲ್ಲಿ ಪರಿಣಿತವಾಗುತ್ತದೆ.

ಆ ಸಮಯದಲ್ಲಿ 'ಧ್ಯಾತಾ' ತನ್ನ ಅಹಂಕಾರವನ್ನು ಮರೆಯುತ್ತಾನೆ. ಪುನಃ ಪುನಃ ಸಮಾಧಿಯ ಅಭ್ಯಾಸದಿಂದ ಯಾವಾಗ ಯೋಗಿಯ ಮನಸು ಧ್ಯೇಯಾಕಾರವಾಗಿ ಧ್ಯೇಯದ ರೂಪದಲ್ಲಿ ಪರಿಣಿತವಾಗುತ್ತದೆ, ಆಗ ಅದನ್ನು ತನ್ನ ಸತ್ತೆಯನ್ನು ಮರೆತು ಅಕಲ್ಪವಾಗಿ ಹೋಗುತ್ತಾನೆ. ಇದೇ ಸಮಾಧಿಸ್ಥಿತಿಯು.

ಧ್ಯಾನದಲ್ಲಿ ಧ್ಯಾತಾ, ಧ್ಯಾನ, ಧ್ಯೇಯ ಎಂಬ ತ್ರಿಪುಟಿಗಳಿರುತ್ತವೆ. ಆದರೆ ಸಮಾಧಿಯಲ್ಲಿ 'ಧ್ಯೇಯ' ಒಂದೇ ಉಳಿಯುತ್ತದೆ. ಧ್ಯಾತಾ-ಧ್ಯಾನ-ಧ್ಯೇಯ ಗಳು ಒಂದಾಗಿ, ಕೇವಲ ಧ್ಯೇಯಾಕಾರ ಬ್ರಹ್ಮವೃತ್ತಿ ಮಾತ್ರ ಅವಶಿಷ್ಟವಾಗಿ ಉಳಿಯುತ್ತದೆ.

ಜ್ಞಾನವನ್ನು ಉತ್ಪನ್ನ ಮಾಡುವುದೇ ಸಮಾಧಿಗಳ ಉದ್ದೇಶವು. ಜ್ಞಾನವನ್ನು ಉತ್ಪನ್ನ ಮಾಡದಿರುವುದರಿಂದ ಈ ಎಲ್ಲ ಪ್ರಕ್ರಿಯೆಗಳು ವ್ಯರ್ಥವಾಗಿರುತ್ತವೆ. ಸಮಾಧಿಯ ಸಂಪೂರ್ಣ ಪ್ರಕ್ರಿಯೆಗಳು ಎಲ್ಲ ಯೋಗಿಗಳಿಗೆ ಉಪಯೋಗಿಯಾಗಿರುವದಿಲ್ಲ.

ಯಾವ ಸಮಾಧಿಯ ಪ್ರಕ್ರಿಯೆಯು ಯಾವ ಯೋಗಿಗೆ ಅನುಕೂಲವಾಗುವುದೋ ಅದನ್ನೇ ಅವನು ಮಾಡುತ್ತಾನೆ. ಭ್ರಾಮರಿಯಿಂದ ಸಾಧಕನಿಗೆ 'ನಾದಾನುಶ್ರವಣ'ವಾಗುತ್ತದೆ. ಅಂತರ್‌ಜ್ಯೋತಿಯನ್ನು ಶಾಂಭವಿಯಿಂದ ನೋಡಲು ಶಕ್ಯವು. ಖೇಚರಿಯಿಂದ ತಾಲುವಿನಿಂದ ಸುರಿಯುತ್ತಿರುವ ಅಮೃತದ ಪಾನವನ್ನು ಮಾಡಲು ಸಮರ್ಥನು. ಯೋನಿಮುದ್ರೆಯಿಂದ ಆನಂದಾನುಭವವಾಗುತ್ತದೆ. ಭಕ್ತಿಯೋಗದಿಂದ ವಿಶ್ವಪ್ರೇಮವು ಪ್ರಾಪ್ತವಾಗುತ್ತದೆ. ಮನೋಮೂರ್ಛಾದಿಂದ ಜಡಸಮಾಧಿಯಾಗುತ್ತದೆ. ವಾಸನಾಕ್ಷಯದಿಂದ ಜ್ಞಾನವಾಗುತ್ತದೆ. ಚೈತನ್ಯ ಸಮಾಧಿಯಿಂದ ಮುಕ್ತಿಯಾಗುತ್ತದೆ.

ಹಠಯೋಗ ಪ್ರದೀಪಿಕೆಯಲ್ಲಿ ಮೊದಲು ಅನ್ಯಪ್ರಕ್ರಿಯೆಗಳನ್ನು ತೋರಿಸಿ ಕೊನೆಯಲ್ಲಿ ನಾದಾನುಸಂಧಾನವನ್ನು ಹೇಳಿದೆ. ಶೇಷಪ್ರಕ್ರಿಯೆಗಳು ನಾದಾನುಸಂಧಾನದ ಉಪಲಕ್ಷಣ ಮಾಡುತ್ತವೆ. ನಾವು ಮೊದಲು ಧ್ಯಾನದ ಕೆಲವು ಉಪಾಯಗಳನ್ನು ಹೇಳಿ ಕಡೆಗೆ ನಾದಾನುಸಂಧಾನದ ಪ್ರಕ್ರಿಯೆಗಳನ್ನು ಹೇಳುವೆವು. 'ಜಾವಲ-ದರ್ಶನ-ಉಪನಿಷತ್' ಪಾತಂಜಲ ಯೋಗದರ್ಶನ ಹಾಗೂ ಹಠಯೋಗ ಪ್ರದೀಪಿಕಾದಿಕ ಗ್ರಂಥಗಳು ಸರ್ವಸಮ್ಮತಿಯಿಂದ ಈ ಯೋಗದ ಪ್ರಕೃಷ್ಟ ಗ್ರಂಥಗಳು. ಈ ಗ್ರಂಥಕ್ಕೆ ಸಹ ಮೂಲಕಾರಣ ಅವೇ ಇರುತ್ತವೆ. ಆದುದರಿಂದ ಈ ಗ್ರಂಥದಲ್ಲಿ ಯಾವುದಕ್ಕೂ ಸಂಶಯ ಮಾಡತಕ್ಕದ್ದಲ್ಲ.

೧.ಮೊದಲನೆಯ ಪ್ರಕ್ರಿಯೆ - ಮನವನ್ನು ಕುಂಡಲಿನಿಯಲ್ಲಿ ಧಾರಣ ಮಾಡತಕ್ಕದ್ದು. ಶಕ್ತಿ(ಪ್ರಾಣ) ಮತ್ತು ಮನ ಎರಡೂ ಕೂಡಿ ಕುಂಡಲಿನಿಯನ್ನು ಎಚ್ಚರಿಸುತ್ತವೆ. ಕುಂಡಲಿನಿಯು ಜಾಗ್ರತವಾದ ಅನಂತರದಲ್ಲಿಯೂ ಬುದ್ಧಿಯಿಂದ ಮನಸ್ಸಿನ ನಿರೀಕ್ಷಣವನ್ನು ಯೋಗಿಯು ಮಾಡತಕ್ಕದ್ದು. ಇದು ವಿಚಾರದ ಪ್ರಕ್ರಿಯೆಯು. ಈ ಪ್ರಕ್ರಿಯೆಯಿಂದ ಬುದ್ಧಿಯು ಮನಸ್ಸನ್ನು ನೋಡುತ್ತದೆ. ಪುನಃ ಬುದ್ಧಿಯನ್ನು ಬಿಟ್ಟು ಯೋಗಿಯು ಮನವನ್ನು ಆತ್ಮನಲ್ಲಿ ಮುಳುಗಿಸತಕ್ಕದ್ದು. ಇದರಿಂದ ಮನವು ಆತ್ಮನಲ್ಲಿ ವಿಲೀನವಾಗಿ ಹೋಗುವುದು.

೨.ಎರಡನೆಯ ಪ್ರಕ್ರಿಯೆ- ಆಕಾಶದಂತೆ ಬ್ರಹ್ಮವು ಸರ್ವವ್ಯಾಪಕವಿರುತ್ತದೆ. ಯೋಗಿಯು ಅಕಾಶದಂತೆ ತನ್ನ ಭಾವನೆಯನ್ನು ಮಾಡತಕ್ಕದ್ದು. ಹಾಗೂ ಪವಿತ್ರತೆಯಲ್ಲಿಯೂ ನಾನು ಆಕಾಶದಂತೆ ನಿರ್ಮಲನಾಗಿದ್ದೇನೆ. ಹಾಗೆಯೇ ಸರ್ವಪದಾರ್ಥಗಳು ಬ್ರಹ್ಮಮಯವಿರುತ್ತವೆ ಮತ್ತು ಬ್ರಹ್ಮವೇ ಇರುತ್ತವೆ.

ಇದರ ತರುವಾಯ ಬ್ರಹ್ಮಮಯ ಚಿಂತನವನ್ನು ಬಿಟ್ಟು ಸುಮ್ಮನಿರತಕ್ಕದ್ದು. ಯಾವ ವಿಕಲ್ಪವನ್ನು ಮನದಲ್ಲಿ ಇಡತಕ್ಕದ್ದಲ್ಲ. ಇಂತಹ ಸ್ಥಿತಿಯಲ್ಲಿ ಶೂನ್ಯಾಕಾರವೃತ್ತಿ ಅರ್ಥಾತ್ ಅನಮನಸ್ಕ ವೃತ್ತಿಯುಂಟಾಗುವುದು.

ನೀರಲ್ಲಿ ಮುಳುಗಿಸಿದ ಕೊಡದಂತೆ ಹೊರಗೆ ಒಳಗೆ ಕೊಡದ ಜಲವೇ ಜಲ ಹೇಗೆ ವ್ಯಾಪಕವಾಗುತ್ತದೆ ಅದೇ ಪ್ರಕಾರ ಪ್ರತಿಯೊಂದು ಪದಾರ್ಥ ಹಾಗೂ ತನ್ನ ಶರೀರ ಸಹ ಬ್ರಹ್ಮಮಯ ಹೊರಗೆ ಒಳಗೆ ಓತಪ್ರೋತವಾಗಿರುತ್ತದೆ, ಇಂತಹ ಭಾವನೆಯನ್ನು ಮಾಡುವುದರಿಂದ ಯೋಗಿಯ ಮನಸ್ಸು ನೀರಲ್ಲಿ ಹಾಕಿದ ಸಕ್ಕರೆಯ ಕಣದಂತೆ ಬ್ರಹ್ಮದಲ್ಲಿ ಲೀನವಾಗಿ ಹೋಗುತ್ತದೆ. ಇದೇ ಬ್ರಹ್ಮಲೀನ ಸಮಾಧಿಯಾಗಿರುತ್ತದೆ.

೩.ಮೂರನೆಯ ಉಪಾಯ- ಮನದಲ್ಲಿ ಬ್ರಹ್ಮಚಿಂತನದ ಹೊರತು, ಯಾವ ಚಿಂತನವನ್ನು ಇರಗೊಡತಕ್ಕದ್ದಲ್ಲ. ಯಾವುದಾದರೂ ಚಿಂತೆಯ ಉಪಸ್ಥಿತಿಯಲ್ಲಿ ಅದನ್ನು ಕಾವಲಗಾರನಂತೆ ಓಡಿಸತಕ್ಕದ್ದು. ಕಳ್ಳನನ್ನು ಓಡಿಸಿದಂತೆ ಸರ್ವಸಂಕಲ್ಪಸಹಿತ ಚಿಂತೆಯನ್ನು ಹತ್ತರ ಬರಗೊಡತಕ್ಕದ್ದಲ್ಲ. ಇಂತಹ ನಿಷ್ಠೆಯಿಂದ ಯೋಗಿಯು ನಿರ್ವಿಕಲ್ಪ ಸಮಾಧಿಸ್ಥನಾಗುತ್ತಾನೆ. ಇದೇ ಚಿಂತಾಶೂನ್ಯ ಸಮಾಧಿ.

೪.ನಾಲ್ಕನೆಯ ಉಪಾಯ -ಕರ್ಪೂರವನ್ನು ಸುಡುವುದರಿಂದ ಅದು ಹೇಗೆ ಅಗ್ನಿರೂಪವಾಗಿ ಹೋಗುತ್ತದೆ. ಜಲದಲ್ಲಿ ಉಪ್ಪು ಹಾಕುವುದರಿಂದ ಅದು ಹೇಗೆ ಜಲರೂಪವಾಗುತ್ತದೆ. ಅದರಂತೆಯೇ ಚಿತ್ತಕ್ಕೆ ಸಾಧನೆಗಳಿಂದ ಆತ್ಮನಲ್ಲಿ ಲೀನಮಾಡತಕ್ಕದ್ದು.

೫.ಐದನೆಯ ಉಪಾಯ - ಸಂಸಾರದಲ್ಲಿ ಸರ್ವ ಅನುಭವಗಳು ಬುದ್ಧಿಯಿಂದ ಆಗುತ್ತವೆ. ಬುದ್ಧಿಯ ಹೊರತು ಯಾವ ಅನುಭವವೂ ಆಗುವದಿಲ್ಲ. ಬುದ್ಧಿಯ ಸನ್ನಿಧಿಯಲ್ಲಿಯೇ ಜ್ಞೇಯ ಪದಾರ್ಥಗಳ ಬೋಧೆಯಾಗುತ್ತದೆ.

ಇದಕ್ಕೋಸುಗ ದೃಶ್ಯ ಪದಾರ್ಥಗಳು ಬುದ್ಧಿಯಿಂದ ಭಿನ್ನವಿರುವದಿಲ್ಲ. ಯಾಕೆಂದರೆ ಅನ್ವಯ ವ್ಯತಿರೇಕದಿಂದ ಇದು ಸಿದ್ಧವಾಗುತ್ತದೆ. ಪದಾರ್ಥಗಳು ಮನದಿಂದ ಅತಿರಿಕ್ತವಿಲ್ಲವೆಂಬ ಪದಾರ್ಥ ಮತ್ತು ಅದರ ಜ್ಞಾನವು ಸ್ವಪ್ನಜ್ಞಾನದಿಂದ ಸ್ವಪ್ನವು ನಾಶವಂತವೆಂಬ ತಿಳುವಳಿಕೆಯಂತೆ ಇರುವದು. ಜ್ಞೇಯವನ್ನು ಬಿಟ್ಟುಗೊಟ್ಟು ಮನವು ನಿಲ್ಲಲು ಸಮರ್ಥವಲ್ಲ. ಮನಸ್ಸಿನ ಸಂಕಲ್ಪದಿಂದ ಜಾಗ್ರತ ಪದಾರ್ಥಗಳು ಮನದ ಅನುಪಸ್ಥಿತಿಯಲ್ಲಿ ಸತ್ತಾಹೀನವಾಗಿ ಹೋಗುತ್ತವೆ.

೬.ಷಷ್ಟ ಉಪಾಯ - ಯಾವದು ದೃಶ್ಯಮಾನವೋ ಅದು ಕೇವಲ ಮನಸಿನ ವಿಸ್ತಾರವಾಗಿದೆ. ಸುಷುಪ್ತಿ ಸಮಾಧಿಗಳಲ್ಲಿ ಮನವು ವಿಲೀನವಿರುತ್ತದೆ. ಆದುದರಿಂದ ಪದಾರ್ಥಗಳು ಸಹ ತೋರುವದಿಲ್ಲ.ಇದಕ್ಕೋಸುಗ ದೃಶ್ಯ ಮತ್ತು ದರ್ಶಕ ಎರಡೂ ಮನಸ್ಸಿನ ರೂಪಗಳೇ.

೭.ಸಪ್ತಮ ಉಪಾಯ - ಯೋಗಿಯು ಯಾವಾಗ ದೃಶ್ಯವನ್ನು ತ್ಯಾಗ ಮಾಡುವನೋ ಆಗ ದರ್ಶಕ ಮನವು ಸಹ ಅದೃಶ್ಯವಾಗಿ ಹೋಗುತ್ತದೆ. ಮನವೇ ಜಗತ್ತನ್ನು ಉಂಟುಮಾಡಿದೆ ಮತ್ತು ಮನಸಿನ ವಿಲೀನವು ಆಗುವುದರಿಂದ ಯಾವ ಶೇಷ ವಸ್ತುವು ಇರುತ್ತದೆಯೋ ಅದೇ ಬ್ರಹ್ಮವು, ಆತ್ಮವು.

ಈ ಪ್ರಕಾರ ಆಚಾರ್ಯರು ಮನವನ್ನು ವಿಲೀನ ಮಾಡಲಿಕ್ಕೆ ಬಹಳ ಉಪಾಯಗಳನ್ನು ಹೇಳಿರುವರು. ಆದರೆ ಮನವನ್ನು ವಶದಲ್ಲಿ ತರುವದು ಸುಲಭ ಕಾರ್ಯವಲ್ಲ. ಬಹಳ ವಿರಳವಾಗಿಯೇ ಇದನ್ನು ವಶಪಡಿಸಿಕೊಳ್ಳಲು ಶಕ್ಯವು. ಯಾವ ಸಾಧಕನು ಪೂರ್ವಜನ್ಮದಿಂದಲೇ ಶಾಸ್ತ್ರ ಮತ್ತು ಸತ್ಸಂಗ ಹಾಗೂ ತಪಸ್ಸನ್ನು ಮಾಡುತ್ತಾ ಬಂದಿರುವನೋ ಅವನೇ ಈ ಜನ್ಮದಲ್ಲಿ ಸಹ, ವಿಚಾರದಿಂದ ಮನವನ್ನು ವಶದಲ್ಲಿಡಲು ಸಮರ್ಥನು. ಅವರ ಸಲುವಾಗಿಯೇ ಶ್ರವಣ -ಮನನ-ಸಿದ್ಧಿ ಧ್ಯಾನಗಳೇ ಏಕ ಮಾತ್ರ ಉಪಾಯವಾಗಿವೆ. ಅವರು ಕೇವಲ ವಿಚಾರದಿಂದಲೇ ಮುಕ್ತಿಭಾಗಿಗಳಾಗಲು ಶಕ್ಯವು. ಮೇಲೆ ಹೇಳಿದ ಉಪಾಯಗಳು ಎಲ್ಲರಿಗೋಸುಗ ಉಪಯೋಗಿಯಾಗಲು ಶಕ್ಯವಿಲ್ಲ. ಅತಏವ ಶ್ರೀಗುರು ಗೋರಖನಾಥರು ಉಪನಿಷತ್ ಅನುಸಾರವಾಗಿ ಸರ್ವಸಾಧಕರಿಗೋಸುಗ ನಾದಾನುಸಂಧಾನವೇ ಸಹಜ ಉಪಾಯವೆಂದು ಹೇಳಿದ್ದಾರೆ.

೮. ಅಷ್ಟಮ ಉಪಾಯ -ನಾದಾನುಸಂಧಾನವು, ಲಯಯೋಗದ ಅಂಗವಾಗಿದೆ. ಯಾವಾಗ ಮನದಿಂದ ಇಚ್ಛೆಯ ಮೂಲವು ನಷ್ಟವಾಗುವುದೋ ಮತ್ತು ಮನಸಿನಲ್ಲಿ ಯಾವ ಇಚ್ಛೆಯೂ ಇರುವುದಿಲ್ಲವೋ ಅದಕ್ಕೆ ಲಯವೆನ್ನುತ್ತಾರೆ. ಅಥವಾ ಮನವು ಯಾವಾಗ ವಿಷಯದಿಂದ ವಿರಕ್ತವಾಗಿ ಸಾಂಸಾರಿಕ ಪದಾರ್ಥಗಳನ್ನು ತನ್ನವುಗಳನ್ನಾಗಿ ಮಾಡಲು ಅಸಮರ್ಥನಾಗುತ್ತಾನೆ, ಅದೇ ಲಯಯೋಗವು.

ಅಭ್ಯಾಸಸಾಧಕನು ಸಿದ್ಧಾಸನದಲ್ಲಿ ಕುಳಿತು ಶಾಂಭವೀಮುದ್ರಾ 'ಅಂತರ್ಲಕ್ಷ್ಯಂ ಬಹಿದೃಷ್ಟಿಃ" ಹಚ್ಚಿ ಯಾವಾಗಲೂ ಸುಷುಮ್ನಾದಲ್ಲಿ ಆಗುತ್ತಿರುವ ನಾದವನ್ನು ಶ್ರವಣ ಮಾಡತಕ್ಕದ್ದು.

ಇದನ್ನು ಯೋಗಿಯ ಹೊರತು ಅನ್ಯರು ಕೇಳಲು ಶಕ್ಯವಿಲ್ಲ. ಆದುದರಿಂದ ಸಾಧಕನು ಸುಷುಮ್ನೆಯ ಕಡೆಗೆ ಮನವನ್ನು ಹಚ್ಚತಕ್ಕದ್ದು. ಅನಾಹತ ಶಬ್ದ ಶ್ರವಣದ ಸಲುವಾಗಿ ಸಾಧಕನು ಮೊದಲು ಪೂರ್ವೋಕ್ತ ರೀತಿಯಿಂದ ಎರಡೂ ಕಿವಿಗಳ ಛಿದ್ರಗಳನ್ನು ಹೆಬ್ಬೆರಳಿನಿಂದ, ಮತ್ತು ಎರಡೂ ಕಣ್ಣುಗಳನ್ನು ಎರಡೂ ತರ್ಜನಿಗಳಿಂದ ಬಂದ ಮಾಡತಕ್ಕದ್ದು. ಇತ್ಯಾದಿ ರೀತಿಯಿಂದ ಅನಾಹತ ಶಬ್ದವು ಕೇಳಲ್ಪಡುತ್ತದೆ. ನಾದಾನುಸಂಧಾನದ ನಾಲ್ಕು ಅವಸ್ಥೆಗಳು ಇರುತ್ತವೆ. - ಪ್ರಾರಂಭಾವಸ್ಥಾ, ಘಟಾವಸ್ಥಾ, ಪರಿಚಯಾವಸ್ಥಾ ಮತ್ತು ನಿಷ್ಪತ್ತ್ಯಾವಸ್ಥಾ.

೧. ಪ್ರಾರಂಭಾವಸ್ಥಾ - ಪ್ರಾಣಾಯಾಮದ ಅಭ್ಯಾಸದಿಂದ ಯಾವಾಗ ಪ್ರಾಣವಾಯುವು ಬ್ರಹ್ಮಗ್ರಂಥಿಯನ್ನು ಭೇದನ ಮಾಡುವದಿಲ್ಲವೋ, ಆಗ ಅಭ್ಯಾಸಿಯು ಹೃದಯದಲ್ಲಿ "ಕ್ಷಣ" ಈ ಪ್ರಕಾರ ಅಲಂಕಾರದಂತೆ ಶಬ್ದವನ್ನು ಕೇಳುತ್ತಾನೆ. ಈ ಶಬ್ದವು ಯಾವಾಗಲೂ ಹೃದಯಲ್ಲಿ ಆಗುತ್ತಿರುತ್ತದೆ. ಆದರೆ ಬಹಿರ್ಮುಖವಾಗಿ ಈ ಶಬ್ದವನ್ನು ಕೇಳಲು ಶಕ್ಯವಿಲ್ಲ. ಇದೇ ಅನಾಹತ ಶಬ್ದವು ಎಂದು ಹೇಳಲ್ಪಡುತ್ತದೆ. ಈ ಶಬ್ದದ ಶ್ರವಣದಿಂದ ಶರೀರದಲ್ಲಿ ಸುಗಂಧಿ ಹಾಗೂ ಲಾವಣ್ಯತೆಯು ಬರುತ್ತದೆ. ಮತ್ತು ಶರೀರವು ನಿರೋಗಿಯು ಆಗುತ್ತದೆ. ಈ ಎಲ್ಲ ಚಿಹ್ನಗಳೊಡನೆ ಯೋಗಿಗೆ ಪ್ರಾರಂಭಾವಸ್ಥೆಯಲ್ಲಿ ಪ್ರಾಪ್ತವಾಗುವವೆಂದು ತಿಳಿಯಬೇಕು.

೨. ಘಟಾವಸ್ಥಾ - ಇದರಲ್ಲಿ ಪ್ರಾಣವಾಯುವು ಶರೀರದೊಳಗೆ ಬಂದ ಇರುತ್ತದೆ. ಅಭ್ಯಾಸಿಯನ್ನು ನೋಡಿದರೆ ನಿದ್ರಿತನಂತೆ ತೋರುತ್ತಾನೆ. ಪ್ರಾಣದ ಕ್ರಿಯೆಯೂ ಬಂದ ಇರುತ್ತದೆ. ಮತ್ತು ಯೋಗಿಯ ಮನದಲ್ಲಿಯೂ ಯಾವ ಕ್ರಿಯೆಯನ್ನು ಮಾಡುವುದಿಲ್ಲ. ಈ ಅವಸ್ಥೆಯಲ್ಲಿ ಯೋಗಿಯ ಆಸನವು ಈಶ್ವರನಂತೆ ಸ್ಥಿರವಾಗಿ ಹೋಗುತ್ತದೆ. ಶರೀರದ ರೂಪ ರೇಖಾ ಹಾಗೂ ತೇಜಗಳು ಹೆಚ್ಚಾಗಿ ಬೆಳೆಯುತ್ತವೆ. ಈ ಅವಸ್ಥೆಯಲ್ಲಿ ಪ್ರಾಣ ಮತ್ತು ಅಪಾನ, ಬಿಂದು ಮತ್ತು ನಾದ, ಜೀವಾತ್ಮಾ ಮತ್ತು ಪರಮಾತ್ಮಾ ಒಂದಾಗಿ ಹೋಗುತ್ತವೆ. ಇದಕ್ಕೋಸುಗ ಇದು 'ಘಟಾವಸ್ಥೆ' ಆಗುತ್ತದೆ. ಈ ಸಮಯದಲ್ಲಿ ವಿಷ್ಣುಗ್ರಂಥಿಯು ಭೇದವಾಗುವದಿಲ್ಲ. ಕುತ್ತಿಗೆಯ ಛಿದ್ರದಲ್ಲಿ 'ಢೋಲಿನಂತೆ' ಶಬ್ದವು ಕೇಳುತ್ತದೆ.

೩. ಪರಿಚಯಾವಸ್ಥಾ - ಅಭ್ಯಾಸಿಗೆ ಈ ಅವಸ್ಥೆಯಲ್ಲಿ ಭ್ರೂಮಧ್ಯದಲ್ಲಿ ಮೃದಂಗದ ಶಬ್ದವು ಕೇಳುತ್ತದೆ. ಈಗ ಯೋಗಿಯ ಹತ್ತಿರ ಅಲೌಕಿಕ ಶಕ್ತಿಗಳು ಬರುತ್ತವೆ. ಈ ಮಾಯಾಜಾಲವನ್ನು ತಿಳಿದು ಯೋಗಿಯು ಇವುಗಳನ್ನು ತ್ಯಾಗಮಾಡತಕ್ಕದ್ದು. ಈ ಕಾಲದಲ್ಲಿ ಪ್ರಾಣವಾಯುವು ಭ್ರೂಮಧ್ಯದಲ್ಲಿ ಶಬ್ದಸಹಿತ ಪ್ರವೇಶಮಾಡುತ್ತದೆ. ಆನಂದವು ಯಾವ ನಾದದೊಡನೆ ಆಗುತ್ತದೆ, ಅದು ವಿಲೀನವಾಗಿ ಆತ್ಮನ ಒಂದು ಸ್ವಾಭಾವಿಕ ಆನಂದವು ಪ್ರಕಟವಾಗುತ್ತದೆ. ಮನವು ಆತ್ಮಾನಂದದಲ್ಲಿ ಮುಳುಗಿ ಹೋಗುತ್ತದೆ. ಈ ಅವಸ್ಥೆಯಲ್ಲಿ ದುಃಖ, ದೋಷ, ರೋಗ, ಕ್ಷುಧಾ, ನಿದ್ರಾಗಳು ಸ್ವಲ್ಪ ಸಹ ಕಷ್ಟಕೊಡಲು ಶಕ್ಯವಿಲ್ಲ.

೪. ನಿಷ್ಪತ್ತ್ಯಾವಸ್ಥಾ - ಪ್ರಾಣವಾಯುವು ಆಜ್ಞಾಚಕ್ರವನ್ನು ಭೇದನಮಾಡಿ ಭ್ರೂಮಧ್ಯದಲ್ಲಿ ಪ್ರವೇಶಮಾಡುವುದರಿಂದ ನಿಷ್ಪತ್ತ್ಯಾವಸ್ಥಾ ಎಂದು ಹೇಳಲ್ಪಟ್ಟಿದೆ. ಇದೇ ಸಮಯದಲ್ಲಿ ಪ್ರಾಣವಾಯುವು ಬ್ರಹ್ಮರಂಧ್ರದಲ್ಲಿ ಪ್ರವೇಶ

ಮಾಡುತ್ತದೆ. ಈ ಅವಸ್ಥೆಯಲ್ಲಿ ಅಭ್ಯಾಸಿಯು 'ವಂಶೀ' ಧ್ವನಿಯನ್ನು ಕೇಳುತ್ತಾನೆ. ಈ ಸ್ಥಾನದಲ್ಲಿ ಮನಸು ಆತ್ಮನೊಡನೆ ಏಕತ್ವವನ್ನು ಪಡೆಯುತ್ತದೆ. ಅತಏವ ಇದು ರಾಜಯೋಗವೆಂದೂ ಹೇಳಲ್ಪಡುತ್ತದೆ. ಈ ಅವಸ್ಥೆಯಲ್ಲಿ ಯೋಗಿಯು ಜಗತ್ತನ್ನು ಸಹ ರಚಿಸಲು ಶಕ್ತನು. ಪರಮಾತ್ಮನಿಂದ ಅವನಿಗೆ ಅವಿರೋಧ ಆಗುವುದರಿಂದ ಆ ಮಹಾಪುರುಷನು ಆತ್ಮಸುಖದ ಹೊರತು ಏನನ್ನೂ ಮಾಡಲು ಇಚ್ಛಿಸುವುದಿಲ್ಲ. ಬೇರೆಯೂ ಇಬ್ಬರು ಈಶ್ವರರು ಆಗುವುದಿಲ್ಲ.

ಉನ್ಮನೀ ಅವಸ್ಥೆಯನ್ನು ಸಂಪಾದಿಸಿ ರಾಜಯೋಗಿಯು ರಾಜಯೋಗವನ್ನು ಸಂಪಾದಿಸುವದು ಸರಳವಾಗುತ್ತದೆ. ಭ್ರೂಮಧ್ಯದಲ್ಲಿ ಮನವನ್ನು ಸ್ಥಿರ ಮಾಡುವುದರಿಂದ ಬೇಗನೇ ಉನ್ಮನೀ ಅವಸ್ಥೆಯು ಪ್ರಾಪ್ತವಾಗುತ್ತದೆ. ನಾದಾನುಸಂಧಾನದಿಂದ ಹೇಗೆ ಶೀಘ್ರ ಫಲವನ್ನು ನೋಡಬಲ್ಲನೋ ; ಹಾಗೆಯೇ ಉನ್ಮನೀ ಅವಸ್ಥೆಯಿಂದ ನೋಡಲು ಶಕ್ಯವಾಗುವದಿಲ್ಲ. ಗೌಡ ಪಾದಾಚಾರ್ಯರು ಮಾಂಡೂಕ್ಯೋಪನಿಷತ್ತಿನಲ್ಲಿ ಈ ಪ್ರಕ್ರಿಯೆಯನ್ನು ಚೆನ್ನಾಗಿ ತೋರಿಸಿದ್ದಾರೆ.

## ಅಭ್ಯಾಸ

ಎಲ್ಲಿಯ ವರೆಗೆ ಯೋಗಿಯು ಅಭ್ಯಾಸದಿಂದ ಪೂರ್ಣತ್ವವನ್ನು ಪಡೆದಿಲ್ಲವೋ ಅಲ್ಲಿಯ ವರೆಗೆ ಕರ್ಣ ಛಿದ್ರಾದಿಗಳಿಗೆ ಬಂದಮಾಡಿ ಹೃದಯದಲ್ಲಿಯ 'ಅನಾಹತ' ಶಬ್ದದ ಶ್ರವಣದಲ್ಲಿ ಮನಸ್ಸನ್ನು ಹಚ್ಚತಕ್ಕದ್ದು. ಅಭ್ಯಾಸದ ಕಾಲದಲ್ಲಿ ಬೇರೆ ಏನನ್ನೂ ಕೇಳಕೂಡದು ಮತ್ತು ಮಾಡಕೂಡದು. ಹೀಗೆ ಮಾಡುವುದರಿಂದ ಯೋಗಿಯು ಪಕ್ಷ ಅಥವಾ ಎರಡು ಪಕ್ಷಗಳಲ್ಲಿ ಸಂಪೂರ್ಣ ವಿಘ್ನಗಳನ್ನು ಪೂರ್ಣವಾಗಿ ಅತಿಕ್ರಮಣ ಮಾಡಲು ಶಕ್ತನು. ಇದರಿಂದ ಶಾಂತಿಪೂರ್ವಕ ನಿರ್ಬಾಧವಾಗಿ ಇರಬಲ್ಲನು.

ಅಭ್ಯಾಸದ ಪ್ರಥಮಾವವಸ್ಥೆಯಲ್ಲಿ ಯೋಗಿಗೆ ದೀರ್ಘಕಾಲವ್ಯಾಪಿಯಾದ ದೊಡ್ಡ ದೊಡ್ಡ ಶಬ್ದಗಳು ಕೇಳಬರುತ್ತವೆ. ಅನಂತರ ಸೂಕ್ಷ್ಮತರ ಶಬ್ದಗಳು ಶ್ರವಣವಾಗುತ್ತವೆ. ಪ್ರಥಮಾವಸ್ಥೆಯಲ್ಲಿ ಸಮುದ್ರ, ಮೇಘ, ಢೋಲ ಹಾಗೂ ನಿರ್ಝರಗಳಂತೆ ಶ್ರವಣವಾಗುತ್ತದೆ. ಮಧ್ಯಮಾವಸ್ಥೆಯಲ್ಲಿ ಶಂಖ ಶಬ್ದಶ್ರವಣವಾಗುತ್ತದೆ ಹಾಗೂ ಅಂತಿಮ ಅವಸ್ಥೆಯಲ್ಲಿ 'ವೀಣಾ', 'ಭ್ರಮರ' ಗಳಂತೆ ಗುಂಜಾರ ಶ್ರವಣವಾಗುತ್ತದೆ.

ದೊಡ್ಡ ಶಬ್ದಗಳ ಕಡೆಗೆ ಲಕ್ಷ್ಯಕೊಡದೆ ಯೋಗಿಯು ಸೂಕ್ಷ್ಮನಾದದಲ್ಲಿಯೇ ಮನವನ್ನು ವಿಲೀನಮಾಡತಕ್ಕದ್ದು. ಯೋಗಿಯು ನಾದ ವಿಷಯದಲ್ಲಿಯೇ ಚಿತ್ತವನ್ನು ಹಚ್ಚತಕ್ಕದ್ದು. ಅನ್ಯತ್ರ ಚಿತ್ತವನ್ನು ಹಚ್ಚತಕ್ಕದ್ದಲ್ಲ. ಯಾವ ನಾದದಲ್ಲಿ ಚಿತ್ತವು ಹತ್ತುವದೋ ಅದರಲ್ಲಿಯೇ ಏಕತ್ರವಾಗಿ ಲೀನವಾಗುವದು.

ಜೇನನ್ನು ಸಂಗ್ರಹಿಸುತ್ತಿರುವ ಭ್ರಮರವು ಹೇಗೆ ಪುಷ್ಪಸುಗಂಧದಲ್ಲಿ ಮನವನ್ನು ಹಚ್ಚುವದಿಲ್ಲ. ಅದರಂತೆಯೇ ನಾದಶ್ರವಣವನ್ನು ಮಾಡುತ್ತಿರುವ ಚಿತ್ತವು ಯೋಗ್ಯ ಪದಾರ್ಥಗಳ ಕಡೆಗೆ ಓಡುವದಿಲ್ಲ. ಹಯಶಾಲೆಯಲ್ಲಿ ಕಟ್ಟಿದ ಆನೆಯು ಹೇಗೆ ಕುದುರೆಗಳ ಗತಿಯನ್ನು ತಡೆಯುವದೋ ಅದರಂತೆಯೇ ಸ್ವಾಭಾವಿಕ ರೂಪದಿಂದ ಅಶಾಂತ ಮನಸಿನ ಗತಿಯೂ ನಾದಶ್ರವಣದಿಂದ ತಡೆಯುತ್ತದೆ. ಹಾವಾಡಿಗನು ವೀಣೆಯನ್ನು ಬಾರಿಸಿ ಹೇಗೆ ಹಾವನ್ನು ವಶದಲ್ಲಿ ತೆಗೆದುಕೊಳ್ಳುತ್ತಾನೋ ಅದರಂತೆ ಯೋಗಿಯು ಸಹ ನಾದಶ್ರವಣದಿಂದ ಮನವನ್ನು ವಶಮಾಡಿಕೊಳ್ಳುತ್ತಾನೆ.

ಬೆಂಕಿಯು ಕಟ್ಟಿಗೆಯನ್ನು ಸುಟ್ಟು ಶಾಂತವಾಗುವಂತೆ ನಾದವನ್ನು ಕೇಳಿ ಮನವು ಅದರಲ್ಲಿಯೇ ಲಯವಾಗುತ್ತದೆ. ಮೊದಲು ಅನಾಹತಶಬ್ದವು ಕೇಳಬರುತ್ತದೆ. ಆ ಶಬ್ದದಲ್ಲಿಯೇ ಜ್ಞೇಯಬ್ರಹ್ಮದ ನಿವಾಸವಿರುತ್ತದೆ. ಮನವು ಅದರೊಡನೆಯೇ ಏಕತ್ವವನ್ನು ಹೊಂದಿ ಲೀನವಾಗುತ್ತದೆ. ನಾದಶ್ರವಣವಾಗುವ ವರೆಗೆ ಯೋಗಿಯ ಚಿತ್ತದಲ್ಲಿ ಯಾವ ಸಂಕಲ್ಪವೂ ಸ್ಫುರಣವಾಗುವದಿಲ್ಲ. ಶಬ್ದವು ಆಕಾಶದ ಗುಣವು. ಗುಣಿ-ಗುಣಗಳು ಬೇರೆಯಾಗಿರುವುದಿಲ್ಲ. ಈ ನಿಯಮಾನುಸಾರವಾಗಿಯೇ ಶಬ್ದವು ಮನಸಿನೊಡನೆ ಆತ್ಮತತ್ವದಲ್ಲಿ

ವಿಲೀನವಾಗುತ್ತದೆ. ಯಾವದಾದರು ನಾದಶ್ರವಣವಾದರೆ, ಅದು ಬ್ರಹ್ಮಶಕ್ತಿಯಿಂದ ಭಿನ್ನ ಯಾವುದೂ ತತ್ತ್ವವಲ್ಲ. ಸರ್ವ ತತ್ವಗಳ ಅಂತವು ಬ್ರಹ್ಮತತ್ವದಲ್ಲಿ ಇರುತ್ತದೆ.

ಯಾವುದಕ್ಕೆ ನಾಮವೂ, ರೂಪವೂ ಇಲ್ಲವೋ ಅದಕ್ಕೇ ಈಶ್ವರನೆಂದು ಅನ್ನುತ್ತಾರೆ. ಸಂಪೂರ್ಣ ಯೋಗಾಭ್ಯಾಸದ ಉದ್ದೇಶ್ಯವು ನಿತ್ಯಶಃ ಯೋಗವನ್ನು ಪ್ರಾಪ್ತಮಾಡಿಕೊಳ್ಳುವದು. ನಾದಾನುಸಂಧಾನದಿಂದ ಯೋಗಿಯ ಪಾಪವು ನಷ್ಟವಾಗಿ, ಅಂತಃಕರಣವು ಶುದ್ಧಿಯಾಗುತ್ತದೆ. ಅದೇ ಕಾರಣದಿಂದ ಶುದ್ಧಪ್ರಾಣದೊಡನೆ ಶುದ್ಧಮನಸಿಗೆ ವಿಶುದ್ಧಬ್ರಹ್ಮದಲ್ಲಿ ಏಕತ್ವವಾಗುತ್ತದೆ. ಆ ಕಾಲದಲ್ಲಿ ಯೋಗಿಗೆ ಢೋಲ, ಶಂಖಾದಿಗಳ ಶಬ್ದಗಳು ಪ್ರತೀತವಾಗುವದಿಲ್ಲ.

ಉನ್ಮನಿಯಿಂದ ಯಾವಾಗ ಮನವು ಲಯವಾಗುವದೋ ಆಗ ಶರೀರವು ಕಟ್ಟಿಗೆಯಂತೆ ನಿಶ್ಚಲವಾಗುವದು. ಆ ಅವಸ್ಥೆಯಲ್ಲಿ ಶರೀರವು ಪ್ರಾಯಃ ಮೃತವತ್ ಪ್ರತೀತವಾಗುತ್ತದೆ. ಜಾಗ್ರತ, ಸ್ವಪ್ನ, ಸುಷುಪ್ತಿ ಹಾಗೂ ಸರ್ವಚಿಂತೆಗಳಿಂದ ವಿಮುಕ್ತವಾದುದು ಈ ಅವಸ್ಥೆಯು. ಆ ಕಾಲದಲ್ಲಿ ಭೋಗ್ಯಪದಾರ್ಥಗಳನ್ನು ಗ್ರಹಣಮಾಡಲು ಶಕ್ಯವಿಲ್ಲ. ಆಗ ಮನವು ಉತ್ಥಾನರಹಿತವಾಗುತ್ತದೆ. ಸ್ವಾಭಾವಿಕ ಶೀತೋಷ್ಣ, ಸುಖ-ದುಃಖಗಳು ಯೋಗಿಗೆ ವಿಕ್ಷೇಪವನ್ನು ಮಾಡಲು ಶಕ್ಯವಿಲ್ಲ. ಎರಡನೆಯವರು ಮಾಡಿದ ಮಂತ್ರ-ಜಂತ್ರಗಳೂ ಆ ಯೋಗಿಗೆ ಯಾವ ವಿಪರೀತವನ್ನೂ ಮಾಡಲಾರವು. ಹಂಸೋಪನಿಷತ್ತಿನಲ್ಲಿ ದಶವಿಧ ನಾದಗಳ ಉಲ್ಲೇಖವಿದೆ. ಯೋಗಿಗೆ ಒಂದು ಕೋಟಿ 'ಸೋಽಹಮ್' ಅಥವಾ ಹಂಸಮಂತ್ರಗಳ ಜಪಸಂಖ್ಯೆ ಪೂರ್ಣವಾದಾಗಲೇ ದಶವಿಧನಾದಶ್ರವಣದ ಯೋಗ್ಯತೆಯಾಗುತ್ತದೆ. ಯಥಾ :

ಚಿನೀ, ಚಿನಚಿನೀ, ಶಂಖ, ಘಂಟೆ, ತಂತ್ರೀ, ತಾಳ, ವೀಣಾ, ಮೃದಂಗ, ಭೇರಿ, ಮೇಘ ಇವು ದಶಾನಾದಗಳು. ನವಮ ನಾದವನ್ನು ಬಿಟ್ಟುಗೊಟ್ಟು ಯೋಗಿಯು ಮೇಘನಾದವನ್ನು ಅಭ್ಯಾಸಮಾಡತಕ್ಕದ್ದು. ಮೊದಲನೆಯ ನಾದವನ್ನು ಕೇಳುವುದರಿಂದ ಶರೀರದಲ್ಲಿ ಪೀಲ, ಪೀಲಿ ಅನುಭವವಾಗುತ್ತದೆ. ಎರಡನೆಯದರಲ್ಲಿ ಮಾತ್ರ ಭಂಗ, ಮೂರನೆಯದರಲ್ಲಿ ಬೆವರು ಸುರಿಯುವದು, ನಾಲ್ಕನೆಯದರಲ್ಲಿ ಶಿರಃಕಂಪ, ಐದನೆಯ ನಾದದಲ್ಲಿ ತಾಲುವಿನಿಂದ ಬೆವರು ಬರುವದು, ಆರನೆಯದರಲ್ಲಿ ಮಸ್ತಿಷ್ಕದಿಂದ ಅಮೃತ ಕ್ಷರಣಪಾನವಾಗುತ್ತದೆ. ಸಪ್ತಮನಾದದಿಂದ ಗುಪ್ತಜ್ಞಾನದ ಪ್ರಕಾಶವು; ಹಾಗೂ ಅಷ್ಟಮದಿಂದ ವಾಣೀಜ್ಞಾನಾನುಭವ ಮತ್ತು ನವಮನಾದದಲ್ಲಿ ಶರೀರಬೋಧವು ಹೊರಟು ಹೋಗುತ್ತದೆ. ಹಾಗೂ ಯೋಗಿಯ ನೇತ್ರಗಳು ಬಿಳಿ ಮತ್ತು ಶುದ್ಧವಾಗಿ ಹೋಗುತ್ತವೆ. ದಶಮನಾದ ಶ್ರವಣದಿಂದ ಬ್ರಹ್ಮಜ್ಞಾನವಾಗುತ್ತದೆ.

ಹಂಸೋಪನಿಷತ್ತಿನಲ್ಲಿ ವೀಣೆಯ ಶಬ್ದವು ಸಪ್ತಮ ಸಂಖ್ಯಕವಿರುತ್ತದೆ. ಅನ್ಯ ಶಾಸ್ತ್ರಗಳಲ್ಲಿ ಇದಕ್ಕೆ ದಶಮವೆಂದು ಹೇಳಿದೆ. ಮನವು ನಾದದಲ್ಲಿ ಕೂಡುತ್ತಲೇ ನಿಃಸಂಕಲ್ಪವಾಗಿ ಹೋಗುತ್ತದೆ. ಆ ಕಾಲದಲ್ಲಿ ಸರ್ವವ್ಯಾಪಕ ಶುದ್ಧ-ಬುದ್ಧ-ನಿರಂಜನ, ಮಾಯಾರಹಿತ ಆತ್ಮದ ಅನುಭವವನ್ನು ಹೇಳಿದೆ. ನಾದದ ಫಲವು ಅಲ್ಲಿ ಈ ಪ್ರಕಾರವಿರುತ್ತದೆ.

"ದೃಷ್ಟಿಃ ಸ್ಥಿರಾ ಯಸ್ಯ ವಿನಾ ಸ ದೃಶ್ಯಮ್ ||
ವಾಯುಃ ಸ್ಥಿರೋ ಯಸ್ಯ ವಿನಾ ಪ್ರಯತ್ನಮ್ ||
ಚಿತ್ತಂ ಸ್ಥಿರಂ ಯಸ್ಯ ವಿನಾವಲಂಬಮ್ ||
ಸ ಬ್ರಹ್ಮ ತಾರಾಂತರ ನಾದ ರೂಪಃ ||"

ನಾದಬಿಂದೂಪನಿಷತ್||

ತಾತ್ಪರ್ಯ: ಯಾವ ಯೋಗಿಯ ದೃಷ್ಟಿಯು ದೃಶ್ಯದ ಹೊರತು ಸ್ಥಿರವಾಗುವದೋ ಪ್ರಯತ್ನವಿಲ್ಲದೆ ಯಾವನ ಪ್ರಾಣವಾಯುವು ಕುಂಭಕವಾಗುವದೋ, ಲಕ್ಷ್ಯದ ಹೊರತು ಯಾವನ ಮನಸು ಸ್ಥಿರವಾಗುತ್ತದೆ. ಅವನೇ ನಾದರೂಪಬ್ರಹ್ಮದ ಸ್ವರೂಪನು.

**ಬ್ರಹ್ಮದ ಸ್ವರೂಪನು :**

ಅರ್ಥಾತ್ ದೃಷ್ಟಿ-ಪ್ರಾಣ-ಮತ್ತು ಚಿತ್ತಗಳು ಯಾವನಿಗೆ ಅನಾಯಾಸವಾಗಿಯೇ ಸ್ಥಿರವಾಗಿ ಹೋಗುತ್ತವೆ, ಅವನು ನಾದಬ್ರಹ್ಮನು. ಈ ಅವಸ್ಥೆಯು ಪರಿಪಾಕವಾಗಿ ಹೋದಾಗ, ಜಾಗೃತಿನಲ್ಲಿ ಸಹ ಆ ಯೋಗಿಗೆ ಸಮಾಧಿಯು ಹತ್ತಿಯೇ ಇರುತ್ತದೆ. ಸಮಾಧಿಯ ಬಗ್ಗೆ ಅವನು ಪರಿಶ್ರಮ ಮಾಡಬೇಕಾಗಿಲ್ಲ. ಒದನೆಯೇ ವಂಶೀ, ವೀಣಾದಿಕ, ಶಬ್ದ ಶ್ರವಣದಿಂದ ಅಲೌಕಿಕ ಆನಂದದಲ್ಲಿ ಮನ ಹಾಗೂ ಪ್ರಾಣ ಸಹ ವಿಲೀನವಾಗಿಯೇ ಇರುತ್ತವೆ, ಮತ್ತು ಸಮಾಧಿ ಸಹ ನಾದದ ಆಶ್ರಿತವಿರುತ್ತದೆ. ಇಂತಹ ಅವಸ್ಥೆಯಲ್ಲಿಯೇ ಅನಾಯಾಸ ಸುಖವಾಗುತ್ತದೆ.

'ಯೋಗ ವಿಘ್ನ' - ಯೋಗೀ ಜನವು ಯೋಗದಲ್ಲಿ ತೊಡಗಿದಾಗ ಅವರಿಗೆ ಅನೇಕ ವಿಘ್ನಗಳು ಕಷ್ಟಕೊಡುತ್ತವೆ. ಎಷ್ಟೋ ಯೋಗಿಗಳು ಯೋಗ ಪ್ರಾಪ್ತಿಯ ಬದಲು ರೋಗಗಳಿಗೆ ತುತ್ತಾಗುತ್ತಾರೆ. ಇವೇ ಯೋಗದ ವಿಘ್ನಗಳು.

ರೋಗ, ಅಕರ್ಮಣ್ಯತಾ, ಸಂಶಯ, ಪ್ರಮಾದ, ಆಲಸ್ಯ, ಭೋಗತೃಷ್ಣಾ, ಜ್ಯೋತಿದರ್ಶನ, ಊರ್ಧ್ವಭೂಮಿಕೆಯ ಅಪ್ರಾಪ್ತಿ, ಅಸ್ಥಿರತೆ, ದುಃಖ, ದುರ್ಮನಸ್ಯತಾ, ಶರೀರ ಪೀಡಾ, ಶ್ವಾಸ-ಪ್ರಶ್ವಾಸ, ರೋಧ ಇತ್ಯಾದಿಕ ವಿಘ್ನಗಳು ಯೋಗದಲ್ಲಿ ಉಪದ್ರವವನ್ನು ಕೊಡುತ್ತವೆ.

ಈಗ ಪ್ರತಿಯೊಂದರ ವ್ಯಾಖ್ಯಾನ ವರ್ಣನ ಹೀಗೆ ಇರುವದು. ವಾತ-ಪಿತ್ತ-ಕಫ ಈ ಮೂರರ ವಿಪರ್ಯಯದಿಂದ ರೋಗಗಳುಂಟಾಗುತ್ತವೆ. ತಿಂದುದು ಪಚನವಾಗದಿದ್ದರೆ ಬೇನೆಯುಂಟಾಗುತ್ತದೆ.

ಕುರುಡ -ಕುಂಟ -ಮೂಕತನಗಳಿಂದ ಸಹ ರೋಗಗಳುಂಟಾಗುತ್ತವೆ. ಬುದ್ಧಿಹೀನನನಿಗೆ 'ಸ್ತ್ಯಾನ' ವೆನ್ನುತ್ತಾರೆ. ಇವನಲ್ಲಿ ಯೋಗ ಸಾಧನದ ಶಕ್ತಿಯು ಇರುವುದಿಲ್ಲ. ಶಾಸ್ತ್ರ ಮತ್ತು ಗುರುವಾಕ್ಯಗಳಲ್ಲಿಯ ಅವಿಶ್ವಾಸಕ್ಕೆ ಸಂಶಯವೆನ್ನುತ್ತಾರೆ. ಆಲಸ್ಯದ ಬಡತದಿಂದ ಯಾವ ಕೆಲಸದಲ್ಲಿಯೂ ಅರುಚಿಯೇ 'ಪ್ರಮಾದ'ವು. ತಿಳಿದರೂ ಸಹ ಶಾಸ್ತ್ರ ವಾಕ್ಯವನ್ನು ಉಲ್ಲಂಘನೆ ಮಾಡುವದೂ 'ಪ್ರಮಾದ'ವು. ಇದಕ್ಕೆ ಇಚ್ಛಾಕೃತ ಅವಜ್ಞೆ ಎಂದು ಅನ್ನುತ್ತಾರೆ. ಶರೀರ ಹಾಗೂ ಮನಸಿನ ಆಲಸ್ಯಕ್ಕೆ 'ಜಡತಾ' ಅನ್ನುತ್ತಾರೆ. ವಿಷಯಭೋಗಗಳ ವಾಸನೆಗೆ 'ಅವಿರತಿ' ಅನ್ನುತ್ತಾರೆ. ಶಾಸ್ತ್ರ ಮತ್ತು ಗುರುವಿನ ಸದುಪದೇಶದ ಹೊರತು ಅನುಭವದ ಹೆಸರು 'ಭ್ರಾಂತಿ ದರ್ಶನ'ವೆನ್ನುತ್ತಾರೆ. ಆಲಸ್ಯದಿಂದ ಯೋಗಿಗೆ ಉಚ್ಚ ಭೂಮಿಕೆಯು ಸಂಪಾದನೆಯಾಗದಿರುವುದು 'ಅಲಬ್ಧ ಭೂಮಿಕೆ'ಯು, ಯೋಗದಲ್ಲಿ ಕೆಲಮಟ್ಟಿಗೆ ಉನ್ನತಿಯನ್ನು ಹೊಂದಿ, ಅದನ್ನು ಬಿಟ್ಟು ಕೊಡುವದು 'ಅನವಸ್ಥಿತತ್ವ' ಎಂದು. ಇವುಗಳ ಹೊರತು ಮತ್ತು ಉಪಾಧಿಗಳು ಇರುತ್ತವೆ.

'ದುಃಖ ದೌರ್ಮನಸ್ಯಾಂಗಮೇಜತ್ವ ಶ್ವಾಸ-ಪ್ರಶ್ವಾಸಾ ವಿಕ್ಷೇಪ ಸಹ ಭುವಃ ।

ಮೂರು ಬಗೆಯ ದುಃಖಗಳಿರುವವು: ಶಾರೀರಿಕ, ದೈವಿಕ, ಮಾನಸಿಕ. ಇವುಗಳಲ್ಲಿ ಜ್ವರಾದಿಕ-ಶಾರೀರಿಕ; ಗಾಳಿ -ಮಳೆ-ವಿದ್ಯುತ್ ಪಾತಾದಿಕ ದೈವಿಕ, ಮನಸಿನ ಚಂಚಲತೆ ಹಾಗೂ ಕಾಮ-ಕ್ರೋಧಾದಿಕ - ಮಾನಸಿಕ ದುಃಖಗಳು.

ಈ ಎಲ್ಲ ಉಪಾಧಿಗಳ ನಿವೃತ್ತಿಯನ್ನು ಯೋಗಿಯು ಕೇವಲ ಒಂದು ತತ್ತ್ವಾಭ್ಯಾಸದಿಂದ ಮಾಡಬೇಕಾಗುವುದು ಅಥವಾ ಪ್ರಣವ ಜಪದಿಂದ ಉಪಾಧಿಯ ನಿವೃತ್ತಿಯಾಗುವುದು. ಗೃಹಸ್ಥನು

ಯೋಗಮಾರ್ಗದಲ್ಲಿ ಹತ್ತುವ ಮೊದಲು ಗಾಯತ್ರಿಯನ್ನು ಪುರಶ್ಚರಣ ಮಾಡತಕ್ಕದ್ದು. ಈ ವಿಧಿಯಿಂದ ಯೋಗಕ್ಕೆ ವಿಘ್ನಭಾದೆಗಳು ಆಗುವದಿಲ್ಲ.

ಪ್ರಣವವೆಂದರೆ ಗಾಯತ್ರೀ. ಆದುದರಿಂದ ಗಾಯತ್ರಿಯ ಜಪವನ್ನು ಮಾಡುವದರಿಂದ 'ಓಂ' ಕಾರ ಮತ್ತು ಅದರ ಅರ್ಥದ ಜಪವು ಕೂಡಿಯೇ ಆಗುತ್ತದೆ. ಸನ್ಯಾಸಿಗೆ 'ಗಾಯತ್ರೀ' ಜಪವು ನಿಷೇಧವಿರುತ್ತದೆ. ಇದಕ್ಕೋಸುಗ ಅವನು ಪ್ರಣವಮಂತ್ರದ ಜಪವನ್ನು ಮಾಡುತ್ತಾನೆ.

ಗಾಯತ್ರೀ ಮತ್ತು ಅದರ ಚಿಹ್ನ, ಶಿಖಾ-ಸೂತ್ರ ತ್ಯಾಗದಿಂದ ಸನ್ಯಾಸವಾಗುತ್ತದೆ. ಅತ ಏವ ಅವರಿಗೆ ಗಾಯತ್ರೀ ಜಪದಲ್ಲಿ ಅನಧಿಕಾರವಿದೆ. ಯಾಕೆಂದರೆ ಗಾಯತ್ರೀ ಜಪವು ಉಪನಯನದ ಅಂಗವೆಂದು ತಿಳಿಯಲ್ಪಡುತ್ತದೆ.

### ಪ್ರಣವೋಪಾಸನಾ

'ಓಂಕಾರ ಜಪ'- ಇದರಿಂದ ಯೋಗಾಭ್ಯಾಸಿಯು ಯೋಗವಿಘ್ನಗಳನ್ನು ದೂರ ಮಾಡಲು ಸಮರ್ಥನಾಗುವನು. ಬೇರೆ ಬೇರೆ ಪ್ರಣವಗಳಿಗೆ ಬೇರೆ ಬೇರೆ ಅರ್ಥಗಳಿರುವವು. ಅವುಗಳಲ್ಲಿ ಬ್ರಹ್ಮಪ್ರಣವಕ್ಕೆ '೧೬' ಮಾತ್ರೆಗಳು ಇರುತ್ತವೆ. ಪ್ರತಿದಿನ ಜೀವನಿಗೆ ನಾಲ್ಕು ಅವಸ್ಥೆಗಳು ಆಗುತ್ತವೆ. ಈ ಅವಸ್ಥೆಗಳಲ್ಲಿ ಪ್ರಣವದ ಅನುಭವವಾಗುತ್ತದೆ. ಅದೂ ಸಹ ಯೋಗಿಗೆ ಮಾತ್ರ. ಹಾಗೂ ನಾಲ್ಕನೆಯ ಅವಸ್ಥೆಯು ಯೋಗನಿಷ್ಠನಿಗೇ ಆಗುತ್ತದೆ. ಹೇಗೆಂದರೆ ಜಾಗ್ರತೆಯಲ್ಲಿಯೂ '೪' ಅವಸ್ಥೆಗಳು ಯೋಗಿಗೆ ಮತ್ತು ಜೀವನಿಗೆ ಮೂರು ಕ್ರಮಶಃ ಆಗುತ್ತವೆ. ವಿಶ್ವ-ವಿಶ್ವ, ವಿಶ್ವ-ತೈಜಸ, ವಿಶ್ವ- ಪ್ರಾಜ್ಞ ಮತ್ತು ವಿಶ್ವ -ತುರೀಯ. ಸ್ವಪ್ನಾವಸ್ಥೆಯು ಹೀಗೆಯೇ. ತೈಜಸ-ವಿಶ್ವ, ತೈಜಸ-ತೈಜಸ, ತೈಜಸ- ಪ್ರಾಜ್ಞ ಮತ್ತು ತೈಜಸ ತುರೀಯ ಹಾಗೆಯೇ ಸುಷುಪ್ತಿಯಲ್ಲಿಯೂ ಪ್ರಾಜ್ಞ-ವಿಶ್ವ, ಪ್ರಾಜ್ಞ-ತೈಜಸ, ಪ್ರಾಜ್ಞ-ಪ್ರಾಜ್ಞ ಮತ್ತು ಪ್ರಾಜ್ಞ -ತುರೀಯ. ಸಮಾಧಿ ಕಾಲದಲ್ಲಿಯೂ ತುರೀಯ -ಜೀವನಿಗೆ ತುರೀಯ -ವಿಶ್ವ, ತುರೀಯ-ತೈಜಸ, ತುರೀಯ-ಪ್ರಾಜ್ಞ ಮತ್ತು ತುರೀಯ -ತುರೀಯ. ಅದು ಸಾಧಾರಣತಃ ಪ್ರಣವದ '೧೬' ಮಾತ್ರೆಗಳೊಡನೆ ಕೂಡುತ್ತದೆ.

ಪ್ರಣವದ ಪ್ರಥಮ ಅಕ್ಷರ 'ಅ' ಕಾರವು ಜಾಗೃತ ವಿಶ್ವದೊಡನೆ ಕೂಡುತ್ತದೆ. 'ಉ' ಕಾರವು ಜಾಗೃತ ತೈಜಸದೊಡನೆ, ಮತ್ತು 'ಮ' ಕಾರವು ಜಾಗೃತ ಪ್ರಾಜ್ಞದೊಡನೆ ಕೂಡುತ್ತದೆ. ಅರ್ಥ ಮತ್ತು ಜಾಗೃತ ತುರೀಯದೊಡನೆ ಕೂಡುತ್ತವೆ. ಕಲಾ -ಸ್ವಪ್ನ ಪ್ರಾಜ್ಞದೊಡನೆ, ಕಲಾ ತಿಳಿತವು ಸ್ವಪ್ನ ತುರೀಯದೊಡನೆ ಕೂಡುತ್ತವೆ, ಇದರಿಂದ ಮೊದಲು ಬಿಂದು, ಸ್ವಪ್ನ-ವಿಶ್ವದೊಡನೆ, ನಾದವು ಸ್ವಪ್ನ- ತೈಜಸದೊಡನೆ ಕೂಡುತ್ತವೆ. ಆಗ ಕಲಾ ಮತ್ತು ಕಲಾತೀತವಾಗುತ್ತದೆ. ಯಾಕಂದರೆ ಮೇಲೆ ಹೇಳಿದೆ. ಶಾಂತಿ, ಸುಷುಪ್ತಿ ವಿಶ್ವದೊಡನೆ ; ಶಾಂತಾತೀತ -ಸುಷುಪ್ತಿ ತೈಜಸದೊಡನೆ ಕೂಡುತ್ತವೆ. ಉನ್ಮನೀ ಸುಷುಪ್ತಿ ಪ್ರಾಜ್ಞದೊಡನೆ ಕೂಡುತ್ತದೆ ಮತ್ತು ಮನೋನ್ಮನೀ ಸುಷುಪ್ತ ತುರೀಯದೊಡನೆ ಕೂಡುತ್ತವೆ.

ತುರೀಯ : ತುರೀಯ ವಿಶ್ವದೊಡನೆ ಮಧ್ಯಮಾ ತುರೀಯ ತೈಜಸದೊಡನೆ ಕೂಡುತ್ತದೆ. ಏವಂ ಪಶ್ಯತಿ ತುರೀಯ ಪ್ರಾಜ್ಞದೊಡನೆ ಮತ್ತು ಪರಾತುರೀಯ ತುರೀಯದೊಡನೆ ಕೂಡುತ್ತದೆ.

ಜಾಗೃತ ಅವಸ್ಥೆಯ ನಾಲ್ಕು ಮಾತ್ರೆಗಳು ಪ್ರಣವದ 'ಅ' ಕಾರದೊಡನೆ ಒಂದಾಗಿ ಹೋಗುತ್ತವೆ. ಸ್ವಪ್ನಾವಸ್ಥೆಯ ನಾಲ್ಕು ಮಾತ್ರೆಗಳು ಪ್ರಣವದ ದ್ವಿತೀಯ 'ಉ' ಕಾರದೊಡನೆ ಒಂದಾಗಿ ಹೋಗುತ್ತವೆ. ಸುಷುಪ್ತಿ ಅವಸ್ಥೆಯ ನಾಲ್ಕು ಮಾತ್ರೆಗಳು 'ಮ' ಕಾರದೊಡನೆ ಒಂದಾಗಿ ಹೋಗುತ್ತವೆ. ತುರೀಯ ಅವಸ್ಥೆಯ ನಾಲ್ಕು ಮಾತ್ರೆಗಳು ಅರ್ಧ ಮಾತ್ರೆಯೊಡನೆ ಒಂದಾಗಿ ಹೋಗುತ್ತವೆ.

ಯೋಗಿಯು ಎಲ್ಲಿಯ ವರೆಗೆ ಯೋಗಾಸನದಲ್ಲಿ ಕುಳಿತು ಸರ್ವಪ್ರಪಂಚ ವಂಚಿತ ಆಗುವದಿಲ್ಲವೋ ಅಲ್ಲಿಯ ವರೆಗೆ ಅವನಿಗೆ ಆತ್ಮಾನಂದಾನುಭವ ಆಗುವದಿಲ್ಲ. ಮನಸು ಆತ್ಮನಲ್ಲಿ ಕೂಡಿದಾಗ ಆನಂದಾನುಭವ ಆಗುತ್ತದೆ. ಮತ್ತು ಮನವು ಸ್ಥಿರವಾಗುತ್ತದೆ. ಈ ಅವಸ್ಥೆಗೂ 'ಖೇಚರೀ' ಅನ್ನುತ್ತಾರೆ. ಈ ಪ್ರಕ್ರಿಯೆಯಿಂದಲೂ ಮನವು ವಶವಾಗುತ್ತದೆ. ಮನದ ಸ್ಥಿರತೆಯ ಮೇಲೆಯೇ ಪ್ರಾಣದ ಸ್ಥಿರತೆಯು ಅವಲಂಬಿಸಿದೆ. ಈ ಅಭ್ಯಾಸದಿಂದ 'ತಾರಾಜ್ಯೋತಿ'ಯ ದರ್ಶನವಾಗುತ್ತದೆ. ಇದೇ ಬಿಂದು ಅನುಭವವೆಂದೂ ಹೇಳುತ್ತಾರೆ. ಇದರ ತರುವಾಯ ವಜ್ರದರ್ಪಣ ಅನ್ನುಭವವಾಗುತ್ತದೆ. ಇದಕ್ಕೆ ಕಲೆಯ ಅನುಭೂತಿಯೆನ್ನುತ್ತಾರೆ.

ಇದರ ತರುವಾಯ ನವಜ್ಯೋತಿರ್ಮಯ ರತ್ನದ ಅನುಭವವಾಗುತ್ತದೆ. ಅದರ ತರುವಾಯ ಚಂದ್ರಮನ ಹೊಳೆಯುವ ಜ್ಯೋತಿದರ್ಶನ ಮತ್ತು ತೇಜೋಯುಕ್ತ ಅಗ್ನಿದರ್ಶನವಾಗುತ್ತದೆ. ಅನಂತರ ಕ್ರಮಶಃ ಧೂಮ, ತಾರಾ, ನಾದ, ಕಲಾ ಮತ್ತು ಮಿಂಚು ಹುಳ (ಖದ್ಯೋತ)ದಂತೆ ; ಪ್ರಕಾಶ, ಲಾಟನ, ಚಮಕಮಯ ಸುವರ್ಣ ಹಾಗೂ ನವರತ್ನಗಳಂತೆ ಪ್ರಕಾಶಾನುಭವವಾಗುತ್ತದೆ. ಇದೇ ಪ್ರಣವ ಜಪ ಮತ್ತು ಧ್ಯಾನದ ಅನುಭವವು.

ಶಾರೀರಿಕ ಹಾಗೂ ಮಾನಸಿಕ ವಿಘ್ನಗಳ ಹೊರತು ಯೋಗದಲ್ಲಿ ಮತ್ತೂ ವಿಘ್ನಗಳು ಒದಗುತ್ತವೆ. ಹೇಗೆಂದರೆ -ಸ್ತಬ್ಧೀಭಾವ;ರಸಾಸ್ವಾದ; ಲಯ, ವಿಕ್ಷೇಪ ಇತ್ಯಾದಿಕ ಸಮಾಧಿಯ ವಿಘ್ನಗಳು.

ಮನವು ಸಮಾಧಿಕಾಲದಲ್ಲಿ ನತೀ ಧ್ಯೇಯದ ಕಡೆಗೆ ಭೋಗ್ಯ ಪದಾರ್ಥವನ್ನು ಹಿಡಿಯುವದಿಲ್ಲ. ಅದೇ ಸ್ತಬ್ಧಿಭಾವವೆಂದು ಹೇಳುತ್ತಾರೆ. ಈ ಅವಸ್ಥೆಯಲ್ಲಿ ಸತ್ಯ ಪದಾರ್ಥದಲ್ಲಿ ಮನವನ್ನು ಹಚ್ಚತಕ್ಕದ್ದು. ಹೀಗೆ ಈ ವಿಘ್ನಗಳನ್ನು ದೂರಮಾಡತಕ್ಕದ್ದು. ಸುಖಾಸನದಲ್ಲಿ ಕುಳಿತು ; ಮನಸಿನ ಚಂಚಲತೆಯನ್ನು ಬಿಟ್ಟಾಗ ಒಂದು ಬಗೆಯ ಆನಂದಾನುಭವವಾಗುತ್ತದೆ. ಇದೇ 'ರಸಾಸ್ವಾದ'ವೆಂದು ಹೇಳುತ್ತಾರೆ. ಯೋಗಿಯು ಈ ಆನಂದಕ್ಕೆ ಯಥಾರ್ಥ ಸುಖವೆಂದು ತಿಳಿಯುವದಿಲ್ಲ. ಯಾಕಂದರೆ ಈ ಅವಸ್ಥೆಯಲ್ಲಿ ಲಕ್ಷ್ಯದ ಮೇಲೆ ಮನವು ನಿಲ್ಲದ್ದರಿಂದ ಅಂತರಭೂತ ವಾಸನೆಯನ್ನು ಎಚ್ಚರಿಸುವ ಸಂಭಾವನೆ ಆಗುತ್ತದೆ. ಇದರಲ್ಲಿಯೂ ಯೋಗಿಯು ರಮಿಸುವುದಿಲ್ಲ. ಯಾವಾಗ ನಿದ್ರೆಯು ಕಾಡುವದೋ ಆಗ ಅದನ್ನು ದೂರಮಾಡಿ ಯೋಗಿಯು ಯೋಗಾರೂಢನಾಗತಕ್ಕದ್ದು. ವಿಕ್ಷೇಪಮಯ ಮನವನ್ನು ತಡೆಯತಕ್ಕದ್ದು. ಯಾಕಂದರೆ ವಿಷಯಗಳು ನಶ್ವರವಿರುತ್ತವೆ ಮತ್ತು ದುಃಖದಾಯಕವಿರುತ್ತವೆ. ಈ ವಿಚಾರದಿಂದ ವಿಷಯಗಳಿಂದ ಮನವನ್ನು ವಿರಕ್ತಮಾಡತಕ್ಕದ್ದು. ಮನವು ತತ್ತ್ವ ಚಿಂತನೆಯನ್ನು ಬಿಟ್ಟು ಸುಮ್ಮನಾದರೆ ಅದು ಸಹ ಸಮಾಧಿ ಅವಸ್ಥೆಯಲ್ಲ. ಸಮಾಧಿಯಲ್ಲಿ ಮನವು ಯಾವಾಗ ಬ್ರಹ್ಮದೊಡನೆ ಒಂದೇ ಆಗಿ ಹೋಗುತ್ತದೆ, ಅದೇ ಸಮಾವಸ್ಥೆ ಇರುತ್ತದೆ. ಅದಕ್ಕೆ ವಿಘ್ನವೆಂದು ತಿಳಿದು ವಿಚಲಿತ ಆಗತಕ್ಕದ್ದಲ್ಲ. ಅದರಲ್ಲಿಯೇ ನಿಮಗ್ನ ಇರುವದೇ ಸಮಾಧಿಸ್ಥಿತಿಯು.

**ಯೋಗ ಪಥ್ಯಾಪಥ್ಯ - ವಿಚಾರ:**

ಯೋಗಪಥದಲ್ಲಿ, ಯೋಗಿಯು ಹಗುರಾದ ಆಹಾರವನ್ನು ತೆಗೆದುಕೊಳ್ಳಬೇಕಾಗುವದು. ಅರ್ಧ ಹೊಟ್ಟೆಯು ಆಹಾರದಿಂದ ಒಂದು ಭಾಗ (೧/೪ ಭಾಗ) ನೀರಿಗೋಸುಗ ಮತ್ತು ಒಂದು ಭಾಗ (೧/೪ ಭಾಗ)ವು ಶ್ವಾಸ-ಪ್ರಶ್ವಾಸನಗಳಿಗೋಸುಗ ಖಾಲಿ ಇರತಕ್ಕದ್ದು.

ಪ್ರಥಮಾವಸ್ಥೆಯಲ್ಲಿ ತುಪ್ಪ ಮತ್ತು ಹಾಲು ತೆಗೆದುಕೊಳ್ಳುವದು ಯೋಗ್ಯವು. ಶರೀರ ಸುಸ್ಥಿತಿಯಲ್ಲಿದ್ದರು ಸಹಕಾರ, ಸೀ, ಉಪ್ಪು ಮೊದಲಾದ ಪದಾರ್ಥಗಳನ್ನು ಯೋಗಿಯು ತಿನ್ನಕೂಡದು. ಯಾವ ಪದಾರ್ಥದಿಂದ ಆರೋಗ್ಯವೂ, ಬಲವೂ ವೃದ್ಧಿಯಾಗುವವೋ ಅಂತಹ ಭೋಜನವನ್ನು ಮಾಡುವದು ಸರಿಯಾದುದು. ಪ್ರಾಣಾಯಾಮ ಶಕ್ತಿಯಿಂದ ಎಲ್ಲ ಪದಾರ್ಥಗಳು ಪಚನವಾದರು ಸಹ ಸುಚಾರು ಪದಾರ್ಥಗಳಿಂದ ಹೊಟ್ಟೆಯನ್ನು ತುಂಬತಕ್ಕದ್ದು.

ಕೇವಲ ಸತ್ತು (ಹುರಿದ ಕಡ್ಲಿ ಮೊದಲಾದವುಗಳ ಹಿಟ್ಟು) ತಿಂದರೂ ಯೋಗಿಯ ಬಲವು ಬೆಳೆದರೂ ತುಪ್ಪ-ಬೆಣ್ಣೆ ದೊರೆಯದಿದ್ದರೂ ಅಡ್ಡಿಯಿಲ್ಲ. ಮಸ್ತಿಷ್ಕ ಶಕ್ತಿ ಮಾತ್ರ ಬಲಹೀನವಾಗತಕ್ಕದ್ದಲ್ಲ. ಯೋಗಿಗೆ ಒಂದು ಊಟವು ಪ್ರಾಯಃ ಪಥ್ಯಕಾರಿಯು, 'ಕಪಾಲಿ' ಆಸನದಲ್ಲಿಯೂ ಸ್ವಾಭಾವಿಕ ಭೋಜನದಿಂದ ಸಹ ಯೋಗಿಯು ಹೆಚ್ಚು ಊಟವನ್ನು ಮಾಡತಕ್ಕದ್ದು. ಯಾಕಂದರೆ ಇದರಿಂದ ಹಸಿವೆಯು ತೀವ್ರವಾಗುತ್ತದೆ.

ಯೋಗಿಗೋಸುಗ ಯಾರೂ ನಿರ್ದಿಷ್ಟ ಭೋಜನದ ಅಳತೆಯನ್ನು ಗೊತ್ತುಪಡಿಸಿಲ್ಲ. ಶರೀರಕ್ಕೆ ಅವಶ್ಯವಿದ್ದಷ್ಟು ಭೋಜನವನ್ನು ಮಾಡತಕ್ಕದ್ದು.

ಯೋಗಾಭ್ಯಾಸಿಗೆ ಮದ್ಯ-ಮಾಂಸಾದಿಕ, ರಾಜಸ, ತಾಮಸ ಪದಾರ್ಥಗಳು ಅಭಕ್ಷ್ಯವಾಗಿರುತ್ತವೆ. ಇವುಗಳಿಂದ ಹಾಗೂ ಹೆಚ್ಚಿಗೆ ಗರಿಷ್ಠ ಭೋಜನದಿಂದ ಶರೀರಕ್ಕೆ ಉದ್ವೇಗವಾಗುತ್ತದೆ. ಇದರಿಂದ ಯೋಗದಲ್ಲಿ ವಿಘ್ನಬಾಧೆಗಳಾಗುತ್ತವೆ.

### ಅರಿಷ್ಟ -ಜ್ಞಾನ

ಮೃತ್ಯುವಿನ ಮೊದಲು ಮೃತ್ಯು ಸೂಚಕ ಘಟನೆಗಳು ಕೆಲವು ಕಂಡುಬರುತ್ತವೆ. ಇವುಗಳಿಂದ ಯೋಗಿಯು ಮೊದಲೇ ಅದನ್ನು ತಿಳಿಯಬಲ್ಲನು. ತನ್ನ ಮುಖವು ಕನ್ನಡಿಯಲ್ಲಿ ಕಂಡುಬರುವುದಿಲ್ಲ. ಆಕಾಶದಲ್ಲಿ ಎರಡು ಚಂದ್ರಗಳು ಕಾಣುವವು. ತನ್ನ ನೆರಳಿನಲ್ಲಿ ಛಿದ್ರಗಳು ತೋರುವವು. ಕಿವಿಗಳಲ್ಲಿ 'ಅನಹದ' ಶಬ್ದ ಕೇಳುವದಿಲ್ಲ. ಗಿಡಗಳ ಹಸಿರು ಎಲೆಗಳಲ್ಲಿ ಬಂಗಾರದಂತೆ ಹೊಳಪು ಕಾಣುತ್ತದೆ. ತನ್ನ ಪಾದಗಳನ್ನು ಕಾಣುವದಿಲ್ಲ. ಸತ್ತವರೊಡನೆ ಸ್ವಪ್ನದಲ್ಲಿ ಆಲಿಂಗನವು, ಸ್ವಪ್ನದಲ್ಲಿ ತಾವು ಕತ್ತೆಯ ಮೇಲೆ ಕುಳಿತಿರುವದನ್ನು ಕಾಣುವದು, ತಾನು ಬತ್ತಲೆಯಾಗಿರುವುದನ್ನು ನೋಡುವದು, ಇತ್ಯಾದಿಗಳು ಯಾವನೋ ಕೃಪಣನನ್ನು 'ದಾತಾ' ಆಗುವದನ್ನು ಹಾಗೂ ದಾತಾನನ್ನು ಕೃಪಣನಾಗಿ ಕಾಣುವದು, ಇವೂ ಮೃತ್ಯುವಿನ ಲಕ್ಷಣಗಳಾಗಿವೆ. ಕಾರಣವಿಲ್ಲದೆ ಆಕಸ್ಮಾತ್ ಶರೀರವು ಉಬ್ಬುವದು. ಆರು ತಿಂಗಳಲ್ಲಿ ಮೃತ್ಯುವು ಒದಗುವದು ಎಂದು ತಿಳಿಯತಕ್ಕದ್ದು.

ದೀಪವು ಆರುವದರಿಂದ ತೈಲಮಯ ಗಂಧವು ಬರದಿರುವದು ಹಾಗೂ ಚಂದ್ರ ಸೂರ್ಯರಿಗೆ ಜಾಳಿಗೆಯಿಂದ ಸುತ್ತಿರುವದನ್ನು ಕಾಣುವದು, ಮೃತ್ಯುವು ಸಮೀಪವೆಂದು ತಿಳಿಯತಕ್ಕದ್ದು. ಕೈಕಾಲುಗಳ ಅಂಗುಷ್ಟಗಳು ಯಾವನಿಗೆ ಸ್ಫುರಿಸುವದಿಲ್ಲ, ಅವನಿಗೆ ಮೃತ್ಯುವು ಒಂದು ವರ್ಷದಲ್ಲಿ ಆಗುವದು. ಮಣಿಬಂಧದಲ್ಲಿ ಯಾವನಿಗೆ ಸ್ಫುರಣವಾಗುವದಿಲ್ಲ, ಅವನ ಶೇಷಾಯುಷ್ಯವು ಆರು ತಿಂಗಳೆಂದು ತಿಳಿಯತಕ್ಕದ್ದು. 'ಭ್ರೂ'ದಲ್ಲಿ ಸ್ಫುರಣ ಆಗುವದರಿಂದ ಮೂರು ತಿಂಗಳಲ್ಲಿ ಮೃತ್ತುವೆಂದು ತಿಳಿಯಬೇಕು. ಖದ್ಯೋತದಂತೆ ಜ್ಯೋತಿಯನ್ನು ನೋಡುವದರಿಂದ ಐದು ದಿನಗಳಲ್ಲಿ ಮರಣವು. ಬಾಯಿಯಿಂದ ನಾಲಗೆಯನ್ನು ಹೊರತೆಗೆದು ನೋಡಲು ಒಂದು ವೇಳೆ ಅದರ ಮುಂಭಾಗವು ತೋರದಿದ್ದರೆ ಮೂರು ದಿನಗಳಲ್ಲಿ ಮೃತ್ಯುವೆಂದು ತಿಳಿಯತಕ್ಕದ್ದು. ಪ್ರಜ್ವಲಿತ ಅಗ್ನಿಯ ೨ ಆಕಾರ ತೋರಿದರೆ ಆಯುಸ್ಸು ಎರಡು ದಿನವೆಂದು ತಿಳಿಯಬೇಕು. ಈ ಎಲ್ಲ ಚಿಹ್ನಗಳನ್ನು ಕಂಡು ಯೋಗಿ ಜಪ-ಧ್ಯಾನಗಳಲ್ಲಿ ತೊಡಗಬೇಕು. ಭಗವಂತನ ನಾಮ, ಜಪ, ಧ್ಯಾನ ಮಾಡುತ್ತಾ ಶರೀರವನ್ನು ಬಿಡಬೇಕು. ಇದೇ ಶರೀರ ಪ್ರಾಣ, ಇಂದ್ರಿಯಧಾರಣಗಳ ಫಲವು.

### ಯೋಗದ -ಫಲ

ಎಡ ಪಾದದ ಹಿಮ್ಮಡದಿಂದ ಯೋನಿಸ್ಥಾನವನ್ನು ಒತ್ತಿ ಬಲಗಾಲನ್ನು ನೆಲದ ಮೇಲೆ ಸೀದಾ ಇಡತಕ್ಕದ್ದು ಮತ್ತು ಎರಡೂ ಕೈಗಳಿಂದ ಬಲಪಾದದ ಉಂಗುಷ್ಟವನ್ನು ಹಿಡಿಯಬೇಕು. ಆಗ ಮೂಗಿನ ಎರಡೂ ಹೊರಳಿಗಳಿಂದ ವಾಯುವನ್ನು ಹೊಟ್ಟೆಯಲ್ಲಿ ತುಂಬಿ, ಕುತ್ತಿಗೆಯ 'ಘಾಂಟಿ'ನ್ನು ಜಾಲಂಧರ ಬಂಧದಿಂದ ಒಳಗೆ ಜಗ್ಗಿಕೊಳ್ಳಬೇಕು. ಇದರಿಂದ ವಾಯುವು ಒಳಗೆ ಬದ್ಧಿತವಾಗುತ್ತದೆ. ಮತ್ತು ಎಲ್ಲ ಕಷ್ಟಗಳು ದೂರವಾಗಿ ಹೋಗುತ್ತವೆ.

ಈ ಪ್ರಕ್ರಿಯೆಯಿಂದ ವಿಷವು ಸಹ ಅಮೃತದಂತೆ ಪಚನವಾಗುತ್ತದೆ. ಯಕ್ಷ್ಮಾ, ಪ್ಲೀಹಾ, ಅರ್ಶ ಮತ್ತು ಚರ್ಮರೋಗಗಳು ಸಹ ಇದರಿಂದ ದೂರವಾಗುತ್ತವೆ. ಹೊರಗಿನಿಂದ ಪ್ರಾಣವಾಯುವನ್ನು ಜಗ್ಗಿ ಹೊಟ್ಟೆಯಲ್ಲಿ, ನಾಭಿಯಲ್ಲಿ ಮತ್ತು ಮೂಗಿನ ತುದಿಯಲ್ಲಿ ಹಾಗೂ ಕಾಲ ಉಂಗುಷ್ಠದಲ್ಲಿ ಧಾರಣ ಮಾಡುವುದರಿಂದ ಸರ್ವರೋಗಗಳು ನಷ್ಟವಾಗುತ್ತವೆ. ನಾಸಾಗ್ರ ಪ್ರಾಣಧಾರಣದಿಂದ ಪ್ರಾಣವು ವಶದಲ್ಲಿ ಬರುತ್ತದೆ. ನಾಭಿಯಲ್ಲಿ ಪ್ರಾಣ ಧಾರಣದಿಂದ ರೋಗನಾಶ, ಪಾದಾಂಗುಷ್ಠ ಧಾರಣದಿಂದ ಆಕಾಶದಲ್ಲಿ ಹಾರಾಡುವ ಶಕ್ತಿಯುಂಟಾಗುತ್ತದೆ. ಮುಂಜಾವು ಸಂಜೆ ನಾಲಗೆಯಿಂದ ಪ್ರಾಣವಾಯುವನ್ನು ತಡೆಯುವದರಿಂದ (ಶೀತಲೀ ಕ್ರಿಯಾ) ಮೂರು ತಿಂಗಳಲ್ಲಿ ವಾಕ್‌ಸಿದ್ಧಿಯಾಗುತ್ತದೆ. ಆರು ತಿಂಗಳಲ್ಲಿ ಸರ್ವರೋಗ ನಾಶ, ನಾಸಾಗ್ರದಿಂದ ನೂರು ವರ್ಷಗಳ ವರೆಗಿನ ಪಾಪವು ಶೀಘ್ರವಾಗಿ ನಷ್ಟವಾಗುತ್ತವೆ. ಪ್ರಣವದಲ್ಲಿ ಸಂಯಮ (ಧ್ಯಾನ-ಧಾರಣ-ಸಮಾಧಿ) ಮಾಡುವುದರಿಂದ ಯೋಗಿಯು ಸರ್ವಜ್ಞನಾಗುತ್ತಾನೆ. ನಾಸಾಗ್ರ ಸಂಯಮದಿಂದ ಇಂದ್ರಲೋಕದ ಜ್ಞಾನ, ಶರೀರದ ಕೆಳಭಾಗದಲ್ಲಿ ಸಂಯಮದಿಂದ ಅಗ್ನಿಲೋಕದ ಜ್ಞಾನ, ಕಣ್ಣಿನಲ್ಲಿ ಸಂಯಮನದಿಂದ ಸರ್ವಲೋಕ ಜ್ಞಾನ, ಕಿವಿಯಲ್ಲಿ ಸಂಯಮನದಿಂದ ಯಮಲೋಕದ ಜ್ಞಾನವಾಗುತ್ತದೆ.

ಕಿವಿಯ ಸಮೀಪ ಸಂಯಮನದಿಂದ 'ನೈರುತಿ' ಲೋಕದ ಜ್ಞಾನ; ಪೃಷ್ಟದಲ್ಲಿ ವರುಣಲೋಕದ, ಎಡಗಿವಿಯಲ್ಲಿ ಪ್ರಾಣವಾಯುವನ್ನು ನಿರೋಧಿಸುವದರಿಂದ ವಾಯುಲೋಕದ, ಕಂಠದಲ್ಲಿ ಚಂದ್ರಲೋಕದ, ಎಡಕಣ್ಣಲ್ಲಿ ಶಿವಲೋಕದ ಹಾಗೂ ಬ್ರಹ್ಮರಂಧ್ರದಲ್ಲಿ ಸಂಯಮನದಿಂದ ಬ್ರಹ್ಮಲೋಕದ ಜ್ಞಾನವು ಯೋಗಿಗೆ ಆಗುತ್ತದೆ.

ಪಾದ ತಲದಲ್ಲಿ ಅತಲಲೋಕದ, ಪಾದಪೃಷ್ಠದಲ್ಲಿ ವಿತಲದ, ತೊಡೆಯಲ್ಲಿ ಸುತಲಲೋಕದ ಜ್ಞಾನವಾಗುತ್ತದೆ. ಮೊಣಕಾಲಿನಿಂದ ಮಹಾತಲದ, ಎದೆಯಲ್ಲಿ ರಸತಾಲದ ಜ್ಞಾನವಾಗುತ್ತದೆ. ಟೊಂಕದಲ್ಲಿ ಸಂಯಮನದಿಂದ ತಲಾತಲದ, ನಾಭಿಯಲ್ಲಿ ಸಂಯಮನ ಮಾಡುವದರಿಂದ ಪ್ರಾಣವಾಯುವಿನಿಂದ ಪೃಥ್ವೀಲೋಕದ ಜ್ಞಾನ, ಹೊಟ್ಟೆಯಲ್ಲಿ ಭುವರ್ಲೋಕದ, ಹೃದಯದಲ್ಲಿ ಸಂಯಮನದಿಂದ ಸ್ವರ್ಗಲೋಕದ ಜ್ಞಾನವಾಗುತ್ತದೆ.

ಹೃದಯದ ಮೇಲ್ಭಾಗದಿಂದ ಮಹರ್ಲೋಕದ, ಕಂಠದಿಂದ ಜನಲೋಕದ, ಭ್ರೂಮಧ್ಯದಿಂದ ತಪ ಲೋಕದ, ಮಸ್ತಿಷ್ಕದಲ್ಲಿ ಸಂಯಮನ ಮಾಡುವದರಿಂದ ಸತ್ಯಲೋಕದ ಜ್ಞಾನವಾಗುತ್ತದೆ. ಧರ್ಮಾಧರ್ಮದ ಸಂಯಮನದಿಂದ ಭೂತ-ಭವಿಷ್ಯತ್ತುಗಳ ಜ್ಞಾನವಾಗುತ್ತದೆ. ಯಾವುದಾದರು ಜಾತಿಯ ಜೀವದ ಶಬ್ದದಲ್ಲಿ ಸಂಯಮನ ಮಾಡುವದರಿಂದ ಅದರ ಭಾವದ ಜ್ಞಾನವಾಗುತ್ತದೆ.

ಸಂಚಿತ ಕರ್ಮಗಳ ಮೇಲೆ ಸಂಯಮನದಿಂದ ಹಿಂದಿನ ಮತ್ತು ಮುಂದಿನ ಜೀವನವು ತಿಳಿಯುವುದು. ಮನುಷ್ಯನ ಮೇಲೆ ಸಂಯಮನದಿಂದ ಅವನ ಮನಸಿನ ಸ್ಥಿತಿಯು ತಿಳಿಯುತ್ತದೆ. ತನ್ನ ಶರೀರದ ಮೇಲೆ ಸಂಯಮನದಿಂದ ಎಲ್ಲರಿಂದ ಅದೃಶ್ಯನಾಗುತ್ತಾನೆ.

ಶಾರೀರಿಕ ಬಲದ ಮೇಲೆ ಸಂಯಮನದಿಂದ ಹನುಮಂತನಂತೆ ಬಲವು ಯೋಗಿಗೆ ಪ್ರಾಪ್ತವಾಗುತ್ತದೆ. ಸೂರ್ಯ ಸಂಯಮನದಿಂದ ಜಗತ್ತಿನ ಜ್ಞಾನ, ಚಂದ್ರನಲ್ಲಿ ತಾರಾವ್ಯೂಹದ ಜ್ಞಾನವು, ಧ್ರುವದಲ್ಲಿ ಸಂಯಮನದಿಂದ ಸೂಕ್ಷ್ಮ ಸಂಚರಣ ಜ್ಞಾನವಾಗುತ್ತದೆ. ನಾಭಿಚಕ್ರದ ಸಂಯಮನದಿಂದ ಕಾಯವ್ಯೂಹ(ಯೋಗಿಯ ನಿರ್ಮಿತ ಶರೀರ)ದ ಜ್ಞಾನವಾಗುತ್ತದೆ. ಕಂಠ ಛಿದ್ರದಲ್ಲಿ ಪ್ರಾಣವಾಯುವಿನ ಸ್ಥಿರೀಕರಣದಿಂದ ಕ್ಷುಧಾ-ತೃಷೆಗಳ ಅಪಾಯವಾಗುತ್ತದೆ. ಪ್ರಾಣವಾದಿಕ ಮಂತ್ರದಲ್ಲಿ ಸಂಯಮನದಿಂದ ಸಿದ್ಧಿ ಹಾಗೂ ಸಿದ್ಧಪುರುಷರ ದರ್ಶವಾಗುತ್ತದೆ. ಕಾಯವ್ಯೂಹದ ಸಂಯಮನದಿಂದ ಆಕಾಶದಲ್ಲಿ ಹಾರಾಡುವ ಶಕ್ತಿಯ ಪ್ರಾಪ್ತಿಯಾಗುತ್ತದೆ.

ಉಪರೋಕ್ತ ಸಂಪೂರ್ಣ ಸಿದ್ಧಿಗಳು ಯೋಗಿಗೆ ತ್ಯಾಜ್ಯವಿರುತ್ತವೆ. ಯಾಕಂದರೆ ಸಿದ್ಧಿಗಳು ಮುಂದಿನ ಯೋಗಮಾರ್ಗದಲ್ಲಿ ಬಂಧಕವಾಗುತ್ತವೆ.

ಸ್ವಪ್ನ-ದೃಷ್ಟ-ಸದೃಶ ಲೋಕ ಲೋಕಾಂತರ ನೋಡಿ ಯಾವ ಲಾಭವೂ ಇಲ್ಲವೆಂದು ತಿಳಿಯತಕ್ಕದ್ದು. ಯಾಕಂದರೆ ಈ ಸಿದ್ಧಿಗಳು ವ್ಯುತ್ಥಾನ ಕಾಲದಲ್ಲಿ ಯೋಗಿಗೆ ಕಷ್ಟ ಕೊಡುತ್ತವೆ. ಹಾಗೂ ಮೂರ್ಖಜನರೇ ಸಿದ್ಧಿಸುಖದಿಂದ ಯೋಗಕ್ರಿಯೆ ಮತ್ತು ಯೋಗಸುಖ ಸುಖಕ್ಕೆ ವಂಚಿತರಾಗುತ್ತಾರೆ. ಮರೆತು ಸಹ ಯೋಗಿಯು ಸಿದ್ಧಿಯನ್ನು ಪರೀಕ್ಷಿಸತಕ್ಕದ್ದಲ್ಲ. ಮೂರ್ಖರು ಸಹ ಮಂತ್ರೌಷಧಿಬಲದಿಂದ ಸಿದ್ಧಿಯನ್ನು ಪಡೆಯುತ್ತಾರೆ.

ಸತ್ಯಾನ್ವೇಷಿಯಾದ ಯೋಗಿಯಂತೂ ಇಂತಹ ಕ್ರಿಯೆಗಳಿಂದ ಉದಾಸೀನವಾಗಿಯೇ ಇರತಕ್ಕದ್ದು. ಸತ್ಯವನ್ನು ಕಂಡು ಹಿಡಿಯುವವನು ಮಾಯಿಕವು ಲುಪ್ತನಾಗುವದಿಲ್ಲ. ಅವನ ಪರಿಚಯದಲ್ಲಿ ಆತ್ಮವೇ ಸತ್ಯವು. ಬೇರೆ ಎಲ್ಲವೂ ಮಾಯಿಕವೂ. ಮೂಢರಿಗೆ ದ್ರವ್ಯಾದಿ ಸಿದ್ಧಿಗಳು ಮುಕ್ತಿಸಂಪಾದನೆಯನ್ನು ಮಾಡಗೊಡುವುದಿಲ್ಲ. ಸಂಪೂರ್ಣ ವಾಸನೆಗಳ ನಾಶಕ್ಕೆ 'ಮುಕ್ತಿ' ಎನ್ನುತ್ತಾರೆ. ಆ ವಾಸನೆಗಳು ಮನದ ಅಧೀನವಿರುತ್ತವೆ. ಮನಸಿನ ನಾಶವು ಯೋಗ ಕ್ರಿಯೆಗಳಿಂದ ಆಗುತ್ತದೆ. ಮತ್ತು ಅದೇ ಮುಕ್ತಿಯು. ಇದರ ಪೂರ್ಣಶೋಧವನ್ನು ಅನ್ನಪೂರ್ಣೋಪನಿಷತ್ ಹಾಗೂ ವಾರಾಹೋಪನಿಷತ್‌ಗಳಿಂದ ಮಾಡಿಕೊಳ್ಳಬೇಕು.

ಅಜ್ಞಜನರಿಗೆ ಮಹಾಕಾಶ ಮತ್ತು ಘಟಾನುಕಾಶಗಳು ಭಿನ್ನವಾಗಿ ತೋರುವಂತೆ ಜೀವ -ಈಶ್ವರರಿಗೆ ಅವರು ಭಿನ್ನವೆಂದು ತಿಳಿಯುತ್ತಾರೆ. ವಾಸ್ತವವಾಗಿ ಮಹಾಕಾಶದಂತೆ ಈಶ್ವರನು ವ್ಯಾಪಕನಿರುವಂತೆಯೇ ಉಪಾಧಿಗತ ಘಟಾಕಾಶ ಮತ್ತು ಜೀವದಲ್ಲಿಯೂ ಭೇದವನ್ನು ತಿಳಿಯತಕ್ಕದ್ದಲ್ಲ. ಯೋಗಿಯು ಯಾವಾಗಲೂ ಈ ಇಚ್ಛೆಯನ್ನು ಇಡತಕ್ಕದ್ದು ಪರಮ ಆವಶ್ಯಕವಿರುತ್ತದೆ. 'ನಾನು ಶರೀರ, ಮನಸು, ಬುದ್ಧಿ, ಪ್ರಾಣ ಹಾಗೂ ಇಂದ್ರಿಯಗಳಿಂದ ಭಿನ್ನವಾಗಿರುತ್ತೇನೆ. ನಾನೇ ಶಿವನಿದ್ದೇನೆ.

ಯಾವನಿಗೆ ಇಂತಹ ದೃಢತೆಯು ಆಗಿರುತ್ತದೆಯೋ ಅವನೇ ಸಮಾಧಿ ಮಾನಯೋಗಿಯಾಗಿರುತ್ತಾನೆ. ಸಮಾಧಿಯಲ್ಲಿ ನಿಮಗ್ನವಾಗಿ ಅವನು ತನ್ನನ್ನು ಬ್ರಹ್ಮವೆಂದೇ ತಿಳಿಯುತ್ತಾನೆ. ಅವನು ತನ್ನನ್ನು ಸಂಸಾರಿಜೀವವೆಂದು ಒಪ್ಪುವದಿಲ್ಲ. ಇಂತಹ ಯೋಗಿಯು ಜಲ ಮತ್ತು ಜಲದ ತರಂಗಗಳಂತೆ ತನ್ನನ್ನು ತಿಳಿಯುತ್ತಾನೆ. ಹಾಗೆಯೇ ಜಲದಲ್ಲಿ ಜಲದಿಂದ ಎದ್ದ ಬುದ್ಬುದಗಳಿಂದ ಸಹ ಜಲ ಮತ್ತು ಬುದ್ಬುದಗಳು ಅಭಿನ್ನವಾಗಿರುತ್ತವೆ. ಈಶ್ವರೀ ಸತ್ತೆಯಿಂದ ಜೀವಸತ್ತೆಯು ಭಿನ್ನವಿಲ್ಲ- ಈ ಪ್ರಕಾರ ದೃಢ ವಿಶ್ವಾಸ ಮಾಡಿಕೊಳ್ಳುತ್ತಾನೆ.

ಬುದ್ಬುದ ಮತ್ತು ತರಂಗಗಳು ಜಲದಿಂದ ಹುಟ್ಟಿ ಪುನಃ ಜಲದಲ್ಲಿಯೇ ಲೀನವಾಗುತ್ತವೆ. ಹಾಗೆಯೇ ನೀರಿನಂತೆ ಅಭಿನ್ನ ತರಂಗಾದಿಕಗಳು ಜಲದಿಂದ ಭಿನ್ನವು ಹೇಗೆ ಅಲ್ಲವೋ ಅದರಂತೆಯೇ ಈಶ್ವರ ಸತ್ತೆಯಿಂದ ಭಿನ್ನವಾಗಿ ತೋರುವ ಈ ಜೀವಗಳು ಅನೇಕ ವಿಧವಾಗಿದ್ದರೂ ಈಶ್ವರನಿಂದ ಭಿನ್ನವಲ್ಲ.

ಈ ಪ್ರಕಾರ ದೃಢ ಅಪರೋಕ್ಷ ಸಾಕ್ಷಾತ್ಕಾರದಿಂದಲೇ ಯೋಗಿಯು ಸಂಸಾರಕ್ಕೆ ತನ್ನಿಂದಲೇ ಹುಟ್ಟುವ ಹಾಗೂ ತನ್ನಲ್ಲಿಯೇ ಲೀನವಾಗುವವೆಂದು ತಿಳಿಯುತ್ತಾನೆ. ಸಮಾಧಿಯಲ್ಲಿ ಹಾಗೂ ಅನ್ಯ ಸಮಯದಲ್ಲಿಯೂ ಈ ಸ್ವಾತ್ಮಾನುಭೂತಿಯು ಆಗುತ್ತಲೆ. ಕೈವಲ್ಯ(ಮುಕ್ತಿ)ವಾಗುತ್ತದೆ.

ಮುಕ್ತಪುರುಷನೇ ಬೇರೆ ಮುಕ್ತಿಭಾಗಿಗಳು ಗುರುತಿಸುತ್ತಾನೆ. ಯಾವ ಇಚ್ಛೆಯನ್ನು ಮಾಡದೆ ಮನವು ಯಾವಾಗಲೂ ಶಾಂತ ಇರುವದು, ಇದೇ ಮುಕ್ತಪುರುಷರಿಗೆ ಸ್ವ-ಸಂವೇದ್ಯವಿರುತ್ತದೆ.ಸುಖ-ದುಃಖಾದಿಗಳಲ್ಲಿ ಸಮಾನಭಾವ, ರಾಗದ್ವೇಷಗಳಿಂದ ವಿಚಲಿತ ಆಗದಿರುವದು, ನಿರ್ಲೋಭತಾ ಮೊದಲಾದವುಗಳು ಯೋಗಿಯ ಬಾಹ್ಯಲಕ್ಷಣಗಳಿರುತ್ತವೆ. ಕೆಲ-ಕೆಲವು ಯೋಗಿಗಳು ಜನಸಂಗದಿಂದ ದೂರವಿರುವದಕ್ಕೋಸುಗ ಜಡಸ್ತಬ್ಧ, ಹುಚ್ಚ ಮತ್ತು ಪಿಶಾಚಗಳಂತೆ ತಮ್ಮ ಆಚರಣೆಯನ್ನು ತೋರಿಸುತ್ತಾರೆ. ಅವರನ್ನು ಗುರುತಿಸುವದು ಕಠಿಣವಿರುತ್ತದೆ.

ಅತಏವ ಹೊರಗಿನ ಆಡಂಬರಗಳಿಂದ ಯೋಗಿಯು ಗುರುತಿಸಲ್ಪಡುವದಿಲ್ಲ. ಆದರೆ ಲೋಕಜನದಲ್ಲಿ ಯಾವನು ಒಳ್ಳೇ ಪೂಜ್ಯನಾಗಿ ಹೋಗಿದ್ದಾನೆ. ಹಾಗೂ ಕಾಮ ಕ್ರೋಧಾದಿಗಳಿಂದ ಯಾವನು ಚಲಾಯಮಾನ ಆಗುವದಿಲ್ಲ ಅವನೇ ಯೋಗಿ ತಥಾ ಅವನ ಸತ್ಸಂಗ ಮಾಡುವದು ಸಾಮಾನ್ಯ ಜೀವಿಗಳಿಗೆ ಲಾಭಕಾರಿ ಇರುತ್ತದೆ.

ಪ್ರಕೃತ ಆತ್ಮನನ್ನು ಇದ್ದಂತೆ ತಿಳಿಯುವದು ಯೋಗದ ಮುಖ್ಯಫಲವಾಗಿರುತ್ತದೆ.

ಮನಸಿನ ಶಾಂತಿ ತಥಾ ರಾಗ-ದ್ವೇಷ ಸುಖ-ದುಃಖಗಳಿಂದ ಅವಿಚಲವಾಗುವದು ಗೌಣ ಫಲವಿರುತ್ತದೆ. ದಯಾ, ಕೃಪಾ. ಸುಹೃದ್‌ಭಾವ, ತೃಪ್ತಿ, ಜನಕೃಪಾ, ಉದಾರತಾ ಮೊದಲಾದ ಜ್ಞಾನದ '೨೦' ಸಾಧನಗಳು ಯೋಗಿಯ ಪರೋಕ್ಷ ಲಕ್ಷಣಗಳು.

ಜ್ಞಾನದ ಹೊರತು ಯಾವನೂ ಮುಕ್ತನಾಗುವದಿಲ್ಲ. ಯಾವನಿಗೆ ಜ್ಞಾನವಾಗಿರುವದೋ ಅವನಿಗೆ ಗುಣ-ದೋಷ, ಶತ್ರು-ಮಿತ್ರಭಾವ, ಮಾನಾಪಮಾನಗಳೆಲ್ಲವೂ ಸಮಾನವಾಗಿ ತೋರುತ್ತವೆ. ಭೋಗ್ಯಪದಾರ್ಥಗಳಲ್ಲಿ ಆಸಕ್ತಿ ಮತ್ತು ಅಭೋಗ್ಯಗಳಲ್ಲಿ ಅನಾಸಕ್ತಿ ಇವುಗಳು ದೂರವಾಗುತ್ತವೆ. ಕಾಮ, ಕ್ರೋಧ ಮೊದಲಾದವುಗಳಿಂದ ರಹಿತ ಹಾಗೂ ಗಾಂಭೀರ್ಯತಾ, ಧೈರ್ಯತಾ, ಶಾಂತಿ, ದಾಂತ್ಯಾದಿಕಗಳು ಆ ಮುಕ್ತಪುರುಷನಲ್ಲಿ ಸ್ವಾಭಾವಿಕವಾಗಿ ಇರುತ್ತವೆ. ಹಿಂಸ್ರಾಲು ಜೀವದಿಂದಲೂ ಸಹ ಅವನು ನಿರ್ಭಯವಾಗಿರುತ್ತಾನೆ. ಇಚ್ಛಾ ಹಾಗೂ ಸ್ಪೃಹಾಂಗಳಂತು ಅವನ ಸಮೀಪ ಸಂಚರಿಸುವದಿಲ್ಲ. ಅವನಿಗೆ ಆರೋಗ್ಯತನವು ಪ್ರಾಪ್ತವಾಗುತ್ತದೆ.

ಜೀವಿತಾವಸ್ಥೆಯಲ್ಲಿಯೇ ದುಃಖದಿಂದ ಪಾರಾಗದವರು ಮೃತ್ಯುವಿನ ತರುವಾಯ ಆಗಲು ಶಕ್ಯವೋ?

ಭಗವವಂತನ ಕೃಪೆಯಿಂದಲೇ ಬೇಗನೆ ಸಮಾಧಿಯಾಗುತ್ತದೆ. ಅತ ಏವ ಯೋಗಿಗೆ ಭಗವಂತನ ಕೃಪಾಪ್ರಾಪ್ತಿಯ ಸಲುವಾಗಿ ಯತ್ನಮಾಡಿ ಅನಂತರ ನಾಥಯೋಗದ ಅಭ್ಯಾಸವನ್ನು ಮಾಡತಕ್ಕದ್ದು.

"ಇತೀ ಶ್ರೀಯೋಗ ಚರ್ಯಾಧುರೀಣ ಶ್ರೀಗಂಭೀರನಾಥ ಶಿಷ್ಯ ಶ್ರೀ ಪ್ರಜ್ಞಾನಾಥಕೃತ ನಾಥಯೋಗ ಸಮಾಪ್ತ"

ಸಂವತ್ ೧೯೯೪ ದೀಪಮಾಲಿಕಾ; ೨ ನವಂಬರ ೧೯೩೭

❖❖

೨೨

# ಯೌಗಿಕ ಪರಿಭಾಷಾ

'ಷಟ್ -ಕರ್ಮ -

(೧) ಲೋಲೀ-ಬಲ, ಎಡ, ಮುಂದೆ, ಹಿಂದೆ, ಮೇಲೆ, ಕೆಳಗೆ ಹೊಟ್ಟೆಯ ಜೋರಿನಿಂದ ನಡೆಯತಕ್ಕದ್ದು. ಅನಂತರ ಕುಂಬಾರ ಚಕ್ರದಂತೆ ಮಧ್ಯಭಾಗದಲ್ಲಿ ಹೊಟ್ಟೆಯನ್ನು ತಿರುಗಿಸತಕ್ಕದ್ದು. ಇದು ಲೋಲಿಕ್ರಿಯೆ.

(೨) ಅಗ್ನಿಸಾರ - ನಾಭಿಚಕ್ರವನ್ನು ಮೇರುದಂಡದ ಕಡೆಗೆ ಹಾಗೂ ಮುಂದುಗಡೆ ಜೋರಿನಿಂದ ನಿಕ್ಷೇಪ ಮಾಡುವುದರಿಂದ ಜಠರಾಗ್ನಿ ಬೆಳೆಯುತ್ತದೆ.

(೩) ಬಸ್ತಿ - ನೀರಲ್ಲಿ ಕುಳಿತು ನಾಭಿಯ ವರೆಗೆ ಮುಳುಗತಕ್ಕದ್ದು. ಮತ್ತು ಉತ್ಕರ ಆಸನದಿಂದ ಗುದಾದಿಂದ ಹೊಟ್ಟೆಯಲ್ಲಿ ನೀರನ್ನು ತುಂಬುವದು. ಇದರಿಂದ ಪ್ರಮೇಹ, ಆಮವಾತ ಮತ್ತು ಮಂದಾಗ್ನಿಗಳು ನಷ್ಟವಾಗುತ್ತವೆ.

(೪) ನೇತಿ -ಒಂದು ಮಿದುವಾದ ಸುತಳಿಯನ್ನು ಕುದಿಸಿ, ಮೂಗಿನಿಂದ ಒಳಗೆ ಕಂಠದ ವರೆಗೆ ಮುಟ್ಟಿಸಿ ಬಾಯಿಯಿಂದ ತೆಗೆಯುವದು. ಇದರಿಂದ ಮೂಗು ಮತ್ತು ಕಣ್ಣು ರೋಗಗಳು ನಾಶವಾಗುತ್ತವೆ.

(೫) ಧೌತಿ - ಹದಿನಾರು ಮೊಳ ಉದ್ದ, ನಾಲ್ಕು ಬೆರಳು ಅಗಲು ಇರುವ ಒಂದು ಮಿದುವಾದ ಅರಿವೆಯನ್ನು ಬಾಯಿಯಿಂದ ಹೊಟ್ಟೆಯಲ್ಲಿ ತುಂಬಬೇಕು. ಒಂದು ವಿತಸ್ತಿ ಬಾಕಿ ಹೊರಗೆ ಆಗತಕ್ಕದ್ದು. ಪುನಃ ಕುತ್ತಿಗೆಯಿಂದ ಸಾವಕಾಶವಾಗಿ ಜಗ್ಗಿ ತೊಳೆಯತಕ್ಕದ್ದು. ಇದರಿಂದ ಎದೆಯ ಶ್ಲೇಷ್ಮವು ಸ್ವಚ್ಛವಾಗುತ್ತದೆ.

(೬) ಕಪಾಲಭಾತಿ - ಇಡಾದಿಂದ ವಾಯುವನ್ನು ಪೂರ್ಣಮಾಡಿ, ಪಿಂಗಾಲಾದಿಂದ ರೇಚಕ ಮಾಡತಕ್ಕದ್ದು. ಪುನಃ ಪಿಂಗಾಲಾದಿಂದ ಪೂರ್ಣ ಮಾಡಿ, ಇಡಾದಿಂದ ರೇಚಕ ಮಾಡತಕ್ಕದ್ದು. ಯಥಾಶಕ್ತಿ-ಮೇಲಿಂದ ಮೇಲೆ ಮಾಡುವದರಿಂದ ಕಲಾಲಭಾತಿಯಾಗುತ್ತದೆ. ಇದರಿಂದ ಎಲ್ಲ ನಾಡಿಗಳು ಶುದ್ಧವಾಗುತ್ತದೆ.

'ನವಚಕ್ರ'- ಆಧಾರ, ಸ್ವಾದಿಷ್ಠಾನ, ಮಣಿಪೂರ, ಅನಾಹತ, ಆಜ್ಞಾ, ಸಹಸ್ರಾರ, ಭ್ರೂ, ನಿರಾಣ ಮತ್ತು ಆಕಾಶಚಕ್ರ.

'ಶೋಡಶಾಧಾರ'- ಪಾದಾಂಗುಷ್ಠಾಧಾರ, ಮೂಲಾಧಾರ, ಗೂದಾಧಾರ, ಮೇಢ್ರಾಧಾರ, ಉಡ್ಯಾಣಾಧಾರ, ನಾಭ್ಯಾಧಾರ, ಹೃದಯಾಧಾರ, ಕಂಠಾಧಾರ, ಘಂಟಿಕಾಧಾರ, ತಾಲ್ವಾಧಾರ, ಜಿಹ್ವಾಧಾರ, ಭ್ರೂಮಧ್ಯಾಧಾರ. ನಾಸಾಧಾರ, ಕಪಟಾಧಾರ, ಲಲಾಟಾಧಾರ, ಬ್ರಹ್ಮರಂಧ್ರ ಮತ್ತು ಆಕಾಶಚಕ್ರ.

'ಅಂತರ ಲಕ್ಷ್ಯತ್ರಯ'- ಬ್ರಹ್ಮನಾಡಿಯು ಬ್ರಹ್ಮರಂಧ್ರದ ವರೆಗೆ ಹೋಗುತ್ತದೆ. ಅದು ಪ್ರಥಮ ಲಕ್ಷ್ಯ; ಲಲಾಟದಲ್ಲಿ ಅಥವಾ ಶಿರದಲ್ಲಿ ಘುಂಘುಕಾರ ಶಬ್ದ ಹಾಗೂ ಕಣ್ಣಿನ ನಡುವೆ ನೀಲ ರೂಪವನ್ನು ನೋಡುವದು.

'ಬಹಿರ್ಲಕ್ಷ್ಯ'- ನಾಸಾಗ್ರದಶಾಂಗುಲ, ಅಪತತ್ಯ ದ್ವಾದಶಾಂಗುಲ, ಪೃಥ್ವೀ ತತ್ತ್ವ, "ಆಕಾಶಂ ಮುಖಂ ದೃಷ್ಟ್ವಾ ಅವಲೋಕಯೇತ್".

'ವ್ಯೋಮ ಪಂಚಕಮ್'- ಆಕಾಶ, ಪರಾಕಾಶ, ಮಹಾಕಾಶ, ತತ್ತ್ವಾಕಾಶ, ಸೂರ್ಯಾಕಾಶ ಇವು ಪಂಚ ಆಕಾಶಗಳು.

'ನಮಚಕ್ರಂ ಕಲಾಧಾರಂ ತ್ರಿಲಕ್ಷ್ಯಂ ವ್ಯೋಮ ಪಂಚಕಮ್॥
ಸಮ್ಯಗೇತನ್ನ ಜಾನಾತಿ ಸಯೋಗಿ ನಾಮಧಾರಕಃ ॥೧॥

'ಪಂಚಮಕಾರ'- ಮದ, ಮುದ್ರಾ, ಮೀನಮನ, ಮೈಥುನ, ಕ್ರಮಶಃ ಅಭಿಮಾನ, ಅಭಿಲಾಷೆ ಮಾಯಾ, ಸಂಕಲ್ಪ, ವಿಕಲ್ಪ ಮತ್ತು ಮೂರ್ಛನಾ ಇವುಗಳನ್ನು ಬುದ್ಧಿಯಿಂದ ತಡೆಯತಕ್ಕದ್ದು. ಇವೇ ಐದು ಹಾಗೂ ಹತ್ತು ಮುದ್ರೆಗಳು.

'ಅಷ್ಟಾಂಗ ಚ ಚತುಷ್ಪಾದಂ ತ್ರಿಸ್ಥಾನಂ ಪಂಚದೈವತಮ್ ಪ್ರಣವಾರ್ಥಂ ನಜಾನಾತಿ ಬ್ರಹ್ಮಣೋ ನ ಭವ್ಯತ್ಯೇಷಃ ॥

'ಅ, ಉ, ಮ, ಅರ್ಧಮಾತ್ರಾ, ಬಿಂದು, ನಾದ, ಕಲಾ, ಕಲಾತೀತ ಇವು ಪ್ರಣವದ ಅಷ್ಟಾಂಗ.

ಜಾಗ್ರತ, ಸ್ವಪ್ನ, ಸುಷುಪ್ತಿ ಮತ್ತು ತುರೀಯ ಇವು ನಾಲ್ಕು ಪಾದಗಳು.

ಹೃದಯ, ಭ್ರೂಮಧ್ಯ, ಸಹಸ್ರಾರು ಅಥವಾ ಶಿವಲೋಕ, ವಿಷ್ಣುಲೋಕ ಮತ್ತು ಬ್ರಹ್ಮಲೋಕ ಇವು ತ್ರಿಸ್ಥಾನಗಳು.

ಬ್ರಹ್ಮ, ವಿಷ್ಣು, ಶಿವ, ರುದ್ರ ಮತ್ತು ಸದಾಶಿವ ಇವು ಐದು ದೈವತಗಳು.

**ಯೋಗದ ನಕಾಶೆ (೧)**

- ಮನದ ಕಾರ್ಯ
  - ೧. ಪ್ರಮಾಣ (ಹೇಗೆ ನೋಡುವದು)
  - ೨. ವಿಪರ್ಯಾಯ (ಭ್ರಮ)
  - ೩. ವಿಕಲ್ಪ (ಎರಡರಲ್ಲಿ ಒಂದರ ಬಗ್ಗೆಶಂಕಾ)
  - ೪. ನಿದ್ರಾ
  - ೫. ಸ್ಮೃತಿ
- ಮನದ ಸಾಧನ
  - ಅಭ್ಯಾಸ
  - ಧ್ಯಾನ
    - ಸಂಪ್ರಜ್ಞಾತ
      - ನಾದಯೋಗ
      - ೧. ವಿಧಿಗಳು (ಗಾಢನಿದ್ರಾ ಮತ್ತು ಸ್ವಪ್ನ)
      - ೨. ದೇವರ ಧ್ಯಾನ
      - ೩. ಪೂಜಾ
      - ೪. ಪ್ರಾಣಾಯಾಮ
      - ೫. ಜ್ಞಾನಪ್ರಾಪ್ತಿ
      - ೬. ಅಂತರ್‌ಜ್ಯೋತಿಧ್ಯಾನ
      - ೭. ತನ್ನ ಇಚ್ಛಾನುಸಾರ ವಿಚಾರ
      - ರಾಜಯೋಗ
    - ಅಸಂಪ್ರಜ್ಞಾತ
  - ಘೃಣಾ

**ಯೋಗ ನಕಾಶ (೨)**

- ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ ಸಮಾಧಿ
  - ಸಾಕಾರ
  - ನಿರಾಕಾರ

**ನಾಥಯೋಗದ ವಿಧಿಗಳು**

- ಮನವನ್ನು
- ಶೂನ್ಯವಿಚಾರ
- ಸಂಕಲ್ಪ
- ಲಯಯೋಗ
- ರಾಗದ್ವೇಷ

**ನಾದದ ಅವಸ್ಥೆಗಳು**

- ಕ್ವಣ ಶಬ್ದ ಕೇಳುವದು
- ಭೇರಿಶಬ್ದ (ಘಟಾವಸ್ಥಾ)
  - ವಂಶೀ ಧ್ವನಿ ಕೇಳುವದು (ನಿಷ್ಪಥ್ಯಾವಸ್ಥಾ)
- ಘೋಲಿನ ಶಬ್ದ (ಪರಿಚಯಾವಸ್ಥಾ)

**ಪ್ರಸ್ತಾವನೆ :**

ಮನಸು ಮತ್ತು ಭಾವನೆಗಳನ್ನು ವಶಪಡಿಸಿಕೊಳ್ಳುವದೇ ಯೋಗಧ್ಯೇಯವು. ಯೋಗಾಭ್ಯಾಸದಿಂದ ಜೀವವು ಜಗತ್ತಿನ ವಾಸನೆಗಳಿಂದ ಬೇರೆಯಾಗಿ ಹೋಗುತ್ತದೆ. ಜೀವಾತ್ಮ ಮತ್ತು ಪರಮಾತ್ಮನ ಏಕರೂಪವಾಗಿ ಹೋಗುತ್ತದೆ. ಪರಮಾತ್ಮನೊಡನೆ ಕೂಡಿಕೊಳ್ಳುವದೇ ಜೀವನದ ಮುಖ್ಯ ಉದ್ದೇಶವು. ಪಶ್ಚಿಮದ ವಿದ್ವಾಂಸರು ಯೋಗಶಾಸ್ತ್ರವನ್ನು ಒಳ್ಳೇ ಪ್ರಶಂಸೆ ಮಾಡಿರುತ್ತಾರೆ. ಅವರಲ್ಲಿ ಪ್ಲೇಟೋ, ಇಮರ್ಸನ್, ಡಿಸ್ಕಾರ್ಟೀಜ, ಮ್ಯಾಕ್ಸಮುಲರ ಮೊದಲಾದವರು ಇರುವರು.

ಯೋಗವು ಹಲವು ಬಗೆಯಾಗಿರುತ್ತವೆ. ಅಭ್ಯಾಸಿಗಳ ಗುಣಗಳ ಅನುಸಾರವಾಗಿ ಬೇರೆ ಬೇರೆಯಾಗಿರುತ್ತವೆ. ಸಾಮಾನ್ಯವಾಗಿ ಕರ್ಮಯೋಗ, ಭಕ್ತಿಯೋಗ, ರಾಜಯೋಗ, ಜ್ಞಾನಯೋಗ, ಹಠಯೋಗ ಎಂದು ತಿಳಿಯಲ್ಪಡುತ್ತದೆ. ಪರಿಮಿತ ವಿಚಾರದಿಂದ ಯೋಗವೆಂದರೆ ರಾಜಯೋಗವೆಂದೇ ತಿಳಿಯಲ್ಪಡುತ್ತದೆ. ಹಠಯೋಗವು ರಾಜಯೋಗದಿಂದ ಭಿನ್ನವಿಲ್ಲ. ಹಠಯೋಗದ ಅಭಿಪ್ರಾಯವು, 'ಸೂರ್ಯ ಮತ್ತು ಚಂದ್ರ'ರ ಕೂಡುವಿಕೆಯು. 'ಪ್ರಾಣವು, ಸೂರ್ಯ ನಾಮದಿಂದ ಮತ್ತು 'ಅಪಾನವು' ಚಂದ್ರನಾಮದಿಂದ ಬೋಧಿತವು. ಇದಕ್ಕೋಸುಗ ಹಠಯೋಗವು ಪ್ರಾಣ ಮತ್ತು ಅಪಾನಗಳ ಕೂಡುವಿಕೆಯು. ಹಠಯೋಗದ ಜಿಜ್ಞಾಸುಗಳಿಗೆ ರಾಜಯೋಗದ ಸಲುವಾಗಿ ತಯಾರ ಮಾಡಬೇಕಾಗುತ್ತದೆ. ಇದು ರಾಜಯೋಗದ್ದೇ ಶಾಖೆಯು ಇರುತ್ತದೆ.

ಯೋಗವು ಆತ್ಮಿಕ ಉನ್ನತಿಯ ಪೂರ್ಣ ಅನುಭವೀಶಾಸ್ತ್ರವಿರುವದು. ಯೋಗಾಭ್ಯಾಸದಿಂದ ಯಾವ ಮನವೂ ಆತ್ಮನೊಡನೆಯೇ ಉನ್ನತಿಯನ್ನು ಪಡೆಯಲು ಶಕ್ಯವು. ಇದು ಪೂರ್ಣವಿಜ್ಞಾನವಿರುತ್ತದೆ. ಯಾವನಾದರೂ ಯೋಗಾಭ್ಯಾಸದಿಂದ ಪ್ರಕೃತಿಯ ಮೇಲೆ ಪೂರ್ಣ ಅಧಿಕಾರ ಸಂಪಾದಿಸಲು ಸಮರ್ಥನು. ಇದು ಜಿಜ್ಞಾಸುಗಳ ಆಧ್ಯಾತ್ಮಿಕ ಪೂರ್ಣತೆ, ಪೂರ್ಣಮನೋಯೋಗಿತೆಯನ್ನು ಪ್ರದಾನಮಾಡಿ ಶಾರೀರಿಕ ಶಕ್ತಿಗಳನ್ನು ತೋರಿಸುತ್ತದೆ. ಇದು ವಿಜ್ಞಾನಶಿಕ್ಷಣವನ್ನು ಕೊಡುತ್ತದೆ. ಮತ್ತು ಜಿಜ್ಞಾಸುಗಳಿಗೆ ಸಮಾಧಿಯಿಂದ ಜೀವಾತ್ಮಾ ಮತ್ತು ಪರಮಾತ್ಮನ ಜ್ಞಾನ ಪೂರ್ಣಮಿಲನವನ್ನು ಮಾಡಿಸುತ್ತದೆ. ಮತ್ತು ಅದಕ್ಕೆ ಮೂರೂ ಗುಣಗಳಿಂದ ಭಿನ್ನಮಾಡಿ ಕೈವಲ್ಯ (ಮುಕ್ತ) ಪದವಿಯನ್ನು ಕೊಡುತ್ತದೆ. ಯೋಗದಿಂದ ಮನವು ಬಾಹ್ಯಜಗತ್ತನ್ನು ಬಿಟ್ಟುಗೊಟ್ಟು ಅಂತರ ಜಗತ್ತಿನ ಕಡೆಗೆ ಸಮಾಹಿತವಾಗುತ್ತದೆ. ಇದು ಆತ್ಮನ ಅನಾದಿ ಜೀವನವಿರುತ್ತದೆ. ಯೋಗವು ಮನುಷ್ಯನಿಗೆ ದೇವತ್ವವನ್ನು ಕೊಡುತ್ತದೆ. ಇದರಿಂದ ನಿರಾಶಾವಾದಿಯು -ಆಶಾವಾದಿಯು, ದುಃಖಿಯು-ಸುಖಮಯನು, ದುರ್ಬಲನು ಶಕ್ತಿವಂತನು, ಮೂಢನು -ವಿದ್ವಾಂಸನು ಆಗುತ್ತಾರೆ. ಯೋಗವೇ ಅನಂತ ಸುಖ-ಶಾಂತಿಗಳನ್ನು ಒದಗಿಸುವ ಒಂದೇ ಕುಂಜಿಯಾಗಿರುತ್ತದೆ.

ರಾಜಯೋಗವು ಒಂದು ಯಥಾರ್ಥ ವಿಜ್ಞಾನವು. ಇದು ಮನ ಬುದ್ಧಿ ಮತ್ತು ಅವುಗಳ ಭಾವನೆಗಳನ್ನು ತಡೆಯುವದರೊಡನೆ ಸಂಬಂಧವಿಡುತ್ತದೆ. ಮನವೇ ಬಾಹ್ಯ ಜಗತ್ತಿನ ಕಾರಣವು. ಇದಕ್ಕೋಸುಗ ಇದರ ಸಂಯಮದಿಂದ ಅಭ್ಯಾಸಿಗೆ ಅಸಂಪ್ರಜ್ಞಾತ ಸಮಾಧಿಯು ಪ್ರಾಪ್ತವಾಗುತ್ತದೆ. ಇದರಿಂದ ಅವನು ಪರಮಾತ್ಮನೊಡನೆ ಕೂಡಿ ಶಾಂತಿಯನ್ನು ಪಡೆಯುತ್ತಾನೆ. ಆದುದರಿಂದ ಇದಕ್ಕೆ ರಾಜಯೋಗವೆನ್ನುತ್ತಾರೆ.

ಜಿಜ್ಞಾಸುಗಳು ಪ್ರಥಮ-ದ್ವಿತೀಯ-ತೃತೀಯ ಶ್ರೇಣಿಯೆಂದು ಮೂರು ಬಗೆಯಾಗಿದ್ದಾರೆ. ಯಾವನು ಯೋಗದ ಕೊನೆಯ ಶಿಖರವನ್ನು ಮುಟ್ಟಿರುವನೋ ಅವನು ಯೋಗಾರೂಢನು. ಯೋಗದ ಪಥದಿಂದ ಯಾವನು ಬೀಳುವನೋ ಅವನು ಯೋಗಭ್ರಷ್ಟನು. ಅವನು ಪ್ರಾರಂಭದ ಅಭ್ಯಾಸ ಯಮ, ನಿಯಮ, ಆಸನಾದಿಗಳನ್ನು ಪೂರ್ವಜನ್ಮದಲ್ಲಿ ಮಾಡಿರುತ್ತಾನೆ. ಈ ಜನ್ಮದಲ್ಲಿ ಅವನು ಸಮಾಧಿಯ ಅಧಿಕಾರಿಯಾಗುತ್ತಾನೆ. ಅವನು ಎಲ್ಲಕ್ಕೂ ಶ್ರೇಷ್ಠವಾದ ಅಂಸಪ್ರಜ್ಞಾತ ಸಮಾಧಿಯನ್ನು ಪಡೆಯುತ್ತಾನೆ. ಇವನು ಪ್ರಥಮ ಶ್ರೇಣಿಯವನು.

ಯೋಗಾಭ್ಯಾಸದಲ್ಲಿ ತೊಡಗಿದವರಿಗೆ 'ಯುಂಜಾನ ಯೋಗಿ' ಅನ್ನುತ್ತಾರೆ. ಇವರು ದ್ವಿತೀಯ ಶ್ರೇಣಿಯವರು. ಯಾರು ಯೋಗದ ಮೆಟ್ಟಿಲನ್ನು ಏರುವದಕ್ಕೋಸುಗ ಪ್ರಯತ್ನ ಮಾಡುತ್ತಿರುವರೋ ಅವರು ಮೂರನೇ ಶ್ರೇಣಿಯವರು.

ಯೋಗದ ಜಿಜ್ಞಾಸುಗಳಿಗೆ ಬಲ, ಶಕ್ತಿ ಮತ್ತು ನಾಡಿಗಳ ದೃಢತೆಯು ಬೇಕಾಗುವದು. ಬರೇ ವೀರ್ಯದ ರಕ್ಷಣೆಯಿಂದ ಯೋಗಾಕುರುಕ್ಷುವಿಗೆ ಶಕ್ತಿ ಮತ್ತು ಬಲ ಬೆಳೆಯುತ್ತವೆ. ಆದ್ದರಿಂದ ಬ್ರಹ್ಮಚರ್ಯ ಪಾಲನವು ಯೋಗಾಭ್ಯಾಸಿಗೆ ತತ್ಕಾಲ ಫಲ ನೋಡುವದಕ್ಕೋಸುಗ ಮುಖ್ಯ ಸಾಧನವಾಗಿರುತ್ತದೆ. ಒಂದುವೇಳೆ ಅಭ್ಯಾಸ ಮಾಡುವ ಸಮಯದಲ್ಲಿ ಸ್ವಲ್ಪ 'ಸುಸ್ಥೀ' ಆದರೆ ಹಾಗೂ ಕಾಮಾದಿಗಳಿಂದ ಅಥವಾ ಸಂಸಾರಿಕ ವಿಷಯಗಳೊಡನೆ ಲಿಪ್ತವಾದರೆ, ಶ್ರಮಪಟ್ಟು ಮಾಡಿದ್ದು ನಷ್ಟವಾಗುವದು. ಪುನಃ ಆಸ್ಥಾನವು ಪ್ರಾಪ್ತವಾಗುವದು ಕಠಿಣವಾಗಿ ಹೋಗುವದು. ಸಮಾಧಿಯು ಪ್ರಾಪ್ತವಾಗುವ ವರೆಗೆ ಯೋಗಾಭ್ಯಾಸಿಯು ಪ್ರಮಾದಿ ರಹಿತನಾಗಿ ಕಠೋರ ಪರಿಶ್ರಮವನ್ನು ಮಾಡಬೇಕು. ಯಾವ ಯೋಗಿಯು ಬಹುಕಾಲ ಕಠೋರ ಪರಿಶ್ರಮದಿಂದ ಮನವನ್ನು ವಶಮಾಡಿಕೊಂಡಿರುವನೋ, ಅವನು ಈ ಬಾಹ್ಯ ಜಗತ್ತಿ (ನಾಮ-ರೂಪ)ನ ಹಿಂದೆ ಮಹಾನ್‌ಶಕ್ತಿಯು ನಿತ್ಯರೂಪದಿಂದ ವಿರಾಜಮಾನ ವಿರುತ್ತದೆ ಎಂದು ತಿಳಿಯಲು ಸಮರ್ಥವಾಗುತ್ತಾನೆ. ಇದಕ್ಕೋಸುಗ ಮಹರ್ಷಿ ಪತಂಜಲಿಯು ಸಹ ಹೇಳಿರುವನು. - "ದೀರ್ಘಕಾಲ ನಿರಂತರ ಶ್ರದ್ಧಾ ಮತ್ತು ಬ್ರಹ್ಮಚರ್ಯದೊಡನೆ ಅಭ್ಯಾಸ

ಮಾಡುವದರಿಂದ ಅಭ್ಯಾಸವು ಪರಿಪಕ್ವವಾಗಿ ಹೋಗುತ್ತದೆ." (೧-೧೪. ಸೂ). ವಿಚಾರವಂತ, ಚತುರ ಮತ್ತು ಸುಚೇತ ಯೋಗಿಯು ಸದೈವ ಈ ಚಂಚಲ ಭ್ರಮಣ ಮಾಡುವ ದುಷ್ಟಮನವನ್ನು ದಂಡಿಸಲಿಕ್ಕೆ ತಯಾರ ಇರುತ್ತಾನೆ. ಅವನು ಆಧ್ಯಾತ್ಮಿಕ ಪೂರ್ಣತೆಯನ್ನು ಸಂಪಾದಿಸುತ್ತಾನೆ. ಅವನು ಮನ ಮತ್ತು ಇಂದ್ರಿಯಗಳನ್ನು ವಶಮಾಡಿಕೊಳ್ಳುತ್ತಾನೆ. ಶರೀರವನ್ನು ಸ್ಥಿರಮಾಡುತ್ತಾನೆ. ಪ್ರಾಣವಾಯುವಿಗೆ ನಿಯಮನ ಮಾಡದೆ ನಿಯಮಿತ ಭೋಜನ ಮಾಡುತ್ತಾನೆ. ವೀರ್ಯವನ್ನು ಧಾರಣಮಾಡುತ್ತಾ ಕಡೆಗೆ ಮನವನ್ನು ವಶಮಾಡಿಕೊಳ್ಳುತ್ತಾನೆ. ಮಾಂಡೂಕ್ಯೋಪನಿಷತ್ತಿನಲ್ಲಿ - ಪ್ರಣವ ಧನುಸ್ಸು, ಮನ ಅಥವಾ ಜೀವಾತ್ಮ ಶರವು, ಮತ್ತು ಬ್ರಹ್ಮವು ಲಕ್ಷ್ಯವು. ಒಂದು ವೇಳೆ ಯಾವನಾದರು ಸಾವಧಾನತೆಯಿಂದ ಗುರಿ ಇಟ್ಟುದಾದರೆ ಅವನು ಅದರೊಡನೆ ಒಂದಾಗಿ ಹೋಗುತ್ತಾನೆ. ಬೇಟೆಗಾರನು ಬಲೆಯನ್ನು ಹರವಿ ಚಿಗರೆಯನ್ನು ಹಿಡಿಯುವಂತೆ, ಯೋಗಾಭ್ಯಾಸಿಯು, ನಾದ ಅಥವಾ ಅನಾಹತದ ಜಾಲವನ್ನು ಹರಡಿ ಮನವನ್ನು ಹಿಡಿಯುತ್ತಾನೆ. ಅನಾಹತನಾದವು ಬಲಗಿವಿಯಿಲ್ಲಿ ಕೇಳಬರುತ್ತದೆ. ಮಧುರ ಶಬ್ದವು ಮೊದಲು ಕೇಳಬರುತ್ತದೆ. ಅದು ಮನವನ್ನು ಆಕರ್ಷಣ ಮಾಡುತ್ತದೆ. ಆಗ ಅದು ಅದನ್ನು ಕಟ್ಟಿಬಿಡುತ್ತದೆ. ಮತ್ತು ಮನವು ಸತ್ತು ಹೋಗುತ್ತದೆ. ಅಂದರೆ ನಾದದಲ್ಲಿ ಲೀನವಾಗುತ್ತದೆ. ಮನವನ್ನು ಕಟ್ಟುವದು ಮತ್ತು ಸ್ಥಿರಮಾಡುವದು ಒಂದೇ ಸಂಗತಿಯು. ಮನವನ್ನು ಕೊಲ್ಲುವದು ಅಂದರೆ ನಾದದಲ್ಲಿ ಲಯಮಾಡುವದು, ಆಗ ಇದು ವಿಷಯಗಳ ಹಿಂದೆ ಓಡಲು ಶಕ್ಯವಿಲ್ಲ. ಒಂದು ವೇಳೆ ನೀವು ಮನವನ್ನು ಮೂಗಿನ ತುದಿಯ ಮೇಲೆ ತಡೆದರೆ, ನಿಮಗೆ ಗಂಧದ ಅನುಭವವಾಗುವದು. ಒಂದುವೇಳೆ ಮನವನ್ನು ನಾಲಗೆಯ ತುದಿಯ ಮೇಲೆ ಹಚ್ಚಿದರೆ ದಿವ್ಯರಸದ ಅನುಭವವಾಗುವದು. ನಾಲಗೆಯ ಮಧ್ಯದಲ್ಲಿ ದಿವ್ಯಸ್ಪರ್ಶದ ಅಗೆ, ನಾಲಗೆಯ ಮೂಲದಲ್ಲಿ ದಿವ್ಯಸ್ವರ ಮತ್ತು ತಾಲುವಿನಲ್ಲಿ ದಿವ್ಯ ಬಣ್ಣದ ಅನುಭವವಾಗುವದು. ಈ ದಿವ್ಯ ಅನುಭವಗಳು ನಿಮಗೆ ಉತ್ಸಾಹಿತ ಮಾಡುವವು. ಮತ್ತು ಯೋಗದ ಸತ್ಯತೆಯಲ್ಲಿ ನಿಮಗೆ ದೃಢತೆಯು ಪ್ರಾಪ್ತವಾಗುವದು. ಇವುಗಳಿಂದ ಯೋಗಾಭ್ಯಾಸವು ಹೆಚ್ಚು ದೃಢತೆಯಿಂದ ಮುಂದುವರಿಯುವದು. ಇದರಿಂದ ಪರಮಪದವು ದೊರೆಯುವದು. ತಪ, ಧಾರ್ಮಿಕ ಗ್ರಂಥಗಳ ಸ್ವಾಧ್ಯಾಯ, ಮಂತ್ರದ ಜಪ, ಭಗವಂತನಲ್ಲಿ ಭಕ್ತಿ ಮತ್ತು ಆತ್ಮ ಸಮರ್ಪಣಕ್ಕೆ ಕ್ರಿಯಾಯೋಗವೆನ್ನುತ್ತಾರೆ. ಇದು ಮಹರ್ಷಿ ಪತಂಜಲಿಯ ದ್ವಿತೀಯ ಅಧ್ಯಾಯದ ಮೊದಲನೆಯ ಸೂತ್ರವು. ಇದು ಯೋಗದ ನಿಯಮವು. ಕರ್ಮಯೋಗದಿಂದ ಅಭ್ಯಾಸಿಯು ಸಮಾಧಿ ಅವಸ್ಥೆಯನ್ನು ಪಡೆಯುತ್ತಾನೆ. ಇದು ಹೃದಯವನ್ನು ಶುದ್ಧ ಮಾಡುತ್ತದೆ. ಮತ್ತು ಐದು ಬಗೆಯ ಕ್ಲೇಶಗಳನ್ನು ಕ್ಷೀಣ ಮಾಡುತ್ತದೆ. ಐದು ಕ್ಲೇಶಗಳು - ಅವಿದ್ಯಾ, ಅಸ್ಮಿತಾ, ರಾಗ, ದ್ವೇಷ, ಅಭಿನಿವೇಶ (ಅಜ್ಞಾನ, ಅಹಂಕಾರ, ಪ್ರೇಮ, ಘೃಣಾ ಮತ್ತು ಸಾಂಸಾರಿಕ ಪದಾರ್ಥಗಳ ತೃಷ್ಣೆ).

ಪವಿತ್ರ ಮತ್ತು ನಿಸ್ವಾರ್ಥ ಅಭ್ಯಾಸಿಯೇ ದಿವ್ಯಪ್ರಕಾಶವನ್ನು ನೋಡಬಲ್ಲನು. ಮತ್ತು ಅಮೃತಪಾನ ಮಾಡಲು ಶಕ್ತನು. ಮೇಲೆ ಹೇಳಿದ ನಿಯಮಗಳು ಯೋಗಪ್ರಾಪ್ತಿಯ ಹೇತುವು.

ಇದೇ ಉಚ್ಚ ಕೋಟಿಯ ನಿಯಮವು. ಯೋಗಾಭ್ಯಾಸಿಗೆ ಕ್ರಿಯಾಯೋಗಕ್ಕೆ ಇದು ಪ್ರಥಮ ಚರಣದ ಸಲುವಾಗಿ ಪೂರ್ಣರೂಪದಿಂದ ಪರಿಶ್ರಮವನ್ನು ಮಾಡಬೇಕಾಗುವದು; ಶ್ರದ್ಧಾ ಮತ್ತು ಏಕಾಗ್ರತೆಯೊಡನೆ ಈ ಕ್ರಿಯಾಯೋಗವನ್ನು ಸಂಪಾದನೆ ಮಾಡತಕ್ಕದ್ದು. ಸಾಧನವು ಸಹ ಧ್ಯೇಯದಷ್ಟು ಮಹತ್ವಪೂರ್ಣ ಇರುತ್ತದೆ. ಈ ಕ್ರಿಯಾಯೋಗವನ್ನು ಬಿಟ್ಟು ಒಮ್ಮೆಲೇ ಸಮಾಧಿಯ ಸಲುವಾಗಿ ಜಿಗಿದರೆ ಸಫಲತೆಯು ಆಗುವದಿಲ್ಲ. ಆಧ್ಯಾತ್ಮಿಕ ಉನ್ನತಿಯಲ್ಲಿಯೂ ವಿಲಂಬವಾಗುವದು. ಯೋಗದ ಪ್ರತಿಯೊಂದು ಮೆಟ್ಟಲು ಮುಖ್ಯವಿರುತ್ತವೆ. ಅವುಗಳನ್ನು ಯತ್ನಪೂರ್ವಕ ಸಂಪಾದಿಸಲಿಕ್ಕೇ ಬೇಕಾಗುವದು. ಮೊದಲನೆಯ ಮೆಟ್ಟಲನ್ನು ಸಂಪಾದಿಸಿಯೇ ಎರಡನೆಯ ಮೆಟ್ಟಲಿನ ಮೇಲೆ ಹೆಜ್ಜೆಯನ್ನು ಇಡಬೇಕಾಗುವದು. ನೂತನ ಶಿಷ್ಯನು ಸಮಾಧಿಯ ಸಂಬಂಧದಲ್ಲಿ

ತಿಳಿಯಲಿಕ್ಕೆ ಒಳ್ಳೇ ಉತ್ಸುಕನಿರುತ್ತಾನೆ. ಅವನಿಗೆ ಸಿದ್ಧಿಪ್ರಾಪ್ತಿಯ ಬಗ್ಗೆ ಒಳ್ಳೇ ಅಭಿಲಾಷೆಯು ಇರುತ್ತದೆ. ಪ್ರಸಿದ್ಧಿಯನ್ನು ಪಡೆಯಬೇಕು. ಹೊಗಳಿಕೆಯು ಬೇಕು, ಬೇಕಾದ ಮತ್ತು ಯಥೇಚ್ಛವಾಗಿ ಆಹಾರಬೇಕು. ಬಹಳ ಪರಿಶ್ರಮ, ವ್ಯರ್ಥವಾರ್ತಾಲಾಪ, ರಾತ್ರಿಯ ಭೂರಿ ಭೋಜನ, ಜನರೊಡನೆ ವಿಶೇಷವಾಗಿ ಕೂಡುವದು, ಯೋಗಪಥದಲ್ಲಿ ಬಾಧಕವಿರುತ್ತದೆ. ಅಪಚನ, ಹುಳಿಡೇಗು, ಕಾರುವದು, ಜುಲಾಬ ಆಗುವದು ಮತ್ತು ರೋಗದ ಸಮಯದಲ್ಲಿ ದಣಿವು ವಿಷಾದದ ಕಾಲದಲ್ಲಿ ಯೋಗವನ್ನು ಮಾಡಕೂಡದು.

ಒಂದುವೇಳೆ ನೀವು ದೃಢ ಪ್ರತಿಜ್ಞರಾಗಿ ಧ್ಯೇಯವನ್ನು ಸಂಪಾದಿಸಲಿಕ್ಕೆ, ನಿಮ್ಮ ಪೂರ್ಣಪ್ರೇಮವಿದ್ದುದ್ದಾದರೆ ಬೀಳುವವರಿದ್ದರು ಸಹ ಪುನಃ ಏಳುವಿರಿ ಮತ್ತು ನಡೆಯುವಿರಿ. ನಿಮ್ಮೊಳಗೆ ನೀವು ಭಗವತ್ ಶಕ್ತಿಯನ್ನು ಅನುಭವಿಸಿರಿ. ಮತ್ತು ದೈವಿಕ ಪ್ರಭಾವಕ್ಕೋಸುಗ ತಯಾರಿ ಇಡಿರಿ. ಯಾವಾಗಲೂ ಪರಮಾತ್ಮನ ದಯೆಯಲ್ಲಿ ವಿಶ್ವಾಸವನ್ನಿಡಿರಿ. ನಿಮ್ಮ ಪ್ರತಿಯೊಂದು ಕಾರ್ಯದಲ್ಲಿ ಪರಮಾತ್ಮನ ಕೈ ಇದೆ ಎಂದು ತಿಳಿಯಿರಿ. ಸತ್ಯಕ್ಕೋಸುಗ ಅಂತರದಲ್ಲಿ ಸ್ಪೃಹಾ ಇಡಿರಿ. ಭಗವತ್ ಜ್ಞಾನಕ್ಕೋಸುಗ ಇಚ್ಛೆ -ತೀವ್ರ ವೈರಾಗ್ಯಗಳನ್ನು ಬೆಳೆಯಿಸಿರಿ. ಜಗತ್ತಿನ ಯಶದ ಇಚ್ಛೆ, ಮತ್ತು ಸಂಸಾರಿಕ ಪದಾರ್ಥಗಳ ಇಚ್ಛೆಯನ್ನು ಬಿಡತಕ್ಕದ್ದು. ಒಂದುವೇಳೆ ಇದು ಸರಿಯಾದ ರೀತಿಯಿಂದ ಆದದ್ದಾದರೆ ದೈವಿಕ ಜ್ಯೋತಿಯು ಒದಗುವದು. ಮತ್ತು ಯೋಗದಲ್ಲಿ ಬೇಗನೆ ಉನ್ನತಿಯನ್ನು ಪಡೆಯುವಿರಿ. ನೀವು ಹೃದಯದಲ್ಲಿ ಪ್ರತಿಯೊಂದು ವಸ್ತುಗಳಲ್ಲಿ, ಅನೇಕ ಭಾವನೆ ಮತ್ತು ವಿಚಾರಗಳಲ್ಲಿ ಹಾಗೂ ಕರ್ಮಗಳಲ್ಲಿ ಪರಮಾತ್ಮನನ್ನು ನೋಡಿರಿ. ಯೋಗಾಭ್ಯಾಸದಲ್ಲಿ ನಿತ್ಯ ನಿರಂತರ ಹತ್ತಿರಿ. ಭಗವಂತನ ದಯೆಯನ್ನು ಪಡೆಯುವದರಲ್ಲಿ ತಡವಾದರೆ ಗಾಬರಿಯಾಗಬೇಡಿರಿ. ಸಂತೋಷವನ್ನು ಇಡಿರಿ. ಅಂದರೆ ಪರಮಾತ್ಮ ಪದಪ್ರಾಪ್ತಿಯಲ್ಲಿ ಸಫಲರಾಗುವಿರಿ.

ಕೆಲವು ವರ್ಷಗಳಿಂದ ನಾನು ಸಾಧು ಪ್ರಜ್ಞಾನಾಥರನ್ನು ಬಲ್ಲೆ. ಅವರು ನಿರ್ಮಲಾತ್ಮರೂ ತಪಸ್ವಿಗಳೂ, ಉಚ್ಚಕೋಟಿಯ ಸನ್ಯಾಸಿಗಳೂ ಇರುವರು. ಹಲವು ವರ್ಷಗಳ ವರೆಗೆ ಉತ್ತರಕಾಶಿ ಹಿಮಾಲಯದಲ್ಲಿ ಏಕಾಂತದಲ್ಲಿ ಇರುತ್ತಾರೆ.

ಒಟ್ಟಿನ ಮೇಲೆ ನಾಥಯೋಗವೆಂದರೆ ನಾದಯೋಗವು. ದಿವ್ಯಧ್ವನಿಯನ್ನು ಕೇಳುವ ಯೋಗವಿರುತ್ತದೆ. ಆ ಯೋಗದ ಸಾಧನವು ಜಾಬಾಲ ದರ್ಶನೋಪನಿಷತ್, ಪಾತಂಜಲಿಯೋಗ, ಹಠಯೋಗ ಪ್ರದೀಪಿಕಾ, ಘೇರಂಡ ಸಂಹಿತಾ ಮೊದಲಾದ ಹಿಂದೂ ವೇದಾಂತಿಕ ಶಾಸ್ತ್ರಗಳಲ್ಲಿ ಕೊಟ್ಟಿರುತ್ತದೆ. ಇದಕ್ಕೋಸುಗ ಶ್ರೀ ಸಾಧು ಪ್ರಜ್ಞಾನಾಥ ಪ್ರಣೀತವಾದ ಈ ಪುಸ್ತಕವು ನಾಥಯೋಗವು ಸಹ ಹಿಂದುಗಳ ಯೋಗಶಾಸ್ತ್ರದಲ್ಲಿ ಒಂದು ಒಳ್ಳೇ ಯೋಗವನ್ನು ಕೊಡುವದು.

ಕೆಲವು ಆಸನಗಳನ್ನು ತಿಳಿಸುವುದರ ಅನಂತರ ಬಂಧ ಮತ್ತು ಮುದ್ರೆಗಳೂ ಮುಖ್ಯವಿರುತ್ತವೆ. ಲೇಖಕರು ಮೊದಲು ಧ್ಯಾನದ ರೀತಿ, ಪ್ರಾಣಾಯಾಮದ ನಾಲ್ಕು ಬಗೆಯ ಅಭ್ಯಾಸಗಳನ್ನು ಹೇಳಿರುವರು. ಮತ್ತು ನಾದವು ಹೇಗೆ ಆಭರಣಗಳ ಸಪ್ಪಳ, ಢೋಲ, ಶಂಖ, ಮೇಘ, ವಂಶೀ ಮೊದಲಾದವುಗಳ ಶಬ್ದವು ಪ್ರಥಮಾವಸ್ಥೆಯಲ್ಲಿ ಕೇಳುತ್ತವೆ. ಮತ್ತು ಸಾಧಕನು ಇವುಗಳಿಂದ ದೂರವಿದ್ದು, ನಿರ್ಮಲ ಬ್ರಹ್ಮಪ್ರಾಪ್ತಿಯ ಸಲುವಾಗಿ ಹೇಗೆ ಎಚ್ಚರಾಗಿ ಇರತಕ್ಕದ್ದು ಎಂಬುದನ್ನು ತಿಳಿಸಿರುವರು.

ಅಭ್ಯಾಸಿಗೆ ಯೋಗದ ಬಗ್ಗೆ ದುಃಖ ಮತ್ತು ಕಠಿಣತೆಗಳು ಎದುರಿಗೆ ಬರುವವು ಎಂಬುದನ್ನು ತಿಳಿಸಿ, ಅವುಗಳನ್ನು ದೂರಮಾಡುವ ಉಪಾಯ ಪ್ರಣವ ಜಪದಿಂದ ಮತ್ತು ಯೌಗಿಕ ಕ್ರಿಯೆಯಗಳಿಂದ ಎಂದು ಹೇಳುತ್ತಾರೆ. ಸಾಧನ ಕಾಲದಲ್ಲಿ ಎಂತಹ ಭೋಜನ ಬೇಕು, ಎಂಬುದನ್ನು ಸಹ ಹೇಳಿರುವರು. ಯೋಗಿಯು ತನ್ನ ಅಂತ್ಯಸಮಯದಲ್ಲಿ ಎಂತಹ ಚಿಹ್ನಗಳನ್ನು ಕಾಣುವನು ಎಂಬ ಮನೋಹರ ವಿಷಯವನ್ನು ಹೇಳಿರುವರು.

ಇದರ ವರ್ಣನೆಯು ಜೈನ ಜ್ಯೋತಿಷ ಮೊದಲಾದ ಗ್ರಂಥಗಳಲ್ಲಿಯೂ ದೊರೆಯುತ್ತದೆ . ನಾಥಯೋಗದ ಫಲವು ಕೊನೆಗೆ ಕೊಡಲ್ಪಟ್ಟಿದೆ. ಯಾರು ತಮ್ಮ ಜಿಜ್ಞಾಸುಗಳ ಮೇಲೆ ಪರಮಾತ್ಮನ ದಯಾ ಭಾವವನ್ನು ಹೇಳಿರುತ್ತಾರೆ - ಪರಮಾತ್ಮನು ಯೋಗಾಭ್ಯಾಸಿಗೆ ದರ್ಶನ ಕೊಡುತ್ತಿರುವನು ಮತ್ತು ಎಲ್ಲ ಯೋಗಾಭ್ಯಾಸದಿಂದ ಜೀವನದ ಮುಖ್ಯಧ್ಯೇಯವನ್ನು ಪ್ರಾಪ್ತ ಮಾಡಿಕೊಳ್ಳುವನು.

ಋಷಿಕೇಶ
೩೦.೧.೧೯೪೦

ಸ್ವಾಮಿ ಶಿವಾನಂದಜಿ.

❖❖

೨೩

# ನಾಥಯೋಗಿ ಸಂಪ್ರದಾಯ

ಅತಿ ಪ್ರಾಚೀನ ಕಾಲದಿಂದ ಪರಮಾರ್ಥನಿಷ್ಠ ಆರ್ಯ ಸಮಾಜದಲ್ಲಿ ಮುಮುಕ್ಷುಗಳ ಮೋಕ್ಷಪ್ರಾಪ್ತಿಗೋಸುಗ ಜ್ಞಾನಮಾರ್ಗ, ಯೋಗಮಾರ್ಗಗಳೆಂಬ ಎರಡು ಸಾಧನ ಮಾರ್ಗಗಳು ಪ್ರಚಲಿತವಿರುತ್ತವೆ. ಮಹಾಭಾರತದ ರಚನೆಯ ಮೊದಲೇ ಸಂಭವತಃ ವೈದಿಕ ಯುಗದಿಂದಲೇ ವೈದಿಕ ಕರ್ಮಕಾಂಡದಲ್ಲಿ ಅತೃಪ್ತರಾದ ಜ್ಞಾನಮಾರ್ಗಾವಲಂಬಿಗಳೂ, ಯೋಗಮಾರ್ಗಾವಲಂಬಿಗಳೂ ಎಂಬ ಎರಡು ಮುಖ್ಯ ಸಂಪ್ರದಾಯಗಳು ಇದ್ದವು ಮತ್ತು ಅವುಗಳು ತಮ್ಮ ತಮ್ಮ ಮತದ ಶ್ರೇಷ್ಠತೆಯನ್ನು ಪ್ರತಿಪಾದಿಸುವ ಉದ್ದೇಶದಿಂದ ತರ್ಕ ವಿತರ್ಕಗಳನ್ನು ಮಾಡುತ್ತಿದ್ದರು. ಮಹಾಭಾರತದ ಶಾಂತಿಪರ್ವದಲ್ಲಿ ಭೀಷ್ಮದೇವನು ಯುಧಿಷ್ಠಿರನಿಗೆ ಹೇಳಿರುವನು-

"ಸಾಂಖ್ಯಾ ಸಾಂಖ್ಯಂ ಪ್ರಶಂಸನ್ತಿ,
ಯೋಗಾಃ ಯೋಗಂ ದ್ವಿಜಾತಯಃ ।
ವದಂತಿ ಕಾರಣಂ ಶ್ರೇಷ್ಠಂ
ಸ್ವಪಕ್ಷೋ, ದ್ಭಾವನಾಯ ವೈ॥"

ಸಾಂಖ್ಯಮತಾವಲಂಬಿಗಳಾದ ದ್ವಿಜಾತಿಗಳು ಸಾಂಖ್ಯ ಅಥವಾ ಜ್ಞಾನಮಾರ್ಗದ ಹಾಗೂ ಯೋಗಮತಾವಲಂಬಿಗಳು ಯೋಗ ಮಾರ್ಗದ ಪ್ರಶಂಸೆಯನ್ನು ಮಾಡುತ್ತಾರೆ. ಮತ್ತು ತಮ್ಮ ತಮ್ಮ ಪಕ್ಷಗಳ ಉತ್ಕರ್ಷ ಪ್ರದರ್ಶನಕ್ಕೋಸುಗ ಅವರು ಶ್ರೇಷ್ಠ ಯುಕ್ತಿಗಳನ್ನು ಹೇಳುತ್ತಿರುವರು.

ಶಾಸ್ತ್ರ ಮತ್ತು ಯುಕ್ತಿಯ ಸಹಾಯದಿಂದ ಎಲ್ಲ ಸ್ಥೂಲ ಮತ್ತು ಸೂಕ್ಷ್ಮ, ಐಹಿಕ ಮತ್ತು ಪಾರಮಾರ್ಥಿಕ ವಿಷಯಗಳ ಅನಿತ್ಯತ್ವ, ಅಶುಚಿತ್ವ. ದುಃಖಕರತ್ವ, ಮೋಹಜನಕತ್ವ ಮೊದಲಾದ ದೋಷ ಹಾಗೂ ಆತ್ಮನ ನಿತ್ಯತ್ವ, ಅಸಂಗತ್ವ, ನಿಷ್ಕ್ರಿಯತ್ವ ಸುಖ-ದುಃಖ ವಿಹೀನತ್ವ, ಕಾರ್ಯ-ಕಾರಣಾತೀತತ್ವ, ಸತ್ಯಜ್ಞಾನಾನಂತ ಸ್ವರೂಪತ್ವ ಮೊದಲಾದ ಗುಣಗಳ ಪರ್ಯಾಲೋಚನೆಯನ್ನು ಮಾಡಿ, ವಿಷಯ ಸಂಪರ್ಕವರ್ಜನ ಪೂರ್ವಕ ಚಿತ್ತವನ್ನು ಆತ್ಮಸ್ವರೂಪದಲ್ಲಿ ಅಥವಾ ಬ್ರಹ್ಮನರೂಪದಲ್ಲಿ ಸಮಾಹಿತ ಮಾಡುವ ವಿಶೇಷ ಪ್ರಯತ್ನವೇ ಜ್ಞಾನಮಾರ್ಗವಲಂಬಿಗಳ ಮೋಕ್ಷಪ್ರಾಪ್ತಿಯ ಸರ್ವೋತ್ಕೃಷ್ಟ ಉಪಾಯವು. ಯೋಗಿಗಳು ಹೇಳುವರು-ಕೇವಲ ವಿಚಾರದಿಂದ ವೈರಾಗ್ಯದ ಪ್ರತಿಷ್ಠೆಯಾಗುವದಿಲ್ಲ. ಪರಮತತ್ವದಲ್ಲಿ ಸ್ಥಿತಿ ಲಾಭವೂ ಆಗುವದಿಲ್ಲ. ಅನಿಯಮಿತ ಭಾವದಿಂದ ಪ್ರಾಣದ ಸ್ಪಂದನವು ನಡೆಯುವವರೆಗೆ ದೇಹ ಮತ್ತು ಇಂದ್ರಿಯಗಳು ಚಂಚಲವಾಗಿರುತ್ತವೆ

ಹಾಗೂ ಅಂತಃಕರಣದ ವೃತ್ತಿಗಳು ಚಂಚಲವಾಗುತ್ತಿರುತ್ತವೆ. ಎಲ್ಲಿಯ ವರೆಗೆ ಇಚ್ಛಾಶಕ್ತಿ ಪ್ರಭಾವದಿಂದ ಪ್ರಾಣವನ್ನು ಆಯತ್ತ, ದೇಹ ಮತ್ತು ಇಂದ್ರಿಯಗಳಿಗೆ ಸ್ಥಿರ ಮತ್ತು ಚಿತ್ತವೃತ್ತಿಗಳನ್ನು ನಿರುದ್ಧ ಮಾಡಲು ಶಕ್ಯವಾಗುವದಿಲ್ಲ. ಚಾಂಚಲ್ಯ ದೂರವಾಗುವದಿಲ್ಲ. ಅಂತಃಕರಣವು ಆತ್ಮಸ್ವರೂಪದಲ್ಲಿ ಸಮಾಹಿತವಾಗುವುದಿಲ್ಲ. ಸುತರಾಂ ಮೋಕ್ಷ ಲಾಭವೂ ಆಗುವದಿಲ್ಲ. ಆದುದರಿಂದ ಯಮ ಮತ್ತು ನಿಯಮ ರೂಪ ಮಹಾವ್ರತದ ಅನುಷ್ಠಾನದಿಂದ ದೇಹೇಂದ್ರಿಯ ಮತ್ತು ಮನದ ಪವಿತ್ರತಾ ಸಂಪಾದನ ಪೂರ್ವಕ ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣಾ, ಧ್ಯಾನ ಸಮಾಧಿಗಳ ಅಭ್ಯಾಸ ಮಾಡುವ ಪ್ರಯೋಜನವು ಇರುತ್ತದೆ. ಈ ಎಲ್ಲ ಸಾಧನೆಗಳಿಂದ ದೇಹೇಂದ್ರಿಯ ಸ್ಥಿರ, ಪ್ರಾಣ ಸ್ಪಂದನವು ನಿಯಮಿತ ಮತ್ತು ಚಿತ್ತವೃತ್ತಿ ನಿರುದ್ಧವಾಗಲು, ಅನಿರ್ಮಲ, ನಿಸ್ತರಂಗ ವಿಷಯ ಸಂಗರಹಿತ, ಆತ್ಮ ಸಮಾಹಿತ ಅಂತಃಕರಣದಲ್ಲಿ ಸ್ವಯಂ ಪ್ರಕಾಶ ಆತ್ಮನ ಸ್ವರೂಪವು ಪ್ರಕಾಶಿತವಾಗುತ್ತದೆ. ಸುತರಾಂ ಇದೇ ಮೋಕ್ಷದ ಪ್ರಕೃಷ್ಟತಮ ಉಪಾಯವು.

ಎರಡನೆಯ ಪಕ್ಷದಲ್ಲಿ ಜ್ಞಾನಮಾರ್ಗಾವಂಬಿಗಳು ಹೇಳುವರು-ವಿಷಯಗಳ ಅನಿತ್ಯತ್ವಾದಿ ದೋಷದರ್ಶನ ಮಾಡಲು ಹಾಗೂ ದೃಶ್ಯಜಗತ್ತಿನೊಡನೆ ಆತ್ಮನ ವಾಸ್ತವಿಕ ಯೋಗರಾಹಿತ್ಯ ವಿಚಾರದಿಂದ ದೃಢರೂಪವಾಗಿ ನಿಶ್ಚಿತವಾಗಲು ಚಿತ್ತವು ಸ್ವಭಾವತಃ ವಿಷಯ ವಿಮುಖವಾಗಿ ಪ್ರಶಾಂತವಾಗುವದು. ಕರ್ಮಪ್ರವೃತ್ತಿ ನಷ್ಟವಾಗುವದು. ಇಂದ್ರಿಯಗಳು ಸ್ಥಿರವಾಗುವವು. ದೇಹೇಂದ್ರಿಯ ಮತ್ತು ಮನಸಿನ ಚಾಂಚಲ್ಯದ ಮೂಲದಲ್ಲಿ ವಾಸನೆ ಮತ್ತು ವಾಸನೆಯ ಮೂಲದಲ್ಲಿ ಅಜ್ಞಾನವು. ಆತ್ಮನಲ್ಲಿ ವಿಷಯದ ಅಧ್ಯಾಸ ಹಾಗೂ ದೇಹಾದಿ ವಿಷಯಗಳಲ್ಲಿ ಆತ್ಮನ ಅಧ್ಯಾಸರೂಪ ಅಜ್ಞಾನವೇ ಸಕಲ ಅನರ್ಥಗಳ ಮೂಲವು. ತತ್ವವಿಚಾರ ಜನಿತ ಜ್ಞಾನದಿಂದ ಅಜ್ಞಾನವು ನಿವಾರಿತವಾಗುವುದು. ಅಜ್ಞಾನದ ನಿವೃತ್ತಿಯಿಂದ ಎಲ್ಲ ಬಗೆಯ ಚಾಂಚಲ್ಯದ ನಿವೃತ್ತಿಯೂ ಆಗುವದು. ಆತ್ಮವಿಷಯಕ ಶ್ರವಣ, ಮನನ, ನಿಧಿ ಧ್ಯಾಸನಗಳಿಂದಲೇ ಆತ್ಮಸ್ವರೂಪದ ಅಪರೋಕ್ಷ ಸಾಕ್ಷಾತ್ಕಾರವಾಗುವುದು. ಜ್ಞಾನಿಯು ಪ್ರಕೃತಿ ಅಥವಾ ಮಾಯಾ ಹಾಗೂ ತಜ್ಜಾತ ಸಕಲ ಪದಾರ್ಥಗಳಲ್ಲಿ ಅನಾಸಕ್ತನಾಗಿ ತದತೀತ ಆತ್ಮಸ್ವರೂಪ ಅಥವಾ ಬ್ರಹ್ಮಸ್ವರೂಪವನ್ನು ಪ್ರಾಪ್ತಮಾಡಿಕೊಂಡು ಮುಕ್ತನಾಗಲು ಬಯಸುವನು ಮತ್ತು ಯೋಗಿಯು ಪ್ರಕೃತಿ ಅಥವಾ ಮಾಯಾ ಮತ್ತು ತದುತ್ಪನ್ನ ದೇಹೇಂದ್ರಿಯ ಅಂತಃಕರಣ ಮೊದಲಾದವುಗಳ ಮೇಲೆ ಆಧಿಪತ್ಯವನ್ನು ಸಂಪಾದಿಸಿ ಮುಕ್ತನಾಗಲು ಇಚ್ಛಿಸುವನು. ಇಬ್ಬರ ಮತದಲ್ಲಿಯೂ ಆತ್ಮನು ಸ್ವರೂಪತಃ ಶುದ್ಧ-ಬುದ್ಧ-ಮುಕ್ತ ಸ್ವಭಾವದವನು. ಆದರೆ ಸಾಧನ ಪದ್ಧತಿಯಲ್ಲಿ ಇಬ್ಬರಲ್ಲಿ ಭಿನ್ನತೆಯು ಇರುತ್ತದೆ. ಜ್ಞಾನಮಾರ್ಗ ಮತ್ತು ಯೋಗಮಾರ್ಗದ ಸಾಧನಪದ್ಧತಿಯಲ್ಲಿ ಭಿನ್ನತೆಯು ಇದ್ದರೂ ಫಲಸಂಬಂಧದಿಂದ ಯಾವ ಭಿನ್ನತೆಯೂ ಇರುವದಿಲ್ಲ. ಗೀತೆಯಲ್ಲಿ ಭಗವಂತನು ಹೇಳಿರುತ್ತಾನೆ.

"ಯತ್ ಸಾಂಖ್ಯೈಃ ಪ್ರಾಪ್ಯತೇ ಜ್ಞಾನಂ,
ತದ್ ಯೋಗೈರಪಿ ಗಮ್ಯತೇ।
ಏಕಂ ಸಾಂಖ್ಯಂ ಚ ಯೋಗಂ ಚ
ಯಃ ಪಶ್ಯತಿ ಸ ಪಶ್ಯತಿ।"

ಸಾಂಖ್ಯಮಾರ್ಗಾವಲಂಬಿಗಳು ಯಾವ ಸ್ಥಾನವನ್ನು ಸಂಪಾದಿಸುತ್ತಾರೋ ಯೋಗ ಮಾರ್ಗಾವಲಂಬಿಗಳು ಅದೇ ಸ್ಥಾನವನ್ನು ಪ್ರಾಪ್ತ ಮಾಡಿಕೊಳ್ಳುತ್ತಾರೆ. ಆದುದರಿಂದ ಸಾಂಖ್ಯ ಮತ್ತು ಯೋಗಿಗಳಿಗೆ ಫಲತಃ ಒಂದೇ ಎಂದು ಯಾವನು ನೋಡುತ್ತಾನೆ, ಅವನು ಯಥಾರ್ಥವಾಗಿಯೇ ದರ್ಶನ ಮಾಡುತ್ತಾನೆ. ಮಹಾಭಾರತದಲ್ಲಿ ಭೀಷ್ಮದೇವನು ಯುಧಿಷ್ಠಿರನಿಗೆ ಹೇಳಿದ್ದಾನೆ.

"ಉಭೇ ಚೈತೇ ಮತೇ ಜ್ಞಾನೇ
ನೃಪತೇ ಶಿಷ್ಟಸಮ್ಮತೇ ।
ಅನುಷ್ಠಿತೇ ಯಥಾಶಾಸ್ತ್ರಂ
ನಯೇತಾಂ ಪರಮಾಂ ಗತಿಮ್"

ಎಲೈ ರಾಜನೇ ಉಭಯ ಸಾಧನ ಜ್ಞಾನಗಳು ಶಿಷ್ಟಸಮ್ಮತವೆಂದು ಶ್ರದ್ಧಾರ್ಹವು. ಯಥಾ ಶಾಸ್ತ್ರ ಅನುಷ್ಠಿತವಾಗಲಿ ಎರಡೂ ಪರಮಗತಿಯನ್ನು ಕೊಡುವವು.

ಮಧ್ಯಯುಗದಲ್ಲಿ ಜ್ಞಾನಸಾಧನೆ ಮತ್ತು ಯೋಗಸಾಧನೆಯ ವೈಜಯಂತಿಯನ್ನು ತೆಗೆದುಕೊಂಡು ಇಬ್ಬರು ಅಲೌಕಿಕ ಶಕ್ತಿಸಂಪನ್ನರಾದ ಮಹಾಪುರುಷರು ಆಧ್ಯಾತ್ಮಿಕ ಸಾಧನ ಕ್ಷೇತ್ರದಲ್ಲಿ ಭಾರತದಲ್ಲಿ ಆವಿರ್ಭೂತರಾಗಿದ್ದರು. ಒಬ್ಬನು ವೇದಾಂತಾಚಾರ್ಯನಾದ ಶಂಕರ ಮತ್ತು ಇನ್ನೊಬ್ಬನು ಯೋಗಾಚಾರ್ಯನಾದ ಗೋರಕ್ಷನಾಥನು. ಶಂಕರನಿಂದ ವೈದಾಂತಿಕ ಜ್ಞಾನ ಸಾಧನೆ ಮತ್ತು ಜ್ಞಾನಿಸಂಪ್ರದಾಯ ಹೇಗೆ ನವಜೀವವನ್ನುಂಟು ಮಾಡಿದೆಯೋ, ಹಾಗೆಯೇ ಗೋರಕ್ಷನಾಥನಿಂದ ಯೋಗಸಾಧನೆ ಮತ್ತು ಯೋಗೀಸಂಪ್ರದಾಯ ನವಜೀವನವನ್ನು ಪಡೆದಿದೆ. ಜ್ಞಾನೀಗುರು ಶಂಕರನು ವೇದಾಂತಶಾಸ್ತ್ರದ ಪ್ರಚಾರ ಮತ್ತು ಜ್ಞಾನಸಾಧನೆಯ ಪ್ರಚಲನದ ಉದ್ದೇಶದಿಂದ ಸನ್ಯಾಸಿ ಸಂಪ್ರದಾಯವನ್ನು ಪುನರ್ಘಟಿತ ಮಾಡಿ, ಅವುಗಳನ್ನು ಕೆಲವು ಶಾಖೆಗಳಲ್ಲಿ ವಿಭಕ್ತ ಮಾಡಿದನು. ಹಾಗೂ ಮುಖ್ಯ ಮುಖ್ಯ ಸ್ಥಾನಗಳಲ್ಲಿ ಮಠಗಳನ್ನು ಸ್ಥಾಪನೆಮಾಡಿ, ಆ ಎಲ್ಲ ಸ್ಥಾನಗಳನ್ನು ಜ್ಞಾನಸಾಧನೆಯ ಕೇಂದ್ರದಲ್ಲಿ ಪರಿಣತ ಮಾಡಿದನು. ಈ ಬಗೆಯಾಗಿ ದಶನಾಮೀ ಸನ್ಯಾಸಿ ಸಂಪ್ರದಾಯಗಳಿಂದ ಸಮಗ್ರ ಭಾರತದಲ್ಲಿ ವೇದಾಂತದ ತತ್ವ ಮತ್ತು ಸಾಧನಾ ಶಿಕ್ಷಣದಾನದ ವ್ಯವಸ್ತೆ ಮಾಡಿದನು. ಯೋಗಿ ಗುರು ಗೋರಾಕ್ಷನಾಥನೂ ಯೋಗಸಾಧನೆಯ ಪ್ರಚಲನೋದ್ದೇಶ್ಯದಿಂದ ಯೋಗೀ ಸಂಪ್ರದಾಯದ ಪುನರ್ಘಟನೆ ಮಾಡಿ, ಅವರಿಗೆ ಕೆಲವು ಶಾಖೆಗಳಲ್ಲಿ ವಿಭಕ್ತ ಮಾಡಿದನು. ಬೇರೆ ಬೇರೆ ಸ್ಥಾನಗಳಲ್ಲಿ ಆಶ್ರಮಗಳನ್ನು ಪ್ರತಿಷ್ಠೆಮಾಡಿ ಯೋಗಶಿಕ್ಷಣದ ಕೇಂದ್ರಗಳನ್ನು ಸ್ಥಾಪನೆ ಮಾಡಿದನು ಹಾಗೂ ಸ್ವಕೀಯ ಅಲೌಕಿಕ ಪ್ರಭಾವವನ್ನು ವಿಸ್ತಾರಮಾಡಿ. ಶಿಷ್ಯ-ಪ್ರಶಿಷ್ಯರಿಂದ ಸಮಗ್ರ ಭಾರತದಲ್ಲಿ ಯೋಗಧರ್ಮದ ಪ್ರಚಾರದ ವ್ಯವಸ್ಥೆಯನ್ನು ಮಾಡಿದನು. ಮೋಕ್ಷಾಭಿಲಾಷಿ ಸಂಸಾರವಿರಾಗಿ ಸನ್ಯಾಸಿಗಳಿಗೋಸುಗ ಶಂಕರನು ಹೇಗೆ ಜ್ಞಾನಸಾಧನೆಯ ವಿಧಾನವನ್ನು ಮಾಡಿದನೋ, ಗೋರಕ್ಷನಾಥನೂ ಹಾಗೆಯೇ ಯೋಗಸಾಧನೆಯ ವ್ಯವಸ್ಥೆಯನ್ನು ಮಾಡಿದನು.

ಶಂಕರ ಮತ್ತು ಗೋರಕ್ಷನಾಥ ಇಬ್ಬರೂ ಸಾಕಾರ ಉಪಾಸನೆಯ ವಿರೋಧಿಗಳಲ್ಲ. ಭಕ್ತಿ ಮತ್ತು ಆಚಾರನಿಷ್ಠೆಯೊಡನೆ ದೇವತೆಯ ಉಪಾಸನೆಯನ್ನು ಮಾಡುತ್ತ ಮಾಡುತ್ತ, ದೇಹೇಂದ್ರಿಯಗಳು ಮತ್ತು ಮನವು ವಿಶುದ್ಧವಾಗುವುವು. ಹೃದಯವೂ ಧರ್ಮಾನುರಾಗಿ ಆಗುವುದು. ಧರ್ಮದ ನಿಗೂಢ ರಹಸ್ಯವನ್ನು ತಿಳಿಯುವುದಕ್ಕೋಸುಗ ಆಗ್ರಹವು ಜನ್ಮಿಸುವುದು ಹಾಗೂ ಯೋಗಸಾಧನಾ ಅಥವಾ ಜ್ಞಾನಸಾಧನೆಯ ಅಥವಾ ಜ್ಞಾನಸಾಧನೆಯ ಅಧಿಕಾರವು ಬರುವುದು. ಆದುದರಿಂದ ಲೋಕೋತ್ತರ ಮಹಾಪುರುಷರು ಲೋಕಶಿಕ್ಷಣಕ್ಕೋಸುಗ ಪ್ರಥಮತಃ ಸಾಧಾರಣ ಧರ್ಮಪಾರಾಯಣ ಜನರ ಹಾಗೆ ದೇವತೆಯ ಸಾಕಾರಮೂರ್ತಿಯ ಪೂಜಾ ಅರ್ಚನಾದಿಗಳನ್ನು ಮಾಡುತ್ತಾರೆ. ಗೀತೆಯಲ್ಲಿಯೂ ಹೇಳಿದೆ.

"ಯದ್ ಯದಾಚರತಿ ಶ್ರೇಷ್ಠಸ್ತತ್ತದೇವೇತರೋ ಜನಃ ।
ಸ ಯತ್ ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ॥

ಶ್ರೇಷ್ಠವ್ಯಕ್ತಿಗಳು ಹೇಗೆ ಆಚರಣೆಯನ್ನು ಮಾಡುತ್ತಾರೆ, ಸಾಮಾನ್ಯ ಜನರೂ ಅದೇ ಬಗೆಯಾಗಿ ಆಚರಣೆ ಮಾಡುತ್ತಾರೆ. ಶ್ರೇಷ್ಠವ್ಯಕ್ತಿಗಳು ತಮ್ಮ ಆಚರಣೆ ಮತ್ತು ಉಪದೇಶಗಳಿಂದ ಯಾವ ಶಾಸ್ತ್ರದ ಪ್ರಾಮಾಣ್ಯ ಪ್ರತಿಪಾದನೆ ಮಾಡುತ್ತಾರೆ, ಸಾಮಾನ್ಯ ಜನರೂ ಅದೇ ಶಾಸ್ತ್ರಗಳನ್ನೇ ಅನುವರ್ತನೆ ಮಾಡುತ್ತಾರೆ.

ಯೋಗಾಧಿಕಾರಿಗಳಾದ ಸಾಧಕರಿಗೆ ಮೋಕ್ಷಪ್ರದವಾದ ಯೋಗಪಥದಲ್ಲಿ ತರುವದಕ್ಕೋಸುಗವೇ ಯೋಗಿಗುರು ಗೋರಕ್ಷನಾಥನು ನಾಥಸಂಪ್ರದಾಯದ ಸಂಘಟನೆಯನ್ನು ಮಾಡಿದನು. ನಾಥಯೋಗೀ ಸಂಪ್ರದಾಯವು ದ್ವಾದಶಪಂಥ ಅಥವಾ ಶಾಖೆಗಳಲ್ಲಿ ವಿಭಕ್ತವು. ಯಥಾ -ಸತ್ಯನಾಥಿ, ಧರ್ಮನಾಥಿ, ರಾಮಪಂಥ, ನಾಟೇಶ್ವರಿ, ಕನ್‌ಫಡ, ಕಪಿಲಾನಿ, ವೈರಾಗ್ಯ, ಮೀನನಾಥಿ, ಆಈಪಂಥ, ಪಾಗಲಪಂಥ, ಧ್ವಜಪಂಥ ಮತ್ತು ಗಂಗಾನಾಥಿ. ಶಂಕರನ ದಶನಾಮೀ ಸನ್ಯಾಸಿ ಸಂಪ್ರದಾಯದಂತೆ ಇವರು ಬಾರಪಂಥಿಯೋಗಿ ಸಂಪ್ರದಾಯವೆಂದು ಆಖ್ಯಾತವು. ಪ್ರತಿಯೊಂದು ಪಂಥಕ್ಕೂ ಒಂದೊಂದು ಮುಖ್ಯಸ್ಥಾನವಿರುತ್ತದೆ ಹಾಗೂ ಒಂದೊಂದು ಭಾಗದಲ್ಲಿ ಒಂದೊಂದು ಪಂಥದ ಪ್ರಾಧಾನ್ಯತೆಯು ಕಂಡುಬರುತ್ತದೆ. ಪಂಥಗಳಿಗೆ ಪ್ರಾಯಃ ಪ್ರತಿಯೊಂದಕ್ಕೂ ಯಾವದೊಂದು ದೇವತೆ ಅಥವಾ ಪೌರಾಣಿಕ ಮಹಾಪುರುಷನನ್ನು ತಮ್ಮ ಮೂಲಪ್ರವರ್ತಕವೆಂದು ನಿರ್ದೇಶಮಾಡುತ್ತಾರೆ. ಕೆಳಗೆ ಈ ಎಲ್ಲ ಪಂಥಗಳ ಕಿಂಚಿತ್ ವಿವರಣೆಯು ಕೊಡಲ್ಪಟ್ಟಿದೆ.

೧. ಸತ್ಯನಾಥೀ ಪಂಥ - ಯೋಗೀಗುರು ಸತ್ಯನಾಥನಿಂದ ಪ್ರವರ್ತಿತವು. ಓಡಿಸಾ ಪ್ರದೇಶದಲ್ಲಿ 'ಪಾತಾಲ ಭುವನೇಶ್ವರ'ವು ಈ ಪಂಥದ ಮುಖ್ಯಸ್ಥಾನವೆಂದು ಹೇಳಿದೆ.
೨. ಧರ್ಮನಾಥೀ ಪಂಥ - ಈ ಪಂಥದ ಮೂಲ ಪ್ರವರ್ತಕನು ಧರ್ಮರಾಜ-ಯುಧಿಷ್ಠಿರನು. ಇದರ ಮುಖ್ಯಸ್ಥಾನವು ನೇಪಾಳರಾಜ್ಯದಲ್ಲಿದ್ದ 'ಮಲ್ಲು-ದೇಲಕ (ವರ್ತಮಾನ ಕಪಿಲವಸ್ತುವಿನಿಂದ ಒಂದು ನೂರು ಮೈಲು ವಾಯುವ್ಯದಲ್ಲಿ).
೩. ರಾಮಪಂಥ - ಇದರ ಪ್ರವರ್ತಕನು ತ್ರೇತಾಯುಗದ ಶ್ರೀ ರಾಮಚಂದ್ರನು. ಇದರ ಮುಖ್ಯಸ್ಥಾನವು 'ಚೌಕ ತಾಪ್ಪೇ -ಪಾಚೋಯಾಡಾ (ಗೋರಕ್ಷಪುರ ಸದರ ಮಹಕೂಮಾದ ಅಂತರ್ಗತವು).
೪. ನಾಟೇಶ್ವರ ಪಂಥ - ಇದರ ಪ್ರವರ್ತಕನು ಲಕ್ಷ್ಮಣಯೋಗಿಯೆಂದು ತಮ್ಮ ಪರಿಚಯವನ್ನು ಮಾಡಿಕೊಡುತ್ತಾರೆ. ಇವರ ಮುಖ್ಯಸ್ಥಾನವು ಗೋರಕ್ಷಟಿಲಾ (ಪಂಜಾಬದ ಜೇಲಮ್ ಜಿಲ್ಲೆಯ ಅಂತರ್ಗತ ರೋತಸ್‌ಗಡದ ಹತ್ತರ ಒಂದು ಗುಡ್ಡದಲ್ಲಿ ಇರುವದು).
೫. ಕನ್‌ಫಡ ಪಂಥ - ಇದರ ಪ್ರವರ್ತಕನು ಗಣೇಶಯೋಗಿಯೆಂದು ಆತ್ಮಪರಿಚಯ ಮಾಡಿಕೊಡುತ್ತಾರೆ. ಇವರ ಮುಖ್ಯಸ್ಥಾನವು 'ಮಾನಕಡಾ'(ಕಚ್ಛ-ಭೂಜ ರಾಜ್ಯದಲ್ಲಿ ಇರುವದು).
೬. ಕಪಿಲಾನಿ ಪಂಥ - ಈ ಪಂಥವು ಕಪಿಲಮುನಿಯಿಂದ ಪ್ರವರ್ತಿತವು. ಇದರ ಮುಖ್ಯ ಸ್ಥಾನವು ಗಂಗಾಸಾಗರವು. ಕಲಕತ್ತೆಯ ಹತ್ತರದಲ್ಲಿಯ 'ಡಮಡಮ'ದಲ್ಲಿ.
೭. ವೈರಾಗ್ಯಪಂಥ - ಇದು ರಾಜಾ ಭರ್ತೃಹರಿಯಿಂದ ಪ್ರವರ್ತಿತವು. ಇದರ ಮುಖ್ಯಸ್ಥಾನವು 'ರಾತಾಡುಂಡಾ' (ಅಜಮೀರದ ಸಮೀಪದಲ್ಲಿ ಪುಷ್ಕರದಿಂದ ಆರು ಮೈಲು ಪಶ್ಚಿಮಕ್ಕೆ).
೮. ಮೀನನಾಥಿ ಪಂಥ- ಇದರ ಪ್ರವರ್ತಕನು ರಾಜಾ ಗೋಪಿಚಂದ್ರನು. ಇದರ ಮುಖ್ಯಸ್ಥಾನವು ಅಜ್ಞಾತವು. 'ಜೋಧಪುರ'ದ ಮಹಾಮಂದಿರ ಮಠವು ಈ ಪಂಥದ ಪ್ರಸಿದ್ಧ ಸ್ಥಾನವು.
೯. ಆಈ ಪಂಥ - ಇದು ಭಗವತೀ ವಿಮಲಾನಂದ ಪ್ರವರ್ತಿತವೆಂದು ಹೇಳಿದೆ. ಇದರ ಮುಖ್ಯಸ್ಥಾನವು 'ಯೋಗಿಗುಫಾ' ಅಥವಾ 'ಗೋರಕ್ಷಪೂಂಈ'. ಇದು ಪ್ರಾಚೀನ ಗೌಡದ ಅತರ್ಂಗತವಾದ ವರ್ತಮಾನ ' ದಿನಾಜಪುರ' ಜಿಲ್ಹೆಯಲ್ಲಿ ಅವಸ್ಥಿತ.
೧೦. ಪಾಗಲಪಂಥ - ಯೋಗಿಗುರು ಚೌರಂಗಿನಾಥನಿಂದ ಇದು ಪ್ರವರ್ತಿತವು. ಇದರ ಮುಖ್ಯಸ್ಥಾನವು 'ಬೋಹರ'. ಪ್ರಾಚೀನ ಇಂದ್ರಪ್ರಸ್ತದಿಂದ '೩೫' ಮೈಲು ಪಶ್ಚಿಮದಲ್ಲಿ ಅವಸ್ಥಿತವು.
೧೧. ಧ್ವಜಪಂಥ - ಇದು ಹನುಮಾನನಿಂದ ಪ್ರವರ್ತಿತವು. ಈ ಪಂಥದ ಪ್ರಸಿದ್ಧ ಸ್ಥಾನವು ಅಜ್ಞಾತವು.

೧೨. ಗಂಗಾನಾಥಿ ಪಂಥ - ಇದರ ಪ್ರವರ್ತಕನು ಗಂಗಾಪುತ್ರ ಭೀಷ್ಮದೇವನು. ಇದರ ಮುಖ್ಯಸ್ಥಾನವು 'ಜಖಬಾರ' (ಪಂಜಾಬದ ಗುರುದಾಸಪುರ ಜಿಲ್ಹೆಯ ಅಂತರ್ಗತ 'ಪಾಟಾನ ಕೋಟ'ದಿಂದ ಆರು ಮೈಲು ದೂರದಲ್ಲಿ).

ಈ ಹನ್ನೆರಡು ಪಂಥಗಳ ಹೊರತು ನಾಥಯೋಗಿ ಸಂಪ್ರದಾಯದ ಇನ್ನೂ ಅನೇಕ ಶಾಖಾ ಪ್ರಶಾಖೆಗಳು ಇರುತ್ತವೆ ಹಾಗೂ ಅವುಗಳ ದೊಡ್ಡ ದೊಡ್ಡ ಆಶ್ರಮಗಳೂ ಇರುತ್ತವೆ.

೧. ಸಿದ್ಧಕೇರಾನಾ - ಈ ಸ್ಥಾನವು ಈಗ ಪಂಜಾಬದ 'ಸಾರಗೋದಾ'ದ ಅಂತರ್ಗತವು. ಇದು ಮೊದಲು ಪಂಜಾಬದ 'ಸಾಹಪುರ'ದಲ್ಲಿ ಇತ್ತು.

೨. ಪೇಶಾವರ - ಈ ಸ್ಥಾನವು ರತನನಾಥನ ಹೆಸರಿನಿಂದ ಪ್ರಸಿದ್ಧವು. ಈ ಪಂಥದ ಹೆಸರು ರತನನಾಮೀ. ಸ್ಥಾನವು ಕುರುಕ್ಷೇತ್ರದ ಹತ್ತಿರ.

೩. ಭೇಡಾ-ಇದು 'ಪೀರ-ಕಾಯಾನಾಥನ' ಹೆಸರಿನಿಂದ ಪ್ರಸಿದ್ಧವು. ಈ ಶಾಖೆಯ ಹೆಸರು 'ಪೀರ ಕಾಯನಾಥಿ'

೪. ಧಿನೋದರ-ಇದು ಕಚ್ಛರಾಜ್ಯದಲ್ಲಿರುವದು. ಈ ಶಾಖೆಯು 'ಧರ್ಮನಾಥಿ ಪಂಥದ' ಅಧೀನದಲ್ಲಿ ಒಪ್ಪುತ್ತಾರೆ.

೫. ಗೋರಕ್ಷಮಣಿ-ಇದು ಜುನಾಗಡ ರಾಜ್ಯದಲ್ಲಿ (ಪ್ರಭಾಸ ಕ್ಷೇತ್ರದಿಂದ ನಾಲ್ಕು ಮೈಲು ದೂರದಲ್ಲಿ) ಇದೆ.

ಈ ಎಲ್ಲ ಸ್ಥಾನಗಳ ಹೊರತು ಸಿದ್ಧಯೋಗಿಗಳು ತಮ್ಮ ತಪಃಪ್ರಭಾವದಿಂದ ಅನೇಕ ಪ್ರಸಿದ್ಧ ಆಶ್ರಮಗಳನ್ನು ಸ್ಥಾಪಿಸುತ್ತಾರೆ. ಭಾರತದ ಪ್ರಾಯಃ ಎಲ್ಲೆಡೆಯಲ್ಲಿಯೂ ನಾಥಯೋಗಿ ಸಂಪ್ರದಾಯದ ಮುಖ್ಯ-ಮುಖ್ಯ ಆಶ್ರಮಗಳು ಪ್ರತಿಷ್ಠಿತವಾಗಿರುತ್ತವೆ. ಭಾರತದ ಹೊರಗೆ ಹಲವು ಸ್ಥಾನಗಳಲ್ಲಿ ನಾಥಯೋಗಿಗಳ ಸ್ಥಾನ ಮತ್ತು ಪ್ರಭಾವವು ಕಂಡುಬರುತ್ತದೆ.

ನಾಥಯೋಗೀ ಸಂಪ್ರದಾಯವು ಎಷ್ಟು ಶಾಖೆಗಳಲ್ಲಿ ವಿಭಕ್ತವಾಗಿರಲಿ ಹಾಗೂ ಯಾವ ವಿಷಯದಲ್ಲಿ ಅವರ ಮತದಲ್ಲಿ ಮತ್ತು ಆಚಾರದಲ್ಲಿ ಅವಾಂತರ ಭಿನ್ನತ್ವವು ಯಾವುದೇ ಇರಲಿ, ಸಾಧ್ಯ ಸಾಧನ ಸಂಬಂಧದ ಪ್ರಧಾನ ವಿಷಯದಲ್ಲಿ ಅವರೆಲ್ಲರ ಮತ ಮತ್ತು ಆಚಾರ ವ್ಯವಹಾರ ಪ್ರಾಯಃ ಒಂದೇ ಪ್ರಕಾರವಾಗಿವೆ. ಅವರೆಲ್ಲರು ಒಂದೇ ವಿರಾಟ ಸಂಪ್ರಾಯದ ಅಂತರ್ಭುಕ್ತವು. ಅದರ ಪರಿಚಯವು ಪ್ರತಿಯೊಂದು ಶಾಖೆಯ ಮತದಲ್ಲಿ ಮತ್ತು ಆಚಾರದಲ್ಲಿ ಜಾಜ್ವಲ್ಯಮಾನವು. ಎಲ್ಲ ಪಂಥಗಳೂ ಶ್ರೀ ಆದಿನಾಥನಿಗೆ ಸಂಪ್ರದಾಯದ ಆದಿಪುರುಷನೆಂದು ಒಪ್ಪುತ್ತಾರೆ. ಎಲ್ಲ ಸಂಪ್ರದಾಯಗಳು ಆದಿನಾಥನು ಸ್ವಯಂ ಶಿವನು ಅಥವಾ ಸ್ವಯಂ ಶಿವನೇ ಆದಿನಾಥನು ಎಂದು ಹೇಳುವರು. ಮೂಲತಃ ಸಮಗ್ರ ನಾಥಯೋಗೀ ಸಂಪ್ರದಾಯವೇ ಶೈವಸಂಪ್ರದಾಯವು ಮತ್ತು ಎಲ್ಲರ ಮೂಲ ಉಪಾಸ್ಯವು ಶಿವನು. ಗೋಸೇವಾ ಮತ್ತು ಗೋರಕ್ಷಣೆಯ ಕಡೆಗೆ ಎಲ್ಲ ನಾಥಯೋಗಿಗಳು ವಿಶೇಷ ಆಗ್ರಹ ಪರಿಲಕ್ಷಿತವಾಗುತ್ತದೆ. ನಾಥಸಂಪ್ರದಾಯದ ಮತದಲ್ಲಿ ಗೋಜಾತಿಯ ಸೇವಾ-ಸುಶ್ರೂಷೆ ಮತ್ತು ರಕ್ಷಣಾ ವೇಕ್ಷಣದ ಕಡೆಗೆ ಗೋರಕ್ಷನಾಥನ ವಿಶೇಷ ಆಗ್ರವಿತ್ತೆಂದೇ ಅವನು 'ಗೋರಕ್ಷನಾಥ' ಹೆಸರಿನಿಂದ ಪರಿಚಿತವಾಗಿದ್ದನು. ಏನೇ ಆಗಲಿ, ಸಮಗ್ರ ಹಿಂದೂ ಸಮಾಜದ ಮೇಲೆ ಗೋರಕ್ಷನಾಥನ ಪ್ರಭಾವವು ಅಸಾಧಾರಣವು.

ದಶನಾಮೀ ಸನ್ಯಾಸಿಗಳು ಹೇಗೆ ತೀರ್ಥ, ಆಶ್ರಮ, ಸರಸ್ವತಿ, ಪುರೀ, ಭಾರತಿ, ವನ, ಅರಣ್ಯ, ಗಿರಿ, ಪರ್ವತ, ಸಾಗರ-ಈ ಹತ್ತು ಬಗೆಯ ಉಪಾಧಿಗಳಲ್ಲಿ ತಮ್ಮ ತಮ್ಮ ಸಾಂಪ್ರದಾಯಿಕ ವಿಭಾಗಾನುಸಾರವಾಗಿ ಯಾವದೊಂದು ಉಪಾಧಿಯನ್ನು ಗುರುಪ್ರದತ್ತ ನಾಮದೊಡನೆ ಗ್ರಹಣ ಮಾಡಿದರೂ ಎಲ್ಲರ ಸಾಧಾರಣ ಉಪಾಧಿಯು ಸ್ವಾಮಿಯೆಂದು. ಅದೇ ಪ್ರಕಾರ ಯೋಗಿಗಳ ಸಾಧಾರಣ ಉಪಾಧಿ'ನಾಥ'. ಅವರು ಮೊದಲು ಹೇಳಿದ ಹನ್ನೆರಡು ಪಂಥಗಳಲ್ಲಿ ವಿಭಕ್ತವಾಗಿದ್ದರೂ ಅವರ ಹೆಸರಿನ ಅಥವಾ ಉಪಾಧಿಯಲ್ಲಿ ತಮ್ಮ ತಮ್ಮ ಪಂಥಗಳ ವಿಶೇಷ ಯಾವ ನಿದರ್ಶನವನ್ನು ಇಡುವುದಿಲ್ಲ. ಭೋಗಾಕಾಂಕ್ಷೆಯನ್ನು ಪರಿತ್ಯಜಿಸಿ ಸನ್ಯಾಸವನ್ನು

ಅವಲಂಬನಮಾಡಿ ಅವರು ತಮ್ಮ ದೇಹ, ಇಂದ್ರಿಯ ಮತ್ತು ಮನಗಳ ಮೇಲೆ ಹಾಗೂ ಕರ್ಮಭೋಗಮಯ ಸಂಸಾರದ ಮೇಲೆ ನಾಥತ್ವ ಅಥವಾ ಆಧಿಪತ್ಯವನ್ನು ಪಡೆದಿರುತ್ತಾರೆಂದೇ ಸಂಭವತಃ ಅಂತಹ ಉಪಾಧಿಯ ಅಧಿಕಾರಿಯಾದರು.

ನಾಥಸಂಪ್ರಾದಯದ ಸಾಧಕರಲ್ಲಿ ವಿಭಿನ್ನ ಪ್ರಕಾರ ದೀಕ್ಷೆಯು ಪ್ರಚಲಿತವಿರುತ್ತದೆ. ಪ್ರಥಮತಃ ಮಂತ್ರದೀಕ್ಷೆ - ಇದರಲ್ಲಿ ಗುರುವು ಶಿಷ್ಯನ ಕರ್ಣದಲ್ಲಿ ಶಕ್ತಿಸಮನ್ವಿತ ಪವಿತ್ರ ಸಿದ್ಧ ಮಂತ್ರವನ್ನು ಕೊಡುತ್ತಾನೆ. ಈ ದೀಕ್ಷೆಯ ಕಾಲದಲ್ಲಿ ಗುರುವು ಶಿಷ್ಯನ ಅಧಿಕಾರಾನುಸಾರವಾಗಿ ಒಂದು ಅಥವಾ ಒಂದಕ್ಕಿಂತ ಹೆಚ್ಚು ನಾಮ ಅಥವಾ ಹಂಸ ಮಂತ್ರವನ್ನು ಜಪಮಾಡಲು ಹೇಳಬಲ್ಲನು. ಗುರು ಗೋರಕ್ಷನಾಥನ ಮತದಲ್ಲಿ 'ಹಂಸ' ಮಂತ್ರದ ಅರ್ಥವು ಹೀಗೆ: "ನಿಶ್ವಾಸ-ಪ್ರಶ್ವಾಸಗಳ ಕಾಲದಲ್ಲಿ 'ಹಂ' ಶಬ್ದದೊಡನೆ ವಾಯುವು ಬಹಿರ್ಗತವಾಗುತ್ತದೆ. ಹಾಗೂ 'ಸ' ಶಬ್ದದೊಡನೆ ವಾಯು ಪುನಃ ಪ್ರವೇಶ ಮಾಡುತ್ತದೆ. ಜೀವವು ಸ್ವಭಾವತಃ ಈ ಹಂಸಮಂತ್ರವನ್ನು ಜಪಮಾಡುತ್ತದೆ. ಹಗಲು ರಾತ್ರಿ '೨೧೬೦೦'ಸಾರೆ ಜೀವವು ಈ ಮಂತ್ರವನ್ನು ಜಪಮಾಡುತ್ತದೆ. ಯಾಕಂದರೆ ಪ್ರತಿ ಮಿನೀಟನಲ್ಲಿ '೧೫'ಸಾರೆ ಶ್ವಾಸ-ಪ್ರಶ್ವಾಸಗಳಾಗುತ್ತವೆ. ಈ ಲೆಕ್ಕದಿಂದ ಶ್ವಾಸ-ಪ್ರಶ್ವಾಸಗಳು ೨೪ ತಾಸುಗಳಲ್ಲಿ'೨೧೬೦೦' (೨೪x೬೦x೧೫) ಸಾರೆ ಆಗುತ್ತವೆ. "ಹಂಸ ಮಂತ್ರದ ತಾತ್ಪರ್ಯವು, 'ಅಹಂ ಸಃ ಸೋಽಹಮ್' -ಅರ್ಥಾತ್, ನಾನು ಸ್ವರೂಪತಃ ಬ್ರಹ್ಮವು. ಶ್ವಾಸ ಪ್ರಶ್ವಾಸಗಳು ಯಾವಾಗಲೂ ಅದನ್ನು (ಸೋಽಹಮ್) ನಮಗೆ ಸ್ಮರಣ ಮಾಡಿಕೊಡುತ್ತವೆ. ಶ್ವಾಸದ ಗ್ರಹಣ ಮತ್ತು ತ್ಯಾಗದ ಮಧ್ಯಕ್ಷಣದಲ್ಲಿ ಸ್ವಭಾವತಃ ನಾವು ಬ್ರಹ್ಮತ್ವವನ್ನು ಪಡೆಯುವೆವು. ಬುದ್ಧಿಪೂರ್ವಕ ಶ್ವಾಸ-ಪ್ರಶ್ವಾಸಗಳ ಅನುಸರಣವನ್ನು ಮಾಡಿ ಆ ಭಾವವನ್ನು ಸ್ಮರಣ ಮಾಡುತ್ತ ಮಾಡುತ್ತ ಸ್ಥಾಯಿಮಾಡುವ ಪ್ರಯತ್ನವನ್ನು ಮಾಡುವದೇ ಈ ಸಾಧನದ ಉದ್ದೇಶವು. "ಈ ಮಂತ್ರ ದೀಕ್ಷೆಯನ್ನು ಗೃಹಸ್ಥ ಮತ್ತು ಗೃಹತ್ಯಾಗಿ ಸಾಧಕರೆಲ್ಲರೂ ಸದ್ಗುರುವಿನಿಂದ ಗ್ರಹಣಮಾಡಲು ಸಮರ್ಥರು. ಧರ್ಮಪಿಪಾಸು ಗೃಹೀಶಿಷ್ಯನಿಗೆ ಅಂತರ್ದರ್ಶಿಯಾದ ಗುರುವು ಸಾಧಾರಣತಃ ನಾಮಜಪದ ಉಪದೇಶವನ್ನು ಮಾಡುತ್ತಾನೆ. ವಿಶೇಷ ಭಾವದಿಂದ ಸಾಧನದಲ್ಲಿ ನಿಮಗ್ನವಾಗಲು ಇಚ್ಛುಕ ಮತ್ತು ಯೋಗ್ಯ ಶಿಷ್ಯನಿಗೆ ಅವನು 'ಹಂಸ' ಮಂತ್ರದ ಉಪದೇಶವನ್ನು ಮಾಡುತ್ತಾನೆ. ನಾಮಜಪವೇ ಸಹಜತಮ ಸಾಧನವು.

ಯಾವ ಸಾಧಕನು ಸಂಸಾರದೊಡನೆ ಎಲ್ಲ ಸಂಬಂಧವನ್ನು ಹರಿದೊಗೆದು ಸನ್ಯಾಸ ಜೀವನವನ್ನು ಅವಲಂಬಿಸುತ್ತಾನೋ ಅವನಿಗೆ ಒಂದು ವಿಶೇಷ ದೀಕ್ಷೆಯು ಇರುತ್ತದೆ. ಗುರುವು ಅವನಿಗೆ ಯಾವುದೋ ಒಂದು ವಿಶಿಷ್ಟ ಅಂತರಂಗ ಸಾಧನದ ಉಪದೇಶವನ್ನು ಮಾಡುತ್ತಾನೆ. ಗುರು ತನ್ನ ಕೈಯಿಂದ ಕತ್ತರಿಯಿಂದ ಶಿಷ್ಯನ ಚಂಡಿಕೆಯನ್ನು ಕತ್ತರಿಸುತ್ತಾನೆ. ಇದಕ್ಕೆ 'ಚಂಡಿಕೆ ಕತ್ತರಿಸೋಣ' ಅನ್ನುತ್ತಾರೆ. ಈ ಚೆಂಡಿಕೆ ಕತ್ತರಿಸುವುದು ಮುಂಡನದ ಅನುಕಲ್ಪವು. ಇಧರ ತಾತ್ಪರ್ಯವು ಗುರುವು ಶಿಷ್ಯನ ಮಸ್ತಕ ಮುಂಡನಪೂರ್ವಕ ಪೂರ್ವ ಜೀವನದ ಅವಸಾನ ಮತ್ತು ನವಜೀವನದ ಆರಂಭವನ್ನು ಮಾಡುತ್ತಾನೆ. ಆಗ ಸಾಧಕನಿಗೆ ಪುನರ್ಜನ್ಮವು. ಆಗಿನಿಂದಲೇ ಗುರುವೇ ಶಿಷ್ಯನ ತಾಯಿ-ತಂದೆ, ಆಶ್ರಯ, ಪರಿಚಾಲಕ ಮತ್ತು ಅಭಿಭಾವಕನು. ಚೆಂಡಿಕೆ ಕತ್ತರಿಸುವುದರೊಡನೆಯೇ ಗುರುವು ಎರಡು ಮೂರು ಅಂಗುಲ ಪರಿಮಿತದ ಒಂದು ಕಾಷ್ಠಾದಿ ನಿರ್ಮಿತವಾದ ಬಿದಿರಿನಂತಹ ಯಂತ್ರ ವಿಶೇಷವನ್ನು ರೇಶಿಮೆಯ ದಾರದಿಂದ ಕಟ್ಟಿ ಶಿಷ್ಯನ ಕೊರಳಲ್ಲಿ ಮಾಲೆಯಂತೆ ಹಾಕುವನು. ಈ ಬಿದಿರಿಗೆ 'ನಾದ' ಮತ್ತು ಆ ಸೂತ್ರಮಾಲೆಗೆ 'ಸೇಲಿ' ಅನ್ನುತ್ತಾರೆ. ನಾದವು ಸರಿಯಾಗಿ ಹೃದಯ ಯಂತ್ರದ ಮೇಲೆ ಜೋತಾಡುತ್ತಿರುತ್ತದೆ. ಯೋಗಿಗಳು ಹೇಳುವರು - "ಹೃದಯದ ಅಭ್ಯಂತರದಲ್ಲಿ ಯಾವಾಗಲೂ 'ಅನಾಹತನಾದ'ವು ಧ್ವನಿತವಾಗುತ್ತಿರುತ್ತದೆ. ಒಳಗಿನ ಆ ನಾದದ ಕತೆಯನ್ನು ಸ್ಮರಣಮಾಡಿಸಿ ಯಾವಾಗಲೂ ಅದೇ ಕಡೆಗೆ ಚಿತ್ತವನ್ನು

ಸಮಾಕೃಷ್ಟ ಮಾಡುವದರ ಸಲುವಾಗಿಯೇ ಹೊರಗೆ ಈ ಕಾಷ್ಠ ವಿಲಂಬಿತ ನಾದಯಂತ್ರದ ವಿಧಾನವು. ಶಿಷ್ಯನು ಗುರುವಿಗೆ ಅಥವಾ ದೇವತೆಗೆ ಪ್ರಣಾಮ ಮಾಡುವ ಸಮಯದಲ್ಲಿ ಆ ನಾದದಿಂದ 'ಪೂದಿಯಾ' ಪ್ರಣವಧ್ವನಿ ಹಾಗೂ 'ಆದೇಶ' ಉಚ್ಚಾರಣ ಮಾಡುತ್ತಾನೆ.

ನಾಥಯೋಗಿಗಳಲ್ಲಿ ಮತ್ತೊಂದು ಬಗೆಯ ದೀಕ್ಷೆಯು ಇರುತ್ತದೆ. ಈ ದೀಕ್ಷೆಯ ಕಾಲದಲ್ಲಿ ಗುರುವು ಶಿಷ್ಯನ ಎರಡೂ ಕಿವಿಗಳಲ್ಲಿ ಎರಡು ದೊಡ್ಡ ತೂತುಗಳನ್ನು ಮಾಡಿ, ಅವುಗಳಲ್ಲಿ ಎರಡು ಕುಂಡಲಗಳನ್ನು ಹಾಕುವನು. ಆ ಕುಂಡಲಗಳು ಸಾಧಾರಣವಾಗಿ ಕಲ್ಲು, ಬೇಲೆಯಾರ, ಶಂಖ ಅಥವಾ ಗಂಡಕದ ಶೃಂಗದಿಂದ ತಯಾರ ಮಾಡುತ್ತಾರೆ. ಆ ಕುಂಡಲಗಳಿಗೆ ಯೋಗಿಗಳು ಶಿವನ ಕುಂಡಲಗಳೆಂದು ನಂಬುತ್ತಾರೆ. ನಾಥಸಂಪ್ರದಾಯದ ಆದಿಪುರುಷನಾದ ಆದಿನಾಥನಿಂದ ಶಿಷ್ಯಪರಂಪರಾಕ್ರಮದಿಂದ ಯೋಗಿಸಂಪ್ರದಾಯದಲ್ಲಿ ಕುಂಡಲಧಾರಣ ಪದ್ಧತಿಯು ಪ್ರಚಲಿತವಿರುತ್ತದೆ. ಇದರ ಹೆಸರು 'ಮುದ್ರಾ'. ಮುದ್ರೆಯು ಬೇರೊಂದು ಹೆಸರು. 'ದರ್ಶನ'. ಈ ದೀಕ್ಷೆಯೇ ನಾಥಯೋಗಿಗಳ ಶೇಷ ದೀಕ್ಷೆಯು. ಈ ಚರಮದೀಕ್ಷಾ ಪ್ರಾಪ್ತ ಯೋಗಿಗಳು 'ಕರ್ನ್‌ಫಟ' ಹೆಸರನ್ನು ಪಡೆದಿರುತ್ತಾರೆ. ಅವರು ಕಿವಿಗಳಲ್ಲಿ ದರ್ಶನ ಧಾರಣ ಮಾಡುತ್ತಿರುವರೆಂದು 'ದರ್ಶನಯೋಗಿ' ಹೆಸರಿನಿಂದಲೂ ಕರೆಯಲ್ಪಡುತ್ತಾರೆ. ಉದಾಸೀನ ಯೋಗಿಗಳಾದರೂ ಈ 'ಕನಫಟ' ಆಗುವುದು ಇಂತಹ ಯಾವ ನಿಯಮವಿಲ್ಲ. ಯೋಗದಲ್ಲಿ ಸಿದ್ಧಿಲಾಭದ ಸಲುವಾಗಿಯೂ ಇದಕ್ಕೆ ವಿಶೇಷ ಅವಶ್ಯಕತೆ ಇಲ್ಲ.

'ಚೆಂಡಿಕೆ ಕತ್ತರಿಸೋಣ', 'ಕಾನಫಟ' ಹೊರತು 'ಉಪದೇಶೀ' ದೀಕ್ಷಾನಾಮಕ ಮತ್ತೊಂದು ಬಗೆಯ ದೀಕ್ಷೆಯು ಯೋಗಿಗಳಲ್ಲಿ ಪ್ರಚಲಿತವಿದೆ. ಈ ದೀಕ್ಷೆಯು ಸಾಧಾರಣತಃ 'ಚೆಂಡಿಕೆ ಕತ್ತರಿಸು'ವದರ ಅನಂತರ ಆಗುವದು. ಒಮ್ಮೊಮ್ಮೆ 'ಕಾನಫಟಾ'ದ ಅನಂತರದಲ್ಲಿ ಆಗುತ್ತದೆ. ಕೆಲವರು ಚೆಂಡಿಕೆ ಕತ್ತರಿಸೋಣ, ಅರ್ಥಾತ್ ಸನ್ಯಾಸಗ್ರಹಣದ ಮೊದಲು, ಯಾವನೋ ಯೋಗಿಯ ಹತ್ತರ 'ಉಪದೇಶವ'ವನ್ನು ಪಡೆದರೂ ಸನ್ಯಾಸಗ್ರಹಣದ ತರುವಾಯ ಪುನಃ 'ಉಪದೇಶೀ' ದೀಕ್ಷಾಗ್ರಹಣಮಾಡಲು ಶಕ್ಯವು. 'ಉಪದೇಶೀ' ದೀಕ್ಷಾಕಾಲದಲ್ಲಿ ಒಂದು ರಾತ್ರಿ ಹಲವು ಪ್ರಕಾರ ಅನುಷ್ಠಾನಗಳು ಮಾಡಲ್ಪಡುತ್ತವೆ. ಯಥಾಮಂತ್ರಪೂತ ಪ್ರದೀಪ, ಪ್ರಜ್ವಾಲನ, ಹರ-ಪಾರ್ವತೀ ಬ್ರಹ್ಮ, ವಿಷ್ಣು-ಗಣೇಶ ಮತ್ತು ಗೋರಕ್ಷನಾಥರ ಪೂಜೆ, ಮದ್ಯ-ಮಾಂಸಾದಿಗಳಿಂದ ಆಕಾಶ ಭೈರವನ ಪೂಜೆ, ಮಂತ್ರಪಾತ ಭಜನ ಇತ್ಯಾದಿ. ಯಾರು ಕೇವಲ ಉಪದೇಶಿಗಳು ಅವರಿಗೇ ಅಲ್ಲಿ ಪ್ರವೇಶಾಧಿಕಾರವಿರುತ್ತದೆ. ಎರಡನೆಯವರಿಗೆ ಇಲ್ಲ. ಉಕ್ತ ಮೂರು ಪ್ರಕಾರದೀಕ್ಷೆಯನ್ನು ಒಬ್ಬನೇ ಗುರುವಿನ ಹತ್ತರ ಗ್ರಹಣಮಾಡಬೇಕಾಗುವದು. ಇಂತಹ ಯಾವ ಬಂಧನದ ನಿಯಮವಿಲ್ಲ. ಒಬ್ಬ ಗುರುವಿನ ಹತ್ತರ ಮಾತ್ರ ಗ್ರಹಣಮಾಡಿ ಎರಡನೆಯವರ ಹತ್ತರ ಚೆಂಡಿಕೆ ಕತ್ತರಿಸಿಕೊಂಡು ನಾದ ಮತ್ತು ಸೆಲಿ ಗ್ರಹಣ ಪೂರ್ವಕ ಸನ್ಯಾಸಾಶ್ರಮದಲ್ಲಿ ಪ್ರವಿಷ್ಟವಾಗಲು ಬರುತ್ತದೆ ಮತ್ತು ತೃತೀಯ ಗುರುವಿನಿಂದ ಛಿದ್ರಗಳನ್ನು ಮಾಡಿಸಿ ದರ್ಶನಯೋಗಿ ಆಗುವ ಸಂಭವವೂ ಇರುತ್ತದೆ.

## ನಾಥಸಂಪ್ರದಾಯ

ಸಿದ್ಧರು ಅಲೌಕಿಕ ಶಕ್ತಿಶಾಲಿಗಳಾಗಿದ್ದರೂ ನಿರೀಶ್ವರವಾದಿ ಅಥವಾ ಶೂನ್ಯವಾದಿ ಬೌದ್ಧರಿದ್ದ ಕಾರಣ, ಜನರು ಪ್ರಾಯಃ ಇವರಿಗೆ ಮರುಳಾಗಲಿಲ್ಲ. ಯಾಕಂದರೆ ಸುಪ್ರಸಿದ್ಧ 'ಬಂಗಾಲಿ(ಅಥವಾ ಕಾಮರೂಪ ಅಥವಾ ಆಸಾಮ)ಯ ಜಾದುವಿಗೆ ಜನರು ಅಂಜುತ್ತಿದ್ದರು. ಮತ್ತು ಜೀವನ ತತ್ವಾನ್ವೇಷಣೆಯ ಸಂಬಂಧದಿಂದ ಸಹ ಈ ಶಾಕ್ತ (ಕಬೀರನ ಸಾಕ್ಷತ್ ಅಥವಾ 'ಸಾಕಟ್')ರ ಮೇಲೆ ಅವಿಶ್ವಾಸ ಉಂಟಾಗಹತ್ತಿತ್ತು. ಇದರ ಹೊರತು ಈ ಸಿದ್ಧರ ಮದ್ಯ, ಮಾಂಸ ಹಾಗೂ ಸ್ತ್ರೀಸಂಬಂಧದ ಆಚಾರಗಳ ಬಗ್ಗೆ ತಿರಸ್ಕಾರ ಉಂಟಾಗಹತ್ತಿತ್ತು. ಕೆಲವರ ಅಭಿಪ್ರಾಯವು-ಮದ್ಯದ ಸೇವನೆಯು ಧ್ಯಾನದ ಏಕಾಗ್ರತೆಯನ್ನು ಉಂಟುಮಾಡುತ್ತದೆ. ಮಾಂಸಭಕ್ಷಣವು

ಶರೀರವನ್ನು ಪುಷ್ಟ ಮಾಡುವವುದಕ್ಕೋಸುಗ ಇರುವದು ಮತ್ತು ಸ್ತ್ರೀಯ ಸಹಾಯತೆಯು ಬಿಂದು(ವೀರ್ಯ)ವಿನ ಅಕ್ಷುಣ್ಣತೆಯನ್ನು ದೃಢಮಾಡುವದಕ್ಕೋಸುಗ ಉಪಯೋಗದಲ್ಲಿ ತರಲ್ಪಟ್ಟಿದೆ. ಆದರೆ ಈ ಸಂಗತಿಯು ಸರ್ವಸಾಧಾರಣರಿಗೆ ಸರಿತೋರಲಿಲ್ಲ. ಯಾಕಂದರೆ ತಾಮಸಿಕ ಭೋಜನದಿಂದ ತಾಮಸಿಕ ಮನೋವೃತ್ತಿಗಳುಂಟಾಗುವವು ಹಾಗೂ ಚಿತ್ತದ ಕ್ಷೋಭ ಮತ್ತು ಚಾಂಚಲ್ಯವೇ ನಿಶ್ಚಿತ ಪರಿಣಾಮಗಳು ಪ್ರತೀತವಾಗುತ್ತಿದ್ದವು. ಸ್ತ್ರೀಯ ಸಾಮಿಪ್ಯವೇ (ಬೇಕಾದಂಥ ಸದ್ಭಾವನೆಯಿಂದ ಇದ್ದರೂ ಸಹ)ಗರ್ಹ್ಯವು ಹಾಗೂ ಕಚ್ಚಾ ಸಾಧಕರಿಗೋಸುಗ ಆಪತ್ತಿಪೂರ್ಣವೆಂದು ತಿಳಿಯಲ್ಪಡುತ್ತಿತ್ತು. ಇವೇ ಕಾರಣಗಳಿಂದ ಪ್ರಚಲಿತ ಪದ್ಧತಿಯ ವಿರುದ್ಧ ವಿಚಾರವಂತ ಯೋಗಿಗಳು 'ನಾಥ ಸಂಪ್ರದಾಯ'ದ ಸೃಷ್ಟಿಯನ್ನು ಮಾಡಿದರು. ಈ ಪರಿಮಾರ್ಜಿತ ವಿಚಾರವಂತರ ನೇತೃವಾದ ನಾಥಸಂಪ್ರದಾಯದ ಪ್ರಥಮರತ್ನ ಗೋರಕ್ಷನಾಥನು. 'ಗೋರಕ್ಷಸಿದ್ಧಾಂತ ಸಂಗ್ರಹ'ವೆಂಬ ಗ್ರಂಥದಲ್ಲಿ ನಿರ್ದಿಷ್ಟ 'ಚತುರಶೀತಿ ಸಿದ್ಧಾಃ' ವಾಕ್ಯದಿಂದ ಹಾಗೂ ಗುರುಪರಂಪರೆಯ ಹೆಸರುಗಳಿಂದ ನಾಥಸಂಪ್ರದಾಯದ ಉಪರ್ಯುಕ್ತವಾದ ಬಗೆಯಿಂದಲೇ ಉತ್ಪತ್ತಿಯು ಸಿದ್ಧವಾಗುತ್ತದೆ. 'ಯೋಗಿ ಸಂಪ್ರದಾಯಾವಿಷ್ಕೃತಿ' ಎಂಬ ಸಂಕಲಿತ ಗ್ರಂಥವನ್ನು ನೋಡುವದರಿಂದ ಈ ಮತಕ್ಕೆ ಹೆಚ್ಚು ಪುಷ್ಟಿಯಾಗುತ್ತದೆ. ಈ ಗ್ರಂಥದ '೪೮'ನೆಯ ಅಧ್ಯಾಯದಲ್ಲಿ ಬರೆದಿರುವದು: ಗೋರಕ್ಷನಾಥನು ಸಂಚಾರ ಮಾಡುತ್ತ ಮಾಡುತ್ತ ಜ್ವಾಲಾಜಿಗೆ ಹೋಗಲು ಅಲ್ಲಿ ಅನಿಗೆ ಭಗವತಿಯು ಪ್ರಚಲಿತ ಶಾಕ್ತವಿಧಿಯ ಅನುಸಾರವಾಗಿ ಮದ್ಯ-ಮಾಂಸಾದಿಗಳನ್ನು ಪ್ರಸಾದರೂಪದಲ್ಲಿ ಕೊಡಲು ಬಯಸಿದಳು. ಪರಿಮಾರ್ಜಿತ ವಿಚಾರವಂತ ಯೋಗಿರಾಜನು ಸವಿನಯ ಅದನ್ನು ಆಸ್ವೀಕೃತ ಮಾಡಿದನು ಹಾಗೂ ಭಗವತಿಯಿಂದ ಸಾತ್ವಿಕ ಭೋಜನದ ಪ್ರತಿಜ್ಞೆ ಮಾಡಿಸಿದನು. ಈ ಪ್ರಸಂಗವನ್ನು ಕಪೋಲ ಕಲ್ಪಿತವೆಂದು ತಿಳಿಯುವದಿಲ್ಲ. ಯಾಕಂದರೆ ಜ್ವಾಲಾಜಿಯ ಮಂದಿರದ ಒಂದು ಫರ್ಲಾಂಗದ ಮೇಲೆಯೇ ಗುಡ್ಡದ ಮೇಲೆ ಅರ್ಜುನ ನಾಗಾ (ಮಹಾಯಾನೀಯ ಮತದ ನಾಗಾರ್ಜುನ)ನ ಸ್ಥಾನವಿರುವದು. ಈ ಮಾತಿನ ಸೂಚಕವಿರುತ್ತದೆ. ಜ್ವಾಲಾಜಿಯೂ ವಜ್ರಯಾನಮತದ ಒಂದು ಕೇಂದ್ರವಾಗಿತ್ತು. ಆದುದರಿಂದ ಅಲ್ಲಿ ಮದ್ಯ-ಮಾಂಸಾದಿಗಳ ಪ್ರಚಾರವಾಗುವದು ಅಸಂಭವ ವಿಷಯವಲ್ಲ ಮತ್ತು ದೇವಿಯ ಮಂದಿರದಲ್ಲಿಯೇ 'ಗೋರಖಡಿಬ್ಬಿ' ಎಂಬ ಸ್ಥಾನವಿರುವದು. ಹಾಗೂ ಅಲ್ಲಿಯ ಖಿಚಡಿಯ ಪಾತ್ರೆಯ ಕಥೆಯು ಉಪರ್ಯುಕ್ತ ವೃತ್ತಾಂತಕ್ಕೆ ಪುಷ್ಟಿಯನ್ನು ಕೊಡುತ್ತದೆ.

ಗೋರಕ್ಷನಾಥನು ಈ ಪರಿಮಾರ್ಜಿತ ವಿಶುದ್ಧ ಹಠಯೋಗದ ಪ್ರಚಾರವನ್ನು ಇಡಿಯ ಭಾರತವರ್ಷದಲ್ಲಿ ಮಾಡಿದನು. ಗೋರಖಪುರ, ಗಿರಿನಾರ ಹಾಗೂ ನೇಪಾಳಗಳು ಅವನ ಮುಖ್ಯಕೇಂದ್ರವಾಗಿ ಹೋಗಿದ್ದವು ಮತ್ತು ಜ್ವಾಲಾಜಿಯ ವಿಷಯದಲ್ಲಿ ಮೇಲೆಯೇ ಬರೆದಿದೆ. ನೇಪಾಳದ ಗೂರ್ಖರು ಈ ಗುರು ಗೋರಕ್ಷನಾಥನ ಪರಿಶ್ರಮದಿಂದ ಹಿಂದುಗಳಾಗಿಯೇ ಉಳಿದರು ಮತ್ತು ಅನೀಶ್ವರವಾದಿ ಬೌದ್ಧಧರ್ಮದ ಅನುಯಾಯಿ ಆಗಲು ರಕ್ಷಿತವಾದರು. ಈ ನಾಲ್ಕು ಮುಖ್ಯಸ್ಥಾನಗಳ ಸ್ಥಿತಿಯು ಈ ಸಂಗತಿಯ ಪ್ರತ್ಯಕ್ಷ ಪ್ರಮಾಣವಿರುವದು. ಈ ಸಾತ್ವಿಕ ಯೋಗಪದ್ಧತಿಯ ಆದರವು ಭಾರತ ವರ್ಷದ ಪ್ರತಿಯೊಂದು ವಿಭಾಗದಲ್ಲಿ ಆಯಿತು.

ಗೋರಕ್ಷನಾಥನ ನಾಥಪಂಥವು ಈಶ್ವವರವಾದಿಯು ಮತ್ತು ಆದಿನಾಥ ಭಗವಾನ್ ಶಂಕರನು ಇದರ ಮೂಲ ಉಗಮವೆಂದು ಒಪ್ಪಲ್ಪಟ್ಟಿದೆ. ಈ ಪ್ರಕಾರವಾಗಿ '೮೪' ಸಿದ್ಧರ ಶಾಕ್ತ ಉಪಾಸನಾ ಕ್ರಮವು ಶಾಸ್ತ್ರಮತಾನುಯಾಯಿ ಶೈವಸಂಪ್ರದಾಯದಲ್ಲಿ ಪರಿಣತವಾಗಿ ಹೋಯಿತು. ನಾಥಸಂಪ್ರದಾಯದಲ್ಲಿ ಮದ್ಯ-ಮಾಂಸಗಳಿಗೆ ಕಠೋರ ನಿಷೇಧವಿರುತ್ತದೆ ಮತ್ತು ಸ್ತ್ರೀಯ ಸಂಗವು ಎಲ್ಲ ಬಗೆಯಿಂದ ವರ್ಜ್ಯವಿರುತ್ತದೆ. ಈ

ಮತದಲ್ಲಿ ಶುದ್ಧ ಹಠ ಹಾಗೂ ರಾಜಯೋಗಗಳ ಸಾಧನಗಳೇ ಅನುಶಾಸಿತವಾಗಿರುತ್ತವೆ. ಯೋಗಾಸನ, ನಾಡೀಜ್ಞಾನ, ಷಟ್‌ಚಕ್ರ ನಿರೂಪಣ ಹಾಗೂ ಪ್ರಾಣಾಯಾಮಗಳಿಂದ ಸಮಾಧಿಯ ಪ್ರಾಪ್ತಿ ಈ ಯೋಗದ ಮುಖ್ಯ ಅಂಗವಿರುತ್ತದೆ. ಯಥಾರ್ಥದಲ್ಲಿ ಸಂಪ್ರದಾಯದಲ್ಲಿ ಶಾರೀರಿಕ ಪುಷ್ಟಿ ಹಾಗೂ ಪಂಚಮಹಾಭೂತಗಳ ಮೇಲೆ ವಿಜಯ, ಈ ವಿಷಯಗಳ ಮೇಲೆ ವಿಶೇಷವಾಗಿ ಲಕ್ಷ್ಯ ಕೊಡಲ್ಪಟ್ಟಿದೆ ಮತ್ತು ಇವುಗಳ ಸಿದ್ಧಿಗೋಸುಗ (ರಸವಿದ್ಯೆ (Alehemy)ಗೆ ಸಹ ಈ ಮತದಲ್ಲಿ ಒಂದು ಮುಖ್ಯ ಸ್ಥಾನವಿರುತ್ತದೆ. ಬೌದ್ಧ ನಾಗಾರ್ಜುನನ ರಸಶಾಸ್ತ್ರ ಸಂಬಂಧದಿಂದ ಚಮತ್ಕಾರಗಳ ವಿಷಯದಲ್ಲಿ ಅನ್ಯತ್ರ ಬರೆಯಲ್ಪಟ್ಟಿದೆ. ನಾಗಾರ್ಜುನನ ಪ್ರಭಾವವು ನಾಥಪಂಥದ ಮೇಲೆ ವಿಶಿಷ್ಟರೂಪದಿಂದ ಬಿದ್ದಿತ್ತು. ಉಪರ್ಯುಕ್ತ ಭೂತಜಯ ಇತ್ಯಾದಿಯ ಉದ್ದೇಶ ಯೋಗಸಾಧನೆಯಿಂದ ಅದ್ವೈತಜ್ಞಾನದ ಪ್ರಾಪ್ತಿಯೇ ಇರುವದು. 'ಗೋರಕ್ಷ ಪದ್ಧತಿ' ಎಂಬ ಸುಪ್ರಸಿದ್ಧ ಯೋಗಗ್ರಂಥವು ಇದೇ ಮತದ ಒಂದು ಗ್ರಂಥವಿರುವದು. ಈ ಸಂಪ್ರದಾಯದ ಗ್ರಂಥಗಳನ್ನು ನೋಡುವದರಿಂದ ಈ ಸಂಗತಿಯು ಪುನಃ ಸಿದ್ಧವಾಗುವದು. ಯೋಗಶಾಸ್ತ್ರದಂತಹ ವಿಷಯ ಒಮ್ಮೊಮ್ಮೆ ತಿಳಿದು ಕೂಟ ಶಬ್ದಗಳಲ್ಲಿ ಮಾಡಲ್ಪಡುತ್ತದೆ ಮತ್ತು ಇದರ ಪರಿಣಾಮವು ಹೀಗೆ ಆಗುತ್ತದೆ. ಗುರುವಿನ ಹೊರತು ನಿರೀಕ್ಷಣದ ಅಭ್ಯಾಸ ಮಾಡುವ ಅಪರಿಚಿತ ಸಾಧಕನು ಒಮ್ಮೊಮ್ಮೆ ಅರ್ಥವನ್ನು ಅನರ್ಥಮಾಡಿ ಪತಿತವಾಗುತ್ತಾನೆ. ಉದಾಹರಣಾರ್ಥ ಕುಂಡಲಿನಿಗೆ ಅಲ್ಲಲ್ಲಿ ಬಾಲರಂಡಿ ಎಂದು ಹೇಳಿದೆ ಮತ್ತು ಖೇಚರಿ ಮುದ್ರೆಯ ಸಾಧನೆಯಲ್ಲಿ ಜಿಹ್ವೆಯನ್ನು ಕಪಾಲಛಿದ್ರದಲ್ಲಿ ಪ್ರವಿಷ್ಟ ಮಾಡುವದಕ್ಕೋಸುಗ, ಗೋಮಾಂಸಭಕ್ಷಣ ಶಬ್ದದ ಪ್ರಯೋಗವು ಮಾಡಲ್ಪಟ್ಟಿದೆ.

ನಾಥಸಂಪ್ರದಾಯದಲ್ಲಿ ನವನಾಥರು ಮುಖ್ಯವೆಂದು ಹೇಳಿದೆ. ಇವರು ಗೋರಕ್ಷನಾಥ, ಜ್ವಾಲೇಂದ್ರನಾಥ, ಕಾರಿಣನಾಥ, ಗಹನೀನಾಥ, ಚರ್ಪಟನಾಥ, ರೇವಣನಾಥ, ನಾಗನಾಥ, ಭರ್ತೃನಾಥ, ಗೋಪೀಚಂದ್ರನಾಥ. ಇವರಲ್ಲಿ ಅಂತಿಮ ಗೋಪಿಚಂದ್ರನಾಥನ ವಿಷಯ ವಿಶೇಷ ಪ್ರಚಲಿತವಿರುತ್ತದೆ. ಗೋರಕ್ಷನಾಥನು ತನ್ನ ಗುರುವಾದ ಮತ್ಸ್ಯೇಂದ್ರನಾಥನನ್ನು ಸ್ತ್ರೀರಾಜ್ಯದ ಜಂಜಾಲದಿಂದ ಬಿಡಿಸುವ ಕತೆಯು 'ಮಾಯಾ-ಮಛೀಂದ್ರ' ಹೆಸರಿನಿಂದ ಈಗ ಟಾಕಿ (Talkie)ಯಲ್ಲಿ ತೋರಿಸಲ್ಪಡುತ್ತದೆ. ನನ್ನ ಅನುಮಾನವು ಹೀಗೆ ಇರುವದು-ಈ ಕತೆಯ ಗೂಢ ಉದ್ದೇಶವು ಹಾಗೂ ಅರ್ಥವು 'ಲಳ' ಸಿದ್ಧರ ತಾಂತ್ರಿಕ ವಜ್ರಯಾನದ ಸಾತ್ವಿಕ ನಾಥ ಪಂಥದಲ್ಲಿ ಪರಿಣತವಾಗುವದಿರುತ್ತದೆ. ಮಹಾರಾಷ್ಟ್ರದೇಶದ ಸುಪ್ರಸಿದ್ಧ ಭಕ್ತ ಹಾಗೂ ಧಾರ್ಮಿಕ ನೇತೃವಾದ ಶ್ರೀ ಜ್ಞಾನೇಶ್ವರ ಮಹಾರಾಜರು 'ಗಹನೀನಾಥನ' ಶಾಖೆಯ ಅನುಯಾಯಿಯಾಗಿದ್ದರು. ಈ ಶಾಖೆಯ ಯೋಗಿಗಳು ಇಲ್ಲಿಯ ವರೆಗೆ 'ಗ್ವಾಲ್ಹೇರ'ದಲ್ಲಿ ಇರುತ್ತಾರೆ. ನನ್ನ ತಿಳುವಳಿಕೆಯಲ್ಲಿ ನಾಥಸಂಪ್ರದಾಯದ ಉದಯವು ಇ.ಸಾ. ೧೦೦೦ ಸುಮಾರು ಆಗಿರಬಹುದು.

ನಾಥಸಂಪ್ರದಾಯದ ಯೋಗಿಗಳು 'ಅಲಕ್ಷ'(ಅಲಖ) ಶಬ್ದದಿಂದ ತಮ್ಮ ಇಷ್ಟ ದೇವನ ಧ್ಯಾನ ಮಾಡುತ್ತಾರೆ. ಮತ್ತು ಇದೇ ಶಬ್ದದಿಂದ ಭಿಕ್ಷೆಯನ್ನು ಬೇಡುತ್ತಾರೆ. ಅವರ ಶಿಷ್ಯರು 'ಆದೀಶ'(ಆದೇಶ) ಶಬ್ದದಿಂದ ಗುರುವಿಗೆ ಸಂಬೋಧನ 'ಅಲಕ್ಷ'ಕ್ಕೆ ಉತ್ತರ ಕೊಡುತ್ತಾರೆ. ಈ ಎರಡೂ ಮಂತ್ರಗಳ ಅರ್ಥ ಈ ಪ್ರಣವರೂಪೀ ಪರಮಪುರುಷನೊಡನೆ ಇರುತ್ತದೆ. ಯಾವದರ ವರ್ಣಯು ವೇದ-ಉಪನಿಷತ್ತುಗಳಲ್ಲಿ ಮೇಲಿಂದ ಮೇಲೆ ಬರುತ್ತದೆ. ಕಬೀರ ಸಾಹೇಬ ಹಾಗೂ ಗುರುನಾನಕ ದೇವರು ಸಹ ಇದೇ ಅಲಕ್ಷಪುರುಷನ ಧ್ಯಾನಮಾಡುತ್ತಿದ್ದರು. ಗುರುನಾನಕ ದೇವನ ಮುಖ್ಯ ಮಂತ್ರವು ಈ ಭಾವವನ್ನು ಪೂರ್ಣರೂಪದಿಂದ ಸ್ಪಷ್ಟ ಮಾಡುತ್ತದೆ. ಗುರು ಮಹಾರಾಜರು ಹೇಳುತ್ತಾರೆ-

ಏಕ ಓಂ ಸತ್ತನಾಮ ಕರ್ತಾ ಪುರುಖ ।  
ನಿರ್ಭವ ನಿರ್ಭಯ ನಿರಂಕಾರ॥  
ಅಕಾಲ ಮೂರುತಿ ಆದಿಸತ್ತ, ಜುಗಾದಿಸತ್ತ  
ಹೈ ಭೀ ಸತ್ತ ನಾನಕ ಹೋಸೀ ಭೀ ಸತ್ತ॥

ನಾಥಸಂಪ್ರದಾಯದ ಮಹಾತ್ಮಾ 'ಕನಫಟೆ' ಯೋಗಿಗಳು ಸಹ ಹೇಳುತ್ತಾರೆ. ಅವರ ಕಿವಿಗಳಲ್ಲಿ ಕೊಂಬಿನ ದೊಡ್ಡ ದೊಡ್ಡ ಕುಂಡಲಗಳು ಇರುತ್ತವೆ. ಇವುಗಳ ತಾತ್ಪರ್ಯವು ಅತ್ಯಂತ ಗೂಢವಿರುತ್ತದೆ. ಕಿವಿಗಳನ್ನು ಛೇದನ ಮಾಡುವದರಿಂದ ಸಾಧಾರಣವಾಗಿ ಅಂತ್ರ ವೃದ್ಧಿ ಹಾಗೂ ಅಂಡವೃದ್ಧಿ ರೋಗವಾಗುವದಿಲ್ಲ ('ಸುಶ್ರುತ ಸಂಹಿತಾ' ಚಿಕಿತ್ಸಾಸ್ಥಾನ ಅಧ್ಯಾಯ ೧೯ (ವಿಶೇಷತಃ ಶ್ಲೋಕ ೨೧), 'ಶ್ರೀ ವೆಂಕಟೇಶ್ವರ ಪ್ರೆಸ್ ಮುಂಬಯಿ') ಮತ್ತು ಕೆಲವು ಸಾಧಕರ ಅಭಿಪ್ರಾಯವು- ಈ ಪ್ರಕ್ರಿಯೆಯಿಂದ ಯೋಗ ಸಾಧನೆಗೆ ಸಹ ಸಹಾಯತೆಯು ದೊರೆಯುವದು ಎಂದು ಇರುವದು. ಈ ಯೋಗಿಗಳ ಕೊರಳಲ್ಲಿ ಕರಿಯ ಉಣ್ಣೆಯ ಒಂದು ...... ದಾರವಿರುತ್ತದೆ. ಅದಕ್ಕೆ 'ಸೇಲೀ' ಅನ್ನುತ್ತಾರೆ. ಮತ್ತು ಈ ಸೇಲಿಯಲ್ಲಿ ಕೊಂಬಿನ ಒಂದು ಚಿಕ್ಕ ಸೀಟಿಯು ಕಟ್ಟಲ್ಪಟ್ಟಿರುತ್ತದೆ. ಇದಕ್ಕೆ ನಾದ (ಶೃಂಗೀನಾದ)ಅನ್ನುತ್ತಾರೆ. ಇದು ನಾದಾನುಸಂಧಾನ ಅಥವಾ ಪ್ರಣವಾಭ್ಯಾಸದ ದ್ಯೋತಕವಿರುತ್ತದೆ. ಕೈಯಲ್ಲಿ ಟೆಂಗಿನ ಭಿಕ್ಷಾಪಾತ್ರೆ ಇರುತ್ತದೆ.

ಸಂಯುಕ್ತಪ್ರಾಂತದ ಅನೇಕ ವಿಭಾಗಗಳಲ್ಲಿ ಮಹಾಶಿವರಾತ್ರಿಯ ಎರಡನೆಯ ದಿನ (ಇದಕ್ಕೆ ಅಲ್ಲಲ್ಲಿ 'ಬಮ್‌ಭೋಲೆ' ಅನ್ನುತ್ತಾರೆ) 'ಕನಫಟೆ' ಯೋಗಿರಾಜನಿಗೆ ಬೇಳೆ, ಅನ್ನ, ರೊಟ್ಟಿ ಹಾಗು ಎಣ್ಣೆಯ ಹುಳಿ ವಡೆಯ ಊಟವು ಮಾಡಿಸಲ್ಪಡುತ್ತದೆ. ಇದು ಗುರು ಗೋರಕ್ಷನಾಥನನ್ನೇ ಆವಾಹನ ಮಾಡಿ, ಮಾಡಲ್ಪಡುತ್ತದೆ ಮತ್ತು ಈ ಹುಳಿ ಎಣ್ಣೆಯ ವಡಿಗಳ ನಿರ್ದೇಶವು ಈ ಯೋಗಿರಾಜನ ಅನನ್ಯ ಗುರುಭಕ್ತಿಯ ಸುಪ್ರಸಿದ್ಧ ಕತೆಯೊಡನೆ ಸಂಬಂಧವಿಡುತ್ತದೆ. ಇದರಿಂದ ಇವರು ತಮ್ಮ ಗುರು ಮತ್ಸ್ಯೇಂದ್ರನಾಥನ ತುಷ್ಟಿಗೋಸುಗ ಒಂದು ವಡಿಯ ಸಲುವಾಗಿ ತನ್ನ ಒಂದು ಕಣ್ಣನ್ನು ತೆಗೆದುಕೊಟ್ಟಿದ್ದರು. (ಜ್ಞಾನೇಶ್ವರ ಚರಿತ್ರೆ ಪು. ೭೨-೭೪, ಗೀತಾ ಪ್ರೆಸ್)

ಎಷ್ಟೋ ನಾಥಸಿದ್ಧರು ಜೀವಿತ ಸಮಾಧಿಯನ್ನು ತೆಗೆದುಕೊಂಡಿದ್ದಾರೆ. ಶ್ರೀ ಜ್ಞಾನೇಶ್ವರ ಮಹಾರಾಜನು ಇವರಲ್ಲಿ ಒಬ್ಬನು. ಅನ್ಯಥಾ ದೇಹತ್ಯಾಗದ ಅನಂತರ ಯೋಗಿಯನ್ನು ಉತ್ತರಾಭಿಮುಖವಾಗಿ ಪದ್ಮಾಸನದಲ್ಲಿ ಕುಳ್ಳಿರಿಸಿ ಹುಗಿಯುತ್ತಾರೆ ಮತ್ತು ಮೇಲೆ ಸಮಾಧಿಯನ್ನು ರಚಿಸುತ್ತಾರೆ.

ದೇಶ ಕಾಲಗಳ ಅನುಸಾರವಾಗಿ ಈ ಸಂಪ್ರದಾಯದಲ್ಲಿಯೂ ನ್ಯೂನ್ಯತೆಗಳು ಪ್ರವೇಶವಾಗಹತ್ತಿದವು. (ಅಲ್ಲಲ್ಲಿ ಸೈದ್ಧಾಂತಿಕ ಬ್ರಹ್ಮಚಾರಿಗಳಿದ್ದರು ಸಹ, ಕೆಲವು ಯೋಗಿಗಳು ಗೃಹಸ್ಥರಾಗಿದ್ದಾರೆ.) ಆದರೆ ಈಗ ಸಹ ಒಳ್ಳೊಳ್ಳೇ ಸಿದ್ಧಯೋಗಿಗಳು ಇರುತ್ತಾರೆ. ಅವರ ದರ್ಶನವು ಭಾಗ್ಯದಿಂದ ಪ್ರಾಪ್ತವಾಗುತ್ತದೆ.

## ನಾಥಪಂಥದ ಸಾಹಿತ್ಯದ ಐತಿಹ್ಯ

ಸುಪ್ರಾಚೀನ ಐತಿಹ್ಯವನ್ನು ಆಶ್ರಯಮಾಡಿ ಒಂದಕ್ಕಿಂತ ಹೆಚ್ಚು ಯೋಗಸಾಧನೆಯ ಧಾರೆಯು ಒಮ್ಮೆ ಪೂರ್ವಭಾರತದಲ್ಲಿ ಯಾವ ವಿಶಿಷ್ಟರೂಪವನ್ನು ಪಡೆದಿತ್ತೋ ಅದು ಈಗ ನಾಥಪಂಥವೆಂಬ ಹೆಸರಿನಿಂದ ನಿರ್ದಿಷ್ಟವಾಗಿರುತ್ತದೆ. ಈ ನಾಮಕರಣದ ಹೇತುವು ಈ ಸಾಧನಮಾರ್ಗದಲ್ಲಿ, ಸಿದ್ಧ ಮತ್ತು ಸಾಧಕರ ಹೆಸರಿನ ಮುಂದೆ 'ನಾಥ' ಶಬ್ದದ ಅಸ್ತಿತ್ವವಿರುತ್ತದೆ. ಉತ್ತರ ವಂಗದಿಂದ ರಾಜಪುತಾನಾ, ಗುಜರಾತ, ಪಂಜಾಬಗಳವರೆಗೆ ಸಮಗ್ರ ಉತ್ತರಾಪಥದಲ್ಲಿ ಈಗ ಅಲ್ಲಲ್ಲಿ ಯಾವ ನಿರಂಜನಪಂಥಿ ಯೋಗಿ, ಸನ್ಯಾಸಿ, ಭಿಕ್ಷುಕ, ಸಂಪ್ರದಾಯ, 'ಕನಫಟ', 'ಮಚ್ಛೇಂದ್ರಿ', 'ಸಾರಂಗೀಹಾರ', 'ಕಾನಿಪಾ' ಇತ್ಯಾದಿ ಹೆಸರುಗಳಿಂದ ಪರಿಚಿತರಾಗಿದ್ದಾರೆ. ಅವರು ನಾಥಪಂಥದ ಪಥಿಕರು. ಬಂಗಾಲದೇಶದಲ್ಲಿ ನಾಥಪಂಥಿ ಸಾಧುಗಳು ಈಗ ಶೈವಸಂಪ್ರದಾಯ ಭಕ್ತರಾಗಿದ್ದಾರೆ. ಗೃಹಸ್ಥರು ಒಂದು ಬೇರೆ ಜಾತಿಯೆಂದು ಪರಿಗಣಿತರಾಗಿರುತ್ತಾರೆ.

ನಾಥಪಂಥದ ಉತ್ಪತ್ತಿ ಮತ್ತು ವಿಕಾಸಗಳು ಬಂಗಾಲಕೇಂದ್ರಿತ ಪೂರ್ವಭಾರತದಲ್ಲಿ ಸಂಭವಿಸಿತ್ತು ಎಂಬ ಬಗ್ಗೆ ಸಂದೇಹಪಡುವ ಕಾರಣವಿಲ್ಲ. ಇದರ ಪ್ರಾಚೀನ ಸಾಹಿತ್ಯವು ಬಂಗಾಲೀ ಭಾಷೆಯಲ್ಲಿಯೇ

ದೊರೆಯುವದು ಹಾಗೂ ಅದರಲ್ಲಿಯೇ ಇದರ ಪ್ರಾಚೀನತರ ರೂಪವು ಪ್ರತಿಬಿಂಬಿತವಾಗಿರುತ್ತದೆ. ಬಂಗಾಲದೇಶದ ಹೊರಗಿನ ಯೋಗಿಸಂಪ್ರದಾಯದ ಐತಿಹ್ಯದ ಧಾರೆಯು ಬಂಗಾಳದೇಶದಿಂದ ನಿಃಸೃತವಾಗಿತ್ತು. ಇದರ ಪ್ರಮಾಣವು ಅವಿರಳವಲ್ಲ. ಆದರೆ ನಾಥಧರ್ಮವು ಬಂಗಾಳದೇಶದ ನಿಜಸ್ವ ಪದಾರ್ಥವೆಂದು ಹೇಳಿದರೆ ನಡೆಯುವದಿಲ್ಲ. ವಿಭಿನ್ನದೇಶದ ವಿಭಿನ್ನಜಾತಿಗಳ ಭಾವ ಮತ್ತು ಸಾಧನೆಯ ಧಾರೆಯು ಕೂಡಿಕೊಂಡು ಬಂಗಾಲದೇಶದಲ್ಲಿ ಯಾವ ವಿಶಿಷ್ಟಧರ್ಮಮತದ ಸೃಷ್ಟಿಯನ್ನು ಮಾಡಿತ್ತು. ಅದರದೇ ಒಂದು ಅಂಶದ ಪ್ರಕಾಶವು ನಾಥ ಪಂಥದಲ್ಲಿ ವಿಭಿನ್ನದೇಶಗಳಿಂದ ಆಗತವು. ಇಂತಹ ಯೋಗಸಾಧನೆಯ ಧಾರೆಯ ಇಂಗಿತವನ್ನು ಗೋರ್ಖವಿಜಯದಲ್ಲಿ ಕಾಣುತ್ತೇವೆ.

ನಾಥಪಂಥವು ಶೈವಸಂಪ್ರದಾಯದ ಅಂತರ್ಗತವೆಂದು ಹಲವರು ವಿವೇಚನೆಯನ್ನು ಮಾಡುತ್ತಾರೆ. ಆದರೆ ಈ ತಿಳುವಳಿಕೆಯು ಯೋಗ್ಯವಲ್ಲ. ನಾಥಯೋಗಿಗಳ ಮತದಲ್ಲಿ ಶಿವನೂ ಒಬ್ಬ ಸಿದ್ಧಯೋಗಿಯು. ಅವನೂ ಮೀನನಾಥ, ಗೋರ್ಖನಾಥ, ಹಾಡಿಪಾ, ಕಾನುಪಾ ಇವರಂತೆಯೇ ಧರ್ಮನಿರಂಜನನ ಮಗನು. ಆದರೆ ಅವನು ಯೋಗಿಸಿದ್ಧರ ಅಗ್ರಜ ಗುರುವು ಹಾಗೂ ಮೀನನಾಥ ಮತ್ತು ಹಾಡಿಪಾ ಇವರು ಅವನ ಅನುಜ ಅನುಚರರು.

ಆದ್ಯೇ ಗುರು ಮಹಾದೇವ ಪಿಛೇ ಆರಸಬ।
ಸಾಧನ್ತ ಸಕಲ ಸಿಧಾ ತರಿಭಾರೇ ಭವ॥
ಹಾಗೂ-
ಶಿವೇರ ದಾಹಿನೇ ವಾಮೇ ಹಾಡಿಪಾ ಮೀನಾ।
ಪೃಷ್ಟಭಾಗೇ ಗೌರೀ ಆಛೆ ಜಗತೇರ ಮಾ।

ನಾಥಪಂಥವು ನಿರೀಶ್ವರವು. ಸೃಷ್ಟಿಕರ್ತಾ ಜಗತ್‌ಸೃಷ್ಟಿಯ ಸೂತ್ರಪಾತ ಮಾಡಿಯೇ ದೇಹತ್ಯಾಗ ಮಾಡಿದ್ದನು. ಸುತರಾಂ ಆದಿನಾಥ 'ಧರ್ಮನಿರಂಜನ' ಯೋಗಿ+ಈಶ್ವರ= ಯೋಗೀಶ್ವರ (ಶಿವ), ಯೋಗ+ಈಶ್ವರ=ಯೋಗೇಶ್ವರ (ಕೃಷ್ಣ) ದೇವನೊಡನೆ ನಾಥಪಂಥೀ ಯೋಗ ಸಾಧನೆಯ ಯಾವ ಸಾಕ್ಷಾತ್ ಸಂಪರ್ಕವಿಲ್ಲ.

ಧರ್ಮಮಂಗಲ-ಶೂನ್ಯ ಪುರಾಣಗಳು ಧರ್ಮ ಠಾಕೂರನ ಪುರಾಣಕಥಾ ಮತ್ತು ನಿರಂಜನನ ಸೃಷ್ಟಿ ವರ್ಣನೆಯು ಒಂದೇ. ಈ ಕಥೆಯ ಬೇರು ಒತ್ತಟ್ಟಿಗೆ ಋಗ್ವೇದದ ನಾಸದೀಯ ಸೂಕ್ತದಲ್ಲಿ, ಮತ್ತೊಂದು ಪಲಿನೇಶಿಯ ಮುಟ್ಟುವದು. ಇದರ ಮೂಲದಲ್ಲಿ ಭಾರತವರ್ಷದ ಹೊರಗಿನಿಂದ ಬಂದ ಯಾವದೋ ಅನಾರ್ಯ ಜಾತಿಯ ಐತಿಹ್ಯ ಕಲ್ಪನೆ ಮಾಡಲು ಈ ಎರಡು ಧಾರೆಗಳ ಐಕ್ಯವಾಗುವದು. ಧರ್ಮನಿರಂಜನನ "ಆದ್ಯಕಥಾ" ಸಂಕ್ಷೇಪವಾಗಿ ಹೇಳುವೆವು.

ಜಗತ್‌ಸೃಷ್ಟಿಯ ಮೊದಲು ವಿಶ್ವದ ಅವಸ್ಥೆಯು ಅವ್ಯಕ್ತವಿತ್ತು. ಕೆಲವು ಇತ್ತು, ಏನೂ ಇದ್ದಿಲ್ಲ. ಈ ಭಾವವು "ನಾಸದಾಸೀತ್ ನ ಸದಾಸೀತ್, ತದಾಸೀಮ್" ಹಾಗೂ "ಅಂಧಕಾರದಲ್ಲಿ ಎಲ್ಲವೂ ದುಂದುಕಾರ" "ತಮಾಸೀತ್ ತಮಸಾ ಗೂಢಮಗ್ರೇ" ಅದೇ ಧುಂದುಕಾರದಲ್ಲಿ ಸೃಷ್ಟಿಯ ಧ್ವನಿಯು ಜಾಗೃತವಾಯಿತು. ಅವ್ಯಕ್ತದಲ್ಲಿ ವಿಪರೀತ ಮುಖಿ ಎರಡು ತರಂಗಗಳುಂಟಾದವು.

"ಆದಿ ಧನಾದಿ ರೂಪೇ ಕೈಲ ನಿರೀಕ್ಷಣ" "ಸ್ವದಾ ಅಧಸ್ತಾಂ ಪ್ರಯತಾಃ ಪರಸ್ತಾತ್" ಶೂನ್ಯದಲ್ಲಿ ಬುದ್ಬುದ ಬ್ರಹ್ಮಾಂಡ ಉಂಟಾಯಿತು. ಆ ಅಂಡಕ್ಕೆ ನಿರಂಜನ ಅನಾದಿನಾಥನು ಕಾವು ಕೊಟ್ಟನು.-'ಭಾವೇಕ

ಅನತೀ ಧರ್ಮ ಘರ್ಮಿತ ತಖಿನ" 'ತಪಸಸ್ತನ್ ಮಹಿನಾ ಜಾಯತೈಕಮ್'ಹಾಗು ಅಂಡ ಭೇದ ಮಾಡಿ ಹೊರಗೆ ಬಂದನು. ನಿರಂಜನ ಅನಾದಿನಾಥನು ಆದಿನಾಥ ರೂಪದಿಂದ.

## ನಾದಾನು ಸಂಧಾನ

ನಾಥಯೋಗಿ ಸಂಪ್ರದಾಯದಲ್ಲಿ ಮಂತ್ರಯೋಗದ ಬೇರೊಂದು ಚಮತ್ಕಾರ ಪ್ರಕ್ರಿಯೆಯು ಪ್ರಚಲಿತವಿರುತ್ತದೆ. ಮಹಾಯೋಗಿ-ಮಹಾಪುರುಷರು ನಮ್ಮ ಸ್ವಾಭಾವಿಕ ಶ್ವಾಸಕ್ರಿಯೆಯ ಅಂತರ್ನಿಹಿತವಾದ ಒಂದು ನಿಗೂಢ ಆಧ್ಯಾತ್ಮಿಕ ರಹಸ್ಯವನ್ನು ಆವಿಷ್ಕಾರ ಮಾಡಿರುವರು. ಅವರ ದೃಷ್ಟಿಯಲ್ಲಿ ಪ್ರತಿಯೊಂದು ಜೀವದ ಜೀವನದಲ್ಲಿ ಒಂದು ಸ್ವಭಾವ ಸಿದ್ಧ ಸಮರಸಕರಣ ಪ್ರಕ್ರಿಯೆ ಅಂತರ ಮತ್ತು ಬಾಹ್ಯದ, ವ್ಯಷ್ಟಿ ಮತ್ತು ಸಮಷ್ಟಿಯ ವ್ಯಕ್ತಿಪ್ರಾಣದ ಮತ್ತು ವಿಶ್ವಪ್ರಾಣದ, ಜೀವಾತ್ಮ ಮತ್ತು ಪರಮಾತ್ಮರ ಒಂದು ಅದ್ಭುತ ಯೋಗಸಾಧನ ಕೌಶಲವು. ಪ್ರತಿಯೊಂದು ಶ್ವಾಸತ್ಯಾಗದ ಸಮಯದಲ್ಲಿ ಜೀವಾತ್ಮನು 'ಹಂ' ಅಥವಾ 'ಅಹಂ' ಶಬ್ದದೊಡನೆ ಹೊರಗೆ ಬಂದು ವಿಶ್ವಪ್ರಾಣ ಅಥವಾ ಪರಮಾತ್ಮನೊಡನೆ ಕೊಡುತ್ತಾನೆ. ವ್ಯಷ್ಟಿ-ಸಮಷ್ಟಿಗಳಲ್ಲಿ ಆತ್ಮವಿಲಯವಾಗುತ್ತದೆ ಮತ್ತು ಪ್ರತಿಯೊಂದು ಶ್ವಾಸಗ್ರಹಣದ ಕಾಲದಲ್ಲಿ 'ಸಃ' ಶಬ್ದದೊಡನೆ ವಿಶ್ವಪ್ರಾಣ ಅಥವಾ ಪರಮಾತ್ಮ ಜೀವದೇಹದ ಅಭ್ಯಂತರದಲ್ಲಿ ಪ್ರವೇಶ ಮಾಡುತ್ತಾನೆ. ಈ ಪ್ರಕಾರ ಪ್ರತಿಯೊಂದು ಶ್ವಾಸದಲ್ಲಿ 'ಅಹಂ' ಹಾಗೂ 'ಸಃ'ಸ್ವಾಭಾವಿಕ ನಿಯಮ ಪರಂಪರೆಯಲ್ಲಿ ಅನುಪ್ರವಿಷ್ಟವಾಗುತ್ತದೆ. ಜೀವಾತ್ಮಾ ಮತ್ತು ವಿಶ್ವಾತ್ಮರ ಮಿಲನವು ಸಾಧಿತವಾಗುತ್ತದೆ. ಪ್ರತಿಯೊಂದು ಜೀವವು ಕ್ಷಣ-ಕ್ಷಣದಲ್ಲಿ ತನ್ನನ್ನು ವಿಶ್ವದಲ್ಲಿ ವಿಲೀನಮಾಡಿ ಹಾಗೂ ವಿಶ್ವವನ್ನು ತನ್ನಲ್ಲಿ ಗ್ರಹಣಮಾಡಿಯೇ ರಕ್ಷಿತವಾಗುತ್ತದೆ. ವಿಶ್ವಾತ್ಮನು ಕ್ಷಣ-ಕ್ಷಣದಲ್ಲಿ ಜೀವಾತ್ಮನನ್ನು ತನ್ನಲ್ಲಿ ವಿಲೀನ ಮಾಡಿಕೊಳ್ಳುವನು ಮತ್ತು ತನ್ನ ಜೀವ ದೇಹದಲ್ಲಿ ಅನುಪ್ರವಿಷ್ಟನಾಗಿ ಅದನ್ನು ಸಂಜೀವಿತ ಇಡುತ್ತಾನೆ. 'ಅಹಂ', 'ಸಃ' ಆಗಿ ಹೋಗುತ್ತದೆ ಮತ್ತು 'ಸಃ', 'ಅಹಂ' ರೂಪದಲ್ಲಿ ಪ್ರತೀಯಮಾನವಾಗುತ್ತದೆ. ಈ ಭಾವದಲ್ಲಿ ನಿತ್ಯನಿರಂತರ ವ್ಯಷ್ಟಿ ಮತ್ತು ವಿಶ್ವದ ಜೀವನ ಲೀಲೆಯು ನಡೆಯುತ್ತದೆ. ವಿಶ್ವಜೀವನವೇ ವ್ಯಷ್ಟಿಜೀವನದಲ್ಲಿ ಲೀಲಾಯಿತ. ವ್ಯಷ್ಟಿಯ ಪ್ರತಿಯೊಂದು ಅಂಗ-ಪ್ರತ್ಯಂಗ, ಪ್ರತಿಯೊಂದು ಅಣು-ಪರಮಾಣುಗಳಲ್ಲಿ ವಿಶ್ವವು ಪ್ರತಿಫಲಿತ ಮತ್ತು ವಿಶ್ವದಲ್ಲಿಯೂ ವ್ಯಷ್ಟಿ ಪ್ರತಿಫಲಿತವು. ಪರಸ್ಪರವಾಗಿ ಆಲಿಂಗನ ಮಾಡಿ ಪರಸ್ಪರದ ಸಹಿತ ನಿತ್ಯಯುಕ್ತವಾಗಿಯೇ ಉಭಯದ ಜೀವಂತ ಸತ್ತೆ ಮತ್ತು ಪ್ರಕಾಶ. ಜೀವನ ಪ್ರವಾಹದೊಳಗಿಂದ ನಡೆಯುತ್ತ, ನಡೆಯುತ್ತ ಜ್ಞಾನ ಅಥವಾ ಅನುಭವ ಶಕ್ತಿಯ ಕ್ರಮವಿಕಾಸದಲ್ಲಿ ಯಾವ ವ್ಯಷ್ಟಿಜೀವದ ತತ್ವದೃಷ್ಟಿಯು ಉನ್ಮೀಲಿತವಾಗುತ್ತದೆ. ಅದು ವ್ಯಷ್ಟಿ ಜೀವನ ಮತ್ತು ಸಮಷ್ಟಿ ಜೀವನದ ಈ ಅಂಗಾಂಗಿತ್ವ ಈ ನಿತ್ಯಯುಕ್ತತ್ವ ಈ ತಾತ್ವಿಕ ಏಕತ್ವವನ್ನು ಸಮ್ಯಕ್ ಉಪಲಬ್ದಿ ಮಾಡಲು ಶಕ್ತನು. ಅವನು ವಿಶ್ವವನ್ನು ತನ್ನಲ್ಲಿ ಹಾಗೂ ತನ್ನನ್ನು ವಿಶ್ವದಲ್ಲಿ ಅನುಭವ ಮಾಡುತ್ತಾನೆ.ವಿಶ್ವಾತ್ಮದೊಡನೆ ತನ್ನ ಏಕತ್ವವನ್ನು ಪಡೆಯುತ್ತಾನೆ. ಅವನ ಭೇದಬುದ್ಧಿಯು ವೈಷಮ್ಯಬುದ್ಧಿಯು ತಿರೋಹಿತವಾಗಿ ಹೋಗುತ್ತದೆ. ವಿಶ್ವಜಗತ್ತಿನಲ್ಲಿ ಎಲ್ಲಿಯೂ ಅವನು ಯಾವ ಅಸಾಮಂಜಸ್ಯ ದರ್ಶನವನ್ನು ಮಾಡುವದಿಲ್ಲ. ಎಲ್ಲಿಯೂ ಸ್ವಲ್ಪಾದರೂ ಕದರ್ಯ ಅಥವಾ ಭೀಭತ್ಸವನ್ನು ನೋಡುವದಿಲ್ಲ. ಜಗತ್ ವಿಧಾನದಿಂದ ಅವನು ಯಾವ ಪ್ರಕಾರದ ಆಘಾತವನ್ನು ಹೊಂದುವದಿಲ್ಲ. ಅವನ ಅಂತರದಲ್ಲಿಯೂ ಯಾವ ಪ್ರಕಾರ ಆಘಾತ ಪ್ರವೃತ್ತಿಯ ಉದ್ರೇಕವಾಗುವದಿಲ್ಲ. ಅವನು ಪರಮ ಸಾಮ್ಯದಲ್ಲಿ ಸ್ಥಿತಿಯನ್ನು ಪಡೆದಿರುತ್ತಾನೆ. ಸರ್ವಾವಸ್ಥೆಯಲ್ಲಿ, ಸಕಲ ವ್ಯಾಪಾರಗಳಲ್ಲಿ ಪರಮಾನಂದ ರಸವನ್ನು ಆಸ್ವಾದನೆ ಮಾಡುತ್ತಾನೆ.

ಯೋಗಾಚಾರ್ಯರು ಉಪದೇಶವನ್ನು ಮಾಡುತ್ತಾರೆ. ಸಿದ್ಧಾವಸ್ಥೆಯಲ್ಲಿ ಅನೇಕ ಕಾಲ ಉಪದೇಶ ಮಾಡಿರುತ್ತಾರೆ. ಇದಕ್ಕೋಸುಗ ಸಾಧನವು ಬಹಳ ಕಠಿಣವಲ್ಲ ಮತ್ತು ಸಹಜವು. ಇದರ ಸಾಧನ ಕೇವಲ

ಮಾತ್ರ ದೃಷ್ಟಿ ಇಡುವದು ಮತ್ತು ಸ್ಮರಣ ಇಡುವದು. ಪ್ರತಿಯೊಂದು ಶ್ವಾಸ-ಪ್ರಶ್ವಾಸದಲ್ಲಿ ಅವಿರಾಮವಾಗಿ ಸ್ವಭಾವತಃ ಯಾವದು ನಡೆಯುತ್ತದೆ ಅತ್ತ ಕಡೆಗೆ ಸುನಿಪುಣ ದೃಷ್ಟಿಯನ್ನು ಇಡುವದು ಮತ್ತು ಯಾವಾಗಲೂ ಅದನ್ನು ಸ್ಮರಣೆಯಲ್ಲಿಡುವ ಪ್ರಯತ್ನವನ್ನು ಮಾಡುವದೇ ಸಾಧನವು. ಪ್ರತಿಯೊಂದು ಶ್ವಾಸದೊಡನೆಯೇ ಪ್ರಾಕೃತಿಕ-ವಿಧಾನ ಅನುಸಾರವಾಗಿಯೇ 'ಅಹಂ' ಹಾಗೂ 'ಸಃ' ಇವುಗಳ ಯಾವ ಯೋಗ ಯಾವ ಸಮರಸತ್ವ ಯಾವ ಐಕ್ಯ ಸಾಧಿತವಾಗುತ್ತದೆ, ಅತ್ತ ದೃಷ್ಟಿಯನ್ನು ಇಟ್ಟು ಇದರ ತಾತ್ಪರ್ಯವನ್ನು ಅನುಸ್ಮರಣೆ ಮಾಡಲು ಅಭ್ಯಾಸ ಮಾಡಿದರೆ ಕೃತಾರ್ಥತೆಯನ್ನು ಹೊಂದುತ್ತಾನೆ. ಯಾವದು ಸ್ವಭಾವತಃ ಹಗಲು ರಾತ್ರಿ ಅಜ್ಞಾತಸಾರವಾಗಿ ನಡೆಯುತ್ತದೆ. ಸಜ್ಞಾನದಿಂದ ಅಭಿನಿವೇಶ ಸಹಕಾರದಿಂದ ಅದನ್ನು ನೋಡುತ್ತಿದ್ದರೆ ಸಾಧನವಾಗುವದು. 'ಹಂ' ಮತ್ತು 'ಸಃ'-ಶಬ್ದ ಸಹ ಶ್ವಾಸದ ಈ ಬಹಿರ್ಗತಿ ಮತ್ತು ಅಂತರ್ಗತಿ, ಇದರ ಹೆಸರೇ 'ಹಂಸ' ಮಂತ್ರವು. ಈ ಮಂತ್ರದ ಜಪವು ಸ್ವಾಭಾವಿಕವಾಗಿ ಹಗಲು-ರಾತ್ರಿ ನಡೆಯುತ್ತದೆ. ಹಂಸ ಮಂತ್ರದ ಸಾಧನದಲ್ಲಿ ಸಾಧಕನು ಸ್ವಂತ ಪ್ರಯಾಸದಿಂದ ಜಪವನ್ನು ಮಾಡಬೇಕಾಗಿಲ್ಲ. ಕೇವಲ ಪ್ರಕೃತಿಯ ಈ ಅವಿರಾಮ ಜಪದ ಕಡೆಗೆ ಚಿತ್ತವನ್ನು ಏಕಾಗ್ರ ಮಾಡಬೇಕಾಗುವದು. ಹಾಗು ಇದರ ಯಾವ ಸುಗಭೀರ ಆಧ್ಯಾತ್ಮಿಕ ತಾತ್ಪರ್ಯವೋ ಅದನ್ನು ಮನಸಿನಲ್ಲಿ ಸ್ಮರಣ ಮಾಡಬೇ ಕಾಗುತ್ತದೆ. ಈ ಕಾರಣದಿಂದ ಈ ಸಾಧನೆ ಮಂತ್ರಯೋಗವಾದರೂ ಇದರ ಹೆಸರು 'ಅಜಪಾ' ಯೋಗಶಾಸ್ತ್ರದಲ್ಲಿ ಇದಕ್ಕೆ 'ಅಜಪಾ' ನಾಮಕ ಗಾಯತ್ರೀ ಸಂಜ್ಞೆ ಕೊಡಲ್ಪಟ್ಟಿರುತ್ತದೆ. ಇಡಿಯ ಹಗಲು ರಾತ್ರಿಯಲ್ಲಿ ಸ್ವಾಭಾವಿಕ ನಿಯಮದಿಂದ ಆ ಅಜಪಾ-ಜಪವು '೨೧೬೦೦'ಸಾರೆ ಪ್ರತಿ ಮನುಷ್ಯನಲ್ಲಿ ನಡೆಯುವದು. ಕೇವಲ ಈ ಸ್ವಾಭಾವಿಕ ಅಜಪಾ ಜಪದ ಕಡೆಗೆ ದೃಷ್ಟಿಯನ್ನು ಇಟ್ಟು ತಾತ್ಪರ್ಯ ಸ್ಮರಣದ ಅನುಶೀಲನ ಮಾಡಿದರೆ ಸ್ಮರಣವು ಕ್ರಮೇಣ ಅನುಭವದಲ್ಲಿ ಪರಿಣತವಾಗುವದು. ಹಾಗೂ ಯೋಗಿಗಳ ಇಚ್ಛಿತವಾದ ಮೋಕ್ಷವು ಪ್ರಾಪ್ತವಾಗುವದು.

ಯೋಗಿಗುರು ಗೋರಕ್ಷನಾಥನ ಉಕ್ತಿಯು ಇರುತ್ತದೆ. -'ಹಂ' ಕಾರೇಣ ಬಹಿರ್ಯಾತಿ. 'ಸ' ಕಾರಣೇ ವಿಶೇತ್ ಪುನಃ । ಹಂಸ-ಹಂಸೇತ್ಯಮುಂ ಮಂತ್ರಂ ಜೀವೋ ಜಪತಿ ಸರ್ವದಾ ॥ ಷಟ್‌ಶತಾನಿ ದಿವಾರಾತ್ರೌ ಸಹಸ್ರಾಣ್ಯೇಕ ವಿಂಶತಿಃ। ಏತತ್ ಸಂಖ್ಯಾನ್ವಿತಂ ಮಂತ್ರಂ ಜೀವೋ ಜಪತಿ ಸರ್ವದಾ॥ ಅಜಪಾ ನಾಮ ಗಾಯತ್ರೀ ಯೋಗಿನಾಂ ಮೋಕ್ಷದಾಯಿನೀ। ತಸ್ಯಾಃಸ್ಮರಣ ಮಾತ್ರೇಣ ಸರ್ವಪಾಪೈಃ ಪ್ರಮುಚ್ಯತೇ॥

ಯೋಗಿಸಂಪ್ರದಾಯದಲ್ಲಿ ಮತ್ತೊಂದು ಅತಿ ಸೂಕ್ಷ್ಮವೂ, ಅತಿ ಸುಂದರವೂ ಆದ ಪ್ರಕ್ರಿಯೆಯು ಪ್ರಚಲಿತವಿರುತ್ತದೆ. ಅದರ ಹೆಸರು 'ನಾದಾನು ಸಂಧಾನ'. 'ನಾದ ಪರಮತತ್ವದ ಶಿವ, ಬ್ರಹ್ಮ ಅಥವಾ ಪರಮಾತ್ಮನ ನಿತ್ಯ ಶಬ್ದಮಯೀ ಮೂರ್ತಿ, ಸಚ್ಚಿದಾನಂದಮಯಿ ಮಹಾಶಕ್ತಿಯ ಆದಿಮ ಸ್ಪಂದಾತ್ಮಕ ಪ್ರಕಾಶ. ವೇದ ಉಪನಿಷದಾದಿ ಸಕಲಶಾಸ್ತ್ರಗಳಲ್ಲಿ ಇದೇ ನಾದಕ್ಕೆ 'ಪ್ರಣವ' ಹೆಸರಿನಿಂದ ಕರೆಯಲ್ಪಡುತ್ತದೆ. ಈ ನಾದದಿಂದಲೇ ಜೀವ ಜಗತ್ತಿನ ಉದ್ಭವವು. ಎಲ್ಲ ಜೀವರ ಅಂತರ್ಹೃದಯದಲ್ಲಿ ಈ ನಾದವು ಪ್ರತಿನಿಯತ ಅನಾಹತ ಭಾವದಿಂದ ಝಂಕೃತವಾಗುತ್ತದೆ. ಈ ನಾದಕ್ಕೆ ಉತ್ಪತ್ತಿ ಇಲ್ಲ. ವಿನಾಶವಿಲ್ಲ. ವಿಶ್ವಭುವನ ನಾದಮಯ ಹಾಗು ಪ್ರತಿಯೊಂದು ಜೀವ ದೇಹವೂ ನಾದಮಯವು. ವಿಚಿತ್ರ ಶಬ್ದ, ವಿಚಿತ್ರ ಧ್ವನಿ, ವಿಚಿತ್ರ ಭಾಷೆ ಎಲ್ಲವೂ ಈ ಅನಾಹತ ನಾದ ಸಮುದ್ರದ್ದೇ. ವಿಚಿತ್ರ, ತರಂಗ ಭಂಗಿ ಒಂದು ಅಖಂಡ ನಾದದ್ದೇ ಖಂಡಿತ. ಅಭಿವ್ಯಕ್ತಿಯು ಈ ನಾದದ ಮೂಲ ಸ್ವರೂಪವು. "ಓಮ್" (ಓಂ) ಇದು ಯಾವ ಜೀವೋಚ್ಚಾರಿತ ಅಥವಾ ಜಡ ಸಂಘರ್ಷ ಸಮುತ್ಪನ್ನ ಅನಿತ್ಯ ಶಬ್ದ ವಿಶೇಷ ಅಥವಾ ಧ್ವನಿ ವಿಶೇಷವಲ್ಲ. ಸ್ವಯಂ ಶಿವ ಅಥವಾ ಬ್ರಹ್ಮದ್ದೇ ಶಬ್ದ ರೂಪದಿಂದ ನಿತ್ಯ ಆತ್ಮ ಪ್ರಕಾಶವು. ಉತ್ಪತ್ತಿ ವಿನಾಶಶೀಲ ಶಬ್ದಗಳೆಲ್ಲ ಈ ಅನಾಹತ ನಿತ್ಯ 'ಓಂ'ಕಾರದಿಂದಲೇ ಉತ್ಪನ್ನವಾಗಿರುತ್ತವೆ ಮತ್ತು ಇದರಲ್ಲಿಯೇ ವಿಲೀನವಾಗಿ ಹೋಗುತ್ತವೆ. ಮಾಂಡೂಕ್ಯ ಉಪನಿಷತ್ತಿನಲ್ಲಿ "ಭೂತಂ ಭವದ್ ಭವಿಷ್ಯದಿತಿ

ಸರ್ವಮೋಂಕಾರ ಏವ। ಯಚ್ಚಾನ್ಯತ್ ತ್ರಿಕಾಲಾತೀತಂ ತದಪಿ ಓಂಕಾರ ಏವ।ಸರ್ವಂ ಹೇತಮ್ ಬ್ರಹ್ಮ। ಅಯಮಾತ್ಮಾ ಬ್ರಹ್ಮ. ಯಾವದು ಕೆಲವು ಅತೀತ ವರ್ತಮಾನ ಮತ್ತು ಭವಿಷ್ಯತ್ ಅರ್ಥಾತ್ ಕೆಲ ಕಾಲದಲ್ಲಿ ಉತ್ಪನ್ನವಾಗುವದು ಹಾಗು ಕಾಲಕ್ರಮದಿಂದ ವಿಷಯ ಪ್ರಾಪ್ತವಾಗುವದು, ಎಲ್ಲವೂ ಸ್ವರೂಪತಃ 'ಓಂ'ಕಾರ ಅರ್ಥಾತ್ 'ಓಂ'ದಿಂದಲೇ ಅವುಗಳ ಉದ್ಭವ. ಓಂಕಾರದಲ್ಲಿಯೇ ಅವುಗಳ ವಿಲಯ ಹಾಗೂ ಸ್ಥಿತಿ ಕಾಲದಲ್ಲಿ 'ಓಂ'ದಿಂದಲೇ ಅವುಗಳು ಪರಿವ್ಯಪ್ತವು ಮತ್ತು ಯಾವದು ತ್ರಿಕಾಲದ ಅತೀತ;ನಿತ್ಯ, ಸತ್ಯ, ಉತ್ಪತ್ತಿ, ವಿಲಯ ವಿಹೀನ, ಅದು ಸಹ ಓಂಕಾರವೇ. ಅತಏವ ಓಂಕಾರದ ಹೊರತು ಬೇರೆ ಯಾವದರ ಸ್ವತಂತ್ರ ಸತ್ತೆಯೇ ಇಲ್ಲ. ಎಲ್ಲವೂ ಈ ಓಂಕಾರ ರೂಪೀ ಬ್ರಹ್ಮವೇ. ಎಲ್ಲದರಲ್ಲಿ ಪ್ರಕಾಶಿತವು ಹಾಗು ಎಲ್ಲವನ್ನು ಅತಿಕ್ರಮಿಸಿಯೂ ನಿತ್ಯ ಸ್ವಸ್ವರೂಪದಲ್ಲಿ ವಿರಾಜಮಾನವಾಗಿರುತ್ತದೆ.

'ಓಂ, ಮಂತ್ರ ಅವಲಂಬನದಿಂದ ಈ ನಿತ್ಯ ಸತ್ಯ ಸರ್ವದೇಶಕಾಲ ವ್ಯಾಪಿ ಮತ್ತು ಸರ್ವ ದೇಶ ಕಾಲಾತೀತ ಬ್ರಹ್ಮಸ್ವರೂಪ 'ಓಂ'ಕಾರದ ಅನುಸಂಧಾನವೇ ಯೋಗದ 'ನಾದಾನುಸಂಧಾನ'ವು. ವಿಶ್ವಪ್ರಪಂಚದ ಸರ್ವವಿಧ ಕೋಲಾಹಲ, ಸರ್ವಪ್ರಕಾರ ಉತ್ಪತ್ತಿ ವಿಲಯಶೀಲ ಶಬ್ದ ತರಂಗ ವಿದೀರ್ಣಮಾಡಿ, ವಿಚಿತ್ರ ಭೇದ ವಿಭಕ್ತ ಧ್ವನಿ ಸಮೂಹದ ಅಂತರದಲ್ಲಿ ಪ್ರವೇಶಮಾಡಿ, ಆ ಭೇದ ವಿಹೀನ, ತಂರಗ ವಿಹೀನ, ಉತ್ಪತ್ತಿ ವಿಲಯ ವಿಹೀನ ಮಹಾನ್ ಮಧುರನಾದ ರೂಪೀ, ಪ್ರಣವರೂಪೀ ಬ್ರಹ್ಮನನ್ನು ಅನುಕ್ಷಣ ಸಂಧಾನ ಮಾಡಬೇಕಾಗುವದು. ಅನುಸಂದಾನದ ಪಥದಲ್ಲಿ ಎಷ್ಟು ಪ್ರಕಾರ ವಿಚಿತ್ರ ಭೇದ, ವಿಭಿನ್ನ ಅನಿತ್ಯ ಶತ ತರಂಗಗಳು ಶ್ರವಣಕ್ಕೆ ವಿಕ್ಷಿಪ್ತ ಮಾಡುವವು. ಮನಕ್ಕೆ ಎಂದೋ ಉತ್ಯಕ್ತ ಮಾಡುವವು. ಯಾವಾಗಲೂ ಪ್ರಲುಬ್ಧ ಮಾಡುವವು. ಅವೆಲ್ಲವುಗಳಿಂದ ಶ್ರವಣ ಮನನಗಳನ್ನು ಪ್ರತ್ಯಾಹೃತಮಾಡಿ, ಆ ಅನಾಹತ ನಾದವನ್ನು ಶ್ರವಣ ಮಾಡಬೇಕಾಗುವದು. ಅದರಲ್ಲಿ ಮನವನ್ನು ಮುಳುಗಿಸಬೇಕಾಗುವದು. ಮಾಂಡೂಕ್ಯ ಉಪನಿಷತ್ತು ಹೇಳುತ್ತದೆ: ಆ 'ಓಂ'ಕಾರ ರೂಪೀ ಬ್ರಹ್ಮವು, ಚತುಷ್ಪಾತ್, ಚತುರ್ಮಾತ್ರಾ ವಿಶಿಷ್ಟವು. ಜಾಗ್ರದವಸ್ಥೆಯಲ್ಲಿ ಅದರ ವಿಶ್ವರೂಪದ ಪ್ರಕಾಶ, ಸ್ವಪ್ನಾವಸ್ಥೆಯಲ್ಲಿ ಅದರ ತೈಜಸರೂಪದ ಪ್ರಕಾಶವು ಹಾಗು ಸುಷುಪ್ತಾವಸ್ಥೆಯಲ್ಲಿ ಅದರ ಪ್ರಾಜ್ಞರೂಪದ ಪ್ರಕಾಶವು. ಈ ಎಲ್ಲವೂ ಅದರ ಒಂದೊಂದು ಮಾತ್ರೆಯ ಪ್ರಕಾಶ ಮಾತ್ರ. ಈ ಎಲ್ಲವುಗಳನ್ನು ಭೇದಿಸಿ ಅದರ ಸರ್ವೋರ್ಧ್ವ ನಿತ್ಯ ಸ್ವರೂಪದೊಡನೆ ಚಿತ್ತವನ್ನು ಯುಕ್ತ ಮಾಡಬೇಕಾಗುವದು. ಆ ಸ್ವರೂಪ 'ಅಮಾತ್ರಶ್ಚ ತು ರ್ಥೋऽರ ವ್ಯವಹಾರ್ಯಃ ಪ್ರಪಂಚೋಪಶಮಃ ಶಿವೋऽದ್ವೈತ ಏವಮೋಂಕಾರ ಆತ್ಮೈಚ್ಛ"- ಮಾತ್ರಾವಿಹೀನ, ತುರೀಯ, ಸರ್ವಭೇದ ವ್ಯವಹಾರಾತೀತ, ವಿಶ್ವಪ್ರಪಂಚಾತೀತ, ದ್ವೈತ-ವಿಹೀನ, ಶಿವಸ್ವರೂಪ. ಈ 'ಓಂ'ಕಾರವೇ ಆತ್ಮನ ಸ್ವರೂಪ.

ದೀರ್ಘ ಅಥವಾ ಪ್ಲುತ ಸ್ವರದಿಂದ ಉಚ್ಚಾರಿತ 'ಓಂ'ಮಂತ್ರ ಇಲ್ಲವೆ ಗುರುದತ್ತ ಬ್ರಹ್ಮವಾಚಕ ನಾಮ ಮಂತ್ರವನ್ನು ಸುದೃಢ ಭಾವದಿಂದ ಅವಲಂಬನ ಮಾಡಿ ಜಾಗತಿಕ ಎಲ್ಲ ನಾಮ ರೂಪಗಳ ಆಸಕ್ತಿ ಮತ್ತು ಆಕರ್ಷಣದಿಂದ ಚಿತ್ತದ ಮುಕ್ತಿ ಸಾಧನವನ್ನು ಮಾಡುವದು ಅವಶ್ಯಕವಿರುತ್ತದೆ. ಪ್ರಣವದಲ್ಲಿ ಅಥವಾ ನಾಮದಲ್ಲಿ ಎಷ್ಟು ರತಿಯು ಇರುತ್ತದೆಯೋ ಚಿತ್ತವು ಎಷ್ಟು ಅದರಲ್ಲಿ ಏಕಾಗ್ರವಾಗುತ್ತದೋ, ಹೊರಗಿನ ಎಲ್ಲ ನಾಮರೂಪಗಳ ಪ್ರತಿಚಿತ್ತದ ಔದಾಸೀನ್ಯವು ಎಷ್ಟು ಬೆಳೆದಿರುತ್ತದೆ, ಪ್ರಣವ ಅಥವಾ ನಾಮದ ಅಷ್ಟೇ ಸೂಕ್ಷ್ಮಸ್ವರೂಪವು ಉಪಲಬ್ಧಿ ಗೋಚರವಾಗುತ್ತದೆ. ಎಷ್ಟು ವೇಳೆ ಮಂತ್ರ ರಸನೆಯಿಂದ ಉಚ್ಚಾರಿತ ಮತ್ತು ಕರ್ಣಕ್ಕೆ ಶ್ರುತಿಗೋಚರವಾಗುತ್ತದೆ ಅಷ್ಟು ವೇಳೆ ಅದರ ಸ್ಥೂಲ ರೂಪದೊಡನೆಯೇ ಪರಿಚಯವು, ಅಷ್ಟು ವೇಳೆ ಅದು ಮನದ ವಿಷಯ ರೂಪದಿಂದ ಮನಸಿನ ಹೊರಗೂ ಉತ್ಪನ್ನ ಮತ್ತು ವಿಲಯ ಪ್ರಾಪ್ತವಾಗುತ್ತದೆ. ಪ್ರತ್ಯಾಹಾರವೂ, ಏಕಾಗ್ರತಾ ಅನುಶೀಲನ ಫಲದಿಂದ ಮನಸಿನೊಡನೆ ಅದರ ಎಷ್ಟು ನಿಬಿಡ ಯೋಗವು

ಸ್ಥಾಪಿತವಾಗುತ್ತದೆ, ಅಷ್ಟೇ ಮಂತ್ರ ಅಥವಾ ನಾಮದ ಸೂಕ್ಷ್ಮ ರೂಪದ ಪ್ರಕಾಶವಾಗುವದು. ಮಂತ್ರ ಅಥವಾ ನಾಮ ಅಷ್ಟು ಮಾನಸ ಆಕಾರದಿಂದ ಅಥವಾ ಭಾವ ಆಕಾರದಿಂದ ಪ್ರತಿಭಾತವಾಗುತ್ತದೆ. ಅಷ್ಟೇ ಅದರ ಉತ್ಪತ್ತಿ ವಿಲಯ ಶೀಲ ಭಾವವು ಲುಪ್ತವಾಗಿ ಅವಿಚ್ಛಿನ್ನ ಧಾರಾರೂಪದಿಂದ ಚಿತ್ತದಲ್ಲಿ ಅದರ ಜ್ಯೋತಿರ್ಮಯ ಪ್ರವಾಹವು ನಡೆದಿರುತ್ತದೆ. ಅಭ್ಯಾಸದ ಪ್ರಗಾಢತೆಯಲ್ಲಿ ಮನವು ಮಂತ್ರ ಅಥವಾ ನಾಮದ ಸೂಕ್ಷ್ಮ ಅವಿರಾಮ ಧಾರೆಯಲ್ಲಿ ಮುಳುಗಿ ಹೋಗುವದು ಹಾಗೂ ಮಂತ್ರ ಅಥವಾ ನಾಮವು ನಿತ್ಯ ಅನಾಹತ ನಾದದೊಡನೆ ಏಕೀಭೂತವಾಗಿ ಹೋಗುತ್ತದೆ. ಅಂತರದಲ್ಲಿ ಅನೇಕ ಬಗೆಯ ಶಬ್ದಗಳ ಅನುಭೂತಿಯಾಗುತ್ತದೆ. ಹಲವು ಬಗೆಯ ಜ್ಯೋತಿ-ದರ್ಶನಾದಿಗಳೂ ಆಗುವವು. ಅವೆಲ್ಲವುಗಳ ಪ್ರಲೋಭನ ಮತ್ತು ವಿಕ್ಷೇಪಗಳಿಂದ ಚಿತ್ತವನ್ನು ಮುಕ್ತವಾಗಿಡುವ ಸಲುವಾಗಿ ಎಚ್ಚರವಾಗಿರಬೇಕಾಗುತ್ತದೆ. ಅನಾಹತ ನಾದದೊಡನೆ ಪರಿಚಯವಾಗಲು ಮತ್ತು ಎಲ್ಲ ಶಬ್ದ ಮತ್ತು ರೂಪ ಅಕಿಂಚಿತ್ ಕರವಾಗಿ ಹೋಗುತ್ತವೆ. ಆಗ ಒಂದು ನಾದ, ಒಂದು ಸೂರ, ಒಂದು ಮನೋಹರ ಸಂಗೀತವು ಸಮಗ್ರ ಭುವನವನ್ನು ಪ್ಲಾವಿತ ಮಾಡಿ ಸಾಧಕ ಹೃದಯ ಮತ್ತು ವಿಶ್ವಹೃದಯವನ್ನು ಏಕೀಭೂತ ಮಾಡಿ ಸಮಸ್ತಚೇತನವನ್ನು ಪರಿವ್ಯಾಪ್ತಮಾಡಿ ಅನುಭೂತವಾಗುತ್ತದೆ. ಸಮಸ್ತ ವಿಶ್ವವೈಚಿತ್ರ್ಯ ಒಂದು ಆದ್ಯಂತ ಮಧ್ಯವಿಹೀನ ಅಖಂಡ ಪ್ರಣವನಾದದಲ್ಲಿ ಏಕೀಭೂತವಾಗಿ ಅಪರಿಸೀಮ ಮಧುರತ್ವವು ಪ್ರಾಪ್ತವಾಗುವದು. ಎಲ್ಲ ವಿಶ್ವಪ್ರಪಂಚ ಅಂತರದಲ್ಲಿ ಯಾವ ಸಂಗೀತಮಯ. ಮಾಧುರ್ಯಮಯ, ಯಾವ ಆನಂದಮಯ, ಯಾವ ಅಮೃತಮಯ, ಅದರ ಯಥಾರ್ಥ ಪರಿಚಯವಾಗುವದು, ಆಗಲೇ ಯಾವಾಗ ಸಾಧಕನ ಸಮಗ್ರ ಚೇತನವು ಈ ಅನಾಹತನಾದದೊಡನೆ ಮಿಲಿತವಾಗುವದು, ಈ ನಾದಾನುಭೂತಿಯ ಕ್ಷೇತ್ರದಲ್ಲಿಯೂ ಸ್ತರಭೇದವಿರುತ್ತದೆ. ಪ್ರಗಾಢತೆಯ ಭೇದವಿರುತ್ತದೆ. ಎಲ್ಲ ಸ್ತರಗಳನ್ನು ಅತಿಕ್ರಮಣ ಮಾಡಲು ನಾದದ ಮತ್ತೆ ಯಾವ ಬಗೆಯ ಪ್ರವಾಹ ಭಾವವು ಇರುವದಿಲ್ಲ. ನಾದವು ಆಗ 'ಶಾಂತಂ', 'ಶಿವಂ' ಅದ್ವೈತಮ್, ಬ್ರಹ್ಮಸ್ವರೂಪದಲ್ಲಿ ಸ್ವಮಹಿಮೆಯಲ್ಲಿ ಪ್ರತಿಭಾತವು. ಸಾಧಕನ ಚೇತನವು ಸಮ್ಯಕ್‌ರೂಪದಲ್ಲಿ ತದ್‌ಭಾವದಲ್ಲಿ ಭಾವಿತ; ತದಾಕಾರದಲ್ಲಿ ಆಕಾರಿತವು.

ಮಂತ್ರಸಾಧಕನಿಗೆ ಸಾಧನೆಯಿಂದ ಮಂತ್ರಕ್ಕೆ ಗುರುದತ್ತನಾಮಕ್ಕೆ, ಸ್ಥೂಲ ಪ್ರಣವಕ್ಕೆ ಸಾವಕಾಶವಾಗಿ ಅನಾಹತ ಸ್ವಪ್ರಕಾಶ ನಿತ್ಯ ನಾದದ ಸ್ತರದಲ್ಲಿ ಉನ್ನೀತ ಮಾಡಬೇಕಾಗುವದು. ನಾದದೊಡನೆ ಸಮ್ಯಕ್ ರೂಪದಲ್ಲಿ ಕೂಡಿಸಿಕೊಡಬೇಕಾಗುತ್ತದೆ. ನಾದದಲ್ಲಿ ಪರಮತತ್ವದ ಸಮ್ಯಕ್ ಜ್ಯೋತಿರ್ಮಯ ಪ್ರಕಾಶವನ್ನು ಅನುಭವ ಮಾಡಬೇಕಾಗುತ್ತದೆ. ಹಾಗು ಪರಮ ತತ್ವಕ್ಕೆ ಅದೇ ನಾದದ ಹಾಗು ತನ್ನ ಮತ್ತು ವಿಶ್ವಪ್ರಪಂಚದ ಯಥಾರ್ಥ ಸ್ವರೂಪವೆಂದು ಉಪಲಬ್ಧಿ ಮಾಡಬೇಕಾಗುವದು. ಇದರೊಳಗಿಂದಲೇ ಜೀವನಿಗೆ ಶಿವತ್ವ ಲಾಭವಾಗುವದು.

❖❖

## ೨೪

# ನಾಥ ಸಂಪ್ರದಾಯದಲ್ಲಿ ಮಹಾಸಿದ್ಧ ಶ್ರೀ ಸಿದ್ಧ ಮತ್ಸ್ಯೇಂದ್ರನಾಥಜೀ

ನಾಥಯೋಗ ಸಂಪ್ರದಾಯದ ಆದಿ ಆಚಾರ್ಯ ಶ್ರೀ ಆದಿನಾಥ ಭಗವಾನ್ ವಿಶ್ವೇಶ್ವರನು. ಇವನಿಂದಲೇ ನಾಥ ಸಂಪ್ರದಾಯದ ಪ್ರಾದುರ್ಭಾವವಾಗಿರುತ್ತದೆ. ಶ್ರೀ ಸಿದ್ಧ ಮತ್ಸ್ಯೇಂದ್ರನಾಥನಿಗೆ ಇವನಿಂದಲೇ ಯೋಗದೀಕ್ಷೆಯು ದೊರಕಿದೆ. ಶ್ರೀ ಮತ್ಸ್ಯೇಂದ್ರನಾಥನ ಪ್ರಾದುರ್ಭಾವದ ಕತೆಯು ಸ್ಕಂದಪುರಾಣದ ನಾಗರಖಂಡ ೨೬೨ ಅಧ್ಯಾಯದಲ್ಲಿ ಹಾಗು ನಾರದ ಪುರಾಣ ಉತ್ತರಭಾಗ ವಸುಮೋಹಿನೀ ಸಂವಾದದ ೬೯ ಅಧ್ಯಾಯಗಳಲ್ಲಿ ಬಹು ಮನೋಹರವಾಗಿ ಬರೆಯಲ್ಪಟ್ಟಿದೆ. ಪೂರ್ವೋಕ್ತ ಪುರಾಣಗಳಲ್ಲಿ ಮತ್ಸ್ಯನಾಥ, ಮತ್ಸ್ಯೇಂದ್ರನಾಥ, ಮೀನನಾಥ, ಸಿದ್ಧನಾಥ, ಅಖಿಲನಾಥ, ಅಖಿಲ ಸಿದ್ಧನಾಥ, ಆರ್ಯಾವಲೋಕಿತೇಶ್ವರ ಇತ್ಯಾದಿ ಹೆಸರುಗಳ ಉಲ್ಲೇಖವಿದೆ. 'ಶಕ್ತಿ ಸಂಗಮ ತಂತ್ರ'ದಲ್ಲಿ ನೇಪಾಳ ದೇಶದ ಬಗ್ಗೆ ವಿಶೇಷ ಸ್ತುತಿ ಮಾಡಲ್ಪಟ್ಟಿದೆ. ನೇಪಾಳ ರಾಜ್ಯದ ಅಧಿಷ್ಠಾತೃ ದೇವತೆ ಶ್ರೀ ಗುರು ಮತ್ಸ್ಯೇಂದ್ರನಾಥ. ಅಲ್ಲಿ ಪ್ರತಿಯೊಂದು ಮನೆಯಲ್ಲಿ ಇವನ ಮೂರ್ತಿಯ ಪೂಜೆಯು ನಡೆಯುತ್ತದೆ. ಶ್ರೀ ಗುರು ಮತ್ಸ್ಯೇಂದ್ರನಾಥನು ತನ್ನ ಭಕ್ತರಾದ ಆರ್ಯರಿಗೆ ಯಾವಾಗಲೂ ಉಪದೇಶ ಮಾಡುತ್ತಿದ್ದನು. ಅತಏವ ಇವರ ಶುಭನಾಮ 'ಆರ್ಯಾವಲೋಕಿತೇಶ್ವರ' ಅರ್ಥಾತ್ ಆರ್ಯರಿಂದ ಅವಲೋಕಿತ ಅರ್ಥಾತ್ ಸಾಕ್ಷಾತ್ ಈಶ್ವರ ಅಂದರೆ ಬ್ರಹ್ಮನೇ ಆಗಿರುತ್ತಾನೆ. 'ಬ್ರಹ್ಮವಿದ್ ಬ್ರಹ್ಮೈವ ಭವತಿ'.

### ಗೋರಕ್ಷನಾಥ

ಮಧ್ಯಯುಗದ ಶೈವ ಸಂಪ್ರಾದಯದಲ್ಲಿ ಒಟ್ಟಿನ ಮೇಲೆ - "ಪಾಶುಪತ ಶೈವ ಮತ್ತು ಆಗಮಿಕ ಶೈವ" ಎಂಬ ಎರಡು ಭಾಗಗಳು ಇರುವವು. ಪಾಶುಪಂಥಶೈವದ ಒಂದು ಶಾಖೆ "ಗೋರಕ್ಷನಾಥಿ ಸಂಪ್ರದಾಯ". ಈ ಸಂಪ್ರದಾಯದ ಪ್ರವರ್ತಕನ ಬಗೆಗೆ ಹಲವು ಕಿಂ ವದಂತಿಗಳು ಪ್ರಚಲಿತವಿರುತ್ತವೆ. ಗೋರಕ್ಷನಾಥನು ಐತಿಹಾಸಿಕ ಪುರುಷನೆಂಬಲ್ಲಿ ಸಂದೇಹಕ್ಕೆ ಅವಕಾಶವಿಲ್ಲ. ಯಾಕೆಂದರೆ "ಕನ್‌ಫಟ" ಯೋಗಿ ಹೆಸರಿನಿಂದ ಒಂದು ಸನ್ಯಾಸಿ ಸಂಪ್ರದಾಯ ಮತ್ತು ಒಂದು ಅಭಿನವಯೋಗ ಸಾಹಿತ್ಯ ಅವನ ಹೆಸರಿನೊಡನೆ ಸಂಶ್ಲಿಷ್ಟವಾಗಿದೆ. ಅವನು ಹದಿಮೂರನೆ ಶತಮಾನದ ಪ್ರಾರಂಭದಲ್ಲಿ ಪ್ರಾದುರ್ಭೂತನಾದುದು. ವಿಶೇಷ ಸಂಭವವು.[೧]

ಗೋರಕ್ಷನಾಥನು "ಹಠಯೋಗ" ಮತ್ತು "ಗೋರಕ್ಷಶತಕ" ಎಂಬ ಎರಡು ಸಂಸ್ಕೃತ ಗ್ರಂಥಗಳನ್ನು ರಚಿಸಿರುವನು. ಮೊದಲನೆಯ ಗ್ರಂಥವು ಈಗ ಸಹ ಆವಿಷ್ಕೃತವಾಗಿಲ್ಲ. ಪರವರ್ತಿ ಯುಗದಲ್ಲಿ ಹಠಯೋಗ ಪ್ರದೀಪಿಕಾ ಶ್ರೀನಾಥ ಶಿಷ್ಯ ಸ್ವಾತ್ಮಾರಾಮಯೋಗೀಂದ್ರ ರಚಿತ "ಘೇರಂಡ ಸಂಹಿತಾ" ಮತ್ತು "ಶಿವ ಸಂಹಿತಾ"

ಗೋರಕ್ಷನಾಥನ ಹಠಯೋಗ ಮತ್ತು ಗೋರಕ್ಷ ಶತಕಗಳನ್ನು ಅವಲಂಬಿಸಿ ಬರೆಯಲ್ಪಟ್ಟಿವೆ. ಹಿಂದಿ ಕವಿತೆಯಲ್ಲಿ ರಚಿತವಾದ ಕೆಲವು ಗ್ರಂಥಗಳು ಗೋರಕ್ಷಾಥನ ಹೆಸರಿನಿಂದ ನಡೆದು ಬಂದುದು ನಿಜ. ಆದರೆ ಆ ಎಲ್ಲ ಗ್ರಂಥಗಳು ಆತನ ಶಿಷ್ಯ ಪ್ರಶಿಷ್ಯರಿಂದ ಹದಿನಾಲ್ಕನೆಯ ಶತಮಾನದ ಮಧ್ಯಭಾಗದಲ್ಲಿ ರಚಿತವಾಗಿರಬಹುದು. ಭಾರತವರ್ಷೀಯ ಉಪಾಸಕ ಸಂಪ್ರಾದಯ ಪುನೀತರಾದ ಅಕ್ಷಯ ಬಾಬುಗಳು ಹೇಳುವರು: - "ಗೋರಕ್ಷ ಸಂಹಿತಾ ", "ಗೋರಕ್ಷ ಕಲ್ಪ" ಮತ್ತು 'ಗೋರಕ್ಷಸಹಸ್ರ' ಎಂಬ ಗ್ರಂಥಗಳನ್ನು ಅವರೇ ರಚಿಸಿರುವರು. ಗೋರಕ್ಷನಾಥನು "ಹಠಯೋಗ" ಎಂಬ ಒಂದು ಯೌಗಿಕ ಪದ್ಧತಿಯನ್ನು ಪ್ರವರ್ತನ ಮಾಡಿದನು. ಅವನು ಪಾತಂಜಲನ ಅಷ್ಟಾಂಗಯೋಗವನ್ನು ಸಹಜೀಕೃತ ಮಾಡಿ ಷಡಂಗ ಯೋಗದಲ್ಲಿ ಪರಿಣಿತ ಮಾಡಿದನು. ಅವನ ಮತದಲ್ಲಿ ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣಾ, ಧ್ಯಾನ ಮತ್ತು ಸಮಾಧಿ ಈ ಆರು ಯೋಗಾಂಗಗಳು. ಅವನ ಗ್ರಂಥದಲ್ಲಿ ಯಮ ಮತ್ತು ನಿಯಮದ ಪ್ರಸಂಗವಿಲ್ಲ.

ಗೋರಕ್ಷನಾಥಿ ಸಂಪ್ರದಾಯದ ಸನ್ಯಾಸಿಗಳಿಗೆ 'ಕನ್‌ಫಟ' ಯೋಗಿ ಅನ್ನುವರು. ಇವರ ಎರಡು ಕಿವಿಗಳಲ್ಲಿ ಎರಡು ದೊಡ್ಡ ತೂತುಗಳು ಇರುತ್ತವೆ. ಈ ಕಾರಣದಿಂದ ಇವರಿಗೆ ಇಂತಹ ಹೆಸರು ಉಂಟಾಗಿದೆ. ಗೋರಕ್ಷನಾಥಿ ಸಂಪ್ರದಾಯದ ಮಂತ್ರವು "ಶಿವ ಗೋರಕ್ಷ". ಯೋಗ ಮೌಕ್ತಿಕ ವಿಚಾರಸಾಗರದಲ್ಲಿ ಬರೆದಿದೆ:

'ಆದಿನಾಥೋ ಗುರುರ್ಯಸ್ಯ ಗೋರಕ್ಷಸ್ಯ ಚ ಯೋ ಗುರುಃ।
ಮತ್ಸ್ಯೇಂದ್ರಂ ತಮಹಂ ವಂದೇ ಮಹಾಸಿದ್ಧಂ ಜಗದ್ಗುರುಮ್'॥

ಈ ಪದ್ಯದಿಂದ ನಾಥಸಂಪ್ರದಾಯದ ಪರಂಪರೆಯು ಗೊತ್ತಾಗುತ್ತದೆ. ಗುರು ಗೋರಖನಾಥನ ಅವತಾರದ ಕತೆಯು ಸ್ಕಂದಪುರಾಣಾಂತರ್ಗತ ಭಕ್ತಿವಿಲಾಸದ ೫೧-೫೨ ಅಧ್ಯಾಯಗಳಿಂದಲೇ ಆತ್ಮಸ್ವರೂಪದ ಅಪರೋಕ್ಷ ಸಾಕ್ಷಾತ್ಕಾರವಾಗುವದು. ಜ್ಞಾನಿಯು ಪ್ರಕೃತಿ ಅಥವಾ ಮಾಯಾ ಹಾಗು ತಜ್ಜಾತ ಸಕಲಪದಾರ್ಥಗಳಲ್ಲಿ ಅನಾಸಕ್ತವಾಗಿ ತದತೀತ ಆತ್ಮಸ್ವರೂಪ ಅಥವಾ ಬ್ರಹ್ಮಸ್ವರೂಪವನ್ನು ಪ್ರಾಪ್ತ ಮಾಡಿಕೊಂಡು ಮುಕ್ತನಾಗಲು ಬಯಸುವನು ಮತ್ತು ಯೋಗಿಯು ಪ್ರಕೃತಿ ಅಥವಾ ಮಾಯಾ ಮತ್ತು ತದುತ್ಪನ್ನ ದೇಹೇಂದ್ರಿಯ ಅಂತಃಕರಣ ಮೊದಲಾದವುಗಳ ಮೇಲೆ ಆಧಿಪತ್ಯವನ್ನು ಸಂಪಾದಿಸಿ ಮುಕ್ತನಾಗಲು ಇಚ್ಛಿಸುವನು. ಇಬ್ಬರ ಮತದಲ್ಲಿಯೂ ಆತ್ಮನು ಸ್ವರೂಪತಃ ಶುದ್ಧ-ಬುದ್ಧ ಮುಕ್ತ ಸ್ವಭಾವದವನು. ಆದರೆ ಸಾಧನಪದ್ಧತಿಯಲ್ಲಿ ಇಬ್ಬರಿಗೆ ಭಿನ್ನತೆಯು ಇರುತ್ತದೆ. ಜ್ಞಾನಮಾರ್ಗ ಮತ್ತು ಯೋಗಮಾರ್ಗದ ಸಾಧನಪದ್ಧತಿಯಲ್ಲಿ ಭಿನ್ನತೆಯು ಇದ್ದರೂ ಫಲಸಂಬಂಧದಿಂದ ಯಾವ ಭಿನ್ನತೆಯೂ ಇರುವದಿಲ್ಲ.ಗೀತೆಯಲ್ಲಿ ಭಗವಂತನು ಹೇಳಿರುತ್ತಾನೆ:

"ಯತ್ ಸಾಂಖ್ಯೈಃ ಪ್ರಾಪ್ಯತೇ ಜ್ಞಾನಂ ತದ್ ಯೋಗೈರಪಿ ಗಮ್ಯತೇ।
ಏಕಂ ಸಾಂಖ್ಯಂ ಚ ಯೋಗಂ ಚ ಯಃ ಪಶ್ಯತಿ ಸ ಪಶ್ಯತಿ ॥"

ಸಾಂಖ್ಯಮಾರ್ಗಾವಲಂಬಿಗಳು ಯಾವ ಸ್ಥಾನವನ್ನು ಸಂಪಾದಿಸುತ್ತಾರೋ, ಯೋಗ ಮಾರ್ಗಾವಲಂಬಿಗಳು ಅದೇ ಸ್ಥಾನವನ್ನು ಪ್ರಾಪ್ತ ಮಾಡಿಕೊಳ್ಳುತ್ತಾರೆ. ಆದುದರಿಂದ ಸಾಂಖ್ಯಾ ಮತ್ತು ಯೋಗಗಳಿಗೆ ಫಲತಃ ಒಂದೇ ಎಂದು ಯಾವನು ನೋಡುತ್ತಾನೆ ಅವನು ಯಥಾರ್ಥವಾಗಿಯೇ ದರ್ಶನ ಮಾಡುತ್ತಾನೆ. ಮಹಾಭಾರತದಲ್ಲಿ ಭೀಷ್ಮದೇವನು ಯುಧಿಷ್ಠಿರನಿಗೆ ಹೇಳಿದ್ದಾನೆ:

"ಉಭೇ ಚೈತೇ ಮತೇ ಜ್ಞಾನೇ
ನೃಪತೇ ಅಷ್ಟ ಸಮ್ಮತೇ ।
ಅನುಷ್ಠಿತೇ ಯಥಾಶಾಸ್ತ್ರಂ
ನಯೇತಾಂ ಪರಮಾಂ ಗತಿಮ್ ॥"

ಎಲ್ಲೈ ರಾಜನೇ ಉಭಯ ಸಾಧನ ಜ್ಞಾನಗಳು ಶಿಷ್ಟಸಮ್ಮತವೆಂದು ಶ್ರದ್ಧಾರ್ಹವು; ಯಥಾ ಶಾಸ್ತ್ರ ಅನುಷ್ಠಿತವಾಗಲು ಎರಡೂ ಪರಮಗತಿಯನ್ನು ಕೊಡುವವು.

ಮಧ್ಯಯುಗದಲ್ಲಿ ಜ್ಞಾನ ಸಾಧನೆ ಮತ್ತು ಯೋಗ ಸಾಧನೆಯ ವೈಜಯಂತಿಯನ್ನು ತೆಗೆದುಕೊಂಡು ಇಬ್ಬರು ಅಲೌಕಿಕ ಶಕ್ತಿಸಂಪನ್ನರಾದ ಮಹಾಪುರುಷರು ಆಧ್ಯಾತ್ಮಿಕ ಸಾಧನ ಕ್ಷೇತ್ರದಲ್ಲಿ ಭಾರತದಲ್ಲಿ ಅವಿರ್ಭೂತರಾಗಿದ್ದರು. ಒಬ್ಬನು ವೇದಾಂತಾಚಾರ್ಯನಾದ ಶಂಕರ ಮತ್ತು ಒಬ್ಬನು ಯೋಗಾಚಾರ್ಯ ಗೋರಕ್ಷನಾಥನು. ಶಂಕರನಿಂದ ವೈದಾಂತಿಕ ಜ್ಞಾನ ಸಾಧನೆ ಮತ್ತು ಜ್ಞಾನಿಸಂಪ್ರದಾಯ ಹೇಗೆ ನವಜೀವನವನ್ನುಂಟು ಮಾಡಿದೆಯೋ, ಹಾಗೆಯೇ ಗೋರಕ್ಷನಾಥನಿಂದಲೂ ಯೋಗಸಾಧನೆ ಮತ್ತು ಯೋಗಿಸಂಪ್ರದಾಯ ನವಜೀವನವನ್ನು ಪಡೆದಿದೆ. ಜ್ಞಾನಿ ಗುರುಶಂಕರನು ವೇದಾಂತಶಾಸ್ತ್ರದ ಪ್ರಚಾರ ಮತ್ತು ಜ್ಞಾನಸಾಧನೆಯ ಪ್ರಚಲನದ ಉದ್ದೇಶದಿಂದ ಸನ್ಯಾಸಿ ಸಂಪ್ರದಾಯ ಪುನರ್ಘಟಿತ ಮಾಡಿ, ಅವುಗಳಲ್ಲಿ ಕೆಲವು ಶಾಖೆಗಳಲ್ಲಿ ವಿಭಕ್ತ ಮಾಡಿದನು. ಹಾಗೂ ಮುಖ್ಯಾಮುಖ್ಯಾ ಸ್ಥಾನಗಳಲ್ಲಿ ಮಠಸ್ಥಾಪನೆ ಮಾಡಿ ಆ ಎಲ್ಲ ಸ್ಥಾನಗಳನ್ನು ಜ್ಞಾನಸಾಧನೆಯ ಕೇಂದ್ರದಲ್ಲಿ ಪರಿಣತ ಮಾಡಿದನು. ಈ ಬಗೆಯಾಗಿ ದಶನಾಮೀ ಸನ್ಯಾಸಿ ಸಂಪ್ರದಾಯಗಳಿಂದ ಸಮಗ್ರಭಾರತದಲ್ಲಿ ವೇದಾಂತದ ತತ್ವ ಮತ್ತು ಸಾಧನಾ ಶಿಕ್ಷಣದಾನದ ವ್ಯವಸ್ಥೆ ಮಾಡಿದನು. ಯೋಗೀ ಗುರು ಗೋರಕ್ಷನಾಥನೂ ಯೋಗಸಾಧನೆಯ ಪ್ರಚಲನೋದ್ದೇಶ್ಯದಿಂದ ಯೋಗಿಸಂಪ್ರದಾಯದ ಪುನರ್ಘಟನೆ ಮಾಡಿ, ಅವರಿಗೆ ಕೆಲವು ಶಾಖೆಗಳಲ್ಲಿ ವಿಭಕ್ತ ಮಾಡಿದನು. ಬೇರೆ ಬೇರೆ ಸ್ಥಾನಗಳಲ್ಲಿ ಆಶ್ರಮ ಪ್ರತಿಷ್ಠೆಮಾಡಿ, ಯೋಗಶಿಕ್ಷಣದ ಕೇಂದ್ರ ಸ್ಥಾಪನೆ ಮಾಡಿದನು ಹಾಗೂ ಸ್ವಕೀಯ ಅಲೌಕಿಕ ಪ್ರಭಾವ ವಿಸ್ತಾರಮಾಡಿ ಶಿಷ್ಯಪ್ರಶಿಷ್ಯರಿಂದ ಸಮಗ್ರ ಭಾರತದಲ್ಲಿ ಯೋಗಧರ್ಮದ ಪ್ರಚಾರದ ವ್ಯವಸ್ಥೆಮಾಡಿದನು. ಮೋಕ್ಷಾಭಿಲಾಷಿ ಸಂಸಾರವಿರಾಗಿ ಸನ್ಯಾಸಿಗಳಿಗೋಸುಗ ಶಂಕರನು ಹೇಗೆ ಜ್ಞಾನಸಾಧನೆಯ ವಿಧಾನ ಮಾಡಿದನೋ, ಗೋರಕ್ಷನಾಥನೂ ಹಾಗೆಯೇ ಯೋಗಸಾಧನೆಯ ವ್ಯವಸ್ಥೆ ಮಾಡಿದನು.

ಶಂಕರ ಮತ್ತು ಗೋರಕ್ಷನಾಥ ಯಾರೂ ಸಾಕಾರ ಉಪಾಸನೆಯ ವಿರೋಧಿಗಳಾಗಿದ್ದಿಲ್ಲ. ಭಕ್ತಿ ಮತ್ತು ಆಚಾರ ನಿಷ್ಠೆಯೊಡನೆ ದೇವತೆಯ ಉಪಾಸನೆ ಮಾಡುತ್ತ ಮಾಡುತ್ತ ದೇಹೇಂದ್ರಿಯ ಮತ್ತು ಮನವಿಶುದ್ಧವಾಗುವವು, ಹೃದಯವೂ ಧರ್ಮಾನುರಾಗಿ ಆಗುವದು, ಧರ್ಮದ ನಿಗೂಢ ರಹಸ್ಯವನ್ನು ತಿಳಿಯುವದಕ್ಕೋಸುಗ ಆಗ್ರಹವು ಜನ್ಮಿಸುವದು. ಹಾಗೂ ಯೋಗಸಾಧನಾ ಅಥವಾ ಜ್ಞಾನ ಸಾಧನೆಯ ಅಧಿಕಾರವು ಬರುವದು. ಇದಕ್ಕೋಸುಗ ಲೋಕೋತ್ತರ ಮಹಾಪುರುಷರು ಲೋಕಶಿಕ್ಷಣಕ್ಕೋಸುಗ ಪ್ರಥಮತಃ ಸಾಧಾರಣ ಧರ್ಮ ಪರಾಯಣ ಜನರ ಹಾಗೆ ದೇವತೆಯ ಸಾಕಾರಮೂರ್ತಿಯ ಪೂಜಾರ್ಚನಾದಿ ಮಾಡುತ್ತಾರೆ. ಗೀತೆಯಲ್ಲಿಯೂ ಹೇಳಿದೆ:

"ಯದ್‌ಯದಾಚರತಿ ಶ್ರೇಷ್ಠಸ್ತತ್ತದೇವೇತರೋ ಜನಃ ।
ಸ ಯತ್ ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ ॥"

ಶ್ರೇಷ್ಠವ್ಯಕ್ತಿ ಹೇಗೆ ಆಚರಣ ಮಾಡುತ್ತಾರೆ, ಸಾಧಾರಣ ಜನರೂ ಅದೇ ಬಗೆಯಾಗಿಯೇ ಆಚರಣೆ ಮಾಡುತ್ತಾರೆ. ಶ್ರೇಷ್ಠವ್ಯಕ್ತಿ ತನ್ನ ಆಚರಣ ಮತ್ತು ಉಪದೇಶದಿಂದ ಯಾವ ಶಾಸ್ತ್ರದ ಪ್ರಾಮಾಣ್ಯ ಪ್ರತಿಪಾದನ ಮಾಡುತ್ತಾನೆ, ಸಾಧಾರಣ ಜನರೂ ಅದೇ ಶಾಸ್ತ್ರವನ್ನೇ ಅನುವರ್ತನ ಮಾಡುತ್ತಾರೆ.

ಯೋಗಾಧಿಕಾರಿಗಳಾದ ಸಾಧಕರಿಗೆ ಮೋಕ್ಷಪ್ರದವಾದ ಯೋಗಪಥದಲ್ಲಿ ಆನಯನ ಮಾಡುವದಕ್ಕೋಸುಗವೇ ಯೋಗಿಗುರು ಗೋರಕ್ಷನಾಥನು ನಾಥಸಂಪ್ರದಾಯದ ಸಂಘಟನೆ ಮಾಡಿದನು. ನಾಥಯೋಗಿ - ಸಂಪ್ರದಾಯ ದ್ವಾದಶಪಂಥ ಅಥವಾ ಶಾಖೆಗಳಲ್ಲಿ ವಿಭಕ್ತ; ಯಥಾ -ಸತ್ಯನಾತಿ, ಧರ್ಮನಾತಿ,

ರಾಮಪಂಥ ನಾಟೇಶ್ವರಿ, ಕನ್ನಡ, ಕಪಿಲಾನಿ, ವೈರಾಗ, ಮೀನನಾಥ, ಆ ಈ ಪಂಥ, ಪಾಗಲಪಂಥ, ಧ್ವಜಪಂಥ ಮತ್ತು ಗಂಗಾನಾಥಿ. ಶಂಕರನ ದಶನಾಮೀ ಸನ್ಯಾಸಿ ಸಂಪ್ರದಾಯದಂತೆ ಇವರು ಬಾರಪಂಥಿ ಯೋಗಿಸಂಪ್ರದಾಯವೆಂದು ಆಖ್ಯಾತ. ಪ್ರತಿಯೊಂದು ಪಂಥಕ್ಕೂ ಒಂದೊಂದು ಮುಖ್ಯಸ್ಥಾನವಿರುತ್ತದೆ ಹಾಗೂ ಒಂದೊಂದು ಅಂಚಲದಲ್ಲಿ ಒಂದೊಂದು ಪಂಥದ ಪ್ರಾಧಾನ್ಯ ಕಂಡುಬರುತ್ತದೆ. ಪಂಥಗಳಿಗೆ ಪ್ರಾಯಃ ಪ್ರತಿಯೊಂದಕ್ಕೂ ಯಾವದೊಂದು ದೇವತೆ ಅಥವಾ ಪೌರಾಣಿಕ ಮಹಾಪುರುಷನನ್ನು ತಮ್ಮ ಮೂಲ ಪ್ರವರ್ತಕನೆಂದು ನಿರ್ದೇಶ ಮಾಡುತ್ತಾರೆ. ಕೆಳಗೆ ಈ ಎಲ್ಲ ಪಂಥಗಳ ಕಿಂಚಿತ್ ವಿವರಣೆಯು ಪ್ರದತ್ತವಾಗಿರುತ್ತದೆ.

೧. ಸತ್ಯನಾಥಿ ಪಂಥ ಯೋಗಿಗುರು ಸತ್ಯನಾಥನಿಂದ ಪ್ರವರ್ತಿತ. ಓಡಿಸಾ ಪ್ರದೇಶದಲ್ಲಿ ಪಾತಾಲ ಭುವನೇಶ್ವರ ಈ ಪಂಥದ ಮುಖ್ಯಸ್ಥಾನವೆಂದು ಹೇಳಿದೆ.

೨. ಧರ್ಮನಾಥಿ ಪಂಥದ ಮೂಲ ಪ್ರವರ್ತಕ ಧರ್ಮರಾಜ ಯುಧಿಷ್ಠಿರನು. ಇದರ ಮುಖ್ಯ ಸ್ಥಾನವು ನೇಪಾಲ ರಾಜ್ಯ ಸ್ಥಿತ 'ಮಲ್ಲುದೇಲಕ' (ವರ್ತಮಾನ ಕಪಿಲ ವಸ್ತುವಿನಿಂದ ಒಂದು ನೂರು ಮೈಲು ವಾಯುವ್ಯದಲ್ಲಿ)

೩. ರಾಮಪಂಥದ ಪ್ರವರ್ತಕ ತ್ರೇತಾಯುಗದ ಶ್ರೀ ರಾಮಚಂದ್ರನು. ಇದರ ಮುಖ್ಯಸ್ಥಾನವು 'ಚೌಕ ತಾಪ್ಪೇ-ಪಂಚೋಯಾಡಾ (ಗೋರಕ್ಷಪುರ ಸದರ ಮಹಕೂಮಾದ ಅಂತರ್ಗತ)

೪. ನಾಟೇಶ್ವರ ಪಂಥಿಗಳು ಲಕ್ಷ್ಮಣನ ಯೋಗಿಯೆಂದು ತಮ್ಮ ಪರಿಚಯ ಮಾಡಿಕೊಟ್ಟಿರುತ್ತಾರೆ. ಇವರ ಮುಖ್ಯಸ್ಥಾನವು 'ಗೋರಕ್ಷಟಿಲಾ' (ಪಂಜಾಬದ ಜೇಲಮ್ ಜಿಲ್ಹೆಯ ಅಂತರ್ಗತ ರೋತಸ್‌ಗಡದ ಹಲ್ತಾರ ಒಂದು ಗುಡ್ಡದಲ್ಲಿ ಇದೆ)

೫ ಕನ್ನಡ ಯೋಗಿಗಳು ಗಣೇಶನ ಯೋಗಿಯೆಂದು ಆತ್ಮಪರಿಚಯ ಮಾಡಿಕೊಡುತ್ತಾರೆ. ಇವರ ಮುಖ್ಯಸ್ಥಾನವು ಮಾನಕಾಡಾ (ಕಚ್ಛ ಭೂಜ ರಾಜ್ಯದಲ್ಲಿ ಅವ್ಯಸ್ಥಿತ.)

೬. ಕಪಿಲಾನಿ-ಈ ಪಂಥವು ಕಪಿಲಮುನಿಯಿಂದ ಪ್ರವರ್ತಿತವು. ಇದರ ಮುಖ್ಯಸ್ಥಾನವು ಗಂಗಾಸಾಗರವು. ಕಲಕತ್ತೆಯ ಹತ್ತಿರದ ದಮದಮದಲ್ಲಿ ಈ ಪಂಥದ ಪ್ರಧಾನ ಸ್ಥಾನವು.

೭. ವೈರಾಗ್ಯಪಂಥವು ರಾಜಾ ಭರ್ತೃಹರಿಯಿಂದ ಪ್ರವರ್ತಿತವು. ಇದರ ಮುಖ್ಯಸ್ಥಾನವು ' ರಾತಾತುಂಡಾ(ಅಜಮೀರದ ಸಮೀಪದಲ್ಲಿಯ ಪುಷ್ಕರದಿಂದ ಆರುಮೈಲು ಪಶ್ಚಿಮಕ್ಕೆ)

೮. ಮೀನನಾಥ ಸಂಪ್ರದಾಯದ ಪ್ರವರ್ತಕ ಮಹಾರಾಜ ಗೋಪಿಚಂದನು. ಇದರ ಮುಖ್ಯಸ್ಥಾನವು ಅಜ್ಞಾನವು. ಯೋಧಪುರದ ಮಹಾಮಂದಿರ ಮಠವು ಈ ಪಂಥದ ಪ್ರಸಿದ್ಧ ಸ್ಥಾನವು.

೯. ಆಈಪಂಥ -ಭಗವತೀ ವಿಮಲಾನಿಂದ ಪ್ರವರ್ತಿತವೆಂದು ಹೇಳಿದೆ. ಇದರ ಮುಖ್ಯಾಸ್ಥಾನವು ಯೋಗಿಗುಪಾ ಅಥವಾ ಗೋರಕ್ಷ ಪೂಂಈ. ಇದು ಪ್ರಾಚೀನ ಗೌಡದ ಅಂತರ್ಗತ, ವರ್ತಮಾನ ದಿನಾಜಪುರ ಜಿಲ್ಹೆಯಲ್ಲಿ ಅವಸ್ಥಿತವು.

೧೦. ಪಾಗಲಪಂಥ ಯೋಗಿಗುರು ಚೌರಂಗಿನಾಥನಿಂದ ಪ್ರವರ್ತಿತವು. ಇದರ ಮುಖ್ಯಾಸ್ಥಾನವು 'ಬೋಹರ' (ಪ್ರಾಚೀನ ಇಂದ್ರಪ್ರಸ್ಥದಿಂದ ೩೫ ಮೈಲು ಪಶ್ಚಿಮದಲ್ಲಿ ಅವಸ್ಥಿತ.)

೧೧. ಧ್ವಜಪಂಥ -ಹನುಮಾನನಿಂದ ಪ್ರವರ್ತಿತವು. ಈ ಪಂಥದ ಸ್ಥಾನವು ಅಜ್ಞಾತವು.

೧೨. ಗಂಗಾನಾಥಿ ಪಂಥದ ಪ್ರವರ್ತಕರು ಗಂಗಾಪುತ್ರ ಭೀಷ್ಮದೇವನು. ಇದರ ಮುಖ್ಯಸ್ಥಾನವು ಜಖಬಾರ (ಪಂಜಾಬದ ಗುರುದಾಸಪುರ ಜಿಲ್ಹೆಯ ಅಂತರ್ಗತ, ಪಾಠಾನ ಕೋಟದಿಂದ ಆರು ಮೈಲ ದೂರದಲ್ಲಿ)

ಈ ಹನ್ನೆರಡು ಪಂಥಗಳ ಹೊರತು ನಾಥಯೋಗಿ ಸಂಪ್ರದಾಯದ ಇನ್ನೂ ಅನೇಕ ಶಾಖಾ - ಪ್ರಶಾಖೆಗಳು ಇರುತ್ತವೆ ಹಾಗೂ ಅವುಗಳ ದೊಡ್ಡ ದೊಡ್ಡ ಆಶ್ರಮಗಳೂ ಇರುತ್ತವೆ. ಯಥಾ :

೧. ಸಿದ್ಧಕೇರಾನಾ - ಈ ಸ್ಥಾನವು ಈಗ ಪಂಜಾಬದ 'ಸಾರಗೋದಾ'ದ ಅಂತರ್ಗತ, ಮೊದಲು ಇದ್ದು ಪಂಜಾಬದ ಸಾಹಪುರದಲ್ಲಿ ಇತ್ತು.
೨. ಪೇಶಾವರ - ಈ ಸ್ಥಾನವು ರತನನಾಥನ ಹೆಸರಿನಿಂದ ಪ್ರಸಿದ್ಧ. ಈ ಪಂಥದ ಹೆಸರು ರತನನಾಮೀ. ಸ್ಥಾನವು ಕುರುಕ್ಷೇತ್ರದ ಹತ್ತಿರ.
೩. ಭೇಡಾ- ಇದು ಪೀರ ಕಾಯಾನಾಥನ ಹೆಸರಿನಿಂದ ಪ್ರಸಿದ್ಧ. ಈ ಶಾಖೆಯ ಹೆಸರು ಪೀರಕಾಯಾನಾಥಿ.
೪. ದಿನೋದರ -ಕಚ್ಛರಾಜ್ಯದಲ್ಲಿ ಅವಸ್ಥಿತ. ಈ ಶಾಖೆಯು ಧರ್ಮನಾಥಿ ಪಂಥದ ಅಧೀನತಾ ಒಪ್ಪುತ್ತಾರೆ.
೫. ಗೋರಕ್ಷಮಣಿ ಜುನಾಗಡ ರಾಜ್ಯದಲ್ಲಿ (ಪ್ರಭಾಸ ಕ್ಷೇತ್ರದಿಂದ ನಾಲ್ಕು ಮೈಲು ದೂರದಲ್ಲಿ) ಇದೆ.

ಈ ಎಲ್ಲ ಸ್ಥಾನಗಳ ಹೊರತು ಸಿದ್ಧಯೋಗಿಗಳು ತನ್ನ ತಪಃಪ್ರಭಾವದಿಂದ ಅನೇಕ ಪ್ರಸಿದ್ಧ ಆಶ್ರಮಗಳನ್ನು ಸ್ಥಾಪಿಸಿದ್ದಾರೆ. ಭಾರತದ ಪ್ರಾಯಃ ಎಲ್ಲೆಡೆಯಲ್ಲಿಯೂ ನಾಥಯೋಗಿ ಸಂಪ್ರದಾಯದ ಮುಖ್ಯಾ-ಮುಖ್ಯ ಆಶ್ರಮಗಳಲ್ಲಿ ಪ್ರತಿಷ್ಠಿತವಾಗಿವೆ. ಭಾರತದ ಹೊರಗೆ ಅನೇಕ ಸ್ಥಾನಗಳಲ್ಲಿಯೂ ನಾಥಯೋಗಿಗಳ ಸ್ಥಾನ ಮತ್ತು ಪ್ರಭಾವವು ಕಂಡುಬರುತ್ತದೆ.

ನಾಥಯೋಗಿ ಸಂಪ್ರದಾಯವು ಎಷ್ಟು ಶಾಖೆಗಳಲ್ಲಿ ವಿಭಕ್ತವಾಗಿರಲಿ ಹಾಗೂ ಯಾವ ವಿಷಯದಲ್ಲಿ ಅವರ ಮತದಲ್ಲಿ ಮತ್ತು ಆಚಾರದಲ್ಲಿ ಅವಾಂತರ ಭಿನ್ನತ್ವವು ಯಾವದೇ ಇರಲಿ, ಸಾಧ್ಯ-ಸಾಧನ ಸಂಬಂಧದ ಪ್ರಧಾನ ವಿಷಯದಲ್ಲಿ ಅವರೆಲ್ಲರದೂ ಮತ ಮತ್ತು ಆಚಾರ-ವ್ಯವಹಾರ ಪ್ರಾಯಃ ಒಂದೇ ಪ್ರಕಾರವಾಗಿದೆ. ಅವರೆಲ್ಲರು ಒಂದೇ ವಿರಾಟ್ ಸಂಪ್ರದಾಯದ ಅಂತರ್ಭುಕ್ತ, ಅದರ ಪರಿಚಯ ಪ್ರತಿಯೊಂದು ಶಾಖೆಯ ಮತದಲ್ಲಿ ಮತ್ತು ಆಚಾರದಲ್ಲಿ ಜಾಜ್ವಲ್ಯಮಾನ. ಎಲ್ಲ ಪಂಥಗಳೂ ಶ್ರೀ ಆದಿನಾಥನಿಗೆ ಸಂಪ್ರಾದಯದ ಆದಿಪುರುಷನೆಂದು ಒಪ್ಪುತ್ತಾರೆ. ಎಲ್ಲ ಸಂಪ್ರದಾಯಗಳು ಆದಿನಾಥನು ಸ್ವಯಂ ಶಿವನು ಅಥವಾ ಸ್ವಯಂ ಶಿವನೇ ಆದಿನಾಥನು ಎಂದು ಹೇಳುವರು. ಮೂಲತಃ ಸಮಗ್ರ ನಾಥಯೋಗಿ ಸಂಪ್ರದಾಯವೇ ಶೈವಸಂಪ್ರದಾಯವು ಮತ್ತು ಎಲ್ಲರ ಮೂಲ ಉಪಾಸ್ಯವು ಶಿವನು. ಗೋಸೇವಾ ಮತ್ತು ಗೋರಕ್ಷಣೆಯ ಕಡೆಗೆ ಎಲ್ಲ ನಾಥಯೋಗಿಗಳು ವಿಶೇಷ ಆಗ್ರಹ ಪರಿಲಕ್ಷಿತವಾಗುತ್ತದೆ. ನಾಥಸಂಪ್ರದಾಯದ ಮತದಲ್ಲಿ ಗೋಜಾತಿಯ ಸೇವಾ-ಶುಶ್ರೂಷಾ ಮತ್ತು ರಕ್ಷಣಾವೇಕ್ಷಣದ ಕಡೆಗೆ ಗೋರಕ್ಷನಾಥನ ವಿಶೇಷ ಆಗ್ರಹವಿತ್ತೆಂದೇ ಅವನು ಗೋರಕ್ಷನಾಥ ಹೆಸರಿನಿಂದ ಪರಿಚಿತನಾಗಿದ್ದನು. ಏನೇ ಆಗಲಿ, ಸಮಗ್ರ ಹಿಂದೂ ಸಮಾಜದ ಮೇಲೆ ಗೋರಕ್ಷನಾಥನ ಪ್ರಭಾವವು ಅಸಾಧಾರಣವು.

ದಶನಾಮೀ ಸನ್ಯಾಸಿಗಳು ಹೇಗೆ ತೀರ್ಥ, ಆಶ್ರಮ, ಸರಸ್ವತಿ, ಪುರೀ, ಭಾರತಿ, ವನ, ಅರಣ್ಯ, ಗಿರಿ, ಪರ್ವತ, ಸಾಗರ ಈ ಹತ್ತು ಪ್ರಕಾರ ಉಪಾಧಿಗಳಲ್ಲಿ ತಮ್ಮ ತಮ್ಮ ಸಾಂಪ್ರದಾಯಿಕ ವಿಭಾಗಾನುಸಾರವಾಗಿ ಯಾವದೊಂದು ಉಪಾಧಿಯನ್ನು ಗುರುಪ್ರದತ್ತ ಮಾನದೊಡನೆ ಗ್ರಹಣ ಮಾಡಿದರೂ, ಎಲ್ಲರದೂ ಸಾಧಾರಣ ಉಪಾಧಿ 'ಸ್ವಾಮೀ'. ಅದೇ ಪ್ರಕಾರ ಯೋಗಿಗಳ ಸಾಧಾರಣ ಉಪಾಧಿ 'ನಾಥ'. ಅವರು ಮೊದಲು ಹೇಳಿದ ಹನ್ನೆರಡು ಪಂಥಗಳಲ್ಲಿ ವಿಭಕ್ತವಾಗಿದ್ದರೂ, ಅವರ ಹೆಸರಿನ ಅಥವಾ ಉಪಾಧಿಯಲ್ಲಿ ತಮ್ಮ ತಮ್ಮ ಪಂಥದ ವಿಶೇಷ ಯಾವ ನಿದರ್ಶನ ಇಡುವದಿಲ್ಲ. ಭೋಗಾಕಾಂಕ್ಷೆಯನ್ನು ಪರಿತ್ಯಜಿಸಿ ಸನ್ಯಾಸ ಅವಲಂಬನ ಮಾಡಿ, ಅವರು ತಮ್ಮ ದೇಹ, ಇಂದ್ರಿಯ ಮತ್ತು ಮನಗಳ ಮೇಲೆ ಹಾಗೂ ಕರ್ಮಭೋಗಮಯ ಸಂಸಾರದ ಮೇಲೆ ನಾಥತ್ವ ಅಥವಾ ಆಧಿಪತ್ಯ ಪಡೆದಿರುತ್ತಾರೆಂದೇ ಸಂಭಾವತಃ ಅಂತಹ ಉಪಾಧಿಯ ಅಧಿಕಾರಿಯಾದರು.

ನಾಥ ಸಂಪ್ರದಾಯದ ಸಾಧಕರಲ್ಲಿ ವಿಭಿನ್ನ ಪ್ರಕಾರ ದೀಕ್ಷೆ ಪ್ರಚಲಿತವಿರುತ್ತವೆ. ಪ್ರಥಮತಃ ಮಂತ್ರದೀಕ್ಷೆ -ಇದರಲ್ಲಿ ಗುರುವು ಶಿಷ್ಯನ ಕರ್ಣದಲ್ಲಿ ಶಕ್ತಿಸಮನ್ವಿತ ಪವಿತ್ರ ಸಿದ್ಧಮಂತ್ರ ಪ್ರದಾನಮಾಡುತ್ತಾನೆ. ಈ ದೀಕ್ಷೆಯ ಕಾಲದಲ್ಲಿ ಗುರುವು ಶಿಷ್ಯನ ಅಧಿಕಾರಾನುಸಾರವಾಗಿ ಒಂದು ಅಥವಾ ಒಂದಕ್ಕಿಂತ ಹೆಚ್ಚು ನಾಮ ಅಥವಾ

ಹಂಸಮಂತ್ರವೇ ಜಪ ಮಾಡಲು ಹೇಳಬಲ್ಲನು. ಗುರು ಗೋರಕ್ಷನಾಥನ ಮತದಲ್ಲಿ 'ಹಂಸ'ಮಂತ್ರದ ಅಥವು ಹೀಗೆ - "ನಿಶ್ವಾಸ-ಪ್ರಶ್ವಾಸದ ಕಾಲದಲ್ಲಿ 'ಹಂ' ಶಬ್ದದೊಡನೆ ವಾಯು ಬಹಿರ್ಗತವಾಗುತ್ತದೆ. ಹಾಗು 'ಸ' ಶಬ್ದದೊಡನೆ ವಾಯು ಪುನಃ ಪ್ರವೇಶ ಮಾಡುತ್ತದೆ. ಜೀವವು ಸ್ವಭಾವತಃ ಈ ಹಂಸಮಂತ್ರ ಜಪ ಮಾಡುತ್ತದೆ ಹಗಲು ರಾತ್ರಿ '೨೧೬೦೦' ಸಾರೆ ಜೀವವು ಈ ಮಂತ್ರವನ್ನು ಜಪ ಮಾಡುತ್ತದೆ. ಯಾಕಂದರೆ ಪ್ರತಿ ಮಿನಿಟಿನಲ್ಲಿ ೧೫ ಸಾರೆ ಶ್ವಾಸ ಪ್ರಶ್ವಾಸಗಳಾಗುತ್ತವೆ. ಈ ಲೆಕ್ಕದಿಂದ ಶ್ವಾಸ ಪ್ರಶ್ವಾಸಗಳು ೨೪ ತಾಸುಗಳಲ್ಲಿ ೨೧೬೦೦ (೨೪x೬೦x೧೫) ಸಾರೆ ಆಗುತ್ತವೆ. 'ಹಂಸ ' ಮಂತ್ರದ ತಾತ್ಪರ್ಯವು 'ಅಹಂ ಸಃ' - 'ಸೋಽಹಮ್',-ಅರ್ಥಾತ್ ನಾನು ಸ್ವರೂಪತಃ ಬ್ರಹ್ಮವು. ಶ್ವಾಸ -ಪ್ರಶ್ವಾಸಗಳು ಯಾವಾಗಲೂ ಅದನ್ನು (ಸೋಽಹಮ್)ನನಗೆ ಸ್ಮರಣ ಮಾಡಿಕೊಡುತ್ತವೆ. ಶ್ವಾಸದ ಗ್ರಹಣ ಮತ್ತು ತ್ಯಾಗದ ಮಧ್ಯಕ್ಷಣದಲ್ಲಿ ಸ್ವಭಾವತಃ ನಾವು ಬ್ರಹ್ಮತ್ವವನ್ನು ಪಡೆಯುವೆವು. ಬುದ್ಧಿಪೂರ್ವಕ ಶ್ವಾಸ-ಪ್ರಶ್ವಾಸಗಳ ಅನುಸರಣವನ್ನು ಮಾಡಿ, ಆ ಭಾವವನ್ನು ಸ್ಮರಣ ಮಾಡುತ್ತಾ ಮಾಡುತ್ತಾ ಸ್ಥಾಯಿಮಾಡುವ ಪ್ರಯತ್ನವನ್ನು ಮಾಡುವದೇ ಈ ಸಾಧನದ ಉದ್ದೇಶವು. ಈ ಮಂತ್ರದೀಕ್ಷೆಯನ್ನು ಗೃಹಸ್ಥ ಮತ್ತು ಗೃಹತ್ಯಾಗೀ ಎಲ್ಲ ಸಾಧಕರೂ ಸದ್ಗುರುವಿನ ಹತ್ತರ ಗ್ರಹಣ ಮಾಡಲು ಶಕ್ತರು. ಧರ್ಮಪಿಪಾಸು ಗೃಹೀ ಶಿಷ್ಯನಿಗೆ ಅಂತರ್ದರ್ಶಿ ಗುರುವು ಸಾಧಾರಣತಃ ನಾಮಜಪದ ಉಪದೇಶವನ್ನು ಮಾಡುತ್ತಾನೆ. ವಿಶೇಷ ಭಾವದಿಂದ ಸಾಧನದಲ್ಲಿ ನಿಮಗ್ನವಾಗಲು ಇಚ್ಛುಕ ಮತ್ತು ಯೋಗ್ಯ ಶಿಷ್ಯನಿಗೆ ಅವನು 'ಹಂಸ' ಮಂತ್ರದ ಉಪದೇಶ ಮಾಡುತ್ತಾನೆ. ನಾಮ ಜಪವೇ ಸಹಜತಮ ಸಾಧನವು.

ಯಾವ ಸಾಧಕನು ಸಂಸಾರದೊಡನೆ ಎಲ್ಲ ಸಂಬಂಧ ವರ್ಜನ ಪೂರ್ವಕ ಸನ್ಯಾಸ ಜೀವನವನ್ನು ಅವಲಂಬನ ಮಾಡುತ್ತಾನೆ, ಅವನಿಗೆ ಒಂದು ವಿಶೇಷ ದೀಕ್ಷೆಯು ಇರುತ್ತದೆ. ಗುರುವು ಅವನಿಗೆ ಯಾವದೋ ಒಂದು ವಿಶಿಷ್ಟ ಅಂತರಂಗ ಸಾಧನದ ಉಪದೇಶ ಮಾಡುತ್ತಾನೆ. ಗುರುವು ತನ್ನ ಕೈಯಿಂದ ಕತ್ತರಿಯಿಂದ ಶಿಷ್ಯನ ಶಿಖೆಯನ್ನು ಕತ್ತರಿಸುತ್ತಾನೆ. ಇದರ ಹೆಸರು 'ಚಂಡಿಕೆ ಕತ್ತರಿಸೋಣ'. ಈ ಚಂಡಿಕೆ ಕತ್ತರಿಸುವದು ಮುಂಡನದ ಅನುಕಲ್ಪ. ಇದರ ತಾತ್ಪರ್ಯವು-ಗುರುವು ಶಿಷ್ಯನ ಮಸ್ತಕ ಮುಂಡನ ಪೂರ್ವಕ ಪೂರ್ವಜೀವನದ ಅವಸಾನ ಮತ್ತು ನವಜೀವನದ ಆರಂಭ ಮಾಡಿಕೊಡುತ್ತಾನೆ. ಆಗ ಸಾಧಕನಿಗೆ ಪುನರ್ಜನ್ಮವು. ಆಗಿನಿಂದ ಗುರುವೇ ಶಿಷ್ಯನ ತಂದೆ, ತಾಯಿ 'ಆಶ್ರಯ' ಪರಿಚಾಲಕ ಮತ್ತು ಅಭಿಭಾವಕನು. 'ಚಂಡಿಕೆ ಕತ್ತರಿಸುವುದರೊಡನೆಯೇ ಗುರುವು ಎರಡು ಮೂರು ಅಂಗುಲ ಪರಿಮಿತ ಒಂದು ಕಾಷ್ಠಾದಿ ನಿರ್ಮಿತ ಬಿದಿರಿನಂತಹ ಯಂತ್ರ ವಿಶೇಷ ರೇಶಿಮೆಯ ಸೂತ್ರದಿಂದ ಕಟ್ಟಿ, ಶಿಷ್ಯನ ಕೊರಳಲ್ಲಿ ಮಾಲೆಯಂತೆ ಹಾಕುವನು. ಆ ಬಿದಿರಿನ ಹೆಸರು 'ನಾದ' ಮತ್ತು ಆ ಸೂತ್ರ ಮಾಲೆಯ ಹೆಸರು 'ಸೇಲಿ'. ನಾದವು ಸರಿಯಾಗಿ ಹೃದಯಯಂತ್ರದ ಮೇಲೆ ಜೋತಾಡುತ್ತದೆ. ಯೋಗಿಗಳು ಹೇಳುವರು: "ಹೃದಯದ ಅಭ್ಯಂತರದಲ್ಲಿ ಯಾವಾಗಲೂ ಅನಾಹತ ನಾದ ಧ್ವನಿತವಾಗುತ್ತಿರುತ್ತದೆ. ಒಳಗಿನ ಆ ನಾದದ ಕತೆ ಸ್ಮರಣ ಮಾಡಿಸಿ, ಯಾವಾಗಲೂ ಅದೇ ಕಡೆಗೆ ಚಿತ್ತವನ್ನು ಸಮಾಕೃಷ್ಟ ಮಾಡುವದರ ಸಲುವಾಗಿಯೇ ಹೊರಗೆ ಈ ಕಾಷ್ಠ ವಿಲಂಬಿತ ನಾದಯಂತ್ರದ ವಿಧಾನವು". ಶಿಷ್ಯನು ಗುರುವಿಗೆ ಅಥವಾ ದೇವತೆಗೆ ಪ್ರಣಾಮ ಮಾಡುವ ಸಮಯದಲ್ಲಿ ಆ ನಾದದಿಂದ 'ಫೂದಿಯಾ' ಪ್ರಣವಧ್ವನಿ ಹಾಗು 'ಆದೇಶ'ಉಚ್ಚಾರಣ ಮಾಡುತ್ತಾನೆ.

ನಾಥಯೋಗಿಗಳಲ್ಲಿ ಮತ್ತೊಂದು ಬಗೆಯ ದೀಕ್ಷೆಯು ಇರುತ್ತದೆ. ಈ ದೀಕ್ಷೆಯ ಕಾಲದಲ್ಲಿ ಗುರುವು ಶಿಷ್ಯನ ಎರಡೂ ಕಿವಿಗಳಲ್ಲಿ ಎರಡು ದೊಡ್ಡ ತೂತುಗಳನ್ನು ಮಾಡಿ ಅವುಗಳಲ್ಲಿ ಎರಡು ಕುಂಡಲಗಳನ್ನು ಹಾಕುವನು. ಆ ಕುಂಡಲಗಳು ಸಾಧಾರಣವಾಗಿ ಪ್ರಸ್ತಾರ ಬೇಲೆಯಾರ ಶಂಖ ಅಥವಾ ಗಂಡಕದ ಶೃಂಗದಿಂದ ತಯಾರ ಮಾಡುತ್ತಾರೆ. ಆ ಕುಂಡಲಗಳಿಗೆ ಯೋಗಿಗಳು ಶಿವನ ಕುಂಡಲಗಳೆಂದು ನಂಬುತ್ತಾರೆ.

ನಾಥಸಂಪ್ರದಾಯದ ಆದಿಪುರುಷ ಆದಿನಾಥನಿಂದ ಶಿಷ್ಯಪರಂಪರಾ ಕ್ರಮದಿಂದ ಯೋಗಿ ಸಂಪ್ರದಾಯದಲ್ಲಿ ಕುಂಡಲಧಾರಣ ಪದ್ಧತಿ ಪ್ರಚಲಿತವಿರುತ್ತದೆ. ಇದರ ಹೆಸರು 'ಮುದ್ರಾ'. ಮುದ್ರೆಯ ಬೇರೊಂದು ಹೆಸರು 'ದರ್ಶನ'. ಈ ದೀಕ್ಷೆಯೇ ನಾಥಯೋಗಿಗಳ ಶೇಷದೀಕ್ಷೆಯು. ಈ ಚರಮ ದೀಕ್ಷಾ ಪ್ರಾಪ್ತ ಯೋಗಿಗಳು 'ಕನಫಟ' ಹೆಸರು ಪಡೆದಿದ್ದಾರೆ. ಅವರು ಕರ್ಣಗಳಲ್ಲಿ ದರ್ಶನ ಧಾರಣ ಮಾಡುತ್ತಿರುವರೆಂದು 'ದರ್ಶನಯೋಗಿ' ಹೆಸರಿನಿಂದಲೂ ಕರೆಯಲ್ಪಡುತ್ತಾರೆ. ಉದಾಸೀನ ಯೋಗಿಗಳಾದರೂ ಈ 'ಕನಫಟ'ಆಗುವದು ಇಂತಹ ಯಾವ ನಿಯಮವಿಲ್ಲ. ಯೋಗದಲ್ಲಿ ಸಿದ್ಧಿಲಾಭ ಮಾಡುವ ಸಲುವಾಗಿಯೂ ಇದಕ್ಕೆ ವಿಶೇಷ ಅವಶ್ಯಕತೆ ಇಲ್ಲ.

'ಚಂಡಿಕೆ ಕತ್ತರಿಸೋಣ', 'ಕಾನಫಟ' ಹೊರತು 'ಉಪದೇಶೀ' ದೀಕ್ಷಾ ನಾಮಕ ಮತ್ತೊಂದು ಪ್ರಕಾರ ದೀಕ್ಷೆಯು ಯೋಗಿಗಳಲ್ಲಿ ಪ್ರಚಲಿತವಿದೆ. ಈ ದೀಕ್ಷೆಯು ಸಾಧಾರಣತಃ ಚಂಡಿಕೆ ಕತ್ತರಿಸುವುದರ ಅನಂತರ ಆಗುವದು. ಒಮ್ಮೊಮ್ಮೆ ಯಾವದೇ 'ಕಾನಫಟಾ'ದ ಅನಂತರದಲ್ಲಿಯೂ ಆಗುತ್ತದೆ. ಕೆಲವರು 'ಚಂಡಿಕೆ ಕತ್ತರಿಸೋಣ' ಅರ್ಥಾತ್ ಸನ್ಯಾಸ ಗ್ರಹಣದ ಮೊದಲು ಯಾವುದೇ ಯೋಗಿಯ ಹತ್ತಿರ ಉಪದೇಶವನ್ನು ಪಡೆದರೂ ಸನ್ಯಾಸ ಗ್ರಹಣದ ತರುವಾಯ ಪುನಃ 'ಉಪದೇಶೀ' ದೀಕ್ಷಾಗ್ರಹಣ ಮಾಡಲು ಶಕ್ಯವು. 'ಉಪದೇಶೀ' ದೀಕ್ಷಾಗ್ರಹಣದಲ್ಲಿ ಒಂದು ರಾತ್ರಿ ಹಲವು ಪ್ರಕಾರ ಅನುಷ್ಠಾನ ಮಾಡಲ್ಪಡುತ್ತದೆ. ಯಥಾ-ಮಂತ್ರಪುತ ಪ್ರದೀಪ-ಪ್ರಜ್ವಾಲನ, ಹರ-ಪಾರ್ವತೀ ಬ್ರಹ್ಮ, ವಿಷ್ಣು-ಗಣೇಶ ಮತ್ತು ಗೋರಕ್ಷನಾಥನ ಪೂಜೆ, ಮದ್ಯಮಾಂಸಾದಿಗಳಿಂದ ಆಕಾಶ ಭೈರವನ ಪೂಜೆ, ಮಂತ್ರಪಾಠ ಭಜನ ಇತ್ಯಾದಿ. ಯಾರು ಕೇವಲ ಉಪದೇಶಿ, ಅವರದೇ ಅಲ್ಲಿ ಪ್ರವೇಶಾಧಿಕಾರವಿರುತ್ತದೆ, ಎರಡನೆಯವರದು ಇಲ್ಲ. ಉಕ್ತ ಮೂರು ಪ್ರಕಾರ ದೀಕ್ಷೆ ಒಬ್ಬನೇ ಗುರುವಿನ ಹತ್ತಿರ ಗ್ರಹಣ ಮಾಡಬೇಕಾಗುವದು, ಇಂತಹ ಯಾವ ಬಂಧನದ ನಿಯಮವಿಲ್ಲ. ಒಬ್ಬ ಗುರುವಿನ ಹತ್ತಿರ ಮಂತ್ರಗ್ರಹಣ ಮಾಡಿ, ಎರಡನೆಯರ ಹತ್ತಿರ ಚಂಡಿಕೆ ಕತ್ತರಿಸಿಕೊಂಡು, ನಾದ ಮತ್ತು ಸೆಲಿ ಗ್ರಹಣ ಪೂರ್ವಕ ಸನ್ಯಾಸಾಶ್ರಮದಲ್ಲಿ ಪ್ರವಿಷ್ಟವಾಗಲು ಬರುತ್ತದೆ; ಮತ್ತು ತೃತೀಯ ಗುರುವಿನಿಂದ ಕರ್ಣದಲ್ಲಿ ಛಿದ್ರಮಾಡಿಸಿ ದರ್ಶನಯೋಗಿ ಆಗುವ ಸಂಭವವಿರುತ್ತದೆ.

## ರಾಜಾ ಭರ್ತೃಹರಿಯ ನಾಥ ಧರ್ಮಾವಲಂಬನ

ರಾಜಾ ಭರ್ತೃಹರಿಯ ಕಾಲವು ಕ್ರಿ.ಪೂ. ೧ನೆಯ ಶತಮಾನವು; ಪ್ರಸಿದ್ಧ ಜರ್ಮನ್ ಪಡಿತ ಮೋಕ್ಷಮುಲರು 'ಅಮಿತಾಯುಧಾನ ಸೂತ್ರ'ದ ಭೂಮಿಕೆಯಲ್ಲಿ ಭೃರ್ತಹರಿಯ ಮೃತ್ಯುಕಾಲವು ಕ್ರಿ.ಶ. ೬೫೦ರಲ್ಲಿ ಎಂದು ಬರೆದಿರುವರು. ಇವನು ರಾಜಾ ವಿಕ್ರಮಾದಿತ್ಯನ ಸಹೋದರನೆಂದು ಪ್ರವಾದವಿರುತ್ತದೆ. ರಾಜಾ ಭರ್ತೃಹರಿಯು 'ಗೊರಕ್ಷನಾಥನ'ಶಿಷ್ಯನು. ಇವನು ಭರಥರಿ ಹೆಸರಿನಿಂದಲೂ ಪರಿಚಿತನು ಹಾಗು ನಾಥಧರ್ಮದಲ್ಲಿ ದೀಕ್ಷಿತನಾಗಿ ಒಂದು ಸಂಪ್ರಾದಯವನ್ನು ಪ್ರವರ್ತನ ಮಾಡಿದನು. ಇದು ಭರ್ತೃಹರಿ ಅಥವಾ ಭರಥರಿ ಸಂಪ್ರದಾಯ ಎಂಬ ಹೆಸರಿನಿಂದ ಪರಿಚಿತವು. ೧೯೦೦ರಲ್ಲಿ 'ವಾರಣಾಸಿ'ಯಿಂದ ಹಿಂದಿಭಾಷೆಯಲ್ಲಿ ಮುದ್ರಿತವಾದ 'ಬಡಾ ಭರಥರೀ ಚರಿತ್ರ'ಎಂಬ ಪುಸ್ತಕದ ಒಂದು ಸ್ಥಾನದಲ್ಲಿ 'ಭರ್ತೃಹರಿಯು ಯೋಗಿವೇಷದಿಂದ ಸಂಗಲಿ ದ್ವೀಪಕ್ಕೆ ಹೋಗಿ ಗೋರಕ್ಷನಾಥನಿಗೆ ಭೆಟ್ಟಿಯಾದನು. ಅನಂತರ ಕಾಮರೂಪಕ್ಕೆ ಹಾಗು 'ಕನಕೋ' (ಕನಕ ಕ್ಷೇತ್ರ)ಕ್ಕೆ ಹೋದನು. ಅಲ್ಲಿಂದ ಪುನಃ ಸಂಗಲಿದ್ವೀಪಕ್ಕೆ ಹೋಗಿ ಗೋರಕ್ಷನಾಥನ ಶಿಷ್ಯನಾದನು ಎಂದು ಬರೆದಿದೆ.

"ಭರ್ತೃಹರಿ ಅಡ್ಡಾ-ಸಾಧು ಸಂಪ್ರದಾಯ ವಿಶೇಷ." ವಿಕ್ರಮಾದಿತ್ಯನ ಭ್ರಾತೃವಾದ ರಾಜಾಭರ್ತೃಹರಿಯು ಈ ಸಂಪ್ರದಾಯವನ್ನು ಪ್ರವರ್ತನ ಮಾಡಿದನು. ರಾಜಾಭರ್ತೃಹರಿಯು ಯಾವ ಯೋಗಿಯ ಶಿಷ್ಯತ್ವ ಗ್ರಹಣ ಮಾಡಿದ್ದನು, ಇದಕ್ಕೋಸುಗ ಅವನ ಪ್ರವರ್ತಿತ ಸಾಂಪ್ರದಾಯಿಕರೂ ಯೋಗಿನಾಮದಿಂದ

ಅಭಿಹಿತರಾಗಿದ್ದಾರೆ. ಇವರು ವಾದ್ಯಯಂತ್ರ ಹಸ್ತದಿಂದ ರಾಜಾ ಭರ್ತೃಹರಿಯ ಗಾನವನ್ನು ಮಾಡುತ್ತ ತಿರುಗುವರು. ಕಾಶಿಯಲ್ಲಿ 'ರಾಓರಿತಲಾ'ಎಂಬ ಸ್ಥಾನದಲ್ಲಿ ಅವರ ಮುಖ್ಯಸ್ಥಾನವು. ಇವರು ಕಾವಿ ಬಟ್ಟೆಗಳನ್ನು ಧರಿಸುವರು ಮತ್ತು ಶವದೇಹ ಸಮಾಧಿಸ್ಥ ಮಾಡುವರು. (ವಿಶ್ವಕೋಶ-ಭರ್ಕೃಹರಿ ಯೋಗೀ ಶಬ್ದ ೨೮೪ ಪಾನು). ಅಧ್ಯಾಪಕ ಅಮೂಲ್ಯಚರಣ ವಿದ್ಯಾಭೂಷಣರು ಹೇಳುವರು- "ನಾಥಯೋಗಿ ಭರ್ತೃಹರಿ ಅಥವಾ ಭರಥರೀ ಕೆಲವು ಮುದ್ರಾಸಾಧನ ಮಾಡುತ್ತಾರೆ. ಅವರು ಹೇಳುತ್ತಾರೆ -'ತ್ರಿಕುಟಿ'ಯ ಮಂಡಲದ ಮೇಲೆ ಯಾವ ಚೈತನ್ಯ ಪುಂಜವು ವಿರಾಜಿತವಾಗಿರುತ್ತದೆ, ಅದನ್ನು ತಿರುವು ಮುರುವು ಮಾಡಿ ಲಾಭವೇನು? ಊರ್ಧ್ವಕ್ಕೆ ಅಚಲ ಸ್ಥಿರ ಮಾಡಿ ಕೊಡುವದೇ ಪರಮಕಾರ್ಯವು. ಪಿಂಡ ಬ್ರಹ್ಮಾಂಡದ ಸಂಧಿಸ್ಥಾನದಲ್ಲಿ (ಇದರ ಸಾಂಕೇತಿಕ ಶಬ್ದ ಅರ್ಧ ಊರ್ಧ್ವ) ನಿರಂಜನ ವಾಸಮಾಡುತ್ತಾನೆ. ಇಡಾ ಪಿಂಗಲಾಗಳ ಏಕೀಕರಣ ರೂಪ ಗ್ರಂಥಿ ಸ್ಥಿರಮಾಡಬೇಕಾಗುವದು. ಇದು ಮುಖ್ಯಸಾಧನವು. ಇಡಾ ಪಿಂಗಲಗಳಿಗೆ ಇವರು ಚಂದ್ರ-ಸೂರ್ಯರೆಂದು ಅನ್ನುತ್ತಾರೆ. (ಪ್ರವಾಸಿ -ಚೈತ್ರ ೧೩೨೮).

"ಉಜ್ಜಯನಿ" ನಗರದ ಹತ್ತಿರದಲ್ಲಿ ರಾಜಾಭರ್ತೃಹರಿಯ ಗುಹೆ ಇರುತ್ತದೆ. ರಾಜಾಭಕರ್ತೃಹರಿಯು ಸಂಸಾರ ತ್ಯಾಗಮಾಡುವ ಮೊದಲು ಈ ಸ್ಥಳದಲ್ಲಿ ಆಶ್ರಯ ಮಾಡಿದನು. ಗುಹೆಯಲ್ಲಿ ಸರಳವಾಗಿ ಎದ್ದು ನಿಂತರೆ ಮೇಲೆ ತಲೆಗೆ ತಟ್ಟುತ್ತದೆ. ಗುಹೆಯ ಮೂರು ಕಡೆಗೆ ಕಂಬಗಳಿವೆ. ಕಂಬಗಳಲ್ಲಿ ಕೆಲವು ಅಸ್ಪಷ್ಟ ಮೂರ್ತಿಗಳು ಕೆತ್ತಲ್ಪಟ್ಟಿವೆ. ಅದರಲ್ಲಿ ಕೇವಲ ಕೇದಾರೇಶ್ವರಲಿಂಗದ ಪೂಜೆಯಾಗುತ್ತದೆ. ಎಡಗಡೆಯ ಗುಹೆಯಲ್ಲಿ ಎರಡು ಕಪ್ಪು ಕಲ್ಲುಗಳ ಮೂರ್ತಿಗಳು ಕಂಡುಬರುತ್ತವೆ. ಇವುಗಳು ಒಂದು ಸ್ವಲ್ಪ ಎತ್ತರದಲ್ಲಿ, ಮತ್ತೊಂದು ಅದರ ಕೆಳಗಡೆಯಲ್ಲಿ. ಈಗಿನ ಜನರು ಅನ್ನುವರು: ಮೇಲೆ ಗೋರಕ್ಷನಾಥ, ಕೆಳಗೆ ಅವರ ಶಿಷ್ಯನಾದ ಭರ್ತೃಹರಿ. (ವಿಶ್ವಕೋಶ-ಉಜ್ಜಯಿನಿ ಶಬ್ದ ೨೯ ಪು). ಹಾಗಾದರೆ ಕಂಡು ಬರುತ್ತದೆ-ಒಂದು ವೇಳೆ ಭರ್ತೃಹರಿಯು ಕ್ರಿ.ಪೂ. ೧ನೆಯ ಶತಮಾನದ ಮನುಷ್ಯನಾಗಿದ್ದರೆ ಗುರು ಗೋರಕ್ಷನಾಥನೂ ಆ ಸಮಯದ ಮನುಷ್ಯನು ಮತ್ತು ಒಂದು ವೇಳೆ ಭರ್ತೃಹರಿಯು ೭ನೆಯ ಶತಮಾನದ ಮನುಷ್ಯನಾಗಿದ್ದರೆ, ಗುರುಗೋರಕ್ಷನಾಥನಿಗೆ ೭ ಶತಮಾನದ ಮನುಷ್ಯನೆಂದು ಹೇಳಬೇಕಾಗುವದು. ಡಾ. ನಲಿನೀಕಾಂತ ಭಟ್ಟಶಾಲೀಯವರ 'ಗೋಪಿಚಾಂದೇರ ಸನ್ಯಾಸ ಗ್ರಂಥ'ದ ಮತದಲ್ಲಿ ರಾಜಾ ಗೋಪಿಚಂದನ ಅಥವಾ ಗೋವಿಂದಚಂದ್ರನ ಗುರುವು ಜಾಲಂಧರನಾಥನು ಆದನು. ರಾಜಾ ಗೋಪಿಚಂದ್ರ ೧೧ ಅಥವಾ ೧೨ ಶತಮಾನದ ಮನುಷ್ಯನು. ಮೀನಚೇತನ, ಗೋರಕ್ಷವಿಜಯ, ಗೋಪಿಚಾಂದೇರ ಸನ್ಯಾಸ ಮೊದಲಾದ ನಾಥ ಪಂಥದ ಪ್ರಾಮಾಣಿಕ ಗ್ರಂಥಾದಿಗಳ ಮತದಲ್ಲಿ ಗುರು ಗೋರಕ್ಷನಾಥ ಮತ್ತು ಗುರು ಜಾಲಂಧರ ಅಥವಾ ಜಾತಿಕಾನಾಥ ಸಮಸಾಮಯಿಕರು. ಈ ಮತಾನುಸಾರವಾಗಿ ಗೋರಕ್ಷನಾಥನಿಗೆ ಆ ಸಮಯದ ಮನುಷ್ಯರೆಂದು ಅನ್ನಬೇಕಾಗುವದು. ರಾಣೀ ಮಯನಾಮತಿಯು ೧೨ನೇ ಕ್ರಿ.ಶ.ದಲ್ಲಿ ಆವಿರ್ಭೂತಳು. ಗೋರಕ್ಷಾಥರು ಮಯನಾಮತಿಯ ಗುರುವು. ರಾಜಾಭರ್ತೃಹರಿಯ ಸರಿಯಾದ ಕಾಲವು .ಒಂದು ವೇಳೆ ೭ನೆಯ ಕ್ರಿ. ಶ. ವಾದರೆ ಗುರುಗೋರಕ್ಷನಾಥನ ಸಮಯವು ೭ನೆಯ ೧೨ನೆಯ ಶತಮಾನವೆಂದು ಕಂಡುಬರುತ್ತದೆ ಮತ್ತು ಒಂದುವೇಳೆ ರಾಜಾ ಭರ್ತೃಹರಿಯ ಕಾಲವು ಕ್ರಿ.ಪೂ. ೧ನೆಯ ಶತಮಾನವಾಗುವದಾದರೆ ಗುರು ಗೋರಕ್ಷನಾಥನ ಕಾಲವು ಕ್ರಿ.ಪೂ. ೧ನೆಯ ಶತಮಾನದಿಂದ ೧೨ನೆಯ ಶತಮಾನವಾಗುವದು. ಮನುಷ್ಯನು ಇಷ್ಟು ಹೆಚ್ಚು ಕಾಲ ಬದುಕಿರಲು ಶಕ್ಯವೋ? ಭಾರತ ಭೂಮಿಯಲ್ಲಿ ಯೋಗಾಚಾರ್ಯರು ದೀರ್ಘಕಾಲ ಬದುಕುತ್ತಿದ್ದರು. 'ಯೋಗಶಕ್ತಿ'ಬಲದಿಂದ ಅಸಾಧ್ಯ ಸಾಧನ ಮಾಡಲ್ಪಡುತ್ತದೆ. ಈ ಕಾಲದಲ್ಲಿ ತ್ರೈಲಿಂಗಸ್ವಾಮಿ ಯೋಗಶಕ್ತಿ ಬಲದಿಂದ ಸರಾಸರಿ ಮುನ್ನೂರು ವರ್ಷ ಬದುಕಿದ್ದರು. ಗುರುಗೋರಕ್ಷನಾಥರು ಹಠಯೋಗದ ಪ್ರವರ್ತರಾಗಿದ್ದರು. ಇಂತಹ ಅವಸ್ಥೆಯಲ್ಲಿ ಅವಾಲಿ ಯೋಗಶಕ್ತಿಯ

ಬಲದಿಂದ ಅತಿ ದೀರ್ಘಕಾಲ ಬದುಕಿದ್ದರು. ಅದನ್ನು ಹಾರಿಸಿ ಬಿಡಲು ಬರುವದಿಲ್ಲ. ಒಂದು ವೇಳೆ ಗೋರಕ್ಷನಾಥನು ಇಷ್ಟು ದೀರ್ಘಕಾಲ ಬದುಕಿಲ್ಲವೆಂದು ಪ್ರಮಾಣ ದೊರೆತದ್ದಾದರೆ, ಸಹಜವಾಗಿಯೇ ಒಪ್ಪಬೇಕಾಗುವದು. ಇವನು ಬೇರೆ ಸಮಯದ ಬೇರೆ ಗೋರಕ್ಷನಾಥನು.

## ಕದಲೀ-ರಾಜ್ಯ

ಕ್ರಿ.ಶ. ೮ನೆಯ ಶತಮಾನದಿಂದ ಕದಲೀರಾಜ್ಯವು ಒಂದು ವಿಖ್ಯಾತಸ್ಥಾನವೆಂದು ಪರಿಗಣಿತವಾಗಿತ್ತು. ಈ ಸಂಬಂಧದಿಂದ ಬಂಗಾಳೀ ಗೀತಕಾವ್ಯಗಳಲ್ಲಿ, ವಂಗೀಯ ಸಾಹಿತ್ಯ ಪರಿಷತ್ತಿನ 'ಗೋರಕ್ಷ ವಿಜಯ', ಡಾಕಾ ಸಾಹಿತ್ಯ ಪರಿಷತ್ತಿನ 'ಗೋಪಿಕಾ ಚಾಂದೇರ ಸನ್ಯಾಸ', 'ಮಯನಾಮತೀರ ಗಾನ' 'ಮೀನಚೇತನ' ಮೊದಲಾದವುಗಳ ಹೆಸರು ವಿಶೇಷ ಭಾವದಿಂದ ಉಲ್ಲೇಖ ಯೋಗ್ಯ. ಕದಲೀರಾಜ್ಯದ ಮತ್ತೊಂದು ಹೆಸರು ನಾರೀರಾಜ್ಯ. ಇದು ಸಮಗ್ರ ನಾಥ ಸಂಪ್ರದಾಯ ಮತ್ತು ಇತಿಹಾಸ ಹಾಗು ಪ್ರತ್ನ ತತ್ವವಿದ್ ಪಂಡಿತರಿಗೂ ಸುಪರಿಚಿತವು, ಗೀತಿ ಕಾವ್ಯಗಳಲ್ಲಿ ಕದಲೀರಾಜ್ಯದ ಈ ವಿಸ್ತೃತ ವರ್ಣನೆಯು ದೊರೆಯುವದು. ಅದರಿಂದ ಗೊತ್ತಾಗುವದೇನೆಂದರೆ - ಕದಲೀರಾಜ್ಯವು ಸುಜಲಾ, ಸುಫಲಾ ಲಕ್ಷ್ಮಿಯ ಭಾಂಡಾರ ಸ್ವರೂಪವಾಗಿತ್ತು. ಇಲ್ಲಿ ಸ್ತ್ರೀಯರ ಸಂಖ್ಯೆಯು ಅತ್ಯಧಿಕವು. ಆ ತುಲನೆಯಿಂದ ಪುರುಷರ ಸಂಖ್ಯೆಯು ಬಹಳ ಕಡಿಮೆ. ಪ್ರತಿ ಪುರುಷನ ಮನೆಯಲ್ಲಿ ೩/೪ ಜನ ಸ್ತ್ರೀಯರು ಇರುತ್ತಿದ್ದರು. '೧೬೦೦' ಸ್ತ್ರೀಯರಿಂದ ಕದಲೀ ರಾಜ್ಯದ ಮಂತ್ರಿ ಪರಿಷತ್ತು ಘಠಿತವಾಗಿತ್ತು. ಕಮಲಾ ಮತ್ತು ಮಂಗಲಾ ಎಂಬ ಹೆಸರಿನ ಇಬ್ಬರು ಸಹೋದರಿಯರು ಇದರ ಸಿಂಹಾಸನಾಧಿಕಾರಿಣಿಯರಾಗಿದ್ದರು.

ಪರಮಸಿದ್ಧ ಮೀನನಾಥನು ತನ್ನ ಶಿಷ್ಯನಾದ ಗೋರಕ್ಷನಾಥನೊಡನೆ ಕದಲೀ ರಾಜ್ಯದಲ್ಲಿ ಸಂಚಾರ ಮಾಡುತ್ತಿದ್ದನು. ಇಲ್ಲಿ ಬಂದು ಈ ರಾಜ್ಯದ ರೂಪಲಾವಣ್ಯವತಿ ಕಮಲಾ ಮತ್ತು ಮಂಗಲಾ ಇವರ ಪ್ರೇಮಜಾಲದಲ್ಲಿ ನಾಥಯೋಗಿ ಮೀನನಾಥನು ಆಬದ್ಧನಾದನು. ಗೋರಕ್ಷನಾಥನು ಹಲವು ಪ್ರಯತ್ನಗಳಿಂದಲೂ ತನ್ನ ಗುರು ಮೀನನಾಥನನ್ನು ಜಾಲಮುಕ್ತಮಾಡಲು ಶಕ್ತನಾಗದೆ ಹೊರಟು ಹೋದರು. ಇತ್ತ ಮೀನನಾಥನು ನಾರೀ ಪ್ರೇಮದಿಂದ ಉನ್ಮತ್ತನಾಗಿ ಸಿದ್ಧಿಯನ್ನು ಕಳೆದುಕೊಂಡನು.

ಈ ಕದಲೀ ರಾಜ್ಯದ ಸ್ಥಾನನಿರ್ಣಯ ಸಂಬಂಧದಿಂದ ಐತಿಹಾಸಿಕ ಪಂಡಿತ ಹಾಗು ಪ್ರತ್ನ ತಾತ್ವಿಕರು ಸಂಶೋಧನೆಯ ಗಹನ ವನದಲ್ಲಿ ಪ್ರವೇಶಮಾಡಿದರು ಸಹ ಯಾವ ಸ್ಥಿರ ಸಿದ್ಧಾಂತದಲ್ಲಿ ಉಪನೀತರಾಗಲು ಶಕ್ಯವಾಗಿಲ್ಲ. ಆಸಾಮದ ಪ್ರಾಚೀನ ಕಾಛಾಡ ಜಿಲ್ಹೆಯೇ ಕದಲೀ ರಾಜ್ಯವು, ಇಲ್ಲಿ ನಾವು ಅದನ್ನೇ ಪ್ರಮಾಣದಿಂದ ಸಿದ್ಧಮಾಡುವೆವು.

ಡಾ. ನಲಿನೀಕಾಂತ ಭಟಶಾಲಿಯ ಅನುಮಾನ -ಸ್ತ್ರೀ ಸ್ವಾಧೀನತೆಯ ದೇಶವು ಕಾಮರೂಪವು, ಮಣಿಪುರ ಮತ್ತು ಬ್ರಹ್ಮದೇಶಗಳೇ ಕದಲೀ ರಾಜ್ಯ (Social life in Ancient India pp. 60) ಅಧ್ಯಾಪಕ ಶ್ರೀ ಹಾರಾಣಚಂದ್ರ ಚಾಕಲಾದಾರರು - ಈ ರಾಜ್ಯವು ವಾಯುವ್ಯ ಸೀಮಾಂತ ಪ್ರದೇಶದ ಎಲ್ಲಿಯೋ ಇರುವದು ಅನಿಮಿತವಾಗುವದು ಎಂದು ಹೇಳುವರು. ಪ್ರಸಿದ್ಧ ಐತಿಹಾಸಿಕ ಗ್ರಿಯರ್ಸನ್ ಹೇಳುವರು-ಡೇರಾಡೂನದಿಂದ ಆರಂಭ ಮಾಡಿ ಹೃಷಿಕೇಶ, ಬದರಿಕಾಶ್ರಮ ಹಾಗೂ ಇವುಗಳ ಉತ್ತರದಲ್ಲಿ ಹಿಮಾಲಯ ಪ್ರಾಂತ ಪರ್ಯಂತ ಎಲ್ಲವೂ ಕದಲೀವನವು. ಒಂದು ನಾರೀ ರಾಜ್ಯವು ತಿಬೇಟದ ವಾಯುವ್ಯದಲ್ಲಿ ಅವಸ್ಥಿತವಿತ್ತು. ಗರವಾಲ ಮತ್ತು ಕುಮಾಯೂನದ ಮಧ್ಯದಿಂದ ಯಾವ ಐದು ಗಿರಿಪಥಗಳು ಭೋಟಿ ರಾಜ್ಯಾಭಿಮುಖವಾಗಿ ಹೋಗಿರುತ್ತವೆ, ನಾರೀ ರಾಜ್ಯ ಅದರ ಪ್ರಾಂತ ಭಾಗದಲ್ಲಿ ಅವಸ್ಥಿತವು ಪ್ರವಾದವಿರುತ್ತದೆ. ಇಲ್ಲಿ ಪೂರ್ವದಲ್ಲಿ ನಾರೀಯರೇ

ರಾಜತ್ವ ಮಾಡುತ್ತಿದ್ದರು. (ಪ್ರವಾಸಿ-ಫಾಲ್ಗುಣ ಚೈತ್ರ ೧೩೨೮) ತಿಬೇಟಿ ಭಾಷೆಯಲ್ಲಿ ಬರೆದ "ಪಾಗ್ ಸ್ಯಾಮ್ ಜೋನ್ ಬ ಜಾನ" ಗ್ರಂಥದಲ್ಲಿಯೂ ಕದಲೀಕ್ಷೇತ್ರದ ಉಲ್ಲೇಖವು ಕಂಡುಬರುತ್ತದೆ. ಅದರಲ್ಲಿ -ವಂಗೇಶ್ವರ ಗೋಪಿಚಂದನು ಸಿದ್ಧ ಬಾಲಪಾದ (ಸಿದ್ಧ ಜಾಲಂದರ ಅಥವಾ ಹಾಡಿಪಾನಾಥ) ನನ್ನು ಜೀವಂತ ಅವಸ್ಥೆಯಲ್ಲಿ ಭೂಮಿಯಲ್ಲಿ ಹೂಳಿಸಿದನು. ಹನ್ನೆರಡು ವರುಷಗಳ ನಂತರ ಹಾಡಿಪಾನ ಶಿಷ್ಯನಾದ 'ಕಾನುಪಾ ಸಿದ್ಧ' ಅಥವಾ ಕೃಷ್ಣಾಚಾರ್ಯ ಕದಲೀಕ್ಷೇತ್ರದಲ್ಲಿ ಹೋಗುವ ಮಾರ್ಗದಲ್ಲಿ ತನ್ನ ಗುರುವನ್ನು ಮುಕ್ತಮಾಡಿದನು. ಅನಂತರದಲ್ಲಿ ಗೋಪಿಚಂದನು ಹಾಡಿಪಾ ಸಿದ್ಧನಿಂದ ದಿಕ್ಷೀತನಾಗಿ ವನಕ್ಕೆ ತೆರಳಿದನು. ಗೋಪಿಚಂದನ ತಾಯಿಯಾದ ಮಯನಾಮತಿಯು ಸಿದ್ಧ ಗೋರಕ್ಷನಾಥನ ಶಿಷ್ಯಳು. ಈ ಮಾತಾಪುತ್ರರ ಕತೆಯೇ ಹಲವು ಗೀತಿ ಕಾವ್ಯಗಳ ಉಪಜೀವ್ಯವು. ಮಹಾಭಾರತದಲ್ಲಿಯೂ ಕದಳೀಕ್ಷೇತ್ರದ ಉಲ್ಲೇಖವಿರುತ್ತದೆ. ನಾನಕ ರಚಿತ 'ಪ್ರಾಣ ಸಂಗಲೀ'ಗ್ರಂಥದ ೩೧ನೆಯ ಅಧ್ಯಾಯದಲ್ಲಿ 'ಕಜರೀ' ವನದ ವಿವರಣೆಯು ಕಂಡುಬರುತ್ತದೆ. ಶೀಖ ಗುರುನಾನಕನು, ಯೋಗ ತಂತ್ರ ಆಲೋಚನಾ ಪ್ರಸಗಂದಲ್ಲಿ ನಾಥಗುರುಗಳನ್ನು ವಂದಿಸಿರುತ್ತಾನೆ. ಮಹಾಭಾರತದಲ್ಲಿ ಹಾಗೂ ವಾತ್ಸ್ಯಾಯನನ 'ಕಾಮಸೂತ್ರ'ದಲ್ಲಿ ಸ್ತ್ರೀರಾಜ್ಯದ ಉಲ್ಲೇಖವು ಕಂಡುಬರುತ್ತದೆ. 'ವಿಶ್ವಕೋಶ'ಹಾಗೂ 'ಸಂತ ಲೀಲಾಮೃತ' ಗಳಲ್ಲಿ ನಾರೀರಾಜ್ಯದ ವಿವರಣೆಯು ಇರುತ್ತದೆ. 'ಗೋಪಿ ಚಾಂದೇರ ಸನ್ಯಾಸ'ದಲ್ಲಿ 'ಕೋದಾಲಿ ನಗರ' ದ ವಿವರಣೆಯು ಕಂಡುಬರುತ್ತದೆ. ಈ ಎಲ್ಲ ಕದಳೀರಾಜ್ಯಗಳ ಅಥವಾ ನಾರೀರಾಜ್ಯಗಳ ನಾಮಾಂತರ, ಶ್ರೀ ಶರಚ್ಚಂದ್ರ ಆಚಾರ್ಯರು ಹೇಳುವರು. 'ಮತ್ಸ್ಯೇಂದ್ರನಾಥ'ನು ಯೋಗಮಾರ್ಗ ಭ್ರಷ್ಟನಾಗಿ ನಾರೀರಾಜ್ಯದ ಅಧೀಶ್ವರೀ ರಾಣಿ ಪ್ರಮೀಲೆಯ ಪ್ರೇಮಾಸ್ಪದನಾಗಿ ಹೋದನು. (ಮಾನಸಿ ಓ ಮರ್ಮ ವಾಣಿ ಪೌಷ ೧೩೨೯). ಗುರುಮುಖಿ ಭಾಷೆಯ "ಗೋರಕ್ಷ ಅವದೇಶ" ದಲ್ಲಿ ಗೋರಕ್ಷನಾಥನು ಕಾಮಾಖ್ಯಕ್ಕೆ ಹೋಗಿ ಅನೇಕ ಶಿಷ್ಯರನ್ನು ಮಾಡಿಕೊಂಡನು ಎಂದು ಹೇಳಿದೆ. 'ಗೋವಿಂದ ಚಂದ್ರ ಗೀತೆ'ಯಲ್ಲಿ ಕಂಡುಬರುತ್ತದೆ: ಕದಳೀ ವನವು ಕಾಮರೂಪದ ಉತ್ತರಾಂಚಲದಲ್ಲಿ ಅವಸ್ಥಿತವು. ಕದಳಿಯಲ್ಲಿ ಪ್ರೇಮಾಬದ್ಧ ಮೀನನಾಥನಿಗೆ ಉದ್ಧಾರ ಮಾಡುವುದಕ್ಕೋಸುಗ 'ಸಿದ್ಧ ಗೋರಕ್ಷನಾಥನು' ಅಲ್ಲಿಗೆ ಹೋಗಿದ್ದನು. ಈ ಕದಳೀ ರಾಜ್ಯದ ರಾಜಧಾನಿ 'ಕದಳೀ ನಗರ'ವು. ಅಧಿವಾಸಿಗಳು ಸಹ ಕದಳೀನಾಮದಿಂದ ಖ್ಯಾತರು. ಈ ರಾಜ್ಯದಲ್ಲಿ ನಾಥಸಂಪ್ರದಾಯದ ಜನರ ಸಂಖ್ಯೆಯು ಹೆಚ್ಚು ಇತ್ತು. ಇಲ್ಲಿಯ ಗಂಡಸರಿಗೆ 'ರಾರ್ಡಲ್' ಅನ್ನುತ್ತಿದ್ದರು. ಇಲ್ಲಿಯ ಹುಡುಗಿಯರು ಮಿದುವಾದ ನೂಲನ್ನು ತೆಗೆದು ಅಂಗವಸ್ತ್ರ ಮತ್ತು ಧೋತರಗಳನ್ನು ನೇಯುತ್ತಿದ್ದರು ಹಾಗೂ ಬಾಜಾರಕ್ಕೆ ಒಯ್ದು ಮಾರುತ್ತಿದ್ದರು. ಅವರು ಪಾನದಾನ ತುಂಬಿ ತಾಂಬೂಲ ಸೇವಿಸುತ್ತಿದ್ದರು. ಈ ರಾಜ್ಯದಲ್ಲಿ ವಿಶಿಷ್ಟ ವ್ಯಕ್ತಿಗಳಿಗೆ ಮದ್ಯವನ್ನು ಕೊಟ್ಟು ಸಮ್ಮಾನ ಮಾಡಲ್ಪಡುತ್ತಿತ್ತು.

ಆಸಾಮದ ರಾಜಮೋಹನನಾಥರಿಂದ ಬರೆಯಲ್ಪಟ್ಟ ಗ್ರಂಥದಲ್ಲಿ ಅನೇಕ ಪ್ರಮಾಣ, ಪ್ರಯೋಗ ಮಾಡಿ ತೋರಿಸಿರುತ್ತಾರೆ- ಆಸಾಮದ 'ನ ಓ ಗಾಂ'ಜಿಲ್ಲೆಯ 'ಕಂದಲಿ'ಯೇ ಪ್ರಾಚೀನ ಕದಲೀ ರಾಜ್ಯ ಹಾಗೂ ಕಮಲಾದೇವಿ ಪರ್ವತವೇ ಈ ರಾಜ್ಯದ ರಾಜಧಾನಿಯಾಗಿತ್ತು. ನ ಓ ಗಾಂ ಜಿಲ್ಲೆಯ, ನ ಓ ಗಾಂ ನಗರದಿಂದ ಹನ್ನೊಂದು ಮೈಲು ಆಗ್ನೇಯದಲ್ಲಿ ಕಂದಲೀ ಎಂಬ ಒಂದು ಊರು ಇರುತ್ತದೆ. ಡಬಕಾ ಮತ್ತು ಕಂದಲಿಯ ಮಧ್ಯವರ್ತಿ ಸ್ಥಾನದಲ್ಲಿ '೨೫೪೬' ಫೂಟು ಎತ್ತರ ಕಮಲಾದೇವಿ ಪರ್ವತವಿರುತ್ತದೆ. ಕಂದಲಿ ಗ್ರಾಮದಲ್ಲಿ ಅಲ್ಲಲ್ಲಿ ಪ್ರಾಚೀನ ಮಂದಿರಗಳ ನಿದರ್ಶನ ಹಾಗೂ ಹರಪಾರ್ವತಿಯರ ಮೂರ್ತಿಗಳ ಮತ್ತು ಶಿವಲಿಂಗಗಳ ಭಗ್ನಾವಶೇಷಗಳು ಕಂಡುಬರುತ್ತವೆ. ಸ್ಥಾನೀಯ ಸಾಮಾನ್ಯ ಜನರು ಈಗ ಸಹ ಈ ಪರ್ವತಕ್ಕೆ ಭಕ್ತಿ ವಿಮಿಶ್ರ ಭೀತಿಯೊಡನೆ ನಮಸ್ಕಾರ ಮಾಡುತ್ತಾರೆ. 'ಕಾಲಿಕಾ-ಪುರಾಣ' ದ (ಬಂಗ ಬಾಸಿ ೭೯/೧೬೫) ಕಮಲಾದೇವಿಯ ಸ್ಥಾನಕ್ಕೆ ರಕ್ತದೇವಿಯ ಪೀಠವೆಂದು ಅನ್ನುತ್ತಾರೆ. ಕಂದಲೀ ಪರ್ವತದ ಅಪರ ಅಂಶದ ಹೆಸರು "ಭಾಮುನೀ

ಪರ್ವತ". ಇಲ್ಲಿ, ಅಲ್ಲಲ್ಲಿ ನೀರಿನ 'ಧಬಧಬೆ' ಪ್ರಾಚೀನ ಮಂದಿರಾದಿಗಳ ಧ್ವಂಸಾವಶೇಷ, ಮತ್ತು ಗುಹೆಗಳು ಕಂಡುಬರುತ್ತವೆ. ಕಂದಲೀ ಮತ್ತು ಬಾಮುನಿ ಪರ್ವತಗಳ ಹತ್ತಿರದಲ್ಲಿದ್ದ 'ಮಿಕಿ' ಪರ್ವತದಲ್ಲಿ ಈಗ ಸಹ ಪರ್ಯಾಪ್ತ ಪರಿಮಾಣದಲ್ಲಿ 'ಚಂದನ'ದೊರೆಯುತ್ತದೆ. ವ್ಯವಸಾಯಿಗಳು ಈ ಸ್ಥಾನದ ಚಂದನವನ್ನು ದೇಶ ವಿದೇಶಗಳಿಗೆ ಕಳಿಸುತ್ತಾರೆ. ಇಲ್ಲಿಯ ಪಾರ್ವತ್ಯಾ ಅಂಚಲದಲ್ಲಿ ಈಗ ಸಹ ನಾಲ್ಕು ಕಡೆಗೆ ಚಂದನ ಕಟ್ಟಿಗೆ ದೊರೆಯುತ್ತದೆ. ಕಂದಲಿ ಗ್ರಾಮದ ಹತ್ತಿರದ 'ದೀಘುಲದಡಿ, ನನಈ, ಪೇಟಭರಾ' ಮೊದಲಾದ ಗ್ರಾಮಗಳಲ್ಲಿ ಹಲವು ನಾಥಯೋಗಿಗಳು ಇರುತ್ತಾರೆ. ಇವರು ಈಗ ಸಹ ಸಣಬಿನ ದಾರದ ಅಂಗವಸ್ತ್ರ ತಯಾರ ಮಾಡಲು ಸಿದ್ಧಹಸ್ತರು. ನಾರಿಯರು ಸಣಬಿನ ಮಿದುವು ನೂಲನ್ನು ತೆಗೆದು ಹಣವನ್ನು ಸಂಪಾದಿಸುತ್ತಾರೆ.

ಕ್ರಿ.ಶ. ೧೪-೧೫ ಶತಮಾನಗಳಲ್ಲಿ ಕಂದಲಿಯ ವಿಶಿಷ್ಟ ಅಧಿವಾಸಿಗಳಿಗೆ 'ಕಂದಲಿ' ಪದವಿಯಿತ್ತು. ಅನಂತ ಕಂದಲಿಯ ಮಹಾಭಾರತ ಮತ್ತು ಭಾಗವತದ ಅನುವಾದಗಳು ಸುಪರಿಚಿತವು. ಮಾಧವ ಕಂದಲಿಯ ಸಪ್ತಕಾಂಡ ರಾಮಾಯಣದ ಅನುವಾದವು 'ಆಸಾಮಿ ಭಾಷೆಯ ಅಮೂಲ್ಯ ಸಂಪತ್ತು. ಕಂದಲಿ ಗ್ರಾಮದಲ್ಲಿ ಮಾಧವ ಕಂದಲಿಯ ಮನೆಯು ಈಗ ಸಹ ಇರುತ್ತದೆ. 'ನ ಓ ಗಾಂ ' ವಾಸಿಗಳು ಅನುನಾಸಿಕ ಪ್ರಿಯರು. ಆದುದರಿಂದ ಕದಲಿ ಬದಲು ಕಂದಲಿ ಆಗಿರುತ್ತದೆ.

ಗುರು ಗೋರಕ್ಷನಾಥನು ಕದಲೀ ಪ್ರೇಮಾಸಕ್ತ ಮೀನನಾಥನಿಗೆ ಉದ್ಧಾರಮಾಡಿ 'ಕದಳೀ' ರಾಜ್ಯತ್ಯಾಗದಲ್ಲಿ ಶಾಪವನ್ನು ಕೊಟ್ಟಿರುವನು.

ಕದಳೀರಾಜ್ಯವು ಸ್ತ್ರೀರಾಜ್ಯವು. ಈಗಿನ ಮಣಿಪುರ ಮತ್ತು ಅದರ ಹತ್ತಿರವಿದ್ದ ಪ್ರದೇಶವು ಕಲ್ಹಣನ ಮತದಲ್ಲಿ ಕಾಶ್ಮೀರದ ರಾಜನಾದ 'ಲಲಿತಾದಿತ್ಯ'ನು ಪ್ರಾಗ್‌ಜ್ಯೋತಿಷ್ಕಪುರದ ಸ್ತ್ರೀರಾಜ್ಯವನ್ನು ಗೆದ್ದು, ಅಲ್ಲಿ ಎರಡು ಚುಂಬಕ ಶಿಲೆಗಳ ನಡುವೆ ಆಶ್ರಯವಿಲ್ಲದ ನೃಸಿಂಹಮೂರ್ತಿಯನ್ನು ಸ್ಥಾಪನೆಮಾಡಿದನು.

❖❖

# ಅನುಬಂಧ

*

# ಮಡಿವಾಳಪ್ಪ ಸಾಸನೂರ

ರವೀಂದ್ರನಾಥ ಸಾಸನೂರ

## ಸಾಸನೂರ ಗ್ರಾಮ :

ಸಾಸನೂರ ಗ್ರಾಮ ವಿಜಾಪೂರ ಜಿಲ್ಹೆಯ ಪಂಚನದಿ (ಕೃಷ್ಣಾ, ಭೀಮಾ, ಮಲಪ್ರಭಾ, ಘಟಪ್ರಭಾ, ಡೋಣಿ)ಗಳಲ್ಲಿ ಒಂದಾದ ಡೋಣಿಯ ದಂಡೆಯ ಮೇಲಿರುವ ಒಂದು ಹಳ್ಳಿ. ಮಳೆಗಾಲದಲ್ಲಿ ಡೋಣಿಗೆ ಮಹಾಪೂರ ಬಂದಾಗ ಗ್ರಾಮದ ಸುತ್ತಲೂ ನೀರು ತುಂಬಿ ಹರಿಯುವದು. ನೂರಾರು ಹೊಲಗಳಲ್ಲಿ ನೀರು ರಭಸದಿಂದ ನುಗ್ಗಿ, ಇಡೀ ಪ್ರದೇಶ ಒಂದು ನಡುಗಡ್ಡೆಯಂತೆ ಕಂಗೊಳಿಸುವದು. ಡೋಣಿಯ ದಂಡೆಯ ಮೇಲೆ ಪಸರಿಸಿದ ಎರೆಭೂಮಿ ಅತ್ಯಂತ ಫಲವತ್ತಾದದ್ದು. ಜೋಳ, ಗೋದಿ, ಕಡ್ಲಿ, ಕುಸುಬಿ ಮತ್ತು ಹತ್ತಿ ಪ್ರಮುಖ ಬೆಳೆಗಳು. ಸಾಸನೂರ ಗ್ರಾಮದಲ್ಲಿ ಬೆಳೆಯುವ "ಬನಸಿ ಗೋದಿ" ಕರ್ನಾಟಕದಲ್ಲಿಯೇ ಅತ್ಯಂತ ಪ್ರಸಿದ್ಧವಾದ ಧಾನ್ಯ. ಸಾಧಾರಣವಾಗಿ ಸರಾಸರಿ ಕಡಿಮೆ ಮಳೆ. ಒಳ್ಳೆಯ ಮಳೆ ಬಂದರೆ ಹುಲುಸಾದ ರಾಶಿ. ಅದಕ್ಕೊಂದು ಗಾದೆ ಮಾತು ಈ ಭಾಗದಲ್ಲಿ ಪ್ರಚಲಿತವಿದೆ "ಡೋಣಿ ಬೆಳೆದರ ಓಣೆಲ್ಲ ಜೋಳ".

ಸಾಸನೂರ ಗ್ರಾಮದ ಜನರು ಡೋಣಿಯ ಉಪ್ಪನ್ನು ತಿಂದು ದಷ್ಟ ಪುಷ್ಟರಾಗಿರುವರು. ಆದುದರಿಂದ ಈ ಭಾಗದಲ್ಲಿ ಡೋಣಿಯ ಸಾಲಿನ ಜನರನ್ನು "ಡೊಣಗರು" ಎಂದು ಕರೆಯುವದುಂಟು. ಗ್ರಾಮದ ಜನಸಂಖ್ಯೆ ಸುಮಾರು ಮೂರು ಸಾವಿರ. ಬೇಸಾಯವೇ ಗ್ರಾಮದ ಜನತೆಯ ಉಸಿರು. ಬೆಳೆ ಹೆಚ್ಚಾದಾಗ ಊರಿನಲ್ಲಿ ಪಕ್ಷ ಪಂಗಡಗಳ ತೆರೆಯ ಮರೆಯ ಕಚ್ಚಾಟ, ಹೊಡೆದಾಟ, ತಳಮಳ, ಕೆಲವು ಸಲ ಘರ್ಷಣೆಗೆ ದಾರಿ ಮಾಡಿಕೊಡುವದು. ಇದು ನಮ್ಮ ಊರಿನಲ್ಲಿ ನಡೆದು ಬಂದ ಸಂಪ್ರದಾಯ. ಬರ ಬಂದರೆ ಎಲ್ಲವೂ ಸ್ತಬ್ದ.

ನಮ್ಮೂರು ಇಡೀ ಬಾಗೇವಾಡಿ ತಾಲೂಕಿನಲ್ಲಿ ಚಿರಪರಿಚಿತವಾಗಿದೆ. ಈ ಊರಿನಲ್ಲಿ ಎಲ್ಲಾ ಜಾತಿಗಳ ಸಂಗಮವಿದೆ. ರೆಡ್ಡಿ ಲಿಂಗಾಯತ, ಬಣಜಿಗ, ಕುರುಬ, ಕುಂಬಾರ, ಗಾಣಿಗ, ಜಂಗಮ, ಮುಸ್ಲಿಂ ಮತ್ತು ಅಸ್ಪೃಶ್ಯ ಜನಾಂಗದ ಜನರು ತಮ್ಮ ತಮ್ಮೊಳಗೆ ಎಷ್ಟೇ ಭಿನ್ನಾಭಿಪ್ರಾಯಗಳಿದ್ದರೂ ಸಾರ್ವಜನಿಕ ಕಾರ್ಯಗಳಲ್ಲಿ ಎಲ್ಲರೂ ಸಕ್ರಿಯವಾಗಿ ಭಾಗವಹಿಸುತ್ತಾರೆ. ಗ್ರಾಮ ದೇವತೆ ಬಲಭೀಮ (ಹಣಮಂತ ದೇವರು)ನ ಜಾತ್ರೆಯಂತೂ ಬಹು ವಿಜೃಂಭಣೆಯಿಂದ ಜರುಗುತ್ತದೆ. ಎಲ್ಲಾ ಜಾತಿಯ ಜನರು ಮತ್ತು ಮುಸ್ಲಿಂ ಜನರೂ ಭಯಭಕ್ತಿಯಿಂದ ಜಾತ್ರೆಯಲ್ಲಿ ಪಾಲ್ಗೊಳ್ಳುತ್ತಾರೆ.

ನಮ್ಮ ಮುತ್ತಜ್ಜ ಗಂಗಪ್ಪ ಮಸೀದಿಗೆ ಒಂದು ಚಂದ್ರಾಕಾರದ ದೇವರ ಪಂಜೆಯನ್ನು ಕಾಣಿಕೆ ಸಲ್ಲಿಸಿದ್ದನು. ಮತ್ತು ಮೊಹರಮ್‌ದ ಕೊನೆಯ ದಿವಸ ಪಂಜಾ ದೇವರುಗಳು ನಮ್ಮ ಮನೆಗೆ ಬಂದಾಗ ಖಾಜಿ ಫಾತೆ ಕೊಡುತ್ತಿದ್ದನು.

ನಾವು ಊರನ್ನು ಬಿಟ್ಟು ಎಷ್ಟೋ ವರ್ಷಗಳಾದರೂ ಇನ್ನೂ ದೇವರುಗಳು ನಮ್ಮ ಹಳ್ಳಿಯ ಮನೆ ಮುಂದೆ ಬಂದು ನಿಂತು, ಮುಂದೆ ಸಾಗುವವು. ಊರಲ್ಲಿ ಹಣಮಂತ ದೇವರು ಮತ್ತು ದ್ಯಾಮವ್ವ ದೇವತೆಯ ಹಬ್ಬಗಳನ್ನು ಆಚರಿಸುತ್ತಾರೆ. ನಮ್ಮೂರ ಸಮೀಪ ಇರುವ ಕಲಕೇರಿ ಗ್ರಾಮದಲ್ಲಿ ಜರುಗುವ ಮಡಿವಾಳೇಶ್ವರ ತೇರು ಎಳೆಯುವ ಜಾತ್ರೆ, ಗೋಲಗೇರಿಯ ಗೊಲ್ಲಾಳೇಶ್ವರ ಜಾತ್ರೆ, ಕೋರವಾರದ ಹನುಮಂತದೇವರ ಜಾತ್ರೆ, ಕೊಡೆಕಲ್ ಬಸವಣ್ಣನ ಜಾತ್ರೆ, ಕುಂಟೋಜಿ ಬಸವಣ್ಣನ ಜಾತ್ರೆ, ಬಾಗೇವಾಡಿ ಬಸವೇಶ್ವರ ಜಾತ್ರೆ- ಈ ಎಲ್ಲ ಜಾತ್ರೆಗಳಿಗೆ ನಮ್ಮೂರ ಜನರು ಪಯಣಿಸಿ, ಪಾಲ್ಗೊಂಡು ಪುನೀತರಾಗಿ ಹಿಂದಿರುಗುವರು.

ತಾಳಿಕೋಟಿ ಮುಖ್ಯವಾದ ವ್ಯಾಪಾರ ಮತ್ತು ವಾಣಿಜ್ಯ ಕೇಂದ್ರ. ರೈತರು ಬೆಳೆದ ಧಾನ್ಯ, ಹತ್ತಿ, ಸೇಂಗಾ ಮತ್ತು ಕುಸಿಬೆ ಚೀಲಗಳಲ್ಲಿ ತುಂಬಿಕೊಂಡು ತಾಳಿಕೋಟಿಗೆ ಬಂದು ಮಾರಾಟ ಮಾಡುವರು. ಅದು ಬ್ರಿಟಿಶರ ಆಡಳಿತದ ಸಮಯ. ೧೯ನೆಯ ಶತಮಾನದಲ್ಲಿ ನಮ್ಮ ಊರು ಶೈಕ್ಷಣಿಕ ರಂಗದಲ್ಲಿ ಅತ್ಯಂತ ಹಿಂದುಳಿದ ಗ್ರಾಮ. ನಮ್ಮ ಊರಲ್ಲಿ ಒಂದೇ ಒಂದು ಕೋಣೆಯ ಶಾಲೆ. ಒಂದೇ ಜಾಗದಲ್ಲಿ ನಾಲ್ಕು ವರ್ಗಗಳು ನಡೆಯುತ್ತಿದ್ದವು. ಕೇವಲ ನಾಲ್ಕನೆಯ ವರ್ಗದ ವರೆಗೆ ಶಾಲೆ ನಡೆಸಲಾಗುತ್ತಿತ್ತು. ಮುಂದಿನ ಅಭ್ಯಾಸಕ್ಕಾಗಿ ತುಂಬಿಗಿ ಗ್ರಾಮಕ್ಕೆ ಡೋಣಿ ದಾಟಿ ಹೋಗಬೇಕಾಗುತ್ತಿತ್ತು.

**ಸಾಸನೂರ ಮನೆತನದ ಇತಿಹಾಸ :**

ನಮ್ಮ ತಂದೆಯವರ ಅಭಿಪ್ರಾಯದಂತೆ ನಮ್ಮ ಪೂರ್ವಜರು ಉತ್ತರ ಭಾರತದಿಂದ ದಕ್ಷಿಣ ಭಾರತಕ್ಕೆ ಬಂದವರು. ಈ ಮನೆತನದ ಪೂರ್ವಜರು ವ್ಯಾಪಾರಿಗಳಾಗಿದ್ದು, ಬೀದರ ನಗರಕ್ಕೆ ಕೆಲವು ವರ್ಷಗಳ ವಾಸ್ತವ್ಯದ ನಂತರ ಕಲಬುರ್ಗಿ ನಗರಕ್ಕೆ ಬಂದರು. ನಂತರ ರಾಯಚೂರ ಜಿಲ್ಲೆಯ ಮಾನ್ವಿ ತಾಲೂಕಿನ ಕೌತಾಳ (ಕವಿತಾಳ) ಗ್ರಾಮಕ್ಕೆ ಆಗಮಿಸಿ ಊದಿನಕಡ್ಡಿ, ಕುಂಕುಮ ಮತ್ತು ಕಿರಾಣಿ ಅಂಗಡಿಯನ್ನು ಸ್ಥಾಪಿಸಿಕೊಂಡು ವ್ಯಾಪಾರದಲ್ಲಿ ತೊಡಗಿದರು. ನಮ್ಮ ಮುತ್ತಜ್ಜ ಗಂಗಪ್ಪನು ಕೌತಾಳ ಗ್ರಾಮವನ್ನು ತ್ಯಜಿಸಿ ತಾಳಿಕೋಟಿಗೆ ಬಂದು, ನಂತರ ಸಾಸನೂರ ಗ್ರಾಮಕ್ಕೆ ಬಂದನು. ಗಂಗಪ್ಪ ಮುತ್ತಜ್ಜನಿಗೆ ಇಬ್ಬರು ಗಂಡು ಮಕ್ಕಳು-ಹಿರಿಯವನು ಬಸಪ್ಪ, ಎರಡನೆಯವನು ತುಳಜಪ್ಪ. ಬಸಪ್ಪನು ಪೋಲಿಯೋ ರೋಗಕ್ಕೆ ತುತ್ತಾಗಿ ಅಂಗವಿಕಲನಾಗಿದ್ದನು. ಒಳ್ಳೆಯ ಕಲಾವಿದ, ಒಕ್ಕಲುತನಕ್ಕೆ ಬೇಕಾಗುವ ಬಡಗಿತನ ಸಾಮಾನುಗಳನ್ನು ತಯಾರಿಸುವದರಲ್ಲಿ ಸಿದ್ಧಹಸ್ತ. ಗ್ರಾಮದ ಜನರು ಅವನಿಂದ ತಮಗೆ ಬೇಕಾದ ಕುಂಟಿ, ಕೂರಿಗೆ, ಚಕ್ಕಡಿ ಸಾಮಾನುಗಳನ್ನು ತಯಾರಿಸಿಕೊಂಡು ಹೋಗುತ್ತಿದ್ದರು. ಅವನು ಗುರುಬೋಧೆಯನ್ನು ತೆಗೆದುಕೊಂಡಿದ್ದನು. ಭಕ್ತಿ ಹಾಡುಗಳನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದನು. ಅತ್ಯಂತ ಸ್ಫುರದ್ರೂಪಿ. ನೀಳವಾದ ಮೂಗು, ಬೆಕ್ಕಿನ ಕಣ್ಣು, ಥಳಥಳ ಹೊಳೆಯುವ ಗೋದಿ ಬಣ್ಣ. ಆದರೆ ಶೀಘ್ರಕೋಪಿ. ಮನೆಯಲ್ಲಿ ಎಲ್ಲರೂ ಅವನಿಗೆ ಹೆದರುತ್ತಿದ್ದರು. ಕೇವಲ ನಮ್ಮ ತಂದೆಯವರಿಗೆ ಮಾತ್ರ ಅಂಜುತ್ತಿದ್ದ. ಎಲ್ಲಿಗಾದರೂ ಹೋಗಬೇಕಾದರೆ ನನ್ನ ಹೆಗಲ ಮೇಲೆ ಕೈಯಿಟ್ಟು ಬಡಿಗೆ ಹಿಡಿದುಕೊಂಡು ಬರುವನು. ಸುಮಾರು ಎಂಬತ್ತು ವರ್ಷಗಳ ವರೆಗೆ ಬಾಳಿದನು. ನಾನು ಎರಡನೇ ವರ್ಗದಲ್ಲಿ ಓದುತ್ತಿದ್ದಾಗ ತೀರಿದನು. ರಾತ್ರಿ ಸಮಯದಲ್ಲಿ ಭಜನೆ ಮಾಡುತ್ತ ಕೊನೆ ಉಸಿರು ಬಿಟ್ಟನು. ಬಹುಶಃ ೧೯೪೩ನೇ ಇಸ್ವಿಯ

ಡಿಸೆಂಬರ ತಿಂಗಳ ಮೊದಲನೆಯ ವಾರ. ೧೯೩೪-೩೫ರ ಪ್ಲೇಗಿನಲ್ಲಿ ನಮ್ಮ ಅಜ್ಜ ತುಳಜಪ್ಪ ಮತ್ತು ಕಾಕಾ ಮೈಲಾರೆಪ್ಪ ಈ ರೋಗಕ್ಕೆ ತುತ್ತಾಗಿ ದೇಹ ಬಿಟ್ಟರು.

ನಮ್ಮ ಮನೆತನದ ಅಡ್ಡಹೆಸರು ಬಹಳ ವರ್ಷಗಳ ವರೆಗೆ ಕೌತಾಳ ಎಂದೇ ಪ್ರಚುರವಾಗಿತ್ತು. ನಮ್ಮ ತಂದೆಯವರು ಈ ಮನೆತನದ ಹೆಸರನ್ನು 'ಕೌತಾಳ'ದಿಂದ, 'ಸಾಸನೂರ' ಎಂಬ ಹೆಸರಿಗೆ ಪರಿವರ್ತಿಸಿದರು. ನಮ್ಮ ಮನೆಯಲ್ಲಿ ಕೆಲವು ಮೋಡಿ ಅಕ್ಷರದಲ್ಲಿ ಬರೆದ ಕಾಗದ ಪತ್ರಗಳಿದ್ದವು. ಅವು ನಮ್ಮ ಮನೆತನಕ್ಕೆ ಸಂಬಂಧ ಪಟ್ಟಿದ್ದಾಗಿದ್ದು, ಅವೆಲ್ಲ ಮುಂದೆ ಕಳೆದುಹೋದವು. ನಾಲ್ಕಾರು ಖಡ್ಗಗಳು ಮತ್ತು ಢಾಲುಗಳಿದ್ದವು. ಬಹುಶಃ ನಮ್ಮ ಪೂರ್ವಜರು ಯುದ್ಧ ವಿದ್ಯೆಯಲ್ಲಿ ಪರಿಣಿತರಾಗಿದ್ದರು. ನಮ್ಮ ಮನೆಯಲ್ಲಿ ಒಂದು ಹಳೆ ಹಂಡೆ ಇತ್ತು. ಅದನ್ನು ನಮ್ಮಜ್ಜಿ ಸಾಬಮ್ಮ ಖರೀದಿಸಿದ್ದಳು. ಅದರ ಮೇಲೆ "ಅಯ್ಯಪ್ಪ ಕೌತಾಳ" ಎಂಬ ಹೆಸರನ್ನು ಬರೆಸಲಾಗಿತ್ತು. ಅಯ್ಯಪ್ಪ ನನ್ನಜ್ಜಿಯ ಐದನೆಯ ಪುತ್ರ.

ನನ್ನ ಅಜ್ಜ ತುಳಜಪ್ಪನು ಒಕ್ಕಲುತನ, ಸಣ್ಣ ವ್ಯಾಪಾರ ಕಾರ್ಯದಲ್ಲಿ ತೊಡಗಿದ್ದ. ಅವನ ಮದುವೆ "ಬಂಡೆಪ್ಪನಳ್ಳಿ ಸಾಲವಾಡಗಿ" ಗ್ರಾಮದ ಸಾಹೇಬಮ್ಮ ಎಂಬವಳೊಂದಿಗೆ ಹತ್ತೊಂಬತ್ತನೆಯ ಶತಮಾನದ ಕೊನೆಯ ವರ್ಷಗಳಲ್ಲಿ ನಡೆಯಿತಂತೆ. ಅವಳಿಗೆ ಕಾಸವ್ವ ಎಂಬ ತಂಗಿ, ಸಾಹೇಬಪ್ಪ ಎಂಬ ತಮ್ಮನಿದ್ದನು. ಈ ತಮ್ಮನಿಗೆ ನಮ್ಮ ಅಜ್ಜಿ ತನ್ನ ಮಗಳು ಬಾಯಮ್ಮಳನ್ನು ಕೊಟ್ಟು ಮದುವೆ ಮಾಡಿದಳು. ತಂಗಿ ಕಾಸವ್ವನ ಮದುವೆ ನಮ್ಮ ಮನೆತನದ ಸಮೀಪ ಸಂಬಂಧಿ ಹಿರೂರ ಗ್ರಾಮದ ನಿವಾಸಿ ಸಂಗಪ್ಪನೊಡನೆ ಜರುಗಿತು. ಲಗ್ನವಾದನಂತರ ಸಂಗಪ್ಪ ನಮ್ಮ ಮನೆಗೆ ಬಂದನು. ಕಾಸವ್ವ ಅಜ್ಜಿ ಮತ್ತು ಸಂಗಪ್ಪ ಅಜ್ಜನಿಗೆ ಇಬ್ಬರು ಪುತ್ರರು ರಾಮಪ್ಪ ಮತ್ತು ಶಂಕರಪ್ಪ. ಒಬ್ಬಳೇ ಮಗಳು ಭೀಮವ್ವ. ಈ ಸಂಸಾರವೂ ನಮ್ಮ ತಂದೆಯವರಿಗೆ ಅವಲಂಬಿತವಾಗಿತ್ತು. ಶಂಕರಪ್ಪನನ್ನು ನಮ್ಮ ತಂದೆಯವರು ಚೆನ್ನಾಗಿ ಅಭ್ಯಾಸ ಮಾಡಿಸಿ ಮುಲ್ಕಿ ಪರೀಕ್ಷೆ ಪಾಸ ಮಾಡಿಸಿದರು. ಮುಂದೆ ಎ.ಟಿ. ಸಾಸನೂರ ಅವರು ಕರ್ನಾಟಕ ಕಾಲೇಜಿನಲ್ಲಿ ಪ್ರೊಫೆಸರ್ ಆದಾಗ ಶಂಕರಪ್ಪನು ಅವರೊಡನೆ ಧಾರವಾಡದಲ್ಲಿದ್ದು, ಪಂಡಿತ ತಾರಾನಾಥರ ಮಾರ್ಗದರ್ಶನದಲ್ಲಿ ಆಯುರ್ವೇದ ಮತ್ತು ಸಂಗೀತ ನಾಟ್ಯಶಾಸ್ತ್ರ ಕಲಿತನು. ಎ.ಟಿ.ಯವರು ಅವನಿಗೆ ಶಿಕ್ಷಕ ನೌಕರಿ ಕೊಡಿಸಿದ್ದರಂತೆ.

ನಮ್ಮ ಅಜ್ಜಿ ಸಾಹೇಬವ್ವ ಮದುವೆಯಾದೊಡನೆ ಸಾಸನೂರ ಗ್ರಾಮಕ್ಕೆ ಬಂದಳು. ಅವಳ ಮೈಬಣ್ಣ ಗೋದಿಗೆಂಪು. ಬಹು ಸುಂದರವಾಗಿದ್ದಳು. ಸಾಯುವ ಮುಂದೆ ಅವಳ ವಯಸ್ಸು ೮೦ ಆದರೂ ಅವಳ ಮುಖ ಬಣ್ಣ ಕಪ್ಪಾಗಿದ್ದಿಲ್ಲ. ಆದರೆ ನಮ್ಮ ಅಜ್ಜ ತುಳಜಪ್ಪ ಕಪ್ಪು ಬಣ್ಣದವನು. ನಮ್ಮದು ಒಕ್ಕಲುತನವನ್ನೇ ನಂಬಿಕೊಂಡಿದ್ದ ಮನೆತನ. ಹೀಗಾಗಿ ಅಜ್ಜಿ ಮನೆಗೆಲಸದೊಡನೆ ಒಕ್ಕಲತನ ಕೆಲಸದಲ್ಲಿ ಅಜ್ಜನೊಡನೆ ಸಹಕಾರಿಯಾದಳು. ಒಂದೆರಡು ವರ್ಷಗಳ ನಂತರ ಪುತ್ರ ಸಂತಾನವಾಯಿತು. ಅವನಿಗೆ "ಅಯ್ಯಪ್ಪ"ನೆಂದು ಹೆಸರು ಇಡಲಾಯಿತಂತೆ. ಅವನು ನಾಲ್ಕಾರು ವರ್ಷಗಳ ವರೆಗೆ ಬದುಕಿದ್ದನಂತೆ. ಅವನ ಮರಣಾನಂತರ ಎರಡನೆಯ ಪುತ್ರನಾಗಿ ನಮ್ಮ ತಂದೆ ಮಡಿವಾಳಪ್ಪ ಜನಿಸಿದರು. ಕಲಕೇರಿ ಗ್ರಾಮದಲ್ಲಿರುವ ಮಡಿವಾಳೇಶ್ವರ ಮಠದ ಭಕ್ತಳಾಗಿದ್ದುದರಿಂದ ತನ್ನ ಎರಡನೆಯ ಮಗನಿಗೆ ಮಡಿವಾಳಪ್ಪನೆಂದು ಹೆಸರಿಟ್ಟಳು. ಯೋಗಾಯೋಗವೆಂದರೆ ಮುಂದೆ ಮುವತ್ತೈದನೆಯ ವಯಸ್ಸಿನಲ್ಲಿ ನಮ್ಮ ತಂದೆ ಕಲಕೇರಿ ಗ್ರಾಮದ ಕನ್ನಡ ಪ್ರಾಥಮಿಕ ಶಾಲೆಯ ಮುಖ್ಯ ಗುರುಗಳಾಗಿ ಐದುವರ್ಷ ಸೇವೆಸಲ್ಲಿಸಿದರು. ನಾನೂ ಸಹ ಕಲಕೇರಿ ಗ್ರಾಮದಲ್ಲಿ ಜನವರಿ ೧೩, ೧೯೩೧ರಂದು ಜನಿಸಿದೆನು. ಕಲಕೇರಿ ಗ್ರಾಮ ನಮ್ಮ ಮನೆತನಕ್ಕೆ ಅತ್ಯಂತ ಪೂಜನೀಯವಾಗಿದೆ.

**ಮಡಿವಾಳಪ್ಪ - ಬಾಲ್ಯ, ಅಭ್ಯಾಸ :**

ನಮ್ಮ ತಂದೆ ಮಡಿವಾಳಪ್ಪನವರ ಜನನ ಅಗಸ್ಟ ೧೦, ೧೯೦೫. ಇದು ಸಾಲಿಯ ಸರ್ಟಿಫಿಕೇಟ್ ಅನುಗುಣವಾಗಿ, ಆದರೆ ಅವರ ಜಾತಕದಲ್ಲಿ ೨೫ನೆಯ ಎಪ್ರಿಲ್ ೧೯೦೫ ಎಂದು ನಮೂದಿಸಲಾಗಿದೆ. ಅವರು ಸುಮಾರು ೬೮ ವರ್ಷಗಳಷ್ಟು ಬಾಳಿ ದಿನಾಂಕ ೨೯-೯-೧೯೭೩ರಂದು ಕಲಬುರ್ಗಿಯ ನನ್ನ ಮನೆಯಲ್ಲಿ ಕೊನೆ ಉಸಿರು ಎಳೆದರು.

ನಮ್ಮ ತಂದೆಯ ನಂತರ, ಅಜ್ಜಿಯ ಮೂರನೇ ಮಗ ಸೈದಪ್ಪ. ನಂತರ ಬಾಯಮ್ಮ ಅವಳನಂತರ ಜನಿಸಿದ ಪುತ್ರರು ಮೈಲಾರೆಪ್ಪ, ಅಯ್ಯಪ್ಪ, ಹಣಮಂತರಾಯ. ಕೊನೆಯ ಪುತ್ರ ಭೀಮಶ್ಯಾ ಅಥವಾ ಭೀಮಸೇನ. ನನ್ನಜ್ಜಿಗೆ ಒಟ್ಟಿಗೆ ಏಳುಜನ ಪುತ್ರರು ಮತ್ತು ಐದು ಜನ ಪುತ್ರಿಯರು. ಅವರಲ್ಲಿ ಬಾಯಮ್ಮಳು ಮಾತ್ರ ಸುಮಾರು ೮೦ ವರ್ಷಗಳ ವರೆಗೆ ಬಾಳಿದಳು. ಜೀವಮ್ಮ, ಅವ್ವಮ್ಮ, ನೀಲಮ್ಮ ಮತ್ತು ಭೀಮವ್ವ ಈ ನಾಲ್ಕು ಪುತ್ರಿಯರು ೧೦-೧೨ ವರ್ಷಗಳೊಳಗಾಗಿ ತೀರಿಹೋದರು. ಸಾಸನೂರ ಮನೆತನದ ಈ ಏಳುಜನ ಪುತ್ರರು, ಐದು ಜನ ಪುತ್ರಿಯರಲ್ಲಿ ಕೊನೆಯ ಕಾಕಾ ಪ್ರೊ. ಬಿ.ಟಿ. ಸಾಸನೂರ ಅಗಸ್ಟ ೪, ೨೦೦೩ರಂದು ಸ್ವರ್ಗಸ್ಥರಾದರು. ಸಾಸನೂರ ಮನೆತನದ ಹಿರಿಯರಾರೂ ಈಗ ಇಲ್ಲ. ಒಂದು ರೀತಿಯಲ್ಲಿ ನಮ್ಮ ಮನೆತನ ಕಳಸವಿಲ್ಲದ ದೇವಮಂದಿರವಾಗಿದೆ.

ನಮ್ಮಜ್ಜ ತುಳಜಪ್ಪ ಒಕ್ಕಲಿಗನಾಗಿದ್ದರೂ ತನ್ನ ಹಿರಿಯ ಪುತ್ರ ಮಡಿವಾಳಪ್ಪನನ್ನು ಸಾಸನೂರಿನ ಕನ್ನಡ ಪ್ರಾಥಮಿಕ ಶಾಲೆಗೆ ಸೇರಿಸಿದನು. ನಾಲ್ಕನೆಯ ವರ್ಗದ ವರೆಗೆ ಅಭ್ಯಾಸ ಮಾಡಿ, ಅವನು ಮುಂದಿನ ಅಭ್ಯಾಸಕ್ಕಾಗಿ ನಮ್ಮ ಊರಿನ ದೋಣಿಯ ಆಚೆಗಿರುವ ತುಂಬಗಿ ಗ್ರಾಮಕ್ಕೆ ಹೋಗಬೇಕಾಯಿತು. ಅಲ್ಲಿ ಶ್ರೀಮಂತರಾದ ಹೊಸಮನಿ ಮಡಿವಾಳಪ್ಪ ನಮ್ಮ ತಂದೆಯವರ ಸಹಪಾಠಿ, ಮತ್ತು ಆತ್ಮೀಯ ಗೆಳೆಯ. ಆಗಿನ ಕಾಲದಲ್ಲಿ ಪಾಟಿ ಮತ್ತು ಬಳಪಗಳ ಬಳಕೆ ಇದ್ದಿಲ್ಲ. ನಮ್ಮೂರ ದೋಣಿಯ ದಂಡೆಯ ಮೇಲಿನ ಸೂಸಾದ ಮಳಲನ್ನು (ಉಸುಕು) ಸಣ್ಣ ಚೀಲಗಳಲ್ಲಿ ತುಂಬಿಕೊಂಡು ಶಾಲೆಗೆ ಬಂದು, ನೆಲದ ಮೇಲೆ ಸುರುವಿ ಅದರ ಮೇಲೆ ಬೆರಳುಗಳ ಸಹಾಯದಿಂದ ಕಾಗುಣಿತಾಕ್ಷರಗಳನ್ನು ಬರೆಯಲಾಗುತ್ತಿತ್ತು. ಮೊದಲನೇ ಬೀಜಮಂತ್ರ "ಓಂ ನಾಮಾ ಸಿದ್ಧಂ". ಆ ನಂತರ ಪಾಟಿ ಮತ್ತು ಬಳಪಗಳನ್ನು ಉಪಯೋಗಿಸಲಾಯಿತು. ಆಗಿನ ಕಾಲದಲ್ಲಿ ಇಡೀ ವಿಜಾಪುರ ಜಿಲ್ಹೆಗೆ ಮುಲ್ಕಿ ಪರೀಕ್ಷೆ ಕೇಂದ್ರವೆಂದರೆ ಕೇವಲ ವಿಜಾಪುರನಗರ. ಹೀಗಾಗಿ ಇಡೀ ಜಿಲ್ಲೆಯ ಮುಲ್ಕಿ ಪರೀಕ್ಷೆಯ ವಿದ್ಯಾರ್ಥಿಗಳು ವಿಜಾಪುರಕ್ಕೆ ಬರಬೇಕಾಗುತ್ತಿತ್ತು. ಆಗಿನ ಕಾಲದಲ್ಲಿ ಮ್ಯಾಟ್ರಿಕ್ ಪರೀಕ್ಷೆ ಕೇಂದ್ರ ಕೇವಲ ಮುಂಬಯಿಯಲ್ಲಿ ಮಾತ್ರ. ಇಡೀ ಮುಂಬಯಿ ಪ್ರಾಂತವು ಮುಂಬಯಿ ಕರ್ನಾಟಕ, ಮಹಾರಾಷ್ಟ್ರ, ಗುಜರಾತನಂಥ ಪ್ರದೇಶಗಳನ್ನೊಳಗೊಂಡಿತ್ತು. ೧೯೪೫ರಲ್ಲಿ ಮುಂಬಯಿ ವಿಶ್ವವಿದ್ಯಾಲಯದ ಅಥ್ಲೆಟಿಕ್ ಮೀಟ್ ವಿಜಾಪುರ ಕಾಲೇಜ ಅಧಿಪತ್ಯದಲ್ಲಿ ನಡೆದಾಗ, ಸಿಂಧ ಕರಾಚಿ ಮುಂಬಯಿ ಸಾಂಗಲಿ ಕೊಲ್ಹಾಪುರ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಆಗ ನಾವು ಹಾಯ್‌ಸ್ಕೂಲನಲ್ಲಿ ಓದುತ್ತಿದ್ದೆವು.

ಮುಲ್ಕಿ ಪರೀಕ್ಷೆಗಾಗಿ ಕೇಂದ್ರಸ್ಥಾನವಾದ ವಿಜಾಪುರಕ್ಕೆ ಪರೀಕ್ಷಾರ್ಥಿಗಳು ಬರಬೇಕಾಗಿತ್ತು. ಆಗಿನ ಕಾಲದಲ್ಲಿ ಬಸ್ಸುಗಳು ಬಳಕೆಯಲ್ಲಿದ್ದಿಲ್ಲ. ಕೇವಲ ಎತ್ತಿನ ಗಾಡಿಯ ಪ್ರವಾಸ. ಆಗಿನ ಕಾಲದಲ್ಲಿ ನಮ್ಮೂರಿನಿಂದ ವಿಜಾಪುರಕ್ಕೆ ಹೋಗಬೇಕಾದರೆ ಕನಿಷ್ಠ ೧೦ ತಾಸುಗಳ ಸಮಯ ಬೇಕಾಗುತ್ತಿತ್ತು. ಸಹಪಾಠಿಯಾದ ದೊಡ್ಡ ಸಂಗಪ್ಪ ದೇಸಾಯಿಯವರೊಡನೆ ನಮ್ಮ ತಂದೆಯವರಿಗೆ ಎತ್ತಿನ ಗಾಡಿಯಲ್ಲಿ ವಿಜಾಪುರಕ್ಕೆ ಪ್ರಯಾಣ. ಅವರಿಬ್ಬರು ತಮ್ಮೊಡನೆ ಸಜ್ಜಿರೊಟ್ಟಿ, ಹುಳಿಬಾನ, ಪುಂಡಿಪಲ್ಯೆ ಎಲ್ಲ ತರದ ಚಟ್ನಿಗಳ ಬುತ್ತಿಗಂಟುಗಳನ್ನು ಒಯ್ದಿದ್ದರಂತೆ.

ವಿಜಾಪುರ ನಗರ ಮುಟ್ಟುವ ಮೊದಲೇ ಇಡೀ ಬುತ್ತಿಗಂಟು ಅವರ ಒಡಲಿಗೆ ಸೇರಿತು. ಇದು ಆಗಿನ ಜನ ಎಷ್ಟು ಬಲಿಷ್ಠರು ಎಂಬುದನ್ನು ತೋರಿಸಿಕೊಡುತ್ತದೆ.

ಆಗಿನ ಕಾಲದಲ್ಲಿ ಮುಲ್ಕಿ ಪರೀಕ್ಷೆಯ ವಿಧಾನಗಳು ವಿಚಿತ್ರವಾಗಿದ್ದವು. ಗಣಿತ ವಿಷಯ ಮೊದಲ ದಿನದ ಪ್ರಶ್ನೆಪತ್ರಿಕೆಯಾಗಿತ್ತು. ಗಣಿತ ಪೇಪರು ಮುಗಿದ ತಕ್ಷಣ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಅದೇ ದಿವಸ. ಗಣಿತ ವಿಷಯದಲ್ಲಿ ಪಾಸಾದವರಿಗಷ್ಟೆ ಮುಂದಿನ ಪೇಪರುಗಳನ್ನು ಬರೆಯಲು ಹಾಜರಾಗಬೇಕಾಗುತ್ತಿತ್ತು. ನಪಾಸ ಆದರೆ ಅವರೆಲ್ಲ ಮನೆಗೆ ಹೋಗಬೇಕಾಗುತ್ತಿತ್ತು. ನಮ್ಮ ತಂದೆಯವರು ಗಣಿತ ಪೇಪರಿನಲ್ಲಿ ಅತ್ಯುತ್ತಮ ಗುಣಗಳೊಂದಿಗೆ ತೇರ್ಗಡೆಯಾಗಿ, ಮುಂದಿನ ಪೇಪರುಗಳನ್ನು ಬರೆಯಲು ಅನುಮತಿ ದೊರಕಿತು. ಇದು ನಿಜವಾಗಿಯೂ ಅಗ್ನಿಪರೀಕ್ಷೆ.

## ಕನ್ನಡ ಪ್ರಾಥಮಿಕ ಶಿಕ್ಷಕ :

ಆಗಿನ ಕಾಲದಲ್ಲಿ ಮುಲ್ಕಿ ಪರೀಕ್ಷೆ ಪಾಸಾದ ವಿದ್ಯಾರ್ಥಿಗಳಿಗೆ ತಕ್ಷಣ ಶಿಕ್ಷಕ ನೌಕರಿ ದೊರಕುತ್ತಿತ್ತು. ೧೯೧೩ ಇಸ್ವಿಯಲ್ಲಿ ನಮ್ಮ ತಂದೆಯವರನ್ನು ಕನ್ನಡ ಪ್ರಾಥಮಿಕ ಶಾಲಾ ಶಿಕ್ಷಕರೆಂದು ನೇಮಿಸಿತು, ಆಗಿನ ಬ್ರಿಟಿಶ್ ಸರಕಾರ. ಅದೇ ವರ್ಷ ಅಂದರೆ ೧೯೧೩ ಅಕ್ಟೋಬರ್ ೨೭ರಂದು ನನ್ನ ಆರನೇ ಕಾಕಾ ಹಣಮಂತರಾಯ ಜನಿಸಿದರು, ಸಾಸನೂರ ಗ್ರಾಮದಲ್ಲಿ. ತಂದೆಯವರು ಮುದ್ದೇಬಿಹಾಳ ತಾಲೂಕಿನ ನಾಲ್ವತ್ತವಾಡದಲ್ಲಿ ಶಾಲಾ ಶಿಕ್ಷಕರಾಗಿದ್ದಾಗ ಅವರ ನೌಕರಿ ಖಾಯಂ ಆಯಿತು. ಆಗ ಅವರ ತಿಂಗಳ ಪಗಾರ ಒಂಬತ್ತು ರೂಪಾಯಿಗಳು! ಅನಂತರ ಸಾಸನೂರ ಶಾಲೆಗೆ ೭-೪-೧೯೧೭ರಂದು ವರ್ಗವಾಯಿತು. ಹತ್ತು ವರ್ಷಗಳ ಸೇವೆಯ ನಂತರ ೨ನೆಯ ಫೆಬ್ರುವರಿ ೧೯೨೭ರಂದು ಸಿಂದಗಿ ತಾಲೂಕಿನ ಕಲಕೇರಿ ಗ್ರಾಮದ ಪ್ರಾಥಮಿಕ ಶಾಲಾ ಮುಖ್ಯಾಧ್ಯಾಪಕರೆಂದು ವರ್ಗಾಯಿಸಲಾಯಿತು. ಸುಮಾರು ಐದು ವರ್ಷಗಳ ವರೆಗೆ ಕಲಕೇರಿಯ ಶಾಲೆಯಲ್ಲಿ ಸೇವೆ ಸಲ್ಲಿಸಿದ ನಂತರ ೫-೨-೧೯೩೨ರಂದು ಸಾಸನೂರ ಗ್ರಾಮದ ಪ್ರಾಥಮಿಕ ಶಾಲಾ ಹೆಡ್‌ಮಾಸ್ತರ ಜಾಗೆಗೆ ವರ್ಗವಾಯಿತು. ಸುಮಾರು ೧೩ ವರ್ಷಗಳ ವರೆಗೆ ಸಾಸನೂರ ಗ್ರಾಮದ ಶಾಲೆಯಲ್ಲಿ ಸೇವೆ ಸಲ್ಲಿಸಿದ ನಂತರ ೨೪-೧೦-೧೯೪೫ರಂದು, ಮುದ್ದೇಬಿಹಾಳ ತಾಲೂಕಿನ ತಮದಡ್ಡಿ ಶಾಲೆಯ ಹೆಡ್‌ಮಾಸ್ತರರಾದರು. ಬ್ರಿಟಿಶ್ ಸಾಮ್ರಾಜ್ಯಶಾಹಿಯ ಯುಗ ಅಂತ್ಯವಾಗಿ, ಭಾರತ ಸ್ವತಂತ್ರವಾದ ನಂತರ ದಿನಾಂಕ ೨೭-೧೧-೧೯೪೭ರಂದು ಬಾಗೇವಾಡಿ ತಾಲೂಕ ಪ್ರಾಥಮಿಕ ಶಾಲಾ ಹೆಡ್‌ಮಾಸ್ತರ ಹುದ್ದೆಯನ್ನು ಸ್ವೀಕರಿಸಿದರು. ಎರಡು ವರ್ಷಗಳ ವರೆಗೆ ಈ ಹುದ್ದೆಯಲ್ಲಿ ಸೇವೆ ಸಲ್ಲಿಸಿ ೮ನೇ ಅಗಸ್ಟ ೧೯೫೦ರಂದು ಸೇವೆಯಿಂದ ನಿವೃತ್ತರಾದರು. ಆಗಿನ ಕಾಲದಲ್ಲಿ ಅವರ ಪಿಂಚಣಿ (ಪೆನ್ಶನ್) ತಿಂಗಳಿಗೆ ಕೇವಲ ೨೭ ರೂಪಾಯಿಗಳು ಮಾತ್ರ.

## ಬಿಜಾಪುರ ಜಿಲ್ಲಾ ಶಿಕ್ಷಕ ಮಹಾಸಮ್ಮೇಳನ :

ಬಾಗೇವಾಡಿ ತಾಲೂಕ ಶಾಲಾ ಹೆಡ್‌ಮಾಸ್ತರರಾಗಿದ್ದಾಗ ಬಿಜಾಪುರ ಜಿಲ್ಹಾ ಪ್ರಾಥಮಿಕ ಶಾಲಾ ಶಿಕ್ಷಕರ ಮಹಾಸಮ್ಮೇಳನವನ್ನು ಏರ್ಪಡಿಸಿದರು. ಆಗಿನ ಅವಿಭಕ್ತ ಮುಂಬಯಿ ಪ್ರಾಂತದ ಮುಖ್ಯಮಂತ್ರಿಗಳಾದ ಬಾಳ ಗಂಗಾಧರ ಖೇರ ಅವರು ಈ ಸಮ್ಮೇಳನವನ್ನು ಉದ್ಘಾಟಿಸಿದರು. ವಿಜಾಪುರ ಜಿಲ್ಲೆಯ ಶಾಸಕರು, ಶಿಕ್ಷಣಾಧಿಕಾರಿಗಳು ಮತ್ತು ವಿದ್ವನ್ಮಣಿಗಳು ಭಾಗವಹಿಸಿದ್ದರು. ಅದೊಂದು ಅಭೂತಪೂರ್ವ ಸಮ್ಮೇಳನ. ಸಮ್ಮೇಳನದ ಕಾರ್ಯಕ್ರಮಗಳನ್ನೆಲ್ಲ ಸರಕಾರ ಚಿತ್ರೀಕರಿಸಿತಂತೆ. ಮುಂಬೈ ವಿಧಾನ ಸಭೆಯ ಸ್ಪೀಕರಾದ ಶ್ರೀ ಷಣ್ಮುಖಪ್ಪ ಅಂಗಡಿ ಮತ್ತು ಶ್ರೀಮತಿ ಪದ್ಮಾವತಿ ಅಂಗಡಿಯವರು ಶಾಸಕರಾದ ಶ್ರೀ ಜಿ.ಎಸ್. ಸಜ್ಜನ,

ಚೆನಬಸಪ್ಪ ಅಂಬಲಿ, ರಾಜಾರಾಮ ಧುಬೆ ಇನ್ನುಳಿದ ಜಿಲ್ಲಾ ಮುಂದಾಳುಗಳು ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಈ ಶಿಕ್ಷಕ ಅಧಿವೇಶನದ ಸ್ವಾಗತಾಧ್ಯಕ್ಷರೆಂದು ನಮ್ಮ ಕಾಕಾ ಡಾ. ಎಚ್.ಟಿ. ಸಾಸನೂರ ಅವರನ್ನು ನಮ್ಮ ತಂದೆಯವರು ನೇಮಿಸಿದ್ದರು. ಅಂಥ ಶಿಕ್ಷಕ ಸಮ್ಮೇಳನ ಹಿಂದೆಂದೂ ನಡಿದಿದ್ದಿಲ್ಲವೆಂದು ಹೇಳಲಾಯಿತು. ಬಾಗೇವಾಡಿ ತಾಲೂಕ ಶಾಲಾ ಹೆಡ್‌ಮಾಸ್ತರರೆಂದು ಸೇವೆ ಸಲ್ಲಿಸುವಾಗ, ಆ ಶಾಲೆಯಲ್ಲಿ ಪ್ರತಿಭಾವಂತ ಶಿಕ್ಷಕರು ಸೇವೆ ಸಲ್ಲಿಸುತ್ತಿದ್ದರು. ಸಾಹಿತಿಗಳಾದ ಈಶ್ವರಚಂದ್ರ ಚಿಂತಾಮಣಿ, 'ಶಿಶು' ಸಂಗಮೇಶ, ಗುಂಡಪ್ಪ ಕುಲಕರ್ಣಿ, ರು.ಶಿ. ಮಠ ಮತ್ತು ಕುಂಟೋಜಿ ಗುರುಗಳು ತಂದೆಯವರ ಮಾರ್ಗದರ್ಶನದಲ್ಲಿ ಕೆಲಸ ಮಾಡುತ್ತಿದ್ದರು. ಭಕ್ತಿಭಾಂಡಾರ ಶ್ರೀ ಬಸವೇಶ್ವರ ಜಯಂತಿಯನ್ನು ಬಸವೇಶ್ವರ ಗುಡಿಯ ಆವರಣದಲ್ಲಿ ಏರ್ಪಡಿಸಲಾಗುತ್ತಿತ್ತು. ಮುಖ್ಯ ಭಾಷಣಕಾರರು ನಮ್ಮ ತಂದೆಯವರು. ಒಮ್ಮೆ ಅವರು ಒಂದೆರಡು ತಾಸುಗಳ ವರೆಗೆ ಬಸವಣ್ಣನ ಜೀವನ ಚರಿತ್ರೆ, ವಚನ ಸಾಹಿತ್ಯ, ವಚನಕಾರರ ಬಗ್ಗೆ ಸುದೀರ್ಘವಾದ ಉಪನ್ಯಾಸ ಮಾಡಿದರು. ಸಭಾಂಗಣ ಜನರಿಂದ ತುಂಬಿಹೋಗಿತ್ತು. ನಾನು ಆ ಸಭೆಯಲ್ಲಿ ಪಾಲ್ಗೊಂಡಿದ್ದೆ. ಬಸವೇಶ್ವರ ದೇವಾಲಯ ವಿಶ್ವಸ್ಥ ಮಂಡಳಿಯ ಅಧ್ಯಕ್ಷರಾದ ಸಿಂಹಾಸನ ಮಾಮಲೇದಾರ ಅವರು ಅಧ್ಯಕ್ಷತೆ ವಹಿಸಿದ್ದರು. ಪಾಂಡಿತ್ಯಪೂರ್ಣವಾದ ಒಬ್ಬ ಶ್ರೇಷ್ಠ ಭಾಷಣಕಾರರೆಂದು ಜನತೆ ಅವರನ್ನು ಪರಿಗಣಿಸಿತು. ಸಭೆ, ಸಮಾರಂಭ, ಉದ್ಘಾಟನಾ ಸಮಾರಂಭ, ನಾಟಕದ ಪ್ರಾರಂಭೋತ್ಸವಕ್ಕೆ ತಂದೆಯವರನ್ನು ಮುಖ್ಯ ಅತಿಥಿಗಳೆಂದು ಆಹ್ವಾನಿಸಲಾಗುತ್ತಿತ್ತು.

**ಅರವಿಂದ ಘೋಷ ಮತ್ತು ಮಾತಾಜಿಯವರ ದರ್ಶನ :**

ಸೇವಾನಿವೃತ್ತಿಯ ನಂತರ ೧೯೫೦ ಅಕ್ಟೋಬರ್ ತಿಂಗಳಿನಲ್ಲಿ ಮುಂಬಯಿ ಗವ್ಹರ್ನರನಿಂದ ಪಾಸ್‌ಪೋರ್ಟನ್ನು ಪಡೆದು, ಹಲಸಂಗಿಯ ಕವಿ "ಮಧುರ ಚೆನ್ನ" (ಹಲಸಂಗಿ ಚೆನ್ನಮಲ್ಲಪ್ಪ), ಸಿಂಪಿ ಲಿಂಗಣ್ಣ ಇನ್ನುಳಿದ ಗೆಳೆಯರೊಂದಿಗೆ ಶ್ರೀ ಅರವಿಂದ ಘೋಷ ಮತ್ತು ಪೂಜ್ಯ ಮಾತಾಜಿಯವರ ದರ್ಶನಕ್ಕಾಗಿ ಪಾಂಡಿಚೇರಿಗೆ ಪ್ರಯಾಣ. ಅಲ್ಲಿ ಮೂರು ದಿನಗಳ ವಾಸ್ತವ್ಯದಲ್ಲಿ ಶ್ರೀ ಅರವಿಂದ ಘೋಷ ಮತ್ತು ಶ್ರೀ ಮಾತಾಜಿಯವರ ಆಶೀರ್ವಾದ ಮತ್ತು ದರ್ಶನ ಪಡೆದು ಊರಿಗೆ ಬಂದರು.

**ಪಾರಮಾರ್ಥಿಕದೆಡೆಗೆ :**

ತಂದೆಯವರು ಆಧ್ಯಾತ್ಮಜೀವಿಗಳು. ಸದ್ಗ್ರಂಥ, ಸತ್ಸಂಗದಲ್ಲಿ ಬಹಳ ಸಮಯ ವಿನಿಯೋಗಿಸುವವರು. ಯೋಗ ಮತ್ತು ಪಾರಮಾರ್ಥಿಕ ವ್ಯಾಸಂಗದಲ್ಲಿ ತನ್ಮಯರಾಗುತ್ತಿದ್ದರು. ಅವರಿಗೆ ಅತ್ಯಂತ ಮೆಚ್ಚಿನ ವಿಷಯಗಳೆಂದರೆ, ಶಿವಯೋಗ, ನಾಥಯೋಗ, ಕರ್ಮಯೋಗ, ಜ್ಞಾನಯೋಗ, ಜಪಯೋಗ, ಧ್ಯಾನ ಮತ್ತು ಚಿಂತನೆ. ವೇದ, ಉಪನಿಷತ್, ಭಗವದ್ಗೀತೆ, ಶಾಂಕರ ಭಾಷ್ಯ, ನಿಜಗುಣ ಶಿವಯೋಗಿಗಳ, ವಚನಕಾರರ ತತ್ತ್ವಜ್ಞಾನದಲ್ಲಿ ಪ್ರಭುತ್ವ. ಆಗಮ ಉಪನಿಷತ್‌ಗಳ ಮೇಲೆ ಅಧಿಕಾರ ವಾಣಿಯಿಂದ ಮಾತನಾಡುವವರು. ಭಗವದ್ಗೀತೆಯ ೧೮ ಅಧ್ಯಾಯಗಳು ಕಂಠಪಾಠವಾಗಿದ್ದವು. ಸಂಸ್ಕೃತದಲ್ಲಿ ಅಸಾಧಾರಣ ಪಾಂಡಿತ್ಯ. ಹಳಗನ್ನಡವಂತೂ ಅಂಗೈಮೇಲಿನ ನೆಲ್ಲಿಕಾಯಿ.

ಋಷಿ, ಸನ್ಯಾಸಿ, ಸ್ವಾಮಿಗಳು ಮತ್ತು ಧರ್ಮಗುರುಗಳನ್ನು ಕಾಣುವದು ಅವರಿಗೆ ಅತಿ ಪ್ರೀತಿ ಮತ್ತು ಆನಂದ. ಸಾಸನೂರ ಗ್ರಾಮದ ಶಾಲೆಯಲ್ಲಿ ಸೇವೆ ಸಲ್ಲಿಸುವಾಗ, ದೀಪಾವಳಿ ಮತ್ತು ಬೇಸಿಗೆಯ ಬಿಡುವುಗಳನ್ನು ಹುಬ್ಬಳ್ಳಿಯಲ್ಲಿ ಸಿದ್ಧಾರೂಡರ ಸತ್ಸಂಗದಲ್ಲಿ ಕಳೆಯುವವರು. ಸಿದ್ಧಾರೂಢರಿಂದ ಗುರೂಪದೇಶ ಪಡೆದಿದ್ದ

ತಂದೆಯವರು ತಾವು ಸನ್ಯಾಸ ಆಶ್ರಮ ಸ್ವೀಕರಿಸುವೆನೆಂದು ಸಿದ್ಧಾರೂಢರಿಗೆ ಹೇಳಿದಾಗ, ಸ್ವಾಮಿಗಳು ಅವರನ್ನು ಛೇಡಿಸಿ, ಲಗ್ನವಾಗಿ ಸಂಸಾರಿಕನಾಗು, ಗೃಹಸ್ಥನಾಗು. ಇನ್ನೂ ನಿನ್ನಿಂದ ಘನಕಾರ್ಯಗಳು ನಡೆಯಬೇಕಾಗಿವೆ - ಎಂದು ಹೇಳಿದರು. ಸಿದ್ಧಾರೂಢರು ದೇಹ ತ್ಯಜಿಸುವವರೆಗೂ ಅವರ ನೆಚ್ಚಿನ ಅನುಯಾಯಿ ಮತ್ತು ಭಕ್ತರಾಗಿದ್ದರು.

ಸುರಪುರ ತಾಲೂಕಿನ ಕೂಡ್ಲಗಿ ಬಾಬಾ ಮಹಾರಾಜರಿಗೂ ಅತ್ಯಂತ ಪ್ರೀತಿಯ ಶಿಷ್ಯರಾಗಿದ್ದರು. ಕೂಡ್ಲಗಿ ಜಾತ್ರೆಗೆ, ಆರಾಧನೆಗಾಗಿ ಪ್ರತಿವರ್ಷ ಊರ ಭಕ್ತಮಂಡಳಿಯೊಂದಿಗೆ ಹೋಗುವವರು. ಅದರಲ್ಲಿ ಪ್ರಮುಖರಾದ ಚಿಂಚೋಳಿ ಬಸವಂತರಾಯ ಅವರನ್ನು ತಮ್ಮ ಬಂಧುವೆಂದು ಪರಿಗಣಿಸುತ್ತಿದ್ದರು. ತಂದೆಯವರ ಮಾರ್ಗದರ್ಶನದಲ್ಲಿ ಅನೇಕ ಜಂಗಮಸ್ವಾಮಿಗಳು ಆಧ್ಯಾತ್ಮದ ಅಭ್ಯಾಸ ಮಾಡಿದರು. ವಿಶೇಷವಾಗಿ ಸೇಡಂದ ಕೊತ್ತಲ ಬಸವೇಶ್ವರ ಮಠದ ಪಟ್ಟಾಧ್ಯಕ್ಷರಾದ ಶ್ರೀ ಮಡಿವಾಳಯ್ಯಸ್ವಾಮಿಗಳು, ಕಲಿಕೇರಿ ಹಿರೇಮಠದ ಬಸಯ್ಯಸ್ವಾಮಿ ಮತ್ತು ಇರಗಂಟಯ್ಯಸ್ವಾಮಿಗಳು.

ಹಸ್ತಸಾಮುದ್ರಿಕ, ಪರಲೋಕವಿದ್ಯೆ, ಪ್ಲಾಂಚೆಟ್ ವಿದ್ಯೆ ಮಂತ್ರ ತಂತ್ರಗಳಲ್ಲಿ ಸಾಕಷ್ಟು ಪ್ರಭುತ್ವವಿತ್ತು. ಈ ವಿಷಯಗಳ ಉಪಲಬ್ಧವಿದ್ದ ಹಿಂದಿ, ಮರಾಠಿ ಮತ್ತು ಬಂಗಾಲಿ ಪುಸ್ತಕಗಳನ್ನು ತರಿಸಿ ಅಭ್ಯಸಿಸುತ್ತಿದ್ದರು. ಪರಲೋಕವಿದ್ಯೆಯ ತಂತ್ರಪ್ರಯೋಗವನ್ನು ಸಾಸನೂರನಲ್ಲಿ ನಮ್ಮ ಎರಡನೆಯ ಮನೆಯಲ್ಲಿ ಕೈಕೊಳ್ಳುತ್ತಿದ್ದರು. ಈ ಪ್ರಯೋಗ ಕತ್ತಲೆ ಕೋಣೆಯಲ್ಲಿ. ನಾಲ್ಕಾರು ಜನ ಮೂರು ಕಾಲಿನ ಟೇಬಲ್‌ದ ಸುತ್ತಲೂ ಕುಳಿತು ತಮ್ಮ ಹಸ್ತಗಳನ್ನು ಟೇಬಲ್ ಮೇಲಿಟ್ಟು ಮಂತ್ರಪಠನ ಮಾಡುತ್ತ ಧ್ಯಾನಾಸಕ್ತರಾದಾಗ ಹಲವಾರು ಅನುಭವಗಳಾಗುತ್ತಿದ್ದವು. ಮೃತಾತ್ಮರನ್ನು ಸಂಬೋಧಿಸಿ ಕರೆದಾಗ, ಆ ಆತ್ಮಗಳು ಅಲ್ಲಿ ಕುಳಿತ ಒಬ್ಬಿಬ್ಬರಲ್ಲಿ ಪ್ರವೇಶಿಸಿ, ಕೇಳಿದ ಪ್ರಶ್ನೆಗಳಿಗೆ ಉತ್ತರ ನೀಡುತ್ತಲಿದ್ದವು. ಒಂದು ರಾತ್ರಿ ಈ ಪ್ರಯೋಗ ನಮ್ಮ ಮನೆಯ ಒಳಕೋಣೆಯಲ್ಲಿ ನಡೆದಾಗ, ನಮ್ಮ ತಂದೆಯವರ ಪ್ರೀತಿಯ ಶಿಷ್ಯ ಬಳೂರಗಿ ಬಸವಂತರಾಯ ಬಾಗಿಲದಲ್ಲಿದ್ದ ಕಂದೀಲ ಬೆಳಕಿನಲ್ಲಿ ಓದುತ್ತಿದ್ದ. ಒಂದು ಅತ್ಯಂತ ಭೀಭತ್ಸ ಮತ್ತು ರೌದ್ರಮಯ ಧ್ವನಿ ಒಳಗೆ ಪ್ರವೇಶಿಸಿದಾಗ, ಕಂದೀಲ ಬೆಳಕು ಆರಿ, ಬಸವಂತ್ರಾಯ ಚೀರಿ ಬಿದ್ದನಂತೆ. ಅಂದಿನಿಂದ ಇಂಥ ಪರಲೋಕ ವಿದ್ಯೆಯ ಪ್ರಯೋಗಗಳನ್ನು ನಿಲ್ಲಿಸಿದರು. ಯಾರಾದರೂ ಬಿನ್ನವಿಸಿಕೊಂಡರೂ ಅದಕ್ಕೆ ಸಮ್ಮತಿ ನೀಡಲಿಲ್ಲ.

ಶ್ರೀಗುರು ದತ್ತನ ಅನುಯಾಯಿ ಮತ್ತು ಭಕ್ತರಾಗಿದ್ದರು. ಗುರುಚರಿತ್ರೆಯ ಸಪ್ತಾಹವನ್ನು ಆಚರಿಸುತ್ತಿದ್ದರು. ಕೆಲವು ಸಲ ಗಾಣಗಾಪುರಕ್ಕೆ ಹೋಗಿ ಗುರುಚರಿತ್ರೆ ಸಪ್ತಾಹ ಆಚರಿಸುವವರು. ಈ ಅವಧಿಯಲ್ಲಿ ಸಂಪೂರ್ಣ ನಿರಾಹಾರ, ಕೇವಲ ಹಾಲು ಮಾತ್ರ ಸ್ವೀಕರಿಸಿದ್ದರು. ಒಮ್ಮೊಮ್ಮೆ ನಮ್ಮೂರ ನಿರ್ಜನ ಪ್ರದೇಶದಲ್ಲಿ ತಂಬೂ ಅಥವಾ ತಗಡುಗಳನ್ನು ಹಾಕಿ, ಪೂಜಾಗೃಹ ಮಾಡಿಕೊಂಡು, ಪಾರಮಾರ್ಥಿಕ ಅನುಸಂಧಾನ ಮಾಡುವರು. ಅನ್ಯಾಯ, ಸುಳ್ಳು, ಕಪಟತನ, ಮೋಸಗಾರಿಕೆ, ಪರಪೀಡನೆ ಎಂದೂ ಸಹಿಸುತ್ತಿರಲಿಲ್ಲ. ಹಣದ ವಿಷಯದಲ್ಲಿ ಅವರು ಕಟ್ಟುನಿಟ್ಟಾಗಿರುತ್ತಿದ್ದರು. ಎಂದೆಂದಿಗೂ ಯಾರಿಂದಲೂ ಒಂದು ಪೈಸೆಯನ್ನು ಸಹ ಲಂಚ ಪಡೆಯಲಿಲ್ಲ. ಬೇಡಿದವರಿಗೆ ಹಣ ಸಹಾಯ ಮಾಡುತ್ತಿದ್ದರು.

**ಎರಡನೆಯ ವರ್ಷ ತರಬೇತಿ ಶಿಕ್ಷಕ :**

ಇಡೀ ಮುಂಬಯಿ ಪ್ರಾಂತ (ಮಹಾರಾಷ್ಟ್ರ, ಸಿಂಧ ಮತ್ತು ಕರ್ನಾಟಕದ ನಾಲ್ಕು ಜಿಲ್ಲೆಗಳು: ವಿಜಾಪುರ, ಧಾರವಾಡ, ಬೆಳಗಾವಿ ಮತ್ತು ಕಾರವಾರ) ಬ್ರಿಟಿಶರ ಆಡಳಿತಕ್ಕೆ ಒಳಪಟ್ಟಿತ್ತು. ಜಿಲ್ಲಾ ಕಲೆಕ್ಟರ್, ಜಿಲ್ಲಾ ಪೋಲಿಸ ಸುಪರಿಂಟೆಂಡೆಂಟ್, ಸಿವ್ಹಿಲ್ ಹಾಸ್ಪಿಟಲ್, ಡಿಸ್ಟ್ರಿಕ್ಟ ಸರ್ಜನ್, ಶಿಕ್ಷಣಾಧಿಕಾರಿ ಆಯುಕ್ತರೆಲ್ಲ ಬ್ರಿಟಿಶರೇ. ಅಂದು ದಕ್ಷಿಣ ಭಾರತದ ಸಾರ್ವಜನಿಕ ಶಿಕ್ಷಣ ಇಲಾಖೆಯ ಮುಖ್ಯ ಆಯುಕ್ತ (Chief Commissioner

to the Dept. of Public Instruction) ಎ.ಸಿ. ಮಿಲರ್ ಎಂಬ ಇಂಗ್ಲೀಷ ಅಧಿಕಾರಿಯಾಗಿದ್ದರು. ನಮ್ಮ ತಂದೆಯವರು ಎರಡನೆಯ ವರ್ಷ ಶಿಕ್ಷಕ ತರಬೇತಿಗಾಗಿ ಧಾರವಾಡದಲ್ಲಿ ಗಂಡು ಮಕ್ಕಳ ಟ್ರೇನಿಂಗ ಕಾಲೇಜ ಸೇರಿದರು. ಸಪ್ಟೆಂಬರ್ ೧೫, ೧೯೧೫ ರಂದು ವೃರ್ನ್ಯಾಕ್ಯೂಲರ್ ಟ್ರೇನಿಂಗ್ ಕಾಲೇಜ ಸರ್ಟಿಫಿಕೇಟ್ ಪರೀಕ್ಷೆಯಲ್ಲಿ ಪ್ರಥಮ ವರ್ಗದಲ್ಲಿ ಉತ್ತೀರ್ಣರಾದರು. ಆಗಿನ ಸಮಯದಲ್ಲಿ ಅವರ ಸಮಕಾಲೀನ ಸಾಹಿತಿ-ಮಿತ್ರರೆಂದರೆ, ಗಳಗನಾಥ, ಶಂಬಾ ಜೋಶಿ, ವೆಂಕಟರಂಗೋ ಕಟ್ಟಿ, ಮ.ಪ್ರ.ಪೂಜಾರ ಮುಂತಾದವರು.

**ಗೃಹಸ್ಥಾಶ್ರಮ :**

ಮೊದಲಿನಿಂದಲೂ ಆಧ್ಯಾತ್ಮ ಪ್ರವೃತ್ತಿಯ ತಂದೆಯವರಿಗೆ ಸಂಸಾರ, ಹಣ, ದುಡ್ಡು, ಕೀರ್ತಿ ಎಂದರೆ ತ್ಯಾಜ್ಯ. ಆದರೆ ಸಿದ್ಧಾರೂಢರ ಆಜ್ಞೆಯಂತೆ ಗೃಹಸ್ಥಾಶ್ರಮ ಸ್ವೀಕರಿಸಿದರು, ಸುಮಾರು ೧೯೨೭ ಇಸ್ವಿಯಲ್ಲಿ ಗಣಿ ದೇಸಾಯಿಯವರ ಮನೆತನದ ಕನ್ಯೆ-ಕಲ್ಯಾಣವ್ವ ಅವರೊಡನೆ ವಿವಾಹ ನೆರವೇರಿತು. ಗಣಿ ದೇಸಾಯಿ ಮನೆತನದ ಹಿರಿಯರಾದ ಶ್ರೀಮಂತ ಕಾಶೀರಾವ್ ದೇಸಾಯಿಯವರು ದೊಡ್ಡ ಜಮೀನದಾರರು. ಬಹು ಪ್ರಸಿದ್ಧ ನಾಯಕರು. ಸ್ವತಃ ಅವರೇ ಈ ಮದುವೆಯನ್ನು ವಿಜೃಂಭಣೆಯಿಂದ ನೆರವೇರಿಸಿದರು. ಗಣಿ ಮುಂದೆ ಇರುವ ಗ್ರಾಮ ಸಿದ್ಧನಾಥ, ಇದು ನಮ್ಮ ತಾಯಿಯ ತವರು ಮನೆ. ಅವಳಿಗೆ ಒಬ್ಬ ಧೀರ ಅಣ್ಣ ರಾಮಸ್ವಾಮಿ. ಕಾಶೀರಾಯ ದೇಸಾಯಿಯವರ ಕಡುವೈರಿಯಾಗಿದ್ದ ಲಾಲ್ಯಾನನ್ನು ತುಂಡರಿಸಿದ ಅವನನ್ನು ಬ್ರಿಟಿಶ ಸರಕಾರ ಕಾರಾಗೃಹಕ್ಕೆ ಅಟ್ಟಿತು. ಇನ್‌ಫ್ಲುಯೆಂಜ ರೋಗದಿಂದ ಅವನು ಜೇಲಿನಲ್ಲಿ ತೀರಿಹೋದನು. ಇದೊಂದು ದುರಂತ ಘಟನೆ, ನನ್ನ ಸೋದರ ಮಾವನದು.

ಲಗ್ನವಾದ ಎರಡು ವರ್ಷಗಳ ನಂತರ ನನ್ನ ಅಕ್ಕ ಶಾರದಾ ೧-೩-೧೯೨೯ರಂದು ಸಾಸನೂರಲ್ಲಿ ಜನಿಸಿದಳು. ನಾನು ೧೩-೧-೧೯೩೧ರಂದು ಕಲಕೇರಿ ಗ್ರಾಮದಲ್ಲಿ ಜನಿಸಿದೆನು. ನನ್ನ ತಾಯಿ ಕಲ್ಯಾಣವ್ವ ಕ್ಷಯರೋಗ ಉಲ್ಬಣಿಸಿ ೧-೧-೧೯೩೩ ಸಾಸನೂರ ಗ್ರಾಮದಲ್ಲಿ ಸ್ವರ್ಗವಾಸಿಯಾದರು. ನಮ್ಮ ಅಕ್ಕ ಶಾರದಾ ಮತ್ತು ನಾನು ಪರದೇಶಿಗಳಾದೆವು. ನನ್ನ ಆಯಿ ಸಾಹೇಬವ್ವ ಮತ್ತು ಸೋದರತ್ತೆ ಬಾಯಮ್ಮ ಅವರು ನಮ್ಮಿಬ್ಬರನ್ನು ಅತ್ಯಂತ ಪ್ರೀತಿಯಿಂದ ಸಲುಹಿದರು. ತಂದೆಯವರ ಮಿತ್ರರು ಎರಡನೆಯ ಮದುವೆಯಾಗಲು ಉಪದೇಶಿಸಿದರು. ಆದರೆ ಅವರ ಉತ್ತರ' ನನ್ನ ತಮ್ಮಂದಿರ ವಿದ್ಯಾಭ್ಯಾಸ ನನಗೆ ಮಹತ್ತ್ವದ್ದು, ಅವರ ಉಜ್ವಲ ಭವಿಷ್ಯ ನಿರ್ಮಿಸುವುದನ್ನು ಬಿಟ್ಟು ಸಂಸಾರದಲ್ಲಿ ಬೀಳಲಾರೆ' ಎಂದು ಹೇಳಿದರಂತೆ. ತಮ್ಮ ಮೂವರು ತಮ್ಮಂದಿರಾದ ಪ್ರೊ. ಅಯ್ಯಪ್ಪ, ಡಾ. ಹಣಮಂತರಾಯ ಮತ್ತು ಪ್ರೊ. ಭೀಮಸೇನ ಅವರೆಲ್ಲರ ಸರ್ವತೋಮುಖ ಅಭಿವೃದ್ಧಿ ಮತ್ತು ಉಜ್ವಲ ಭವಿಷ್ಯಕ್ಕಾಗಿ ತಮ್ಮದೆಲ್ಲವನ್ನೂ ಧಾರೆಯೆರೆದರು. ಆಗಿನ ಕಾಲದಲ್ಲಿ ಅವರು ಕೇವಲ ಒಂದು ಜೋಡು ಖಾದಿ ದೋತರ, ಎರಡು ಖಾದಿ ಜುಬ್ಬಾ ಮತ್ತು ಖಾದಿ ಪಟಕವನ್ನು ಇಡೀ ಒಂದು ವರ್ಷದ ವರೆಗೂ ಧರಿಸುತ್ತಿದ್ದರಂತೆ. ಬಂಧು ಬಳಗದವರಿಗಾಗಿ ಅವರು ಮಾಡಿದ ನಿಸ್ವಾರ್ಥಸೇವೆ ದೇವರ ಪುಸ್ತಕದಲ್ಲಿ ನಮೂದಿಸಲಾಗಿದೆ.

**ಹಲವು ಭಾಷೆಗಳ ಅಭ್ಯಾಸ, ಅಗಾಧ ಪಾಂಡಿತ್ಯ :**

ತಂದೆಯವರು ಕನ್ನಡ ಮಾಧ್ಯಮದ ಮೂಲಕ ಪ್ರಾಥಮಿಕ ಶಾಲೆ ವಿದ್ಯಾಭ್ಯಾಸ ಮುಗಿಸಿ, ಪ್ರಾಥಮಿಕ ಶಾಲಾ ಶಿಕ್ಷಕರಾದರು. ಹಲವಾರು ಭಾಷೆಗಳನ್ನು ಕಲಿಯಬೇಕೆಂಬ ಉತ್ಕಟ ಇಚ್ಛೆ, ಹಂಬಲ. ಅವರು ಮರಾಠಿ ಮೋಡಿ ಲಿಪಿಯನ್ನು ಚೆನ್ನಾಗಿ ಬಲ್ಲವರಾಗಿದ್ದರು. ಹಿಂದಿ, ಮರಾಠಿ, ಬಂಗಾಲಿ, ಸಂಸ್ಕೃತ ಮತ್ತು ಇಂಗ್ಲಿಷ ಭಾಷೆಗಳನ್ನು ಸ್ವಂತ ಪ್ರಯತ್ನದಿಂದ ಅಭ್ಯಸಿಸಿ ಪಾರಂಗತರಾದರು. ನಮ್ಮೂರು ಸಾಸನೂರು ಯಾವದೇ ಸಂಪರ್ಕ,

ರಸ್ತೆ, ಅಂಚೆಗಳಿಂದ ನಿರಾಕರಿಸಲ್ಪಟ್ಟ ಊರು. ವಾರಕ್ಕೊಮ್ಮೆ ಹಂಚಲಿ ಗ್ರಾಮದಿಂದ ಪೋಸ್ಟಮನ್ ಟಪಾಲು ತೆಗೆದುಕೊಂಡು ಬರುವನು. ಅಪ್ಪಾರಾವ ಗಾಡಗೀಳ ಅನ್ನುವವರು ಹಂಚಲಿ ಗ್ರಾಮದ ಪೋಸ್ಟಮಾಸ್ತರ. ಅವರು ತಂದೆಯವರ ಆತ್ಮೀಯ ಮಿತ್ರ. ಅವರ ಮುಖಾಂತರ ಮುಂಬಯಿ, ಪುಣೆ ನಗರಗಳಿಂದ ಮರಾಠಿ ಉದ್ಗ್ರಂಥಗಳನ್ನು ತರಿಸಿ ಅಭ್ಯಸಿಸುವರು. ಕಲಕತ್ತಾ ನಗರದಿಂದ ತಮಗೆ ಬೇಕಾದ ಬಂಗಾಲಿ ಗ್ರಂಥಗಳನ್ನು ತರಿಸಿ ಓದಿ ಚಿಂತನ ಮಾಡುವರು. ಗೋರಖಪುರ, ಲಖನೌ ಮತ್ತು ಅಲಹಾಬಾದ ನಗರಗಳಿಂದ ಹಿಂದಿ ಗ್ರಂಥ ಮತ್ತು ಮಾಸಪತ್ರಿಕೆಗಳನ್ನು ತರಿಸುತ್ತಿದ್ದರು. ಗೋರಖಪುರದಿಂದ ಪ್ರಕಟಿಸಲ್ಪಟ್ಟ 'ಕಲ್ಯಾಣ' ಹಿಂದಿ ಮಾಸಪತ್ರಿಕೆಗೆ ಸುಮಾರು ೫೦ ವರ್ಷಗಳ ವರೆಗೆ ಚಂದಾದಾರರಾಗಿದ್ದರು. ವಾರ್ಷಿಕ ಸಂಚಿಕೆಗಳನ್ನು ಬಾಯಿಂಡ್ ಮಾಡಿಸಿ ಊರಿನ ಮನೆ ವಾಚನಾಲಯದಲ್ಲಿ ಇಟ್ಟಿದ್ದರು. ಮುಂದೆ ಎಲ್ಲ ಸಂಚಿಕೆಗಳನ್ನು ವಿಜಾಪುರದಲ್ಲಿಯ ಸಾರ್ವಜನಿಕ ವಾಚನಾಲಯ, ವಿಜಯ ಕಾಲೇಜ, ಬೀದರ ನಗರದಲ್ಲಿಯ ಬಿ.ವ್ಹಿ. ಭೂಮರೆಡ್ಡಿ ಕಾಲೇಜಿಗೆ ನೀಡಿದರು. ಇದಲ್ಲದೆ ಅವರು ನಮ್ಮ ಮನೆಯಲ್ಲಿದ್ದ ಅಸಂಖ್ಯಾತ ಹಿಂದಿ, ಮರಾಠಿ, ಬಂಗಾಲಿ, ಕನ್ನಡ ಶ್ರೇಷ್ಠಕೃತಿಗಳನ್ನೂ ಈ ವಾಚಲನಾಯಗಳಿಗೆ ಕಾಣಿಕೆಯಾಗಿ ನೀಡಿದರು.

ಮರಾಠಿಸಾಹಿತ್ಯ ಕನ್ನಡ ಸಾಹಿತ್ಯದ ಮೇಲೆ ಅಂದು ಬಹಳಷ್ಟು ಪ್ರಭಾವ ಬೀರಿತ್ತು. ಯಾಕೆಂದರೆ ಉತ್ತರ ಕರ್ನಾಟಕದ ಜಿಲ್ಲೆಗಳಾದ ವಿಜಾಪುರ, ಬೆಳಗಾವಿ, ಧಾರವಾಡ ಮತ್ತು ಕಾರವಾರ ಇವು ಅಗಿನ ಅವಿಭಕ್ತ ಮುಂಬಯಿ ಪ್ರಾಂತಕ್ಕೆ ಸೇರಿದ್ದವು. ಹೀಗಾಗಿ ಕನ್ನಡ ಮತ್ತು ಮರಾಠಿ ಜೊತೆಯಾಗಿ ಬೆಳೆದಿದ್ದವು. ಸ್ವಾತಂತ್ರ್ಯ ನಂತರ ಮತ್ತು ಕರ್ನಾಟಕ ರಾಜ್ಯ ಉದಯವಾದನಂತರ ಮರಾಠಿ ಪ್ರಭಾವ ಬಹಳಷ್ಟು ಕಡಿಮೆಯಾಯಿತು. ಮರಾಠಿ ಭಾಷೆಯ ಶ್ರೇಷ್ಠಸಾಹಿತಿಗಳ ಕೃತಿಗಳೆಲ್ಲ ನಮ್ಮ ಮನೆಯ ವಾಚನಾಲಯದಲ್ಲಿದ್ದವು. ಪಂಡಿತ ಸಾತವೇಳಕರ, ಬಾಲಗಂಗಾಧರ ಟಿಳಕ, ಚಿಪಳೂಣಕರ, ಸಾನೆ ಗುರುಜಿ, ಸಂತ ಜ್ಞಾನೇಶ್ವರ ಅವರ ಅಮರ ಸಾಹಿತ್ಯಕೃತಿಗಳನ್ನೆಲ್ಲ ನಮ್ಮ ತಂದೆ ಓದಿ ವಿದ್ಯಾರ್ಥಿಗಳಿಗೆ ಹೇಳುತ್ತಿದ್ದರು. ಟಿಳಕರ 'ಕೇಸರಿ' ವಾರಪತ್ರಿಕೆಯನ್ನು ಪುಣೆ ನಗರದಿಂದ ತರಿಸುತ್ತಿದ್ದರು. ಮರಾಠಿಭಾಷೆಯ ಮೇಲೆ ಅಗಾಧವಾದ ಪ್ರಭುತ್ವವಿದ್ದು, ಹಲವಾರು ಮರಾಠಿ ಲೇಖನಗಳನ್ನು ಕನ್ನಡ ಭಾಷೆಗೆ ಅನುವಾದಿಸಿದ್ದರು. ಅವರಿಗೆ ಮರಾಠಿ ಮಾತನಾಡಲು ಬರುತ್ತಿದ್ದಿಲ್ಲ. ಯಾಕೆಂದರೆ ಅವರು ಕಲಿತುದು ಆಡು ಭಾಷೆಯಲ್ಲ, ಪುಸ್ತಕೀಯ ಭಾಷೆ. ಆಡಳಿತ ಭಾಷೆ ಕನ್ನಡವಾಗಿತ್ತು.

ಬಂಗಾಲಿಭಾಷೆಯನ್ನು ಸ್ವಪ್ರಯತ್ನದಿಂದ ಕಲಿತು ಪ್ರಭುತ್ವ ಸಂಪಾದಿಸಿದ್ದರು. ಬಂಗಾಲಿ ಮಾತನಾಡಲು ಬರುತ್ತಿದ್ದಿಲ್ಲ. ಯಾಕೆಂದರೆ ನಮ್ಮ ಭಾಗದಲ್ಲಿ ಯಾರೊಬ್ಬರೂ ಬಂಗಾಲಿಭಾಷೆ ಮಾತನಾಡುತ್ತಿದ್ದಿಲ್ಲ. ಬಂಕಿಮಚಂದ್ರ ಚಟರ್ಜಿ, ರವೀಂದ್ರನಾಥ ಟಾಗೋರ, ಅರವಿಂದ ಘೋಷ, ಸ್ವಾಮಿ ವಿವೇಕಾನಂದ ಅವರ ಸಮಗ್ರ ಸಾಹಿತ್ಯಕೃತಿಗಳನ್ನು ನಮ್ಮ ಮನೆಯ ವಾಚನಾಲಯದಲ್ಲಿ ಇಟ್ಟಿದ್ದರು. ಬಂಗಾಲಿ ವಾರ ಪತ್ರಿಕೆ ಮತ್ತು ಮಾಸ ಪತ್ರಿಕೆಗಳನ್ನೂ ತರಿಸುತ್ತಿದ್ದರು.

**ಸಾಹಿತ್ಯಕೃಷಿ :**

ಈ ಸಾಹಿತ್ಯಾಸಕ್ತಿ ಕಾರಣವಾಗಿ ಮೊದಮೊದಲು ಆಧ್ಯಾತ್ಮಿಕ, ಸಾಹಿತ್ಯಿಕ, ತಾತ್ವಿಕ ಲೇಖನಗಳನ್ನು ಕನ್ನಡಕ್ಕೆ ಭಾಷಾಂತರಿಸಿ ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿಯವರ "ಶಿವಾನುಭವ" ಮಾಸಪತ್ರಿಕೆ, ಕರ್ನಾಟಕದ ಗಾಂಧಿ ಹರ್ಡೇಕರ ಮಂಜಪ್ಪನವರ "ಶರಣ ಸಂದೇಶ" ಆಲೂರ ವೆಂಕಟರಾಯರ "ಜಯಕರ್ನಾಟಕ" ಮತ್ತು "ಜಯಂತಿ" ಪತ್ರಿಕೆಗಳಲ್ಲಿ ಪ್ರಕಟಿಸಿದರು. ಕೆಲವೊಮ್ಮೆ ಈ ಅನುವಾದಗಳಿಗೆ ಹಿಂದಿ ಮತ್ತು ಮರಾಠಿ ಭಾಷೆಗಳಲ್ಲಿಯ ಕೃತಿಗಳನ್ನು ಅವಲಂಬಿಸುತ್ತಿದ್ದರು. ಅನುವಾದಿತ ಲೇಖನಗಳು ಹೀಗಿವೆ:

| ಲೇಖನಗಳು | ಶಿವಾನುಭವ ಪತ್ರಿಕೆ |
|---|---|
| ೧. ಉಪನಿಷತ್ತುಗಳು | ಸಂಪುಟ ೭, ಸಂಚಿಕೆ ೪ |
| ೨. ಕರ್ಮಯೋಗ | ಸಂಪುಟ ೫ ಸಂಚಿಕೆ ೧೧-೧೨ |
| ೩. ಜ್ಞಾನಯೋಗ | ಸಂಪುಟ ೩ ಸಂಚಿಕೆ ೧೨ |
| ೪. ನಿನ್ನನ್ನು ನೀನು ಅರಿ | ಸಂಪುಟ ೫ ಸಂಚಿಕೆ ೫ |
| ೫. ಬ್ರಹ್ಮಸೂತ್ರಗಳು | ಸಂಪುಟ ೭ ಸಂಚಿಕೆ ೩ |
| ೬. ರಾಜಯೋಗ ಮತ್ತು ಅದರ ಎಂಟು ಅಂಗಗಳು | ಸಂಪುಟ ೫ ಸಂಚಿಕೆ ೯-೧೦ |
| ೭. ಹಠಯೋಗ | ಸಂಪುಟ ೪ ಸಂಚಿಕೆ ೯ |

| ಲೇಖನಗಳು | ಜಯಕರ್ನಾಟಕ ಪತ್ರಿಕೆ |
|---|---|
| ೧. ರುದ್ರನ ವೈದಿಕ ಸ್ವರೂಪ | ಸಂಪುಟ೨೯ ಸಂಚಿಕೆ ೪ |
| ೨. ಶಿವೋಪಾಸನೆಯ ಪ್ರಾಚೀನತೆ | ಸಂಪುಟ ೨೯ ಸಂಚಿಕೆ ೨ |

ತಂದೆಯವರು ಶ್ರೇಷ್ಠ ಜನಪದ ಸಾಹಿತಿಗಳಾಗಿದ್ದರು. ದೊಡ್ಡ ಗಾತ್ರದ ಜಾನಪದ ಕೃತಿಗಳನ್ನು ಸಂಗ್ರಹಿಸಿದ್ದರು. ಇವುಗಳಲ್ಲಿ ಕೆಲವು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದ "ಜೀವನ ಜೋಕಾಲಿ" ಸಂಪುಟಗಳಲ್ಲಿ ಪ್ರಕಟವಾಗಿವೆ. ಅನೇಕ ಜನಪದ ಸಾಹಿತ್ಯದ ಅಪ್ರಕಟಿತ ಕೃತಿಗಳನ್ನು ನಮ್ಮ ತಂದೆಯವರು ತಮ್ಮ ಶಿಷ್ಯರಿಗೆ ಓದಲು ಕೊಟ್ಟಿದ್ದರು. ಆದರೆ ಅವರು ತಿರುಗಿ ಕೊಡಲಿಲ್ಲ. ಚೆನ್ನಮ್ಮನ ಹಾಡು ಮತ್ತು ಗುಣದಮ್ಮನ ಹಾಡು (೧೦೩೮ ನುಡಿ) ಕೃತಿಗಳನ್ನು ಮಾತ್ರ ಅವರ ಮರಣೋತ್ತರ ಕಾಲದಲ್ಲಿ ಪ್ರೊ. ಸುಶೀಲಾ ಪಟ್ಟಣಶೆಟ್ಟಿ ಅವರು ಸಮಾಜ ಪುಸ್ತಕದ ಮೂಲಕ ಪ್ರಕಟಿಸಿದ್ದಾರೆ. ಸಧ್ಯ ಅವರ ಸಂಗ್ರಹದ ಈ ಕೃತಿಗಳು ಪ್ರಕಟಗೊಳ್ಳಬೇಕಾಗಿದೆ.

೧. ಅವ್ವವ್ವನ ಪದ - (ಜನಪದ ಕಾವ್ಯ)
೨. ಭಜನೆಗಳ ಸಂಗ್ರಹ
೩. ಋಗ್ವೇದೋಕ್ತ ಆರ್ಯನಿವಾಸದ ಭೌಗೋಲಿಕ ವಿವರಣ
(ಮೂಲ ಕೃತಿ ಡಾ. ಅವಿನಾಶ ಚಂದ್ರಹಾಸ, ಎಂ.ಎ., ಪಿಎಚ್.ಡಿ.)
೪. ನಾಥಪಂಥ
೫. ಜೆನ್ ಧರ್ಮ
೬. ಶಿವಲಿಂಗ ರಹಸ್ಯ (ಲಿಂಗಾರ್ಥ)
೭. ಶಿವ-ಶಕ್ತಿ ತತ್ವ
೮. ನಾಥ ಸಂಪ್ರದಾಯದಲ್ಲಿ ಮಹಾಸಿದ್ಧ: ಶ್ರೀ ಸಿದ್ಧ ಮತ್ಸೇಂದ್ರನಾಥಜೀ
೯. ಪರಲೋಕ ವಿದ್ಯೆ
೧೦. ನಾಥಯೋಗ-ಸಂಪ್ರದಾಯ
೧೧. ನಾಥಯೋಗ
೧೨. ಕವಿ ರವೀಂದ್ರನಾಥ ಟಾಗೋರ (ಮೂಲ ಬಂಗಾಲಿ-ಅನುವಾದಿತ ಲೇಖನ)

೧೩. ವ್ರಜ ಕೃಷ್ಣನು ಯಾವನು? ಮತ್ತು ಎಲ್ಲಿ ಇದ್ದನು?

೧೪. ಆಚಾರ್ಯ ಪ್ರಫುಲ್‌ಚಂದ್ರ

೧೫. ಶಿವಾದ್ವೈತ ವಾದ

೧೬. ಪರಲೋಕ ವಿದ್ಯೆಯ ಸ್ವರೂಪ ಮತ್ತು ಸಾಧನೆ

ಇನ್ನೂ ಅರ್ಧಮರ್ಧ ಬರೆದ ಲೇಖನಗಳಿವೆ. ಅವುಗಳ ತಲೆಬರಹಗಳು ಬರೆದಿಲ್ಲ. ಮೊದಲಿನ ಪುಟಗಳು ಹರಿದು ಹೋಗಿವೆ. ಮೇಲ್ಕಾಣಿಸಿದ ಲೇಖನಗಳನ್ನು ಪರಿಷ್ಕರಿಸಿ, ಸಂಪಾದಿಸಿ, ಪ್ರಕಟನೆ ಮಾಡುವುದು ಅವಶ್ಯವಿದೆ.

ಹಿಂದಿ ಸಾಹಿತ್ಯದ ಒಳ್ಳೆಯ ಕೃತಿಗಳನ್ನು ಸಂಗ್ರಹಿಸುತ್ತಿದ್ದರು. ಪ್ರಾಮುಖ್ಯವಾಗಿ ಮುನಸಿ ಪ್ರೇಮಚಂದ್ರ, ರಾಹುಲ ಸಾಂಕ್ರತ್ಯಾಯನ, ರಾಮನರೇಶ ತ್ರಿಪಾಠಿ, ಮಹಾದೇವಿ ವರ್ಮ, ಚಾಂದ ಬರಾಯಿ(ವಾಲ್ಮಿಕಿ ರಾಮಾಯಣ, ಮಹಾಭಾರತ) ಅವರ ಕವಿತೆ, ಕಥೆ ಕಾದಂಬರಿಗಳೂ ಅವರ ಸಂಗ್ರಹದಲ್ಲಿದ್ದವು. ಅವರು ಆಧ್ಯಾತ್ಮ ಗ್ರಂಥಗಳನ್ನು ವಿಶೇಷವಾಗಿ ಓದುತ್ತಲಿದ್ದರು. ಯೋಗವಾಶಿಷ್ಟವಂತೂ ಅವರಿಗೆ ಯಾವಾಗಲೂ ಬೆಳಕನ್ನೀಡುವ ಗ್ರಂಥ.

**ಹಳಗನ್ನಡದ ಅಭೂತಪೂರ್ವ ವ್ಯಾಸಂಗ :**

ಹಳಗನ್ನಡವನ್ನು ಆಳವಾಗಿ ಅಭ್ಯಸಿಸುತ್ತಿದ್ದರು. ಛಂದಸ್ಸು, ವ್ಯಾಕರಣ ಮತ್ತು ಭಾಷಾಶಾಸ್ತ್ರವನ್ನು ಚೆನ್ನಾಗಿ ಬಲ್ಲವರಾಗಿದ್ದರು. ಕೇಶಿರಾಜನ 'ಶಬ್ದಮಣಿ ದರ್ಪಣ' ಗ್ರಂಥ ಕರತಲಾಮಲಕವಾಗಿತ್ತು. ನನ್ನ ಕಾಕಾ ಬಿ.ಟಿ. ಯವರು ಬಿ.ಎ. ಮತ್ತು ಎಂ.ಎ. ವರ್ಗಗಳ ಅಭ್ಯಾಸ ಮಾಡುವಾಗ ಅವರಿಗೆ ಗೋಚರಿಸಿದ ಸಮಸ್ಯೆಗಳಿಗೆ ತಂದೆಯವರಿಂದ ಪರಿಹಾರ ತೆಗೆದುಕೊಳ್ಳುತ್ತಿದ್ದರು. ವ್ಯಾಕರಣ ಮತ್ತು ಛಂದಸ್ಸುಗಳ ನಿಯಮಗಳನ್ನು ಅರ್ಥವತ್ತಾಗಿ ಉದಾಹರಣೆಗಳೊಂದಿಗೆ ಕಲಿಸುತ್ತಿದ್ದರು. ನಾನು ಮುಲ್ಕಿ ಪರೀಕ್ಷೆಗೆ ಓದುವಾಗ ಭಾಷಾವಿಷಯವನ್ನೂ ಅವರೇ ಕಲಿಸುತ್ತಿದ್ದರು. ೧೯೩೯-೪೦ ರ ಸುಮಾರಿಗೆ ಕೊಲ್ಹಾಪುರ ರಾಜಾರಾಮ ಕಾಲೇಜದಲ್ಲಿ ಬಿ.ಎ. ವರ್ಗದಲ್ಲಿ ಓದುತ್ತಿದ್ದ ಕನ್ನಡ ಪ್ರೊಫೆಸರ್ ಹಣಮಂತರಾಯ ಕೆ. ಲಗಳಿ (ಎಚ್.ಕೆ. ಲಗಳಿ) ನಮ್ಮೂರ ಸಮೀಪದ ಹೂವಿನ ಹಿಪ್ಪರಗಿ ಊರಿನವರು. ಬೇಸಗೆಯ ಬಿಡುವಿನಲ್ಲಿ ನಮ್ಮೂರಿಗೆ ಬಂದು ನಮ್ಮ ಮನೆಯಲ್ಲಿ ವಾಸ್ತವ್ಯ ಮಾಡಿ, ಹಳಗನ್ನಡ ಮತ್ತು 'ಶಬ್ದಮಣಿದರ್ಪಣ' ಹೇಳಿಸಿಕೊಳ್ಳುತ್ತಿದ್ದರು. ಅವರ ಗುರು ಶಿಷ್ಯರ ಸಂಬಂಧ ಕೊನೆಯ ವರೆಗೂ ನಮ್ಮೆಲ್ಲರ ಮನಸ್ಸಿನಲ್ಲಿದೆ. ಲಗಳಿಯವರು ಕೊಲ್ಹಾಪುರದ ರಾಜಾರಾಮ ಕಾಲೇಜಿನಲ್ಲಿ ಬಿ.ಎ. ಓದುತ್ತಿದ್ದಾಗ ನಮ್ಮೂರಿಗೆ ಬಂದು ತಂದೆಯವರ ಬಗ್ಗೆ ಕಾಲೇಜ ಮ್ಯಾಗಝಿನ್‌ನದಲ್ಲಿ "ಮನೆಯಲ್ಲಿ ಮಹಾಯೋಗಿ" ಎಂಬ ಲೇಖನ ಬರೆದು ಪ್ರಚುರ ಪಡಿಸಿದರು. ಈ ಲೇಖನದಲ್ಲಿ ತಂದೆಯವರ ವ್ಯಕ್ತಿತ್ವ ಮತ್ತು ನಮ್ಮ ಮನೆತನದ ಬಗ್ಗೆ ಗುಣಾತ್ಮಕ ಅಂಶಗಳನ್ನು ಕುರಿತು ಬರೆದಿದ್ದಾರೆ. ತಂದೆಯವರ ಮಾರ್ಗದರ್ಶನದಲ್ಲಿ ವ್ಯಾಸಂಗ ಮಾಡಿದವರು ಬಹಳಷ್ಟು ಉಚ್ಚಮಟ್ಟದ ಸ್ಥಾನವನ್ನಲಂಕರಿಸಿದ್ದಾರೆ. ಹುಬ್ಬಳ್ಳಿಯ ಪ್ರಸಿದ್ಧ ಸರ್ಜನ್‌ರಾದ ಡಾ. ಬಸಣ್ಣ ಕುಂಟರೆಡ್ಡಿ, ಬಾಗಲಕೋಟೆಯ ಬಸವಂತರಾಯ ಬಳೂರಗಿ, ಸೇಡಂ ಗ್ರಾಮದ ಮಡಿವಾಳಯ್ಯ ಸ್ವಾಮಿಗಳು ಮುಂತಾದವರಲ್ಲದೆ, ನಮ್ಮೂರಿನ ಸಮೀಪದ ಹಿರೂರ, ತಮದಡ್ಡಿ, ತುಂಬಗಿ, ಬಳಗಾನೂರ, ಅಂಬಳೂರ, ಚೆಬನೂರ, ವಡವಡಗಿ, ತಾಳಿಕೋಟಿ, ಕಲಕೇರಿ, ಬಮ್ಮನಳ್ಳಿ, ಯಾಳವಾರ, ಭೈರವಾಡಗಿ ಗ್ರಾಮಗಳ ಅನೇಕ ವಿದ್ಯಾರ್ಥಿಗಳು ನಮ್ಮ ತಂದೆಯವರ ಮಾರ್ಗದರ್ಶನದಲ್ಲಿ ಅಭ್ಯಾಸ ಮಾಡಿ ಹೆಸರುವಾಸಿಯಾಗಿದ್ದಾರೆ.

**ಆದರ್ಶ ಶಿಕ್ಷಕ :**

ಗತಶತಮಾನದ ೨೦, ೩೦, ೪೦ರ ದಶಕಗಳಲ್ಲಿ ನಮ್ಮ ತಂದೆಯವರು ಇಡೀ ವಿಜಾಪುರ ಜಿಲ್ಲೆಯಲ್ಲಿ ಉದ್ದಾಮ ಸಾಹಿತಿ, ಆದರ್ಶ ಶಿಕ್ಷಕರೆಂದು ಹೆಸರುವಾಸಿಯಾಗಿದ್ದರು. ಅವರಿಗೆ ಶಿಕ್ಷಕವೃತ್ತಿಯೆಂದರೆ ಆಧ್ಯಾತ್ಮಿಕ ಅನುಸಂಧಾನ, ವಿದ್ಯಾರ್ಥಿಗಳೆಂದರೆ ಅತಿ ಪ್ರೀತಿ. ನಾನು ಚಿಕ್ಕವನಿದ್ದಾಗ ನಮ್ಮೂರ ಹಿರಿಯರು ಮತ್ತು ಅವರ ಕೈಯಲ್ಲಿ ಕಲಿತವರು ನನ್ನೆದುರು ಹೇಳಿದ ಮಾತುಗಳು ನನ್ನ ಸ್ಮೃತಿ ಪರದೆಯಲ್ಲಿ ಇನ್ನೂ ಸ್ಫುಟವಾಗಿ ಮೂಡಿವೆ: "ಮಡಿವಾಳಪ್ಪಮಾಸ್ತರ ಅವರು ಮುಂಜಾನೆ ಇಡೀ ಊರು ತುಂಬಾ ತಿರುಗಾಡಿ ಚಿಕ್ಕಮಕ್ಕಳನ್ನು ಹಾಸಿಗೆಯಿಂದ ಎಬ್ಬಿಸಿ, ಅವರ ತಂದೆ ತಾಯಂದಿರಿಂದ ಮಕ್ಕಳ ಮುಖತೊಳಿಸಿ, ಅವರನ್ನು ಶಾಲೆಗೆ ಕರೆತಂದವರು. ಅವರ ನೆಹ್ರೂ ಶರ್ಟಿನ ಒಂದು ಕಿಸೆಯಲ್ಲಿ ಕಲ್ಲು ಸಕ್ಕರಿ ತುಣುಕುಗಳು, ಮತ್ತೊಂದು ಕಿಸೆಯಲ್ಲಿ ಅದ್ದೇಲಿ ದುಡ್ಡುಗಳು (ನಾಣ್ಯಗಳು). ಒಬ್ಬೊಬ್ಬ ಚಿಕ್ಕಮಗುವಿಗೆ ಒಂದು ಕಲ್ಲುಸಕ್ಕರಿ ತುಣುಕು, ಒಂದೊಂದು ದುಡ್ಡು ಕೊಟ್ಟು ಶಾಲೆಗೆ ಕರೆದು ತರುತ್ತಿದ್ದರು. "ಈ ರೀತಿಯಾಗಿ ಮಕ್ಕಳಲ್ಲಿ ವಿದ್ಯಾಭಿರುಚಿ ಅಂಕುರಿಸುವಂತೆ ಮಾಡುತ್ತಿದ್ದರು.

ಎಲ್ಲ ವಿದ್ಯಾರ್ಥಿವೃಂದವನ್ನು ಪಿತೃವಾತ್ಸಲ್ಯದಿಂದ ನೋಡುವವರು. ಅವರ ಸಮಸ್ಯೆಗಳನ್ನು ಪರಿಹರಿಸುತ್ತಿದ್ದರು. ಅವರ ವಿದ್ಯಾರ್ಥಿಗಳು ಮುಲ್ಕಿಪರೀಕ್ಷೆ ಪಾಸಾದ ನಂತರ, ವಿಜಾಪುರಕ್ಕೆ ಹೋಗಿ ಶಿಕ್ಷಣಾಧಿಕಾರಿಗಳನ್ನು ಭೆಟ್ಟಿಯಾಗಿ, ಶಿಫಾರಸು ಮಾಡಿ, ಅವರಿಗೆ ಶಿಕ್ಷಕ ನೌಕರಿ ಕೊಡಿಸುತ್ತಿದ್ದರು.

ನಮ್ಮೂರಲ್ಲಿ ಆಗ ಮುಲ್ಕಿ ಪರೀಕ್ಷೆಯ ವರ್ಗಗಳು ನಡೆಯುತ್ತಿದ್ದವು. ನಮ್ಮ ತಂದೆಯವರೇ ಎಲ್ಲ ವಿಷಯಗಳನ್ನು ಕಲಿಸುತ್ತಿದ್ದರು. ೧೯೪೩ರಲ್ಲಿ ಬಸವಂತರಾಯ ಬಳೂರಗಿ ಎಂಬ ಆದರ್ಶ ಶಿಕ್ಷಕನನ್ನು ಭೈರವಾಡಗಿ ಗ್ರಾಮದಿಂದ ಸಾಸನೂರ ಶಾಲೆಗೆ ವರ್ಗಮಾಡಿಸಿಕೊಂಡು ಬಂದರು. ಯಾಕೆಂದರೆ ಈ ಬಸವಂತರಾಯ ನಮ್ಮ ತಂದೆಯವರ ಮಾರ್ಗದರ್ಶನದಲ್ಲಿ ಅಭ್ಯಾಸಮಾಡಿ, ಮುಲ್ಕಿಪರೀಕ್ಷೆ ಪಾಸಾಗಿ ಶಿಕ್ಷಕರಾಗಿದ್ದರು. ಅವರೊಬ್ಬ ಉತ್ತಮ ಶಿಕ್ಷಕರು. ಅವರ ಮಾರ್ಗದರ್ಶನದಲ್ಲಿ ಅಭ್ಯಾಸ ಮಾಡಿದ ಎಲ್ಲ ವಿದ್ಯಾರ್ಥಿಗಳು ಉತ್ತಮ ಗುಣಗಳನ್ನು ಪಡೆದು ಶಿಕ್ಷಕರಾಗಿದ್ದರು. ಆ ಸಮಯದಲ್ಲಿ ಊರಲ್ಲಿ ನಮಗೆ ಎರಡು ಸ್ವಂತ ಮನೆಗಳಿದ್ದವು. ಒಂದು ಕುಟುಂಬ ಪರಿವಾರದ ಉಟೋಪಚಾರ ಮತ್ತು ಶಯನಕ್ಕಾಗಿ. ಇನ್ನೊಂದು ಮನೆಯನ್ನು ತಂದೆಯವರು ಖರೀದಿಸಿ ಮತ್ತೆ ಮೇಲಂತಸ್ತನ್ನು ಕಟ್ಟಿಸಿದ್ದರು. ಅಲ್ಲಿ ಕೇವಲ ಅವರ ಅಭ್ಯಾಸ ಮತ್ತು ಲಾಯಬ್ರರಿ ಪುಸ್ತಕಗಳ ಕಪಾಟುಗಳಿದ್ದವು. ಮುಲ್ಕಿ ಪರೀಕ್ಷೆಗೆ ಅಭ್ಯಾಸ ಮಾಡುವ ಕನಿಷ್ಠ ೨೦-೨೫ ವಿದ್ಯಾರ್ಥಿಗಳ ವಾಸ್ತವ್ಯ ಮತ್ತು ಅವರ ಅಭ್ಯಾಸಕ್ಕಾಗಿ ಅಲ್ಲಿ ಎರಡು ದೊಡ್ಡ ಕೋಣೆಗಳನ್ನು ಮೀಸಲಿಟ್ಟಿದ್ದರು. ವಿದ್ಯಾರ್ಥಿಗಳು ತಮ್ಮ ತಮ್ಮ ಊರುಗಳಿಂದ ಬುತ್ತಿಯನ್ನು ತರುತ್ತಿದ್ದರು. ಮಳೆಗಾಲದಲ್ಲಿ ಕೆಲವೊಮ್ಮೆ ನಮ್ಮ ಮನೆಯಿಂದಲೇ ಅವರಿಗೆ ಆಹಾರ ಕಳಿಸುತ್ತಿದ್ದರು. ಮೂರು ನಾಲ್ಕು ಬಡ ವಿದ್ಯಾರ್ಥಿಗಳಿಗೆ ವಾರದ ಮನೆ ಹಚ್ಚಿಕೊಟ್ಟಿದ್ದರು. ಅವರು ಓದುವುದಕ್ಕಾಗಿ ೩-೪ ಕಂದೀಲುಗಳನ್ನು ಕೊಟ್ಟಿದ್ದರು. ಅವರನ್ನು ನಸುಕಿನ ನಾಲ್ಕು ಗಂಟೆಗೆ ಎಬ್ಬಿಸಿ, ಭಗವದ್ಗೀತೆ ಮತ್ತು ಅಮರಕೋಶಗಳ ಕಂಠಪಾಠ ಮಾಡಿಸುತ್ತಿದ್ದರು. ೭ ಗಂಟೆಗೆ ಅವರಿಗೆಲ್ಲ ಉಳಿದ ವಿಷಯಗಳನ್ನು ತಿಳಿಸಿ ಹೇಳುತ್ತಿದ್ದರು. ರಾಘವಾಂಕನ "ಹರಿಶ್ಚಂದ್ರ ಕಾವ್ಯ" ಕುವೆಂಪುರವರ "ರಕ್ತಾಕ್ಷಿ", "ಜಲಗಾರ", "ನನ್ನ ಗೋಪಾಲ" ನಾಟಕಗಳನ್ನು ಓದಿ, ಅವುಗಳ ಅರ್ಥ ವಿವರಣೆ ನೀಡುತ್ತಿದ್ದರು. ನುಡಿಗಟ್ಟು, ವ್ಯಾಕರಣ ಮತ್ತು ಛಂದಸ್ಸಿನ ನಿಯಮಗಳನ್ನು ಹೇಳಿ ವಿದ್ಯಾರ್ಥಿಗಳಿಂದಲೇ ಪದ್ಯಗಳಿಗೆ ಛಂದಸ್ಸಿನ ಪ್ರಸ್ತಾರ ಹಾಕಲು, ನಿಬಂಧ ಬರೆಯಲು ಹೇಳುತ್ತಿದ್ದರು. ಎಲ್ಲ ವಿದ್ಯಾರ್ಥಿಗಳನ್ನು ಸಂಜೆಯ ಮುಂದೆ ನಮ್ಮೂರಿಂದಾಚೆ ಇರುವ ಸಿದ್ರಾಮಪ್ಪನ ಬಾವಿಯ ಕಡೆಗೆ ಕರೆದುಕೊಂಡು ಹೋಗಿ, ಅದರ ಸುತ್ತಮುತ್ತಲೂ ಇದ್ದ ಕಸಕಂಟಿಗಳನ್ನು ಸ್ವಚ್ಛಮಾಡಿಸಿ, ಆ ಪರಿಸರಕ್ಕೆ ಹೊಸ ರೂಪವನ್ನು ಕೊಡುತ್ತಿದ್ದರು. ಅಲ್ಲಿ ಕೆಲವು ಪತ್ರಿಗಿಡಗಳಿದ್ದವು. ವರ್ಷಕ್ಕೆ ಒಂದೆರಡು ಸಲ "ಶ್ರೀ ಗುರುಚರಿತ್ರೆ"ಯ ಅಖಂಡ

ಸಪ್ತಾಹವನ್ನು ಪತ್ರಿಗಿಡಗಳಡಿಯಲ್ಲಿ ತಗಡುಗಳನ್ನು ಹಾಕಿ ಪೂಜಾಗೃಹವನ್ನೇರ್ಪಡಿಸಿ, ಹಗಲೂ ರಾತ್ರಿ ನಿರ್ಜನವಾದ ಆ ಸ್ಥಳದಲ್ಲಿ ದತ್ತನ ಅನುಷ್ಠಾನವನ್ನು ಮಾಡುತ್ತಿದ್ದರು. ಕೆಲವು ದಿನಗಳ ನಂತರ ನಮ್ಮ ತಂದೆಯವರು ಆ ಸ್ಥಳದಲ್ಲಿ ಒಂದು ಈಶ್ವರ ಗುಡಿಯನ್ನು ಕಟ್ಟಿಸಬೇಕೆಂಬ ಯೋಜನೆಯನ್ನು ತಯಾರಿಸಿ, ಊರ ಪ್ರಮುಖರಿಗೆ ಈ ವಿಷಯ ತಿಳಿಸಿದಾಗ, ಅವರೆಲ್ಲ ಸಮ್ಮತಿಸಿದರು. ಸಿದ್ರಾಮಯ್ಯ ಸ್ವಾಮಿಗಳು ಈ ಕಾರ್ಯಕ್ಕೆ ಬೆನ್ನೆಲುಬಾಗಿದ್ದರು. ಒಂದು ವರ್ಷದಲ್ಲಿ ಈಶ್ವರಲಿಂಗದ ಗುಡಿ, ಒಂದೆರಡು ಕೋಣೆ ಮತ್ತು ನೆಲಮನೆಗಳು ತಯಾರಾದವು. ಸುತ್ತಲೂ ಹೂವಿನ ಗಿಡಗಳನ್ನು ಹಚ್ಚಿದರು. ಸಿದ್ರಾಮಯ್ಯ ಸ್ವಾಮಿಗಳು ಊರಲ್ಲಿ ತಮ್ಮ ಮನೆಯನ್ನು ಬಿಟ್ಟು ಇಲ್ಲೇ ವಾಸ್ತವ್ಯ ಮಾಡಿದರು. ತಂದೆಯವರು ಸೇವಾ ನಿವೃತ್ತಿಯ ನಂತರ ಇಡೀ ದಿವಸ ಮಂದಿರದಲ್ಲಿರುತ್ತಿದ್ದರು. ಊಟಕ್ಕೆ ಮತ್ತು ಮಲಗಲು ಮನೆಗೆ ಬರುತ್ತಿದ್ದರು. ಅವರ ಪರಿಶ್ರಮದಿಂದ ಒಂದು ಸುಂದರವಾದ ಪರಿಸರ ಗುಡಿಯ ಸುತ್ತಲೂ ನಿರ್ಮಾಣವಾಗಿದೆ. ಸಿದ್ರಾಮಯ್ಯಸ್ವಾಮಿಗಳ ಗದ್ದುಗೆಯನ್ನು ಸಹ ಅಲ್ಲಿಯೇ ನಿರ್ಮಿಸಲಾಗಿದೆ.

**ದೇಶಭಕ್ತಿ:**

ತಂದೆಯವರು ಕಟ್ಟಾ ದೇಶಭಕ್ತರು. ಟಿಳಕ, ಗೋಖಲೆ, ಗಾಂಧೀಜಿ, ಅರವಿಂದ ಘೋಷ, ಸ್ವಾಮಿ ವಿವೇಕಾನಂದ, ರಾಮಕೃಷ್ಣ ಪರಮಹಂಸ, ಬಂಕಿಮಚಂದ್ರ ಚಟರ್ಜಿ ಅವರ ಸಮಗ್ರಕೃತಿಗಳನ್ನು ಅಭ್ಯಾಸಮಾಡಿದುದರಿಂದ ಸ್ವಾತಂತ್ರ್ಯದ ಕಿಚ್ಚು ಅವರಲ್ಲಿ ಉದ್ದೀಪನವಾಯಿತು. ಸಂಜೆಯ ಮುಂದೆ ಊರ ಹಿರಿಯರನ್ನು ಕೂಡಿಸಿಕೊಂಡು ಅವರಿಗೆ ಸ್ವಾತಂತ್ರ್ಯ ಚಳುವಳಿಯ ಬಗ್ಗೆ ಸವಿಸ್ತಾರ ಮಾಹಿತಿ ಕೊಡುತ್ತಿದ್ದರು. ಸ್ವಾತಂತ್ರ್ಯದ ಬಗ್ಗೆ ವಿದ್ಯಾರ್ಥಿಗಳಲ್ಲಿಯೂ ಹುರುಪು, ಹುಮ್ಮಸ್ಸು ತುಂಬಿ, ಮುಂಜಾನೆ ಅವರನ್ನು ಪ್ರಭಾತ ಪೇರಿಗೆ ಕಳಿಸುತ್ತಿದ್ದರು. ಎಲ್ಲ ವಿದ್ಯಾರ್ಥಿಗಳಿಗೆ ಖಾದಿ ಬಟ್ಟೆ ಧರಿಸುವಂತೆ ಪ್ರೇರೇಪಿಸುತ್ತಿದ್ದರು. ತಾವಂತೂ ಅಖಂಡ ಅರವತ್ತು ವರ್ಷಗಳ ವರೆಗೆ ಕೇವಲ ಖಾದಿ ಬಟ್ಟೆಗಳನ್ನು ಧರಿಸುತ್ತಿದ್ದರು.

ತಂದೆಯವರ ಖಾದಿ ಪ್ರಚಾರವನ್ನು ಕಂಡು ಒಬ್ಬ ಸರಕಾರಿ ಇನಸ್ಪೆಕ್ಟರ್ ಖಾದಿ ಪ್ರಚಾರ ಮತ್ತು ಖಾದಿ ಬಟ್ಟೆ ಧರಿಸುವುದನ್ನು ತ್ಯಜಿಸದಿದ್ದರೆ ನೌಕರಿಯಿಂದ ಡಿಸ್‌ಮಿಸ್ ಮಾಡುವೆನೆಂದು ಹೇಳಿದರು. ಆಗ ತಂದೆಯವರು "ನಿಮ್ಮಲ್ಲಿ ಅಂಥ ಅಧಿಕಾರವಿದ್ದರೆ ನನ್ನನ್ನು ಡಿಸ್‌ಮಿಸ್ ಮಾಡಬಹುದು. ಆದರೆ ಖಾದಿ ಬಟ್ಟೆ ಧರಿಸುವದನ್ನು ಮತ್ತು ಖಾದಿ ಪ್ರಚಾರಮಾಡುವುದನ್ನು ಬಿಡುವದಿಲ್ಲ"ವೆಂದು ಖಂಡತುಂಡವಾಗಿ ಉತ್ತರಿಸಿದರು. ತಂದೆಯವರು ಸರಕಾರಿ ನೌಕರರಾಗಿದ್ದರೂ ಅಂತರ್ಯದಲ್ಲಿ ಕಟ್ಟಾ ದೇಶಭಕ್ತರು. ೧೯೨೮ರಲ್ಲಿ ವಿಜಾಪುರಕ್ಕೆ ಗಾಂಧೀಜಿಯವರು ಬಂದಾಗ ಅವರನ್ನು ಕಾಣಲು ಹೋಗಿದ್ದರಂತೆ.

ಭಾರತ ಸ್ವಾತಂತ್ರ್ಯ ಚಳವಳಿ ಪ್ರಚಾರಕ್ಕಾಗಿ ಆಗಿನ ಕಾಂಗ್ರೆಸ್ ಪಕ್ಷದ ಧುರೀಣರಾದ ಬಾಬು ರಾಜೇಂದ್ರ ಪ್ರಸಾದ (ಮುಂದೆ ಅವರು ಭಾರತದ ಪ್ರಥಮ ರಾಷ್ಟ್ರಪತಿ) ಅವರು ನಮ್ಮೂರ ಮಾರ್ಗವಾಗಿ ತಾಳಿಕೋಟಿಯಲ್ಲಿಯ ಕಾರ್ಯಕ್ರಮಕ್ಕೆ ಹೋಗುವವರಿದ್ದರು. ತಂದೆಯವರಿಗೆ ಈ ಸುದ್ದಿ ತಿಳಿದು ನಮ್ಮೂರ ಪ್ರಮುಖರನ್ನು ಮತ್ತು ವಿದ್ಯಾರ್ಥಿಗಳನ್ನು ಕರೆದುಕೊಂಡು, ನಮ್ಮೂರಿನಿಂದ ಎರಡು ಮೈಲು ದೂರ ಇರುವ ಕೆಸರಟ್ಟಿ ಬಸ್ ನಿಲ್ದಾಣದಲ್ಲಿ ಅವರ ಬರುವಿಕೆಗಾಗಿ ಹಾದಿ ಕಾಯುತ್ತಿದ್ದರು. ಆಗ ಹೂಮಾಲೆಗಳು ಹಳ್ಳಿಗಳಲ್ಲಿ ತಯಾರಿಸಲಾಗುತ್ತಿದ್ದಿಲ್ಲ. ಅಲ್ಲಿಯೇ ರಸ್ತೆಯ ಬದಿಗಳಲ್ಲಿ ಸಮೃದ್ಧವಾಗಿ ಬೆಳೆದ ಅವರಿ ಗಿಡದ ಹೂಗಳನ್ನು ಹರಿದು, ಒಂದು ಮಾಲೆಯನ್ನು ತಯಾರಿಸಿದ್ದರು. ರಾಜೇಂದ್ರ ಪ್ರಸಾದರು ತಮ್ಮ ಕಾರನ್ನು ನಿಲ್ಲಿಸಿದಾಗ

ತಂದೆಯವರು ಅವರ ಕೊರಳಿಗೆ ಹೂಮಾಲೆ ಹಾಕಿದಾಗ ನೆರೆದ ಜನರೆಲ್ಲ ಗಾಂಧಿ, ನೆಹರೂ, ರಾಜೇಂದ್ರ ಪ್ರಸಾದರ ಜಯಘೋಷ ಮಾಡಿ ಅವರನ್ನು ಬೀಳ್ಕೊಟ್ಟರು. ಈ ವಿಷಯ ನನಗಿನ್ನೂ ನೆನಪಿದೆ.

೧೯೪೨ರ ಚಲೇಜಾವ ಚಳವಳಿ ಭಾರತದೇಶದ ಪ್ರತಿ ಹಳ್ಳಿಹಳ್ಳಿಗೂ ತಲುಪಿತು. ಗಾಂಧೀಜಿಯವರ "ಕ್ವಿಟ್ ಇಂಡಿಯಾ" ರಣ ಕಹಳೆಯ ನಿನಾದ ನಮ್ಮ ಭಾಗದಲ್ಲಿಯೂ ಪ್ರತಿಧ್ವನಿಸಿತು. ಮುಂಜಾನೆ ಸಮಯದಲ್ಲಿ ವಿದ್ಯಾರ್ಥಿಗಳೆಲ್ಲ ರಾಷ್ಟ್ರಭಕ್ತಿಯ ಹಾಡುಗಳನ್ನು ಹಾಡುತ್ತ ಊರ ತುಂಬೆಲ್ಲ ಪ್ರಭಾತ ಪೇರಿ ಮಾಡಲು ತಂದೆಯವರು ಪ್ರೇರಿಸುತ್ತಿದ್ದರು. ಎಷ್ಟೋ ದೇಶಭಕ್ತರು ಸ್ವಯಂ ಪ್ರೇರಣೆಯಿಂದ 'ಚಲೇಜಾವ' ಚಳವಳಿಯಲ್ಲಿ ಭಾಗವಹಿಸಿ ಬಂಧನಗೊಳಗಾಗುತ್ತಿದ್ದರು. ಆ ಸಮಯದಲ್ಲಿ ನಾನು ೧೦ ವರ್ಷ ಬಾಲಕನಾಗಿದ್ದೆ. ನಮ್ಮೂರಿನ ಕಾಂಗ್ರೆಸ್ ಕಾರ್ಯಕರ್ತರಾದ ಗೆಜ್ಜಿ ಚಂದಪ್ಪ, ಬೆನಕೊಟಗಿ ಶರಣಪ್ಪ, ಹಿರೇಗೌಡ್ರ ಹಣಮಂತರಾಯ ಇನ್ನೂ ಕೆಲವರು ಸತ್ಯಾಗ್ರಹದಲ್ಲಿ ಭಾಗವಹಿಸಿ ಪೋಲಿಸರಿಂದ ಬಂಧಿಸಲ್ಪಟ್ಟರು. ಆಗ ತಾಳಿಕೋಟೆಯಲ್ಲಿ ವೈದ್ಯರಾಗಿದ್ದ ಡಾ. ಬಿ.ಕೆ. ನಾಗೂರ ಅವರು ಕಟ್ಟಾ ಕಾಂಗ್ರೇಸ ಧುರೀಣರು. ತಂದೆಯವರನ್ನು ಬಹು ಗೌರವದಿಂದ ಕಾಣುತ್ತಿದ್ದರು. ಪೂರ್ವ ನಿರ್ಧಾರದಂತೆ ಡಾ. ನಾಗೂರ ಅವರು ನಮ್ಮ ತಂದೆಯವರಿಗೆ ಹೇಳಿ ಕಳಿಸಿ, ನಮ್ಮ ಗ್ರಾಮದಿಂದಲೇ ಸತ್ಯಾಗ್ರಹದಲ್ಲಿ ಭಾಗವಹಿಸಿ, ಬಂಧನಕ್ಕೊಳಗಾಗುವೆನೆಂದು ಸುದ್ದಿ ಕಳಿಸಿದರು. ನಮ್ಮೂರ ಅಗಸಿಯ ಮುಂದೆ ಒಂದು ದೊಡ್ಡ ಸಭೆಯನ್ನು ಏರ್ಪಡಿಸಲಾಗಿತ್ತು. ನಮ್ಮ ತಂದೆಯವರೇ ಅಂದಿನ ಸತ್ಯಾಗ್ರಹ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಡಾ. ನಾಗೂರ ಅವರು ನಮ್ಮ ಮನೆಗೆ ಬಂದು, ನೇರವಾಗಿ ಸಭಾಸ್ಥಳಕ್ಕೆ ಆಗಮಿಸಿದರು. ಮಾಲಾರ್ಪಣೆ ನಂತರ ಡಾ. ನಾಗೂರ ಉದ್ಬೋಧಕ ಭಾಷಣ ಮಾಡಿದರು. ತಂದೆಯವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ದೇಶಭಕ್ತ ಡಾ. ನಾಗೂರ ಅವರನ್ನು ಆಶೀರ್ವದಿಸಿ ಬೀಳ್ಕೊಟ್ಟರು.

ಪೋಲೀಸರು ಆಗಮಿಸಿ ಅವರನ್ನು ಜೀಪಿನಲ್ಲಿ ಕರೆದುಕೊಂಡು ವಿಜಾಪುರ ಜೇಲಿಗೆ ಕಳಿಸಿದರು. ಪೋಲಿಸ ಜೀಪನ ಹಿಂದೆ ನಾವೆಲ್ಲ ವಿದ್ಯಾರ್ಥಿಗಳು ಜೈಜೈಕಾರ ಮಾಡುತ್ತ ಬೆನ್ನು ಹತ್ತಿದೆವು.

ಇದೇ ತೆರನಾಗಿ ಇನ್ನೊಬ್ಬ ಮಹಾ ದೇಶಭಕ್ತ ಪೂಜ್ಯ ಖಾಸ್ಗತೇಶಸ್ವಾಮಿಗಳೂ ಈ ಸತ್ಯಾಗ್ರಹ ಚಳವಳಿಯನ್ನು ನಮ್ಮೂರಲ್ಲಿ ಮಾಡಿ, ಇಲ್ಲಿಂದಲೇ ಬಂಧನಕ್ಕೊಳಗಾದರು. ಅವರು ನಮ್ಮ ಕಾಕಾ ಪ್ರೊ. ಎ.ಟಿ. ಸಾಸನೂರ ಅವರ ಸಹಪಾಠಿ ಮತ್ತು ಆತ್ಮೀಯ ಮಿತ್ರರು. ಅವರು ತಂದೆಯವರನ್ನು ಕಾಣಲು ಹಲವಾರು ಬಾರಿ ನಮ್ಮ ಊರಿಗೆ ಬರುತ್ತಿದ್ದರು. ಈ ಸಂಬಂಧದಿಂದ ಅವರು ನಮ್ಮ ಗ್ರಾಮವನ್ನು ತಮ್ಮ ಸತ್ಯಾಗ್ರಹದ ಸ್ಥಳವನ್ನಾಗಿ ಆಯ್ಕೆ ಮಾಡಿದ್ದರು. ಅದೇ ರೀತಿ ನಮ್ಮೂರ ಕಾಂಗ್ರೆಸ್ ನಾಯಕ ದೊಡ್ಡ ಸಂಗಪ್ಪ ದೇಸಾಯಿಯವರು ಸಹ ಸತ್ಯಾಗ್ರಹದಲ್ಲಿ ಭಾಗವಹಿಸಿ ಬಂಧನಕ್ಕೊಳಗಾದರು. ಈ ರೀತಿ ಚಲೇಜಾವ ಚಳವಳಿಯಲ್ಲಿ ಪ್ರತ್ಯಕ್ಷವಾಗಿ ಪಾಲ್ಗೊಳ್ಳದಿದ್ದರೂ ಕಾಂಗ್ರೆಸ್. ಕಾರ್ಯಕರ್ತರಿಗೆ ಎಲ್ಲ ಬಗೆಯ ಮಾರ್ಗದರ್ಶನ ಮಾಡುತ್ತಿದ್ದರು, ನಮ್ಮ ತಂದೆಯವರು.

**ಶ್ರೇಷ್ಠ ಸಂಘಟಕ-ಭಾಷಣಕಾರ :**

ನಮ್ಮದು ಒಂದು ಸಣ್ಣ ಗ್ರಾಮವಾಗಿದ್ದರೂ ತಂದೆಯವರ ಹಿರಿತನದಲ್ಲಿ ಅನೇಕ ಸಾಂಸ್ಕೃತಿಕ ಚಟುವಟಿಕೆಗಳು ನಡೆಯುತ್ತಿದ್ದವು. ನವರಾತ್ರಿ ಸಮಯದಲ್ಲಿ ಶಾಲೆಯ ಮುಂದೆ ಕನ್ನಡ ನಾಡಹಬ್ಬ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿದ್ದರು. ತಂದೆಯವರು ಪ್ರಗಲ್ಭ ಪಂಡಿತರು. ಎಲ್ಲ ವಿಷಯಗಳ ಬಗ್ಗೆ ಪರಿಪೂರ್ಣ ಜ್ಞಾನಪಡೆದಿದ್ದರು. ಯಾವದೇ ವಿಷಯದ ಮೇಲೆ ಅಧಿಕಾರವಾಣಿಯಿಂದ ಮಾತನಾಡಬಲ್ಲವರಾಗಿದ್ದರು.

ನಮ್ಮ ಸಾಸನೂರ ಗ್ರಾಮದಿಂದ ಸುಮಾರು ೨೦ ಮೈಲು ದೂರವಿರುವ ಕೋರವಾರ ಗ್ರಾಮದಲ್ಲಿ ಒಮ್ಮೆ ಶ್ರಾವಣಮಾಸದಲ್ಲಿ ಹಲವಾರು ಲಿಂಗಾಯತಸ್ವಾಮಿಗಳ ಉಪನ್ಯಾಸ ಮಾಲೆಯನ್ನು ಆ ಗ್ರಾಮದ ಜನರು ಏರ್ಪಡಿಸಿ, ತಂದೆಯವರಿಗೆ ಈ ಸಮಾರಂಭದಲ್ಲಿ ಭಾಗವಹಿಸಲು ಆಮಂತ್ರಿಸಿದ್ದರು. ನಮ್ಮೂರಿನ ಕೆಲವು ವ್ಯಕ್ತಿಗಳೊಡನೆ ಎತ್ತಿನ ಬಂಡಿಯಲ್ಲಿ ಕೋರವಾರಕ್ಕೆ ಹೋದರು. ಒಬ್ಬ ಸ್ವಾಮಿಗಳ ಉಪನ್ಯಾಸ ನಡೆದಿತ್ತು. ಅವರು ಉಪನಿಷತ್ತಿನ ವಾಕ್ಯಗಳ ಅರ್ಥವನ್ನು ತಪ್ಪಾಗಿ ಹೇಳುತ್ತಿರುವದನ್ನು ಕೇಳಿ ತಂದೆಯವರು, ಆ ವಾಕ್ಯಗಳ ಸರಿಯಾದ ಅರ್ಥ ವಿವರಣೆ ನೀಡಿದಾಗ ಇಬ್ಬರಿಗೂ ವಿವಾದ ನಡೆಯಿತು. ಸಿಟ್ಟಿಗೆದ್ದ ಸ್ವಾಮಿಗಳು "ಸಾಸನೂರ ಗ್ರಾಮದಲ್ಲಿ ಮಡಿವಾಳಪ್ಪ ಮಾಸ್ತರ ಇದ್ದಾರೆ. ಅವರು ಸಂಸ್ಕೃತ ಪಂಡಿತರಾಗಿದ್ದಾರೆ. ಅವರನ್ನು ಭೆಟ್ಟಿಯಾಗಿ ಇನ್ನೊಮ್ಮೆ ನೀನು ಸಂಸ್ಕೃತ ಕಲಿ" ಎಂದು ಹೇಳಿದಾಗ, ಇಡೀ ಭಕ್ತಸಮೂಹದಲ್ಲಿ ಖೊಳ್ಳೆಂದು ನಗೆಯ ಮಹಾಪೂರವೇ ತುಂಬಿ ಹೋಯಿತು. ಭಕ್ತಜನರೆಲ್ಲ "ಇವರೇ ಮಡಿವಾಳಪ್ಪ ಸಾಸನೂರ ಮಾಸ್ತರ" ಎಂದು ಹೇಳಿದಾಗ ಸ್ವಾಮಿಗಳಿಗೆ ಇರುಸು ಮುರುಸುಂಟಾಯಿತು. ಸಂತೋಷದಿಂದ ತಮ್ಮ ತಪ್ಪನ್ನು ಒಪ್ಪಿಕೊಂಡರು.

ಸಿಂದಗೇರಿ ಕುಲಕರ್ಣಿಯವರು ನಮ್ಮ ತಂದೆಯ ಆತ್ಮೀಯ ಸ್ನೇಹಿತರು. ಅವರು ಒಂದು ಘಟನೆಯನ್ನು ನನಗೆ ಹೇಳಿದ್ದು ನೆನಪಿದೆ, "ನಿಮ್ಮ ತಂದೆ ಮಡಿವಾಳಪ್ಪನವರು ಕಲಕೇರಿ ಸಾಲಿಯ ಹೆಡ್‌ಮಾಸ್ತರಾಗಿದ್ದಾಗ ಒಬ್ಬ ಶಿಕ್ಷಣ ಇಲಾಖೆಯ ಇನ್‌ಸ್ಪೆಕ್ಟರ ಅವರು ಶಾಲಾ ತಪಾಸಣೆಗಾಗಿ ಬಂದಿದ್ದರು. ಅವರು ಕೂಡಾ ಸಂಸ್ಕೃತ ಬಲ್ಲವರಾಗಿದ್ದರು. ವೇದ, ಉಪನಿಷತ್ ಮತ್ತು ಶಾಂಕರಭಾಷ್ಯದ ಬಗ್ಗೆ ಚರ್ಚೆ ನಡೆಯಿತು. ಎರಡು ದಿನಗಳ ವರೆಗೆ ತಂದೆಯವರು ಅವನ ಎದುರಿಗೆ ಮಂಡಿಸಿದ ಅರ್ಥ ವಿವರಣೆಯನ್ನು ಒಪ್ಪಿಕೊಂಡದ್ದಲ್ಲದೆ, ಅವರನ್ನು ಗೌರವಿಸಿದರು.

ಸಾಹಿತ್ಯವಾಗಲಿ, ವೇದೋಪನಿಷತ್‌ವಾಗಲಿ ಎಲ್ಲದರಲ್ಲೂ ಪ್ರಭುತ್ವ ಸಾಧಿಸಿ ಪ್ರತಿಯೊಂದು ವಿಷಯವನ್ನೂ ಸಹಜ ಮತ್ತು ಸರಳಭಾಷೆಯಲ್ಲಿ ವಿವರಿಸುತ್ತಿದ್ದರು. ತಮದಡ್ಡಿ ಶಾಲೆಯ ಹೆಡ್‌ಮಾಸ್ತರಾಗಿದ್ದಾಗ, ಅವರ ಶಿಷ್ಯನೊಬ್ಬ ತಮ್ಮ ಮನೆಯಲ್ಲಿ ನವರಾತ್ರಿ ಸಮಯದಲ್ಲಿ ತಂದೆಯವರಿಂದ "ದೇವಿಪುರಾಣ" ಪ್ರವಚನ ಮಾಡಿಸಿದ್ದನು. ಇದೇ ರೀತಿ ಚರ್ಚೆ, ಸಭೆ, ಸಮಾರಂಭಗಳಲ್ಲಿ ತಪ್ಪದೇ ಭಾಗವಹಿಸುತ್ತಿದ್ದರು. ಆಮಂತ್ರಣಗಳನ್ನು ನಿರಾಕರಿಸುತ್ತಿದ್ದಿಲ್ಲ. ಜನರ ಮನಸ್ಸಿಗೆ ನೋವಾಗದಂತೆ ನಡೆದುಕೊಳ್ಳುತ್ತಿದ್ದರು.

ನಮ್ಮ ತಂದೆ ಎಂ.ಟಿ. ಸಾಸನೂರ ಅವರು ಬಹುಭಾಷಾ ವಿಶಾರದರಲ್ಲದೆ, ಭಾಷಣ ಕಲೆಯಲ್ಲಿ ಅಮೋಘ ಪ್ರಭುತ್ವವನ್ನು ಪಡೆದಿದ್ದರು. ಅವರ ಭಾಷಣದ ವಿಷಯಗಳು ವೈವಿಧ್ಯಮಯ ಮತ್ತು ವೈಚಾರಿಕವಾಗಿದ್ದು, ಜನರನ್ನು ಆಕರ್ಷಿಸುತ್ತಿದ್ದವು. ಪಾಂಡಿತ್ಯದ ಸೊಬಗನ್ನು ಭಾಷಣಗಳಲ್ಲಿ ಕಾಣಬಹುದಾಗಿ, ಅವರ ಭಾಷಣಗಳು ಕನಿಷ್ಠ ಎರಡು ತಾಸುಗಳ ವರೆಗೆ ನಡೆಯುತ್ತಿದ್ದವು. ಭಾಷಣಗಳಲ್ಲಿ, ಭಾರತೀಯ ಇತಿಹಾಸ, ಸಂಸ್ಕೃತಿ, ವೇದೋಪನಿಷತ್‌ಗಳನ್ನು ಉದಾಹರಿಸುತ್ತಿದ್ದರು. ಅವರು ನಾಡಹಬ್ಬ, ಗಣಪತಿ ಉತ್ಸವ ನಾಟಕ ಪ್ರಾರಂಭೋತ್ಸವದಲ್ಲಿ ಅಸ್ಖಲಿತವಾಗಿ ಭಾಷಣ ಮಾಡುತ್ತಿದ್ದರು. ವಿಜಯ ಕಾಲೇಜಿನಲ್ಲಿ ಜನಪದಸಾಹಿತ್ಯದ ಬಗ್ಗೆ ಒಂದು ಸುದೀರ್ಘ ಭಾಷಣವನ್ನು ೧೯೫೦ರಲ್ಲಿ ಮಾಡಿದ್ದು ನನಗೆ ನೆನಪಿದೆ. ನೆರೆಯ ಗ್ರಾಮಗಳಲ್ಲಿ ಯಾವುದೇ ಕಾರ್ಯಕ್ರಮವನ್ನು ಏರ್ಪಡಿಸಿದ ಜನರು, ತಂದೆಯವರನ್ನು ಆಮಂತ್ರಿಸಿ ಕರೆದುಕೊಂಡು ಹೋಗುತ್ತಿದ್ದರು. ೧೯೪೪ನೆಯ ಡಿಶೆಂಬರ ತಿಂಗಳಲ್ಲಿ ಮಹಾರಾಷ್ಟ್ರ ಸತಾರಾ ನಗರದಲ್ಲಿ ಅಖಿಲ ಭಾರತ ಪ್ರಾಥಮಿಕ ಶಾಲಾಶಿಕ್ಷಕರ ಅಧಿವೇಶನಕ್ಕೆ ವಿಜಾಪುರ ಜಿಲ್ಲೆಯ ಶಿಕ್ಷಕ ಪ್ರತಿನಿಧಿಯಾಗಿ ಭಾಗವಹಿಸಿ, ವಿಜಾಪುರಕ್ಕೆ ಆಗಮಿಸಿದಾಗ ಅವರ ಭಾಷಣವನ್ನು ವಿಜಾಪುರ ನಗರಸಭೆಯ ಆವರಣದಲ್ಲಿ ಏರ್ಪಡಿಸಲಾಗಿತ್ತು. ಅಂದು ಅವರು ಎರಡು ತಾಸುಗಳ ವರೆಗೆ ಉದ್ಬೋಧಕ ಭಾಷಣ ಮಾಡಿದರು. ಅವರು ತಮ್ಮ ಕ್ರಾಂತಿಕಾರಿ ಭಾಷಣದಲ್ಲಿ

ಬ್ರಿಟಿಶ ಸರಕಾರದ ದುರಾಡಳಿತವನ್ನು ಕಟುವಾಗಿ ಖಂಡಿಸಿದರು. ಬ್ರಿಟಿಶರ ವಿರುದ್ಧ ಕೂಗಲು ಜನರಿಗೆ ಹೇಳಿದರು. ಸರಕಾರಿ ಶಾಲಾ ಶಿಕ್ಷಕರಾಗಿದ್ದರೂ ಅವರು ಸರಕಾರದ ಕಟುನೀತಿಗಳನ್ನು ನೇರವಾಗಿ ಟೀಕಿಸುತ್ತಿದ್ದರು. ಅವರು ಬಾಗೇವಾಡಿ ತಾಲೂಕ ಶಾಲೆಯ ಹೆಡ್‌ಮಾಸ್ತರರಾಗಿದ್ದಾಗ ಬಸವೇಶ್ವರ ದೇವಸ್ಥಾನದ ಆವರಣದಲ್ಲಿ ಏರ್ಪಡಿಸಲಾದ ಬಸವಜಯಂತಿ ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕಾರರಾಗಿ ಭಾಗವಹಿಸಿದ್ದರು. ಎಚ್.ಟಿ. ಯವರು ಸಿಂದಗಿ ಹಾಯ್‌ಸ್ಕೂಲಿನ ಹೆಡ್‌ಮಾಸ್ತರರಾಗಿದ್ದಾಗ ತಂದೆಯವರ ಭಾಷಣವನ್ನು ಏರ್ಪಡಿಸಲಾಗಿತ್ತು. ಅವರ ತಮ್ಮ ಎಚ್.ಟಿ. ಅಂದಿನ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಅಣ್ಣ ಎಂ.ಟಿ. ಯವರ ಭಾಷಣವನ್ನು ತದೇಕ ಚಿತ್ತದಿಂದ ಕೇಳಿದರು. ಅಂದಿನ ದಿನ ನಾನು ಈ ಭಾಷಣ ಕೇಳಲು ಹೋಗಿದ್ದೆ. ತಂದೆಯವರಿಗೆ ಅಂದಿನ ಕಾಂಗ್ರೆಸ ಧುರೀಣರಾದ ಅಂಬಲಿ ಚೆನ್ನಬಸಪ್ಪ, ಮುರಿಗೆಪ್ಪ ಸುಗಂಧಿ, ಕೌಜಲಗಿ ಹಣಮಂತರಾಯ, ರಾಜಾರಾಮ ಧುಬೆ, ರಾಮಪ್ಪ ಬಿದರಿ, ಬಾಲಸಿಂಗ ಮಾಸ್ತರ, ಡಾ. ಬಿ.ಕೆ. ನಾಗೂರ, ತಾಳಿಕೋಟೆಯ ಹಜಾರೆ, ಮುದ್ದೇಬಿಹಾಳದ ದೊಡ್ಡಿಹಾಳ ವಕೀಲರೊಡನೆ ಅವರ ಆತ್ಮೀಯ ಸಂಬಂಧ ಮತ್ತು ಸಂಪರ್ಕವಿತ್ತು.

**ಜಾನಪದ ಸಾಹಿತಿ :**

ನನ್ನ ತಂದೆಯವರಿಗೆ ಜನಪದ ಸಾಹಿತ್ಯದಲ್ಲಿ ಮೊದಲಿನಿಂದಲೂ ವಿಶೇಷ ಆಸ್ಥೆ ಮತ್ತು ಅಭಿರುಚಿ. ಜನಪದ ಸಾಹಿತ್ಯದ ಪ್ರಕಾರಗಳಾದ ಲಾವಣಿ ಹಾಡು, ಹಂತಿಯ ಹಾಡು, ಶೋಭನ ಪದಗಳು, ಬೀಗರನ್ನು ಎದುರುಗೊಳ್ಳುವ ಹಾಡುಗಳು, ಒಡಪುಗಳು, ಕುಪ್ಪಸ ಕಾರ್ಯಕ್ರಮದ ಹಾಡುಗಳು, ಹೊಲದಲ್ಲಿ ಹತ್ತಿ ಬಿಡಿಸುವಾಗಿನ ಹಾಡುಗಳು, ಬೀಸುಕಲ್ಲು ಪದಗಳು, ಗೀಗೀ ಪದಗಳನ್ನು ವಿಪುಲ ಪ್ರಮಾಣದಲ್ಲಿ ಸಂಗ್ರಹ ಮಾಡಿದ್ದರು. ಯಾವುದೇ ಊರಿನಲ್ಲಿ ಜನಪದ ಹಾಡುಗಾರರಿದ್ದರೆ, ಅವರನ್ನು ಸಂದರ್ಶಿಸಿ, ಹಾಡುಗಳನ್ನು ಬರೆದುಕೊಳ್ಳುತ್ತಿದ್ದರು.

ಸುರಪುರ ತಾಲೂಕಿನ ಚೆನ್ನೂರ ಮತ್ತು ವಜ್ಜಲ ಗ್ರಾಮಗಳಲ್ಲಿ ಒಬ್ಬ ೮೦ ವರ್ಷದ ಮುದಕಿ ಶ್ರೇಷ್ಠ ಜನಪದ ಹಾಡುಗಾರಳಾಗಿದ್ದ ವಿಷಯ ತಿಳಿದು, ತಾವು ಆ ಊರಿಗೆ ಬರುವ ವಿಷಯವನ್ನು ಆ ಊರಿನ ಗೌಡರಿಗೆ ಹೇಳಿ ಕಳಿಸಿದರು. ಚೆನ್ನೂರ ಗೌಡರ ಸಂಗಡ ಆ ಮುದುಕಿಯ ಮನೆಗೆ ಹೋಗಿ, "ಚನ್ನಮ್ಮನ ಹಾಡು" ಮತ್ತು "ಗುಣದಮ್ಮನ ಕಥಾ" ಜನಪದ ಗೀತೆಗಳನ್ನು ಬರೆದುಕೊಂಡು ಬಂದರು.

ಜನಪದ ಸಾಹಿತ್ಯದ ಪ್ರಚಾರಕ್ಕಾಗಿ ಹಳ್ಳಿಹಳ್ಳಿಗೆ ಹೋಗಿ ಜನರಿಗೆ ಅದರ ಬಗ್ಗೆ ಸವಿಸ್ತಾರವಾಗಿ ಹೇಳುತ್ತಿದ್ದರು. ಮಾಧ್ಯಮಿಕ ಶಾಲೆಯ ಸಭೆ ಸಮಾರಂಭಗಳಲ್ಲಿ ಜನಪದ ಸಾಹಿತ್ಯ ಕುರಿತು ಉಪನ್ಯಾಸಗಳನ್ನು ಮಾಡುತ್ತಿದ್ದರು. ಇವರನ್ನು ವಿಜಾಪುರ ಜಿಲ್ಲೆಯ ಪ್ರಥಮ ಜನಪದ ಸಾಹಿತ್ಯ ಸಂಗ್ರಾಹಕರು ಮತ್ತು ಜನಪದ ಸಾಹಿತ್ಯ ಪ್ರಚಾರಕರೆಂದು ಹೇಳಬಹುದು.

೧೯೭೮ರ ಸುಮಾರಿಗೆ ಕರ್ನಾಟಕ ವಿಶ್ವವಿದ್ಯಾಲಯದ ಆಗಿನ ಉಪಕುಲಪತಿ ಡಾ. ಆರ್.ಸಿ. ಹಿರೇಮಠ ಅವರು ಕಲಬುರ್ಗಿಗೆ ಬಂದಾಗ, ನನ್ನನ್ನು ಶರಣಬಸವೇಶ್ವರ ದೇವಾಲಯದ ಆವರಣದಲ್ಲಿರುವ ಮಹಾಮನೆಯಲ್ಲಿ ಕಾಣಬೇಕೆಂದೂ, ತಂದೆಯವರು ಸಂಗ್ರಹಿಸಿದ ಜನಪದ ಸಾಹಿತ್ಯಕೃತಿಗಳನ್ನು ತರಬೇಕೆಂದೂ ಡಾ. ಮ.ಗು. ಬಿರಾದಾರ ಮುಖಾಂತರ ಹೇಳಿ ಕಳಿಸಿದ್ದರು. ಸುಮಾರು ೮-೧೦ ನೋಟು ಬುಕ್ಕಗಳಲ್ಲಿ ಬರೆದ ಜನಪದ ಸಾಹಿತ್ಯಕೃತಿಗಳನ್ನು ಅವರಿಗೆ ಒಪ್ಪಿಸಿದೆ. ತಂದೆಯವರು ಸಂಗ್ರಹಿಸಿದ ಕೆಲವು ಕೃತಿಗಳನ್ನು ಕರ್ನಾಟಕ ವಿಶ್ವವಿದ್ಯಾಲಯದಿಂದ ಪ್ರಕಟಿಸಲ್ಪಟ್ಟ "ಜೀವನ ಜೋಕಾಲಿ" ಸಂಪುಟಗಳಲ್ಲಿ ಪ್ರಕಟಿಸಲಾಗಿದೆ. ತಂದೆಯವರ

ಜನಪದ ಸಾಹಿತ್ಯ ಸಂಗ್ರಹ ಅಪಾರವಾದದ್ದು. ಎಷ್ಟೋ ಕೈಬರಹದ ನೋಟ್‌ಬುಕ್‌ಗಳನ್ನು ತಮ್ಮ ಶಿಷ್ಯರಿಗೆ ಓದಲು ಕೊಟ್ಟಿದ್ದರು. ಅವು ತಿರುಗಿಬರಲಿಲ್ಲ. ಈ ಸದ್ಯ ನನ್ನಲ್ಲಿ ಅವರು ಸಂಗ್ರಹಿಸಿದ ಕೆಲವು ಜನಪದ ಸಾಹಿತ್ಯದ ಕೈಬರಹ ಕೃತಿಗಳಿವೆ. ಇನ್ನುಳಿದ ಸಂಗ್ರಹಗಳನ್ನು ಶುದ್ಧೀಕರಿಸಿ, ಸಂಪಾದಿಸುವ ಕಾರ್ಯವನ್ನು ಕೈಕೊಳ್ಳಬೇಕೆಂದು ಹಂಪಿ ವಿಶ್ವವಿದ್ಯಾಲಯ ವಿಶ್ರಾಂತ ಉಪಕುಲಪತಿ ಡಾ. ಎಂ.ಎಂ. ಕಲಬುರ್ಗಿ, ನಾಡೋಜ ಡಾ. ಪಾಟೀಲ ಪುಟ್ಟಪ್ಪನವರು ಆಗ್ರಹಪಡಿಸಿದ್ದಾರೆ. ಆದಷ್ಟು ಬೇಗನೆ ಈ ಕಾರ್ಯವನ್ನು ಕೈಕೊಳ್ಳಬೇಕಾಗಿದೆ. ಅದೇ ರೀತಿ ಯೋಗ, ಚರಿತ್ರೆ, ಅನುವಾದ ಕೃತಿಗಳ ಮುದ್ರಣಕಾರ್ಯವನ್ನು ಆದಷ್ಟು ಬೇಗನೇ ಪ್ರಾರಂಭಿಸಬೇಕಾಗಿದೆ. ಜನಪದ ಸಾಹಿತ್ಯವನ್ನು ತೌಲನಿಕವಾಗಿ ಮತ್ತು ವಿಮರ್ಶಾದೃಷ್ಟಿಯಿಂದ ಆಳವಾಗಿ ಅಭ್ಯಸಿಸಿ, ಅವುಗಳ ಬಗ್ಗೆ ಛಂದಸ್ಸಿನ ಮಾಹಿತಿ ಕೊಡುತ್ತಿದ್ದರು. ರಗಳೆ, ತ್ರಿಪದಿ, ಚೌಪದಿ, ಛಂದಸ್ಸಿನ ರಹಸ್ಯಗಳನ್ನು ಜನಪದ ಕಾವ್ಯದಲ್ಲಿ ಕಂಡಿದ್ದರು.

**ಸಾಹಿತ್ಯೋಪಾಸಕ :**

ಕನ್ನಡ, ಸಂಸ್ಕೃತ, ಮರಾಠಿ, ಬಂಗಾಲಿ, ಇಂಗ್ಲಿಷ ಭಾಷೆಗಳ ಪ್ರಭುತ್ವವನ್ನು ಪಡೆದಿದ್ದರಿಂದ ಈ ಭಾಷೆಗಳಲ್ಲಿಯ ಉತ್ಕೃಷ್ಟ ಗ್ರಂಥಗಳನ್ನು ಸಂಗ್ರಹಿಸಿದ್ದರು. ಹಳಗನ್ನಡ ಮತ್ತು ಆಧುನಿಕ ಕನ್ನಡ ಸಾಹಿತ್ಯವನ್ನು ಆಗಿನ ಕಾಲದಲ್ಲಿ ಮುಲ್ಕಿ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಕಲಿಸುತ್ತಿದ್ದರು. ನೃಪತುಂಗನ "ಕವಿರಾಜಮಾರ್ಗ" ಕೇಶಿರಾಜನ 'ಶಬ್ದಮಣಿದರ್ಪಣ', ಪಂಪರಾಮಾಯಣ, ಚಾವುಂಡರಾಯನ ಪುರಾಣ, ರಾಘವಾಂಕನ 'ಹರಿಶ್ಚಂದ್ರಕಾವ್ಯ', 'ಶಬರಶಂಕರ ವಿಳಾಸ', ಲಕ್ಷ್ಮೀಶನ ಜೈಮಿನಿಭಾರತ, ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ, ಸಿದ್ಧರಾಮ ಮತ್ತು ಇನ್ನುಳಿದ ವಚನಕಾರರ ಬಗ್ಗೆ ಸಾಕಷ್ಟು ಓದಿ ವಿದ್ಯಾರ್ಥಿಗಳಿಗೆ ಹೇಳುತ್ತಿದ್ದರು.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ವಿಶೇಷವಾಗಿ ಕುವೆಂಪು, ಬೇಂದ್ರೆ, ಬೆಟಗೇರಿ ಕೃಷ್ಣಶರ್ಮ, ಮಧುರ ಚೆನ್ನ, ಸಿಂಪಿಲಿಂಗಣ್ಣ, ಧೂಲಾಸಾಹೇಬ, ಪಂಡಿತ ಕೇಶವಶರ್ಮ ಗಲಗಲಿ, ಶಂಬಾ ಜೋಶಿಯವರ ಗ್ರಂಥಗಳನ್ನು ಸಂಗ್ರಹಿಸಿದ್ದರು. ಮರಾಠಿ ಸಾಹಿತ್ಯದಲ್ಲಿಯ ಕಾವ್ಯ, ನಾಟಕ, ಕಾದಂಬರಿ, ಚರಿತ್ರೆ ಇತಿಹಾಸಗಳನ್ನು ಚೆನ್ನಾಗಿ ಅಭ್ಯಸಿಸಿದ್ದದಲ್ಲದೆ ಅವುಗಳನ್ನು ವಿದ್ಯಾರ್ಥಿಗಳಿಗೆ ಮನದಟ್ಟವಾಗುವಂತೆ ಕನ್ನಡದಲ್ಲಿ ಹೇಳುತ್ತಿದ್ದರು. ಮರಾಠಿ ಭಾಷೆಯಲ್ಲಿ ಪಂಡಿತ ಸಾತವೇಳಕರ ಅವರು ಬರೆದ "ಭಾರತೀಯ ಸಂಸ್ಕೃತಿ ಇತಿಹಾಸ"ದ ಎಲ್ಲ ಸಂಪುಟಗಳು ಅವರ ಸಂಗ್ರಹದಲ್ಲಿದ್ದವು. ಟಿಳಕರ "ಗೀತಾರಹಸ್ಯ" ಮೂಲ ಮರಾಠಿ ಭಾಷೆಯಲ್ಲಿದ್ದು ನಮ್ಮ ಮನೆಯಲ್ಲಿ ಇದೆ. ಚಿಪಳೂಣಕರ ಸಂತ ಜ್ಞಾನೇಶ್ವರರ ಕೃತಿಗಳಿದ್ದವು. ಬಂಗಾಲಿ ಭಾಷೆಯಲ್ಲಿಯ ರವೀಂದ್ರನಾಥ ಟಾಗೋರ, ಸ್ವಾಮಿ ವಿವೇಕಾನಂದ, ಬಂಕಿಮಚಂದ್ರ ಚಟರ್ಜಿಯವರ ಸಮಗ್ರ ಕೃತಿಗಳನ್ನು ಅವರು ಓದಿದ್ದರು. ನಮ್ಮ ಸಾಸನೂರ ಮನೆಯಲ್ಲಿ ಕವಿ ರವೀಂದ್ರನಾಥ ಟಾಗೋರ, ಅರವಿಂದ ಘೋಷ, ಸ್ವಾಮಿ ರಾಮತೀರ್ಥ, ದತ್ತಾತ್ರೇಯ ಗುರುಗಳ ಫೋಟುಗಳು ಗೋಡೆಗಳನ್ನು ಅಲಂಕರಿಸಿದ್ದವು.

ಅವರ ಗ್ರಂಥ ಸಂಗ್ರಹಗಳಲ್ಲಿ ಕೆಲವು ಅಪೂರ್ವ ತಾಡವಾಲೆ ಪುಸ್ತಕಗಳಿದ್ದವು. ಅವುಗಳನ್ನು ಯಾರೋ ಒಯ್ದು ತಿರುಗಿ ಕೊಡಲಿಲ್ಲ. ಗತಕಾಲದ ಶಿಲಾಲಿಪಿಗಳನ್ನು ಓದುವ ಸಾಮರ್ಥ್ಯ ಅವರದಾಗಿದ್ದಿತು. ಪ್ರಗಲ್ಭ ಸಾಹಿತಿ, ಯೋಗಿ, ಸಂಗೀತಗಾರ ಮತ್ತು ವೈದ್ಯರಾಗಿದ್ದ ಪಂಡಿತ ತಾರಾನಾಥರೊಂದಿಗೆ ಆತ್ಮೀಯ ಸಂಬಂಧವಿದ್ದು ಅವರಿಬ್ಬರ ನಡುವೆ ಪತ್ರ ವ್ಯವಹಾರ ನಡೆಯುತ್ತಿತ್ತು. ನನ್ನ ಕಾಕಾ ಎ.ಟಿ. ಯವರು ತಾರಾನಾಥರ ಪರಮ ಶಿಷ್ಯರಾಗಿದ್ದು, ಬೇಸಗೆಯ ಬಿಡುವಿನಲ್ಲಿ ತುಂಗಭದ್ರೆಯ ದಂಡೆಯ ಮೇಲಿರುವ ಅವರ "ಪ್ರೇಮಾಯತನ"

ಆಶ್ರಮದಲ್ಲಿ ಹಿರಿಯ ಸಾಹಿತಿ ಮಿತ್ರರಾದ ಟಿ.ಪಿ. ಕೈಲಾಸಂ, ಶ್ರೀರಂಗ, ಅ.ನ.ಕೃ.ರೊಡನೆ ಸಾಹಿತ್ಯ ಸಂವಾದ ಚರ್ಚೆಯಲ್ಲಿ ತೊಡಗುತ್ತಿದ್ದರು. ತಾರಾನಾಥರು ಎ.ಟಿ. ಯವರ ಪ್ರಕೃತಿಯ ಬಗ್ಗೆ ಬಹಳ ಕಾಳಜಿ ವಹಿಸುತ್ತಿದ್ದರು. ಅವರಿಗೆ ಕ್ಷಯರೋಗ ಉಲ್ಬಣಿಸಿದಾಗ ಆಶ್ರಮದ ಆಸ್ಪತ್ರೆಯಲ್ಲಿ ವಾಸ್ತವ್ಯ ಮಾಡಿಸಿ, ಔಷಧೋಪಚಾರ ನೀಡಿದರು. ಆದರೆ ಮೇ ೧೪, ೧೯೩೬ ರಂದು ಅಲ್ಲಿಯೇ ತಮ್ಮ ಜೀವನದ ಕೊನೆಯ ಉಸಿರನ್ನು ತಮ್ಮ ತಾಯಿಯ ಕೈಮೇಲೆ ಬಿಟ್ಟರು. ಅವರ ಅಂತ್ಯಕ್ರಿಯೆ ಆಶ್ರಮದಲ್ಲಿ ನಡೆದು, ಅಸ್ತಿ ವಿಸರ್ಜನೆಯನ್ನು ಕೃಷ್ಣಾ ಮತ್ತು ನಮ್ಮ ಊರ ಮುಂದೆ ಹರಿಯುವ ದೋಣಿಯಲ್ಲಿ ಮಾಡಲಾಯಿತು.

"ಮಧುರ ಚೆನ್ನ" (ಹಲಸಂಗಿ ಚೆನ್ನಮಲ್ಲಪ್ಪ) ಅವರು ನಮ್ಮ ತಂದೆಗೆ ಬಂಗಾಲಿ ಭಾಷೆಯಲ್ಲಿ ಪಂಡಿತ ಸುರೇಂದ್ರ ಮೋಹನ ಭಟ್ಟಾಚಾರ್ಯ ಅವರಿಂದ ಬರೆಯಲ್ಪಟ್ಟ "ದೇವತತ್ವ" ಎಂಬ ಗ್ರಂಥವನ್ನು ಕನ್ನಡದಲ್ಲಿ ಭಾಷಾಂತರಿಸಲು ಕಳಿಸಿದ್ದರು. ಮಧುರ ಚೆನ್ನರು ಬಂಗಾಲಿ ಭಾಷೆಯಲ್ಲಿ ಪ್ರಭುತ್ವ ಪಡೆದಿದ್ದರು. ಆ ಸಮಯದಲ್ಲಿ ಅವರ ಆರೋಗ್ಯ ಕ್ಷೀಣವಾಗುತ್ತಲಿತ್ತು. ಆದುದರಿಂದ ಈ ಪುಸ್ತಕವನ್ನು ಕಳಿಸಿದ್ದರು. ದಿನಾಂಕ ೨೭-೮-೧೯೨೮ ಬರೆದಿದ್ದ ಅವರ ಪತ್ರವನ್ನು ಇನ್ನೂ ಕಾಯ್ದಿರಿಸಲಾಗಿದೆ.

ಕನ್ನಡ ಸಾಹಿತ್ಯದ ಒಳ್ಳೆಯ ಗ್ರಂಥಗಳು ಮನೆಯ ವಾಚನಾಲಯದಲ್ಲಿದ್ದವು. ನಾನು ಕನ್ನಡ ಪ್ರಾಥಮಿಕ ಶಾಲೆಯಲ್ಲಿ ಅಭ್ಯಾಸ ಮಾಡುವಾಗ ಕುವೆಂಪು ಅವರ ಶ್ರೇಷ್ಠ ಕಾದಂಬರಿ "ಕಾನೂರ ಸುಬ್ಬಮ್ಮನ ಹೆಗ್ಗಡತಿ", ಅವರ ಉತ್ತಮ ನಾಟಕಗಳಾದ 'ರಕ್ತಾಕ್ಷಿ', 'ಜಲಗಾರ', 'ನನ್ನ ಗೋಪಾಲ' ಓದಿದ್ದು ನೆನಪಿದೆ. 'ರಕ್ತಾಕ್ಷಿ' ಮತ್ತು 'ಜಲಗಾರ' ನಾಟಕಗಳನ್ನು ಸ್ವತಃ ತಂದೆಯವರೇ ಓದಿ ಹೇಳುತ್ತಿದ್ದರು. ತಂದೆಯವರಿಗೆ ನಿಜಗುಣ ಶಿವಯೋಗಿಗಳ ಕೃತಿಗಳಂತೂ ಅಚ್ಚುಮೆಚ್ಚು. ನಿಜಗುಣರ "ಕೈವಲ್ಯ ಪದ್ಧತಿ" ಮತ್ತು "ಯೋಗವಾಶಿಷ್ಟ" ಗ್ರಂಥಗಳನ್ನು ಸಾಯುವ ವರೆಗೆ ವ್ಯಾಸಂಗಿಸುತ್ತಿದ್ದರು. ಕಲಬುರ್ಗಿ ಸರಕಾರಿ ಆಸ್ಪತ್ರೆಯಲ್ಲಿ ದಿನಾಂಕ ೨೯-೯-೧೯೬೩ರಂದು ಕೊನೆ ಉಸಿರು ಎಳೆದಾಗ ಈ ಎರಡು ಗ್ರಂಥಗಳು ಅವರ ತಲೆದಿಂಬಿನ ಕೆಳಗೆ ಇದ್ದವು.

**ಸತ್ಯಪ್ರತಿಪಾದಕ :**

ಸುತ್ತಮುತ್ತಲ ಗ್ರಾಮಗಳ ಪ್ರಮುಖರು, ಗೌಡರು, ದೇಸಾಯಿಯವರು ಮತ್ತು ಶಿಕ್ಷಕರು ನಮ್ಮ ತಂದೆಯವರ ಭೆಟ್ಟಿಗಾಗಿ ಬರುತ್ತಿದ್ದರು. ಬಂದವರಿಗೆಲ್ಲ ಆದರ ಸತ್ಕಾರಗಳು ನಡೆಯುತ್ತಿದ್ದವು. ಯಾವದೇ ಸಮಸ್ಯೆಗಳು ಎದುರಾದಾಗ ಅವರು ತಂದೆಯವರಿಗೆ ಹೇಳಿ ಪರಿಹಾರ ಕಂಡುಕೊಳ್ಳುತ್ತಿದ್ದರು. ಜನತೆ ಅವರಲ್ಲಿ ಭಕ್ತಿ ವಿಶ್ವಾಸಗಳನ್ನಿಟ್ಟಿದ್ದರು.

ನಮ್ಮ ಊರಿನಿಂದ ಸುಮಾರು ೧೫ ಮೈಲುಗಳಷ್ಟು ದೂರ ಇದ್ದ ಕುದರಿ ಸಾಲವಾಡಗಿ ಗೌಡರಾಗಿದ್ದ ಬಸನಗೌಡ ಪಾಟೀಲರು ನಮ್ಮ ಭಾಗದ ಪ್ರಸಿದ್ಧ ನಾಯಕರು. ಅವರ ತಮ್ಮಂದಿರಾದ ಕುಮಾರಗೌಡ ಪಾಟೀಲರು ನನ್ನ ಸಹಪಾಠಿಗಳಲ್ಲದೆ, ಮುಂದೆ ನಮ್ಮ ಹೂವಿನ ಹಿಪ್ಪರಗಿ ಮತಕ್ಷೇತ್ರದ ಶಾಸಕರಾದರು. ಬಸನಗೌಡ್ರು ನಮ್ಮ ತಂದೆಯವರ ಅಚ್ಚುಮೆಚ್ಚಿನ ಶಿಷ್ಯ. ಒಮ್ಮೆ ಅವರನ್ನು ಗಾಡಿಯಲ್ಲಿ ತಮ್ಮ ಊರು ಸಾಲವಾಡಗಿಗೆ ಕರೆದುಕೊಂಡು ಹೋದರಂತೆ. ಆ ಊರಿನ ಹಲವಾರು ಜನರು ಕಟ್ಟಿನ ಬಡಿಗೆ ಮತ್ತು ಚಾಪಕೊಡ್ಲಿ ಹಿಡಿದುಕೊಂಡು ಗೌಡರಿಗೆ ಸಲಾಮ ಹಾಕಿದಾಗ ಗೌಡರು ಆ ಜನಕ್ಕೆ "ಮೊದಲು ನಮ್ಮ ಪೂಜ್ಯ ಗುರುಗಳಾದ ಮಡಿವಾಳಪ್ಪ ಮಾಸ್ತರರಿಗೆ ಸಲಾಮ ಮಾಡಿ, ನಂತರ ನನಗೆ ಸಲಾಮ ಮಾಡಿರಿ" ಎಂದು ಹೇಳಿದರಂತೆ. ಸಾಲವಾಡಗಿ ವಾಸ್ತವ್ಯದಲ್ಲಿ ಬಸವಗೌಡರು ನೀಡಿದ ಆದರಾತಿಥ್ಯಗಳನ್ನು ನಮ್ಮ ತಂದೆಯವರು ಕೃತಜ್ಞತಾ ಭಾವದಿಂದ ನೆನೆಸುತ್ತಿದ್ದರು.

ತಮದಡ್ಡಿಯಲ್ಲಿಯ ಭೀಮಣ್ಣ ಹೊಸಳ್ಳಿ ಮಾಸ್ತರ ಅವರ ಕಾಕಾ ಸಿದ್ದನಗೌಡ ಅವರು ಕಾಮನಕೇರಿಗೆ ದತ್ತಕ ಹೋಗಿದ್ದರು. ಆ ಗ್ರಾಮದಲ್ಲಿ ಈ ದತ್ತಕ ವಿಷಯದ ಬಗ್ಗೆ ತಂಟೆ ತಕರಾರು ಉದ್ಭವಿಸಿದಾಗ ಹೊಸಳ್ಳಿ ಬಂಧುಗಳು ನಮ್ಮ ತಂದೆಯವರನ್ನು ಕಾಮನಕೇರಿ ಗ್ರಾಮಕ್ಕೆ ಕರೆದುಕೊಂಡು ಹೋಗಿ, ದತ್ತಕ ಸಮಸ್ಯೆಗೆ ಪರಿಹಾರ ಪಡೆದರು.

ಸೇಡಂ ಗ್ರಾಮದ ಮಡಿವಾಳಯ್ಯ ಸ್ವಾಮಿಗಳು ಮಠದ ಪಟ್ಟಕ್ಕೇರುವಾಗ ಕೆಲವು ಸಮಸ್ಯೆಗಳು ಎದುರಾದಾಗ ತಂದೆಯವರು ಹೋಗಿ ಸಮಸ್ಯೆ ಬಿಡಿಸಿ, ಸ್ವಾಮಿಗಳನ್ನು ಪಟ್ಟಕ್ಕೆ ಕೂಡಿಸಿದರು. ಸಿಂದಗಿ ತಾಲೂಕಿನ ಮಾಜಿ ಶಾಸಕರಾದ ಬೆಕಿನಾಳಕರ ಅವರ ಮೂಲ ಅಡ್ಡ ಹೆಸರು ಅತ್ತಾರ, ಅವರ ಊರು ಬೆಕಿನಾಳ. ಅವರ ತಂದೆ ಅತ್ತಾರ ಸಾಹೇಬ ಅವರು ನಮ್ಮ ತಂದೆಯವರ ಆತ್ಮೀಯ ಗೆಳೆಯರಾಗಿದ್ದು, ವರ್ಷಕ್ಕೆ ಮೂರು ನಾಲ್ಕು ಸಲ ನಮ್ಮೂರಿಗೆ ಗಾಡಿಯಲ್ಲಿ ಬಂದು ತಂದೆಯವರ ದರ್ಶನ ತೆಗೆದುಕೊಂಡು ಹೋಗುವವರು. ಕಲಕೇರಿ ಗ್ರಾಮದ ನಿಂಗಪ್ಪ ಕುಲಕರ್ಣಿ ಸ್ವಾತಂತ್ರ್ಯ ಹೋರಾಟಗಾರ; ಜಂಗಮಶೆಟ್ಟಿಯವರಂತೂ ತಂದೆಯವರಿಗೆ ಅತಿ ಪ್ರೀತಿಯ ಶಿಷ್ಯ; ಅವರೂ ನಮ್ಮೂರಿಗೆ ಬರುತ್ತಿದ್ದರು.

ತಂದೆಯವರು ಅತ್ಯಂತ ಧೈರ್ಯಶಾಲಿಗಳು. ಯಾರಿಗೂ ಯಾವ ಕಾಲದಲ್ಲಿ ತಲೆ ಬಗ್ಗಿಸಲಿಲ್ಲ. ಸತ್ಯಕ್ಕಾಗಿ ಹೋರಾಡುವವರು, ದುಷ್ಟರನ್ನು ಶಿಕ್ಷಿಸುವವರು. ನಾವು ಪ್ರಾಥಮಿಕ ಶಾಲೆಯಲ್ಲಿ ಕಲಿಯುವಾಗ ಒಬ್ಬ ಶಿಕ್ಷಕರಿದ್ದರು. ಅವರು ಬಹಳ ಕಿತಾಪತಿ ವ್ಯಕ್ತಿ. ಅವರು ಊರ ಗೌಡಕುಲಕರ್ಣಿ ಮತ್ತು ನಮ್ಮ ತಂದೆಯವರ ವಿರುದ್ಧ ಮೂಕ ಅರ್ಜಿಗಳನ್ನು ಬರೆದು ಸರಕಾರಕ್ಕೆ ಕಳಿಸುತ್ತಿದ್ದರು. ಊರಲ್ಲಿ ಕಲುಷಿತ ವಾತಾವರಣ ಉಂಟಾಗಿ ಜನರಿಗೆ ಬೇಡಾಗಿದ್ದರು. ಇವರ ಬಗ್ಗೆ ಬೇಸತ್ತು ಕೊನೆಗೆ ತಂದೆಯವರು ಒಂದು ಸುದೀರ್ಘ ಆರೋಪದ ವರದಿಯನ್ನು ಜಿಲ್ಲಾ ಮೇಲಾಧಿಕಾರಿಗಳಿಗೆ ರವಾನಿಸಿದರು. ಆಗ ಬ್ರಿಟಿಶ್ ರಾಜ್ಯಾಡಳಿತ. ತಂದೆಯವರ ವರದಿಯನ್ನು ಪರಾಮರ್ಶಿಸಿ, ಆ ಶಿಕ್ಷಕರನ್ನು ನೌಕರಿಯಿಂದ ಡಿಸ್‌ಮಿಸ್ ಮಾಡುವ ಆಜ್ಞೆ ಸರಕಾರ ಹೊರಡಿಸಿತು. ಈ ಆಜ್ಞೆ ಅವರ ಕೈಸೇರಿದಾಗ ಗೋಳಾಡಿ ಅತ್ತು ತಂದೆಯವರ ಕಾಲಿಗೆ ಬಿದ್ದರು. ಕಾಲ ಮಿಂಚಿ ಹೋಗಿತ್ತು. ಅವರನ್ನು ನೌಕರಿಯಿಂದ ಉಳಿಸಲು ಯಾವದೇ ನಿಯಮಬದ್ಧ ಕಾನೂನು ಕ್ರಮಗಳಿದ್ದಿಲ್ಲ. ಇದೇ ತೆರನಾಗಿ ಇನ್ನೊಬ್ಬ ಶಿಕ್ಷಕರು ಇದೇ ಮಾರ್ಗ ಅನುಸರಿಸಿದ್ದರಿಂದ ಅವರೂ ನೌಕರಿ ಕಳೆದುಕೊಳ್ಳಬೇಕಾಯಿತು. ಆಗಿನ ಸರಕಾರದ ಆಡಳಿತ ಬಹಳ ಬಿಗುವಿನಿಂದ ಕೂಡಿತ್ತು. ಲಂಚ ರುಸುವತ್ತುಗಳು ನಡೆಯುತ್ತಿದ್ದಿಲ್ಲ. ಎಲ್ಲವೂ ಕಾನೂನಿಗೆ ಅನುಗುಣವಾಗಿ ನಡೆಯುತ್ತಿದ್ದವು.

**ಬಡವರ ಸೇವೆ :**

ನಮ್ಮ ತಂದೆಯವರು ಹಣ, ಆಸ್ತಿ, ಗೌರವಗಳಿಗೆ ಎಂದಿಗೂ ಮಹತ್ವ ಕೊಡುತ್ತಿದ್ದಿಲ್ಲ. ಅವರು ಅತ್ಯಂತ ಕರುಣಾಮಯಿಯಾಗಿದ್ದರು. ಬಡವ, ದೀನ ದಲಿತರ ಮತ್ತು ಶೋಷಿತ ವರ್ಗದ ಜನರ ಬಗ್ಗೆ ಕಾಳಜಿ ವಹಿಸುತ್ತಿದ್ದರು. ಅವರು ಆಯುರ್ವೇದ ವೈದ್ಯಕೀಯ ಶಾಸ್ತ್ರ ಬಲ್ಲವರಾಗಿದ್ದರು. ಗ್ರಾಮದಲ್ಲಿ ಯಾರಾದರೂ ಅಸ್ವಸ್ಥರಾದರೆ ಅವರಿಗೆ ಪುಕ್ಕಟೆಯಾಗಿ ಔಷಧೋಪಚಾರ ಮಾಡುವರು. ಅವರಿಂದ ದುಡ್ಡನ್ನು ಪಡೆಯುತ್ತಿದ್ದಿಲ್ಲ. ಬಡ ವಿದ್ಯಾರ್ಥಿಗಳಿಗೆ ಫೀ ಹಣವನ್ನು ಕೊಡುತ್ತಿದ್ದರು. ಮುಲ್ಕಿ ಪರೀಕ್ಷೆಗೆ ಕೂಡುವ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಿ, ಅವರಿಗೆ ಚೆನ್ನಾದ ತರಬೇತಿಯನ್ನು ನೀಡಿ, ಪರೀಕ್ಷೆ ಪಾಸಾಗುವಂತೆ ಮಾಡಿ, ಮುಂದೆ ಅವರಿಗೆ ನೌಕರಿಗಳನ್ನು ಕೊಡಿಸಲು ಪ್ರಯತ್ನ ಮಾಡುತ್ತಿದ್ದರು. ನೆರೆ ಹಳ್ಳಿಗಳಲ್ಲಿಯ ಪ್ರತಿಷ್ಠಿತ ಶ್ರೀಮಂತರ ಮಕ್ಕಳೂ ನಮ್ಮೂರಿಗೆ ಬಂದು ತಂದೆಯವರ ಮಾರ್ಗದರ್ಶನದಲ್ಲಿ ಅಭ್ಯಾಸ ಮಾಡುತ್ತಿದ್ದರು.

ಪ್ರತಿಭಾವಂತ ವಿದ್ಯಾರ್ಥಿಗಳಾದ ಮಾಳಳ್ಳಿಯ ವೆಂಕನಗೌಡ ಪಾಟೀಲ ಮತ್ತು ಅವರ ತಮ್ಮ ಸಂಗನಗೌಡ ಇವರಿಬ್ಬರು ನಮ್ಮೂರ ಶಾಲೆಯ ಮುಲ್ಕಿ ಪರೀಕ್ಷೆ ಪಾಸಾದರು. ಬಮ್ಮನಳ್ಳಿಯ ಬಸವಂತರಾಯ ಬಳೂರಗಿ, ಬಳಗಾನೂರಿನ ಹಸನಸಾಹೇಬ ಪಾರ್ವತಿ, ಅಂಬಳನೂರಿನ ಬಸನಗೌಡ, ಹಂಚಲಿಯ ನಂದಪ್ಪ, ಹಿರೂರ ಗ್ರಾಮದ ಗುಂಡಪ್ಪ ಕುಲಕರ್ಣಿ, ಮಾರ್ತಂಡಪ್ಪ ಕುಲಕರ್ಣಿ, ಮಲ್ಹಾರಿರಾವ ದೇಶಪಾಂಡೆ, ಅವರ ಅಣ್ಣಂದಿರು, ವಡವಡಗಿಯ ಗುರುಲಿಂಗ, ಮನಹಳ್ಳಿ ಭೈರವಾಡಿಯ ಗುರುಪಾದಪ್ಪ, ಶಿವನಗೌಡ ಪಾಟೀಲ, ತಮದಡ್ಡಿಯ ಸಂಗನಗೌಡ ಪಾಟೀಲ, ಕೊಣ್ಣೂರ ಗ್ರಾಮದ ಸಂಗನಗೌಡ ಹಿಪ್ಪರಗಿ, ವೆಂಕಣ್ಣ ಬಂದಾಳ, ವನಹಳ್ಳಿಯ ಸಂಗನಗೌಡ, ಇವರೆಲ್ಲ ತಂದೆಯವರ ಗರಡಿಯಲ್ಲಿ ಬೆಳೆದು ಪ್ರಸಿದ್ಧರಾದ ವ್ಯಕ್ತಿಗಳು. ನೂರಾರು ವಿದ್ಯಾರ್ಥಿಗಳು ಅವರ ಸಹಾಯವನ್ನು ಪಡೆದು ಜೀವನದಲ್ಲಿ ಉಚ್ಚ ಮಟ್ಟಕ್ಕೇರಿದರು.

ಯಾರೇ ಬಂದು ಸಹಾಯಕ್ಕಾಗಿ ಭಿನ್ನವಿಸಿದರೆ ಅವರು ಎಂದಿಗೂ ಇಲ್ಲ ಹೇಳಲಿಲ್ಲ. ತಂದೆಯವರು ಜರ್ಮನಿಯಲ್ಲಿ ತಯಾರಾದ ಒಂದು ಸುಂದರವಾದ ಪ್ರಾಯಮಸ್ ಸ್ಟೋವನ್ನು ಖರೀದಿಮಾಡಿ ತಂದಿದ್ದರು. ನಮ್ಮ ಮನೆಯ ಹಜಾಮ ಹಣಮಂತ ಬೇಡಿದಾಗ, ಅದನ್ನು ತಕ್ಷಣವೇ ಕೊಟ್ಟುಬಿಟ್ಟರು. ಕೋರವಾರ ಗ್ರಾಮದ ಗೊಲ್ಲಾಳಪ್ಪ ಪೂಜಾರ ಎನ್ನುವ ಬಡ ವಿದ್ಯಾರ್ಥಿ. ಅವನಿಗೆ ಮಾಧ್ಯಮಿಕ ಶಾಲೆಯ ಖರ್ಚಿಗಾಗಿ ತಂದೆಯವರು ತಾವು ತಮ್ಮ ಪಾಲಿನ ಹಣವನ್ನಲ್ಲದೆ ಕಲಕೇರಿ ಊರಿನ ಪ್ರಮುಖರಿಂದ ಚಂದಾ ಹಣ ಸಂಗ್ರಹಿಸಿ ಅವನಿಗೆ ಕಳುಹಿಸುತ್ತಿದ್ದರು. ಅವರು ಮುಂದೆ ಗ್ರಾಜ್ಯುಎಟ್ ಆಗಿ, ಇನ್‌ಕಮ್ ಟ್ಯಾಕ್ಸ್ ಆಫೀಸರ್ ಆಗಿ ಮುಂಬಯಿಯಲ್ಲಿ ನೆಲಸಿದರು. ಅವರು ತಂದೆಯವರನ್ನು ಅತ್ಯಂತ ಗೌರವದಿಂದ ಕಾಣುತ್ತಿದ್ದರು. ಅವರು ಐದು ಜನ ಹೆಣ್ಣುಮಕ್ಕಳನ್ನು ಬಿಟ್ಟು ಮುಂಬಯಿಯಲ್ಲಿ ತೀರಿಕೊಂಡಾಗ, ನಮ್ಮ ಕಾಕಾ ಎಚ್.ಟಿ. ಯವರು ಕುಟುಂಬದ ಸದಸ್ಯರನ್ನೆಲ್ಲ ವಿಜಾಪುರಕ್ಕೆ ಕರೆತಂದು, ಅವರಿಗೆ ವಿದ್ಯಾಭ್ಯಾಸ ಸಹಾಯಮಾಡಿ, ಅವರೆಲ್ಲರ ಲಗ್ನಮಾಡಿದರು. ಈ ಪೂಜಾರ ಕುಟುಂಬ ನಮ್ಮ ಕುಟುಂಬದವರೇ ಆಗಿದ್ದರು. ಅದೇ ರೀತಿಯಾಗಿ ಕಲಕೇರಿ ಗ್ರಾಮದ ಭೈರಿ ಸಂಗಪ್ಪನವರು ತಂದೆಯವರ ಅತ್ಯಂತ ಆತ್ಮೀಯ ಬಂಧುಗಳು. ಅವರ ಮನೆತನಕ್ಕೂ ನಮ್ಮ ಮನೆತನಕ್ಕೂ ಸ್ನೇಹಮಯವಾದ ಸಂಬಂಧ. ನಾನು ಮುಂಬಯಿಯಲ್ಲಿ ಎಂ.ಎ. ಕಲಿಯುವಾಗ ಒಂದು ವರ್ಷ ಅವರ ಮನೆಯಲ್ಲಿದ್ದೆ. ಅವರೂ ಅತ್ಯಂತ ದಯಾಳು ಮತ್ತು ಪರೋಪಕಾರಿ ವ್ಯಕ್ತಿ. ಈಗ ಅವರಿನ್ನೂ ಬದುಕಿದ್ದಾರೆ. ೯೫ ವರ್ಷಗಳಾಗಿವೆ. ಅವರಿಗೆ ಒಮ್ಮೆ ನಾನು ಹೇಳಿದೆ "ನನ್ನ ಎಲ್ಲ ಕಕ್ಕಂದಿರು ತೀರಿದರು. ನೀವು ಒಬ್ಬ ಹಿರಿಯ ಕಕ್ಕ ಇದ್ದಿರಿ ನಮಗೆ."

**ಸಾಮಾಜಿಕ ಸೇವಾಕಾರ್ಯ :**

೧೯೪೨-೪೩ರಲ್ಲಿ ನಮ್ಮ ಜಿಲ್ಲೆಯಲ್ಲಿ ಭೀಕರವಾದ ಬರಗಾಲ. ಮಳೆ ಇಲ್ಲ, ಜನತೆಗೆ ತಿನ್ನಲು ಕಾಳಿಲ್ಲ. ದನಗಳಿಗೆ ಮೇವು ಇಲ್ಲ. ಇಂಥ ದುರ್ಧರ ಸಮಯದಲ್ಲಿ ಬ್ರಿಟಿಶ ಸರಕಾರ ನಮ್ಮ ಊರಿಗೆ ಬಹಳ ಸಹಾಯ ಮಾಡಿದರು. ತಂದೆಯವರ ಅಧ್ಯಕ್ಷತೆಯಲ್ಲಿ ಒಂದು ಬರಗಾಲ ಸಮಿತಿಯನ್ನು ರಚಿಸಿ, ಹಣ ಬಿಡುಗಡೆ ಮಾಡಿದ್ದಲ್ಲದೆ ಸಜ್ಜಿ ಚೀಲಗಳನ್ನು ಬ್ರಿಟಿಶರು ನಡೆಸುತ್ತಿದ್ದ ಟ್ರಕ್‌ಗಳಲ್ಲಿ ಪೂರೈಸಿದರು. ತಂದೆಯವರು ಊರ ಪ್ರಮುಖರು ಮತ್ತು ಗೌಡರು ಸಹಕಾರದಿಂದ ಹಗಲು ರಾತ್ರಿ ಈ ಬರಗಾಲದಲ್ಲಿ ದುಡಿದರು. ಮೊಗಲಾಯಿಯಿಂದ ಕಣಿಕಿ ಹೊಟ್ಟು ತರಿಸಿದರು. ಊರ ಮುಂದಿನ ಗೌಡರ ಹೊಲದಲ್ಲಿ ದನಗಳಿಗಾಗಿ ಮೇವನ್ನು ಪೂರೈಸುವ ಕೇಂದ್ರವನ್ನು ಸ್ಥಾಪಿಸಲಾಯಿತು. ಜನತೆಗೆ ಸಜ್ಜಿಯ ಆಹಾರ, ದನಗಳಿಗೆ ಮೇವನ್ನು ಪೂರೈಸಲಾಯಿತು. ಅಂತೂ ಕೊನೆಗೊಮ್ಮೆ ದೊಡ್ಡ ಮಳೆ ಬಂದು ರೈತರ ಸಮಸ್ಯೆಗಳು ಪರಿಹಾರವಾದವು.

ನಮ್ಮ ಊರು ಮುಂದೆ ಒಂದು ಹಳೆಯ ಸವಳು ನೀರಿನ ಬಾವಿ ಇತ್ತು. ಅದು ಅತ್ಯಂತ ಶಿಥಿಲವಾಗಿತ್ತು. ತಂದೆಯವರು ವಿಜಾಪುರದಲ್ಲಿ ಮೇಲಧಿಕಾರಿಗಳನ್ನು ಭೆಟ್ಟಿಯಾಗಿ ಈ ಹಳೇ ಬಾವಿಯ ಜೀರ್ಣೋದ್ಧಾರಕ್ಕಾಗಿ ಸಹಾಯಧನವನ್ನು ಪಡೆದುಕೊಂಡು ಬಂದರು. ನಮ್ಮ ಮನೆತನದ ಆತ್ಮೀಯ ಹಿತೈಷಿಗಳಾದ ಸಂಗಪ್ಪಣ್ಣ ಇಜೇರಿಯವರು ಈ ಭಾವಿಯ ಕಟ್ಟುವ ಗುತ್ತಿಗೆ ಪಡೆದು, ಕಾರ್ಯ ನಿರ್ವಹಿಸಿದರು. ಕೆಲವೇ ತಿಂಗಳುಗಳಲ್ಲಿ ಇಜೇರಿ ಮೇಲುಸ್ತುವಾರಿಯಲ್ಲಿ ಕಾರ್ಯ ಯಶಸ್ವಿಯಾಯಿತು. ಇಜೇರಿಯವರು ನಮ್ಮ ಮನೆಯಲ್ಲಿ ಇರುತ್ತಿದ್ದರು, ನಮ್ಮೂರಿಗೆ ಬಂದಾಗ.

ಇದಾದ ನಂತರ ಊರಿನ ಗ್ರಾಮಸ್ಥರು ಸಿಹಿನೀರಿನ ತೊಂದರೆ ಅನುಭವಿಸಬೇಕಾಯಿತು. ಮಳೆ ಬಂದು ಕೇರಿಗೆ ನೀರು ಇಲ್ಲದಿದ್ದರೆ ಸುಮಾರು ಮೂರು ಮೈಲುಗಳಾಚೆಗಿರುವ ಸಿದ್ಧರಾಮಪ್ಪನ ಸಿಹಿನೀರಿನ ಬಾವಿಯೇ ಗತಿ. ಅದು ಅತ್ಯಂತ ದುರ್ಗಮವಾದ ಕೊಳ್ಳದಲ್ಲಿತ್ತು. ಅದನ್ನು ಜೀರ್ಣೋದ್ಧಾರ ಮಾಡಲು ತಂದೆಯವರು ನಿರ್ಧರಿಸಿದರು. ನಮ್ಮೂರಿನ ಶ್ರೀಮಂತರಾದ ಬಸವಂತರಾಯ ನಾಗರಾಳ (ಸಾಸನೂರ) ಅವರು ಬಾಗಿಲಕೋಟೆಯಲ್ಲಿ ವಾಸವಾಗಿದ್ದರು. ಅವರ ಆಸ್ತಿ ಹೊಲ ಮನೆ ನಮ್ಮ ಊರಲ್ಲಿ ಇತ್ತು. ಅವರು ಊರಿಗೆ ಬಂದಾಗ ತಂದೆಯವರು ಭೆಟ್ಟಿಯಾಗಿ ಈ ಸಿಹಿ ನೀರಿನ ಬಾವಿಯ ಜೀರ್ಣೋದ್ಧಾರದ ವಿಷಯ ಹೇಳಿದರು. ತಂದೆಯವರು ಒಂದು ಸಮಿತಿಯನ್ನು ರಚಿಸಿದರು. ಬಸವಂತರಾಯರನ್ನು ಸಮಿತಿಯ ಅಧ್ಯಕ್ಷರನ್ನಾಗಿ ಮಾಡಿದರು. ತಾವು ಆ ಸಮಿತಿ ಗೌರವ ಕಾರ್ಯದರ್ಶಿಗಳಾಗಿ ಊರ ಜನರಿಂದ ಚಂದಾ ಹಣ ಸಂಗ್ರಹಿಸಿದರು. ಮುಂದೆ ಹಲವು ಅಡ್ಡಿ ಆತಂಕಗಳಿಂದ ಈ ಕಾರ್ಯ ಕೈಗೂಡಲಿಲ್ಲ. ಎಲ್ಲ ಹಣವನ್ನು ಬಸವಂತರಾಯರಿಗೆ ಒಪ್ಪಿಸಿದ್ದು, ಇನ್ನೂ ಸುಮಾರು ೧೭೦ ರೂಪಾಯಿಗಳು ತಂದೆಯವರ ಕಡೆಗೆ ಉಳಿದಿದ್ದವು. ಅವರು ಸಾಯುವ ಮುಂದೆ, ಬಾವಿಯ ಕಾರ್ಯದ ಎಲ್ಲ ಕಾಗದ ಪತ್ರ, ರಸೀದಿಗಳನ್ನು ಕೊಟ್ಟು ಉಳಿದ ೧೭೦ ರೂಪಾಯಿಗಳನ್ನು ಊರಿನ ಹಿರಿಯರಾದ ಸುಂಬಡ ಶಿವಪ್ಪನಿಗೆ ಕೊಡಲು ಹೇಳಿದರು. ತಂದೆಯ ಮರಣಾನಂತರ ಅವರಿಗೆ ಈ ಹಣವನ್ನು ಕೊಡಲು ಹೋದಾಗ ಅವರು ಸ್ವೀಕರಿಸಲಿಲ್ಲ. ಸಂಗ್ರಹವಾದ ಎಷ್ಟೋ ಹಣವನ್ನು ನಾಯಕರು ಅಪರಾತಪರ ಮಾಡಿದ್ದರು. ಮುಂದೆ ಕೆಲವು ವರ್ಷಗಳ ನಂತರ ಸರಕಾರದಿಂದ ಜೀರ್ಣೋದ್ಧಾರ ಜರುಗಿ, ಮಶಿನ್‌ದಿಂದ, ಪಾಯಿಪ್‌ಗಳ ಮೂಲಕ ಊರಿಗೆ ನೀರು ಪೂರೈಸಲಾಗುತ್ತದೆ.

ಗ್ರಾಮದ ಯಾವುದೇ ವ್ಯಾಜ್ಯಗಳಿದ್ದರೆ ಜನ ನಮ್ಮ ತಂದೆಯವರಿಗೆ ನಿವೇದಿಸಿ, ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುತ್ತಿದ್ದರು. ಯಾವುದೇ ವ್ಯಕ್ತಿ ತನ್ನ ತಾಪತ್ರಯಕ್ಕಾಗಿ ಹಣ ಕೇಳಿದರೆ ತಕ್ಷಣವೇ ಕೊಡುತ್ತಿದ್ದರು ಮತ್ತು ಹಿಂದುರಿಗಿಸಲು ಹೇಳುತ್ತಿದ್ದಿಲ್ಲ. ಸಾವಿರಾರು ಜನರು ಅವರಿಂದ ಹಣ ಪಡೆದು ತಿರುಗಿ ಕೊಡಲಿಲ್ಲ. ಆದರೂ ಅವರು ಎಂದೂ ಇದರ ಬಗ್ಗೆ ವಿಚಾರ ಮಾಡುತ್ತಿದ್ದಿಲ್ಲ. ವಿಜಾಪುರಕ್ಕೆ ಹೋಗಿ ತಿರುಗಿ ಬರುವಾಗ ಸಾಕಷ್ಟು ಸಾಮಾನು, ತಿಂಡಿಗಳನ್ನು ತಂದು ತಮಗೆ ಆತ್ಮೀಯರ ಮನೆಯವರಿಗೆ ಕಳಿಸುವರು. ಅವರ ಸಹಾಯ ಊರಿನ ಪ್ರಮುಖ ಕುಟುಂಬಗಳಿಗೆ ಯಾವಾಗಲೂ ಸಿದ್ಧ. ಬಡವರನ್ನು ಎಂದು ಮರೆಯುತ್ತಿದ್ದಿಲ್ಲ. ಬಳಿಗಾರ ಭೀಮಶ್ಯಾ, ನಮ್ಮ ಮನೆಯ ಸಮೀಪದಲ್ಲಿ ಅವನ ಮನೆ ಚಳಿಗಾಲದಲ್ಲಿ ನಡುಗುತ್ತ ತನ್ನ ಮನೆಯ ಮುಂದೆ ಕೂತಾಗ, ತಂದೆಯವರು ಅವನನ್ನು ಮಾತನಾಡಿಸಿ ಚಳಿಯಿಂದ ರಕ್ಷಣೆ ಪಡೆಯಲು ಹೇಳಲು ಅವನು "ನೀವು ದೊಡ್ಡ ಮಾಸ್ತರರು, ನಿಮಗೆ ಉಲನ್ ಕೋಟು ಇದೆ. ನಮಗೆಲ್ಲಿ ಬರಬೇಕು ಬೆಚ್ಚನೆಯ ಕೋಟು" ಎಂದು ನುಡಿಯುತ್ತಲೇ ತಾವು ಧರಿಸಿದ ಉಲನ್ ಕೋಟನ್ನು ಅವನಿಗೆ ಹೊದಿಸಿ, ಶಾಲೆಗೆ ನಡೆದರು.

ನಮ್ಮ ನೆರೆಮನೆಯ ಹುಡುಗಿಯೊಬ್ಬಳು ಕಾಲ್ಗೆಜ್ಜೆ ಬೇಕೆಂದು ಅಳುತ್ತಿದ್ದಳು. ತಂದೆಯವರಿಗೆ ಇದು ತಿಳಿದು ಪತ್ತಾರ ಮನೆಗೆ ಹೋಗಿ, ಒಂದು ಜತೆ ಬೆಳ್ಳಿ ಕಾಲ್ಗೆಜ್ಜೆಯನ್ನು ಖರೀದಿಸಿ ತಂದು ಕೊಟ್ಟರು. ಈ ವಿಷಯವನ್ನು ಆ ಮಗುವಿನ ತಾಯಿ ನನಗೆ ಹೇಳುತ್ತಿದ್ದಳು.

ಯಾರೇ ಗಣ್ಯವ್ಯಕ್ತಿಗಳು ಊರಿಗೆ ಬಂದರೆ ಅವರಿಗೆ ತಂದೆಯವರ ಆದರಾತಿಥ್ಯ. ಶಾಲಾ ಇನ್‌ಸ್ಪೆಕ್ಟರ್ ಶಾಲಾ ತಪಾಸಣೆಗೆ ಬಂದರಂತೂ, ಅವರಿಗೆ ವಾಸ್ತವ್ಯಕ್ಕಾಗಿ ಒಂದು ಪ್ರತ್ಯೇಕ ಮನೆ. ವಿಶೇಷ ಊಟ ನಮ್ಮ ಮನೆಯಿಂದಲೇ ತಯಾರಿಸಿ ಕಳಿಸಲಾಗುತ್ತಿತ್ತು. ಅವರನ್ನು ಕರೆತರಲು ಬಸ್‌ಸ್ಟ್ಯಾಂಡಿಗೆ ನನ್ನ ಕಾಕಾ ಸೈದಪ್ಪನು ಎತ್ತಿನ ಚಕ್ಕಡಿ ತೆಗೆದುಕೊಂಡು ಹೋಗುವನು. ಕೆಲವು ಸಲ ನಾನು ಅವನ ಜೊತೆಗೆ ಹೋಗುತ್ತಿದ್ದೆ. ಕಾಕಾ ಸೈದಪ್ಪ ಮತ್ತು ಕಾಕಾ ಮಲ್ಲಾರೆಪ್ಪ ಬ್ರಹ್ಮಚಾರಿಗಳಾಗಿಯೇ ತೀರಿಹೋದರು. ಆದರೆ ಅವರಿಬ್ಬರು ಧೈರ್ಯಶಾಲಿಗಳು ಮತ್ತು ದೈಹಿಕವಾಗಿ ಬಲಿಷ್ಠರಾಗಿದ್ದರು. ಇನ್ನೊಬ್ಬ ಕಾಕಾ ಎ.ಟಿ. ಯವರು ವಯಸ್ಸಿನ ೨೮ ವರ್ಷಗಳಲ್ಲಿ ತೀರಿದರು. ಹೀಗಾಗಿ ಈ ಮೂವರು ಕಾಕಾಗಳು ಗೃಹಸ್ಥರಾಗದೇ ತೀರಿಹೋದರು. ಈ ಎಲ್ಲ ಬಂಧುಗಳಲ್ಲಿ ಕೇವಲ ನಮ್ಮ ತಂದೆ, ಎಚ್.ಟಿ. ಮತ್ತು ಬಿ.ಟಿ. ಮಾತ್ರ ಲಗ್ನವಾಗಿದ್ದರು. ನಮ್ಮ ಸೋದರತ್ತೆ ಲಗ್ನವಾಗಿದ್ದರೂ ಅವಳಿಗೆ ಮಕ್ಕಳಾಗಲಿಲ್ಲ. ತಂದೆಯವರ ಜೀವನಚರಿತ್ರೆ ಮಹಾಕಾವ್ಯ (Epic) ದಂತಿದೆ. ಅವರ ಬಗ್ಗೆ ಎಷ್ಟೇ ಬರೆದರೂ ಕಡಿಮೆ ಎನಿಸುವುದು. ಅವರದು ಅದ್ಭುತ ವ್ಯಕ್ತಿತ್ವ ಮತ್ತು ಅದಮ್ಯ ಚೇತನ. ಅವರ ತ್ಯಾಗ, ಸಹನೆ, ವಿದ್ವತ್ತು, ಸಮಾಜಸೇವೆ, ಶಿಕ್ಷಣಸೇವೆ ಮತ್ತು ದೀನ ದಲಿತರ ಬಗೆಗಿನ ಕಳಕಳಿ ಇತ್ಯಾದಿಗಳಿಂದಾಗಿ ನಮ್ಮ "ಸಾಸನೂರ ಮನೆತನ" ಕರ್ನಾಟಕದಲ್ಲಿ ಪ್ರತಿಷ್ಠಿತ ಸ್ಥಾನ ಪಡೆಯುವಂತಾಯಿತು.

**ದಿಗ್ಗಜರ ಅನಿಸಿಕೆಗಳು :**

'ಪ್ರಪಂಚ' ವಾರ ಪತ್ರಿಕೆ ಸಂಪಾದಕರಾದ ಡಾ. ಪಾಟೀಲ ಪುಟ್ಟಪ್ಪನವರು "ಸಾಸನೂರ ಸಿರಿ" ಎಂಬ ಅಭಿನಂದನ ಗ್ರಂಥದಲ್ಲಿ ನಮ್ಮ ತಂದೆಯವರ ಆದರ್ಶ ವ್ಯಕ್ತಿತ್ವದ ಬಗ್ಗೆ ಹೇಳುತ್ತಾರೆ. "ನಾಮನಿರ್ದೇಶನ ಯಾವದೂ ಇಲ್ಲದ ಒಂದು ಸಾಮಾನ್ಯ ಮನೆತನ (ಸಾಸನೂರ) ಅವರದಾಗಿತ್ತು. ಈ ಎಚ್.ಟಿ.ಯವರ ಅಣ್ಣ, ಎರಡನೆಯ ವರ್ಷದ ಶಾಲಾ ಶಿಕ್ಷಕ ತರಬೇತಿ ಪಡೆದ, ಮಡಿವಾಳಪ್ಪ ಸಾಸನೂರ, ಅವರು ಮನೆತನಕ್ಕೆ ಅಸಾಮಾನ್ಯತೆಯನ್ನು ತಂದುಕೊಟ್ಟರು. ತಮ್ಮ ಮೂವರು ತಮ್ಮಂದಿರು ಪ್ರತಿಭಾವಂತರಾಗಿ ಬೆಳೆಯುವಂತೆ ಅವರಿಗೆ ಪರಿಪೋಷಣೆ ಒದಗಿಸಿಕೊಟ್ಟರು. ಅವರ ಸಂಪರ್ಕದಲ್ಲಿ ಬಂದುದು ನನ್ನ ಬಹುದೊಡ್ಡ ಸುದೈವವೆಂದು ನಾನು ತಿಳಿದಿದ್ದೇನೆ. ಅವರು ಪಾಂಡಿತ್ಯದ ಬಹುದೊಡ್ಡ ಬೆಟ್ಟವೇ ಆಗಿದ್ದರು. ಅವರಂಥ ಅಸದೃಶ ಪಾಂಡಿತ್ಯ ಪಡೆದ ಇನ್ನೊಬ್ಬರೆಂದರೆ ಪಂಡಿತ ಕವಲಿ ಮತ್ತು ಬೆಟಗೇರಿ ಕೃಷ್ಣಶರ್ಮರು. ಅವರೊಂದಿಗೆ ಬಂದ ನನ್ನ ಸಂಬಂಧವನ್ನು ನಾನು ಎಂದಿಗೂ ಮರೆಯಲಾರೆ.

"ಎಂ.ಟಿ." ಎನ್ನುವದು ಮಡಿವಾಳಪ್ಪ ತುಳಜಪ್ಪ ಸಾಸನೂರರ ಹೆಸರಿನಲ್ಲಿದೆ. "ಎಮ್ಟಿ (Empty) ಎಂದರೆ ಖಾಲಿ", ಆದರೆ ಅವರಂತೆ ತುಂಬಿಕೊಂಡವರನ್ನು ನಾನು ಕಂಡಿಲ್ಲ. ಅವರ ಹಿರಿಯ ತಮ್ಮ ಪ್ರೊಫೆಸರ್ ಎ.ಟಿ. ಸಾಸನೂರರು ಭಾರಿ ಪ್ರತಿಭೆ ತೋರಿಸಿ, ತಮಗಿನ್ನು ಇಪ್ಪತ್ತೆಂಟು ವರ್ಷ ಆಗಿರದಿದ್ದಾಗಲೇ ಅವರು ಕರ್ನಾಟಕಕ್ಕೆ ಕಳೆದು ಹೋದರು. ಮಡಿವಾಳಪ್ಪನವರ ಮಧ್ಯಮ ತಮ್ಮ ಡಾ. ಎಚ್.ಟಿ. ಸಾಸನೂರ, ಕಿರಿಯ ತಮ್ಮ ಪ್ರೊ. ಬಿ.ಟಿ. ಸಾಸನೂರ ಇಬ್ಬರೂ ಭಾರಿ ಪ್ರತಿಭಾವಂತರು. ಎಚ್.ಟಿ. ಯವರು ನನಗೆ ಹಿರಿಯರು, ನನ್ನ ಹೃದಯಕ್ಕೆ ಹತ್ತಿರದ ಸ್ನೇಹಿತರು. ಬಿ.ಟಿ.ಯವರು ನನ್ನ ಸಹಪಾಠಿಗಳು. ನನ್ನ ಸ್ನೇಹಿತರು."

ಡಾ. ಪಾಟೀಲ ಪುಟ್ಟಪ್ಪನವರು ತಮ್ಮ 'ಪ್ರಪಂಚ' ವಾರಪತ್ರಿಕೆಯಲ್ಲಿ (ದಿನಾಂಕ ೧೦-೧೨-೧೯೬೫) ಎಂ.ಟಿ. ಸಾಸನೂರ ಅವರ ವ್ಯಕ್ತಿತ್ವದ ಬಗ್ಗೆ ಹೀಗೆ ಹೇಳಿದ್ದಾರೆ. "ಸಾಸನೂರ ಮನೆತನವೇ ಶಿಕ್ಷಣ ಸಂಸ್ಕೃತಿಗಳ ತವರು ಮನೆಯೆನಿಸಿದೆ. ಅಣ್ಣ ಮಡಿವಾಳಪ್ಪನವರು ಪ್ರಾಥಮಿಕ ಶಾಲೆಯ ಶಿಕ್ಷಕರು ನಿಜ. ಆದರೆ ಅವರಲ್ಲಿ ಪ್ರೊಫೆಸರರನ್ನು ಮೀರಿಸುವ ಪಾಂಡಿತ್ಯ ಹಾಗೂ ಪ್ರಾಜ್ಞತೆ ಕಾಣುತ್ತೇವೆ. ಅವರು ಮೂವರು ತಮ್ಮಂದಿರನ್ನು ಸರಸ್ವತಿ ಪುತ್ರರನ್ನಾಗಿ ಬೆಳೆಸಿಕೊಂಡು ಬಂದರು, ಪ್ರೊ. ಎ.ಟಿ. ಸಾಸನೂರ, ಡಾ. ಎಚ್.ಟಿ. ಸಾಸನೂರ ಮತ್ತು ಪ್ರೊ. ಬಿ.ಟಿ. ಸಾಸನೂರ.

ಶ್ರೀಮನ್ನಿರಂಜನ ಜಗದ್ಗುರು ಡಾ. ತೋಂಟದ ಸಿದ್ಧಲಿಂಗಮಹಾಸ್ವಾಮಿಗಳು "ಸಾಸನೂರ ಸಿರಿ" ಗ್ರಂಥ ಪ್ರಕಟನೆಯ ಸಂದೇಶದಲ್ಲಿ ಹೀಗೆ ನುಡಿದಿದ್ದಾರೆ. "ವಿಜಾಪುರ ಜಿಲ್ಹೆಯ ಬಾಗೇವಾಡಿ ನಗರ ಅದ್ವಿತೀಯ ಪ್ರವಾದಿ ಬಸವಣ್ಣನವರನ್ನು ಕೊಟ್ಟು ಖ್ಯಾತವಾಗಿರುವಂತೆ ಈ ತಾಲೂಕಿನ 'ಸಾಸನೂರ' ಗ್ರಾಮ ಅದ್ವಿತೀಯ ಕನ್ನಡ ವಿದ್ವಾಂಸರಾದ ಎಂ.ಟಿ. (ಮಡಿವಾಳಪ್ಪ), ಎ.ಟಿ.(ಪ್ರೊ. ಅಯ್ಯಪ್ಪ), ಎಚ್. ಟಿ(ಪ್ರೊ. ಹಣಮಂತ್ರಾಯ) ಹಾಗೂ ಬಿ.ಟಿ. ಸಾಸನೂರರನ್ನು ಕೊಟ್ಟಿದೆ."

ಶ್ರೀ ನಿ.ಪ್ರ. ಮಹಾಂತಸ್ವಾಮಿಗಳವರು ಚಿತ್ತರಗಿ ಸಂಸ್ಥಾನ ಮಠ, ಇಲಕಲ್, ಅವರು 'ಸಾಸನೂರ ಸಿರಿ ' ಗ್ರಂಥಕ್ಕೆ ಕಳಿಸಿದ ಸಂದೇಶದಲ್ಲಿ ಹೀಗೆ ಹೇಳಿದ್ದಾರೆ."ನಾಡಿನ ಸಾಹಿತ್ಯಿಕ, ಶೈಕ್ಷಣಿಕ, ಸಾಂಸ್ಕೃತಿಕ ಬದುಕಿನ ಸಂವರ್ಧನೆಯಲ್ಲಿ ಸಾಸನೂರ ಮನೆತನ ಗುರುತರವಾದ ಪಾತ್ರವಹಿಸಿದೆ. ಶ್ರೀ ಎಂ.ಟಿ. ಸಾಸನೂರ, ಪ್ರೊ. ಎ.ಟಿ. ಸಾಸನೂರ, ಡಾ. ಎಚ್.ಟಿ. ಸಾಸನೂರ, ಪ್ರೊ. ಬಿ.ಟಿ. ಸಾಸನೂರ, ಶ್ರೀ ವಿಜಯ ಸಾಸನೂರ ಈ ಹೆಸರುಗಳು ಕನ್ನಡಿಗರಲ್ಲಿ ರೋಮಾಂಚನವನ್ನುಂಟು ಮಾಡುತ್ತವೆ."

### ಪ್ರೊ. ಎ.ಟಿ. ಸಾಸನೂರ ಅವರ ಬಗ್ಗೆ :

ನನ್ನ ಪೂಜ್ಯ ಕಾಕಾ ಎ.ಟಿ. ಸಾಸನೂರ ಅವರು ಕರ್ನಾಟಕ ಕಾಲೇಜಿನಲ್ಲಿ ಕನ್ನಡ ಪ್ರೊಫೆಸರ್. ಅವರು ಕಾಲೇಜಿಗೆ ಹೋಗುವಾಗ ಸೂಟು (Europen three piece suit) ಮತ್ತು ತಲೆಯ ಮೇಲೆ ಸುಂದರವಾಗಿ ಸುತ್ತಲ್ಪಟ್ಟ ರೇಶ್ಮಿ ಪಟಗ ಧರಿಸುತ್ತಿದ್ದರು. ಅವರು ಧಾರವಾಡದಲ್ಲಿ ಮನೆ ಮಾಡಿದಾಗ ಮೊದಲನೇ ಸಲ ನಮ್ಮ ತಂದೆಯವರು ಹೋಗಿದ್ದರಂತೆ. ಅವರಿಗೆ ಮನೆಯ ಬಗ್ಗೆ ಪರಿಚಯವಿದ್ದಿಲ್ಲ. ದಾರಿಯ ಮೇಲೆ ಅವರ ಎದುರಿಗೆ ಸೂಟು ಬೂಟು ಧರಿಸಿದ ಸುಂದರ ತರುಣ ಬರುವುದನ್ನು ಕಂಡು "ಇಲ್ಲಿ ಪ್ರೊಫೆಸರ್ ಎ.ಟಿ. ಸಾಸನೂರ ಅವರ ಮನೆ ಯಾವ ಕಡೆಗೆ ಇದೆ?" ಎಂದು ಕೇಳಿದರು. "ಅಣ್ಣಾ, ಯಾವಾಗ ಬಂದಿರಿ? ನಡೆಯಿರಿ. ಮನೆಗೆ ಹೋಗೋಣ" ಎಂದು ಹೇಳಿ ಎ.ಟಿ. ಇವರನ್ನು ಕರೆದುಕೊಂಡು ಹೋದರು. ಈ ವೇಷದಲ್ಲಿ ತಮ್ಮ ಪ್ರೀತಿಯ ತಮ್ಮನನ್ನು ಗುರುತಿಸಲಾಗಲಿಲ್ಲವೆಂದು ನಮ್ಮ ತಂದೆ ಹೇಳುತ್ತಿದ್ದರು.

ಒಮ್ಮೆ ಎ.ಟಿ. ಯವರು ಪಾಶ್ಚಾತ್ಯ ವೇಷದಲ್ಲಿ ಧಾರವಾಡ ಕರ್ನಾಟಕ ಕಾಲೇಜಿಗೆ ನಡೆದಿದ್ದರಂತೆ. ದಾರಿಯ ಮೇಲೆ ಒಂದು ಜನರ ಗುಂಪು ನೋಡಿದರು. ಮುಸ್ಲಿಂ ಪಠಾಣನು ಒಬ್ಬ ವ್ಯಕ್ತಿಯನ್ನು ಚಾಬೂಕಿನಿಂದ ಹೊಡೆಯುತ್ತಿದ್ದನು. ಎ.ಟಿ. ಯವರು ಕಾರಣ ಕೇಳಿದಾಗ "ಸರ್, ಈ ವ್ಯಕ್ತಿ ನನ್ನಿಂದ ಹಣದ ಸಾಲಾ ಪಡೆದುಕೊಂಡು ಬಡ್ಡಿ ಹಣ ಸಹ ಕೊಟ್ಟಿಲ್ಲ" ಎಂದು ಪಠಾಣ ಉತ್ತರಿಸಿದ. ಇದನ್ನು ಕೇಳಿ ನೊಂದು, ತಮ್ಮ ಕೋಟಿನ ಕಿಸೆಯಲ್ಲಿದ್ದ ಪರ್ಸನ್ನು ತೆಗೆದು ಎಲ್ಲ ಹಣವನ್ನು ಆ ಪಠಾಣನಿಗೆ ಕೊಟ್ಟು ಮುನ್ನಡೆದರು. ಈ ಬಡ ಸಾಲಗಾರನನ್ನು ಸಾಲದ ಶೂಲದಿಂದ ಪಾರುಮಾಡಿದ್ದು ಎಲ್ಲರನ್ನು ದಂಗು ಬಡಿಸಿತು. ಆ ಸಾಲಗಾರನು ನಮ್ಮ ಕಾಕಾನ ಕಾಲಿಗೆ ಬಿದ್ದು "ನಿಮ್ಮ ಸಹಾಯಕ್ಕಾಗಿ ನನ್ನ ನಮನಗಳು. ನಿಮಗೆ ಹಣ ಹಿಂತಿರುಗಿಸುವೆನೆಂದು" ಹೇಳಿದ. ಅವನಿಗೆ ಬುದ್ಧಿ ಮಾತು ಹೇಳಿ "ಇನ್ನೊಮ್ಮೆ ಸಾಲ ಮಾಡಬೇಡ. ಹಣ ಹಿಂತಿರುಗಿಸಬೇಡ" ಎಂದು ಹೇಳಿದರು. ಈ ಸಂಗತಿ ಅವರ ಮಾನವೀಯತೆ, ಸಕಲ ಜೀವಗಳಿಗೆ ಲೇಸನೇ ಬಯಸುವ ಪಾರಮಾರ್ಥಿಕ ಭಾವನೆಗೆ ನಿದರ್ಶನವೆನಿಸಿದೆ.

ಪ್ರೊ. ಎ.ಟಿ. ಯವರು ನಮ್ಮೂರು ಸಾಸನೂರ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದಾಗ ಗಣಿತದಲ್ಲಿ ಕೆಲವು ತಪ್ಪುಗಳನ್ನು ಮಾಡಿದ್ದರು. ನಮ್ಮ ತಂದೆಯವರೇ ಅವರ ಗುರುಗಳು. ಈ ತಪ್ಪುಗಳನ್ನು ಕಂಡು ಅವರಿಗೆ ಭಯಂಕರ ಸಿಟ್ಟು ಬಂದು ಸಿಕ್ಕಾಪಟ್ಟೆ ಬಡಿಗೆಯಿಂದ ಹೊಡೆದು, ಮೃದುಮನಸ್ಸಿನ ಸುಂದರ ಹುಡುಗ

ಕಂಬನಿ ಸುರಿಸುವದನ್ನು ನೋಡಿ, ತಂದೆಯವರಿಗೆ ಬಹಳಷ್ಟು ನೋವಾಗಿ, ಇನ್ನು ಮುಂದೆ ಇಂಥ ಜಾಣ ತಮ್ಮನನ್ನು ಎಂದೂ ಹೊಡೆಯಬಾರದೆಂದು ನಿರ್ಧರಿಸಿದರು. ಅದೇ ಮೊದಲ ಅದೇ ಕೊನೆಯ ಹೊಡೆತ ತಮ್ಮನಿಗೆ.

ಎ.ಟಿ. ಯವರು ಪ್ರತಿಭಾಶಾಲಿಗಳು. ಒಮ್ಮೆ ಓದಿದ್ದನ್ನು ಮತ್ತೊಮ್ಮೆ ಓದುತ್ತಿರಲಿಲ್ಲ. ಪ್ರಾಥಮಿಕ ನಾಲ್ಕನೇ ವರ್ಗ ಮುಗಿಸಿದ ನಂತರ ತಂದೆಯವರು ಎ.ಟಿ. ಯವರನ್ನು ಸಮೀಪದ ತಾಳಿಕೋಟಿ ಇಂಗ್ಲಿಷ ಮಾಧ್ಯಮಿಕ ಶಾಲೆಗೆ ಕಳಿಸಿದರು. ಈಗಿನ ವಯೋವೃದ್ಧ ಖಾಸ್ಗತೇಶ ಸ್ವಾಮಿಗಳು ಎ.ಟಿ.ಯವರ ಕ್ಲಾಸ್‌ಮೇಟ್. ಇಂಗ್ಲೀಷ ಐದು ಮತ್ತು ಆರು ವರ್ಗಗಳನ್ನು ಒಂದೇ ವರ್ಷದಲ್ಲಿ ಮುಗಿಸಿದ ನಂತರ ತಂದೆಯವರು ಅವರನ್ನು ವಿಜಾಪೂರದ ಶ್ರೀ ಸಿದ್ಧೇಶ್ವರ ಹಾಯ್‌ಸ್ಕೂಲ್‌ಗೆ ಸೇರಿಸಿದರು. ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಇಡಿ ವಿಜಾಪೂರ ಕೇಂದ್ರಕ್ಕೆ ಪ್ರಥಮ ರ‍್ಯಾಂಕ ಪಡೆದದ್ದಲ್ಲದೆ, ಗಣಿತ ವಿಷಯದಲ್ಲಿ ಹೆಚ್ಚು ಗುಣಗಳನ್ನು ಪಡೆದದ್ದಕ್ಕಾಗಿ ಅವರಿಗೆ ಸರಕಾರ ಸ್ಕಾಲರ್‌ಶಿಪ್ (ವಿದ್ಯಾರ್ಥಿವೇತನ) ಕೊಟ್ಟಿತು.

ಇದೇ ರೀತಿ ಅವರು ಬಿ.ಎ. ಪರೀಕ್ಷೆಗೆ ಇಂಗ್ಲಿಷ ಆನರ್ಸ ಮತ್ತು ಕನ್ನಡ ತೆಗೆದುಕೊಂಡು ಅತಿ ಹೆಚ್ಚಿನ ಗುಣಗಳನ್ನು ಪಡೆದಿದ್ದಕ್ಕಾಗಿ ಆಗಿನ ಬ್ರಿಟಿಶ ಸರಕಾರ "ದಕ್ಷಿಣ ಫೆಲೋ" (Deccan Fellow) ವಿದ್ಯಾರ್ಥಿ ವೇತನ ನೀಡಿತು.

ಆಗಿನ ಕಾಲದಲ್ಲಿ ಮ್ಯಾಟ್ರಿಕ್, ಬಿ.ಎ. ಮತ್ತು ಎಂ.ಎ. ಪರೀಕ್ಷಾ ಕೇಂದ್ರಗಳು ಕೇವಲ ಮುಂಬಯಿಯಲ್ಲಿದ್ದವು. ಪರೀಕ್ಷಾರ್ಥಿಗಳು ಪರೀಕ್ಷೆಗಾಗಿ ಮುಂಬಯಿಗೆ ಹೋಗಬೇಕಾಗುತ್ತಿತ್ತು. ಎ.ಟಿ.ಯವರು ತಮ್ಮ ಕೊನೆಯ ಎಂ.ಎ. ಪರೀಕ್ಷೆಗಾಗಿ ಮುಂಬಯಿಗೆ ಹೋಗುವ ಮುಂಚೆ ತಂದೆಯವರಿಗೆ ೨೦೦(ಎರಡುನೂರು) ರೂಪಾಯಿಗಳನ್ನು ಖರ್ಚಿಗಾಗಿ ಕಳುಹಿಸಲು ಪತ್ರ ಬರೆದರು. ಇಷ್ಟೊಂದು ಹಣ ಹೇಗೆ ಕೂಡಿಸಬೇಕೆಂಬ ಚಿಂತೆ. ಕೊನೆಗೆ ತಂದೆಯವರು ತುಂಬಗಿ ಗ್ರಾಮದಲ್ಲಿಯ ತಮ್ಮ ಆತ್ಮೀಯ ಗೆಳೆಯ ಹೊಸಮನಿ ಮಡಿವಾಳಪ್ಪನಲ್ಲಿಗೆ ಹೋಗಿ, ತಮ್ಮ ಸಮಸ್ಯೆಯನ್ನು ಹೇಳಿದರು. ಆಗ ಹೊಸಮನಿ ಮಡಿವಾಳಪ್ಪನವರಲ್ಲಿ ಅಷ್ಟು ಹಣ ಇರಲಿಲ್ಲ. ತಮ್ಮಲ್ಲಿದ್ದ ಬಂಗಾರದ ಆಭರಣಗಳನ್ನು ತಾಳಿಕೋಟಿಗೆ ಹೋಗಿ ಒತ್ತೆ ಇಟ್ಟು, ತಂದೆಯವರಿಗೆ ಎರಡು ನೂರು ರೂಪಾಯಿಗಳನ್ನು ಕೊಟ್ಟರು. ತಕ್ಷಣವೇ ತಂದೆಯವರು ಧಾರವಾಡಕ್ಕೆ ಹಣ ಕಳಿಸಿದರು. ಹೊಸಮನಿ ಮಡಿವಾಳಪ್ಪನಂಥ ಜನ ಸಿಗುವದು ವಿರಳ. ಮುಂದೆ ತಂದೆಯವರು ಅವರ ಹಣವನ್ನು ತೀರಿಸಿದರಂತೆ. ಹೀಗೆ ನಮ್ಮ ತಂದೆಯವರ ಹಿತೈಷಿ ಮಿತ್ರರ ಸಹಾಯದಿಂದ ಅವರ ತಮ್ಮಂದಿರ ವಿದ್ಯಾಭ್ಯಾಸ ಸುರಳಿತವಾಗಿ ನಡೆಯಿತು. ಕೊಣ್ಣೂರ ಗ್ರಾಮದ ದೊಡ್ಡಪ್ಪ ಗೌಡ ಪಾಟೀಲ ಮತ್ತು ಸಿದ್ದನಗೌಡ ಪಾಟೀಲರು ತಂದೆಯವರು ಬೇಡಿದಾಗ ಹಣ ಕಳುಹಿಸುತ್ತಿದ್ದರು. ಈ ಸಾಲದ ಹಣವನ್ನು ತಮ್ಮ ತಮ್ಮಂದಿರ ವಿದ್ಯಾಭ್ಯಾಸಕ್ಕಾಗಿ ವ್ಯಯಿಸಿ, ಅದನ್ನು ತಪ್ಪದೇ ತೀರಿಸುತ್ತಿದ್ದರು.

ಆಗಿನ ಕಾಲದಲ್ಲಿ ನಮ್ಮ ತಂದೆಯವರ ತಿಂಗಳ ಪಗಾರ ದೊಡ್ಡ ಸಂಸಾರದ ನಿರ್ವಹಣೆಗೆ ಸಾಕಾಗುತ್ತಿರಲಿಲ್ಲ. ಹೀಗಾಗಿ ಮೂವರು ತಮ್ಮಂದಿರ ವಿದ್ಯಾಭ್ಯಾಸಕ್ಕಾಗಿ ಸಾಲ ಮಾಡುವ ಪ್ರಸಂಗವು ಬರುತ್ತಲಿದ್ದವು. ಆದರೆ ಅವರು ಯಾವುದಕ್ಕೂ ಅಂಜದೆ ಅಳುಕದೆ ತಮ್ಮ ತಮ್ಮಂದಿರ ಉಜ್ವಲ ಭವಿಷ್ಯಕ್ಕಾಗಿ ಯಾವ ತ್ಯಾಗಕ್ಕೂ ಸಿದ್ಧರಾಗುತ್ತಿದ್ದರು.

ಪ್ರೊ. ಎ.ಟಿ. ಅವರು ಏಕಪಾಠಿಯಾಗಿದ್ದರು. ಒಮ್ಮೆ ಓದಿದ ವಿಷಯಗಳನ್ನು ಮತ್ತೊಮ್ಮೆ ಓದುತ್ತಿರಲಿಲ್ಲ. ಬಿ.ಎ. ಮತ್ತು ಎಂ.ಎ. ಓದುವಾಗ ಪ್ರಥಮ ವರ್ಷದಲ್ಲಿ ಪಠ್ಯಪುಸ್ತಕಗಳನ್ನು ಕೂಲಂಕಷವಾಗಿ ಓದಿ, ನೋಟ್ಸ (ಟಿಪ್ಪಣಿ) ತೆಗೆದು, ಎರಡನೆಯ ವರ್ಷದಲ್ಲಿ ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗುತ್ತಿದ್ದರು.

ಆದರೂ ಅವರು ಪ್ರಥಮ ವರ್ಗದಲ್ಲಿ ಪಾಸಾಗುತ್ತಿದ್ದರು. ೧೯೩೧ರಲ್ಲಿ ಜರುಗಿದ ಎಂ.ಎ. ಕೊನೆಯ ಪರೀಕ್ಷೆಯಲ್ಲಿ ಮುಂಬಯಿ ವಿಶ್ವವಿದ್ಯಾಲಯಕ್ಕೆ ಪ್ರಥಮ ರ್‍ಯಾಂಕು ಪಡೆದರು. ಕನ್ನಡ ವಿಷಯದಲ್ಲಿ ಸುಮಾರು ೮೦ ಪ್ರತಿಶತ ಗುಣಗಳನ್ನು ಪಡೆದರು.

ಕರ್ನಾಟಕ ಕಾಲೇಜಿನಲ್ಲಿ ವಾರ್ಷಿಕ ಸ್ನೇಹಸಮ್ಮೇಳನ ಕಾರ್ಯಕ್ರಮಗಳಲ್ಲಿ ಮಾಸ್ತಿವೆಂಕಟೇಶ ಅಯ್ಯಂಗಾರ್ ಅವರ "ತಾಳಿಕೋಟಿ ಪತನ" ನಾಟಕವನ್ನು ಅಭಿನಯಿಸಲು ಎ.ಟಿ. ಯವರ ಗೆಳೆಯರೆಲ್ಲ ನಿರ್ಧರಿಸಿದರು. ಈ ನಾಟಕದಲ್ಲಿ ನಾಯಕಿ ಆಯೇಷಾ ಪಾತ್ರವನ್ನು ಎ.ಟಿ. ಯವರಿಗೆ ಕೊಡಲಾಯಿತು. ಮೊದಲೇ ಅತ್ಯಂತ ಸ್ಫುರದ್ರೂಪಿಯಾಗಿದ್ದ ಅವರಿಗೆ ಈ ಪಾತ್ರ ತುಂಬ ಹೊಂದಿಕೊಂಡಂತಾಗಿತ್ತು. ಆಯೇಷಾಳ ಪಾತ್ರಕ್ಕಾಗಿ ಬೇಕಾಗುವ ಮುಸ್ಲಿಂ ಸ್ತ್ರೀಯಳ ಪೋಷಾಕುಗಳನ್ನು ಸವಣೂರ ಸಂಸ್ಥಾನದ ನವಾಬರು ಕಳಿಸಿದ್ದರು. ಆಯೇಷಾಳ ಪಾತ್ರವನ್ನು ಹೃದಯಂಗಮವಾಗಿ ನಟಿಸಿದಾಗ, ಸಭಿಕರೆಲ್ಲ ಈ ಪಾತ್ರಧಾರಿ ಹೆಣ್ಣುಮಗಳೇ ಎಂದು ತಿಳಿದಿದ್ದರು. ಆಮೇಲೆ ರಂಗಭೂಮಿಯ ಮೇಲೆ ಅವರನ್ನು ಪರಿಚಯಿಸಿದಾಗ ಎಲ್ಲರಿಗೂ ಗೊತ್ತಾಯಿತು. ಅವರೇ ಎ.ಟಿ. ಸಾಸನೂರ ಎಂದು.

ಆಗಿನ ಕರ್ನಾಟಕ ಕಾಲೇಜಿನಲ್ಲಿ ಮರಾಠಿ ಪ್ರಭಾವ ಬಲವಾಗಿತ್ತು. ಹೆಚ್ಚಾಗಿ ಮರಾಠಿ ಮಾತನಾಡುವ ಉಪನ್ಯಾಸಕರಿದ್ದರು. ಕನ್ನಡವನ್ನು ಯಾರೂ ಕೇಳುತ್ತಿದ್ದಿಲ್ಲ. ಕನ್ನಡದ ಕಟ್ಟಾ ಅಭಿಮಾನಿ ಎ.ಟಿ. ತಮ್ಮ ಮಿತ್ರರೊಡನೆ ಧರಣಿ ನಡೆಸಿ, ಕನ್ನಡ ಕಾರ್ಯಕ್ರಮಗಳು ನಡೆಯುವಂತೆ ಪ್ರಯತ್ನಿಸಿ ಸಫಲರಾದರು. ಕನ್ನಡ ಭಾಷೆಗೆ ಉಸಿರು ಬರುವಂತೆ ಮಾಡಿದರು. ಎ.ಟಿ.ಯವರು ನಿಸರ್ಗ ಮತ್ತು ಸಂಗೀತ ಪ್ರೇಮಿ. ಸಾಸನೂರ ಗ್ರಾಮದಲ್ಲಿ ಅವರ ಗೆಳೆಯ ಪತ್ತಾರ ಮಾನಪ್ಪ ಶ್ರೇಷ್ಠ ಹಾಡುಗಾರ. ಅವರು ಎಂ.ಎ. ಪರೀಕ್ಷೆಯ ನಂತರ ಊರಿಗೆ ಬಂದಿದ್ದರು. ಅವರಿಬ್ಬರೂ ಸಂಜೆಯ ಸಮಯದಲ್ಲಿ ನಮ್ಮ ಊರ ಮುಂದೆ ಹರಿಯುವ ದೋಣಿಯ ದಂಡೆಯಲ್ಲಿ ಕುಳಿತು ಮಾತನಾಡುವಾಗ ಎ.ಟಿ.ಯವರ ಕೋರಿಕೆಯಂತೆ ಮಾನಪ್ಪ ಹಾಡತೊಡಗಿದ. ಎ.ಟಿ. ಯವರು ಆ ಗಾಯನ ಶ್ರವಣದಲ್ಲಿ ತನ್ಮಯರಾಗಿದ್ದರು. ಇಬ್ಬರಿಗೂ ಮೈಮೇಲೆ ಪರವೆಯೇ ಇದ್ದಿಲ್ಲ. ಆ ಸಮಯದಲ್ಲಿ ಒಂದು ದೊಡ್ಡ ನಾಗರಹಾವು ಹೆಡೆ ತೆಗೆದು ಅವರಿಬ್ಬರ ಮುಂದೆ ನಿಂತಿತು. ಅಲ್ಲಿದ್ದ ಒಬ್ಬರು ಈ ದೃಶ್ಯವನ್ನು ನೋಡಿ ಜೋರಾಗಿ ಚೀರಿದರು. ಇಬ್ಬರಿಗೂ ಪ್ರಜ್ಞೆ ಬಂದಿತು. ಹಾವು ಅವರಿಗೆ ಏನನ್ನೂ ಮಾಡದೆ ಮುಳ್ಳುಕಂಟಿಯಲ್ಲಿ ಮರೆಯಾಯಿತು. ಈ ದೃಶ್ಯದ ಬಗ್ಗೆ ನಮ್ಮ ತಂದೆಯವರು ಎಲ್ಲರಿಗೂ ಹೇಳುತ್ತಿದ್ದರು. ಎ.ಟಿ.ಯವರ ನಿಸರ್ಗಪ್ರೀತಿ. ಸಂಗೀತದ ಅಭಿರುಚಿಗಳಿಗೆ ಇದು ಸಾಕ್ಷಿಯಾಗಿದೆ.

ಪ್ರೊ. ಎ.ಟಿ. ಯವರು ಧಾರವಾಡ ಕರ್ನಾಟಕ ಕಾಲೇಜಿನಲ್ಲಿ ಕನ್ನಡ ಪ್ರೊಫೆಸರಾಗಿ ಜೂನ ೩೦, ೧೯೩೧ರಂದು ನೇಮಿಸಲ್ಪಟ್ಟರು. ಆಗಿನ ಕಾಲದಲ್ಲಿ ಕನ್ನಡ ಎಂ.ಎ. ಪಾಸಾದವರು ಅತಿ ವಿರಳ. ಆ ಸಮಯದಲ್ಲಿ ಮುಂಬಯಿ ಪ್ರಾಂತ ಸರಕಾರದಲ್ಲಿ ಹುಬ್ಬಳ್ಳಿಯವರಾದ ಶ್ರೀ ಸಿದ್ಧಪ್ಪ ಕಂಬಳಿಯವರು ಶಿಕ್ಷಣಮಂತ್ರಿಗಳಾಗಿದ್ದರು. ಅವರು ಎ.ಟಿ. ಯವರ ವಿದ್ವತ್ತನ್ನು ಪರಿಗಣಿಸಿ ಪ್ರೊಫೆಸರ್ ಜಾಗೆಗೆ ಶಿಫಾರಸ್ ಮಾಡಿದರು. ನಾಲ್ಕು ವರ್ಷಗಳ ಪ್ರೊಫೆಸರ್ ಸೇವೆಯಲ್ಲಿ ಅವರು ಕನ್ನಡಕ್ಕಾಗಿ ದುಡಿದರು. ಆಗಿನ ಕಾಲದಲ್ಲಿ ಕನ್ನಡ ಬಿ.ಎ. ಆನರ್ಸ ಕೋರ್ಸ್‌ಗೆ ಪ್ರತಿಭಾನ್ವಿತ ವ್ಯಕ್ತಿಗಳು ಸೇರ್ಪಡೆಯಾಗಿದ್ದರು. ಅವರಲ್ಲಿ ಪ್ರಮುಖರೆಂದರೆ ದಿವಂಗತ ಎನ್.ಕೆ. ಕುಲಕರ್ಣಿ, ಸ.ಸ. ಮಾಳವಾಡ, ತಲ್ಲೂರ ರಾಯನಗೌಡ, ಪ್ರೊ. ಎಸ್.ಎಸ್. ಭೂಸನೂರಮಠ, ರಂ.ಶ್ರೀ. ಮುಗಳಿ, ಪುರಾಣಿಕ , ನಾಡಿಗೇರ, ಮಳಗಿ ಅನೇಕ ದಿಗ್ಗಜರು. ಇವರೆಲ್ಲ ಎ.ಟಿ. ಯವರ ಗರಡಿಯಲ್ಲಿ ಬೆಳೆದು ಹೆಸರುವಾಸಿಯಾದರು.

ವಿಜಾಪುರ ಜಿಲ್ಲೆಯವರಾದ ಪ್ರೊಫೆಸರ್ ಆರ್.ವ್ಹಿ. ಜಾಹಗೀರದಾರ (ಶ್ರೀರಂಗ) ಅವರು ಲಂಡನ್ ವಿಶ್ವವಿದ್ಯಾಲಯದಿಂದ ಎಂ.ಎ. (ಸಂಸ್ಕೃತ) ಪದವಿ ಪಡೆದು, ಕರ್ನಾಟಕ ಕಾಲೇಜಿನಲ್ಲಿ ಸಂಸ್ಕೃತ ಪ್ರೊಫೆಸರ್ ಆದರು. ಅವರು ಶ್ರೇಷ್ಠ ನಾಟಕಕಾರರು. 'ನನಗೆ ಕನ್ನಡದಲ್ಲಿ ಒಂದು ಸಾಹಿತಿಯ ಸ್ಥಾನ ದೊರಕಬೇಕಾದರೆ ಪ್ರೊ. ಎ.ಟಿ. ಯವರೇ ಕಾರಣ' ಎಂದು ಅವರು ತಮ್ಮ ಆತ್ಮಚರಿತ್ರೆಯಲ್ಲಿ ಬರೆದಿದ್ದಾರೆ. ಅವರ ನಾಟಕಗಳನ್ನು ಎ.ಟಿ. ಯವರು ತಮ್ಮ ಗೆಳೆಯರೊಂದಿಗೆ ರಂಗಸ್ಥಳಕ್ಕೆ ತಂದು, ಅಭಿನಯಿಸಿದರು.

ಮುಂಬಯಿ ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಇಕನಾಮಿಕ್ಸದ ಪ್ರೊಫೆಸರ್ ಮತ್ತು ನಿರ್ದೇಶಕರಾಗಿದ್ದ ಡಾ. ವ್ಹಿ.ಕೆ. ಆರ್.ವಿ. ರಾವ್ ಅವರು ಪ್ರಥಮವಾಗಿ ಕರ್ನಾಟಕ ಕಾಲೇಜಿನಲ್ಲಿ ಅರ್ಥಶಾಸ್ತ್ರದ ಉಪನ್ಯಾಸಕರಾಗಿದ್ದರು. ಅವರು ಧಾರವಾಡದ ಬಗ್ಗೆ ಹೇಳುವಾಗ "ಪ್ರೊಫೆಸರ್ ಎ.ಟಿ. ಸಾಸನೂರ ಅವರೊಬ್ಬ ಅದ್ಭುತ ವ್ಯಕ್ತಿ" (Prof. A.T. Sasnur was a wonderful man") ಎಂದು ಒಂದು ಲೇಖನದಲ್ಲಿ ಹೇಳಿದ್ದಾರೆ.

೧೯೩೭ರಲ್ಲಿ ಅಖಿಲ ಕರ್ನಾಟಕ ಕನ್ನಡ ಸಾಹಿತ್ಯ ಸಮ್ಮೇಳನ ಹುಬ್ಬಳ್ಳಿಯಲ್ಲಿ ಜರುಗಿದಾಗ, ಶ್ರೀ ಸಿದ್ದಪ್ಪ ಕಂಬಳಿ (ಮುಂಬಯಿ ಸರಕಾರದ ಶಿಕ್ಷಣ ಮಂತ್ರಿಗಳು) ಸಮ್ಮೇಳನದ ಸ್ವಾಗತಾಧ್ಯಕ್ಷರು. ಅವರ ಸ್ವಾಗತ ಭಾಷಣವನ್ನು ಪ್ರೊ. ಎ.ಟಿ. ಯವರು ಬರೆದುದಾಗಿದೆ. ಎ.ಟಿ.ಯವರು ಈ ಸಮ್ಮೇಳನದ ಯಶಸ್ವಿಗಾಗಿ ಹಗಲು ರಾತ್ರಿ ದುಡಿದರು.

ಈ ಸಮ್ಮೇಳನದ ಅಂಗವಾಗಿ ಏರ್ಪಡಿಸಲಾದ ಕವಿಸಮ್ಮೇಳನದ ಅಧ್ಯಕ್ಷತೆಯನ್ನು ಡಾ. ಕೆ.ವ್ಹಿ. ಪುಟ್ಟಪ್ಪ (ಕುವೆಂಪು) ವಹಿಸಿ, ತಾವು ಬರೆದ "ಕಿಂದರಿ ಜೋಗಿ" ಹಾಡನ್ನು ಸ್ವತಃ ಕುವೆಂಪು ಓದಿದಾಗ ಇಡೀ ಸಭೆಯೇ ಮಂತ್ರಮುಗ್ಧವಾಗಿತ್ತು. ಎ.ಟಿ.ಯವರು ಕುವೆಂಪು ಅವರಿಗೂ ಧಾರವಾಡದ ತಮ್ಮ ಮನೆಗೆ ಉಪಾಹಾರಕ್ಕಾಗಿ ಆಮಂತ್ರಿಸಿದ್ದರು. ಕುವೆಂಪು ಮತ್ತು ಇನ್ನುಳಿದ ಸಾಹಿತಿಗಳು ಮನೆಗೆ ಬಂದು ಆತಿಥ್ಯ ಸ್ವೀಕರಿಸಿದರು. ಆಗ ನಮ್ಮ ಸೋದರತ್ತೆ ಬಾಯಮ್ಮ ಇಡೀ ಮನೆಯ ಭಾರವನ್ನು ಹೊತ್ತು ಬಂದ ಅತಿಥಿಗಳಿಗೆ ಸಿರಾ, ಪುರಿ, ಪಲ್ಯೆ ತಯಾರಿಸಿ ಎಲ್ಲರಿಗೂ ಉಣಬಡಿಸಿದರು. ಇದನ್ನು ನಮ್ಮ ಅತ್ತೆ ಹೇಳುತ್ತಿದ್ದರು.

ಕಾದಂಬರಿ ಸಾರ್ವಭೌಮ ಅ.ನ. ಕೃಷ್ಣರಾಜರು ಎ.ಟಿ. ಯವರು ಅತ್ಯಂತ ಆತ್ಮೀಯ ಗೆಳೆಯರಾಗಿದ್ದರು. ಅವರನ್ನು ಕರ್ನಾಟಕ ಸಂಘದ ಉದ್ಘಾಟನೆಗಾಗಿ ಆಹ್ವಾನಿಸಿದ್ದರು.

ಎ.ಟಿ.ಯವರ ವಿದ್ವತ್ತು ಇಡಿ ಉತ್ತರ ಕರ್ನಾಟಕದಲ್ಲಿ ಅಷ್ಟೇ ಅಲ್ಲ, ಹಳೆಯ ಮೈಸೂರ ಸಂಸ್ಥಾನದಲ್ಲಿಯೂ ಪ್ರಚುರವಾಗಿತ್ತು. ಹೀಗಾಗಿ ಆಗಿನ ಮೈಸೂರ ಸಂಸ್ಥಾನದ ಅರಸರಾದ ನಾಲ್ಮಡಿ ಕೃಷ್ಣರಾಜರು ಎ.ಟಿ. ಯವರನ್ನು ಅರಮನೆಗೆ ಆಹ್ವಾನಿಸಿ ಮಾತುಕತೆ ನಡೆಸಿದರು.

ಧಾರವಾಡ ನಗರದಲ್ಲಿ ಕನ್ನಡಕ್ಕಾಗಿ ಹೋರಾಡಿದ ಮಹಾನುಭಾವರಾದ ಆಲೂರ ವೆಂಕಟರಾವ, ಶಂಬಾ ಜೋಶಿ, ಮುದವೀಡ ಕೃಷ್ಣರಾಯ, ಬೆಟಗೇರಿ ಕೃಷ್ಣಶರ್ಮಾ, ಭೀ.ಸು. ಪಾಟೀಲ ಇನ್ನುಳಿದ ಕನ್ನಡ ದಿಗ್ಗಜರೊಂದಿಗೆ ಎ.ಟಿ. ಯವರ ಆತ್ಮೀಯ ಸಂಬಂಧವಿದ್ದಿತು. ಇವರೊಂದಿಗೆ ಸೇರಿ ಕನ್ನಡತನವನ್ನು ಬೆಳೆಸುವದರಲ್ಲಿ ಸಕ್ರಿಯವಾಗಿ ಪಾಲ್ಗೊಂಡರು.

ನಮ್ಮ ತಂದೆಯವರು ಎ.ಟಿ.ಯವರ ಬಗ್ಗೆ ಹೇಳಿದ ಮಾತುಗಳನ್ನು ಸ್ವಲ್ಪದರಲ್ಲಿ ಹೇಳುವದು ಅಸಾಧ್ಯ. ಅವರ ಅಕಾಲಿಕ ಮರಣ ತಂದೆಯವರನ್ನು ಗಾಸಿಗೊಳಿಸಿತು. ಅವರ ಎಲ್ಲ ಭವಿಷತ್ ಕನಸುಗಳು ಭಗ್ನವಾದವು. ಇದೊಂದು ತುಂಬಲಾರದ ಶೂನ್ಯವೆನಿಸಿತು, ನಮ್ಮ ತಂದೆಯವರಿಗೆ.

**ಡಾ. ಎಚ್.ಟಿ. ಸಾಸನೂರ ಅವರ ಬಗ್ಗೆ :**

ಆರನೇ ತಮ್ಮ ಎಚ್.ಟಿ. ಯವರು ಸಾಸನೂರ ಗ್ರಾಮದಲ್ಲಿ ತಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು ತಂದೆಯವರ ಮಾರ್ಗದರ್ಶನದಲ್ಲಿ ಮುಗಿಸಿದರು. ಅವರಿಗೆ ಸಂಸ್ಕೃತ, ಕನ್ನಡ ಮತ್ತು ಗಣಿತ ವಿಷಯಗಳಲ್ಲಿ ಭದ್ರವಾದ ಬುನಾದಿಯನ್ನು ಹಾಕಿಕೊಟ್ಟರು. ಒಳ್ಳೆಯ ತರಬೇತಿ ನೀಡಿ ಮುಲ್ಕಿ ಪರೀಕ್ಷೆಯ ನಂತರ ಅವರನ್ನು ವಿಜಾಪುರದ ಶ್ರೀ ಸಿದ್ಧೇಶ್ವರ ಹಾಯ್‌ಸ್ಕೂಲಿಗೆ ಸೇರಿಸಿದರು. ತಾವು ಒಬ್ಬ ಸಾಮಾನ್ಯ ಶಿಕ್ಷಕರಾಗಿದ್ದರೂ ತಮ್ಮ ಮೂವರು ತಮ್ಮಂದಿರನ್ನು ಫ್ರೀ ಬೋರ್ಡಿಂಗನಲ್ಲಿ - ಲಿಂಗರಾಜ ಹಾಸ್ಟೇಲಿನಲ್ಲಿಟ್ಟು, ಉಟೋಪಚಾರ, ವಾಸ್ತವ್ಯಕ್ಕಾಗಿ ಪ್ರತಿ ತಿಂಗಳು ಅವರು ಬೇಡಿದಷ್ಟು ಹಣ ಕಳಿಸುತ್ತಿದ್ದರು.

ಬಾಲ್ಯಾವಸ್ಥೆಯಿಂದಲೂ ಎಚ್.ಟಿ. ಯವರಿಗೆ ಸುಂದರವಾದ ಪೋಷಾಕುಗಳನ್ನು ಧರಿಸುವುದು ಹವ್ಯಾಸ. ಅವರು ಹಾಯ್‌ಸ್ಕೂಲಿನಲ್ಲಿ ಓದುತ್ತಿರುವಾಗಲೇ ಉಲನ್‌ಕೋಟ, ಮ್ಯಾಂಚಿಸ್ಟರ್ ಧೋತರ, ಮತ್ತು ಟೊಪ್ಪಿಗೆ ಕೊಳ್ಳಲು ತಂದೆಯವರು ಧಾರಾಳವಾಗಿ ಹಣ ಕಳಿಸುತ್ತಿದ್ದರು. ಅವರ ಚೈನಿ ಜೀವನದ ಬಗ್ಗೆ ಅವರ ಆತ್ಮೀಯ ಗೆಳೆಯ ಮತ್ತು ಸಹಪಾಠಿ ಹೊನ್ನುಟಗಿ ಶಂಕರಗೌಡ ಹೇಳುತ್ತಿದ್ದರು.

ಒಮ್ಮೆ ತಂದೆಯವರು ವಿಜಾಪುರದ ಬಸ್‌ಸ್ಟ್ಯಾಂಡಿನಲ್ಲಿ ಸಾಸನೂರ ಕಡೆಗೆ ಹೋಗುವ ಬಸ್ಸಿನಲ್ಲಿ ಕುಳಿತಾಗ, ಎಚ್.ಟಿ. ಯವರು ಅವರನ್ನು ಕಳಿಸಲು ಬಂದು ಬಾಗಿಲ ಹತ್ತಿರ ಸುಮ್ಮನೇ ನಿಂತಿದ್ದರು. ನಮ್ಮ ತಂದೆಯವರು ಅವನನ್ನು ಪ್ರಶ್ನಿಸಿ "ನಿನಗೇನು ಬೇಕು?" ಎಂದು ಕೇಳಿದಾಗ, ತನಗೆ ಒಂದು ಹೊಸ ಉಲನ್ ಕೋಟ ಹೊಲಿಸಲು ಹಣ ಬೇಕೆಂದು ಹೇಳಿದರು. ತಂದೆ ಏನನ್ನೂ ಮಾತನಾಡದೆ, ಅವರು ಬೇಡಿದಷ್ಟು ಹಣ ಕೊಟ್ಟು ಹಾಸ್ಟೇಲಿಗೆ ಕಳಿಸಿದರು.

ಎ.ಟಿ. ಯವರಂತೆ ಎಚ್.ಟಿ ಕೂಡಾ ಚೆನ್ನಾಗಿ ಅಭ್ಯಾಸಮಾಡಿ, ಮ್ಯಾಟ್ರಿಕ್ ಪರೀಕ್ಷೆಯಲ್ಲಿ ವಿಜಾಪುರ ಕೇಂದ್ರಕ್ಕೆ ಪ್ರಥಮ ರ್‍ಯಾಂಕು ಪಡೆದರು. ಇದು ೧೯೩೧ರ ಸಮಯ. ಆಗ ಎ.ಟಿ. ಯವರು ಕರ್ನಾಟಕ ಕಾಲೇಜಿನಲ್ಲಿ ಕನ್ನಡ ಪ್ರೊಫೆಸರ ಆಗಿ ನೇಮಕಗೊಂಡಿದ್ದರು. ಮುಂದಿನ ಕಾಲೇಜ ಅಭ್ಯಾಸಕ್ಕಾಗಿ ಎಚ್.ಟಿ. ಯವರು ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಎಫ್.ವಾಯ್. ಆರ್ಟ್ಸ (ಈಗಿನ ಪಿಯುಸಿ) ವರ್ಗದಲ್ಲಿ ಪ್ರವೇಶ ಪಡೆದರು. ಬಿ.ಟಿ. ಯವರು ಕಲಕೇರಿಯಲ್ಲಿ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದರು. ತಂದೆಯವರು ಅಲ್ಲಿ ಹೆಡ್‌ಮಾಸ್ತರರಾಗಿದ್ದರು. ಎ.ಟಿ.ಯವರು ಧಾರವಾಡದಲ್ಲಿ ಮನೆ ಮಾಡಿದನಂತರ ಬಿ.ಟಿ. ಯವರನ್ನು ಧಾರವಾಡಕ್ಕೆ ಹಾಯ್‌ಸ್ಕೂಲ ಅಭ್ಯಾಸಕ್ಕಾಗಿ ಕಳಿಸಿಕೊಟ್ಟರು. ಅವರನ್ನು ವಿಕ್ಟೋರಿಯಾ ಇಂಗ್ಲಿಷ ಸ್ಕೂಲಿಗೆ ಸೇರಿಸಿದರು.

ನಮ್ಮ ಸೋದರತ್ತೆ ಬಾಯಮ್ಮ ಮತ್ತು ನನ್ನ ಅಕ್ಕ ಶಾರದಾಳನ್ನು ಧಾರವಾಡಕ್ಕೆ ಕರೆಸಿ ಮನೆಯನ್ನು ಪ್ರಾರಂಭಿಸಿದರು. ಎಚ್.ಟಿ. ಮತ್ತು ಬಿ.ಟಿ. ಯವರ ಶಿಕ್ಷಣ ಎ.ಟಿ. ಯವರ ಹಿರಿತನದಲ್ಲಿ ಮುನ್ನಡೆಯಿತು.

ಎಫ್ ವಾಯ್ ಮತ್ತು ಇಂಟರ್ ಆರ್ಟ್ಸ ಮುಗಿಸಿ ಎಚ್.ಟಿ.ಯವರು ಬಿ.ಎ. ಕ್ಲಾಸಿಗೆ ಇಂಗ್ಲೀಷ ಆನರ್ಸ ವಿಷಯ ಆಯ್ಕೆ ಮಾಡಿದಾಗ, ಎ.ಟಿ. ಯವರು ಕನ್ನಡ ಪ್ರೊಫೆಸರ್ ಆದರೂ ತಮ್ಮನ ಅಭಿಪ್ರಾಯವನ್ನು ವಿರೋಧಿಸಲಿಲ್ಲ. ಎ.ಟಿ. ಯವರು ತಮ್ಮ ಸಂಪೂರ್ಣ ತಿಂಗಳ ಪಗಾರವನ್ನು ಎಚ್.ಟಿ. ಯವರಿಗೆ ಕೊಟ್ಟು, ಮನೆಯ ಸಂಸಾರದ ಭಾರ ನೀಡಿದರು. ಕೇವಲ ಸ್ವಲ್ಪ ಹಣವನ್ನು ತಮ್ಮ ಟಾಂಗಾ ಖರ್ಚಿಗಾಗಿ ತೆಗೆದುಕೊಳ್ಳುತ್ತಿದ್ದರು. ತಮ್ಮಂದಿರು ಮಾಡಿದ ಖರ್ಚಿನ ವಿವರವನ್ನು ಎಂದಿಗೂ ಕೇಳುತ್ತಿದ್ದಿಲ್ಲ. ಎ.ಟಿ. ಯವರು ಇಬ್ಬರು ತಮ್ಮಂದಿರನ್ನು ವಿಶ್ವಾಸ ಮತ್ತು ಪ್ರೀತಿಯಿಂದ ನೋಡುತ್ತಿದ್ದರು.

ಎಚ್.ಟಿ. ಯವರ ಬಿ.ಎ. ಅಂತಿಮ ವರ್ಗದ ಪರೀಕ್ಷೆಯ ಸಮಯದಲ್ಲಿ ಎ.ಟಿ. ಯವರ ಕ್ಷಯರೋಗ ಉಲ್ಬಣಿಸಿತು. ಆಗ ಅವರನ್ನು ಪಂಡಿತ ತಾರಾನಾಥರ "ಪ್ರೇಮಾಯತನ" ಆಶ್ರಮಕ್ಕೆ ಸೇರಿಸಲಾಯಿತು. ಅವರ

ಆರೈಕೆಗಾಗಿ ನಮ್ಮ ಕಾಕಾ ಶಂಕರೆಪ್ಪ, (ನಮ್ಮ ಆಯಿಯ ತಂಗಿಯ ಮಗ) ಅವರೊಡನೆ ಇದ್ದರು. ಎ.ಟಿ. ಯವರು ೧೪ ಮೇ ೧೯೩೬ರಂದು ಕೊನೆಯುಸಿರು ಎಳೆದಾಗ, ನನ್ನ ಆಯಿ ಸಾಹೇಬವ್ವ, ಎಚ್.ಟಿ. ಮತ್ತು ಶಂಕರೆಪ್ಪ ಕಾಕಾ ಅಲ್ಲಿ ಇದ್ದರು. ಎ.ಟಿ. ಯವರ ಅಕಾಲಿಕ ಮರಣ ಇಡೀ ಕುಟುಂಬಕ್ಕೆ ಒಂದು ದೊಡ್ಡ ಸಿಡಿಲಿನ ಆಘಾತ. ಅಣ್ಣನ ಮರಣಾನಂತರ ಎಚ್.ಟಿ. ಯವರು ವಿಜಾಪುರಕ್ಕೆ ಬಂದು, ತಾವು ಎಸ್.ಎಸ್. ಹಾಯ್‌ಸ್ಕೂಲಿನಲ್ಲಿ ಶಿಕ್ಷಕರಾಗಿ, ತಮ್ಮನಾದ ಬಿ.ಟಿ.ಯನ್ನು ಅಲ್ಲಿ ಇಂಗ್ಲೀಷ ಆರನೆಯ ಕ್ಲಾಸಿಗೆ ಸೇರಿಸಿದರು. ಇಬ್ಬರೂ ಲಿಂಗರಾಜ ಹಾಸ್ಟೇಲಿನಲ್ಲಿ ವಾಸ್ತವ್ಯ ಆರಂಭ ಮಾಡಿದರು. ಎಚ್.ಟಿ. ಯವರು ಶಿಕ್ಷಕ ವೃತ್ತಿಯಲ್ಲಿದ್ದು ಎಂ.ಎ. (ಇಂಗ್ಲೀಷ) ಅಭ್ಯಾಸಮಾಡಿ ಮುಂಬಯಿ ವಿಶ್ವವಿದ್ಯಾಲಯದಿಂದ ಪದವಿ ಪಡೆದದ್ದು ೧೯೩೯ರಲ್ಲಿ.

ನಾನು ಆಗ ಸಾಸನೂರ ಊರಲ್ಲಿ ಕನ್ನಡ ಎರಡನೇ ವರ್ಗದಲ್ಲಿ ಓದುತ್ತಿದ್ದೆ. ನಮ್ಮ ತಂದೆಯವರು ಎಚ್.ಟಿ. ಯವರನ್ನು ಪ್ರಾಂತ ಸಾಹೇಬ (ಈಗಿನ ಅಸಿಸ್ಟಂಟ ಕಮೀಶನರ್ ಹುದ್ದೆ) ನೌಕರಿಗೆ ಅರ್ಜಿ ಹಾಕಿಸಿದರು. ಮತ್ತು ಆ ನೌಕರಿಗಾಗಿ ಬೇಕಾಗುವ ಹಣವನ್ನು ಸಂಗ್ರಹಿಸಲು ಪ್ರಯತ್ನ ಪ್ರಾರಂಭಿಸಿದಾಗ, ಅವರ ಶಿಕ್ಷಕ ಮಿತ್ರರು ತಂದೆಯವರಿಗೆ "ನೀವು ಪ್ರಸಿದ್ಧ ಪಂಡಿತರು ಮತ್ತು ಆದರ್ಶ ಶಿಕ್ಷಕರಾಗಿದ್ದು ನಿಮ್ಮ ತಮ್ಮ ಹಣಮಂತರಾಯನನ್ನು ಲಂಚ ತಿನ್ನುವ ಖಾತೆಯ ಪ್ರಾಂತಸಾಹೇಬನನ್ನಾಗಿ ಮಾಡಬೇಡಿರಿ" ಎಂದು ಹೇಳಿದ ನಂತರ ತಂದೆಯವರು ಈ ಯೋಚನೆಯನ್ನು ಬಿಟ್ಟುಕೊಟ್ಟರು. ಎಂ.ಎ. ಆಗಿದ್ದರೂ ಹಾಯ್‌ಸ್ಕೂಲಿನಲ್ಲಿ ಶಿಕ್ಷಕವೃತ್ತಿಯಲ್ಲಿ ಮುಂದುವರಿದರು.

೧೯೩೯ನೇ ಇಸ್ವಿ ಡಿಶೆಂಬರ ಕೊನೆಯ ವಾರದಲ್ಲಿ ಅವರ ವಿವಾಹ ಗದಗ ನಗರದ ಸುಲ್ತಾನಪೂರ ವೆಂಕಣ್ಣನವರ ಒಬ್ಬಳೇ ತಂಗಿ ರುಕ್ಮಿಣಿ(ಉಷಾ)ಯೊಡನೆ ಬನಶಂಕರಿ ದೇವಸ್ಥಾನದಲ್ಲಿ ವಿಜೃಂಭಣೆಯಿಂದ ನಡೆಯಿತು. ಸಾಸನೂರ ಗ್ರಾಮದ ಚಿಂತಪ್ಪಗೌಡರು, ಕೃಷ್ಣಾಜಿ ಕುಲಕರ್ಣಿ, ತಂದೆಯವರು, ರಾಮಪ್ಪ ಕಾಕಾ, ನನ್ನ ಸೋದರತ್ತೆ, ಅಕ್ಕ ಶಾರದಾ, ಸಾಸನೂರ ಗ್ರಾಮದ ಎಚ್.ಟಿ. ಯವರ ಗೆಳೆಯರು ಬಂದಿದ್ದರು. ಕರ್ನಾಟಕ ಕಾಲೇಜಿನಲ್ಲಿ ಎಫ್. ವಾಯ್. ವರ್ಗದಲ್ಲಿ ಓದುತ್ತಿದ್ದ ಬಿ.ಟಿ. ಯವರು ತಮ್ಮ ಮಿತ್ರರ ದಂಡನ್ನೇ ಕರೆದುತಂದಿದ್ದರು.

೧೯೪೦ರಲ್ಲಿ ಬಿ.ಟಿ. ಅಭ್ಯಾಸ ಮಾಡಲು ಒಂದು ವರ್ಷ ರಜೆ ಪಡೆದು, ಬೆಳಗಾವಿಯ ಸರಕಾರಿ ಟ್ರೇನಿಂಗ ಕಾಲೇಜನ್ನು ಸೇರಿದರು. ೧೯೪೧ರಲ್ಲಿ ಬಿ.ಟಿ. ಪಾಸಾದ ನಂತರ ಎಸ್.ಎಸ್. ಹಾಯ್‌ಸ್ಕೂಲಿನಲ್ಲಿ ಮತ್ತೆ ಶಿಕ್ಷಕ ಜಾಗೆಗೆ ಹಾಜರಾದರು. ಅವರು ಬೆಳಗಾಂವಿಯಲ್ಲಿ ಬಿ.ಟಿ. ಓದುತ್ತಿದ್ದಾಗ, ನಮ್ಮೂರ ಚಿಂತಪ್ಪಗೌಡ ಪಾಟೀಲರಿಂದ ಹನ್ನೊಂದು ನೂರು ರೂಪಾಯಿ ಸಾಲಮಾಡಿದ್ದರು. ಆ ಹಣವನ್ನು ನೌಕರಿಗೆ ಹಾಜರಾದನಂತರ ಪ್ರತಿ ತಿಂಗಳು ಕಳಿಸುವೆನೆಂದು ಹೇಳಿದ್ದರು. ಆದರೆ ತಮ್ಮನ ಸಾಲದ ಸಂಪೂರ್ಣ ಹಣವನ್ನು ಚಿಂತಪ್ಪಗೌಡರಿಗೆ ತಂದೆಯವರು ತೀರಿಸಿದರು.

ಎಂ.ಎ. ಬಿ.ಟಿ.ಪದವಿಗಳನ್ನು ಪಡೆದನಂತರ ಹಾಯ್‌ಸ್ಕೂಲ ಶಿಕ್ಷಕರಾಗಿದ್ದಾಗ ಎಚ್.ಟಿ. ಯವರು ಪ್ರೊ. ಕೆ.ಜಿ. ಕುಂದಣಗಾರರ ಮಾರ್ಗದರ್ಶನದಲ್ಲಿ ಪಿಎಚ್.ಡಿ. ಅಧ್ಯಯನ ಕೈಕೊಂಡರು. ಆರೇಳು ವರ್ಷಗಳವರೆಗೆ ಪಿಎಚ್.ಡಿ. ಅಭ್ಯಾಸ ಮಾಡಲಾಗಲಿಲ್ಲ. ಕಾಲೇಜ ಪ್ರೊಫೆಸರ್ ಆಗಬೇಕಾದರೆ ಪಿಎಚ್.ಡಿ. ಡಿಗ್ರಿ ಕಡ್ಡಾಯವಾಗಿರಬೇಕೆಂದು ಸರಕಾರದ ಆಜ್ಞೆ. ಅಂತೂ ಎರಡೇ ವರ್ಷಗಳಲ್ಲಿ ಪಿಎಚ್.ಡಿ. ಥಿಸಿಸ್ ಬರೆದು ಮುಗಿಸಿ, ಮುಂಬೈ ವಿಶ್ವವಿದ್ಯಾಲಯದಿಂದ ೧೯೫೬ರಲ್ಲಿ ಪದವಿ ಪಡೆದು ಡಾಕ್ಟರ್ ಎಚ್.ಟಿ. ಸಾಸನೂರ ಆದರು.

ಭಾರತ ಸ್ವಾತಂತ್ರ್ಯ ನಂತರ ಎಚ್.ಟಿ. ಅವರನ್ನು ಮುಂಬೈ ಪ್ರಾಂತ ಮುಖ್ಯಮಂತ್ರಿ ಬಿ.ಜಿ. ಖೇರ ಮತ್ತು ಗ್ರಹಮಂತ್ರಿಗಳಾದ ಮುರಾರಜಿ ದೇಸಾಯಿ (ಮುಂದೆ ಭಾರತದ ಪ್ರಧಾನ ಮಂತ್ರಿಯಾದರು) ಯವರು

ಅದೇ ಆಗ ಪ್ರಾರಂಭವಾದ ಗೃಹದಕ್ಷಕ ದಳ (Home Guards Dist Commandent)ದ ಜಿಲ್ಲಾ ಕಮಾಂಡಂಟರನ್ನಾಗಿ ನೇಮಿಸಿದರು. ಮೂರು ನಾಲ್ಕು ವರ್ಷಗಳಲ್ಲಿ ವಿಜಾಪೂರ ಜಿಲ್ಲೆಯಲ್ಲಿ ಗೃಹರಕ್ಷಕ ದಳ ಸಂಪತ್‌ಭರಿತವಾಗಿ ಬೆಳೆದು, ಒಳ್ಳೆಯ ಹೆಸರನ್ನು ಪಡೆಯಲು ಎಚ್.ಟಿ. ಯವರೇ ಕಾರಣೀಭೂತರು. ಇವರು ಜಿಲ್ಲಾ ಸ್ಕೂಲಬೋರ್ಡಿನ ಉಪಾಧ್ಯಕ್ಷರೂ ಆಗಿದ್ದರು.

ಇವರ ಸಾಮಾಜಿಕ ಪ್ರತಿಷ್ಠೆ, ಗೌರವ ಮತ್ತು ಕೀರ್ತಿಯನ್ನು ಸಹಿಸಲಾರದ ಕೆಲವು ಸದಸ್ಯರು ಇವರನ್ನು ಜಿಲ್ಲಾ ಕಮಾಂಡಂಟ ನೌಕರಿ ಬಿಡಿಸಬೇಕೆಂಬ ಕುಹಕ ದುರಾಶೆಯಿಂದ ವಿಜಯ ಕಾಲೇಜಿನ ಜನರಲ್ ಬಾಡಿ ಮೀಟಿಂಗ್‌ನಲ್ಲಿ ಎಚ್.ಟಿ. ಯವರ ವಿರುದ್ಧ ಒಂದು ಗೊತ್ತುವಳಿಯನ್ನು ಮಂಡಿಸಿದರು. ಪ್ರೊಫೆಸರ್ ಹುದ್ದೆ ಅಥವಾ ಗ್ರಹರಕ್ಷಕ ದಳದ ಕಮಾಂಡರ್ ಹುದ್ದೆಯಲ್ಲಿ ಯಾವುದಾದರೂ ಒಂದನ್ನು ಆಯ್ಕೆ ಮಾಡಬೇಕೆಂದು ಅವರ ವಾದ. ಆಗ ಎಚ್.ಟಿ. ಯವರು "ಪ್ರೊಫೆಸರ್ ನೌಕರಿಯನ್ನು ತ್ಯಜಿಸುವೆ. ಆದರೆ ದೇಶ ಸೇವೆಯ ಗೃಹರಕ್ಷಕ ದಳದ ಕಮಾಂಡೆಂಟ ಹುದ್ದೆ ಬಿಡುವದಿಲ್ಲ" ಎಂದು ಹೇಳಿದರು. ಇಂಥ ಅನಿಶ್ಚಿತ ಪರಿಸ್ಥಿತಿಯಲ್ಲಿ ತಂದೆಯವರು "ನೀನು ಯಾವುದಕ್ಕೂ ಚಿಂತಿಸಬೇಡ. ಧೈರ್ಯದಿಂದ ಮುಂದೆ ಸಾಗು. ಜನತೆ ನಿನ್ನ ಬೆಂಗಾವಲಿಗೆ ನಿಂತಿದೆ" ಎಂದು ತಮ್ಮನಿಗೆ ಹೇಳಿದರು. ಎಚ್.ಟಿ. ಯವರ ಆತ್ಮೀಯ ಮಿತ್ರರಾದ ಶ್ರೀ ಇಜೇರಿ ಸಂಗಪ್ಪಣ್ಣ, ಶ್ರೀ ಸದಾಶಿವಪ್ಪ ಅಕ್ಕಿ ಮತ್ತು ಇನ್ನುಳಿದ ಸದಸ್ಯರಲ್ಲದೆ, ಸ್ವತಃ ವಿಜಯ ಕಾಲೇಜಿನ ಅಧ್ಯಕ್ಷರಾದ ಶ್ರೀ ಬಂಥನಾಳ ಶಿವಯೋಗಿಗಳು ವಿರೋಧಿ ಸದಸ್ಯರು ತಂದ ಗೊತ್ತುವಳಿಯನ್ನು ವಿರೋಧಿಸಿದಾಗ, ಅದು ಬಿದ್ದುಹೋಯಿತು. ಸಾಯುವ ಪೂರ್ವದಲ್ಲಿ ನಮ್ಮ ತಂದೆಯವರು ಒಂದು ದಿವಸ ನನ್ನನ್ನು ಕರೆದು "ನೋಡು, ನಿನ್ನ ಕಾಕಾ ಹಣಮಂತರಾಯನ ಸಂಸಾರ ದೊಡ್ಡದಾಗಿದೆ. ಅವನಿಗೆ ಐದು ಪುತ್ರಿಯರು ಒಬ್ಬ ಪುತ್ರ. ಕಾಲೇಜಿನ ನೌಕರಿಯ ಪಗಾರ ಅವನಿಗೆ ಸಾಕಾಗುವದಿಲ್ಲ. ನೀನು ಈಗ ಲೆಕ್ಚರರ್ ಆಗಿರುವಿ. ಪ್ರತಿ ತಿಂಗಳು ಅವನಿಗೆ ನಿನಗೆ ಸಾಧ್ಯವಿದ್ದಷ್ಟು ಹಣ ಕಳಿಸು" ಎಂದು ಹೇಳಿದರು. ಅವರು ನುಡಿದಂತೆ ನಾನು ನಡೆದೆ. ಎಚ್.ಟಿ.ಯವರ ಒಬ್ಬನೇ ಮಗ ಅಶೋಕ ಕಲಬುರ್ಗಿಯಲ್ಲಿಯ ನಮ್ಮ ಮನೆಯಲ್ಲಿದ್ದು ಎಂ.ಬಿ.ಬಿ.ಎಸ್. ಓದಿ ಪಾಸಾಗಿ ಡಾಕ್ಟರ ಆದನು. ತಂದೆಯವರು ಆಗ ಹೇಳಿದ ಮಾತು ನಿಜರೂಪದಲ್ಲಿ ಬಂದಂತಾಯಿತು. ದೊಡ್ಡವರ ಮಾತು ಎಂದಿಗೂ ನಿಷ್ಫಲವಾಗುವದಿಲ್ಲ.

೨೨ ಸಪ್ಟಂಬರ ೧೯೬೨ ರಂದು ಒಮ್ಮೆಲೇ ತಂದೆಯವರ ರಕ್ತದ ಒತ್ತಡ ಏರಿ, ಮಿದುಳು ರಕ್ತಸ್ರಾವವಾಯಿತು. ಪ್ರಜ್ಞೆ ತಪ್ಪಿತು. ಅವರನ್ನು ತಕ್ಷಣವೇ ನಮ್ಮ ಪ್ರೀತಿಯ ಡಾಕ್ಟರರಾದ ಡಾ. ಎಸ್.ಎಸ್. ನರಸಣಗಿ ಮತ್ತು ಡಾ. ಜಿ.ವ್ಹಿ. ನಾಯಕ ಅವರ ಸಲಹೆಯಂತೆ ಸರಕಾರಿ ಸಿವ್ಹಿಲ್ ಹಾಸ್ಪಿಟಲಿಗೆ ಎಡ್ಮಿಟ್ ಮಾಡಿದೆವು. ಮಧ್ಯರಾತ್ರಿಯ ನಂತರ ಸಂಪೂರ್ಣ ಪ್ರಜ್ಞೆ ಬಂತು. ಆಗ ನನಗೆ 'ವಿಜಾಪುರದಲ್ಲಿರುವ ನಿನ್ನ ಕಾಕಾ ಹಣಮಂತರಾಯನಿಗೆ ನನ್ನ ಅಸ್ವಸ್ಥತೆಯ ಬಗ್ಗೆ ಬರೆದಿದ್ದೀಯಾ?' ಎಂದು ಕೇಳಿದರು. ಬರೆದಿರುವುದಾಗಿ ನಾನು ಹೇಳಿದೆ. ರವಿವಾರ ೨೯-೯-೧೯೬೭ರೊಳಗಾಗಿ ಬರುತ್ತಾರೆಂದು ತಿಳಿಸಿದೆ. ಅದೇ ದಿವಸ ಅವರ ಪ್ರಜ್ಞೆ ಹೋಗಿ, ಹೃದಯ ವಿಕಾರದಿಂದ ಕೊನೆ ಉಸಿರು ಎಳೆದ ನಂತರ ಎಚ್.ಟಿ. ಯವರು ಬಂದರು. ಕೊನೆಯ ಗಳಿಗೆಯಲ್ಲಿ ಅಣ್ಣತಮ್ಮಂದಿರ ಮಾತು ಕತೆ ನಡೆಯಲಿಲ್ಲ. ಎಲ್ಲ ವಿಧಿವಿಲಾಸ.

**ಪ್ರೊ. ಬಿ.ಟಿ. ಸಾಸನೂರ ಅವರ ಬಗ್ಗೆ :**

ಪ್ರೊ. ಬಿ.ಟಿ. ಸಾಸನೂರ (ಭೀಮಸೇನ ಸಾಸನೂರ) ನನ್ನ ತಂದೆಯ ಕೊನೆಯ ತಮ್ಮ. ಹೀಗಾಗಿ ಅವನ ಮೇಲೆ ಅತಿ ವಾತ್ಸಲ್ಯ ಮತ್ತು ಅಭಿಮಾನ. ಅವರು ಏನೇ ಬೇಡಿದರೂ ತಂದುಕೊಡುತ್ತಿದ್ದರು. ಅವನು

ಬೇಡಿದಾಗ ಹಣವನ್ನು ಮನಿ ಆರ್ಡರ್ ಮೂಲಕ ಕಳಿಸುತ್ತಿದ್ದರು. ಬಿ.ಟಿ. ಕರ್ನಾಟಕ ಕಾಲೇಜಿನಲ್ಲಿ ಅಭ್ಯಾಸ ಮಾಡುವಾಗ ಅವರದು ಚೈನಿ ಜೀವನ. ವಿಜಾಪುರದಿಂದ ಎಚ್.ಟಿ. ಕಾಕಾ ಹಣ ಕಳಿಸುತ್ತಿದ್ದರು. ಹೀಗಾಗಿ ಅವರಿಗೆ ಕಷ್ಟದ ಜೀವನವೇ ಗೊತ್ತಿದ್ದಿಲ್ಲ. ನಾನು ಕನ್ನಡ ಆರನೇ ಕ್ಲಾಸಿನಲ್ಲಿ ಸಾಸನೂರಲ್ಲಿ ಓದುತ್ತಿದ್ದಾಗ ಬಿ.ಟಿ. ಬರೆದ ಪತ್ರವನ್ನು ಓದಿದೆ. ಆ ವಾಕ್ಯಗಳು ನನಗೆ ಇನ್ನೂ ನೆನಪಿವೆ. "ಈಗ ನನಗೆ ಹಣದ ಅಡಚಣೆ ಅತಿಯಾಗಿದೆ. ಮುಂಜಾನೆ ಸಮಯದಲ್ಲಿ ಹಾಲು ಕೊಡುವವನು, ಅಗಸರವನು, ಹಜಾಮನು, ಉದ್ರಿ ಕೊಟ್ಟ ಹಾಸ್ಟೇಲದವನು ನನ್ನ ಕೋಣೆ ಬಾಗಿಲಿಗೆ ಸಾಲಾಗಿ ನಿಲ್ಲುತ್ತಿದ್ದಾರೆ. ಇದು ನನ್ನ ಗೌರವದ ಪ್ರಶ್ನೆ. ತಕ್ಷಣವೇ ನನಗೆ ಹಣ ಕಳಿಸಿರಿ."ತಂದೆಯ ಹತ್ತಿರ ಆಗ ಹಣವಿದ್ದಿಲ್ಲ. ಯಾರ ಕಡೆಯಿಂದಲೋ ಸಾಲ ತಂದು, ತಾಳಿಕೋಟಿಗೆ ಹೋಗಿ, ಮನಿಆರ್ಡರ್ ಮೂಲಕ ಅವನು ಕೇಳಿದಷ್ಟು ಹಣ ಕಳಿಸಿದರು.

೧೯೫೩ರಲ್ಲಿ ಬಿ.ಎ. ಅಂತಿಮ ಪರೀಕ್ಷೆಗೆ ಬಿ.ಟಿ. ಕೂಡಬೇಕಾಗಿತ್ತು. ಅವರು ಬಹಳಷ್ಟು ಸಮಯವನ್ನು ಕ್ರಿಕೆಟ್ ಆಡುವುದರಲ್ಲಿ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಕಳೆದದ್ದರಿಂದ, ಪರೀಕ್ಷೆಯ ತಯಾರಿ ಸರಿಯಾಗಿ ಆಗಲಿಲ್ಲ. ಆದುದರಿಂದ ಆ ವರ್ಷ ಬಿ.ಎ. ಪರೀಕ್ಷೆಗೆ ಡ್ರಾಪ್ ತೆಗೆದುಕೊಂಡರು. ವಿಷಯವನ್ನರಿತು ಎಚ್.ಟಿ. ಕಾಕಾ ಮತ್ತು ತಂದೆಯವರು ಬಹಳಷ್ಟು ಕೋಪಿಷ್ಠರಾದರು. ಪರೀಕ್ಷೆ ಬಿಟ್ಟ ನಂತರ ಬೇಸಿಗೆಯ ಬಿಡುವಿನಲ್ಲಿ ಸಾಸನೂರಿಗೆ ಬಂದಾಗ ಎಚ್.ಟಿ. ಯವರು ತಂದೆಯವರಿಗೆ ಪತ್ರ ಬರೆದು "ಬಿ.ಟಿ. ಧಾರವಾಡಕ್ಕೆ ಹೋಗಲು ಒಂದು ದುಡ್ಡನ್ನು ಸಹ ಕೊಡಬೇಡಿರಿ. ಅವನು ತನ್ನ ಕರ್ತವ್ಯವನ್ನು ಸರಿಯಾಗಿ ಮಾಡಿಲ್ಲ. ಹಣ ದುಂದು ಖರ್ಚು ಮಾಡಿದ್ದಾನೆ" ಎಂದು ತಿಳಿಸಿದರು. ತಂದೆಯವರು ಸಹ ಬಿ.ಟಿ. ಯವರಿಗೆ ತಾವು ಹಣ ಕೊಡುವದಿಲ್ಲ. ಏನಾದರೂ ಮಾಡು. ತಮಗೆ ಕೇಳಬೇಡೆಂದು ಹೇಳಿದರು. ಬಿ.ಟಿ. ಯವರಿಗೆ ಧಾರವಾಡಕ್ಕೆ ಹೋಗಬೇಕು. ಮತ್ತೆ ಪರೀಕ್ಷೆ ತಯಾರಿ ಮಾಡಬೇಕೆಂದು ಲವಲವಿಕೆ. ತಂದೆಯವರ ಹಠದ ಪ್ರವೃತ್ತಿಯನ್ನು ನೋಡಿ ಕೊನೆಗೆ ನಮ್ಮ ಆಯಿ ಸಾಹೇಬವ್ವನ (ಬಿ.ಟಿ. ಯವರ ತಾಯಿ) ಹತ್ತಿರ ಹೋಗಿ ಅವ್ವಾ, "ಇದು ನಮ್ಮಿಬ್ಬರ ಕೊನೆಯ ಭೆಟ್ಟಿ. ಇಬ್ಬರು ಅಣ್ಣಂದಿರು ಹಣ ಕೊಡುವದಿಲ್ಲವೆಂದು ಹೇಳಿದ್ದಾರೆ. ಆದುದರಿಂದ ನಾನೇನು ಮಾಡಲಿ. ಸೈನ್ಯಕ್ಕೆ ಸೇರುತ್ತೇನೆ. ಯುದ್ಧಕ್ಕೆ ಹೋಗುತ್ತೇನೆ. ಇದು ನಮ್ಮಿಬ್ಬರ ಕೊನೆಯ ಭೆಟ್ಟಿ" ಎಂದು ಹೇಳಿದಾಗ ನಮ್ಮ ಆಯಿ ಭಯಂಕರ ಅತ್ತಳು. ತಂದೆಯವರು ಮನೆಗೆ ಬಂದಾಗ ಈ ವಿಷಯ ತಿಳಿಸಿ, "ಇದೊಂದು ಸಲ ಅವನಿಗೆ ಹಣ ಕೊಡು" ಎಂದು ಹೇಳಿದಳು. ತಮ್ಮ ಅವ್ವನ ದುಃಖ ನೋಡಲಾರದೆ ತಂದೆಯವರು ೨೦೦ ರೂಪಾಯಿಗಳನ್ನು ಕೊಟ್ಟು ಧಾರವಾಡಕ್ಕೆ ಕಳಿಸಿದರು. ೧೯೫೫ರಲ್ಲಿ ಬಿ.ಎ. ಹಾಯರ್ ಸೆಕೆಂಡ್ ಕ್ಲಾಸ್ ಪಾಸಾಗಿ, ೧೯೫೭ರಲ್ಲಿ ಎಂ.ಎ. ಹಾಯರ್ ಸೆಕೆಂಡ್ ಕ್ಲಾಸಿನಲ್ಲಿ ಪಾಸಾದರು.

೧೯೫೭ರಲ್ಲಿ ಬಿ.ಟಿ.ಯವರನ್ನು ವಿಜಯ ಕಾಲೇಜದಲ್ಲಿ ಪೂರ್ಣಾವಧಿ (Full time Lecturer) ಲೆಕ್ಚರರ ಎಂದು ನೇಮಿಸಲಾಯಿತು. ಅವರ ಗೆಳೆಯರಾದ ಡಾ. ಆರ್.ಸಿ. ಹಿರೇಮಠ ಮತ್ತು ಡಾ. ಎಂ.ಎಸ್. ಸುಂಕಾಪುರ ಅವರು ಬೆಳಗಾಂವಿಯಲ್ಲಿ ಒಂದು ಕನ್ಯೆ ನೋಡಿ ಬಂದರು. ಬಿ.ಟಿ. ಯವರನ್ನು ಕರೆದುಕೊಂಡು ಹೋಗಿ ಕನ್ಯೆಯನ್ನು ತೋರಿಸಿದರು. ಒಪ್ಪಿಗೆಯಾಯಿತು. ಸುಮಿತ್ರಾದೇವಿಯವರೊಡನೆ ೧೯೫೭ನೆಯ ಅಗಸ್ಟ ತಿಂಗಳಲ್ಲಿ ಬೆಳಗಾಂವಿಯಲ್ಲಿ ಅವರ ವಿವಾಹ ನೆರವೇರಿತು. ಸಾಸನೂರಿನಿಂದ ತಂದೆ, ಅಜ್ಜಿ, ಅತ್ತೆ ಮತ್ತು ನನಗೆ ಹೋಗುವದಾಗಲಿಲ್ಲ. ಯಾಕೆಂದರೆ ಮಳೆಗಾಲದಲ್ಲಿ ಊರಿನ ಮೋಟಾರು ಸಂಪರ್ಕ ಕಡಿದುಹೋಗಿತ್ತು. ಲಗ್ನವಾದ ನಂತರ ವಿಜಾಪುರದಲ್ಲಿ ಬಿ.ಟಿ. ಮತ್ತು ಚಿಕ್ಕಮ್ಮ ಒಂದು ಚಿಕ್ಕ ಮನೆಯನ್ನು ಬಾಡಿಗೆ ಹಿಡಿದರು. ಆಗ ಮನೆಯಲ್ಲಿ ಯಾವುದೇ ಭಾಂಡೆ ಸಾಮಾನುಗಳಿದ್ದಿಲ್ಲ. ಬಿ.ಟಿ. ನನ್ನನ್ನು ತಮದಡ್ಡಿಗೆ ಕಳಿಸಿ, ಭಾಂಡೆ ಸಾಮಾನು ತರಲು ಹೇಳಿದರು. ನಾನು ತಮದಡ್ಡಿಗೆ ಹೋಗಿ, ನನಗಾಗಿ ನಮ್ಮ ಆಯಿ ಸಂಗ್ರಹಿಸಿದ್ದ ಭಾಂಡೆ ಸಾಮಾನುಗಳನ್ನು ಕೊಡಲು ಕೇಳಿದೆ. ಅವಳು "ನಿಮ್ಮ ಕಾಕಾ ನೌಕರಿ ಮಾಡುತ್ತಾನೆ. ನಾನು ಕೊಡುವದಿಲ್ಲ. ಟ್ರಂಕುಗಳೆರಡರಲ್ಲಿ

ಭಾಂಡೆ ನಿನ್ನ ಸಲುವಾಗಿ ಸಂಗ್ರಹಿಸಿದ್ದೇನೆ" ಎಂದು ಸ್ಪಷ್ಟವಾಗಿ ಹೇಳಿದಳು. ಕೊನೆಗೆ ನಾನು ಅತ್ತು ಕರೆದು ಕೊನೆಗೆ ಒಂದು ಟ್ರಂಕಿನ ಭಾಂಡೆ ಸಾಮಾನು ಪಡೆದುಕೊಂಡು, ಅದನ್ನು ಬಿ.ಟಿ. ಯವರಿಗೆ ಕೊಟ್ಟೆ. ಆದರೆ ಅಷ್ಟು ಸಾಮಾನುಗಳು ಯಾವುದಕ್ಕೂ ಸಾಕಾಗುತ್ತಿದ್ದಿಲ್ಲ.

ನಾನು ತಂದೆಯವರಿಗೆ ಹೇಳಿ ಕಳಿಸಿದೆ. "ವಿಜಾಪುರಕ್ಕೆ ಬಂದು ಬಿ.ಟಿ. ಯವರ ಮನೆಗೆ ಬೇಕಾಗುವ ಎಲ್ಲಾ ಭಾಂಡೆ ಸ್ಸಾಮಾನುಗಳನ್ನು ಖರೀದಿಸಿ ಕೊಡಬೇಕೆಂದು" ಹೇಳಿದೆ. ಅವರು ವಿಜಾಪುರಕ್ಕೆ ಬಂದರು. ಪ್ರೊ. ಎಚ್.ಕೆ. ಲಗಳಿ, ಬಿ.ಟಿ. ಮತ್ತು ನಾನು ಮಾರ್ಕೆಟ್‌ಗೆ ಹೋದೆವು. ತಂದೆಯವರಿಂದಲೇ ಸುಮಾರು ೫೦೦(ಐದುನೂರು) ರೂಪಾಯಿಗಳ ಭಾಂಡೆ ಸಾಮಾನುಗಳನ್ನು ಖರೀದಿಸಿ ಮನೆಗೆ ಮುಟ್ಟಿಸಿದೆವು. ಆಗ ತಂದೆಯವರು ಹೆಡ್‌ಮಾಸ್ಟರರಾಗಿದ್ದರು. ತಮ್ಮಂದಿರಿಗಾಗಿ ಅವರು ಮಾಡಿದ ತ್ಯಾಗ ಮತ್ತು ಸಹಾಯ ದೇವರ ಪುಸ್ತಕದಲ್ಲಿ ನಮೂದಿಸಲಾಗಿದೆ.

## ನನ್ನ ಬಗ್ಗೆ ನನ್ನ ತಂದೆಯ ಅನಿಸಿಕೆಗಳು :

ನನ್ನ ಒಬ್ಬಳೇ ಅಕ್ಕ ಶಾರದಾ ೧-೧-೧೯೨೯ರಲ್ಲಿ ಜನಿಸಿದಳು. ನಾನು ೧೩-೧-೧೯೩೧ರಲ್ಲಿ ಕಲಕೇರಿ ಗ್ರಾಮದಲ್ಲಿ ಜನಿಸಿದೆ. ಆಗ ನಮ್ಮ ತಂದೆ ಕಲಕೇರಿ (ತಾಲೂಕ ಸಿಂದಗಿ) ಪ್ರಾಥಮಿಕ ಶಾಲೆಯ ಹೆಡ್‌ಮಾಸ್ತರರಾಗಿದ್ದರು. ನನ್ನ ತಾಯಿಗೆ ಕ್ಷಯರೋಗ ಅಂಟಿಕೊಂಡಿತು. ಆಗಿನ ಕಾಲದಲ್ಲಿ ಈಗಿನಷ್ಟು ವೈದ್ಯಕೀಯ ಸೌಲಭ್ಯಗಳಿದ್ದಿಲ್ಲ. ಎಷ್ಟೇ ಆಯುರ್ವೇದ ಔಷಧೋಪಚಾರ ಮಾಡಿದರೂ ೧-೧-೧೯೩೩ರಂದು ಸಾಸನೂರ ಗ್ರಾಮದಲ್ಲಿ ನಿಧನರಾದರು. ನಾನು ಮತ್ತು ನನ್ನ ಅಕ್ಕ ಶಾರದಾ ಪರದೇಶಿಗಳಾದೆವು. ಆದರೆ ನಮ್ಮ ಆಯಿ ಸಾಬವ್ವ ಮತ್ತು ಸೋದರತ್ತೆ ಬಾಯಮ್ಮ ನಮ್ಮಿಬ್ಬರನ್ನು ಜೋಪಾನ ಮಾಡಿದರು.

ಹೀಗಾಗಿ ತಂದೆಯವರು ನಮ್ಮನ್ನು ಅಷ್ಟು ಕಠೋರ ಶಿಸ್ತಿನಲ್ಲಿಡಲಿಲ್ಲ. ಅವರು ನನಗೆ ಹೊಡೆಯುತ್ತಿದ್ದಿಲ್ಲ. ನಾನು ಅತಿ ಅಚ್ಚೆ ಪ್ರೀತಿಯಿಂದ ಬೆಳೆದೆ. ನಾನು ಕನ್ನಡ ಪ್ರಾಥಮಿಕ ಶಾಲೆ ೧ನೆಯ ವರ್ಗದಿಂದ ಕನ್ನಡ ಏಳನೇ ವರ್ಗ (ಮುಲ್ಕಿ ಪರೀಕ್ಷೆ) ವರೆಗೆ ಸಾಸನೂರ ಗ್ರಾಮದಲ್ಲಿ ಕಳೆದೆ. ಹಳ್ಳಿಯ ವಾತಾವರಣ ನನ್ನ ಮೇಲೆ ಹೆಚ್ಚು ಪರಿಣಾಮ ಬೀರಿತು.

ಶ್ರೀ ಸಿದ್ಧೇಶ್ವರ ಹಾಯ್‌ಸ್ಕೂಲದಲ್ಲಿ ಇಂಗ್ಲಿಷ ಮೂರನೇ ವರ್ಗಕ್ಕೆ ನನ್ನ ಕಾಕಾ ಎಚ್.ಟಿ. ಸೇರಿಸಿದರು. ೧೯೫೦ರಲ್ಲಿ ಮ್ಯಾಟ್ರಿಕ್ ಪಾಸಾಗಿ ವಿಜಾಪುರದ ವಿಜಯ ಕಾಲೇಜಿನಲ್ಲಿ ಎಫ್ ವಾಯ್ ಆರ್ಟ್ಸ್, ಇಂಟರಮಿಡಿಯೆಟ್ ಪರೀಕ್ಷೆ ಪಾಸಾಗಿ ಬಿ.ಎ. ಇಂಗ್ಲಿಷ ಆನರ್ಸದೊಂದಿಗೆ ಪದವಿಧರನಾದೆ, ೧೯೫೫ರಲ್ಲಿ. ಬನಾರಸ್ ಹಿಂದೂ ಯುನಿವ್ಹರ್ಸಿಟಿಯಲ್ಲಿ ಎಂ.ಎ. ಕ್ಲಾಸಿಗೆ ಪ್ರವೇಶ ಪಡೆಯಲು ನನ್ನ ಕಾಕಾ ಬಹಳ ಪ್ರಯತ್ನಿಸಿದರು. ಅದು ಸಾಧ್ಯವಾಗದ್ದರಿಂದ ನನ್ನನ್ನು ಮುಂಬಯಿ ವಿಶ್ವವಿದ್ಯಾಲಯದಲ್ಲಿ ಎಂ.ಎ. ಕ್ಲಾಸಿಗೆ ಸೇರಿಸಿದರು. ಎಂ.ಎ. ಕೊನೆಯ ಪರೀಕ್ಷೆ ಸಮಯದಲ್ಲಿ ನನ್ನ ಆರೋಗ್ಯ ಕೆಟ್ಟಿದ್ದರಿಂದ ೧೯೫೭ರಲ್ಲಿ ಎಂ.ಎ. ಪರೀಕ್ಷೆಗೆ ಡ್ರಾಪ್ ತೆಗೆದುಕೊಂಡು, ೧೯೫೯ರಲ್ಲಿ ಪಾಸಾಗಿ ಕಲಬುರ್ಗಿಯ ಶರಣಬಸವೇಶ್ವರ ಹಾಯ್‌ಸ್ಕೂಲದಲ್ಲಿ ಶಿಕ್ಷಕನಾದೆ. ೧೯೫೮ ಡಿಶಂಬರ ೩೦ರಂದು ನನ್ನ ಮದುವೆ ನನ್ನ ಮಾವ ಗದಗಿನ ವೆಂಕಣ್ಣ ಸುಲ್ತಾನಪೂರ ಅವರ ಜೇಷ್ಠ ಪುತ್ರಿ ತುಳಸಾ ಅವಳೊಡನೆ ಜರುಗಿತು. ೧೯೫೯ ಸಪ್ಟೆಂಬರ ತಿಂಗಳಲ್ಲಿ ಕಲಬುರ್ಗಿಯಲ್ಲಿ ನನ್ನ ಸಂಸಾರ ಪ್ರಾರಂಭಿಸಿದ ನಂತರ, ನಮ್ಮ ತಂದೆ ಸಾಸನೂರ ಗ್ರಾಮ ಬಿಟ್ಟು ಕಲಬುರ್ಗಿಗೆ ಬಂದರು. ಅವರು ಸಾಯುವ ವರೆಗೆ (೨೯-೯-೧೯೬೩) ಕಲ್ಬುರ್ಗಿಯಲ್ಲಿ ನನ್ನ ಮನೆಯಲ್ಲಿದ್ದರು. ಅವರು ಒಂದು ದಿವಸವೂ ರೋಗದಿಂದ ಬಳಲಿಲ್ಲ, ಯಾರಿಂದಲೂ ಸೇವೆ ಮಾಡಿಸಿಕೊಳ್ಳಲಿಲ್ಲ. ಸಾಯುವ ವರೆಗೆ ದೈಹಿಕ ಕೆಲಸ ಮಾಡುತ್ತ,

ಶ್ರೇಷ್ಠ ಗ್ರಂಥಗಳನ್ನು ಓದುತ್ತ, ಪರಮಾತ್ಮನಲ್ಲಿ ಒಂದಾದರು. ಶ್ರೇಷ್ಠ ಆಧ್ಯಾತ್ಮಿಕ ಮಹಾನುಭಾವರ ಮರಣ ಸುಖಾಂತವಾಗಿರುತ್ತದೆ.

ತಂದೆಯವರ ಜೀವನದ ಎಲ್ಲ ಆಶೆ, ಆಕಾಂಕ್ಷೆಗಳು ಸಫಲವಾಗಿದ್ದವು. ತಮ್ಮ ಮೂವರು ತಮ್ಮಂದಿರ ಅಭ್ಯಾಸ, ಅವರ ನೌಕರಿ, ಮದುವೆ, ಅನಂತರ ನನ್ನ ವಿದ್ಯಾಭ್ಯಾಸ, ನೌಕರಿ, ಮದುವೆ ಎಲ್ಲವೂ ಈಡೇರಿದ್ದವು. ಅವರ ಕೊನೆಯ ದಿನಗಳು ಸಂಪೂರ್ಣ ತೃಪ್ತಿಕರವಾಗಿದ್ದವು. ಸಾಯುವ ಪೂರ್ವದ ಕೆಲವು ದಿನಗಳ ಮುಂಚೆ ನಮ್ಮ ಮನೆಗೆ ಬರುವ ನನ್ನ ಶಿಕ್ಷಕ ಮಿತ್ರರಿಗೆ "ನನ್ನ ಎಲ್ಲ ಅಭಿಲಾಷೆ, ಆಶೆ, ಆಕಾಂಕ್ಷೆಗಳು ಈಡೇರಿವೆ. ಇನ್ನು ಈ ಜೀವನದಲ್ಲಿ ನಾನು ಸಾಧಿಸುವದು ಯಾವದೂ ಉಳಿದಿಲ್ಲ. ಕೆಲವೇ ದಿನಗಳಲ್ಲಿ ನನ್ನ ಜೀವನ ನಾಟಕದ ಕೊನೆಯ ಪರದೆ ಬೀಳುವುದು" ಎಂದು ಹೇಳುತ್ತಿದ್ದರು. ಇದು ನಿಜವಾಗಿಯೂ ಅವರ ಇಚ್ಛಾಮರಣವೆಂದು ಹೇಳಬಹುದು. ತಂದೆಯವರು ಕೊನೆ ಉಸಿರು ಎಳೆದದ್ದು ೨೯-೯-೧೯೬೩ರಂದು. ಸರಿಯಾಗಿ ಹತ್ತು ವರ್ಷಗಳ ಹಿಂದೆ. ನನ್ನಜ್ಜಿ ಸಾಹೇಬವ್ವ (ತಂದೆಯವರ ತಾಯಿ) ೩೦-೯-೧೯೫೩ರಂದು ಇಹಲೋಕ ತ್ಯಜಿಸಿದ್ದರು.

ಸಾಯುವ ಸಮಯದಲ್ಲಿ ನನಗೆ ಅತ್ಯಂತ ದುಃಖಿತರಾಗಿ ಹೇಳಿದ ಕೊನೆಯ ಉಪದೇಶದ ಮಾತುಗಳು ಇನ್ನೂ ನನಗೆ ದಾರಿ ದೀಪವಾಗಿವೆ. "ನಾನು ನನ್ನ ಬಂಧು ಬಳಗ ಮತ್ತು ತಮ್ಮಂದಿರ ಉಜ್ವಲ ಭವಿಷ್ಯಕ್ಕಾಗಿ ನನ್ನದೆಲ್ಲವನ್ನೂ ಅವರಿಗೆ ಸಲ್ಲಿಸಿದೆ. ನಿನಗೆ ಹೊಲ, ಮನೆ, ಆಸ್ತಿ, ಗದ್ದೆ, ಬೆಳ್ಳಿ, ಬಂಗಾರ ಹಣವನ್ನು ಕೊಡಲು ನನ್ನಲ್ಲಿ ಏನೂ ಉಳಿದಿಲ್ಲ. ಬರಿಗೈಯಿಂದ ಹೊರಟಿದ್ದೇನೆ. ಆದರೆ ನೀನು ಧೈರ್ಯದಿಂದ ಮುನ್ನುಗ್ಗು. ಕಾಯಕ ಮಾಡು, ಸಕಲರ ಸೇವೆ ಮಾಡು, ದೇವರು ಮೆಚ್ಚುತ್ತಾನೆ. ದೇವರಲ್ಲಿ ಅಚಲ ವಿಶ್ವಾಸವಿಡು. ನಿನ್ನ ಆತ್ಮವನ್ನು ನೀನೇ ಉದ್ಧರಿಸಿಕೊಳ್ಳು ಎಂದು ಶ್ರೀ ಕೃಷ್ಣನು ಭಗವದ್ಗೀತೆಯಲ್ಲಿ ಹೇಳಿದಂತೆ, ನಿನಗೆ ನೀನೇ ಸಹಾಯಕನು. ಯಾರ ಮೇಲೆಯೂ ಅವಲಂಬನವಾಗದೆ, ನಿನ್ನ ಕಾರ್ಯವನ್ನು ಮುಂದುವರಿಸು. ನಾನು ಈ ನಶ್ವರ ದೇಹವನ್ನು ತ್ಯಜಿಸಿದರೂ ನನ್ನ ಆತ್ಮ ನಿನ್ನ ಬೆನ್ನಾವಲಿಗೆ ನಿಂತಿರುವದು. ನನ್ನ ಆತ್ಮ ನಿನ್ನನ್ನು ಅನವರತವೂ ಸಂರಕ್ಷಿಸುತ್ತದೆ."

ಸತ್ಯ ಹೇಳಬೇಕೆಂದರೆ, ತಂದೆ ಸಾಯುವಾಗ ಬ್ಯಾಂಕಿನ ಅವರ ಖಾತೆಯಲ್ಲಿ ಒಂದು ಪೈಸೆ ಬ್ಯಾಲನ್ಸ್ ಸಹ ಇದ್ದಿಲ್ಲ. ಸಾಸನೂರ ಗ್ರಾಮದಲ್ಲಿದ್ದ ಒಂದು ಸ್ವಂತ ಮನೆಯನ್ನು ಸಹ ಅವರು ತಮ್ಮಂದಿರಿಗಾಗಿ ಮಾರಿಬಿಟ್ಟರು. ಪಾಲಿನಿಂದ ಮಾಡಿದ ಹೊಲಗಳ ಮಾಲಕರು ತಂದೆಯವರಿಗೆ ಹೊಲಗಳನ್ನು ಮಾರಲು ಮುಂದೆ ಬಂದಾಗ ನಿರಾಕರಿಸಿದರು. ಸ್ಥಿರಾಸ್ತಿಯನ್ನು ಗಳಿಸಲಿಲ್ಲ. ಆದರೆ ಅವರು ನಮ್ಮ ಮನೆತನಕ್ಕೆ ಸ್ಥಿರತೆಯನ್ನು ಸ್ಥಾಪಿಸಿದರು. ಅವರು ಸಲ್ಲಿಸಿದ ವಿದ್ಯಾಭಿವೃದ್ಧಿ ವಿದ್ಯಾಸಂಪತ್ತುಗಳು ಲಕ್ಷ್ಮಿ ಸಂಪತ್ತಿಗಿಂತ ಅತ್ಯಂತ ಶ್ರೇಷ್ಠವೆಂದು ಅವರು ಯಾವಾಗಲೂ ಹೇಳುತ್ತಿದ್ದರು.

**ಕೊನೆಯ ನುಡಿ :**

ಸಾಸನೂರ ಮನೆತನದ ಮೂರನೆಯ ತಲೆಮಾರಿನವರ ಏಳ್ಗೆ, ಅಭ್ಯುದಯಗಳನ್ನು ಕಣ್ಣಾರೆ ಕಾಣುವಷ್ಟರಲ್ಲಿ ತಂದೆಯವರು ಈ ಲೋಕವನ್ನು ತ್ಯಜಿಸಿದ್ದರು. ಅವರು ತೀರಿದ ನಂತರವೇ ನನಗೆ ಮೂವರು ಪುತ್ರಿಯರು, ಇಬ್ಬರು ಪುತ್ರರಾದರು. ಮೊದಲನೆಯ ಮಗಳು ಉಷಾ ಎಂ.ಎ., ಎಂ.ಫಿಲ್ ಇಂಗ್ಲೀಷ ಪದವೀಧರೆ. ಸಂಗಮೇಶ್ವರ ಕಾಲೇಜಿನಲ್ಲಿ ಇಂಗ್ಲಿಷ್ ಲೆಕ್ಚರರ್ ಆಗಿದ್ದಾಳೆ. ಅವಳ ಪತಿ ಸೋಲಾಪುರದ ವೈಶಂಪಾಯನಿ ಮೆಡಿಕಲ್ ಕಾಲೇಜದಲ್ಲಿ ಪ್ರೊಫೆಸರ್. ಅವಳಿಗೆ ಇಬ್ಬರು ಮಕ್ಕಳು ಆಶ್ನಾ ಮತ್ತು ಅಮೋಘ. ಎರಡನೆಯ ಮಗಳು ಸಂಧ್ಯಾ ಇಂಗ್ಲಿಷನಲ್ಲಿ ಎಂ.ಎ. ಮಾಡಿದ್ದಾಳೆ. ಆಕೆಯ ಪತಿ ಶಾಂತಾರಾಮ ಪುಣೆಯಲ್ಲಿ ಸೇಲ್ಸಟ್ಯಾಕ್ಸ ಆಫೀಸರ್. ನನ್ನ ಮೂರನೆಯ ಮಗಳು ರಜನಿ ಬಿ.ಇ. (ಇಲೆಕ್ಟ್ರಾನಿಕ್ಸ್ ಮತ್ತು ಟೆಲಿಕಮ್ಯುನಿಕೇಶನ್). ಅವಳು

ಲಗ್ನವಾಗಿ ಪುತ್ರರೊಂದಿಗೆ ಬೆಂಗಳೂರಲ್ಲಿ ಇರುವಳು. ನನ್ನ ಒಬ್ಬ ಮಗ ಮನೋಜ ಬಿಎಸ್.ಸಿ. ಎಲ್ಎಲ್.ಬಿ. ಆಯ್ಆರ್ ಪಿ.ಎಂ. ಆಗಿ ಕ್ರಿಮಿನಲ್ ಲಾಯರ್ ಆಗಿದ್ದಾನೆ, ಕಲ್ಬುರ್ಗಿ ಕೋರ್ಟಿನಲ್ಲಿ. ಎರಡನೆಯ ಮಗ ದೀಪಕ ಬಿ.ಎಸ್‌ಸಿ.ಆಗಿ ಬೆಂಗಳೂರ ಅಗ್ರಿಕಲ್ಚರಲ್ ವಿಶ್ವವಿದ್ಯಾಲಯದಿಂದ ಬೇಕರಿಯಲ್ಲಿ ಡಿಪ್ಲೋಮಾ ಪದವಿ ಪಡೆದಿದ್ದಾನೆ.

ಡಾ. ಎಚ್.ಟಿ. ಸಾಸನೂರ ಅವರಿಗೆ ಐದು ಜನ ಪುತ್ರಿಯರು ಒಬ್ಬ ಪುತ್ರ. ಎಲ್ಲರೂ ವಿವಾಹವಾಗಿದ್ದಾರೆ. ಗೀತಾ, ಆಶಾ, ವಿದ್ಯಾ ಅವರ ಪತಿಯರು ಡಾಕ್ಟರ ಆಗಿದ್ದಾರೆ. ಉಮಾಳ ಪತಿ ಅಸಿಸ್ಟಂಟ ಕಮೀಶನರ್. ಮಾಲಾಳ ಪತಿ ಸೆಂಟ್ರಲ್ ಎಕ್ಸಾಯಿಜದಲ್ಲಿ ಸೂಪರಿಂಟೆಂಡೆಂಟ್. ಅವರ ಒಬ್ಬನೇ ಪುತ್ರ ಡಾ. ಅಶೋಕ ಎಂ.ಎಸ್. (ಆರ್ಥೋಪಿಡಿಕ್ಸ)ಪದವಿಧರ. ಅವನ ಪತ್ನಿ ಡಾ. ಭುವನೇಶ್ವರಿ ಎಂ.ಡಿ. ಸ್ತ್ರೀರೋಗ ತಜ್ಞೆ. ಅಶೋಕನಿಗೆ ಇಬ್ಬರು ಪುತ್ರರಿದ್ದು ಅವರಿಬ್ಬರೂ ಎಂ.ಎಸ್. ಪದವೀಧರರು. ಅವರಿಬ್ಬರ ಪತ್ನಿಯರೂ ಎಂ.ಎಸ್. ಎಂ.ಡಿ. ಪದವೀಧರರು.

ಪ್ರೊ. ಬಿ.ಟಿ. ಸಾಸನೂರ ಅವರಿಗೆ ಮೂವರು ಪುತ್ರರು ಒಬ್ಬ ಪುತ್ರಿ. ಹಿರಿಯ ಮಗ ವಿಜಯ IPS ಆಗಿ ಕರ್ನಾಟಕ ರಾಜ್ಯದ ಆಡಿಶನಲ್ ಡಾಯರೆಕ್ಟರ್ ಜನರಲ್ ಆಫ್ ಪೋಲಿಸ್ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿರುವಾಗ ಅಕಾಲಿಕ ಸಾವಿಗೀಡಾದನು. ಬಿ.ಟಿ. ಯವರ ಎರಡನೆ ಮಗ ಅಜಿತ ಸಹಕಾರ ಇಲಾಖೆಯಲ್ಲಿ ಡೆಪ್ಯುಟಿ ರಜಿಸ್ಟ್ರಾರ. ಮೂರನೆ ಮಗ ಮೋಹನ ಕರ್ನಾಟಕ ಸರಕಾರದ ಅಸಿಸ್ಟಂಟ ಕಮೀಶನರ್. ಈ ಮೂರು ಪುತ್ರರಿಗೆ ಪುತ್ರ ಮತ್ತು ಪುತ್ರಿಯರಿದ್ದಾರೆ.

ಡಾ. ಎಚ್.ಟಿ. ಸಾಸನೂರ ಅವರ ಪತ್ನಿ ಉಷಾ ಅಕಾಲಿಕವಾಗಿ ಡಿಶಂಬರ ೧೯೫೭ರಲ್ಲಿ ನಿಧನರಾದರು. ಅವರ ನಿಧನದ ನಾಲ್ವತ್ತು ವರ್ಷಗಳ ನಂತರ ನಮ್ಮ ಕಾಕಾ ಡಾ. ಎಚ್.ಟಿ. ೯-೭-೧೯೯೭ರಲ್ಲಿ ನಿಧನರಾದರು. ಬಿ.ಟಿ. ಯವರ ಪತ್ನಿ ಸುಮಿತ್ರಾಬಾಯಿ ೪-೧೦-೧೯೯೮ರಂದು ವಿಜಾಪುರದಲ್ಲಿ ನಿಧನರಾದರು. ಬಿ.ಟಿ. ಯವರು ೪-೮-೨೦೦೩ರಂದು ಚಿಕ್ಕಮಗಳೂರಿನಲ್ಲಿ ನಿಧನರಾದರು.

ನನ್ನ ತಾಯಿ ಕಲ್ಯಾಣಮ್ಮ ನಾನು ಎರಡು ವರ್ಷದ ಕೂಸಿದ್ದಾಗ ತೀರಿಹೋದಳು, ದಿನಾಂಕ ೩-೩-೧೯೩೩ ರಂದು (ಎಪ್ಪತ್ತು ಮೂರುವರ್ಷಗಳ ಹಿಂದೆ). ನನ್ನ ತಂದೆ ಮಡಿವಾಳಪ್ಪ ದಿನಾಂಕ ೨೯-೯-೧೯೬೩ ರಂದು ಪರಲೋಕವಾಸಿಯಾದರು. ಸಾಸನೂರ ಮನೆತನದಲ್ಲಿ ಈಗ ಹಿರಿಯರಾರೂ ಉಳಿದಿಲ್ಲ. ಹೀಗಾಗಿ ಎಷ್ಟೇ ಸುಖ-ಸಂಪತ್ತುಗಳಿದ್ದರೂ ಮನೆತನದ ವೈಭವ ಹಿರಿಮೆ ಕಡಿಮೆಯಾದಂತೆ ಗೋಚರಿಸುವದು. "ಜಾತಸ್ಯ ಹಿ ಮರಣಂ ಧ್ರುವಂ" ಶ್ರೀ ಕೃಷ್ಣನು ಭಗವದ್ಗೀತೆಯಲ್ಲಿ ಹೇಳಿದಂತೆ ಎಲ್ಲರೂ ಹುಟ್ಟಿ ಸಾಯಲೇಬೇಕು. ಆದರೆ ಜೀವನ ಸಫಲವಾಗಬೇಕಾದರೆ ನಮ್ಮೆಲ್ಲ ಹಿರಿಯರು ನಡೆದು ಬಂದ ರಾಜಮಾರ್ಗದಲ್ಲಿ ನಾವು ಸಾಗಬೇಕು. ನಾವು ಹಾಗೆ ಸಾಗಿದಾಗ ಮಾತ್ರ, ಆ ಎಲ್ಲ ಆತ್ಮಗಳಿಗೆ ಶಾಂತಿ, ಸಂತೃಪ್ತಿ ಮತ್ತು ಸಮಾಧಾನ.

❖❖


*

# ಎಂ.ಟಿ. ಸಾಸನೂರ ಅವರ ಜೀವನದ ಮುಖ್ಯ ಘಟನೆಗಳು

| | |
|---|---|
| ೧೮೯೫ ಅಗಸ್ಟ ೧೦ | ಸಾಸನೂರ ಗ್ರಾಮದಲ್ಲಿ ಜನನ |
| ೧೮೯೭ | ತಮ್ಮ ಸೈದಪ್ಪನ ಜನನ |
| ೧೯೦೦ | ತಂಗಿ ಬಾಯಮ್ಮಳ ಜನನ |
| ೧೯೦೪ | ತಮ್ಮ ಮಲ್ಲಾರೆಪ್ಪನ ಜನನ |
| ೧೯೦೮ ಮೇ ೧ | ತಮ್ಮ ಪ್ರೊ. ಎ.ಟಿ. ಸಾಸನೂರ ಜನನ |
| ೧೯೧೩ಅಕ್ಟೋಬರ೨೭ | ತಮ್ಮ ಡಾ. ಎಚ್.ಟಿ. ಸಾಸನೂರ ಅವರ ಜನನ |
| ೧೯೨೦ ಅಗಸ್ಟ ೧೦ | ತಮ್ಮ ಪ್ರೊ. ಬಿ.ಟಿ. ಸಾಸನೂರ ಜನನ |
| ೧೯೦೦-೧೯೦೪ | ಪ್ರಾಥಮಿಕ ಶಾಲಾ ಅಭ್ಯಾಸ, ಸಾಸನೂರಲ್ಲಿ |
| ೧೯೦೪-೧೯೧೦ | ತುಂಬಗಿಯಲ್ಲಿ ಮುಂದಿನ ಅಭ್ಯಾಸ, ಮುಲ್ಕಿ ಪರೀಕ್ಷೆ ಪಾಸ್ |
| ೧೯೧೩ | ಶಿಕ್ಷಕ ಜಾಗೆಗೆ ನೇಮಣೂಕಿ |
| ೧೯೧೬ | ನಾಲ್ವತ್‌ವಾಡ ಶಿಕ್ಷಕ ನೌಕರಿ ಖಾಯಂ (೨೨-೧-೧೯೧೬) |
| ೧೯೧೬ ಏಪ್ರಿಲ್ ೭ | ಸಾಸನೂರ ಶಾಲೆಗೆ ವರ್ಗ |
| ೧೯೨೭ | ಕಲಕೇರಿ ಪ್ರಾಥಮಿಕ ಶಾಲೆಗೆ ವರ್ಗ |
| ೧೯೨೭ | ವಿವಾಹ |
| ೧೯೨೯ ಮಾರ್ಚ ೧ | ಶಾರದಾ ಜನನ |
| ೧೯೩೧ | ರವೀಂದ್ರನ ಜನನ (೧೩-೧-೧೯೩೧) |
| ೧೯೩೧ | ಎ.ಟಿ.ಯವರಿಗೆ ಕರ್ನಾಟಕ ಕಾಲೇಜಿನಲ್ಲಿ ಪ್ರೊಫೆಸರ್ ನೌಕರಿ |
| ೧೯೩೨ | ಬೂದಿಹಾಳಕ್ಕೆ ವರ್ಗ (೫-೨-೧೯೩೨) |
| ೧೯೩೨ | ಸಾಸನೂರಕ್ಕೆ ವರ್ಗ (೧೬-೮-೧೯೩೨) |
| ೧೯೩೩ | ಕಲ್ಯಾಣಮ್ಮ ಅವರ ನಿಧನ (ಜನವರಿ ೧) |
| ೧೯೩೪ | ಮಲ್ಲಾರೆಪ್ಪ ನಿಧನ |
| ೧೯೩೬ | ಎ.ಟಿ. ಸಾಸನೂರ ಅವರ ನಿಧನ (೧೫-೫-೧೯೩೬) |
| ೧೯೩೬ | ಎಚ್.ಟಿ.ಯವರು ಬಿ.ಎ. ಪಾಸ್ ಆಗಿ ಎಸ್.ಎಸ್. ಹಾಯ್‌ಸ್ಕೂಲಿನಲ್ಲಿ ಶಿಕ್ಷಕ ನೌಕರಿ |

| | |
|---|---|
| ೧೯೩೯ | ಎಚ್.ಟಿ. ಯವರು ಎಂ.ಎ. ಪಾಸಾದದ್ದು. |
| ೧೯೩೯ ಡಿಶಂಬರ | ಎಚ್.ಟಿ. ಯವರ ವಿವಾಹ |
| ೧೯೪೪ | ಬಿ.ಟಿ. ಯವರು ಬಿ.ಎ. ಪಾಸಾದದ್ದು |
| ೧೯೪೫-೨೪-೧೧ | ತಮದಡ್ಡಿ ಶಾಲೆಗೆ ವರ್ಗ, ಸಿಲೆಕ್ಶನ್ ಗ್ರೇಡ ಸಿಕ್ಕಿದ್ದು |
| ೧೯೪೬ | ಬಿ.ಟಿ.ಯವರು ಎಂ.ಎ. ಪಾಸಾದದ್ದು |
| ೧೯೪೬ ಮೇ | ಶಾರದಾಳ ಮದುವೆ ಮ.ಹ.ಚಂದ್ರಗಿರಿಯವರೊಡನೆ |
| ೧೯೪೭ | ಬಿ.ಟಿ. ಯವರ ಲೆಕ್ಚರರ್ ನೌಕರಿ -ವಿವಾಹ |
| ೧೯೪೮-೧-೧ | ಬಾಗೇವಾಡಿ ತಾಲೂಕ ಶಾಲಾ ಹೆಡ್‌ಮಾಸ್ತರ ಜಾಗೆಗೆ ನೇಮಕ |
| ೧೯೪೯ ಜೂನ | ಬಾಗೇವಾಡಿಯಲ್ಲಿ ವಿಜಾಪುರ ಜಿಲ್ಹಾ ಶಿಕ್ಷಕರ ಸಮ್ಮೇಳನ |
| ೧೯೫೦-ಅಗಸ್ಟ ೯ | ತಾಲೂಕ ಶಾಲಾ ಹೆಡ್‌ಮಾಸ್ತರ ನೌಕರಿಯಿಂದ ನಿವೃತ್ತಿ |
| ೧೯೫೦ | ಶ್ರೀ ಅರವಿಂದ ಮತ್ತು ಶ್ರೀ ಮಾತಾಜಿಯವರ ದರ್ಶನ ಪಾಂಡಿಚೇರಿಯಲ್ಲಿ |
| ೧೯೫೫ | ರವೀಂದ್ರ ಬಿ.ಎ. ಇಂಗ್ಲಿಷ್ ಆನರ್ಸ ಪಾಸಾದದ್ದು |
| ೧೯೫೮ | ರವೀಂದ್ರ ನೌಕರಿ ಮತ್ತು ವಿವಾಹ |
| ೧೯೫೯ | ಕಲಬುರ್ಗಿಗೆ ಪ್ರಯಾಣ |
| ೧೯೬೩ ಸಪ್ಟಂಬರ ೯ | ಕಲಬುರ್ಗಿಯಲ್ಲಿ ನಿಧನ |

❖❖



ಡಾ. ಎಂ. ಎಂ. ಕಲಬುರ್ಗಿ ಅವರು ಸುಪ್ರಸಿದ್ಧ ಸಂಶೋಧಕರು. ವ್ಯಕ್ತಿ ನೆಲೆಯಲ್ಲಿ ಅವರು ಬರೆದದ್ದು ಅಪಾರ; ಸಾಂಸ್ಥಿಕ ನೆಲೆಯಲ್ಲಿ ಅವರು ಮಾಡಿದ ಸಾಧನೆಗಳು ಶಿಖರಪ್ರಾಯವಾದವುಗಳು. ಗ್ರಾಮೀಣ ಶ್ರಮಸಂಸ್ಕೃತಿ ಹಾಗೂ ವಿಜಯಪುರ ಜಿಲ್ಲೆಯ, ಸಿಂದಗಿ ತಾಲ್ಲೂಕಿನ ಯರಗಲ್ಲ ಗ್ರಾಮದ ಅವಿಭಕ್ತ ಕುಟುಂಬ ಪರಿಸರ ಪ್ರಭಾವದಲ್ಲಿ ಬೆಳೆದು ಬಂದ ಡಾ. ಕಲಬುರ್ಗಿ ಅವರು ಇಡೀ ನಾಡನ್ನೇ ಅವಿಭಕ್ತವಾಗಿ ಕಂಡವರು.

ಹೀಗಾಗಿ ಅವರು ನಾಡಿನ ತುಂಬೆಲ್ಲ ಹರಡಿಕೊಂಡಿರುವ ಸಂಘ-ಸಂಸ್ಥೆಗಳೊಂದಿಗೆ ಮಠ-ಮಾನ್ಯಗಳೊಂದಿಗೆ ಸರಕಾರಿ ಇಲಾಖೆಗಳೊಂದಿಗೆ ಒಡನಾಟವಿಟ್ಟುಕೊಂಡು ಅನೇಕ ಯೋಜನೆಗಳನ್ನು ಹುಟ್ಟು ಹಾಕಿದರು. ಹಲವಾರು ಪ್ರತಿಷ್ಠಾನಗಳನ್ನು ಸ್ಥಾಪಿಸುತ್ತ ಅವುಗಳನ್ನು ಕನ್ನಡದ ಪ್ರಾತಿನಿಧಿಕ ಸಂಸ್ಥೆಗಳನ್ನಾಗಿ ರೂಪಿಸಿದರು.

ಇಂಥ ಅಪರೂಪದ ವ್ಯಕ್ತಿಯ ಬಹುಮುಖ ಸಾಧನೆಯನ್ನು ಅಕ್ಷರ, ದೃಶ್ಯ, ಧ್ವನಿ, ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು, ಅವರ ಸಮಗ್ರ ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸಿ ಸಂಪುಟಗಳಲ್ಲಿ ಪ್ರಕಟಿಸುವುದು, 'ಡಾ.ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ'ಯ ಮುಖ್ಯ ಉದ್ದೇಶವಾಗಿದೆ.

ಈಗಾಗಲೇ ಇಂಥ ಹಲವು ಯೋಜನೆಗಳನ್ನು ಯಶಸ್ವಿಯಾಗಿ ಪೂರೈಸುತ್ತ ಬಂದ ನಮ್ಮ ವಚನ ಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದ ಮೂಲಕ ಈ ಕಾರ್ಯವನ್ನು ಈಡೇರಿಸಲು ಅವಕಾಶ ದೊರೆತುದು ಸಂತೋಷದ ಸಂಗತಿ. ಈ ಕಾರ್ಯ ನಾವು ಭಾವಿಸಿದಷ್ಟು ಸುಲಭವಾದುದಲ್ಲ. ಅಲ್ಲಲ್ಲಿ ಚದುರಿ ಹೋಗಿರುವ ಪ್ರಕಟಿತ ಹಾಗೂ ಅಪ್ರಕಟಿತ ಕೃತಿಗಳು, ಚಿತ್ರಗಳು, ಧ್ವನಿ ಮುದ್ರಿಕೆಗಳು, ದೃಶ್ಯಮಾಧ್ಯಮಗಳು ಮತ್ತು ಪತ್ರಿಕೆಗಳಲ್ಲಿ ಪ್ರಕಟವಾದ ವಿಷಯಗಳನ್ನು ಸಂಗ್ರಹಿಸುವ ಹಂತಗಳಲ್ಲಿ ವಿದ್ವಾಂಸರು ವಿಶೇಷವಾಗಿ ಶ್ರಮಿಸಬೇಕಾಗುತ್ತದೆ. ನಮ್ಮ ಸುದೈವಕ್ಕೆ ಸಮರ್ಥ ಸಂಪಾದಕರಾದ ಡಾ. ವೀರಣ್ಣ ರಾಜೂರ ಹಾಗೂ ಎಲ್ಲ ಕಾರ್ಯಗಳನ್ನು ಸಂಯೋಜಿಸಲು ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ದೊರಕಿದ್ದಾರೆ. ಈ ಯೋಜನೆಯ ಕಾರ್ಯದರ್ಶಿಗಳು, ಸಲಹಾ ಸಮಿತಿ ಸದಸ್ಯರು ಮತ್ತು ನಾಡಿನ ಹಲವಾರು ವಿದ್ವಾಂಸರು ಈ ಕಾರ್ಯದಲ್ಲಿ ಆಸಕ್ತಿವಹಿಸಿ ಕೈಜೋಡಿಸಿದ್ದಾರೆ. ಇವರೆಲ್ಲರ ಸಹಯೋಗದಲ್ಲಿ ಕನ್ನಡಕ್ಕೆ ಹೊಸದೊಂದು ಅಮೂಲ್ಯವಾದ ಆಕರ ಸಂಪತ್ತು ದೊರಕುವಂತಾದುದು ಹೆಮ್ಮೆಯ ಸಂಗತಿಯಾಗಿದೆ.

**ಡಾ. ಎಂ.ಬಿ.ಪಾಟೀಲ**

ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ

ಗೃಹಸಚಿವರು, ಕರ್ನಾಟಕ ಸರ್ಕಾರ

**ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ**

ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ – ೫೮೬೧೦೩

ದಿ ಪ್ರಿಂಟ್ ಪಾಯಿಂಟ್, ಬೆಂ. ಮೊ: 97390 67359